
ದಾಕ್ಷಿಣಾತ್ಯ ಸಾರಸ್ವತರ
ಇತಿಹಾಸ
ವೆಂಕಟ್ರಾಯ ನಾರಾಯಣ ಕುಡ್ವ

ದಾಕ್ಷಿಣಾತ್ಯ ಸಾರಸ್ವತರ ಇತಿಹಾಸ

ಲೇಖಕರು

ವಿ. ಎನ್. ಕುಡ್ವ

ಇಂಡಿಯನ್ ಸಿವಿಲ್ ಸರ್ವಿಸ್

ಇಂಗ್ಲಿಷ್ ಭಾಷೆಯಲ್ಲಿನ
ಪುಸ್ತಕವನ್ನು ಕನ್ನಡಕ್ಕೆ ಅನುವಾದಿಸಿದವರು

ಕುತ್ಪಾಡಿ ರಾಧಾಕೃಷ್ಣ ಹೆಗ್ಡೆ, ಮುಂಬಯಿ

ಸಂಯುಕ್ತ ಗೌಡ ಸಾರಸ್ವತ ಸಭಾ
ಚೆನ್ನೈ.

ಇಂಗ್ಲಿಷ್ ಭಾಷೆಯಲ್ಲಿನ ಪುಸ್ತಕದ ಪ್ರಕಾಶನ ೧೯೭೨
ಇಂಗ್ಲಿಷ್ ಭಾಷೆಯಲ್ಲಿನ ಎರಡನೆಯ (ಕಾಗದದ ಹೊದಿಕೆಯ) ಆವೃತ್ತಿ ೧೯೭೮
ಇಂಗ್ಲಿಷ್ ಭಾಷೆಯಲ್ಲಿನ ಮೂರನೆಯ (ಕಾಗದದ ಹೊದಿಕೆಯ) ಆವೃತ್ತಿ ೧೯೯೧
ಇಂಗ್ಲಿಷ್ ಭಾಷೆಯಲ್ಲಿನ ನಾಲ್ಕನೆಯ (ಕಾಗದದ ಹೊದಿಕೆಯ) ಆವೃತ್ತಿ ೧೯೯೯
ಇಂಗ್ಲಿಷ್ ಭಾಷೆಯಲ್ಲಿನ ಐದನೆಯ (ಕಾಗದದ ಹೊದಿಕೆಯ) ಆವೃತ್ತಿ ೨೦೦೦
ಕನ್ನಡ ಭಾಷೆಯಲ್ಲಿನ ಪುಸ್ತಕದ ಪ್ರಕಾಶನ ೨೦೧೨

REVISED PRICE
Rs. 300.00

Phone : (044) 2834 3804 / 2834 0775
E-mail : sgssabhachennai@airtelmail.in
Website : www.sgssabhachennai.com

ದಾಕ್ಷಿಣಾತ್ಯ ಸಾರಸ್ವತ ಸಮಾಜ ಹಿಂದು ಸಮಾಜದ ಬೇರೆಯೇ ಆದೊಂದು ವಿಭಾಗವಾಗಿದೆ. ಸಾರಸ್ವತರು ತಮ್ಮ ಇತಿಹಾಸವನ್ನು ವೇದಕಾಲದತ್ತ ಕೊಂಡೊಯ್ಯುತ್ತಾರೆ. ಅವರು ಪಂಜಾಬ, ಕಾಶ್ಮೀರ, ಉತ್ತರ ಪ್ರದೇಶ ಮತ್ತು ಗುಜರಾತಗಳಲ್ಲಿ ಈಗ ವಾಸಿಸುತ್ತಿರುವ ಜನರೊಂದಿಗೆ ಅನುವಂಶಿಕ ಸಂಬಂಧಕೊಂಡಿರುತ್ತಾರೆ. ಆದರೆ ದಕ್ಷಿಣಕ್ಕೆ ವಲಸೆ ಹೋದ ಈ ಸಮಾಜದ ಬಹುತಾಂಶ ಜನರು ಕೆನರಾದಿಂದ ಕೇರಳದ ತನಕ ಹರಡಿಕೊಂಡಿದ್ದ ಪಶ್ಚಿಮ ಕರಾವಳಿ ಪ್ರದೇಶದಲ್ಲಿ ನೆಲಸಿಕೊಂಡಿರುತ್ತಾರೆ.

ಹಿಂದುಗಳಲ್ಲಿನ ವಿಶಿಷ್ಟ ವರ್ಗವೊಂದೆನಿಸಿಕೊಂಡಿದ್ದ ಸಾರಸ್ವತ ಸಮಾಜ ತನ್ನದೇ ಆದ ಸಾಂಸ್ಕೃತಿಕ ಮತ್ತು ಧಾರ್ಮಿಕ ವಿಚಾರ ಧಾರೆ, ದೃಷ್ಟಿಕೋನಕೊಂಡಿದೆ. ಈ ಸಮಾಜ ಕೊಂಕಣಿ ಭಾಷೆಯ ವಿಕಾಸ ಮಾಡಿತು; ಸಾರಸ್ವತರ ಧಾರ್ಮಿಕ ಆಚಾರ, ವಿಚಾರಗಳು ಕೂಡಾ ವಿಶಿಷ್ಟ, ವಿಶೇಷವಾಗಿವೆ.

ಇದು ಸಾರಸ್ವತರ, ಮುಖ್ಯತಃ ದಾಕ್ಷಿಣಾತ್ಯ ಸಾರಸ್ವತರ ಪ್ರಮಾಣ ಗ್ರಂಥವೊಂದಾಗಿದೆ. ವೇದ ಕಾಲದಿಂದ ತೊಡಗಿದ ಅವರ ಮೂಲದ ಅನ್ವೇಷಣೆ ವಾಚಕರನ್ನು ಆನಂತರದ ಅನೇಕ ಶತಮಾನಗಳುದ್ದಕ್ಕೆ ಕೊಂಡುಹೋಗುತ್ತದೆ. ಇದು ಸಾರಸ್ವತರ ಉನ್ನತಿ ಮತ್ತು ಅವನತಿಗಳ ವಿಸ್ತೃತ ವಿವರಣೆ ಕೊಂಡಿದೆ. ಈ ಪುಸ್ತಕದ ದೊಡ್ಡ ಭಾಗ ಗೋವಾದಲ್ಲಿದ್ದ ಸಾರಸ್ವತರ ದೀರ್ಘಕಾಲದ ಪಾರತಂತ್ರ್ಯ, ಆ ದಿನಗಳಲ್ಲಿ ಅವರು ಅನುಭವಿಸಿದ್ದ ಕಷ್ಟ, ಕಾರ್ಪಣ್ಯಗಳ ಸಂಕ್ಷಿಪ್ತ ಆದರೂ ಅಧಿಕೃತ ವಿವರಗಳಿಂದೊಡಗೂಡಿದೆ ; ಈ ಪುಸ್ತಕ ಅನೇಕ ಕಥೆಗಳು, ಘಟನಾವಳಿಗಳು, ಭಾಷೆ, ಧಾರ್ಮಿಕ ಕಟ್ಟುಕಟ್ಟಳೆಗಳ ಆಚರಣೆ ಮುಂತಾದವುಗಳ ವಿವರಗಳಿಂದ ತುಂಬಿಕೊಂಡಿದೆ.

ಇದು ಜಿಜ್ಞಾಸುಗಳಿಗೆ ಬುದ್ಧಿ ಶಕ್ತಿ, ಉದ್ಯಮ ಶೀಲತೆಗಳಿಗೆ ಹೆಸರುಗೊಂಡ ಸಮಾಜವೊಂದರ ಗತ ಇತಿಹಾಸದ ಪರಿಚಯವೀಯಬಲ್ಲುದು.

ನಿವೇದನೆ

೧೯೭೨ರಲ್ಲಿ ಪ್ರಕಾಶಿಸಲ್ಪಟ್ಟು, ಆನಂತರ ನಾಲ್ಕು ಆವೃತ್ತಿಗಳನ್ನು ಕಂಡ ಇಂಗ್ಲಿಷ್ ಭಾಷೆಯಲ್ಲಿನ ಪುಸ್ತಕ ಮತ್ತು ಕನ್ನಡದಲ್ಲಿ ಭಾಷಾಂತರಿಸಲ್ಪಟ್ಟ ಅದರ ಮೊದಲ ಆವೃತ್ತಿಯ ಕುರಿತು ಪ್ರಕಾಶಕರ ನಿವೇದನೆ :

ದಿವಂಗತ ಶ್ರೀ ವೆಂಕಟ್ರಾಯ ನಾರಾಯಣ ಕುಡ್ವ, ಐ.ಸಿ.ಎಸ್, ಇವರು ಇಂಗ್ಲಿಷ್ ಭಾಷೆಯಲ್ಲಿ ಬರೆದ ಈ ಪುಸ್ತಕವನ್ನು ಸಂಯುಕ್ತ ಗೌಡ ಸಾರಸ್ವತ ಸಭಾ, ಚೆನ್ನೈ, ೧೯೭೨ರಲ್ಲಿ ಪ್ರಕಾಶಿಸಿತು.

೧೯೬೧ರ ಜುಲೈ ತಿಂಗಳಲ್ಲಾದ ಮೃತ್ಯುವಿನ ಮುನ್ನ ಶ್ರೀ ಕುಡ್ವರು ತನ್ನ ಜೀವಮಾನದ ಸಾಧನೆಯೊಂದರ ಫಲವಾಗಿದ್ದ, ಚೊಕ್ಕದಾಗಿ ಟೈಪು ಮಾಡಲ್ಪಟ್ಟ ಹಾಳೆಗಳಿಂದೊಳಗೂಡಿದ್ದ, ಮೂರು ಸಂಪುಟಗಳಲ್ಲಿನ ಕೃತಿಯನ್ನು ಭಾವಿ ಪೀಳಿಗೆಗಾಗಿ ಬಿಟ್ಟು ಹೋಗಿದ್ದರು. ಹಲವೊಂದು ಕಾರಣಗಳ ನಿಮಿತ್ತ ಪುಸ್ತಕದ ಪ್ರಕಾಶನೆಗೆ ವಿಳಂಬವಾಯಿತು.

ದಿವಂಗತ ಶ್ರೀ ಕುಡ್ವರ ಪತ್ನಿ ಶ್ರೀಮತಿ ರಾಜೀವಿ ಬಾಯಿ ಕುಡ್ವ (ಅವರು ೧೯೭೨ರ ಜೂನ್ ತಿಂಗಳಲ್ಲಿ ತೀರಿಕೊಂಡರು) ಅವರ ನಿಷ್ಠೆ ಮತ್ತು ಅವರ ಅಭಿಮಾನಿಗಳ ಪ್ರಯತ್ನದಿಂದಾಗಿ ಪುಸ್ತಕ ೧೯೭೨ರಲ್ಲಿ ಬೆಳಕು ಕಂಡಿತು. ಇದರ ಐದನೆಯ ಆವೃತ್ತಿ ೨೦೧೧ರಲ್ಲಿ ಪ್ರಕಾಶಿಸಲ್ಪಟ್ಟಿತು.

ದಾಕ್ಷಿಣಾತ್ಯ ಸಾರಸ್ವತರ ಇತಿಹಾಸ ಸಮಗ್ರ ಸಾರಸ್ವತ ಸಮಾಜಕ್ಕೆ ಸಂಬಂಧಿಸಿದ್ದ, ಸಾಮಾನ್ಯವಾಗಿ ಇನ್ನೆಲ್ಲೂ ಕಾಣಸಿಗದ, ಅತ್ಯಪೂರ್ವ ವಿಷಯ, ವಿಚಾರಗಳಿಂದೊಳಗೂಡಿದೆ; ಇತಿಹಾಸ, ಸಮಾಜಬಾಂಧವರ ಮೂಲವನ್ನು ವೇದಕಾಲದತ್ತ ಕೊಂಡೊಯ್ಯುತ್ತದೆ!

ಗೌಡ ಸಾರಸ್ವತ ಸಮಾಜದ ಅರೆವಾಸಿ ಜನರು ಕೇವಲ ಕನ್ನಡವನ್ನಷ್ಟೆ ಬಲ್ಲವರಿದ್ದ ನಿಮಿತ್ತ, ಇಂಗ್ಲಿಷ್ ಭಾಷೆಯಲ್ಲಿದ್ದ ಪುಸ್ತಕದಲ್ಲಿನ ದುರ್ಲಭ ಮಾಹಿತಿಯಿಂದ ವಂಚಿತರಾಗಿದ್ದುದನ್ನು ಕಂಡ ಕುತ್ಪಾಡಿ ರಾಧಾಕೃಷ್ಣ ಹೆಗ್ಡೆ, ಮುಂಬಯಿ ಇವರು ಈ ಪುಸ್ತಕವನ್ನು ಕನ್ನಡಕ್ಕೆ ಭಾಷಾಂತರಿಸುವ ನಿರ್ಧಾರ ಮಾಡಿದರು.

ಕೇವಲ ಸಮಾಜ ಸೇವೆಯನ್ನುದ್ದೇಶಿಸಿ ಕೈಗೆತ್ತಿಕೊಂಡ ಕೆಲಸ ಪೂರೈಸಲು ಮೂರೊಂದು ವರ್ಷಗಳು ತಗಲಿದವಾದರೂ ಅವರ ನಿಸ್ಪೃಹ ಪರಿಶ್ರಮದ ಫಲವಾಗಿ ಕನ್ನಡಕ್ಕೆ ಭಾಷಾಂತರಿಸಲ್ಪಟ್ಟ ಪುಸ್ತಕ ಈಗ ಪ್ರಕಾಶಿಸಲ್ಪಡುತ್ತಿದೆ.

ಭಾಷಾಂತರದೊಂದಿಗೆ, ಹಸ್ತಲಿಖಿತ ಪ್ರತಿಯ ಕಂಪ್ಯೂಟರೀಕರಣ, ಕರಡಚ್ಚಿನ ತಿದ್ದುಪಡಿ ಇತ್ಯಾದಿಗಳ ಹೊಣೆಗಾರಿಕೆಯನ್ನೂಕೊಂಡಿದ್ದ ೭೬ರ ವಯಸ್ಸಿನ ಶ್ರೀ ಕುತ್ಪಾಡಿ ರಾಧಾಕೃಷ್ಣ ಹೆಗ್ಡೆಯವರಿಗೆ ಸಂಯುಕ್ತ ಗೌಡ ಸಾರಸ್ವತ ಸಭಾ, ಚೆನ್ನೈ, ಚಿರಋಣಿಯಾಗಿದೆ.

ಮುನ್ನುಡಿ

೧೯೩೦ರ ಡಿಸೆಂಬರ್ ತಿಂಗಳಲ್ಲಿ ನಾನು ದಕ್ಷಿಣ ಮತ್ತು ಉತ್ತರ ಕನ್ನಡಗಳಲ್ಲಿನ ವೈಷ್ಣವ ಸಾರಸ್ವತರ ಹಲವೊಂದು ದೇವಸ್ಥಾನಗಳನ್ನು ಸಂದರ್ಶಿಸಿದ್ದೆ. ಅಲ್ಲಿನ ಅರ್ಚಕರೊಂದಿಗಿನ ಮಾತುಕತೆಗಳಿಂದ ದಾಕ್ಷಿಣಾತ್ಯ ಸಾರಸ್ವತರ ಕುರಿತಾದ (ಉತ್ತರೆಯ ಸಾರಸ್ವತ ಸಮಾಜದ ಅತಿ ದೊಡ್ಡ ಭಾಗದ ಹೊರತಾಗಿದ್ದ, ದಕ್ಷಿಣದ ಅಥವಾ ದಖ್ಖಣದ ಸಾರಸ್ವತರ ಬಗೆಗಿನ) ನನ್ನ ಆಸಕ್ತಿ ಉತ್ತೇಜಿತವಾಯಿತು. ಈ ಅರ್ಚಕರು ಸಮಾಜದ ಕುರಿತಾದ ಪರಂಪರಾಗತ ನಂಬಿಕೆ, ಕಟ್ಟುಪಾಡು, ಅವುಗಳಿಗೆ ಸಂಬಂಧಿಸಿದ್ದ ಕಥೆಗಳನ್ನು ಹಲವೊಂದು ತಲೆಮಾರುಗಳಿಂದ ಜೋಪಾನವಾಗಿಟ್ಟುದನ್ನು ಕಂಡು ಬೆರಗಾದೆ. ಈಸಂದರ್ಭದಲ್ಲಿ ಶ್ರೀ ಮಂಜೇಶ್ವರ ಗೋವಿಂದ ಪೈಗಳೊಂದಿಗೆ ಸಂಪರ್ಕ ಸಾಧಿಸಿದಾಗ ಅವರು ನನಗೆ 'ಫ್ಲಾಶಸ್ ಇನ್ ದ ಪಾಸ್ಟ್' (ಇದರಲ್ಲಿನ ಕೆಲವೊಂದು ಭಾಗಗಳು ಅಲ್ಲೆಪ್ಪಿಯಿಂದ ಪ್ರಕಾಶಿಸಲ್ಪಡುತ್ತಿದ್ದ 'ಸಾರಸ್ವತ ಬೋಧಿನಿ'ಯ ೧೯೨೭ರಲ್ಲಿನ ೯ ಮತ್ತು ೧೧ನೆಯ ಸಂಚಿಕೆಯಲ್ಲಿ ಪ್ರಕಾಶಿಸಲ್ಪಟ್ಟಿದ್ದವು. ದೌರ್ಭಾಗ್ಯಕ್ಕೆ ಈ ಪ್ರಕಾಶನ ಕೊನೆಗೊಂಡಿತು) ಹೆಸರಿನ ಅತ್ಯಮೂಲ್ಯವಿದ್ದ ಪುಸ್ತಕವನ್ನು ಕಳುಹಿಸಿದರಷ್ಟೆ ಅಲ್ಲ ಈ ವಿಷಯದ ಕುರಿತಾಗಿ ಅನ್ಯ ಕೆಲವೊಂದು ಪುಸ್ತಕಗಳತ್ತವೂ ಲಕ್ಷ್ಯ ಸೆಳೆದರು.

ಶ್ರೀ ಹಟ್ಟಂಗಡಿ ಲಕ್ಷ್ಮೀನಾರಾಯಣ ಕಾಮತರು ಆ ದಿನಗಳಲ್ಲಿ ಮಂಗಳೂರಿನಿಂದ ಪ್ರಕಾಶಿಸಲ್ಪಡುತ್ತಿದ್ದ ಕೊಂಕಣಿ ಭಾಷೆಯ 'ಸಾರಸ್ವತ'ದ ೧೯೪೩ರ ಎಪ್ರಿಲ್-ಅಗಸ್ಟ್ ತಿಂಗಳಲ್ಲಿನ ಪತ್ರಿಕೆ 'ಸಾರಸ್ವತ ಸಮಾಜಾಚೆ ಪೂರ್ವೇತಿಹಾಸ' ಎಂಬ ಲೇಖನಗಳನ್ನು ಓದಿ ಪ್ರಭಾವಿತನಾಗಿದ್ದೆ. ನನಗೆ ಶ್ರೀ ಕಾಮತರನ್ನು ಭೇಟಿಯಾಗುವ ಅವಕಾಶ ದೊರಕಿತು. ಅವರು ಗೋವಾ, ಉತ್ತರ ಮತ್ತು ದಕ್ಷಿಣ ಕನ್ನಡಗಳಲ್ಲಿನ ಹಲವೊಂದು ಪ್ರಮುಖ ಸ್ಥಳಗಳಿಂದ ಸಂಗ್ರಹಿಸಿದ್ದ ಮಾಹಿತಿ, ದೇವಸ್ಥಾನ, ಮಠಗಳಲ್ಲಿನ ದಸ್ತಾವೇಜುಗಳ ಮೇಲಕ್ಕೆ ಮಾಡಿದ ಸಂಶೋಧನೆ ಇತ್ಯಾದಿಗಳನ್ನು ಕಂಡ ನಾನು ಆಶ್ಚರ್ಯಚಕಿತನಾಗಿದ್ದೆ. ಆನಂತರ ಅವರನ್ನು ಭೇಟಿಯಾಗುವ ಮತ್ತು ಅವರಲ್ಲಿದ್ದ ಮಾಹಿತಿಯನ್ನು ಸಂಗ್ರಹಿಸುವ ಯಾವೊಂದು ಸಂಧಿಯನ್ನು ನಾನು ಕಳೆದುಕೊಂಡಿದ್ದುದಿಲ್ಲ. ಭಟ್ಕಳದ ಶಿರಾಲಿಯಲ್ಲಿನ ಕುಲದೇವತೆ ಮಹಾಗಣಪತಿಯ ದೇವಸ್ಥಾನದ ಸಂದರ್ಶನದ ವೇಳೆ ನನ್ನೊಂದಿಗಿದ್ದ ಇವರು ನನ್ನನ್ನು ಅನೇಕ ದೇವಸ್ಥಾನಗಳತ್ತ ಕೊಂಡುಹೋದರು. ಅವುಗಳಲ್ಲಿನ ಕೆಲವು ಅರ್ಕಿಯಾಲಜಿಕಲ್ ಡಿಪಾರ್ಟ್‌ಮೆಂಟ್‌ನ ಸಂರಕ್ಷಣೆಗೊಳಗಾಗಿದ್ದವು. ಈ ಪುಸ್ತಕದ ಬರವಣಿಗೆಗೆ ಬೇಕಿದ್ದ ಬಹುತಾಂಶ ಮಾಹಿತಿಯನ್ನು ಇವರೇ ಒದಗಿಸಿದ್ದರು.

ಅಪೂರ್ವ, ಅಮೂಲ್ಯವೆನ್ನಲಾಗುವ ಗ್ರಂಥಗಳನ್ನು (ಅವುಗಳಲ್ಲಿನ ಹೆಚ್ಚಿನವು ಈಗ ಕಾಣಸಿಗುತ್ತಿಲ್ಲ) ಒದಗಿಸಿಕೊಟ್ಟಿದ್ದ ಶ್ರೀ ಮಂಜೇಶ್ವರ ಗೋವಿಂದ ಪೈ ಮತ್ತು ಶ್ರೀ ಹೆಚ್. ಲಕ್ಷ್ಮೀನಾರಾಯಣ ಕಾಮತ್ ಇವರಿಗೆ ನಾನು ಚಿರಋಣಿಯಾಗಿರುತ್ತೇನೆ. ಪುಸ್ತಕದಲ್ಲಿ ಸೇರಿಸಬೇಕಾಗಿರುವ ವಿಷಯಗಳ ಕುರಿತಾಗಿ ನಾನು ಬರೆದ ಅಸಂಖ್ಯ ಪತ್ರಗಳಿಗೆ ಅವರಿಬ್ಬರೂ ತಾಳ್ಮೆಗೆಡದೆ ಉತ್ತರವೀಯುತ್ತಿದ್ದರು. ಶ್ರೀ ವಾಮನ ರಘುನಾಥ ವರ್ದೆ ವಾಲಾವಲಕರ್, ಶ್ರೀ ಮಠಸ್ಥ ಗಣೇಶ ರಾಮಚಂದ್ರ ಶರ್ಮಾ, ಶ್ರೀ ನರಸಿಂಹ ವ್ಯಂಕೋಜಿ ರಾಜಾಧ್ಯಕ್ಷ,

ಶ್ರೀ ಪಿ.ಪಿಸ್ರುಲೆಂಕರ್ (ವೆರಿ ರೆವರೆಂಡ್ ಮಾನ್ಸೀನ್ಯರ್ ಎ.ಪಿ.ದ ಆಂದ್ರಾದೆ ಇವರ ನೆರವಿನೊಂದಿಗೆ), ರಾವ್ ಬಹಾದ್ದೂರ್ ಶ್ರೀಪಾದ ಸುಬ್ರಾವ್ ತಾಲ್ಮಕಿ, ಶ್ರೀ ವಾಮನ ಮಂಗೇಶ್ ದುಭಾಶಿ ಇವರ ಕೃತಿಗಳಿಂದ ಬೇಕಿದ್ದ ಮಾಹಿತಿಯನ್ನು ನಾನು ನಿರ್ಬಂಧವಿಲ್ಲದೆ ಆಯ್ದುಕೊಂಡಿರುತ್ತೇನೆ.

ದಾಕ್ಷಿಣಾತ್ಯ ಸಾರಸ್ವತರ ಕುರಿತಾಗಿ ಈ ಹಿಂದೆ ಬರೆಯಲಾಗಿದ್ದ ಅನ್ಯ, ಅತ್ಯಮೂಲ್ಯ ಗ್ರಂಥಗಳಿಂದ ಆರಿಸಿದ್ದ ಮಾಹಿತಿಯನ್ನು ಬಳಸಿದ್ದುದಷ್ಟೆ ಅಲ್ಲ, ಶ್ರೀ ಕೆ. ಎನ್. ಗಾಯ್ತೊಂಡೆ ಇವರು, ಗೋವಾದ ಜಾನಪ್ಪ ಕಾಮತರ ಸಹಾಯಕೊಂಡು ನನಗಾಗಿ ಸಂಗ್ರಹಿಸಿದ್ದ ಮಾಹಿತಿಯನ್ನೂ ಮೊದಲಬಾರಿಗೆಂಬಂತೆ ಬಳಸಿರುತ್ತೇನೆ. ನನ್ನ ಈ ಕೆಲಸದಲ್ಲಿ ಮುಂದಣವರ ಸಹಭಾಗವಿದೆ : ಮೈಸೂರಿನ ಭಿಷಗ್ರತ್ನ ಪಂಡಿತ ಕೆ. ಪಿ. ಪುರಾಣಿಕ, ಕೊಚ್ಚಿನ್‌ನಲ್ಲಿನ ಶ್ರೀ ಎನ್.ಕೃಷ್ಣ ಕಾಮತ್, ಬಿ.ಎ., ಬಿ.ಎಲ್, ತೆಲ್ಲಿಚೇರಿಯ ಶ್ರೀ ಆರ್.ಎನ್.ವಿಶ್ವನಾಥ ಶೆಣ್ಯೆ, ಬಿ.ಎ., ಬಿ.ಎಲ್., ಎರ್ನಾಕುಲಮ್‌ದಲ್ಲಿನ ಕಾಶಿ ಮಠ ಸಂಸ್ಥಾನದ ಶ್ರೀ ಯು. ವಾಮನ ಶೆಣ್ಯೆ, ದಕ್ಷಿಣ ಕನ್ನಡದ ಕಲೆಕ್ಟರ್ ಶ್ರೀ ಹೆಚ್. ನರಸಿಂಹ, ಐ.ಎ.ಸ್ ಮತ್ತು ಇವರೆಲ್ಲವರಿಗಿಂತಲೂ ಮಿಕ್ಕಿ ಶ್ರೀ ಜಿ.ಕೆ. ರಾವ್, ಎಮ್.ಎ., ಎಲ್.ಎಲ್.ಬಿ.

ವಿ.ಎನ್.ಕುಡ್ವ

'ನಟ್ ಫೋರ್ಡ್'
೬೭, ಹೆರ್ರಿಂಗ್‌ಟನ್ ರೋಡ್,
ಚೆತ್ಪುಟ್, ಮದ್ರಾಸ್ - ೩೧.

ಕೃತಜ್ಞತೆ

'ಹಿಸ್ಟರಿ ಆಫ್ ದ ದಾಕ್ಷಿಣಾತ್ಯ ಸಾರಸ್ವತ್ಸ್' ಪುಸ್ತಕವನ್ನು ಓದಿದ ನಾನು, ಅದರಲ್ಲಿನ ಅತ್ಯಪೂರ್ವ ವಿಷಯ, ವಿಚಾರಗಳಿಂದ ಪ್ರಭಾವಿತನಾಗಿ ಅದನ್ನು ಕನ್ನಡಕ್ಕೆ ಭಾಷಾಂತರಿಸಿ ಕನ್ನಡವನ್ನಷ್ಟೆ ಓದಬಲ್ಲ ಸಮಾಜಬಾಂಧವರಿಗೆ ಅದರ ಲಾಭವೊದಗಿಸುವ ನಿರ್ಧಾರ ಮಾಡಿದೆ.

ನೂರೊಂದು ಪುಟಗಳ ಭಾಷಾಂತರ ಮಾಡಿದ ನಾನು ಅಪರಿಹಾರ್ಯ ಕಾರಣಗಳ ನಿಮಿತ್ತ ಅದರ ಕೈಬಿಟ್ಟೆ. ಇದು ೧೯೯೧ರ ಕಥೆ.

ಕೈಬಿಟ್ಟಿದ್ದ ಭಾಷಾಂತರದ ವಿಷಯ ಕಾರಣಾಂತ ೨೦೦೭ರಲ್ಲಿ ತಲೆಯೆತ್ತಿದಾಗ, ನನ್ನ ತಮ್ಮ, ಕುತ್ಪಾಡಿ ಅನಂತಕೃಷ್ಣ ಮಾಧವ ಹೆಗ್ಡೆ, ಭಾಷಾಂತರ ಪೂರ್ಣಗೊಳಿಸಿದಲ್ಲಿ ಪುಸ್ತಕದ ಪ್ರಕಾಶನೆಗೆ ತಾನು ಯತ್ನಿಸುವುದಾಗಿ ನುಡಿದ.

ಅರ್ಧಕ್ಕೆ ಕೈಬಿಟ್ಟಿದ್ದ ಭಾಷಾಂತರದ ಕೆಲಸವನ್ನು ೨೦೦೭ರಲ್ಲಿ ಮತ್ತೆ ಕೈಗಳಲ್ಲಿಕೊಂಡೆ.

ಭಾಷಾಂತರಕ್ಕೆ ಅಧಿಕೃತ ಅನುಮತಿಯು ಅವಶ್ಯಕತೆಯಿತ್ತು. ಅನಂತಕೃಷ್ಣ ಮಣಿಪಾಲದಲ್ಲಿ ವಾಸ್ತವ್ಯಕ್ಕಿದ್ದ ಜ್ಯೇಷ್ಠ ಪತ್ರಕರ್ತ ಶ್ರೀ ಎಮ್. ವಿ. ಕಾಮತರ ಅತ್ಯಮೂಲ್ಯ ನೆರವುಕೊಂಡು ಪುಸ್ತಕದ ಪ್ರಕಾಶಕರಿದ್ದ ಸಂಯುಕ್ತ ಗೌಡ ಸಾರಸ್ವತ ಸಭಾ, ಚೆನ್ನೈಯೊಂದಿಗೆ ಸಂಪರ್ಕ ಸಾಧಿಸಿದಾಗ 'ಸಭಾ'ದ ಅಧಿಕಾರಿಗಳು ಭಾಷಾಂತರಿಸಲ್ಪಟ್ಟ ಪುಸ್ತಕ ತಾವೇ ಪ್ರಕಾಶಿಸುವುದಾಗಿ ನುಡಿದರು.

೨೦೦೭ರಲ್ಲಿ ತೊಡಗಿದ್ದ ಭಾಷಾಂತರದ ಕಾರ್ಯ ಮುಗಿಸಿ, ಮುದ್ರಣಕ್ಕೆ ಯೋಗ್ಯವಾದ ಹಸ್ತಪ್ರತಿ ತಯಾರಿಸಲು ಮೂರು ವರ್ಷಗಳು ತಗಲಿದುವಾದರೆ ಅದು ಇನ್ನೊಂದು ವಿಚಾರ.

ಕಾರಣಾಂತ, ಪುಸ್ತಕದ ಡಿ.ಟಿ.ಪಿ.ಕರಣ ಕರಡಚ್ಚಿನ ತಿದ್ದುಪಡಿ ಮುಂತಾದವುಗಳ ಹೊಣೆಗಾರಿಕೆ ನನ್ನದಾಯಿತು. ಅದನ್ನು ೨೦೧೧ರ ದೀಪಾವಳಿಯಂದು ಪೂರೈಸಿಕೊಂಡೆ.

ಭಾಷಾಂತರ ಕ್ಲಿಷ್ಟವಿತ್ತು. ಹತ್ತಿಪ್ಪತ್ತು ಸಾಲುಗಳುದ್ದದ ವಾಕ್ಯಗಳ ಭಾಷಾಂತರ, ಮೂಲ ಲೇಖಕರ ಮನೋಗತವನ್ನು ಯಥಾವತ್ತಾಗಿ ಕನ್ನಡದಲ್ಲಿ ವ್ಯಕ್ತಪಡಿಸುವುದು ಕಷ್ಟಸಾಧ್ಯವಿತ್ತು.

ಪುಸ್ತಕದಲ್ಲಿ ಕಾಣಬರುವ ಪೋರ್ಚುಗೀಸ್ ವ್ಯಕ್ತಿಗಳ ಮತ್ತು ಅವರು ಬಳಸುತ್ತಿದ್ದ ಊರುಗಳ ಹೆಸರುಗಳ ಉಚ್ಚಾರಣಾನುರೂಪ ಭಾಷಾಂತರ ಸಮಸ್ಯೆಯೊಂದಾದಾಗ ನನ್ನಣ್ಣನ ಸೊಸೆ, ಗೋವಾ ನಿವಾಸಿ ಶ್ರೀಮತಿ ಶೀಲಾ ರವೀಂದ್ರನಾಥ ಹೆಗ್ಡೆಯ ನೆರವು ಒದಗಿಬಂತು.

ಭಾಷಾಂತರ ಕಾರ್ಯ ಪೂರ್ಣವಾಗುವಲ್ಲಿನ ಶ್ರೇಯಸ್ಸು ಹಲವೊಂದು ರೀತಿಯಿಂದ ತಮ್ಮ ಪಾತ್ರವಾಡಿದ್ದ ೯೭ರ ವಯಸ್ಸಿನ ಶ್ರೀಮತಿ ಪಿಸ್ನು ಯಾನೆ ಸೀತಾಬಾಯಿ ಕಾಮತ್

(ದಿವಂಗತ ಹುಂಡಿ ಹರಿಪಂತ ಕಾಮತರ ಪತ್ನಿ), ನನ್ನ ಪತ್ನಿ ಜ್ಯೋತಿ ಹೆಗ್ಡೆ ಮತ್ತು ಅನಂತಕೃಷ್ಣ ಹೆಗ್ಡೆ ಇವರಿಗೆ ಸಲ್ಲುತ್ತದೆ.

ಗೀಚು ಗೀಚಿನ ಹಸ್ತಪ್ರತಿಗೆ ಡಿ.ಟಿ.ಪಿ.ಕರಣದ ಮೂಲಕ ರೂಪ, ಆಕಾರವಿತ್ತ ಮನಾಲಿ ಆರ್ಟ್ಸ್, ಘಾಟ್‌ಕೋಪರ್, ಮುಂಬಯಿಯ ಶ್ರೀಮತಿ ಹರಿಣಿ ಎಮ್. ಶೆಟ್ಟಿಯವರಿಗೆ ನಾನು ಆಭಾರಿಯಾಗಿರುತ್ತೇನೆ.

ಸಮಾಜ ಬಾಂಧವರ ಹಿತವನ್ನುದ್ದೇಶಿಸಿ ಈ ಪುಸ್ತಕವನ್ನು ಮುದ್ರಿಸಿ, ಪ್ರಕಾಶಿಸಿದ ಸಂಯುಕ್ತ ಗೌಡ ಸಾರಸ್ವತ ಸಭಾ, ಚೆನ್ನೈಯ ಸಮಸ್ತ ಪದಾಧಿಕಾರಿಗಳಿಗೆ ನನ್ನ ಕೃತಜ್ಞತೆಗಳು.

ಕುತ್ಪಾಡಿ ರಾಧಾಕೃಷ್ಣ ಹೆಗ್ಡೆ, ಮುಂಬಯಿ

101, 'A' Wing,
'Citiscape'
Behind Kohinoor Continental,
Andheri - Kurla Rd.,
Andheri (E),
Mumbai-400 059.

ಅನುಕ್ರಮಣಿಕೆ

ಅಧ್ಯಾಯ ೧

ಸಾರಸ್ವತರ ಮೂಲಸ್ಥಾನ - ಅವರು ಗೋವಾಕ್ಕೆ ವಲಸೆ ಹೋದುದು

ಸಾರಸ್ವತರ ಮೂಲಸ್ಥಾನ

ಸಾರಸ್ವತರು ವೇದಗಳು, ರಾಮಾಯಣ, ಮಹಾಭಾರತ [೧], ಭಾಗವತ [೨], ಹಾಗೂ ಭವಿಷ್ಯೋತ್ತರ ಪುರಾಣಗಳಲ್ಲಿ ಹಲವೊಂದೆಡೆ ಉಲ್ಲೇಖಿಸಲ್ಪಟ್ಟ ಬ್ರಾಹ್ಮಣರಲ್ಲೊಬ್ಬರು. ಮಹಾಭಾರತದ ವನಪರ್ವ [೩]ದಲ್ಲಿ, ಸರಸ್ವತಿ ನದಿಯ ತೀರದ ಕಾಮ್ಯಕವನ ಮತ್ತು ದ್ವೈತಾರಣ್ಯದಲ್ಲಿ ವಾಸ್ತವ್ಯಕ್ಕಿದ್ದ ಪಾಂಡವರ ವಿಸ್ತೃತ ವರ್ಣನೆಯಲ್ಲಿ ಇವರ ಆವಾಸ, ಹವ್ಯಾಸ ಮತ್ತು ಉದ್ಯೋಗಗಳ ಕುರಿತಾದ ಪ್ರಾಸಂಗಿಕ ವಿವರಗಳಿವೆ. ವನಪರ್ವ [೪]ದಲ್ಲಿ ಬಕದಾಲ್ಭ್ಯ ಋಷಿ ಯುಧಿಷ್ಠಿರನಿಗೆ ಹೀಗೆನ್ನುತ್ತಾನೆ :

''ಅಗ್ನಿಹೋತ್ರಿಗಳಿವ್ವ ಭೃಗು, ಅಂಗೀರಸ, ವಶಿಷ್ಠ, ಕಶ್ಯಪ, ಅಗಸ್ತ್ಯ, ಅತ್ರಿ ಮುಂತಾದವರ ವಂಶಜರಲ್ಲಿನ ಶ್ರೇಷ್ಠ ಬ್ರಾಹ್ಮಣರ ಸಹವಾಸ ಕೊಂಡ ನೀನು ಭಾಗ್ಯವಂತನಿರುವೆ''

ಮೂಲತಃ ಸಾರಸ್ವತರು ಸರಸ್ವತಿ [೫] ಮತ್ತು ದೃಷದ್ವತಿ [೬]ಗಳ ನಡುವಣ ಪ್ರದೇಶದಲ್ಲಿ ವಾಸಮಾಡಿಕೊಂಡಿದ್ದರು. ಋಗ್ವೇದ [೭]ದಲ್ಲಿ ಬಣ್ಣಿಸಲಾದ ಈ ನದಿಗಳೆರಡರ ನಡುವಣ ಪ್ರದೇಶವನ್ನು ಮನುಸ್ಮೃತಿಯಲ್ಲಿ [೮] ಬ್ರಹ್ಮಾವರ್ತವೆಂದು ಸಂಬೋಧಿಸಲಾಗಿದೆ. ವರಾಹಮಿಹಿರನ (ಕ್ರಿ.ಶ.೫೦೦) ಬೃಹತ್ಸಂಹಿತೆ, ಮಾರ್ಕಾಂಡೇಯ ಪುರಾಣ ಮತ್ತು ಭಾಗವತಗಳಲ್ಲಿ [೯] ಸಾರಸ್ವತ ಪ್ರದೇಶದ ಉಲ್ಲೇಖವಿದೆ.

೧. ಸರಸ್ವತಿ

ಸರಸ್ವತಿ ನದಿ ಮತ್ತೆ ಅದರ ಗುಣಗಾನವನ್ನು ಋಗ್ವೇದ [೧೦]ದ ಹಲವೊಂದು ಶ್ಲೋಕಗಳಲ್ಲಿ ವರ್ಣಿಸಲಾಗಿದೆ.

ಮಹಾಭಾರತದ ಶಲ್ಯ ಪರ್ವದಲ್ಲಿ ಸಾರಸ್ವತರ ಕುರಿತಾಗಿ ಸಾರಸ್ವತಾಖ್ಯಾನವೆಂಬ ವಿಶೇಷ ಪ್ರಕರಣವೊಂದಿದ್ದು ಅದು ಅವರ [೧೧] ಪ್ರಾಚೀನ ಪರಂಪರೆಯ ಕುರಿತು ನುಡಿಯುತ್ತದೆ. ಅದು ಹನ್ನೆರಡು ವರ್ಷಗಳ ಕಾಲದ ಕ್ಷಾಮದ ವರ್ಣನೆ ಮಾಡುತ್ತದೆ. ಶ್ರೋತ್ರಿಗಳು ಕಾಲಾಧೀನರಾದ, ''ದೈವೀರೂಪದ, ಅಪ್ರತಿಮ ತೇಜಸ್ವಿನ ಋಷ್ಯಾಗ್ರೇಸರ'', ಋಷಿ ಸಾರಸ್ವತರು [೧೨] ಮೀನು ತಿಂದು ಬದುಕುಳಿದ, ಕ್ಷಾಮದ ನಂತರ ಅವರು ೬೦,೦೦೦ ಶಿಷ್ಯರ ಸಮುದಾಯಕ್ಕೆ ವೇದ, ಶಾಸ್ತ್ರ ಮತ್ತು ಅನ್ಯ ಸಂಸ್ಕಾರಗಳ ದೀಕ್ಷೆಯಿತ್ತ ವಿಷಯಗಳ ಕುರಿತೂ ನುಡಿಯುತ್ತದೆ. ಇವುಗಳ ವಿವರಗಳನ್ನು ಮಹಾಭಾರತದ ಗಧಾಪರ್ವ, ಸ್ಕಂಧ ಪುರಾಣದ ಸಹ್ಯಾದ್ರಿಖಂಡ ಮತ್ತು ಸೂತಸಂಹಿತೆಗಳಲ್ಲೂ ಕಾಣಬಹುದು.

ಅಶ್ವಘೋಷನ [೧೩] 'ಬುದ್ಧ ಚರಿತ್ರ'ದಲ್ಲಿ ಸ್ವಾರಸ್ವತರಿಂದಾದ ವೈದಿಕ ಸಂಸ್ಕೃತಿಯ ಸಂರಕ್ಷಣೆಯ ಉಲ್ಲೇಖವಿದೆ.

೨. ಅವರು ಮೂಡಲಿಗೆ ಮತ್ತು ಪಡುವಣ ಕರಾವಳಿಯತ್ತ ವಲಸೆಹೋದುದು

ಸರಸ್ವತಿ ಹಾಗೂ ದೃಷದ್ವತಿಗಳ ನಡುವಣ ಪ್ರದೇಶದಲ್ಲಿ ವಾಸಿಸುತ್ತಿದ್ದ ದಿನಗಳಲ್ಲಿ ಬ್ರಾಹ್ಮಣರು ಸಮಾಜವೊಂದನ್ನು ರಚಿಸಿದರು. ಕ್ರಮೇಣ ಅವರಲ್ಲಿನ ಕೆಲವೊಬ್ಬರು ಪೂರ್ವಕ್ಕೆ ಗಂಗಾ, ಯಮುನಾ ನದಿಗಳತ್ತ ವಲಸೆ ಹೋದರು; ಗಂಗೆಯ ತೀರದುದ್ದಕ್ಕೆ ದಾರಿ ಸಾಗಿದ ಇವರು ಬಿಹಾರಿನ ಬಯಲನ್ನು ಸೇರಿಕೊಂಡರು. ಶತಪಥ ಬ್ರಾಹ್ಮಣ [೧೪] ಸರಸ್ವತಿ ನದಿಯ ತೀರದಿಂದ ತ್ರಿಹೋತ್ರ (ಯಾ ತಿರ-ಭುಕ್ತಿ) ವೆಂದೂ ಪರಿಚಿತವಾಗಿದ್ದ ವಿದೇಶ (ವಿದೇಹದ ವೈದಿಕ ಸಂಸ್ಕೃತದ ರೂಪು, ಅಂದರೆ ಉತ್ತರ ಬಿಹಾರ)ಕ್ಕೆ ವಲಸೆ ಹೋದ ಆರ್ಯರ ಕುರಿತು ನುಡಿಯುತ್ತದೆ. ಒಂದು ಕಾಲದಲ್ಲಿ ಬ್ರಾಹ್ಮಣರು ಕನ್ಯಾಕುಬ್ಜ (ಕನೋಜ) ಮಥುರೆ ಮತ್ತು ಮಗಧಗಳಲ್ಲಿನ ದೊಡ್ಡ ವಸಾಹತುಗಳಲ್ಲಿ ನೆಲಸಿದ್ದಿರಬೇಕು. ಚಂಬಲ್ ಮತ್ತು ಬೆಟ್ವಾನದಿಗಳು ಉಗಮಿಸುವ ವಿಂಧ್ಯ ಪರ್ವತ ಶ್ರೇಣಿಯ ಉತ್ತರ, ಪಶ್ಚಿಮ ಭಾಗಗಳು 'ಪರಿ-ಯತ್ರ' ಎಂದಾಗಿ ಕರೆಯಲ್ಪಡುತ್ತಿದ್ದವು. ಅಂದರೆ, ಅವು ಸಾಮಾಜಿಕ ಸಂಸರ್ಗದ ಸೀಮೆಗಳಾಗಿದ್ದವು.

ಗಧಾಪರ್ವದ ಸಾರಸ್ವತಾಖ್ಯಾನದಲ್ಲಿ ಸಾರಸ್ವತರ ಹಿಂದಿನ ದಿನಗಳಲ್ಲಿನ ವಲಸೆಯೊಂದರ ವೃತ್ತಾಂತವಿದೆ. ಅದು ಕಾಥಿಯಾವಾರ್‌ನ ಪ್ರಭಾಸ ಕ್ಷೇತ್ರದ ಬಳಿಯ ಸಾರಸ್ವತ ತೀರ್ಥದ ಕುರಿತು ನುಡಿಯುತ್ತದೆ. ಜೈಮಿನಿಯ ಅಶ್ವಮೇಧ, ಸೌರಾಷ್ಟ್ರದಲ್ಲಿನ ಸಾರಸ್ವತರ ಉಲ್ಲೇಖ ಮಾಡುತ್ತದೆ. ಮತ್ಸ್ಯ ಪುರಾಣ ಮತ್ತು ಇನ್ನಿತರ ಪುರಾಣಗಳು ಸೌರಾಷ್ಟ್ರದ ಪಶ್ಚಿಮಕ್ಕಿದ್ದ ಸಾರಸ್ವತ ದೇಶದ ಕುರಿತು ನುಡಿಯುತ್ತವೆ.

ಸ್ಕಂಧ ಪುರಾಣ [೧೫] ಬ್ರಾಹ್ಮಣರು ಎರಡು ವಿಭಾಗಗಳಾಗಿ ವಿಂಗಡಿಸಲ್ಪಟ್ಟಿದ್ದುದರ ಕುರಿತು ನುಡಿಯುತ್ತದೆ: ಸಾರಸ್ವತ, ಕನ್ಯಾಕುಬ್ಜ, ಮೈಥಿಲ, ಗೌಡ ಮತ್ತು ಉತ್ಕಲದ ಬ್ರಾಹ್ಮಣರನ್ನೊಳಗೊಂಡ (ಪಂಚ) ಗೌಡರು ಮತ್ತೆ ದ್ರವಿಡ (ತಮಿಳು) ತೈಲಂಗ (ತೆಲುಗು) ಕರ್ಣಾಟ, ಮಧ್ಯದೇಶೀ (ಮಹಾರಾಷ್ಟ್ರ) ಮತ್ತು ಗುರ್ಜರ (ಗುಜರಾತ ಮತ್ತು ಸೌರಾಷ್ಟ್ರ) ಬ್ರಾಹ್ಮಣರಿಂದೊಡಗೂಡಿದ್ದ ದ್ರಾವಿಡರು. ವಿಂಧ್ಯ ಪರ್ವತವನ್ನು ಈ ವಿಭಾಗಗಳೆರಡರ ನಡುವಣ ವಿಭಾಜಕ ರೇಖೆಯಿಂದಾಗಿ ಪರಿಗಣಿಸಲಾಗಿತ್ತು. ಹೀಗಿದ್ದರೂ ಈ ವಿಭಾಗಗಳೆರಡರ ನಡುವಣ ಭೋಜನ, ವಿವಾಹಾದಿಗಳಲ್ಲಿ ಭೇದ ಭಾವಗಳಿರಬಾರದೆಂದಿತ್ತು.

ಶ್ರೀ ಮಂ. ಗೋವಿಂದ ಪೈಗಳೆನ್ನುವಂತೆ ಸಾರಸ್ವತ ಸಮಾಜದ (ಅಧಿಕಾಂಶ ಉತ್ತರ ಭಾರತದ ನಿವಾಸಿಗಳ) ಇತಿಹಾಸದ ಸಂಶೋಧನೆಗೆ ಬೇಕಿದ್ದ ಸಾಮಗ್ರಿಗಳು ಅತ್ಯಲ್ಪ, ಅಸ್ಪಷ್ಟವಿದ್ದು ಅವು ದೇಶದಲ್ಲಿ ಅಲ್ಲಲ್ಲಿ ಚದರಿಕೊಂಡಿವೆ. ಉತ್ತರ ಭಾರತದ ಸಾರಸ್ವತರ ಕುರಿತಾಗಿ ಪಂಡಿತ ಗೋವಿಂದ ನಾರಾಯಣ ಮಿಶ್ರ ಇವರು ಬರೆದ 'ಸಾರಸ್ವತ ಸರ್ವಸ್ವ' ಪುಸ್ತಕ ಅತ್ಯುತ್ತಮ, ಅಮೂಲ್ಯವಾದುದಾಗಿದೆ. ಅವರೆನ್ನುವಂತೆ ಸಾರಸ್ವತರು ದೀರ್ಘಕಾಲ ತಮ್ಮ ಮೂಲದ ಸ್ಥಾನ ಪಂಜಾಬಿನಲ್ಲಿ ವಾಸಮಾಡಿಕೊಂಡಿದ್ದರು. ಶಕ್ತಿ ಶಾಲಿ ಕ್ಷತ್ರಿಯ ರಾಜ್ಯಗಳ ಉದಯದ ಬಳಿಕ ಅವರಲ್ಲಿನ ಕೆಲವೊಬ್ಬರು ಭಾರತ ವರ್ಷದ ಇಂದ್ರಪ್ರಸ್ಥ, ಮಥುರೆ, ಪ್ರಯಾಗ (ಅಲ್ಲಹಾಬಾದ್), ಕಾಶಿ (ಬನಾರಸ್) ಮತ್ತು ಇನ್ನಿತರ ಭಾಗಗಳಿಗೆ

ವಲಸೆ ಹೋದರು. ಬೌದ್ಧ ಧರ್ಮದ ಉದಯದ ಬಳಿಕ ಕ್ಷತ್ರಿಯ ಅರಸರು ದುಸ್ಥಿತಿಗೊಳಗಾದರು. ಆಗ ಕೆಲವೊಬ್ಬ ಸಾರಸ್ವತರು ಬ್ರಾಹ್ಮಣರಿದ್ದ ಕಚ್ಛ ಅರಸರು ಆಳುತ್ತಿದ್ದ ರಜಪುತಾನಾ, ಸಿಂಧ್ ಪ್ರಾಂತಗಳತ್ತ ವಲಸೆ ಹೋದರು. ತಮ್ಮ ಹೊಸ ವಸಾಹತುಗಳಲ್ಲಿ ಸ್ಥಾನೀಯ ಸ್ತ್ರೀಯರನ್ನು ವರಿಸಿ ಬೇರೆಯೇ ಆದ ಸಮಾಜ ನಿರ್ಮಿಸಿದರು. ಗೋವಿಂದ ನಾರಾಯಣ ಮಿತ್ರರ ಮೇರೆಗೆ ಗಾಧಿಪುರ ಅಥವಾ ಕನೋಜಕ್ಕೆ ಹೋದ ಇವರು 'ಕನ್ಯಾಕುಬ್ಜ' ರೆಂದಾಗಿ ಪರಿಚಿತರಾಗಿ ಪಂಜಾಬಿನಲ್ಲಿದ್ದಂತೆ ಇಲ್ಲಿಯೂ ಕ್ಷತ್ರಿಯರ ಅಂದರೆ ರಜಪೂತ, ಖತ್ರಿಗಳ ಪುರೋಹಿತರಾಗುಳಿದರು. ಗೌಡ ಅಥವಾ ಗಂಗಾ ಬಯಲು ಭೂಮಿಯತ್ತ ಹೋಗಿ ವೈಶ್ಯರ (ಅಂದರೆ ಬನಿಯರ) ಪುರೋಹಿತರಾಗಿ 'ಗೌಡ' ರೆಂದೆನಿಸಿಕೊಂಡರು. ಮಿಥಿಲದಲ್ಲಿ ಮೈಥಿಲರೆಂದಾಗಿ, ಉತ್ಕಲ ಅಥವಾ ಒರಿಸ್ಸಾದಲ್ಲಿ 'ಉತ್ಕಲ ಗೌಡ' ಬ್ರಾಹ್ಮಣರೆಂದಾಗಿ ಕರೆಸಿಕೊಂಡರು.

ವಿಶ್ವಾಮಿತ್ರನಂತಹ ಕ್ಷತ್ರಿಯರನ್ನು ತಮ್ಮ ಕೂಟದೊಂದಿಗೆ ಸೇರಿಸಿಕೊಳ್ಳಲು, ಕ್ಷತ್ರಿಯರ ಪುತ್ರಿಯರನ್ನು ವರಿಸಲು (ಕನ್ಯಾಕುಬ್ಜದ ಅರಸು ಗಾಧಿಯ ಪುತ್ರಿ ಸತ್ಯವತಿಯನ್ನು ಋಚೀಕ ವರಿಸಿದ್ದಂತೆ, ಸತ್ಯವತಿಯ ಪುತ್ರ ಜಮದಗ್ನಿ ಅಯೋಧ್ಯೆಯ ಅರಸು ರೇಣುವಿನ ಪುತ್ರಿ ಹಾಗೂ ಪರಶುರಾಮನ ತಾಯಿ ರೇಣುಕಳೊಂದಿಗೆ ವಿವಾಹ ಮಾಡಿಕೊಂಡಿದ್ದಂತೆ) ಅಳುಕು ತೋರದ ಮೊದಲ ದಿನಗಳ ಬ್ರಾಹ್ಮಣರು ನಿಸ್ಸಂದೇಹ ಉಚ್ಚ ವರ್ಗದ ಸ್ಥಾನೀಯ ಸ್ತ್ರೀಯರೊಂದಿಗೆ ವಿವಾಹ ಮಾಡಿಕೊಂಡಿದ್ದಿರಬೇಕು. ಈ ಪದ್ಧತಿಗೆ ಮನು ಮತ್ತು ಯಾಜ್ಞವಲ್ಕ್ಯರ ಸಮ್ಮತಿಯೂ ಇತ್ತು. ಅವರು ಸ್ಥಾನೀಯ, ಅನುವಂಶಿಕ ಪುರೋಹಿತ ವರ್ಗವನ್ನು ತಮ್ಮ ಕೂಟದೊಂದಿಗೆ ಸೇರಿಸಿ ಅವರ ಕೆಲವೊಂದು ರೀತಿ ರಿವಾಜುಗಳನ್ನು ಅಂಗೀಕರಿಸಿದರು. ಅವರೆಲ್ಲರ ಉಪವರ್ಗಗಳು ಸ್ಥಾನೀಯ ನೆಲೆ ಮನೆಗಳನ್ನನುಸರಿಸಿ ಪರಿಚಿತವಾಗಿದ್ದರೆ ಅದು ಈ ಮೇಲಿನ ಕಾರಣಗಳಿಂದಾಗಿರಬೇಕು.

ಬ್ರಾಹ್ಮಣರೆಲ್ಲರಲ್ಲಿ ಸಾರಸ್ವತರಷ್ಟೇ ತಮ್ಮ ಮೂಲದ ನಿವಾಸ ಸ್ಥಾನ, ಸರಸ್ವತಿ ನದಿಯ ಮೂಲಕ ಪರಿಚಿತರಾದರು. ಡಾ. ವಿಲ್ಸನ್‌ರ ಮೇರೆಗೆ ಸರಸ್ವತಿ ನದಿಯ ತೀರದಲ್ಲಿನ ಸಾರಸ್ವತ ಭೂಮಿಗೆ ಸಂಬಂಧಿಸಿದ ಬ್ರಾಹ್ಮಣರಷ್ಟೆ "ನಿಸ್ಸಂದಿಗ್ಧ, ವಿಶಿಷ್ಟ ಮತ್ತು ಏಕೈಕ ವರ್ಗದ ಮೂಲ ನಿವಾಸಿಗಳು". ಸಾರಸ್ವತ ಬ್ರಾಹ್ಮಣರ ವಂಶ ಅತಿ ಪ್ರಾಚೀನವಾದುದೆಂದು ರೆವರೆಂಡ್ ಎಮ್. ಎ. ಶೆರ್ರಿಂಗ್ ನುಡಿಯುತ್ತಾರೆ. "ನಿಶ್ಚಿತವಾಗಿಯೂ ಅವರು ಭಾರತದಲ್ಲಿನ ಮೊತ್ತ ಮೊದಲಿನ ನೆಲಸಿಗರಲ್ಲೊಬ್ಬರು. ಅವರಲ್ಲಿನ ಹೆಚ್ಚಿನ ಜನರು ಹಿಂದೂ ಧರ್ಮದ ಆದಿ ನೆಲೆವೀಡು ಹಾಗೂ ಅದೊಂದು ಕಾಲದಲ್ಲಿ ಸರಸ್ವತಿಯ ನೀರನ್ನುಂಡ ಭೂಭಾಗದಲ್ಲಿ ಇಂದಿಗೂ ವಾಸಮಾಡುತ್ತಿದ್ದಾರೆ".

೩. ಸಹ್ಯಾದ್ರಿ ಖಂಡದಲ್ಲಿ ಕಾಣಬರುವ ಸಾರಸ್ವತರ ಗೋವಾ ವಲಸೆಯ ವೃತ್ತಾಂತ

ಸ್ಕಂಧ ಪುರಾಣದಲ್ಲಿನ ಸಹ್ಯಾದ್ರಿ ಖಂಡದ ವಿಶಿಷ್ಟ ಭಾಗವೊಂದನ್ನು (ಹದಿನೈದು ಖಂಡಗಳು ಮತ್ತು ಆರು ಸಂಹಿತೆಗಳಲ್ಲಿನ ಶಿವ ಮಾಹಾತ್ಮ್ಯ ಮತ್ತು ಪವಿತ್ರ ಸ್ಥಾನಗಳ ಸ್ತುತಿ ಸಂಗ್ರಹ) ಬ್ರಾಹ್ಮಣರು ತ್ರಿಹೋತ್ರದಿಂದ ಪಶ್ಚಿಮದಲ್ಲಿನ ಗೋವಾಕ್ಕೆ ವಲಸೆ ಹೋದ

ಘಟನಾವಳಿಗಳಿಗಾಗಿ ಮೀಸಲಾಗಿಡಲಾಗಿದೆ.

ಪರಶುರಾಮ ತ್ರಿಹೋತ್ರದಿಂದ ಹತ್ತು ಮುನಿಗಳನ್ನು ಕರೆದು ತಂದನೆನ್ನಲಾಗುತ್ತದೆ. ತತ್ಸಂಬಂಧಿ ಶ್ಲೋಕಗಳ ಭಾಷಾಂತರ ಹೀಗಿದೆ :

'ಆನಂತರ ಪರಶುರಾಮ ತ್ರಿಹೋತ್ರದ (ಉತ್ತರ ಬಿಹಾರದಲ್ಲಿನ ಈಗಿನ ಚಂಪಾರಣ್ಯ, ದರ್ಭಂಗಾ, ಮುರತ್ತರ್‌ಪುರ ಮತ್ತು ಸಾರಣಾ ಜಿಲ್ಲೆಗಳು) ಪಂಚಗೌಡರಲ್ಲಿನ ಹತ್ತು ಮುನಿ (ಬ್ರಾಹ್ಮಣ) ಗಳನ್ನು ಕರೆದುತಂದು ಪಂಚಕ್ರೋಸಿ, ಕುಶಸ್ಥಳಿ ಮತ್ತು ಗೋಮಾಂಚಲ (ಗೋವಾ)ಗಳಲ್ಲಿ ನೆಲೆಗೊಳಿಸಿದ. ಅವರು ಭರದ್ವಾಜ, ಕೌಶಿಕ (ಕಂಸ), ವತ್ಸ, ಕೌಂಡಿನ್ಯ, ಕಾಶ್ಯಪ, ವಸಿಷ್ಠ, ಜಮದಗ್ನಿ, ವಿಶ್ವಾಮಿತ್ರ, ಗೌತಮ ಮತ್ತು ಅತ್ರಿಗೋತ್ರಿಯರಿದ್ದರು. ಅವರನ್ನು ಶ್ರಾದ್ಧ (ಶಾಸ್ತ್ರ ವಿದಿತ ಪಿತೃ ಕಾರ್ಯ), ಯಜ್ಞ (ಬಲಿ) ಮತ್ತೆ ಭೋಜನ (ಊಟ) ಗಳಿಗಾಗಿ ಕರೆದುತರಲಾಗಿತ್ತು. ಅವರನ್ನು ಆತ ಮಟಗ್ರಾಮ (ಮಂಡ್ಗಾಂವ್), ಕುಶಸ್ಥಳಿ ಅಥವಾ ಕುಟ್ಟಲ್ (ಕೊರ್ತಲಾಮ್) ಮತ್ತು ಕರ್ದಾಳಿ (ಕೆಳೂಶಿ) [೧೬] ಗಳಲ್ಲಿ ನೆಲೆಗೊಳಿಸಿದ.'

ಈ ಬ್ರಾಹ್ಮಣರ ಸಹಾಯದಿಂದ ಪರಶುರಾಮ ಗೋವಾದ ಪೆರ್ಣಂ (ಪೆಡ್ಣೆ) ವಿಭಾಗದಲ್ಲಿನ ಹರ್ಮಾಳ್ ಎಂಬಲ್ಲಿ ಅಶ್ವಮೇಧ (ಕುದುರೆಯ ಬಲಿ) ನೆರವೇರಿಸಿದ.

ತ್ರಿಹೋತ್ರದಲ್ಲಿನ ಬ್ರಾಹ್ಮಣರು ದೇವ ಸದೃಶ ರೂಪುಕೊಂಡಿದ್ದರೆಂದು ಹೇಳಲಾಗಿದೆ.[೧೭]

೪. ಅವರ ಗೋತ್ರಗಳು ಮತ್ತು ಗೋವಾದಲ್ಲಿನ ವಸಾಹತುಗಳು

ಅವರು ಹತ್ತು ಗೋತ್ರಗಳು ಮತ್ತು ೬೬ ಕುಟುಂಬಗಳಿಗೆ ಸೇರಿದವರಿದ್ದರು. ಅವರು ತಮ್ಮೊಂದಿಗೆ ಮಂಗೇಶ, ಮಹಾದೇವ, ಮಹಾಲಕ್ಷ್ಮಿ, ಮ್ಹಾಳಸಾ, ಶಾಂತಾದುರ್ಗಾ, ನಾಗೇಶ ಮತ್ತೆ ಸಪ್ತ ಕೋಟೀಶ್ವರ [೧೮] ಎಂಬೀ ಕುಲದೇವರು (ಸಂರಕ್ಷಕ ದೈವ)ಗಳನ್ನು ತಂದರು. ಅವರನ್ನು ಹಿಂಬಾಲಿಸಿಕೊಂಡು ಸಾಂಖ-ಪಿಂಗಳ-ಕೌತ್ಸ (ಕಂಸ), ಗಾರ್ಘ್ಯ ಆಂಗೀರಸ, ನೈಧ್ರುವ, ಧನಂಜಯ, ಮುದ್ಗಲ, ವೈನ್ಯ, ಹರ್ಷ, ಹರಿಹ, ಶಾಂಡಿಲ್ಯ ಮತ್ತು ಸಾಂಖ್ಯಾಯನ ಗೋತ್ರಗಳ ಕುಟುಂಬಗಳೂ ಬಂದವು. ಅವರೆಲ್ಲರೂ ಗೋವಾದಲ್ಲಿನ ಸಾಲ್ಸೆಟ್ಟ್ ಪ್ರಾಂತದಲ್ಲಿ ಸಷ್ಟಿ ಅಥವಾ ಸಾಷಷ್ಟಿ (ಸಂಸ್ಕೃತದಿಂದ, ಶತ್ - ಷಷ್ಟಿ) ಎಂದಾಗಿ ಕರೆಯಲ್ಪಡುವ ಅರುವತ್ತಾರು ಗ್ರಾಮಗಳ ಸಮುದಾಯವೊಂದರಲ್ಲಿ ನೆಲಸಿದರು. ಶಾಸ್ತ್ರಗಳಲ್ಲಿ ಪಾಂಡಿತ್ಯ ಪಡೆದಿದ್ದ, ಅರಸರಿಂದ ಗೌರವಿಸಲ್ಪಟ್ಟ, ಶ್ರೇಷ್ಠ, ಶೀಲವಂತ, ಸಂಬಂಧವಿರಿಸಲು ಯೋಗ್ಯರೆನಿಸಿದ (ಉತ್ತಮ ರಾಜಪೂಜಿತಃ ಸುದರ್ಶನಾಶ್ಚತುರಃ ಸದಾಚಾರ ಸರ್ವಕರ್ಮ....) ಕೌತ್ಸ, ವತ್ಸ ಮತ್ತು ಕೌಂಡಿನ್ಯ ಗೋತ್ರಗಳ ಹತ್ತು ಕುಟುಂಬಗಳು ಕುಶಸ್ಥಳಿ ಮತ್ತು ಬಹುತೇಕ ಕೆಳೋಶಿಯಲ್ಲಿ ನೆಲಸಿದವು. ಆರು ಕುಟುಂಬಗಳು ಮಟ ಗ್ರಾಮ (ಮಡ್ಗಾಂವ್)ದಲ್ಲಿ, ಆರಾರು ಕುಟುಂಬಗಳು ವರೇಣ್ಯ (ವೆರ್ಣೆ) ಮತ್ತು ನಾರ್ವಾ (ನರೋವಾ) ಗಳಲ್ಲಿ, ಆರು ಕುಟುಂಬಗಳು ಅನಂತ ಉರ್ಜೆ (ಅಂತ್ರುಜ್, ಫೊಂಡಾ) ಯಲ್ಲಿ , ಆರು ಕುಟುಂಬಗಳು ಲೊಟ್ಲೆಯಲ್ಲಿ, ಹತ್ತು ಕುಟುಂಬಗಳು ಚೂಡಾಮಣಿ (ಚೋಡಣ, ಚೊಣ್ಣ ಅಥವಾ ಚೊರಾವೊ ಕುದುರು) ಎಂಟು

ಕುಟುಂಬಗಳು ದೀಪಾವತಿ (ದಿವಾಡಿ, ದಿವಾರ್ ಕುದುರು)ಯಲ್ಲಿ, ಕಿರವಂತರ (ಅಂತ್ಯ ಕ್ರಿಯೆಗಳನ್ನು ನೆರವೇರಿಸುವ ಪುರೋಹಿತರು) ಹನ್ನೆರಡು ಕುಟುಂಬಗಳು ಗೋಮಾಂತಕದ ನಡುವೆ, ಹನ್ನೆರಡು ಕುಟುಂಬಗಳು ಬಹುತೇಕ ಸಹ್ಯದ ಬಾರ್ದೇಶದಲ್ಲಿ ನೆಲಸಿದವು. ಅರುವತ್ತಾರು ಗ್ರಾಮಗಳ ಸಮುದಾಯದಲ್ಲಿನ ಈ ನಿವಾಸಿಗಳು ಸಾಷಷ್ಟಿ ಕಾರರೆಂದಾಗಿ ಪರಿಚಿತರಾಗಿರುತ್ತಾರೆ.

ಸ್ವಲ್ಪ ಸಮಯದ ನಂತರ ಬೇರೆ ಮೂವತ್ತು ಕುಟುಂಬಗಳು ತೀಸ್‌ವಾಡಿ (ಇಲ್ಹಾ ದಿ ಗೋವಾ, ಗೋವಾದ ಒಂದು ಕುದುರು)ಗೆ ಬಂದು ನೆಲೆಗೊಂಡವು. ರೂಢಿಯಲ್ಲಿನ ನಂಬಿಕೆಯ ಮೇರೆಗೆ ಬನವಾಸಿಯ ಕದಂಬ ಅರಸು ಮಯೂರ ವರ್ಮನ ತಂದೆ ಸಿಕಿ ವರ್ಮ, ಈ ತೊಂಬತ್ತಾರು ಹಳ್ಳಿಗಳಲ್ಲಿನ ಕರಣಿಕರ ಹುದ್ದೆ (ಧಾರ್ಮಿಕ ಹಾಗೂ ಲೌಕಿಕವಿದ್ದ ನಿಯೋಜಿತ ಅಧಿಕಾರಗಳ ನಿರ್ವಹಣೆಗಾಗಿದ್ದ) ಗಳನ್ನು ಸಾರಸ್ವತರಿಗಿತ್ತ. ಈ ಕಾರಣ ಗೋವಾದ ಸಾರಸ್ವತರು ಶಾಣ್ಣವಿ (ಶೆಣ್ವೆ)ಗಳೆಂದು ಪರಿಚಿತರಾದರು.

ಸಹ್ಯಾದ್ರಿ ಖಂಡದಲ್ಲಿನ ಕೆಲವೊಂದು ಶ್ಲೋಕಗಳು ಗೋವಾಕ್ಕೆ ಕರೆದು ತಂದ ಬ್ರಾಹ್ಮಣರು ಮುಖ್ಯವಾಗಿ ಸಾರಸ್ವತ (ಸಾರಸ್ವತ ಸ್ಥಿತ ವಿಪ್ರ) ರಿದ್ದರೆಂಬುದನ್ನು ಸೂಚಿಸುತ್ತವೆ.

"ಸಾರಸ್ವತ ಬ್ರಾಹ್ಮಣರು ಹತ್ತು ಪ್ರಕಾರದವರು. ಅವರು ಪೂರ್ವ ಮತ್ತು ಪಶ್ಚಿಮ ಸಾಗರಗಳಲ್ಲಿ ವ್ಯಾಪಾರ ಮಾಡುತ್ತಾರೆ. ಅವರಲ್ಲಿ ಕೆಲವರು ಶುದ್ಧ (ಸಾಂಪ್ರದಾಯಿಕ ಕರ್ಮಾಚರಣೆಯ ದೃಷ್ಟಿಯಿಂದ) ಮತ್ತು ಅಶುದ್ಧರಿದ್ದರು. ಇನ್ನುಳಿದವರು ಸಿದ್ಧರಿದ್ದರು. (ಯಾವೊಂದು ಕಟ್ಟು ಕಟ್ಟಳೆಗಳನ್ನು ಪರಿಪಾಲಿಸದವರು). ಕಂಧರ, ಭೀತ ಚಾರಿಣ (ಭಯದ ನಿಮಿತ್ತ ಧರ್ಮಾಚರಣೆ ಮಾಡುವವರು), ಸ್ಮೇನಯ, ಕೌಶಿಕ (ಋಷಿ ಕೌಶಿಕನವಂಶಜರು), ಸಾರ್ವ, ಪಾದಿಕ, ಲಜ್ಜಕ, ನೈಗಮ (ನಿಗಮ ಅಥವಾ ವೇದಗಳ ವ್ಯಾಖ್ಯಾತ), ಖರ ಪ್ರತಿಸ್ಥಾಯ ಮತ್ತು ಪ್ರೇತ ವಿಲಾಸಿನ (ಅಂತ್ಯ ಸಂಸ್ಕಾರವನ್ನು ನೆರವೇರಿಸುವಲ್ಲಿ ಸಹಾಯ ಮಾಡುವವರು). [20] ಇವು ಈ ವರ್ಗಗಳ ಹೆಸರುಗಳು."

ಆದೊಮ್ಮೆ ರಾಮೇಶ್ವರಕ್ಕೆ ತೆರಳಿದ ಕನ್ಯಾ ಕುಬ್ಜ (ಕನೋಜ) ದ ಕೆಲವು ಕುಟುಂಬಗಳು ಕನೋಜಕ್ಕೆ ಮರಳುವಾಗ, ಗೋಮಾಂತಕ (ಗೋವಾ) ದಲ್ಲಿ ನೆಲಸಿದ್ದ ಸ್ಥಾನೀಯ ಸಾರಸ್ವತರ ಕನ್ಯೆಯರನ್ನು ವರಿಸಿ, ಅಲ್ಲಿಯೇ ವಾಸಮಾಡಿಕೊಂಡರೆಂದು ಮಾಂಗೀರಿಶ ಮಾಹಾತ್ಮ್ಯದಲ್ಲಿ ಹೇಳಲಾಗಿದೆ. ವತ್ಸಗೋತ್ರದ ದೇವಶರ್ಮ, ಆತನ ಭಾವ ಕೌಂಡಿನ್ಯ ಗೋತ್ರದ ಲೋಮಶರ್ಮ, ಮತ್ತೆ ಸೋದರಳಿಯ, ಕೌಶಿಕ ಗೋತ್ರದ ಶಿವ ಶರ್ಮ ಇವರು ಈ ಯಾತ್ರಿಕರ ಮುಂದಾಳುಗಳಾಗಿದ್ದರು. ದೇವಶರ್ಮ ಮತ್ತು ಲೋಮಶರ್ಮ ಇವರು ಕುಶಸ್ಥಳಿಯಲ್ಲಿ ಮಂಗೇಶ ಲಿಂಗವನ್ನು ಸ್ಥಾಪಿಸಿದರು. ಶಿವಶರ್ಮ ಕೆಳೋಶಿಯಲ್ಲಿ ಶಾಂತಾದುರ್ಗಾ ದೇವಿಯ ವಿಗ್ರಹವನ್ನು ಸ್ಥಾಪಿಸಿದ. ಪ್ರಿಯೋಳ್ ಮತ್ತು ಕವಳೆಗಳಲ್ಲಿನ ಮಂಗೇಶ ಮತ್ತು ಶಾಂತಾದುರ್ಗಾ ದೇವಸ್ಥಾನಗಳಲ್ಲಿ ದೇವಶರ್ಮ ಮತ್ತು ಶಿವಶರ್ಮರ ವಿಗ್ರಹಗಳು ಗ್ರಾಮ ದೇವತೆ (ಗ್ರಾಮರಕ್ಷಕರು)ಗಳ ರೂಪಿನಲ್ಲಿವೆ. ಪ್ರಿಯೋಳ್‌ನಲ್ಲಿನ ಮಂಗೇಶ ದೇವಸ್ಥಾನದ ಸಮೀಪ ದೇವಶರ್ಮನ ವಿಗ್ರಹವಿದ್ದ ಚಿಕ್ಕ ಗುಡಿಯೊಂದಿದೆ. ಮೂಲತಃ ಅವರೆಲ್ಲರೂ ಯಜುರ್ವೇದಿಗಳಾಗಿದ್ದರು. ಅನ್ಯ ಸಾರಸ್ವತರೊಂದಿಗೆ ಯಾವೊಂದು

ಅಡೆ ತಡೆಗಳಿಲ್ಲದೆ, ನಿಸ್ಸಂಕೋಚ ಬೆರತುಕೊಳ್ಳುತ್ತಿದ್ದ ಅವರ ವಂಶಜರು ಈಗ ದಕ್ಷಿಣದ ಇತರ ಋಗ್ವೇದಿಸಾರಸ್ವತರಂತಿದ್ದಾರೆ. ಕುಶಸ್ಥಳಿ, ಕೆಳೋಶಿಗಳಲ್ಲಿ ಕಾಣಬರುವ ಇವರು 'ತ್ರಿವರ್ಗೀಯರು' ಅಥವಾ 'ತ್ರಿಗೋತ್ರಿಯ'ರೆಂದಾಗಿ ಪರಿಚಿತರಾಗಿದ್ದಾರೆ. [೨೨]

ದಕ್ಷಿಣದ ಸಾರಸ್ವತರ ಪೂರ್ವಜರನ್ನು ಪರಶುರಾಮ ಬಿಹಾರದ [೨೩] ತ್ರಿಹೋತ್ರದಿಂದ ಕರೆದು ತಂದನೆಂಬ ವಾದವನ್ನು ಶ್ರೀ ವಾಮನ ಮಂಗೇಶ ದುಭಾಷಿ ಅಂಗೀಕರಿಸುತ್ತಿಲ್ಲ. ಈ ಸಂದರ್ಭದಲ್ಲಿ ರಾವ್ ಬಹದ್ದೂರ್ ಶ್ರೀಪಾದ ಸುಬ್ರಾವ್ ತಾಲ್ಮಕಿ ಇವರು ತಿರಭುಕ್ತಿಯೆಂದಾಗಿಯೂ ಕರೆಯಲ್ಪಡುವ ತ್ರಿಹೋತ್ರ ಉತ್ತರ ಬಿಹಾರದಲ್ಲಿರುವ ತಿರ್ಹತ್‌ನಿಂದ ಬೇರೆಯೇ ಆಗಿರಬೇಕೆನ್ನುವ, ಖ್ಯಾತನಾಮ, ಪೌರಸ್ತ್ಯ ಪಂಡಿತ ಕೆ.ಪಿ. ಜಯಸ್ವಾಲರ ಅಭಿಮತದೊಂದಿಗೆ ಅವರ ಈ ಮುಂದಣ ವಿಚಾರಗಳ ಉಲ್ಲೇಖ ಮಾಡುತ್ತಾರೆ :

'ಇದು ವಾಯುಪುರಾಣದಲ್ಲಿ ರಾಜ್ಯವೊಂದೆಂದು ಹೇಳಲಾಗಿದ್ದ ಜಮ್ಮು (ಕಾಶ್ಮೀರ) ವಿನ ದಕ್ಷಿಣಕ್ಕಿದ್ದ ಪಂಜಾಬಿನ ಪರ್ವತಮಯ ಕಾಂಗ್ರಾ ಜಿಲ್ಲೆಯಲ್ಲಿನ ಇರಿಗರ್ತ (ಜಲಂದರ್) ವಾಗಿದ್ದಿರಬಹುದು; ಹತ್ತು ಗೋತ್ರಗಳ ಕುಟುಂಬೀಯರನ್ನು 'ಗೌಡ'ದಿಂದಲ್ಲದೆ 'ಪಂಚಗೌಡ' ದಿಂದ ತಂದಿದ್ದಿರಬೇಕು; ಹನ್ನೊಂದನೆಯ ಶತಮಾನದಲ್ಲಿ 'ಗೌಡ', ವೀರಸೇನನ ರಾಜಧಾನಿಯಾದ ಬಳಿಕವಷ್ಟೆ ನಾಮಧೇಯ 'ಗೌಡ' ಪ್ರಸಿದ್ಧಿಕೊಂಡಿತು; ಆನಂತರ, ಪ್ರಾಮುಖ್ಯವಾಗಿ ಬಂಗಾಲದ ಪೂರ್ವಭಾಗ ಗೌಡವೆಂದಾಗಿ ಕರೆಯಲ್ಪಡತೊಡಗಿತು. ಹಾಗೆನ್ನುವಲ್ಲಿ ಅದೊಮ್ಮೆ ಉತ್ತರ ಪ್ರದೇಶದಲ್ಲಿನ ಪ್ರಾಂತವೊಂದೂ (ಉತ್ತರ ಕೋಸಲ) ಗೌಡವೆಂದಾಗಿ ಪರಿಚಿತವಾಗಿತ್ತು ; 'ಪಂಚಗೌಡ' ಶಬ್ದದ ಪ್ರಯೋಗ, ಉತ್ತರ ಭಾರತದಲ್ಲಿ ಪಂಚವರ್ಗೀಯ ಗೌಡ ಬ್ರಾಹ್ಮಣರು ನೆಲಸಿದ್ದ ಹಲವೊಂದು ಸ್ಥಳಗಳ ಕುರಿತಾಗಿ, ವ್ಯಾಪಕಾರ್ಥದಲ್ಲಿ ಮಾಡಲಾಗಿದೆ.''

ಗೋವಾದ ಸಾರಸ್ವತ ಸಮಾಜ ೧) ತ್ರಿಹೋತ್ರ, ೨) ಕನೋಜ ೩) ಕಾಶ್ಮೀರ ಮತ್ತು ೪) ಸಹ್ಯಾದ್ರಿ ಖಂಡ [೨೪] ದಲ್ಲಿ ಹೇಳಿರುವಂತೆ (ಪಂಜಾಬಿನ ದಕ್ಷಿಣದಲ್ಲಿ ಮತ್ತೆ ಸಿಂಧುವಿನ ಪೂರ್ವದಲ್ಲಿದ್ದ, ಅದೊಮ್ಮೆ ಸರಸ್ವತಿ ನದಿಯು ನೀರಿನಿಂದ ನೆನೆದ, ಆದರೆ ಈಗ ಮರುಭೂಮಿಯಾಗಿರುವ)[೨೫] 'ಪರುದೇಸ'ದಿಂದ ವಲಸೆ ಬಂದವರಿಂದ ರೂಪುಗೊಂಡಿತೆಂದು ಅವರು ನುಡಿಯುತ್ತಾರೆ.

ಶ್ರೀ ಮಂ. ಗೋವಿಂದ ಪೈಗಳ ಹೇಳಿಕೆಯ ಮೇರೆಗೆ ತಿರ್ಹತ್ ನಿಶ್ಚಿತವಾಗಿ ತಿರ ಭುಕ್ತಿಯ ರೂಪವೊಂದಿದ್ದು ಅದು ಮಿಥಿಲ ಅಥವಾ ವಿದೇಹ [೨೬] ವೆನ್ನಲಾಗುವ ಉತ್ತರ ಬಿಹಾರದ ಪ್ರಾಂತವೊಂದಾಗಿದೆ. ಗೌಡ, ಸ್ರಾವಷ್ಟಿಯನ್ನು ರಾಜಧಾನಿಯಾಗಿಕೊಂಡಿದ್ದ ಉತ್ತರ ಕೊಸಲದ ಹೆಸರೊಂದಷ್ಟೆ ಇದ್ದಿರದೆ, ಆ ದಿನಗಳಲ್ಲಿನ ವಿಶಾಲ ಬಂಗಾಲದ ರಾಜಧಾನಿಯೂ ಆಗಿತ್ತು. ಈ ರಾಜಧಾನಿಯ ಅವಶೇಷಗಳು ಮಾಲ್ಡಾದಿಂದ [೨೭] ಹತ್ತು ಮೈಲುಗಳ ದೂರದಲ್ಲಿ ಕಾಣಬರುತ್ತವೆ.

ಚಿತ್ರಾಪುರ ಸಾರಸ್ವತರ ಮತ್ತು ಕೆನರಾದಲ್ಲಿನ ಕೆಲವೊಬ್ಬ ವೈಷ್ಣವ ಸಾರಸ್ವತರ ಸಾಯಂಕಾಲದ ಹೊತ್ತಿನ ಸಂಧ್ಯಾ (ಪ್ರಾರ್ಥನೆ), 'ನಮಸ್ತೆ ಶಾರದಾ ದೇವಿ ಕಾಶ್ಮೀರ

ಪುರವಾಸಿನಿ' (ನಾವು ಕಾಶ್ಮೀರ ಪಟ್ಟಣದ ನಿವಾಸಿ ಶಾರದಾ ದೇವಿಗೆ ಶಿರಸಾ ವಂದಿಸುತ್ತೇವೆ) ಎಂಬ ಶ್ಲೋಕವನ್ನೊಳಗೊಂಡಿದೆ. ಹಾಗೆಯೇ (ಶೆಣ್ವಿಯರ ಸಾಯಂಕಾಲದ ಸಂಧ್ಯಾ 'ಸರಸ್ವತಿ ಮಹಾಮಾಯಾ ಕಾಶ್ಮೀರಪುರವಾಸಿನಿ ಸತದ್ರೇಸಮಾಂತತ್ತಂ ಸಾರಸ್ವತ ಮಹಮಾಮುನಿಂ' (ನಾವು ಮಹಾಮಾಯಾ, ಕಾಶ್ಮೀರಪುರ ವಾಸಿನಿ ಸರಸ್ವತಿಗೆ ಮತ್ತು ಸತದ್ರುವಿನ ಸಮೀಪ ವಾಸಿಸುತ್ತಿದ್ದ ಮಹಾಮುನಿ ಸಾರಸ್ವತನಿಗೆ ವಂದಿಸುತ್ತೇವೆ) ಎಂಬೀ ಶ್ಲೋಕವನ್ನೊಳಗೊಂಡಿದೆ. ಸಹ್ಯಾದ್ರಿ ಖಂಡದ ಮಂಜುಳ ಕ್ಷೇತ್ರ ಮಾಹಾತ್ಮ್ಯಯಲ್ಲಿ ಸಾರಸ್ವತರು ('ಕಾಶ್ಮೀರ ರಾಜ್ಯಕ್ಷೈವ ಕುಶಸ್ಥಳ್ಯಾದಯಶ್ಚ'), ಕುಶಸ್ಥಳಿಗಳು ಮುಂತಾದವರು ಕಾಶ್ಮೀರ ರಾಜ್ಯದಿಂದ [೪] ವಲಸೆ ಬಂದವರು ಎನ್ನಲಾಗಿದೆ. ಕೆಲವೊಬ್ಬ ಸಾರಸ್ವತರು ತಮ್ಮ ಪೂರ್ವಜರು ಕಾಶ್ಮೀರದಿಂದ ಬಂದವರೆಂದು ನಂಬುತ್ತಾರೆ. ದಕ್ಷಿಣಕ್ಕೆ ತೆರಳಿದ್ದ ಕುಟುಂಬಗಳೆರಡರ ಯುವಕರು ಅಲ್ಲಿನ ಸಾರಸ್ವತರ ಕನ್ಯೆಯರನ್ನು ವರಿಸಿದ್ದರೆಂದು ಕಾಶ್ಮೀರಿ ಸಾರಸ್ವತರು ಭಾವಿಸುತ್ತಾರೆ. [೫]

ಶ್ರೀ ಎಸ್. ಎಸ್. ತಾಲ್ಮಕಿಯವರನ್ನುವಂತೆ ಈ ಮೇಲಿನ ಪ್ರಾರ್ಥನೆ ಗೋಕರ್ಣದ ಹವೀಕ್ ಬ್ರಾಹ್ಮಣರಲ್ಲೂ ಸಾಮಾನ್ಯವಾದುದಾಗಿದೆ. [೬] ಅದೊಂದು ಕಾಲದಲ್ಲಿ ಕಾಶ್ಮೀರ ಸಂಸ್ಕೃತ ಅಧ್ಯಯನದ ಪ್ರಸಿದ್ಧ ಕ್ಷೇತ್ರವೊಂದಾಗಿದ್ದು ಭಾರತದ ಹಲವೊಂದೆಡೆಗಳ ವಿದ್ಯಾರ್ಥಿಗಳು ಅಲ್ಲಿ ನೆರೆದು ಬರುತ್ತಿದ್ದರು. ಶಂಕರಾಚಾರ್ಯರು ಕೂಡಾ ತನ್ನ ವಿದ್ವತ್ತಿನ ಮಾನ್ಯತೆಗಾಗಿ ಕಾಶ್ಮೀರ ಸಂದರ್ಶಿಸಿದ್ದರು. ಮತ್ತೆ ಅಲ್ಲಿಂದ ಮರಳಿದ ಅವರು ಶ್ರೀ ಚಕ್ರ ಮತ್ತು ಕಾಶ್ಮೀರದ ಅಧಿದೇವತೆ ಶಾರದೆಯ ಆರಾಧನೆಗೆ ತೊಡಗಿದರೆನ್ನಲಾಗುತ್ತದೆ. ವಿದ್ಯಾರ್ಥಿಗಳು ಕಾಶ್ಮೀರದ ನಿವಾಸಿಗಳಿರಲಿ ಅಥವಾ ಅನ್ಯ ರಾಜ್ಯಗಳಿಂದ ಬಂದವರಿರಲಿ ಪ್ರತಿಯೊಬ್ಬರೂ 'ನಮಸ್ತೆ ಶಾರದಾದೇವಿ ಕಾಶ್ಮೀರ ಪುರವಾಸಿನಿ ತ್ರಾಹಿಮಾಂ ಪ್ರಾರ್ಥಯೆ ನಿತ್ಯ ವಿದ್ಯಾದಾನಂ ಚ ದೇಹಿಮೆ' ಎಂಬ ಶ್ಲೋಕವನ್ನು ನಿತ್ಯ ಪಠಿಸಬೇಕಿತ್ತು. ಈ ಶ್ಲೋಕದ ಮೊದಲ ಸಾಲಿನ ಪುನರಾವರ್ತನೆ ಅದು ಸಾರಸ್ವತರ ಪೂರ್ವಜರು ಕಾಶ್ಮೀರದಿಂದ ಬಂದರು ಎಂಬುದನ್ನು ನಿಶ್ಚಿತವಾಗಿ ಸೂಚಿಸುತ್ತಿಲ್ಲ [೭]. ಅದಲ್ಲದೆ ಕಾಶ್ಮೀರಿ ಸಾರಸ್ವತರು ಉತ್ತರ ಮತ್ತು ದಕ್ಷಿಣ ಭಾರತದ ಸಾರಸ್ವತರು ನಂಬುವ ವೇದ ಸೂತ್ರಗಳಿಂದ ಭಿನ್ನವಾದುದೊಂದನ್ನು ನಂಬುತ್ತಿದ್ದು ಅವೆರಡರ ನಡುವೆ ಒಂದಿಷ್ಟೂ ಸಾಮ್ಯವಿರದಿರುವುದನ್ನು ಕಾಣಬಹುದು [೮]. ದಾಕ್ಷಿಣಾತ್ಯ ಸಾರಸ್ವತರು ಕಾಶ್ಮೀರಿ ಸಾರಸ್ವತರ ವಂಶಜರೆನ್ನುವುದು ನಿರಾಧಾರವಿದೆ.

೫. ಸಾರಸ್ವತರ ಮತ್ತು ಬಂಗಾಲದ ಬ್ರಾಹ್ಮಣರ ನಡುವೆ ಸಂಬಂಧವಿರಲಿಲ್ಲ.

ಗಂಜಿಯೂಟ ಹಾಗೂ ಎಣ್ಣೆಯಿಂದ ತಲೆ ತಿಕ್ಕಿಸಿಕೊಳ್ಳುವುದು ಸಾರಸ್ವತರಿಗೆ ಅತಿ ಪ್ರಿಯವಾದುದು; ಹಿರಿಯರನ್ನು ಸಂಬೋಧಿಸುವಾಗ ಅವರು 'ಬಾಬು' ಎಂಬ ಶಬ್ದವನ್ನು ಗೌರವ ಸೂಚಕವಾಗಿ ಆಗಾಗ ಬಳಸುತ್ತಾರೆ. ಸ್ವರಾಕ್ಷರಗಳ ಅವರ ಉಚ್ಚಾರ ಬಂಗಾಲಿಗಳಂತೆ ವಿಸ್ತೃತವಾದುದು. ಮರಾಠಿಯಲ್ಲಿ ಉಚ್ಚರಿಸಲ್ಪಡುವ 'ಸ'ದ ಸ್ಥಾನದಲ್ಲಿ ಬಂಗಾಲಿಗಳು ಮತ್ತು ಕೊಂಕಣಿಗರು 'ಶ' ಬಳಸುವುದನ್ನು ಕಾಣಬಹುದು. ಇವುಗಳಿಂದ ಸಾರಸ್ವತರ ಮತ್ತು

ಬಂಗಾಲಿಗಳ ಮೀನಿನೆಡೆಯಲ್ಲಿನ [೩೩] ಒಲವನ್ನು ಕಂಡು ಅವರೊಳಗೆ ಅನ್ಯೋನ್ಯ ಸಂಬಂಧವಿರಬೇಕೆಂದು ಭಾವಿಸಲಾಗುತ್ತದೆ. ಅನೇಕ ಸಾರಸ್ವತರು ಪಂಜಾಬಿನಿಂದ ಬಂಗಾಲ (ಗೌಡ) ಕ್ಕೆ ಹೋದರೆಂದೂ ಮತ್ತೆ ಅವರನ್ನು ಬಂಗಾಲದಿಂದ ಗೋವಾಕ್ಕೆ ತರಲಾಯಿತೆಂದೂ ಶ್ರೀ ರಾಮಚಂದ್ರ ಭಿಕಾಜಿ ಗುಂಜೀಕರ್ ಹೇಳುತ್ತಾರೆ.

ಗೌಡ ದೇಶದ ಅರಸು ಆದಿಸುರ, ಕನ್ಯಾಕುಬ್ಜದ ಐದು ಬ್ರಾಹ್ಮಣರನ್ನು ಕರೆದು ತಂದಾಗ ಬಂಗಾಲದಲ್ಲಿ ಕೆಲವೊಬ್ಬ ಸಾರಸ್ವತರು ಮತ್ತು ವೈದಿಕಿ ಬ್ರಾಹ್ಮಣರಿದ್ದರೆಂದು ಕೋಲ್‌ಬ್ರೂಕ್‌ನ ಪ್ರಮಾಣವನ್ನಾಧರಿಸಿ ಡಾ. ವಿಲ್ಸನ್ ನುಡಿದಿರುತ್ತಾರೆ [೩೪]. ಅವರ ವಂಶದ ೧೫೦ ಕುಟುಂಬಗಳು ವರೇಂದ್ರದಲ್ಲಿ ಮತ್ತು ೫೬ ರಾಧಾದಲ್ಲಿ ನೆಲಸಿದ್ದವು. 'ವೈದಿಕಿ'ಯ ವಂಶಜರು ರಾಧಾದಲ್ಲಿನ ಬ್ರಾಹ್ಮಣರೊಂದಿಗೆ ವೈವಾಹಿಕ ಸಂಬಂಧ ಬೆಳಸಿದ್ದರು.

ಸ್ವರಾಕ್ಷರಗಳ ಉಚ್ಚಾರ, ಮೀನಿನ ಬಗೆಗಿದ್ದ ಒಲವು ಇತ್ಯಾದಿಗಳ ಹೊರತಾಗಿ ಅನ್ಯ ಗುಣ ಲಕ್ಷಣಗಳು ಮಹಾರಾಷ್ಟ್ರದಲ್ಲಿ ಸಮಾನವಿದ್ದವೆಂದು ಶ್ರೀ ಎಸ್.ಎಸ್.ತಾಲ್ಮಕಿ ನುಡಿಯುತ್ತಾರೆ. ಗೌರವ ಸೂಚಕ 'ಬಾಬು' ಪದವನ್ನು ಬಂಗಾಲದಲ್ಲಷ್ಟೇ ಅಲ್ಲದೆ ಪಂಜಾಬ, ಉತ್ತರ ಪ್ರದೇಶ, ಬಿಹಾರ, ಹಾಗೆನ್ನುವಲ್ಲಿ ಸಂಪೂರ್ಣ ಉತ್ತರ ಭಾರತದಲ್ಲಿ ಉಪಯೋಗಿಸಲಾಗುತ್ತಿತ್ತು. ಈ ತಥ್ಯಗಳನ್ನವಲೋಕಿಸುವಾಗ ಬಂಗಾಲದಲ್ಲಿ, ಸಾರಸ್ವತರ ಅಸ್ತಿತ್ವವಿರದಿದ್ದುದರ ಅರಿವಾಗುತ್ತದೆ. ಕೇವಲ ಕೆಲವೇ ಬಂಗಾಲಿಗಳು, ಕಾಯಸ್ಥರು ಮತ್ತು ಕಾಳಿಯ ಪೂಜಾ ಪದ್ಧತಿಗಳ ಕುರಿತು ಭಿನ್ನಾಭಿಪ್ರಾಯ ಕೊಂಡ ವೈದ್ಯರು ಮಾತ್ರ ತಮ್ಮನ್ನು ಸಾರಸ್ವತರೆಂದು ಕರೆದುಕೊಳ್ಳುತ್ತಿದ್ದರು [೩೫].

ಸುಪ್ರಸಿದ್ಧ ವಿದ್ವಾಂಸರಿದ್ದ ಡಾ. ಸುನೀತಿ ಕುಮಾರ್ ಚಟರ್ಜಿಯವರನ್ನು ಪ್ರಶ್ನಿಸಿದಾಗ ಅವರು ಹಲವೊಬ್ಬರು ಗ್ರಹಿಸಿದ್ದಂತೆ, ಬಂಗಾಲದ ಬ್ರಾಹ್ಮಣರು ಹಾಗೂ ಸಾರಸ್ವತರ ನಡುವೆ ಯಾವೊಂದೂ ಸಂಬಂಧವಿರದಿರುವುದನ್ನು ಸಪ್ರಮಾಣ ನುಡಿದಿರುತ್ತಾರೆ [೩೬].

೬. ಸಾರಸ್ವತರ ವಲಸೆಯ ಕಾಲ

ಪ್ರಖ್ಯಾತ ವೈಯಾಕರಣಿ ಪಾಣಿನಿ (ಕ್ರಿ.ಪೂ.೭೦೦) ಮತ್ತು ಕಾತ್ಯಾಯನ (ಸಾಧಾರಣ ಕ್ರಿ.ಪೂ.೩೫೦) ಇವರಿಗೆ ದಕ್ಷಿಣದ ಪರಿಚಯವಿದ್ದಂತೆ ಕಾಣಬರುತ್ತಿಲ್ಲ. ಆದರೆ ಪಾಣಿನಿಯ ಸೂತ್ರಗಳ ಬಗೆಗೆ ವಿಸ್ತೃತ ಭಾಷ್ಯ ಬರೆದ ಪತಂಜಲಿ (ಸಾಧಾರಣ ಕ್ರಿ.ಪೂ.೧೫೦) ದಕ್ಷಿಣಾಪಥದ ಪರಿಪೂರ್ಣ ಜ್ಞಾನವಿದ್ದುದನ್ನು ತೋರುತ್ತಾರೆ. ಇದೊಂದರ ಆಧಾರಕೊಂಡು ಕ್ರಿ.ಪೂ.೩೫೦, ಮತ್ತು ಕ್ರಿ.ಪೂ. ೧೫೦ರ ನಡುವೆ ಬ್ರಾಹ್ಮಣರು ಮೊತ್ತಮೊದಲಿಗೆಂಬಂತೆ ದಕ್ಷಿಣದತ್ತ ವಲಸೆ ಹೋಗಿದ್ದಿರಬೇಕೆನ್ನಬಹುದು.

ಉತ್ತರ ಭಾರತದಲ್ಲಿ, ಮುಖ್ಯತಃ ಬಿಹಾರಿನಲ್ಲಿ ಬೌದ್ಧ ಧರ್ಮದ ಅಭ್ಯುದಯವಾದಾಗ ವೇದೋಕ್ತ ಬಲಿ ಮುಂತಾದವುಗಳು ನಿರುಪಯೋಗಿಯಾದವು. ತತ್ಪರಿಣಾಮ ಇವೆಲ್ಲವುಗಳ ಕೌಶಲ್ಯ ಕೊಂಡಿದ್ದ ಸಾರಸ್ವತರು ಉದರಂಭರಣೆಯ ಮಾರ್ಗ ಕಳೆದುಕೊಂಡರು. ಚಂದ್ರಗುಪ್ತ ಮೌರ್ಯನ ರಾಜ್ಯಭಾರ ಕೊನೆಗೊಳ್ಳುವ ಕಾಲಖಂಡದಲ್ಲಿ, ಹದಿನೆರಡು ವರ್ಷಗಳ ಕ್ಷಾಮ ಬಂದಿದ್ದಾಗ, ಸಾರಸ್ವತರು ಉತ್ತರೆಯಿಂದ

ವಲಸೆ ಹೋದರು. ಅದೇ ಹೊತ್ತಿಗೆ ಭದ್ರಬಾಹು ೧೨,೦೦೦ ಜೈನರನ್ನು ದಕ್ಷಿಣಕ್ಕೆ ಕೊಂಡುಹೋಗಿದ್ದನೆಂದು ಕೆಲವರು ಊಹಿಸುತ್ತಾರೆ.

ಶ್ರೀ ಎಸ್. ಎಸ್. ತಾಲ್ಮಕಿಯವರು ಅಭಿಪ್ರಾಯ ಪಡುವಂತೆ ಗೋವಾಕ್ಕೆ ಸಾರಸ್ವತರ ಹಲವು ತಂಡಗಳು ಬಂದವು. ಮೊತ್ತ ಮೊದಲಿನ ತಂಡ ಈ ಮೊದಲು ನುಡಿದಂತೆ, ಪ್ರಾಯಶಃ ಕ್ರಿಸ್ತ ಪೂರ್ವ ಮೂರನೆಯ ಶತಮಾನದ ಅಂತ್ಯಭಾಗದಲ್ಲಿ, ಶಿವ, ವಿಷ್ಣುವಿನ ಗುಣಕಥನ ಮಾಡುವ ಅರ್ವಾಚೀನ ಪುರಾಣಗಳು ಬರೆಯಲ್ಪಡುವ ಮೊದಲು ಬಂದಿರಬೇಕು. ಎರಡನೆಯ ತಂಡ ಮಾಂಗಿರೀಶ ಮಾಹಾತ್ಮ್ಯದಲ್ಲಿ ಉಲ್ಲೇಖಿಸಲಾಗಿದ್ದ ಶರ್ಮರ ಕುಟುಂಬಗಳನ್ನೊಳಗೊಂಡಿತ್ತು. ಅನ್ಯ ಮೂರು ಗೋತ್ರಗಳ ಕನ್ಯಾಕುಬ್ಜದ ಕುಟುಂಬಗಳು ಅವರನ್ನು ಹಿಂಬಾಲಿಸಿಕೊಂಡು ಬಂದವೆಂದು ಹೇಳಲಾಗುತ್ತದೆ. ಬಹುತೇಕ ಈ ತಂಡ ಕ್ರಿ.ಶ. ಐದನೆಯ ಶತಮಾನದಲ್ಲಿ, ಹೂಣರ ದಂಡು ಪಂಜಾಬಿನ ಮೇಲಕ್ಕೆ ದಾಳಿ ಮಾಡಿದ ಕಾಲದಲ್ಲಿ ದಕ್ಷಿಣದತ್ತ ವಲಸೆ ಹೋಗಿರಬೇಕು. ಮೂರನೆಯ ತಂಡ ಅನ್ಯ ಏಳು (ಎಂಟು?) ಗೋತ್ರಗಳ ಕುಟುಂಬೀಯರನ್ನೊಳಗೊಂಡಿದ್ದಿರಬೇಕು. ಹಲವೊಂದು ತಂಡಗಳು ಹನ್ನೆರಡನೆಯ ಶತಮಾನದಲ್ಲಿ ಮುಸಲ್ಮಾನರ ದಾಳಿ, ದಿಗ್ವಿಜಯಗಳ ಗೊಂದಲದ ಬಳಿಕ ಬಂದವು. ಈ ಕಾಲದಲ್ಲಿ ಸಾರಸ್ವತರ ಕುಟುಂಬಗಳೂ ಉತ್ತರದಿಂದ ದಕ್ಷಿಣದತ್ತ ಬಂದವು. ಅವುಗಳಲ್ಲಿನ ಕೆಲವು ಚಾಲುಕ್ಯರ ರಾಜ್ಯದಲ್ಲಿ ನೆಲೆಗೊಂಡವು. ಕಾಶ್ಯಪಗೋತ್ರದ ದೇವಶರ್ಮರು ಗೋವಾದಲ್ಲಿ ತಳವೂರಿದರು.

ಪ್ರಾಯಶಃ ಸಾರಸ್ವತರು ದಕ್ಷಿಣಕ್ಕೆ ವಲಸೆ ಹೋದ ಬ್ರಾಹ್ಮಣರ ಕೊನೆಯ ತಂಡಗಳಿಗೆ ಸೇರಿದವರಿರಬೇಕು. ಗೋವಾದ ಹೆಚ್ಚಿನ ಮತ್ತು ಕೆನರಾದ ಕೆಲವೊಬ್ಬ ಸಾರಸ್ವತರು ತಮ್ಮ ನಿತ್ಯದ ಆಹಾರದ ಅಂಗವಾಗಿ ಪರಿಕೊಂಡ ಮೀನಿನೊಂದಿಗೆ ಅನ್ನ ಉಣ್ಣುತ್ತಿದ್ದರು. ವೈಷ್ಣವರಿಗೆ ಮಾಂಸ ವರ್ಜ್ಯವಿತ್ತು. ಗೋವಾದ ಸ್ಮಾರ್ತರು ಸಾಕು ಪ್ರಾಣಿಗಳಾದ ಹಂದಿ, ಕೋಳಿಗಳ ಮಾಂಸ ತಿನ್ನದಿದ್ದರು. ಆದರೆ ಕನ್ಯಾ ಕುಬ್ಜ ಮತ್ತು ಅನ್ಯ ಪಂಚಗೌಡ ಬ್ರಾಹ್ಮಣರಂತೆ ಕಾಡು ಹಂದಿ, ಕಾಡು ಕೋಳಿಗಳ ಮಾಂಸ ತಿನ್ನುತ್ತಿದ್ದರು. ಹಲವೊಂದು ಶತಮಾನಗಳ ಕಾಲ ಪಶ್ಚಿಮ ಮತ್ತು ದಕ್ಷಿಣ ಭಾರತದಲ್ಲಿ ಜಿನಧರ್ಮ ತನ್ನ ವರ್ಚಸ್ಸುಕೊಂಡಿತ್ತು. ದ್ರಾವಿಡ ಬ್ರಾಹ್ಮಣರು ಜಿನಧರ್ಮದ ಕಟ್ಟರ ಕಟ್ಟು ಕಟ್ಟಳೆಗಳಿಂದ ಪ್ರಭಾವಿತರಾಗಿ ಮಾಂಸಾಹಾರದ ಸೇವನೆಯಿಂದ ದೂರಕ್ಕುಳಿದರು. ಗೋವಾ ಮತ್ತು ಕೊಂಕಣದ ಇನ್ನಿತರ ಜಾತಿಗಳ ಪೌರೋಹಿತ್ಯ ನಡೆಸುವ ಕರ್ಹಾಡ, ಚಿತ್ಪಾವನ ಹಾಗೂ ಅನ್ಯ ದ್ರಾವಿಡ ಬ್ರಾಹ್ಮಣರು ಈ ಪ್ರದೇಶಕ್ಕೆ ಬಂದ ಮೊದಲ ವಲಸೆಗಾರರಾಗಿದ್ದಿರಬೇಕು. ಡಾ. ಆರ್.ಜಿ. ಭಂಡಾರ್ಕರ್ ಇವರ ಅಭಿಮತದ ಮೇರೆಗೆ ಸಾರಸ್ವತರು ಕ್ರಿ.ಶ. ಏಳನೆಯ ಶತಮಾನದಲ್ಲಿ ದಕ್ಷಿಣಕ್ಕೆ ವಲಸೆ ಹೋದರು. ಹನ್ನೊಂದನೆಯ ಶತಮಾನದ ನಂತರ, ಮುಸಲ್ಮಾನರು ಪಂಜಾಬಿಗೆ ದಾಳಿಯಿಕ್ಕಿದ ಬಳಿಕ, ಆಗೊಮ್ಮೆ ಈಗೊಮ್ಮೆ ಕೆಲವೊಂದು ತಂಡಗಳು (ಕೆಲವೊಬ್ಬ ಸಾರಸ್ವತರು ಪಂಜಾಬ, ಕಾಶ್ಮೀರಗಳಿಂದ ದಕ್ಷಿಣಕ್ಕೆ ವಲಸೆ ಹೋದರು) ವಲಸೆ ಹೋದವು. ಡಾ. ಜೆರ್ಸನ್ ದ ಕುನ್ಹಾ ಕೂಡಾ ಹೆಚ್ಚು ಕಡಿಮೆ ಇದೇ ಅಭಿಪ್ರಾಯಕೊಂಡಿದ್ದಾರೆ. ಸಾರಸ್ವತರು ಹತ್ತನೆಯ ಶತಮಾನದಲ್ಲಿ ದಕ್ಷಿಣ ಕೊಂಕಣ (ಗೋವಾ) ದಲ್ಲಿ ಸ್ಥಾಯಿಯಾದರೆಂದು ಡಾ. ಭಾವುದಾಜಿ ಅಭಿಪ್ರಾಯ ಪಡುತ್ತಾರೆ.

ನೇಪಾಳದ ರಾಷ್ಟ್ರೀಯ ಗ್ರಂಥಾಲಯದಲ್ಲಿದ್ದ ಸ್ಕಂಧ ಪುರಾಣದ ಹಸ್ತ ಲಿಖಿತ ಪ್ರತಿಯ ಆಧಾರಕೊಂಡು ಅವರು ವಲಸೆ ಹೋದ ಕಾಲ ಕ್ರಿ.ಶ. ಆರನೆಯ ಶತಮಾನಕ್ಕೂ ಮೊದಲಿನದ್ದಿರಬೇಕೇಂದು ಮಹಾಮಹೋಪಾಧ್ಯಾಯ ಹರ ಪ್ರಸಾದ ಶಾಸ್ತ್ರಿಗಳು ನುಡಿಯುತ್ತಾರೆ. [೪೧] ವಾಸ್ತವಿಕವಾಗಿ ಸಾರಸ್ವತರು ಇದಕ್ಕೂ ಮೊದಲೇ ವಲಸೆ ಹೋಗಿದ್ದಿರಬೇಕು. ನೆಲೆನಿಂತ ಔತ್ತರೇಯ ಸಾರಸ್ವತರ ಕುಟುಂಬಗಳು, ಒಬ್ಬಿಬ್ಬರಾಗಿ ಬಂದವರು, ಕನ್ಯಾಕುಬ್ಜಿಗಳು ಮತ್ತು ಪಂಚಗೌಡ ಬ್ರಾಹ್ಮಣರು (ಕುಡಾಲಿನಲ್ಲಾದಂತೆ) ಕ್ರಮೇಣ ಗೋವಾದ ಸಾರಸ್ವತರನ್ನು ಸೇರಿಕೊಂಡರೆನ್ನುವುದಕ್ಕೆ ಸಾಕಷ್ಟು ಆಧಾರಗಳಿವೆ.

೭. ಸಾರಸ್ವತರು ಗೋವಾಕ್ಕೆ ವಲಸೆ ಹೋದ ಮಾರ್ಗ

ಇಂದು ರಜಪುತಾನ, ಸಿಂಧ, ಗುಜರಾತ, ಕಾಥಿಯಾವಾರ್‌ಗಳಲ್ಲಿ ಸಾರಸ್ವತರ ಸಣ್ಣ ಸಮಾಜಗಳು ಕಾಣಬರುತ್ತವೆ. [೪೨] ಮೊದಲ ದಿನಗಳಲ್ಲಿ ಸಾರಸ್ವತರು ಗೋವಾಕ್ಕೆ ಪಂಜಾಬ ಅಥವಾ ಬಿಹಾರದಿಂದ ಬಂದಿದ್ದಿರಬಹುದು. ಅವರು ವಲಸೆಯ ದಿನಗಳಲ್ಲಿ ಹಿಂದಕ್ಕುಳಿದು ಅಲ್ಲಿಯೇ ನೆಲೆಗೊಂಡ ಕೆಲವೊಬ್ಬರ ವಂಶಜರಿದ್ದಿರಬೇಕು. ಆದರೆ ವಲಸೆಗಾರರಲ್ಲಿನ ಬಹುತಾಂಶ ಜನರು ತಮ್ಮ ಪ್ರಯಾಣ ಮುಂದುವರಿಸಿದರು. ಕಾಥಿಯಾವಾರ್‌ನ ಪ್ರಭಾಸ ಪಟ್ಟಣದ ಸಮೀಪವಿದ್ದ ಸಾರಸ್ವತ ತೀರ್ಥ, ಸೌರಾಷ್ಟ್ರದಲ್ಲಿನ ಸಾರಸ್ವತಪುರ ಮತ್ತು ಸಾರಸ್ವತ ದೇಶ ಇವುಗಳ ಉಲ್ಲೇಖ ಗಮನೀಯವಿದೆ. ಕಚ್ಛ್ ಪ್ರಾಂತದಲ್ಲಿ ಶೆಣ್ವಿ ಶಬ್ದವನ್ನು ಇಂದಿಗೂ ಗೌರವ ಸೂಚಕ ಪದವೊಂದಾಗಿ ಬಳಸಲಾಗುತ್ತದೆ. ಕಾಥಿಯಾವಾರ್‌ನಲ್ಲಿನ ದ್ವಾರಕೆಯ ಬಳಿ ಕುಶಸ್ಥಳಿ [೪೩] ಎಂಬ ಸ್ಥಳವಿದೆ. ಕನ್ಯಾಕುಬ್ಜ (ಕನೋಜ) ವೂ ಕುಶಸ್ಥಳಿಯೆಂದು ಕರೆಯಲ್ಪಡುತ್ತಿತ್ತು. ದ್ವಾರಕೆಯ ಬಳಿಯ ಕುಶಸ್ಥಳಿ ಬಹುತೇಕ ಕನ್ಯಾಕುಬ್ಜದಿಂದ ವಲಸೆ ಬಂದವರು ಇಟ್ಟ ಹೆಸರೊಂದಾಗಿರಬೇಕು. ಕೊಂಕಣಿಯಲ್ಲಿ ಗುಜರಾತಿ ಶಬ್ದಗಳ ಪ್ರಮಾಣ ಮರಾಠಿ ಶಬ್ದಗಳಿಗಿಂತಲೂ ಅಧಿಕವಾಗಿದೆ. ಅದರಲ್ಲಿ ಪ್ರಚಲಿತ ಗುಜರಾತಿಯಲ್ಲಿ [೪೪] ಕಾಣಸಿಗದ ಹಳೆ ಗುಜರಾತಿ ಶಬ್ದಗಳ ಸಮಾವೇಶವಿದೆ.

ಬಹುತೇಕ ಸಾರಸ್ವತರು ಮೊತ್ತ ಮೊದಲು ಉತ್ತರದಿಂದ ರಜಪುತಾನಕ್ಕೂ, ಆ ಬಳಿಕ ಸಿಂಧ, ಕಾಥಿಯಾವಾರ್, ಕಚ್ಛ್ ಮತ್ತೆ ಗುಜರಾತಕ್ಕೆ, ಮುಂದೆ ನೆಲ, ಜಲಮಾರ್ಗವಾಗಿ ಗೋವಾಕ್ಕೆ ವಲಸೆ ಹೋಗಿರಬೇಕು. ನಂತರ ಕನ್ಯಾಕುಬ್ಜದ ಕೆಲವೊಂದು ಕುಟುಂಬಗಳು ಕಾಥಿಯಾವಾರ್‌ನಲ್ಲಿನ ಕುಶಸ್ಥಳಿಯ ಮಾರ್ಗವಾಗಿ ಬಂದವು. ಅವರಲ್ಲಿನ ಲಾಡ್ ಉಪನಾಮದ ವ್ಯುತ್ಪತ್ತಿ ಲಾಹಾ (ದಕ್ಷಿಣ ಗುಜರಾತ) ದಿಂದಾಯಿತೆನ್ನಲಾಗುತ್ತದೆ.

ಗೋವಾದ ಮೊದಲ ವಲಸೆಗಾರರಲ್ಲಿ ಕೆಲವೊಬ್ಬ ವ್ಯಾಪಾರಿಗಳೂ ಇದ್ದಿರಬೇಕು. ಶ್ರೀ ವಾಮನ ಎಮ್. ದುಭಾಷಿಗಳೆನ್ನುವಂತೆ ಅತ್ಯಲ್ಪ ಕಾಲದಲ್ಲೇ ಗೋವಾದಲ್ಲಿನ ದೇವಸ್ಥಾನಗಳ ಸುತ್ತ ಅವರ ವಾಸದ ಮನೆಗಳು ತಲೆಯೆತ್ತಿಕೊಂಡವು. ಈ ವಸಾಹತಿನ ನಿವಾಸಿಗಳು ರೈತ, ವ್ಯಾಪಾರಿ, ಗುಮಾಸ್ತರ ಬದುಕು ಬಾಳಲಾರಂಭಿಸಿದರು. ಅವರಲ್ಲಿನ ಕೆಲವರು ತಮ್ಮ ಉಚ್ಚ ವರ್ತನೆ, ಸ್ವಭಾವ, ಪರಿಶ್ರಮಗಳಿಂದ ಗೋವಾದೊಳಗಣ ಸಾಗುವಾಳಿಗೆ ಯೋಗ್ಯವಿದ್ದ ವಿಶಾಲ ಪ್ರದೇಶಗಳ ಒಡೆಯರಾದರು. ಮತ್ತೆ ಮೂಲ ನಿವಾಸಿಗಳ ಗೌರವಕ್ಕೆ ಪಾತ್ರರಾಗಿ ಅವರ ಹಿತಚಿಂತಕರು, ಸಲಹೆಗಾರರಾಗಿಯೂ ವರ್ತಿಸತೊಡಗಿದರು [೪೫].

೮. ಸಾರಸ್ವತರ ಗೋತ್ರಗಳು

ಆರುವತ್ತಾರು ಕುಟುಂಬಗಳ ಮೊದಲ ತಂಡ ಹತ್ತು ಗೋತ್ರಗಳಿಗೆ ಸೇರಿದ್ದಾದರೂ ಕನ್ಯಾಕುಬ್ಜದ ಶರ್ಮರು ಮಾತ್ರ ಅವುಗಳಲ್ಲಿನ ಮೂರು ಗೋತ್ರಗಳಿಗೆ ಸಂಬಂಧಿಸಿದವರಾಗಿದ್ದರು. ಮತ್ತೆ ಬಂದ ಮೂವತ್ತು ಕುಟುಂಬಗಳು ಬೇರೆ ಎಂಟು ಗೋತ್ರಗಳಿಗೆ ಸೇರಿದ್ದವು. ದಕ್ಷಿಣದ ಸಾರಸ್ವತರು ಇಪ್ಪತ್ತೊಂದು ಗೋತ್ರಗಳಿಗೆ ಸೇರಿದವರಾಗಿದ್ದಾರೆ. 'ಕೊಂಕಣಾಖ್ಯಾನ - ದಕ್ಷಿಣ ಸಾರಸ್ವತ ಬ್ರಾಹ್ಮಣಾಖ್ಯಾನ'ದಲ್ಲಿ ಶ್ರೀಪಾದ ವ್ಯಂಕಟೇಶ ವಾಗ್ಳೆ "ಯಾವರು ಹರ್ಷ ಹೆಸರಿನ ಇನ್ನೂ ಒಂದು ಗೋತ್ರದ ಉಲ್ಲೇಖ ಮಾಡಿರುತ್ತಾರೆ. ಗಂಗೊಳ್ಳಿ (ದಕ್ಷಿಣ ಕನ್ನಡ) ಯ ಶ್ರೀ ಎಚ್. ಲಕ್ಷ್ಮೀನಾರಾಯಣ ಕಾಮತರು ಹರಿತ ಮತ್ತು ವತ್ಸ ಗೋತ್ರಗಳ ಉಲ್ಲೇಖ ಮಾಡುತ್ತಾರೆ. ಸಾರಸ್ವತರು ಅನ್ಯ ಬ್ರಾಹ್ಮಣ ಸಮಾಜದ ಕುಟುಂಬಗಳೊಂದಿಗೆ ಅಂತರ್ವಿವಾಹ ಮಾಡಿಕೊಂಡರು. ತತ್ಪರಿಣಾಮ ಹುಟ್ಟಿದ ಮಕ್ಕಳು ಸಾರಸ್ವತ ಸಮಾಜಕ್ಕೆ ಸಂಬಂಧಿಸಿದವರೆಂದು ಪರಿಗಣಿಸಲ್ಪಟ್ಟರೆಂದು 'ಕೊಂಕಣಾಖ್ಯಾನ' ನುಡಿಯುತ್ತದೆ. ಸಾವಂತವಾಡಿಯ ದೇಶಸ್ಥ ಬ್ರಾಹ್ಮಣರು ಸಾರಸ್ವತರೊಂದಿಗೆ ಅಂತರ್ವಿವಾಹ ಮಾಡಿಕೊಂಡು ವಿಲೀನರಾದಂತೆ, ದಕ್ಷಿಣಕ್ಕೆ ಹೋದ ಸಾರಸ್ವತರು ದೇಶಸ್ಥರೊಂದಿಗೊಂದಾದರೆಂದು ಶ್ರೀ ರಾಮಚಂದ್ರ ಭಿಕಾಜಿ ಗುಂಜೀಕರ್ ತನ್ನ 'ಸರಸ್ವತಿ ಮಂಡಲ'ದಲ್ಲಿ ನುಡಿದಿರುತ್ತಾರೆ."[೪೭]

ಗೋವಾದೊಂದಿಗೆ ಸಮೃದ್ಧ ವ್ಯಾಪಾರ ನಡೆಸುತ್ತಿದ್ದ ಗುಜರಾತ, ಪರ್ಷಿಯಾ, ಅರೇಬಿಯಾ, ಈಜಿಪ್ತ್, ಇಸ್ರಯೇಲ್, ಇಥಿಯೋಪಿಯಾ ಮುಂತಾದ ದೇಶಗಳ ಮತ್ತು ಅವರ ವಸಾಹತುಗಳಲ್ಲಿನ ಸಮ್ಮಿಳಿತ ಸಮಾಜದ, ಗೌರವರ್ಣದ "ಸ್ತ್ರೀಯರೊಂದಿಗೆ ಅಂತರ್ವಿವಾಹಗಳಾಗಿರಬೇಕು ಈ ಪ್ರಕ್ರಿಯೆ ಗೋವಾವನ್ನು ಭಾರತದ 'ಗಂಧರ್ವಲೋಕ'ವನ್ನಾಗಿಸಿತ್ತೆನ್ನಬೇಕು. ಸಾರಸ್ವತರೊಂದಿಗೆ ಅವರ ಕುಲದೇವತೆಗಳನ್ನು ಸ್ವೀಕರಿಸಿದ ಅನ್ಯ ಬ್ರಾಹ್ಮಣ ಮನೆತನಗಳು ಹೊಸ ಗೋತ್ರಗಳನ್ನು ರೂಢಿಗೆ ತಂದವು.

೯. ನಾಮಧೇಯ 'ಗೌಡ ಸಾರಸ್ವತ'

ಸಾರಸ್ವತರು ದಕ್ಷಿಣಕ್ಕೆ ವಲಸೆ ಹೋಗುವ ಮೊದಲೇ ವಿಂಧ್ಯದ ದಕ್ಷಿಣದಲ್ಲಿ ಪಂಚ ದ್ರಾವಿಡ ಬ್ರಾಹ್ಮಣ ಬಣದ ಅಸ್ತಿತ್ವವಿತ್ತು. ಈ ಬ್ರಾಹ್ಮಣರಲ್ಲಿನ ಕೆಲವರು ದ್ರಾವಿಡ ಬ್ರಾಹ್ಮಣರನ್ನು ಸೇರಿದ್ದಿರಬೇಕು. ಮೂಲತಃ ಪಂಚಗೌಡರ ಪಂಗಡಕ್ಕೆ ಸೇರಿದ್ದಿರಬಹುದಿದ್ದ ಗುಜರಾತಿ ಸಾರಸ್ವತರು, ಮಹಾರಾಷ್ಟ್ರೀಯ ಮತ್ತು ಗುಜರಾತಿ ಬ್ರಾಹ್ಮಣರು ದ್ರಾವಿಡ ಬ್ರಾಹ್ಮಣರ ಆಚಾರ, ಕರ್ಮಾನುಷ್ಠಾನಗಳನ್ನು ಅಂಗೀಕರಿಸಿದ್ದಿರಬೇಕು. ಈಗ ಅವರನ್ನು ಪಂಚದ್ರಾವಿಡ ಬ್ರಾಹ್ಮಣರ ಪಂಗಡದೊಂದಿಗೆ ಸೇರಿಸಲಾಗಿದೆ. ಈಗಿನ ಸಾರಸ್ವತರ ವಲಸೆ ಹೋಗಿದ್ದ ಪೂರ್ವಜರ ಸಂಸ್ಕೃತಿ, ಆಚಾರ, ವಿಚಾರ (ಧಾರ್ಮಿಕ ಮತ್ತು ಸಾಮಾಜಿಕ)ಗಳು ದಕ್ಷಿಣದಲ್ಲಿ ಬಳಕೆಯಲ್ಲಿದ್ದ ಪದ್ಧತಿಗಳಿಗಿಂತ ತೀರಾ ಭಿನ್ನವಿದ್ದವು. ದಾಕ್ಷಿಣಾತ್ಯ ಬ್ರಾಹ್ಮಣರಿಂದ ಬೇರೆಯೇ ಆಗಿರುವುದನ್ನು ಸೂಚಿಸಲಾಗಿ ಅವರು ತಮ್ಮನ್ನು 'ಗೌಡ ಸಾರಸ್ವತ'ರೆಂದಾಗಿ ಕರೆದುಕೊಂಡಿರಬೇಕು.

ಉತ್ತರ ಮತ್ತು ದಕ್ಷಿಣ ಭಾರತದಲ್ಲಿನ ಸಾರಸ್ವತ ಸಮಾಜಗಳಲ್ಲಿ ಕೇವಲ ಗೋವಾ ಮತ್ತು ಪಶ್ಚಿಮ ಕರಾವಳಿಯಲ್ಲಿನ ಸಾರಸ್ವತರು ಮಾತ್ರ ಗೌಡ ಸಾರಸ್ವತರೆಂದಾಗಿ ಪರಿಚಿತರಾಗಿರುತ್ತಾರೆ.

ಸಂದರ್ಭ ಸೂಚಿ

೧. ವನ ಪರ್ವ, ಅಧ್ಯಾಯ ೫, ೧೦-೮೦, ಶಲ್ಯ ಪರ್ವ, ಅಧ್ಯಾಯ ೨೧ ಮತ್ತು ಶಾಂತಿ ಪರ್ವದಲ್ಲಿ ಹಲವೊಂದು ಕಡೆಗಳಲ್ಲಿ

೨. ಭಾಗವತ, ಖಂಡ ೧೦, ಅಧ್ಯಾಯ ೫೩, ಖಂಡ ೧೧ - ಉತ್ತರಾರ್ಧ

೩. ವನ ಪರ್ವ, ಅಧ್ಯಾಯ ೫

೪. ವನ ಪರ್ವ, ಅಧ್ಯಾಯ ೨೬-೫,೮

೫. ಭಾರತದಲ್ಲಿ 'ಸರಸ್ವತಿ' ಹೆಸರಿನ ಹಲವೊಂದು ನದಿಗಳಿವೆ. ಉದಾಹರಣೆಗಾಗಿ ಅಜ್ಮೇರಿನಲ್ಲಿನ ಸಣ್ಣ ನದಿಯೊಂದರೊಂದಿಗೆ ಸೇರುವ ಇನ್ನೊಂದು ಸಣ್ಣ ನದಿ. ಅಹಮ್ಮದ್ ನಗರ ಜಿಲ್ಲೆಯಲ್ಲಿ ಹರಿಯುವ ಭೀಮಾ ನದಿಯೊಂದಿಗೆ ಸೇರುವ ಸಣ್ಣ ನದಿಯೊಂದೂ ಸರಸ್ವತಿ ಎಂಬ ಹೆಸರಿನಿಂದ ಪರಿಚಿತವಾಗಿದೆ. ಪ್ರಯಾಗ (ಅಲ್ಲಹಾಬಾದ್) ದಲ್ಲಿ ಗಂಗಾ, ಯಮುನಾ ನದಿಗಳ ಸಂಗಮ ಸ್ಥಾನವನ್ನು ಸೇರುವುದಾಗಿ ನಂಬಲಾಗುವ ಸರಸ್ವತಿ ನದಿ ಆ ಕ್ಷೇತ್ರಕ್ಕೆ ತ್ರಿವೇಣಿ ಎಂಬ ಹೆಸರನ್ನಿತ್ತಿತು.

ಬ್ರಹ್ಮಪುತ್ರ, ಗಂಗಾ ಮತ್ತು ಸಿಂಧು ನದಿಗಳ ಹರಿವಿನ ದಾರಿ, ಅಲ್ಲಿನ ತಡೆತೊಡರು ಇತ್ಯಾದಿಗಳ ಪೂರ್ವೇತಿಹಾಸದ ಕುರಿತು ಸಾಕಷ್ಟು ಪುರಾವೆಗಳು ದೊರಕಿವೆ. ಈ ಪ್ರಕರಣ ಭಾರತದ ಇತಿಹಾಸವನ್ನೇ ಬದಲಾಯಿಸಿತೆನ್ನಬೇಕು.ಇದು ಯಾತ್ರಿಕರು ಸಿವಾಲಿಕ ಎಂದಾಗಿ ಕರೆಯುತ್ತಿದ್ದ ಇತಿಹಾಸ ಪೂರ್ವ ಕಾಲದ ಮಹತ್ತಿನ ನದಿಯೊಂದಾಗಿದೆ. ಈ ನದಿ ಸಿಂಧು ಕೊಲ್ಲಿಯಿಂದ ತೊಡಗಿ, ಪಂಜಾಬಿನ ಮಾರ್ಗವಾಗಿ, ಭ್ರೂಣಾವಸ್ಥೆಯಲ್ಲಿದ್ದ ಹಿಮಾಲಯ ಪರ್ವತ ಶ್ರೇಣಿಯ ಬುಡದಿಂದಾಗಿ ಸಿಮ್ಲಾ, ನೈನಿತಾಲ್‌ಗಳ ಮೂಲಕ ಅಸ್ಸಾಮಿನ ತನಕ ಸಾಗಿತ್ತು. ಪಂಜಾಬಿನ ವಾಯುವ್ಯ ಭಾಗದಲ್ಲಿನ ಸಿವಾಲಿಕ್ ಭೂಗರ್ಭೀಯ ಚಟುವಟಿಕೆಯಿಂದಾಗಿ ಈ ನದಿ ಮೂರು ಪೂರಕ ಜಲಪ್ರವಾಹಗಳಲ್ಲಿ ವಿಚ್ಛೇದಿಸಲ್ಪಟ್ಟಿತು: ೧) ವಾಯುವ್ಯ ಹಝಾರಾದಿಂದ ತೊಡಗಿದ್ದ ಸದ್ಯದ ಸಿಂಧು ನದಿ, ೨) ಪಂಜಾಬಿನಲ್ಲಿ ಹರಿಯುವ ಸಿಂಧುವಿನ ಐದು ಉಪನದಿಗಳು ಮತ್ತು ೩) ತನ್ನ ಹರಿವಿನ ಕೊನೆಯ ಹಂತದಲ್ಲಿ ಭಾರತದ ಆಗ್ನೇಯ ದಿಕ್ಕಿನತ್ತ ತಿರುವುಕೊಂಡ, ಉಪನದಿಗಳೊಂದಿಗಿನ ಗಂಗಾ; ಖಂಡಿಸಲ್ಪಟ್ಟ ಸಿವಾಲಿಕ್‌ನ ಮೇಲಣಂತರದಲ್ಲಿದ್ದ ಗಂಗಾನದಿ ಕಾಲಾಂತರದಲ್ಲಿ ಅಡ್ಡಕ್ಕೆ ಹರಿಯುತ್ತಿದ್ದ ಯಮುನಾ ನದಿಯನ್ನು ತನ್ನೊಂದಿಗೆ ಕೊಂಡು ಸಮೃದ್ಧ ಗಂಗಾ ನದಿಯೆಂದೆನಿಸಿಕೊಂಡಿತು. ಹಿಮಾಲಯದಲ್ಲಿ ಶಿಶಿರ ಋತುವಿನಲ್ಲೂ ಹರಿಯುವ ಅಲಕನಂದಾ, ಕರ್ನಾಲಿ, ಗಂಡಕ ನದಿಗಳು ತಮ್ಮ ನೀರನ್ನು (ಅದು ಕೊನೆಗೆ ಅರಬಿ ಸಮುದ್ರ ಅಥವಾ ಬಂಗಾಳಕೊಲ್ಲಿ, ಇವುಗಳಲ್ಲಿನ ಯಾವುದನ್ನೇ ಸೇರಲಿ) ಗಂಗೆಯಲ್ಲಿ ಹರಿಯಗೊಟ್ಟವು....'' ಪ್ರಾಚೀನ ಕಾಲದಲ್ಲಿ ಯಮುನಾ ನದಿಯ ನೀರು, ಈಗ ದುರ್ಲಕ್ಷಿಸಲ್ಪಟ್ಟ, ಹಿಂದೂ ಪಾರಂಪಾರಿಕ ನಂಬಿಕೆಯ ಸರಸ್ವತಿ ನದಿಯ ಮೂಲಕ ಸಿಂಧೂ ಜಲಪ್ರವಾಹವನ್ನು ಸೇರುತ್ತಿತ್ತು ಎನ್ನುವುದಕ್ಕೆ ಮತ್ತು ಪ್ರಯಾಗದ ಸಂಬಂಧ

ಕಾಲಾಂತರದಲ್ಲಾಯಿತೆನ್ನುವುದಕ್ಕೆ ಐತಿಹಾಸಿಕ ಮತ್ತು ಪ್ರಾಕೃತಿಕ ಆಧಾರಗಳಿವೆ. ಸದ್ಯದ ರಘೇಲಿಪರ್‌ನ ಪಂಜಾಬಿಗೆ ಸಂಬಂಧಿಸಿದ್ದ ಭಾಗ, ಚೀನಾಬ್, ರಾವಿ, ಬಿಯಾಸ್ ಮತ್ತು ಸಟ್ಲೆಜ್ ಇವುಗಳ ಅಸ್ತಿತ್ವಕ್ಕೆ ಶಿವಾಲಿಕ್ ಭೂಗರ್ಭೀಯ ಚಟುವಟಿಕೆಗಳಿಂದಾಗಿ ವಿಸ್ತಾರಕ್ಕೇರಿದ್ದ ಪರ್ವತ ಶ್ರೇಣಿಗಳು ಹಾಗೂ ಗಂಗಾ ಸಿಂಧೂಗಳ ಬೇರ್ಪಡಿಕೆ ಕಾರಣಗಳಾಗಿದ್ದವು.

"ಅರಖೋಸಿಯಾದಲ್ಲಿದ್ದ ಪ್ರಾಚೀನ ಇರಾನಿಗಳ 'ಹರಖಿತಿ' ಗನುರೂಪವಾಗಿ ಹಿಂದೂ-ಆರ್ಯರು ಈ ನದಿಯನ್ನು ಸರಸ್ವತಿ ಎಂದಾಗಿ ಹೆಸರಿಸಿರುವರಾಗಿ ಹೇಳಲಾಗುತ್ತದೆ." 'ದ ಭಾರತೀಯ ಇತಿಹಾಸ ಸಮಿತೀಸ್ ಹಿಸ್ಟರಿ ಆಂಡ್ ಕಲ್ಚರ್ ಆಫ್ ದಿ ಇಂಡಿಯನ್ ಪೀಪಲ್' ಭಾಗ ೧, 'ದ ವೇದಿಕ್ ಏಜ್'

ಪ್ರಸ್ತಾಪಿತ ನದಿ ಭಟ್ನೇರ್‌ನಲ್ಲಿನ ಮರುಭೂಮಿಯಲ್ಲಿ ಮರೆಯಾಗಿದ್ದ ಅರ್ವಾಚೀನ ಕಾಲದ ಸರಸ್ವತಿ ನದಿಯಾಗಿದೆ. ಇದರ ಮೂಲ ಸಿವಾಲಿಕ್ ಪರ್ವತದಲ್ಲಿನ ಯಮುನಾ ಮತ್ತು ಸಟ್ಲೆಜ್ ನದಿಗಳ ಉಗಮಸ್ಥಾನದ ಸಮೀಪವಿತ್ತು. ಇದು ಥಾನೇಶ್ವರದಿಂದಾಗಿ ಮುಂದೆ ರಜಪುತಾನದ ಮರುಭೂಮಿಯ ಮೂಲಕ ಹರಿದು ಸಿಂಧೂ ನದಿಯನ್ನು ಸೇರುತ್ತಿತ್ತು. ಸರಸ್ವತಿ, ಋಗ್ವೇದದ ನದಿ ಸ್ತುತಿಯಲ್ಲಿ ಉಲ್ಲೇಖಿಸಲ್ಪಟ್ಟ (೧೦; ೭೫) ಸಿಂಧುವಿಗೆ ಸಂಬಂಧಿಸಿದ ಹಲವೊಂದು ನದಿಗಳಲ್ಲೊಂದಾಗಿದೆ. ವೇದಕಾಲದ ಶ್ರೇಷ್ಠ ನದಿಗಳಲ್ಲೊಂದಾಗಿದ್ದ ಈ ನದಿಯು ಉಲ್ಲೇಖ ಋಗ್ವೇದದಲ್ಲಿ ಹಲವೊಂದೆಡೆ ಕಾಣಬರುತ್ತದೆ. (ನಿತಮಾ, ಋಗ್ವೇದದ ಭಾಗ ೨, ೪ : ೧೬) ಈ ನದಿಯ ತೀರದಲ್ಲಿನ ಭೂಭಾಗ ವೈದಿಕ ಯಾಗಾದಿಗಳ ಬೆಳವಣಿಗೆ ಕಂಡಿತ್ತು. ಹೊಪ್ಕಿನ್ಸ್ ಮತ್ತು ಕೀತ್ ಇವರ ಮೇರೆಗೆ ಋಗ್ವೇದ, ಸದ್ಯದ ಅಂಬಾಲಾದ ದಕ್ಷಿಣದಲ್ಲಿನ ಸರಸ್ವತಿಯ ಸುತ್ತಣ ಪ್ರದೇಶದಲ್ಲಿ ರಚಿಸಲ್ಪಟ್ಟಿತು. ಸರಸ್ವತಿ ನದಿ ಅದೃಶ್ಯವಾದುದು ವೇದಕಾಲದ ಅತಿ ಮಹತ್ತಿನ ಭೌಗೋಳಿಕ ಅಸ್ತಿತ್ವವೊಂದಾಗಿದೆ ಮತ್ತೆ ಅದರ ಉಲ್ಲೇಖವನ್ನು ಪಂಚವಿಂಶತಿ ಬ್ರಾಹ್ಮಣದಲ್ಲಿ (೨೫, ೧೦-೬) ಮಾಡಲಾಗಿದೆ. ಈ ನದಿ ಪಟಿಯಾಲಾ ಜಿಲ್ಲೆಯ ಮರುಭೂಮಿಯಲ್ಲಿನ ವಿನಾಶನವೆಂಬಲ್ಲಿ ಕಾಣದಾಯಿತು.

ಮುಂದೆ ಅದು, ಅಂದಿನ ನಲ್ವತ್ತು ದಿನಗಳ ಪಥಕ್ರಮಣದ ದೂರದಲ್ಲಿದ್ದ ಪ್ಲಕ್ಷ ಪ್ರಸ್ರವಣ ಎಂಬಲ್ಲಿ ತಲೆಯೆತ್ತಿಕೊಂಡಿತು. 'ದ ಭಾರತೀಯ ಇತಿಹಾಸದ ಸಮಿತೀಸ್ ಹಿಸ್ಟರಿ ಅಂಡ್ ಕಲ್ಚರ್ ಆಫ್ ದಿ ಇಂಡಿಯನ್ ಪೀಪಲ್' - ಭಾಗ ೧. 'ದ ವೇದಿಕ್ ಏಜ್'. ಪುಟ ೨೪೨, ೨೪೪, ೨೫೭ ಮತ್ತು ೨೬೧.

೬. ಪ್ರಮುಖ ನದಿಯೆಂದಾಗಿ ಪ್ರತಿಪಾದಿಸಲ್ಪಡುತ್ತಿದ್ದ ಸರಸ್ವತಿಯೊಂದಿಗೆ ಹಲವೊಂದು ಬಾರಿ ಉಲ್ಲೇಖಿಸಲ್ಪಟ್ಟ ದೃಷದ್ವತಿ ನದಿಯನ್ನು ಕೆಲವೊಬ್ಬರು ಘಗ್ಗರ್ ನದಿಯೊಂದಿಗೂ ಮತ್ತು ಕೆಲವರು ಅರ್ವಾಚೀನ ಕಾಲದ ಚಿತಾಂಗ್‌ನೊಂದಿಗೂ ಗುರುತಿಸುತ್ತಾರೆ.

೭. ಋಗ್ವೇದ ೩, ೨೪-೪

೮. ಮನುಸ್ಮೃತಿ ೨-೭, (ಕ್ರಿ.ಶ. ನಾಲ್ಕನೆಯ ಶತಮಾನ)

೯. ಭಾಗವತ ಖಂಡ ೧, ಅಧ್ಯಾಯ ೧೦

೧೦. ಋಗ್ವೇದ ೩, ೯೬ ಮತ್ತು ೧೦ - ೭೫.

೧೧. ಶಲ್ಯ ಪರ್ವ, ಅಧ್ಯಾಯ ೫೧

೧೨. ಶಲ್ಯ ಪರ್ವದಲ್ಲಿನ ಕಥೆಯೊಂದರ ಮೇರೆಗೆ ಆದೊಮ್ಮೆ ದಧೀಚಿಯ ತಪೋಭಂಗ ಮಾಡಲಾಗಿ ಇಂದ್ರ ಅಲಂಬುಸಾ ಹೆಸರಿನ ಅಪ್ಸರೆಯನ್ನು ಕಳುಹಿದ. ಆಕೆಯ ಅಲೌಕಿಕ ಸೌಂದರ್ಯ ಕಂಡು ಭಾವೋದ್ರಿಕನಾದ ದಧೀಚಿಯ ವೀರ್ಯ ಸರಸ್ವತಿ ನದಿಯಲ್ಲಿ ಸುರಿಯಿತು. ಗರ್ಭ ಧರಿಸಿದ ಸರಸ್ವತಿ ಸಾರಸ್ವತನಿಗೆ ಜನ್ಮವಿತ್ತಳು. ಮುಂದೊಂದು ದಿನ, ಶಿಶುವನ್ನು ದಧೀಚಿಯು ಬಳಿಕೊಂಡೊಯ್ದಾಗ ಆತ ಸರಸ್ವತಿಯುನ್ನು ಆಶೀರ್ವದಿಸಿ, ಸಾರಸ್ವತನನ್ನು ತನ್ನ ಪುತ್ರನನ್ನಾಗಿ ಸ್ವೀಕರಿಸಿದ. ಮತ್ತೆ ಹನ್ನೆರಡು ವರ್ಷಗಳ ಕಾಲದ ಕ್ಷಾಮದ ಸಮಯ ವೈದಿಕ ಜ್ಞಾನದ ರಕ್ಷಣೆ ಮಾಡುವವನಾಗಿ ಭವಿಷ್ಯ ನುಡಿದ. ಸರಸ್ವತಿ ಶಿಶುವನ್ನು ತನ್ನೊಂದಿಗಿರಿಸಿಕೊಂಡು ಅದರ ಆರೈಕೆ ಮಾಡತೊಡಗಿದಳು. ಋಗ್ವೇದದಲ್ಲಿ ಋಷಿ ಸಾರಸ್ವತನನ್ನು ಸಾರಸ್ವಾನ್ ಎಂದಾಗಿಯೂ ಸಂಬೋಧಿಸಲಾಗಿದೆ.

ತೈತ್ತರೀಯ ಸಂಹಿತೆಯ ಸದ್ಯದ ಪಾಠ ಈತನಿಂದ ರಚಿಸಲ್ಪಟ್ಟಿದೆ.

೧೩. "ಸಾರಸ್ವತಶ್ಚಪಿ ಜಗದ ನಷ್ಟಂ ವೇದಂ ಪುನರ್ಯದದ್ರಾಸೂರ್ಣ ಪೂರ್ವ ಸ್ಯಾಸಥಾನಾಥೈನಂ ಬಹುದ್ಧ ಚಕರ ನಾಯಂ ವಸಿಷ್ಟ: ಕ್ರಿತವಾಮ ಸಖ್ಬಿ:" 'ಬುದ್ಧ - ಚರಿತ್ರಂ' ಸರ್ಗ ೧, ಶ್ಲೋಕ ೪೭ (ಕ್ರಿ.ಶ. ಮೊದಲ ಶತಮಾನ)

೧೪. ಶತಪಥ ಬ್ರಾಹ್ಮಣ, ಖಂಡ ೧ ಅಧ್ಯಾಯ ೪, ಶ್ಲೋಕ ೧೦-೧೧.

೧೫. ಸ್ಕಂಧ ಪುರಾಣ, ಸಹ್ಯಾದ್ರಿ ಖಂಡ, ಉತ್ತರಾರ್ಧ, ಅಧ್ಯಾಯ ೧, ಶ್ಲೋಕ ೧.೩

೧೮೭೭ರಲ್ಲಿ ಡಾ. ಜೆ. ಜೆರ್ಸನ್ ದ ಕುನ್ಯಾ ಅವರು ಕೊಚ್ಚಿನ್, ಜುನ್ನರ್, ಬೊಂಬೇ, ಕೋಟ, ಸಿದ್ಧಾಪುರ, ಹಂಪಿ (ಕನ್ನಡ ಲಿಪಿಯಲ್ಲಿನ) ಹಾಗೂ ಇನ್ನಿತರ ಸ್ಥಳಗಳಿಂದ ಸಂಗ್ರಹಿಸಿದ ಹದಿನಾಲ್ಕು ಹಸ್ತಪ್ರತಿಗಳನ್ನು ಶ್ರೀ ಲಕ್ಷ್ಮಣ ಕೇಣಿ ಶಾಸ್ತ್ರಿ (ದಶಪ್ರಕಾಶನ ಗ್ರಂಥದ ಲೇಖಕರು), ಯಶವಂತ ಪೊಂಡಾ ಡಣಾಯಿತ ಮತ್ತು ಗಣೇಶ ಅನಂತ ಶಾಸ್ತ್ರಿ ಮುಂತಾದ ವಿದ್ವಾಂಸರ ಸಹಾಯದಿಂದ ಸಂಪಾದಿಸಿ, ಪೂರ್ವಾರ್ಧದಲ್ಲಿ ೬೭ ಮತ್ತು ಉತ್ತರಾರ್ಧದಲ್ಲಿ ೨೬ ಅಧ್ಯಾಯುಗಳ ಸಹ್ಯಾದ್ರಿ ಖಂಡವೆಂಬ ಪ್ರಮಾಣ ಗ್ರಂಥವನ್ನು ಪ್ರಕಾಶಿಸಿದರು. ಅವರೆನ್ನುತ್ತಾರೆ: "ಕೆಲವು ಪ್ರತಿಗಳು ತಿದ್ದುಪಡಿ ಮಾಡಲೆತ್ನಿಸಿದ್ದುದನ್ನು ತೋರುತ್ತವೆಯಾದರೆ ಅನ್ಯ ಕೆಲವು ತಥ್ಯಗಳನ್ನು ಮೊಟಕಾಗಿಸಿದ್ದುದನ್ನು, ಹೆಚ್ಚುವರಿ ವಿಚಾರಗಳನ್ನು ಅಲ್ಲಲ್ಲಿ ತೂರಿದ್ದುದನ್ನು ತೋರುತ್ತವೆ. ಹಲವೊಂದು ಹಸ್ತ ಪ್ರತಿಗಳು ಲಭ್ಯವಾದ ನಿಮಿತ್ತ ಇವೆಲ್ಲ ದೋಷಗಳನ್ನು ನಿಯಂತ್ರಣದಲ್ಲಿಡಲಾಗಿದೆ. ಬರವಣಿಗೆಯಲ್ಲಿನ ತಪ್ಪುಗಳನ್ನು ಸುಧಾರಿಸುವುದರ ಹೊರತು ಮೂಲದ ಬರವಣಿಗೆಯಲ್ಲಿ ಬುದ್ಧಿಪೂರ್ವಕ ಯಾವೊಂದರ ಬದಲಾವಣೆ ಮಾಡುವ ಸ್ವಾತಂತ್ರ್ಯ ಕೊಂಡದ್ದಿಲ್ಲ".

೧೬. ಸಹ್ಯಾದ್ರಿ ಖಂಡ, ಉತ್ತರಾರ್ಧ, ಅಧ್ಯಾಯ ೧. ಇನ್ನೊಂದೆಡೆ ಹತ್ತು ಗೋತ್ರಗಳ ವಿಪ್ರರು. (ಬ್ರಾಹ್ಮಣರು) ತ್ರಿಹೋತ್ರದ ನಿವಾಸಿಗಳಾಗಿದ್ದರೆನ್ನಲಾಗಿದೆ. ಉತ್ತರಾರ್ಧ, ಅಧ್ಯಾಯ ೪, ಸೂಕ್ತ ೨.

೧೭. "ಅತ್ರೈ ವಾಸಕರ ವಿಪ್ರ: ಕೇವಲ ದೇವರೂಪಿಣ"; ಸಹ್ಯಾದ್ರಿ ಖಂಡ, ಉತ್ತರಾರ್ಧ, ಅಧ್ಯಾಯ ೪.

೧೮. ಇದೇ ಗ್ರಂಥ, ಅಧ್ಯಾಯ ೧, ಸೂಕ್ತ ೫೦-೫೪.

೧೯. ಸಹ್ಯಾದ್ರಿ ಖಂಡ, ಉತ್ತರಾರ್ಧ, ಅಧ್ಯಾಯ ೧. ಕಿರವಂತರ ಕುರಿತು ಅಧ್ಯಾಯ ೧೧ ನೋಡಿರಿ.

೨೦. ಸಹ್ಯಾದ್ರಿ ಖಂಡ, ಉತ್ತರಾರ್ಧ, ಅದ್ಯಾಯ ೫ , ಸೂಕ್ತ ೧೩-೧೫.

ಕಪಂಧ್ವರು, ನಾರ್ವರು, ಷೈದಿಕರು, ಲಜ್ಜಕರು ಮತ್ತು ಖರ ಪ್ರತಿಷ್ಠರ ಬಗೆಗೆ ಏನೊಂದೂ ತಿಳಿದು ಬಂದಿಲ್ಲ. ಶ್ರೇಣಾಯ ಶ್ರೇಣಿಯ ಬಹುವಚನ. ವ್ಯಾಪಾರಿಗಳ, ಕಲಾಕುಶಲರ ತಂಡ, ಸಂಸ್ಥೆಗಳಿಗೆ ಶ್ರೇಣಾಯವೆನ್ನುತ್ತಾರೆ. ಶೆಣಯ, ಶ್ರೆಣಾಯ ಎಂಬುದರ ಪ್ರಾಕೃತ ರೂಪ. ಶೇಣೈ ಶೆಣ್ವೆ ಮತ್ತು ಶೆಣಾಯಿ ಇವು ಇದರಿಂದ ಹುಟ್ಟಿ ಬಂದವೆಂದು ಶ್ರೀ ಮಂಗೇಶ ದುಭಾಷಿಯವರು ಗ್ರಹಿಸುತ್ತಾರೆ. ('ಆಲ್ ಇಂಡಿಯಾ ಸಾರಸ್ವತ್') ದ ಜುಲೈ ೧೯೧೯ರ ಸಂಚಿಕೆಯಲ್ಲಿ ಶ್ರೀ ವಾಮನ ದುಭಾಷಿಗಳ 'ಸಾರಸ್ವತ್ ಕೊಲನಿ ಇನ್ ದ ಡೆಕ್ಕನ್' ಎಂಬ ಲೇಖನ)

೨೧. ಮಾಂಗಿರೀಶ ಮಾಹಾತ್ಮ್ಯ, ಸಹ್ಯಾದ್ರಿ ಖಂಡದ ಅಧ್ಯಾಯ ೧೨ ರಲ್ಲಿದೆ.

೨೨. ತ್ರಿವರ್ಗ ಮತ್ತು ತ್ರಿಗೋತ್ರ ಎಂಬೀ ಪಾರಿಭಾಷಿಕ ಶಬ್ದಗಳನ್ನು ಈ ಮೂರು ಶರ್ಮರ ವಂಶಜರಿದ್ದ ಶೆಣ್ವೆ ಅಥವಾ ಶೆಣ್ವೆ ಪೈಕಿ (ಚಿತ್ರಾಪುರ ಸಾರಸ್ವತ) ಗಳಲ್ಲಿನ ವತ್ಸ, ಕೌಂಡಿನ್ಯ ಮತ್ತು ಕೌಶಿಕ ಗೋತ್ರಗಳ ಕುಟುಂಬಗಳಿಗಷ್ಟೆ ಅನ್ವಯಿಸಲಾಗಿದೆ.

೨೩. ಶ್ರೀ ವಾಮನ ಎಮ್. ದುಭಾಷಿಯವರು ಜುಲೈ ೧೯೧೯ರ 'ಆಲ್ ಇಂಡಿಯಾ ಸಾರಸ್ವತ' ದಲ್ಲಿ ಬರೆದ 'ಸಾರಸ್ವತ ಕೊಲನಿ ಇನ್ ದ ಡೆಕ್ಕನ್' ಎಂಬ ಲೇಖನ.

೨೪. ಸಹ್ಯಾದ್ರಿ ಖಂಡ, ಉತ್ತರಾರ್ಧ, ಅಧ್ಯಾಯ ೨೦.

೨೫. 'ಸಾರಸ್ವತ ಫ್ಯಾಮಿಲೀಸ್' ಭಾಗ ೨. ಎಸ್. ಎಸ್. ತಾಲ್ಮಕಿ. ಬಿ. ಎ., ಎಲ್.ಎಲ್.ಬಿ., ೧೯೩೯. ಪುಟ ೨೧ ಮತ್ತು ೨೪.

೨೬. 'ದಿ ಜಿಯಾಗ್ರಾಫಿಕಲ್ ಡಿಕ್ಷನರಿ ಆಫ್ ಏನ್ಷಂಟ್ ಎಂಡ್ ಮಿಡೀವಲ್ ಇಂಡಿಯಾ' - ನಂದೋಲಾಲ್ ಡೆ, ೧೮೯೯, ಪರಿಶಿಷ್ಟ, ಪುಟ ೫೫

೨೭. ಇದೇ ಗ್ರಂಥ, ಪುಟ ೨೬

೨೮. ಮಂಜುಳ ಕ್ಷೇತ್ರ ಮಾಹಾತ್ಮ್ಯ ಅಧ್ಯಾಯ ೫ ಸೂಕ್ತ ೯.

೨೯. ಅಧ್ಯಾಯ ೨೧ರಲ್ಲಿದ್ದಂತೆ

೩೦. ಎಸ್.ಎಸ್.ತಾಲ್ಮಕಿ ಇವರ 'ಸಾರಸ್ವತ್ ಫ್ಯಾಮಿಲೀಸ್' ಭಾಗ ೧,೧೯೩೫, ಪುಟ ೫೪-೫೫.

೩೧. ಎಸ್. ಎಸ್. ತಾಲ್ಮಕಿ ಇವರ 'ಸಾರಸ್ವತ್ ಫ್ಯಾಮಿಲೀಸ್', ಭಾಗ ೨,೧೯೩೯, ಪುಟ ೧೯-೨೦.

೩೨. ಅಧ್ಯಾಯ ೨೧ ನೋಡಿರಿ.

೩೩. ಕೆನರಾದ ಕರಾವಳಿ ಭಾಗದಲ್ಲಿನ, ಒಳಭಾಗದ ಮತ್ತು ಮಲಬಾರಿನ ಕೆಲವೊಂದು ಕುಟುಂಬಗಳಲ್ಲಿ ಮೀನನ್ನು ತಿನ್ನುವ ಪರಿಪಾಠ ಇಂದಿಗೂ ಇದೆ. ಕೊಚ್ಚಿ ಮತ್ತು ಟ್ರಾವಂಕೂರ್‌ಗಳಲ್ಲಿನ ಸಾರಸ್ವತರು ಮೀನನ್ನು ತಿನ್ನುತ್ತಿಲ್ಲ.

೩೪. 'ಇಂಡಿಯನ್ ಕಾಸ್ಟ್ಸ್', ಅಧ್ಯಾಯ ೨,೧೮೭೭ ಜೋನ್ ವಿಲ್ಸನ್, ಡಿ. ಡಿ. ಎಫ್.ಆರ್.ಎ. ಪುಟ ೨೦೩.

೩೫. 'ಸಾರಸ್ವತ ಫ್ಯಾಮಿಲೀಸ್', ಭಾಗ ೧, ಎಸ್.ಎಸ್. ತಾಲ್ಮಕಿ, ಬಿ.ಎ.ಎಲ್.ಎಲ್.ಬಿ, ಪುಟ ೪,

೩೬. ಡಾ. ಸುನೀತಿ ಕುಮಾರ್ ಚಟರ್ಜಿ ಹೀಗೆನ್ನುತ್ತಾರೆ :
ಇತಿಹಾಸದ ಬೆಂಬಲವಿರದಿದ್ದ, ಸಾಂಪ್ರದಾಯಿಕ ನಂಬಿಕೆಯ ಮೇರೆಗೆ ಗೌಡ ಪ್ರಾಂತಕ್ಕೆ ಸಂಬಂಧಿಸಿದ್ದ ಬಂಗಾಳದ ಸಪ್ತಶತಿ (೭೦೦) ಬ್ರಾಹ್ಮಣರು ಬೌದ್ಧ ಧರ್ಮದ

ಪ್ರಭಾವಕ್ಕೊಳಗಾಗಿ ವೈದಿಕ ಸಂಪ್ರದಾಯಗಳನ್ನು ಮರೆತಿದ್ದರು. ಕ್ರಿ.ಶ.ಎಂಟನೆಯ ಶತಮಾನದ ಸುಮಾರಿಗೆ ಪಶ್ಚಿಮ ಬಂಗಾಲದ ಅರಸು ಆದಿಸುರ, ವೇದ ಪಾರಂಗತರೂ, ವೇದಾನುಷ್ಠಾನಗಳಲ್ಲಿ ಪರಿಣತರೂ ಆಗಿದ್ದ ಕೆಲವು ಬ್ರಾಹ್ಮಣರನ್ನು ತನ್ನ ರಾಜ್ಯದಿಂದ ಕಳುಹಿಸುವಂತೆ ಕನ್ಯಾಕುಬ್ಜದ ಅರಸನನ್ನು ಕೇಳಿಕೊಂಡ. ಕನ್ಯಾಕುಬ್ಜದ ಬಣಕ್ಕೆ ಸಂಬಂಧಿಸಿದ ಐದು ಬ್ರಾಹ್ಮಣರು, ತಮ್ಮ ಪರಿಚಾರಕರೊಂದಿಗೆ ಬಂಗಾಲಕ್ಕೆ ಬಂದರು. ಅವರು ಇಂದಿನ ವರೇಂದ್ರ, ರಾಧಿಯಾ ಎಂಬ ಬಂಗಾಲಿ ಬ್ರಾಹ್ಮಣರ ಪೂರ್ವಜರು. (ಡಾ. ಸುನೀತಿ ಕುಮಾರ್ ಚಟರ್ಜಿಯವರು ಇವರಲ್ಲಿನ ೩೩ನೆಯ ತಲಮಾರಿನವರು). ಅವರಲ್ಲಿ ಹೆಚ್ಚಿನವರು ಕೌಥಮಿ ಶಾಖೆಯ ಸಾಮವೇದಿಗಳಿದ್ದರು; ಕೆಲವರು ಋಗ್ವೇದಿಗಳೂ ಮತ್ತೆ ಕೆಲವರು ಯಜುರ್ವೇದಿಗಳೂ ಆಗಿದ್ದರು. ಕನ್ಯಾಕುಬ್ಜಿಗಳ ವಂಶಜರು ವೇದಾಭ್ಯಾಸಗಳಲ್ಲಿ ಅಸಡ್ಡೆ ತೋರಿದಾಗ ಪಾಂಚಾತ್ಯ ವೈದಿಕರ (ಉತ್ತರ ಭಾರತದಿಂದ ಬಂದಿದ್ದಿರಬಹುದಾದ) ಮತ್ತು ದಾಕ್ಷಿಣಾತ್ಯ ವೈದಿಕರ (ದಕ್ಷಿಣದಿಂದ ಒರಿಸ್ಸಾದ ಮಾರ್ಗವಾಗಿ ಬಂದವರೆನ್ನಲಾಗುವ) ಉದಯವಾಯಿತು. ಸಾಂಪ್ರದಾಯಿಕರೂ, ಪೂರ್ವಾಚಾರದ ಸಂಸ್ಕೃತ ಪಂಡಿತರೂ ಆಗಿದ್ದ ಅವರಲ್ಲಿನ ಹೆಚ್ಚಿನವರು ರಾಧಿಯಾ, ವರೇಂದ್ರ ಮನೆತನಗಳ ಪೌರೋಹಿತ್ಯಕೊಂಡರು. ಅನ್ಯ ಬ್ರಾಹ್ಮಣ ಬಣಗಳಿಗೆ ಅತ್ಯಧಿಕ ಸಂಖ್ಯೆಯ ಧರ್ಮಗುರುಗಳ ಪೂರೈಕೆ ಅವರಿಂದಲೇ ಆಯಿತು. ಮೀನು ತಿನ್ನುವ ಸಾಮಾನ್ಯ ಅಭ್ಯಾಸವನ್ನಾಧಾರವಾಗಿಕೊಂಡು ಅವೆರಡು ವರ್ಗಗಳೊಳಕ್ಕೆ ಒಂದು ಬಗೆಯ ಸಂಬಂಧವಿತ್ತೆನ್ನುವ ಕೆಲವೊಬ್ಬ ಬಂಗಾಲಿ ಮತ್ತು ಸಾರಸ್ವತರ ಅಭಿಪ್ರಾಯಕ್ಕೆ ಆಧಾರವಿಲ್ಲವೆಂದು ಡಾ। ಸುನೀತಿ ಕುಮಾರ್ ಚಟರ್ಜಿ ನುಡಿಯುತ್ತಾರೆ.

೩೭. 'ಸಾರಸ್ವತ ಫ್ಯಾಮಿಲೀಸ್', ಭಾಗ ೧, ೧೯೩೫, ಪುಟ ೬-೭ ಮತ್ತೆ ೫೯ ಹಾಗೂ 'ಸಾರಸ್ವತ ಫ್ಯಾಮಿಲೀಸ್', ಭಾಗ ೨, ೧೯೩೯, ಪುಟ ೩೯. ಶ್ರೀ ಎಸ್.ಎಸ್. ತಾಲ್ಮಕಿ, ಬಿ.ಎ., ಎಲ್.ಎಲ್.ಬಿ.

೩೮. ಇದೇ ಗ್ರಂಥದ ಅಧ್ಯಾಯ ೨೧ ನೋಡಿರಿ.

೩೯. ಇದೇ ಗ್ರಂಥದ ಅಧ್ಯಾಯ ೩ ನೋಡಿರಿ.

೪೦. ಇದೇ ಗ್ರಂಥದ ಅಧ್ಯಾಯ ೨೧ ನೋಡಿರಿ.

೪೧. ಈ ಹಸ್ತಪ್ರತಿಯ ಕುರಿತು ಬಾಬುಜ್ಞಾನೇಂದ್ರ ಮಿತ್ರ, 'ಶ್ರೀಕೃಷ್ಣ'ದಲ್ಲಿ ಹೀಗೆ ನುಡಿದಿರುತ್ತಾರೆ : 'ಏಷಿಯಾಟಿಕ್ ಸೊಸ್ಯಾಟಿ ಆಫ್ ಬೆಂಗಾಲ್' ಗ್ರಂಥಾಲಯದಲ್ಲಿ ನೇಪಾಲ್ ದರ್ಬಾರ್ ಲೈಬ್ರರಿಯಲ್ಲಿ ದೊರಕಿತ್ತೆನ್ನಲಾಗುವ ಸ್ಕಂಧ ಪುರಾಣದ ಪ್ರತಿಯೊಂದಿದೆ. ಅದರಲ್ಲಿನ ಸಮಾಪ್ತಿ ವಚನ, ಈ ಪ್ರತಿ ಆರನೆಯ ಶತಮಾನಕ್ಕೆ ಸಂಬಂಧಿಸಿದ್ದುದೆಂಬುದನ್ನು ಸೂಚಿಸುತ್ತದೆ.

೪೨. ಇದೇ ಗ್ರಂಥದ ಅಧ್ಯಾಯ ೨೧ ನೋಡಿರಿ.

೪೩. ಮಜುಮ್‌ದಾರರಿಂದ ಪರಿಷ್ಕೃತವಾದ 'ಕನ್ನಿಂಗ್‌ಹ್ಯಾಮ್ಸ್ ಜಿಯಾಗ್ರಫಿ' ಪುಟ ೭೦೭

೪೪. ಇದೇ ಗ್ರಂಥದ ಅಧ್ಯಾಯ ೧೮ ನೋಡಿರಿ.

೪೫. 'ದಿ ಆಲ್ ಇಂಡಿಯಾ ಸಾರಸ್ವತ್ಸ್', ಅಕ್ಟೋಬರ್ ೧೯೧೯ರ ಸಂಚಿಕೆಯಲ್ಲಿನ ಶ್ರೀ ವಾಮನ ಎಮ್. ದುಬಾಷಿಯವರ 'ದ ಡೆಕ್ಕನ್ ಸಾರಸ್ವತ್ಸ್' ಲೇಖನ.

೪೬. ೧೭೨೧ರಲ್ಲಿ ಶ್ರೀ ಶ್ರೀಪಾದ ವ್ಯಂಕಟೇಶ ವಾಗ್ಳೆಯವರು 'ರಘುನಾಥ' ಕಾವ್ಯನಾಮದಡಿಯಲ್ಲಿ

ಕೊಂಕಣಾಖ್ಯಾನವನ್ನು ಬರೆಯಲಾರಂಭಿಸಿ ರಾಮ ನವಮಿಯಂದು ಪೂರ್ಣಗೊಳಿಸಿದರು. ಅದು ಗೋತ್ರ, ಕುಲದೇವತೆಗಳು, ಮೂಲ ದೇವಾಲಯಗಳಿದ್ದ ಗ್ರಾಮಗಳು. ಪೋರ್ಚುಗೀಸರ ಆಳ್ವಿಕೆಯ ಕಾಲ ಸ್ಥಳಾಂತರಗೊಂಡ ಗ್ರಾಮಗಳು, ಸಾರಸ್ವತರಲ್ಲಿನ ವರ್ಗ, ಉಪವರ್ಗಗಳು, ಮುಖ್ಯ ಸಮಾಜದಿಂದ ಬೇರೆಯಾಗಲು ಇದ್ದ ಕಾರಣ, ಇತ್ಯಾದಿಗಳ ವಿವರಗಳನ್ನೀಯುತ್ತದೆ. (ಅಧ್ಯಾಯ ೧೧ ಹಾಗೂ ೧೨ ನೋಡಿರಿ.)

೪೭. ಇದೇ ಗ್ರಂಥದ ಅಧ್ಯಾಯ ೮ನ್ನು ನೋಡಿರಿ.

೪೮. ಗೋವಾದಿಂದ ಉತ್ತರ ಕನ್ನಡದ ಗಂಗಾವಳಿಯವರೆಗೆ ವ್ಯಾಪಿಸಿದ್ದ ಅರಸು 'ಯದ' ನ ಪುತ್ರ 'ಹುತ'ನ ರಾಜ್ಯದಲ್ಲಿ ಸುಂದರ ಸ್ತ್ರೀಯರಿದ್ದರೆಂದು ಹರಿವಂಶದಲ್ಲಿ ಹೇಳಲಾಗಿದೆ.

ಅಧ್ಯಾಯ ೨

ಕೊಂಕಣ ಮತ್ತು ಗೋವಾ

೧. ಕೊಂಕಣ

ಕೊಂಕಣ ಪುರಾತನ ಕಾಲದ ಹೆಸರು. ಕೊಂಕಣವೆಂದು ಕರೆಯಲ್ಪಡುವ ಈ ಪ್ರದೇಶವನ್ನು ಇದೇ ಹೆಸರಿನಿಂದ ಮಹಾಭಾರತ ', ವರಾಹ ಮಿಹಿರನ ' ಬೃಹತ್ಸಂಹಿತೆ ಮತ್ತು ದಂಡಿಯ ' ದಶಕುಮಾರ ಚರಿತ್ರಗಳಲ್ಲೂ ಸಂಬೋಧಿಸಲಾಗಿದೆ. ಗ್ರೀಕರ ' ಪೆರಿಪ್ಲಸ್ ಆಫ್ ದಿ ಇರಿಥ್ರಿಯನ್ ಸೀ' (ಕ್ರಿ.ಶ.೮೦) ಗ್ರಂಥದ ಅನಾಮಧೇಯ ಲೇಖಕ ಥಾಣಾ ಪ್ರಾಂತ ಕೊಂಕಣ ಆರ್ಯದೇಶದಲ್ಲಿದೆ ಎನ್ನುತ್ತಾನೆ. ೭ನೆಯ ಶತಮಾನದಲ್ಲಿ ಭಾರತ ಸಂದರ್ಶಿಸಿದ್ದ ಯುಆನ್ ಛಾಂಗ್ (ಹ್ಯುಯೆನ್‌ತ್ಸಾಂಗ್) ಕೊಂಗ್-ಕೊಣ-ಪುಲೋ (ಕೊಂಕಣ ಪುರ ?) ಎಂಬ ಹೆಸರಿನ ಪ್ರದೇಶದ ವಿವರಣೆಯೊಯುತ್ತಾನೆ; ಅದು ಪುರಾಣಗಳ ' ಸೂರ್ಪರಕಕ್ಕೆ ಅನ್ವಯಿಸಿದೆ. ಕೊಂಕಣ ಮತ್ತು ಅದರ ಭಿನ್ನಪಾಠ ಕೊಂಕುಣ, ಕಾಮಸೂತ್ರದ ಭಾಷ್ಯದಲ್ಲಿ ಮತ್ತು ಹದಿಮೂರನೆಯ ಶತಮಾನ 'ದ ಉತ್ತರಾರ್ಧದಲ್ಲಿನ ಹೇಮಾದ್ರಿಯ 'ರಾಜ ಪ್ರಶಸ್ತಿ'ಯಲ್ಲಿ ಕಾಣಬರುತ್ತದೆ. ಕೊಂಕಣ ಮತ್ತು ಸಪ್ತ ಕೊಂಕಣದ ಉಲ್ಲೇಖ ಕಲ್ಹಣನ ರಾಜ ತರಂಗಿಣಿ (ಕ್ರಿ.ಶ. ೧೧೪೮) ಯಲ್ಲಿದೆ. ದಖ್ಖಣದಲ್ಲಿನ ಚಾಲುಕ್ಯರ ಕೆಲವೊಂದು ಶಿಲಾಲೇಖಗಳಲ್ಲಿ ಇವೆರಡನ್ನೂ ಉಲ್ಲೇಖಿಸಲಾಗಿದೆ.

ಇದು ಅಪರಾಂತ ಮತ್ತು ಸೂರ್ಪರಕ ಎಂಬ ಹೆಸರುಗಳಿಂದಲೂ ಪರಿಚಿತವಾಗಿತ್ತು.

೨. ಅಪರಾಂತ

ಮತ್ಸ್ಯ ಪುರಾಣದಲ್ಲಿ ಸಹ್ಯಾದ್ರಿ ಪರ್ವತ ಮತ್ತು ಅರಬಿ ಸಮುದ್ರದ ನಡುವಣ, ಉತ್ತರದಲ್ಲಿ ಪ್ರಭಾಸ ಪಟ್ಟಣ, ದಕ್ಷಿಣದಲ್ಲಿ ಗೋಕರ್ಣ ಇವುಗಳ ನಡುವಣ ಪ್ರದೇಶವನ್ನು ಅಪರಾಂತ (ಪಶ್ಚಿಮದ ಮೇರೆಯಲ್ಲಿನ ಕೊನೆಯ ಪ್ರಾಂತ) ವೆಂದು ಕರೆಯಲಾಗಿದೆ. ವಿಷ್ಣು ಪುರಾಣ ' ಮತ್ತು ಕಾಳಿದಾಸ ' ರಘು ವಂಶದಲ್ಲೂ ಅಪರಾಂತಕ್ಕೆ ಸಂಬಂಧಿಸಿದ ಉಲ್ಲೇಖಗಳಿವೆ.

೩. ಸೂರ್ಪರಕ

ಸ್ಕಂಧ ಪುರಾಣದ ' ಸಹ್ಯಾದ್ರಿ ಖಂಡದಲ್ಲಿ ವೈತರಣೆ (ಥಾಣಾ ಜಿಲ್ಲೆ) ಮತ್ತು ಸುಬ್ರಹ್ಮಣ್ಯ ಗಿರಿ (ದಕ್ಷಿಣ ಕನ್ನಡ ಜಿಲ್ಲೆ)ಯ ನಡುವಣ ಪಶ್ಚಿಮ ಕರಾವಳಿಯ ಭೂಭಾಗವನ್ನು ಸೂರ್ಪರಕವೆಂದು ಕರೆಯಲಾಗಿದೆ. ಮಹಾಭಾರತದ ಶಾಂತಿ ಪರ್ವದಲ್ಲಿ ಹಾಗೂ ಸ್ಕಂಧ ಪುರಾಣದ ಗರ್ಗ ಸಂಹಿತೆಯಲ್ಲಿ ಸೂರ್ಪರಕ ಕ್ಷೇತ್ರ (ಥಾಣಾ ಜಿಲ್ಲೆಯ ಬಸ್ಸೀನಿನ ಬಳಿಯ ಹಾಳು ಬಿದ್ದ ಗ್ರಾಮ ಸುಪಾರಾ)ದ ಉಲ್ಲೇಖವಿದೆ. ಪರಶುರಾಮ ತನ್ನ ಕೊಡಲಿ ಎಸೆದು ಸಮುದ್ರ ಹಿಂದಕ್ಕೆ ಸರಿಯುವಂತೆ ಮಾಡಿ ಗಳಿಸಿದ ಭೂಭಾಗದ ಆಕಾರ ಸೂಪ (ಬೀಸಣಿಗೆ) ದಂತಿದ್ದು, ಸೂರ್ಪರಕ ಶಬ್ದದ ಉತ್ಪತ್ತಿ ಬಹುತೇಕ ಸೂಪದಿಂದಾಗಿದ್ದಿರಬೇಕು.

೪. ಸಪ್ತ ಕೊಂಕಣ

ಸಹ್ಯಾದ್ರಿ ಖಂಡದ ಮೇರೆಗೆ ಸಹ್ಯಗಿರಿಯ ಶಿಖರ ಭಾಗದಲ್ಲಿ ನಿಂತ ಪರಶುರಾಮ ತನ್ನ ಕೊಡಲಿ ಎಸೆದು[೯] ೧) ಕೇರಳ, ೨) ತುಳಂಗ, ೩) ಸೌರಾಷ್ಟ್ರ, ೪) ಕೊಂಕಣ, ೫) ಕರಾಹಟ, ೬) ಕರ್ನಾಟಕ ಮತ್ತು ೭) ಬರ್ಬರ[೧೦] ಎಂಬ ಸಪ್ತ ದೇಶಗಳ ನಿರ್ಮಾಣ ಮಾಡಿದ.

ಈ ಪ್ರದೇಶ (ಪರಶುರಾಮ ಕ್ಷೇತ್ರ) ರಾಮಖಂಡವೆಂದಾಗಿಯೂ ಕರೆಯಲ್ಪಡುತ್ತಿದ್ದುಅದು ನೂರು ಯೋಜನ ಉದ್ದ, ಏಳು ಯೋಜನ ಅಗಲ (ಸುಮಾರು ೯೦೦ ಮೈಲು ಮತ್ತು ೬೪ ಮೈಲು)[೧೧] ವಿದೆ. ಕೊಂಕಣದ ಬ್ರಾಹ್ಮಣರು ವೇದಪಾರಂಗತರಿದ್ದರೆನ್ನಲಾಗಿದೆ[೧೨]. ಪರಶುರಾಮ ಕ್ಷೇತ್ರ, ಉತ್ತರದಲ್ಲಿ ಗುಜರಾತಿನಿಂದ ಆರಂಭವಾಗುವ ಪಶ್ಚಿಮ ಘಟ್ಟಗಳಿಂದ ತೊಡಗಿ ಕನ್ಯಾಕುಮಾರಿಯ (ದಕ್ಷಿಣದಲ್ಲಿನ ಕೇಪ್ ಕೊಮೊರಿನ್) ತುತ್ತ ತುದಿಯವರೆಗೆ ವ್ಯಾಪಿಸಿದೆ. ಇದು ತುಳಂಗ-ದಕ್ಷಿಣ ಕನ್ನಡದಲ್ಲಿನ ತುಳುವ; ಕರ್ನಾಟ - ದಕ್ಷಿಣ ಮತ್ತು ಉತ್ತರ ಕನ್ನಡಗಳ ನಡುವಣ ಹೈಗ; ಕರಾಹಟ-ಕರ್ಹಾಡ, ಕೊರ್ಣ ಮತ್ತು ವೇದಾವತಿಗಳ ನಡುವಣ (ಸತಾರಾ ಜಿಲ್ಲೆಮತ್ತುಮಹಾರಾಷ್ಟ್ರದ ಕೊಲ್ಹಾಪುರಗಳ ನಡುವಣ, ಪ್ರಾಚೀನ ಕಾಲದಿಂದ ಸಂಬಂಧಕೊಂಡಿದ್ದ ನಿಮಿತ್ತ ಕೊಂಕಣದೊಂದಿಗೆ ಸೇರಿಸಲ್ಪಟ್ಟ ಘಟ್ಟದ ಮೇಲಣ ಭಾಗ) ಪ್ರಾಂತ; ಬರ್ಬರ-ಕಾಥಿಯಾವಾರ್‌ನ ಪಶ್ಚಿಮ ಮತ್ತು ಉತ್ತರ ದಿಕ್ಕುಗಳಲ್ಲಿ ಪಸರಿಸಿದ್ದ ಗುಡ್ಡಗಾಡುಗಳ ಭಾಗ, ಇವೆಲ್ಲವುಗಳಿಂದೊಡಗೂಡಿದೆ.

೫. ಕೊಂಕಣ (ಮುಂದುವರಿದುದು)

ಭಾರತದ ಪಶ್ಚಿಮ ಕರಾವಳಿಯಲ್ಲಿ ಕೌಬ ಹೆಸರಿನ ಪಟ್ಟಣವೊಂದಿತ್ತೆಂದು ಕ್ರಿ.ಶ. ಎರಡನೆಯ ಶತಮಾನದಲ್ಲಿ ಬಾಳಿದ್ದ ಟಾಲೆಮಿ ನುಡಿದಿರುತ್ತಾನೆ. ಅದನ್ನು ಗೋವಾದೊಂದಿಗೆ ಗುರುತಿಸಲಾಗಿದೆ.

'ಪ್ರಪಂಚ ಹೃದಯ' (ತ್ರಿವಂಡ್ರಮ್ ಸಂಸ್ಕೃತ ಮಾಲೆ)ದ ಮೇರೆಗೆ ೧) ಮೂಷಿಕ (ದಕ್ಷಿಣ ಟ್ರಾವಂಕೂರ್), ೨) ಕೇರಳ (ಉತ್ತರ ಟ್ರಾವಂಕೂರ್, ಕೊಚ್ಚಿ, ಕುರುಂಬನಾಡ್ ತಾಲೂಕಿನ ದಕ್ಷಿಣದ ಅರ್ಧ ಭಾಗವನ್ನೊಳಗೂಡಿದ ದಕ್ಷಿಣ ಮಲಬಾರು), ೩) ಕೂಪಕ (ಕುರುಂಬನಾಡ್ ತಾಲೂಕಿನ ದಕ್ಷಿಣದಲ್ಲಿನ ಅರ್ಧಭಾಗ ಬಿಟ್ಟು ಉಳಿದ ಉತ್ತರ ಮಲಬಾರು), ೪) ಆಳುಪ (ಆಳ್ವ ಖೇಡ ಎಂದಾಗಿಯೂ ಪರಿಚಿತವಾಗಿರುವ ದಕ್ಷಿಣ ಕನ್ನಡ), ೫) ಪಾಶು (ಬಹುತೇಕ ಉತ್ತರ ಕನ್ನಡ ಅಥವಾ ಹೈಗ), ೬) ಕೊಂಕಣ (ಗೋವಾ ಮತ್ತು ಬೊಂಬೇಯ ರತ್ನಾಗಿರಿ ಜಿಲ್ಲೆ) ಹಾಗೂ ೭) ಪರಕೊಂಕಣ (ಬಹುತೇಕ ವೈತರಣಿ ನದಿಯ ತನಕ ವ್ಯಾಪಿಸಿರುವ, ಉತ್ತರದಲ್ಲಿನ ಉಳಿದ ಭೂಭಾಗ - ಇವು ಕೊಂಕಣದ ವಿಭಾಗಗಳು.

ಜುಜೆ ನಿಕಲಾವ್ ದ ಫೊನ್ಸೆಕ[೧೩] ತನ್ನ 'ಹಿಸ್ಟೋರಿಕಲ್ ಆರ್ಕಿಯಾಲಾಜಿಕಲ್ ಸ್ಕೆಚ್ಚಸ್ ಆಫ್ ಸಿಟಿ ಆಫ್ ಗೋವಾ' (೧೮೭೩) ದಲ್ಲಿ ಈ ಮುಂದಿನ ಏಳು ಪ್ರಾಂತಗಳನ್ನು ಪುರಾಣಗಳ ಆಧಾರಕೊಂಡು ಹೀಗೆ ಹೆಸರಿಸುತ್ತಾರೆ: ೧) ಕೇರಳ (ಮಲಯಾಳ ರಾಜ್ಯ), ೨) ತುಲುಂಗ ಅಥವಾ ತುಲಿಂಗ (ದಕ್ಷಿಣ ಕನ್ನಡದ ತುಳುನಾಡು, ಪ್ರಾಯಶಃ

ಉತ್ತರ ಕನ್ನಡದ ದಕ್ಷಿಣದಲ್ಲಿನ ಕೆಲವೊಂದು ಭಾಗಗಳು), ೩) ಗೋವಾ ರಾಷ್ಟ್ರ (ಸಧ್ಯದ ಗೋವಾ ಮತ್ತೆ ಉತ್ತರ ಕನ್ನಡದ ಉತ್ತರದಲ್ಲಿನ ಕರಾವಳಿ ಭಾಗ), ೪) ಕೊಂಕಣ (ಸಾವಂತವಾಡಿಯೊಂದಿಗಿನ ರತ್ನಾಗಿರಿ ಜಿಲ್ಲೆ, ಜಂಜೀರಾದೊಂದಿಗಿನ ಕೊಲಾಬಾ, ಬೊಂಬೇದ್ವೀಪ, ಜವಾಹರದೊಂದಿಗಿನ ಥಾಣಾ ಜಿಲ್ಲೆ), ೫) ಕರಲಾಟ ಮತ್ತು ೬) ವರಲಾಟ (ಇವು ಲಾಟ ಅಥವಾ ದಕ್ಷಿಣ ಗುಜರಾತಿನ ಭಾಗಗಳು) ಹಾಗೂ ೭) ಬರ್ಬರ (ಸಹ್ಯಾದ್ರಿ ಶ್ರೇಣಿ ಆರಂಭಿಸುವಲ್ಲಿಂದ ತೊಡಗಿದ್ದ ಕಾಥಿಯಾವಾರ್‌ನ ಗುಡ್ಡಗಳ ಒಳನಾಡಿನ ಜಿಲ್ಲೆಗಳು). ಆದರೆ ಪಾರಂಪಾರಿಕವಾದ ನಂಬಿಕೆಯ ಮೇರೆಗೆ ಕೊಂಕಣ, ಪೂರ್ವದಲ್ಲಿ ಸಹ್ಯಾದ್ರಿ (ಪಶ್ಚಿಮ ಘಟ್ಟ), ಪಶ್ಚಿಮದಲ್ಲಿ ಅರಬಿ ಸಮುದ್ರ ಮತ್ತು ಎರಡು ಗಂಗೆಗಳು - ಉತ್ತರದಲ್ಲಿ ದಮಣ ಗಂಗಾ ” ದಕ್ಷಿಣದಲ್ಲಿ ಗಂಗಾವಳಿ ” ಇವೆಲ್ಲವುಗಳ ನಡುವಣ ಪ್ರಾಂತವಾಗಿದೆ. ಕೆಲವೊಮ್ಮೆ ಇದನ್ನು ಉತ್ತರ ಕೊಂಕಣ (ದಮಣ ಗಂಗಾದಿಂದ ಖರೆ ಪಟ್ಟಣದ ತನಕ), ಮಧ್ಯ ಕೊಂಕಣ (ಖರೆ ಪಟ್ಟಣದಿಂದ ಶೇವೇಶ್ವರ ತನಕ ದ ಗೋವಾ) ಮತ್ತು ದಕ್ಷಿಣ ಕನ್ನಡ (ಶೇವೇಶ್ವರದಿಂದ ಗಂಗಾವಳಿಯ ತನಕ) ಎಂಬೀ ಭೂಭಾಗಗಳಲ್ಲಿ ವಿಭಜಿಸಲಾಗುತ್ತಿದ್ದರೂ ಸಮಾನ್ಯವಾಗಿ ಇದನ್ನು ಉತ್ತರ ಕೊಂಕಣ (ದಮಣ ಗಂಗಾ ಮತ್ತು ಕುಂಡಲಿಕ ” ಗಳ ನಡುವಣ ೧೪೦೦ ಗ್ರಾಮಗಳನ್ನೊಳಗೊಂಡಿದ್ದ ಭೂಭಾಗ) ಮತ್ತೆ ದಕ್ಷಿಣ ಕೊಂಕಣ (ಕುಂಡಲಿಕ ಮತ್ತು ಗಂಗಾವಳಿಯ ನಡುವಣ ೯೦೦ ಗ್ರಾಮಗಳನ್ನೊಳಗೊಂಡ ಭೂಭಾಗ) ಎಂಬೀ ಭೂಭಾಗಗಳೆರಡರಲ್ಲಿ ವಿಂಗಡಿಸಲಾಗುತ್ತದೆ.

೬. ಗೋವಾ

ಗೋವಾ ಶಬ್ದದ ಉತ್ಪತ್ತಿ ಪ್ರಾಚೀನ ಕಾಲದ ಗೋವಾ ಕ್ಷೇತ್ರ, ಗೋಪರಾಷ್ಟ್ರ, ಗೋಮಾಂತಕಗಳಿಂದಾಯಿತು. ಪುರಾತನ ಕಾಲದಲ್ಲಿ ದಕ್ಷಿಣ ಕೊಂಕಣ ಈ ಹೆಸರುಗಳಿಂದಲೂ ಪರಿಚಿತವಾಗಿತ್ತು. ಮಹಾಭಾರತ ”ದ ಅನುಬಂಧ ಹರಿವಂಶ ”ದಲ್ಲಿ ಮತ್ತು ವರಾಹ ಪುರಾಣ ”ದಲ್ಲಿ ಇದನ್ನು ಗೋಮಾಂತಕವೆಂದಾಗಿ ಸಂಬೋಧಿಸಲಾಗಿದೆ.

ಹರಿವಂಶದ ಮೇರೆಗೆ ಕೃಷ್ಣ ಮತ್ತೆ ಜರಾಸಂಧರೊಳಗಣ ಯುದ್ಧ ಗೋಮಾಂಚಲಗಿರಿಯಲ್ಲಾಯಿತು. ಸೂತ ಸಂಹಿತೆ ”ಯಲ್ಲಿ ಇದನ್ನು ಗೋವಾಪುರಿಯೆಂದಾಗಿ ಸಂಬೋಧಿಸಲಾಗಿದೆ. ಪುರಾಣಗಳಲ್ಲಿ ಸೌಂದರ್ಯ, ಸಂಪತ್ತು ಮತ್ತು ಪಾವಿತ್ರ್ಯಗಳ ಕಾರಣಕ್ಕಾಗಿ ಈ ಪುರಾತನ ಪಟ್ಟಣದ ಪ್ರಶಂಸೆ ಮಾಡಲಾಗಿದೆ.

ಗೋವಾ ವ್ಯಾಪಾರದ ಪ್ರಮುಖ ಕೇಂದ್ರವೊಂದಾಗಿತ್ತು. ಬಂದರಿನ ಮಹತ್ವಕೊಂಡಿದ್ದ ಇದು ವೈಜಯಂತಿ (ಬನವಾಸಿ)ಯ ಕದಂಬ ಅರಸರ ಕಾಲದಲ್ಲಿ ಎರಡನೆಯ ರಾಜಧಾನಿಯಾಗಿತ್ತು. ಶಿಲಾಹರರ ಕಾಲದಲ್ಲಿ ಇದು ಗೋಪಾಲಪುರಿಯೆಂದು ಕರೆಯಲ್ಪಡುತ್ತಿತ್ತು. ಬೆಳಗಾಂ ಜಿಲ್ಲೆಯ ಹಲಸಿಯಲ್ಲಿನ, ಬಿಜಾಪುರ ಜಿಲ್ಲೆಯ ಪಟ್ಟದ ಕಲ್ಲಿನ ಹಳೆಗನ್ನಡದ ಶಾಸನಗಳಲ್ಲಿ ಇದನ್ನು ಗೋವೆಯೆಂದು ಸಂಬೋಧಿಸಲಾಗಿದೆ. ವಿಜಯ ನಗರದ ಅರಸು ಎರಡನೆಯ ಹರಿಹರನ ತಾಮ್ರ ಶಾಸನವೊಂದರಲ್ಲಿ ಇದನ್ನು ಕೊಂಕಣದ ರಾಜಧಾನಿಯೆನ್ನಲಾಗಿದೆ. ('ಗೋವಾಭಿದಾನಂ ಕೌಂಕಣ ರಾಜಧಾನಿಂ') ಇದು ವ್ಯಾಪಾರೋದ್ಯಮ, ಸಂಪತ್ತುಗಳಿಗಾಗಿಯಷ್ಟೆ ಇರದೆ ಭವ್ಯ ವಾಸ್ತು, ಶೈಕ್ಷಣಿಕ, ಧಾರ್ಮಿಕ

ಸಂಸ್ಥೆಗಳಿಗಾಗಿಯೂ ಪ್ರಸಿದ್ಧವಾಗಿತ್ತು. ಇನ್ನೊಂದು ಶಾಸನ ಇದು ವಿದ್ವಜ್ಜನರಿಂದ ತುಂಬಿತ್ತೆಂದು ನುಡಿದಿದ್ದರೆ, ಮಗುದೊಂದು ಇದು ಇಂದ್ರನ ಸ್ವರ್ಗಕ್ಕೂ ಮಿಗಿಲಾಗಿ ಸುಂದರವಿತ್ತೆಂದು ಹೇಳುತ್ತದೆ. (ಅಧ್ಯಾಯ ೩ ನೋಡಿರಿ)

ಪುರಾಣಗಳಲ್ಲಿ ಅಗಶಿ, ಅಘನಾಶಿನಿ ಎಂದು ಕರೆಯಲ್ಪಡುತ್ತಿದ್ದ ಜುವಾಯಿ (ಜುವಾರಿ) ನದಿಯ ತೀರದಲ್ಲಿನ ಕದಂಬರ ರಾಜಧಾನಿ, ಇಂದು ಗೋವಾವೆಲ್ಹಾ (ವೃದ್ಧೆ ಗೋವಾ ಅಥವಾ ಬೃಹದ್ಗೋವಾ) ಎಂದು ಕರೆಯಲ್ಪಡುವ ಹಾಳು ಬಿದ್ದ ಹಳ್ಳಿಯೊಂದಾಗಿದೆ. ಅಲ್ಲಿನ ಹಲವೊಂದು ಭವ್ಯ ಭವನಗಳು ೧೫೧೦ರಲ್ಲಿನ ಪೋರ್ಚುಗೀಸರ ದಾಳಿಯ ಕಾಲದಲ್ಲೂ ಅಸ್ತಿತ್ವದಲ್ಲಿದ್ದುವು. ಆದರೆ ಅವುಗಳಲ್ಲಿನ ಯಾವುದೊಂದೂ, ಆಕಾರಣಕ್ಕೆ ಪುರಾತನ ಪಟ್ಟಣದ ಯಾವೊಂದೂ ಅವಶೇಷಗಳು, ಇಂದು ಕಾಣಸಿಗುತ್ತಿಲ್ಲ [೨೧].

೭. ಕೊಂಕಣದ ವಿದೇಶೀ ವ್ಯಾಪಾರ

ಸಪಾರಾ, ಕಲ್ಯಾಣ, ಥಾಣಾ, ಛಾವುಲ್ ಮತ್ತು ಗೋವಾಗಳಲ್ಲಿನ ವಿದೇಶಿ ವ್ಯಾಪಾರದ ಇತಿಹಾಸ ಕ್ರಿ. ಪೂ. ೨೫೦೦ಕ್ಕೂ ಹಿಂದೆ ಸರಿಯುತ್ತದೆ. ಹೌಸರಿ (ನವಸಾರಿ) ಸೊಪ್ರಾ, ಬೊನಿಗುರುಘ (ಬ್ರೋಛ್), ಛಾವುಲ್ ಮತ್ತೆ ಕಲ್ಯಾಣ (ಕ್ರಿ.ಪೂ. ೧೦೧೬-೭೭೬) ಬಂದರುಗಳಿಂದ ಸೊಲೊಮನ್ ವಿವಿಧ ಸರಕುಗಳ ಆಯಾತ ಮಾಡುತ್ತಿದ್ದ.

'ಪೆರಿಪ್ಲಸ್ ಆಫ್ ದಿ ಇರಿಥ್ರಿಯನ್ ಸೀ' (ಕ್ರಿ.ಶ.೮೦)ಯ ಲೇಖಕ ಸಪಾರಾ (ಔಪ್ಪಾರಾ), ಕಲ್ಯಾಣ (ಕಲ್ಲೇಣ) ಮತ್ತೆ ಛಾವುಲ್ (ಸಮುಲ್ಲ)ಗಳ ಉಲ್ಲೇಖ ಮಾಡುತ್ತಾನೆ. ಗ್ರೀಕ್ ಜನರಿಗೆ ಗೋವಾ 'ಟ್ಯಂದಿಸ್' ಎಂಬ ಹೆಸರಿನಿಂದ ಪರಿಚಿತವಾಗಿತ್ತು; ಈಜಿಪ್ಟ, ಫಿನೀಷಿಯ ಮತ್ತು ಬೇಬಿಲೋನ್‌ಗಳೊಂದಿಗೆ ಕ್ರಿ.ಶ. ೭೫೦ರ ವರೆಗೆ ಗೋವಾ ವ್ಯಾಪಾರ ಮಾಡುತ್ತಿದ್ದುದರ ಪ್ರಮಾಣಗಳಿವೆ.

ಪ್ರಸಿದ್ಧ ಅರಬಿ ಇತಿಹಾಸಕಾರ ಮತ್ತು ಭೂಗೋಳ ಶಾಸ್ತ್ರಜ್ಞ ಅಲ್ ಮಸೂದಿ (ಕ್ರಿ.ಶ.೯೪೩) ಹಾಗೂ ಇನ್ನಿತರ ಮುಸಲ್ಮಾನರು ಛಾವುಲ್‌ವನ್ನು 'ಸೈನಿವುರ್' ಎಂದಾಗಿ ಸಂಬೋಧಿಸಿದ್ದಾರೆ. ಅಲ್ ಬಿರುನಿ (ಕ್ರಿ. ಶ. ೧೦೨೧) ಥಾಣಾ ರಾಜಧಾನಿಯಾಗಿದ್ದ ಕೊಂಕಣದ ಉಲ್ಲೇಖ ಮಾಡುತ್ತಾನೆ. ಸಪಾರಾ, ಕಲ್ಯಾಣ ಮತ್ತು ಛಾವುಲ್ ಅರೇಬಿಯಾದ ಪೂರ್ವ ಕರಾವಳಿ, ಜಾಂಝಿಬಾರ್‌ನಲ್ಲಿನ ಭಾರತೀಯರ ವಸಾಹತು, ಅಬಿಸ್ಸೀನಿಯಾದ ಸಾಗರೀ ಬಂದರು ಅಡುಳಿ ಮತ್ತು ಅನ್ಯ ಆಫ್ರಿಕದ ಬಂದರುಳೊಂದಿಗೆ ವ್ಯಾಪಾರ ಮಾಡುತ್ತಿದ್ದವು.

ಗೋವಾ ಗುಜರಾತ, ಮಲಬಾರುಗಳ ಹೊರತಾಗಿ ಗ್ರೀಸ್, ಪಾರ್ಥಿಯ, ಪರ್ಷಿಯ ಅರೇಬಿಯ, ಚೀನಾದೊಂದಿಗೂ ವ್ಯಾಪಾರ ಮಾಡುತ್ತಿತ್ತು. ಮಧ್ಯಕಾಲೀನ ಅರಬಿ ಮತ್ತು ಪರ್ಷಿಯಾದ ಜನರಿಗೆ ಗೋವಾ ಸಂದಬುರು ಅಥವಾ ಸುಂದಬುರಾ [೨೨] ಎಂದಾಗಿ ಪರಿಚಿತವಾಗಿತ್ತು. ಅಲ್‌ಮಸೂದಿ ಮತ್ತೆ ಅಲ್ ಬಿರುನಿ ಇದನ್ನು ಸಿಂದಬುರಾ ಎಂದಾಗಿ ಗುರುತಿಸಿರುತ್ತಾರೆ. ಹನ್ನೊಂದನೆಯ ಶತಮಾನದ ಕೊನೆಯ ಭಾಗದಲ್ಲಿ ಭಾರತ ಸಂದರ್ಶಿಸಿದ್ದ ಭೂಗೋಳ ಶಾಸ್ತ್ರಜ್ಞ ಅಲ್ ಇದ್ರಿಸಿ ಇದನ್ನು ಸಂದಬುರ್ ಎಂದಾಗಿ ಕರೆದಿರುತ್ತಾನೆ. ಇದು

ದೊಡ್ಡ ಹಡಗುಗಳು ತಂಗುತ್ತಿದ್ದ ರೇವು ಮತ್ತು ಸರಕಿನಿಂದ ತುಂಬಿದ ಸಮೃದ್ಧ ಪೇಟೆಗಳನ್ನು ಕೊಂಡ ಪ್ರಸಿದ್ಧ ವ್ಯಾಪಾರದ ಕೇಂದ್ರವಾಗಿತ್ತೆಂದು ನುಡಿದಿರುತ್ತಾನೆ.

ಕೊಂಕಣದ ಬಂದರುಗಳಿಂದ ನಿರ್ಯಾತವಾಗುವ ಸರಕುಗಳಲ್ಲಿ ಅಕ್ಕಿ, ಜೋಳ, ಬೆಣ್ಣೆ, ಸಕ್ಕರೆ, ಎಳ್ಳೆಣ್ಣೆ, ಹುರಮಂಜಿ, ದೋರಗು ಹಾಗೂ ನಾಜೂಕಿನ ಬಟ್ಟೆಗಳು ಪ್ರಾಮುಖ್ಯವಾಗಿದ್ದವು. ಈ ಯಾದಿಗೆ ಮ್ಯಾಕ್ಸ್ ಮುಲ್ಲರ್ ತವರ, ಶ್ರೀಗಂಧ, ದಾಲ್ಚೀನಿ, ಕರಿಮೆಣಸು, ಕರಿಮರ ಮತ್ತು ಹಸ್ತಿದಂತಗಳನ್ನು ಸೇರಿಸುತ್ತಾನೆ. ಮದ್ಯ, ಖರ್ಜೂರ, ಮುತ್ತು, ನೇರಳೆ ಬಣ್ಣ, ಚಿನ್ನ ಮತ್ತು ದಾಸಿಯರ ಆಯಾತವಾಗುತ್ತಿತ್ತು.

ಸಂದರ್ಭ ಸೂಚಿ

೧. ಭೀಷ್ಮ ಪರ್ವ, ಅಧ್ಯಾಯ ೯

೨. ಬೃಹತ್ಸಂಹಿತ, ೧೪; ವರಾಹ ಮಿಹಿರ ಕ್ರಿ. ಶ. ಆರನೆಯ ಶತಮಾನದ ಪೂರ್ವಾರ್ಧದಲ್ಲಿ ಬಾಳಿದ್ದ.

೩. ಪ್ರಾಯಶಃ ದಂಡಿ ಆರನೆಯ ಶತಮಾನದಲ್ಲಿ ಬಾಳಿದ್ದ

೪. ಈ ಬೌದ್ಧ ಚೈತ್ಯಾಲಯದ ಸಮೀಪ ಹ್ಯುಯೆನ್ ತ್ಸಾಂಗ್ ಸುಮಾರು ಮುನ್ನೂರು ಶ್ರೇಷ್ಠ ಭಿಕ್ಷುಗಳನ್ನು, ರತ್ನ ಖಚಿತ ಮುಕುಟಕೊಂಡ ಎರಡು ಅಡಿಗಳೆತ್ತರದ ಬುದ್ಧನ ವಿಗ್ರಹವಿದ್ದ ದೊಡ್ಡ ವಿಹಾರವೊಂದನ್ನು ಕಂಡಿದ್ದ. ಬನವಾಸಿ ಕೊಂಕಣಾಪುರದ ಹೆಸರಾಗಿರಬೇಕೆಂಬ ಡಾ. ಜೆ. ಎಫ್. ಫ್ಲೀಟ್ ಅವರ ಅಭಿಪ್ರಾಯವನ್ನಾಧರಿಸಿ ಪ್ರೊ. ಜಿ. ಎಮ್. ಮೊರಾಯಿಸ್ ಬರೆದ ಗ್ರಂಥ 'ಕದಂಬ ಕುಲ'ದಲ್ಲಿ 'ಕೊಂಗ್ - ಕೊಣ - ಪುರಿಗ್' ಬನವಾಸಿ ಇರುವುದಾಗಿ ನುಡಿಯುತ್ತಾನೆ. ಇದನ್ನು ಸಿಂದನಾಯಕ ಎರಡನೆಯ ಚೈರಂದನನ (೧೧೬೩-೧೧೬೪) ಶಿಲಾಶಾಸನದಲ್ಲೂ ಕಾಣಬಹುದು.

೫. ಡಾ. ಜಿ. ಭಂಡಾರ್ಕರ್ ಅವರ 'ಅರ್ಲಿ ಹಿಸ್ಟರಿ ಆಫ್ ದಿ. ಡೆಕ್ಕನ್' ೧೯೨೮, ಪರಿಶಿಷ್ಟ 'ಸಿ', ಪುಟ ೧೧೬-೧೧೭.

೬. ವಿಷ್ಣು ಪುರಾಣ, ಅಧ್ಯಾಯ ೨, ೩-೧೬.

೭. ರಘುವಂಶ, ಸರ್ಗ ೪.೫೮. ಕಾಳಿದಾಸ ಬಹುತೇಕ ಇದನ್ನು ನಾಲ್ಕನೆಯ ಶತಮಾನದಲ್ಲಿ ಬರೆದಿರಬೇಕು.

೮. ಸಹ್ಯಾದ್ರಿ ಖಂಡ, ಉತ್ತರಾರ್ಧ, ಅಧ್ಯಾಯ ೧, ೨೪-೨೫.

ವೈತರಣ (ವೈತರಣೆ) ಸಹ್ಯಾದ್ರಿಯಲ್ಲಿ (ನಾಸಿಕದ ತ್ರ್ಯಂಬಕ ಗಿರಿಯಲ್ಲಿ, ಗೋದಾವರಿಯ ಉಗಮ ಸ್ಥಾನದ ವಿರುದ್ಧ ಭಾಗದಲ್ಲಿ) ಉಗಮಿಸುತ್ತದೆ. ಮತ್ತೆ ದಹಾಣು ಉಪವಿಭಾಗದ ಪೂರ್ವದ ಗಡಿಯನ್ನು ಸೇರುತ್ತದೆ. ಥಾಣಾ ಜಿಲ್ಲೆಯ ಗಡಿಯುದ್ದಕ್ಕೆ ಸುಮಾರು ಎಂಟು ಮೈಲುಗಳಷ್ಟು ದೂರ ಹರಿದು, ಮುಂದೆ ಶೇನಾಲಿಯಲ್ಲಿ ದೆಹೇರ್ಜಾ ಸೇರಿ ಮತ್ತೆ ದಹಾಣು ಉಪವಿಭಾಗದೊಳಕ್ಕೆ ಬರುತ್ತದೆ. ಶೇನಾಲಿಯಲ್ಲಿ ಒಮ್ಮಿಂದೊಮ್ಮೆಗೆ ಇನ್ನೊಂದು ತಿರುವು ಕೊಂಡು ಎಂಟು ಮೈಲುಗಳ ದೂರದಲ್ಲಿದ್ದ ಸೂರ್ಯಾ ನದಿಯನ್ನು ಸೇರಿ ಹದಿನೆರಡು ಮೈಲುಗಳುದ್ದಕ್ಕೆ ದಕ್ಷಿಣದತ್ತ

ಹರಿಯುತ್ತದೆ. ಅಲ್ಲಿಂದ ಜಿಲ್ಲೆಯ ಉಪವಿಭಾಗದ ಗಡಿಯುದ್ದಕ್ಕೆ ಪ್ರವಹಿಸಿ ಅಗಶಿಯಲ್ಲಿ ಸಮುದ್ರವನ್ನು ಸೇರುತ್ತದೆ. ವೈತರಣ ತನ್ನ ಕೊನೆಯ ಇಪ್ಪತ್ತು ಮೈಲುಗಳ ಪ್ರವಾಸವನ್ನು ಸುಂದರವಾದ ಭೂಭಾಗದ ಮೂಲಕ ಮಾಡುತ್ತದೆ. ನದಿ ಅಗಲವೂ, ಆಳವೂ ಆಗಿದೆ. 'ಗೆಝೆಟೀಯರ್ ಆಫ್ ದ ಬೊಂಬೇ ಪ್ರೆಸಿಡೆನ್ಸಿ,' ಸಂಪುಟ ೧೩, ಭಾಗ ೨, ಥಾಣಾ ೧೮೮೨, ಪುಟ ೬೯೪ ಮತ್ತು ಭಾಗ ೧, ಥಾಣಾ ೧೮೮೨, ಪುಟ ೮ ಮತ್ತು ೧೦.

೯. ಸಹ್ಯಾದ್ರಿ ಖಂಡ, ಉತ್ತರಾರ್ಧ, ಅಧ್ಯಾಯ ೭, ೨೫.

ಕ್ಷತ್ರಿಯರ ಭೂಮಿಯನ್ನು ಬ್ರಾಹ್ಮಣರಿಗೆ ದಾನವಾಗಿತ್ತ ಬಳಿಕ ಪರಶುರಾಮನಿಗೆ ತಾವೊಂದರ ಅಭಾವವಿದ್ದುದರ ಕುರಿತು ಉತ್ತರಾರ್ಧದ ಅಧ್ಯಾಯ ೧ ರಲ್ಲಿ ಹೇಳಲಾಗಿದೆ. ಆಗ ಆತ ತನ್ನ ರಾಜ್ಯದ ಭಾಗವೊಂದನ್ನೀಯುವಂತೆ ವರುಣನನ್ನು ಕೇಳಿಕೊಂಡ. ವರುಣ ನಿರಾಕರಿಸಿದಾಗ, ಪರಶುರಾಮ ಸಹ್ಯಾದ್ರಿಗಿರಿ ಶಿಖರವನ್ನೇರಿ ಹದಿನಾಲ್ಕು ಬಾಣಗಳನ್ನೆಸೆದ. ಬಾಣಗಳು ಬಿದ್ದಲ್ಲಿಂದ ಸಮುದ್ರ ಹಿಂದಕ್ಕೆ ಸರಿಯಿತು. ಹೊಸದಾಗಿ ಸಂಪಾದಿಸಿದ ಭೂಭಾಗವನ್ನು ಆತ ಏಳು ಪಾಲುಗಳಾಗಿ ವಿಭಾಗಿಸಿದ. ಒಂದು ಬಾಣ ಬನವಲಿಯಲ್ಲಿ ಬಿತ್ತು. ಮತ್ತೊಂದು (ಬೊಂಬೇಯ) ವಾಲುಕೇಶ್ವರದಲ್ಲಿ ಬಿತ್ತು. ಡಾ. ಜೆ. ಜೆರ್ಸನ್ ದ ಕುನ್ಹಾ ಅವರ 'ಇಂಡಿಯನ್ ಅಂಟಿಕ್ವರಿ'ಯಲ್ಲಿನ 'ವರ್ಡ್ಸ ಎಂಡ್ ಪ್ಲೇಸಸ್ ಎಬೌಟ್ ಬೊಂಬೇ, - ಸಂಪುಟ ೩ - ೧೮೭೪, ಪುಟ ೨೪೮ ದಲ್ಲಿ.

೧೦. ಸಹ್ಯಾದ್ರಿ ಖಂಡ, ಉತ್ತರಾರ್ಧ, ಅಧ್ಯಾಯ ೭, ೪೭-೪೮.

೧೧. ಇದೇ ಗ್ರಂಥ, ಅಧ್ಯಾಯ ೪, ೩೮ ನೋಡಿರಿ.

೧೨. ಇದೇ ಗ್ರಂಥ, ಅಧ್ಯಾಯ ೧೦, ೧೩ ನೋಡಿರಿ.

೧೩. ಆತನ ಕುಟುಂಬ ಮೂಲತಃ ಬಾರ್ದೇಶದಲ್ಲಿನ ಕಳಂಬೆಗೆ ಸಂಬಂಧಿಸಿದ್ದುದಿತ್ತು. ಸೊಪಾಟಾ ಶೆಣ್ಯೆಯವರ ವಂಶಜನಿದ್ದ ಈತ ಸೊಪಾಟಾದ ಕುಲಕರ್ಣಿ (ಗ್ರಾಮದ ಶಾನುಭಾಗ)ಯೂ ಆಗಿದ್ದ.

೧೪. ದಮಣ ಗಂಗಾ ಸೂರತ್ ಜಿಲ್ಲೆಯಲ್ಲಿ ಉಗಮಿಸುತ್ತದೆ. ಸೂರತ್ ಮತ್ತು ಥಾಣಾ ಜಿಲ್ಲೆಗಳ ಗಡಿಯುದ್ದದಲ್ಲಿನ ಬಯಲು ಭಾಗದಿಂದಾಗಿ ಸಾಗುವ ಈ ನದಿ ಮುಂದೆ ಆರು ಮೈಲುಗಳಷ್ಟರ ಪ್ರವಾಸವನ್ನು ಕಡಲ ತಡಿಯಿಂದಾಗಿ ಮಾಡುತ್ತದೆ. ಈ ನದಿ ಪೋರ್ಚುಗೀಸರ ವಸಾಹತು ದಮಣ ಗಂಗಾದ ಮೂಲಕವೂ ಹರಿಯುತ್ತದೆ.

೧೫. ಗಂಗಾವಳಿ ಅಥವಾ ಬೆಡ್ತಿ ಧಾರ್ವಾರ ಜಿಲ್ಲೆಯಲ್ಲಿ ಉಗಮಿಸುತ್ತದೆ. ಸುಮಾರು ಇಪ್ಪತ್ತು ಮೈಲುಗಳಷ್ಟರ ದೂರ ಹರಿದ ಬಳಿಕ ಅದು ಕೆಲವೊಂದು ಮೈಲು ಧಾರ್ವಾರದ ಪಶ್ಚಿಮಕ್ಕೆ ಸಾಗಿ, ಹದಿನೈದು ಮೈಲುಗಳ ಪ್ರವಾಸವನ್ನು ಹುಬ್ಬಳ್ಳಿಯ ಬದಿಯಿಂದ ಮಾಡುತ್ತಿದೆ. ಮುಂದೆ ಐದು ಮೈಲುಗಳಷ್ಟರ ದೂರ ಪ್ರವಹಿಸಿ ಉತ್ತರ ಕನ್ನಡ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಈ ಜಿಲ್ಲೆಯಲ್ಲಿನ ಮುಂದಿನ ಅರುವತ್ತು ಮೈಲುಗಳ ಪ್ರವಾಸದ ವೇಳೆ ಯಾವೊಂದೂ ಉಪನದಿ ಅದನ್ನು ಸೇರುತ್ತಿಲ್ಲ. ಉತ್ತರ

ಕನ್ನಡ ಜಿಲ್ಲೆಯನ್ನು ಪ್ರವೇಶಿಸಿದ ನಂತರ ಸುಮಾರು ಇಪ್ಪತ್ತು ಮೈಲುಗಳ ದೂರವನ್ನು ಸಹ್ಯಾದ್ರಿಯ ಪಶ್ಚಿಮ ಭಾಗದ ಇಳುಕಲಿನಲ್ಲಿನ ಮೋಹಕ ದೃಶ್ಯಗಳ ನಡುವಿನಿಂದಾಗಿ ಸಾಗಿ, ವಾಗೋಡ್ ಜಲಪಾತದ ರೂಪುಕೊಂಡು, ಅಂಕೋಲ, ಗೋಕರ್ಣಗಳನ್ನು ಸೀಳಿ ಸಮುದ್ರವನ್ನು ಸೇರುತ್ತದೆ.

೧೬. ಕುಂಡಲೀಕ ಅಥವಾ ರೋಹಾ ನದಿಯ ಉಗಮ ಸಹ್ಯಾದ್ರಿಯ ಗಾರೋಲ್ಹೋಟ್ ಕಣಿವೆಯ ಬಳಿಯಾಗುತ್ತದೆ. ನಿಸರ್ಗದತ್ತ ನಯನರಮ್ಯ ದೃಶ್ಯಗಳ ನಡುವಿನಿಂದಾಗಿ ಸಾಗಿ ಮುಂದೆ ಅದು ರೇವ್‌ದಾಂಡಾ (ಈಗ ಹಳ್ಳಿಯಾಗುಳಿದ ಪ್ರಾಚೀನ ಕಾಲದ ಪ್ರಸಿದ್ಧ ಛಾವುಲ್ ಪಟ್ಟಣ)ದ ಬಳಿಯು, ಕಡಲಿನ ಉಬ್ಬರದ ವೇಳೆ ಮಾತ್ರ ನೌಕಾ ಸಂಚಾರಕ್ಕೆ ಯೋಗ್ಯವಾದ ಕಡಲ ಕೈಯೊಂದಾಗಿ ಮಾರ್ಪಡುತ್ತದೆ. ಇಲ್ಲಿನ ಅಳಿವೆ ಅತಿ ಸುಂದರವಾದುದಾಗಿದೆ.

೧೭. ಭೀಷ್ಮ ಪರ್ವ ಅಧ್ಯಾಯ ೯, ಶ್ಲೋಕ ೧೪೩ ಹಾಗೂ ಅಧ್ಯಾಯ ೧೨.

೧೮. ಹರಿವಂಶ, ಅಧ್ಯಾಯ ೧೬

೧೯. ವರಾಹ ಪುರಾಣ, ಅಧ್ಯಾಯ ೮೫.

೨೦. 'ಗೋಕರ್ಣದ ಉತ್ತರಕ್ಕೆ, ಹಲು ಯೋಜನಗಳ ಸುತ್ತಳತೆಯ ಕ್ಷೇತ್ರವೊಂದಿದ್ದು ಅಲ್ಲಿ ಪಾಪನಾಶಿನಿ ಗೋವಾ ಪುರಿಯಿದೆ. ಸೂರ್ಯೋದಯವಾಗುತ್ತಲೇ ಅಂಧಕಾರ ಮಾಯವಾಗುವಂತೆ ಗೋವಾ ಪುರಿಯ ದರ್ಶನ ಮಾತ್ರದಿಂದ ಸಮಸ್ತ ಪಾಪಗಳು ನಾಶವಾಗುತ್ತವೆ. ಗೋವಾ ಪುರಿಯಲ್ಲಿ ತೀರ್ಥಸ್ನಾನ ಮಾಡುವ ಕೇವಲ ಕಲ್ಪನೆ ಸದ್ಗತಿಯನ್ನೀಯುತ್ತದೆ. ಗೋವಾಪುರಿಗೆ ಸರಿಹೋಲುವ ಕ್ಷೇತ್ರ ಇನ್ನೊಂದಿಲ್ಲ. ಈ ಕ್ಷೇತ್ರದಲ್ಲಿ ವೇದ, ವೇದಾಂಗಗಳಲ್ಲಿ ಪಾರಂಗತರಿದ್ದ, ಷಟ್ಕರ್ಮನಿಷ್ಠ, ಮಂತ್ರ, ಯೋಗ, ತಪ, ನಾರು, ಬೇರುಗಳಿಂದ ಕ್ರೋಧ ನಿಗ್ರಹಿಸಿದ್ದ ಬ್ರಾಹ್ಮಣರು ವಾಸಿಸುತ್ತಿದ್ದಾರೆ' ಸೂತ ಸಂಹಿತೆ, ಅಧ್ಯಾಯ ೧೬.

೨೧. ಜುಜೆ ನಿಕಲಾವ್‌ದ ಫೊನ್ಸೆಕ, ೧೮೭೮, ಇವರು ಬರೆದ 'ದ ಹಿಸ್ಟೋರಿಕಲ್ ಎಂಡ್ ಆರ್ಕಿಯೋ ಲೋಜಿಕಲ್ ಸ್ಕೆಚ್ಚಸ್, ಆಫ್ ದ ಸಿಟಿ ಆಫ್ ಗೋವಾ' ಪುಟ ೧೨೦

೨೨. ಪೂರ್ವಕಾಲದ ಜುವಾರಿ ಪಟ್ಟಣ ಆಗಸಿ ನದಿಯ ಬಲಬದಿಯ ತೀರದಲ್ಲಿತ್ತು. ಇದು ಕದಂಬರ ಹಾಗೂ ಅವರ ಉತ್ತರಾಧಿಕಾರಿಗಳ ರಾಜಧಾನಿಯಾಗಿತ್ತು. ಮತ್ತು ವೆಲ್ಹಾ ಗೋವಾ ಎಂದಾಗಿಯೂ ಪರಿಚಿತವಾಗಿತ್ತು. ಇಲ್ಲಿ ಈಗ ಗತ ಕಾಲದ ವಾಸ್ತುಗಳ ಯಾವೊಂದೂ ಕುರುಹುಗಳು ಉಳಿದಿಲ್ಲ. ಇದರ ಉತ್ತರಕ್ಕೆ ಐದು ಮೈಲುಗಳ ಅಂತರದಲ್ಲಿ ಮುಸಲ್ಮಾನರು ಸ್ಥಾಪಿಸಿದ, ಆದರೆ ೧೫೧೦ರಲ್ಲಿ ಅಲ್ಬುಕರ್ಕ್ ಗೆದ್ದ, 'ವೃದ್ಧ ಗೋವಾ' ಇದೆ. ಇದು ಪೋರ್ಚುಗೀಸರ ಹಳೆಯ ರಾಜಧಾನಿ. ಇಲ್ಲಿ ವೈಸ್‌ರಾಯರ ಕಮಾನು, ಬಿಷಪ್ಪರ ಪ್ರಧಾನ ಇಗರ್ಜಿ, ಮಸೀದಿಯೊಂದನ್ನು ಮುರಿದು ೧೫೧೨ರಲ್ಲಿ ಕಟ್ಟಿದ ಭವ್ಯ ಕ್ರೈಸ್ತ ದೇವಾಲಯ, ೧೬೦೩ ರಲ್ಲಿ ಪ್ರತಿಷ್ಠಾಪಿಸಿದ ಸೈಂಟ್ ಫ್ರಾನ್ಸಿಸ್‌ನ ಪಾರ್ಥಿವ ಶರೀರಕೊಂಡ ಬೋಮ್ ಜೇಸಸ್ ಕ್ರೈಸ್ತ ದೇವಾಲಯದ ಭವ್ಯ ವಾಸ್ತು, ಕ್ರೈಸ್ತ ಸನ್ಯಾಸಿನಿಯರ ಮಠ, 'ಸಾಂ ಕಾಯ್ತಾನು (ಸೈಂಟ್

ಕಾಥ್ತಾನ್) ದೇವಾಲಯ ಇತ್ಯಾದಿಗಳಿವೆ. ಇತ್ತೀಚೆಗಿನ ತನಕ ಇದು ಭಾರತದಲ್ಲಿನ ರೋಮನ್ ಕೆಥೋಲಿಕರ ಮಠಗಳ ಕಾರ್ಯಕಲಾಪಗಳ ಕೇಂದ್ರವಾಗಿತ್ತು. ಮಾಂಡೋವಿ (ಗೋಮತಿ)ಯ ತೀರದ ನೊವಾ ಗೋವಾ (ಧಾಕ್ಟಾ ಗೋವಾ) ಸಧ್ಯದ ರಾಜಧಾನಿಯಾಗಿದೆ. ಇದು ಪಂಜಿಮ್ (ಪಣಜಿ), ರಿಬಾಂದರ್ ಮತ್ತು ವಿಜಯನಗರದ ಆಳ್ವಿಕೆಯ ಕಾಲ ರಾಜಧಾನಿಯಾಗಿದ್ದ ಹಳೆಯ ಪಟ್ಟಣದಿಂದೊಳಗೂಡಿದೆ.

ಹಿಂದಣ ದಿನಗಳಲ್ಲಿ ಶ್ರೀಮಂತ ರೇವೊಂದಾಗಿದ್ದ ಚಂದ್ರಪುರ (ಈಗಿನ ಚಂದರ್) ವನ್ನುದ್ದೇಶಿಸಿಕೊಂಡು ಇದನ್ನು ಗೋವಾವೆಂದಾಗಿ ಕರೆದಿದ್ದಿರಬೇಕು. ಒಂಭತ್ತನೆಯ ಶತಮಾನದಲ್ಲಿ ಇದು ವಿದೇಶಗಳೊಂದಿಗೆ ವ್ಯಾಪಾರ ಮಾಡುವ ಅನೇಕ ಹಡಗುಗಳನ್ನು ಕೊಂಡಿತ್ತು.

ಅಧ್ಯಾಯ ೩

ಗೋವಾವನ್ನು ಆಳಿದ ರಾಜಮನೆತನಗಳು

೧. ಕೊಂಕಣದಲ್ಲಿ ಬೌದ್ಧ ಧರ್ಮದ ಪ್ರಭಾವ

ಕ್ರಿ. ಪೂ. ಐದನೆಯ ಶತಮಾನದಲ್ಲಿ ಸುನಪರಾಂತ (ಈಗಿನ ಜಾಂಬವಲಿ) ದಲ್ಲಿದ್ದ ಪೂರ್ಣ ಹೆಸರಿನ ಬುದ್ಧನ ಅನುಯಾಯಿ ಗೋಮಾಂತಕದಲ್ಲಿ ಬೌದ್ಧ ಧರ್ಮದ ಪ್ರಚಾರ ಮಾಡಿದ. ಬೌದ್ಧ ಧರ್ಮದ ಪ್ರಚಾರಕ್ಕಾಗಿ ಮೌದ್ಗಲ ಪುತ್ರ (ಮೊಗಲ್ಲಿಣ) ಧರ್ಮಪ್ರಚಾರಕರನ್ನು ಮಹಾರಟ್ಟ (ಮಹಾರಾಷ್ಟ್ರ), ಅಪರಾಂತ ಮತ್ತು ಬನವಾಸಿಗಳಿಗೆ ಕಳುಹಿಸಿದನೆಂದು 'ಮಹಾವಂಸೋ' ದಲ್ಲಿ ಹೇಳಲಾಗಿದೆ. ಕ್ರಿ. ಪೂ. ೨೪೨ರಲ್ಲಿ ಅಶೋಕ ಬೌದ್ಧ ಧರ್ಮದ ಪ್ರಚಾರಕರನ್ನು ಅಪರಾಂತದಲ್ಲಿನ ಸೋಪಾರಕ್ಕೆ ಕಳುಹಿಸಿದ್ದ. ಮತ್ತೆ ರಕ್ಷಿತನ ನೇತೃತ್ವದಲ್ಲಿ ಪ್ರಚಾರ ಮಂಡಳಿಯೊಂದನ್ನು ಬನವಾಸಿಗೂ ಕಳುಹಿಸಿದ್ದ. ಬಹುತೇಕ ಆ ದಿನಗಳಲ್ಲಿ ಬನವಾಸಿ ಬೌದ್ಧ ಧರ್ಮಕ್ಕೆ ಸಂಬಂಧಿಸಿದ ಚಟುವಟಿಕೆಗಳ ಕೇಂದ್ರವೊಂದಾಗಿದ್ದಿರಬೇಕು. ಸೌರಾಷ್ಟ್ರದ ಗಿರ್‌ನಾರ್‌ನಲ್ಲಿ, ಹಿಮಾಲಯದ ಅಡಿಗುಡ್ಡೆಯಲ್ಲಿನ ಖಲಸಿಯಲ್ಲಿ, ಅಫಘಾನಿಸ್ತಾನದಲ್ಲಿನ ಶಹಾಬಾಝ್‌ಗಢಿಯಲ್ಲಿ ದೊರಕಿದ ಕ್ರಿ.ಪೂ. ಮೂರನೆಯ ಶತಮಾನದ ಶಿಲಾಶಾಸನಗಳಲ್ಲಿ ರಾಷ್ಟ್ರಿಕ (ಮಹಾರಾಷ್ಟ್ರ), ಪೈಟಣಿಕ (ಪ್ರತಿಷ್ಠಾನ), ಅಪರಾಂತಗಳಿಗೆ ಸಂಬಂಧಿಸಿದ ಉಲ್ಲೇಖಗಳಿವೆ.

ಗೋವಾ ಮತ್ತು ಕೊಂಕಣಗಳಲ್ಲಿ ಬೌದ್ಧ ಧರ್ಮ ಗಣನೀಯ ಪ್ರಗತಿ ಮಾಡಿತ್ತು. ಕ್ರಿ. ಶ. ಮೊದಲ ಶತಮಾನದಲ್ಲಿ ಕೊಂಕಣದಲ್ಲಿ ಬೌದ್ಧ ಧರ್ಮೀಯರ ಹಲವೊಂದು ವಸಾಹತುಗಳಿದ್ದವು. ರಿವಾಣ, ಲಾಮ್‌ಗಾಂವ್, ಹರವಲಿ (ಇಲ್ಲಿ ಬ್ರಾಹ್ಮಿ ಲಿಪಿಯ ಶಾಸನಗಳಿವೆ), ಲೊಟ್ಲಿ, ಅಂಕೆ, ಹರ್ಮಾಳ್ ಮತ್ತೆ ರೇಡಿಗಳಲ್ಲಿ ಹೀನಾಯಾನ ವಿಹಾರಗಳಿವೆ. ಗೋವಾದ ಬಾರ್ದೇಶ್‌ದಲ್ಲಿನ ಕೊಲವಲ್ ಎಂಬಲ್ಲಿ ೧೯೩೦ರಲ್ಲಿ ಫಾ. ಹೆನ್ರಿ ಹೆರಾಸ್, ಎಸ್.ಜೆಯವರಿಗೆ ಸಾಂಚಿಯ ಚಿತ್ರದಲ್ಲಿ ಕಾಣಬರುವ ವಿಗ್ರಹದಂತಿನ, ಮಹಾಯಾನ ಪಂಥೀಯರ ಬುದ್ಧನ ವಿಗ್ರಹವೊಂದು ದೊರಕಿತ್ತು. ಅದು ಈಗ ಬೊಂಬಾಯಿಯ ಸೈಂಟ್ ಝೇವಿಯರ್ಸ್ ಕಾಲೇಜಿನ ವಸ್ತು ಸಂಗ್ರಹಾಲಯದಲ್ಲಿದೆ. ಬಹುತೇಕ ಅದು ಕ್ರಿ. ಶ. ಎರಡನೆಯ ಅಥವಾ ಮೂರನೆಯ ಶತಮಾನಕ್ಕೆ ಸಂಬಂಧಿಸಿದ್ದುದಾಗಿರಬೇಕು. ಈಗ ಹಲವೊಂದು ಬೌದ್ಧಕಾಲೀನ ಗುಹೆಗಳು ಕಾಣಸಿಗುತ್ತಿದ್ದು ಅವುಗಳಲ್ಲಿ ಥಾಣಾ ಜಿಲ್ಲೆಯ ಕನ್ಹೇರಿ ಮತ್ತು ಘಾರಾಪುರಿ (ಎಲಿಫೆಂಟಾ) ಯಲ್ಲಿನವು ಪ್ರಾಮುಖ್ಯವಾದುವಾಗಿವೆ. ಕನ್ಹೇರಿಯ ಗುಹೆಯಲ್ಲಿನ ಶಿಲಾಶಾಸನದ ಮೇರೆಗೆ, ಗೌಡದೇಶ (ಬಿಹಾರ) ದಿಂದ ಬಂದ ಅಗ್ನಿ ವಿಹಾರ ಹೆಸರಿನ ಬೌದ್ಧ ಭಿಕ್ಷು ಧ್ಯಾನ, ಚಿಂತನೆಗಳಿಗಾಗಿ ಈ ವಿಶಿಷ್ಟ ಗುಹೆಗಳನ್ನು ಕ್ರಿ.ಶ. ೮೫೦-೮೫೧ರಲ್ಲಿ ನಿರ್ಮಿಸಿದ.

ಇಂದು ಗೋವಾದಲ್ಲಿ ಬೌದ್ಧ ಧರ್ಮದ (ಮತ್ತು ಕದಂಬರ ಆಳ್ವಿಕೆಯ ಮೊದಲ ದಿನಗಳಲ್ಲಿ ತನ್ನ ಅಸ್ತಿತ್ವ ತೋರಲು ಯತ್ನಿಸಿದ್ದ ಜೈನ ಧರ್ಮದ) ಕೇವಲ ಕೆಲವೇ ಕುರುಹುಗಳು ಕಾಣಸಿಗುತ್ತವೆ. ಕೊಂಕಣಿಯಲ್ಲಿ ನಗ್ಗೊ (ನಗ್ನ) ಬೇತಾಳ ಎಂದು

ಕರೆಯಲ್ಪಡುವ ನಗ್ನ ಬೇತಾಳನ ವಿಗ್ರಹ ಪ್ರಾಯಶಃ ಬುದ್ಧನ ಅಥವಾ ಜಿನ ತೀರ್ಥಂಕರನೊಬ್ಬನ ವಿಗ್ರಹವಾಗಿದ್ದಿರಬೇಕು. ಗೋವಾದ ಕನಕೋಣ ಮಹಾಲ್‌ನ ಲೋಲ್ಯೆಂಯಲ್ಲಿನ ನಿರಂಕಾರ ದೇಗುಲ ವಿಗ್ರಹ ರಹಿತವಿದೆ. ಬಹುತೇಕ ಬೌದ್ಧರ, ಜೈನರ ವಿಗ್ರಹಗಳನ್ನು ಕ್ರಮೇಣ ಶಿವನ ವಿಗ್ರಹಗಳನ್ನಾಗಿ ಪರಿವರ್ತಿಸಿದ್ದಿರಬೇಕು.

೨. ಗೋವಾದ ಅಧಿರಾಜರು

ಕೊಂಕಣ ಮತ್ತು ಗೋವಾ ಮೌರ್ಯರ ಸಾಮ್ರಾಜ್ಯದೊಂದಿಗೆ ಸೇರಲ್ಪಟ್ಟಿದ್ದವು. ಅವು ಆಂಧ್ರ ಭೃತ್ಯ ಶಾತವಾಹನರ, ಬಾದಾಮಿಯ ಪಡುವಣ ಚಾಲುಕ್ಯರ, ರಾಷ್ಟ್ರಕೂಟದ, ಕಲ್ಯಾಣಿಯ ಉತ್ತರ ಚಾಲುಕ್ಯರ, ಹೊಯ್ಸಳರ (ಅತ್ಯಲ್ಪಕಾಲ) ಮತ್ತೆ ದೇವಗಿರಿಯ ಯಾದವರ ಸಾಮ್ರಾಜ್ಯದ ಭಾಗಗಳಾಗಿಯೂ ಉಳಿದಿದ್ದವು.

ಕ್ರಿ.ಪೂ. ಮೊದಲನೆಯ ಶತಮಾನದಲ್ಲಿ ಆಂಧ್ರ ಭೃತ್ಯ ಶಾತವಾಹನರು ಗೋದಾವರಿ ತೀರದ ಪೈಠಣದಿಂದ ದಕ್ಷಿಣ ಮಹಾರಾಷ್ಟ್ರ ಮತ್ತು ದಕ್ಷಿಣ ಕೊಂಕಣವನ್ನು ಆಳತೊಡಗಿದ್ದರು. ಪುಲುಮಯಿಯ ಆಳ್ವಿಕೆಯ ಕಾಲ ಪಶ್ಚಿಮ ಭಾರತಕ್ಕೆ ದಂಡೆತ್ತಿ ಬಂದ ಶಕ ಮತ್ತು ಯವನ (ಕ್ಷತ್ರಪರೆಂದಾಗಿ ಪರಿಚಿತರಾದವರು)ರನ್ನು ಹೊಡೆದೋಡಿಸಿದ ಗೌತಮಿ ಪುತ್ರ ಶತಕರ್ಣಿ, ಕ್ಷತ್ರಪ ನಹೋದಣನನ್ನು ಕೊಂದಿಕ್ಕಿ ಕೊಂಕಣವನ್ನು ಇಪ್ಪತ್ತೈದು ವರ್ಷಗಳ ಕಾಲ ಆಳಿದ.

ಕ್ರಿ. ಶ. ೧೪೫ರ ಸುಮಾರಿಗೆ ಕ್ಷತ್ರಪರುದ್ರಮಾನ ಶಾತವಾಹನರನ್ನು ಸೋಲಿಸಿ ಕೊಂಕಣವನ್ನಾಳ ತೊಡಗಿದ್ದ. ಉತ್ತರಕಾಲೀನ ಕ್ಷತ್ರಪರ ಆಳ್ವಿಕೆಯ ಕಾಲ ಅವರ ಅಮಾತ್ಯ ರಾಜ್ಯವನ್ನು ಕಸಿದುಕೊಂಡು ಅಭಿರ್ ರಾಜ್ಯ ಸ್ಥಾಪಿಸಿದ್ದುದನ್ನು ಜುನಾಗಡದಲ್ಲಿನ ಕ್ರಿ.ಶ. ೧೫೦ರ ಶಿಲಾಶಾಸನ ಕಂಡರಿಯ ಬಹುದಾಗಿದೆ. ನಾಸಿಕದ ಹತ್ತನೆಯ ಕ್ರಮಾಂಕದ ಗುಹೆಯಲ್ಲಿನ, ಕ್ರಿ.ಶ.೧೭೮ನೆಯದ್ದೆಂದು ಭಾವಿಸಲಾದ ಶಿಲಾಶಾಸನದಲ್ಲಿ ಉಲ್ಲೇಖಿಸಲ್ಪಟ್ಟ ಈಶ್ವರ ಸೇನ, ಅಭಿರ್ ರಾಜ್ಯದ ಮೊದಲ ಅರಸನಾಗಿದ್ದಿರಬೇಕು.

೩. ಬನವಾಸಿಯ ಕದಂಬರು

ವೇದಾಧ್ಯಯನಕ್ಕಾಗಿ ಕಾಂಚೀಪುರಕ್ಕೆ ಹೋಗಿ, ಕ್ಷಾತ್ರೋದ್ಯೋಗವನ್ನವಲಂಬಿಸಿ, ಮಯೂರ ಶರ್ಮನೆಂಬ ಹೆಸರು ಕೊಂಡು ಸುಪರ್ವತದ (ಕರ್ನೂಲು ಜಿಲ್ಲೆಯ ಶ್ರೀಶೈಲಂ) ದುರ್ಗಮ ಆರಣ್ಯದಲ್ಲಿ ನೆಲೆಗೊಂಡ ಈತ ಈ ರಾಜಮನೆತನದ ಸ್ಥಾಪಕ. ಆತನನ್ನು ಸೋಲಿಸಲು ಮಾಡಿದ್ದ ಯತ್ನಗಳು ವಿಫಲವಾಗಿದ್ದವು. ಪಲ್ಲವ ಅರಸರ ಆಶ್ರಯದಲ್ಲಿದ್ದ ಈತ ದಂಡನಾಯಕನೊಬ್ಬನಾಗಿದ್ದ. ಸಮುದ್ರಗುಪ್ತ ದಂಡೆತ್ತಿ ಬಂದಾಗ ಪಲ್ಲವ ರಾಜ್ಯದಲ್ಲಿ ಗೊಂದಲವಿತ್ತು. ಅದರ ಪ್ರಯೋಜನಕೊಂಡು ಈತ ತನ್ನದೇ ಆದೊಂದು ರಾಜ್ಯವನ್ನು ಸ್ಥಾಪಿಸಿದ. ಈ ರಾಜಮನೆತನದ ಅರಸರು ವೈಜಯಂತಿ ಅಥವಾ ಬನವಾಸಿ (ಉತ್ತರ ಕನ್ನಡದ ಶಿರ್ಸಿ ತಾಲೂಕು) ಯಿಂದ ಮೈಸೂರಿನ ಪಶ್ಚಿಮ ಭಾಗವನ್ನು, ಹೈಗ (ಉತ್ತರ ಕನ್ನಡ), ತುಳುವ (ದಕ್ಷಿಣ ಕನ್ನಡ) ಮತ್ತು ಗೋಮಾಂತಕದ ಭಾಗವೊಂದನ್ನು ಆಳಿದರು. ಚಾಲುಕ್ಯರ ಮೊದಲನೆಯ ಕೀರ್ತಿವರ್ಮ ಅವರನ್ನು ಸೋಲಿಸಿ ತನ್ನ ಮಾಂಡಲಿಕರಾಗುವಂತೆ ಒತ್ತರಿಸಿದ.

೪. ಬಾದಾಮಿಯ ಪಡುವಣ ಚಾಲುಕ್ಯರು (ಕ್ರಿ. ಶ. ೫೫೦-೭೫೪)

ಡಾ. ಜೆ. ಎಫ್. ಫ್ಲೀಟ್ ಇವರ ಮೇರೆಗೆ ಈ ರಾಜಮನೆತನದ ಮೊತ್ತ ಮೊದಲ ಪ್ರಸಿದ್ಧ ಅರಸು ಜಯಸಿಂಹ, ರಾಷ್ಟ್ರಕೂಟರನ್ನು ಸೋಲಿಸಿ ಬಿಜಾಪುರದ ಬಳಿಯ ಪ್ರಾಂತವನ್ನಾಳತೊಡಗಿದ್ದ. ಆತ ಬನವಾಸಿಯ ಕದಂಬರ ಸಾಮಂತನಾಗಿದ್ದ. ಮೊದಲನೆಯ ಪುಲಕೇಶಿ ಈ ರಾಜಮನೆತನದ ನಿಜವಾದ ಮೂಲಪುರುಷ (೫೫೦-೫೬೭). ಕದಂಬರ ಪರಿವರ್ಮನ ದೌರ್ಬಲ್ಯದ ಪ್ರಯೋಜನಕೊಂಡು ಆತ ಉತ್ತರ ಪ್ರಾಂತದ ಸ್ವಾತಂತ್ರ್ಯ ಸಾರಿದ. ಮತ್ತು ವಾತಾಪಿ (ಬಿಜಾಪುರ ಜಿಲ್ಲೆಯಲ್ಲಿನ ಬಾದಾಮಿ) ಯನ್ನು ಗೆದ್ದು ಅದನ್ನು ತನ್ನ ರಾಜಧಾನಿಯನ್ನಾಗಿ ಮಾಡಿದ. ಆತನ ಉತ್ತರಾಧಿಕಾರಿ ಮೊದಲನೆಯ ಕೀರ್ತಿವರ್ಮ (೫೬೭-೫೯೭) ಬನವಾಸಿಯ ಕದಂಬ, ಮೌರ್ಯ, ಕೊಂಕಣದ ನಲ ಮುಂತಾದವರನ್ನು ಸೋಲಿಸಿದ. ಈ ವಿಜಯವನ್ನು ಬಿಜಾಪುರ ಜಿಲ್ಲೆಯ ಐಹೊಳೆಯ ಶಿಲಾಶಾಸನಗಳಲ್ಲಿ ನಮೂದಿಸಲಾಗಿದೆ. ಆತನ ಮೊಮ್ಮಗ, ಎರಡನೆಯ ಪುಲಕೇಶಿ ಅವರ ರಾಜಧಾನಿಯನ್ನಾಕ್ರಮಿಸಿ ಘಾರಾಪುರಿಯನ್ನು ನಾಶಮಾಡಿದ. ಆತ ತನ್ನ ರಾಜಮನೆತನದಲ್ಲಿನ ಅತಿ ಪ್ರಸಿದ್ಧ ಅರಸು. ಪರ್ಷಿಯಾದ ಅರಸು ಎರಡನೆಯ ಖುಸ್ರು ಆತನಿಗೆ ಓಲೆಯೊಂದಿಗೆ ಬಹುಮಾನಗಳನ್ನು ಕಳುಹಿಸಿದ್ದ. ಆತ ಪರ್ಷಿಯಾಕ್ಕೆ ರಾಜದೂತನೊಬ್ಬನನ್ನು ಕಳುಹಿಸಿದ ; ಪರ್ಷಿಯಾದೊಂದಿಗಿನ ಈ ಸ್ನೇಹಾಚಾರದ ಸಂಬಂಧವನ್ನು ಮೊದಲ ಪುಲಕೇಶಿಯ ಮೂಲದ ರಾಜಧಾನಿಯ ಬಳಿಯ ಅಜಂತಾ ಗುಹೆಗಳಲ್ಲಿನ ಭಿತ್ತಿಚಿತ್ರಗಳಲ್ಲಿ ಬಣ್ಣಿಸಲಾಗಿದೆ. ಹ್ಯುಯೆನ್ ತ್ಸಾಂಗ್ ನಾಸಿಕ (ಅಥವಾ ನಾಸಿಕದ ಬಳಿಯ) ದಲ್ಲಿನ ಆತನ ರಾಜ ಸಭೆಯನ್ನು ಸಂದರ್ಶಿಸಿದ್ದ. ಈಗ ದೊರಕಿರುವ ದಾನ ಪತ್ರಗಳಿಂದ ಗೋವಾದ ಬಲ್ಲಿ, ಸತಾರಿ, ಪೆಡ್ನೆ, ಸಾಷಷ್ಟಿ ಮತ್ತು ಸಾಂಗೆ 'ಮಹಾಲು' ಗಳು ಚಾಲುಕ್ಯರ ರಾಜ್ಯದೊಂದಿಗೆ ಸೇರಿದ್ದವೆಂಬುದನ್ನರಿಯಬಹುದು. ಎರಡನೆಯ ಕೀರ್ತಿವರ್ಮನ ಕಾಲದಲ್ಲಿ ರಾಜಮನೆತನ ಅತಿ ದುರ್ಬಲವಾಯಿತು. ಸಾಮಂತರಲ್ಲೊಬ್ಬನಿದ್ದ ರಾಷ್ಟ್ರಕೂಟರ ದಂತಿದುರ್ಗ ೭೫೩ರಲ್ಲಿ ಚಾಲುಕ್ಯ ಸಾಮ್ರಾಜ್ಯವನ್ನುರುಳಿಸಿದ.

೫. ರಾಷ್ಟ್ರಕೂಟರು (೭೫೩-೯೭೩)

ದಂತಿದುರ್ಗನ ಉತ್ತರಾಧಿಕಾರಿ ಮತ್ತು ಆತನ ಸೋದರ ಮಾವನಿದ್ದ ಮೊದಲನೆಯ ಕೃಷ್ಣ (೭೬೦-೭೭೫), ೭೫೪ರಲ್ಲಿ ತಾನು ಕಳೆದುಕೊಂಡ ರಾಜ್ಯವನ್ನು ಮರಳಿ ಗಳಿಸಲಾಗಿ ಯತ್ನಿಸಿದ ಕೀರ್ತಿವರ್ಮನನ್ನು ಸೋಲಿಸಿದ (ಪ್ರಾಯಶಃ ಆತ ಯುದ್ಧದಲ್ಲಿ ಸಾವನ್ನಪ್ಪಿರಬೇಕು). ೭೬೦ರಲ್ಲಿ ಎಲ್ಲೋರಾ (ವೇರುಳ) ದಲ್ಲಿ ಆತ ಅದ್ಭುತವಾದ ಕೈಲಾಸ ದೇವಾಲಯದ ನಿರ್ಮಾಣಕಾರ್ಯಕ್ಕೆ ತೊಡಗಿದ. ದಕ್ಷಿಣ ಶಿಲಾಹರ ರಾಜಮನೆತನದ ಸ್ಥಾಪಕ ಶಣಫುಲ್ಲ ಆತನ ಕೃಪೆಗೆ ಪಾತ್ರನಾಗಿ ಸಾಮಂತನಾದ ' ಈ ರಾಜಮನೆತನ ಮೂರನೆಯ ಗೋವಿಂದ (೭೯೦-೮೧೫), ಮೊದಲನೆಯ ಅಮೋಘವರ್ಷ (೮೧೫-೮೭೭) ಮತ್ತು ಮೂರನೆಯ ಕೃಷ್ಣರ (೯೧೫) ಆಡಳಿತೆಯ ದಿನಗಳಲ್ಲಿ ಶಕ್ತಿಶಾಲಿಯಾಯಿತು. ಮೊದಲನೆಯ ಅಮೋಘವರ್ಷ ರಾಜಧಾನಿಯನ್ನು ನಾಸಿಕದಿಂದ ಮಾನ್ಯಖೇಟ (ನಿಝಾಮನ ರಾಜ್ಯದಲ್ಲಿನ

ಮಾಳ ಖೇಡ)ಕ್ಕೆ ಸ್ಥಳಾಂತರಿಸಿದ. ಕನ್ಹೇರಿಯಲ್ಲಿನ ಎರಡು ಶಿಲಾಶಾಸನಗಳು, ಆತ ಕೊಂಕಣವನ್ನು ಎರಡನೆಯ ಕಾಪರ್ದಿಗೆ (ಉತ್ತರ ಶಿಲಾಹರ) ಬಹುಮಾನವಾಗಿ ಇತ್ತನೆಂದು ಹೇಳುತ್ತವೆ. ಇವು ಉತ್ತರ ಶಿಲಾಹರರು ಆತನ ಸಾಮಂತರಾಗಿದ್ದುದನ್ನು ಸೂಚಿಸುತ್ತವೆ. ಕೊನೆಯ ಅರಸು ಕಕ್ಕಳ, ಸಾಮಂತನಿದ್ದ ಚಾಲುಕ್ಯ ತೈಲಪನಿಂದ ತನ್ನ ಗದ್ದುಗೆ ಕಳೆದುಕೊಂಡ.

೬. ಕಲ್ಯಾಣದ ಉತ್ತರಕಾಲೀನ ಚಾಲುಕ್ಯರು (೯೭೩-೧೧೮೩)

ಮೊದಲನೆಯ ತೈಲಪ (೯೭೩-೯೯೭) ಕೊಂಕಣದ ಅಧಿರಾಜನಾಗಿದ್ದ. ಆತ ಬನವಾಸಿ ಪ್ರಾಂತವನ್ನು ಹಾನಗಲ್ ಕದಂಬ ರಾಜಮನೆತನದ ಸ್ಥಾಪಕ ಇರಿವ ಬೆಡಂಗ ದೇವನಿಗಿತ್ತ. ಇರಿವ ಬೆಡಂಗದೇವ ರಾಷ್ಟ್ರಕೂಟರೊಂದಿಗಿನ ಯುದ್ಧದಲ್ಲಿ ಅತಿಮಹತ್ತಿನ ಸಹಾಯ ಮಾಡಿದ್ದ.

ಆರನೆಯ ವಿಕ್ರಮಾದಿತ್ಯ (೧೦೭೬-೧೧೨೬), ಸ್ವಾತಂತ್ರ್ಯ ಸಾರಲು ಯತ್ನಿಸಿದ್ದ ಗೋವಾದ ಮೊದಲನೆಯ ಕದಂಬ ಜಯಕೇಶಿ ಮಣಿಯುವಂತೆ ಮಾಡಿದ್ದ. 'ವಿಕ್ರಮಾಂಕ ದೇವಚರಿತ'ದ ಗ್ರಂಥಕರ್ತ ಬಿಲ್ಹಣ ಮತ್ತು ಹಿಂದೂ ನ್ಯಾಯಶಾಸ್ತ್ರಕ್ಕೆ ಸಂಬಂಧಿಸಿದ ಪ್ರಮಾಣ ಗ್ರಂಥ 'ಮಿತಾಕ್ಷರ'ದ ಲೇಖಕ, ಪ್ರಸಿದ್ಧ ನ್ಯಾಯ ಶಾಸ್ತ್ರಜ್ಞ ವಿಜ್ಞಾನೇಶ್ವರ ಆತನ ಆಸ್ಥಾನದಲ್ಲಿದ್ದರು. ಕರ್ಹಾಡಿನ ಶಿಲಾಹರರ ಅಪೂರ್ವ ಸೌಂದರ್ಯದ ರಾಜಕುಮಾರಿಯೊಬ್ಬಳು ಆತನನ್ನು ತಾನಾಗಿ ವರಿಸಿದ್ದಳೆನ್ನುತ್ತಾರೆ.

ಎರಡನೆಯ ತೈಲಪನ ಆಳ್ವಿಕೆಯ ಕಾಲದಲ್ಲಿ ಆತನ ರಾಜ್ಯವನ್ನು, ಕಲ್ಯಾಣ (ಹೈದರಾಬಾದಿನ ವಾಯುವ್ಯಕ್ಕೆ, ಸುಮಾರು ನೂರು ಮೈಲುಗಳ ಅಂತರದಲ್ಲಿರುವ ಸಧ್ಯದ ಕಲ್ಯಾಣಿ) ದಲ್ಲಿ ಕಲಚೂರಿ ರಾಜಮನೆತನ ಸ್ಥಾಪಿಸಿದ್ದ ಸೇನಾಧಿಪತಿ ಬಿಜ್ಜಳ ಅಪಹರಿಸಿದ. ೧೧೮೩ರಲ್ಲಿ ಹೊಯ್ಸಳರ ಎರಡನೆಯ ವೀರಬಲ್ಲಾಳ ಈ ರಾಜಮನೆತನವನ್ನು ನಜ್ಜುಗುಜ್ಜಾಗಿಸಿದ.

ಎರಡನೆಯ ತೈಲಪನ ಪುತ್ರ, ನಾಲ್ಕನೆಯ ಸೋಮೇಶ್ವರ ಚಾಲುಕ್ಯ ರಾಜ್ಯದ ಸಣ್ಣ ಭಾಗವನ್ನು ಮರಳಿ ಪಡೆದ. ಮುಂದೆ ಅತ್ಯಲ್ಪ ಕಾಲದಲ್ಲೇ ಆತ ಎರಡನೆಯ ವೀರಬಲ್ಲಾಳನಿಂದ ತನ್ನ ಕೊನೆಕಂಡ. ಚಾಲುಕ್ಯರ ರಾಜ್ಯ ಹೊಯ್ಸಳ ಮತ್ತು ಯಾದವರ ಕೈಸೇರಿತು.

೭. ದ್ವಾರಸಮುದ್ರದ ಹೊಯ್ಸಳರು (೧೦೦೪-೧೩೪೬)

ಚಾಲುಕ್ಯರ ಅಳಿವಿನ ಬಳಿಕ ದಖ್ಖಣದಲ್ಲಿ ಪರಮಾಧಿಕಾರದ ಕುರಿತಾಗಿ ಹೊಯ್ಸಳ ಮತ್ತು ಯಾದವರ ನಡುವೆ ದೀರ್ಘಕಾಲ ಹೋರಾಟ ನಡೆದಿತ್ತು.

ಹೊಯ್ಸಳ ರಾಜಮನೆತನ ೧೦೦೪ರಲ್ಲಿ ಸ್ಥಾಪಿಸಲ್ಪಟ್ಟಿತು. ಅದು ೧೧೧೭ರಲ್ಲಿ ರಾಮಾನುಜರ ಮೂಲಕ ಜಿನಧರ್ಮದಿಂದ ಧರ್ಮಾಂತರಗೊಂಡು ವಿಷ್ಣುವರ್ಧನನೆಂದು ಕರೆಯಲ್ಪಟ್ಟಿದ್ದ ಬಿಟ್ಟಿಗನ ಕಾಲ (೧೧೧೧-೧೧೪೧)ದಲ್ಲಿ ಪ್ರಸಿದ್ಧಿಗೆ ಬಂದಿತು. ಮೂಲತಃ ಆತ ಆರನೆಯ ಚಾಲುಕ್ಯ ವಿಕ್ರಮಾದಿತ್ಯನ ಸೇನಾಧಿಪತಿಯಾಗಿದ್ದ. ಎರಡನೆಯ ಶತಮಾನ ಮೊದಲ್ಗೊಂಡು ತಲಕಾಡಿನ ರಾಜಧಾನಿಯಿಂದ ಆದರ ಪಶ್ಚಿಮದ ಮತ್ತು ಮೈಸೂರಿನ ದೊಡ್ಡ

ಭಾಗವನ್ನಾಳುತ್ತಿದ್ದ ಆತ ೧೧೧೬ರಲ್ಲಿ ಜಿನಧರ್ಮದ ಆಶ್ರಯದಾತರಿದ್ದ ಗಂಗರ ಪ್ರದೇಶವನ್ನು ವಶಪಡಿಸಿಕೊಂಡ; ಬೆಳಗಾಂ ಮತ್ತು ಧಾರ್ವಾರ ಪ್ರಾಂತಗಳನ್ನು ವಶಪಡಿಸಿ ಅವನ್ನು ಆರನೆಯ ವಿಕ್ರಮಾದಿತ್ಯನ ಸಾಮಂತನ ರೂಪದಲ್ಲಿ ಆಳಿದ.

ಎರಡನೆಯ ವೀರಬಲ್ಲಾಳ (೧೧೭೩-೧೨೨೦) ಮೊದಲ ಸ್ವತಂತ್ರ ಅರಸನಾಗಿದ್ದ. ಚಾಲುಕ್ಯರನ್ನು ಸೋಲಿಸಿದ ಈತ ಉತ್ತರಕ್ಕೆ ಸಾಗಿ, ಕೆಲವೊಂದು ವರ್ಷಗಳ ಕಠೋರ ಹೋರಾಟದ ಬಳಿಕ ಎರಡನೆಯ ಯಾದವ ಭಿಲ್ಲಮನನ್ನು ಸೋಲಿಸಿದ. ಭಿಲ್ಲಮ ೧೧೯೧ರಲ್ಲಿನ ಗದಗದ ಬಳಿಯ ಸೊರತೂರಿನ ಘೋರ ಕದನವೊಂದರಲ್ಲಿ ಕೊಲ್ಲಲ್ಪಟ್ಟ. ಅನಂತರ ಎರಡನೆಯ ವೀರಬಲ್ಲಾಳ ಗೋವಾದ ಮೇಲೆ ತನ್ನ ಸಾರ್ವಭೌಮತ್ವ ಸ್ಥಾಪಿಸಿದ. ಆತನ ಆಳ್ವಿಕೆಯ ಕಾಲದಲ್ಲಿ ಹೊಯ್ಸಳ ರಾಜ್ಯ ತನ್ನ ಚರಮಸೀಮೆ ಕಂಡಿತು.

ನಂತರದ ಮೂರು ಅರಸರು ಪಶ್ಚಿಮ ಮೈಸೂರಿನಲ್ಲಿನ ಗಂಗಾವತಿಯ ಹೊರತು ತಮ್ಮ ಎಲ್ಲೊಂದು ಪ್ರಾಂತಗಳನ್ನು ಕಳೆದುಕೊಂಡರು. ೧೨೭೬ರಲ್ಲಿ ದಂಡೆತ್ತಿ ಬಂದ ಯಾದವರು ದ್ವಾರ ಸಮುದ್ರವನ್ನು ಸುಲಿದರು.

ಮೂರನೆಯ ವೀರಬಲ್ಲಾಳ ೧೩೩೦-೧೩೩೧ರಲ್ಲಿ ಬನವಾಸಿಯ ಭಾಗವೊಂದನ್ನು ಆಕ್ರಮಿಸಿದ. ಆದರೆ ಮಲ್ಲಿಕ್‌ಕಾಫರ್‌ನ ದಂಡಯಾತ್ರೆಯ ಕಾಲ ಆತನಿಗೆ ತನ್ನ ಸೇನೆಯನ್ನು ಹಿಂದಕ್ಕೆಳೆದುಕೊಳ್ಳಬೇಕಾಯಿತು. ೧೩೪೨ರಲ್ಲಿ ಆತ ಮದುರೆಯ ಸುಲ್ತಾನನ ವಿರುದ್ಧ ದಂಡೆತ್ತಿ ಹೋಗಿ ತನ್ನ ದುರ್ಲಕ್ಷ್ಯದ ಫಲವಾಗಿ ಸೆರೆ ಸಿಕ್ಕಿಬಿದ್ದ. ಜೀವಂತ ಚರ್ಮ ಸುಲಿದು ಆತನ ಕಳೇಬರವನ್ನು ಹುಲ್ಲಿನಿಂದ ತುಂಬಿ ಅಲ್ಲಿನ ಗೋಡೆಯೊಂದರಲ್ಲಿ ತೂಗಾಡಿಸಿದರು. ಆತನ ಪುತ್ರ ನಾಲ್ಕನೆಯ ವೀರಬಲ್ಲಾಳ ೧೩೪೬ರ ತನಕ ರಾಜ್ಯವನ್ನಾಳಿದ. ಮಾತ್ರ ಅದು ಆತನೊಂದಿಗೆ ಸಾವನ್ನಪ್ಪಿತು.

೮. ದೇವಗಿರಿಯ ಯಾದವರು (೧೧೮೭-೧೩೧೨)

ಮೂಲತಃ ಯಾದವರು ಕಲ್ಯಾಣಿಯ ಚಾಲುಕ್ಯರ ಸಾಮಂತರಾಗಿದ್ದರು. ಎರಡನೆಯ ಭಿಲ್ಲಮ (೧೧೮೭-೧೧೯೧) ನಾಲ್ಕನೆಯ ವಿಕ್ರಮಾದಿತ್ಯನ ಸೇನಾಧಿಪತಿಯಾಗಿದ್ದ. ನಾಲ್ಕನೆಯ ಸೋಮೇಶ್ವರನ ದುರ್ಬಲ ರಾಜ್ಯಾಡಳಿತೆಯ ದಿನಗಳಲ್ಲಿ ಆತ ಸ್ವಾತಂತ್ರ್ಯ ಸಾರಿದ. ಮತ್ತೆ ಕಲ್ಯಾಣಿಯ ಸಮೇತ ಚಾಲುಕ್ಯ ಸಾಮ್ರಾಜ್ಯದ ಉತ್ತರ ಮತ್ತು ಪೂರ್ವ ಭಾಗಗಳನ್ನಾಳಿದ. ದಕ್ಷಿಣದ ಮೇಲಣ ಪ್ರಭುತ್ವವನ್ನಪೇಕ್ಷಿಸಿ ದಕ್ಷಿಣಕ್ಕೆ ತೆರಳಿದ. ಪರಾಜಿತನಾದ ಆತ ೧೧೯೧ರಲ್ಲಿ ಸೊರತೂರಿನ ಸಂಗ್ರಾಮದಲ್ಲಿ ಕೊಲ್ಲಲ್ಪಟ್ಟ.

ಆತನ ಮೊಮ್ಮಗ ಸಿಂಘಣ (೧೨೧೦-೧೨೪೭) ಸ್ಥಿರಾಧಿಕಾರ ಸ್ಥಾಪಿಸಿ ದೇವಗಿರಿ (ದೌಲತಾಬಾದ್) ನ್ನು ರಾಜಧಾನಿಯನ್ನಾಗಿ ಮಾಡಿದ. ಗುಜರಾತ, ದಕ್ಷಿಣ ಕೊಂಕಣಗಳಿಗೆ ದಾಳಿಯಿಕ್ಕಿ ದಕ್ಷಿಣದ ಸಾಮ್ರಾಟನಾದ. ಎರಡನೆಯ ವೀರಬಲ್ಲಾಳನ ಸಾವಿನ ಪ್ರಯೋಜನಕೊಂಡ ಈತ ಕೃಷ್ಣಾ ಮತ್ತು ಮಲಪ್ರಭಾಗಳ ನಡುವಣ ಪ್ರಾಂತವನ್ನು ಹೊಯ್ಸಳರಿಂದ ಪುನಃ ಪಡೆದುಕೊಂಡ. ಅನಂತರ ಮಾಯಿದೇವ ಪಂಡಿತನನ್ನು ಬನವಾಸಿಯ ರಾಜ್ಯಪಾಲನನ್ನಾಗಿ ನೇಮಿಸಿದ. ಆತನ ಸೇನಾಧಿಪತಿ ಬಿಚ್ಚ (ಬಿಚ್ಚಣ್ಣ) ೧೨೩೮ರಲ್ಲಿ ಗೋವಾವನ್ನು ಗೆದ್ದುಕೊಂಡ.

ಮಹಾದೇವ (೧೨೦೦-೧೨೭೧) ಉತ್ತರ ಕೊಂಕಣಕ್ಕೆ ದಂಡೆತ್ತಿ ಹೋಗಿ ವಿಜಯಿಯಾದ. ಆತನ ಉತ್ತರಾಧಿಕಾರಿ ರಾಮಚಂದ್ರ (ಉಪನಾಮ ರಾಮದೇವ) (೧೨೭೧-೧೩೦೯) ನ ಸೈನ್ಯ ದ್ವಾರ ಸಮುದ್ರವನ್ನು ಸುಲಿಯಿತು. ಹಿಂದೂ ಧರ್ಮಕ್ಕೆ (ಹಿಂದೂಧರ್ಮಶಾಸ್ತ್ರ) ಸಂಬಂಧಿಸಿದ್ದ ಹಲವೊಂದು ಕೃತಿಗಳ ಸಂಕಲನ ಮಾಡಿದ್ದ ಹೇಮಾದ್ರಿ (ಉಪನಾಮ ಹೇಮಾಡಿ ಪಂತ) ಗ್ರಂಥವೊಂದರ ಪೀಠಿಕೆಯಲ್ಲಿ ಈತನ ರಾಜಮನೆತನಕ್ಕೆ ಸಂಬಂಧಿಸಿದ ಇತಿಹಾಸದ ನಿರೂಪಣೆ ಮಾಡಿರುತ್ತಾನೆ.

ಮರಾಠಿ ಬರವಣಿಗೆಯಲ್ಲಿ ಮೋಡಿಯನ್ನು ಬಳಕೆಗೆ ತಂದವನೆಂದು ನಂಬಲಾಗುವ ಈತ ಮಹಾದೇವ ಮತ್ತೆ ರಾಮಚಂದ್ರನ ಆಸ್ಥಾನದಲ್ಲಿ ಸಚಿವನಾಗಿದ್ದ. ಭಗವದ್ಗೀತೆಯ ಕುರಿತು ಭಾಷ್ಯ ಬರೆದ ಮಹಾರಾಷ್ಟ್ರದ ಖ್ಯಾತ ನಾಮ ಸಂತ ಜ್ಞಾನೇಶ್ವರ (ಧ್ಯಾನದೇವ) ರಾಮಚಂದ್ರನ ಆಳ್ವಿಕೆಯ ಕಾಲ ಗೋದಾವರಿಯ ತೀರದಲ್ಲಿ ವಾಸಮಾಡಿಕೊಂಡಿದ್ದ.

ರಾಮಚಂದ್ರನ ಆಳ್ವಿಕೆಯ ಕಾಲ, ೧೨೯೪ರಲ್ಲಿ ಅಲ್ಲಾ-ವುದ್-ದಿನ್ ಖಿಲ್ಜಿ ಆತನ ರಾಜ್ಯಕ್ಕೆ ದಾಳಿಯಿಕ್ಕಿ ದೇವಗಿರಿಯನ್ನು ವಶಪಡಿಸಿಕೊಂಡ. ಅದರೊಂದಿಗೆ ಎಲ್ಲಿಚ್‌ಪುರವನ್ನೂ ಸೇರಿಸಿಕೊಂಡ. ಕೆಲವೊಂದು ವರ್ಷಗಳ ಕಾಲ ಕಪ್ಪ ಕೊಡಲು ತಪ್ಪಿದಾಗ ಮಲ್ಲಿಕ್‌ಕಾಫರ್ ೧೩೦೭ರಲ್ಲಿ ಆತನ ರಾಜ್ಯಕ್ಕೆ ದಾಳಿಯಿಕ್ಕಿದ. ಮತ್ತೆ ಆತನನ್ನು ದಿಲ್ಲಿಗೆ ಕೊಂಡುಹೋದ. ಅಲ್ಲಿ ಆತ ಅಲ್ಲಾ-ವುದ್-ದಿನ್ ನಿಗೆ ಕಪ್ಪ ಕೊಡಲು ಒಪ್ಪಿಕೊಂಡ.

ರಾಮಚಂದ್ರನ ಪುತ್ರ ಶಂಕರ ರಾಜ್ಯವಾಳುತ್ತಿದ್ದಾಗ ಅಳಿಯ ಹರಿಪಾಲ ಬಂಡಾಯ ಹೂಡಿದ. ೧೩೯೦ರಲ್ಲಿ ಮಲ್ಲಿಕ್‌ಕಾಫರ್ ಮತ್ತೆ ದಖ್ಖಣಕ್ಕೆ ದಂಡೆತ್ತಿ ಬಂದ. ಆತ ಶಂಕರನನ್ನು ಸೋಲಿಸಿ, ಚರ್ಮ ಸುಲಿದು ಕೊಂದಿಕ್ಕಿದ. ಮತ್ತೆ ಹರಿಪಾಲನ ತಲೆ ಕತ್ತರಿಸಿದ. ಯಾದವರ ರಾಜಮನೆತನ ಈ ರೀತಿಯಲ್ಲಿ ಕೊನೆಗಂಡಿತು. ಅವರ ರಾಜ ಚಿಹ್ನೆ ಸ್ವರ್ಣ ಗರುಡವಿತ್ತು.

೯. ವಾಸ್ತವಿಕವಾಗಿ ಗೋವಾವನ್ನು ಆಳಿದ ರಾಜಮನೆತನಗಳು

ಕನ್ನಡ ನುಡಿಯುವ 'ಕೊಡಿಯ'ರ ಅಥವಾ 'ಕೊಟ್ಟ'ರ ಮನೆತನ ಗೋವಾವನ್ನಾಳಿದ ಮೊದಲ ರಾಜಮನೆತನವೆಂದೆನ್ನಲಾಗುತ್ತದೆ.

ಕೊಂಕಣದ ಮೌರ್ಯರೆಂದು ಕರೆಯಲ್ಪಡುತ್ತಿದ್ದ ಸ್ಥಾನೀಯ ರಾಜಮನೆತನವೊಂದು ಐದನೆಯ ಮತ್ತು ಆರನೆಯ ಶತಮಾನಗಳಲ್ಲಿ ಕೊಂಕಣ ಮತ್ತು ಗೋವಾನನ್ನು ತಮ್ಮ ರಾಜಧಾನಿಯಿದ್ದ ಘಾರಾಪುರಿ (ಎಲಿಫೆಂಟಾ)ಯಿಂದ ಆಳಿಕೊಂಡಿತ್ತು. ಪಶ್ಚಿಮ ಚಾಲುಕ್ಯರ ಮೊದಲನೆಯ ಕೀರ್ತಿವರ್ಮ ಅವರನ್ನು ಸೋಲಿಸಿದ. ಆತನ ಪುತ್ರ ಮೊದಲನೆಯ ಪುಲಿಕೇಶಿ ಅವರ ರಾಜಧಾನಿಯನ್ನು ನಾಶಪಡಿಸಿ ರಾಜವಂಶವೊಂದರ ಸಮಾಪ್ತಿ ಮಾಡಿದ.

೧೦. ಗೋವಾದ ಶಿಲಾಹರರು (೭೬೫-೧೦೦೮)

ಶಿಲಾಹರರ ಮೂರು ಮನೆತನಗಳಿದ್ದುವು [೩]. ಅವುಗಳಲ್ಲೊಂದು ರತ್ನಾಗಿರಿ ಮತ್ತು ಉತ್ತರ ಕೊಂಕಣದಲ್ಲಿನ ಕೊಲಾಬಾ ಜಿಲ್ಲೆಯ ಭಾಗವೊಂದನ್ನು ಆಳಿಕೊಂಡಿತ್ತು. ಇನ್ನೊಂದು ದಕ್ಷಿಣ ಕೊಂಕಣವನ್ನು, ಮಗುದೊಂದು ಕರ್ಹಾಡ (ಸಧ್ಯದ ಕೊಲ್ಹಾಪುರ, ಮೀರಜ ಸಂಸ್ಥಾನ ಮತ್ತು ಸತಾರಾ ಜಿಲ್ಲೆಯಲ್ಲಿನ ಕರ್ಹಾಡದ ಭಾಗ) ವನ್ನು ಸುಮಾರು ಇನ್ನೂರೈವತ್ತು ವರ್ಷಗಳ

ಕಾಲ (೯೭೩ರಿಂದ ೧೨೧೩ರ ವರೆಗೆ) ಆಳಿಕೊಂಡಿತ್ತು. ಕೊನೆಯ ಅರಸು ಭೋಜ, ಸಿಂಘಣನಿಂದ ಸೋಲುಕೊಂಡ. ಆತನ ರಾಜ್ಯವನ್ನು ಯಾದವ ಸಾಮ್ರಾಜ್ಯದೊಂದಿಗೆ ಸೇರಿಸಿಕೊಳ್ಳಲಾಯಿತು.

ದಕ್ಷಿಣ ಕೊಂಕಣದ ಶಿಲಾಹರರ ಹತ್ತು ಅರಸರಿಗೆ ಸಂಬಂಧಿಸಿದ ಕೇವಲ ಕೆಲವೇ ಶಿಲಾಶಾಸನಗಳು ಇಂದು ಕಾಣಸಿಗುತ್ತವೆ. ಈ ರಾಜಮನೆತನದ ಸ್ಥಾಪಕ ಶಣಫುಲ್ಲ (೭೬೫-೭೯೫) ದಕ್ಷಿಣ ಕೊಂಕಣವನ್ನು ಗೆಲ್ಲುವಲ್ಲಿ ರಾಷ್ಟ್ರಕೂಟರ ಮೊದಲನೆಯ ಕೃಷ್ಣನಿಗೆ ಸಹಾಯ ಮಾಡಿದ. ಮತ್ತೆ ಅದರ ಭಾಗವೊಂದನ್ನು ಅವರ ಮಾಂಡಲಿಕನಾಗಿ ಆಳಿದ. ಅವರು ಮೊತ್ತ ಮೊದಲಿಗೆ ವಲ್ಲಿ ಪಟ್ಟಣ(ಬಲ್ಲಿ)ದಿಂದ ರಾಜ್ಯವಾಳಿದರು. ಆಗ ಅದು ಬಂದರವೊಂದಾಗಿತ್ತು. ಕೊನೆಯ ಅರಸು ರತ್ತ ರಾಜನ " ೧೦೦೮ರ ಬಹುಮಾನದ ಸನದಿನಿಂದ ಎರಡನೆಯ ಅರಸು ಧಮ್ಮಿರ, ವಲ್ಲಿ ಪಟ್ಟಣದ ಬಂದರವನ್ನು ಕಟ್ಟಿಸಿದ್ದುದನ್ನು ಮತ್ತು ಎಂಟನೆಯ ಅರಸು ಭೀಮ, ರಾಹು ಚಂದ್ರನನ್ನು ನುಂಗುವಂತೆ ಚಂದ್ರಪುರವನ್ನು ಗೆಳಂಕರಿಸಿದ್ದುದನ್ನು ಅರಿಯಬಹುದು. ದಕ್ಷಿಣದ ಶಿಲಾಹರರು ಚಂದ್ರಪುರದ ಕದಂಬರೊಡೆಯರೊಂದಿಗೆ ಮೈತ್ರಿಕೊಂಡಿದ್ದ ನಿಮಿತ್ತ ಅವರು ರಾಷ್ಟ್ರಕೂಟರ ದಾಸ್ಯದ ನೊಗವನ್ನು ತೊಡೆದುಹಾಕಲು ಯತ್ನಿಸಿರಬೇಕೆಂದು ಪ್ರೊ. ಜೋರ್ಜ್ ಎಮ್. ಮೊರಾಯಿಸ್ ಭಾವಿಸುತ್ತಾರೆ.

ಅವರು ಮಾಂಡಲಿಕರಾಗಿ ಉಳಿಯುವುದರಲ್ಲೇ ತೃಪ್ತಿಕೊಂಡಿದ್ದರು. ನಂತರದ ಅರಸರು ತಮ್ಮ ರಾಜಧಾನಿಯನ್ನು ವೆಲ್ಹಾ ಗೋವಾದ (ಪೋರ್ಚುಗೀಸರ ಮೊದಲ ರಾಜಧಾನಿ) ದಕ್ಷಿಣದಲ್ಲಿನ ಗೋಪಕ ಪಟ್ಟಣಕ್ಕೆ ಸ್ಥಳಾಂತರಿಸಿದರು. ಅವರು ಮೊದಲ ದಿನಗಳಲ್ಲಿ ಕೊಂಕಣದ ೯೦೦ ಗ್ರಾಮಗಳ ಮತ್ತು ಇರಿಟಿಗೆ ಪ್ರಾಂತದ ಮೇಲಕ್ಕಷ್ಟೆ ಪ್ರಭುತ್ವಕೊಂಡಿದ್ದರು. ಅಧಿಕಾರದ ಉಚ್ಛ್ರಾಯಾವಸ್ಥೆಯ ಕಾಲದಲ್ಲಿ ಅವರ ರಾಜ್ಯ ಗೋವಾದಿಂದ ಚೌಂಬೇಯ ತನಕ ವ್ಯಾಪಿಸಿಕೊಂಡಿತ್ತು.

೧೦೦೮ರ ನಂತರ ಹತ್ತನೆಯ ಮತ್ತು ಕೊನೆಯ ಅರಸು ರತ್ತರಾಜ (೯೯೫-೧೦೦೮)ನ ಕುರಿತು ಏನೊಂದೂ ತಿಳಿದು ಬರುತ್ತಿಲ್ಲ. ಕ್ರಮೇಣ ರಾಜವಂಶ ಅಳಿದುಕೊಂಡಿತು. ೯೭೩ರಿಂದ ಆತ ಚಾಲುಕ್ಯರ ಮೊದಲನೆಯ ಚಾಲುಕ್ಯತೈಲಪನ ಮಾಂಡಲಿಕನಾಗಿದ್ದಿರಬೇಕೆಂದು ಡಾ. ಎ.ಎಸ್. ಅಲ್ತೇಕರ್ ಅಭಿಪ್ರಾಯ ಪಡುತ್ತಾರೆ. ಸಹೋದರರಿಬ್ಬರೊಳಗಣ ದೀರ್ಘಕಾಲದ ಯುದ್ಧದ ಬಳಿಕ ಆತನ ರಾಜ್ಯವನ್ನು ಉತ್ತರದ ಶಿಲಾಹರರು ತಮ್ಮದರೊಂದಿಗೆ ಸೇರಿಸಿಕೊಂಡರೆಂದು ಪ್ರೊ. ಮೊರಾಯಿಸ್ ಹೇಳುತ್ತಾರೆ. ಪೂರ್ವಜರಂತಲ್ಲದೆ ಆತ ಅಖಂಡ ಕೊಂಕಣ " ವನ್ನಾಳಿದ್ದನಾಗಿ ಥಾಣಾದ ದತ್ತಿ ಪತ್ರವೊಂದರಲ್ಲಿ ಹೇಳಲಾಗಿದೆ.

೧೧. ಗೋವಾದ ಕದಂಬರು

ಬನವಾಸಿ ರಾಜ್ಯದ ಪತನದ ಬಳಿಕ ಗೋವಾದ ಕದಂಬ ರಾಜಮನೆತನದ ಶಾಖೆಯೊಂದು ಪರೋಡಾನದಿಯ ಬಲಬದಿಯ ತೀರದಲ್ಲಿನ ಚಂದ್ರಪುರ (ಚಂದರ್) ರಾಜಧಾನಿಯಿಂದ ಗೋವಾದ ಚಿಕ್ಕ ಪ್ರಾಂತವನ್ನಾಳಿಕೊಂಡಿತ್ತು. ಕಂಟಿಕಾಚಾರ್ಯ, ನಾಗವರ್ಮ, ಮೊದಲನೆಯ ಗುಹಲ್ಲದೇವ ಈ ಮೂವರು ಈ ರಾಜಮನೆತನದ ಆರಂಭದ

ಅರಸರು. ರಾಷ್ಟ್ರಕೂಟರನ್ನು ಬಗ್ಗು ಬಡೆಯುವಲ್ಲಿ ಚಾಲುಕ್ಯರ ಮೊದಲನೆಯ ತೈಲಪನಿಗೆ ನೆರವಿತ್ತ ನಾಯಕರಲ್ಲಿ ಬಹುತೇಕ ನಾಲ್ಕನೆಯ ಅರಸು ಶಾಸ್ತದೇವ ಒಬ್ಬನಿದ್ದ. ಆತ ಉತ್ತರ ಚಾಲುಕ್ಯರ ಮಹಾಮಂಡಲೇಶ್ವರರ ವಂಶವೊಂದನ್ನು ಸ್ಥಾಪಿಸಿದ.

ಆತನ ಪುತ್ರ, ಎರಡನೆಯ ಗುಹಲ್ಲದೇವ (೯೦೮-೧೦೦೫) ತನ್ನ ರಾಜ್ಯದ ಸೀಮೆಯನ್ನು ವಿಸ್ತರಿಸಿದ ಕಾಥಿಯಾವಾರ್‌ನಲ್ಲಿನ ಸೋಮನಾಥದ ಯಾತ್ರೆಗಾಗಿ ಹಾಯಿಹಡಗಿನ ಮೂಲಕ ಸಾಗುತ್ತಿದ್ದಾಗ ಕೂವೆಮರ ಮುರಿದ ನಿಮಿತ್ತ ಆತನಿಗೆ ಗೋಪಕ ಪಟ್ಟಣದಲ್ಲಿ ಉಳಿದುಕೊಳ್ಳಬೇಕಾಯಿತು; ಆತ ಪಟ್ಟಣದಿಂದ ಅತಿಪ್ರಭಾವಿತನಾದ. ಎರಡನೆಯ ಶಾಸ್ತದೇವನ ಪುತ್ರನ ೧೦೩೮ರ ತಾಮ್ರ ಶಾಸನದ ಮೇರೆಗೆ ಭವಾನಿ ಶಂಕರ ಭಟ್ಟ ಸುಖ್ತಣ್‌ಕರ್, ಶಿರಿಯ ಪೈ, ದಾಮಪೈ, ಮಾವ್ ಪೈ, ಮಹಲ್ಲ, ಖಲ್ಲ ಪೈ ಮತ್ತು ಸಲ್ಲ ಪೈ ಇವರು ಎರಡನೆಯ ಗುಹಲ್ಲ ದೇವನ ಮುಖ್ಯಾಧಿಕಾರಿಗಳಾಗಿದ್ದರು.

ತನ್ನ ಶಾಸನಗಳಲ್ಲಿ ಎರಡನೆಯ ಶಾಸ್ತದೇವ (೧೦೦೫-೧೦೫೦) ಶಾಸ್ತ, ಛಟ್ಟ, ಛಟ್ಟಲ ಹಾಗೂ ಛಟ್ಟಯ್ಯ ಎಂಬೀ ಹೆಸರುಗಳಿಂದ ಪರಿಚಿತನಾಗಿರುತ್ತಾನೆ. ರಾಜ್ಯಭಾರದ ಮೊದಲ ದಿನಗಳ ಶಾಸನಗಳಲ್ಲಿ ಆತ ಚಾಲುಕ್ಯರ ಮಹಾಮಂಡಲೇಶ್ವರನೆಂದಾಗಿ ವರ್ಣಿಸಲ್ಪಟ್ಟಿರುತ್ತಾನೆ. ದಕ್ಷಿಣದ ಶಿಲಾಹರರೊಂದಿಗಿನ ದೀರ್ಘಕಾಲದ ಯುದ್ಧದ ಫಲವಾಗಿ ಉತ್ತರೆಯ ಶಿಲಾಹರರು ತಮ್ಮೆಲ್ಲ ಸಂಪತ್ತನ್ನು ಕಳೆದುಕೊಂಡರು. ಅರಿಕೇಸರಿಯ ಅಪ್ರಾಪ್ತ ವಯಸ್ಸಿನ ಪುತ್ರ ಚಿತ್ತರಾಜನ ರಾಜ್ಯಾಡಳಿತೆ ದುರ್ಬಲವಾಗತೊಡಗಿತ್ತು. ಆತ ಈ ಪರಿಸ್ಥಿತಿಯ ಲಾಭಕೊಂಡ. ತನ್ನ ನೌಕಾಬಲವನ್ನು ಚಾಣಾಕ್ಷತೆಯಿಂದ ಉಪಯೋಗಿಸಿ ಉತ್ತರ ಮತ್ತು ದಕ್ಷಿಣ ಕೊಂಕಣಗಳನ್ನು ಗೆದ್ದುಕೊಂಡ. ಕಾವಡಿ ದ್ವೀಪ (ಥಾಣಾ ಜಿಲ್ಲೆಯಲ್ಲಿನ ಸಾಲ್ಸೆಟ್ಟ್ ದ್ವೀಪ) ವನ್ನು ಚಿತ್ತರಾಜನ ಪಾಲಿಗುಳಿಸಿ ಆತನನ್ನೇ ತನ್ನ ಸಾಮಂತನನ್ನಾಗಿ ಮಾಡಿದ.

ಮೊದಲನೆಯ ಜಯಕೇಶಿ (೧೦೫೦-೧೦೮೦) ಗೋಪಕ ಪಟ್ಟಣವನ್ನು ತನ್ನ ರಾಜಧಾನಿಯನ್ನಾಗಿ ಮಾಡಿದ. ನೌಕಾದಳವನ್ನು ಸಾಕಷ್ಟು ಬಲಿಷ್ಟವಾಗಿಸಿ ನೆರೆಹೊರೆಯ ಅರಸರಿಗೆ ತನ್ನ ವರ್ಚಸ್ಸಿನ ಅರಿವನ್ನಿತ್ತ. ಎರಡನೆಯ ಶಾಸ್ತದೇವ ತೀರಿಕೊಂಡ ಕೂಡಲೇ ಉತ್ತರೆಯ ಶಿಲಾಹರ ಅರಸು ಮಾಮುಣ್ಣಿ ಸ್ವಾತಂತ್ರ್ಯ ಸಾರಲು ಯತ್ನಿಸಿರಬೇಕು. ಮೊದಲ ಜಯಕೇಶಿ ಆತನ ವಿರುದ್ಧ ದಂಡೆತ್ತಿ ಹೋದ. ಮಾಮುಣ್ಣಿ ಕಾಳಗದಲ್ಲಿ ಕೊಲ್ಲಲ್ಪಟ್ಟಂತೆ ಆತನ ರಾಜ್ಯವನ್ನು ತನ್ನದರೊಂದಿಗೆ ಸೇರಿಸಿಕೊಂಡ. ಚಾಲುಕ್ಯರ ಆರನೆಯ ವಿಕ್ರಮಾದಿತ್ಯ ರಾಜ್ಯವನ್ನು ಸಂದರ್ಶಿಸಲು ಬಂದಾಗ ಆತನಿಗೆ ತನ್ನ ಮಗಳನ್ನು ವಿವಾಹದಲ್ಲಿತ್ತು ಅಧಿರಾಜನೊಂದಿಗಿನ ಸಂಬಂಧವನ್ನು ಬಲಪಡಿಸಿಕೊಂಡ. ದಕ್ಷಿಣ ಕನ್ನಡದ ಆಳುಪರನ್ನು ಮತ್ತು ನೊಳಂಬ (ತಮ್ಮನ್ನು ಪಲ್ಲವರೆಂದು ಕರೆಸಿಕೊಳ್ಳುತ್ತಿದ್ದ) ರನ್ನು ಬಗ್ಗು ಬಡಿಯುವಲ್ಲಿ ವಿಕ್ರಮಾದಿತ್ಯನಿಗೆ ಆತ ಅತಿ ಮಹತ್ತಿನ ಸಹಾಯ ಮಾಡಿದ. ವಿಕ್ರಮಾದಿತ್ಯ ಗದ್ದುಗೆಯೇರುವ ಮುನ್ನ ತನ್ನ ಅಣ್ಣಾ ಎರಡನೆಯ ಸೋಮೇಶ್ವರನೊಂದಿಗೆ ಕಾದಾಡಿದ್ದ. ಯುದ್ಧದ ಆ ದಿನಗಳಲ್ಲಿ ನೊಳಂಬರು ಮತ್ತು ಆಳುಪರು ತಮ್ಮ ರಾಜ ನಿಷ್ಠೆಯ್ನನು ಒದ್ದಿಕ್ಕಬಯಸಿದ್ದರು. ಆತನ ಆಳ್ವಿಕೆಯ ಕಾಲ ಗೋವಾದ ವಾಣಿಜ್ಯ ಚರಮಸೀಮೆ ಕಂಡಿತು. ವಿಭಿನ್ನ ದೇಶಗಳ ಹಡಗುಗಳು ಗೋವಾದ ರೇವನ್ನು ಸಂದರ್ಶಿಸಲಾರಂಭಿಸಿದ್ದವು. ಆತ ವಿದ್ಯೆಯ ನಾಮವಂತ ಆಶ್ರಯದಾತನಿದ್ದ.

ಶಿವಚಿತ್ತನ ದೇಗವ್ವೆಯು ಸನದಿನ ಮೇರೆಗೆ ಆತನ (ಜಯಕೇಶಿಯ) "ರಾಜಧಾನಿಯ ಬೀದಿಗಳು ದಾರಿ ಸಾಗುವ ಪಂಡಿತರ ಪಾಲಕಿಗಳಿಂದ ನಿರಂತರ ತುಂಬಿರುತ್ತಿದ್ದವು. ಪಾಲಕಿಯ ತೊಲೆಗಳು ಅನರ್ಘ್ಯ ಮಣಿಗಳಿಂದ ಅಲಂಕರಿಸಲ್ಪಟ್ಟಿರುತ್ತಿದ್ದವು; ಪಾಲಕಿಯಲ್ಲಿದ್ದ ಅವುಗಳೊಡೆಯರ ಚಿನ್ನದ ಕಿವಿಯುಂಗುರಗಳು ಓಲಾಡುತ್ತಿದ್ದವು."

ಆ ಬಳಿಕ ಆತನ ಮಕ್ಕಳು, ಮೂರನೆಯ ಗುಹಲ್ಲದೇವ (೧೦೮೦-೧೧೦೦) ಮತ್ತು ಮೊದಲನೆಯ ವಿಕ್ರಮಾದಿತ್ಯ (೧೧೦೦-೧೧೦೪) ರಾಜ್ಯವಾಳಿದರು. ಮೂರನೆಯ ಗುಹಲ್ಲದೇವನ ರಾಜ್ಯಭಾರದ ಕಾಲ ಉತ್ತರದ ಶಿಲಾಹರ ಅನಂತದೇವ (ಉಪನಾಮ ಅನಂತಪಾಲ) (೧೧೦೪) ಉತ್ತರ ಕೊಂಕಣವನ್ನು ಸ್ವಾಧೀನ ಮಾಡಿಕೊಂಡ. ಸಹೋದರ ವಿಕ್ರಮಾದಿತ್ಯನ ನೌಕಾಪಡೆ ಯಶಸ್ವಿಯಾದುದಿತ್ತು. ತನಗಾಗಿದ್ದ ನಷ್ಟವನ್ನು ಆತ ಹೊಸಗಳಿಕೆಗಳಿಂದ ತುಂಬಿ ಕೊಂಡಿರಬೇಕು. ಆತ ಪಲಸಿಗೆ (ಹಲಸೆ) ಪ್ರಾಂತ ಮತ್ತು ಕಾವಡಿ ದ್ವೀಪ (ಉತ್ತರ ಕೊಂಕಣದಲ್ಲಿ)ವನ್ನಾಳುತ್ತಿದ್ದನೆಂದು ಆತನ ಶಾಸನವೊಂದು ಸೂಚಿಸುತ್ತದೆ.

ಆತನ ಉತ್ತರಾಧಿಕಾರಿ, ಖ್ಯಾತನಾಮ ಎರಡನೆಯ ಜಯಕೇಶಿ (೧೧೦೪-೧೧೪೭)ಯ ರಾಜ್ಯಭಾರದ ಕಾಲದಲ್ಲಿ ಗೋವಾದ ಕದಂಬರ ಪ್ರಭಾವ ಪರಮೋನ್ನತಿ ಕಂಡಿತು. ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯ ಕೊನೆಯ ದಿನಗಳಲ್ಲಿ ಹೊಯ್ಸಳರ ವಿಷ್ಣುವರ್ಧನ ಚಾಲುಕ್ಯರ ಮೇಲೆ ದಂಡೆತ್ತಿ ಹೋದುದರ ಲಾಭಕೊಂಡ ಆತ ತನ್ನನ್ನು ಕೊಂಕಣ ಚಕ್ರವರ್ತಿಯೆಂದು ಕರೆಸಿಕೊಂಡು ಸ್ವಾತಂತ್ರ್ಯ ಸಾರಿದ. ಆದರೆ ಆತನ ಪರಿಶ್ರಮ ನಿಷ್ಪ್ರಯೋಜನವಾಯಿತು. ಹೊನ್ನಾಳಿ ತಾಲೂಕಿನ ಬಾಳಗುತ್ತಿಯಿಂದ ಶಿವಮೊಗ್ಗದ ಭಾಗಗಳು, ಚಿತ್ರದುರ್ಗ, ಬಳ್ಳಾರಿ, ಧಾರ್ವಾರ ಮತ್ತು ಬಿಜಾಪುರದ ಜಿಲ್ಲೆಗಳನ್ನಾಳುತ್ತಿದ್ದ ವಿಕ್ರಮಾದಿತ್ಯನ ಸಾಮಂತ ಮತ್ತು ಸೇನಾಧಿಪತಿಯಿದ್ದ ಎರಡನೆಯ ಅಚ್ಚುಗಿ, ಗೋಪಕ ಪಟ್ಟಣಕ್ಕೆ ದಾಳಿಯಿಕ್ಕಿ ಅದನ್ನು ಸುಟ್ಟು ಹಾಕಿದ. (ಕೆಲವೊಂದು ವರ್ಷಗಳ ಬಳಿಕ ಪಟ್ಟಣದ ಪುನರ್ನಿರ್ಮಾಣ ಮಾಡಲಾಯಿತು. ಉತ್ತರಾಧಿಕಾರಿಗಳಾಗಿದ್ದ ಶಿವಚಿತ್ತ ಮತ್ತು ವಿಷ್ಣುಚಿತ್ತರ ಕಾಲದಲ್ಲಿ ಅದು ತನ್ನ ಗತ ವೈಭವವನ್ನು ಮತ್ತೆ ಕಂಡಿತು.) ಹೊಯ್ಸಳರ ಬೆಳೆಯುವ ಪ್ರಭಾವವನ್ನು ತಡೆಹಿಡಿಯಲು ಆತ ನಂಬಿಕೆಯ ಸಾಮಂತರನ್ನು ಬಯಸಿದ. ಜಯಕೇಶಿಯ ಯೋಗ್ಯೋಚಿತ ಹಾಗೂ ಔದಾರ್ಯಪೂರ್ಣ ಮನೋವೃತ್ತಿ ಮೆಚ್ಚಿದ ಆತ ತನ್ನ ಮಗಳು ಮೈಲಾಳದೇವಿಯನ್ನು ವಿವಾಹದಲ್ಲಿತ್ತ. ಮತ್ತೆ ತನ್ನ ವೈಮನಸ್ಸನ್ನು ಮರೆತು ಆತನನ್ನು ಮಹಾಮಂಡಲೇಶ್ವರನ ಪದವಿಗೇರಿಸಿದ. ಈ ಅಮೂಲ್ಯ ಸಂಬಂಧದ ಪರಿಪೂರ್ಣ ಉಪಯೋಗ ಮಾಡಿದ ಎರಡನೆಯ ಜಯಕೇಶಿ ಉತ್ತರ ಕನ್ನಡದ ಶಿರ್ಸಿ, ಸಿದ್ದಾಪುರ, ಯಲ್ಲಾಪುರ, ಹಳಿಯಾಳ ತಾಲೂಕುಗಳಲ್ಲಿನ ಸುಮಾರು ಐನೂರು ಗ್ರಾಮಗಳು, ಶಿವಮೊಗ್ಗ ಜಿಲ್ಲೆಯ ಸೊರಬ, ಶಿಕಾರಿಪುರ, ಸಾಗರ ತಾಲೂಕುಗಳನ್ನೊಳಗೊಂಡ ಹೈವೆ ಮಹಾಲು ಮತ್ತು ಧಾರ್ವಾರ ಜಿಲ್ಲೆಯ ಹಾನಗಲ್ ಪ್ರಾಂತದ ಐನೂರು ಗ್ರಾಮಗಳನ್ನು ಗೆದ್ದುಕೊಂಡ. ೧೧೨೦ರ ಶಿಲಾಶಾಸನವೊಂದು ಮಾಳಪಯ್ಯನ ಮಗ ಗೋವಿಪಯ್ಯ ಆತನ ಪ್ರಧಾನ (ಮಂತ್ರಿ) ನಿದ್ದನೆಂದು ಹೇಳುತ್ತದೆ.

ತನ್ನ ಆಳ್ವಿಕೆಯ ಪರಮೋನ್ನತಿಯ ದಿನಗಳಲ್ಲಿ ವಿಷ್ಣುವರ್ಧನ ಗೋವಾದ ಮೇಲೆ

ದಂಡೆತ್ತಿ ಹೋದ. ೧೧೩೩ ಮತ್ತು ೧೧೩೭ರ ಹೊಯ್ಸಳ ಶಾಸನಗಳಲ್ಲಿ ಎರಡನೆಯ ಜಯಕೇಶಿ ಹಲಸಿ ಸ್ವಾಧೀನ ಪಡಿಸಿಕೊಂಡಿದ್ದುದರ ದಾಖಲೆಗಳಿವೆ. ಹೊಯ್ಸಳ ಪ್ರಾಂತಕ್ಕೆ ದಾಳಿಯಿಕ್ಕಿದಾಗ ಜಯಕೇಶಿ ತಾನು ಕಳೆದುಕೊಂಡ ಪ್ರದೇಶ ಮರಳಿ ಗಳಿಸಿದ. ಉತ್ತರೆಯ ಶಿಲಾಹರ ಮಲ್ಲಿಕಾರ್ಜುನ ಈ ಯುದ್ಧದ ಲಾಭ ಕೊಂಡು ತನ್ನ ಪೂರ್ವಜರ ರಾಜ್ಯವನ್ನು ಮರಳಿ ಗಳಿಸಿದ.

ಪ್ರಾಯಶಃ ಆರನೆಯ ವಿಕ್ರಮಾದಿತ್ಯನ ಉತ್ತರಾಧಿಕಾರಿಯಿದ್ದ ಮೂರನೆಯ ಸೋಮೇಶ್ವರನ ಆಳ್ವಿಕೆಯ ಕಾಲದಲ್ಲಿ ಎರಡನೆಯ ಜಯಕೇಶಿ ಸ್ವಾತಂತ್ರ್ಯ ಸಾರಿದ. ಶಿವಚಿತ್ತ ಮತ್ತು ವಿಷ್ಣು ಚಿತ್ತ ಎಂಬೀ ಹೆಸರಿನ ಅವನ ಮಕ್ಕಳಿಬ್ಬರು ಆತನ ಉತ್ತರಾಧಿಕಾರಿಗಳಾದರು.

ಶಿವಚಿತ್ತ (೧೧೪೭/೮-೧೧೮೧)ನ ಶಿಲಾಶಾಸನ ಆತ ದಕ್ಷಿಣ ಕೊಂಕಣದ ಹಲಸಿ ಪ್ರಾಂತ ಹಾಗೂ ವೇಳುಗ್ರಾಮ (ಬೆಳಗಾಂ) ಯ ಎಪ್ಪತ್ತು ಗ್ರಾಮಗಳನ್ನಾಳುತ್ತಿದ್ದನಾಗಿ ನುಡಿಯುತ್ತದೆ. ಪಟ್ಟ ಮಹಿಷಿ ಕಮಲಾದೇವಿಯ ಪ್ರಭಾವಕ್ಕೊಳಗಾಗಿದ್ದ ಈತ ವಿದ್ಯೆಯ ಆಶ್ರಯದಾತನಾಗಿದ್ದ. ಅವರಿಬ್ಬರೂ ಸೇರಿ ವೇದ, ವೇದಾಂಗಗಳ ಅಭ್ಯಾಸಕ್ಕಾಗಿ ಹಲವೊಂದು ಅಗ್ರಹಾರಗಳನ್ನು ಸ್ಥಾಪಿಸಿದರು, ಕಮಲಾದೇವಿ ಅನೇಕ ದೇವಸ್ಥಾನಗಳನ್ನು ಕಟ್ಟಿಸಿದಳು. ದೇಗಮ್ವೆ[೬] ಯಲ್ಲಿನ ಚಿಕ್ಕದಾಗಿದ್ದರೂ ಅತಿಸುಂದರವಾದ ಕಮಲನಾರಾಯಣ ದೇವಸ್ಥಾನ ಅವುಗಳಲ್ಲೊಂದಾಗಿದೆ. ಶಿವಚಿತ್ತನ ದಂಡನಾಥ ಅಥವಾ ದಂಡನಾಯಕನ ಹೆಸರು 'ಭಬ್ಬಣ' [೮] ಎಂದಾಗಿತ್ತು. ಚಾಲುಕ್ಯರ ಪತನಾನಂತರ ಆತ ಸ್ವಾತಂತ್ರ್ಯ ಸಾರಿದ. ಮತ್ತೆ ಕೊಂಕಣ ಚಕ್ರವರ್ತಿ, ಬನವಾಸಿಯ ಮಂಡಲೇಶ್ವರನೆಂದು ಮೆರೆದುಕೊಂಡ.

ವಿಷ್ಣುಚಿತ್ತ (೧೧೮೧-೧೧೮೭/೮) ನ ಆಳ್ವಿಕೆಯ ಕಾಲ, ಹಾನಗಲ್‌ನ ಕದಂಬರನ್ನು ಮತ್ತು ಹುಮ್ಮಚದ ಸಾಂತರಸರನ್ನು ಸೋಲಿಸಿ ಅವರ ಪ್ರಾಂತದಲ್ಲಿ ಶಾಂತಿ ಸ್ಥಾಪಿಸಿದ ಕಲಚೂರಿಯ ಸೇನೆ ೧೧೮೧ರಲ್ಲಿ ಗೋವಾಕ್ಕೆ ದಾಳಿಯಿಟ್ಟಿತು. ಹೊಯ್ಸಳರು ಮತ್ತೆ ಯುದ್ಧಕ್ಕೆ ತೊಡಗಿದ ನಿಮಿತ್ತ ಅದೇ ವರ್ಷ ಸೇನೆ ಹಿಂದಿರುಗಬೇಕಾಯಿತು. ಗದ್ದುಗೆಯೇರಿದ್ದ ಮೂರನೆಯ ಜಯಕೇಶಿ (೧೧೮೭/೮ - ೧೨೧೨/೩) ಹೊಯ್ಸಳ ಮತ್ತು ಯಾದವರ ನಡುವಣ ಯುದ್ಧದ ಲಾಭಕೊಂಡು ಸ್ವಾತಂತ್ರ್ಯ ಸಾರಿದ. ಬಹುತೇಕ ಈತನ ರಾಜ್ಯಭಾರದ ಕಾಲದಲ್ಲಿಯೇ ಗೋವಾದ ಕದಂಬರು ವೇಳುಗ್ರಾಮದ ಭೂಭಾಗವನ್ನು ಕಳೆದುಕೊಂಡರು. ಈ ಮಗ ಹಾಗೂ ಉತ್ತರಾಧಿಕಾರಿ ತ್ರಿಭುವನ ಮಲ್ಲ (೧೨೧೨/೩-೧೨೩೮) ನ ಕುರಿತು ಅಷ್ಟೊಂದು ತಿಳಿದುಬರುತ್ತಿಲ್ಲ. ಹೊಯ್ಸಳ ಮತ್ತು ಯಾದವರ ನಡುವಣ ದೀರ್ಘಕಾಲದ ಯುದ್ಧದಿಂದಾಗಿ ಆತನಿಗೆ ತನ್ನ ಸ್ವಾತಂತ್ರ್ಯವುಳಿಸಿಕೊಂಡಿರಲು ಸಾಧ್ಯವಾಗಿರಬೇಕು. ಹಾಗೆಯೇ ಆತ ತನ್ನ ಪ್ರತಿಷ್ಠೆಯನ್ನೂ ಬೆಳೆಸಿಕೊಂಡಿರಬೇಕು.[೯] ಈ ಆಳ್ವಿಕೆಯ ಕೊನೆಯ ದಿನಗಳಲ್ಲಿ, ದಖ್ಖಣದ ಅಧಿಪತಿಯೆನ್ನಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದ ಸಿಂಘಣ ಆತನ ಪ್ರತಿ ಸೇನಾಧಿಪತಿ ಬಿಚ್ಚಣನ ನೇತೃತ್ವದಲ್ಲಿ (೧೨೩೮) ಸೈನ್ಯವೊಂದನ್ನು ಕಳುಹಿಸಿದ. ಪ್ರಖರ ಪ್ರತಿಭಟನೆಯ ನಂತರ ತ್ರಿಭುವನಮಲ್ಲ ರಣಾಂಗಣದಲ್ಲಿ ಕೊಲ್ಲಲ್ಪಟ್ಟ; ಸಿಂಘಣ ಆತನ ರಾಜ್ಯವನ್ನು ತನ್ನದರೊಂದಿಗೆ ಸೇರಿಸಿಕೊಂಡ.

ಸಿಂಘಣನ ಮರಣಾನಂತರ ಶಿವಚಿತ್ತ ಮತ್ತು ಛಟ್ಟಯ್ಯ ದೇವ ಎಂದಾಗಿ ಕರೆಯಲ್ಪಡುತ್ತಿದ್ದ ಆತನ ಮಗ ಮೂರನೆಯ ಶಾಸ್ತದೇವ ತನ್ನ ಭಾವ ಕಾಮದೇವನ

ಸಹಾಯಕೊಂಡು, ಅಸಾಮಾನ್ಯ ಸಾಹಸದಿಂದ ಪೂರ್ವಜರ ಗದ್ದುಗೆಯನ್ನು ಮರಳಿ ಗಳಿಸಿದ. ಆದರೆ ಸಿಂಘಣನ ಉತ್ತರಾಧಿಕಾರಿಗಳು ಅತ್ಯಲ್ಪಕಾಲದಲ್ಲಿಯೇ ಮತ್ತೆ ಅಧಿಕಾರ ಸ್ಥಾಪಿಸಿ ಬಂಡಾಯ ಹೂಡಿದ್ದ ಸಾಮಂತರನ್ನು ಬಗ್ಗುಬಡೆದರು. ಪ್ರಾಯಶಃ ಮೂರನೆಯ ಶಾಸ್ತದೇವ ಅವರ ಸಾಮಂತನಾಗುಳಿದ.

೧೨. ಮುಸಲ್ಮಾನರ ಆಕ್ರಮಣ

೧೩೧೨ರಲ್ಲಿನ ದೇವಗಿರಿಯ ತನ್ನ ಕೊನೆಯ ದಂಡಯಾತ್ರೆಯ ಬಳಿಕ ಮಲ್ಲಿಕ್‌ಕಾಫರ್ ದಕ್ಷಿಣದತ್ತ ಸಾಗಿದ; ದಂಡ ಯಾತ್ರೆಯ ಕಾಲ ಮಲ್ಲಿಕ್‌ಕಾಫರ್ ಗೋವಾದ ಮೇಲೆ ದಾಳಿಯಿಕ್ಕಿ ಅಲ್ಲಿ ತುಬ್ಲಿಘ್ ಹೆಸರಿನ ರಾಜ್ಯಪಾಲನನ್ನು ನೇಮಿಸಿದ. ಗೋಪಕ ಪಟ್ಟಣದಲ್ಲಿ ಎರಡೂವರೆ ವರ್ಷಗಳ ಕಾಲ ಮಾತ್ರ ಉಳಿದ ಈತ ಅಲ್ಲಾ-ಉದ್-ದಿನ್ ಖಿಲ್ಜಿ ತೀರಿಕೊಂಡ ಬಳಿಕ ದಿಲ್ಲಿಗೆ ಮರಳಿದ. ಮತ್ತೆ ಉತ್ತರಾಧಿಕಾರಿಗಳ ವಿವಾದದಲ್ಲಿ ಸಿಕ್ಕಿ ಬಿದ್ದು ಕೊಲ್ಲಲ್ಪಟ್ಟ.

೧೩. ಗೋವಾದ ಕದಂಬರು (ಮುಂದುವರಿದುದು)

ಗೋಪಕ ಪಟ್ಟಣದ ಮೇಲಣ ಮುಸಲ್ಮಾನರ ಆಕ್ರಮಣದ ಕಾಲ, ಅರಸು ಸೋಯಿದೇವ ರಾಜಧಾನಿಯನ್ನು ಚಂದ್ರಪುರಕ್ಕೆ ಸ್ಥಳಾಂತರಿಸಿದ. ಬಹುತೇಕ ತುಬ್ಲಿಘ್ ದಿಲ್ಲಿಗೆ ತೆರಳಿದ ಬಳಿಕವೇ ಆತ ತನ್ನ ರಾಜ್ಯವನ್ನು ಮರಳಿ ಪಡೆದಿರಬೇಕು.

ಮುಹಮ್ಮದ್ ಬಿನ್ ತುಘ್ಲಕ್‌ನ ರಾಜ್ಯಭಾರದ ಕಾಲ, ೧೩೨೦ರಲ್ಲಿ ಮುಸಲ್ಮಾನರ ಸೈನ್ಯ ಗೋವಾದೊಳಕ್ಕೆ ನುಗ್ಗಿ ಗೋಪಕ ಪಟ್ಟಣ ಮತ್ತೆ ಆ ಕಾಲದ ರಾಜಧಾನಿಯಿದ್ದ ಚಂದ್ರಪುರ (ಚಂದರ್)ದ ಸೂರೆ ಮಾಡಿತು. ಆಗಿನ ಅರಸು ಅತ್ಯಲ್ಪಕಾಲದಲ್ಲಿಯೇ ತನ್ನ ರಾಜ್ಯವನ್ನು ಮರಳಿ ಗಳಿಸಿದ; ಫೆರಿಶ್ತನ ಹೇಳಿಕೆಯ ಮೇರೆಗೆ ಮದುರೆಯ ಸುಲ್ತಾನನ ರಾಜ್ಯದ ಮೇಲಣ ದೌರ್ಭಾಗ್ಯಪೂರ್ಣ ಅತಿಕ್ರಮಣದ ಮುನ್ನ ಮೂರನೆಯ ವೀರ ಬಲ್ಲಾಳ ಆತನೊಂದಿಗೆ ಸಂಧಿ ಮಾಡಿಕೊಂಡಿದ್ದ.

೧೩೪೨ರಲ್ಲಿ ಸೋಯಿದೇವ ಮತ್ತು ಆತನ ಮಗನ ನಡುವೆ ಜಗಳವಾಗಿತ್ತು. ಸೋಯಿದೇವನ ಮಗ ಹೊನ್ನಾವರದ ನವಾಬ ಜಮಾಲ್-ಉದ್-ದಿನ್ ನ ಸಹಾಯ ಕೋರಿದ. ಬಹುಶಃ ೧೩೪೩ರ ಜುಲೈ ೧೩ರ ಸುಮಾರಿಗೆ ಆತ ಐವತ್ತೆರಡು ಹಡಗುಗಳೊಂದಿಗೆ ಚಂದ್ರಪುರಕ್ಕೆ ಬಂದಿರಬೇಕು.

ಮುಸಲ್ಮಾನರ ಸೇನೆಯೊಂದಿಗಿದ್ದ ಇಬ್ನಬತೂತ ಈ ದಂಡಯಾತ್ರೆಯ ವಿವರ ಬರೆದಿಟ್ಟಿರುತ್ತಾನೆ. ಮುಸಲ್ಮಾನರು ನಗರಕ್ಕೆ ದಾಳಿಯಿಕ್ಕಿ ಅಲ್ಲಿ ನೆಲಸಿದರು. ಅರಸು ಕಾದಾಟದಲ್ಲಿ ಪ್ರಾಣಕಳೆದುಕೊಂಡಿದ್ದಿರಬೇಕು. ಸ್ವಲ್ಪ ಸಮಯದ ನಂತರ ಹಿಂದುಗಳು ನಗರದತ್ತ ಮುನ್ನಡೆದು ಬಂದರು. ಪರಿಸ್ಥಿತಿ ವಿಷಮವಾದಾಗ ಇಬ್ನಬತೂತ ತ್ವರಿತ ನಗರ ಬಿಟ್ಟು ಕೋಳಿಕ್ಕೋಡಿಗೆ ಹೋದ. ಮುಸಲ್ಮಾನರು ಹೊನ್ನಾವರಕ್ಕೆ ಹಿಮ್ಮೆಟ್ಟಿದರು. ೧೩೫೧ರಲ್ಲಿ ರಾಜ್ಯವನ್ನು ಬಹಮನಿಯ ಸಾಮ್ರಾಜ್ಯದೊಂದಿಗೆ ಸೇರಿಸಲಾಯಿತು. ಗೋವಾವನ್ನು ದೀರ್ಘಕಾಲ ಆಳಿದ ರಾಜ ಮನೆತನ ಕೇವಲ ಕದಂಬರದ್ದಿತ್ತು.

ಗೋವಾದ ಕದಂಬರು ಮೂಲತಃ ಜೈನರಿದ್ದರು. ಹದಿನೊಂದನೆಯ ಶತಮಾನದಲ್ಲಿ ಅವರು ಶೈವ ಧರ್ಮ ಸ್ವೀಕರಿಸಿ ದ್ವಾಡಿ (ದ್ವಾರ್) ದ್ವೀಪದಲ್ಲಿನ ನಾರಾವೆಯ ಸಪ್ತನಾಥ ಅಥವಾ ಸಪ್ತಕೋಟೀಶ್ವರನನ್ನು ಕುಲದೇವತೆಯೆಂದು ನಂಬಲಾರಂಭಿಸಿದರು. ಶಿಲಾಶಾಸನವೊಂದರ ಮೇರೆಗೆ ಸಪ್ತಕೋಟೀಶ್ವರ ಅವರ ಆರಾಧ್ಯ ದೈವತವಾಗಿತ್ತು. ಮೂರನೆಯ ಶಾಸ್ತ ದೇವನ ೧೨೫೨ರ ತಾಮ್ರ ಶಾಸನ ಆತ ಸಪ್ತ ಕೋಟೀಶ್ವರನ ಅನುಗ್ರಹ ಗಳಿಸಿದ್ದುದನ್ನು ತಿಳಿಸುತ್ತದೆ. ಬೆಳಗಾಂ ಜಿಲ್ಲೆಯಲ್ಲಿ ದೊರಕಿದ ೧೧೮೦-೧೧೮೭ರ ತಾಮ್ರ ಶಾಸನದಲ್ಲಿ ಮೂರನೆಯ ಜಯಕೇಶಿಯನ್ನು ಆತನ ಆಳ್ವಿಕೆಯ ೧೩ನೆಯ ವರ್ಷದಲ್ಲಿ ''ಶ್ರೀ ಸಪ್ತ ಕೋಟೀಶ್ವರ ಲಬ್ದ ವರಪ್ರಸಾದ ಶ್ರೀ ಕದಂಬವೀರ ಜಯಕೇಸಿದೇವ'' ಎಂದು ವರ್ಣಿಸಿದ್ದುದನ್ನು ಕಾಣಬಹುದು. ಸೋಯಿದೇವ (ಪ್ರಾಕೃತ ಭಾಷೆಯಲ್ಲಿ ಸೋಮದೇವ) ನ ಚಿನ್ನದ ರಾಜಮುದ್ರೆ ಮುಂಭಾಗದಲ್ಲಿ ಶಿವನ ರೂಪು ಮತ್ತು ಹಿಂಭಾಗದಲ್ಲಿ ''ಶ್ರೀ ಸಪ್ತಕೋಟೀಶ್ವರ ಲಬ್ದ ವರಪ್ರಸಾದ ವೀರಸೋಯಿ ದೇವ'' ಎಂಬ ಬರಹ ಕೊಂಡಿತ್ತು.

೧೪. ಬಹಮನಿ ಸುಲ್ತಾನರು

೧೩೪೭ರಲ್ಲಿ ಬಹಮನಿ ರಾಜ್ಯವನ್ನು ಸ್ಥಾಪಿಸಿದ ಹಸನ್‌ಗಂಗು ಝಾಫರ್‌ಖಾನ್ ೧೩೫೧ರಲ್ಲಿ ಗೋವಾಕ್ಕೆ ದಂಡೆತ್ತಿ ಹೋಗಿ ಅದನ್ನು ಗೆದ್ದುಕೊಂಡ. ಆತನ ಮರಣಾನಂತರ, ೧೩೫೭ರಲ್ಲಿ ಆತನ ಮಗ ಹಾಗೂ ಉತ್ತರಾಧಿಕಾರಿಯಿದ್ದ ಕ್ರೂರ ಘರ್ಝಿಮುಹಮ್ಮದ್, ಹಿಂದುಗಳಿಗೆ ಬಾಧೆಯಿತ್ತ; ಅವರ ದೇವಸ್ಥಾನಗಳನ್ನು ಮುರಿದಿಕ್ಕಿ ಗೋವಾದಲ್ಲಿ ಹಾಹಾಕಾರವೆಬ್ಬಿಸಿದ[೧೦]

೧೫. ವಿಜಯ ನಗರ

ವಸಂತ ಮಾಧವ [೧೧] ಮತ್ತು ಮಾಯಿ ಶೆಣೈ ವಾಗ್ಳೆ [೧೨] ಎಂಬಿಬ್ಬರು ಪ್ರತಿನಿಧಿಗಳ ಮನವಿಯ ಮೇರೆಗೆ ವಿಜಯನಗರದ ಅರಸು ಮೊದಲನೆಯ ಬುಕ್ಕ (೧೩೫೦-೧೩೭೯) ತನ್ನ ಮಂತ್ರಿ ಮತ್ತೆ ಸೇನಾಧಿಪತಿಯಿದ್ದ ಮಾಧವ ಮಂತ್ರಿ (ಮಾಧವ ಅಮಾತ್ಯ) ಯನ್ನು ಕಳುಹಿಸಿ ಗೋವಾದಿಂದ ಮುಸಲ್ಮಾನರನ್ನು ಹೊಡೆದೋಡಿಸಿದ. ೧೩೬೬ರಲ್ಲಿ ಗೋವಾವನ್ನು ವಿಜಯ ನಗರದೊಂದಿಗೆ ಸೇರಿಸಿದ. ಗೋವಾವನ್ನು ಗೆದ್ದ ಮಾಧವ ಮಂತ್ರಿ ಕರ್ನಾಟಕದಲ್ಲಿ ನೆಲೆಸಿದ್ದ ಕಾಶ್ಮೀರಿ ಸಾರಸ್ವತನಿದ್ದ. (೨೨ನೆಯ ಅಧ್ಯಾಯ ನೋಡಿರಿ). ಆತನನ್ನು ಪಶ್ಚಿಮ ಮಹಾಸಾಗರದವರೆಗೆ ವ್ಯಾಪಿಸಿಕೊಂಡಿದ್ದ ರಾಜ್ಯದ ಸುಮಂತ (ವೈಸ್‌ರಾಯ್)ನೆಂದು ನೇಮಿಸಲಾಯಿತು.

ಗೋವಾದಲ್ಲಿ ವಿಜಯ ನಗರದ ಆಳ್ವಿಕೆ

ಜಯಂತಿಪುರ (ಬನವಾಸಿ)ದ ವೈಸ್‌ರಾಯ್‌ನ ಕಾರ್ಯಭಾರ ನಿರ್ವಹಿಸುತ್ತಿದ್ದ ಮಾಧವ ಮಂತ್ರಿ ಸ್ವಲ್ಪ ಕಾಲ ಗೋವಾ ಸರಕಾರದ ಸೂತ್ರಗಳನ್ನು ಕೈಗಳಲ್ಲಿ ಕೊಂಡಿದ್ದ. ಆತ ಮುಸಲ್ಮಾನರು ಧ್ವಂಸ ಮಾಡಿದ್ದ ಪ್ರಾಚೀನ ಸಪ್ತನಾಥ (ಸಪ್ತಕೋಟೀಶ್ವರ) ಮತ್ತು ಇನ್ನಿತರ ದೇವಸ್ಥಾನಗಳ ಜೀರ್ಣೋದ್ಧಾರ ಮಾಡಿದ.

೧೩೯೧ರ ತಾಮ್ರ ಶಾಸನವೊಂದರ ಮೇರೆಗೆ ಮಾಧವಮಂತ್ರಿ ತನ್ನ ನೆನಪಿಗಾಗಿ ಮಾಧವಪುರ ಎಂದಾಗಿ ನಾಮಕರಣ ಮಾಡಿದ್ದ 'ಕುಟ್ಠರ' ಹೆಸರಿನ (ಸಾವಂತ ಸಂಸ್ಥಾನದಲ್ಲಿನ ಕೋಟರೆ) ಭೂಮಿಯನ್ನು ಭರಧ್ವಾಜ, ವಸಿಷ್ಠ, ಅತ್ರಿ, ಜಾಮದಗ್ನ್ಯ, ಕೌತ್ಸ, ಕೌಶಿಕ ಮತ್ತು ವತ್ಸ ಗೋತ್ರಗಳ ಇಪ್ಪತ್ತೈದು ಬ್ರಾಹ್ಮಣರಿಗೆ ಸಪ್ತನಾಥ (ಸಪ್ತಕೋಟೀಶ್ವರ) ನ ಸಾನ್ನಿಧ್ಯದಲ್ಲಿ ದಾನ ಮಾಡಿದ. ದಾನ ಪಡೆದವರಲ್ಲಿ ಹತ್ತನೆಯಾತ ವಿಠ್ಠಲ ಭಟ್ಟನ ಮಗ ಪೌಮ್ಮಿ ಭಟ್ಟನಿದ್ದ. ಹದಿನಾರನೆಯಾತ ಮಂಗೇಶಿಭಟ್ಟನ ಮಗ ಗೋವಿಂದ ಭಟ್ಟ, ಹದಿನೆಂಟನೆಯಾತ ಗೋವಿಂದ ಭಟ್ಟನ ಮಗ ಪೌಮ್ಮಿಭಟ್ಟ. ಪೌಮ್ಮಿ ಮತ್ತು ಮಂಗೇಶಿ ಇವು ಸಾರಸ್ವತರಲ್ಲಿನ ವಿಶಿಷ್ಟ ಹೆಸರುಗಳು. ರಾಮಚಂದ್ರ ಭಿಕಾಜಿ ಗುಂಜೀಕರರು ತನ್ನ 'ಸರಸ್ವತಿ ಮಂಡಲ' (೧೮೮೪) ಗ್ರಂಥದಲ್ಲಿ ದಾನ ಪಡೆದವರೆಲ್ಲರೂ ಸಾರಸ್ವತರಿದ್ದರೆಂಬ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.

ಮಾಧವ ಮಂತ್ರಿಯ ಬಳಿಕ ಬನವಾಸಿಯ ವೈಸ್‌ರಾಯ್ ಹುದ್ದೆಯ ಉತ್ತರಾಧಿಕಾರಿಯಾಗಿ ಎರಡನೆಯ ಹರಿಹರನ ಬ್ರಾಹ್ಮಣ ಸಚಿವ ನರಹರಿ ಬಂದ.

ಕೆಲವೊಬ್ಬ ಪೋರ್ಚುಗೀಸ್ ಇತಿಹಾಸಕಾರರು ವಿಜಯನಗರದಿಂದ ಸ್ವಾತಂತ್ರ್ಯ ಪಡೆದ ಗೋವಾ ದ್ವೀಪದ ಉತ್ತರಭಾಗದಲ್ಲಿ ಹೊಸ ರಾಜಧಾನಿಯೊಂದನ್ನು ಸ್ಥಾಪಿಸಿತೆಂದು ನುಡಿದಿದ್ದರೆ ಅದಕ್ಕೆ ವಿಶ್ವಸನೀಯ ಪುರಾವೆಗಳು ದೊರಕಿಲ್ಲ.[೨೩]

ಗೋವಾದ ಇತಿಹಾಸದಲ್ಲಿ ವಿಜಯ ನಗರದ ರಾಜ್ಯಾಡಳಿತೆಯ ಶತಮಾನವೊಂದರ ಕಾಲ ಗುಪ್ತವಾದುದಿತ್ತು. ಬಹಮನಿ ಅರಸರ ರಾಜ್ಯಾಡಳಿತೆಯ ಕಾಲದಲ್ಲಿ ಜುವಾರಿ (ಅಗಾಶಿ, ರಘಮಾರಿ) ನದಿಯ ಪಾತ್ರ ಕುಸಿದುಕೊಂಡ ನಿಮಿತ್ತ ಹಡಗುಗಳು ಲಂಗರು ಹಾಕಲು ಅಸಮರ್ಥವಾದುವು. ತತ್ಪರಿಣಾಮ ಗೋಪಕ ಪಟ್ಟಣ ತನ್ನ ಮಹತ್ತನ್ನು ಕಳೆದುಕೊಂಡಿತು. ವಿಜಯನಗರದ ಅರಸರು ಗೋವಾದ ರಾಜಧಾನಿಯನ್ನು ಮಾಂಡವಿ ನದಿಯ ಕಿನಾರೆಯಲ್ಲಿನ ಹಳೆಯ ಗೋವಾಕ್ಕೆ ಸ್ಥಳಾಂತರಿಸಿದರು. ಅತ್ಯಲ್ಪ ಕಾಲದಲ್ಲೇ ಅದು ಮಲಬಾರಿನ ಕರಾವಳಿ ಹಾಗೂ ಒಳಭಾಗಗಳೊಂದಿಗೆ ವ್ಯಾಪಾರಕ್ಕೆ ತೊಡಗಿತು.

೧೪೦೮ರಲ್ಲಿ, ವಿರೂಪಾಕ್ಷ ಗದ್ದುಗೆಯೇರುವ ಹೊತ್ತಿಗೆ ವಿಜಯನಗರ (ತಾತ್ಕಾಲಿಕವೆನ್ನುವಂತೆ) ದುರ್ಬಲವಾಗಿತ್ತು.

೧೬. ಬಹಮನಿಯ ಸುಲ್ತಾನರು (ಮುಂದುವರಿದುದು)

ಹದಿಮೂರನೆಯ ಮತ್ತೆ ಕೊನೆಯ ಬಹಮನಿಯ ಸುಲ್ತಾನ ಎರಡನೆಯ ಮಹಮ್ಮದ್ ಶಾಹನ ಮಂತ್ರಿ ಮತ್ತು ಸೇನಾಧಿಪತಿಯಿದ್ದ ಮಹಮ್ಮದ್ ಗವಾನ್ ೧೪೭೨ ದಲ್ಲಿ ಗೋವಾವನ್ನು ಗೆದ್ದುಕೊಂಡು ಬಹಮನಿ ರಾಜ್ಯದೊಂದಿಗೆ ಸೇರಿಸಿದ. ಫೆರಿಶ್ತನ ಮೇರೆಗೆ ಬೀದರ್ ರಾಜಧಾನಿಯಲ್ಲಿ ಈ ಘಟನೆಯನ್ನು ಏಳು ದಿನಗಳ ಕಾಲ ನಗಾರಿ ಬಾರಿಸಿ ವಿಜಯೋತ್ಸವವೊಂದರಂತೆ ಆಚರಿಸಲಾಯಿತು. ಆ ಬಳಿಕ ಗೋವಾವನ್ನು ಜುನ್ನರ್ ಪ್ರಾಂತದೊಂದಿಗೆ ಸೇರಿಸಲಾಯಿತು.

೧೭. ಬಿಜಾಪುರದ ಆದಿಲ್‌ಶಾಹರು

ಬಹಮನಿ ರಾಜ್ಯ ಒಡೆದು ಹೋದ ನಂತರ ೧೪೮೯ರಲ್ಲಿ ಯುಸುಫ್ ಆದಿಲ್ ಶಾಹ

ಬಿಜಾಪುರದ ಸ್ವತಂತ್ರ ಅರಸನಾದ. ೧೪೭೮ರಲ್ಲಿ ಆತ ಗೋವಾವನ್ನು ಸ್ವಾಧೀನ ಪಡಿಸಿಕೊಂಡ.

ಹದಿನಾರನೆಯ ಶತಮಾನದ ಆದಿಭಾಗದಲ್ಲಿ ಯುಸುಫ್ ಅದಿಲ್ ಶಾಹನ ಆಳ್ವಿಕೆಯ ಕಾಲ ಗೋವಾ ಸಂದರ್ಶಿಸಿದ ಪೋರ್ಚುಗೀಸ್ ಯಾತ್ರಿಕ ಡ್ಯುರೇಟ್ ಬಾರ್ಬೋಸಾ ಹೀಗೆಂದಿರುತ್ತಾನೆ :

"ಈ ನಗರದಲ್ಲಿ ಸಾಮಾನ್ಯ ಮೂರ್ ಜನರು, ಶ್ವೇತ ವರ್ಣಿಯ ವಿದೇಶಿಯರು, ಶ್ರೀಮಂತ ವ್ಯಾಪಾರಿಗಳು ನೆಲೆಸಿರುತ್ತಾರೆ. ಇಲ್ಲಿ ಅನೇಕ ಹಿಂದೂ ವ್ಯಾಪಾರಿಗಳು, ರೈತರು, ಸಿಪಾಯಿಗಳಿದ್ದಾರೆ. ಇದು ದೊಡ್ಡ ವ್ಯಾಪಾರ ಕೇಂದ್ರವೊಂದು. ಇಲ್ಲಿನ ಸುಂದರವಾದ ಬಂದರಿನಲ್ಲಿ ಮಕ್ಕ, ಏಡನ್, ಓರ್ಮುಝ್, ಕೇಂಬೇ ಮತ್ತು ಮಲಬಾರುಗಳಿಂದ ಬಂದ ಹಡಗುಗಳನ್ನು ಕಾಣಬಹುದು. ಬಂದರನ್ನು ಯಾರೊಬ್ಬರ ಅಪ್ಪಣೆಕೊಳ್ಳದೆ ಸಂದರ್ಶಿಸಬಹುದಾಗಿದೆ. ಬಂದರು ಅತಿದೊಡ್ಡದಾಗಿದ್ದು ಇದರ ಮಧ್ಯ ಭಾಗದಲ್ಲಿ ಸುಂದರವಾದ ಕಟ್ಟಡಗಳು, ರಸ್ತೆ, ಚೌಕಗಳಿವೆ. ಇಲ್ಲಿ ದೊಡ್ಡ ಸರೋವರವೊಂದಿದ್ದು ಅದರ ನಡುವೆ ನಯನ ರಮ್ಯ ಕೋಟೆ, ಫಲ, ಪುಷ್ಪೋದ್ಯಾನಗಳಿವೆ. ಅನೇಕ ಹಿಂದೂ ದೇವಸ್ಥಾನ ಮತ್ತು ಮಸೀದಿಗಳಿವೆ."

ಮಹಮ್ಮದ್ ಗವಾನ್ ಮತ್ತು ಬಿಜಾಪುರದ ಅದಿಲ್‌ಶಾಹಿ ಆಳ್ವಿಕೆ ಆ ಮೊದಲಿನ ಬಹಮನಿಯ ಅರಸರ ಆಳ್ವಿಕೆಗಿಂತ ಸೌಮ್ಯ, ಸಹನ ಶೀಲವಿತ್ತು. ಅವರು ಪ್ರಜೆಗಳ ಧಾರ್ಮಿಕ ವಿಚಾರಗಳಲ್ಲಿ ತಲೆ ಹಾಕದೆ, ಅವರ ವ್ಯವಹಾರಗಳನ್ನು ಅವರೇ ನಿಭಾಯಿಸಿಕೊಳ್ಳುವ ಸ್ವಾತಂತ್ರ್ಯವಿತ್ತಿದ್ದರು. ದೇಸಾಯಿ, ಸರ್ದೇಸಾಯಿ, ಪ್ರಭು ದೇಸಾಯಿ ಮತ್ತು ಇನ್ನಿತರರು ಗೋವಾದಲ್ಲಿ ಸನದುಕೊಂಡವರಿದ್ದರು. ಗೋವಾದಲ್ಲಿನ ತಮ್ಮ ಆಳ್ವಿಕೆಯ ಕೊನೆಯ ದಿನಗಳಲ್ಲಿ ವಲಸೆ ಬಂದ ಮುಸಲ್ಮಾನ, ನವಾಯಿತರಿಂದಾದ ಬಾಧೆ, ಗೋವಾದ ಮೇಲಣ ಪೋರ್ಚುಗೀಸರ ವಿಜಯಕ್ಕೆ ಕಾರಣವಾಯಿತೆನ್ನುತ್ತಾರೆ.

ಅರೇಬಿಯಾದ ಕುದುರೆಗಳ ಆಮದಿಗಾಗಿ ವಿಜಯನಗರ ಉತ್ತರಕನ್ನಡದಲ್ಲಿನ ಭಟ್ಕಳದ ನವಾಯಿತ ವ್ಯಾಪಾರಿಗಳನ್ನು ನಂಬಿಕೊಂಡಿರಬೇಕಾಗಿತ್ತು. (ಅಧ್ಯಾಯ ೧೮ ನೋಡಿರಿ) ನವಾಯಿತರು ಈ ಪರಿಸ್ಥಿತಿಯ ಲಾಭಕೊಂಡು ಸರಕಾರದಿಂದ ಅಪಾರ ಲಾಭ ಗಳಿಸಿದರಷ್ಟೆ ಅಲ್ಲ, ಅನೇಕ ಬಾರಿ ಅನ್ಯ ಮುಸಲ್ಮಾನರ ಒತ್ತಡದ ನಿಮಿತ್ತ ವಿಜಯನಗರ ಬಯಸಿದ ಕುದುರೆಗಳು ದೊರೆಯದಂತೆಯೂ ಮಾಡಿದರು. ಇದು ಅಸಹ್ಯವಾದಾಗ ಹೊನ್ನಾವರ (ಉತ್ತರಕನ್ನಡದಲ್ಲಿನ) ದ ವೊಡೆಯರ್ ಅವರಲ್ಲಿನ ಸುಮಾರು ಒಂದು ಸಾವಿರ ಜನರನ್ನು ಕೊಂದಿಕ್ಕಿದ. ಇನ್ನುಳಿದವರು ಗೋವಾಕ್ಕೆ (ತೀಸ್‌ವಾಡಿ) ಓಡಿ ಹೋದರು. ಅಲ್ಲಿನ ಮುಸಲ್ಮಾನ ಅಧಿಕಾರಿಗಳು ನವಾಯಿತರಿಗೆ ಸಂರಕ್ಷಣೆಯಿತ್ತರು.

ವಿಜಯನಗರದ ವ್ಯಾಪಾರಕ್ಕೆ ನವಾಯಿತರು ತೀಸ್‌ವಾಡಿಯಿಂದ ತಡೆಯೊಡ್ಡತೊಡಗಿದರು. ಆಗ ವಿಜಯನಗರದ ಅರಸು, ಹೊನ್ನಾವರದ ತಿಮ್ಮಯ್ಯನ ನಾಯಕತ್ವದಲ್ಲಿನ ನಾಲ್ಕು ಮಂದಿ ನೌಕಾಧಿಕಾರಿಗಳಿಗೆ ಅವರ ವ್ಯಾಪಾರವನ್ನು ತಡೆಹಿಡಿಯುವರ ಆಜ್ಞೆಯಿತ್ತ; ತಾಂಡೇಲರು ಕುದುರೆ ಸಾಗಿಸುತ್ತಿದ್ದ ಹಡಗುಗಳನ್ನು ವಿಜಯನಗರದ ಬಂದರುಗಳತ್ತ ಕೊಂಡೊಯ್ದರು.

ವಿಜಯನಗರ ಕೊಡುವ ಉಪದ್ರವದ ಕೋಪತಾಪಗಳನ್ನು ನವಾಯಿತರು ಸ್ಥಳೀಯ ಹಿಂದುಗಳ ಮೇಲೆ ತೆಗೆದರು. ವೆರ್ಣಯ '' ಸರ್ದೇಸಾಯಿ ಅವರಲ್ಲಿನ ಕೆಲವರನ್ನು ಬಂಧಿಸಿದ. ಆದರೆ ಅವರಿಗೆ ಸ್ಥಳೀಯ ಮುಸಲ್ಮಾನ ಅಧಿಕಾರಿಗಳ ಬೆಂಬಲವಿತ್ತು. ಆ ದಿನಗಳಲ್ಲಿ ಗೋವಾದ ಆಡಳಿತೆಯನ್ನು ಬಿಜಾಪುರದ ಅರಸು ಯುಸೂಫ್ ಅದಿಲ್ ಶಾಹನ ಮೆಚ್ಚಿನ ''ತುರ್ಕ,ಯುಸೂಫ್ ಗುರ್ಗಿ ನೋಡಿಕೊಳ್ಳುತ್ತಿದ್ದ. ಆತ ತನ್ನ ಅಧೀನದಲ್ಲಿದ್ದ ಇನ್ನೂರು ತುರ್ಕರ ನೆರವಿನಿಂದ ಸ್ಥಾನೀಯ ನಿವಾಸಿಗಳೊಂದಿಗೆ ನಿಷ್ಠುರತೆಯಿಂದ ವರ್ತಿಸಿದನೆಂದು ಹೇಳಲಾಗುತ್ತದೆ. ಆಗ ಮ್ಹಾಳ ಪೈ, ತಿಮ್ಮಯ್ಯ ನಾಯಕನ ಮೂಲಕ ಪೋರ್ತುಗೀಸರ ಹಸ್ತಕ್ಷೇಪ ಕೋರಿದ.

ಸಂದರ್ಭಸೂಚಿ

೧. 'ಅರ್ಲೀ ಹಿಸ್ಟರಿ ಆಫ್ ದ ಡೆಕ್ಕನ್' ಡಾ. ಭಂಡಾರ್ಕರ್, ಪುಟ ೨೧೧

೨. 'ದ ಕದಂಬ ಕುಲ', ಜೋರ್ಜ್ ಎಮ್. ಮೊರಾಯಿಸ್, ಪುಟ ೧೫೧

ಮಾಯಿದೇವ ಪಂಡಿತ ಶಿಗದೇವನ ಮಗ ಮತ್ತು ದೇವಶರ್ಮನ ಮೊಮ್ಮಗನಿದ್ದ. ಸಾವಂತವಾಡಿಯಲ್ಲಿನ ಶಿಲಾಶಾಸನವೊಂದರ ಮೇರೆಗೆ ಈತ ಕಾಶ್ಯಪ ಗೋತ್ರದ ಯಜುರ್ವೇದಿ ಬ್ರಾಹ್ಮಣನಿದ್ದ. ಈತ ಹನ್ನೆರಡನೆಯ ಶತಮಾನದಲ್ಲಿ ಮುಸಲ್ಮಾನರ ಬಾಧೆ ತಾಳಲಾರದೆ ಉತ್ತರ ಭಾರತದಿಂದ ಹೊರಟು ಗೋವಾದ ಭಟಗ್ರಾಮ ಮಹಾಲಿನಲ್ಲಿನ ಹಿಂದಾಳೆಯಲ್ಲಿ ನೆಲಸಿದ. ಶಿವಚಿತ್ತ ಅಲ್ಲಿ ಆತನಿಗೆ ಭೂಮಿಯನ್ನಿತ್ತ. ಹಲಸಿಯ ೧೧೭೧ರ ಶಿಲಾಶಾಸನವೊಂದರ ಮೇರೆಗೆ ಆತ ಅಷ್ಟಾವಧಾನಿಯಿದ್ದ. ಆತ ವಾಂಗೀರಸ ಮಹಾತ್ಮ್ಯದಲ್ಲಿ ಉಲ್ಲೇಖಿಸಲ್ಪಟ್ಟ ವತ್ಸ ಗೋತ್ರದ ದೇವಶರ್ಮನಿರದೆ ಅನ್ಯ ವ್ಯಕ್ತಿಯೊಬ್ಬನಿದ್ದ.

ಸಿಂಘಣ ತನ್ನ ಪರಿವಾರದ ವಿಮುಕ್ತಿನಲ್ಲಿ ಗದ್ದುಗೆಯೇರಿದಂತೆ ಗೋವಾವನ್ನು ಬಿಟ್ಟು ಮಾಯಿದೇವ ಆತನಲ್ಲಿ ಊಳಿಗಕ್ಕೆ ತೊಡಗಿದ. ಮುಂದೆ ಅಲ್ಪ ಕಾಲದಲ್ಲಿಯೇ ಆತ ಸೇನೆಯ ಮಹತ್ವದ ಪದಕ್ಕೇರಿದ. ಸಿಂಘಣ ಗೆದ್ದುಕೊಂಡ ಅನೇಕ ಪ್ರಾಂತಗಳಿಗೆ ಸಂಬಂಧಿಸಿದ ಕಾಳಗಗಳಲ್ಲಿ ಆತ ತೋರಿದ ಶೌರ್ಯದ ಗಾಥೆಯನ್ನು ಗೋವಾದ ಮ್ಹಾಪ್ಸೆಯ ಮಹಾಲಿನಲ್ಲಿನ ತಾಮ್ರಶಾಸನವೊಂದರಲ್ಲಿ ಕಾಣಬಹುದು. ಶಿಕಾರಿಪುರ ತಾಲೂಕಿನ ಬಳ್ಳಿಗಾವೆಯ ಕೇದಾರೇಶ್ವರ ದೇವಸ್ಥಾನದಲ್ಲಿನ ಶಿಲಾಶಾಸನದಲ್ಲಿ ಆತನನ್ನು ''ಶ್ರೀಮಾನ್ ಮಹಾಪ್ರಧಾನ ಸರ್ವಾಧಿಕಾರಿ ಮಹಾಪರಮ ವಿಶ್ವಾಸಿ ಶ್ರೀ ಮಾಯಿದೇವ ಪಂಡಿತ''ನೆಂದು ಬಣ್ಣಿಸಲಾಗಿದೆ. ಹೊನ್ನಾಳಿ ತಾಲೂಕಿನಲ್ಲಿನ ಬಾಳಗುತ್ತಿಯ ಸಿದ್ಧೇಶ್ವರ ದೇವಸ್ಥಾನದ ಬಳಿಯ ೧೨೧೫ ಮತ್ತು ೧೨೧೭ರ ಶಿಲಾಶಾಸನಗಳ ಮೇರೆಗೆ ದಣ್ಣಾಯಕ (ದಂಡನಾಯಕ)ನೆಂದಾಗಿ ನೇಮಿಸಲಾದ ಆತನಿಗೆ ಬನವಾಸಿ ಪ್ರಾಂತದ ಆಡಳಿತೆಯ ಹೊಣೆಗಾರಿಕೆಯನ್ನೀಯಲಾಗಿತ್ತು. ಸಿಂಘಣ, ರಾಜ್ಯಾಡಳಿತೆಯ ಪೂರ್ಣಭಾರವನ್ನು ಆತನಿಗೊಪ್ಪಿಸಿ ತನ್ನ ಬದುಕನ್ನು ಭೋಗ, ವಿಲಾಸಗಳಿಗೆ ಮೀಸಲಾಗಿಟ್ಟ.

ಮಡ್ಕಯಿಪೈ, ದ್ವೈಚಲ ಮತ್ತು ಸವಾಯಿ ವೆರೆಗಳ ದೇಸಾಯಿಗಳು ದೇವಶರ್ಮನ ವಂಶಜರು. ಅವರು ಸೂರ್ಯರಾವ್ ಎಂದಾಗಿ ಪರಿಚಿತರಾಗಿರುತ್ತಾರೆ.

ಲಾಮ್‌ಗಾಂವ್‌ನ ದೇಸಾಯಿಗಳು ಮಾಯಿದೇವನ ವಂಶಜರು. ಪೂರ್ವಜರ ಉಪಾಧಿ

'ಮಹಾ ಪರಮ ವಿಶ್ವಾಸಿ' ಗನುರೂಪವಾಗಿ ಅವರು ವಿಶ್ವಾಸ್ ರಾವ್ ಎಂದಾಗಿ ಕರೆಯಲ್ಪಡತೊಡಗಿದರು. ಈ ಕುಟುಂಬದ ಒಂದು ಶಾಖೆ ಅಮೋಣೆಯಲ್ಲಿ ನೆಲೆಸಿತ್ತು. ಅವರು ಅಮೋಣ್ಕರ್ ಎಂದಾಗಿ ಪರಿಚಿತರಾದರು. ಎರಡನೆಯ ಶಾಖೆ ಚಿಖಲೆಯಲ್ಲಿ ಮತ್ತೆ ಮೂರನೆಯ ಶಾಖೆ ನೆರೂರಿನಲ್ಲಿ ನೆಲಸಿತು. ಈ ಶಾಖೆಗಳಲ್ಲಿನ ಕೆಲವೊಬ್ಬರು ತಮ್ಮ ಗೋತ್ರ ಕಾಶ್ಯಪ ನೈರ್ಧ್ರುವ ಎನ್ನುತ್ತಾರಾದರೆ ಅನ್ಯರು ನೈರ್ಧ್ರುವ ಎಂದಷ್ಟೆ ನುಡಿಯುತ್ತಾರೆ. ಸೂರ್ಯರಾವ್ ಮತ್ತೆ ವಿಶ್ವಾಸರಾವ್ ಇವು ಬಿಜಾಪುರದ ಅದಿಲ್‌ಶಾಹ ಈ ಮನೆತನಗಳಿಗಿತ್ತ ಬಿರುದುಗಳಾಗಿವೆ.

೩. ಶಿಲಾಹರರು ಮತ್ತು ಚಡ್ಡೆ (ಕೊಂಕಣಿ ನುಡಿಯುವ ಕ್ಷತ್ರಿಯರು) ಇವರು ಗೋವಾದಲ್ಲಿನ ಜಾಂಬವಲಿ ಅಥವಾ ಪಂಚಮಾಲ್‌ನ ನಿವಾಸಿಗಳು.

೪. ರತ್ತ ರಾಜ (ಡಾ. ಜೆ. ಎಫ್. ಫ್ಲೀಟ್ ಆತನನ್ನು ರಾಹುರಾಜ ಎಂದಾಗಿ ಸಂಬೋಧಿಸುತ್ತಾನೆ) ತನ್ನ ದತ್ತಿ ಪತ್ರದಲ್ಲಿ ಈ ಮನೆತನ ಸಿಂಹಳವನ್ನಾಳಿದ ರಾಜ ಮನೆತನಗಳಲ್ಲಿ ಪ್ರಾಮುಖ್ಯವಾದುದೆಂದಿರುತ್ತಾನೆ. ಸಿಲೋನಿನೊಂದಿಗೆ ಶಿಲಾಹರರ ಸಂಬಂಧವಿರದಿದ್ದ ನಿಮಿತ್ತ ಸಿಂಹಳದ ಉಲ್ಲೇಖ ಗೋವಾ ದ್ವೀಪಕ್ಕೆ ಸಂಬಂಧಿಸಿರಬೇಕು. ಗೋವಾದ ಕದಂಬರು ಕೂಡಾ ಈ ದ್ವೀಪವನ್ನು ಲಂಕಾ ಎಂದಾಗಿ ಸಂಬೋಧಿಸಿರುತ್ತಾರೆ.

೫. 'ದ ಕದಂಬ ಕುಲ', - ಜೋರ್ಜ್ ಎಮ್. ಮೊರಾಯಿಸ್ ೧೯೩೧, ಪುಟ ೧೭೩

೬. 'ದ ಕದಂಬ ಕುಲ' - ಜೋರ್ಜ್ ಎಮ್. ಮೊರಾಯಿಸ್ ೧೯೩೧, ಪುಟ ೩೮೮-೩೯೩ ಈ ದತ್ತಿ ಪತ್ರ ಈಗ ಸೈಂಟ್ ಝೇವಿಯರ್ಸ್ ಕಾಲೇಜ್ ಬೊಂಬೇ ಇವರ 'ದಿ ಮ್ಯೂಸಿಯಮ್ ಆಫ್ ದಿ ಇಂಡಿಯನ್ ಹಿಸ್ಟೋರಿಕಲ್ ರಿಸರ್ಚ್ ಇನ್ಸ್ಟಿಟ್ಯೂಟ್‌ನಲ್ಲಿದೆ.

೭. ಕದಂಬರು ಜ್ಞಾನಾರ್ಜನೆಗೆ ಉತ್ತೇಜನೆ, ವಾಣಿಜ್ಯಾಭಿವೃದ್ಧಿಗೆ ಪ್ರೋತ್ಸಾಹನೆಯನ್ನಿತ್ತರಷ್ಟೆ ಅಲ್ಲ, ನವ ಶಿಲ್ಪ ಪ್ರಕಾರವೊಂದರ ಸೃಷ್ಟಿಕರ್ತರೂ ಎಂದೆನಿಸಿಕೊಂಡರು. ಮುಂದೊಂದು ದಿನ ಶಿಲ್ಪಕಲೆ ತುಸು ಬದಲಾವಣೆಕೊಂಡು ಹೊಯ್ಸಳ ಶಿಲ್ಪ ಪ್ರಕಾರಕ್ಕೆ ಅಸ್ತಿವಾರ ಹಾಕಿತು. ಕದಂಬರ ಪರಿಪೂರ್ಣ ಶಿಲ್ಪ ಪ್ರಕಾರವನ್ನು ದೇಗವ್ವೆಯಲ್ಲಿನ ಕಮಲ ನಾರಾಯಣ ದೇವಾಲಯದಲ್ಲಿ ಕಾಣಬಹುದು. ಗೋವಾದ ಕವಳೆಯ ಬಳಿಯ ಅಗಪುರದಲ್ಲಿನ ಮಾಧವ, ಗೋವಿಂದ, ರಾಮೇಶ್ವರ ದೇವಸ್ಥಾನಗಳು ಸಣ್ಣವಾದರೂ, ಅವು ಈ ಶಿಲ್ಪ ಪ್ರಕಾರದ ಸುಂದರ ಮಾದರಿಗಳಾಗಿವೆ. ಈ ದೇವಸ್ಥಾನಗಳ ನಿರ್ಮಾಣ ಕಾರ್ಯದಲ್ಲಿನ ಸ್ಥಾನಿಕರ ಕೌಶಲ್ಯವನ್ನು ಪೋರ್ಚುಗೀಸರು ವೆಲ್ಹಾ ಗೋವಾದಲ್ಲಿನ ಮುಖ್ಯ ಕ್ರೈಸ್ಥ ಆರಾಧನಾ ಮಂದಿರದ ನಿರ್ಮಾಣ ಕಾರ್ಯದಲ್ಲೂ ಬಳಸಿದರು. ಅವರು ಗೋವಾದಲ್ಲಿನ ತಮ್ಮದೇ ಆದೊಂದು ಶಿಲ್ಪ ಪ್ರಕಾರವನ್ನು ಅಸ್ತಿತ್ವಕ್ಕೆ ತಂದರು. ವಿಭಿನ್ನ ವಿನ್ಯಾಸಗಳ ಪ್ರತಿಮೆಗಳ ಸಮುಚ್ಚಯಕೊಂಡ ಈ ವಿಶಿಷ್ಟ ಶಿಲ್ಪ ಪ್ರಕಾರವನ್ನು ಒರ್ಲೆಮ್‌ನಲ್ಲಿನ ಎರಡನೆಯ ಪುಲಕೇಶಿಯ ಕಾಲದ ಅಲಂಕರಣ ಫಲಕವೊಂದರಲ್ಲಿ ಮತ್ತು ಚಂದರದಲ್ಲಿ ದೊರಕಿದ, ಗೌರಿಯ ವಿಗ್ರಹಕ್ಕೆ ಸುತ್ತು ಹಾಕಿದ್ದ ಆನೆಗಳ ಹಿಂದಿನ ಶಿಲ್ಪದಲ್ಲಿ ನೋಡಬಹುದು. ಈ ಶಿಲ್ಪವನ್ನು ಬೊಂಬೇಯಲ್ಲಿನ 'ದಿ ಇಂಡಿಯನ್ ಹಿಸ್ಟೋರಿಕಲ್ ರಿಸರ್ಚ್ ಇನ್ಸ್ಟಿಟ್ಯೂಟ್'ನ ವಸ್ತು ಸಂಗ್ರಹಾಲಯದಲ್ಲಿ ಕಾಣಬಹುದಾಗಿದೆ. ಸಾರಸ್ವತರ ಕುಟುಂಬಗಳಲ್ಲಿನ ಕೆಲವೊಬ್ಬರಲ್ಲಿ ಶಿಲ್ಪ ಕಲೆಯ ಪ್ರತಿಭೆಯಿತ್ತು.'ಜರ್ನಲ್ ಆಫ್ ದ ಬ್ರಾಂಚ್ ಆಫ್ ದ ರೋಯಲ್ ಏಷ್ಯಾಟಿಕ್ ಸೊಸ್ಯಾಟಿ', ಬೊಂಬೇ ನಂ. ೯.

೮. ಗುಲಹಳ್ಳಿಯ ಹೊರಗಣ ಸಣ್ಣ ಬಸವನ ಗುಡಿಯ ಮುಂಭಾಗದಲ್ಲಿನ ಕನ್ನಡ ಭಾಷೆಯ ಶಿಲಾ ಶಾಸನದಲ್ಲಿ ಭಬ್ಬಣದಂಡನಾಥನನ್ನು ಅಸಾಮಾನ್ಯ ಕಲ್ಪನಾಶಕ್ತಿ ಕೊಂಡ ಕವಿ,

ಬ್ರಾಹ್ಮಣರ ಪಾಲಿನ ಕಲ್ಪವೃಕ್ಷ, ಈಶ್ವರ ಭಕ್ತ, ತರುಣಿಯರ ಕಣ್ಮಣಿ, ಔದಾರ್ಯ, ನಿಷ್ಠೆ, ವಿವೇಕಗಳಿಂದ ಖ್ಯಾತ ನಾಮ ಪುರುಷನೆಂದು ವರ್ಣಿಸಲಾಗಿದೆ. (ದ ಜರ್ನಲ್ ಆಫ್ ದಿ ಬೊಂಬೇ ಬ್ರಾಂಚ್ ಆಫ್ ದ ರಾಯಲ್ ಏಷ್ಯಾಟಿಕ್ ಸೊಸೈಟಿ ಸಂಪುಟ ೯, ೧೮೬೭-೧೮೭೦ ಪುಟ ೨೯೭ ಮತ್ತು ೩೦೦). ಭಟ್ಟ ಸಾರಸ್ವತರಲ್ಲಿನ ಸಾಮಾನ್ಯ ಹೆಸರೊಂದು. ಇದರಿಂದ ಮತ್ತು ಕುಲನಾಮ ದಂಡನಾಥ (ದಂಡನಾಯಕ, ದಣಾಯತ) ದಿಂದ ಆತ ಸಾರಸ್ವತನಿದ್ದನೆನ್ನಬಹುದು.

೯. ಮಾಯಿದೇವನ ಕುರಿತು ೧೨೦೮ರ ನಂತರದ ಯಾವುದೇ ದಾಖಲೆಗಳು ದೊರಕಿಲ್ಲ. ೧೨೦೩ರ ಕೊನೆಯಲ್ಲಿ ಸಿಂಘಣ ಕೊಲ್ಹಾಪುರದ ಅರಸನನ್ನು ಸೋಲಿಸಿ ಆತನ ರಾಜ್ಯವನ್ನು ಸ್ವಾಧೀನ ಮಾಡಿಕೊಂಡ. ಪ್ರಾಪ್ತಿಯ ತಾಮ್ರ ಶಾಸನವೊಂದರ ಮೇರೆಗೆ ಹದಿನೆರಡು ವರ್ಷಗಳ ಬಳಿಕ ಮಾಯಿದೇವ ಮರಾಠ (ಯಾದವರು)ರನ್ನು ಸೋಲಿಸಿ, ತ್ರಿಭುವನ ಮಲ್ಲನನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿ ರಾಜ್ಯವನ್ನಾಳಿದ. ೧೨೨೮ರ ಹೊತ್ತಿಗೆ ಸಿಂಘಣ ಗೋವಾದ ಕದಂಬರ ರಾಜ್ಯವನ್ನು ಗೆದ್ದುಕೊಂಡಿರಬೇಕು. ತನ್ನ ಅಜ್ಜನಿಗಿತ್ತ ಸಂರಕ್ಷಣೆ, ಉತ್ತೇಜನೆಗಳಿಗಾಗಿ ಮಾಯಿದೇವ ಕದಂಬರಿಗೆ ಚಿರಋಣಿಯಾಗಿದ್ದ. ಬನವಾಸಿಯಲ್ಲಿನ ತನ್ನ ಅಧಿಕಾರ ತ್ಯಜಿಸಿದ ಆತ ಅವರ ರಾಜ್ಯವನ್ನು ಮರಳಿ ಗಳಿಸಿಕೊಡಲಾಗಿ ಹದಿನೆರಡು ವರ್ಷಗಳ ಕಾಲ ಶ್ರಮಿಸಿದ. ತ್ರಿಭುವನ ಮಲ್ಲನನ್ನು ಗದ್ದುಗೆಯ ಮೇಲೆ ಕುಳ್ಳಿರಿಸಿ ಕೆಲವೊಂದು ವರ್ಷಗಳ ಕಾಲ ರಾಜ್ಯವಾಳಿದ. ಮಾಯಿದೇವನ ಮರಣಾನಂತರ ತ್ರಿಭುವನಮಲ್ಲ ದೀರ್ಘಕಾಲ ತನ್ನ ರಾಜ್ಯವನ್ನು ಉಳಿಸಿಕೊಳ್ಳಲಸಮರ್ಥನಾದ. ೧೨೩೮ರಲ್ಲಿ ಸಿಂಘಣನ ಸೇನಾಧಿಪತಿ ಬಿಚ್ಚಣ್ಣ ರಾಜ್ಯವನ್ನು ಕಬಳಿಸಿದ.

೧೦. ಮುಸಲ್ಮಾನರು ಸಪ್ತ ಕೋಟೀಶ್ವರ ದೇವಸ್ಥಾನವನ್ನು ಧ್ವಂಸ ಮಾಡಿ ವಿಗ್ರಹವನ್ನು ಕೆಸರಿನ ಗದ್ದೆಗೆ ತೂರಿದ್ದರೆನ್ನಲಾಗುತ್ತದೆ.

೧೧. ವಸಂತ ಮಾಧವನ ಉಲ್ಲೇಖ ಮೊದಲ ಬಾರಿಗೆಂಬಂತೆ ೧೩೭೯ರ ಶಿಲಾ ಶಾಸನವೊಂದರಲ್ಲಿ ಕಾಣಬರುತ್ತದೆ. ವಿರಪನೆಯ ಹರಿಹರನ ಪುತ್ರ ಚಿಕ್ಕರಾಯನ ಪ್ರಧಾನನಾಗಿದ್ದ ಈತ ಚಂದ್ರಗುತ್ತಿ (ಮಲೆನಾಡು)ಯ ಮೂವತ್ತಾರು ಮಹಲುಗಳ ಆಡಳಿತೆ ನೋಡಿಕೊಳ್ಳುತ್ತಿದ್ದನೆನ್ನಲಾಗುತ್ತದೆ. ೧೩೭೭ ರಿಂದ ಹದಿಮೂರು ವರ್ಷಗಳ ಕಾಲ ವಿಜಯನಗರದ ಸೇವೆಯಲ್ಲಿದ್ದ ಆತ ಗೋವಾದ ವಿಜಯದ ಕಾಲ ಮಾಧವ ಮಂತ್ರಿಯ ಕೈಕೆಳಗೆ ಕೆಚ್ಚೆದೆಯ ಕಾಳಗ ಮಾಡಿದ್ದ. ಕೊನೆಗೆ ಆತ ಹರಿಹರನ ಪ್ರಧಾನನ ಪದವಿಗೇರಿದ. ಅನಂತರ ಆತ ತನ್ನ ಹೆಸರಿಗೆ ಗೋವೆಪುರ ವರಾಧೀಶ್ವರ ಎಂಬ ಬಿರುದನ್ನು ಜೋಡಿಸಿಕೊಂಡಿದ್ದ. ೧೩೯೭ರ ಶಿಲಾ ಶಾಸನ ಆತ ಅತ್ರಿ ಗೋತ್ರೀಯನೆಂದೂ, ಆತನಿಗೆ ಬಿಚ್ಚಣ್ಣ ಮತ್ತು ಮಲ್ಲಪ್ಪರೆಂಬ ಮಕ್ಕಳಿದ್ದರೆಂದೂ ಹೇಳುತ್ತದೆ. ಮುಕರವಳ್ಳಿ (ಧಾರವಾರ ಜಿಲ್ಲೆಯ ಹಾನಗಲ್ ತಾಲೂಕಿನಲ್ಲಿನ) ಯಲ್ಲಿನ ೧೩೯೯ರ ಶಿಲಾಶಾಸನದ ಮೇರೆಗೆ ಬಿಚ್ಚಣ್ಣವೊಡೆಯರ್ ಗೋವಾವನ್ನು ಆಳಿದ. ಬೆಳಮಣ್ಣಿನಲ್ಲಿನ (ದಕ್ಷಿಣ ಕನ್ನಡ ಜಿಲ್ಲೆಯ ಉಪ್ಪಿನಂಗಡಿ ತಾಲೂಕಿನ) ೧೪೦೭ರ ತಾಮ್ರ ಶಾಸನದ ಮೇರೆಗೆ ಆತ 'ಮಂಗಳೂರು ರಾಜ್ಯ'ದ ಆಡಳಿತೆ ನಿರ್ವಹಿಸುತ್ತಿದ್ದ. ಬಾರಕೂರಿನ (ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ತಾಲೂಕಿನ) ಸಮೀಪದ ಮಂಗಳಕೇರಿಯ ೧೩೯೮-೧೩೯೦ರ ಶಿಲಾಶಾಸನವೊಂದರ ಮೇರೆಗೆ ಮಲ್ಲಪ್ಪ ವೊಡೆಯರ್ ತುಳುವ ಬಾರಕೂರು ರಾಜ್ಯದ ಆಡಳಿತೆ ನೋಡಿಕೊಳ್ಳುತ್ತಿದ್ದ.

೧೨. ಬಹುಗುಣ ಸದಾಶಿವ ಕಾಮತರ 'ಗೊಯಾಚಿತರ್ಕಾವಳಿ'ಯ ಮೇರೆಗೆ ಮಾಯಿಶೆಣ್ಯೆ ವಾಗ್ಳೆ ಬಾಂದೋಡೆಯ (ಬಂದೀವಡೆಯ) ದೇಶ್‌ಮುಖರ ಅಳಿಯನಿದ್ದ; ಮತ್ತು ೧೪೦೩ರಲ್ಲಿ ವಿಜಯನಗರದ ಕೈಕೆಳಗೆ ಕೊಂಕಣದ ಕಾರ್ಭಾರಿಯಾಗಿ ನೇಮಿಸಲ್ಪಟ್ಟಿದ್ದ ವ್ಯಕ್ತಿಯಾಗಿದ್ದಿರಬೇಕು.

೧೩. ಅಫೋಂಸ ದಿ ಆಲ್ಬುಕೆರ್ಕ್‌ನ ಮಗ ಬ್ರಾಝ್ ಆಲ್ಬುಕೆರ್ಕ್ ಮತ್ತು ೧೫೩೦ರಲ್ಲಿ ಬಾಳಿಕೊಂಡಿದ್ದ ಗಾಸ್ಪರ್ ಕುರ್‍ರೈಯಾ ಇವರು, ೧೪೪೦ರ ಸುಮಾರಿಗೆ ವಿಜಯನಗರ ಗೋವಾವನ್ನು ಕಳೆದುಕೊಂಡಿತಾಗಿ ಬರೆದಿಟ್ಟಿರುತ್ತಾರೆ.

೧೪. ವೆರ್ಣೆಯ ಮ್ಹಾಳ ಪೈ, ಸಾಷಷ್ಟಿ ಮತ್ತು ಕುಡಾಲ ಪರ್ಗಾಣಗಳ ಸರ್ದೇಸಾಯಿಯಾಗಿದ್ದ. ಆತನ ಸ್ಥಾನದಲ್ಲಿ ಬಿಜಾಪುರ ಸರಕಾರವಿತ್ತ ಪ್ರತಾಪರಾವ್ ಬಿರುದಿನ, ಬಾಂದೊಡೆಯ ದೇಸಾಯಿಗಳಲ್ಲಿ ಪ್ರಮುಖನಿದ್ದ, ಬೋಖಡ್ ವಾಘ್ಕರ್‌ನನ್ನು ನೇಮಿಸಲಾಯಿತು. ಪೋರ್ಚುಗೀಸರು ಗೋವಾದಲ್ಲುಳಿದುಕೊಳ್ಳುವ ಶಕ್ಯತೆಯನ್ನು ಮ್ಹಾಳ ಪೈ ಮುಂಗಾಣಲಿಲ್ಲ. ಪೋರ್ಚುಗೀಸರಿಗೆ ಅವನಿತ್ತ ಆಮಂತ್ರಣ ಹಲವೊಂದು ಗಾದೆ ಮಾತುಗಳಿಗೆ ಕಾರಣವಾಯಿತು. 'ಗೊಯಾಂಚಿ ಭುಂಯ್, ಹಿ ಮ್ಹಾಳ ಪೈಚೆ ಘರ್' (ಗೋವಾದ ಭೂಮಿ ಮ್ಹಾಳ ಪೈಯ ಬೀಡು), 'ಮ್ಹಾಳ್ ಪೈಕ್ ಜೊರ್, ಸಗ್ಳ್ಯಾ ಘರಾಕ್ ಪೇಜ್ (ಮ್ಹಾಳ ಪೈಗೆ ಜ್ವರ - ಮನೆ ಮಂದಿಗೆಲ್ಲ ಗಂಜಿಯೂಟ), ಮ್ಹಾಳ ಪೈಚೆ ಕಣ ಸಾಂಡ್ತಾ, ಆಣಿ ಮಾಕಾ ಮೆಳ್ತಾ ಜಾಲ್ಯಾಸ್ ಜಾತಾ (ಮ್ಹಾಳ ಪೈಯ ಅನ್ನ ಚೆಲ್ಲಿ ಹೋಗುತ್ತದೆ. ಅದು ನನಗೆ ಸಿಕ್ಕಿದ್ದರಾಗುತ್ತಿತ್ತು). ಪೋರ್ಚುಗೀಸರ ವಿಜಯದ ನಂತರ ಮ್ಹಾಳ ಪೈ ತನ್ನ ಕುಟುಂಬದ ಸಮೇತ ಕೊಚ್ಚಿಗೆ ಹೋದ. ಕೊಚ್ಚಿಯಿಂದ ಮರಳಿದ ಆತನ ಮಗ ವಿಟ್ಠ ಪೈ ೧೫೫೮ರಲ್ಲಿ ಬಿಜಾಪುರದ ಅದಿಲ್ ಶಾಹನಿಗೆ ಶರಣು ಬಂದು ಆತನಿಂದ ಇನಾಮುಕೊಂಡ.

ಅಧ್ಯಾಯ ೪

ಪೋರ್ಚುಗೀಸರು ಗೆದ್ದ ರಾಜ್ಯಗಳು - ಸಾರಸ್ವತರು ಗೋವಾದಿಂದ ವಲಸೆ ಹೋದುದು

೧. ಅಫೊಂಸ ದಿ ಆಲ್ಬುಕರ್ಕ್‌ನ ಮೂಲಕ ಪೋರ್ಚುಗೀಸರು ಗೆದ್ದ ರಾಜ್ಯ

ಪೋರ್ಚುಗೀಸರು ಭಾರತಕ್ಕೆ ಬಂದಾಗ, ದೇಶ ಇತಿಹಾಸದ ಉಷಃಕಾಲ ಮೊದಲ್ಗೊಂಡ ಅನೇಕ ಸಂಕಟಗಳ ಮೂಲಕ ದಾರಿಸಾಗುತ್ತಿತ್ತು. ಮೊಗಲರು ಇನ್ನೂ ಭಾರತಕ್ಕೆ ದಂಡೆತ್ತಿ ಬಂದಿಲ್ಲವಿತ್ತು. (೧೫೨೬ರಲ್ಲಿ ಬಾಬರ ಮೊಗಲರ ಸಾಮ್ರಾಜ್ಯದ ಸ್ಥಾಪನೆ ಮಾಡಿದ). ದಕ್ಷಿಣ ಭಾರತ ಮತ್ತು ರಜಪೂತರು ಸ್ವಾತಂತ್ರ್ಯವನ್ನುಳಿಸಿಕೊಂಡಿದ್ದ ಪಶ್ಚಿಮ ಭಾರತವನ್ನು ಬಿಟ್ಟರೆ, ಉತ್ತರ ಭಾರತ ಹಲವೊಬ್ಬ ಅಫಘಾನ್ ಅರಸರ ನಡುವೆ ಪಾಲಾಗಿ ಹೋಗಿತ್ತು. ದಕ್ಷಿಣ ಭಾರತ ಬಹಮನಿ ಮತ್ತು ವಿಜಯನಗರದ ಅರಸರ ನಡುವೆ ಸಮನಾಗಿ ಹಂಚಲ್ಪಟ್ಟಿತ್ತು.

ವಿಜಯನಗರದ ವ್ಯಾಪಾರಕ್ಕೆ ಅಡೆತಡೆಗಳನ್ನೊಡ್ಡುತ್ತಿದ್ದ ಗೋವಾದ ಮುಸಲ್ಮಾನರನ್ನು ಬಗ್ಗು ಬಡೆಯಲಾಗಿ ನಿರ್ಮಿಸಿದ ನೌಕಾದಳದ ಅಧಿಕಾರಿ ತಿಮ್ಮಯ್ಯ ನಾಯಕ (ತಿಮೋಜ), ಗೋವಾವನ್ನು ಸ್ವಾಧೀನ ಪಡಿಸಿಕೊಳ್ಳುವುದೇ ಏಕಮಾತ್ರ ಉಪಾಯವೆಂದು ನಂಬಿದ್ದ. ಪಶ್ಚಿಮ ಕರಾವಳಿಯ ಶಕ್ತಿಶಾಲಿ ಮತ್ತು ಜಾಗ್ರತ ಅರಸುಗಳ ಯಾವೊಂದೂ ಭೂಭಾಗವನ್ನು ಸ್ವಾಧೀನ ಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿರದಿದ್ದ ಪೋರ್ಚುಗೀಸರು ಕೇವಲ ವ್ಯಾಪಾರದಿಂದ ಸಂಪತ್ತನ್ನು ಗಳಿಸುವುದರಲ್ಲಷ್ಟೆ ಅಭಿರುಚಿ ಕೊಂಡಿದ್ದರೆಂದು ಆತ ಭಾವಿಸಿದ್ದ. ಅವರಾದರೂ ಭಾರತವನ್ನು ಗೆದ್ದು ಅದನ್ನು ಆಳುವ ಯೋಜನೆ ಮಾಡಿಲ್ಲವಿತ್ತು. ೧೫೦೫ರಲ್ಲಿ ತಿಮ್ಮಯ್ಯ ನಾಯಕ ಪೋರ್ಚುಗೀಸರ ಮೊತ್ತ ಮೊದಲ ವೈಸ್‌ರಾಯ್, ದೋಮ್ ಫ್ರಾನ್ಸಿಸ್ಕೊ ದಿ ಆಲ್ಮೇಡಾನ ಭೇಟಿಕೊಂಡ. ೧೫೦೮ರಲ್ಲಿ ಪೋರ್ಚುಗೀಸರು ಭಟ್ಕಳದಲ್ಲಿದ್ದಾಗ ಆತ ಅವರ ಸಂಪರ್ಕಕೊಂಡು ಗೋವಾದ ಮೇಲಕ್ಕೆ ದಾಳಿಯಿಕ್ಕುವಂತೆ ಸೂಚಿಸಿದ. ೧೫೧೦ರಲ್ಲಿ ಆತ ಅಫೊಂಸ ದಿ ಆಲ್ಬುಕರ್ಕ್‌ನನ್ನು ಕೊಚ್ಚಿಯಲ್ಲಿ ಭೇಟಿಯಾದ.

೧೫೧೦ರಲ್ಲಿ ಯುಸೂಫ್ ಆದಿಲ್ ಶಾಹ ತೀರಿಕೊಂಡ. ಆತನ ಅನನುಭವಿ ಮಗ ಇಸ್ಮಾಯಿಲ್ ಆದಿಲ್‌ಶಾಹ ತಂದೆಯ ಗದ್ದುಗೆಯೇರಿದ.

ಆಲ್ಬುಕರ್ಕ್ ಮತ್ತು ತಿಮ್ಮಯ್ಯ ನಾಯಕರ ಒಕ್ಕೂಟದ ಸೇನೆ ೧೦೦೦ ಪೋರ್ಚುಗೀಸ್ ಮತ್ತು ೩೦೦೦ 'ಮಲಬಾರಿ' ಸೈನಿಕರೊಂದಿಗೆ ಅಗ್ವಾದಾ ಕೋಟೆ ಸೇರಿತು. ೧೫೧೦ರ ಫೆಬ್ರುವರಿ ತಿಂಗಳ ೨೬ರಂದು ಗೋವಾ ದ್ವೀಪ (ಮಾರ್ಗೋವಾ), ಸಾಲ್ಸೆಟ್ (ಸಾಷ್ಟಿ) ಬಾರ್ದೇಝ (ಬಾರ್ದೇಶ್) ಪ್ರಾಂತಗಳು ನಿರಾಯಾಸ ಪತನಗೊಂಡವು. ಪೋರ್ಚುಗಲ್ಲಿನ ಅರಸು ಮೊದಲನೆಯ ಮಾನುಏಲ್‌ನ ಸಮ್ಮತಿಕೊಂಡ ಆಲ್ಬುಕರ್ಕ್ ತಾನು

ಗೆದ್ದುಕೊಂಡ ಭೂಭಾಗದಲ್ಲಿನ ಪ್ರಜೆಗಳಿಗೆ ಪೂಜಾಪಾಠಗಳ ಸ್ವಾತಂತ್ರ್ಯ ಸಾರಿದ. ಮತ್ತು ಅದಿಲ್‌ಶಾಹ ಅವರ ಮೇಲೆ ಹೇರಿದ್ದ ಭಾರೀ ಕರದ ಭಾರವನ್ನೂ ಇಳಿಸಿದ.

ದೊಡ್ಡ ಸೈನ್ಯದೊಂದಿಗೆ ಬಂದ ಇಸ್ಮಾಯಿಲ್ ಅದಿಲ್ ಶಾಹ ೧೫೧೦ರ ಮೇ ತಿಂಗಳ ೧೪ರಂದು ಆಲ್ಬುಕೆರ್ಕ್ ಮತ್ತು ಪೋರ್ಚುಗೀಸರನ್ನು ಗೋವಾದಿಂದ ಹೊಡೆದೋಡಿಸಿದ. ಸ್ವಲ್ಪ ಸಮಯದ ನಂತರ ಆಲ್ಬುಕೆರ್ಕ್, ಪುಣ್ಯವಶಾತ್ ಪೋರ್ಚುಗಲ್ಲಿನಿಂದ ಬಂದ ದೊಡ್ಡ ಪ್ರಮಾಣದ ಶಸ್ತ್ರಾಸ್ತ್ರ, ಅನ್ಯ ಯುದ್ಧೋಪಯೋಗಿ ಸಲಕರಣೆಗಳೊಂದಿಗೆ ಮರಳಿ ಬಂದ. ಕೆಲವೊಂದು ತಿಂಗಳ ಭೀಷಣ ಯುದ್ಧದ ನಂತರ, ೧೫೧೦ರ ನವಂಬರ್ ತಿಂಗಳ ೨೫ರಂದು ಗೋವಾದ ದ್ವೀಪವನ್ನು ಮತ್ತೆ ಗೆದ್ದುಕೊಂಡು ಮುಸಲ್ಮಾನ ಸಮಾಜದ ಗಂಡು, ಹೆಣ್ಣು, ಗಣ್ಯ ವ್ಯಕ್ತಿ ಎಂಬವುಗಳ ಪರಿವೆಯಿಲ್ಲದೆ ಎಲ್ಲೊಬ್ಬರ ನಿರ್ಘೃಣ ಹತ್ಯೆಗೆ ಆದೇಶವಿತ್ತ; ಮತಿಭ್ರಷ್ಟ ಸೈನಿಕರು ನಾಲ್ಕು ದಿನಗಳ ಕಾಲ ಈ ಪಾಶವೀಕೃತ್ಯ ನಡೆಸಿದರು. ಅದೇ ಹೊತ್ತಿಗೆ ಆಲ್ಬುಕೆರ್ಕ್ ಬ್ರಾಹ್ಮಣರು ಮತ್ತು ಇನ್ನುಳಿದ ಜನತೆಗೆ ಯಾವೊಂದು ಬಗೆಯ ಭಾದೆಯಾಗಬಾರದೆಂಬ ಆಜ್ಞೆಯನ್ನೂ ಇತ್ತ. ೧೫೧೩ರಲ್ಲಿ ಅದಿಲ್‌ಶಾಹ ಮತ್ತೆ ದಾಳಿಯಿಕ್ಕಿದ. ಆದರೆ ಆತನನ್ನು ಹಿಮ್ಮೆಟ್ಟಿಸಲಾಯಿತು.

ಆಲ್ಬುಕೆರ್ಕ್ ಸ್ಥಾನೀಯ ನಿವಾಸಿಗಳ ನಡುವಣ ಶಾಂತಿ, ಸಮಾಧಾನಗಳಿಗಾಗಿ ಸರ್ವ ಪ್ರಯತ್ನ ಮಾಡಿದ್ದ ಉತ್ತಮ ಆಡಳಿತಗಾರನಿದ್ದ.

ಆತ ಮುಸಲ್ಮಾನ ಅಧಿಕಾರಿಗಳ ಸ್ಥಾನದಲ್ಲಿ ಪೋರ್ಚುಗೀಸ್ ಮತ್ತು ಹಿಂದೂ ಅಧಿಕಾರಿಗಳನ್ನು ನೇಮಿಸಿದ. ಸತಿ ಹೋಗುವ ಪದ್ಧತಿಗೆ ತಡೆ ಹಾಕಿದ. ಮತ್ತೆ ಲಿಸ್ಬನ್‌ನ ಮಾದರಿಯಲ್ಲಿ ನಗರ ಸಭೆ, ನ್ಯಾಯಾಲಯಗಳನ್ನು ಸ್ಥಾಪಿಸಿದ. ಗೋವಾದಲ್ಲಿ ಮೊತ್ತ ಮೊದಲ ಕ್ರೈಸ್ತ ಆರಾಧನಾ ಮಂದಿರವನ್ನು ಕಟ್ಟಿಸಿ ಅದಕ್ಕೆ ಮಸೀದಿಗಳ ಆಸ್ತಿಯನ್ನು ಉಂಬಳಿಯಾಗಿತ್ತ. ಹಲವೊಂದು ಕಟ್ಟಡಗಳನ್ನು ಕಟ್ಟಿಸಿ ನಗರವನ್ನು ಅಂದಗೊಳಿಸಿದ.

೨. ಅಫೊಂಸ ದಿ ಅಲ್ಬುಕೆರ್ಕ್

ಮುಸಲ್ಮಾನರ ಅಧೀನವಿದ್ದ ಗೋವಾದ ಮೇಲಣ ತನ್ನ ವಿಜಯಕ್ಕೆ ಹಿಂದೂ ಅರಸರ ಸಹಾನುಭೂತಿ ಗಳಿಸಲಾಗಿ ಆತ ವಿಜಯನಗರಕ್ಕೆ ರಾಯಭಾರಿಯನ್ನು ಕಳುಹಿಸಿ ತನ್ನ ಹೆಸರಿನಲ್ಲಿ ಈ ಮುಂದಿನಂತೆ ಹೇಳುವರೆ ಆದೇಶವಿತ್ತ; ''ಈ ಭೂಮಿಯ ದಯಾಶೀಲ ಅರಸರಿಗೆಲ್ಲ ಗೌರವವನ್ನು ತೋರುವಂತೆ, ಮಲಬಾರಿನ ಸಮೇತ ಎಲ್ಲೊಬ್ಬರ ಸೇವೆಯನ್ನು ಸ್ವೇಚ್ಛೆಯಿಂದ ಮಾಡುವಂತೆ, ಅವರೊಂದಿಗೆ ಯೋಗ್ಯ ರೀತಿಯಿಂದ ವರ್ತಿಸುವಂತೆ, ಅವರ ಸರಕನ್ನಾಗಲೀ ಅಥವಾ ಸರಕು ತುಂಬಿದ್ದ ಹಡಗುಳನ್ನಾಗಲೀ ವಶಪಡಿಸಿಕೊಳ್ಳದಂತೆ, ಯವನರೊಂದಿಗೆ ಅವಿರತ ಯುದ್ಧ ಮಾಡಿ ಅವರ ಅಸ್ಥಿತ್ವ ಕೊನೆಗಾಣಿಸುವಂತೆ ಪೋರ್ಚುಗಲ್ಲಿನ ದೊರೆ ನನಗೆ ಆಜ್ಞೆಯಿತ್ತಿರುತ್ತಾನೆ.''

ಅಧಿಕಾರಿಗಳ ಸುಳ್ಳು ಕಥೆಗಳನ್ನು ನಂಬಿದ ಪೋರ್ಚುಗಲ್ಲಿನ ದೊರೆ ಏನೊಂದನ್ನೂ ವಿಚಾರಿಸದೆ ಆಲ್ಬುಕೆರ್ಕ್‌ನನ್ನು ಸ್ಥಾನಾಂತರಗೊಳಿಸಿ ಆತನ ಸ್ಥಾನದಲ್ಲಿ ದೋಮ್ ಲೊಪೊ ಸೊರಾಯಿಸ್ ದಿ ಅಲ್ಬೆಗಾರಿಯನನ್ನು ನೇಮಿಸಿದ. ಆ ಹೊತ್ತಿಗೆ ಆಲ್ಬುಕೆರ್ಕ್ ಸಮುದ್ರ ಮಾರ್ಗವಾಗಿ ಆಫ್ರಿಕಾಕ್ಕೆ ಪ್ರಯಾಣ ಮಾಡುತ್ತಿದ್ದ. ಗೋವಾಕ್ಕೆ ಮರಳಿದ ಆತ ೧೫೧೮ರ

ಡಿಸೆಂಬರ್ ೧೬ರಂದು ತೀರಿಕೊಂಡ. ಆತನ ಮರಣಾನಂತರ ಕೊಚ್ಚಿ, ಕಣ್ಣನೂರು, ಭಟ್ಕಳ, ಹೊನ್ನಾವರ ಮತ್ತು ಕೇಂಬೇಗಳ ತುಂಡರಸರು ಪೋರ್ಚುಗಲ್ಲಿನ ಸ್ವಾಮ್ಯ ಸ್ವೀಕರಿಸಿದರು.

೩. ದೋಮ್ ನುನೋ ದ ಕುನ್ಹಾ

ಒಬ್ಬರ ನಂತರ ಇನ್ನೊಬ್ಬರಂತೆ ಬಂದ ರಾಜ್ಯಪಾಲ, ವೈಸ್‌ರಾಯರ ಪ್ರಯಾಸದ ಬಳಿಕವೂ ನೀತಿ ಭ್ರಷ್ಟ, ಸುಖಲೋಲುಪ್ತರಿದ್ದ ಪೋರ್ಚುಗೀಸ್ ಅಧಿಕಾರಿಗಳ ವರ್ತನೆಯಲ್ಲಿ ಸುಧಾರಣೆ ಕಾಣಬರಲಿಲ್ಲ. ಅಲ್ಬುಕರ್ಕ್‌ನ ಬಳಿಕ ಬಂದ ಪೋರ್ಚುಗಲ್ಲಿನ ಖ್ಯಾತ ನಾಮ ಅಧಿಕಾರಿ ದೋಮ್ ನುನೋ ದ ಕುನ್ಹಾ. ತಾನು ಆಚರಣೆಗೆ ತಂದ ಕಠೋರವಾದ ಕಾನೂನುಗಳ ಮೂಲಕ ಅಧಿಕಾರಿಗಳ ಭ್ರಷ್ಟಾಚಾರ ಕೊನೆಗೊಳಿಸಿದ. ಶೇರ್‌ಶಾಹನ ವಿರುದ್ಧ ಆತ ಬಂಗಾಳದ ಸುಲ್ತಾನನ ಮಧ್ಯವರ್ತಿಯಾಗಿ ಬಂದು ಹುಗ್ಲಿಯಲ್ಲಿ ಪೋರ್ಚುಗೀಸ್ ವಸಾಹತೊಂದನ್ನು ಸ್ಥಾಪಿಸಲು ಅನುಮತಿ ಕೊಂಡ. ಹುಮಾಯೂನನ ವಿರುದ್ಧ ಕಾದಾಡಲು ಸಹಾಯ ಮಾಡಿದ ಬದಲಿಗೆ ಆತ ಗುಜರಾತಿನ ಅರಸನಿಂದ ಬಸ್ಸೀನನ್ನು ಕೊಂಡು ೧೫೩೪ರಲ್ಲಿ ದುರ್ಗಮದುರ್ಗವೊಂದನ್ನು ನಿರ್ಮಿಸಿದ. ಆತ ಥಾಣಾ, ತಾರಾಪುರ, ಬಾಂದ್ರಾ, ಮಾಹಿಮ್ ಮತ್ತು ಬೊಂಬೇಗಳನ್ನು ವಶಪಡಿಸಿಕೊಂಡ. ಇನ್ನೊಂದು ಬಾರಿಯ ಸಹಾಯದ ಬದಲಿಗೆ ಗುಜರಾತಿನ ಸುಲ್ತಾನನಿಂದ ಕಾಥಿಯಾವಾರ್‌ನ ದಿಯುವನ್ನು ಕೊಂಡ.

ಗೋವಾವನ್ನು ಮರಳಿ ಗೆದ್ದರೂ ಸಾಷಷ್ಟಿ, ಬಾರ್ದೇಶ್ ಪ್ರಾಂತಗಳು ಆದಿಲ್‌ಶಾಹನ ಅಧೀನದಲ್ಲುಳಿದವು. ೧೫೩೩ರಲ್ಲಿ ತೀರಿಕೊಂಡ ಆದಿಲ್‌ಶಾಹನ ಮಲ್ಲು ಮತ್ತು ಇಬ್ರಾಹಿಮ್ ಹೆಸರಿನ ಮಕ್ಕಳಿಬ್ಬರ ನಡುವಣ ವಿವಾದದಲ್ಲಿ ಪೋರ್ಚುಗೀಸರು ಮಧ್ಯವರ್ತಿಗಳಾಗಿದ್ದರು. ಮಲ್ಲು ಸಾಷಷ್ಟಿ ಮತ್ತು ಬಾರ್ದೇಶ್ ಪ್ರಾಂತಗಳನ್ನು ಪೋರ್ಚುಗೀಸರಿಗೆ ಒಪ್ಪಿಸಿದ. ಬಿಜಾಪುರದ ಗದ್ದುಗೆಯೇರಿದ ಇಬ್ರಾಹಿಮ್ ಬಿರುಸಿನ ಕದನದ ಬಳಿಕ ಈ ಪ್ರಾಂತಗಳನ್ನು ಮರಳಿ ವಶಪಡಿಸಿಕೊಂಡ.

೪. ಪೋರ್ಚುಗೀಸ್ ಆಧಿಪತ್ಯದ ವಿಸ್ತರಣೆ

೧೫೪೭ರ ಹೊತ್ತಿಗೆ ಪೋರ್ಚುಗೀಸರು ರತ್ನಾಗಿರಿ ಜಿಲ್ಲೆಯ ವೆಂಗುರ್ಲಾದ ದಕ್ಷಿಣ ಭಾಗದವರೆಗೆ ವ್ಯಾಪಿಸಿದ್ದ ಭೂಭಾಗದ ಮೇಲೆ ತಮ್ಮ ಅಧಿಕಾರ ಸ್ಥಾಪಿಸಿದ್ದರು. ದೋಮ್ ಜುವಾವ್ ದಿ ಕಾಸ್ಟ್ರೋ (ಗವರ್ನರನ ಪದ ಭೂಷಿಸಲು ಬಂದ ಆತ ೧೫೪೫-೧೫೪೮ರಲ್ಲಿ ವೈಸ್‌ರಾಯ್‌ನಾಗಿ ನೇಮಿಸಲ್ಪಟ್ಟ). ಫೊಂಡಾದಲ್ಲಿ ಇಬ್ರಾಹಿಮ್ ಆದಿಲ್‌ಶಾಹನನ್ನು ಸೋಲಿಸಿ ಸಾಷಷ್ಟಿ ಮತ್ತು ಬಾರ್ದೆಶ್ ಪ್ರಾಂತಗಳನ್ನು ಮರಳಿ ಸ್ವಾಧೀನ ಪಡಿಸಿಕೊಂಡ. ಒಂಭತ್ತು ವರ್ಷಗಳಿಗೂ ಮಿಕ್ಕಿ ಭಾರತದಲ್ಲಿನ ಸೇನೆಯಲ್ಲಿದ್ದ ಪೋರ್ಚುಗೀಸರಿಗೆ ಪೋರ್ಚುಗೀಸ್ ಸರಕಾರ ಮುಕ್ತ ವ್ಯಾಪಾರದ ಅಧಿಕಾರವನ್ನಿತ್ತಿತು. ಮಾತ್ರ ಅದು ಗಂಭೀರ ರೂಪದ ದುರುಪಯೋಗಕ್ಕೆ ಕಾರಣವಾಯಿತು. ಆತ ಸಂಬಳವನ್ನೇರಿಸಿ ಅವರ ವ್ಯಾಪಾರೋದ್ಯಮದ ಪ್ರವೃತ್ತಿಯನ್ನು ತಡೆಹಿಡಿಯಲೆತ್ನಿಸಿ ವಿಫಲನಾದ. ೧೫೪೬ರಲ್ಲಿ ಕೇಂಬೇಯ (ಖಂಬಾಯತ್) ಮುಸಲ್ಮಾನರು ದಿಯುವನ್ನು ವಶಪಡಿಸಿಕೊಳ್ಳಲೆತ್ನಿಸಿದರು. ಆದರೆ ಆತ ಅದನ್ನುಳಿಸಿಕೊಳ್ಳುವಲ್ಲಿ ಯಶಸ್ವಿಯಾದ

ಸಾಷಷ್ಟಿ, ಬಾರ್ದೇಶ್ ಪ್ರಾಂತಗಳನ್ನು ಮರಳಿಕೊಳ್ಳುವ ೧೫೫೭ರ ಅದಿಲ್‌ಶಾಹನ ಪ್ರಯತ್ನ ವಿಫಲವಾಯಿತು.

೧೫೫೮ರಲ್ಲಿ ವೈಸ್‌ರಾಯ್‌ಯಾಗಿ ಬಂದ ದೋವ್ ಕೋನ್‌ಸ್ಟಾಂಟಿನೋ ದಿ ಬ್ರಗಾಂಝಾ ದಮಣವನ್ನು ವಶಪಡಿಸಿ ಅಲ್ಲಿ ದುರ್ಗಮ ದುರ್ಗವೊಂದನ್ನು ಕಟ್ಟಿಸಿದ. ಆ ದಿನಗಳಲ್ಲಿ ಗೋವಾದಲ್ಲಿದ್ದು, ತನ್ನ ಕವಿತೆಯೊಂದರ ಮೂಲಕ ಪೋರ್ಚುಗೀಸ್ ಅಧಿಕಾರಿಗಳನ್ನು ತೀವ್ರವಾಗಿ ಖಂಡಿಸಿದ ಖ್ಯಾತನಾಮ ಪೋರ್ಚುಗೀಸ್ ಕವಿ ಲುಯಿಝ್ ದಿ ಕಮೋಯಿನ್ಸ್‌ನನ್ನು ಆತ ಗೋವಾದಿಂದ ಹೊರಕ್ಕಟ್ಟಿದ.

೧೫೫೫ರ ಹೊತ್ತಿಗೆ ಪೋರ್ಚುಗೀಸರ ರಾಜ್ಯ ವಿಸ್ತಾರಗೊಂಡಿದ್ದು ಅದು ಥಾಣಾ ಜಿಲ್ಲೆಯ ಸಾಲ್ಸೆಟ್ಟ್ ದ್ವೀಪವನ್ನೊಳಗೊಂಡಿತ್ತು. ೧೫೭೦ರಲ್ಲಿ ಪೋರ್ಚುಗೀಸರು ಅದಿಲ್‌ಶಾಹ ಮತ್ತು ನಿಝಾಮ್‌ಶಾಹಾರ ಸಂಯುಕ್ತ ಸೇನೆಯನ್ನು ಪೂರ್ಣ ಸೋಲಿಸಿದರು. ಸಾಷಷ್ಟಿ, ಬಾರ್ದೇಶ್ ಪ್ರಾಂತಗಳು ಪೋರ್ಚುಗೀಸರ ಅಧೀನ ಉಳಿದವು.

೫. ಡಚ್ ಮತ್ತು ಬ್ರಿಟಿಷರು

೧೫೮೦ರಲ್ಲಿ ಸ್ಪೈನ್ ದೇಶದ ಎರಡನೆಯ ಫಿಲಿಪ್ ಪೋರ್ಚುಗಲ್ಲಿನ ಉತ್ತರಾಧಿಕಾರಿಯಾದ. ಮತ್ತೆ ಅದು ೧೬೧೨ರ ತನಕ ಸ್ಪೈನಿನ ಅರಸರಿಂದ ಆಳಲ್ಪಟ್ಟಿತು. ೧೬೧೦ರಲ್ಲಿ ಡಚ್ಚರು ಗೋವಾದ ಮೇಲೆ ತಡೆಗಟ್ಟು ಹಾಕಿದರು. ಅದೇ ವರ್ಷ ಅವರು ಮರ್ಮಗೋವಾವನ್ನಾಕ್ರಮಿಸಿ ಅಲ್ಲಿ ಸ್ವಲ್ಪ ಕಾಲ ಉಳಿದುಕೊಂಡರು. ೧೬೩೮ ಮತ್ತೆ ೧೬೫೭ರ ನಡುವೆ ಪೋರ್ಚುಗೀಸ್ ಮತ್ತು ಡಚ್ಚರ ನಡುವೆ ಮೇಲಿಂದ ಮೇಲೆ ಯುದ್ಧಗಳಾದವು.

ಸೂರತ್ತಿನ ಬಂದರವನ್ನು ಸೇರಲೆತ್ನಿಸಿದ ಬ್ರಿಟಿಷ್ ಹಡಗುಗಳಿಗೆ ತಡೆಯೊಡ್ಡತೊಡಗಿದ ಪೋರ್ಚುಗೀಸರ ಮತ್ತು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ನಡುವೆ ೧೬೧೨ರಲ್ಲಿ ಮೊದಲ ಬಾರಿಗೆ ಹೋರಾಟ ನಡೆಯಿತು. ಹೋರಾಟವನ್ನು ಆಸ್ಥೆಯಿಂದ ನಿರೀಕ್ಷಿಸುತ್ತಿದ್ದ ಮೊಗಲ್ ಅಧಿಕಾರಿಗಳ ಉಪಸ್ಥಿತಿಯಲ್ಲಿ ಪೋರ್ಚುಗೀಸರ ಹಡಗುಗಳನ್ನು ನಾಶಗೊಳಿಸಲಾಯಿತು. ಸ್ವಲ್ಪ ಕಾಲದ ನಂತರ ಬ್ರಿಟಿಷರು ಒರ್ಮುಝ್‌ವನ್ನೂ ವಶಪಡಿಸಿಕೊಂಡರು. ಪೋರ್ಚುಗೀಸ್ ರಾಜಕನ್ಯೆ ಕೆಥರಿನ್ ಬ್ರಗಾಂಝಾಳನ್ನು ವಿವಾಹವಾದ ಎರಡನೆಯ ಚಾರ್ಲ್ಸ್‌ನಿಗೆ ೧೬೨೭ರಲ್ಲಿ ಪೋರ್ಚುಗೀಸ್ ಸರಕಾರ ಬೊಂಬೇಯನ್ನು ವರದಕ್ಷಿಣೆಯ ರೂಪದಲ್ಲಿತ್ತಿತು.

೬. ಗೋವಾ

ಗೋವಾದ ಮಹತ್ವ ತೀವ್ರಗತಿಯಲ್ಲಿ ಬೆಳೆದುಕೊಂಡಿತು. ಕ್ರಮೇಣ ಅದು ಪೋರ್ಚುಗೀಸ್ ಆಧಿಪತ್ಯದ ಪ್ರಮುಖ ಪೌರಸ್ತ್ಯ ಪಟ್ಟಣವೊಂದಾಗಿ ಪರಿಗಣಿಸಲ್ಪಟ್ಟಿತು. ೧೫೭೦ರ ಹೊತ್ತಿಗೆ ಗೋವಾ ಶ್ರೀಮಂತಿಕೆಯ, ವೈಭವದ ಉಚ್ಛ್ರಾಯಾವಸ್ಥೆ ಕಂಡಿತು. ಈಸ್ಟ್ ಇಂಡಿಯಾ ಕಂಪನಿಯ ಮೊದಲ ದಿನಗಳಲ್ಲಿ 'ಗೋವಾ ದೌರಾಡಾ' (ಸುವರ್ಣ ಗೋವಾ) ಶ್ರೀಮಂತ ಪಟ್ಟಣವೊಂದಾಗಿದ್ದಿರಬೇಕು. ''ಗೋವಾವನ್ನು ಕಂಡ ಯಾರೊಬ್ಬನೂ ಲಿಸ್ಬನ್ ಕಾಣಬೇಕಾಗಿಲ್ಲ'' ಎಂಬುದು ಆ ದಿನಗಳಲ್ಲಿನ ಮನೆ ಮಾತಾಗಿತ್ತು. ಅದು ಏಷ್ಯಾದ ಸ್ವಾಭಾವಿಕ ವಾಣಿಜ್ಯ ಕೇಂದ್ರವಾಗಿತ್ತು. ೧೫೮೩ರಲ್ಲಿ ಗೋವಾವನ್ನು ಸಂದರ್ಶಿಸಿದ ಡಚ್ಚ್ ಪ್ರವಾಸಿ

ಜೋನ್‌ಹ್ಯೂಗನ್ ವಾನ್‌ಲಿನ್‌ಸ್ಟನ್‌ನ ಮೇರೆಗೆ 'ಅಲ್ಲಿ ಅರೇಬಿಯಾ, ಆರ್ಮೇನಿಯಾ, ಪರ್ಷಿಯಾ, ಪೇಗು, ಸಯಾಂ, ಮಲಕ್ಕಾ, ಜಾವಾ, ಮತ್ತು ಚೀನಾಗಳಲ್ಲಿನ ವ್ಯಾಪಾರಿಗಳಿದ್ದರು. ಅಲ್ಲಿ ವೆನಿಸ್ ನಿವಾಸಿಗಳು, ಇಟಾಲಿಯನರು, ಜರ್ಮನ್, ಬೆಲ್ಜಿಯನ್, ಸ್ಪೇನಿಯರ್ಡ್, ಬ್ರಿಟಿಷ್, ಯೆಹೂದಿ ಜನತೆಯೂ ಇತ್ತು; ಆದರೆ ಹಿಂದುಗಳಿಗಷ್ಟೆ ಧರ್ಮಕ್ಕೆ ಸಂಬಂಧಿಸಿದ ಅನುಷ್ಠಾನಗಳನ್ನು ಸಾರ್ವತ್ರಿಕವಾಗಿ ಆಚರಿಸಲು ಬಂಧನವಿತ್ತು.'

೭. ಪೋರ್ಚುಗೀಸರ ಅವನತಿ

ಖಡ್ಗದ ಬಲದಿಂದ ಗಳಿಸಿದ ವಿಜಯವನ್ನು ಮತಾಂತರೀಕರಣದಿಂದ ಉಳಿಸಲೆತ್ನಿಸಿದ ಪೋರ್ಚುಗೀಸರ ಪ್ರಯತ್ನ ಹೇಯವಿತ್ತು. ೧೬೧೨ರ ನಂತರ ಪೋರ್ಚುಗೀಸರ ಅವನತಿಗೆ ಆರಂಭವಾಯಿತು. ಅವರ ವ್ಯಾಪಾರ ಆದಾಗಲೇ ಕುಗ್ಗಿತ್ತು. ಸಭ್ಯ ವ್ಯಕ್ತಿಗಳು ವ್ಯಾಪಾರ ಮಾಡಲು ಅಸಮರ್ಥರಿದ್ದರು. ಗುಲಾಮರ ದುಡಿಮೆ ಕುಟುಂಬದ ಆದಾಯವಾಗಿತ್ತು. ಕುತ್ತಿಗೆಯಲ್ಲಿನ ದೊಡ್ಡ ಜಪಸರಗಳನ್ನು ಬಿಟ್ಟರೆ ಮನೆಯಲ್ಲಿ ಸ್ತ್ರೀ, ಪುರುಷರು ಭಿಕ್ಷುಕರಂತೆ ಅವ್ಯವಸ್ಥಿತ ಕೊಳಕು ಉಡುಪು ತೊಡುತ್ತಿದ್ದರು. ಮಾತ್ರ ವಿದೇಶಕ್ಕೆ ತೆರಳಿದಾಗ ಅಲ್ಲಿ ತಮ್ಮ ಶ್ರೀಮಂತಿಕೆಯ, ಐಶ್ವರ್ಯದ ಡಾಂಭಿಕ ಪ್ರದರ್ಶನ ಮಾಡುತ್ತಿದ್ದರು.

ಮುಂದೆ ಅವರ ಅವನತಿ ವೇಗಕೊಂಡಿತು. ಬೊಕ್ಕಸ ಬರಿದಾಯಿತು. ಮಹತ್ತಿನ ಹುದ್ದೆಗಳು ಹರಾಜಿನ ಮೂಲಕ ಮಾರಾಟವಾಗತೊಡಗಿದವು. ಕ್ರಮೇಣ ರಾಜ್ಯ ಕುಸಿದುಕೊಂಡಿತು.

೮. ಧಾರ್ಮಿಕ ಸತಾವಣೆ

ಮರಾಠರು ತಮ್ಮ ದುರ್ದೆಸೆಯ ದಿನಗಳಲ್ಲೂ ಪೋರ್ಚುಗೀಸರೊಂದಿಗೆ ಯುದ್ಧ ಮಾಡಬೇಕಿದ್ದರೆ ಅದಕ್ಕಿದ್ದ ಕಾರಣ ಹಿಂದುಗಳ ಕುರಿತಾದ ಧಾರ್ಮಿಕ ಸತಾವಣೆಯಿತ್ತು.

ಗೋವಾದ ಪೋರ್ಚುಗೀಸರು ಮತ್ತು ಅವರ ಆಳ್ವಿಕೆ ಅದು ಪೂರ್ವನಿಯೋಜಿತ ಅಪವಿತ್ರೀಕರಣ, ವಿಧ್ವಂಸ ಮತ್ತು ವಿನಾಶಗಳ ಮೈನವಿರೆಬ್ಬಿಸುವ ಕಥೆಯೊಂದಿತ್ತು ".

ಮೂರನೆಯ ಜುವಾವ್ ಅರಸನ ಆಜ್ಞೆಯ ಮೇರೆಗೆ ಗೋವಾ ದ್ವೀಪದ ತೀಸ್‌ವಾಡಿಯಲ್ಲಿನ ದೇವಸ್ಥಾನಗಳನ್ನು ಧ್ವಂಸಗೊಳಿಸಲಾಯಿತು. ೧೫೪೧ರಲ್ಲಿ ಈ ದೇವಸ್ಥಾನಗಳ ಸಂಪತ್ತು, ಜಮೀನನ್ನು ವಶಪಡಿಸಿಕೊಳ್ಳಲಾಯಿತು. ೧೫೪೨ರಲ್ಲಿ ಗೋವಾಕ್ಕೆ ಬಂದ ಫ್ರಾನ್ಸಿಸ್ ಝೇವಿಯರ್ ಹಿಂದುಗಳ ಧಾರ್ಮಿಕ ಸತಾವಣೆ ತೀವ್ರಗೊಳಿಸಿದ. ಸಾಷ್ಟಿ (ಸಾಲ್ಸೆಟ್) ಮತ್ತು ಬಾರ್ದೇಶ್ (ಬಾರ್ದೇಜ್)ಗಳನ್ನು ಮರಳಿಗಳಿಸಿದ ಪೋರ್ಚುಗೀಸರು ಅಲ್ಲಿನ ದೇವಸ್ಥಾನಗಳನ್ನು ಧ್ವಂಸಗೊಳಿಸಿದರು. ಹಿಂದೆ ಯಾರೊಬ್ಬರೂ ಕಂಡರಿಯದ ರೀತಿಯಲ್ಲಿ ಹಿಂದುಗಳಿಗೆ ಪೀಡೆಯಿತ್ತರು. ಅನೇಕರು ತಮ್ಮ ಸಂಸಾರ ಮತ್ತು ಪೂಜಿಸುತ್ತಿದ್ದ ದೇವರ ಮೂರ್ತಿಗಳೊಂದಿಗೆ ನೆರೆಯ ಅರಸು ಸೋಂದೆಯ ಮತ್ತು ವಿಜಯನಗರದ ರಾಜ್ಯಗಳಿಗೆ ಪಲಾಯನ ಮಾಡಿದರು. ೧೫೬೦ರಲ್ಲಿ ಗೋವಾದಲ್ಲಿ ಕ್ರಿಸ್ತೀಯ ಸಂಪ್ರದಾಯ ವಿರೋಧಿ ನಡವಳಿಕೆಯನ್ನು ದಬ್ಬಿಡಲಾಗಿ ನ್ಯಾಯಾಲಯವೊಂದನ್ನು ಸ್ಥಾಪಿಸಲಾಯಿತು.

೬. ಪೋರ್ಚುಗೀಸರು ಮತ್ತು ಮರಾಠರು

ಪಶ್ಚಿಮ ಕರಾವಳಿಯ ಭಾಗವೊಂದನ್ನು ಗೆದ್ದ ಶಿವಾಜಿ ನೌಕಾದಳದ ನಿರ್ಮಾಣಕ್ಕೆ ತೊಡಗಿದಾಗ ಪೋರ್ಚುಗೀಸರು ಆತನೊಂದಿಗೆ ಸಂಧಾನಕ್ಕೆ ಯತ್ನಿಸಿದರು. ೧೬೬೭ರಲ್ಲಿ ಶಿವಾಜಿ ಬಾರ್ದೇಶ್‌ನ ಭಾಗವೊಂದನ್ನು ಆಕ್ರಮಿಸಿದಾಗ ಪೋರ್ಚುಗೀಸರಿಗೆ ಆತನನ್ನು ತಡೆ ಹಿಡಿಯುವ ಸಾಮರ್ಥ್ಯವಿಲ್ಲವಿತ್ತು. ಶಿವಾಜಿ ಡಿಚೋಲಿಯನ್ನೂ ಆಕ್ರಮಿಸಿದ; ಪೋರ್ಚುಗೀಸರ ಪರವಾನಗಿಕೊಂಡು ೧೬೬೮ದಲ್ಲಿ ಸಪ್ತಕೋಟೀಶ್ವರ ದೇವಾಲಯವನ್ನು ಸಂದರ್ಶಿಸಿದ ಶಿವಾಜಿ ಅದರ ಜೀರ್ಣೋದ್ಧಾರದ ವ್ಯವಸ್ಥೆ ಮಾಡಿದ. ಶಿವಾಜಿ ಮತ್ತು ಪೋರ್ಚುಗೀಸರ ನಡುವಣ ಒಪ್ಪಂದದ ಮೇರೆಗೆ ಉಭಯ ಪಕ್ಷದವರು ತಾವು ಸ್ವಾಧೀನ ಪಡಿಸಿಕೊಂಡ ಹಡಗುಗಳನ್ನು ಬಿಟ್ಟು ಕೊಡಲು ಒಪ್ಪಿಕೊಂಡರು. ಶಿವಾಜಿ ಫೊಂಡವನ್ನು ಆಕ್ರಮಿಸಿದಾಗ ಪೋರ್ಚುಗೀಸರು ಗೋವಾದ ಸುರಕ್ಷಿತತೆಯ ಬಗೆಗೆ ಚಿಂತಾಕ್ರಾಂತರಾಗಿದ್ದರು. ಆಗ ತುಸು ಗೊಂದಲವಿತ್ತು. ಶಿವಾಜಿ ರಾಮನಗರವನ್ನು ಸ್ವಾಧೀನ ಪಡಿಸಿಕೊಂಡ. ಮತ್ತು 'ಚೌಥಾಯಿ'ಗಾಗಿ ದಮಣದಲ್ಲಿನ ಪೋರ್ಚುಗೀಸರಿಗೆ ಒತ್ತಾಯ ಮಾಡಿದ. ಪೋರ್ಚುಗೀಸರು ನುಣುಪು, ನುಣುಚಿನ ಉತ್ತರವಿತ್ತು ಕಾಲ ತಳ್ಳತೊಡಗಿದರು.

೧೬೮೩ರಲ್ಲಿ ಔರಂಗ ಜೇಬನಿಗೆ ಸಕ್ರಿಯ ನೆರವನ್ನೀಯುತ್ತಿದ್ದ ಜಂಜೀರದ ದೊರೆ ಸಿದ್ದಿಯನ್ನು ಬಗ್ಗು ಬಡೆಯ ಬಯಸಿದ ಸಂಭಾಜಿಗೆ ಛಾವುಲ್, ದಮಣ ಬೆಸ್ಸೀನ್‌ಗಳ ಮೂಲಕ ಹೋಗಲು ಪೋರ್ಚುಗೀಸರು ತಡೆ ತಂದರು. ಛಾವುಲ್ ಆಕ್ರಮಣದ ಪ್ರಯತ್ನ ವಿಫಲವಾಯಿತು. ಸಂಭಾಜಿ ಫೊಂಡಾದತ್ತ ಸಾಗಿದ. ಪೋರ್ಚುಗೀಸರು ಆತನ ಮೇಲಕ್ಕೆ ಬಿದ್ದರು; ೧೬೮೩ರ ನವೆಂಬರ್ ತಿಂಗಳ ೨೪ರಂದು ಆತ ಅವರನ್ನು ಹೊಡೆದೋಡಿಸಿದ. ೧೬೮೩ರ ಡಿಸೆಂಬರ್ ೧೧ರಂದು ಆತ ಸಾಷಷ್ಟಿ, ಬಾರ್ದೇಶ್‌ಗಳ ಮೇಲಕ್ಕೆ ಆಕ್ರಮಣ ಮಾಡಿದ. ಹಾಗೆಯೇ ರಾಯ್‌ತುರ್ (ರಾಚೋಲ್) ದುರ್ಗಕ್ಕೆ ಮುತ್ತಿಗೆ ಹಾಕಿದ. ಆಗ ಪೋರ್ಚುಗೀಸರಿಗೆ ತಮ್ಮ ಸರ್ವಸ್ವವನ್ನು ಕಳೆದುಕೊಳ್ಳುವ ಸಮಯ ಸಮೀಪಿಸುತ್ತಿರುವ ಭಯವಿತ್ತು. ವೈಸ್‌ರಾಯ್ ಪೆದ್ರು ದಿ ಅಲ್ಮೇದ, ಸೈಂಟ್ ಫ್ರಾನ್ಸಿಸ್ ಶವಿಯರ್‌ನ ಸಮಾಧಿಯ ಬಳಿ ಪಶ್ಚಾತ್ತಾಪದ ಪ್ರಾರ್ಥನೆ ಮಾಡಿದ. ಆ ಹೊತ್ತಿಗೆ ಮೊಗಲರು ತನ್ನ ಭೂಭಾಗವನ್ನು ಅತಿಕ್ರಮಿಸಿದ ನಿಮಿತ್ತ ಸಂಭಾಜಿಗೆ ತನ್ನ ಸೈನ್ಯದೊಂದಿಗೆ ಹಿಂದಿರುಗಬೇಕಾಯಿತು.

ಕರಾವಳಿಯ ನಿವಾಸಿಗಳ ಪಾಲಿಗೆ ಪೋರ್ಚುಗೀಸರು ಭಯೋತ್ಪಾದಕರಿದ್ದರು. ಪಶ್ಚಿಮ ಕರಾವಳಿಯ ಸಾಗರ ಮಾರ್ಗವಾಗಿ ಸಾಗುವ ಹಡಗುಗಳಿಂದ ಅವರು ಕಪ್ಪ ಕೊಳ್ಳಲಾರಂಭಿಸಿದರು. ಹಾಗೆಯೇ ಸ್ಥಾನಿಕ ಅರಸುಗಳಿಗೆ ಬಾಧೆಯೊಯತೊಡಗಿದರು. ಧರ್ಮಾಂಧತೆ, ಹಿಂದುಗಳ ಕುರಿತಾದ ನಿರ್ದಯಿ ಹೇಯ ವರ್ತನೆ ಅವರ ಮತ್ತು ಮರಾಠರ ನಡುವಣ ವೈಮನಸ್ಸಿಗೆ ಕಾರಣವಾಯಿತು. ಗೋವಾದಲ್ಲಿನ ತಮ್ಮ ದಬ್ಬಾಳಿಕೆಯ ಕಾನೂನು ಕಟ್ಟಳೆಗಳನ್ನು ಉತ್ತರ ಕೊಂಕಣ (ಪೇಶ್ವೆಯವರ ಮನೆತನ ಈ ಪ್ರಾಂತಕ್ಕೆ ಸೇರಿದ್ದುದಿತ್ತು) ದಮೇಲಕ್ಕೂ ಹೇರಿದಾಗ ಜನತೆ ಸಂಕಟದ ನಿವಾರಣೆಗಾಗಿ ಮೊದಲನೆಯ ಪೇಶ್ವೆ ಬಾಜಿರಾವ್‌ನಲ್ಲಿ ಮೊರೆಯಿಟ್ಟಿತು. ಹಿಂದೂ ಧರ್ಮದ ರಕ್ಷಣೆಗಾಗಿ ಪೇಶ್ವೆ ಶಸ್ತ್ರ ಕೈಗೆತ್ತಿಕೊಂಡ.

ಈ ಯುದ್ಧ ಆಕಾಲದ ಮರಾಠರ ದೇಶಭಕ್ತಿ, ಶೌರ್ಯ, ಒಗ್ಗಟ್ಟುಗಳ ಅತ್ಯುತ್ತಮ

ಉದಾಹರಣೆಯೊಂದಾಗಿತ್ತು. ಮರಾಠರು ಎಲ್ಲೆಡೆಗಳಿಂದ ಸೈನ್ಯವನ್ನು ಒಟ್ಟುಗೂಡಿಸಿದರು. ೧೭೩೯ರ ಮೇ ತಿಂಗಳ ೧೩ರಂದು ಪೇಶ್ವೆಯ ಸಹೋದರ ಚಿಮಾಜಿ ಅಪ್ಪನ ನೇತೃತ್ವದಲ್ಲಿನ ಮರಾಠಾ ಸೇನೆ ಪರಿಶ್ರಮ ಪೂರ್ವಕ ಬಸ್ಸೀನಿನ ಕೋಟೆ, (ಕಾಥಿಯಾವಾರ್‌ನಲ್ಲಿನ ದಮಣ, ದಿಯುಗಳ ಹೊರತಾಗಿ) ಪೋರ್ಚುಗೀಸರ ಅಧೀನವಿದ್ದ ಉತ್ತರ ಕೊಂಕಣದಲ್ಲಿನ, ಅನ್ಯ ಭೂಭಾಗಗಳನ್ನು ಗೆದ್ದುಕೊಂಡಿತು. ಇನ್ನೊಂದು ಮರಾಠಾ ಸೇನೆ, ಪೇಶ್ವೆಯ ಭಾವ ವ್ಯಂಕಟ್ರಾವ್ ಘೋರ್ಪಡೆ ಮತ್ತು ದಾದಾಜಿರಾವ್ ಭಾವೆ ನರ್ಗುಂಡ್‌ಕರ್ ಇವರ ನೇತೃತ್ವದಲ್ಲಿ ಗೋವಾಕ್ಕೆ ದಂಡೆತ್ತಿಹೋಯಿತು. ೧೭೩೯ರ ಜನವರಿ ೨೩ರಂದು ಮರಾಠಾ ಸೇನೆ ಸಾಷ್ಟಿಯನ್ನು ಸೇರಿತು. ಮೂರುದಿನಗಳ ಬಳಿಕ ಮರ್ಗಾಂವ್ (ಮರ್ಮಗೋವಾ) * ವನ್ನು ಸ್ವಾಧೀನ ಪಡಿಸಿಕೊಂಡಿತು. ೧೭೩೯ರ ಮಾರ್ಚ್ ತಿಂಗಳ ೫ರಂದು ಸಾವಂತವಾಡಿಯ ಸಾವಂತ ಬಾರ್ದೇಶ್‌ನ ಮೇಲಕ್ಕೆ ದಾಳಿಯಿಕ್ಕಿ ಅದನ್ನು ಸ್ವಾಧೀನಪಡಿಸಿಕೊಂಡ.

ಪೋರ್ಚುಗೀಸರನ್ನು ಗೋವಾದಿಂದ ಹೊರಕಟ್ಟುವುದು ಮರಾಠರಿಗೆ ಕಷ್ಟದ ಕೆಲಸವಾಗಿಲ್ಲವಿತ್ತು. ಪೋರ್ಚುಗೀಸರು ಆ ದಿನಗಳಲ್ಲಿ ಗೋವಾ ದ್ವೀಪ ತಮ್ಮ ಕೈಬಿಟ್ಟಿತೆಂದು ನಂಬಿದ್ದರು.[1] ಆಗ ಅವರು ಸ್ವಪ್ರಯೋಜನಕ್ಕಾಗಿ ಪಿತೂರಿ ನಡೆಸಲು ತಮ್ಮ ಬುದ್ಧಿ ಶಕ್ತಿಯನ್ನು ಪರಿಪೂರ್ಣ ಬಳಸಿದರು. ಅವರು ದಾದಾಜಿರಾವ್ ಭಾವೆಗೆ ಲಂಚವಿತ್ತರು. ಸತಾರಾದ ಅರಸರ ಆಸ್ಥಾನದಲ್ಲಿನ ಪೆಚ್ಚಿನ ಸರದಾರರನ್ನು ತಮ್ಮ ಪರವಾಗಿ ಒಲಿಸಿಕೊಂಡರು. ಅವರು ತಮ್ಮೊಂದಿಗಿನ ಸೌಹಾರ್ದದ ಸಂಬಂಧ ಬಿಡಲೊಪ್ಪದಿದ್ದ ಸಾವಂತನೊಂದಿಗೂ ಸಂಪರ್ಕ ಸಾಧಿಸಿದರು. ೧೭೩೯ರ ಮೇ ತಿಂಗಳ ೨೨ರಲ್ಲಿನ ಒಪ್ಪಂದದ ಮೇರೆಗೆ, ಪೋರ್ಚುಗೀಸರು ನಷ್ಟದ ಪರಿಹಾರಕೊಟ್ಟಬಳಿಕವೇ ಮರಾಠರು ಹಿಂತೆರಳಿದರು.

ಈ ಒಪ್ಪಂದದ ಬಳಿಕವೂ ಪೋರ್ಚುಗೀಸ್ ಮತ್ತು ಮರಾಠರ ನಡುವಣ ಕಲಹ ಕೊನೆಗಾಣಲಿಲ್ಲ. ಮರಾಠರು ಸೋಂಡದ ರಾಜ[1] ನಿಂದ ಮರ್ದನಗಡ (ಫೊಂಡ)ವನ್ನು ಕೊಂಡರು. ೧೭೫೬ರ ಜೂನ್ ತಿಂಗಳ ೨೮ರಂದು ವೈಸ್‌ರಾಯ್ ದೋಮ್ ಲೂಯಿಸ್ ದಿ ಮಸ್ಕರೇನ್ಹಸ್, ಕೊಂದಿ ದಿ ಅಲ್ವಾ ಈ ದುರ್ಗದ ಮೇಲಕ್ಕೆ ಹಲ್ಲೆ ಮಾಡಿ ಪ್ರಾಣಕಳೆದುಕೊಂಡ. ೧೭೬೩ರ ಜೂನ್ ತಿಂಗಳ ೧ ರಂದು ವೈಸ್‌ರಾಯ್ ಮಾನುವೆಲ್ ದಿ ಸಾಲ್ಡಾನ್ಹಾ ದಂಡೆತ್ತಿ ಹೋಗಿ ಅದನ್ನು ಸ್ವಾಧೀನ ಪಡಿಸಿಕೊಂಡ.

೧೦. ಸೋಂಡೆಯ ರಾಜನ ರಾಜ್ಯ ಪಡೆದುಕೊಂಡುದು.

ಮರಾಠರೊಳಗಣ ಯುದ್ಧದ ಹೊತ್ತಿಗೆ, ಸೋಂಡೆಯ ರಾಜ ಮರಾಠರ ಸಾಮಂತನೆಂಬ ಕಾರಣಕೊಂಡು ಹೈದರ್‌ಅಲಿ ಆತನ ರಾಜ್ಯದ ಭಾಗವೊಂದರ ಮೇಲಕ್ಕೆ ಆಕ್ರಮಣ ಮಾಡಿದ. ಸೋಂಡೆಯ ರಾಜ ಮರಾಠರ ಸಹಾಯ ಕೋರಿದ. ಆದರೆ ಉತ್ತರ ಭಾರತದಲ್ಲಿನ ತಮ್ಮ ರಾಜಕಾರಣದಲ್ಲಿ ವ್ಯಸ್ತರಿದ್ದ ಅವರು ಆತನತ್ತ ದುರ್ಲಕ್ಷ್ಯ ತೋರಿದರು. ೧೭೬೩ರಲ್ಲಿ ಅರಸು ತನ್ನ ಸಂಸಾರದ ಸಮೇತ ಪೋರ್ಚುಗೀಸರ ರಾಜ್ಯ ಪ್ರವೇಶಿಸಿದ. ಮತ್ತೆ ೨೦,೦೦೦ ಅಶ್ರಫಿ (ಸುಮಾರು ೫೦ ಸಾವಿರ ರೂಪಾಯಿ) ಗಳ ವರಮಾನದ ಬದಲಿಗೆ ಅವರಿಗೆ ತನ್ನ ರಾಜ್ಯವನ್ನಿತ್ತ. ೧೭೯೧ರ ಕರಾರಿನ ಬಳಿಕ ಈ ವರಮಾನವನ್ನು ೧೨ ಸಾವಿರ

ಅಶ್ರಫಿಗಳಿಗಿಳಿಸಲಾಯಿತು. ಆತನ ವಂಶಜರು ಈಗ ನಾಗೇಶ ದೇವಸ್ಥಾನದ ಬಳಿಯಲ್ಲಿದ್ದ ಬಂದಿವಡೆಯಲ್ಲಿ ವಾಸಿಸುತ್ತಿದ್ದಾರೆ.

೧೧. ಸಾವಂತವಾಡಿಯ ಸಾವಂತ ಭೋಂಸ್ಲೆ ಸರ್ದೇಸಾಯಿಯ ರಾಜ್ಯ ಪಡೆದುಕೊಂಡುದು.

ಸಾವಂತವಾಡಿಯ ಸಾವಂತ ಮತ್ತು ಪೋರ್ಚುಗೀಸರ ನಡುವೆ ಅಡಿಗಡಿಗೆ ಕಲಹಗಳಾಗುತ್ತಿದ್ದವು.

೧೭೩೯ರ ಮರಾಠರ ಆಕ್ರಮಣದ ಸ್ವಲ್ಪ ಕಾಲದ ಬಳಿಕ ಸಾವಂತ ಬಾರ್ದೇಶ್‌ನ ಮೇಲೆ ದಂಡೆತ್ತಿ ಹೋದ. ೧೭೪೧ರಲ್ಲಿ ವೈಸ್‌ರಾಯ್ ಮಾರ್ಕುಸ್ ದಿ ಲೊರಿಕಲ್ ಬ್ರಝಿಲ್‌ನಿಂದ ಹೆಚ್ಚಿನ ಸೈನ್ಯ ಮತ್ತು ಹೊಸಬಗೆಯ ತೋಪುಗಳನ್ನು ತರಿಸಿ ಸಾವಂತನನ್ನು ಸೋಲಿಸಿ ಪೋರ್ಚುಗೀಸರಿಗೆ ಕಪ್ಪ ಕೊಡುವಂತೆ ಒತ್ತರಿಸಿದ. ಅದಾದ ಸ್ವಲ್ಪ ಕಾಲಾ ನಂತರ ಯುದ್ಧದ ಪುನರಾರಂಭವಾಯಿತು. ೧೭೪೬ರ ಮೇ ತಿಂಗಳ ೪ರಂದು ವೈಸ್‌ರಾಯ್ ದಿ ಮಾರ್ಕುಸ್ ದಿ ಕಾಸ್ತೆಲ್ಯೊ ನೊವೋ, ಪೆಡ್ನೆ ಮಹಾಲಿನ ಹಲಡೋಣೆ (ಅಲ್ಡೊನ, ಅಲ್ಲೊರ್ನ) ಯನ್ನು ಸ್ವಾಧೀನ ಪಡಿಸಿಕೊಂಡ. ಆದರೆ ೧೭೬೧ರಲ್ಲಿ ಅದನ್ನು ಹಿಂದಿರುಗಿಸಲಾಯಿತು.

೧೭೮೧ರಲ್ಲಿ ಪೋರ್ಚುಗೀಸರು ಭಟಾಗ್ರಾಮ್ (ಬಿಚೋಲಿ) ಮಹಾಲನ್ನು ವಶಪಡಿಸಿಕೊಂಡರು. ಆನಂತರ ಅವರು ಸಾವಂತರು ಮತ್ತೆ ಕೊಲ್ಹಾಪುರದ ಅರಸರ ನಡುವಣ ವಿವಾದದ ಲಾಭಕೊಂಡರು. ಸಾವಂತರಿಗಿತ್ತ ಸಹಾಯದ ಬದಲಿಗೆ ಅವರು ಪೆಡ್ನೆ (ಪೆರ್ಣೆಂ) ಮಹಾಲನ್ನು ವಶಪಡಿಸಿಕೊಂಡರು. ೧೭೮೮ರಲ್ಲಿನ ಪೋರ್ಚುಗೀಸರು ಮತ್ತು ಸಾವಂತರ ನಡುವಣ ಸಂಧಿಯು ಮೇರೆಗೆ ಸಾವಂತರು ಪೆಡ್ನೆ ಮಹಾಲನ್ನು ಅವರಿಗೆ ಬಿಟ್ಟುಕೊಟ್ಟರು.

೧೨. ಪೋರ್ಚುಗೀಸರ ಆಳ್ವಿಕೆಯ ವಿರುದ್ಧ ಎದ್ದ ಬಂಡಾಯ

ಪೋರ್ಚುಗೀಸರ ದಬ್ಬಾಳಿಕೆ ಪದೇ ಪದೇ ನಡೆಯುತ್ತಿದ್ದ ಬಂಡಾಯಗಳಿಗೆ ಕಾರಣವಾಯಿತು. ಜನ ಸಾಮಾನ್ಯರ ಬೆಂಬಲಕೊಂಡು ಮುಂದೆ ಅದು ಕ್ರಾಂತಿಯು ರೂಪುಕೊಂಡಿತು. ಮಹತ್ವದ ವಿಷಯವೆಂದರೆ ಈ ಕ್ರಾಂತಿಕಾರರಲ್ಲಿ ಗೋವಾದ ಕ್ರೈಸ್ತಮತೀಯರೇ ಮುಂದಾಳುಗಳಾಗಿದ್ದರು. ರಾಜ್ಯಾಡಳಿತೆ, ಕ್ರೈಸ್ತ ಮಠೋದ್ಯೋಗ ಇತ್ಯಾದಿ ಉಚ್ಚಾಧಿಕಾರದ ಹುದ್ದೆಗಳಿಗೆ ಭಾರತೀಯರಿಗೆ ಅವಕಾಶವಿರಲಿಲ್ಲವಿತ್ತು. ಭಾರತೀಯ ಮೂಲದ ಕ್ರೈಸ್ತ ಗುರುಗಳಾದ ಕಾಯ್ತಾನು ಫ್ರಾನ್ಸಿಸ್ಕ್ ಕೊಂತು ಮತ್ತು ಅಂತೊನ್ ಗೊನ್ಸಾಲ್ವೆಸ್ ಬಿಷಪ್ ಪದಕ್ಕಿದ್ದ ತಮ್ಮ ಬಾಧ್ಯತೆಯನ್ನು ಗೋವಾದ ಆರ್ಚ್ ಬಿಷಪ್ ಉಪೇಕ್ಷಿಸಿದ ನಿಮಿತ್ತ ೧೭೮೦-೧೭೮೫ರಲ್ಲಿ ಅವರು ತಮ್ಮ ಮನವಿ ಕೊಂಡು ಪೋರ್ಚುಗಲ್ಲಿಗೆ ಹೋದರು. ಅದು ೧೭೮೯ರಲ್ಲಿನ ಫ್ರೆಂಚ್ ಕ್ರಾಂತಿಯು ಪೂರ್ವೋದಯದ ಕಾಲವಿತ್ತು. ಕ್ರಾಂತಿಗೆ ಕಾರಣೀಭೂತವಾಗಿದ್ದ ಹೊಸ ವಿಚಾರಗಳ ಗಾಳಿ ಆಗ ಪೋರ್ಚುಗಲ್ಲಿನತ್ತವೂ ಬೀಸಿತ್ತು. ಎಬ್ಬೆ ದಿ ಫಾರಿಯ ಮತ್ತು ಗೋವಾದ ಎಷ್ಟೊಂದೋ ಮಂದಿ (ಅವರಲ್ಲಿನ ಅಧಿಕಾಂಶ ಜವರು ಸಾರಸ್ವತ ಬ್ರಾಹ್ಮಣರ ವಂಶಜರು) ಪೋರ್ಚುಗೀಸರನ್ನು ಗೋವಾದಿಂದ

ಹೊರಕ್ಕೋಟಿಸಿ ಗಣರಾಜ್ಯ ಸ್ಥಾಪಿಸುವ ಕಾರಸ್ಥಾನ ರಚಿಸಿದರು. (ಅಧ್ಯಾಯ ೧೭ ನೋಡಿರಿ) ೧೭೮೮ರಲ್ಲಿ ಗೋವಾಕ್ಕೆ ಮರಳಿ ಬರುತ್ತಲೇ ಅವರು ಅನೇಕ ಸೈನ್ಯಾಧಿಕಾರಿಗಳು, ಕ್ರೈಸ್ತ ಧರ್ಮಗುರುಗಳು ಮುಂತಾದವರ ಬೆಂಬಲ ಕೊಂಡರು. ಕ್ರಾಂತಿಯ ರೇಖಾಚಿತ್ರ ಯೋಜನಾಬದ್ಧವಿತ್ತು. ಸ್ವಾತಂತ್ರ್ಯ ಸಾರಲು ಪಿತೂರಿಗಾರರು ತಮ್ಮ ನಾಯಕರ ಸಂಕೇತದ ದಾರಿಗಾಣುತ್ತಿದ್ದರು. ಆದರೆ ಅದಕ್ಕೆ ಮೊದಲೇ ಕ್ರೈಸ್ತರಲ್ಲಿನೊಬ್ಬಾತ ಅವರ ವಿಶ್ವಾಸಘಾತ ಮಾಡಿದ. ಅದರ ಪರಿಣಾಮ ಸ್ವರೂಪ ಅವರಲ್ಲಿನ ಎಷ್ಟೋ ಮಂದಿಯನ್ನು ಚಿತ್ರಹಿಂಸೆಯಿತ್ತು ಕೊಂದಿಕ್ಕಲಾಯಿತು, ಕಾರಾಗೃಹಕ್ಕೆ ತಳ್ಳಲಾಯಿತು. ಇನ್ನೆಷ್ಟೋ ಮಂದಿಯನ್ನು ಮೊರಾಂಬಿಕ್ ಮತ್ತು ಟಿಮೋರ್ ದ್ವೀಪಕ್ಕೆ ಗಡಿಪಾರು ಮಾಡಲಾಯಿತು.[೮]

ಇವೆಲ್ಲವುಗಳಲ್ಲಿ ಪ್ರಸಿದ್ಧವಾದುದು ದೀಪಾಜಿ ರಾಣೆಯ ೧೮೫೨ರಲ್ಲಿನ ಬಂಡಾಯ. '. ಸತ್ತರಿ ಮಹಾಲಿನಲ್ಲಿ ರಾಣೆಯ ಸಾಮಂತ ಕುಟುಂಬವೊಂದಿತ್ತು. ಅದು ಗೋವಾದಿಂದ ಪೋರ್ಚುಗೀಸರನ್ನು ಹೊಡೆದೋಡಿಸಲು ೧೮೨೨ರಿಂದ ಸುಮಾರು ಹದಿನಾಲ್ಕು ಬಾರಿ ಪ್ರಯತ್ನ ಮಾಡಿತ್ತು.

೧೮೫೦ರಲ್ಲಿ ಗವರ್ನರ್ ಕ್ಯಾಪ್ಟನ್ ಜನರಲ್ ಜುಜೆ ಜರ್ಕ್ವಿನ್ಸ್ ಜನುವರಿಸ್ ಲಾಪಾ ಮತ್ತು ಬರಾವೊ (ನಂತರ ಕೊಂಡಿ) ದಿ ವಿಲಾ ನೋವಾ ದಿ ಕುರ್ರಮ್ ಹಲವೊಂದು ಕಠೋರ ಕಾಯಿದೆಗಳಿಗೆ ಮಂಜೂರಾತಿಯಿತ್ತರು. ಇನಾಮುಗಳ ಮೇಲಕ್ಕೆ ಕರ, ಗಂಡಸರು ಷರಾಯಿ, ಹೆಂಗಸರು ಕುಪ್ಪಸ ಧರಿಸಬೇಕೆಂಬ ನಿರ್ಬಂಧ ಇವುಗಳಲ್ಲಿನ ಕೆಲವೊಂದಿದ್ದು ಇವೆಲ್ಲವುಗಳನ್ನು ಅತಿ ಕ್ರೂರ ಪದ್ಧತಿಯಿಂದ ಹೊರಿಸಿದರು; ಅದರೊಂದಿಗೆ ದುಷ್ಕೃತ್ಯಗಳಿಗೂ ತೊಡಗಿದರು.

ಇವೆಲ್ಲವುಗಳ ಪರಿಣಾಮ ಸ್ವರೂಪವಾಗಿ ೧೮೫೭ನೆಯ ಜನವರಿ ತಿಂಗಳ ೨೮ರಂದು ದೀಪಾಜಿ ರಾಣೆಯ ನೇತೃತ್ವದಲ್ಲಿ ಸಾಮಾನ್ಯ ಜನರು ಆಯುಧಗಳನ್ನು ಕೈಗೆತ್ತಿಕೊಂಡರು. ಕ್ರಾಂತಿಕಾರರು ಕೋಟೆಯೊಂದನ್ನು ವಶಪಡಿಸಿಕೊಂಡು ಅಲ್ಲಿನ ಶಸ್ತ್ರಾಸ್ತ್ರ, ಯುದ್ಧ ಸಾಮಗ್ರಿಗಳನ್ನು ದೋಚಿದರು. ಸರಕಾರಿ ಕಛೇರಿ, ಕೋಶಾಗಾರಗಳನ್ನು ಸುಲಿದರು. ಮತ್ತೆ ಸತ್ತರಿ ಮಹಾಲು, ಅದರ ಸುತ್ತಣ ಪ್ರದೇಶಗಳಿಂದ ಪೋರ್ಚುಗೀಸ್ ಸೇನೆಯನ್ನು ಅಟ್ಟಿದರು. ಅವರ ವಿರುದ್ಧ ಕಳುಹಿಸಿದ ಸೇನೆ ನಿರುಪಯೋಗಿಯಾಯಿತು. ಕಾರಣ ಅವರು ಸಣ್ಣ ತುಕಡಿಗಳ ಮೇಲಕ್ಕಷ್ಟೆ ಬೀಳುತ್ತಿದ್ದು, ದೊಡ್ಡ ಸೈನ್ಯವನ್ನು ಕಾಣುತ್ತಲೇ ಹೇಮಾಡ್ ಬಾರ್ಶೆ ಮತ್ತು ಫೊಂಡೆಯ ದಟ್ಟಡವಿಗಳೊಳಕ್ಕೆ ಮರೆಯಾಗುತ್ತಿದ್ದರು. ಈ ಕಾದಾಟಗಳಿಂದ ಕಂದಾಯದ ವಸೂಲಿ ಅಸಾಧ್ಯವಾಗಿ ಕೋಶಾಗಾರ ಬರಿದಾಯಿತು. ಸೇನೆ ಬಲ ಪ್ರಯೋಗಿಸಿ ದೊಡ್ಡ ಪ್ರಮಾಣದಲ್ಲಿ ಧನವನ್ನು ಜನರಿಂದ ಸಂಗ್ರಹಿಸಿತು. ನಿವೃತ್ತ ಸೇನಾಧಿಕಾರಿಯೊಬ್ಬನ ಮಾಧ್ಯಸ್ಥಿಕೆಯ ಮೂಲಕ ದೀಪಾಜಿಯೊಂದಿಗೆ ಸಂಧಾನ ನಡೆಸಲಾಯಿತು. ಆದರೆ ಒತ್ತೆಯಾಳುಗಳಾಗಿ ಹಿಡಿದಿದ್ದ ಪೋರ್ಚುಗೀಸರ ಹೊರತಾಗಿ ಬಂದ ಆತನನ್ನು ಕಾಣಲು ಗವರ್ನರ್ ನಿರಾಕರಿಸಿದ.

೧೮೫೫ರಲ್ಲಿ ಆಗಿನ ಗವರ್ನರ್ ರಾಜ್ಯಭಾರದ ಹೊಣೆಗಾರಿಕೆಯನ್ನು ಕೊನ್ಸೆಲ್ಯೊದ ಕೊವರ್ನೊಗೆ ವಹಿಸಿ ಪೋರ್ಚುಗಲ್ಲಿಗೆ ಮರಳಿದ. ಹೊಸ ಸರಕಾರ ಜನತೆಯ ದುಃಖ ನಿವಾರಿಸಿತು. ಕ್ರಾಂತಿಕಾರರ ಶರ್ತಗಳನ್ನು ಸ್ವೀಕರಿಸಿತು. ಮತ್ತೆ ದೀಪಾಜಿ ರಾಣೆಗೆ ಗೌರವಾದರ ತೋರಿತು.

೧೩. ಗೋವಾವನ್ನು ವಶಪಡಿಸಿಕೊಳ್ಳಲು ಬ್ರಿಟಿಷರು ಮಾಡಿದ ಪ್ರಯತ್ನ

ಮೊದಲ ಪ್ರಯತ್ನ ಗೋವಾದ ಮೇಲೆ ಕಣ್ಣಿಟ್ಟಿದ್ದ ಬ್ರಿಟಿಷರ ಮಾರ್ಕ್ವಿಸ್ ವೆಲ್ಲೆಸ್ಲಿಯಿಂದಾಯಿತು. ೧೭೬೮ರಲ್ಲಿ ಬ್ರಿಟಿಷರ ನೌಕಾದಳದ ಮುಖ್ಯ ಅಧಿಕಾರಿ ರೀ ನೋರ್, ಆಕ್ಷೇಪ ದುರ್ಲಕ್ಷಿಸಿ, ಫ್ರೆಂಚರ ವಿರುದ್ಧ ನೆರವೀಯುವ ನೆಪಕೊಂಡು ನಾಲ್ಕು ಹಡಗುಗಳೊಂದಿಗೆ ಗೋವಾದ ಬಂದರು ಸೇರಿದ. ೧೭೯೯ರಲ್ಲಿ ಜನರಲ್ ಸರ್ ವಿಲ್ಯಮ್ ಕ್ಲಾರ್ಕ್‌ನ ನೇತೃತ್ವದಲ್ಲಿ ಬ್ರಿಟಿಷ್ ಸೇನೆಯೊಂದು ಗೋವಾದಲ್ಲಿ ನೆಲಸಿತು. ೧೮೧೩ರ ಏಮಿಯನ್ಸ್‌ನ ಸಂಧಿಯ ಬಳಿಕವಷ್ಟೆ ಅವರು ಗೋವಾವನ್ನು ಬಿಟ್ಟುಹೋದರು.

೧೮೩೯ರಲ್ಲಿ ಬೊಂಬೇ ಸರಕಾರ ಗೋವಾದಲ್ಲಿ ಆಶ್ರಯಕೊಂಡಿದ್ದ ಕೆಲವೊಬ್ಬ ಅಪರಾಧಿಗಳನ್ನು ತಮ್ಮ ವಶಕ್ಕೀಯುವಂತೆ ಆಗ್ರಹ ಮಾಡಿತು. ಭಾರತದಲ್ಲಿನ ತಮ್ಮ ವಸಾಹತನ್ನು ಈಸ್ಟ್ ಇಂಡಿಯಾ ಕಂಪನಿಗೆ ಕೊಡುವಂತೆ ಬ್ರಿಟಿಷ್ ಸರಕಾರ ಲಿಸ್ಬನ್‌ನಲ್ಲಿನ ಪೋರ್ಚುಗೀಸ್ ಸರಕಾರವನ್ನು ಕೇಳಿಕೊಂಡಿತು. ಅವರು ೫೦,೦೦೦ ಪೌಂಡ್ ಮೊಬಲಗನ್ನು ಕೊಡಲು ಒಪ್ಪಿದರು. ಆದರೆ ಇದನ್ನು ತಿರಸ್ಕರಿಸಲಾಯಿತು.

ಸಾವಂತವಾಡಿಯ ೧೮೪೨ರಲ್ಲಿನ ಕಲಹದ ಹೊತ್ತಿಗೆ ಸಾವಂತನ ಕುಟುಂಬದ ಕೆಲವೊಬ್ಬರು ಗೋವಾಕ್ಕೆ ಪಲಾಯನ ಮಾಡಿದ್ದರು. ಅವರನ್ನು ತಮ್ಮ ವಶಕ್ಕೀಯಲು ಆಗ್ರಹ ಮಾಡಿದ ಬೊಂಬೇ ಸರಕಾರ ಯುದ್ಧ ನೌಕೆಯೊಂದನ್ನು ಕಳುಹಿಸಿತು. ಪೋರ್ಚುಗೀಸರು ಅದಕ್ಕೆ ಪ್ರತಿರೋಧ ವ್ಯಕ್ತಪಡಿಸಿದರಷ್ಟೆ ಅಲ್ಲ, ೧೮೪೭ರಲ್ಲಿ ಅವರ ಪರವಾಗಿ ಹಸ್ತಕ್ಷೇಪ ಕೂಡಾ ಮಾಡಿದರು.

೧೪. ಪೋರ್ಚುಗೀಸ್ ಗಣರಾಜ್ಯ

೧೯೧೦ರಲ್ಲಿ ಪ್ರಜಾಪ್ರಭುತ್ವ ಸಾರಿದ ಪೋರ್ಚುಗಲ್ ಸರಕಾರ ನಾಗರಿಕರಿಗೆ ಸ್ವಧರ್ಮ ಆಚರಿಸುವ ಸ್ವಾತಂತ್ರ್ಯವನ್ನಿತ್ತಿತು. ಆ ಬಳಿಕ ಗೋವಾದಲ್ಲಿನ ಹಿಂದೂ ದೇವಸ್ಥಾನಗಳ ಸಂಖ್ಯೆಯಲ್ಲಿ ವೃದ್ಧಿಯಾಯಿತು; ಹಿಂದುಗಳ ಜನಸಂಖ್ಯೆಯೂ ಬೆಳೆದುಕೊಂಡಿತು. ಗೋವಾದ ಪೋರ್ಚುಗೀಸರು ತಮ್ಮ ಭಾಷೆ, ಸಂಸ್ಕೃತಿಗಳಿಗೆ ಪ್ರೋತ್ಸಾಹನೆಯನ್ನೀಯುವ ನೀತಿಯನ್ನು ಮುಂದರಿಸಿದರು. ೧೯೩೩ರ ಎಪ್ರಿಲ್ ತಿಂಗಳ ೧೧ರಂದು ಪೋರ್ಚುಗಲ್ ಹೊಸ ಶಾಸನವೊಂದಕ್ಕೆ ಮಂಜೂರಾತಿಯಿತ್ತಿತು. ಅದರ ಮೇರೆಗೆ ಪೋರ್ಚುಗಲ್ ಮಡೀರ ಮತ್ತು ಅಝೊರೊಸ್ ಪ್ರದೇಶಗಳನ್ನು ಮೆಟ್ರೊಪೊಲಿಟಾನ್ ಟೆರಿಟರಿ (ಮೆಟ್ರೊಪೋಲ್) ಎಂದೂ, ಇನ್ನುಳಿದ ಪ್ರದೇಶಗಳನ್ನು ವಸಾಹತುಗಳೆಂದೂ (ಇಂಪೀರಿಯಲ್ ಕೊಲೋನಿಯಲ್ ಪೋರ್ಚುಗೀಸ್) ಮತ್ತು ಪೋರ್ಚುಗೀಸರು ಈ ವಸಾಹತುಗಳಲ್ಲಿನ ಅಸಂಸ್ಕೃತ ಸ್ಥಾನೀಯ ನಿವಾಸಿಗಳ (ನೇಟಿವೋ ಇಂಡಿಜಿನ) ವಿಶ್ವಸ್ಥರೆಂದೂ ಸಾರಿತು.

೧೫. ಗೋವಾ ಪ್ರಾಂತ

ಗೋವಾ, ಗೋವಾ ದ್ವೀಪ (ಇಲ್ಹಾ ದಿ ಗೋವಾ, ತೀಸ್‌ವಾಡಿ) ಸಾಲ್ಸೆಟ್ (ಸಷ್ಟಿ ಅಥವಾ ಸಾಷಷ್ಟಿ), ಬಾರ್ದೇಝ್ (ಬಾರ್ದೇಶ್) ಎಂಬೀ ವೆಲ್ಹಾಗಳಿಂದ (ಈ ಹಿಂದೆ

ಗೆದ್ದುಕೊಂಡ ಭೂಭಾಗಗಳು) ಮತ್ತು ಪೆರ್ನೆಮ್ (ಪೆಡ್ನೆ), ಬಿಛೋಲಿ (ಭಟಾಗ್ರಾಮ್), ಸತಾರಿ, ಅಂತ್ರುರಝ್ (ಫೊಂಡೆ), ಬಾರ್ದೇಸ್, ಕಾರ್ಕೋರ (ಕಾಕೊಡೆ), ಬಲ್ಲಿ ಮತ್ತು ಅಷ್ಟಗರ್ (ಅಷ್ಟಾಗ್ರಹಾರ್) ಎಂಬೀ 'ನೋವಾಸ್ ಕೊಂಕ್ವಿಸ್ತಾಸ್' (ಹೊಸದಾಗಿ ಗೆದ್ದ ಭೂಭಾಗಗಳು) ಗಳಿಂದೊಡಗೂಡಿದೆ. ಕೊನೆಯ ನಾಲ್ಕು ರಝಾಂಬೋಲಿಮ್ (ಜಾಂಬವಲಿ ಅಥವಾ ಪಂಚ ಮಹಾಲ್) ಮತ್ತು ಕನ್ಕೋಣ (ಕೊನ್ಕೋಣೆ) ಎಂದಾಗಿ ಪರಿಚಿತವಾಗಿವೆ. ಒಂದೊಂದು ಚೌರಸ ಮೈಲು ವಿಸ್ತೀರ್ಣದ ಅಂಜೆದೀವ (ಕಾರವಾರಕ್ಕಭಿಮುಖವಾಗಿದ್ದ) ಮತ್ತು ತೆರೆಖೋಲ್ ಜಿಲ್ಲೆ ಇವನ್ನು ಆಡಳಿತೆಯ ಅನುಕೂಲತೆಯ ದೃಷ್ಟಿಯಿಂದ ಗೋವಾ ಪ್ರಾಂತದೊಳಕ್ಕೊಳಗೂಡಿಸಲಾಗಿತ್ತು. ಇವು ಮೂಲತಃ ಗೋವಾ (ಗೋಮಾಂತಕ)ದ ಭಾಗವಾಗಿದ್ದ ಸಾವಂತವಾಡಿಯ ಕುಡಾಲ ಮತ್ತು ರತ್ನಾಗಿರಿ ಜಿಲ್ಲೆಯ ವೆಂಗುರ್ಲಾದ ಕರಾವಳಿ ಪ್ರದೇಶಗಳ ಹೊರತಾಗಿದ್ದವು.

ಜುವಾಯಿ (ರಝುವಾರಿ, ಅಗಶಿ) ಯ ಉತ್ತರಕ್ಕಿದ್ದ ಪಟ್ಟಣ ('ಸುಯೆರಿ'ಯ ಸಮೀಪದ ವೆಲ್ಹಾ ಗೋವಾ) ಒಂದು ಕಾಲದಲ್ಲಿ ಗೋವಾದ ರಾಜಧಾನಿಯಾಗಿತ್ತು. ೧೭೫೯ರ ಡಿಸೆಂಬರ್ ತಿಂಗಳ ೧ನೆಯ ತಾರೀಕಿಗೆ ರಾಜಧಾನಿಯನ್ನು ಪಂಜಿಮ್ (ಪಣಜಿ) ಗೆ ಸ್ಥಳಾಂತರಿಸಲಾಯಿತು. ಹಳೆಯ ರಾಜಧಾನಿ ಈಗ ಹಾಳು ಬಿದ್ದಿದೆ.

೧೬. ಸಾರಸ್ವತರು ಗೋವಾದಿಂದ ವಲಸೆ ಹೋದುದು

ಸಾರಸ್ವತರು ಗೋವಾದಿಂದ ಅದೆಂದಿಗೋ ವಲಸೆ ಹೋಗಲಾರಂಭಿಸಿದ್ದರು. ಗೋವಾದ ಮೇಲಿನ ಹಲವೊಬ್ಬ ಅರಸರ ಆಳ್ವಿಕೆ ಹಾಗೂ ನೆರೆಕರೆಯ ಬಯಲು ಪ್ರದೇಶ ಇವು ಅವರಿಗೆ ಈ ಮೊದಲೇ ವಲಸೆ ಹೋಗಲು ಪ್ರೇರಣೆಯಿತ್ತಿದ್ದವು. ಗೋವಾದಲ್ಲಿನ ತಮ್ಮ ಮನೆಗಳನ್ನು ಬಿಟ್ಟು ಹೋಗುವಂತೆ ಮಾಡಿದ ಮುಖ್ಯ ಕಾರಣ ವ್ಯಾಪಾರವಿತ್ತು. ಉತ್ತರೆಯ ಪ್ರಯಾಗ ಮತ್ತು ಬಸ್ಸೀನ್ (ವಾಸಯಿ) ನಲ್ಲಿ ನೆಲೆಗೊಂಡುದಕ್ಕೂ ಇದೇ ಕಾರಣವಿತ್ತು. ಪೋರ್ಚುಗೀಸರ ಆಳ್ವಿಕೆಯ ಕಾಲ ಎಷ್ಟೊಂದೊ ಮಂದಿ ಸರಕಾರಿ ಉದ್ಯೋಗ, ವ್ಯಾಪಾರಗಳನ್ನರಸಿ ತಮ್ಮ ಸಂಸಾರಗಳೊಂದಿಗೆ ಬಸ್ಸೀನ್, ಸಾಲ್ಸೆಟ್ (ಥಾಣಾ ಜಿಲ್ಲೆಯಲ್ಲಿನ) ಮತ್ತೆ ಬೊಂಬೇಗೆ ತೆರಳಿದ್ದರು.

ಬಹಮನಿಯ ಅರಸರ ಆಳ್ವಿಕೆಯ ಕಾಲದಲ್ಲಿ ಅನೇಕ ಕುಟುಂಬಗಳು ಬೆಳಗಾಂ, ಧಾರ್ವಾರ ಜಿಲ್ಲೆಗಳತ್ತ ಸಾಗಿದ್ದವು. ವಿಜಯ ನಗರದ ಆಳ್ವಿಕೆಯ ಕಾಲ ಮತ್ತು ಮುಸ್ಲಿಂ ಅರಸರ ಉಪಟಳದ ದಿನಗಳಲ್ಲಿ ಹಲವೊಂದು ಕುಟುಂಬಗಳು ಗೋವಾ ಬಿಟ್ಟು ಹೋದವು. ಅವುಗಳಲ್ಲಿನ ಕೆಲವು ಕೆನರಾದ ತಟವರ್ತಿ ಪ್ರಾಂತ, ಕೋಝಿಕ್ಕೋಡ್ ಮತ್ತು ಕೊಚ್ಚಿನ್‌ಗೆ ವ್ಯಾಪಾರದ ಕಾರಣಕ್ಕಾಗಿ ಹೋದವು.[೧೧]

೧೫೪೧–೧೫೬೧ರ ನಡುವಣ ದಿನಗಳಲ್ಲಿ ಪೋರ್ಚುಗೀಸರ ದಬ್ಬಾಳಿಕೆಯ ನಿಮಿತ್ತ ಸಾರಸ್ವತರು ದೊಡ್ಡ ಸಂಖ್ಯೆಯಲ್ಲಿ ಗೋವಾ ಬಿಟ್ಟು ಹೋಗಿದ್ದರು. ಪಾಷಂಡಮತವನ್ನು ಅಡಗಿಸಲಾಗಿ ಚರ್ಚ್ ೧೫೬೦ರಲ್ಲಿ ನ್ಯಾಯಾಲಯವೊಂದನ್ನು ಸ್ಥಾಪಿಸಿದಾಗ ಎಷ್ಟೊಂದೋ ಜನರು ತಮ್ಮ ಪರಿವಾರಗಳ ಸಮೇತ ಸೋಂಡೆಯ ರಾಜಾನ ಮತ್ತು ಬಿಜಾಪುರದ ಆದಿಲ್‌ಶಾಹನ ರಾಜ್ಯಗಳತ್ತ ಹೋದರು. ವಾಣಿ (ವೈಶ್ಯರು), ಕುಣ್ಬಿ (ಒಕ್ಕಲಿಗರು), ಸೋನಾರ

(ಚಿನಿವಾರರು) ಮತ್ತು ಸಾರಸ್ವತರಲ್ಲಿನ ಸುಮಾರು ೧೨,೦೦೦ ಜನರು ಹಡಗುಗಳ ಮೂಲಕ ದಕ್ಷಿಣದಲ್ಲಿನ ಹೊನ್ನಾವರದಿಂದ ಕೋಝಿಕ್ಕೋಡಿನ ತನಕದ ಬಂದರುಗಳತ್ತ ತೆರಳಿದರು.[೧೧] ಬಂದರುಗಳ ಸಮೀಪ ವಾಸಮಾಡುತ್ತಿದ್ದ ಸಾರಸ್ವತ ವ್ಯಾಪಾರಿಗಳಲ್ಲಿನ ಕೆಲವರು ಕ್ರಮೇಣ ಒಳನಾಡು ಸೇರಿಕೊಂಡರು. ೧೮೧೪ರಲ್ಲಿ ಅನ್ಯ ಧರ್ಮೀಯರ ಕುರಿತಾಗಿದ್ದ ಕಾನೂನನ್ನು ರದ್ದುಗೊಳಿಸಲಾಯಿತು. ಆನಂತರ ಸಾರಸ್ವತರಲ್ಲಿನ ಕೆಲವರು ತಮ್ಮ ಕುಲದೇವತೆಗಳೊಂದಿಗೆ ಗೋವಾಕ್ಕೆ ಮರಳಿಬಂದು, ದೈವಾರಾಧನೆಗಾಗಿ ದೇವಸ್ಥಾನಗಳನ್ನು ಕಟ್ಟಿಸಿದರು. ಕವಳೆ, ಪರ್ತಗಾಳಿಗಳಲ್ಲಿ ಅನುಕ್ರಮವಾಗಿ ಸ್ಮಾರ್ತ ಕವಳೆ ಮಠ, ವೈಷ್ಣವ ಗೋಕರ್ಣ ಮಠಗಳು ಕಟ್ಟಲ್ಪಟ್ಟವು.

ಮತ ಮತ್ತು ಸಂಪ್ರದಾಯಗಳ ಹೆಸರಿನಲ್ಲಿ ಹಿಂಸಾಚಾರಣೆಗೆ ತೊಡಗಿ ಹಿಂದುಗಳನ್ನು ಗೋವಾದಿಂದ ಹೊರಕ್ಕೋಡಿಸಿದ ಪೋರ್ಚುಗೀಸರು ತಮ್ಮ ದುಷ್ಕೃತ್ಯದ ಅರಿವುಕೊಂಡರು. ಬೊಂಬೇಯಲ್ಲಿದ್ದ ಪೋರ್ಚುಗೀಸ್ ಸರಕಾರದ ವಲಸಿಗರ ವಿಭಾಗ ಗೋವಾಕ್ಕೆ ಮರಳುವವರಿಗೆಲ್ಲ ಸಹಾಯ ಧನ, ಮನೆಕಟ್ಟುವರೆ ಸ್ಥಳ, ಸಾಮಗ್ರಿ, ವ್ಯವಸಾಯಕ್ಕೆ ಯೋಗ್ಯವಾದ ಭೂಮಿ ಇತ್ಯಾದಿಗಳನ್ನು ಬಹುಮಾನವಾಗಿತ್ತು ಸ್ವಾಗತಿಸಿತು. ಆದರೆ ಸುಖ, ಸಂಪತ್ತನ್ನು ಕೊಂಡಿದ್ದ ಅಧಿಕಾಂಶ ಜನರು ತಮ್ಮ ವಾಸ್ತವ್ಯದ ಹೊಸ ಸ್ಥಾನದಲ್ಲೇ ಉಳಿಯಬಯಸಿದರು. (ಇಂದೋರ್, ಬರೋಡಾ, ಹರ್ದಾ ಮತ್ತು ಇನ್ನಿತರೆಡೆಗಳಲ್ಲಿನ ವಲಸಿಗರ ದೊಡ್ಡ ನಿವಾಸ ಸ್ಥಾನಗಳಿವೆ; ಬಹುತೇಕ ಅವು ಸಿಂಧಿಯಾನ ರಾಜ್ಯದಲ್ಲಿನ ಅಶಾಂತಿಯ ದಿನಗಳಲ್ಲಿ ಅಲ್ಲಿ ನೆಲಸಿದ್ದವರ ವಂಶಜರದ್ದಾಗಿರಬೇಕು).

೧೭. ಗೋವಾದ ಭಾರತೀಯ ಗವರ್ನರ್

ದೋಮ್ ಮಿಗೆಲ್‌ನ ದುರಾಕ್ರಮಣದ ವೇಳೆಗೆ ಬ್ರಗಾಂಝಾ ರಾಜಮನೆತನಕ್ಕೆ ತೋರಿದ ನಿಷ್ಠೆಗಾಗಿ ೧೮೩೫ರಲ್ಲಿ ಪೋರ್ಚುಗಲ್ಲಿನ ರಾಣಿ ಎರಡನೆಯ ಡೊನಾಮಾರಿಯಾ, ಗೋವಾದ ನಿವಾಸಿ ಬರ್ನಾದ್ ಪಿರೀಸ್ ದಿ ಸಿಲ್ವಾನನ್ನು ಗವರ್ನರ್ ಅಥವಾ 'ಪರ್ಫೆಕ್ಟ್ ಆಫ್ ಪೋರ್ಚುಗೀಸ್ ಇಂಡಿಯಾ' ಎಂದಾಗಿ ನಿಯುಕ್ತಿ ಮಾಡಿದಳು. ಪೋರ್ಚುಗಲ್ಲಿನಿಂದ ಬಂದ ಆತ ೧೮೩೫ರ ಜನವರಿ ೧೪ರಂದು ರಾಜ್ಯದ ಸೂತ್ರವನ್ನು ಕೈಗೆತ್ತಿಕೊಂಡ. ಆತನ ಕಾರ್ಯಭಾರದ ಹದಿನೇಳು ದಿನಗಳಲ್ಲಿನ ಸುಧಾರಣೆ ಆತನ ವೈರಿಗಳು ಪ್ರೇರೇಪಿಸಿದ ದಂಗೆಗೆ ಕಾರಣವಾಯಿತು. ೧೮೩೫ರ ಫೆಬ್ರವರಿ ತಿಂಗಳ ೧ರಂದು ಅಧಿಕಾರದಿಂದ ತಳ್ಳಲ್ಪಟ್ಟ ಆತ ಬೊಂಬೇಗೆ ಪಲಾಯನ ಮಾಡಿದ.

ಸಂದರ್ಭ ಸೂಚಿ

೧. ಗೋವಾಕ್ಕೆ ಕಳುಹಿಸಿದ ಕೆಲವೊಬ್ಬರಿಗೆ ಅರಸನ ಅನುಗ್ರಹದ ನೆನಪಿಗಾಗಿ 'ವೈಸ್‌ರಾಯ್' ಉಪಾಧಿಯನ್ನೀಯಲಾಯಿತು.

೨. ವೈಸ್‌ರಾಯ್ ದೋಮ್ ಜುವಾವ್ ದಿ ಕಾಸ್ತ್ರೊ ನುಡಿದ : ''ಪೋರ್ಚುಗೀಸರು ಒಂದು ಕೈಯಲ್ಲಿ ಖಡ್ಗವನ್ನು ಮತ್ತೊಂದು ಕೈಯಲ್ಲಿ ಶಿಲುಬೆಯಯನ್ನು ಕೊಂಡು ಭಾರತಕ್ಕೆ

ಬಂದರು. ಬಂಗಾರದ ಭಂಡಾರ ಕಂಡ ಅವರು ಕಿಸೆ ತುಂಬಲಾಗಿ ಕೈಯಲ್ಲಿನ ಶಿಲುಬೆಯನ್ನು ಬದಿಗಿಟ್ಟರು.''

೩. ದಿಯುವಿನ ಪುನರ್ವಿಜಯದಂದು ದೋವ್ ಜುವಾವ್ ದಿ ಕಾಸ್ತ್ರೊ ಮಕ್ಕಳು, ಹೆಂಗಸರ ಸಮೇತ ಸುಮಾರು ೬,೦೦೦ ಮುಸಲ್ಮಾನರನ್ನು ಕೊಂದಿಕ್ಕಿದ. 'ಲೆಂಡಾಸ್ ದಿ ಇಂಡಿಯಾ ಪುರ್ ಗಾಸ್ಪರ್ ಕುರ್ರೆಯ' ಸಂ. ೪, ಲೆಂಡಾ ದಿ ಜುವಾವ್ ದಿ ಕಾಸ್ತ್ರೊ, ಕಪಿಟ್ಯೂಟ್.
''ಪೋರ್ತುಗೀಸರ ವಿಜಯದ ಇತಿಹಾಸ ವಂಚನೆ, ಸುಲಿಗೆ, ಜಗಳಗಂಟಿತನ, ಜಿಗುಪ್ಸೆ ಹುಟ್ಟಿಸುವ ಕ್ರೌರ್ಯ, ಸಂಚು, ಸಂಧಾನಗಳದ್ದಿತ್ತು. ಪೋರ್ತುಗೀಸರು ವೃದ್ಧರು, ಸ್ತ್ರೀಯರು, ಮೊಲೆಹಾಲುಣ್ಣುವ ಶಿಶುಗಳು ಮುಂತಾದವರ ನಿರ್ಘೃಣ ಹತ್ಯೆ ಮಾಡಿದರು. ಇನ್ನೆಷ್ಟೋ ಮಂದಿಯನ್ನು ಬಲಪ್ರಯೋಗಿಸಿ ಮತಾಂತರಗೊಳಿಸಿದರು''. 'ನೊಟೀಸಿಯ ಪ್ರಿಲಿಮಿನಾರ್. ಪುರ್ ರುದ್ರಿಗು, ಜುಜೆ ದಿ ಲಿಮಾ ಫೆಲ್ನಾರ್, 'ಲೆಂಡಾಸ್ ದ ಇಂಡಿಯ' ಭಾಗ ೧, ಪು. ೧೫-೧೬.

೪. ಪೋರ್ತುಗೀಸರ ಆಳ್ವಿಕೆಯ ಮೊದಲ ದಿನಗಳಲ್ಲಿನ ಗೋಳಿನ ಕಥೆಗಳನ್ನು ಧರ್ಮಗುರು ಅಂತೋನ್ ದಿ ನೊರೊನ್ಹಾ ಬರೆದ ಪೋರ್ತುಗೀಸ್ ಭಾಷೆಯ 'ಹಿಂದುಸ್ ಇ ರಿಪಬ್ಲಿಕಾ ಪೋರ್ತುಗೀಸಾ' ಪುಸ್ತಕದಲ್ಲಿ ಹಾಗೂ ಗೋವಾದ ವಿ. ಎನ್. ಪಾಲೇಕರ್ ಬರೆದ 'ಭಯಂಕರ ಧರ್ಮಕ್ರಾಂತಿ' ಪುಸ್ತಕದಲ್ಲಿ ಕಾಣಬಹುದು.

೫. ಈ ಕಾಲದಲ್ಲಿ ಅನೇಕ ಕ್ರಿಸ್ತೀಯ ಪರಿವಾರಗಳು ಗೋವಾವನ್ನು ಬಿಟ್ಟು ಕೆನರಾದ ತಟವರ್ತಿ ಭಾಗದಲ್ಲಿ ನೆಲಸಿದವು. ಭಾರತೀಯ ಕ್ರಿಸ್ತೀಯ ಪರಿವಾರಗಳು ಗೋವಾದಿಂದ ವಲಸೆ ಹೋಗಲು ಇನ್ನೊಂದು ಕಾರಣವಿತ್ತು. ಮತಾಂತರದ ಬಳಿಕವೂ ಅವರು ಜನನ, ವಿವಾಹ ಇತ್ಯಾದಿಗಳಿಗೆ ಸಂಬಂಧಿಸಿದ ವಿಧಿಗಳನ್ನು ಹಿಂದೂ ಸಂಪ್ರದಾಯದ ಮೇರೆಗೆ ಆಚರಿಸುತ್ತಿದ್ದರು. ಕ್ರಿಸ್ತ ತತ್ವಗಳಿಗೆ ವಿರುದ್ಧವಾದ ಈ ಆಚಾರಗಳನ್ನು ಪ್ರತಿಬಂಧಿಸಲಾಗಿ ಗೋವಾದ ವೈಸ್‌ರಾಯ್ ದೋವ್ ಫ್ರಾನ್ಸಿಸ್ಕ್ ದಿ ತವೊರಾ ಮತ್ತು ಕೊಂದಿ ದಿ ಆಲ್ವಾ ಇವರು ಹೊಸ ಕಾನೂನುಗಳನ್ನು ಜಾರಿಗೆ ತಂದರು. ಶಿಶು ಜನನಾ ನಂತರದ ಆರನೆಯ ದಿನದಂದು 'ಧುಮಟ್' ಮತ್ತು ಮದ್ದಳೆಗಳನ್ನು ಬಾರಿಸಿ ಇಡೀ ರಾತ್ರಿ ಹಾಡು ಹಾಡಿ 'ಸತ್ತಿ', ಆಚರಿಸುವ ಪದ್ಧತಿಯನ್ನು ಪ್ರತಿಬಂಧಿಸಲಾಯಿತು. ಅನೇಕ ನವಕ್ರೈಸ್ತರ ಕುಟುಂಬಗಳು ಹಿಂದುಗಳ ಹೊಸ ವಸಾಹತುಗಳಲ್ಲಿ ನೆಲಸಿದವು. ಗಾಂವ್‌ಕರರು (ಪ್ರತಿಷ್ಠಿತ ಗ್ರಾಮಸ್ಥರು) ತಮ್ಮ ಸಂಬಂಧಿಕರನ್ನು ಹಾಜರುಪಡಿಸಬೇಕೆಂಬ ೧೬೮೪ರ ಕಾನೂನು ವಲಸೆ ಹೋಗುವುದನ್ನು ತಡೆಹಿಡಿಯಲು ಅಸಮರ್ಥವಾಯಿತು. ೧೭೦೦-೧೭೧೨ರ ನಡುವೆ ಸುಮಾರು ೧೨,೦೦೦ ಮಂದಿ ಕ್ರಿಸ್ತೀಯರು ಬಾರ್ದೇಶ್‌ನ್ನು ಬಿಟ್ಟುಹೋದರು. ೧೭೩೯ರಲ್ಲಿ ಮರಾಠರು ಸಾಷ್ಟಿ ಮತ್ತು ಬಾರ್ದೇಶ್‌ಗಳ ಮೇಲೆ ಹಲ್ಲೆ ಮಾಡಿದಾಗ ಸ್ಥಾನಿಕರು ಅನೇಕ ಕಷ್ಟಗಳಿಗೊಳಗಾಗಿದ್ದರು. ಬಸ್ಸೀನ್‌ನ ಮೇಲಣ ಮರಾಠರ ವಿಜಯದ ಬಳಿಕ ಗೋವಾಕ್ಕೆ ಮರಳಿದ ಪೋರ್ತುಗೀಸರು ಸ್ಥಾನೀಯ ಸ್ತ್ರೀಯರ ಮಾನಭಂಗ ಮಾಡಿದರು, ಇವೆಲ್ಲವುಗಳ ಪರಿಣಾಮ ಸ್ವರೂಪ ಸುಮಾರು ೫೦,೦೦೦ ಮಂದಿ ಸಾಷ್ಟಿ ಬಿಟ್ಟುಹೋದರು.
ಅನಂತರ ಕೆಲವೊಂದು ವರ್ಷಗಳ ತನಕ, ಪ್ರತಿ ವರ್ಷ ಸುಮಾರು ೨,೦೦೦ಮಂದಿ ವಲಸೆ ಹೋದರು. 'ಕೊಂಕಣೀಚೆ ವ್ಯಾಕರಣಿ ಬಾಂಧಾವಳ'; ವಾಮನ ರಘುನಾಥ ವರ್ದೆವಾಲಾ ವಲಕರ್, ಪು. ೧೫೬, ೧೫೭.

೬. 'ಕೊಮೆಸೆ ಪಿರ್ದು ಬಕಾಯಿಮ್' - ಪಿ.ಪಿಸ್ಸುರ್ಲೆಂಕರ್.

೭. ಸೋಂದ (ಕನ್ನಡದಲ್ಲಿ - ಸೋಂದೆ) ದ ಅರಸರು ಗೋವಾದ ಭಾಗವೊಂದನ್ನು ೧೭೫

ವರ್ಷಗಳ ಕಾಲ ಆಳಿದರು. ೧೬೬೫ರಲ್ಲಿ ಶಿವಾಜಿ, ಬಿಜಾಪುರದ ಸಾಮಂತ ಆಳುತ್ತಿದ್ದ ಫೊಂಡೆ (ಅಂತ್ರುಜ್) ಮಹಾಲನ್ನು ಗೆದ್ದುಕೊಂಡ. ಅದು ೧೬೮೯ರ ತನಕ ಮರಾಠರ ಅಧೀನವಿತ್ತು. ಸಂಭಾಜಿಯ ಮರಣಾನಂತರ ಆಂತರಿಕ ಕಲಹದ ಲಾಭಕೊಂಡು ಆಗಿನ ಅರಸು ಈ ಮಹಾಲನ್ನು ಮರಳಿ ಸ್ವಾಧೀನ ಪಡಿಸಿದ. ೧೭೩೯ರಲ್ಲಿ ಗೋವಾದ ಮೇಲೆ ದಂಡೆತ್ತಿ ಹೋದ ಮರಾಠರು ಅದನ್ನು ಇಮ್ಮಡಿ ಸದಾಶಿವ ನಾಯಕನಿಂದ ಮರಳಿ ಗೆದ್ದುಕೊಂಡರು. ಆದರೆ ೧೭೫೦ರಲ್ಲಿ ಮರಾಠರ ಪ್ರಭುತ್ವ ಸ್ವೀಕರಿಸಿದ ಆತನ ಮಗ ಬಸವಲಿಂಗ ನಾಯಕನಿಗೆ ಅವರು ಅದನ್ನು ಹಿಂದಿರುಗಿಸಿದರು.

ವಿಠ್ಠಲ ಗೋರಕ್ಷರಾವ್ ವರ್ದೆ ವಾಲಾವಲಕರರ ಸೂಚನೆಯ ಮೇರೆಗೆ ೧೭೬೪ರಲ್ಲಿ ಸೋಂಡೆಯ ಅರಸು ಪೋರ್ಚುಗೀಸರಿಂದ 'ಹಿಂದುಗಳ ಮಾನಭಂಗ ಮಾಡಲಾರೆವೆಂಬ ಮತ್ತು ಅವರ ದೇವಸ್ಥಾನಗಳ ಕೆಲಸ, ಕಾರ್ಯಗಳಲ್ಲಿ ಹಸ್ತಕ್ಷೇಪ ಮಾಡಲಾರೆವೆಂಬ' ಮಾತುಕೊಂಡಿದ್ದನೆನ್ನಲಾಗುತ್ತದೆ. ಈ ಪ್ರಾಂತ ಧಾರ್ಮಿಕ ಸತಾವಣೆಗೊಳಗಾಗದೆ ಉಳಿಯಿತಾದರೂ ಪೋರ್ಚುಗೀಸರು ಮಾತ್ರ ತಾವಿತ್ತ ಆಶ್ವಾಸನೆಯನ್ನು ಪೂರ್ಣಪಾಲಿಸಲಿಲ್ಲ. ಹಿಂದುಗಳ ಹಕ್ಕಿಗಾಗಿ ವಿಠ್ಠಲಗೋರಕ್ಷರಾವ್ ನಿರಂತರ ಹೋರಾಡುತ್ತಿದ್ದರು. ೧೭೫೪ರಲ್ಲಿ ಪೋರ್ಚುಗೀಸರು ಆವರಿಗೆ ತಮ್ಮ ಸೇನೆಯ 'ಸೇನಾನಾಯಕನ ಪದವಿಯನ್ನಿತ್ತರು. ೧೭೯೩ರಲ್ಲಿ ಪೇಶ್ವೆಯ ದರ್ಬಾರಿನಲ್ಲಿ ಅವರ ವಕೀಲರಾಗಿ ನೇಮಿಸಲ್ಪಟ್ಟರು. ೧೮೦೮ರಲ್ಲಿ ಅವರು ತೀರಿಕೊಂಡರು.

ವಾಮನ ರಘುನಾಥ ವರ್ದೆ ವಾಲಾವಲಕರ್ ಈ ಕುಟುಂಬಕ್ಕೆ ಸೇರಿದವರಿದ್ದರು.

೮. ಬಾರ್ದೇಶ್‌ದಲ್ಲಿನ ಖಂಡೋಲಿಗೆ ಸಂಬಂಧಿಸಿದ ಮತ್ತೆ ಪೇಶ್ವೆಯವರ ಸೇನೆಯಲ್ಲಿ ಉದ್ಯೋಗಕೊಂಡಿದ್ದ ಲೆಫ್ಟೆನಂಟ್ ಕರ್ನಲ್ ಜುಜೆ ಅಂತೋನ್ ಪಿಂಟೊ, ಮೇಜರ್ ಫ್ರಾನ್ಸಿಸ್ಕ್ ಕಾಯ್ತಾಣ ಪಿಂಟೊ, ಮತ್ತು ಕೇಪ್ಟನ್ ಜುಜೆ ಜೋಸಿನ್ ಪಿಂಟೊ ಎಂಬೀ ಮೂರು ಬಂಡಕೋರರ ಬಂಡಾಯ 'ಪಿಂಟೋ ಬಂಡಾಯ' ಎಂದಾಗಿ ಪರಿಚಿತವಾಗಿದೆ.

೯. ದೀಪಾಜಿರಾಣೆ ಭಡ್ಡೆ (ಕೊಂಕಣಿ ನುಡಿಯುವ ಕ್ಷತ್ರಿಯ) ಕೋಮಿಗೆ ಸೇರಿದವನಿದ್ದ. ಇತ್ತೀಚೆಗೆ, ಈ ಕೋಮಿಗೆ ಸೇರಿದ್ದ ಹಲವೊಬ್ಬರು ತಮ್ಮನ್ನು ಮರಾಠಾ ಎಂದಾಗಿ ಕರೆದುಕೊಳ್ಳಲಾರಂಭಿಸಿದ್ದಾರೆ.

೧೦. ೧೪೯೮ರಲ್ಲಿ ವಾಸ್ಕೋಡಗಾಮಾ ಕೋಝಿಕ್ಕೋಡಿಗೆ (ಕೆಲಿಕಟ್) ಬಂದಾಗ ಅಲ್ಲಿ ಕೆಲವೊಬ್ಬ ಸಾರಸ್ವತರ ವಾಸ್ತವ್ಯವಿತ್ತು. ತಮ್ಮೊಂದಿಗಿನ ಕಿರುಕುಳದ ನಂತರ ವಾಸ್ಕೋಡಗಾಮಾನಿಗೆ ಕೆಲಿಕಟ್‌ನಲ್ಲಿ ಸಂಬಾರಜಿನಸುಗಳನ್ನು ಖರೀದಿಸುವಲ್ಲಿ ಮುಸಲ್ಮಾನರು ತಡೆಯೊಡ್ಡಿದರು. ಆಗ ಝಾಮೋರಿನ್ ಕೊಂಕಣಿ (ಸಾರಸ್ವತ) ವ್ಯಾಪಾರಿಗಳನ್ನು ಆತನ ಸಾಮಾನನ್ನು ಖರೀದಿಸಲು ಮತ್ತು ನಾಯರ್‌ರನ್ನು ಉಗ್ರಾಣದ ರಕ್ಷಣೆಗಾಗಿ ಕಳುಹಿಸಿದ. 'ದ ಝಾಮೊರಿನ್ಸ್ ಆಫ್ ಕೆಲಿಕಟ್' - ಕೆ ವಿ. ಕೃಷ್ಣ ಅಯ್ಯರ್, ಪು ೧೪೭.

೧೧. ಅವರು ಕೋಝಿಕ್ಕೋಡ್ ಮತ್ತು ಕೊಚ್ಚಿನ್ ಬಂದ ವಿವರಗಳನ್ನು ೧೫೫೪ರಲ್ಲಿ ಕೊಚ್ಚಿಯ ದೇವಸ್ಥಾನಕ್ಕಾಗಿ ಕಾಶಿ ಮಠ ತಯಾರಿಸಿದ ನಿಯಮಾವಳಿ ಪತ್ರಿಕೆಯಲ್ಲಿ ನಮೂದಿಸಲಾಗಿದೆ.

ಭಾಗ ೨

ಅಧ್ಯಾಯ ೫

ಉತ್ತರ ಕೊಂಕಣದಲ್ಲಿ ಸಾರಸ್ವತರು

ಜೈನ ಧರ್ಮವನ್ನಾಚರಿಸುತ್ತಿದ್ದ ಕದಂಬರು ಚಂದ್ರಪಾಡಿ, ಅನಂತರ ಗೋವಾದ ಇನ್ನುಳಿದ ಭಾಗಗಳನ್ನು ಗೆದ್ದಾಗ ಅಲ್ಲಿನ ಅನೇಕ ಸಾರಸ್ವತರು ಒಂಭತ್ತು ಮತ್ತು ಹತ್ತನೆಯ ಶತಮಾನಗಳ ನಡುವೆ ಥಾಣಾ ಜಿಲ್ಲೆಯಲ್ಲಿನ ಸಾಲ್ಸೆಟ್ಟ್ ದ್ವೀಪಕ್ಕೆ ವಲಸೆ ಹೋದರು. ಸಾಲ್ಸೆಟ್ ಮೂಲತಃ ಗೋಮಾಂತಕ' ರಿದ್ದ ಉತ್ತರೆಯ ಶಿಲಾಹರರಿಂದ ಆಳಲ್ಪಡುತ್ತಿತ್ತು.

೧. ಉತ್ತರ ಕೊಂಕಣವನ್ನು ಆಳಿದವರು

ಉತ್ತರ ಕೊಂಕಣ ಮೌರ್ಯರ, ಶಾತವಾಹನರ, ಬಾದಾಮಿಯ ಪಡುವಣ ಚಾಲುಕ್ಯರ ಹಾಗೂ ರಾಷ್ಟ್ರಕೂಟರ ರಾಜ್ಯಗಳ ಭಾಗವಾಗುಳಿದಿತ್ತು. ಕೊಂಕಣದ ಮೌರ್ಯರೆಂಬ ಸ್ಥಾನಿಕ ರಾಜ ವಂಶವೂ ಐದು-ಆರನೆಯ ಶತಮಾನಗಳ ನಡುವಣ ಕಾಲದಲ್ಲಿ ಕೊಂಕಣದಿಂದ ಗೋವಾದ ಮೇಲೆ ರಾಜ್ಯಭಾರ ಮಾಡಿತ್ತು. ಅವರನ್ನು ಸೋಲಿಸಿದ ಪಡುವಣ ಚಾಲುಕ್ಯರು ಈ ರಾಜ್ಯವನ್ನು ತಮ್ಮ ಸಾಮ್ರಾಜ್ಯದೊಂದಿಗೆ ಸೇರಿಸಿಕೊಂಡಿದ್ದರು. ಧಾರ್ವಾರ ಜಿಲ್ಲೆಯಲ್ಲಿನ ಐಹೊಳೆಯ ಶಾಸನದಲ್ಲಿ ಮೊದಲನೆಯ ಕೀರ್ತಿವರ್ಮನ್ ನಳ ಮತ್ತು ಮೌರ್ಯರನ್ನು ಸೋಲಿಸಿದ ಉಲ್ಲೇಖವಿದೆ. ನಳ ಕೂಡಾ ಕೊಂಕಣದ ಭಾಗವೊಂದನ್ನು ಆಳಿಕೊಂಡಿದ್ದಿರಬೇಕು. ಆದರೆ ಈ ಎರಡು ರಾಜಮನೆತನಗಳ ವಿಸ್ತೃತ ವಿವರಗಳು ಮಾತ್ರ ದೊರಕುತ್ತಿಲ್ಲ.

೨. ಉತ್ತರ ಕೊಂಕಣದ ಶಿಲಾಹರರು

ಕ್ರಿ. ಶ. ೮೦೦ರಿಂದ ೧೨೬೦ರ ನಡುವೆ ಸುಮಾರು ಇಪ್ಪತ್ತು ಶಿಲಾಹರ ಅರಸರು ಉತ್ತರ ಕೊಂಕಣವನ್ನು ಘಾರಾಪುರಿ (ಎಲಿಫೆಂಟಾ), ಶ್ರೀಸ್ಥಾನಕ (ಥಾಣೆ), ಕಲ್ಯಾಣ ಮುಂತಾದ ರಾಜಧಾನಿಗಳಿಂದ ಆಳಿದ್ದರು. ಅವರು ತಮ್ಮನ್ನು ತಗಾರಾ ನಗರದ ಅಧಿರಾಜರು ಎಂದು ಕರೆದುಕೊಂಡರು. (ಡಾ. ಜೆ. ಎಫ್. ಫ್ಲೀಟ್ ಅವರು ತಗಾರಾವನ್ನು ಕೊಲ್ಹಾಪುರವೆಂದೂ, ನಂದೋಲಾಲ್ ದೌಲತಾಬಾದ್ ಎಂದೂ ನಂಬುತ್ತಾರೆ) ಅವರು ಸ್ವತಂತ್ರರಿದ್ದ ನಿಮಿತ್ತ ಪ್ರಾಯಶಃ ರಾಷ್ಟ್ರಕೂಟರ ಮಹಾಮಂಡಲೇಶ್ವರರೆಂದಾಗಿ ಕರೆಯಲ್ಪಟ್ಟರು. ಕದಂಬರ ಎರಡನೆಯ ಶಾಸ್ತದೇವ (೧೦೦೮-೧೦೫೦), ಉತ್ತರೆಯ ಮತ್ತು ದಕ್ಷಿಣದ ಶಿಲಾಹರರ ನಡುವಣ ವೈಮನಸ್ಸಿನ ಲಾಭಕೊಂಡು ಉತ್ತರೆಯ ಶಿಲಾಹರರನ್ನು ತನ್ನ ಮಾಂಡಲಿಕರನ್ನಾಗಿ ಮಾಡಿದ. ೧೦೭೪ರ ಶಾಸನವೊಂದರ ಮೇರೆಗೆ ಆತನ ಪುತ್ರ ಮೊದಲನೆಯ ಜಯಕೇಶಿ, ಶಿಲಾಹರರ ಅರಸು ಮಾಮಣ್ಣಿಯ ಮೇಲೆ ಹಲ್ಲೆ ಮಾಡಿದ. ೧೧೪೮ರ ಮಗುದೊಂದು ಶಾಸನ ಆತನ ಸೋದರಳಿಯ ಮತ್ತು ಉತ್ತರಾಧಿಕಾರಿಯಾದ್ದ ಅನಂತದೇವ (ಉಪನಾಮ ಅನಂತಪಾಲ) ಕದಂಬರನ್ನು ಹಿಮ್ಮೆಟ್ಟಿಸಿ ಎರಡನೆಯ ಗುಹಲ್ಲ ದೇವನ ಆಳ್ವಿಕೆಯ ಕಾಲ ಪ್ರಾಂತವನ್ನು ಮರಳಿ ಗಳಿಸಿದನೆಂಬುದನ್ನು ಹೇಳುತ್ತದೆ. ಆತನ ಸಹೋದರ ವಿಜಯಾದಿತ್ಯ

(೧೧೦೦-೧೧೦೪) ಉತ್ತರ ಕೊಂಕಣವನ್ನು ಮತ್ತೆ ಗೆದ್ದುಕೊಂಡ. ಎರಡನೆಯ ಜಯಕೇಶಿ (೧೧೦೪-೧೧೪೭/೪೮) ಯ ರಾಜ್ಯಭಾರದ ಕೊನೆಯ ದಿನಗಳಲ್ಲಿ ಶಿಲಾಹರ ಮಲ್ಲಿಕಾರ್ಜುನ ಗೋವಾದ ಕದಂಬ ಮತ್ತು ಹೊಯ್ಸಳರ ನಡುವಣ ಯುದ್ಧದ ಲಾಭಕೊಂಡ. ಆನಂತರ ಕರ್‍ಹಾಡದ ಶಿಲಾಹರ ಅರಸು ವಿಜಯಾದಿತ್ಯನ ಸಹಾಯದಿಂದ ತನ್ನ ಪೂರ್ವಜರ ಭೂಮಿಯನ್ನು ಮರಳಿ ಗಳಿಸಿದ.

ದೇವಗಿರಿಯ ಹೇಮಾದ್ರಿ, ಕುಂಕುಣೇಶ (ಕೊಂಕಣದ ಅಧಿಪತಿ) ನೆಂದು ಸಂಬೋಧಿಸುತ್ತಿದ್ದ ಶಿಲಾಹರರ ಕೊನೆಯ ಅರಸು ಸೋಮೇಶ್ವರನ ಆಳ್ವಿಕೆಯ ಕಾಲ, ಯಾದವರ ಅರಸು ಮಹಾದೇವ (೧೨೬೦-೧೨೭೧) ಉತ್ತರ ಕೊಂಕಣಕ್ಕೆ ದಾಳಿಯಿಕ್ಕಿ ಅದನ್ನು ಗೆದ್ದುಕೊಂಡ. ಮಹಾದೇವನ ಸೋದರಳಿಯ ರಾಮದೇವ (೧೨೭೨-೧೩೧೦) ಆತನ ಉತ್ತರಾಧಿಕಾರಿಯಾಗಿ ಬಂದ.

೧೨೭೮ರಲ್ಲಿ ರಾಮದೇವ ಅಚ್ಯುತನಾಯಕನನ್ನು ಉತ್ತರ ಕೊಂಕಣದ ಪ್ರತಿಹಸ್ತ (ಗವರ್ನರ್) ನೆಂದು ನೇಮಿಸಿದ. ೧೩೧೦ರಲ್ಲಿ ಕೃಷ್ಣ (ಕೃಷ್ಣದೇವ) ಆತನ ಉತ್ತರಾಧಿಕಾರಿಯಾಗಿ ಬಂದ.

೧೩೧೨ರ ತನಕ ಉತ್ತರ ಕೊಂಕಣ ಯಾದವರ ಆಳ್ವಿಕೆಗೊಳಗಾಗಿತ್ತು.

೩. ಸಾಲ್ಸೆಟ್ಟ್‌ನಲ್ಲಿನ ವಸಾಹತುಗಳು

ಸಾರಸ್ವತರು ನೆಲಸಿದ್ದ ಗ್ರಾಮಗಳನ್ನು ಕಾನ್ಹಾಗಿರಿ (ಕನ್ಹೇರಿ), ಕಾನ್ಹಾಸಿಲಾ, ಕೃಷ್ಣಾಗಿರಿ ಎಂದಾಗಿ ಹಲವೊಂದು ಬೌದ್ಧ ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಅವರು ಗೋವಾದಲ್ಲಿನ ತಮ್ಮ ಹೊಸ ವಸಾಹತುಗಳಿಗೆ ರಾಯಾ, ಖಂದೋಲಿ, ಶಿರ್ಗಾಂವ್, ಕೊಲವೆ, ಡೊಂಗ್ರಿ, ಅಮೋಲಿ, ಜುವಾಯಿ, ಸಾಲ್ಗಾಂವ್, ಪಾಲಿ, ಆಗಾಶಿ ಮುಂತಾದ ಗ್ರಾಮಗಳ ಹೆಸರನ್ನಿತ್ತರು. ಇಂದು ಅವರು ಆ ಹೆಸರುಗಳಿಂದಲೇ ಪರಿಚಿತರಾಗಿರುತ್ತಾರೆ. ಥಾಣಾ ಜಿಲ್ಲೆಯಲ್ಲಿ ೧೮ ಮೈಲು ಉದ್ದ, ೧೦ ಮೈಲು ಅಗಲ, ಸುಮಾರು ೨೪೧ ಚದರ ಮೈಲುಗಳ ಭೂಭಾಗದಲ್ಲಿ ಹರಡಿದ್ದ ಗ್ರಾಮಗಳ ಸಮೂಹವೊಂದಿದ್ದು ಅದು ಸಾಷಷ್ಟಿ ಅಥವಾ ಸಾಲ್ಸೆಟ್ ಎಂದಾಗಿ ಕರೆಯಲ್ಪಡುವ ದ್ವೀಪವೊಂದಾಗಿದೆ. (ಈ ಹೆಸರು ಗೋವಾದಲ್ಲಿನ ಸಷ್ಟಿ ಅಥವಾ ಸಾಷಷ್ಟಿ ಪ್ರಾಂತದ ಹೆಸರನ್ನು ಅನುಕರಿಸುತ್ತದೆ.) ಸಷ್ಟಿ ಅಥವಾ ಸತ್-ಷಷ್ಟಿಯ ಉಲ್ಲೇಖ ಮೊದಲ ಬಾರಿಗೆಂಬಂತೆ ಚಿತ್ತರಾಜನ ೧೦೨೬ರ ತಾಮ್ರ ಶಾಸನದಲ್ಲಿ ಕಾಣಬರುತ್ತದೆ.

ಇವರಲ್ಲಿನ ಹೆಚ್ಚಿನವರು ವ್ಯಾಪಾರಿಗಳಾಗಿದ್ದರು. ಕೆಲವೊಬ್ಬರು ಶಿಲಾಹರ ಅರಸರಲ್ಲಿ ಉದ್ಯೋಗಕ್ಕಿದ್ದು ಉಚ್ಚ ಪದವಿಕೊಂಡು ಪ್ರಸಿದ್ಧರಾದುದನ್ನು ಈ ಮುಂದಣ ಶಾಸನಗಳಿಂದರಿಯಬಹುದು.

೪. ಉತ್ತರೆಯ ಶಿಲಾಹರರ ಕೈಕೆಳಗಿನ ಸಾರಸ್ವತರು

ಈ ಮುಂದಣ ಶಾಸನಗಳು ಉತ್ತರ ಕೊಂಕಣದ ಶಿಲಾಹರರ ಕೈಕೆಳಗಿನ ಉಚ್ಚ ಪದವಿಕೊಂಡ ಸಾರಸ್ವತರ ಉಲ್ಲೇಖ ಮಾಡುತ್ತವೆ :

೧) ೯೯೭ರ ತಾಮ್ರ ಶಾಸನವೊಂದರಲ್ಲಿ ಸಂಗಳಯ್ಯ ಪೈಯನ್ನು ಮೊದಲನೆಯ

ಮಹಾಮಂಡಲೇಶ್ವರ ಅಪರಾಜಿತನ ಮುಖ್ಯ ಪ್ರಧಾನ (ಮಂತ್ರಿ) ನೆಂದೂ ಆತನ ಪುತ್ರ ಅಣ್ಣಪ್ಪ ಪೈಯನ್ನು ಪ್ರತಿಹಸ್ತ (ಸಹಾಯಕ) ಪ್ರಧಾನನೆಂದೂ, ಸಿಂಹ ಪೈಯನ್ನು ಮಹಾಸಂಧಿ ವಿಗ್ರಹಿಕ ಪ್ರಧಾನ (ಸಮರ, ಶಾಂತಿಗಳ ಖಾತೆಯ ಮಂತ್ರಿ) ನೆಂದೂ ವರ್ಣಿಸಲಾಗಿದೆ. ಶಾಸನ ಅಣ್ಣ ಪೈಯಿಂದ ಬರೆಯಿಸಲ್ಪಟ್ಟಿತೆನ್ನಲಾಗಿದೆ.

೨) ೧೦೧೭ರ ತಾಮ್ರ ಶಾಸನದಲ್ಲಿ ವಾಸ ಪೈ, ಮೊದಲನೆಯ ಅಪರಾಜಿತನ ಪುತ್ರನಿದ್ದ ಅರಿಕೇಸರಿ (ಉಪನಾಮ ಕೇಶಿದೇವ) ಯ ವರಿಷ್ಠ ಪ್ರಧಾನನೆಂದೂ, ವರ್ಧಿಯ ಪೈಯನ್ನು ಸಹಾಯಕ ಪ್ರಧಾನನೆಂದಾಗಿಯೂ ವರ್ಣಿಸಲಾಗಿದೆ. ಅದಷ್ಟೆ ಅಲ್ಲದೆ ಥಾಣಾದ ಜಾಮದಗ್ನ್ಯ ಗೋತ್ರೀಯ ರಾಜಗುರು ಚಿತ್ತ ಪೈಯ ಮಗ ತಿಕ್ಕಪೈಗೆ ಛಸಿವಾರ ಗ್ರಾಮವನ್ನಿತ್ತುದನ್ನು ಉಲ್ಲೇಖಿಸಲಾಗಿದೆ. ಶಾಸನವನ್ನು ಖ್ಯಾತ ನಾಮ ಕವಿ ನಾಗಲಯ್ಯನ ಸೋದರಳಿಯ ಜೋಗಪಯ್ಯ ರಚಿಸಿದನೆಂದೂ, ವೇದಪೈಯ್ಯ ಮಗ ಮನಧಾರಪಯ್ಯನಿಂದ ಕೊರೆಯಿಸಲ್ಪಟ್ಟಿತೆಂದೂ ಹೇಳಲಾಗಿದೆ.

೩) ೧೦೨೬ರ ತಾಮ್ರ ಶಾಸನದ ಮೇರೆಗೆ ಸಿಹ್ನಪಯ್ಯ (ಸಿಂಮ್ಹ ಪೈ) ಸಂಧಿವಿಗ್ರಹಿಕ ಪ್ರಧಾನನಿದ್ದ, ಮತ್ತು ಜೋಗಪಯ್ಯ ಅರಿಕೇಸರಿಯ ಸೋದರಳಿಯ ಚಿತ್ತರಾಜನ ಭಾಂಡಾಗಾರ ಪಡಿಸೇನ ಪ್ರಧಾನ (ಕೋಶಾಗಾರದ ಮಂತ್ರಿ) ನಿದ್ದ. ಜೋಗಪಯ್ಯನನ್ನು ಮಾಜಿ ಅರ್ಥಮಂತ್ರಿ ಮತ್ತೆ ಕವಿಯಿದ್ದ ನಾಗಪಯ್ಯನ (ನಾಗಪೈ) ಸೋದರಳಿಯನೆಂದೂ ಹೇಳಲಾಗಿದೆ.

(ಇದು ಛಾಂದೋಗ ಶಾಖೆಯ [1] ಸಾಮ ವೇದಿ ಬ್ರಾಹ್ಮಣ ಸೋದಮಯ್ಯನ ಮಗ ಆಮದೇವಯ್ಯನಿಗೆ, ಥಾಣಾ ಜಿಲ್ಲೆಯ ಸಾಲ್ಸೆಟ್ ದ್ವೀಪದ ನೊವುರ್ ಗ್ರಾಮದಲ್ಲಿತ್ತ ದತ್ತಿಗೆ ಸಂಬಂಧಿಸಿದೆ. ಈ ದತ್ತಿ ಶಾಸನವನ್ನು ರಾಜಾಜ್ಞೆಯಂತೆ ಜೋಗಪಯ್ಯ ಕೊರೆದು ಬರೆಸಿದ್ದುದಾಗಿದೆ. ವಾಕಪಯ್ಯ, ಜೋಗಳಯ್ಯ ಮತ್ತು ಛೈಲಯ್ಯ ಇದರಲ್ಲಿ ನಮೂದಿಸಲ್ಪಟ್ಟ ಅನ್ಯ ಹೆಸರುಗಳಾಗಿವೆ.)

೪) ಥಾಣಾ ಜಿಲ್ಲೆಯ ಕಲ್ಯಾಣ ತಾಲೂಕಿನಲ್ಲಿರುವ ಅಂಬರನಾಥ ದೇವಸ್ಥಾನದ ಶಿಲೆಯ ತೊಲೆಯೊಂದರಲ್ಲಿನ ಬರಹ ಮಾಮ್ವಣ್ಣಿ (ಚಾಲುಕ್ಯರ ಮಹಾಮಂಡಲೇಶ್ವರ) ಕೈಗೆತ್ತಿಕೊಂಡ ದೇವಸ್ಥಾನದ ನಿರ್ಮಾಣ ಕಾರ್ಯದ ಬಗೆಗೆ ನುಡಿಯುತ್ತದೆ. ೧೦೬೦ರ ಈ ಶಾಸನ ನಾಗಣ್ಣಯ್ಯ ಆತನ ಮಹಾ ಅಮಾತ್ಯ (ಪ್ರಧಾನ ಸಲಹೆಗಾರ) ನೆಂದೂ ಜೋಗಳಯ್ಯ ಆತನ ಮಹಾಸಂಧಿ ವಿಗ್ರಹಿಕ ಪ್ರಧಾನನೆಂದೂ ನುಡಿಯುತ್ತದೆ.

೫) ೧೦೪೯ರ ಶಿಲಾ ಶಾಸನವೊಂದರಲ್ಲಿ ರುದ್ರ ಪೈ ಮಾಮ್ವಣ್ಣಿಯ ಸೋದರಳಿಯ, ಕೊಂಕಣ ಚಕ್ರವರ್ತಿ ಅನಂತ ದೇವ (ಉಪನಾಮ ಅನಂತಪಾಲ)ನ ಮಹಾಮಾತ್ಯನಿದ್ದನೆಂದು ಹೇಳಲಾಗಿದೆ.

೬) ೧೦೯೪ರ ತಾಮ್ರ ಶಾಸನವೊಂದರಲ್ಲಿ ಮಹಾದೇವಯ್ಯ ಪ್ರಭು ಅನಂತದೇವನ ಭಾಂಡಾಗಾರ ಪಡಿಸೇನ (ವಿತ್ತ ಮಂತ್ರಿ) ಪ್ರಧಾನನೆಂದೂ, ಸೋಮಣ್ಣಯ್ಯ ಪ್ರಭುವನ್ನು ದ್ವಿತೀಯ ಪಡಿಸೇನ (ಸಹಾಯಕ ವಿತ್ತ ಮಂತ್ರಿ) ನೆಂದೂ ಹೇಳಲಾಗಿದೆ.

೭) ವಳಿ ನಗರ (ಬಳ್ಳಿ)ದ ೧೦೯೪ರ ಶಿಲಾಶಾಸನದಲ್ಲಿ ದುರ್ಗಾಶೆಟ್‌ನ ಮಗ ಬಾಬಣ್ಣ

ಶೇಟ್ ಅನಂತ ದೇವನ ಮಹಾಪ್ರಧಾನನಾಗಿದ್ದನೆಂದೂ, ಆತನ ಸಹೋದರ ಧಣಮ ಶೇಟ್ ಮಹಾಸಂಧಿ ವಿಗ್ರಹಿಕನಿದ್ದನೆಂದೂ ಹೇಳಲಾಗಿದೆ. ವಾಸ್ತವಿಕವಾಗಿ ಬಾಬಣ್ಣ ಶೇಟ್ ವಾಣಿ (ಕೊಂಕಣಿ ನುಡಿಯುವ ವೈಶ್ಯ) ಯಿದ್ದ. ಬಾಬಣ್ಣ ಶೇಟ್, ಧಣಮ ಶೇಟ್, ಅವರ ಮಕ್ಕಳು, ಮೊಮ್ಮಕ್ಕಳು, ಪಣಮಶೇಟ್, ಕುಡುಕಲಶೇಟ್ ಮತ್ತು ಮಲಯಶೇಟ್ ಇವರ ಹಡಗುಗಳು ಥಾಣಾ, ನಾಗಾಂವ್, ಸೋಪಾರಾ, ಛಾವುಲ್ ಮುಂತಾದ ರೇವುಗಳನ್ನು ಪ್ರವೇಶಿಸುವಾಗ ಅಥವಾ ಅಲ್ಲಿಂದ ಹೊರಡುವಾಗ ಕೊಡ ಬೇಕಾಗುವ ಕರಗಳಿಂದ ಮುಕ್ತರಿದ್ದುದನ್ನು ಹೇಳಲಾಗಿದೆ.

೮) ೧೧೨೭ರ ತಾಮ್ರ ಶಾಸನವೊಂದರಲ್ಲಿ ಲಕ್ಷ್ಮಣ ನಾಯಕ, ಅನಂತ ದೇವನ ಮಗ ಎರಡನೆಯ ಅಪರಾಜಿತನ ಮುಖ್ಯ ಪ್ರಧಾನನಾಗಿದ್ದನೆಂದು ಹೇಳಲಾಗಿದೆ. ಅದು ಚಿತ್ತಮಯ್ಯ ಪ್ರಭು ಎರಡನೆಯ ಪ್ರಧಾನ, ಲಕ್ಷಯ್ಯ ಪ್ರಭು ಮಹಾಸಂಧಿ ವಿಗ್ರಹಿಕ ಶ್ರೀಕರಣ (ಕಾರ್ಯದರ್ಶಿ) ಮತ್ತು ಮಂದಗರೆ, ಪ್ರಥಮಸ್ಥ ಪತಿ ಮಹಾ ಪ್ರಧಾನರಾಗಿದ್ದರೆಂದು ಹೇಳುತ್ತದೆ.

೯) ವಸಯಿ (ಬಸ್ಸೀನ್) ಯ ಉತ್ತರಕ್ಕೆ ೧೦ ಮೈಲುಗಳಷ್ಟರ ದೂರದಲ್ಲಿರುವ ಅಗಶಿಯಲ್ಲಿನ ೧೧೫೦ರ ತಾಮ್ರ ಶಾಸನದ ಮೇರೆಗೆ ವೇಸು ಪಡವಲ, ಲಕ್ಷ್ಮಣಪ್ರಭು ಮತ್ತು ವಾಸುಕಿ ನಾಯಕ್ ಇವರು ಹರಿವಲದೇವ (ಹರಿಪಾಲ)ನ ಪ್ರಧಾನರಾಗಿದ್ದರು.

೧೦) ೧೧೬೦ರ ಶಿಲಾಶಾಸನದಲ್ಲಿ ಪ್ರಭಾಕರ ನಾಯಕ್ ಮತ್ತು ಅನಂತ ಪೈ ಪ್ರಭು, ಮಲ್ಲಿಕಾರ್ಜುನನ ಪ್ರಧಾನರಾಗಿದ್ದುದನ್ನು ಹೇಳಲಾಗಿದೆ.

೧೧) ೧೧೬೨ರ ದತ್ತಿ ಶಾಸನದಲ್ಲಿ ಮಹಾದೇವಯ್ಯ ಪ್ರಭು, ಸೋಮಣ್ಣಯ್ಯ ಮತ್ತು ಭಬ್ಬಣ ಶ್ರೇಷ್ಠಿ (ಬಾಬಣ್ಣ ಶೇಟ್) ಇವರು ಮಲ್ಲಿಕಾರ್ಜುನನ ಪ್ರಧಾನರಿದ್ದುದನ್ನು ಉಲ್ಲೇಖಿಸಲಾಗಿದೆ.

೧೨) ಮಹಾರಾಜಾಧಿರಾಜ ಎರಡನೆಯ ಅಪರಾಜಿತ ನ ೧೧೮೭ರ ದತ್ತಿಯ ಎರಡು ಶಿಲಾಶಾಸನಗಳಿದ್ದು, ಒಂದರಲ್ಲಿ ಭಾಸ್ಕರ ನಾಯಕ್‌ನ ಮಗ ಲಕ್ಷ್ಮಣ ನಾಯಕ್‌ನನ್ನು ಮುಖ್ಯ ಪ್ರಧಾನನೆಂದು ಹೇಳಲಾಗಿದೆ.

೧೩) ಬೊಂಬೇಯ ಪರೇಲ್ ಭಾಗದಲ್ಲಿನ ಸರಕಾರಿ ಭವನದ ಬಳಿ ದೊರಕಿದ ಎರಡನೆಯ ಅಪರಾಜಿತನ ೧೧೮೭ರ ಇನ್ನೊಂದು ಶಾಸನದಲ್ಲಿ ಅನಂತ ಪೈ ಪ್ರಭುವನ್ನು ಶ್ರೀಕರಣ ಮತ್ತು ಮಹಾಸಂಧಿವಿಗ್ರಹಿಕನೆಂದೂ, ಭೋಪವ್ಯೋಮ ಶಂಭು ಿವನ್ನು ಮುಖ್ಯ ಅಮಾತ್ಯನೆಂದಾಗಿಯೂ ಉಲ್ಲೇಖಿಸಲಾಗಿದೆ. ಈ ಶಾಸನದ ಕೊನೆಯ ನಾಲ್ಕು ಪಂಕ್ತಿಗಳು ಕೊಂಕಣಿ ಭಾಷೆಯಲ್ಲಿವೆ.

(ಇದು ಅನಂತ ಪೈ ಪ್ರಭುವಿನ ಅಧೀನವಿದ್ದ ಮಹಾವಲಿ (ಥಾಣಾ ಜಿಲ್ಲೆಯ ಸಾಲ್ಸೆಟ್ಟ್ ದ್ವೀಪದಲ್ಲಿನ ಮಾಹುಲಿ)ಯ ಉತ್ಪನ್ನದ ಒಂದು ಭಾಗವನ್ನು ದರ್ಭಾವತಿಯಲ್ಲಿನ ವೈದ್ಯನಾಥನ ಪೂಜೆಗಾಗಿ ಬಿಟ್ಟ ದತ್ತಿಗೆ ಸಂಬಂಧಿಸಿದ್ದುದಾಗಿದೆ. ಅನಂತ ಪೈ ಪ್ರಭುವನ್ನು ಶಿವಭಕ್ತನೆಂದು ವರ್ಣಿಸಲಾಗಿದೆ.)

೧೪) ೧೨೪೯ರ ದತ್ತಿ ಶಾಸನದಲ್ಲಿ ಝಂಪದ ಪ್ರಭು, ಬೇಬಾಳ ಪ್ರಭು ಮತ್ತು ಪೆರಪ್ಪೆ ಪಂಡಿತರನ್ನು ಸೋಮೇಶ್ವರನ ಮಂತ್ರಿಗಳೆಂದು ಉಲ್ಲೇಖಿಸಲಾಗಿದೆ.

೧೫) ವಸಯಿ (ಬಸ್ಸೀನ್)ಯಿಂದ ಮೂರು ಮೈಲುಗಳ ದೂರದ ಸಂದೋರ ಎಂಬಲ್ಲಿನ ೧೨೫೫ರ ಸೋಮೇಶ್ವರನ ಶಿಲಾಶಾಸನದಲ್ಲಿ ಉದಯ ಪ್ರಭು, ಮಾಯಿನಾಯಿಕ, ದಾದಾ ಪ್ರಭು ಮತ್ತು ಜಸಮಿ ನಾಯಕ್‌ರನ್ನು ರಾಯಪಿತಾಮಹ ಕೊಂಕಣ ಚಕ್ರವರ್ತಿ ಛೇಟುಗಿ (ಸೋಮೇಶ್ವರ) ಯ ಪ್ರಧಾನರೆಂದಾಗಿ ಉಲ್ಲೇಖಿಸಲಾಗಿದ.

೧೬) ಸೋಮೇಶ್ವರನ ೧೨೬೦ರ ಶಿಲಾಶಾಸನವೊಂದರಲ್ಲಿ ಝಂಪದ ಪ್ರಭು, ಮಾಯಿ ನಾಕು (ಮಾಯಿನಾಯಕ್) ಬೇಬಾಳ ಪ್ರಭು ಮತ್ತು ಗೋವೆ ನಾಕು (ನಾಯಕ್) ಇವರನ್ನು ಸೋಮೇಶ್ವರನ ಪ್ರಧಾನರೆಂದು ಉಲ್ಲೇಖಿಸಲಾಗಿದೆ.

ಹೆಚ್ಚಿನೆಡೆಗಳಲ್ಲಿ ಸಾರಸ್ವತರನ್ನು ಅರಸನ ಅಧಿಕಾರಿಗಳೆಂದು ಹೇಳಲಾಗಿದೆಯಷ್ಟೆ, ಹೊರತು ದತ್ತಿಕೊಂಡವರೆಂದು ಉಲ್ಲೇಖಿಸಲಾಗಿಲ್ಲ.

೫. ದೇವಗಿರಿಯ ಯಾದವರ ಕೈಕೆಳಗಿನ ಸಾರಸ್ವತರು

೧) ಸೇವುಣದೇಶವನ್ನು ತನ್ನ ರಾಜಧಾನಿಯಾದ ಸಿಂಧಿನಗರ (ಸಿನ್ನರ್)ದಿಂದಾಳಿದ ಯಾದವರ ಅರಸು ಎರಡನೆಯ ಬಿಲ್ಲಮನ ಕ್ರಿ.ಶ. ೧೦೦೦ ತಾಮ್ರ ಶಾಸನ, ಅಹಮ್ಮದ್ ನಗರ ಜಿಲ್ಲೆಯ ಸಂಗಮ್ನೇರ್‌ನಲ್ಲಿನ ಜಿಲ್ಲೆಯ ಅರ್ಜುನೋಂದಿಕವನ್ನು ಸಿನ್ನರ್‌ನ ಇಪ್ಪತ್ತೊಂದು ಬ್ರಾಹ್ಮಣರಿಗಿತ್ತ ದತ್ತಿಗೆ ಸಂಬಂಧಿಸಿದ್ದುದಾಗಿದೆ. ದಾನ ಪಡೆದವರಲ್ಲಿ ಮಹಾಳಪಯ್ಯ ಅಥವಾ ಮಹಾಳ್ ಪೈ (ಇಂದಾಪೈಯ ಮಗ) ಮತ್ತು ರಾಜ ದೌವಾರಿಕ (ರಾಜಗೃಹಾವಳಿತದಾರ)ನೆಂದು ವರ್ಣಿಸಲ್ಪಟ್ಟ ಮಹಾಳಪಾದ್ಯ (ಪಯ್ಯ) ಎಂಬುವರಿದ್ದರು. ವಡಪೈಯ ಮಗ ಮಹಾಳಪಯ್ಯ, ಕಾಳಪೈಯ ಮಗ ದಂಡಪಯ್ಯ ಅಲ್ಲಪೈಯ ಮಗ ಪೊಮ್ಮದೇವ, ಅಲ್ಲಪೈಯ ಮಗ ದೇವಪ್ಪಯ್ಯ, ಶ್ರೀಧರ ಪೈಯ ಮಗ ಬಿಕ್ಕಪಯ್ಯ, ನೇವಪಯ್ಯ, ವಚ್ಚ ಪೈ ಮತ್ತ ಗುಢಿಸಪಯ್ಯ. ಇವುಗಳಲ್ಲಿನ ಕೆಲವು ಗೋವಾದ ವಿಲಕ್ಷಣ ಹೆಸರುಗಳಾಗಿದ್ದು ಇವು ಸಾರಸ್ವತರದ್ದಾಗಿ ತೋರಿಬರುತ್ತವೆ.

೨) ೧೦೬೯ರ ಶಿಲಾಶಾಸನವೊಂದರಲ್ಲಿ ರಾಜಾಧ್ಯಕ್ಷ (ಅರಮನೆಯ ಕಾರ್ಯ ನಿರ್ವಾಹಕ) ಅಪ್ಪಯ್ಯಕನನ್ನು ಎರಡನೆಯ ಸೇವುಣ ಚಂದ್ರನ ಮಂತ್ರಿಗಳಲ್ಲೊಬ್ಬನೆಂದಾಗಿ ಉಲ್ಲೇಖಿಸಲಾಗಿದೆ.

೩) ೧೨೭೨ರ ದತ್ತಿಯ ತಾಮ್ರ ಶಾಸನ ರಾಮದೇವ ಅಥವಾ ರಾಮರಾಜ ೫೭ ಬ್ರಾಹ್ಮಣರಿಗಿತ್ತ ದಾನದ ಕುರಿತಾಗಿದೆ. ದಾನ ಪಡೆದ ಇಬ್ಬರಲ್ಲಿ ಒಬ್ಬಾತ ವಸಿಷ್ಠ ಗೋತ್ರೀಯ ದಾಮೋದರನ ಮಗ ರವಳ ದೇವ, ಇನ್ನೊಬ್ಬಾತ ಜಾನೂ (ಬಹುತೇಕ ಜನಾರ್ಧನ ಎಂಬುದರ ಮೊಟಕು ರೂಪು) ವಿನ ತಂದೆ ರವಳ ದೇವ. ಇವರು ಸಾರಸ್ವತರಿದ್ದಿರಬೇಕೆಂದು ಶ್ರೀ ಮಂ.ಗೋವಿಂದ ಪೈಯವರು ಭಾವಿಸುತ್ತಾರೆ. ಇನ್ನುಳಿದ ಹೆಸರುಗಳಲ್ಲಿ ಮ್ಹ-ಯಿ-ಅ, ಮ್ಹಂದೇವ, ಮಾಮ್ಹ (ಮಹಾಮಾಯದ

ಮೊಟಕು ರೂಪು) ಸಾರಸ್ವತರಿಗೆ ಸಂಬಂಧಿಸಿದ್ದುವಾಗಿವೆ. ಕೌಂಡಿನ್ಯ ಗೋತ್ರದ ಕೃಷ್ಣನ ಮಗ ಪುರುಷೋ (ಪುರುಷೋತ್ತಮದ ಮೊಟಕು ರೂಪು) ಇನ್ನೊಂದು ಹೆಸರಾಗಿದೆ. 'ಓ' ನಿಂದ ಅಂತ್ಯವಾಗುವ, ವಿಲಕ್ಷಣ ಪ್ರಕಾರದ. ಹೆಸರು ಸಾರಸ್ವತರಿಗೆ ಸಂಬಂಧಿಸಿದ್ದುದೆಂದು ಶ್ರೀ ಮಂಜೇಶ್ವರ ಗೋವಿಂದ ಪೈಗಳು ಅಭಿಪ್ರಾಯ ಪಡುತ್ತಾರೆ.

೪) ಇದು ಅರಸು ಮಹಾದೇವನ ಉತ್ತರ ಕೊಂಕಣದ ಯಾದವ ರಾಜ್ಯಪಾಲ ಅಚ್ಚುತ ನಾಯಕ್‌ನ ತಾಮ್ರ ಶಾಸನ. ಇದು 'ದ್ವಿಜವರ ವೃಷಭ'ರೆಂದಾಗಿ ವರ್ಣಿಸಲ್ಪಟ್ಟ ಮೂವತ್ತೆರಡು ಬ್ರಾಹ್ಮಣರಿಗೆ ವೊವ್ವೆ (ಥಾಣಾ ಜಿಲ್ಲೆಯಲ್ಲಿನ) ಯನ್ನು ಬಹುಮಾನವಾಗಿತ್ತುದಕ್ಕೆ ಸಂಬಂಧಿಸಿದೆ. ದಾನ ಪಡೆದವರಲ್ಲಿ ಜಾಮದಗ್ನ್ಯಾವತ್ಸಗೋತ್ರದ ವಿಷ್ಣು ಪ್ರಭುವಿನ ಮಗ ಆವಾಪ್ರಭು, ಅತ್ರಿಗೋತ್ರದ ರಾಘವನಾಯಕ್‌ನ ಮಗ ಬಚ್ಚುನಾಯಕ್, ಜಾಮದಗ್ನ್ಯಾ ವತ್ಸ ಗೋತ್ರದ ವಿಷ್ಣುಪ್ರಭುವಿನ ಮಕ್ಕಳು ಖೇತಲ ಪ್ರಭು ಮತ್ತು ನಾರಣ ಪ್ರಭುಗಳ ಸಮಾವೇಶವಿತ್ತು. ವಾಸ್ತವಿಕವಾಗಿ ಅವರು ಸಾರಸ್ವತರಿದ್ದರು. ದಾನ ಪಡೆದವರಲ್ಲಿ ಭರಧ್ವಾಜಾಗ್ನಿವಿಶ್ಯ, ಅತ್ರಿ ಮತ್ತು ಗೌತಮ ಗೋತ್ರಗಳ ನಾಲ್ಕು ಕಿರವಂತ ಬ್ರಾಹ್ಮಣರೂ ಇದ್ದರು. ಅವರೆಲ್ಲರಿಗೂ ಫ್ಯಾಶಾಸ್ [4] ಉಪನಾಮವಿದೆ. ಭರದ್ವಾಜ ಗೋತ್ರದ ಫ್ಯಾಶಾಸ್ ಇವರ ಹೆಸರು ಮಹಾಲ್ ಫ್ಯಾಶಾಸ್.

೫) ಅಣಜೋರ್ (ಥಾಣಾ ಜಿಲ್ಲೆಯ) ದಲ್ಲಿನ ೧೨೬೦ರ ತಾಮ್ರ ಶಾಸನ, ರಾಮದೇವನ ಉತ್ತರಕೊಂಕಣದಲ್ಲಿನ ಕವಳೆ ಕುಲನಾಮದ ಗವರ್ನರ್ ಕೃಷ್ಣ ಅಥವಾ ಕೃಷ್ಣ ದೇವ ೪೦ ಬ್ರಾಹ್ಮಣರಿಗಿತ್ತ ದತ್ತಿಗೆ ಸಂಬಂಧಿಸಿದ್ದುದಾಗಿದೆ. ದಾನ ಪಡೆದವರಲ್ಲೊಬ್ಬಾತ ಮಹಾಲು ಭಟ್ಟನ ಮಗ ದಾಮೋದರ ಅಗ್ನಿ ಹೋತ್ರಿಯಿದ್ದ. ಆ ದಿನಗಳಲ್ಲಿ ಕೊಂಕಣದಲ್ಲಿ ವಾಸಿಸುತ್ತಿದ್ದ ಬ್ರಾಹ್ಮಣರು ಬಹು ಮಟ್ಟಿಗೆ ಸಾರಸ್ವತರಿದ್ದ ನಿಮಿತ್ತ ಮಹಾಲುಭಟ್ಟ ಮತ್ತು ಆತನ ಮಕ್ಕಳು ಸಾರಸ್ವತರಿದ್ದಿರಬೇಕೆಂದು ಶ್ರೀ ಮಂಜೇಶ್ವರ ಗೋವಿಂದ ಪೈಗಳು ಹೇಳುತ್ತಾರೆ.

ಸಂದರ್ಭಸೂಚಿ

೧. ಅನಂತ ದೇವ (ಉಪನಾಮ ಅನಂತ ಪಾಲ)ನ ೧೦೬೪ರ ಶಾಸನ ಗೋವಾದಲ್ಲಿನ ಸಾರಸ್ವತ ಬ್ರಾಹ್ಮಣರ ತೊಡಕು ತೊಂದರೆಗಳ ಬಗೆಗೆ ನುಡಿಯುತ್ತದೆ.

೨. ವಸಯಿ (ಬಸ್ಸೀನ್) ಮತ್ತು ಥಾಣಾ (ಶ್ರೀ ಸ್ಥಾನಕ) ದಲ್ಲಿ ಸಾಮವೇದಿ ಬ್ರಾಹ್ಮಣರಿದ್ದು ಅವರಲ್ಲಿನ ಹೆಚ್ಚಿನವರು ಪೋರ್ಚುಗೀಸರಿಂದ ಕ್ರೈಸ್ತ ಧರ್ಮಕ್ಕೆ ಮತಾಂತರ ಗೊಂಡವರಿದ್ದರು. ಅವರ ವಂಶಜರು ಗೋವಾದಲ್ಲಿನ ಸಾಷಷ್ಟಿಕಾರರಂತೆ ಕೆಂಪು ಬಣ್ಣದ ಟೊಪ್ಪಿ ಧರಿಸುತ್ತಿದ್ದರೆಂದು ಶ್ರೀ ಎಸ್.ಎಸ್. ತಾಲ್ಮಕಿಯವರು ಒತ್ತಿ ಹೇಳುತ್ತಾರೆ.

೩. ಭೋಪ, ಭೋಬೆಯ ಪ್ರಭೇದವಿದ್ದು ಅದು ಗೋವಾ ಸಾರಸ್ವತರ ವಿಲಕ್ಷಣನಾಮ ಪ್ರಕಾರವಿರುವುದಾಗಿ ಶ್ರೀ ಮಂಜೇಶ್ವರ ಗೋವಿಂದ ಪೈಗಳು ಭಾವಿಸುತ್ತಾರೆ.

೪. ಫ್ಯಾಶಾಸ್, ಮೂಲತಃ ಸಾರಸ್ವತರಿದ್ದ ಗೋವಾದ ಕಿರವಂತ ಬ್ರಾಹ್ಮಣರ ಸಾಮಾನ್ಯ ಉಪನಾಮವಿದ್ದು ಅದು ಫ್ಯಾಸಾಸ್‌ನ ವಿಕೃತರೂಪವಿರಬೇಕು.

ಅಧ್ಯಾಯ ೬

ಮಹಾರಾಷ್ಟ್ರದಲ್ಲಿ ಸಾರಸ್ವತರು

ಗೋವಾದಲ್ಲಿನ ಸಾರಸ್ವತರು ಪೋರ್ಚುಗೀಸ್ ಭಾಷೆಯನ್ನು ಕಲಿತು ಅಲ್ಲಿನ ಅಧಿಕಾರಿಗಳ ವ್ಯವಹಾರದ ಸಂಪೂರ್ಣ ಅನುಭವ ಕೊಂಡಿದ್ದರು. ಪಂಜಿಮ್ (ಪಣಜಿ) ನಲ್ಲಿರುವ ದಫ್ತರ ಖಾನೆಯಲ್ಲಿನ 'ಫ್ಲೋರಲ್ ಡಿ ಸಾಲ್ಸೆಟ್ಟ್' ಹೆಸರಿನ ದಸ್ತಾವೇಜುಗಳಲ್ಲಿ ಕೃಷ್ಣ ಶೆಣ್ಯೆ (ಕ್ರಿಸ್ನ ಸಿನಾಯಿ) ಹಡಗಿನ ಪ್ರಯಾಣ ಮಾಡಿ ಲಿಸ್ಬನ್ನಿಗೆ ತೆರಳಿದ ಮೊದಲ ಗೋವಾ ನಿವಾಸಿಯೆಂದೂ, ಅಲ್ಲಿ ಆತನನ್ನು ರಾಜ ಪರಿವಾರದ ಭೇಟಿಗೆ ಕೊಂಡೊಯ್ಯಲಾಯಿತೆಂದೂ ಮರಳಿ ಬಂದ ಆತನಿಗೆ ೧೫೫೬ರಲ್ಲಿ 'ನೈಟ್' ಬಿರುದನ್ನಿತ್ತು ಗೌರವಿಸಲಾಯಿತೆಂದೂ ನಮೂದಿಸಲಾಗಿದೆ.

ಮರಾಠಾ ಮತ್ತು ಪೋರ್ಚುಗೀಸರ ನಡುವಣ ಮಾತುಕತೆ, ಸಂಧಾನಗಳಿಗೆ ಉಭಯಪಕ್ಷದವರು ಸಾರಸ್ವತರನ್ನು ಬಳಸುತ್ತಿದ್ದರು.

೧. ಪೋರ್ಚುಗೀಸರು ಸಾರಸ್ವತ ರಾಯಭಾರಿಗಳನ್ನು ಮರಾಠರ ರಾಜಸಭೆಗಳಿಗೆ ಕಳುಹಿಸಿದುದು.

೧೬೫೮ರಲ್ಲಿ ಬಿಜಾಪುರದ ದರ್ಬಾರಿನಲ್ಲಿ ರಾಮೋಜಿ ಶೆಣ್ಯೆ ಕೊಠಾರಿ ಪೋರ್ಚುಗೀಸರ ರಾಯಭಾರಿಯಾಗಿದ್ದ. ೧೬೫೮ರ ಡಿಸೆಂಬರ್ ೧೮ನೇಯ ತಾರೀಕಿಗೆ ಪೋರ್ಚುಗಲ್ಲಿನ ಅರಸನಿಗೆ ಬರೆದ ಪತ್ರದಲ್ಲಿ ಗೋವಾದ ರಾಜ್ಯಪಾಲ, ಬಿಜಾಪುರದಲ್ಲಿನ ರಾಮೋಜಿಯ ಉತ್ಕೃಷ್ಟ ಕೆಲಸದ ಪ್ರಶಂಸೆ ಮಾಡಿರುತ್ತಾನೆ. ಶಿವಾಜಿಗೆ ಪ್ರತಿರೋಧ ತೋರಲು ಸಾವಂತವಾಡಿಯ ಲಖಮ ಸಾವಂತನ ನೆರವು ಬಯಸಿದ ಪೋರ್ಚುಗೀಸರು ಆತನೊಂದಿಗಿನ ಸಂಧಿಯ ಮಾತುಕತೆ ನಡೆಸಲು ೧೬೬೧ರಲ್ಲಿ ರಾಮೋಜಿಶೆಣ್ಯೆಯನ್ನು ತಮ್ಮ ಪ್ರತಿನಿಧಿಯಾಗಿ ಕಳುಹಿಸಿದ್ದರು. ಶಯಿಸ್ತಾಖಾನನ ಮೇಲಣ ವಿಜಯದ ಅಭಿನಂದನೆಗಾಗಿ ೧೬೬೩ರ ಮೇ ತಿಂಗಳಲ್ಲಿ ಆತನನ್ನು ಶಿವಾಜಿಯೆಡೆಗೆ ಕಳುಹಿಸಿದ್ದರು. ಬಹುಮಟ್ಟಿಗೆ ಆತನ ಪ್ರಯತ್ನದ ಫಲವಾಗಿಯೇ ೧೬೬೭ರಲ್ಲಿ ಶಿವಾಜಿ ಪೋರ್ಚುಗೀಸರ ಮಿತ್ರನಾದ.

ಪೇಶ್ವೆಯ ಹಿತಕ್ಕೆ ಪ್ರತಿಕೂಲವಾಗಿ 'ತುಳೋಜಿ ಆಂಗ್ರೆಗೆ ಆಶ್ರಯವಿತ್ತಿದ್ದ ಪೋರ್ಚುಗೀಸರು ೧೭೫೬ರ ಪೇಶ್ವೆಯೊಂದಿಗಿನ ಸಂಧಿಕಾರ್ಯಕ್ಕೆ ತುಕಾ ಶೆಣ್ಯೆ (ತುಕಾ ಸಿನಾಯ್) ಯನ್ನು ಕಳುಹಿಸಿದ್ದರು.

೧೭೭೬ರಿಂದ ೧೭೯೨ರ ತನಕ ನಾರಾಯಣ ವಿಠಲ ಶೆಣ್ಯೆ ಧೂಮ (ನಾರೇನ್ ಸಿನಾಯಿ ಧೂಮೆ), ಮಾಧವ ರಾವ್ ಪೇಶ್ವೆಯ ಆಸ್ಥಾನದಲ್ಲಿ ಪೋರ್ಚುಗೀಸರ ರಾಯಭಾರಿಯಾಗಿದ್ದ. ಆತ ಮರಾಠಾರ ಕರಾವಳಿಯಲ್ಲಿ ಒಡೆದು ಬಿದ್ದಿದ್ದ ಹಡಗುಗಳಲ್ಲಿನ ಸರಕಿನ ಮತ್ತು ೧೭೮೨ರ ಫೆಬ್ರವರಿ ತಿಂಗಳ ೨೨ರಂದು ಆಂಗ್ರೆಯ 'ಹಡಗುಗಳ ಪಡೆ ಸುಲಿದ ಪೋರ್ಚುಗೀಸ್ ವ್ಯಾಪಾರಿಗಳ ಹಡಗುಗಳ ವಾಪಸಾತಿಗೆ ಸಂಬಂಧಿಸಿದ ಸಂಧಾನದಲ್ಲಿ ಭಾಗವಹಿಸಿದ್ದ. ಗೋಪಾಲ ನಾಯಕ್ ಮತ್ತು ಬಾಪೂಜಿನಾಯಕರ ಮಕಾವೋ 'ದಿಂದ ಬಂದ

ಚೀನೀ ರೇಶ್ಮೆ ಮತ್ತು ಇನ್ನಿತರ ಸರಕನ್ನು ಹಡಗಿನಿಂದಿಳಿಸಲು ಪರವಾನಗಿ ಪಡೆಯುವಂತೆ ಆತನಿಗೆ ತಿಳಿಸಲಾಗಿತ್ತು. ೧೭೮೬ರಲ್ಲಿ ಆತ ಮರಾಠಾ ಮತ್ತು ಪೋರ್ಚುಗೀಸರ ನಡುವೆ ಸಂಧಿಯ ಸಂಧಾನ ನಡೆಸಿದ. ೧೭೯೨ರಲ್ಲಿ ಆತ ತೀರಿಕೊಂಡ. ಆತನ ಮಗ ವಿಠ್ಠಲ ನಾರಾಯಣ ಧೂಮೆ ತಂದೆಯ ಸ್ಥಾನ ಕೊಂಡ. ಆತನ ವಂಶಜರು ಕುಂಭಾರ್‌ಜುವೋದಲ್ಲಿ ವಾಸಮಾಡಿಕೊಂಡಿದ್ದಾರೆ.

೨. ಪೀತಾಂಬರ ಶೆಣ್ಯೆ

ಪೀತಾಂಬರ ಶೆಣ್ಯೆ ಪೋರ್ಚುಗೀಸ್ ಭಾಷೆ ಓದಿ, ಬರೆಯಬಲ್ಲ ಕುಶಲ ರಾಯಭಾರಿಯೊಬ್ಬನಿದ್ದನಷ್ಟೇ ಅಲ್ಲ, ಆತ ಪೋರ್ಚುಗೀಸ್ ವ್ಯಾಪಾರಿಗಳ ವ್ಯವಹಾರದಲ್ಲಿನ ಸ್ಪರ್ಧೆಯ ಕುರಿತೂ ಅರಿತವನಿದ್ದ.

ಮಾಲೋಜಿ ಘೋರ್ಪಡೆಯನ್ನು ಕೊಂದು ಮುಧೋಳ್ ಪ್ರಾಂತದ ಅರ್ಧಭಾಗವನ್ನು ತನ್ನ ರಾಜ್ಯದೊಂದಿಗೆ ಸೇರಿಸಿಕೊಂಡ ಬಳಿಕ ಶಿವಾಜಿ ಆತನನ್ನು ಸಾವಂತವಾಡಿಯ ಸಾವಂತ ಮತ್ತು ಪೋರ್ಚುಗೀಸರಲ್ಲಿಗೆ ಶಾಂತಿದೂತನನ್ನಾಗಿ ಕಳುಹಿಸಿದ್ದ.

ಶಿವಾಜಿ ತನ್ನ ನೌಕಾದಳವನ್ನು ಸಕ್ಷಮವಾಗಿಸಲಾಗಿ ಪೀತಾಂಬರ ಶೆಣ್ಯೆಯ ವರ್ಚಸ್ಸಿನ ಮೂಲಕ ಪೋರ್ಚುಗೀಸರಿಂದ ಅವರ ನೌಕೆ ಮತ್ತು ತೋಪುಗಳ ನಿಷ್ಣಾತರನ್ನು ಎರವಾಗಿಕೊಂಡ. ಅವರ ಸಹಾಯದಿಂದ ಶಿವಾಜಿ ರಾಯಗಡ ಜಿಲ್ಲೆಯ ಮಾಲ್ವಣ್‌ನಲ್ಲಿ ತನ್ನದೇ ಆದ ತೋಪು ಖಾನೆ, ಹಡಗುಗಳ ನಿರ್ಮಾಣ ಕೇಂದ್ರದ ಸ್ಥಾಪನೆ ಮಾಡಿದ. ಆತ ಪೋರ್ಚುಗೀಸರು ಮತ್ತು ಕರಾವಳಿ ಪ್ರದೇಶದಲ್ಲಿನ ಇನ್ನಿತರ ಅರಸರು ಹೇರುವ 'ಚೌಥಾಯಿ' ಕರದ, ಕರ ವಸೂಲಿಯ ಕುರಿತಾದ ಸವಿಸ್ತಾರ, ಅಮೂಲ್ಯ ವಿವರಗಳನ್ನು ಶಿವಾಜಿಗಿತ್ತ.

ಅದೊಮ್ಮೆ ಆತ ಶಿವಾಜಿಯ ಒಲವಿನಿಂದ ವಂಚಿತವಾಗಿದ್ದ. ೧೬೭೬ರ ಡಿಸೆಂಬರ್ ತಿಂಗಳ ೬ನೇ ತಾರೀಕಿನ ಪತ್ರವೊಂದರಿಂದ ಶಿವಾಜಿ ಆತನನ್ನು ಬಂದಿಯಾಗಿಟ್ಟಿದ್ದು-ದನ್ನರಿಯಬಹುದು; ವಿಚಾರಣೆಯ ಬಳಿಕ ದೋಷಮುಕ್ತನಾಗಿ ಬಿಡುಗಡೆ ಹೊಂದಿದ್ದ.

ಆತ ೧೬೭೮ರ ಸೆಪ್ಟಂಬರ್ ತಿಂಗಳ ಮೊದಲನೆಯ ತಾರೀಕಿನ ಸುಮಾರಿಗೆ ತೀರಿಕೊಂಡ.

೩. ರಾಮ ಕಾಮತಿ

ಮಹಾರಾಷ್ಟ್ರದ ಶ್ರೀಮಂತ, ವರ್ಚಸ್ವಿ ಸಾರಸ್ವತನೊಬ್ಬನಿದ್ದ ಈತನ ಜೀವನೇತಿಹಾಸದ ವಿವರಗಳನ್ನು ವಿಸ್ತೃತವಾಗಿ ಪರಿಶಿಷ್ಟ ೩ರಲ್ಲಿ ಕೊಡಲಾಗಿದೆ.

೪. ಸಾಬಾಜಿ ಅನಂತ ಚತುರೆ (ಚತುರ್ ಸಾಬಾಜಿ)

ಸಾಬಾಜಿ ಅನಂತ ಚತುರೆ ಬಿಜಾಪುರದ ಅದಿಲ್‌ಶಾಹನ ಸೇವೆಯಲ್ಲಿದ್ದ. ಅಹಮ್ಮದ್ ನಗರದ ನಿಝಾಮ್‌ಶಾಹ, ಸೇವೆಯ ಎರವುಕೊಂಡು ಆತನನ್ನು ದೌಲತಾಬಾದಿನ ಗವರ್ನರ್‌ನನ್ನಾಗಿ ನೇಮಿಸಿದ. ಆಗಿನ ನಿಝಾಮ್‌ಶಾಹ ಸಣ್ಣ ಪ್ರಾಯದವನಿದ್ದ ನಿಮಿತ್ತ ರಾಜ್ಯದಲ್ಲಿ ಅವ್ಯವಸ್ಥೆಯಿತ್ತು. ದಿಲ್ಲಿಯ ಚಕ್ರವರ್ತಿ ಈ ರಾಜ್ಯವನ್ನು

ಗೆದ್ದುಕೊಳ್ಳಲು ಉತ್ಸುಕನಿದ್ದ. ರಾಜ್ಯದಲ್ಲಿ ಸುವ್ಯವಸ್ಥೆ ಸ್ಥಾಪಿಸುವಲ್ಲಿ ಯಶಸ್ವಿಯಾದ ಸಾಬಾಜಿ, ದಂಡೆತ್ತಿ ಬರಲು ಯತ್ನಿಸಿದ ಮೊಗಲರ ಪ್ರಯತ್ನ ವಿಫಲಗೊಳಿಸಿದ.

ಸಾಬಾಜಿ, ಶಿವಾಜಿಯ ತಂದೆ ಶಹಾಜಿಯನ್ನು ನಿರ್ಝಾಮ್‌ಶಾಹನ ವಝೀರನನ್ನಾಗಿ ನಿಯುಕ್ತಿಗೊಳಿಸಿದ. ಆತ ಭೂಕಂದಾಯ ಹೇರುವ ಯೋಜನೆ ರಚಿಸಿ ಅದನ್ನು ಕಾರ್ಯಾಚರಣೆಗೆ ತಂದ. ಆತನ ಅಳತೆಯ ಕೋಲು ಏಳು ಅಡಿ ಉದ್ದವಿತ್ತು. ಹಾಳು ಬಿದ್ದಿದ್ದ ಜಮೀನನ್ನು ಕೃಷಿಗೆ ಯೋಗ್ಯವಾಗುವಂತೆ ಮಾಡುವ ಯೋಜನೆಗಳನ್ನು ಕಾರ್ಯರೂಪಕ್ಕೆ ತಂದ ಈತ ತಗಾಯಿ ಪದ್ಧತಿಯನ್ನು ಆಚರಣೆಗೆ ತಂದ. ಹಸುಗಳ ಖರೀದಿಗೆ ರೈತರಿಗೆ ಸಹಾಯ ಮಾಡಿದ. ನಿರ್ಝಾಮ್‌ಶಾಹ ಆತನ ಕುರಿತು ಈ ಮುಂದಣ ಮೆಚ್ಚಿಗೆಯ ಮಾತುಗಳನ್ನಾಡಿದ್ದ:

"ಆಡಳಿತೆಯ ಕೆಲಸದಲ್ಲಿ ಸಾಬಾಜಿ ಅತಿ ಚತುರ (ಬಹುತ್ ಚತುರ್) ನಿದ್ದ. ವಿದ್ಯಾವಂತ, ಸುಂದರ ಕೈಬರಹ ಕೊಂಡ, ಕೈಗೆತ್ತಿಕೊಂಡ ಕಾರ್ಯ ಪೂರೈಸುವಲ್ಲಿನ ಉತ್ಸುಕತೆ ತೋರುವ ಈತನಿಗೆ ಸರಿಹೋಲುವ ವ್ಯಕ್ತಿ ಇನ್ನೊಬ್ಬನಿಲ್ಲ. ದಕ್ಷಿಣ ಪ್ರಾಂತದಲ್ಲಿ ಜನರು ತೆರಬೇಕಾಗುವ ಕಂದಾಯದ ಪ್ರಮಾಣ ನಿರ್ಧರಿಸಿದ ಈತ ಪ್ರತಿವ್ಯಕ್ತಿ ತೆರಬೇಕಿದ್ದ ತೆರಿಗೆ, ಆಪೀಲು ಮಾಡುವ ಕ್ರಮ, ವ್ಯಾಪಾರಿಗಳಿಂದ ಬರಬೇಕಾಗಿದ್ದ ಕರದ ವಸೂಲಿ ಇತ್ಯಾದಿಗಳ ವ್ಯವಸ್ಥೆ ಮಾಡಿದ. ಕಾಡು ಪ್ರದೇಶವನ್ನು ಕೃಷಿಗೆ ಯೋಗ್ಯವಾಗುವಂತೆ ಮಾಡಿದ. ದೊರೆಯೊಂದಿಗಿನ ಆತನ ಪ್ರತಿಷ್ಠೆ ಗರಿಷ್ಠವಾದುದಾಗಿದ್ದು ಆತ ವಿಶ್ವಾಸಾರ್ಹ ವ್ಯಕ್ತಿಯೊಬ್ಬನಾಗಿದ್ದ."

ವಾಕ್ಚಾತುರ್ಯಕ್ಕೆ ಆತ ಅಕ್ಬರನ ಆಸ್ಥಾನದಲ್ಲಿದ್ದ ಬೀರ್‌ಬಲ್‌ನಂತೆ ಅತಿ ಪ್ರಸಿದ್ಧನಾಗಿದ್ದ. ಚಾತುರ್ಯ ಮತ್ತು ಬುದ್ಧಿವಂತಿಕೆಗಳ ನಿಮಿತ್ತ ಜನರು ಆತನನ್ನು ಚತುರ್ ಸಾಬಾಜಿ ಎಂದಾಗಿ ಕರೆಯುತ್ತಿದ್ದರು.

೫. ನಾರೋ ರಾಮ್ ಮಂತ್ರಿ

ಮೊಗಲರ ಬಂಧನದಿಂದ ಬಿಡುಗಡೆ ಹೊಂದಿದ ಸಾಹು ಛತ್ರಪತಿ ರಚಿಸಿದ ಮೊದಲ ಮಂತ್ರಿ ಮಂಡಳದಲ್ಲಿ ನಾರೋ (ನಾರಾಯಣ) ರಾಮ್, ಮಂತ್ರಿ " ಅಥವಾ ವಾಕನೀಸ್ (ಅರಮನೆಯ ಸಂಬಂಧಿಯ ಮೇಲ್ವಿಚಾರಕ ಮತ್ತು ಕಾಗದ ಪತ್ರಗಳ ನಿರ್ವಾಹಕ) ಆಗಿದ್ದ.

ಮೊದಲನೆಯ ಪೇಶ್ವೆ ಬಾಜಿರಾವ್‌ನ ನಿಯುಕ್ತಿಯನ್ನು ಆತನ ದುಡುಕುತನ, ಎಳಪ್ರಾಯ, ಅಪ್ರಬುದ್ಧತೆಯ ಕಾರಣಗಳಿಗಾಗಿ ವಿರೋಧಿಸಿದವರಲ್ಲಿ ಈತನೂ ಒಬ್ಬನಿದ್ದ. ೧೭೩೦ರಲ್ಲಿ ಸಾಹು ಆತನನ್ನು ಸೇನಾಪತಿ ಖಂಡೇರಾವ್ ದಾಭಾಡೆಯ ಮಗ ತ್ರ್ಯಂಬಕರಾವ್ ದಾಭಾಡೆಯಲ್ಲಿಗೆ ವಿಶ್ವಾಸಾರ್ಹ ಕಾರ್ಯನಿರ್ವಾಹಕ ಪ್ರತಿನಿಧಿಯ ರೂಪದಲ್ಲಿ ಕಳುಹಿಸಿದ್ದ; ತ್ರ್ಯಂಬಕರಾವ್ ದಾಭಾಡೆಗೆ ಸಾಹು ಗುಜರಾತ್ ಮತ್ತು ಖಾಂದೇಶ್‌ನ ಭಾಗಗಳನ್ನು ತನ್ನ ವರ್ಚಸ್ಸಿಗೊಳಗಾಗಿದ್ದ ಕ್ಷೇತ್ರದ ರೂಪದಲ್ಲಿ ಬಿಟ್ಟುಕೊಟ್ಟಿದ್ದ.

೬. ರಾಮಚಂದ್ರ ಮಲ್ಹಾರ್ (ರಾಮಚಂದ್ರ ಬಾಬಾ ಸುಖ್ತಣ್‌ಕರ್)

ರಾಮಚಂದ್ರ ಬಾಬಾನ ' ಜನ್ಮ ೧೬೯೩ರಲ್ಲಾಯಿತು. ಆತ ಮೂಲತಃ ಸಾವಂತವಾಡಿಯಲ್ಲಿನ ಅರಾವಳಿಯ ಕುಲಕರ್ಣಿಯಾಗಿದ್ದ; ತನ್ನ ಎಳಪ್ರಾಯದ

ಲಾಭಕೊಂಡು, ಪರಂಪರಾಗತವಾಗಿ ಬಂದಿದ್ದ ಕುಲಕರ್ಣಿಯ ವೃತ್ತಿಯನ್ನು ಕಬಳಿಸಿ ಮನಸ್ತಾಪ ಬೆಳಸಿದ್ದ ನಿಕಟ ಬಾಂಧವರಿಂದ ದೂರ, ಮಾಲ್ವಣ್‌ದಲ್ಲಿನ ಆಚರೆ (ರತ್ನಾಗಿರಿ ಜಿಲ್ಲೆಯಲ್ಲಿನ) ಎಂಬಲ್ಲಿಗೆ ಹೋದ. ಅಲ್ಲಿ ಸ್ವಲ್ಪ ಕಾಲ ಕುಲಕರ್ಣಿಯ ವೃತ್ತಿಕೊಂಡ. ೧೭೧೪ರ ಹೊತ್ತಿಗೆ ಆತ ಹೊಸ ಉದ್ಯೋಗವನ್ನರಸಿ ಸತಾರಿಗೆ ತೆರಳಿದ. ಅಲ್ಲಿನ ಕಾಂಚೇಶ್ವರ ಬಾಬಾ ಉತೀತ್ಕರ್‌ನೊಂದಿಗಿನ ವಾಸ್ತವ್ಯದ ದಿನಗಳಲ್ಲಿ ಆತನ ನೆರವುಕೊಂಡು ಪೇಶ್ವೆ ಬಾಳಾಜಿ ವಿಶ್ವನಾಥ [೭] ನಲ್ಲಿ ಕೆಲಸಕ್ಕೆ ಆರಂಭಿಸಿದ.

ಅತ್ಯಲ್ಪ ಕಾಲದಲ್ಲೇ ಆತ ಕುಶಲ ಸೈನಿಕ, ಆಡಳಿತಗಾರ ಮತ್ತು ಮುತ್ಸದ್ದಿಯೊಬ್ಬನೆಂದು ಪ್ರಸಿದ್ಧಿಕೊಂಡ. ಮೊದಲನೆಯ ಪೇಶ್ವೆ ಬಾಜಿರಾವ್ ಆತನನ್ನು ರಾಣೋಜಿ ಸಿಂಧಿಯಾನ [೮] ದಿವಾನನನ್ನಾಗಿ ನಿಯುಕ್ತಿಗೊಳಿಸಿದ. ೧೭೩೫ರಲ್ಲಿ ಮೊದಲನೆಯ ಬಾಜಿರಾವ್ ರಜಪುತಾನಕ್ಕೆ ಪ್ರಯಾಣ ಮಾಡಿದಾಗ ಆತನ ಕಾರ್ಯಸಿದ್ಧಿಗೆ ಸಿಂಧಿಯಾ ಮತ್ತು ರಾಮಚಂದ್ರಬಾಬಾ ಸಹಾಯ ಮಾಡಿದ್ದರು.

ರಾಮಚಂದ್ರ ಬಾಬಾ, ಮಲ್ಹಾರ್ ಬಾಜಿರಾವನ ಉತ್ತರಾಧಿಕಾರಿ ಬಾಳಾಜಿ ಬಾಜಿರಾವ್ (ನಾನಾಸಾಹೆಬ್) ನ ನಂಬಿಕೆಯವನಾಗಿದ್ದ. ವಿಚಾರ ವಿನಿಮಯಗಳಿಗಾಗಿ ೧೭೪೬ರಲ್ಲಿ ಪೇಶ್ವೆಯಿಂದ ಪುಣೆಗೆ ಆಮಂತ್ರಿಸಲ್ಪಟ್ಟವರಲ್ಲಿ ಆತನೂ ಒಬ್ಬನಿದ್ದ. ರಾಣಿಗಳಿಬ್ಬರ ನಡುವಣ ವಿವಾದದಿಂದಾಗಿ ರಾಜ್ಯದ ವ್ಯವಹಾರಗಳತ್ತ ಲಕ್ಷ್ಯವೀಯದಿದ್ದ ಸಾಹುವಿನ ನಿಮಿತ್ತ ತನಗೆ ಪೂನಾದಲ್ಲುಳಿದುಕೊಳ್ಳಬೇಕಾಯಿತೆಂದು ಪೇಶ್ವೆ ೧೭೪೬ ಅಕ್ಟೋಬರ್ ತಿಂಗಳ ೨೧ರ ಕಾಗದದಲ್ಲಿ ತನ್ನ ಅಸಂತುಷ್ಟಿ ವ್ಯಕ್ತಪಡಿಸಿದ್ದ.

ಗ್ವಾಲಿಯರ್ ಮೇಲಣ ಪೇಶ್ವೆಯ ಹಿತಾರ್ಥವನ್ನು ರಾಮಚಂದ್ರ ಬಾಬಾ ಪ್ರಾಮಾಣಿಕತೆಯಿಂದ ನೋಡಿಕೊಂಡ. ಮತ್ತೆ ಮರಾಠಾ ರಾಜ್ಯದ ಹಿತದ ದೃಷ್ಟಿಯಿಂದ ಆತನ ಆಜ್ಞೆ ಕಾರ್ಯರೂಪಕ್ಕೆ ತರುವುದನ್ನು ಖಾತ್ರಿ ಪಡಿಸಿಕೊಂಡ. ರಾಣೋಜಿ ಸಿಂಧಿಯಾನ ಮರಣಾನಂತರ ಆತನ ಉತ್ತರಾಧಿಕಾರಿ ಜಯಪ್ಪನೊಂದಿಗಿನ ಸಂಬಂಧ ಬಿಗಡಾಯಿಸಿಕೊಂಡಿತು. ತನ್ನ ಪದ ತ್ಯಜಿಸಿ ಮರಳಿ ಬರುವಂತೆ ಪೇಶ್ವೆ ಆತನಿಗೆ ಸೂಚಿಸಿದ. ಬುಂದೇಲಖಂಡದೊಂದಿಗಿನ ಮರಾಠರ ಸಂಬಂಧಕ್ಕೆ ಹಾನಿ ಬರಬಹುದೆಂಬ ಶಂಕೆಕೊಂಡ ಪೇಶ್ವೆ ಜಯಪ್ಪ ಮತ್ತು ರಾಮಚಂದ್ರ ಬಾಬಾ ಇವರಿಬ್ಬರನ್ನು ಪುಣೆಗೆ ಬರಲು ಕರೆಕಳುಹಿಸಿದ. ಮತ್ತೆ ಅವರಿಬ್ಬರ ನಡುವಣ ಮನಸ್ತಾಪವನ್ನು ದೂರಗೊಳಿಸಿದ. ಈ ವಿಷಯದ ಕುರಿತು ಗ್ರಾಂಟ್‌ಢಫ್ ಮಾಡಿದ ವ್ಯಾಖ್ಯೆ ಹೀಗಿದೆ [೯]:

"ಈ ಘಟನೆ ಅತಿ ಸಾಮಾನ್ಯವಾಗಿ ಕಾಣ ಬಂದಿದ್ದರೂ ಮುಂದೆ ಅದು ಹದಗೆಟ್ಟು ಅನಿಷ್ಟಕ್ಕೆ ಕಾರಣೀಭೂತವಾಯಿತು. ಇದು ಹೋಳ್ಕರ್ ಮತ್ತು ಭಾವು ಹಾಗೂ ರಾಮಚಂದರ್ ಮತ್ತು ಪೇಶ್ವೆ ಇವರ ನಡುವಣ ಶತ್ರುತ್ವಕ್ಕೆ ತಳಹದಿ ಹಾಕಿತು"

ಜೈಪುರದ ಗದ್ದುಗೆಗಾಗಿ ಸವಾಯಿ ಜೈಸಿಂಗ್‌ನ ಮಕ್ಕಳಿಬ್ಬರ ನಡುವೆ ನಡೆಯುತ್ತಿದ್ದ ವಿವಾದದಲ್ಲಿ ಮರಾಠರು ಈಶ್ವರಿಸಿಂಗ್‌ನ ಪಕ್ಷಕೊಂಡಿದ್ದರು. ಮಾಧೋಸಿಂಗ್‌ನ ಅಸಂಭಾವ್ಯ ಆಮಿಷಕ್ಕೆ ಮಾರು ಹೋಗಿ ತಮ್ಮ ನಿಲುವನ್ನು ಬದಲಾಯಿಸುವುದು ಲಜ್ಜಾಸ್ಪದವೆಂದು ೧೭೪೭ರಲ್ಲಿ ರಾಮಚಂದ್ರಬಾಬಾ ಮರಾಠರಿಗೆ ಎಚ್ಚರಿಕೆ ಇತ್ತ. ಇದು ಈಶ್ವರಿಸಿಂಗ್‌ನಿಗೆ

ಬೆಂಬಲವಿತ್ತ ಜಯಪ್ಪ ಸಿಂಧಿಯಾ ಮತ್ತು ಮಾಧೋಸಿಂಗ್‌ನಿಗೆ ಸಮರ್ಥನೆಯಿತ್ತ ಮಲ್ಹಾರ್‌ರಾವ್ ಹೋಳ್ಕರ್ ಇವರ ನಡುವಣ ಒಡಕಿಗೆ ಕಾರಣವಾಯಿತು. ರಾಮಚಂದ್ರ ಬಾಬಾಪೇಶ್ವೆಯಿಂದ ಛೀಮಾರಿಕೊಂಡ. ೧೭೫೦ರಲ್ಲಿ ಜೈಪುರದಲ್ಲಿ ಮಾಧೋಸಿಂಗ್ ಜಯಪ್ಪನ ಹತ್ಯೆ ಮಾಡಿದ.

೧೭೪೯ರಲ್ಲಿ ಶಾಹು ತೀರಿಕೊಂಡ. ೧೭೫೦ರಲ್ಲಿ ರಾಮಚಂದ್ರ ಬಾಬಾ ಸದಾಶಿವ ರಾವ್ ಭಾವುವಿನಲ್ಲಿ ಕೆಲಸಕ್ಕಾರಂಭಿಸಿದ. ಆ ಬಳಿಕ ಆತನ ಸಂಬಂಧ ಭಾವುವಿನ ಭಾಗ್ಯದೊಂದಿಗೆ ಅನ್ಯೋನ್ಯವಾಗಿ ಬೆಳೆದುಕೊಂಡಿತು. ಯುದ್ಧಶಾಸ್ತ್ರದಲ್ಲಿ ಅತಿ ಜಾಣಾಕ್ಷನಿದ್ದರೂ, ಹಟಮಾರಿ, ಒರಟು ಸ್ವಭಾವದ, ದುರಾಶೆಗಳ ಭಾವುವಿನ ಮೇಲಕ್ಕೆ ಆತ ಪ್ರಬಲ ಪ್ರಭಾವ ಬೀರಿದ್ದ.

ಪೇಶ್ವೆ ಬಾಳಾಜಿ ಬಾಜಿರಾವ್‌ನ ಹೆಂಡತಿ ಗೋಪಿಕಾಬಾಯಿಯ ಬೆಳೆದು ಬರುತ್ತಿದ್ದ ವರ್ಚಸ್ಸಿನ ಮಹತ್ವನ್ನರಿತಿದ್ದ ರಾಮಚಂದ್ರ ಬಾಬಾನ ಸಲಹೆಯ ಮೇರೆಗೆ ಸದಾಶಿವರಾವ್, ಪೇಶ್ವೆಯೊಂದಿಗಿನ ವೈಮನಸ್ಸಿಗೆ ತೇಪೆ ಹಾಕಿದ. ಮತ್ತು ಅಧಿಕೃತವಿದ್ದ ರಾಜಕಾರ್ಯಗಳಲ್ಲಿ ಪೇಶ್ವೆಯ ಹಿರಿಯ ಮಗನಿದ್ದ ವಿಶ್ವಾಸ್‌ರಾವ್ ಸಹಭಾಗಿಯಾಗುವಂತೆ ನೋಡಿಕೊಂಡ. ೧೭೬೧ರಲ್ಲಿನ ಪಾನಿಪತದ ಕದನದಲ್ಲಿ ವಿಶ್ವಾಸ್‌ರಾವ್ ಮತ್ತು ಸದಾಶಿವ ರಾವ್ ಸಾವನ್ನಪ್ಪಿಕೊಂಡರು.

ಮರಾಠರು ತನಗೆ ಚಿರಋಣಿಗಳಾಗಿರುವರೆಂಬ ರಾಮಚಂದ್ರ ಬಾಬಾನ ನಂಬಿಕೆಗಿದ್ದ ಮುಖ್ಯ ಕಾರಣ ಅದು ರಾಜ್ಯದ ಆಂತರಿಕ ವ್ಯವಸ್ಥೆಯಲ್ಲಿ ಆತ ಮಾಡಿದ್ದ ಸುಧಾರಣೆಯಿತ್ತು. ಮೊಗಲರ ರಾಜ್ಯಾಡಳಿತೆಯಲ್ಲಿನ ಸುಧಾರಣೆಗೆ ತೋಡರ್‌ಮಲ್ಲ್ ಕಾರಣೀಭೂತನಾದ; ಮರಾಠಾ ರಾಜ್ಯದ ಆಂತರಿಕ ವ್ಯವಸ್ಥೆಯ ಸುಧಾರಣೆಗೆ ರಾಮಚಂದ್ರ ಬಾಬಾನ ಮುಂದಾಲೋಚನೆ ಕಾರಣವಾಯಿತು. ಆತ ಕರ, ಕಪ್ಪಗಳನ್ನು ಸಂಗ್ರಹಿಸುವಲ್ಲಿ ಅತಿ ಚತುರನಿದ್ದ. ಆತನ ಆರ್ಥಿಕ ವ್ಯವಸ್ಥೆ, ವ್ಯವಹಾರ ಕೌಶಲ್ಯ, ಉತ್ತರೆಯ ಜನತೆಯ ಪಾಲಿಗೆ ಆದರ, ಅಸೂಯೆಗಳ ವಿಷಯವೊಂದಾಯಿತು.

ರಾಮಚಂದ್ರ ಬಾಬಾ, ೧೭೫೮ರ ಅಕ್ಟೋಬರ್ ತಿಂಗಳ ಒರಂದು ಪುಣೆಯಲ್ಲಿ ತೀರಿಕೊಂಡ. ಆತ ಸಿಂಧಿಯಾರ ರಾಜಧಾನಿಯಿದ್ದ ಅತಿ ಪ್ರಾಚೀನವೆನ್ನಲಾಗುವ ಅವಂತಿಕ (ಉಜ್ಜಯಿನಿ)ದಲ್ಲಿನ ಕ್ಷಿಪ್ರಾನದಿಯ ಸ್ನಾನಘಟ್ಟದ ಬಳಿ ದ್ವಾದಶ ಜ್ಯೋತಿರ್ಲಿಂಗಗಳ ಲೊಂದಾದ ಮಹಾಕಾಲೇಶ್ವರನ ದೇವಾಲಯ, ರಾಮಘಾಟ್‌ದೆಡೆಯಲ್ಲಿನ ರಘುವರ ಭವನ, ಛತ್ರಗಳು, ಜಲಾಶಯಗಳು, ವೈರಾಗಿಗಳಿಗಾಗಿ ಧರ್ಮ ಶಾಲೆಗಳು ಬನಾರಸ್, ಪ್ರಯಾಗ (ಅಲ್ಲಹಾಬಾದ್), ಗಯಾ, ರಾಮೇಶ್ವರ ಮತ್ತು ಇನ್ನಿತರ ಪವಿತ್ರ ಸ್ಥಾನಗಳಲ್ಲಿ ಗೋಶಾಲೆಗಳನ್ನು ಕಟ್ಟಿಸಿ ಅವುಗಳಿಗೆ ಬೇಕಿದ್ದ ಅರ್ಥವ್ಯವಸ್ಥೆ ಮಾಡಿದ. ಇವುಗಳ ಹೊರತು ಗೋಕರ್ಣದ ಮಹಾಬಲೇಶ್ವರನ ಮಹಾಶಿವರಾತ್ರಿಯಂದಿನ ಅಭಿಷೇಕಕ್ಕೆ ಗಂಗೋತ್ರಿಯಲ್ಲಿನ ಗಂಗಾಜಲದ ಕಾವಡಿಯ ವ್ಯವಸ್ಥೆ ಮಾಡಿದ. ಕವಳೆಯಲ್ಲಿನ ಶಾಂತಾದುರ್ಗಾ ದೇವಾಲಯದ ಜೀರ್ಣೋದ್ಧಾರ ಮಾಡಿಸಿದ. ಪೇಶ್ವೆ ಬಾಳಾಜಿ ವಿಶ್ವನಾಥ ನಾನಾ ಸಾಹೇಬ್, ಆತನ ಮೃತ್ಯುವಿನ ಬಳಿಕ ೧೦ ದಿನಗಳ ಸೂತಕ ಪಾಲಿಸಿದ್ದನೆನ್ನುತ್ತಾರೆ. ತನ್ನ ಜೀವನದಲ್ಲಿನ ಸ್ಥಾನ,

ಮಾನಗಳಿಗೆ ಕಾರಣೀಭೂತನಾಗಿದ್ದ ಭಾವುವಿಗೆ ಆತ ಋಣಿಯಾಗಿದ್ದ. ಆತ ಮರಣಾನಂತರ ತನ್ನೆಲ್ಲ ಸಂಪತ್ತು ಭಾವುವಿನ ಕೈಸೇರುವಂತೆ ಮಾಡಿದ್ದ; ಭಾವು ಅದನ್ನು ಮೂರು ಭಾಗಗಳಲ್ಲಿ ವಿಭಾಗಿಸಿ, ಒಂದು ಭಾಗವನ್ನು ದಾನ ಧರ್ಮಗಳಿಗಾಗಿ ವ್ಯಯಿಸಿದ;, ಇನ್ನೊಂದು ಭಾಗವನ್ನು ರಾಮಚಂದ್ರನ ದತ್ತಕ ಪುತ್ರ ಸದಾಶಿವ ರಾಮಚಂದ್ರನಿಗಿತ್ತ; ಮೂರನೆಯ ಭಾಗವನ್ನು ಕೋಶಾಗಾರಕ್ಕೆ ಸೇರಿಸಿದ.

೭. ಮಹಾದ್ಜಿ ಸಿಂಧಿಯಾನ ಕೈಕೆಳಗಿನ ಸಾರಸ್ವತರು

ಸಿಂಧಿಯಾ ರಾಜ್ಯದ ಸ್ಥಾಪನೆಯಾದಂತೆ ರಾಮಚಂದ್ರ ಬಾಬಾ ಸುಖ್ತಣ್‌ಕರ್ ದಿವಾನನಾಗಿ ನೇಮಿಸಲ್ಪಟ್ಟ. ಸಿಂಧಿಯಾನ ಕೈಕೆಳಗಣ ಸಾರಸ್ವತರು ಅತ್ಯುಚ್ಚ ಹುದ್ದೆಕೊಂಡಿದ್ದರು. ಎರಡನೆಯ ಬಾಜಿರಾವ್, ನಾನಾ ಫಡ್ನವೀಸರ ದಿನಗಳ ಪೂನಾದಲ್ಲಿ ತಮ್ಮ ಕೌಶಲ್ಯ ಪ್ರತಿಭೆಗಳಿಗೆ ಅವಕಾಶವಿರದಿರುವುದನ್ನು ಕಂಡ ಅನೇಕ ಸಾರಸ್ವತರು ಸಂಸಾರದ ಸಮೇತ ಸಿಂಧಿಯಾನ ರಾಜ್ಯಕ್ಕೆ ವಲಸೆಹೋದರು. ಅವರಲ್ಲಿನ ಎಷ್ಟೋ ಮಂದಿ, ಮಹಾದ್ಜಿ ಸಿಂಧಿಯಾನ ಕೈಕೆಳಗೆ ರಾಜಕಾರಣಿ, ಯೋದ್ಧರೆಂದು ಪ್ರಸಿದ್ಧಿಕೊಂಡರು. ಜಿವ್ಬಾದಾದಾ ಕೇರ್ಕರ್ (ಜಿವಾಜಿ ಬಲ್ಲಾಳ ಬಕ್ಷಿ), ಲಖ್ಬಾದಾದಾ (ಲಕ್ಷ್ಮಣ ಅನಂತಲಾಡ್), ರಾಘೋರಾಮ್ ಪಾಗೆ (ರಾಘೋರಾಮ್ ರಾಜಾಧ್ಯಕ್ಷ ರಾಂಗ್ಣೇಕರ್), ಬಾಳೋಬಾ ತಾತ್ಯಾ ಪಾಗ್ನಿಸ್ (ಬಾಳಾಜಿ ಅನಂತ ಪಿಂಗೆ), ಜಗೋಬಾ ಬಾಪು (ಜಗನ್ನಾಥ ರಾಮ್ ಕೇರ್ಕರ್), ಬಾಳಾರಾವ್ ಗೋವಿಂದ (ಪೂನಾ ಮತ್ತು ದಖ್ಖಣದ ವ್ಯವಹಾರ ನೋಡಿಕೊಳ್ಳುತ್ತಿದ್ದ ಮಹಾದ್ಜಿಯ ಗುಪ್ತ ಕಾರ್ಯದರ್ಶಿ) ಹಾಗೂ ಬಾಳಾಜಿ ಬಲ್ಲಾಳ (ಕೋಟಾದಲ್ಲಿನ ಪೊಗದಿ ಸಂಗ್ರಾಹಕ ಪಂಡಿತ್ ಗುಲ್ಗುಲೆ ಇವರ ದಾಖಲೆ ಪತ್ರಗಳು ಐತಿಹಾಸಿಕ ಮಹತ್ತಿನವಾಗಿವೆ), ಇವು ಆ ದಿನಗಳ ಇತಿಹಾಸದಲ್ಲಿ ಕಾಣಬರುತ್ತಿದ್ದ ಸಾರಸ್ವತರ ಹೆಸರುಗಳು.

೮. ಜಿವ್ಬಾ ದಾದಾ ಕೇರ್ಕರ್ (ಜಿವಾಜಿ ಬಲ್ಲಾಳ ಬಕ್ಷಿ)

೧೭೪೮ರಲ್ಲಿ ಗೋವಾದ ಪೆಡ್ಣೆ ಮಹಾಲಿನ ಕೇರಿ (ಕ್ವೇರಿಮ್)ಯ ಬಡ ಆದರೂ ಗೌರವಾನ್ವಿತ ಕುಟುಂಬದಲ್ಲಿ ಜಿವ್ಬಾ ದಾದಾನ ಜನನವಾಯಿತು. ಅದು ಮರಾಠಾ ಅಭ್ಯುದಯದ ಕಾಲವಿತ್ತು. ಆತ ಹದಿನೇಳನೆಯ ಶತಮಾನದ ಇತಿಹಾಸಕ್ಕೆ ಸಂಬಂಧಿಸಿದ ಸಾಹಿತ್ಯವನ್ನು ಓದುವುದರಲ್ಲಿ ಅಭಿರುಚಿಕೊಂಡಿದ್ದ. ಶಿವಾಜಿಯ ಶೌರ್ಯದ ಪ್ರಕರಣಗಳ ಬಗೆಗಿನ 'ಬಖರ್' (ಇತಿಹಾಸಕ್ಕೆ ಸಂಬಂಧಿಸಿದ, ಹಳೆಯ ಹಸ್ತ ಲಿಖಿತ ದಾಖಲೆ) ಗಳಲ್ಲಿನ ವೃತ್ತಾಂತ, ಮರಾಠಾ ಸೈನಿಕರ ಆತ್ಮತ್ಯಾಗದ ರೋಮಾಂಚಕಾರಿ ಘಟನೆಗಳು, ರಾಮರಾಜನ ಕಾಲದಲ್ಲಿ ಔರಂಗಜೇಬನ ವಿರುದ್ಧ ನಡೆದ ಹೋರಾಟ, ಇವು ಆತನ ಮನಸ್ಸಿನ ಮೇಲೆ ಅತಿ ಪ್ರಭಾವ ಬೀರಿದ್ದವು. ಆತ ತಾನೂ ಸೈನಿಕನೊಬ್ಬನಾಗಿ ಹಿಂದೂ ಧರ್ಮದ ರಕ್ಷಣೆಗಾಗಿ ತನ್ನ ಬದುಕನ್ನು ಮುಡುಪಾಗಿಡುವ ನಿರ್ಧಾರ ಮಾಡಿದ. ಹದಿನಾರರ ವಯಸ್ಸಿನಲ್ಲಿ ಮನೆ ಬಿಟ್ಟ ಆತ ಕೊಲ್ಹಾಪುರಕ್ಕೆ ಹೋಗಿ ಅಲ್ಲಿ ಒಂದು ವರ್ಷವಿದ್ದು ತನಗೆ ಆಶ್ರಯವಿತ್ತ ದೇಶಸ್ಥ ಬ್ರಾಹ್ಮಣನ (ಆತನ ಕುಲನಾಮ ಬಹುತೇಕ 'ಕಿಬೆ'ಯಿರಬೇಕು) ಶಿಫಾರಸಿನ ಪತ್ರವೊಂದನ್ನುಕೊಂಡು ಪೇಶ್ವೆಯವರ ಅಶ್ವದಳ ಸೇರಲಾಗಿ ಪೂನಾಕ್ಕೆ ಬಂದ.

ನಿಯಮಿತ ಅಂಗ ಸಾಧನೆ ಮಾಡುತ್ತಿದ್ದ ಆತನ ಅಂಗ ಸೌಷ್ಠವ ಆತ್ಯಾಕರ್ಷಕ, ಸುಂದರವಿತ್ತು. ಆತ ಮಲ್ಲಯುದ್ಧ, ಈಜಾಟ, ಕುದುರೆ ಸವಾರಿಗಳಲ್ಲಿ ಪ್ರಾವೀಣ್ಯಕೊಂಡಿದ್ದನಷ್ಟೇ ಅಲ್ಲ ಉನ್ಮತ್ತ ಕುದುರೆಗಳನ್ನೂ ಹತೋಟಿಗೆ ತರಬಲ್ಲವನಾಗಿದ್ದ. ಆತನಿಗೆ ಪೇಶ್ವೆಯ ಅಶ್ವದಳದಲ್ಲಿ ಅನಾಯಾಸ ಪ್ರವೇಶ ದೊರಕಿತು. ಅತ್ಯಲ್ಪ ಕಾಲದಲ್ಲಿ ಪ್ರಸಿದ್ಧಿಕೊಂಡ ಆತ ಸರದಾರ ಬರ್ವೆಯ ಮೆಚ್ಚಿನವನಾದ. ಪೇಶ್ವೆ ಬಾಳಾಜಿ ಬಾಜಿರಾವ್ ಆತನಿಂದ ಆಕರ್ಷಿಸಲ್ಪಟ್ಟ ಮತ್ತೆ ಆತನ ಸೇವೆಯನ್ನು ಎರವಲಾಗಿಕೊಂಡು ಗೃಹಕೃತ್ಯಗಳ ಅಧಿಕಾರಿ 'ಪಾಕನಿಸ್'ನ ಹುದ್ದೆಯನ್ನಿತ್ತ. ಸರದಾರ ಬರ್ವೆಯ ನಿಧನಾನಂತರ, ಆತನ ಮಗ ಅಪ್ರಬುದ್ಧನಿದ್ದ ದಿನಗಳಲ್ಲಿ, ಅಶ್ವದಳದ ನಿರ್ವಹಣೆಗೆ ಈತನನ್ನು ನೇಮಿಸಲಾಯಿತು. ಮುಂದೊಂದು ದಿನ ಮರಾಠರ ಪ್ರಾಂತವನ್ನು ಹೊಕ್ಕ ಹೈದರ್ ಅಲಿಯ ಸೇನೆಯನ್ನು ಬಗ್ಗು ಬಡೆಯಲು ಈತನನ್ನು ಅಶ್ವದಳದೊಂದಿಗೆ ಕಳುಹಿಸಲಾಯಿತು.

ಈ ದಂಡಯಾತ್ರೆಯ ಕೊನೆಯ ದಿನಗಳಲ್ಲಿ ಮರಾಠಾ ಸೇನೆಯನ್ನು ಹಿಂದಕ್ಕೆ ಕರೆದು ಅಹಮ್ಮದ್ ಶಾಹ ಅಬ್ದಾಲಿಯ ವಿರುದ್ಧ ಹೋರಾಡಲಾಗಿ ಕಳುಹಿಸಲಾಯಿತು. ಪೇಶ್ವೆಯ ಮಗ ವಿಶ್ವಾಸರಾವ್‌ನೊಂದಿಗೆ ಜಿವ್ಬಾ ದಾದಾನನ್ನು ಅಶ್ವಸೇನೆಯ ಸಮೇತ ರವಾನಿಸಲಾಯಿತು. ೧೭೬೧ರ ಜನವರಿ ೧೪ರಂದು ನಡೆದ ಪಾನಿಪತದ ಯುದ್ಧದಲ್ಲಿ ಬದುಕುಳಿದವರಲ್ಲಿ ಈತನೊಬ್ಬನಿದ್ದ. ಮಹಾದ್ಜಿ ಸಿಂಧಿಯಾ ಗಾಯಗೊಂಡು ಬದುಕುಳಿದ, ಮಾತ್ರ ಆದ ಗಾಯದಿಂದ ಆತ ಆಜೀವ ಕುಂಟನಾಗುಳಿದ.

ಮಹಾದ್ಜಿ ಸಿಂಧಿಯಾನನ್ನು ಜನ್ಕೋಜಿ ಸಿಂಧಿಯಾನ ಉತ್ತರಾಧಿಕಾರಿಯೆಂದು ಪರಿಗಣಿಸಿದ ಬಳಿಕ ಜಿವ್ಬಾನ ಸೇವೆಯನ್ನು ಮಹಾದ್ಜಿಗೆ ವರ್ಗಾಯಿಸಲಾಯಿತು. ಆತ ಜಿವ್ಬಾದಾದಾನೊಂದಿಗೆ ತನ್ನ ರಾಜಧಾನಿ ಉಜ್ಜಯಿನಿಗೆ ಮರಳಿದ. ಜನ್ಕೋಜಿ ಪಾನಿಪತದಲ್ಲಿನ ಯುದ್ಧದಲ್ಲಿ ಸಾವನ್ನಪ್ಪಿದ ಬಳಿಕ ಉಜ್ಜಯಿನಿಯ ಉತ್ತರೆಯಲ್ಲಿನ ಸುಮಾರು ೧೨೦ ಮೈಲುಗಳ ವಿಸ್ತಾರದ ಪ್ರಾಂತದಲ್ಲಿ ಅಶಾಂತಿ ನೆಲೆಗೊಂಡಿತು. ಪುಟ್ಟ ಪಾಳೆಯಗಾರರು ಸ್ವಾತಂತ್ರ್ಯ ಸಾರಲು ಯತ್ನಿಸುತ್ತಿದ್ದರು. ಹಿಂದುಸ್ತಾನದಲ್ಲಿನ ಮರಾಠರ ಅಭ್ಯುದಯಕ್ಕೆ ಮುಸಲ್ಮಾನರು, ರಜಪೂತರು, ಜಾಟ್, ಸಿಖ್ಖ ಮುಂತಾದವರು ಪ್ರತಿರೋಧ ತೋರಲಾರಂಭಿಸಿದ್ದರು. ರಾಘೋರಾಮ್‌ಹಾಗೆಯ ಸಹಾಯಕೊಂಡ ಆತ ಗೊಂದಲಕ್ಕೆ ಅನಾಯಾಸ ತಡೆಹಾಕಿ ಮಹಾದ್ಜಿಯನ್ನು ಗದ್ದುಗೇರಿಸಿದ. ಬಾಳೋಬಾ ತಾತ್ಯಾ ಮತ್ತು ಸದಾಶಿವ ಮಲ್ಹಾರ್ ಇವರ ನೆರವಿನಿಂದ ಸಮರ್ಥ ಸರಕಾರವೊಂದಕ್ಕೆ ರೂಪು ಕೊಟ್ಟ. ಪಾಟೀಲ್, ಪಟ್ವಾರಿ (ಗ್ರಾಮಾಧಿಕಾರಿಗಳು) ಗಳ ಹುದ್ದೆಯ ರಾಷ್ಟ್ರೀಕರಣ ಮಾಡಲಾಯಿತು. ರೈತರ ತೆರಿಗೆಯ ಪ್ರಮಾಣ ನಿರ್ಧರಿಸಲಾಯಿತು. ಸಾಗುವಳಿ ತೆರಿಗೆಯ ಪ್ರಮಾಣ ತಗ್ಗಿಸುವ ಯೋಜನೆ ಮಾಡಲಾಯಿತು. ತಹಸೀಲುದಾರರನ್ನು ಅವರ ಯುಕ್ತಾಯುಕ್ತತೆ ಪರೀಕ್ಷಿಸಿ ಪರ್ಗಾಣ (ತಾಲೂಕು) ಗಳ ಮೇಲಧಿಕಾರಿಗಳಾಗಿ ನೇಮಿಸಲಾಯಿತು. ಸುಭೇದಾರನನ್ನು ಪ್ರಾಂತಗಳ (ಜಿಲ್ಲೆಗಳ) ಆಡಳಿತೆಗಾಗಿ ಮತ್ತೆ ಸರ್-ಸುಭೇದಾರರನ್ನು ಅವರ ಕೆಲಸದ ಮೇಲ್ವಿಚಾರಣೆಗಾಗಿ ಹಾಗೂ ಸರಕಾರಕ್ಕೆ ನಿಶ್ಚಿತಕಾಲದಲ್ಲಿ ರಾಜ್ಯಕಾರ್ಯಭಾರದ ವರದಿಯನ್ನೀಯಲಾಗಿ ನಿಯುಕ್ತಿ ಮಾಡಲಾಯಿತು.

ಆತ ಪರಿಶ್ರಮ ಪೂರ್ವಕ ಶಕ್ತಿಶಾಲಿ ಸೇನೆಯೊಂದರ ನಿರ್ಮಾಣ ಮಾಡಿದ. ಹಲವೊಬ್ಬ ಯೋಗ್ಯ ವ್ಯಕ್ತಿಗಳನ್ನಾರಿಸಿ ಅವರಿಗೆ ಹೊಣೆಗಾರಿಕೆಯ ಕೆಲಸವನ್ನಿತ್ತ.

ಮೊತ್ತಮೊದಲು ಗೊಹಾಡ್‌ನ ಜಾತ್ ರಾಣಾನ ಮೇಲಕ್ಕೆ ಬಿದ್ದು ಆತನ ಬಲಶಾಲಿ ಸೇನೆಯನ್ನು ಸೋಲಿಸಿ, ರಾಜಧಾನಿಯಿದ್ದ ಗ್ವಾಲಿಯರ್‌ಕೋಟೆಯನ್ನು ವಶಪಡಿಸಿಕೊಂಡ. ೧೭೬೨-೧೭೬೩ರಲ್ಲಿ ನಲ್ವತ್ತು ಮಹಾಲುಗಳನ್ನೂ ವಶಪಡಿಸಿಕೊಂಡ. ಅತಿ ಸಂತುಷ್ಟನಾದ ಮಹಾದ್ಜಿ ಆತನಿಗೆ 'ಬಕ್ಷಿ' (ಪ್ರಮುಖ ಸೇನಾಧಿಕಾರಿ) ಯ ಪದವಿಯನ್ನಿತ್ತ.

ಮಹಾದ್ಜಿ ಆ ಬಳಿಕ, ಉತ್ತರ ಭಾರತದಲ್ಲಿನ ಮರಾಠಾ ಪ್ರಭುತ್ವದ ಪುನರುತ್ಥಾನದತ್ತ ಲಕ್ಷ್ಯ ಕೇಂದ್ರೀಕರಿಸಿದ. ಜಿವ್ಬಾದಾದಾ ರಜಪೂತರ ಮತ್ತು ಭರತ್‌ಪುರದ ಜಾತ್ ಅರಸನ ಬೆನ್ನು ಮುರಿದು ತಮ್ಮ ರಾಜ್ಯದ ಕೆಲವೊಂದು ಪ್ರಾಂತಗಳನ್ನು ಸಿಂಧಿಯಾನಿಗೊಪ್ಪಿಸುವ ಮತ್ತು ಮರಾಠಾರಿಗೆ ಕಪ್ಪವೀಯುವ ವ್ಯವಸ್ಥೆ ಮಾಡಿದ. ಮಹಾದ್ಜಿ ಈಗ ತನ್ನ ಲಕ್ಷ್ಯವನ್ನು ದಿಲ್ಲಿಯ ರಾಜಕಾರಣದತ್ತ ಕೇಂದ್ರೀಕರಿಸಿದ. ಬ್ರಿಟಿಷರ ಸಂರಕ್ಷಣೆ ಬಯಸಿದ ದಿಲ್ಲಿಯ ಚಕ್ರವರ್ತಿ ಶಾಹ ಆಲಮ್, ೧೭೬೫ರಲ್ಲಿ ಅವರಿಂದ ರೊಹಿಲ್ಲಾ ನಜಿಬ್-ಉದ್-ದೌಲಾನ ಅಲ್ಲಹಾಬಾದ್, ಮತ್ತು ಕೋರ್ಹ್ಹಾ ಪ್ರಾಂತಗಳನ್ನು ಪಡೆದುಕೊಂಡಿದ್ದ. ಮಹಾದ್ಜಿ ಮತ್ತು ಜಿವ್ಬಾದಾದಾ ಭಯ, ಭೀತಿಗಳಿಲ್ಲದೆ ದಿಲ್ಲಿಗೆ ಸವಾರಿ ಮಾಡಿದರು. ನಾನಾಫಡ್ನವೀಸನ ಸಲಹೆ ದುರ್ಲಕ್ಷಿಸಿ ರೋಹಿಲ್ ಖಂಡ ಸೇರಿ ಶಾಹ ಆಲಮ್‌ನನ್ನು ದಿಲ್ಲಿಗೆ ತಂದರು. ೧೭೭೧ರಲ್ಲಿ ಆತನನ್ನು ಚಕ್ರವರ್ತಿಯ ಗದ್ದುಗೆಗೇರಿಸಿದರು.

೧೭೭೩ರಲ್ಲಿ ಪೇಶ್ವೆ ನಾರಾಯಣರಾವ್‌ನ ಕೊಲೆಯಾಯಿತು. ಸಿಂಧು ದೇಶಕ್ಕೆ ಓಡಿ ಹೋದ ಆತನ ಕೊಲೆಗಾರರನ್ನು ಹಿಡಿದು ತರುವ ಅತಿ ಕಷ್ಟದ ಕೆಲಸವನ್ನು ಜಿಬ್ಬಾ ದಾದಾನಿಗೆ ವಹಿಸಲಾಯಿತು.

೧೭೭೮ರ ಡಿಸೆಂಬರ್ ತಿಂಗಳಲ್ಲಿನ ಇಂಗ್ಲಿಷರೊಂದಿಗಿನ ಮರಾಠರ ಮೊದಲ ಯುದ್ಧದಲ್ಲಿ ಜಿವ್ಬಾದಾದಾ, ಮಹಾದ್ಜಿ ಒಟ್ಟಾಗಿ ಹೋರಾಡಿದರು. ಬ್ರಿಟಿಷರ ಬೆನ್ನು ಮುರಿಯಿತು. ಕರ್ನಲ್ ಕೆಮೆಕ್ ಮಹಾದ್ಜಿಗೆ ಶರಣಾಗತನಾದ. ವಡ್ಗಾಂವ್ ಒಡಂಬಡಿಕೆಯ ಮೇರೆಗೆ ನಾರಾಯಣರಾವ್‌ನ ಕೊಲೆಯ ನಂತರ, ೧೭೭೩ರ ತನಕ, ಬ್ರಿಟಿಷರು ಸಂಪಾದಿಸಿದ ಭೂಭಾಗಗಳನ್ನು ಮರಳಿಸಲು ಆತ ಒಪ್ಪಿದನಷ್ಟೇ ಅಲ್ಲ, ರಾಘೋಬಾನನ್ನು ಸಿಂಧಿಯಾನ ವಶಕ್ಕೀಯಲು ಮತ್ತು ಭೂಭಾಗಗಳ ಹಸ್ತಾಂತರವಾಗುವ ತನಕ ತನ್ನ ಅಧಿಕಾರಿಗಳಿಬ್ಬರನ್ನು ಒತ್ತೆಯಿಡಲೂ ಒಪ್ಪಿಕೊಂಡ. ಆದರೆ ವಾರನ್‌ಹೇಸ್ಟಿಂಗ್ಸ್ ಮತ್ತು ಕಂಪನಿಯ ಕಾರ್ಯ ನಿರ್ವಾಹಕ ಮಂಡಳದ ಸದಸ್ಯರು ಈ ಶರ್ತಗಳನ್ನು ನಿರಾಕರಿಸಿದರು.

ಎದೆಗುಂದದ ಬ್ರಿಟಿಷರು ಕರ್ನಲ್ ವೆಲ್ಲೆಸ್ಲಿ, ಆನಂತರ ಕರ್ನಲ್ (ಕ್ರಮೇಣ ಜನರಲ್) ಗೊಡ್ಡಾರ್ಡ್‌ನ ನೇತೃತ್ವದಲ್ಲಿ ಬಂಗಾಳದಲ್ಲಿದ್ದ ಸೇನೆಯ ತುಕಡಿಗಳನ್ನು ಶತ್ರುಗಳ ರಾಜ್ಯದ ಮೂಲಕ ಸೂರತ್ತಿಗೆ ಕಳುಹಿಸಿದರು. ೧೭೭೯ರ ಫೆಬ್ರುವರಿ ತಿಂಗಳಲ್ಲಿ ಗೊಡ್ಡಾರ್ಡ್ ಅಹಮ್ಮದಾಬಾದನ್ನು ಸ್ವಾಧೀನ ಪಡಿಸಿಕೊಂಡ. ಫತ್ತೇಸಿಂಗ್ ಗಾಯಕ್‌ವಾಡ್‌ನೊಂದಿಗೆ ಸಂಧಿ ಮಾಡಿಕೊಂಡ. ಆತ ೧೭೮೦ರಲ್ಲಿ ಗುಜರಾತಿನಲ್ಲಿನ ಮರಾಠಾ ಪ್ರಾಂತದ ಹೆಚ್ಚಿನ ಭಾಗವನ್ನು ಆಕ್ರಮಿಸಿದ. ನಾಗಪುರದ ಭೋಂಸ್ಲೆ ಬ್ರಿಟಿಷರನ್ನು ಸೇರಿದ. ೧೭೮೦ರ ಎಪ್ರಿಲ್

ತಿಂಗಳಲ್ಲಿ ಗೊಡ್ಡಾರ್ಡ್ ಸಿಂಧಿಯಾನ ಸೇನೆಯ ಮೇಲಕ್ಕೆ ಅಕಸ್ಮಾತ್ ಹಲ್ಲೆ ಮಾಡಿದ. ಜಿವ್ಬಾದಾದಾ ಸೇನೆಯನ್ನು ಬ್ರಿಟಿಷರ ಕೋವಿಗಳ ಹದ್ದಿನಿಂದ ದೂರಕ್ಕೆ ಕೊಂಡುಹೋದ. ಗೊಡ್ಡಾರ್ಡ್ ಹಿಮ್ಮೆಟ್ಟಬೇಕಾಯಿತು. ಮಹಾದ್ಜಿ ಚಾಕಚಕ್ಯತೆಯಿಂದ ಗಾಯಕವಾಡನ ಸಹೋದರ (ಮುಂದೆ ಆತನ ಉತ್ತರಾಧಿಕಾರಿ) ಗೋವಿಂದ್‌ರಾವ್‌ನ ಮೈತ್ರಿ ಸಾಧಿಸಿದ. ವಾರನ್ ಹೇಸ್ಟಿಂಗ್ಸ್‌ನ ದುರಾಸೆಯ ಧೋರಣೆಯ ವಿರುದ್ಧ ೧೭೭೯ರಲ್ಲಿ ನಾನಾ ಫಡ್ನವೀಸ್ ಪ್ರಬಲ ಒಕ್ಕೂಟವನ್ನು ಸಂಘಟಿಸಿದ. ಮತ್ತು ಒಕ್ಕೂಟ ಸೇರಿದ ಹೈದರ್ ಆಲಿಯೊಂದಿಗೆ ಸಂಧಾನ ನಡೆಸಿದ. ಗೊಡ್ಡಾರ್ಡ್ ಗುಜರಾತಿನಿಂದ ಹಿಮ್ಮೆಟ್ಟಿದ. ಮರಾಠರು ಊರನ್ನು ಹಾಳುಗೆಡವಿ ಬ್ರಿಟಿಷರಿಗ ಒಂದಿಷ್ಟೂ ಸರಬರಾಯಿ ಸೇರದಂತೆ ಮಾಡಿದರು.

ದಕ್ಷಿಣದ ಸಂಗ್ರಾಮದೆಡೆಯಲ್ಲಿನ ಮಹಾದ್ಜಿಯ ಲಕ್ಷ್ಯ ಸೆಳೆಯಲಾಗಿ ವಾರನ್ ಹೇಸ್ಟಿಂಗ್ಸ್ ಮೇಜರ್ ಫೋಫ಼ನ್‌ನ ನೇತೃತ್ವದಲ್ಲಿ ಗ್ವಾಲಿಯರಿಗೆ ದಂಡೊಂದನ್ನು ಕಳುಹಿಸಿದ. ಈ ದಂಡನ್ನು ಗೊಹಾಡ್‌ನ ಜಾತ್ ಮತ್ತು ನೆರೆಯ ಇನ್ನಿತರ ಅಸಂತುಷ್ಟ ಅರಸರು ಸೇರಿಕೊಂಡರು. ಗ್ವಾಲಿಯರ್ ಕೋಟೆ ಸೇರಲಿರುವ ಗುಪ್ತ ಮಾರ್ಗದ ರಹಸ್ಯವನ್ನು ಗೊಹಾಡ್‌ನ ರಾಣಾನಿಂದ ಅರಿತ ಮೇಜರ್ ಫೋಫ಼ನ್ ೧೭೮೦ರ ಅಗಸ್ಟ್ ತಿಂಗಳ ಒಂದು ರಾತ್ರಿ ಗ್ವಾಲಿಯರ್ ಕೋಟೆಗೆ ಲಗ್ಗೆ ಹಾಕಿದ. ಗ್ವಾಲಿಯರ್‌ನಲ್ಲಿದ್ದ ಬ್ರಿಟಿಷರ ಬಲವನ್ನರಿತ ಮಹಾದ್ಜಿ ತನ್ನ ಸೈನ್ಯದ ಸಮೇತ ಹಿಂದಕ್ಕೆ ಸರಿದು ೧೭೮೦ರ ಸೆಪ್ಟಂಬರ್ ತಿಂಗಳಲ್ಲಿ ಉಜ್ಜಯಿನಿಯಲ್ಲುಳಿದುಕೊಂಡ. ಸೇನೆಯನ್ನು ಪುನಸ್ಸಂಘಟಿಸಿದ ಜಿವ್ಬಾ ದಾದಾ ಕರ್ನಲ್ ಕೆಮಿಕ್ ಮತ್ತು ಇನ್ನಿತರ ಸೇನಾಧಿಕಾರಿಗಳ ಕೈಕೆಳಗಣ ಸೇನೆಗಳನ್ನು ಸೋಲಿಸಿದ. ಆತ ಎರಡು ತಿಂಗಳ ಕಾಲ ಬ್ರಿಟಿಷರಿಗೆ ಎಡೆಬಿಡದೆ ಬಾಧೆಯಿತ್ತ.

ಬ್ರಿಟಿಷರು ಶಾಂತಿಗಾಗಿ ಸಂಧಾನ ನಡೆಸಿದರು. ೧೭೮೨ರ ಮೇ ತಿಂಗಳ ೧೭ನೆಯ ತಾರೀಖಿಗೆ 'ಸಾಲ್ಬಾಯಿ ಒಪ್ಪಂದ' ವನ್ನು ತಯಾರಿಸಲಾಯಿತು. ಬ್ರಿಟಿಷರು ಸಾಲ್ಸೆಟ್ಟ್ ದ್ವೀಪದ ಹೊರತು ಇನ್ನುಳಿದವುಗಳ ಕೈಬಿಟ್ಟರು. ಸಿಂಧಿಯಾನಿದ್ದಲ್ಲಿ ತಂಗಬೇಕಿದ್ದ ರಾಘೋಬಾನಿಗೆ ರೂ. ೨೫,೦೦೦ಗಳ ಮಾಸಿಕ ನಿವೃತ್ತಿ ವೇತನದ ವ್ಯವಸ್ಥೆ ಮಾಡಲಾಯಿತು. ಹೈದರ್ ಆಲಿಯ ಮರಣಾನಂತರ ೧೭೮೩ರಲ್ಲಿ ನಾನಾಫಡ್ನವೀಸ್ ಈ ದಸ್ತಾವೇಜಿಗೆ ಹಸ್ತಾಕ್ಷರ ಹಾಕಿದ.

ಗೊಹಾಡ್‌ನ ರಾಣಾ ಗ್ವಾಲಿಯರ್ ಕೋಟೆಯನ್ನು ಬಿಟ್ಟು ಕೊಡಲು ನಿರಾಕರಿಸಿದ. ಸಾಲ್ಬಾಯಿ ಒಪ್ಪಂದದಲ್ಲಿ ಕೋಟೆಗೆ ಸಂಬಂಧಿಸಿದ ಶರ್ತಗಳಿರದಿದ್ದ ನಿಮಿತ್ತ ಬ್ರಿಟಿಷರು ಆತನಿಗೆ ಬೆಂಬಲವಿತ್ತರು. ಜಿವ್ಬಾ ದಾದಾ ತನ್ನ ಸೇನೆಕೊಂಡು ಅತ್ಯುಗ್ರ ಹೋರಾಟದ ಬಳಿಕ ಕೋಟೆಗೆ ಮುತ್ತಿಗೆ ಹಾಕಿದ. ಕೋಟೆಯ ಗೋಡೆಯನ್ನೇರುವಲ್ಲಿ ಆತ ಮೊದಲಿನವನಾಗಿದ್ದ.

ತಮ್ಮ ಪ್ರಾಂತದ ಮೇಲಕ್ಕೆ ದಂಡೆತ್ತಿ ಬಂದ ಟಿಪ್ಪು ಸುಲ್ತಾನನ ವಿರುದ್ಧ ೧೭೮೭ರಲ್ಲಿ ಮರಾಠರು ನಿಜಾಮನೊಂದಿಗೆ ಒಪ್ಪಂದ ಮಾಡಿಕೊಂಡರು. ಜಿವ್ಬಾ ದಾದಾನೊಂದಿಗಿನ ಮರಾಠಾ ಸೇನೆ ಟಿಪ್ಪು ಸುಲ್ತಾನನ್ನು ಸೋಲಿಸಿ ಶಾಂತಿಯ ಸಂಧಿಗಾಗಿ ಒತ್ತರಿಸಿತು.

ದಿಲ್ಲಿಯ ಮುಸ್ಲಿಂ ಸರದಾರರಿಗೆ ಚಕ್ರವರ್ತಿಯ ಮೇಲಣ ಮರಾಠರ ಪ್ರಭಾವ ಅಸಹ್ಯವಿತ್ತು. ಅವರು ಸಿಂಧಿಯಾನ ನಿರ್ವಹಣೆಗೊಳಗಾಗಿದ್ದ ಚಕ್ರವರ್ತಿಯ ರಾಜ್ಯದ

ಸೀಮೆಯೊಳಕ್ಕೆ ದಂಡೆತ್ತಿ ಹೋಗಲು ಸಿಖ್ಖರಿಗೆ ಪ್ರಚೋದನೆಯಿತ್ತರು. ಮೈಸೂರಿನ ಯುದ್ಧಾನಂತರ ಜಿವ್ಬಾ ದಾದಾನನ್ನು ಸಿಖ್ಖರ ಪ್ರತಿ ಹೋರಾಡಲಾಗಿ ಕಳುಹಿಸಲಾಯಿತು.

ಮಹಾದ್ಜಿಯ ಕೈಬಿಟ್ಟ ಶಾಹ ಆಲಮ್, ಇಸ್ಮಾಯಿಲ್ ಬೇಗ್ ಮತ್ತು ಗುಲಾಮ್ ಖಾದರ್ ಹೆಸರಿನ ಸರದಾರರಿಬ್ಬರ ವಶವರ್ತಿಯಾದ. ಲಖ್ಬಾ ದಾದಾ ವೀರತನದಿಂದ ಸಂರಕ್ಷಿಸುತ್ತಿದ್ದ ಆಗ್ರಾದ ಮೇಲಕ್ಕೆ ಮೊಗಲರ ಸೇನೆ ಹಲ್ಲೆ ಮಾಡಿತು. ಆತನ ಸಹಾಯಕ್ಕಾಗಿ ಮಹಾದ್ಜಿ ಆಗ್ರಾಕ್ಕೆ ಧಾವಿಸಿದ. ಮತ್ತು ನೆರವಿಗಾಗಿ ಪೇಶ್ವೆಗೆ ಮೊರೆಯಿಟ್ಟ. ಉತ್ತರ ಭಾರತದಲ್ಲಿ ಬೆಳೆಯುತ್ತಿದ್ದ ಮಹಾದ್ಜಿಯ ವರ್ಚಸ್ಸನ್ನು ಸಂಶಯಪೂರ್ವಕ ಕಾಣುತ್ತಿದ್ದ ನಾನಾ ಫಡ್ನವೀಸ್ ಬೆಂಬಲಕ್ಕಾಗಿ ಹೆಚ್ಚಿನ ಸೇನೆ ಕಳುಹಿಸಲು ನಿರಾಕರಿಸಿದ. ಗ್ವಾಲಿಯರಿಗೆ ಹಿಂತೆರಳಿದ ಮಹಾದ್ಜಿ ಹೊಸ ಸೈನಿಕರನ್ನು ಒಂದುಗೂಡಿಸಿ ಅತಿದೊಡ್ಡ ಪ್ರಮಾಣದ ತಯಾರಿ ಮಾಡಿದ.

ಪಂಜಾಬಿನ ಸಿಖ್ಖರ ಸೇನೆಯನ್ನು ತಡೆಹಿಡಿದ ಜಿವ್ಬಾದಾದಾ ಪಟಿಯಾಲಾದ ಅರಸು ಕಪ್ಪಕೊಡುವಂತೆ ಒತ್ತರಿಸಿದ. ಮತ್ತೆ ಮರಾಠಾ ವರ್ಚಸ್ಸು ಹರಿದ್ವಾರದ ತನಕ ವ್ಯಾಪಿಸುವಂತೆ ಮಾಡಿದ. ಆ ಬಳಿಕ ಆತ ಜಾತ್ ಮತ್ತು ಮೊಗಲರ ಒತ್ತಡಕ್ಕೊಳಗಾಗಿದ್ದ ಲಖ್ಬಾ ದಾದಾನಿದ್ದ ಆಗ್ರಾಕ್ಕೆ ಧಾವಿಸಿದ. ೧೭೮೮ರ ಜೂನ್ ತಿಂಗಳಲ್ಲಿ ಆತ ಮೊಗಲರ ಬೆನ್ನು ಮುರಿದು ಆಗ್ರಾಕೋಟೆಯ ಮುತ್ತಿಗೆ ಬಿಡಿಸಿದ.

ಈ ನಡುವೆ ಗುಲಾಮ್ ಖಾದರ್ ಇಸ್ಲಾಮ್ ಧರ್ಮ ಸಮರ್ಥಕನಂತೆ ವರ್ತಿಸತೊಡಗಿ ಸ್ವಜಾತೀಯರ ಮನವೊಲಿಸಿಕೊಂಡ. ಮತ್ತೆ ಚಕ್ರವರ್ತಿ ಮಹಾದ್ಜಿಯ ಅನುವರ್ತಿಯಿರುವನೆಂದು ನುಡಿದು ರಾಜ್ಯಭಾರದ ಸೂತ್ರಗಳನ್ನು ತನ್ನ ಕೈಗಳಲ್ಲಿ ಕೊಂಡ. ಮೃತ ಅರಸು ಅಹಮ್ಮದ್ ಶಾಹನ ವಿಧವೆ ಮಲಕ್ ಝಮಾನಿಬೇಗಮ್ ಗುಲಾಮ್ ಖಾದರ್‌ನನ್ನು ಸೇರಿ ಶಾಹ ಆಲಮ್‌ನ ಸ್ಥಾನದಲ್ಲಿ ತನ್ನ ಮಗನನ್ನು ಪ್ರತಿಷ್ಠಾಪಿಸುವ ಸಂಚು ಹೂಡಿದಳು. ೧೭೮೮ರ ಜುಲೈ ತಿಂಗಳ ೨೯ರಂದು ಗುಲಾಮ್ ಖಾದರ್ ಶಾಹ ಆಲಮ್‌ನನ್ನು ಗದ್ದುಗೆಯಿಂದ ಉರುಳಿಸಿದನಷ್ಟೇ ಅಲ್ಲ ಆತನ ಕಣ್ಣುಗಳನ್ನೂ ಕಿತ್ತ. ಚಕ್ರವರ್ತಿ ಮಹಾದ್ಜಿಯ ನೆರವು ಕೋರಿದ. ಆತ ಜಿವ್ಬಾ ದಾದಾ ಮತ್ತು ಲಖ್ಬಾದಾದಾರನ್ನು ಸೇನೆಯೊಂದಿಗೆ ದಿಲ್ಲಿಗೆ ಕಳುಹಿಸಿದ. ಅವರು ದೋ ಆಬ್ ಸೇರಿ, ಆಲಿಘರ್ ಸ್ವಾಧೀನ ಪಡಿಸಿ ೧೭೮೮ರಲ್ಲಿ ಗುಲಾಮ್ ಖಾದರ್‌ನ ಸೇನೆಯನ್ನು ಸದೆಬಡಿದರು. ೧೭೮೮ರ ಡಿಸೆಂಬರ್ ತಿಂಗಳಲ್ಲಿ ಆತನನ್ನು ಸೆರೆಹಿಡಿಯಲಾಯಿತು. ಆತನ ಕಣ್ಣುಗಳನ್ನು ಕಿತ್ತು ಕುರುಡನನ್ನಾಗಿ ಮಾಡಿ ೧೭೮೯ರ ಮೇ ತಿಂಗಳಲ್ಲಿ ಗಲ್ಲಿಗೇರಿಸಿದರು. ಮಹಾದ್ಜಿ ಕುರುಡನಿದ್ದ ಚಕ್ರವರ್ತಿಯನ್ನು ಮರಳಿ ಗದ್ದುಗೆಗೇರಿಸಿದ. ಕೃತಜ್ಞತೆಯ ದ್ಯೋತಕವಾಗಿ ಆತ ಪೇಶ್ವೆಗೆ ವಕೀಲ್-ಈ-ಮುತಾಲಕ್ (ಪೂರ್ಣಾಧಿಕಾರದ ರಾಯಭಾರಿ) [೧೧] ಬಿರುದನ್ನು, ಉಲ್ಮಲ್ ಫರ್ಝ್ ಮತ್ತು ಆಲಿಝಾ ಬಹದ್ದೂರ್ ಬಿರುದನ್ನು ಮಹಾದ್ಜಿಗೆ, ಮುಝಫ್ಫರ್-ಉದ್-ದೌಲಾ ಫತ್ತೇಜಂಗ್ ಬಿರುದನ್ನು ಜಿಬ್ಬಾ ದಾದನಿಗೆ, ಝಮಾನ್-ಉಲ್-ಮುಲ್ಕ ಮುಝಫ್ಫರ್ - ಉದ್ -ದೌಲ್ಲಾ ದಿಲ್ವರ್ ಜಂಗ್ ಬಿರುದನ್ನು ಜಗೋಬಾ ಬಾಪುವಿಗೆ, ಶಂಶೇರ್ ಜಂಗ್ ಬಹದ್ದೂರ್ ಬಿರುದನ್ನು ಲಖ್ಬಾ ದಾದನಿಗೆಇತ್ತ.

೧೭೯೦ರಲ್ಲಿ ಮಹಾದ್ಜಿ, ಜೈಪುರ್ ಮತ್ತು ಜೋಧ್‌ಪುರ್‌ಗಳ ಅರಸರೊಂದಿಗೆ

ಇನ್ನಿತರ ರಜಪೂತರೂ ಸೇರಿದ್ದ ರಜಪುತಾನದತ್ತ ಮತ್ತು ಮೊಗಲ್ ಸೇನೆಯೊಂದಿಗೆ ಅಜ್ಮೇರಿನಲ್ಲಿದ್ದ ಇಸ್ಮಾಯಿಲ್ ಬೇಗ್‌ನತ್ತ ಲಕ್ಷ್ಯ ಕೇಂದ್ರೀಕರಿಸಿದ.

೧೭೯೦ರ ಜೂನ್ ೨೦ರಂದು ಪಾಟಣ್‌ನಲ್ಲಿ ಜಿವ್ಬಾದಾದಾ ಹಾಗೂ ಲಖ್ವಾದಾದಾರ ನೇತೃತ್ವದಲ್ಲಿನ ಸಿಂಧಿಯಾನ ಸೇನೆ ರಜಪೂತ ಮತ್ತು ಮೊಗಲರ ಸಂಯುಕ್ತ ಸೇನೆಯ ಬೆನ್ನು ಮುರಿಯಿತು. ೧೭೯೦ರ ಅಕ್ಟೋಬರ್ ತಿಂಗಳ ೧೧ರಂದು ಮೆರ್ತಾದಲ್ಲಿ ಮಗುದೊಮ್ಮೆ ಈ ಸೇನೆಯನ್ನು ಸೋಲಿಸಿತು. ಹತ್ತು ತುಕಡಿಗಳು ಶರಣಾಗತಿ ಸ್ವೀಕರಿಸಿದವು. ಅಪರ ಕೋಟೆಗಳನ್ನು ಸ್ವಾಧೀನ ಪಡಿಸಿಕೊಳ್ಳಲಾಯಿತು.

ಜಿವ್ಬಾದಾದಾನನ್ನು ತನ್ನ ಸೇನೆಯ ಸೇನಾಧಿಪತಿಯಾಗಿ ನೇಮಿಸಿದ ಮಹಾದ್ಜಿಸಿಂಧಿಯಾ, ಬ್ರಿಟಿಷರ ವರ್ಚಸ್ಸಿನ ನೆಳಲು ಹಬ್ಬುವುದನ್ನು ತಡೆಹಿಡಿಯಲಾಗಿ ಪೂನಾಕ್ಕೆ ತೆರಳಿದ.[೨೨]

ದಿಲ್ಲಿಯ ಚಕ್ರವರ್ತಿಯು ಕೃತಜ್ಞತೆಯ ದ್ಯೋತಕವಿದ್ದ 'ವಕೀಲ್-ಈ-ಮುತಲ್ಲಕ್' ಉಪಾಧಿಯಿಂದ ಪೇಶ್ವೆಯನ್ನು ಅಲಂಕರಿಸಿದ ಆತ, ಪೂನಾದ ಸಮೀಪ ಉಳಿದುಕೊಂಡ. ತನ್ನ ಕೊನೆಯ ದಿನಗಳ ತನಕ ಮರಾಠಾ ರಾಜಕಾರಣದಲ್ಲಿ ವೈಯಕ್ತಿಕ ಲಕ್ಷ್ಯವಿತ್ತ.

ದಂಡಯಾತ್ರೆಯ ಕೊನೆಗೆ ನಾನಾಫಡ್ನವೀಸ್‌ನಿಂದ ಚಿತಾಯಿಸಲ್ಪಟ್ಟ ಹೋಳ್ಕರ್ ರಜಪೂತಾನದಲ್ಲಿನ ಸುಲಿಗೆಯ ವಿಭಾಜನೆಯ ಕುರಿತಾಗಿ ಮಹಾದ್ಜಿಯೊಂದಿಗೆ ಜಗಳವಾಡಿದ. ಇದರ ಫಲಸ್ವರೂಪ ೧೭೯೩ರ ಜೂನ್ ತಿಂಗಳ ೧ನೆಯ ತಾರೀಕಿಗೆ ಅಜ್ಮೀರ್‌ನ ಸಮೀಪದ ಲಖೇರಿಯಲ್ಲಾದ ಯುದ್ಧದಲ್ಲಿ ಜಿವ್ಬಾ ದಾದಾ, ಲಖ್ವಾದಾದಾ, ಗೋಪಾಲ್‌ರಾವ್ ಭಾವು ಇವರ ನೇತೃತ್ವಕೊಂಡ ಸಿಂಧಿಯಾನ ಇಪ್ಪತ್ತೊಂಭತ್ತು ಸಾವಿರ ಕುದುರೆಗಳ, ಒಂಭತ್ತು ಸಾವಿರ ಕಾಲ್ದಳದ ಸೇನೆ, ಹೋಳ್ಕರ್‌ನ ಮೂವತ್ತೊಂದು ಸಾವಿರ ಕುದುರೆಗಳ ಮತ್ತು ನಾಲ್ಕು ಸಾವಿರ ಕಾಲ್ದಳದ ಸೇನೆಯನ್ನು ನುಜ್ಜುಗುಜ್ಜಾಗಿಸಿತು. ಜರ್ಜರಿತವಾದ ಹೋಳ್ಕರ್‌ನ ಸೇನೆ ಇಂದೋರಿಗೆ ಹಿಂತೆರಳಿತು. ಇದರಿಂದ ಹಿಂದುಸ್ತಾನದಲ್ಲಿನ ಸಿಂಧಿಯಾ, ಹೋಳ್ಕರರ ನಡುವಣ ಸ್ಪರ್ಧೆ ಕೊನೆಗೊಂಡಿತು.

೧೭೯೪ರ ಫೆಬ್ರವರಿ ತಿಂಗಳ ೧೨ರಂದು ಮಹಾದ್ಜಿ ತೀರಿಕೊಂಡ. ಉತ್ತರಾಧಿಕಾರಿಯ ವಿವಾದವೆದ್ದಾಗ ಜಿವ್ಬಾದಾದಾ, ಮಹಾದ್ಜಿಯ ವಿಧವೆಯರಲ್ಲಿ ಹಿರಿಯಳಿದ್ದ ಲಕ್ಷ್ಮೀಬಾಯಿಯನ್ನು ಕಂಡು ಪಾನಿಪತದ ಯುದ್ಧದಲ್ಲಿ ತೀರಿಕೊಂಡ ತುಕೋಜಿಸಿಂಧಿಯಾನ ಮೊಮ್ಮಗ ದೌಲತ್‌ರಾವ್‌ನನ್ನು ಗದ್ದುಗೆಗೇರಿಸಲು ಒಪ್ಪಿಕೊಳ್ಳುವಂತೆ ಮಾಡಿದ.

ಪೇಶ್ವೆ ನಾರಾಯಣರಾವ್‌ನ ನಿಧನಾನಂತರ ನಿಝಾಮ್, ತಾನು ಸಲ್ಲಿಸಬೇಕಿದ್ದ ಕಪ್ಪವನ್ನು ತಡೆಹಿಡಿದಿದ್ದ ನಿಮಿತ್ತ ಅದು ಸುಮಾರು ಮೂರು ಕೋಟಿಗಳಷ್ಟು ಬೆಳೆದಿತ್ತು. ಮರಾಠರ ರಾಯಭಾರಿ ಗೋವಿಂದ ರಾವ್ ಕಾಳೆ ಇದರ ಪ್ರಸ್ತಾಪವೆತ್ತಿದಾಗ ತುಂಬಿದ ರಾಜದರ್ಬಾರಿನಲ್ಲಿ ನಿಝಾಮ್ ಆತನ ಪರಿಹಾಸ ಮಾಡಿದ. ನಾನಾ ಫಡ್ನವೀಸ್ ಸಿಂಧಿಯಾ, ಹೋಳ್ಕರ್, ಭೋಂಸ್ಲೆ, ಗಾಯಕ್‌ವಾಡ್ ಮತ್ತು ಇನ್ನಿತರ ಸಾಮಂತರಿಗೆ ಕರೆಕಳುಹಿಸಿದ.

ತ್ವರಿತ ಪೂನಕ್ಕೆ ಹೊರಟುಬರಬೇಕೆನ್ನುವ ಆದೇಶದ ವಿಶೇಷ ಪತ್ರವನ್ನು ಪೇಶ್ವೆಯ ಹೇಳಿಕೆಯ ಮೇರೆಗೆ ಜಿವ್ಬಾದಾದಾ ಕೇರ್ಕರ್‌ನಿಗೆ ಕಳುಹಿಸಲಾಯಿತು. ಮತ್ತೆ ಆತನನ್ನು

ವೈಭವದಿಂದ ಸ್ವಾಗತಿಸುವ ಯೋಜನೆಯುನ್ನು ಮಾಡಲಾಯಿತು. ಮಾತ್ರ ಜಿವ್ಬಾದಾದಾ ಆಡಂಬರಗಳ ಹೊರತು ಆ ಮೊದಲೇ ಪೇಶ್ವೆಯ ಅರಮನೆ ಸೇರಿ ಪ್ರಣಾಮ ಸಲ್ಲಿಸಿದ.

ಮರುದಿನ ನಡೆದ ವಿಶೇಷ ದರ್ಬಾರಿನಲ್ಲಿ ನಾನಾಫಡ್ನವೀಸ್ ನೆರೆದ ಸಾಮಂತ, ಸರದಾರರನ್ನುದ್ದೇಶಿಸಿ, ಪೇಶ್ವೆಯ ಎದುರಿಗಿಟ್ಟಿದ್ದ ಹರಿವಾಣದಿಂದ ವೀಳ್ಯವೆತ್ತುವರೆ (ಆಹ್ವಾನ ಸ್ವೀಕರಿಸುವರೆ) ಕರೆಯಿತ್ತ. ಯಾರೊಬ್ಬರೂ ಮುಂಬರದಿದ್ದಾಗ ಜಿವ್ಬಾದಾದಾ ಐದು ವೀಳ್ಯದೆಲೆಗಳನ್ನೆತ್ತಿ ದೌಲತ್‌ರಾವ್‌ನ ಕೈಗಿತ್ತ. ಇದು ನಿಝಾಮನ ವಿರುದ್ಧ, ಸಿಂಧಿಯಾನ ಸೇನೆಯ ನೆರವಿನಿಂದ ಯುದ್ಧ ಮಾಡಲು ಜಿವ್ಬಾದಾದಾ ಕೊಂಡ ನಿರ್ಣಯ ಸೂಚಿಸುತ್ತಿತ್ತು. ಜಿವ್ಬಾದಾದಾ ನೆರೆದಿದ್ದ ಸರದಾರರಿಗಿಂತ ಹೆಚ್ಚಿನ ಅನುಭವಕೊಂಡವನಿದ್ದ. ಆದರೂ ನಾನಾಫಡ್ನವೀಸ್ ಮೀರಜಿನ ಪರಶುರಾಮ್ ಭಾವು ಫಟವರ್ಧನನ್ನು ಸಂಯುಕ್ತ ಸೇನೆಯ ಸೇನಾಪತಿಯನ್ನಾಗಿ ನೇಮಿಸಿದ. ನಾನಾ ಫಡ್ನವೀಸ್‌ನ ಕಣ್ಣಿಗೆ ಆತ ಹೊಣೆಗಾರಿಕೆಯ, ಆಜ್ಞಾಪಾಲಕ ವ್ಯಕ್ತಿಯೊಬ್ಬನಾಗಿ ಕಾಣಬಂದಿದ್ದ.

ಆದರೆ ಜಿವ್ಬಾದಾದಾ ಸರ್ವಸಿದ್ಧತೆಗಳ ಸೂತ್ರಧಾರನಿದ್ದ. ೧೭೯೫ರ ಜನವರಿ ತಿಂಗಳಲ್ಲಿ ಮರಾಠಾಸೇನೆ, ಬೀದರ್‌ನಿಂದ ಹೊರಟಿದ್ದ, ಫ್ರೆಂಚ್ ತಜ್ಞ ರೇಮಂಡ್‌ನಿಂದ ತಯಾರಾದ ನಿಝಾಮನ ಶಕ್ತಿಶಾಲಿ ಸೇನೆಯೊಂದಿಗೆ ಕಾದಾಡಲು ದಾರಿಸಾಗಿತು.

ಪೇಶ್ವೆಯ ಸೇನೆಯಿಂದ ಆರಿಸಿ ತೆಗೆದ ಸೈನಿಕರ ತುಕಡಿಯೊಂದಿಗೆ ಮುಂದಾಗಿ ಸಾಗಿದ್ದ ಪರಶುರಾಮ್ ಭಾವು, ೧೭೯೫ರ ಮಾರ್ಚ್ ತಿಂಗಳ ೧೧ರಂದು ಜಿವ್ಬಾದಾದಾ ಬರುವ ಮುನ್ನವೇ ದೊಡ್ಡ ಸೋಲುಕೊಂಡ. ಅದೇ ರಾತ್ರಿ ಜಿವ್ಬಾದಾದಾ ಖರಾ ನದಿಯನ್ನು ದಾಟಿ ಶತ್ರು ಸೇನೆಯುಸರಬರಾಯಿ ಮತ್ತು ಕುಡಿಯುವ ನೀರಿಗೆ ತಡೆಹಾಕಿ ನಿಝಾಮ್ ಆಲಿಖಾನ್‌ನಿಗೆ ಯುದ್ಧದ ವಿನಾ ಅನ್ಯ ಮಾರ್ಗವಿಲ್ಲದಂತೆ ಮಾಡಿದ. ಜಿವ್ಬಾದಾದಾನ ಯೋಜನೆಯಂತೆ ಮರಾಠಾಸೇನೆ ೧೭೯೫ರ ಮಾರ್ಚ್ ತಿಂಗಳ ೧೨ರಂದು ಯುದ್ಧಕ್ಕೆ ಸಿದ್ಧವಾಯಿತು.

ಎರಡು ದಿನಗಳ ಗುಂಡಿನ ಸುರಿಮಳೆಯ ಬಳಿಕ ನಿಝಾಮನ ಸೇನೆ ಶರಣಾಗತಿ ಸ್ವೀಕರಿಸಿತು. ನಿಝಾಮ್ ಆಲಿ ತನ್ನ ರಾಜ್ಯದ ಸುಮಾರು ಅರುವತ್ತೈದು ಲಕ್ಷ ರೂಪಾಯಿಗಳಷ್ಟರ ಕಂದಾಯ ತರುವ ಭೂಭಾಗ ಬಿಟ್ಟು ಕೊಡಲು ಒಪ್ಪಿಕೊಳ್ಳಬೇಕಾಯಿತಷ್ಟೇ ಅಲ್ಲ, ಯುದ್ಧದಲ್ಲಾದ ನಷ್ಟ ಮತ್ತು ಬಾಕಿಯಿದ್ದ ಚೌಥಾಯಿಯ ಋಣ ಪರಿಹರಿಸಲು ಸುಮಾರು ಮೂರು ಕೋಟಿ ರೂಪಾಯಿಗಳನ್ನೂ ಕೊಡಬೇಕಾಯಿತು.

ಇದು ಪ್ರಮುಖರೆಲ್ಲರೂ ಸೇರಿ, ಏಕೋದ್ದೇಶಕೊಂಡು ಹೋರಾಡಿ ಗಳಿಸಿದ ಕೊನೆಯ ಮರಾಠಾ ಮಹಾವಿಜಯುವಿತ್ತು! ಮರಾಠಾ ಜನಮಾನಸದಲ್ಲಿ ಇದು ಪಾನಿಪತದಲ್ಲಿನ ದುರ್ದೈವಿ ಸೋಲಿನಷ್ಟೆ ಹೊಚ್ಚಹೊಸದಾಗುಳಿಯಿತು.

ಈ ವಿಜಯ ಜಿವ್ಬಾದಾದನನ್ನು ಕೀರ್ತಿಯ ಉತ್ತುಂಗ ಶಿಖರದತ್ತ ಕೊಂಡೊಯ್ದಿತು. ದಕ್ಷಿಣ ಮಹಾರಾಷ್ಟ್ರದಲ್ಲಿ ಜನರು ಆತನ ವೀರಗಾಥೆಗಳನ್ನು ಹಾಡಿ ಗೌರವಾದರ ತೋರುತ್ತಾರೆ. ಆತ ಪೂನಾಕ್ಕೆ ಮರಳಿ ಬಂದಾಗ ದರ್ಶನಾಭಿಲಾಷಿ ಜನತೆಯ ಉತ್ಸುಕತೆ

ಎಲ್ಲೆ ಮೀರಿದ್ದುದನ್ನು ಕಂಡು ಪೇಶ್ವೆ ಆತನಿಗೆ ಆನೆಯೇರುವ ಆಜ್ಞೆಯಿತ್ತ. ವ್ಯಾಪಾರಿಗಳು ಆತನ ಮತ್ತು ಪೇಶ್ವೆಯ ಮೇಲಕ್ಕೆ ಸ್ವರ್ಣಪುಷ್ಪಗಳ ಮಳೆಗರೆದರು. ಜಿವ್ಬಾದಾದನ ಅತಿಮಹತ್ತಿನ ಕಾರ್ಯದ ಗೌರವಾರ್ಥ ಪೇಶ್ವೆ ಶ್ರೀಮಂತ ಜಾಗೀರನ್ನೊಂದಿತ್ತು ಸನ್ಮಾನಿಸಲು ಬಯಸಿದ. ಸಿಂಧಿಯಾನ ಸೇವೆಯಲ್ಲಿದ್ದ ತಾನು ಆತನ ಪರವಾಗಿಯಷ್ಟೆ ಜಾಗೀರನ್ನು ಸ್ವೀಕರಿಸಬಲ್ಲೆನೆಂದು ಜಿವ್ಬಾದಾದಾ ನುಡಿದಾಗ ಕೊಡಬಯಸಿದ ಜಾಗೀರನ್ನು ದೌಲತ್‌ರಾವ್‌ನ ಕೈಗೀಯಲಾಯಿತು.

ಪೇಶ್ವೆ ನಾರಾಯಣ ರಾವ್‌ನ ಕೊಲೆಗೆ ಕಾರಣೀಭೂತರಾಗಿದ್ದ ರಾಘೋಬಾ ಮತ್ತು ಆನಂದಿಬಾಯಿಯವರ ಪುತ್ರ ಎರಡನೆಯ ಬಾಜೀರಾವ್ ಉತ್ತರಾಧಿಕಾರಿಯಾಗುವುದನ್ನು ನಾನಾ ಫಡ್ನವೀಸ್‌ನಂತೆ ಆತನೂ ಮನಃಪೂರ್ವಕ ವಿರೋಧಿಸಿದ್ದ. ಸವಾಯಿ ಮಾಧವರಾವ್ ಪ್ರಾಣೋತ್ಕ್ರಮಣದ ತುಸು ಮುನ್ನ ಜಿವ್ಬಾದಾದಾನನ್ನು ಬರಮಾಡಿಸಿ ಆತನಿಂದ ತನ್ನ ಮರಣಾನಂತರ ಕುಟುಂಬದ ವ್ಯಕ್ತಿಯೊಬ್ಬನನ್ನು ಉತ್ತರಾಧಿಕಾರಿಯಾಗಿ ನೇಮಿಸುವ ವಚನಕೊಂಡ. ಅದಾದ ಸ್ವಲ್ಪ ಕಾಲಾನಂತರ ತನ್ನ ದಿನಗಳ ಕೊನೆ ಕಾಣತೊಡಗಿದ ಜಿವ್ಬಾ ದಾದಾ ದೌಲತ್‌ರಾವ್‌ನಿಗೆ ಕರೆಕಳುಹಿದ; ಮತ್ತೆ ''ಪೇಶ್ವೆಯ ಗದ್ದುಗೆಯ ಮೇಲಕ್ಕೆ ಎರಡನೆಯ ಬಾಜಿರಾವ್‌ನನ್ನು ಕೂರಿಸಲಾರೆ''ನೆಂಬ ಆಶ್ವಾಸನೆಕೊಂಡ.

ದಯಾಳು ಜಿಬ್ಬಾ ದಾದಾ ಮನಮೆಚ್ಚುವ ವ್ಯಕ್ತಿತ್ವ ಕೊಂಡಿದ್ದ, ನಿರ್ಮಲ ಮನಸ್ಸಿನ, ಸುಶೀಲ ಸ್ವಭಾವದ, ಪ್ರತಿಷ್ಠಿತ ರಾಜಕಾರಣಿಯೊಬ್ಬನಿದ್ದ. ಕರ್ತವ್ಯ ಪಾಲಿಸುವಲ್ಲಿ ತನ್ನ ಸ್ವಾರ್ಥ ಕಡೆಗಣಿಸುತ್ತಿದ್ದ ಈತ ಅದಮ್ಯ ಸಾಹಸದ, ಅಪೂರ್ವ ಚಿತ್ತ ಸ್ಥೈರ್ಯದ, ಎಷ್ಟೊಂದೋ ಬಾರಿ ಸೈನಿಕರೊಂದಿಗೆ ಕಾಳಗದ ಅಗ್ರ ಭಾಗದಲ್ಲಿದ್ದು ಹೋರಾಡಿದ ಜನ್ಮಜಾತ ನಾಯಕನೊಬ್ಬನಿದ್ದ. ಆತ ಸೈನಿಕರೆಲ್ಲರ ಪ್ರೀತಿಯ, ಆದರ್ಶ ವ್ಯಕ್ತಿಯೊಬ್ಬನಿದ್ದಂತೆ ಯುರೋಪಿಯರಿಂದ ತರಬೇತುಗೊಂಡ ಸೇನೆಯ ಅಚ್ಚುಮೆಚ್ಚಿನ ಸೇನಾನಾಯಕನಿದ್ದ. ರಣಾಂಗಣದಲ್ಲಿ ಪರಾಕ್ರಮ ತೋರಿದವರಿಗೆ ಆತ ಯಥೇಷ್ಟ ಬಹುಮಾನವೀಯುತ್ತಿದ್ದ.

ವಿಭಿನ್ನ ಸಂದರ್ಭಗಳಲ್ಲಿ ಮಾಡಿದ್ದ ಮಹತ್ತಿನ ಕಾರ್ಯಗಳನ್ನು ಪ್ರಶಂಸಿಸಿ ತನಗೆ ಬಹುಮಾನವಾಗಿ ದೊರಕಿದ್ದ ಜಾಗೀರುಗಳ ಆದಾಯದಿಂದ ಎಷ್ಟೊಂದೋ ಶೂರ ಸೈನಿಕರ ವೇತನದ ಬಾಕಿಯಿದ್ದ ಮೊಬಲಗನ್ನು ಸಲ್ಲಿಸುತ್ತಿದ್ದ. ಆತ ಮರಾಠರ ಶ್ರೇಷ್ಠ ಸೇನಾನಿಯೊಬ್ಬನಿದ್ದ. ಬ್ರಿಟಿಷ್ ಇತಿಹಾಸಕಾರರೂ ಆತನನ್ನು ಪರಮೋಚ್ಚ ಯೋಧ ಮತ್ತು ಸೇನಾಪತಿಯೆಂದು ಹೊಗಳಿ ಗುಣಗಾನ ಮಾಡಿರುತ್ತಾರೆ. ಪಾನಿಪತ್‌ದಲ್ಲಿನ ದುರ್ದೈವಿ ಯುದ್ಧಾನಂತರ ಮರಾಠಾ ರಾಜ್ಯವನ್ನು ಉತ್ತರ ಭಾರತದತ್ತ ವಿಸ್ತರಿಸಲು ಹೆಚ್ಚು ಮಟ್ಟಿಗೆ ಆತನೊಬ್ಬನೇ ಕಾರಣೀಭೂತನಾಗಿದ್ದ. ಸಿಂಧಿಯಾನ ಸೇನೆಯ ವಿಜಯ, ದಿ ಬಿಯೋನ್ ಮತ್ತು ಪೆರ್ರೋನ್‌ರಿಂದ ಸಾಧ್ಯವಾಯಿತೆಂದು ಇತಿಹಾಸಕಾರರಿದ್ದ ಗ್ರಾಂಟ್ ಡಫ್, ಟೊಡ್, ಮಲ್ಲೇಸನ್ ಮತ್ತು ಕೀನಿ ನುಡಿದಿದ್ದರೂ ಅದರ ಶ್ರೇಯಸ್ಸು ಇವನೊಬ್ಬನಿಗೆ ಸಲ್ಲುತ್ತದೆ.

ಇವೆಲ್ಲವುಗಳಿಗಿಂತಲೂ ಮಿಗಿಲಾಗಿ ಆತ ತೀರಾ ನಿಗರ್ವಿ, ವಿನಯಶೀಲನಿದ್ದ. ರಣಾಂಗಣಗಳಿಂದ ಆತ ಬಂಧು-ಬಾಂಧವರಿಗೆ ಅನೇಕ ಪತ್ರಗಳನ್ನು ಬರೆದಿದ್ದ. ಆದರೆ ಅವುಗಳಲ್ಲೆಲ್ಲೂ ತನ್ನ ಪರಾಕ್ರಮದ ಉಲ್ಲೇಖಮಾಡಿದ್ದುದು ಕಾಣಬಂದಿಲ್ಲ. ತನ್ನ ಕಾಲದ

ಮರಾಠಾ ಇತಿಹಾಸದಲ್ಲಿ ಆತ ತನ್ನದೇ ಆದ ಚಿರಸ್ಥಾಯಿ ಸ್ಥಾನ ಗಳಿಸಿಕೊಂಡ.

ನಿಷ್ಠಾವಂತ ಶಿವಭಕ್ತನಿದ್ದ ಆತ ಹಲವೊಂದು ದೇವಸ್ಥಾನ, ಧರ್ಮಶಾಲೆಗಳನ್ನು ಕಟ್ಟಿಸಿ, ಅತಿ ದೊಡ್ಡ ಧನರಾಶಿಯನ್ನು ದಾನವಾಗಿತ್ತ. ರಜಪೂತಾನದ ದಂಡಯಾತ್ರೆಯ ನಂತರದ ದುರ್ದಿನಗಳಲ್ಲಿ ಒಮ್ಮೆ ಆತ ಪುಷ್ಕರದಲ್ಲಿ ಸುಮಾರು ಎರಡು ಲಕ್ಷ ರೂಪಾಯಿಗಳನ್ನು ದಾನದ ರೂಪದಲ್ಲಿ ವಿನಿಯೋಗಿಸಿದ. ಮತ್ತೆ ತನ್ನ ಶಿಬಿರದಲ್ಲಿ ಬಡವರಿಗೆ ಊಟ ಹಾಕಿದ.

ಆಕರ್ಷಕ ಮೈಕಟ್ಟುಕೊಂಡಿದ್ದರೂ ದೈಹಿಕ ಪರಿಶ್ರಮ ಆತನ ಅಂಗ ಸೌಷ್ಠವವನ್ನು ಜೀರ್ಣವಾಗಿಸಿತು. ಆತ ಸುಮಾರು ೧೭೫ ಕಾಳಗಗಳಲ್ಲಿ ಭಾಗವಹಿಸಿದ್ದನೆನ್ನುತ್ತಾರೆ. ತನ್ನ ಸಹೋದರ ಶಿವಾಜಿ ಗಣೇಶ ಕೇರ್ಕರ್ (ಶಿವ್ಬಾ ನಾನ್) ನಿಗೆ ದತ್ತಕ್ಕಿತ್ತಿದ್ದ ನಾರಾಯಣರಾವ್ ಬಕ್ಷಿ ಮತ್ತು ಯಶವಂತ ರಾವ್ ಭಾವು ಎಂಬೀ ಮಕ್ಕಳಿಬ್ಬರನ್ನು ಹಿಂದಕ್ಕೆ ಬಿಟ್ಟು ಜಿವ್ಬಾದಾದಾ ಕೇರ್ಕರ್ ೧೭೯೬ರ ಜನವರಿ ತಿಂಗಳ ೬ರಂದು, ೫೬ರವಯಸ್ಸಿನಲ್ಲಿ ತೀರಿಕೊಂಡ.

೯. ಲಕ್ಷ್ಮಣ ಅನಂತ (ಲಾಖ್ಬಾ ದಾದಾ ಲಾಡ್)

ಜಿವ್ಬಾ ದಾದಾ ಕೇರ್ಕರ್, ಲಖ್ಬಾದಾದಾ ಲಾಡ್ [೧೩], ಫ್ರಾನ್ಸ್ ಮೂಲದ ದಿ ಬಿಯೋನ್, ಗೋಪಾಲ ರಘುನಾಥ ಚಿಟ್ಣಿಸ್ ಎಂಬೀ ನಾಲ್ಕು ಮಹಾಸೇನಾನಿಗಳು ಮಹಾದ್ಜಿ ಸಿಂಧಿಯಾನ ಉತ್ತರ ಭಾರತದಲ್ಲಿನ ದಂಡಯಾತ್ರೆಗಳ ಯಶಸ್ಸಿಗೆ ಕಾರಣೀಭೂತರಾಗಿದ್ದರು. ಈತನ ಜೀವನದ ಎಷ್ಟೊಂದೋ ವಿಷಯಗಳನ್ನು ಜಿವ್ಬಾದಾದಾನ ಜೀವನೇತಿಹಾಸದಲ್ಲಿ ಉಲ್ಲೇಖಿಸಲಾಗಿದೆ. ಆಗ್ರಾದ [೧೪] ಕಸುವಿನ ರಕ್ಷಣೆಯ ಗೌರವ, ಶ್ರೇಯಸ್ಸು ಆತನೊಬ್ಬನದ್ದಿತ್ತು. ಆಗ್ರಾ ಕೋಟೆಯ ಸಂರಕ್ಷಣೆಗಾಗಿ ಮುಸಲ್ಮಾನ ಅಧಿಕಾರಿಯ ನೇತೃತ್ವದಲ್ಲಿ ಕಳುಹಿದ್ದ ಮೂರು ಅಶ್ವದಳಗಳು ಶತ್ರುಪಕ್ಷವನ್ನು ಸೇರಿಕೊಂಡಿದ್ದವು. ಸನ್ನಿವೇಶ ಅತಿ ನಾಜೂಕಿನದ್ದಿತ್ತು. ಕೋಟೆಗೆ ಮುತ್ತಿಗೆ ಹಾಕಿದ್ದ ಇಸ್ಮಾಯಿಲ್ ಬೇಗ್ ಮತ್ತು ಗುಲಾಮ್ ಖಾದರ್ ಎಂಬೀ ಶತ್ರುಗಳ ಸರದಾರರಿಬ್ಬರಲ್ಲಿನ ಮಾತ್ಸರ್ಯ ಕಾಲ ಹರಣಕ್ಕೆ ಕಾರಣವಾಯಿತು. ಈ ಅವಕಾಶ ಹೆಚ್ಚಿನ ಸೇನೆ ಹಾಗೂ ಸರಬರಾಯಿಗಳನ್ನೊದಗಿಸಿಕೊಳ್ಳುವರೆ ಅನಾಯಾಸ ಸಂಧಿಯನ್ನೊದಗಿಸಿತ್ತು. ಜಿವ್ಬಾದಾದಾ ಮತ್ತು ರಾಣಾಖಾನ್ (ಸಿಂಧಿಯಾನ ಇನ್ನೊಬ್ಬ ಸೇನಾನಿ) ಇಸ್ಮಾಯಿಲ್ ಬೇಗ್‌ನ ಮೇಲೆ ಅನಿರೀಕ್ಷಿತ ಹಲ್ಲೆ ಮಾಡಿದರು. ಶತ್ರುವನ್ನು ಹೊಡೆದೋಡಿಸುವ ತನಕ ಆತ ಪಟ್ಟುಹಿಡಿದು ಕೋಟೆಯ ಸಂರಕ್ಷಣೆ ಮಾಡಿದ. ಆತ ಲಖೇರೆಯಲ್ಲಿನ ತುಕೋಜಿ ಹೋಳ್ಕರ್‌ನ ಮೇಲಣ ವಿಜಯದಲ್ಲೂ ಭಾಗಕೊಂಡಿದ್ದ. ನಿಝಾಮನ ವಿರುದ್ಧ ಯುದ್ಧಕ್ಕಾಗಿ ದೌಲತ್‌ರಾವ್ ದಕ್ಷಿಣಕ್ಕೆ ಹೋದಾಗ ರಾಜ್ಯದ ಕಾರ್ಯ ನಿರ್ವಹಣೆಯ ಜವಾಬ್ದಾರಿಯನ್ನು ಜಗೋಬಾ ಬಾಪು ಮತ್ತು ಲಖ್ಬಾದಾದಾರಿಗೀಯಲಾಗಿದ್ದ ನಿಮಿತ್ತ ಆತ ಖರ್ಡಾದ ಕದನದಲ್ಲಿ ಭಾಗವಹಿಸಲಿಲ್ಲ. ವೈಧವ್ಯಕೊಂಡ ಮಹಾದ್ಜಿಸಿಂಧಿಯಾನ ರಾಣಿಯರು ಮತ್ತು ದೌಲತ್‌ರಾವ್ ಇವರ ನಡುವಣ ವಿವಾದ (ಇವರ ವಿವರಗಳನ್ನು ಈ ಮುಂದೆ ಕೊಡಲಾಗಿದೆ) ದಲ್ಲಿ ಈತ 'ಬಾಯಿ'ಯರ ಪರವಾಗಿ ಸಕ್ರಿಯ ಭಾಗವಹಿಸಿದ್ದ.

೧೦. ಬಂಡಾಯ ಮತ್ತು ಸಾರಸ್ವತರ ಕಗ್ಗೊಲೆ

ಸವಾಯಿ ಮಾಧವ ರಾವ್‌ನ ಮರಣಾನಂತರ, ಎರಡನೆಯ ಬಾಜಿರಾವ್ ಪೇಶ್ವೆಯ ಗದ್ದುಗೆಯನ್ನೇರುವ ಮುನ್ನ ಸತ್ತೆಗಾಗಿ ಒಂದಾದ ಮೇಲೊಂದರಂತೆ ಒಳಸಂಚು, ಭಯಾನಕ ಅಂತಃಕಲಹಗಳಾಗಿದ್ದವು. ಜುನ್ನರ್ ದುರ್ಗದ ಸೆರೆಮನೆಯಲ್ಲಿದ್ದ ಬಾಜಿರಾವ್ ದೌಲತ್‌ರಾವ್‌ನಿಗೆ ಕರೆಕಳುಹಿಸಿದ. ತನ್ನ ಬದುಕಿನ ಕೊನೆಯ ದಿನಗಳ ತನಕ ಸಿಂಧಿಯಾನ ಸಲಹೆಗಾರನಾಗಿದ್ದ ಜಿವ್ಬಾದಾದಾನ ಸೂಚನೆಯ ಮೇರೆಗೆ ದೌಲತ್‌ರಾವ್ ಬಾಜಿರಾವ್‌ನನ್ನು ಕಂಡು ಆತನಿಗೆ ತನ್ನ ಶಕ್ತಿಶಾಲಿ ಸೇನೆಯ ಬೆಂಬಲದ ಆಶ್ವಾಸನೆಯಿತ್ತ. ಅದು ಕ್ರಮೇಣ ಉತ್ತರಾಧಿಕಾರಿಯ ಸಮಸ್ಯೆಗೆ ಪರಿಹಾರವನ್ನೂ ಇತ್ತಿತು. ತುಕೋಜಿ ಹೋಳ್ಕರ್, ರಾಘೋಜಿ ಭೋಂಸ್ಲೆ ಮತ್ತು ಇನ್ನಿತರ ಸರದಾರರೊಂದಿಗೆ ಚಂಚಲ ಸ್ವಭಾವದ ದೌಲತ್‌ರಾವ್‌ನಿಗೂ ಕರೆಕಳುಹಿಸಿದ ನಾನಾ ಫಡ್ನವೀಸ್ ವೈಧವ್ಯಕೊಂಡಿದ್ದ ಪೇಶ್ವೆ ಮಾಧವರಾವ್‌ನ ಪತ್ನಿ ಯಶೋದಾಬಾಯಿ ಉತ್ತರಾಧಿಕಾರಿಯನ್ನು ದತ್ತಕ್ಕೆ ಕೊಳ್ಳುವುದಕ್ಕೆ ಅವರೆಲ್ಲರೂ ಒಪ್ಪುವಂತೆ ಮಾಡಿದ. ಆದರೆ ಬಾಳೋಬಾ ತಾತ್ಯಾ, ದೌಲತ್‌ರಾವ್ ನಾನಾನಿಗಿತ್ತ ಮಾತು ಮುರಿಯುವಂತೆ ಮಾಡಿದ. ಪರಶುರಾಮ ಭಾವು ಪಟವರ್ಧನನೊಂದಿಗೆ ವಿಚಾರ ವಿನಿಮಯ ಮಾಡಿದ ನಾನಾ, ದೌಲತ್‌ರಾವ್‌ನ ವಿರೋಧದ ನಿಮಿತ್ತ ದತ್ತಕ್ಕೆ ಸಂಬಂಧಿಸಿದ್ದ ತನ್ನ ಯೋಜನೆ ಯಶಸ್ವಿಯಾಗದೆಂಬುದನ್ನರಿತುಕೊಂಡ. ನಾನಾನ ಸಲಹೆಯ ಮೇರೆಗೆ ಪುರುಷೋತ್ತಮ ಭಾವು ಜುನ್ನರಿಗೆ ಹೋದ; ನಾನಾನ ಉದ್ದೇಶದ ಕುರಿತಾಗಿ ಪೂರ್ಣ ಆಶ್ವಾಸನೆಯನ್ನಿತ್ತು ಬಾಜಿರಾವ್‌ನನ್ನು ಪೂನಾಕ್ಕೆ ಕರೆದುತಂದ.

ಆಶ್ಚರ್ಯವೆನ್ನುವಂತೆ, ಇಷ್ಟೊಂದು ಕಾಲ ಬಾಜಿರಾವ್‌ನ ಸಮರ್ಥಕನಿದ್ದ ಬಾಳೋಬಾ ತಾತ್ಯಾ, ಇದು ಉತ್ತರಾಧಿಕಾರಿಯ ಪದ ಕೇವಲ ತನ್ನಿಂದಾಗಿ ಪ್ರಾಪ್ತವಾಯಿತೆಂಬುದರ ಅರಿವನ್ನಿತ್ತು ಬಾಜಿರಾವ್ ತನಗೆ ಚಿರಋಣಿಯಾಗಿರಬೇಕಿರುವುದರ ಅರಿವೀಯಲಾಗಿ ಹಾಗೆಯೇ ರಾಜ್ಯದ ಸೂತ್ರಗಳನ್ನು ತನ್ನ ಕೈಗಳಿಗೆಕೊಳ್ಳಲಾಗಿ ಮತ್ತು ನಾನಾ ಹೂಡಿದ್ದ ಯೋಜನೆಯೊಂದಾಗಿರಬೇಕೆಂದು ಭಾವಿಸಿದ. ಆತ ಯಶೋದಾಬಾಯಿ ಬಾಜಿರಾವ್‌ನ ಸಹೋದರ ಚಿಮ್ನಾಜಿ ಅಪ್ಪನನ್ನು ದತ್ತಕ್ಕೆ ಕೊಂಡು ರಾಜ್ಯಾಧಿಕಾರ ಪೇಶ್ವೆ ಮನೆತನದಲ್ಲುಳಿಯುವಂತೆ ಮತ್ತು ಅದಕ್ಕೆ ವಿರೋಧ ತಲೆಯೆತ್ತದಂತೆ ಮಾಡುವ ಚಾಕಚಕ್ಯತೆಯ ಯೋಜನೆ ಹೂಡಿದ. ದೌಲತ್‌ರಾವ್‌ನ ಸೇನೆ ಕಂಡು ಬೆದರಿದ ನಾನಾ ರಾಯಗಡಕ್ಕೆ ಪಲಾಯನ ಮಾಡಿದ. ಬಾಳೋಬಾ ತಾತ್ಯಾ ಪರಶುರಾಮ ಭಾವುವನ್ನು ಒಲಿಸಿಕೊಂಡ. ಚಿಮ್ನಾಜಿ ಅಪ್ಪನನ್ನು ದತ್ತಕ್ಕೆ ಕೊಳ್ಳುವರೆ ಯಶೋದಾಬಾಯಿಯಿಂದ ಒಪ್ಪಿಗೆಕೊಂಡು ೧೭೯೬ರ ಮೇ ತಿಂಗಳ ೨೬ರಂದು ಆತನನ್ನು ಗದ್ದುಗೆಯ ಮೇಲಕ್ಕೆ ಕುಳ್ಳಿರಿಸಿದ. ಮರಾಠಾ ರಾಜ್ಯದ ಆಡಳಿತ ನಡೆಸುವಲ್ಲಿ ಭಾವುವಿಗೆ, ಬಾಳೋಬಾ ತಾತ್ಯಾ, ಆತನ ಸೋದರಮಾವನ ಮಗ ಧೊಂಡೋಬಾ ದಾದಾ ಪಾಗ್ನಿಸ್, ಸದಾಶಿವ ಮಲ್ಹಾರ್ ಮತ್ತು ನಾರಾಯಣರಾವ್ ಬಕ್ಷಿ ಸಹಾಯ ಮಾಡಿದರು.

ಮರಾಠಾ ರಾಜ್ಯದ ಹಿತದ ದೃಷ್ಟಿಯಿಂದ, ಪ್ರಭಾವ ಶಾಲಿ ರಾಜಕಾರಣಿಗಳಿದ್ದ ನಾನಾ ಮತ್ತು ಬಾಳೋಬಾ ತಾತ್ಯಾ ಇ[illegible] ನಡುವಣ ಮನಸ್ತಾಪ ತೊಡೆದು

ಹಾಕಬೇಕಿರುವುದರ ಔಚಿತ್ಯ ಕಂಡ ಭಾವು ನಾನಾನಿಗೆ ತನ್ನೊಬ್ಬ ಅಧಿಕಾರಿಯೊಂದಿಗೆ ಪತ್ರವೊಂದನ್ನು ಕಳುಹಿಸಿದ. ಪತ್ರಕೊಂಡ ಅಧಿಕಾರಿ ನಾಲ್ಕು ಸಾವಿರ ಕಾಲ್ದಳದ, ಐನೂರು ಕುದುರೆಗಳ ಸೈನ್ಯದೊಂದಿಗೆ ಸತಾರಾಕ್ಕೆ ತೆರಳಿದ. ಹೊಸ ಸರಕಾರದಲ್ಲಿನ ನಾನಾನ ಸಮರ್ಥಕರು ಭಾವುವಿನ ಉದ್ದೇಶದ ಅಪಾರ್ಥಮಾಡಿಕೊಂಡರು. ಅವರಲ್ಲಿನ ಬಾಬುರಾವ್ ಫಡ್ಕೆ ನಾನಾನಿಗೆ ತನ್ನ ಸುರಕ್ಷಿತೆಯ ವ್ಯವಸ್ಥೆ ಮಾಡಿಕೊಳ್ಳುವರೆ ಎಚ್ಚರಿಕೆಯಿತ್ತ. ಭಾವುವಿನ ದೂತನ ಆಗಮನದ ಮುನ್ನವೇ ನಾನಾ ಸತಾರಾದಿಂದ ಕೊಂಕಣದಲ್ಲಿನ ಮೊಹಾಡಿಗೆ ಪಲಾಯನ ಮಾಡಿದ. ಇದು ನಾನಾ ಮತ್ತು ಭಾವುವಿನ ನಡುವಣ ಮನಸ್ತಾಪಕ್ಕೆ ಕಾರಣವಾಯಿತು.

ಕಾರಸ್ಥಾನ ನಡೆಸುವಲ್ಲಿ ಚತುರನಿದ್ದ ನಾನಾನ ಮತ್ತು ಬಾಳೋಬಾ ತಾತ್ಯಾರ ನಡುವೆ ಸಾದೃಶ್ಯವಿಲ್ಲವಿತ್ತು. ಮೊಹಾಡಿಗೆ ಬಂದಿದ್ದ ನಾನಾ, ಸತ್ತೆಗೆ ಬರಲಿರುವ ಏಕಮಾತ್ರ ಮಾರ್ಗ ಅದು ಬಾಜಿರಾವ್‌ನಿಗೆ ಸಮರ್ಥನೆಯೊಯುವುದರಲ್ಲಷ್ಟೆ ಇರುವುದನ್ನರಿತು ಯಾರಿಗೂ ತಿಳಿಯದಂತೆ ಆತನೊಂದಿಗೆ ಸಂಪರ್ಕಸಾಧಿಸಿದ. ತನ್ನ ಹಳೆಯ ಮಿತ್ರರಿದ್ದ ತುಕೋಜಿ ಹೋಳ್ಕರ್, ರಾಘೋಜಿಭೊಂಸ್ಲೆ ಇವರನ್ನು ತನ್ನೆಡೆಗೆ ಒಲಿಸಿಕೊಂಡ. ನಿಝಾಮನೊಂದಿಗೆ ಸಂಧಿ ಮಾಡಿ ಆತನ ಬೆಂಬಲಕ್ಕೆ ಬದಲಾಗಿ ಖರ್ಡಾದ ಕದನದ ಬಳಿಕ ಸಂಪಾದಿಸಿದ್ದ ಭೂಮಿಯನ್ನು ಮರಳಿಸುವರೆ ಒಪ್ಪಿಕೊಂಡ. ಬ್ರಿಟಿಷ್‌ರೊಂದಿಗೆ ಸಂಧಾನ ನಡೆಸಿ ಅವರ ಬೆಂಬಲ ಸಿಗುವಂತೆ ಮಾಡಿದ; ಆದರೂ ಬಾಳೋಬಾ ತಾತ್ಯಾನನ್ನು ದೌಲತ್‌ರಾವ್‌ನಿಂದ ದೂರಕ್ಕಿರಿಸದ ವಿನಹಾ ತಾನು ವಿಜಯಿಯಾಗಲಾರೆನೆಂದು ಆತ ಭಾವಿಸಿದ್ದ. ದೌಲತ್‌ರಾವ್ ಉಚ್ಚವರ್ಗಕ್ಕೆ ಸೇರಿದ್ದ, ಮಹಾತ್ವಾಕಾಂಕ್ಷಿ ಸರದಾರ, ಸರ್ಝೆರಾವ್‌ನ ಸ್ವುರದ್ರೂಪಿ ಮಗಳು ಬೈಝಾಬಾಯಿಯೊಂದಿಗೆ ವಿವಾಹ ಮಾಡಿಕೊಳ್ಳಬೇಕೆದು ಎಷ್ಟೊಂದೋ ದಿನಗಳಿಂದ ಯೋಚಿಸಿದ್ದ. ತನ್ನ ಮಗಳನ್ನು ವಿವಾಹದಲ್ಲಿಯುುವರೆ ಒಪ್ಪಿಕೊಳ್ಳುವಂತೆ ಸರ್ಝೆರಾವ್‌ನನ್ನೊತ್ತರಿಸಿದ ನಾನಾ ದೌಲತ್‌ರಾವ್ ಸಿಂಧಿಯಾನನ್ನು ತನ್ನ ಉದ್ದೇಶ ಸಾಧಿಸುವರೆ ಒಲಿಸಿಕೊಂಡ.

ನಾನಾ ಗುಟ್ಟಿನಿಂದ ತನ್ನ ಯೋಜನೆಗೆ ಆಕಾರವಿತ್ತನಾದರೂ, ಬಾಳೋಬಾ ತಾತ್ಯಾ ಅವರ ಸುಳಿವುಕೊಂಡ. ಪೂನಾದಲ್ಲಿನ ನಾನಾನ ಬೆಂಬಲಿಗರನ್ನು ಬಂಧಿಸಲಾಯಿತು. ಬಾಜಿರಾವ್ ಮತ್ತು ಸರ್ಝೆರಾವ್ ಇವರಿಬ್ಬರನ್ನೂ ಬಂಧಿಸಿ ಉತ್ತರೆಗೆ ಸಾಗುವ ಸಿಂಧಿಯಾನ ಸೇನೆಯೊಂದಿಗೆ ರವಾನಿಸಲಾಯಿತು. ತಮ್ಮ ಪ್ರಯಾಣದ ಕಾಲ ಬಾಜಿರಾವ್ ಸರ್ಝೆರಾವ್‌ನೊಂದಿಗೆ ಕರಾರೊಂದನ್ನು ಮಾಡಿದ. ಈ ಕರಾರಿನ ಮೇರೆಗೆ ಸರ್ಝೆರಾವ್ ತನ್ನ ಮಗಳನ್ನು ದೌಲತ್‌ರಾವ್‌ನಿಗೀಯಬೇಕಿತ್ತು. ಮತ್ತು ಆತನ ವ್ಯವಹಾರವನ್ನು ತಾನು ನೋಡಿಕೊಳ್ಳಬೇಕಾಗಿತ್ತು. ಇದರ ಹೊರತು ದೌಲತ್‌ರಾವ್‌ನಿಗೆ ಒಂದೂಕಾಲು ಕೋಟಿ ರೂಪಾಯಿ ನಗದು, ತೊಂಭತ್ತೈದು ಲಕ್ಷ ರೂಪಾಯಿಗಳ ಉತ್ಪನ್ನದ ಭೂಖಂಡವನ್ನೀಯಬೇಕಿತ್ತು.

ಸೇನಾಧಿಪತಿಯ ಮನ ಒಲಿಸಿಕೊಂಡ ಬಾಜಿರಾವ್ ತನ್ನ ಅಸ್ವಸ್ಥತೆಯ ಕಾರಣವೊಡ್ಡಿ ಸೇನೆಯನ್ನು ಪ್ರವರಾ ನದಿಯ ತೀರದಲ್ಲಿ ತಂಬುಹಾಕುವಂತೆ ಮಾಡಿದ.

ಉಭಯ ಪಕ್ಷಗಳು ದ್ಧಕ್ಕೆ ತಯಾರಿ ಮಾಡತೊಡಗಿದವು. ೧೭೯೬ರ ಅಕ್ಟೋಬರ್ ತಿಂಗಳ ೨೭ರ ರಾತ್ರಿ ದೌಲತ್‌ರಾವ್ ಹಠಾತ್ತಾಗಿ ಬಾಳೋಬಾತಾತ್ಯಾ, ಧೊಂಡೋಬಾ ದಾದಾ ಪಾಗ್ನಿಸ್, ಸದಾಶಿವ ಮಲ್ಹಾರ್ ಮತ್ತು ಸೇರಿ ನಾರಾಯಣರಾವ್ ಬಕ್ಷಿ-ಇವರನ್ನು ಬಂಧಿಸಿದ. ಭಾವು ಚಿಮ್ನಾಜಿಯೊಂದಿಗೆ ಪಲಾಯನ ಮಾಡಿದರೂ ನಾನಾನ ಸೇನೆ ಅವರಿಬ್ಬರನ್ನು ಸೆರೆಹಿಡಿಯಿತು. ಯಶೋದಾಬಾಯಿ ಚಿಮ್ನಾಜಿಯನ್ನು ದತ್ತಕ್ಕೆಕೊಂಡುದು ಬಂಧಕವಲ್ಲವೆಂದು ಸಾರಲಾಯಿತು. ೧೭೯೬ರ ಡಿಸೆಂಬರ್ ೨೭ರಂದು ಎರಡನೆಯ ಬಾಜಿರಾವ್‌ನನ್ನು ಪೇಶ್ವೆಯ ಗದ್ದುಗೆಯ ಮೇಲೆ ಕುಳ್ಳಿರಿಸಲಾಯಿತು.

ಇದರಿಂದ ನಾರಾಯಣರಾವ್ ಬಕ್ಷಿಯಲ್ಲಿ ನಿಷ್ಠೆಯಿಟ್ಟ ದೌಲತ್‌ರಾವ್‌ನ ಸೇನೆಯ ಮೇಲಕ್ಕೆ ಗಂಭೀರ ಪರಿಣಾಮವಾಯಿತು. ಯುರೋಪಿಯನರಿಂದ ತರಬೇತಾದ ಸೈನಿಕರೊಂದಿಗೆ ಇನ್ನುಳಿದ ಸೈನಿಕರೂ ಸೇರಿ ನಾರಾಯಣ ರಾವ್‌ನ ಬಿಡುಗಡೆಗಾಗಿ ಪಟ್ಟುಹಿಡಿದರು. ನಾರಾಯಣ ರಾವ್‌ನ ಬಿಡುಗಡೆ ಮಾಡಿ ಆತನನ್ನು ಗದ್ದುಗೆಗೇರಿಸಲಾಯಿತು. ಮಾತ್ರ ಸರ್ಝೆರಾವ್‌ನ ಪ್ರಭಾವಕ್ಕೊಳಗಾಗಿದ್ದ ದೌಲತ್‌ರಾವ್ ಬಾಳೋಬಾತಾತ್ಯಾನ ಬಿಡುಗಡೆಯನ್ನು ತಡೆಹಿಡಿದ. ನಾನಾನ ಕುರಿತು ಸಂಶಯಕೊಂಡಿದ್ದ ಬಾಜಿರಾವ್ ಆತನನ್ನು ಬಂಧಿಸುವ ನಿರ್ಧಾರಮಾಡಿದ. ನಾನಾನನ್ನು ಸೆರೆಹಿಡಿದು ಸಿಂಧಿಯಾನ ಪ್ರಾಂತದಲ್ಲಿನ ಅಹಮ್ಮದ್‌ನಗರ ದುರ್ಗದಲ್ಲಿಡಲಾಯಿತು. ಬಂದಿಖಾನೆಯಲ್ಲಿನ ಸುಮಾರು ಒಂದು ವರ್ಷದ ಕಾಲಾವಧಿಯೊಳಕ್ಕೆ ಆತ ತೀರಿಕೊಂಡ.

ಮಹಾದ್ಜಿಯ ಕಾಲಾನಂತರ, ವೈಧವ್ಯಕೊಂಡಿದ್ದ ಮೂವರು ರಾಣಿಗಳಲ್ಲಿ ಕಿರಿಯವಳಿದ್ದ ಭಾಗೀರಥಿ ಬಾಯಿ ದೌಲತ್‌ರಾವ್‌ನಲ್ಲಿ ನಿಷ್ಠೆಯಿಟ್ಟವಳಿದ್ದಳು. 'ಬಾಯಿ' ಎಂದಾಗಿ ಕರೆಯಲ್ಪಡುತ್ತಿದ್ದ ಲಕ್ಷ್ಮೀಬಾಯಿ ಮತ್ತು ಯಮುನಾಬಾಯಿ ಇವರಿಬ್ಬರು ಉಜ್ಜಯಿನಿಯಲ್ಲುಳಿದುಕೊಂಡಿದ್ದರು. ಅವರು ಬೈಜಾಬಾಯಿಯೊಂದಿಗಿನ ದೌಲತ್‌ರಾವ್‌ನ ವಿವಾಹಕ್ಕೆ ಪ್ರತಿರೋಧ ತೋರಿದ್ದರು. ದೌಲತ್‌ರಾವ್ ಅಫೀಮು, ಮದ್ಯಗಳ ದಾಸನಾಗುವರೆ ಸರ್ಝೆರಾವ್ ಉತ್ತೇಜನೆಯಿತ್ತ; ಆತನಿಂದ ಪ್ರಭಾವಿತನಾದ ದೌಲತ್‌ರಾವ್ 'ಬಾಯಿ'ರನ್ನು ಪೀಡಿಸತೊಡಗಿದ. ೧೭೯೭ರ ವರ್ಷಾಂತ್ಯದ ಹೊತ್ತಿಗೆ 'ಬಾಯಿ'ಯರು ತಮ್ಮ ಅಪಾರ ಬೆಂಬಲಿಗರೊಂದಿಗೆ ಪೂನಾದ ಸಮೀಪದಲ್ಲಿನ ವಣವಾಡಿಯಲ್ಲಿ ತಂಗಿದ್ದ ದೌಲತ್‌ರಾವ್‌ನನ್ನು ಕಂಡು ತಮ್ಮ ಜೀವನಕ್ಕೆ ತಕ್ಕ ವ್ಯವಸ್ಥೆ ಮಾಡುವಂತೆ ಒತ್ತಾಯಿಸಿದರು. ದೌಲತ್‌ರಾವ್ ಅವರ ಅಪೇಕ್ಷೆ ಪೂರೈಸುವ ಸೋಗು ಹಾಕಿದ.

ಸರ್ಝೆರಾವ್‌ನ ಸಲಹೆಯ ಮೇರೆಗೆ ಸಿಂಧಿಯಾ, 'ಬಾಯಿ'ಯರಿಬ್ಬರನ್ನು ಬಂಧಿಸಿ ಅಹಮ್ಮದ್ ನಗರ ದುರ್ಗದಲ್ಲಿಡುವ ಯೋಜನೆ ಮಾಡಿದ. ಬುರ್ಹಾನ್‌ಪುರದಲ್ಲಿ ವಾಸ್ತವ್ಯಕ್ಕೆ ತಕ್ಕ ವ್ಯವಸ್ಥೆ ಮಾಡಲಾಗಿದ್ದು ಅಲ್ಲಿಗೆ ತಮ್ಮನ್ನು ಕೊಂಡೊಯ್ಯಲಾಗುವುದೆಂಬುದನ್ನು 'ಬಾಯಿ'ಯರಿಬ್ಬರಿಗೆ ತಿಳಿಸಲಾಯಿತು. ಆದರೆ ವಾಸ್ತವಿಕವಾಗಿ ಅಹಮ್ಮದ್ ನಗರದ ಬಂದಿಖಾನೆಗೆ ಕೊಂಡೊಯ್ಯಲಾಗುವುದನ್ನರಿತ ಅವರು ಬಿಡುಗಡೆಗಾಗಿ ಜಿವ್ಬಾದಾದನ ಮಗ ನಾರಾಯಣರಾವ್ ಬಕ್ಷಿಗೆ ಮೊರೆಯಿಟ್ಟರು. ನಾರಾಯಣ ರಾವ್‌ನ ಮನಸ್ಸು ಕರಗಿತು. ಸ್ವತಃ

ಬಿಕ್ಕಟ್ಟಿಗೊಳಗಾಗಿದ್ದ ಆತ ಅವರಿಗೆ ಸಾಧ್ಯವಾದಷ್ಟು ಪ್ರಯತ್ನ ಮಾಡುವ ಆಶ್ವಾಸನೆಯನ್ನಷ್ಟೆ ಇತ್ತ.

'ಬಾಯಿ' ಯರಿಬ್ಬರನ್ನು ಬುರ್ಹಾನ್‌ಪುರಕ್ಕೆ ಕೊಂಡೊಯ್ಯಲೆಂದು ಪಾಲಕಿಗಳನ್ನು ತಂದಾಗ ಅವರಿಬ್ಬರೂ ಕಸಿದುಕೊಂಡಿದ್ದ ತಮ್ಮ ಆಭರಣ, ಸೊತ್ತುಗಳನ್ನು ಹಿಂದಿರುಗಿಸಿದ ಬಳಿಕವೇ ಮನೆಯಿಂದ ಹೊರಕ್ಕೆ ಬೀಳುವೆವೆಂದರು. ಸರ್ಜೆರಾವ್‌ನ ಕುರಿತಾಗಿ ವಿನ್ಸೆಂಟ್ ಸ್ಮಿತ್ ಹೀಗೆ ನುಡಿದಿರುತ್ತಾನೆ [೧೫].

''ಅತಿ ನಿಕೃಷ್ಟ ದಗಾಕೋರನೊಬ್ಬ.... ಮರಣದಂಡನೆಯ ನವ ನವೀನ ವಿಧಾನಗಳನ್ನು ಯೋಜಿಸುವಲ್ಲಿ ಮತ್ತು ಅಸಹಾಯ ನಾಗರಿಕರನ್ನು ಅತಿಹೇಯ ಚಿತ್ರಹಿಂಸೆಗೊಳಗಾಗಿಸಿ ಸುಲಿಯುವಲ್ಲಿ ಪೈಶಾಚಿಕ ಆನಂದ ಕೊಳ್ಳುತ್ತಿದ್ದ...''

'ಬಾಯಿ' ಯವರ ಮನೆ ಹೊಕ್ಕು, ಹೊಡೆ ಬಡಿದು ಅವರನ್ನು ಹೊರಕ್ಕೆಳೆಯಲಾಯಿತು; ಅಹಮ್ಮದ್‌ನಗರಕ್ಕೆ ಕೊಂಡೊಯ್ದು ಅಲ್ಲಿ ಅವರನ್ನು ಬಂಧನದಲ್ಲಿಡುವಂತೆ ಸರ್ಜೆರಾವ್ ಅಂಗರಕ್ಷಕರಿಗೆ ಗುಪ್ತ ಆದೇಶವಿತ್ತ.

ಅಂಗರಕ್ಷರ ಪಡೆ ಅಹಮ್ಮದ್ ನಗರ ಸಮೀಪಿಸುತ್ತಲೇ, ಮುಝಪ್ಪರ್ ಖಾನ್ ಹೆಸರಿನ ಸ್ಥಾನೀಯ ಪಠಾಣ್ ಅಧಿಕಾರಿಯೊಬ್ಬ ಪಡೆಯ ನಾಯಕನ ಮೇಲೆ ಹಲ್ಲೆ ಮಾಡಿ 'ಬಾಯಿ' ಯರ ಸೆರೆ ಬಿಡಿಸಿದ. ಬಂಡಾಯ ಹೂಡಿದವರ ಪ್ರತಿ ಸಿಂಧಿಯಾನ ಸೇನೆ ಮುನ್ನಡೆದು ಬಂದಾಗ, ಮುಝಪ್ಪರ್ ಖಾನ್ 'ಬಾಯಿ' ಯರನ್ನು ಆನೆಯ ಮೇಲಕ್ಕೆ ಕುಳ್ಳಿರಿಸಿ ಸೇನೆಯ ಮುಂಭಾಗಕ್ಕೆ ತಂದ. ಸಮಗ್ರ ಸೇನೆ ಅವರನ್ನು ವಂದಿಸಿ ಯುದ್ಧ ಮಾಡಲು ನಕಾರವಿತ್ತಿತು. ದೌಲತ್‌ರಾವ್ ಇದೆಲ್ಲ ನಾರಾಯಣರಾವ್‌ನ ಆಜ್ಞೆಯ ಮೇರೆಗೆ ಘಟಿಸಿರಬೇಕೆಂದು ಭಾವಿಸಿದ. ನಾರಾಯಣರಾವ್‌ನಿಗೆ ಒಲ್ಲದ ಮನಸ್ಸಿನಿಂದ ಸಿಂಧಿಯಾನ ವಿರುದ್ಧ ಕಾದಾಡಬೇಕಾಯಿತು.

ಇದು ಅತಿ ದೊಡ್ಡ ಪ್ರಮಾಣದ ಅಂತರ್ಯುದ್ಧಕ್ಕೆ ಕಾರಣವಾಯಿತು. ಮಹಾದ್ಜಿಸಿಂಧಿಯಾನಿಗೆ ಋಣಿಗಳಾಗಿದ್ದ ಹೆಚ್ಚಿನ ಸಾರಸ್ವತರು ಮತ್ತೆ ಯುರೋಪಿಯನ್ ಅಧಿಕಾರಿಗಳಲ್ಲಿನ ಕೆಲವರು 'ಬಾಯಿಯರ' ಉದ್ದೇಶದ ಪೂರ್ತಿಗಾಗಿ ಒಂದುಗೂಡಿದರು. ಉತ್ತರೆಯಲ್ಲಿನ ಸಿಂಧಿಯಾನ ಕಾರ್ಯನಿರ್ವಾಹಕನಿದ್ದ ಜಗೋಬಾ ಬಾಪು ಮತ್ತು ಲಖ್ಬಾದಾದಾ 'ಬಾಯಿ' ಯರ ಸಹಾಯಕ್ಕಾಗಿ ಯಶವಂತ ರಾವ್‌ನ ನೇತೃತ್ವದಲ್ಲಿ ೨೫,೦೦೦ಸೈನಿಕರನ್ನು ಕಳುಹಿಸಿದರು. ಸರ್ಜೆರಾವ್ ಸೋಲುಕೊಂಡ. ಆತ ವಣವಾಡಿಯಲ್ಲಿ ತಂಗಿದ್ದ ದೌಲತ್‌ರಾವ್ ನಿದ್ದೆಡೆಗೆ ಪಲಾಯನ ಮಾಡಿದ.

ಉತ್ತರೆಯಲ್ಲಿ ಪ್ರಧಾನ ಸೇನಾಧಿಪತಿ, ಉಪಸೇನಾಧಿಪತಿಗಳಾಗಿದ್ದ ಜಗೋಬಾ ಬಾಪು ಮತ್ತು ಲಖ್ಬಾ ದಾದಾರನ್ನು ದೌಲತ್‌ರಾವ್ ಸಿಂಧಿಯಾ ಸೇವಾನಿವೃತ್ತರನ್ನಾಗಿ ಮಾಡಿದ. ಅಂಬಾಜಿ ಇಂಗ್ಲೆಯ ಕೈಗೆ ಉತ್ತರೆಯ ಕಾರ್ಯಭಾರವನ್ನಿತ್ತು ಆತನನ್ನು ದಿ ಬಿಯೊನ್‌ನೊಂದಿಗೆ ಕಳುಹಿಸಿದ. ಲಖ್ಬಾ ದಾದಾ ಉದಯಪುರದ ರಾಣಾನನ್ನು ತನ್ನತ್ತ ಒಲಿಸಿಕೊಂಡ. ಅಂಬಾಜಿ ಇಂಗ್ಲೆ ಮೇವಾರದ ಎಲ್ಲೊಬ್ಬ ಸಾರಸ್ವತ ಅಧಿಕಾರಿಗಳನ್ನು

ದೂರಕ್ಕೆ ತಳ್ಳಿಸಿದ. ಪ್ರಮುಖ ಅಧಿಕಾರಿಗಳು ಮೊದಲಿಗೆ ಗುಟ್ಟಿನಲ್ಲಿ ಮತ್ತೆ ಜಗಜ್ಜಾಹೀರಾಗಿ ಲಖ್ವಾ ದಾದಾನಿಗೆ ಬೆಂಬಲವನ್ನಿತ್ತರು.

ಅಧಿಕಾಂಶ ರಜಪೂತ ಅರಸರು ಜಗೋಬಾ ಬಾಪು ಹಾಗೂ ಲಖ್ವಾ ದಾದಾರಿಗೆ ಬೆಂಬಲವೀಯುವರೆ ನಿರ್ಧರಿಸಿದರು. ಕೆಲವೊಬ್ಬರು ಅಂಬಾಜಿ ಇಂಗ್ಲೆಯನ್ನು ಸೇರಿಕೊಂಡರು. ಹಿಂದುಸ್ಥಾನದಲ್ಲಿ ಮತ್ತೆ ಆಂತರಿಕ ಯುದ್ಧಕ್ಕಾರಂಭವಾಯಿತು.

ದೌಲತ್‌ರಾವ್ ಭಾರೀ ದೊಡ್ಡ ಸಂಕಟಕ್ಕೊಳಗಾದಾಗ ಗ್ವಾಲಿಯರ್‌ನಲ್ಲಿದ್ದ ಬ್ರಿಟಿಷ್ ರೆಸಿಡೆಂಟ್, ಕರ್ನಲ್ ಪಾಮರ್ ಸಲಹೆಗಾರನಂತೆ ವರ್ತಿಸಿ ಸರ್ಜೆರಾವ್‌ನ ಅತ್ಯಾಚಾರವನ್ನು ಸಿಂಧಿಯಾನ ಲಕ್ಷ್ಯಕ್ಕೆ ತಂದ. ಮತ್ತೆ ಆತನನ್ನು ಅಧಿಕಾರದಿಂದ ಮುಕ್ತನನ್ನಾಗಿಸುವ ಸಲಹೆಯಿತ್ತ. ಆ ಹೊತ್ತಿಗೆ ದೌಲತ್‌ರಾವ್ ತನ್ನೆಲ್ಲ ಸಂಕಟಗಳಿಗೆ ಸರ್ಜೆರಾವ್ ಕಾರಣೀಭೂತನಾಗಿದ್ದನೆಂಬುದರ ಅರಿವುಕೊಂಡಿದ್ದ. ಆತನ ಆದೇಶದ ಮೇರೆಗೆ ಮೈಕೆಲ್ ಫಿಲೋಸ್‌ನ ಮಗ ಸರ್ಜೆರಾವ್‌ನನ್ನು ಸೆರೆಹಿಡಿದ. ಸರ್ಜೆರಾವ್‌ನನ್ನು ಆತನ ನಾಲ್ವರು ಸಂಗಡಿಗರೊಂದಿಗೆ ಹಗ್ಗದಿಂದ ಕಟ್ಟಿ, ಕೋವಿಯ ಹಿಡಿಯಿಂದ ಹೊಡೆಯುತ್ತಾ, ತಂಗಿದ್ದ ಸೇನೆಯ ಅಂಗಡಿ ಬೀದಿಗಳಲ್ಲಿ ಮೆರವಣಿಗೆಕೊಂಡು ಹೋದರು. ಅಹಮ್ಮದ್ ನಗರ ಕೋಟೆಯಲ್ಲಿ ಬಂಧಿಸಲ್ಪಟ್ಟಿದ್ದ ನಾನಾ ಫಡ್ನವೀಸ್‌ನನ್ನು ದೌಲತ್‌ರಾವ್ ಬಿಡುಗಡೆ ಮಾಡಿದ. ಮತ್ತೆ ಪೂನಾಕ್ಕೆ ತಂದು ಆತನ ಅಧಿಕಾರವನ್ನು ಮರಳಿಸಿದ. ಆದರೆ ದೌಲತ್‌ರಾವ್‌ನ ವಿಶ್ವಾಸಘಾತ ಆತನ ಸಂವೇದನಾಶೀಲ ಹಾಗೂ ನಾಜೂಕಿನ ಪ್ರಕೃತಿಯ ಮೇಲಕ್ಕೆ ಭಾರೀ ಪರಿಣಾಮ ಮಾಡಿತು. ಹುಮ್ಮಸ ಕಳೆದುಕೊಂಡಿದ್ದ ನಾನಾ ೧೮೦೦ರ ಮಾರ್ಚ್ ತಿಂಗಳಲ್ಲಿ ತೀರಿಕೊಂಡ.

'ಬಾಯಿ'ಯರು ಬಂಧನದಲ್ಲಿದ್ದ ಬಾಳೋಬಾ ತಾತ್ಯಾ ಮುಂತಾದ, ಹಳೆಯ ಆದರೆ ನುರಿತ ಸೇವಕರನ್ನು ಬಿಡುಗಡೆ ಮಾಡುವಂತೆ ಒತ್ತಾಯ ಮಾಡಿದರು. ಬಾಳೋಬಾ ತಾತ್ಯಾನಿಗೆ ಪೂರ್ವದ ಅಧಿಕಾರ ಮರಳಿಸಲಾಯಿತು.

೧೭೯೯ರ ಅಗಸ್ಟ್ ತಿಂಗಳಲ್ಲಿ ಬಾಯಿಯರೊಂದಿಗೆ ಇತ್ಯರ್ಥವೊಂದಾಯಿತು. ಅವರ ವಜ್ರ, ಚಿನ್ನಾಭರಣ ಮತ್ತು ಇನ್ನಿತರ ವೈಯಕ್ತಿಕ ಸೊತ್ತುಗಳನ್ನು ಮರಳಿಸಲಾಯಿತು. ಜಾಗೀರಿನೊಂದಿಗೆ ಹನ್ನೊಂದು ಲಕ್ಷಗಳ ವಾರ್ಷಿಕ ಆದಾಯ ತರುವ ಬುರ್ಹಾನ್‌ಪುರವನ್ನೂ ಅವರಿಗೀಯಲಾಯಿತು. ಜಗೋಬಾ ಬಾಪು ಮತ್ತು ಲಖ್ವಾದಾದಾರಿಗೆ ಉತ್ತರದಲ್ಲಿನ ಪೂರ್ವದ ಅಧಿಕಾರವನ್ನೀಯಲಾಯಿತು. ಬಾಳೋಬಾ ತಾತ್ಯಾ ಕ್ರಮೇಣ ರಾಜ್ಯವ್ಯವಸ್ಥೆ ಸುರಳಿತವಾಗಿಸಿದ. ಜಗೋಬಾ ಬಾಪು ಮತ್ತು ಲಖ್ವಾ ದಾದಾ ರಜಪುತಾನದಲ್ಲಿ ಶಾಂತಿ ಸ್ಥಾಪಿಸಿದರು.

೧೮೦೦ರ ಜನವರಿ ತಿಂಗಳಲ್ಲಿ ಬಂಧನದಲ್ಲಿದ್ದ ಸರ್ಜೆರಾವ್‌ನನ್ನು ಬಿಡುಗಡೆ ಮಾಡಲಾಯಿತು. ಅದೇ ತಿಂಗಳಲ್ಲಿ ಆತನ ಸಂಗಡಿಗರಲ್ಲೊಬ್ಬಾತ ಮಲಗಿದ್ದ ಯಮುನಾಬಾಯಿಯನ್ನು ತಿವಿದುಕೊಂದಿಕ್ಕಿದ. ಲಕ್ಷ್ಮೀಬಾಯಿ ಉತ್ತರೆಗೆ ಪಲಾಯನ ಮಾಡಿ ಯಶವಂತ ರಾವ್ ಹೋಳ್ಕರ್‌ನನ್ನು ಸೇರಿದಳು. ಹೋಳ್ಕರ್ ಹಳೆಯ ಹಗೆತನ ಮತ್ತೆ ಆರಂಭಿಸಿದ. ಬಾಳೋಬಾ ತಾತ್ಯಾ ಮತ್ತು ಆತನ ಬೆಂಬಲಿಗರ ಕುರಿತಾದ ತನ್ನ ಭಾವನೆಗಳನ್ನು

ಇಷ್ಟೊಂದು ದಿನಗಳ ಕಾಲ ಬಚ್ಚಿಟ್ಟಿದ್ದ ದೌಲತ್‌ರಾವ್, ೧೮೦೦ರ ಸೆಖೆಗಾಲದಲ್ಲಿ ಸರ್ಜೆರಾವ್‌ನ ಸಹಾಯ ಕೋರಿದ; ಚಿತಾಯಿಸಲ್ಪಟ್ಟ ಆತ ಬಾಳೋಬಾ ತಾತ್ಯಾ, ನಾರಾಯಣ ರಾವ್ ಬಕ್ಷಿ, ಸದಾಶಿವ ಮಲ್ಹಾರ್ ಮತ್ತು ಧೊಂಡೊಬಾ ದಾದಾ ಪಾಗ್ನಿಸ್‌ರೊಂದಿಗೆ ಅನ್ಯ ಇಪ್ಪತ್ತು ಸಾರಸ್ವತ ಸರದಾರರನ್ನು ಬಂಧಿಸಿ ಅಹಮ್ಮದ್‌ನಗರ ಕೋಟೆಯಲ್ಲಿನ ಸೆರೆ ಮನೆಗೆ ರವಾನಿಸಿದ.

ನಿಸರ್ಗದತ್ತ ಸಾವು ಬಾಳೋಬಾ ತಾತ್ಯಾನನ್ನು ಭಯಾನಕವಿದ್ದ ಗಲ್ಲಿನ ಸಾವಿನಿಂದ ಪಾರಾಗಿಸಿತು. ೧೮೦೦ರ ಮೇ ತಿಂಗಳ ಒಂದು ರಾತ್ರಿ ನಾರಾಯಣ ರಾವ್ ಬಕ್ಷಿ ಮತ್ತು ಇನ್ನುಳಿದ ಸಾರಸ್ವತ ಸರದಾರರನ್ನು ಸೆರೆಮನೆಯಿಂದ ಅಹಮ್ಮದ್‌ನಗರಕ್ಕೆ ತರಲಾಯಿತು. ಅವರೆಲ್ಲರನ್ನು (ದುರಾದೃಷ್ಟದ ದಾರಿ ಕಾಣಬೇಕಿದ್ದ ನಾರಾಯಣ ರಾವ್ ಬಕ್ಷಿಯ ಹೊರತಾಗಿ) ತೋಪಿನ ಬಾಯಿಗೆ ಕಟ್ಟಿ, ಸಿಡಿಸಿ ಕೊಂದಿಕ್ಕಲಾಯಿತು.

೧೧. ಲಖ್ಬಾದಾದಾ (ಮುಂದುವರಿದುದು)

೧೮೦೦ರ ಮೇ ತಿಂಗಳಲ್ಲಿ ಹಿಂದುಸ್ಥಾನದಲ್ಲಿ ಮತ್ತೊಮ್ಮೆ ಆಂತರಿಕ ಯುದ್ಧ ಆರಂಭವಾಯಿತು. ಹಿಂದುಸ್ಥಾನದಲ್ಲಿನ ರಾಜಕಾರಣಕ್ಕೆ ಸಂಬಂಧಿಸಿದ ವ್ಯವಹಾರಗಳ ಹೊಣೆಗಾರಿಕೆಯನ್ನು ಅಂಬಾಜಿ ಇಂಗ್ಳೆಗೆ ಕೊಡಲಾಯಿತು. ಉತ್ತರ ಭಾರತದಲ್ಲಿ ಇದರ ಪರಿಣಾಮ ಗಂಭೀರವಾಯಿತು. ಹಲವೊಬ್ಬ ರಜಪೂತ ಅರಸರ ಸೇನೆಗಳೊಂದಿಗಿನ ಜಗೋಬಾ ಬಾಪು ಮತ್ತು ಲಖ್ಬಾ ದಾದಾ ಇವರ ಸೇನೆ, ಅಂಬಾಜಿ ಇಂಗ್ಳೆಯ ಸೇನೆಗೆ ಭಾರೀ ಸೋಲನ್ನಿತ್ತಿತು. ಸಿಡಿಗುಂಡಿನ ಮಳೆಗೆ ಬಲಿಬಿದ್ದ ಲಖ್ಬಾ ದಾದಾ ೧೮೦೨ರ ಫೆಬ್ರವರಿ ೭ರಂದು ರಜಪೂತಾದಲ್ಲಿನ ಸುಲೆಂಬ್ರಾ ಎಂಬಲ್ಲಿ ತೀರಿಕೊಂಡ.

ಸಂಕಟದ ಆ ದಿನಗಳಲ್ಲಿ ಸಾರಸ್ವತರಲ್ಲಿನ ಎಷ್ಟೋ ಮಂದಿ ತಮ್ಮ ಸಂಸಾರಗಳ ಸಮೇತ ಸಿಂಧಿಯಾನ ರಾಜ್ಯದಿಂದ ದೂರಕ್ಕೆ, ಇಂದೋರ್, ಬರೋಡಾ ಮತ್ತು ತಮ್ಮನ್ನು ಸ್ವಾಗತಿಸಿದ ಅನ್ಯ ರಜಪೂತರ ರಾಜ್ಯಗಳತ್ತ ತೆರಳಿದರು. ತತ್ಪರಿಣಾಮ ರಾಮಚಂದ್ರ ಬಾಬಾ ಸುಖ್ತಿಣ್‌ಕರ್ ಮತ್ತು ಜಿವ್ಬಾ ದಾದಾಕೇರ್ಕರ್ ಪರಿಶ್ರಮ ಪೂರ್ವಕ ಸ್ಥಾಪಿಸಿದ ಸಿಂಧಿಯಾ ರಾಜ್ಯದ ಆಡಳಿತೆಗೆ ಅಪಾರ ಹಾನಿಯೊದಗಿತು. ದೌಲತ್‌ರಾವ್ ಸಿಂಧಿಯಾನ ವಿನಂತಿ ಮತ್ತು ಆನಂತರದ ಘಟನೆಗಳು ಕೆಲವೊಬ್ಬ ಸಾರಸ್ವತರ ಸಂಸಾರಗಳ ವಾಪಸಾತಿಗೆ ಕಾರಣವಾದವು. ಅವರು ಸರಕಾರದ ಕಾರ್ಯ ನಿರ್ವಹಣೆಯಲ್ಲಿ ಭಾಗವಹಿಸಿದ್ದುದರ ಕುರಿತು ಅನುಬಂಧ ೩ರಲ್ಲಿ ಹೇಳಲಾಗಿದೆ.

೧೨. ರಣ್ಛೋಡ್ ಕೃಷ್ಣ ಶೆಣ್ವೈ ಸಾಂಝುಗಿರೆ

ರಣ್ಛೋಡ್ ಕೃಷ್ಣಶೆಣ್ವೈ ಸಾಂಝುಗಿರೆ ೧೭೭೭ರಿಂದ ೧೭೮೯ರ ತನಕ ಪೇಶ್ವೆ ಮಾಧವರಾವ್ ಮತ್ತು ಸವಾಯಿ ಮಾಧವರಾವ್ ಇವರ ರಾಯಭಾರಿಯಾಗಿ ಬೊಂಬೇಯಲ್ಲಿದ್ದ.

ಸಂದರ್ಭ ಸೂಚಿ

೧. 'ಹಿಸ್ಟೋರಿಕಲ್ ರೆಕೊರ್ಡ್ಸ್ ಎಟ್ ಗೋವಾ', ಸಂಪುಟ ೧, ಅಕ್ಟೋಬರ್ ೧೯೨೩, ೧೭೩೬ರ ಜನವರಿ ತಿಂಗಳ ೮ನೇಯ ತಾರೀಕಿನ ಕಾಗದ.

೨. ಕೊಲಾಬಾದ ಸಮೀಪದಲ್ಲಿದ್ದ ಆಲಿಬಾಗ್‌ನ, ಕೊಂಕಣಿ ನುಡಿಯುವ ಆಂಗ್ರೆ ಇವರ ಕುಲನಾಮ ಸಂಗಪಾಲ್ (ಸಂಕಪಾಲ್) ಎಂದಿತ್ತು. ಶಂಕರರಾಯನೆಂದು ಫೆರಿಸ್ತ ಉಲ್ಲೇಖಿಸಿದ್ದ ಅವರ ಪೂರ್ವಜರಲ್ಲಿನೊಬ್ಬಾತ ೧೪೬೦-೧೪೭೦ರಲ್ಲಿ ಖೇಳ್ನಾ (ವಿಶಾಲಗಡ)ದ ಕಿಲ್ಲೆದಾರ (ದುರ್ಗದ ಅಧಿಕಾರಿ)ನಾಗಿದ್ದ. ಅವರು ಮಾಧವಮಂತ್ರಿ ಗೋವಾವನ್ನು ಗೆದ್ದಾಗ ಶರಣು ಬಂದಿದ್ದ ಕೊಂಕಣದ ಶಂಕಪಾರ್ಯನ ವಂಶಜರೆಂದು ನಂಬಲಾಗಿದೆ. ಅವರಲ್ಲಿನೊಬ್ಬಾತ, ೧೬ನೆಯ ಶತಮಾನದಲ್ಲಿ ವಿಜಯದುರ್ಗದಲ್ಲಿ ನೆಲಸಿದ್ದ. ತುಕೋಜಿ ಆಂಗ್ರೆಯ ಮಗ ಕಾನ್ಹೋಜಿ ಆಂಗ್ರೆ ಶಿವಾಜಿಯ ನೌಕಾದಳದ ಸರ್ಖೇಲ (ಪ್ರಧಾನ ನೌಕಾಧಿಪತಿ)ನಾಗಿದ್ದ. ೬೦-೩೦೦ ಟನ್‌ಗಳ ಸುಮಾರು ೫೦-೬೦ ನೌಕೆಗಳನ್ನು ಕೊಂಡಿದ್ದ ಆತ ಸಾಗರದ ಮೇಲಿನ ಪೋರ್ಚುಗೀಸರ ಮತ್ತು ಮೊಗಲರ ಬಂಧನಗಳನ್ನು ತೊಡೆದಿಕ್ಕಿದ್ದ.

೩. 'ಹಿಸ್ಟೋರಿಕಲ್ ರೆಕಾರ್ಡ್ಸ್ ಎಟ್ ಗೋವಾ' ಸಂಪುಟ ೧೬, ನಂ.೩, ಸಪ್ಟೆಂಬರ್ ೧೯೨೫ ಮತ್ತು ಸಂಪುಟ ೧೭, ನಂ.೧, ಅಕ್ಟೋಬರ್ ೧೯೨೫.

೪. 'ದ ಕಲ್ಕತ್ತ ರೆವ್ಯು' ಸಂಪುಟ ೧೬, ಸಂಪುಟ ನಂ.೧, ಜುಲೈ ೧೯೨೫. ಆತನ ಉಪನಾಮ ಬಹುತೇಕ 'ಗುಲ್ಗುಲೆ' ಎಂದಾಗಿತ್ತು.

೫. ಮೂಲತಃ ಆತ ವೆಂಗುರ್ಲಾ (ರತ್ನಾಗಿರಿ ಜಿಲ್ಲೆ)ದ ಬಳಿಯ ಕೊಂಚಾರೆಯ ಕುಲಕರ್ಣಿ (ಗ್ರಾಮದ ಕರಣಿಕ)ಯಿದ್ದ. ಆತನ ಗೋತ್ರ ಕೌಶಿಕ, ಕುಲದೇವಿ ಶಾಂತಾ ದುರ್ಗಾ ಮತ್ತು ಕುಲನಾಮ ರೇಗೆಯಿತ್ತು. ಆತನ ಶಾಂತಾ ದುರ್ಗಾ ದೇವಾಲಯದ ಸಂದರ್ಶನದ ಕುರಿತು ಅಧ್ಯಾಯ ೧೨ ನೋಡಿರಿ.

೬. ಆತನ ಗೋತ್ರ ಕೌಶಿಕ, ಕುಲದೇವಿ ಶಾಂತಾ ದುರ್ಗಾ; ಆತನ ಶಾಂತಾ ದುರ್ಗಾ ದೇವಾಲಯದ ಸಂದರ್ಶನದ ಕುರಿತು ಅಧ್ಯಾಯ ೧೨ ನೋಡಿರಿ.

೭. ಅದೊಮ್ಮೆ ಬಾಳಾಜಿ ವಿಶ್ವನಾಥ ತನ್ನ ಆಶ್ರಯದಾತನಿದ್ದ ಮಹಾದೇವ ಪುರಂಧರೆಯೊಂದಿಗೆ ಚಿಟ್ನೀಸ ಚದುರಂಗವಾಡುತ್ತಿದ್ದಾಗ ಆತ ಪೇಶ್ವೆಗೆ ವಿಶಿಷ್ಟ ಕಾಯಿಯೊಂದನ್ನು ನಡೆಸುವ ಸಲಹೆಯಿತ್ತು ವಿಜಯ ದೊರಕಿಸಿಕೊಟ್ಟ. ಪೇಶ್ವೆ ಆತನ ಚಾತುರ್ಯಕ್ಕೆ ಮೆಚ್ಚಿಗೆ ತೋರಿದ. ಮತ್ತೆ ತತ್ಕಾಲ ಮರಾಠಾ ಸರಕಾರದಲ್ಲಿ ಹುದ್ದೆಯೊಂದನ್ನಿತ್ತ. ಮುಂದೆ ಆತನಿಗೆ ರಾಜಕಾರಣ, ರಾಜ್ಯ ಕಾರ್ಯಭಾರಗಳ ಶಿಕ್ಷಣವನ್ನೀಯುವ ಹೊಣೆಗಾರಿಕೆಯನ್ನು ನಾನಾ ಸಾಹೇಬ್ (ಬಾಳಾಜಿ ಬಾಜಿರಾವ್) ಮತ್ತು ಸದಾಶಿವ ರಾವ್ ಇವರಿಗೀಯಲಾಯಿತು. ಪೇಶ್ವೆಯ ಕುಟುಂಬೀಯರು ಆತನನ್ನು ಗೌರವಾದರಗಳಿಂದ ನೋಡಿಕೊಳ್ಳುತ್ತಿದ್ದರು. ಪೇಶ್ವೆ ಬಾಳಾಜಿ ಬಾಜಿರಾವ್ ಪ್ರೇಮಪೂರ್ವಕ ಆತನನ್ನು 'ಬಾಬಾ' ಎಂದಾಗಿ ಸಂಭೋಧಿಸುತ್ತಿದ್ದರೆ ಮರಾಠಾ ರಾಜ್ಯದಾದ್ಯಂತ ಆತ ಇದೇ ಹೆಸರಿನಿಂದ ಪರಿಚಿತನಾದ.

೮. ಸಿಂಧಿಯಾನ ಪೂರ್ವಜರು ಸತಾರಾದಿಂದ ೨೦ ಮೈಲುಗಳ ದೂರದಲ್ಲಿದ್ದ ಕೋರೆಗಾಂವ್‌ನ ಪರಂಪರಾಗತ ಪಾಟೀಲ (ಗ್ರಾಮಾಧಿಕಾರಿ)ರಾಗಿದ್ದರು. ರಾಣೋಜಿ ಸಿಂಧಿಯಾ ಮೊದಲನೆಯ ಬಾಜಿರಾವ್‌ನ ಸೇವೆಗಾರಂಭಿಸಿದ. ಅದೊಮ್ಮೆ ರಾಮಚಂದ್ರಬಾಬಾ, ಪೇಶ್ವೆಯೊಂದಿಗಿನ ರಾಜಕಾರಣಕ್ಕೆ ಸಂಬಂಧಿಸಿದ ಸುದೀರ್ಘ ಚರ್ಚೆಯ ಬಳಿಕ ಒಳಕೋಣೆಯಿಂದ ಹೊರಕ್ಕೆ ಬಂದಾಗ, ರಾಣೋಜಿ ಪೇಶ್ವೆಯ ಪಾದತ್ರಾಣಗಳನ್ನು ಕೈಗಳಲ್ಲಿ ಕೊಂಡು ಗಾಢನಿದ್ರೆಯಲ್ಲಿದ್ದುದನ್ನು ಕಂಡ; ಆತ ರಾಣೋಜಿಯಲ್ಲಿ ರಾಜ ಲಕ್ಷಣಗಳಿರುವುದನ್ನು ಕಂಡನೆನ್ನುತ್ತಾರೆ. ಪೇಶ್ವೆಯನ್ನು ಕರೆದು ರಾಜಲಕ್ಷಣಗಳನ್ನು ತೋರಿಸಿದ ರಾಮಚಂದ್ರ ಬಾಬಾ ರಾಣೋಜಿಗೆ ಬದುಕನ್ನು ಸಾರ್ಥಕಗೊಳಿಸುವ ಅವಕಾಶವೀಯುವಂತೆ ಕೇಳಿಕೊಂಡ. ಅತ್ಯಲ್ಪ ಕಾಲದಲ್ಲಿ ರಾಣೋಜಿ ಮಾಳ್ವದ

ಸುಭೇದಾರನಾಗಿ ನೇಮಿಸಲ್ಪಟ್ಟ. ಆತನೊಂದಿಗೆ ರಾಮಚಂದ್ರಬಾಬಾನನ್ನು ಪ್ರಾಂತದ ವ್ಯವಹಾರ ನೋಡಿಕೊಳ್ಳುವರೆ ಕಳುಹಿದ.

೯. ಗ್ರಾಂಟ್ ಡಫ್ಸ್ 'ಹಿಸ್ಟರಿ ಆಫ್ ದ ಮರಾಠಾಸ್' ೧೮೭೩ರಲ್ಲಿನ ಮೂರನೆಯ ಆವೃತ್ತಿ ಪುಟ ೨೭೨.

೧೦. ಜಿ. ಎಸ್. ಸರ್ದೇಸಾಯಿಯ 'ದ ನ್ಯೂ ಹಿಸ್ಟರಿ ಆಫ್ ಮರಾಠಾಸ್', ಭಾಗ ೩, ಪುಟ ೨೬೬ ಮತ್ತು ೨೬೭.

೧೧. ವಕೀಲ್-ಇ-ಮುತಾಲಕ್' ಈ ಹುದ್ದೆಗೆ ಅಪರೂಪವಾಗಿ ಅಧಿಕಾರಿಯನ್ನು ನೇಮಿಸಲಾಗುತ್ತಿತ್ತು. ತೈಮೂರ ರಾಜಮನೆತನದ ಇತಿಹಾಸದುದ್ದ ಅಕ್ಬರ, ಶಾಹಜಹಾನ್ ಮತ್ತು ಬಹದ್ದೂರ್‌ಶಾಹ ಇವರ ರಾಜ್ಯಭಾರದ ಕಾಲ, ಈ ಪದವಿಯ ಅಧಿಕಾರಿಗಳನ್ನು ನೇಮಿಸಲಾಗಿತ್ತು. - ಜದುನಾಥ ಸರ್ಕಾರ್ ಬರೆದ 'ಫಾಲ್ ಆಫ್ ದ ಮೊಗಲ್ ಎಂಪಾಯರ್', ವಾಲ್ಯೂಮ್ ೩, ಪುಟ ೨೯೪

೧೨. ಜಿ. ಎಸ್. ಸರ್ದೇಸಾಯಿ ಬರೆದ 'ದ ನ್ಯೂ ಹಿಸ್ಟರಿ ಆಫ್ ಮರಾಠಾಸ್, ಸಂಪುಟ ೨, ಪುಟ ೨೧೬.

೧೩. ಆತನ ಗೋತ್ರ ವತ್ಸ ಮತ್ತು ಕುಲದೇವತೆ ಮಂಗೇಶ. ಪರ್ಶೆ (ಪರ್ಸೆಂ), ಅರೋಬಾ, ಚಿಖಲಿ ಮತ್ತು ವಾಗಳಿಗಳಲ್ಲಿನ ನಾಲ್ಕು ನಾಮವಂತ ಲಾಡ್ ಕುಟುಂಬಗಳಲ್ಲಿ ಆತ ಚಿಖಲಿಯ ಕುಟುಂಬಕ್ಕೆ ಸೇರಿದಾತನಿದ್ದ.

ಆತನ ಕುಟುಂಬದವರು ಅರೋಬಾ ಮತ್ತು ಚಿಖಲಿಗಳಲ್ಲಿ ವಾಸಮಾಡುತ್ತಾರೆ. ಸ್ವಲ್ಪ ಕಾಲ ಆತ ಗ್ರಾಮದ ದೇಸಾಯಿಯರ (ನಾಯಿಕ್ ಉಪನಾಮದ ಪೆಡ್ಣೆಕರ್) ಕಾರಕೂನ (ಗುಮಾಸ್ತ) ನಾಗಿ ಕೆಲಸ ಮಾಡಿದ. ಮತ್ತೆ ತನ್ನ ಭಾಗ್ಯವನ್ನರಸಲಾಗಿ ಹಿಂದುಸ್ಥಾನಕ್ಕೆ ತೆರಳಿದ. ಕೆಲವೊಂದು ಕಾಲ ಆತ ಬಾಳೋಬಾ ತಾತ್ಯಾ ಪಾಗ್ನೀಸನ ಅಶ್ವದಳದ ಗುಮಾಸ್ತನಾಗಿ ಕೆಲಸ ಮಾಡಿದ. ತನಗೆ ದಿವಾನನ ಬಡತಿ ಮತ್ತು ಧೊಂಡೋಬಾ ದಾದಾ ಪಾಗ್ನಿಸ್‌ನಿಗೆ ಅಶ್ವದಳದ ಅಧಿಕಾರ ದೊರಕಿದ ಬಳಿಕವೇ ಆತ ತನ್ನ ಉದ್ಯೋಗದತ್ತ ಲಕ್ಷವಿತ್ತ. ಸೇನೆಯ ಕುರಿತಾದ ಆತನ ವಿಶೇಷ ಜ್ಞಾನ ಜಿವ್ಬಾದಾದನ ಲಕ್ಷ್ಯಕ್ಕೆ ಬಂದಿತು. ಅತ್ಯಲ್ಪ ಕಾಲದಲ್ಲಿ ಆತ ಮಹತ್ವದ ಪದವಿಗೇರಿದ.

೧೪. ಸಾಹಸಿ, ಕರ್ತವ್ಯದಕ್ಷನಿದ್ದ ಕಿಲ್ಲೆದಾರ ಜಿವ್ಬಾದಾದಾ (ಒಂಭತ್ತು ತಿಂಗಳುಗಳ ಕಾಲ), ತನ್ನೊಡೆಯನ ಕೈಗಳು ಬಲವತ್ತರವಾಗುವ ತನಕ, (೧೭೮೮ರ ಜೂನ್ ತಿಂಗಳು), ಆಗ್ರಾ ದುರ್ಗ ಮುಸಲ್ಮಾನರ ಕೈ ಸೇರದಂತೆ ನೋಡಿಕೊಂಡ.

'ಫಾಲ್ ಆಫ್ ದ ಮೊಗಲ್ ಎಂಪಾಯರ್' ಭಾಗ ೩, ಪುಟ ೪೦೮, ಜದುನಾಥ ಸರ್ಕಾರ್ ಲಿಖಿತ.

೧೫. ವಿನ್ಸೆಂಟ್ ಸ್ಮಿತ್, ಸಿ.ಐ.ಇ. ಇವರು ಬರೆದ 'ದಿ ಆಕ್ಸಫರ್ಡ್ ಹಿಸ್ಟರಿ ಆಫ್ ಇಂಡಿಯಾ', ೧೯೨೦ ಪುಟ ೫೯೭.

ಅಧ್ಯಾಯ ೭

ಬೆಳಗಾಂ, ಧಾರ್ವಾರ ಮತ್ತು ತಂಜಾವೂರಿನಲ್ಲಿ ಸಾರಸ್ವತರು

೧. ಬೆಳಗಾಂ ಮತ್ತು ಧಾರ್ವಾರ

ಖಾನಾಪುರದ ಹೆಚ್ಚಿನ ಭಾಗಗಳಲ್ಲಿನ, ಬೆಳಗಾಂ ಜಿಲ್ಲೆಯ ಕೆಲವೊಂದು ಉಪವಿಭಾಗಗಳಲ್ಲಿನ ಮತ್ತು ಧಾರ್ವಾರ ಜಿಲ್ಲೆಯ ಹಲವು ಭಾಗಗಳಲ್ಲಿನ ಪರಂಪರಾಗತ ಕುಲಕರ್ಣಿಗಳು ಸಾರಸ್ವತರಿದ್ದರು. ಕದಂಬರು ಗೋವಾದಿಂದ ರಾಜ್ಯವಾಳುತ್ತಿದ್ದ ಕಾಲದಲ್ಲಿ ಇವರ ಪೂರ್ವಜರು ಈ ಭಾಗಗಳಿಗೆ ವಲಸೆ ಬಂದಿದ್ದರು.

ಅವರಲ್ಲಿನ ಕೆಲವರು ಖಾನಾಪುರ, ಚಾಂದ್‌ಗಡ್ ಮತ್ತು ಇನ್ನಿತರ ಕ್ಷೇತ್ರಗಳಲ್ಲಿನ ದೇಶ್‌ಪಾಂಡೆ, ಇನಾಮ್‌ದಾರ್ ಮತ್ತು ಖಾಸ್‌ನಿಸ್ ಆಗಿದ್ದರು. ಅವರು ಬಿಜಾಪುರ ಸರಕಾರದಿಂದ ೧೫, ೧೬ ಮತ್ತು ೧೭ನೆಯ ಶತಮಾನಗಳಲ್ಲಿ ಸನದು ಕೊಂಡವರಿದ್ದರು.

೨. ತಂಜಾವೂರು

ಶಿವಾಜಿಯ ಸಹೋದರ ವ್ಯಂಕೋಜಿ ತಂಜಾವೂರನ್ನು ಗೆದ್ದುಕೊಳ್ಳುವ ಹೊತ್ತಿಗೆ ಆತನೊಂದಿಗೆ ಕೆಲವಷ್ಟು ಸಾರಸ್ವತರಿದ್ದರು. ಅವರು ತಂಜಾವೂರಿನಲ್ಲಿ ನೆಲಸಿ ದೇಶಸ್ಥರೊಂದಿಗೊಂದಾದರು. ತಂಜಾವೂರಿನಲ್ಲಿ ಈಗ ಸಾರಸ್ವತರ ವಾಸ್ತವ್ಯವಿಲ್ಲ.

ಅಧ್ಯಾಯ ೮

ಕೆಳದಿ ರಾಜ್ಯ : ಕರ್ನಾಟಕದಲ್ಲಿ ಕೆಳದಿ ಅರಸರ ಕೈಕೆಳಗಿನ ಸಾರಸ್ವತರು

೧. ಕೆಳದಿ ರಾಜ್ಯದ ಬುನಾದಿ

ಹದಿನೈದನೆಯ ಶತಮಾನದ ಕೊನೆಯ ದಿನಗಳಲ್ಲಿ ಕೆಳದಿಯ (ಶಿಮೊಗ್ಗ ಜಿಲ್ಲೆಯ ಸದ್ಯದ ಸಾಗರ ತಾಲೂಕಿನಲ್ಲಿ) ನಿವಾಸಿ, ವೀರಶೈವ (ಲಿಂಗಾಯತ) ನಿದ್ದ ಚಂದ್ರ ಒಮ್ಮೆ ಹೊಲವನ್ನುಳುವಾಗ ಆತನ ನೇಗಿಲಿಗೆ ಅಪಾರದ್ರವ್ಯದ ಪಿಠಾರಿಯೊಂದು ತಗಲಿತೆನ್ನುತ್ತಾರೆ. ಗ್ರಾಮದ ಮುಖ್ಯಾಧಿಕಾರಿಯ ಪದವನ್ನು ಗಳಿಸುವುದರಲ್ಲಿ ಯಶಸ್ವಿಯಾದ ಈತ ಹಿಂಬಾಲಕರ ತಂಡವೊಂದನ್ನು ತಯಾರಿಸಿ ತನ್ನ ಶಕ್ತಿ, ಪ್ರಭಾವ ಬೆಳಸಿಕೊಂಡ. ವಿಜಯ ನಗರದ ಅರಸು ಆತನನ್ನು ಬರಮಾಡಿಸಿ, ಬಂಡಾಯ ಹೂಡಿದ್ದ ಕೆಲವೊಬ್ಬ ತುಂಡರಸರನ್ನು ದಂಡಿಸಲೆಂದು ಕಳುಹಿಸಿದ. ಅಪೂರ್ವ ಯಶಸ್ಸಿಗೆ ಮೆಚ್ಚಿದ ಅರಸು ಆತನಿಗೆ ಕೆಳದಿ, ಇಕ್ಕೇರಿ ಮತ್ತು ಇನ್ನಿತರ ೬ ಗ್ರಾಮಗಳ ಜಾಗೀರನ್ನಿತ್ತು, ಕೆಳದಿ ಚಂದ್ರಪ್ಪ ನಾಯಕನೆಂಬ ಬಿರುದಿನಿಂದ ಗೌರವಿಸಿದ. ಮತ್ತೆ ಉತ್ತರದಲ್ಲಿನ ಸೀಮೆಯನ್ನು ಮುಸಲ್ಮಾನರಿಂದ ಸಂರಕ್ಷಿಸಲಾಗಿ ಪುಲ್ಲದೇಶದ ರಾಜ್ಯಪಾಲನನ್ನಾಗಿ ನೇಮಿಸಿದ. ೧೫೦೦ರ ಜನವರಿ ತಿಂಗಳ ೮ರಂದು ಆತನನ್ನು ಔಪಚಾರಿಕವಾಗಿ ಅಧಿನಾಯಕನ ಪದಕ್ಕೆ ನಿಯುಕ್ತಿ ಮಾಡಿದ.

೨. ಸದಾಶಿವ ನಾಯಕ

ಚಂದ್ರಪ್ಪನಾಯಕನ ಮಗ ಮತ್ತು ಉತ್ತರಾಧಿಕಾರಿಯಾಗಿದ್ದ ಸದಾಶಿವ ನಾಯಕ ವಸ್ತುತಃ ಈ ರಾಜಮನೆತನದ ಸ್ಥಾಪಕನಿದ್ದ. ೧೫೬೦ರಲ್ಲಿ ಆತ ತನ್ನ ರಾಜಧಾನಿಯನ್ನು ಇಕ್ಕೇರಿಗೆ ಸ್ಥಳಾಂತರಗೊಳಿಸಿ, ಶೈಶಾವಸ್ಥೆಯಲ್ಲಿದ್ದ ರಾಜ್ಯವನ್ನು ಸ್ಥಿರಗೊಳಿಸಿ, ಅದರ ಉಜ್ವಲ ಭವಿಷ್ಯಕ್ಕೆ ತಳಪಾಯ ಹಾಕಿದ. ಸಾಮ್ರಾಜ್ಯವೊಂದರ ನಿಷ್ಠಾವಂತ ಸಾಮಂತನಿದ್ದ ಆತ, ತನ್ನ ಆಳ್ವಿಕೆಯ ಮೊದಲ ದಿನಗಳನ್ನು ಸೇನೆಯ ಸೇವೆಯಲ್ಲಿ ಕಳೆದ. ಬಿಜಾಪುರ, ಕರ್ನಾಟಕದ ತುಂಡರಸರೊಂದಿಗಿನ ಕಾದಾಟಗಳಲ್ಲಿ ಮತ್ತು ಟ್ರಾವಂಕೂರಿನ ದಂಡಯಾತ್ರೆಯಲ್ಲಿ ಆತ ಭಾಗವಹಿಸಿದ.

ಚಂದ್ರಗಿರಿ, ಅರಗ ಮತ್ತು ಬಾರ್ಕೂರು ರಾಜ್ಯ (ದಕ್ಷಿಣ ಕನ್ನಡದಲ್ಲಿಯ ಬಾರ್ಕೂರು) ಗಳ ನೆರವಿನಿಂದ ಕಲ್ಯಾಣದುರ್ಗದ ಮೇಲಕ್ಕೆ ದಾಳಿಯಿಕ್ಕಿದ ಈತನ ಪರಾಕ್ರಮಕ್ಕೆ ಮೆಚ್ಚಿ ಬಹುಮಾನವೀಯಲಾಯಿತು. ಮುಂಬರುವ ದಿನಗಳಲ್ಲಿನ ಆಪತ್ತುಗಳನ್ನು ತಡೆಹಿಡಿಯಲಾಗಿ ಆತ ಚಂದ್ರಗಿರಿ (ದಕ್ಷಿಣಕನ್ನಡದಲ್ಲಿನ), ಕವಳೆ, ಇಕ್ಕೇರಿ, ಕೆಳದಿ ಹಾಗೂ ಇನ್ನಿತರ ಸ್ಥಾನಗಳಲ್ಲಿ ಕೋಟೆಗಳನ್ನು ಕಟ್ಟಿಸಿದ. ಆತ ಉತ್ತರ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳೆರಡರ ಭಾಗಗಳೊಂದಿನ ಅರಗ ಮತ್ತು ತುಳು ರಾಜ್ಯ (ಬಾರ್ಕೂರು ಮತ್ತು ಮಂಗಳೂರು), ಇವುಗಳನ್ನು ಆಳಿದ. ಈತನನ್ನು "ರಣಭೂಮಿಯಲ್ಲಿ ಭೀಮ, ಸುಖ ಅನುಭೋಗಿಸುವಲ್ಲಿ

ಸುರದ್ರುಮ, ಚಿತ್ತಶಾಂತಿಕೊಂಡಿರುವಲ್ಲಿ ಸೋಮ ಮತ್ತು ಸತ್ಯಾಚರಣೆಯಲ್ಲಿ ರಾಮ" ಎಂದು ಬಣ್ಣಿಸಲಾಗುತ್ತಿತ್ತು.

೩. ಮೊದಲನೆಯ ವೆಂಕಟಪ್ಪ ನಾಯಕ

ಮೊದಲನೆಯ ವೆಂಕಟಪ್ಪ ನಾಯಕನ ಕಾಲ (೧೫೮೬-೧೬೨೯) ದಲ್ಲಿ ರಾಜಮನೆತನದ ಪ್ರತಿಷ್ಠೆ ಎಷ್ಟೊಂದು ಬೆಳೆದುಕೊಂಡಿತೆಂದರೆ ವಾಸ್ತವಿಕವಾಗಿ ಪಶ್ಚಿಮ ಕರಾವಳಿಯಲ್ಲಿನ ನಾಯಕರೆಲ್ಲ ಆತ ಸ್ವತಂತ್ರ ರಾಜ್ಯವೊಂದನ್ನು ಆಳುತ್ತಿರುವುದಾಗಿ ಭಾವಿಸತೊಡಗಿದ್ದರು. ಹಲವೊಂದು ಯಶಸ್ವಿ ಕಾದಾಟಗಳ ನಂತರ ಆತ ತನ್ನ ಅಧಿಕಾರದೊಳಗಣ ಪ್ರಾಂತಗಳ ಸೀಮೆ ವಿಸ್ತರಿಸಿದ. ಪಶ್ಚಿಮ ಕರಾವಳಿಯ ಪ್ರಮುಖ ಸ್ಥಾನಗಳಲ್ಲಿ ನೆಲೆಸಿದ್ದ ಪೋರ್ಚುಗೀಸರು ತಮ್ಮ ವ್ಯಾಪಾರದ ಸಂರಕ್ಷಣೆಗಾಗಿ ಮಂಗಳೂರು, ಬಸ್ರೂರು, ಹೊನ್ನಾವರಗಳಲ್ಲಿ ಕೋಟೆಗಳ ನಿರ್ಮಾಣ ಮಾಡಿದ್ದ ನಿಮಿತ್ತ ಆತ ತನ್ನ ಲಕ್ಷ್ಯವನ್ನು ಕೆನರಾದ ಕರಾವಳಿಯ ಮೇಲೆ ಕೇಂದ್ರೀಕರಿಸಿದ. ಬಾರ್ಕೂರು ಮುಂತಾದ ಪ್ರಮುಖ ಸ್ಥಾನಗಳಲ್ಲಿ ಅಭೇದ್ಯವಾದ ಕೋಟೆಗಳನ್ನು ಕಟ್ಟಿಸಿದ. ಗೆರ್ಸೊಪ್ಪದ ರಾಣಿ ಮತ್ತು ತನ್ನ ಪರಾಜಯಕ್ಕಾಗಿ ಆಕೆಯೊಂದಿಗೆ ಹೋರಾಡಿದ್ದ ಅರಸರೆಲ್ಲರನ್ನು ಸೋಲಿಸಿದ. ಆಕೆಯ ಪ್ರಿಯಕರನ್ನು ಕೊಂದಿಕ್ಕಿದ. ಪೋರ್ಚುಗೀಸರನ್ನು ಮಂಗಳೂರಿನಿಂದ ಹೊರಕ್ಕೋಡಿಸಿ ಜೈನ, ಬ್ರಾಹ್ಮಣ ಮತ್ತು ಕೆನರಾದ ಸುತ್ತಣ ಇನ್ನಿತರ ನಾಯಕರನ್ನು ತನ್ನ ಆಧೀನಕ್ಕೆ ತಂದ. ಕರಿಮೆಣಸಿನ ವ್ಯಾಪಾರವನ್ನು ನಿಯಂತ್ರಣದೊಳಕ್ಕಿಟ್ಟ ಆತನ ರಾಜ್ಯ ಶಿವಮೊಗ್ಗ ಮತ್ತು ಮೈಸೂರಿನ ಕಡೂರು ಜಿಲ್ಲೆಗಳನ್ನೊಳಗೂಡಿತ್ತು.

೪. ಶಿವಪ್ಪ ನಾಯಕ

ವೀರಭದ್ರಪ್ಪ ನಾಯಕ (೧೬೨೯-೧೬೪೫) ನ ಉತ್ತರಾಧಿಕಾರಿ ಮತ್ತು ಮೊಮ್ಮಗನಿದ್ದ ವೆಂಕಟಪ್ಪ ನಾಯಕನ ಆಳ್ವಿಕೆಯ ಕಾಲ ಆಡಳಿತೆಯ ಹೊಣೆಗಾರಿಕೆಯನ್ನು ಆತನ ಸೋದರಮಾವ ಶಿವಪ್ಪ ನಾಯಕನಿಗೆ ವಹಿಸಿಕೊಡಲಾಗಿತ್ತು. ಮೊದಲನೆಯ ವೆಂಕಟಪ್ಪ ನಾಯಕನ ಮರಣಾನಂತರ ಪರಿಸ್ಥಿತಿಯ ಲಾಭಕೊಳ್ಳಬಯಸಿ ಸೋಲು ಕಂಡಿದ್ದ ನಾಯಕರೆಲ್ಲಾ ಒಂದುಗೂಡಿ ಪೋರ್ಚುಗೀಸರ ಸಹಾಯಕೋರಿದರು ; ಅವರು ಶಕ್ತಿಶಾಲಿ ದಂಡೊಂದರೊಂದಿಗೆ ಗಂಗೊಳ್ಳಿಗೆ ಬಂದರು. ವೆಂಕಟ ನಾಯಕನಿಂದ ತಮಗೆ ಬರಬೇಕಾಗಿರುವ ಪೊಗದಿಯ ಕುರಿತು ಬಿಜಾಪುರದ ಅದಿಲ್‌ಶಾಹ ಆಗ್ರಹ ಮಾಡಿದ. ರಾಮರಾಜನ ಮಗ ಮತ್ತು ಪೂರ್ವಾಧಿಕಾರಿಯಾಗಿದ್ದ ವೆಂಕಟಪ್ಪ ನಾಯಕನ ಸಹೋದರ, ವೀರವೊಡೆಯರ್, ಗದ್ದುಗೆಗಾಗಿ ಕಸುವಿನ ಪ್ರಯತ್ನ ಮಾಡಿದ.

ಬಸ್ರೂರನ್ನು ಸ್ವಾಧೀನ ಪಡಿಸಿಕೊಂಡಿದ್ದ ಆತ ಪೋರ್ಚುಗೀಸರೊಂದಿಗೆ ಸಂಧಾನ ಮಾಡಿಕೊಂಡು ಅವರಿಗೆ ಕೆಲವೊಂದು ಸವಲತ್ತುಗಳನ್ನಿತ್ತ. ವೀರಭದ್ರಪ್ಪನ ಭಾವ ಮತ್ತು ಸೋದರಸಂಬಂಧಿ ಸದಾಶಿವಯ್ಯ ಗದ್ದುಗೆಯನ್ನು ವಶಪಡಿಸಿಕೊಳ್ಳಲೆತ್ನಿಸಿದ. ರಾಜ್ಯದಲ್ಲಿ ಬಂಡಾಯವಾಯಿತು. ತನ್ನ ಸೇನಾ ಕೌಶಲ್ಯ, ಕಾರ್ಯ ನಿರ್ವಹಣೆಯ ಸಾಮರ್ಥ್ಯ, ರಾಜನೀತಿಗಳ ಮೂಲಕ ಶಿವಪ್ಪ ನಾಯಕ ಬಂಡಕೋರರ ಮುಖಂಡರನ್ನು ಮತ್ತು

ಗದ್ದುಗೆಗಾಗಿ ಆರೊಂದು ವರ್ಷಗಳ ಕಾಲ ಸತತ ಕಾದಾಡುತ್ತಿದ್ದ ಪ್ರತಿಸ್ಪರ್ಧಿಗಳನ್ನು ಬಗ್ಗುಬಡೆದು ರಾಜವಂಶವೊಂದರ ಅಕಾಲ ಮೃತ್ಯುವನ್ನು ತಡೆಹಿಡಿದ.

ಆತ ತನ್ನ ನಾಯಕರ ಬಂಡಾಯವನ್ನು ಅಡಗಿಸಲು ಮಾಡುವ ಸಹಾಯದ ಬದಲಿಗೆ ೩೦,೦೦೦ ಪಗೋಡಾಗಳನ್ನು ಬಿಜಾಪುರದ ಅರಸನಿಗೀಯುವ ಪ್ರಸ್ತಾಪ ಮಾಡಿದ; ಆದಿಲ್‌ಶಾಹನಿಗೆ ಅದು ಮಾನ್ಯವಿಲ್ಲವಿತ್ತು. ಈ ಜಗ್ಗಾಟದಿಂದ ವೀರಭದ್ರಪ್ಪನಿಗೆ ತುಸು ಅವಕಾಶ ದೊರಕಿತು ಆತ ಗೋವಾಕ್ಕೆ ತನ್ನ ರಾಯಭಾರಿಯನ್ನು ಕಳುಹಿಸಿದ. ಮತ್ತೆ ಕೆಳದಿಯ ಹಿತಕ್ಕೆ ಬಾಧೆ ಬರುವ ಸಾಧ್ಯತೆ ಇದ್ದಾಗಲೂ ೧೬೩೧ರಲ್ಲಿ ಪೋರ್ಚುಗೀಸರೊಂದಿಗೆ ಒಪ್ಪಂದ ಮಾಡಿಕೊಂಡ. ಡಚ್ ಮತ್ತು ಇಂಗ್ಲಿಷ್ ಇವರೊಳಗಣ ವ್ಯಾಪಾರಕ್ಕೆ ಸಂಬಂಧಿಸಿದ ಪೈಪೋಟಿಯಿಂದಾಗಿ ಪೋರ್ಚುಗೀಸರ ಪ್ರಭಾವ ಕುಂದತೊಡಗಿತ್ತು. ಕರಿಮೆಣಸಿಗೆ ಹೆಚ್ಚಿನ ಬೆಲೆಯೀಯುತ್ತಿದ್ದ ಇಂಗ್ಲಿಷರೊಂದಿಗೆ ಸೌಹಾರ್ದಪೂರ್ಣ ಸಂಬಂಧವಿಟ್ಟುಕೊಂಡಿದ್ದ ಆತ ೧೬೩೭ರಲ್ಲಿ ಅವರಿಗೆ ಕರಿಮೆಣಸನ್ನು ನಿರ್ಯಾತ ಮಾಡುವ ಸರ್ವಾಧಿಕಾರವಿತ್ತ. ಮತ್ತು ಭಟ್ಕಳದಲ್ಲಿ ಬಂಡಸಾಲೆ ಕಟ್ಟುವ ಪರವಾನಿಗೆ ಇತ್ತ. ಇಕ್ಕೇರಿಯ ಮೇಲಕ್ಕೆ ಹಲ್ಲೆಯ ಭಯವಿದ್ದ ನಿಮಿತ್ತ ೧೬೩೯ರಲ್ಲಿ ರಾಜ್ಯದ ಮುಖ್ಯ ಪಟ್ಟಣವನ್ನು ಸುಮಾರು ೨೦ ಮೈಲು ದೂರದ ಬಿದನೂರಿಗೆ ವರ್ಗಾಯಿಸಿ ಅದಕ್ಕೆ ವೇಣುಪುರವೆಂಬ ಹೆಸರಿತ್ತ. (ಕನ್ನಡದ ಬಿದುರುಊರಿನ, ಬಿದುರಿನ ನಗರದ ಸಂಸ್ಕೃತ ರೂಪ). ಗುಡ್ಡಗಳಿಂದ ಆವರಿಸಲ್ಪಟ್ಟ ಈ ಪ್ರದೇಶವನ್ನು ಸುರಕ್ಷಿತ, ಸುಭದ್ರವಾಗಿರಿಸಿದ. ಅಲ್ಲಿ ಮಂಗಳೂರಿನತ್ತ ಸಾಗುವ ಪ್ರಮುಖ ಮಾರ್ಗದೊಂದಿಗೆ ಇನ್ನಿತರ ಮಾರ್ಗಗಳೂ ಸೇರುವ ನಿಮಿತ್ತ ವ್ಯಾಪಾರದ ದೃಷ್ಟಿಯಿಂದ ಅದು ಅತಿ ಅನುಕೂಲವಾದುದಿತ್ತು[೧].

ಮಕ್ಕಳಿಲ್ಲದ ವೀರಭದ್ರಪ್ಪ ನಾಯಕನ ಮರಣಾನಂತರ ಶಿವಪ್ಪ ನಾಯಕ (೧೬೪೫-೧೬೬೦) ಗದ್ದುಗೆಯೇರಿದ. ಆತ ತನ್ನ ವಂಶದ ಅತಿ ಪ್ರಸಿದ್ಧ ಅರಸನಾಗಿದ್ದ. ಆತನ ಆಳ್ವಿಕೆಯ ಕಾಲದಲ್ಲಿ ರಾಜಮನೆತನದ ಭಾಗ್ಯೋದಯವಾಯಿತು. ಮುಂದೆ ಅತ್ಯಲ್ಪ ಕಾಲದಲ್ಲೇ ಆತ ಬಿಜಾಪುರದ ಅರಸನ ರಾಜ್ಯ ವಿಸ್ತರಣೆಯ ಮಹತ್ವಾಕಾಂಕ್ಷೆಗೆ ಪ್ರತಿಸ್ಪರ್ಧಿಯೊಡ್ಡಿದ್ದುದು ಕಾಣಬಂತು. ಆತ ಮಿರ್ಜಾನ್ ಮತ್ತು ಬಿಜಾಪುರ ರಾಜ್ಯದ ಸುಂದ ಪ್ರಾಂತವನ್ನು ಸ್ವಾಧೀನಪಡಿಸಿಕೊಂಡ. ಬಿಜಾಪುರದ ಅರಸು ಆದಿಲ್‌ಶಾಹನ ಮರಣಾನಂತರ ಮಶಸ್ವಿ ದಂಡಯಾತ್ರೆ ಮಾಡಿದ ಆತ, ಈ ಹಿಂದೆ ಅವರು ಆಕ್ರಮಿಸಿದ್ದ ಇಕ್ಕೇರಿ ಹಾಗೂ ಇನ್ನಿತರ ಪ್ರಾಂತಗಳನ್ನು ಮರಳಿ ಗಳಿಸಿದ ; ಸೋದೆ ಮತ್ತು ತರಿಕೆರೆಗಳೊಂದಿಗೆ ಆತ ಕಾಸರಗೋಡಿನ ತನಕದ ಪ್ರಾಂತವನ್ನು ಗೆದ್ದುಕೊಂಡ.

ಆತ ತನ್ನ ಲಕ್ಷ್ಯವನ್ನು ಪೋರ್ಚುಗೀಸರತ್ತ ಕೇಂದ್ರೀಕರಿಸಿದ. ಗಂಗೊಳ್ಳಿ (ಕಾಂಬೋಲಿನ್) ಯ ಹೊರತಾಗಿ ತಮ್ಮ ಇನ್ನುಳಿದ ದುರ್ಗಗಳ ಸ್ಥಿತಿ ಮತ್ತು ಶಿವಪ್ಪ ನಾಯಕನ ಅಸಾಧಾರಣ ಸಾಮರ್ಥ್ಯದ ಅರಿವುಕೊಂಡಿರದ ಪೋರ್ಚುಗೀಸರು ಬಸ್ರೂರಿನ ದುರ್ಗವನ್ನು ಮುರಿದಿಕ್ಕಬೇಕೆಂಬ ಆತನ ಕೋರಿಕೆಯನ್ನು ದುರ್ಲಕ್ಷಿಸಿದರು. ಅದಷ್ಟೇ ಅಲ್ಲದೆ ಆತನ ಇಚ್ಛೆಗೆ ವಿರುದ್ಧವಾಗಿ ಮಂಗಳೂರಿನ ದುರ್ಗವನ್ನು ಬಲಪಡಿಸಿದರು. ೧೬೫೨ರಲ್ಲಿ ಆತ ಗಂಗೊಳ್ಳಿಯ ಮೇಲಕ್ಕೆ ಹಲ್ಲೆ ಮಾಡಿ ಬಸ್ರೂರನ್ನು ಸ್ವಾಧೀನ ಪಡಿಸಿಕೊಂಡ. ಅನಂತರ

ಮಂಗಳೂರಿಗೆ ದಾಳಿಯಿಕ್ಕಿದ. ಪೋರ್ಚುಗೀಸರ ಬೆಂಬಲಕ್ಕೆ ಸೇನೆ ಬಂದರೂ ಅದನ್ನು ದುರ್ಲಕ್ಷಿಸಿ ಅವರನ್ನು ಸೋಲಿಸಿದ. ಆ ಬಳಿಕ ಆತ ಗಂಗೊಳ್ಳಿಯತ್ತ ಲಕ್ಷ್ಯ ಕೇಂದ್ರೀಕರಿಸಿದ. ೧೬೫೨ರ ಜನವರಿ ತಿಂಗಳಲ್ಲಿ ನೌಕೆಯ ಮೂರು ಪಡೆಗಳು ಬಂದವಾದರೂ ಅವುಗಳನ್ನು ಬಗ್ಗು ಬಡೆದು ಹಿಮ್ಮೆಟ್ಟಿಸಿದ. ದ್ವೀಪವೊಂದರಂತೆ ಮುಖ್ಯ ಭೂಭಾಗದಿಂದ ಪ್ರತ್ಯೇಕಿಸಲ್ಪಟ್ಟಿದ್ದು, ನೌಕಾದಳದ ತೋಪುಗಳ ಸಂರಕ್ಷಣೆ ಕೊಂಡಿದ್ದಾಗಲೂ ದುರ್ಗವನ್ನು ಸ್ವಾಧೀನಪಡಿಸಿ ಗಳಿಸಿದ ವಿಜಯ ಅತ್ಯಪೂರ್ವವಿದ್ದರೆ ಅದು ಆತನ ೪೦-೫೦ಸಾವಿರ ಪಳಗಿದ ಸೈನಿಕರ ಕೌಶಲ್ಯದ ಕುರಿತೂ ನುಡಿಯುತ್ತದೆ[೨]. ಆತ ದಕ್ಷಿಣಕನ್ನಡದ ನಾಯಕನನ್ನು ಹತೋಟಿಗೆ ತಂದ. ಮಂಗಳೂರಿನಲ್ಲಿನ 'ಸಾವ್ ಸೆಬಶಾವ್' ದುರ್ಗವನ್ನು ಕಸುವಿನ ವಿರೋಧವಿದ್ದಾಗಲೂ ಹಿಂಜರಿಯದೆ ಸ್ವಾಧೀನ ಪಡಿಸಿಕೊಂಡ. ಈ ರೀತಿಯಲ್ಲಿ ಆತ ಕರಾವಳಿ ಪ್ರಾಂತ್ಯದ ಅಧಿನಾಯಕನಾದ ಮತ್ತು ಕರಿಮೆಣಸು ಹಾಗೂ ಅಕ್ಕಿಯ ಮಾರುಕಟ್ಟೆಯನ್ನು ಪೋರ್ಚುಗೀಸ್, ಡಚ್ಚರಿರಲಿ ಅಥವಾ ಬ್ರಿಟಿಷ್, ಅರಬರಿರಲಿ ಅಧಿಕ ಬೆಲೆಯೀಯುವ ಎಲ್ಲೊಬ್ಬರಿಗೂ ತೆರವಾಗಿಟ್ಟ.

ಶಿವಪ್ಪ ನಾಯಕ ರೈತರು, ಕೈಕುಸುರಿನ ಕೆಲಸ ಮಾಡುವವರು, ವರ್ತಕರು, ಕೊಂಕಣಿಗರು (ವೈಷ್ಣವ ಸಾರಸ್ವತರು) ಮುಂತಾದವರನ್ನು ವೇಣುಪುರದ ವಿಕಾಸಕ್ಕಾಗಿ ಆಮಂತ್ರಿಸಿ, ಅವರ ವಾಸ್ತವ್ಯಕ್ಕೆ ತಕ್ಕ ಸ್ಥಾನಗಳನ್ನು ನಿಶ್ಚಯಿಸಿ ಅಲ್ಲಿ ತಳವೂರುವರೆ ಪ್ರೇರೇಪಿಸಿದ. ಕಾಲಕ್ರಮೇಣ ಅದು ನಗರವೊಂದಾಗಿ ಬೆಳೆದು, ಪ್ರಮುಖ ಕೇಂದ್ರವಾಗಿ ರೂಪುಗೊಂಡಿತು. ನಗರವೆಂದು ಪ್ರಸಿದ್ಧಿಗೊಂಡ ವೇಣುಪುರ ಮುಂದೆ 'ನಗರ' ಎಂಬ ಹೆಸರಿನಿಂದಲೇ ಪರಿಚಿತವಾಯಿತು.

೧೬೫೬ರಲ್ಲಿ ಪಲಾಯನ ಮಾಡಿದ್ದ ಮೂರನೆಯ ಶ್ರೀರಂಗ ಬೆದನೂರಿನಲ್ಲಿ ಆಶ್ರಯ ಬಯಸಿದಾಗ ಶಿವಪ್ಪ ತನ್ನ ಸಾಮರ್ಥ್ಯದ ಕುರಿತು ಶಂಕೆಗೊಂಡಿದ್ದ. ೧೬೫೯ರಲ್ಲಿ ಆತನಿಗೆ ಬೇಲೂರು ಮತ್ತು ಸಕ್ಕರೆ ಪಟ್ಟಣಗಳ ಅಧಿಕಾರವನ್ನಿತ್ತು ಆತನ ಪರವಾಗಿ ಸೆರಿಂಗಪಟಂ ಮೇಲಕ್ಕೆ ದಂಡೆತ್ತಿ ಹೋದ. ಮುಂದೆ ಆತನನ್ನು ಸ್ವತಂತ್ರ ಅರಸನೊಬ್ಬನನ್ನಾಗಿ ಮಾಡಿದ.

ದುರದೃಷ್ಟಕ್ಕೆ ಆತ ಮೈಸೂರಿನ ಯುದ್ಧದಲ್ಲಿ ಸಿಕ್ಕಿಬಿದ್ದ. ಮೈಸೂರಿನ ವರ್ಚಸ್ಸನ್ನು ಬೇಲೂರಿನ ಉತ್ತರೆಯವರೆಗೆ ಸೀಮಿತಗೊಳಿಸುವಲ್ಲಿ ಆತ ಆರಂಭದಲ್ಲಿ ಯಶಸ್ವಿಯಾದ. ೧೬೫೯ರಲ್ಲಿ ಆತ ಮೈಸೂರಿನ ಸೇನೆಯನ್ನು ಸೋಲಿಸಿ, ಅಪೂರ್ವ ವಿಜಯ ಸಂಪಾದಿಸಿದ. ಆದರೆ ಕೊನೆಗೆ ಸೆರಿಂಗಪಟಂವನ್ನು ಸ್ವಾಧೀನಪಡಿಸಿಕೊಳ್ಳಲಾರದೆ ಸೇನೆಯೊಂದಿಗೆ ತನ್ನ ರಾಜಧಾನಿಗೆ ಮರಳಿದ. ಆತನ ಈ ದಂಡಯಾತ್ರೆಯಿಂದಾಗಿ ಕೆಳದಿಯೊಂದಿಗಿನ ಮೈಸೂರಿನ ಸಂಬಂಧ ಮುರಿದುಕೊಂಡರೆ ಅದು ಕೊನೆಯ ತನಕ ಹಾಗೆಯೇ ಉಳಿದುಕೊಂಡಿತು.

೫. ಎರಡನೆಯ ವೆಂಕಟಪ್ಪ ನಾಯಕ

ಶಿವಪ್ಪನ ಸಹೋದರ ಹಾಗೂ ಉತ್ತರಾಧಿಕಾರಿಯಾಗಿದ್ದ ಎರಡನೆಯ ವೆಂಕಟಪ್ಪ ನಾಯಕ (೧೬೬೦-೧೬೬೨) ನ ಆಳ್ವಿಕೆಯ ಕಾಲ ಬಸ್ರೂರಿನಲ್ಲಿ ಆತನ ಧ್ವಜದೊಂದಿಗಿನ ಹಡಗೊಂದನ್ನು ಪೋರ್ಚುಗೀಸರು ಬಲಾತ್ಕಾರಪೂರ್ವಕ ಸ್ವಾಧೀನಪಡಿಸಿಕೊಂಡರು. ಸೇಡುತೀರಿಸಲಾಗಿ ಆತ ಕೊಚ್ಚಿಯಿಂದ ಗೋವಾಕ್ಕೆ ಮರಳುತ್ತಿದ್ದ ಪೋರ್ಚುಗೀಸರ

ಧರ್ಮಗುರುವನ್ನು ಬಂಧಿಸಿದನಷ್ಟೇ ಅಲ್ಲ ಹಿಂದಿನ ದಿನಗಳಲ್ಲಿ ಸ್ವಾಧೀನ ಪಡಿಸಿಕೊಂಡಿದ್ದ ಏಳು ಯುದ್ಧ ನೌಕೆಗಳನ್ನು ಮರಳಿಸಲು ತಿರಸ್ಕರಿಸಿದ. ಪೋರ್ಚುಗೀಸರು ರಾಯಭಾರಿಯೊಬ್ಬನನ್ನು ಕಳುಹಿಸಿ ಧರ್ಮಗುರುವನ್ನು ಬಿಡುಗಡೆಗೊಳಿಸುವಲ್ಲಿ ಯಶಸ್ವಿಯಾದರು. ಆತನ ಉತ್ತರಾಧಿಕಾರಿ, ಶಿವಪ್ಪ ನಾಯಕನ ಮಗ ಭದ್ರಪ್ಪ ನಾಯಕ (೧೬೬೨-೧೬೬೪) ಬಿಜಾಪುರದ ಸುಲ್ತಾನನ ಕೈಯಿಂದ ಹಲವೊಂದು ಬಾರಿ ಸೋಲು ಕೊಂಡಿದ್ದ. ಆತನ ಉತ್ತರಾಧಿಕಾರಿ ಮೊದಲನೆಯ ಸೋಮಸೇಖರ ನಾಯಕ (೧೬೬೪-೧೬೭೧) ನ ಆಳ್ವಿಕೆಯ ಕಾಲ ಒಮ್ಮೊಂದೊಮ್ಮೆಗೆ ಕೆನರಾದ ಕರಾವಳಿ ಭಾಗದತ್ತ ಬಂದ (೧೬೬೫) ಶಿವಾಜಿ ಬಿದನೂರಿಗೆ ಹೋಗಿ ಅಪಾರ ಸಂಪತ್ತನ್ನು ಸುಲಿದುಕೊಂಡು ಹೋದ. ಆದಿಲ್‌ಶಾಹನ ಸೇನೆ ಆತನ ಪ್ರಾಂತ್ಯಕ್ಕೆ ದಾಳಿಯಿಕ್ಕಿ ಇಕ್ಕೇರಿಯ ಸಮೇತ ಮೂರು ಕೋಟೆಗಳನ್ನು ಸ್ವಾಧೀನಪಡಿಸಿಕೊಂಡಿತು. ಆದರೆ ಮುಂದೊಂದು ದಿನ ಅವುಗಳನ್ನು ಮರಳಿ ಸ್ವಾಧೀನ ಪಡಿಸಿಕೊಳ್ಳಲಾಯಿತು. ಕೊಳತ್ತಿರಿಯ ರಾಜಕುಮಾರಿಯೊಬ್ಬಳ ಸೂಚನೆಯ ಮೇರೆಗೆ ಆತ ಕೊಳತ್ತಿರಿ ಪ್ರಾಂತಕ್ಕೆ ದಂಡೆತ್ತಿ ಹೋಗಿ ನೀಲೇಶ್ವರದವರೆಗಿನ ಭೂಭಾಗವನ್ನು ತನ್ನ ರಾಜ್ಯದೊಂದಿಗೆ ಸೇರಿಸಿಕೊಂಡ. ಮಾತ್ರ ಇದು ಅನೇಕ ಸಣ್ಣ, ದೊಡ್ಡ ಯುದ್ಧಗಳಿಗೆ ಕಾರಣವಾಯಿತು. ಯುದ್ಧ ರಾಜ್ಯದ ಸಾಧನ, ಸಂಪತ್ತನ್ನು ಬರಿದಾಗಿಸಿತು. ಆತ ಮೈಸೂರಿನೊಂದಿಗಿನ ಯುದ್ಧದ ಉಪಾದ್ಯ್ಯಪಕ್ಕೊಳಗಾದ. ಪೋರ್ಚುಗೀಸರು ಆತನಿಗೆ ನೌಕಾದಳದ ಸಹಾಯವಿತ್ತರು. ಬದಲಿಗೆ ಅವರು ಮಂಗಳೂರು, ಬಸ್ರೂರು, ಹೊನ್ನಾವರಗಳಲ್ಲಿ ವ್ಯಾಪಾರದ ಮಳಿಗೆಗಳನ್ನು ಕಟ್ಟುವರೆ ಪರವಾನಿಗೆ ಕೊಂಡರು.

ಆಳ್ವಿಕೆಯ ಕೊನೆಯ ದಿನಗಳಲ್ಲಿ ಆತನಿಗೆ ಹುಚ್ಚು ಹಿಡಿಯಿತು. ಹುಚ್ಚು ಕೆರಳಿದಾಗ ವಿಷಯಾಭಿಲಾಷೆ ಪೂರೈಸಲು ಆತ ಹದ್ದು ಮೀರಿದ ದುಷ್ಕೃತ್ಯಗಳಿಗೆ ತೊಡಗಿದ; ಪ್ರಜೆಗಳು ರೋಸಿಕೊಂಡರು. ಬಿದನೂರಿನಲ್ಲಿದ್ದ ಬಿಜಾಪುರದ ರಾಯಭಾರಿಯ ನೆರವು ಕೊಂಡ ಕೆಲವರು ಕಾರಸ್ಥಾನ ಹೂಡಿ ಆತನನ್ನು ಕೊಂದಿಕ್ಕಿದರು. ಆತನಿಗೆ ಮಕ್ಕಳಿದ್ದಿರದಿದ್ದ ನಿಮಿತ್ತ ರಾಜ್ಯ ಅಪಾರ ಕಷ್ಟ, ಅನಿಶ್ಚಿತತೆಗೊಳಗಾಯಿತು. ಚಿತ್ತಸ್ಥೈರ್ಯಕೊಂಡ ವಿಧವೆ ರಾಣಿ ಚನ್ನಮ್ಮಾಜಿ ಅಪೂರ್ವ ಸಾಹಸ ತೋರಿ ಬಿಜಾಪುರದ ಕಾರಸ್ಥಾನಕ್ಕೆ ಪ್ರತಿರೋಧ ತೋರಿದಳು. ಆಕೆಯ ಸೇನೆ ಬಿಜಾಪುರದ ಪಕ್ಷ ಸೇರಿಕೊಂಡವರನ್ನು ಸದೆಬಡಿಯಿತು. ಆಕೆ ಕಾರಸ್ಥಾನ ನಡೆಸಿದ ಪ್ರತಿಯೊಬ್ಬರಿಗೂ ಶಿಕ್ಷೆಯಿತ್ತಳು. ಅಲ್ಲಿ ಮೊದಲನೆಯ ವೆಂಕಟಪ್ಪನಾಯಕನ, (ಹೆಣ್ಣಿನ ಕಡೆಯ), ನ್ಯಾಯಬಾಹ್ಯ ಮರಿಮೊಮ್ಮಗನನ್ನು ಹಕ್ಕುದಾರನೆಂದು ಸಾರುವ ಒಳಸಂಚು ನಡೆದಿತ್ತು. ಮಾಜಿ ಮಂತ್ರಿಗಳಲ್ಲಿನ ಇಬ್ಬರು ಪ್ರತಿಸ್ಪರ್ಧಿಯ ಪರವಾಗಿ ಪ್ರತಿ ಕಾರಸ್ಥಾನ ಹೂಡಿ ಕಾರ್ಯಸಿದ್ಧಿಗಾಗಿ ಬಿಜಾಪುರದ ರಾಯಭಾರಿಯನ್ನು ತಮ್ಮ ಪಕ್ಷಕ್ಕೆ ಒಲಿಸಿಕೊಂಡರು; ಆತ ಪ್ರತಿಸ್ಪರ್ಧಿಗಳ ಮೇಲಕ್ಕೆ ಹಲ್ಲೆ ಮಾಡಿ ಅವರ ನೇತಾರನನ್ನು ಕೊಂದಿಕ್ಕಿದ.

ಚನ್ನಮ್ಮಾಜಿ ಮಾಜಿ ಮಂತ್ರಿಗಳನ್ನು ತನ್ನತ್ತ ಒಲಿಸಿಕೊಂಡಳು. ಅವರು ೧೬೭೨ರಲ್ಲಿ ಆಕೆಯನ್ನು ಭುವನಗಿರಿಯ ರಾಣಿ ಎಂದು ಘೋಷಿಸಿದರು. ಆಕೆ ದಕ್ಷಿಣಕನ್ನಡದಲ್ಲಿನ ಅವಿಧೇಯರಿದ್ದ ಸಾಮಂತರಿಗೆ ತಕ್ಕ ಶಿಕ್ಷೆಯಿತ್ತಳು. ೧೬೭೪ರಲ್ಲಿ ಮೈಸೂರಿನ ಸೇನೆ ದಂಡೆತ್ತಿ ಬಂದಾಗ ಗೋಲ್ಕೊಂಡಾ ಮತ್ತು ಬಿಜಾಪುರ ಸೈನ್ಯದ ಸಹಾಯದಿಂದ ಅದನ್ನು ಪೂರ್ತಿಯಾಗಿ

ಸೋಲಿಸಿದಳು. ಮತ್ತೆ ಮೈಸೂರಿನ ಕೆಲವೊಂದು ಭಾಗಗಳನ್ನು ವಶಪಡಿಸಿಕೊಂಡಳು. (೧೭೫೪ರಲ್ಲಿ ಮೈಸೂರು ಅವನ್ನು ಮರಳಿ ಗಳಿಸಿಕೊಂಡಿತು). ಯುದ್ಧದಲ್ಲಾದ ನಷ್ಟಕ್ಕೆ ತಕ್ಕ ಪರಿಹಾರಕೊಂಡು ೧೬೭೮ರಲ್ಲಿ ಪೋರ್ಚುಗೀಸರಿಗೆ ಮಂಗಳೂರಿನಲ್ಲಿ ವ್ಯಾಪಾರದ ಮಳಿಗೆಯನ್ನು, ಭಟ್ಕಳ ಮತ್ತು ಅನ್ಯ ಸ್ಥಾನಗಳಲ್ಲಿ ಪ್ರಾರ್ಥನಾ ಮಂದಿರಗಳನ್ನು ಕಟ್ಟಲು ಪರವಾನಿಗೆ ಇತ್ತಳು. ಆಕೆಯ ಆಳ್ವಿಕೆಯಲ್ಲಿನ (೧೬೭೨-೧೬೯೭) ಅತ್ಯಂತ ಮಹತ್ತಿನ ಘಟನೆ ಅದು ಔರಂಗಜೇಬನ ಸೇನೆಯ ಸೋಲು. ಸಂಭಾಜಿಯ ಮರಣಾನಂತರ ಮೊಗಲರು ಬೆನ್ನು ಹತ್ತಿದ್ದ ಮರಾಠಾ ಅರಸು ರಾಜಾರಾಮ ೧೬೯೧ರಲ್ಲಿ ಆಕೆಯ ಆಶ್ರಯ ಕೋರಿದ. ಕೋಪೋದ್ವಿಗ್ನನಾಗಿದ್ದ ಔರಂಗಜೇಬ್ ರಾಜಾರಾಮನನ್ನು ತನ್ನ ವಶಕ್ಕೀಯಬೇಕೆಂದೂ ಅದಿಲ್ಲದಲ್ಲಿ ಆಕೆಯ ರಾಜ್ಯದ ಮೇಲೆ ದಂಡೆತ್ತಿ ಬರುವುದಾಗಿ ಬೆದರಿಕೆ ಇತ್ತ. ಶೂರಳಿದ್ದ ಅರಸಿ ಎದೆಗೆಡದೆ ಬೆದರಿಕೆಯನ್ನು ತಿರಸ್ಕಾರ ದೃಷ್ಟಿಯಿಂದ ಕಂಡಳಷ್ಟೇ ಅಲ್ಲ, ನಂತರದ ಯುದ್ಧದಲ್ಲಿ ಮೊಗಲರ ಸೇನೆಯ ಬೆನ್ನು ಮುರಿದು ಚಿರಂತನ ಕೀರ್ತಿಗಳಿಸಿದಳು. ತನ್ನ ಆಳ್ವಿಕೆಯ ಮೊದಲ ದಿನಗಳಲ್ಲಿ ದತ್ತಕ್ಕೆ ಕೊಳ್ಳಲಾಗಿ ಬಸಪ್ಪ ನಾಯಕನನ್ನು ವಿಚಾರಪೂರ್ವಕ ಆರಿಸಿದ ಆಕೆ ಆತನಿಗೆ ಯೋಗ್ಯ ಶಿಕ್ಷಣವಿತ್ತು ರಾಜಕಾರ್ಯ ನಿಭಾಯಿಸಲು ತಕ್ಕ ತರಬೇತನ್ನಿತ್ತಳು. ತನ್ನ ಆಳ್ವಿಕೆಯ ಕೊನೆಯ ದಿನಗಳಲ್ಲಿ ರಾಜ್ಯದ ಆಡಳಿತೆಯನ್ನು ಆತನ ಕೈಗಳಿಗಿತ್ತು ನಿವೃತ್ತಳಾದಳು. ೧೬೯೮ರಲ್ಲಿ ಆಕೆ ತೀರಿಕೊಂಡಳು.

೬. ಮೊದಲನೆಯ ಬಸವಪ್ಪ ನಾಯಕ

ಎಡೆಬಿಡದೆ ನಡೆಯುತ್ತಿದ್ದ ತಿಕ್ಕಾಟದ ದಿನಗಳಲ್ಲಿ ಮೊದಲನೆಯ ಬಸವಪ್ಪ ನಾಯಕ (೧೬೯೭-೧೭೧೪) ಪೋರ್ಚುಗೀಸರೊಂದಿಗೆ ನಿಷ್ಠುರತೆಯಿಂದ ವರ್ತಿಸಿದ. ೧೭೦೦ರಲ್ಲಿ ಕೆನರಾದಿಂದ ಖರೀದಿ ಮಾಡಿದ ಅಕ್ಕಿಯ ಮೇಲಣ ತೆರಿಗೆಯನ್ನು ಕೂಡಲೇ ತೆರುವಂತೆ ಅವರನ್ನು ಒತ್ತರಿಸಿದ. ೧೭೦೭ರಲ್ಲಿ ಮಂಗಳೂರನ್ನು ಆಕ್ರಮಿಸುವ ಮತ್ತು ಆತನ ಇನ್ನಿತರ ಪ್ರಾಂತಗಳ ಮೇಲೆ ದಂಡೆತ್ತಿ ಹೋಗುವ ಪೋರ್ಚುಗೀಸರ ಪ್ರಯತ್ನ ವಿಫಲವಾಗಿ ಒಪ್ಪಂದವೊಂದರಲ್ಲಿ ಮುಕ್ತಾಯವಾಯಿತು. ೧೭೧೪ರಲ್ಲಿ ಮಂಗಳೂರಿನಲ್ಲಿ ಮಗುದೊಮ್ಮೆ ಯುದ್ಧವಾಯಿತಾದರೂ ಅತ್ಯಲ್ಪ ಕಾಲದಲ್ಲೇ ಕೊನೆಗೊಂಡು ಶಾಂತಿ ನೆಲೆಸಿತು. ಮರಾಠರು ಆತನ ಪ್ರಾಂತಕ್ಕೆ ದಂಡೆತ್ತಿಹೋಗಿ ಆತನ ಸಹೋದರ ಮತ್ತು ಉತ್ತರಾಧಿಕಾರಿಯಾಗಿದ್ದ ಎರಡನೆಯ ಸೋಮಶೇಖರ ನಾಯಕ (೧೭೧೪-೧೭೩೯) 'ಚೌಥಾಯಿ' ಯೀಯುವಂತೆ ಒತ್ತರಿಸಿದರು. ೧೭೩೨ರ ಬಳಿಕ ಆತನ ಹೆಚ್ಚಿನ ಕಾಲ ಕೊಳತ್ತಿರಿ ಮನೆತನ (ಕುರುಂಬನಾಡ್ ತಾಲೂಕು) ದೊಂದಿಗಿನ ಅಂತ್ಯವಿಲ್ಲದ ಅಂತಃಕಲಹದಲ್ಲಿ ಕಳೆದುಹೋಯಿತು. ಈ ಸಂದರ್ಭದಲ್ಲಿ ಆತ ಗೋವಾಕ್ಕೆ ರಾಯಭಾರಿಯೊಬ್ಬನನ್ನು ಕಳುಹಿಸಿದ; ಪ್ರಾಯಶಃ ಅವರಿಂದ ಆತನಿಗೆ ಸಹಾಯದೊರಕಿದ್ದುದು ಕಾಣಬರುತ್ತದೆ. ಮೊದಲ ದಿನಗಳಲ್ಲಿ ಆತನ ಸೇನೆಗೆ ಯಶಸ್ಸು ದೊರಕಿತು. ಆದರೆ ಅವರ ಆಕ್ರಮಣದಿಂದ ಕಣ್ಣನೂರಿನಲ್ಲಿನ ಡಚ್ ಮತ್ತು ತೆಲ್ಲಿಚೇರಿಯಲ್ಲಿನ ಇಂಗ್ಲಿಷ್ ವ್ಯಾಪಾರಿಗಳ ವ್ಯಾಪಾರಕ್ಕೆ ತೀವ್ರ ಭಾದೆಯಾಯಿತು. ಅವರು ಕೊಳತ್ತಿರಿ ಅರಸನ ಪರವಾಗಿ ನಡುವೆ ಬಂದು ಬೆದನೂರಿನ ಸೇನೆ ಹಿಮ್ಮೆಟ್ಟುವಂತೆ ಮಾಡಿದರು. ಅನಂತರ ಆತನ ಸೇನೆಗೆ ಯಶಸ್ಸು ದೊರಕಿತು. ಆದರೆ ಯುದ್ಧ ಆತನ

ಬೊಕ್ಕಸವನ್ನು ಬರಿದಾಗಿಸಿತು. ಆತನ ಸೋದರಳಿಯ ಮತ್ತು ಉತ್ತರಾಧಿಕಾರಿಯಿದ್ದ ಎರಡನೆಯ ಬಸವಪ್ಪ ನಾಯಕನ (೧೭೩೯-೧೭೫೫) ಆಳ್ವಿಕೆ ಮೊದಲ್ಗೊಂಡು ರಾಜಮನೆತನ ದುರ್ದಿನಗಳನ್ನು ಕಾಣಲಾರಂಭಿಸಿತು. ಕೊಳತ್ತಿರಿಯಲ್ಲಿ ಇಡಬೇಕಾಗಿದ್ದ ಸೇನೆಯ ಖರ್ಚು, ರಾಜ್ಯದ ಸಾಧನ ಸಂಪತ್ತುಗಳ ಮೇಲಕ್ಕೆ ಎಲ್ಲಿಲ್ಲದ ಒತ್ತಡ ಹಾಕಲಾರಂಭಿಸಿತು. ಎರಡು ಬಾರಿ ದಂಡೆತ್ತಿ ಬಂದ ಮರಾಠರು ದೊಡ್ಡ ಮೊತ್ತದ ಕಪ್ಪ ಕೊಂಡು ಹೋದರು.

೭. ರಾಣಿ ವೀರಮ್ಮಾಜಿ

ವೀರಮ್ಮಾಜಿ ಶೂರ, ಕುಶಲ ಪ್ರಶಾಸಕರಲ್ಲೊಬ್ಬಳಾಗಿದ್ದಳು. ಪುರುಷರ ಪೋಷಾಕು ಧರಿಸುತ್ತಿದ್ದ ಈಕೆ ತನ್ನ ಪ್ರೇಮ ಪ್ರಕರಣ ರಾಜ್ಯದ ಕಾರ್ಯಭಾರಗಳಲ್ಲೆಲ್ಲೂ ತಲೆಯೆತ್ತದಂತೆ ನೋಡಿಕೊಳ್ಳುತ್ತಿದ್ದಳು. ಇಂಗ್ಲಿಷರು ಹೊನ್ನಾವರದಲ್ಲಿ ಸುಭದ್ರ ವ್ಯಾಪಾರದ ಮಳಿಗೆಯನ್ನು ಕಟ್ಟಲು ಪರವಾನಿಗೆ ಮತ್ತು ಇನ್ನಿತರ ರಿಯಾಯತಿಗಳನ್ನು ಪಡೆದರು.

೧೭೬೨ರಲ್ಲಿ ವಿಜಯ ಯಾತ್ರೆಗೆ ಹೊರಟಿದ್ದ ಹೈದರ್‌ಆಲಿ ಚಿತ್ರಲ ದುರ್ಗ ಗೆದ್ದುಕೊಂಡ. ಅಲ್ಲಿ ಆತ ಎರಡನೆಯ ಬಸವಪ್ಪನೆಂದು ಸೋಗು ಹಾಕಿದ್ದ ನೇಕಾರರ ಸಮಾಜದ ವ್ಯಕ್ತಿಯೊಬ್ಬನನ್ನು ಕಂಡ. ಆತನನ್ನು ಅಂಬಾರಿ ಹಾಕಿದ್ದ ಆನೆಯ ಮೇಲಕ್ಕೆ ಕುಳ್ಳಿರಿಸಿ ಮೆರವಣಿಗೆಯಲ್ಲಿ ಬಿದನೂರಿನತ್ತ ಸಾಗಿದ. ವೀರಮ್ಮಾಜಿ ಸವಣ್ಣೂರಿನ ನವಾಬನ ಸಹಾಯ ಕೋರಿದಳು. ಆತ ಸಶಕ್ತ ಸೇನೆಕೊಂಡು ಅಪೂರ್ವ ಸಾಹಸದಿಂದ ದುರ್ಗದ ರಕ್ಷಣೆ ಮಾಡಿದ. ಹೈದರ್ ಆಲಿ, ದೇಶದ್ರೋಹಿಯೊಬ್ಬ ತೋರಿಸಿದ ದುರ್ಗದ ಗುಪ್ತದ್ವಾರದ ಮೂಲಕ ನಗರವನ್ನು ಪ್ರವೇಶಿಸಿದ. ಮತ್ತೆ ೧೭೬೩ರ ಜನವರಿ ತಿಂಗಳಲ್ಲಿ ಬಿದನೂರನ್ನು ಸ್ವಾಧೀನಪಡಿಸಿದ. ಹೈದರ್ ಸೂರೆ ಮಾಡಿದ ಸಂಪತ್ತು ೧೬ ಕೋಟಿಗಳಷ್ಟರದ್ದಿತ್ತೆಂದು ಅಂದಾಜು ಮಾಡಲಾಗಿದೆ. ವೀರಮ್ಮಾಜಿ ತನ್ನ ಪ್ರಿಯಕರ ಮತ್ತು ಮೂರನೆಯ ಸೋಮಶೇಖರ ನಾಯಕನ ಸಮೇತ ಮತ್ತು ಸುರಕ್ಷಿತವಿದ್ದ ಕವಲಿದುರ್ಗ (ಭುವನಗಿರಿ) ದುರ್ಗಕ್ಕೆ ಪಲಾಯನ ಮಾಡಿದಳು. ಹೈದರ್ ದುರ್ಗಕ್ಕೆ ಮುತ್ತಿಗೆ ಹಾಕಿದ. ವೀರಮ್ಮಾಜಿಯನ್ನು ಸೆರೆಹಿಡಿದು ಮದ್ದುಗಿರಿಯಲ್ಲಿ ಬಂಧಿಯಾಗಿಟ್ಟ. ೧೭೬೪ರಲ್ಲಿ ಆಕೆಯ ಬಿಡುಗಡೆಯಾಯಿತು. ಮೂರನೆಯ ಸೋಮಶೇಖರನ ವಂಶಜರು ಧಾರ್ವಾರ ಜಿಲ್ಲೆಯ ನರ್ಗುಂಡದಲ್ಲಿ ವಾಸಮಾಡುತ್ತಿದ್ದಾರೆಂದು ಹೇಳಲಾಗುತ್ತದೆ. ಬಿದನೂರು ಅಂದಿನಿಂದ ಮೈಸೂರಿನ ಭಾಗವಾಗಿ ಉಳಿದುಕೊಂಡಿದೆ.

೮. ವಿದ್ಯೆ, ಸಾಹಿತ್ಯ, ಲಲಿತ ಕಲೆಗಳ ಪೋಷಣೆ

ಕೆಳದಿ, ಇಕ್ಕೇರಿ, ನಗರ, ಬಿದನೂರು ಮುಂತಾದ ರಾಜ್ಯಗಳ ಅರಸರು ಆ ರಾಜ್ಯಗಳ ರಾಜಧಾನಿಯ ಹೆಸರಿನಿಂದ ಪರಿಚಿತರಾಗಿದ್ದರು.

ಅಧಿಕಾರದ ಉಚ್ಛ್ರಾಯಾವಸ್ಥೆಯ ದಿನಗಳಲ್ಲಿ ಅವುಗಳ ಅರಸರು ಮೈಸೂರಿನ ಸದ್ಯದ ಕಡೂರು, ಶಿಮೊಗ್ಗ, ಹಾಸನ ಜಿಲ್ಲೆಗಳನ್ನು ಉತ್ತರ ಕನ್ನಡದ ದಕ್ಷಿಣ ಭಾಗದಲ್ಲಿನ ಹೊನ್ನಾವರ, ಕುಮ್ಟಾ, ಭಟ್ಕಳ ತಾಲೂಕುಗಳನ್ನು, ಸಮಗ್ರ ದಕ್ಷಿಣ ಕನ್ನಡ ಮತ್ತೆ ಕಣ್ಣಾನೂರಿನವರೆಗಿನ ಕರಾವಳಿ ಭೂಭಾಗವನ್ನು ಆಳಿಕೊಂಡಿದ್ದರು. ಮದುರೆಯ ನಾಯಕರು,

ದಕ್ಷಿಣದ ಇನ್ನಿತರ ಅರಸರಂತಲ್ಲದೆ ಕೊನೆಯ ತನಕವೂ ವಿಜಯ ನಗರದ ಅರಸರಲ್ಲಿ ನಿಷ್ಠೆ ತೋರಿದವರಿದ್ದರು. ರಕ್ಕಸತಂಗಡಿಯ ವಿನಾಶಕಾರಿ ಕಾಳಗದ ಕೆಲವೇ ದಶಕಗಳ ಬಳಿಕ, ೧೫೯೨ರಲ್ಲಿ ಮಠವೊಂದಕ್ಕಿತ್ತ ದಾನದ ಶಾಸನದಲ್ಲಿ ಮೊದಲನೆಯ ವೆಂಕಟಪ್ಪ ನಾಯಕ ತನ್ನನ್ನು 'ವೆಂಕಟಪ್ಪ ರಾಯನ ಸಾಮಂತ, ಶಿವ ಮತ್ತು ಗುರುಜನರ ಭಕ್ತ' ನೆಂದು ಕರೆದುಕೊಂಡಿರುತ್ತಾನೆ. ಮೊದಲನೆಯ ವೆಂಕಟಪ್ಪ ನಾಯಕ, ವೀರಭದ್ರಪ್ಪ ನಾಯಕ ಮತ್ತು ಶಿವಪ್ಪ ನಾಯಕರ ಆಳ್ವಿಕೆಯ ದಿನಗಳಲ್ಲಿ ಮೈಸೂರು ಮತ್ತು ಸೋದೆಗಳೊಂದಿಗೆ ನಿರಂತರ ನಡೆಯುತ್ತಿದ್ದ ಕಾದಾಟಗಳಿಂದಾಗಿ ಅವರ ಸಾಮರ್ಥ್ಯ, ಸಾಧನ, ಸಂಪತ್ತುಗಳು ಕ್ಷಯಿಸಿಕೊಂಡವು.

ಅವರು ಧರ್ಮಸಹಿಷ್ಣುಗಳಾಗಿದ್ದರು. ಅವರ ಕುಟುಂಬದ ದೇವರು ಕೆಳದಿಯ ರಾಮೇಶ್ವರ ; ಕುಲಸ್ವಾಮಿನಿ ದಕ್ಷಿಣಕನ್ನಡದ ಕೊಲ್ಲೂರಿನಲ್ಲಿನ ಮುಕಾಂಬಿಕೆ. ಅವರ ಹಲವೊಂದು ಅಗ್ರಹಾರಗಳನ್ನು ಕಟ್ಟಿಸಿ, ವಿದ್ವಾಂಸರಿದ್ದ ಬ್ರಾಹ್ಮಣರಿಗೆ ಉಂಬಳಿಯಾಗಿತ್ತರು. ಅವರು ಕೊಲ್ಲೂರು, ಗೋಕರ್ಣಗಳಿಗೆ ಅನೇಕ ಬಾರಿ ಯಾತ್ರೆ ಮಾಡಿದರು. ಶೃಂಗೇರಿಯ ಮಠದೊಂದಿಗೆ ಅವರ ನಿಕಟಸಂಬಂಧವಿತ್ತು. ಅವರಲ್ಲಿನ ಪ್ರತಿಯೊಬ್ಬರೂ ಮಠಕ್ಕೆ ಅಪಾರ ಕಾಣಿಕೆ, ಉಂಬಳಿಗಳನ್ನಿತ್ತರು. ಅವರಲ್ಲಿನ ರಾಮರಾಜನಾಯಕ (೧೫೭೦-೧೫೭೬) ತನ್ನ ಅಜ್ಜ ಸದಾಶಿವ ನಾಯಕನ ಆತ್ಮ ಈಶ್ವರನೊಂದಿಗೆ ಐಕ್ಯವಾಗಲೆಂಬ ಉದ್ದೇಶಕೊಂಡು ಉಡುಪಿಯ ಶ್ರೀಕೃಷ್ಣನ ಪೂಜೆಗಾಗಿ ಸೋದೆ ಮಠದ ವಾದಿರಾಜ ತೀರ್ಥರಿಗೆ ಭೂಖಂಡವೊಂದನ್ನಿತ್ತ. ೧೬೩೧ರಲ್ಲಿ ಮೊದಲನೆಯ ವೆಂಕಟಪ್ಪ ನಾಯಕ ಹೂವಿನ ಕೆರೆ ಗ್ರಾಮವನ್ನು ಶ್ರೀಕೃಷ್ಣನ ದೇವಸ್ಥಾನಕ್ಕೆ ಒಪ್ಪಿಸಿದ. ಮತ್ತೆ ಭುವನಗಿರಿ ದುರ್ಗದಲ್ಲಿ ಮಸೀದಿ ಕಟ್ಟಿಸಿದ. ಕರಾವಳಿ ಕೆನರಾದಲ್ಲಿನ ಮುಖ್ಯತಃ ತನ್ನ ಸೇನೆಯಲ್ಲಿನ ರೋಮನ್ ಕೆಥೋಲಿಕ್ ಕ್ರಿಸ್ತೀಯರ ಧರ್ಮಸಂಬಂಧಿ ಅವಶ್ಯಕತೆಗಳನ್ನು ಪೂರೈಸಲಾಗಿ ಭಾರತೀಯರಿದ್ದ ಕ್ರೈಸ್ತ ಧರ್ಮಗುರುಗಳನ್ನು ಕಳುಹಿಸುವರೆ ೧೬೩೧ರಲ್ಲಿ ಮೊದಲನೆಯ ವೆಂಕಟಪ್ಪ ನಾಯಕ ಗೋವಾದ ಮುಖ್ಯ ಬಿಷಪ್‌ರಿಗೆ ಪರವಾನಿಗೆ ಇತ್ತ. ರಾಣಿ ಚನ್ನಮ್ಮಾಜಿ ರೋಯನ್, ಚಂದವನ, ಭಟ್ಕಳ ಮತ್ತು ಕಲ್ಯಾಣಪುರಗಳಲ್ಲಿ ಕ್ರಿಸ್ತರ ಆರಾಧನಾ ಮಂದಿರಗಳನ್ನು ಕಟ್ಟುವರೆ ಪೋರ್ಚುಗೀಸರಿಗೆ ಅನುಮತಿ ಇತ್ತಳು.

ಕೆಳದಿಯ ನಾಯಕರು ಕನ್ನಡ - ಸಂಸ್ಕೃತ ಭಾಷೆಗಳಲ್ಲಿ ನೈಪುಣ್ಯಕೊಂಡಿದ್ದಂತೆ ಸಾಹಿತ್ಯ ಕಲೆಗಳ ಪ್ರಸಿದ್ಧ ಪೋಷಕರೂ ಆಗಿದ್ದರು. ಮೊದಲನೆಯ ವೆಂಕಟಪ್ಪ ನಾಯಕ ಸಂಗೀತ, ನೃತ್ಯಗಳಿಗೆ ಪ್ರೋತ್ಸಾಹನೆಯಿತ್ತ. ಇಕ್ಕೇರಿಯ ತನ್ನ ಅರಮನೆಯಲ್ಲಿ ಆತ ನಾಟ್ಯಶಾಲೆಯೊಂದನ್ನು ಕಟ್ಟಿಸಿದ. ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿನ ಸಾಹಿತ್ಯದ ರಚನೆಗೆ ತಿರುಮಲಭಟ್ಟ, ರಂಗನಾಥ ದೀಕ್ಷಿತ ಮುಂತಾದ ಪಂಡಿತರಿಗೆ ಪ್ರೋತ್ಸಾಹನೆಯಿತ್ತ. ಪ್ರಖ್ಯಾತ ಭಟ್ಟೋಜಿ ಆತನ ಆಸ್ಥಾನದಲ್ಲಿದ್ದನೆನ್ನುತ್ತಾರೆ. ಎರಡನೆಯ ಬಸವಪ್ಪ ನಾಯಕ, ಕೆಳದಿ ರಾಜಮನೆತನದ ಇತಿಹಾಸಕ್ಕೆ ಸಂಬಂಧಿಸಿದ ಬೃಹದ್ಗ್ರಂಥ, 'ಶಿವತತ್ವ ರತ್ನಾಕರ' ಬರೆದ.

ಮಲೆನಾಡಿನ ವಾಸ್ತುಶಿಲ್ಪ ಪದ್ಧತಿಯನ್ನನುಸರಿಸಿ ಎಷ್ಟೊಂದೋ ವಾಸ್ತುಗಳು ನಿರ್ಮಿಸಲ್ಪಟ್ಟವು. ಅಲ್ಲಿ ಹೊಯ್ಸಳ ಮತ್ತು ದ್ರಾವಿಡ ಶೈಲಿಗಳ ಸುಸಂಗತ

ಸಂಯೋಜನೆಯಿತ್ತು. ಸಾಗರದಿಂದ ಮೂರು ಮೈಲುಗಳ ದೂರದಲ್ಲಿ ಸದಾಶಿವ ನಾಯಕ ಕಟ್ಟಿಸಿದ ಅಘೋರೇಶ್ವರ ದೇವಾಲಯದ ಕಲ್ಪನೆ ಮತ್ತು ಅದರ ನಿರ್ಮಾಣ ಅತ್ಯಪೂರ್ವವಿದೆ.

೯. ರಾಜ್ಯದಲ್ಲಿ ಸ್ಮಾರ್ತ ಸಾರಸ್ವತರು

ಸಾರಸ್ವತರಲ್ಲಿನ ' ಸ್ಮಾರ್ತರು ದೊಡ್ಡ ಪ್ರಮಾಣದಲ್ಲಿ ನಗರದ ಅರಸರಲ್ಲಿ ಕೆಲಸಕ್ಕಿದ್ದರು. ಮನೆವಾರ್ತೆ ಹೆಗ್ಗಡೆ (ಅರಮನೆಯ ಕಾರ್ಯದರ್ಶಿ), ಉಗ್ರಾಣದ ಹೆಗ್ಗಡೆ (ಉಗ್ರಾಣದ ಪಾರುಪತ್ಯಗಾರ), ಬಿಳೀಮಹಲ್ ಹೆಗ್ಗಡೆ (ಅರಮನೆಯ ಪಾರುಪತ್ಯಗಾರ), ಚಿಕ್ಕರಮನೆ ಹೆಗ್ಗಡೆ (ಯುವರಾಜನ ಅರಮನೆಯ ಪಾರುಪತ್ಯಗಾರ), ಪಂಡಿತ (ಅಶ್ವಪಂಡಿತ ಅಥವಾ ಲಾಯದ ಪಂಡಿತ, ಪಶುಗಳ ಶಸ್ತ್ರ ಚಿಕಿತ್ಸಾ ತಜ್ಞ), ನಗರ ಕಟ್ಟೆ (ಸುಂಕದ ಕಟ್ಟೆಯ ನಿರ್ವಾಹಕ), ಫೌಜ್ದಾರ್ (ಶಸ್ತ್ರಸ್ತ್ರ ಪೋಲೀಸ್ ಪಡೆಗಳ ಮುಖ್ಯಾಧಿಕಾರಿ), ಲಾಭಾದಾಯ (ಲೆಕ್ಕಿಗ), ಮತ್ತು ಕಡ್ಲೆ ಅಥವಾ ಕಡ್ಲೆ ಹೆಗ್ಗಡೆ (ಅರಮನೆಯ ಅಶ್ವ ಶಾಲೆಗೆ ಕಡಲೆ ಸರಬರಾಯಿ ಮಾಡುವಾತ) - ಇವರು ಅವರಲ್ಲಿನ ಕೆಲವರು.

ಆಗತ್ಯವಿದ್ದಾಗ, ಅರಸು ಬಳಸಲಾಗಿ ಪೋಷಿಸಿದ ಚಿಕ್ಕ ಸೇನೆಯ ಖರ್ಚಿಗೆಂದು ೧೭೬೯ರಲ್ಲಿ ಚಿಕ್ಕರಮನೆಯ ಮನೆತನದವರಿಗೆ ಕೆನರಾದಲ್ಲಿನ ಉಳ್ವರೆಯಲ್ಲಿ ಸ್ವಲ್ಪ ಜಮೀನನ್ನೀಯಲಾಗಿತ್ತು.

ಅಮ್ಮಾಡಿ ಕುಟುಂಬದ ಶಾಖೆಯೊಂದರ ಪೂರ್ವಜರಲ್ಲಿನ ರಂಗಯ್ಯ ಸಂಗೀತದಲ್ಲಿ ಪಾಂಡಿತ್ಯ ಕೊಂಡವನಿದ್ದ. ಆತ ಅಮ್ಮಾಡಿಯಲ್ಲಿನ ಕುರುಕ ನಾಡನ್ನು ಇನಾಮಿನ ರೂಪದಲ್ಲಿ ಗಳಿಸಿದ. ಹರಿದಾಸರ ಎರಡು ಶಾಖೆಗಳ ' ಮತ್ತು ಕೆಸರ್ಕೋಡಿ ಕುಟುಂಬದ ಪೂರ್ವಜರೆಂದು ಪರಿಗಣಿಸಲ್ಪಟ್ಟ ಬಂಧುಗಳಿಬ್ಬರು ಕೊಲ್ಲೂರಿನ ದೇವಸ್ಥಾನದ ಪ್ರತಿಷ್ಠಿತ ಸಂಗೀತಕಾರರಾಗಿದ್ದರು. ಅವರಲ್ಲಿ ಒಬ್ಬಾತ ಉಡುಕದ ವೆಂಕಟೇಸಯ್ಯ ಹುಡುಕ್ಕ ಬಾರಿಸುವಾತನಿದ್ದ. ಮತ್ತಿನ್ನೊಬ್ಬ ಸಾರಂಗ ಬಾರಿಸುವ ಸಾರಂಗದ ಸಾಂತಯ್ಯನಿದ್ದ.

ಕಾಗಲ ಕುಟುಂಬದ ನಾರಣಪ್ಪ ಕುಮಟಾ ತಾಲೂಕಿನ ಕಾಗಲ ದುರ್ಗದಲ್ಲಿ ಶಿರಸ್ತೇದಾರನಿದ್ದ.

ತಿಮ್ಮಯ್ಯ ಮತ್ತು ಆತನ ಇಬ್ಬರು ಸಹೋದರರು ಶಿರಾಲಿಯ ಮಣಕೆರೆ ದುರ್ಗದ ಕಿಲ್ಲೇದಾರರಾಗಿದ್ದರು. ಚಿದ್ರಮನ ನಾರಣಪ್ಪ ಮುರುಡೇಶ್ವರ ದುರ್ಗದ ಮೇಲ್ವಿಚಾರಕನಿದ್ದ; ಮುರುಡೇಶ್ವರಕ್ಕೆ ಬರುವ ಮುನ್ನ ಆತ ಕೊಡಗಿನ ಅರಸನ ಕೈಕೆಳಗೆ ಕೆಲಸ ಮಾಡುತ್ತಿದ್ದ. ಅವರಲ್ಲಿನ ಎಷ್ಟೋ ಮಂದಿ ಶಾನುಭಾಗ (ಕರಣಿಕ)ರ ವೃತ್ತಿಕೊಂಡಿದ್ದರು. ಧಾರೇಶ್ವರ ಕುಟುಂಬದ ಲಕ್ಷ್ಮಯ್ಯ ಮತ್ತು ಡೊಂಗರಕೇರಿ ಕುಟುಂಬದ ಪೂರ್ವಜರು ಶಾನುಭಾಗರಾಗಿದ್ದರು. ವತ್ಸ ಗೋತ್ರದ ಚಂದಾವರ ನಾಗಯ್ಯ ಸದ್ಯದ ಕುಮಟಾ ಮತ್ತು ಹೊನ್ನಾವರ ತಾಲೂಕುಗಳ ಹಲವೊಂದು ಮಾಗಣೆಗಳ ಶಾನುಭಾಗನಾಗಿದ್ದನೆನ್ನುತ್ತಾರೆ. ಇವರಲ್ಲಿ ಒಬ್ಬನನ್ನು ಮಾತ್ರ ಪ್ರತ್ಯೇಕವಾಗಿ ಉಲ್ಲೇಖಿಸಬಹುದಾಗಿದೆ. ಉತ್ತರಕನ್ನಡದ ಎಲ್ಲಾಪುರದಲ್ಲಿನ ನಾರಾಯಣಪ್ಪ ನಾಡಕರ್ಣಿ ಚದುರಂಗದ ಕುಶಲ ಆಟಗಾರನಾಗಿದ್ದ. ಆತ ತನ್ನ ಅಣ್ಣ ಭದ್ರಪ್ಪ ನಾಯಕನೊಂದಿಗಿನ ಕಲಹದ ನಿಮಿತ್ತ ಚಂದಾವರದಲ್ಲಿ ವಾಸ್ತವ್ಯಕ್ಕಿದ್ದ.

ಅದೊಮ್ಮೆ ಸೋಮಸೇಖರನೊಂದಿಗೆ ಚದುರಂಗದಾಟವಾಡುತ್ತಿದ್ದಾಗ ಹಲ್ಲಿ ಬಿದ್ದುದನ್ನು ಕಂಡು ಸೋಮಸೇಖರ ಅತ್ಯಲ್ಪ ಕಾಲದಲ್ಲೇ ಗದ್ದುಗೆ ಏರುವನೆಂದು ಭವಿಷ್ಯ ನುಡಿದ. ಅನಂತರದ ಕೆಲವೇ ದಿನಗಳಲ್ಲಿ ಭದ್ರಪ್ಪ ತೀರಿಕೊಂಡ; ಸೋಮಸೇಖರ ನಗರದ ಅರಸನಾದ. (೧೬೬೪-೬೯) ಸೋಮಸೇಖರ ನಾರಾಯಣಪ್ಪನಿಗೆ ತೋಳಿನಲ್ಲಿ ಧರಿಸಲೆಂದು ಬೆಳ್ಳಿಯ ಆಭರಣ ಮತ್ತು ಹಳ್ದಿಪುರದಲ್ಲಿ ಇನಾಮೊಂದನ್ನಿತ್ತ. ಆತ ನಾರಣಪ್ಪನನ್ನು ಗೆರ್ಸೊಪ್ಪ ಮತ್ತು ಚಂದಾವರಗಳ ಶಾನುಭಾಗನನ್ನಾಗಿ ನೇಮಿಸಿದ. ಆತನ ವಂಶಜರು ಉಭಯಕರರೆಂದು ಪರಿಚಿತರಾಗಿರುತ್ತಾರೆ.

೧೦. ಕೆಳದಿಯಲ್ಲಿ ವೈಷ್ಣವ ಸಾರಸ್ವತರು

ಸ್ಮಾರ್ತ ಸಾರಸ್ವತರ ನಂತರ ಬಂದ ವೈಷ್ಣವ ಸಾರಸ್ವತರೂ ನಗರದ ಅರಸರಲ್ಲಿ ಊಳಿಗಕ್ಕೆ ತೊಡಗಿದರು; ಅವರಲ್ಲಿ ಹಲವೊಬ್ಬರು ರಾಜ್ಯದಲ್ಲಿ ಉನ್ನತ ಹುದ್ದೆಕೊಂಡರು.

ಕೆಳದಿಯ ರಾಯಭಾರಿಗಳಲ್ಲಿ ಹೆಚ್ಚಿನವರು ಬ್ರಾಹ್ಮಣರಿದ್ದರು. ಗೋವಾದ ಪೋರ್ಚುಗೀಸರಲ್ಲಿನ ರಾಯಭಾರಿಯ ನೇಮಕಾತಿ ವೈಷ್ಣವ ಬ್ರಾಹ್ಮಣರ ಹಕ್ಕೊಂದರಂತಿತ್ತು.

೧೧. ವಿಠ್ಠಲ ಶೆಣ್ಯೆ

ಪೋರ್ಚುಗೀಸರ ಕಾಗದ ಪತ್ರಗಳಲ್ಲಿ ವಿಟುಲ ಸಿನಾಯಿ ಎಂದಾಗಿ ಸಂಬೋಧಿಸಲ್ಪಟ್ಟಿದ್ದ ವಿಠ್ಠಲ ಶೆಣ್ಯೆ ಪ್ರಸಿದ್ಧ ವ್ಯಕ್ತಿಯೊಬ್ಬ. ೧೬೨೩ರಲ್ಲಿ ಪೋರ್ಚುಗೀಸ್ ವೈಸರಾಯ್ ದೋಮ್ ಫ್ರಾನ್ಸಿಸ್ಕ್ ದ ಗುಮಾಯಿನ್ ಮೊದಲನೆಯ ವೆಂಕಟಪ್ಪ ನಾಯಕನಿಗೆ ಕಳುಹಿಸಿದ ವಿಸ್ತೃತ ವರದಿಯಿಂದ ವಿಠ್ಠಲ ಶೆಣ್ಯೆ ಅಧಿಕಾರಿಗಳ ಮೆಚ್ಚಿನ ವ್ಯಕ್ತಿಯೊಬ್ಬನಿದ್ದನೆಂದು ತೋರಿಬರುತ್ತದೆ. ಬಂಗರ ಒಡೆಯನ ಪುನಃ ಪ್ರತಿಷ್ಠಾಪನೆಯ ಕುರಿತು ತಾನು ಅದಾಗಲೇ ಪ್ರತಿಕೂಲ ನಿರ್ಣಯಕೊಂಡಿದ್ದ ನಿಮಿತ್ತ ಆ ಕುರಿತಾಗಿ ಪೋರ್ಚುಗೀಸರ ರಾಯಭಾರದ ಆವಶ್ಯಕತೆಯಿಲ್ಲವೆಂದು ಹೇಳಲು ವೆಂಕಟಪ್ಪನಾಯಕ ಆಗ ಗೋವಾದಲ್ಲಿದ್ದ ವಿಠ್ಠಲ ಶೆಣ್ಯೆಗೆ ಬರೆದು ತಿಳಿಸಿದ್ದ. ಮತ್ತೆ ಆ ವರ್ಷ ಕರಿಮೆಣಸಿನ ಖರೀದಿಗಾಗಿ ಪೋರ್ಚುಗೀಸರ ಹಡಗುಗಳು ಬಂದಿಲ್ಲವೆಂದು, ಸಲ್ಲಿಸಬೇಕಾಗಿದ್ದ ಹಣ ಬಾಕಿಯಿರುವುದಾಗಿಯೂ ತಿಳಿಸಲು ಹೇಳಿದ್ದ. ೧೬೨೩ರ ಅಕ್ಟೋಬರ್ ತಿಂಗಳ ೧೪ನೇ ತಾರೀಕಿಗೆ ವಿಠ್ಠಲ ಶೆಣ್ಯೆ ಮತ್ತು ಪೋರ್ಚುಗೀಸ್ ರಾಯಭಾರಿ ಜುವಾವ್ ಫೆರ್ನಾಂದೆ ಲೇತಾವ್, ಪಿಯತ್ರೋ ಡೆಲ್ಲಾವಾಲ್‌ನೊಂದಿಗೆ ಗೋವಾದಿಂದ ಹೊರಟರು. ಪಿಯತ್ರೋ ಡೆಲ್ಲಾವಾಲ್ ತನ್ನ ಪ್ರವಾಸದ ವೃತ್ತಾಂತದಲ್ಲಿ ಸಾಗರದಿಂದ ಇಕ್ಕೇರಿಯ ತನಕದ ರಸ್ತೆಯ ಇಕ್ಕೆಲಗಳಲ್ಲಿನ ಸೊಗಸಾದ ಸಾಲು ಮರಗಳ ಕುರಿತಾಗಿ ಬರೆದಿರುತ್ತಾನೆ. ರಾಯಭಾರದ ನಿಯೋಗಿ ತಂಡ ನವಂಬರ್ ತಿಂಗಳ ೬ರಂದು ಇಕ್ಕೇರಿ ಸೇರಿತು. ನವಂಬರ್ ತಿಂಗಳ ೮ರಂದು ಅರಸು ಅವರನ್ನು ಬರಮಾಡಿಕೊಂಡ. ಪಿಯತ್ರೋ ಡೆಲ್ಲಾವಾಲ್ ರಾಜದರ್ಬಾರಿನ ವೈಭವ, ಆಡಂಬರಗಳನ್ನು ವಿಸ್ತಾರವಾಗಿ ವರ್ಣಿಸಿರುತ್ತಾನೆ [೫].

ವೀರಭದ್ರಪ್ಪನ ಆಳ್ವಿಕೆಯ ಮೊದಲ ದಿನಗಳಲ್ಲಿ ಪೋರ್ಚುಗೀಸರೊಂದಿಗೆ ಸಂಧಿಯೊಂದನ್ನು ಪೂರ್ಣಗೊಳಿಸುವರೆ ಆತುರತೆ ತೋರಿದ್ದ ಶಿವಪ್ಪ ನಾಯಕ,

ರಾಮಪ್ಪೆಯನ್ನು ರಾಯಭಾರಿಯಾಗಿ ಕಳುಹಿಸಿದ್ದ. ಆದರೆ ನಿರ್ಣಯ ಕೊಳ್ಳುವಲ್ಲಿ ಆತ ವಿಫಲನಾದ. ಪ್ರಾಯಶಃ ಅದು ಲಾಭದಾಯೀ ಶರ್ತಗಳನ್ನು ನೀಡಿದ ವೀರಪ್ಪ ವೊಡೆಯರ್‌ನ ಮೇಲೆ ಪೋರ್ಚುಗೀಸರು ತೋರಿದ್ದ ಒಲವಿನ ಪರಿಣಾಮವಿದ್ದಿರಬೇಕು.

೧೬೩೧ರಲ್ಲಿ ರಾಜ್ಯದ ಹೆಚ್ಚಿನ ಭಾಗಗಳಲ್ಲಿ ಶಾಂತಿ ಸ್ಥಾಪಿಸುವರೆ ಯಶಸ್ಸುಕೊಂಡ ಶಿವಪ್ಪ ನಾಯಕ ವಿಠ್ಠಲ ಶೆಣೈಯನ್ನು ಗೋವಾಕ್ಕೆ ಕಳುಹಿಸಿದ. ಪ್ರಾಥಮಿಕ ವಿಚಾರ ವಿನಿಮಯಗಳ ಬಳಿಕ ಇಕ್ಕೇರಿಗೆ ಮರಳಿದ ಆತ ೧೬೩೧ರ ಮಾರ್ಚ್ ತಿಂಗಳ ೭ನೇ ತಾರೀಖಿಗೆ ಆದೇಶಗಳೊಂದಿಗೆ ಮತ್ತೆ ಗೋವಾಕ್ಕೆ ತೆರಳಿದ. ಅರಸನ ಪರವಾಗಿ ರಾಯಭಾರಿ ವಿಠ್ಠಲ ಶೆಣೈ ಮತ್ತು ತಿರುಮಲ ನಾಯಕ್ ಇವರಿಬ್ಬರೂ ಸೇರಿ ಪೋರ್ಚುಗೀಸರ ಬಾಕಿಯಿದ್ದ ವಸೂಲಿಯನ್ನು ಬಿಟ್ಟು ಬಿಡುವ ಮತ್ತು ಅವರಿಗೆ ಪ್ರತೀ ವರ್ಷ ೫೦೦ ಗೋಣಿ ಅಕ್ಕಿ ಕೊಡುವ ಕರಾರೊಂದನ್ನು ಬಸರೂರಿನಲ್ಲಿ ರಾಜನೌಕೆಯಲ್ಲಿ ಕುಳಿತು ಬರೆದರು ; ಹೊನ್ನಾವರವನ್ನು ಮುಕ್ತ ಬಂದರೊಂದನ್ನಾಗಿ ಮಾಡುವ, ಪೋರ್ಚುಗೀಸರು ತ್ಯಜಿಸುವ ಬಸ್ರೂರಿನ ಬದಲಿಗೆ ಗಂಗೊಳ್ಳಿ ಮನ್ನಿಸುವ, ಕರಾರಿಗೆ ಸಂಬಂಧಿಸಿದ ಸಂದೇಹಗಳ ನಿವಾರಣೆ, ಅವುಗಳ ವ್ಯಾಖ್ಯೆ ಇತ್ಯಾದಿಗಳ ಕುರಿತು ಪೋರ್ಚುಗೀಸ್ ರಾಯಭಾರಿಯ ನಿರ್ಣಯ ಅಂತಿಮವೆನ್ನುವ ನಿರ್ಣಯಗಳಿಗೆ ಒಪ್ಪಿಗೆಯೀಯಲಾಯಿತು.

ಸಾಮಾನ್ಯ ತಿದ್ದುಪಡಿಗಳ ಬಳಿಕ ಈ ಕರಾರಿಗೆ ಎಪ್ರಿಲ್ ತಿಂಗಳ ೫ನೇ ತಾರೀಕಿಗೆ ಗೋವಾದಲ್ಲಿ ಮೊಹರು ಒತ್ತಲಾಯಿತು. ಈ ಕರಾರಿಗೆ ವಿಠ್ಠಲ ಶೆಣೈ ಮತ್ತು ಭಾಷಾಂತರಕಾರ ಅಪ್ಪಾಜಿ ಶೆಣೈ (ಅಪ್ಪಾಜಿ ಸಿನಾಯಿ) ಸಹಿ ಹಾಕಿದರು.

ಪೋರ್ಚುಗೀಸರ ಪ್ರಭಾವವನ್ನು ದುರ್ಬಲಗೊಳಿಸಿದ ಶಿವಪ್ಪ ನಾಯಕ ಅಕ್ಕಿ ಮತ್ತು ಕರಿಮೆಣಸುಗಳ ಮಾರುಕಟ್ಟೆಗಳನ್ನು ವಿದೇಶಿಯರೆಲ್ಲರಿಗೆ ಮುಕ್ತವಾಗಿಟ್ಟ. ೧೬೪೯ರಲ್ಲಿ ಠಕ್ಕು ಪಗೋಡಗಳಿಂದ ವ್ಯವಹಾರಮಾಡಿದನೆಂಬ ಕಾರಣಕ್ಕೆ 'ದಿ ಲಾಯೆಲ್ಟಿ' ಹೆಸರಿನ ಇಂಗ್ಲೀಷ್ ಹಡಗಿನ ಕಪ್ತಾನ ವರ್ಸನ್‌ನನ್ನು ಪೋರ್ಚುಗೀಸರು ಬಂಧಿಸಿ ಆತನ ಸರಕನ್ನು ಮಿರ್ಜಾನ್ (ಉತ್ತರಕನ್ನಡ) ಎಂಬಲ್ಲಿ ವಶಪಡಿಸಿಕೊಂಡರು. ಅವನನ್ನು ಬಂಧನದಿಂದ ಬಿಡುಗಡೆ ಮಾಡಲಾಗಿ ಶಿವಪ್ಪ ನಾಯಕ ದೇವರ್ಸ ಶೆಣೈಯನ್ನು ಕಳುಹಿಸಿದ್ದ.

ಒಮ್ಮೆ ಕೊಚ್ಚಿನ್‌ನಿಂದ ಗೋವಾಕ್ಕೆ ಮರಳುತ್ತಿದ್ದ ಧರ್ಮಗುರುವನ್ನು ಎರಡನೆಯ ವೆಂಕಟಪ್ಪ ನಾಯಕ ಸೆರೆಹಿಡಿದಿದ್ದಾಗ ಮತ್ತೆ ಏಳು ಹಡಗುಗಳ ಬಿಡುಗಡೆ ನಿರಾಕರಿಸಿದಾಗ ತಮ್ಮನ್ನು ಪ್ರತಿನಿಧಿಸಲು ಪೋರ್ಚುಗೀಸರು ರಾಮ್‌ಜಿ ಶೆಣೈ ಕೊಠಾರಿ (ಕ್ರಿಸ್ತೊಫರ) ಯನ್ನು ಕಳುಹಿಸಿದ್ದರು. ಬಿದರೂರಿನ ಆಸ್ಥಾನದಲ್ಲಿನ ಪ್ರತಿಷ್ಠಿತ ವ್ಯಕ್ತಿ ಕಲ್ಲಪ್ಪ ಕಳ್ಳಿಯ ಮಧ್ಯಸ್ಥಿಕೆಯಿಂದ ರಾಮ್‌ಜಿ ಧರ್ಮಗುರುವನ್ನು ಬಿಡುಗಡೆ ಮಾಡಿಸುವಲ್ಲಿ ಯಶಸ್ವಿಯಾದ; ಆತ ಬಿಡುಗಡೆ ಮಾಡಿಸಿದ ಏಳು ಹಡಗುಗಳು ಉರುವಲಿನ ಕಟ್ಟಿಗೆಯಂತೆ ಬಳಸಲಷ್ಟೇ ಯೋಗ್ಯವಾಗಿದ್ದವು. ಕರಿಮೆಣಸಿನ ವ್ಯಾಪಾರದ ಬಗೆಗಿನ ಸಂಧಾನ ಮಾತ್ರ ಅಯಶಸ್ವಿಯಾಯಿತು. ಕಾರಣ ಪೋರ್ಚುಗೀಸರು ಕರಿಮೆಣಸನ್ನು ನಿರ್ಧಾರಿತ ಬೆಲೆಗೆ ಖರೀದಿ ಮಾಡಬೇಕೆಂದು ವೆಂಕಟಪ್ಪ ನಾಯಕ ಒತ್ತರಿಸಿದ್ದ.

೧೨. ಮಲ್ಯರು

ಉತ್ತರ ಕನ್ನಡದ ಕುಮ್ಟಾದಲ್ಲಿನ ಮಲ್ಯ (ಮಹಾಲ) ಕುಟುಂಬದ ಎಷ್ಟೊಂದೋ ಮಂದಿ ಕೆಳದಿಯ ಅರಸರ ಸೇವೆಯಲ್ಲಿದ್ದು ಪ್ರಸಿದ್ಧಿಕೊಂಡರು.

ಅವರಲ್ಲಿನ ಮೊದಲ ವ್ಯಕ್ತಿ ಗಣೇಶ ಮಲ್ಯ, ಕೆಳದಿಯ ಅರಸನೊಬ್ಬನ ಸೇವೆಯಲ್ಲಿದ್ದು ಕ್ರಮೇಣ ಮಹತ್ತಿನ ಹುದ್ದೆಗೇರಿದ್ದನ್ನೆನ್ನಲಾಗುತ್ತದೆ.[೭]

ಆತನ ಮೊಮ್ಮಕ್ಕಳರಲ್ಲೊಬ್ಬನಿದ್ದ ರಾಮಚಂದ್ರ ಮಲ್ಯ, ಭದ್ರಪ್ಪ ನಾಯಕನ (೧೬೪೫-೧೬೬೪)ಮಂತ್ರಿಯಾಗಿದ್ದ. ಆತನ ಹೆಸರು ಹೊನ್ನಾವರದ ವೆಂಕಟಪುರಂದಲ್ಲಿನ ಶಿಲಾಶಾಸನದಲ್ಲಿ ಕಂಡು ಬರುತ್ತದೆ. ಆತ ಹೊನ್ನಾವರದಲ್ಲಿ ದೇವಸ್ಥಾನಗಳನ್ನು, ಗೋಕರ್ಣ [೮] ದಲ್ಲಿ ಯಾತ್ರಿಗಳ ಭೋಜನಕ್ಕನುಕೂಲವಾಗುವ ಸತ್ರ ಶಾಲೆಗಳನ್ನು ಕಟ್ಟಿಸಿದ್ದ.

ಮಲ್ಲಪ್ಪ ಮಲ್ಯನನ್ನು ಡಚ್ಚರ ಕಾಗದ ಪತ್ರಗಳಲ್ಲಿ ಮಲ್ಲಪ್ಪ ಮಲೋ ಎಂದೂ, ಇಂಗ್ಲಿಷರ ಕಾಗದ ಪತ್ರಗಳಲ್ಲಿ ಮೊಲ್ಲ, ಮೊಲ್ಲಿಕ್ ಮೊಲ್ಲ ಎಂದಾಗಿ ಸಂಭೋದಿಸಲಾಗಿದೆ. ಆತ ಬೆದನೂರಿನ ಆಸ್ಥಾನದಲ್ಲಿನ ಪ್ರಭಾವಶಾಲಿ ವ್ಯಕ್ತಿಯೊಬ್ಬನಿದ್ದ. ಕೊಚ್ಚಿನ್‌ನಲ್ಲಿನ ಪೋರ್ಚುಗೀಸರ ಕೋಟೆಯನ್ನು ವಶಪಡಿಸಿದ ಬಳಿಕ ಡಚ್ಚರು ತಮ್ಮ ವ್ಯಾಪಾರವನ್ನು ಮಂಗಳೂರು, ಬಸ್ರೂರು ಮತ್ತೆ ಹೊನ್ನಾವರಗಳತ್ತ ವಿಸ್ತರಿಸಿದರು. ಇವರ ಸ್ಪರ್ಧೆಯ ಪರಿಣಾಮವಾಗಿ ಇಂಗ್ಲಿಷ್ ಮತ್ತು ಪೋರ್ಚುಗೀಸರ ವ್ಯಾಪಾರ ನಷ್ಟಕ್ಕೊಳಗಾಯಿತು. ೧೬೬೪ರಲ್ಲಿ ಇಂಗ್ಲಿಷರು ತಮ್ಮ ದಲಾಲ ವೇಲಾಜಿ (ಬಾಲಾಜಿ)ಯನ್ನು ೩೦೦ ಟನ್‌ಗಳಷ್ಟರ ಕರಿಮೆಣಸಿನ ಖರೀದಿಗಾಗಿ ಭಟ್ಕಳಕ್ಕೆ ಕಳುಹಿಸಿದ್ದರು. ಆತ ಪ್ರಯಾಣ ಮಾಡುತ್ತಿದ್ದ ಹಡಗು ಒಡೆದು ಹೋದ ನಿಮಿತ್ತ ವ್ಯಾಪಾರ ಕುದುರಲಿಲ್ಲ. ಅದಿಲ್ ಶಾಹನೊಂದಿಗಿನ ಹಲವೊಂದು ಕಾದಾಟಗಳಲ್ಲಿ ಸೋಲುಕೊಂಡಿದ್ದ ಆತ ಬಿಜಾಪುರಕ್ಕೆ ಅತಿದೊಡ್ಡ ಪ್ರಮಾಣದ ಮೊತ್ತವನ್ನು ನಷ್ಟದ ಪರಿಹಾರಕ್ಕಾಗಿ ಕೊಡಬೇಕಾಯಿತು. ಬಂದೂಕಿನ ಸಿಡಿಮದ್ದಿನ ಕೊರತೆಯಿಂದ (ಉತ್ತರ ಕಾಲೀನ ಕೆಳದಿಯ ಅರಸರು ಸಿಡಿಮದ್ದಿನ ಸರಬರಾಜಿಗೆ ಪೋರ್ಚುಗೀಸ್ ಮತ್ತು ಅನ್ಯ ವಿದೇಶೀ ವ್ಯಾಪಾರಿಗಳನ್ನು ಅವಲಂಬಿಸಿಕೊಂಡಿದ್ದರು) ೧೬೬೪ರಲ್ಲಿ ಭದ್ರಪ್ಪ ನಾಯಕ ಗತ್ಯಂತರವಿಲ್ಲದೆ ಪೋರ್ಚುಗೀಸರೊಂದಿಗೆ ಒಪ್ಪಂದ ಮಾಡಿಕೊಂಡ. ಆತ ಮಲ್ಲಪ್ಪ ಮಲ್ಯನನ್ನು ೬೦೦೦ ಗೋಣಿ ಅಕ್ಕಿಯೊಂದಿಗೆ ವೈಸರಾಯ್‌ನತ್ತ ಕಳುಹಿಸಿದ. ಮತ್ತು ಮಂಗಳೂರು, ಬಸ್ರೂರು, ಹೊನ್ನಾವರಗಳಲ್ಲಿನ ದುರ್ಗಗಳನ್ನು ಮರಳಿಸುವ ವಿಚಾರದ ಕುರಿತು ತಿಳಿಸುವರೆ ಹೇಳಿದ. ಮೂರು-ನಾಲ್ಕು ತಿಂಗಳುಗಳ ಕಾಲ ಗೋವಾದಲ್ಲಿ ಉಳಿದಿದ್ದ ಮಲ್ಲಪ್ಪ ಅಲ್ಲಿಯೇ ತೀರಿಕೊಂಡ. ಈ ನಡುವೆ ಬೆದನೂರಿನ ಅಂತಃಕಲಹ ಪೋರ್ಚುಗೀಸರೊಂದಿಗಿನ ಸಂಧಾನದ ಮೇಲಕ್ಕೆ ದುಷ್ಪರಿಣಾಮ ಬೀರಿತು. ಅವರು ಮಹತ್ವದ ಮಾತುಕತೆ ನಡೆಸಲು ನಿರಾಕರಿಸಿದರು.[೯]

೧೬೬೪ರಲ್ಲಿನ ಭದ್ರಪ್ಪ ನಾಯಕನ ಅಕಸ್ಮಿಕ ಮರಣಾನಂತರ ಅಲ್ಲಿ ಕೌಟುಂಬಿಕ ಕಲಹದ ಗೊಂದಲ ಉಂಟಾಗಿತ್ತು. ಆಸ್ಥಾನದ ಪ್ರಮುಖ ವಣಿಕನಿದ್ದ ನಾರಾಯಣ ಮಲ್ಯ, ಎಳೆ ವಯಸ್ಸಿನ ಸೋಮಸೇಖರನಿಗೆ ರಕ್ಷಣೆಯಿತ್ತು ಹಲವೊಂದು ಕಷ್ಟಗಳನ್ನೆದುರಿಸಿ ಶಾಂತಿ ಸ್ಥಾಪಿಸಿದ. ಸೋಮಸೇಖರ ನಾಯಕ ನಾರಾಯಣ ಮಲ್ಯ ಮತ್ತು ಆವಿನಹಳ ನರಸಪ್ಪಯ್ಯನ

ಮಾರ್ಗದರ್ಶನ ಕೊಂಡು ರಾಜ್ಯ ಕಾರ್ಯಭಾರ ನಿಭಾಯಿಸಲಾರಂಭಿಸಿದ. ಪೋರ್ಚುಗೀಸರೊಂದಿಗಿನ ಒಡಂಬಡಿಕೆಯು ಮಾತು ಮುಂದುವರಿಸಲಾಗಿ ನಾರಾಯಣ ಮಲ್ಯನನ್ನು ಕಳುಹಿಸಲಾಯಿತು. ಸಂಧಾನದ ಮಾತುಕತೆ ನಡೆಯುತ್ತಿದ್ದ ವೇಳೆ ಡಚ್ಚರ ಎರಡು ಹಡಗುಗಳು ಬಸ್ರೂರು ಮತ್ತು ಮಂಗಳೂರಿನ ಕೋಟೆಗಳನ್ನು ಆಕ್ರಮಿಸುವ ಉದ್ದೇಶಕೊಂಡು ಬಂದವು. ನಾರಾಯಣ ಮಲ್ಯನೊಂದಿಗೆ ಸಂಪರ್ಕ ಸಾಧಿಸಿದ ಡಚ್ಚರು, ಅರಸು ತಮ್ಮೊಂದಿಗೆ ಯುದ್ಧ ಮಾಡುವ ಯೋಜನೆ ಕೊಂಡಿರದಿದ್ದಲ್ಲಿ ಕೋಟೆಗಳನ್ನು ಎಂದಿಗೂ ಪೋರ್ಚುಗೀಸರಿಗೆ ಕೊಡಬಾರದೆಂದಾಗಿ ನುಡಿದು ಆತನ ಮನವೊಲಿಸಲೆತ್ನಿಸಿದರು. ಆದರೆ ಆತ ಆಜ್ಞೆಯ ಪರಿಪಾಲನೆ ಮುಖ್ಯವೆಂದು ಹೇಳಿ ಅವರನ್ನು ದೂರಕ್ಕಿಡಲು ಪ್ರಯತ್ನಿಸಿದ.

ಬಸ್ರೂರಿನಲ್ಲಿನ ಎರಡು ಕೋಟೆಗಳನ್ನಿತ್ತು, ೧೬೬೪ರ ನವಂಬರ್ ತಿಂಗಳಲ್ಲಿ ಮಂಗಳೂರಿನಲ್ಲಿನ ಕೋಟೆಯನ್ನೂ ಕೈಗೊಪ್ಪಿಸುವ ಆಶ್ವಾಸನೆಯಿತ್ತು ಒಪ್ಪಂದ ಪೂರೈಸಿದ.

೧೬೬೪ರ ಅಕ್ಟೋಬರ್ ತಿಂಗಳಲ್ಲಿ ಇಂಗ್ಲಿಷ್ ವ್ಯಾಪಾರಿ ಟೈಲರ್ ಕರಿಮೆಣಸನ್ನು ಕೊಳ್ಳುವರೆ ಎರಡು ಹಡಗುಗಳ ಸಮೇತ ಬಂದ. ಆತ ಕರಿಮೆಣಸಿನ ಖರೀದಿ ಮಾಡಲಾರದಾದ (ಬಸ್ರಾ, ಪರ್ಷಿಯಾ ಮತ್ತು ಮಸ್ಕತ್ ದೇಶಗಳಿಗೆ ನಿರ್ಯಾತವಾಗುತ್ತಿರುವ ನಿಮಿತ್ತ ಕರಿಮೆಣಸಿನ ಅಭಾವವಿತ್ತು). ನವೆಂಬರ್ ತಿಂಗಳ ೨೭ಕ್ಕೆ ಭಟ್ಕಳಕ್ಕೆ ನಾರಾಯಣ ಮಲ್ಯನ ಆಗಮನವಾದ ಬಳಿಕ ಆತನಿಗೆ ಸ್ವಲ್ಪ ಕರಿಮೆಣಸನ್ನು ಖರೀದಿ ಮಾಡುವುದು ಸಾಧ್ಯವಾಯಿತು.

ಡಚ್ಚರ ಕುರಿತು ನಾರಾಯಣ ಮಲ್ಯನ ಅಭಿಪ್ರಾಯ ಒಳ್ಳೆಯದಿತ್ತು. ಆತನ ವಿಜ್ಞಾಪನೆಯ ಫಲವಾಗಿ ಡಚ್ಚರ ಸರಕಿನ ಮೇಲೆ ಹೇರಲಾದ ಹಲವೊಂದು ಕರಗಳನ್ನು ತೆಗೆದುಹಾಕಲಾಯಿತಷ್ಟೆ ಅಲ್ಲ ಅವರು ಆ ಮೊದಲು ಇತ್ತಿದ್ದ ಕರವನ್ನು ಮರಳಿಸಿದರು..

೧೬೭೧ರ ಏಪ್ರಿಲ್ ತಿಂಗಳ ೩೦ಕ್ಕೆ ವಿಠ್ಠಲ ಮಲ್ಯ (ವಿಟಲ ಮಲೋ) ನನ್ನು ರಾಯಭಾರಿಯಾಗಿ ಗೋವಾಕ್ಕೆ ಕಳುಹಿಸಲಾಯಿತು. ವ್ಯಾಪಾರದ ಮಳಿಗೆಗಳ ಸುರಕ್ಷೆಗಾಗಿ ಕೋಟೆ, ಕೊತ್ತಳಗಳನ್ನು ಕಟ್ಟಬಾರದೆಂಬ, ಭಾರತೀಯ ಅಳತೆ, ಭಾರಗಳನ್ನು ಬಳಸಬೇಕೆಂಬ, ಮಾರಾಟ ಮಾಡಿದ ಸರಕಿನ ಮೇಲಕ್ಕೆ ಕರವೀಯಬೇಕೆಂಬ, ಅರಸನ ಹಡಗುಗಳಿಂದ ಸರಕನ್ನು ಇಳಿಸುವ ಮತ್ತು ತುಂಬಿಸುವ ಕೆಲಸವನ್ನು ತ್ವರ್ಯ ಮುಗಿಸಬೇಕೆಂಬ ಶರ್ತಗಳನ್ನು ಹಾಕಿ ಪೋರ್ಚುಗೀಸರಿಗೆ ವ್ಯಾಪಾರದ ಮಳಿಗೆಗಳ ನಿರ್ಮಾಣಕ್ಕೆ ಅನುಮತಿಯೀಯಲಾಯಿತು.

ಪೋರ್ಚುಗೀಸರು ತಾವು ಗೋಹತ್ಯೆ ಮಾಡಲಾರೆವೆಂಬ, ಧರ್ಮ ಪರಿವರ್ತನೆಗೆ ಪ್ರಯತ್ನಿಸಲಾರೆವೆಂಬ, ಶತ್ರುಗಳೊಂದಿಗೆ ಕಾದಾಡಲು ಅರಸನಿಗೆ ನೆರವೀಯುವೆವೆಂಬ ಆಶ್ವಾಸನೆಯಿತ್ತರು.

ಮೊದಲನೆಯ ಬಸವಪ್ಪನ ಆಳ್ವಿಕೆಯ ದಿನಗಳಲ್ಲಿ, ೧೭೦೪ ಮೊದಲ್ಗೊಂಡು ಪೋರ್ಚುಗೀಸರ ಕುರಿತು ತಪ್ಪು ತಿಳುವಳಿಕೆ ಉದ್ಭವಿಸಿತ್ತು. ೧೭೦೭ರಲ್ಲಿ ಪೋರ್ಚುಗೀಸರು ಆತನ ರಾಜ್ಯದ ಸೀಮೆಯೊಳಗಣ ಮಂಗಳೂರಿನ ಮೇಲಕ್ಕೆ ದಂಡೆತ್ತಿ ಹೋದರು. ಬಿದನೂರಿನ ಸೇನೆ ಕೆಚ್ಚೆದೆಯಿಂದ ಕಾದಾಡಿತು. ದೋಮಸ್ಕ ಪ್ರಭುವನ್ನು ರಾಯಭಾರಿಯಾಗಿ ಗೋವಾಕ್ಕೆ ಕಳುಹಿಸಿ ಶಾಂತಿ ಸಂಧಾನ ಪೂರೈಸಲಾಯಿತು. ಸಂಧಾನದ ಮೇರೆಗೆ ಬಸವಪ್ಪ ನಾಯಕ,

ನಷ್ಟಪರಿಹಾರವೆಂದು ಪೋರ್ಚುಗೀಸರಿಗೆ ೨೦,೦೦೦ ಆಶ್ರಫಿಗಳನ್ನು, ೨೧೫೦ ಗೋಣಿ ಅಕ್ಕಿಯನ್ನು ಇತ್ತ. ಹಾಗೆಯೇ ತನ್ನ ಯುದ್ಧಗಳಲ್ಲಿನ ಸಹಾಯಕ್ಕೆ ಬದಲಾಗಿ ವ್ಯಾಪಾರದಲ್ಲಿ ಏಕಾಧಿಕಾರದ ಸವಲತ್ತನ್ನಿತ್ತ.

ಮಲಬಾರಿನ ಕೊಳಬಾವಿಯ ಅರಸನೊಂದಿಗಿನ ೧೭೩೪ರಲ್ಲಿನ ಯುದ್ಧದ ಸಮಯ ಎರಡನೆಯ ಸೋಮಸೇಖರ ನಾಯಕ ಸೈನ್ಯದ ಸಹಾಯ, ಕೋವಿಯ ಸಿಡಿಮದ್ದು, ಗುಂಡು ಬಾಂಬು ಇತ್ಯಾದಿಗಳನ್ನು ದೊರಕಿಸಿಕೊಳ್ಳಲಾಗಿ ನಾರಾಯಣ ಪ್ರಭುವನ್ನು ತನ್ನ ರಾಯಭಾರಿಯಾಗಿ ಗೋವಾಕ್ಕೆ ಕಳುಹಿಸಿದ್ದ. ಆದರೆ ಪೋರ್ಚುಗೀಸರು ನೆರವಿನ ಆಶ್ವಾಸನೆಯನ್ನಷ್ಟೇ ಇತ್ತರು.

೧೭೪೦ರಲ್ಲಿ ಇಂಗ್ಲಿಷರು ಕರಿಮೆಣಸಿನ ಸರಬರಾಯಿಗಾಗಿ ಹೊನ್ನಾವರದ ಪ್ರಸಿದ್ಧ ವ್ಯಾಪಾರಿ ಹರಿಕಾಮತ್ (ಹರಿಕಾಮತಿ) ನೊಂದಿಗೆ ಕರಾರು ಮಾಡಿಕೊಂಡರು. ಆದರೆ ಪೋರ್ಚುಗೀಸರು ಅದಾಗಲೇ ಅಧಿಕ ಬೆಲೆಯನ್ನಿತ್ತು ಸಮಗ್ರ ಸ್ಥಳೀಯ ಕರಿಮೆಣಸಿನ ಸಂಗ್ರಹವನ್ನು ಖರೀಸಿದ್ದ ನಿಮಿತ್ತ ಕರಾರು ಫಲಕಾರಿಯಾಗಲಿಲ್ಲ.

ಬಿದನೂರಿನ ಅವನತಿಯ ಬಳಿಕ ಸರಕಾರದ ಸೇವೆಯಲ್ಲಿದ್ದ ಸ್ಮಾರ್ತ ಸಾರಸ್ವತ ಬ್ರಾಹ್ಮಣರು ಕೆನರಾಕ್ಕೆ (ಅವರಲ್ಲಿನ ಕೆಲವೊಬ್ಬರು ಉಂಬಳಿಕೊಂಡವರಿದ್ದರು) ಮರಳಿದರು.

೧೩. ಅಪ್ಪಾಜಿ ರಾಮ್

ಅಪ್ಪಾಜಿ ರಾಮ್ [೧೧] ಹದಿನೆಂಟನೆಯ ಶತಮಾನದಲ್ಲಿ ಹೈದರನ ಸೇವೆಯಲ್ಲಿದ್ದ ರಾಯಭಾರಿಯೊಬ್ಬ. ಗೌರವಾನ್ವಿತನಿದ್ದ ಆತ ಸಂಧಿ ಪೂರೈಸುವಲ್ಲಿ ಅತಿ ಕುಶಲನಿದ್ದ. ಅನ್ಯ ಅರಸರೊಂದಿಗಿನ ಸಂಧಾನದ ಕೆಲಸಕ್ಕೆ ಹೈದರ್ ಆಲಿ ಆತನನ್ನು ಆಗಿಂದಾಗ್ಗೆ ಬಳಸುತ್ತಿದ್ದ.

೧೭೬೦ರಲ್ಲಿ ಮೈಸೂರಿನ ಅರಸು ಚಿಕ್ಕ ಕೃಷ್ಣರಾಜ ತೀರಿಕೊಂಡಾಗ ಆತನ ಸ್ಥಾನದಲ್ಲಿ ಹಿರಿಯ ಮಗ ನಂಜರಾಜನಿಗೆ ಪಟ್ಟಕಟ್ಟುವ ನಿರ್ಧಾರ ಮಾಡಿದ್ದ ಹೈದರ್‌ಆಲಿ ೧೭೬೭ರಲ್ಲಿ ಮೈಸೂರಿನ ಅರಮನೆಯನ್ನು ಸುಲಿದ. ಮತ್ತೆ ಮೂರು ಲಕ್ಷ ಪಗೋಡಗಳ ವರ್ಷಾಶನ ಆರಂಭಿಸಿ, ಅರಮನೆಯಲ್ಲಿ ತನ್ನ ಕಾವಲುಗಾರರನ್ನು ನೇಮಿಸಿದ. ಮರಾಠರು ತನ್ನ ಕುಟುಂಬದೊಂದಿಗೆ ಮೈತ್ರಿಯ ಸಂಬಂಧ ಕೊಂಡಿದ್ದ ನಿಮಿತ್ತ ನಂಜರಾಜ, ತ್ರಯಂಬಕರಾವ ಮಾಮ ಮತ್ತು ಪೇಶ್ವೆ ಮಾಧವರಾವ್‌ರೊಂದಿಗೆ ಸಂಧಾನ ನಡೆಸಿದ. ಪೇಶ್ವೆ ಮಾಧವ ರಾವ್ ನಿಝಾಮ್ ಆಲಿಯ ಸಮೇತ ಮೈಸೂರಿಗೆ ದಂಡೆತ್ತಿ ಹೋಗುವ ಯೋಜನೆಗೆ ಆಕಾರವಿತ್ತ. ಅದೇ ವರ್ಷ ಮೈಸೂರಿನ ಪೂರ್ವ ದಿಕ್ಕಿನ ಪ್ರಾಂತ್ಯದೊಳಕ್ಕೆ ಸೈನ್ಯವನ್ನು ನುಗ್ಗಿಸಲಾಯಿತು. ಹೈದರ್ ಸಂಧಿಗಾಗಿ ಪಟ್ಟು ಬಿಡದೆ ಪ್ರಯತ್ನ ಮಾಡಿದ. ಕಟ್ಟಕಡೆಗೆ ಅಪ್ಪಾಜಿ ರಾಮ್ ಹೈದರ್‌ನ ಪರವಾಗಿ ೨೫ ಲಕ್ಷ ರೂಪಾಯಿಗಳನ್ನು ನಿಗದಿ ಪಡಿಸಿ, ಮರಾಠರು ಹಿಂತೆರಳುವವರೆಗೆ ಮನವೊಲಿಸಿಕೊಂಡ. ಇದರ ಅರ್ಧದಷ್ಟು ಹಣವನ್ನು ಕೂಡಲೇ ಕೊಡಲಾಯಿತು. ಬಾಕಿ ಉಳಿದ ಹಣದ ಭದ್ರತೆಗಾಗಿ ತಾತ್ಕಾಲಿಕವಾಗಿ, ಕೋಲಾರವನ್ನು ಮರಾಠರ ವಶಕ್ಕೀಯಲಾಯಿತು. [೧೨]

ಬ್ರಿಟಿಷರೊಂದಿಗಿನ ಯುದ್ಧದ ವೇಳೆ ಟಿಪ್ಪು ಅಪ್ಪಾಜಿರಾಮ್‌ನನ್ನು ಬೊಂಬೇಯ

ಗವರ್ನರ್‌ನಿದ್ದೆಡೆಗೆ ಕಳುಹಿಸಿದ. ೧೭೬೪ರ ಮಾರ್ಚ್ ತಿಂಗಳ ೧೧ರಂದು ಮಂಗಳೂರಿನಲ್ಲಿ ಒಡಂಬಡಿಕೆಯೊಂದನ್ನು ತಯಾರಿಸಲಾಯಿತು.

ಅಪ್ಪಾಜಿ ರಾವ್‌ನಿಗೆ ಜಿವಾಜಿ ರಾವು ಮತ್ತೆ ನಾರೋ ರಾವು ಹೆಸರಿನ ಸಹೋದರರಿಬ್ಬರಿದ್ದರು. ಸಂಧಿ, ಕರಾರುಗಳ ನಿಮಿತ್ತ ಅಪ್ಪಾಜಿಗೆ ಪೇಶ್ವೆ ಮಾಧವ ರಾವ್‌ನ ಆಸ್ಥಾನಕ್ಕೆ ಹೋಗಬೇಕಾದಾಗ ಈ ಸಹೋದರರಿಬ್ಬರು ಆತನ ಜೊತೆಯಲ್ಲಿರುತ್ತಿದ್ದರು.

ಹೈದರ್ ಆಲಿ ಅಪ್ಪಾಜಿ ರಾವ್‌ನಿಗೆ ದಾವಣಗೆರೆ (ಚಿತ್ರದುರ್ಗ ಜಿಲ್ಲೆಯಲ್ಲಿನ) ಯನ್ನು ಜಹಗೀರಿನ ರೂಪದಲ್ಲಿತ್ತ. ಅಪ್ಪಾಜಿರಾವ್ ವ್ಯಾಪಾರಿಗಳನ್ನು ದಾವಣಗೆರೆಗೆ ಆಮಂತ್ರಿಸಿದ; ತತ್ಪರಿಣಾಮ ಅದು ಸಫಲ ವ್ಯಾಪಾರ ಕೇಂದ್ರವೊಂದೆನಿಸಿಕೊಂಡಿತು.

ಸಂದರ್ಭ ಸೂಚಿ

೧. ಮಹಾ ಮಹೋಪಾಧ್ಯಾಯ ಆರ್. ಶ್ಯಾಮಶಾಸ್ತ್ರಿ ಬಿ.ಎ., ಎಮ್.ಎ.ಆರ್.ಎಸ್. ೧೯೨೧ ಇವರ 'ಕೆಳದಿ ವೀರಪ್ಪ ವಿಜಯ' ಪುಟ ೧೦೮.

೨. ಕೆ. ಡಿ. ಸ್ವಾಮಿನಾಥನ್, ಎಮ್. ಎ., ೧೯೫೧ ಇವರು ಬರೆದ 'ದ ನಾಯಕ್ಸ್ ಆಫ್ ಇಕ್ಕೇರಿ' ಪುಟ ೯೮.

೩. ಮಂಕೀಕರರ ಜನಾರ್ದನ, ಚಿಕ್ಕರಮನೆ ಕಾರರ ಭದ್ರಾಂಬ, ಹೆಮ್ಮಾಡಿ ಕಾರರ, ದತ್ತಾತ್ರೇಯ ಮತ್ತು ಗೋಪಾಲಕೃಷ್ಣ ಮುಂತಾದ ಸಾರಸ್ವತರ ದೇವಸ್ಥಾನಗಳು ಮತ್ತು ಚಿತ್ರಾಪುರ ಮಠ, ಇವು ನಗರದ ಅರಸರಿಂದ ದತ್ತಿಕೊಂಡವು.

೪. ಚಿತ್ರಾಪುರ ಮಠದ ಒಂಭತ್ತನೆಯ ಗುರು ಆನಂದಾಶ್ರಮ ಈ ಕುಟುಂಬಕ್ಕೆ ಸೇರಿದವರಿದ್ದರು.

೫. 'ಪ್ರಿಯತ್ರೊದೆಲ್ಲಾವಾಲ್ ಟ್ರೆವೆಲ್ಸ್' ೨, ಪುಟ ೨೫೦-೨೫೫

೬. 'ಪ್ರಿಯತ್ರೊದೆಲ್ಲಾವಾಲ್ ಟ್ರೆವೆಲ್ಸ್' ೨, ಪುಟ ೨೬೨-೨೬೩

೭. ಒತ್ತಾಲ ತೆಂಗಿನಕಾಯಿಗಳ ವಿನಹ ಅನ್ಯ ಬಂಡವಾಳ, ಆದಾಯವಿರದಿದ್ದ ಗಣೇಶ ಮಲ್ಯ (ಕೌಶಿಕ ಗೋತ್ರ, ಲಕ್ಷ್ಮೀನಾರಾಯಣ ಕುಲದೇವರು, ಕುಟುಂಬದ ಮೂಲ ಉಪನಾಮ ಸಿರಾಳಿ) ತೆಂಗಿನ ಉದ್ಯೋಗದ ಯೋಜನೆ ಕೊಂಡು ನಗರದತ್ತ ಸಾಗಿದ. ನಗರ ಸೇರಲು ೮ ಸುಂಕದ ಕಟ್ಟೆಗಳನ್ನು ಹಾದುಹೋಗಬೇಕಾಗಿತ್ತು. ವಿವಿಧ ಸರಕುಗಳ ಮೇಲೆ ಪೂರ್ವನಿರ್ಧಾರಿತ ಸುಂಕವಿರದಿದ್ದ ನಿಮಿತ್ತ, ಅಧಿಕಾರಿಗಳು ತಮಗೆ ತೋಚಿದಂತೆ ಸುಂಕದ ವಸೂಲಿ ಮಾಡುತ್ತಿದ್ದರು. ಸುಂಕವನ್ನೀಯಲು ಕೈಯಲ್ಲಿ ಕಾಸಿರದಿದ್ದ ನಿಮಿತ್ತ ಆತನಿಗೆ ಪ್ರತೀ ಸುಂಕದ ಕಟ್ಟೆಯಲ್ಲಿ ಒಂದು ಕಾಯಿಯನ್ನು ಸುಂಕಕ್ಕಾಗಿ, ಇನ್ನೊಂದು ಕಾಯಿಯನ್ನು ಲಂಚದ ರೂಪದಲ್ಲೀಯಬೇಕಾಗಿತ್ತು. ನಗರದ ಸುಂಕದ ಕಟ್ಟೆಯಲ್ಲಿ ಎರಡು ಕಾಯಿಗಳನ್ನು ಸುಂಕದ ರೂಪದಲ್ಲೀಯಬೇಕಾಗಿತ್ತು. ಈ ಎಂಟು ಸುಂಕದ ಕಟ್ಟೆಗಳಲ್ಲಿ ಕೆಲವು ಅನಧಿಕೃತವಿರಬೇಕೆಂದು ಭಾವಿಸಿದ ಆತ ತನ್ನದೇ ಆದ ಒಂಭತ್ತನೆಯ ಸುಂಕದ ಕಟ್ಟೆಯನ್ನು ಸ್ಥಾಪಿಸಿದ. ಆ ದಾರಿಯಾಗಿ ಸಾಗುವವರ ಹೆಸರು, ಜಾತಿ, ಉದ್ಯೋಗಗಳ ವಿವರಗಳನ್ನು ಹೊಸ ಫಾಯಿಲ್ ಪುಸ್ತಕಗಳಲ್ಲಿ ನಮೂದಿಸಿ, ಸುಂಕ ಕೊಂಡು, "ಅಟರಾಕಾಯಿ, ನವಾ ಸುಂಕ, ಕುಪ್ಪ್ಯ ಗಣೇಶಯ್ಯಾನ ರಜ" ಎಂಬ ಅಪ್ಪಣೆ ಚೀಟಿಗಳನ್ನೀಯಲಾರಂಭಿಸಿದ. ಸುಮಾರು ಹದಿನೆಂಟು ತಿಂಗಳುಗಳ ಕಾಲ ಯಾರೊಬ್ಬರೂ ಸುಂಕ ವಸೂಲಿ ಮಾಡುವ ಆತನ ಅಧಿಕಾರವನ್ನು ಪ್ರಶ್ನಿಸಲಿಲ್ಲ. ಒಮ್ಮೆ ಆತನ ಅಪ್ಪಣೆ ಚೀಟಿ ಶಿವಪ್ಪನಾಯಕ

(೧೬೪೫-೧೬೬೦) ನ ಲಕ್ಷ ಸೆಳೆದಾಗ ಆತ ಗಣೇಶಯ್ಯನಿಗೆ ಕರೆ ಕಳುಹಿಸಿದ. ಮಲ್ಯ ನಡೆದ ಕತೆ ಕೇಳಿದ. ಉದರ ನಿರ್ವಹಣೆಗೆ ಈ ಕೆಲಸ ಮಾಡಿದ್ದುದನ್ನು ಒಪ್ಪಿಕೊಂಡ. ವಿನೋದಕ್ಕೆ ಮೆಚ್ಚಿದ ಶಿವಪ್ಪ ನಾಯಕ ಆತನನ್ನು ತನ್ನಲ್ಲಿ ಕೆಲಸಕ್ಕಿಟ್ಟುಕೊಂಡ. ಮುಂದೊಂದು ದಿನ ಆತನ ಮಂತ್ರಿಯೊಬ್ಬನಾದ (ಮಠಸ್ಥ ಗಣೇಶ ರಾಮಚಂದ್ರ ಶರ್ಮನ 'ಸಾರಸ್ವತ ರತ್ನಮಾಲ', ಪುಟ ೧೭೭-೧೭೯)

೮. ಒಮ್ಮೆ ರಾಜ್ಯದ ಕೆಲಸದ ಕುರಿತಾಗಿ ಚರ್ಚೆ ನಡೆಯುತ್ತಿದ್ದಾಗ ಮೀಸೆ ತಿರುಚುವ ಅಭ್ಯಾಸಕೊಂಡಿದ್ದ ಭದ್ರಪ್ಪನಾಯಕನ ಕೈಗೆ ಬಂದ ಮೀಸೆಯ ಕೂದಲೊಂದನ್ನು ತೂರಲೆಂದು ರಾಮಚಂದ್ರ ಮಲ್ಯನ ಕೈಗಿತ್ತ. ರಾಮಚಂದ್ರ ಮಲ್ಯ ಅದನ್ನು ಮನೆಗೆ ತೆಗೆದುಕೊಂಡು ಹೋಗಿ ಮಣಿ ಖಚಿತ ಚಿನ್ನದ ಪೆಟ್ಟಿಗೆಯಲ್ಲಿರಿಸಿದ. ಅರಸನ ಭೇಟಿಯ ವೇಳೆ ಆತ ಅದನ್ನು ತನ್ನೊಂದಿಗೆ ಕೊಂಡೊಯ್ಯುತ್ತಿದ್ದ. ಒಮ್ಮೆ ಅರಸು ಏಕಾಕಿ ಇದ್ದಾಗ, ಚಿನ್ನದ ಪೆಟ್ಟಿಗೆಯನ್ನು ಆತನಿಗೆ ತೋರಿಸಿದ. ಕ್ಷುಲ್ಲಕವಿದ್ದ ಕೂದಲ ಎಳೆಯನ್ನು ಜೋಪಾನವಾಗಿಡಬಲ್ಲ ಅಧಿಕಾರಿಯನ್ನು ಕಂಡ ಅರಸು ಆಶ್ಚರ್ಯಚಕಿತನಾದ. ತನ್ನಲ್ಲಿ ನಿಷ್ಠೆಯಿಟ್ಟವನನ್ನು ರಾಜ್ಯದ ಹಿತಸಂರಕ್ಷಣೆಗಾಗಿ ನಂಬಬಹುದೆಂದು ಭಾವಿಸಿ, ತನಗೆ ಬೇಕಾಗಿರುವುದನ್ನು ಬೇಡಿಕೊಳ್ಳುವರೆ ತಿಳಿಸಿದ. ರಾಮಚಂದ್ರ ಮಲ್ಯ ಮೂರೂವರೆ ಘಟಿಕೆಗಳ (ಸುಮಾರು ಒಂದೂವರೆ ತಾಸು) ಕಾಲ ರಾಜಮುದ್ರೆಯನ್ನು ಉಪಯೋಗಿಸುವ ಅಧಿಕಾರವನ್ನು ಅಪೇಕ್ಷಿಸಿದ. ರಾಜಮುದ್ರೆಯನ್ನು ಮನೆಗೆ ತೆಗೆದುಕೊಂಡುಹೋದ ಆತ ತಾನು ಆ ಮೊದಲೇ ತಯಾರಿಸಿ ಇಟ್ಟಿದ್ದ ತಾಮ್ರ ಪಟಗಳ ಮೇಲಕ್ಕೊತ್ತಿ ಅರಸನಿಗೆ ಮರಳಿಸಿದ. ರಾಜಮುದ್ರೆಯನ್ನೀಯಲು ಅಳುಕು ತೋರಿದ ಅರಸು ಕೊಟ್ಟ ಮಾತನ್ನುಳಿಸಲಾಗಿ ಮುದ್ರೆಯನ್ನು ಹಸ್ತಾಂತರಿಸಿದನೇನೋ ನಿಜ, ಆದರೆ ಅದನ್ನು ಯಾವ ರೀತಿಯಲ್ಲಿ ಬಳಸಲಾಯಿತೆಂಬುದನ್ನರಿಯಲು ಅತಿ ಉತ್ಸುಕನಿಗಿದ್ದ ಆತ ಮುದ್ರೆಯಿಂದ ಯಾರಿಗೆ ಲಾಭವಾಯಿತೆಂದು ಕೇಳಿದ. ಆ ಕೂಡಲೇ ರಾಮಚಂದ್ರ ಮಲ್ಯ ದೇವಸ್ಥಾನಗಳ ನಿರ್ಮಾಣಕ್ಕಿತ್ತ ದಾನದ ಮತ್ತು ಸತ್ರ ಶಾಲೆಗಳಿಗಿತ್ತ ಉಂಬಳಿಯ ಶಾಸನಗಳನ್ನು ತೋರಿದ. ಸ್ವಾರ್ಥಕ್ಕಾಗಿ ರಾಜಮುದ್ರೆಯನ್ನು ಬಳಸದಿದ್ದುದನ್ನು ಕಂಡು ಮೆಚ್ಚಿಗೆ ತೋರಿದ ಅರಸು ಇನ್ನುಳಿದ ತಾಮ್ರ ಶಾಸನಗಳನ್ನು ಕೊಂಡು ಅವುಗಳಿಗೂ ರಾಜಮುದ್ರೆ ಹಾಕಿಸಿದ. ರಾಮಚಂದ್ರ ಮಲ್ಯ ಮೂವತ್ತು ಮುಡಿ ಅಕ್ಕಿಯ ಉತ್ಪನ್ನವಿರುವ ಭೂಮಿಯನ್ನು ೧೬೬೩ರಲ್ಲಿ ದಾನವಾಗಿತ್ತ ತಾಮ್ರ ಶಾಸನ ಹೊನ್ನಾವರದ ಶ್ರೀ ವೆಂಕಟೇಶ ದೇವಸ್ಥಾನದಲ್ಲಿದೆ; ಅದು ದೇವಸ್ಥಾನದ ಪ್ರತಿಷ್ಠೆ ರಾಮಚಂದ್ರ ಮಲ್ಯನ ಕೈಗಳಿಂದಾದುದನ್ನೂ ಸೂಚಿಸುತ್ತದೆ. ಅವನ ವಂಶಜರು ಹೊನ್ನಾವರದಲ್ಲಿ ವಾಸಿಸುತ್ತಿದ್ದು ಅವರಲ್ಲಿ ಆತನ ಮೂರು ತಾಮ್ರ ಶಾಸನಗಳಿವೆ. 'ಸಾರಸ್ವತ ರತ್ನಮಾಲ', ಮಠಸ್ಥ ಗಣೇಶ ರಾಮಚಂದ್ರ ಶರ್ಮ.

೯). 'ದ ನಾಯಕ್ಸ್ ಆಫ್ ಇಕ್ಕೇರಿ' - ಕೆ.ಡಿ.ಸ್ವಾಮಿನಾಥನ್ ಎಮ್. ಎ, ಪುಟ (೧೧೯)

೧೦. 'ದ ನಾಯಕ್ಸ್ ಆಫ್ ಇಕ್ಕೇರಿ' - ಕೆ.ಡಿ.ಸ್ವಾಮಿನಾಥನ್ ಎಮ್. ಎ. ಪುಟ (೧೧೯)

೧೧. ಆತನ ಸಂಪೂರ್ಣ ಹೆಸರು ಅಪ್ಪಾಜಿ ರಾಮ್ ವಾಗ್ಲೆ ನಾಡಕರ್ಣಿ. ಆತನ ಜನ್ಮ ಅಂಕೋಲ (ಉತ್ತರ ಕನ್ನಡ)ದಲ್ಲಾಯಿತು. ಅವನ ಗೋತ್ರ ಕೌಂಡಿನ್ಯ; ಕುಲದೇವತೆ ಮಂಗೇಶ.

೧೨. 'ಮೈಸೂರು ಗೆಝೆಟಿಯರ್' ಸಂ. ೨, ಭಾಗ ೪, ೧೯೩೦ ಪುಟ ೨೪೯೧-೨೪೯೨ 'ಹೈದರ್ ಆಲಿ ಅಂಡ್ ಟಿಪ್ಪುಸುಲ್ತಾನ್', ಲೇಖಕ - ಲೆವಿನ್ ಬಿ. ಬ್ರೌನಿಂಗ್, ಸಿ.ಎಸ್.ಐ., ೧೮೯೩, ಪುಟ ೪೮.

ಅಧ್ಯಾಯ ೯

ಕೆನರಾದ ಇತಿಹಾಸ ಮತ್ತು ಕೆನರಾದಲ್ಲಿ ಸಾರಸ್ವತರು

೧. ಕೆನರಾ

ಕೆನರಾ, ಉತ್ತರದಲ್ಲಿ ಗೋವಾ ರಾಜ್ಯ ಮತ್ತು ಬೆಳಗಾಂ ಜಿಲ್ಲೆ, ಪೂರ್ವದಲ್ಲಿ ಬೆಳಗಾಂ ಮತ್ತು ಧಾರ್ವಾರ ಜಿಲ್ಲೆಗಳು, ದಕ್ಷಿಣದಲ್ಲಿ ಮೈಸೂರು, ಕೂರ್ಗ್, ಮಲಬಾರು ಜಿಲ್ಲೆಗಳು. ಪಶ್ಚಿಮದಲ್ಲಿ ಅರಬಿ ಸಮುದ್ರ, ಇವೆಲ್ಲವುಗಳಿಂದಾವೃತವಾದ ಸುಮಾರು ೨೬೦ ಮೈಲುಗಳುದ್ದವ ೧೦ರಿಂದ ೬೦ ಮೈಲು ಅಗಲವಿದ್ದ ಭೂಭಾಗವೊಂದು.

ನೈಸರ್ಗಿಕ ದೃಶ್ಯಗಳಲ್ಲಿ ಮುಖ್ಯತಃ ಜಲಪಾತ, ಉತ್ತರ ಕನ್ನಡದ ವೈಶಿಷ್ಟ್ಯವೊಂದು. ಪ್ರಪಾತವೊಂದರಿಂದ ಧುಮುಕುವ ದಬದಬೆಯು ದೃಶ್ಯ ನಯನ ರಮ್ಯವಾದುದು. ಇದು ಪ್ರಪಂಚದಲ್ಲಿನ ಪ್ರಸಿದ್ಧವಾದ ಕೆಲವೇ ಜಲಪಾತಗಳಲ್ಲೊಂದಾಗಿದೆ. ಹೊನ್ನಾವರ ಅಥವಾ ಶರಾವತಿಯೆಂದು ಪರಿಚಿತವಾಗಿರುವ ೭೫೦ಅಡಿಗಳಷ್ಟರ ಅಗಲದ ನದಿಯ ನೀರು, ಸುಮಾರು ೮೩೦ ಅಡಿಗಳಷ್ಟು ಎತ್ತರದಿಂದ ಕೆಳಕ್ಕೆ ಧುಮುಕಿ ೧೩೦ ಅಡಿ ಅಗಲದ ಕುಣಿ ಸೇರುತ್ತದೆ. 'ಗೆರ್ಸೊಪ್ಪ' ಜಲಪಾತವೆಂದು ಕರೆಯಲಾಗುವ ಈ ದಬದಬೆ ಅಪ್ರತಿಮವಾದುದು. ಅಂಕೋಲಾ ತಾಲೂಕಿನ ದಕ್ಷಿಣಕ್ಕಿದ್ದ ಗಂಗಾವಳಿಯೊಂದಿಗಿನ ಪಶ್ಚಿಮ ಘಟ್ಟದ ಪಶ್ಚಿಮ ಭೂಭಾಗ, ಗೋವಾದಲ್ಲಿನ ಕೊಂಕಣಿಯಂತಿರುವ ಕೊಂಕಣಿ ಭಾಷೆಯನ್ನಾಡುವ ಜನರಿಂದೊಳಗೂಡಿದೆ. ಉಡುಪಿ ತಾಲೂಕಿನ ಉತ್ತರಕ್ಕಿದ್ದ ಗಂಗಾವಳಿ ಮತ್ತು ಸೀತಾನದಿ ಹಾಗೂ ಕಲ್ಯಾಣಪುರ ನದಿಗಳ ನಡುವಣ ಭೂಭಾಗ ಹೈಗ ದಲ್ಲಿ ಜನರು ಕನ್ನಡ ನುಡಿಯುತ್ತಾರೆ. ಸೀತಾನದಿ ಮತ್ತು ಪಯಸ್ವಿನಿ ನದಿಗಳ ನಡುವಣ ಭೂಭಾಗ ತುಳುವ ಪ್ರಾಂತವೆಂದೆನಿಸಿಕೊಂಡಿದ್ದು ಅಲ್ಲಿ ಜನರು ತುಳು ನುಡಿಯುತ್ತಾರೆ. ಪಯಸ್ವಿನಿಯ ದಕ್ಷಿಣಕ್ಕಿದ್ದ ಬಯಲು ಭೂಮಿ ಮಲಯಾಳಿ ಭಾಷಿಕರ ಪ್ರಾಂತವೊಂದು. ಆದರೆ ಅದು ದಕ್ಷಿಣ ಕನ್ನಡದ ಭಾಗವೊಂದಾಗುಳಿಯಿತು. ೧೭೯೯ರಲ್ಲಿ ಬ್ರಿಟಿಷರಿಂದಾಗಿ ಸೆರಿಂಗಪಟಂದ ಪತನವಾಯಿತು. ಅನಂತರದ ಐತಿಹಾಸಿಕ ವಿಪರ್ಯಾಸ ಈ ಮೇಲಿನ ಗೊಂದಲಕ್ಕೆ ಕಾರಣವಾಯಿತು. ಇದನ್ನು ಕೆಳದಿಯ ನಾಯಕರು ಗೆದ್ದುಕೊಂಡು ತಮ್ಮ ರಾಜ್ಯದೊಂದಿಗೆ ಸೇರಿಸಿಕೊಂಡಿದ್ದರು. ಕ್ರಮೇಣ ಇದು ಹೈದರ್ ಅಲಿ, ಟಿಪ್ಪು ಸುಲ್ತಾನರ ರಾಜ್ಯದ ಭಾಗವಾಗಿಯುಳಿಯಿತು.

ಸುಬ್ರಹ್ಮಣ್ಯ ಗಿರಿಯು ಹೊರತು ಕೆನರಾದ ಅನ್ಯ ಕೆಲವೊಂದು ಸ್ಥಳಗಳು ಪರಶುರಾಮನ ಕಥೆಯೊಂದಿಗೆ ಸಂಬಂಧಕೊಂಡಿವೆ. ಪರಶುರಾಮ ಪುತ್ತೂರಿನಲ್ಲಿ (ಉಡುಪಿಯ ಸಮೀಪ) ದುರ್ಗಾಭಗವತಿಯ ವಿಗ್ರಹವನ್ನು ಸ್ಥಾಪಿಸಿದಂತೆ ಕುಂಜಾರ, ಕನ್ನರ್ಪಾಡಿ ಮತ್ತು ಇಂದ್ರಾಳಿಗಳಲ್ಲಿ ದುರ್ಗಾಲಯಗಳನ್ನು, ಉಡುಪಿ ತಾಲೂಕಿನ ಅರಿತೋಡು, ತಾಂಗೋಡು, ಮಾಂಗೋಡು ಮತ್ತು ಮುಕ್ಕಲಂಪೋಡುಗಳಲ್ಲಿ ನಾಗಾಲಯಗಳನ್ನು ಕಟ್ಟಿಸಿದನೆನ್ನಲಾಗುತ್ತದೆ. ಪರಶುರಾಮ ತನ್ನ ತಾಯಿ ರೇಣುಕೆಯ

ನೆನಪಿಗಾಗಿ ಸ್ಥಾಪಿಸಿದ್ದುದೆನ್ನಲಾಗುವ ಕುಂಜಾರದ ದೇವಸ್ಥಾನ (ಉಡುಪಿಯಿಂದ ಸುಮಾರು ಎಂಟು ಮೈಲುಗಳ ದೂರ, ಆಗ್ನೇಯಕ್ಕಿರುವ) ಅತಿ ಪವಿತ್ರವಾದುದಾಗಿದೆ. ಇದನ್ನು ರಾಮಾಯಣ, ಮಾರ್ಕಾಂಡೇಯ ಪುರಾಣಗಳಲ್ಲಿ ಉಲ್ಲೇಖಿಸಲಾಗಿದೆ.

ಕುಮಾರಿ ಅಥವಾ ಶ್ರೀಕುಮಾರಿ (ಕುಮಾರಧಾರಿ), ನೇತ್ರಾವತಿ, ನಳಿನಿ, ಪಾಸಿಂ (ಪಯಸ್ವಿನಿ) ಮತ್ತು ಸೂಕ್ತಿಮತಿ (ಗಂಗೊಳ್ಳಿ) ನದಿಗಳು ಮಾರ್ಕಾಂಡೇಯ, ವಾಯು ಮತ್ತು ಭವಿಷ್ಯೋತ್ತರ ಪುರಾಣಗಳಲ್ಲಿ ಉಲ್ಲೇಖಿಸಲ್ಪಟ್ಟಿವೆ [೬]. ಪುಷ್ಪಗಿರಿ ಪರ್ವತ (ಸುಬ್ರಹ್ಮಣ್ಯ ದೇವಾಲಯವಿದ್ದ ಗಿರಿ), ಕುಟಸೈಲ (ಕೊಡಸಾದ್ರಿ, ಮುಕಾಂಬಿಕೆಯ ನಿವಾಸ ಸ್ಥಾನ) ಗಳನ್ನು ಮಾರ್ಕಾಂಡೇಯ ಪುರಾಣದಲ್ಲಿ ಉಲ್ಲೇಖಿಸಲಾಗಿದೆ.

ಅಶೋಕ ತನ್ನ ಧರ್ಮ ಪ್ರಚಾರಕರನ್ನು ಬನವಾಸಿಗೂ ಕಳುಹಿಸಿದ್ದ. ಅದು ಬೌದ್ಧ ಧರ್ಮದ ಪ್ರಖ್ಯಾತ ಕ್ಷೇತ್ರವೊಂದಾಗಿತ್ತು. ಕ್ರಿ. ಪೂ. ೧೦೦ರಲ್ಲಿ ಭೂತಪಾಲನೆಂಬ ಬನವಾಸಿಯ ವ್ಯಾಪಾರಿಯೊಬ್ಬ ಪೂನಾದ ಆಗ್ನೇಯಕ್ಕೆ, ಸುಮಾರು ೩೫ ಮೈಲುಗಳ ದೂರದಲ್ಲಿ ಕಾರ್ಲಿ ಗುಹೆಗಳನ್ನು ನಿರ್ಮಿಸಿದ. ಬನವಾಸಿಯುನ್ನು ಸಂದರ್ಶಿಸಿದ ಯುಆನ್‌ಛಾಂವ್ಗ (ಹ್ಯುಯೆನ್‌ತ್ಸಾಂಗ್) ನಗರದ ಸಮೀಪ ಸುಮಾರು ೩೦೦ ಘನ ಪಾಂಡಿತ್ಯ ಕೊಂಡ ಬೌದ್ಧ ಭಿಕ್ಕುಗಳ ವಿಹಾರವೊಂದನ್ನು, ಬೆಲೆ ಬಾಳುವ ಕಿರೀಟದೊಂದಿಗಿನ, ಎರಡು ಅಡಿಗಳೆತ್ತರದ ಬುದ್ಧನ ಮಣಿ ಖಚಿತ ವಿಗ್ರಹವನ್ನಿರಿಸಿದ್ದ ಪೆಟ್ಟಿಗೆಯುನ್ನು ಕೊಂಡ ಬುದ್ಧನ ದೊಡ್ಡ ಚೈತ್ಯಾಲಯವೊಂದನ್ನು ಸಂದರ್ಶಿಸಿದ್ದ. ಮಂಗಳೂರಿನ ಕದ್ರಿಯಲ್ಲಿನ ಹಾಗೂ ಅನ್ಯ ಸ್ಥಳಗಳಲ್ಲಿನ, ಪಾಂಡವರದ್ದೆನ್ನಲಾಗುವ ಗುಹೆಗಳು ಕ್ರಿಸ್ತ ಶಕದ ಮೊದಲ ಶತಕಗಳಲ್ಲಿ ಬೌದ್ಧರಿಂದ ನಿರ್ಮಿಸಲ್ಪಟ್ಟಂತಹವಾಗಿವೆ.

ಟೊಲೆಮಿ (ಕ್ರಿ.ಶ.೧೩೦), ಮಂಗಳೂರು ಮತ್ತು ಬನವಾಸಿಗಳನ್ನು ಮಗನೂರ್ ಮತ್ತು ಬನೌಸಿ ಎಂದಾಗಿ ಸಂಭೋಧಿಸಿರುತ್ತಾನೆ. 'ಪೆರಿಪ್ಲಸ್ ಆಫ್ ದಿ ಎರಿಥ್ರಿಯನ್ ಸೀ' ಯ ಲೇಖಕ, ಹೊನ್ನಾವರವನ್ನು 'ನವೌರ' ಎಂದಾಗಿಯೂ ಅದು 'ಲಿಮುರಿಕ' (ತಮಿಳುನಾಡು) ದ ಮೊದಲ ಬಂದರವೆಂದೂ ಹೇಳಿರುತ್ತಾನೆ. ಉಲ್ಲೇಖಿಸಿರುತ್ತಾನೆ. ಪೆರಿಪ್ಲಸ್‌ನ ಲೇಖಕ ಟೊಲೆಮಿ ನಮೂದಿಸಿದ ಐಗಿಡಿವೊಯಿ ದ್ವೀಪ ಬಹುತೇಕ ಕಾರ್ವಾರದ ಸಮೀಪವಿದ್ದ ಅಂಜಿದೀವ ದ್ವೀಪವಿರಬೇಕು. ತುಳುವ ನಾಡಿನ ಬಂದರುಗಳು ಗ್ರೀಕ್ ಭೂಗೋಳ ಶಾಸ್ತ್ರಜ್ಞರಿಗೆ ಸುಪರಿಚಿತವಿದ್ದವು.

೨. ಭೂತಾಳ ಪಾಂಡ್ಯ

ಇತಿಹಾಸದ ಆಧಾರವಿದ್ದಿರದಿದ್ದರೂ ಪಾರಂಪಾರಿಕವಾದ ನಂಬಿಕೆಯ ಮೇರೆಗೆ, ದೇವ ಪಾಂಡ್ಯನ ತಂಗಿಯ ಮಗ ಭೂತಾಳ ಪಾಂಡ್ಯ ಕೆಂಪು ಸಾಗರ ಮತ್ತು ಪೂರ್ವ ಆಫ್ರಿಕಾದ ಬಂದರುಗಳಲ್ಲಿ ವ್ಯವಹಾರ ಮಾಡುತ್ತಿದ್ದ ಮಧುರೆಯ ವ್ಯಾಪಾರಿಯೊಬ್ಬ. ಸ್ಥಾನೀಯ ಮಹಿಳೆಯೊಬ್ಬಳೊಂದಿಗೆ ವಿವಾಹ ಮಾಡಿಕೊಂಡ ಈತ ಕ್ರಿ. ಶ. ೭೮ರಲ್ಲಿ ತುಳುವ ಬಾರ್ಕೂರಿನಲ್ಲಿ ರಾಜ್ಯವಾಳಿಕೊಂಡಿದ್ದ. ಕೆನರಾದಲ್ಲಿ ಜೈನ ಧರ್ಮ ಆದಾಗಲೇ ಸಾಕಷ್ಟು ಪ್ರಗತಿ ಮಾಡಿತ್ತು. ಆತ ಜಿನಧರ್ಮೀಯನಿದ್ದನೆಂದು ನುಡಿಯಲಾಗುತ್ತದೆ. ಹದಿನೆರಡು ಜೈನ

ಗಾಣೆಯರಿಂದ ಈತನಿಗೆ ಕೇವಲ ಪುತ್ರ ಸಂತಾನವಷ್ಟೇ ಲಭ್ಯವಾಗಿತ್ತು. ಕೇರಳದಲ್ಲಿ 'ಮರುಮಕ್ಕತ್ತಾಯಂ'' ಪದ್ಧತಿ ರೂಢಿಗೆ ಬರುವ ಹೊತ್ತಿಗೆ ಇಲ್ಲಿ ಈತ ಹೆಣ್ಣಿನ ಮೂಲಕ ಪಿತ್ರಾರ್ಜಿತ ಗಳಿಸುವ ಅಳಿಯ ಸಂತಾನ ಪದ್ಧತಿಯನ್ನು ಪ್ರಚಾರಕ್ಕೆ ತಂದನೆಂದು ನಂಬಲಾಗುತ್ತದೆ. ಆತನ ವಂಶಜರಲ್ಲಿನ ವಿದ್ಯುಮ್ನ ಪಾಂಡ್ಯ, ವೀರ ಪಾಂಡ್ಯ, ಚಿತ್ರವೀರ್ಯ ಪಾಂಡ್ಯ, ದೇವ ವೀರ ಪಾಂಡ್ಯ ಮತ್ತು ಬಲವೀರ ಪಾಂಡ್ಯ ಮುಂತಾದವರು ಕ್ರಿ.ಶ. ೩೪೩ರ ವರೆಗ ಬಾರ್ಕೂರನ್ನಾಳಿಕೊಂಡಿದ್ದರೆನ್ನಲಾಗುತ್ತದೆ.

ಆದೊಂದು ಕಾಲದಲ್ಲಿ ಕೆನರಾದ ದೊಡ್ಡ ಭಾಗ ಚೇರ ರಾಜ್ಯದ ವಿಭಾಗವಾಗಿದ್ದಿರಬೇಕು.

೩. ಬನವಾಸಿಯ ಕದಂಬರು

ಶಾತವಾಹನರು ಅಥವಾ ಆಂಧ್ರಭೃತ್ಯರು ಬಹುತೇಕ ಉತ್ತರ ಕನ್ನಡದ ಭಾಗವೊಂದನ್ನು ಆಳಿಕೊಂಡಿದ್ದರು. ಕ್ರಿ. ಶ. ೩೪೬ರಿಂದ ೬೮೬ರ ತನಕ ಹೈಗ ಮತ್ತು ತುಳುವ "ಪ್ರಾಂತವನ್ನು ಆಳಿಕೊಂಡಿದ್ದ ಬನವಾಸಿಯ (ಸಿರ್ಸಿ ತಾಲೂಕು) ಕದಂಬರನ್ನು ಬಾದಾಮಿಯ ಪಶ್ಚಿಮ ಚಾಲುಕ್ಯರ ಕೀರ್ತಿವರ್ಮ ಸೋಲಿಸಿದ. ಇದಕ್ಕೂ ಮೊದಲು ಯಾವೊಂದು ರಾಜ ಮನೆತನ ಈ ಪ್ರದೇಶವನ್ನು ಆಳಿಕೊಂಡಿದ್ದರೆ ಅದರ ಕುರಿತು ಏನೊಂದೂ ತಿಳಿದುಬಂದಿಲ್ಲ.

೪ ಆಳುಪರು

ತುಳುವ ಪ್ರಾಂತ, ಎರಡನೆಯ ಶತಮಾನದಿಂದ ಹದಿನೈದನೆಯ ಶತಮಾನದ ಮಧ್ಯಾಂತರದ ತನಕ ಅತೀ ಪ್ರಾಚೀನವಿದ್ದ ಆಳುಪ ಮನೆತನದಿಂದ ಕೆಲವೊಮ್ಮೆ ಸ್ವತಂತ್ರವಾಗಿ, ಕೆಲವೊಮ್ಮೆ ಸಾಮಂತರ ರೂಪಿನಲ್ಲಿ ಆಳಲ್ಪಟ್ಟಿತು.

ಟೋಲೆಮಿ ಉಲ್ಲೇಖ ಮಾಡಿದ್ದ 'ಒಲೋಯಿಖೋರಾ' ವನ್ನು ಆಳ್ವಖೇಡವೆಂದು ಪರಿಗಣಿಸಲಾಗಿದೆ. ಅವರು ಉಡುಪಿಯ ಸಮೀಪದ ಉದಯಾವರದಿಂದ ರಾಜ್ಯವಾಳುತ್ತಿದ್ದರು. ಅವರ ಕುಲದೇವತೆ ಉದಯಾವರದ ಸಂಬುಕಲ್ಲು ದೇವಸ್ಥಾನದಲ್ಲಿನ ಶಿವ (ಭೈರವ)ನಿದ್ದ. ಪ್ರಾಯಶಃ ಅವರು ಬನವಾಸಿಯ ಕದಂಬರ ಸಾಮಂತರಾಗಿದ್ದರು. ಅವರ ಪತನಾನಂತರ ಥಿಯೂರಮ್ಮ ಆಳ್ವ ಅರಸರ್ ಇವರಿಗೆ ಬನವಾಸಿ ರಾಜ್ಯದ ದೊಡ್ಡ ಪಾಲೊಂದು ದೊರಕಿತು. ಅವರು ಅದನ್ನು ಚಾಲುಕ್ಯರ ಸಾಮಂತರಾಗಿ ಆಳಿದರು. ಎರಡನೆಯ ಪುಲಕೇಶಿ ಮತ್ತು ಮಂಗಲೇಶನ ನಡುವಣ ಆಂತರಿಕ ಯುದ್ಧದ ಕಾಲ ಕುಂದವರಸ ಅಥವಾ ಕುಂದವರ್ಮ (೬೦೯-೬೪೨) ನ ಮಾಂಡಲಿಕರಿದ್ದ ಆಳುಪರ ಅರಸರಲ್ಲೊಬ್ಬಾತ ಸ್ವಾತಂತ್ರ್ಯಸಾರಲೆತ್ನಿಸಿದ. ಆದರೆ ಎರಡನೆಯ ಪುಲಕೇಶಿ ವಿಜಯಿಯಾದಾಗ ತಾನಾಗಿ ಆತನ ಸ್ವಾಮಿತ್ವ ಸ್ವೀಕರಿಸಿ, ಕದಂಬ ಮಂಡಲ ಅಥವಾ ಬನವಾಸಿಯ ಅಧಿಕಾರ ಸೂತ್ರ ತನ್ನ ಕೈಗಳಲ್ಲಿ ಕೊಂಡ. ೬೭೫ ಮತ್ತು ೬೯೨ರ ಸನದಿನ ಮೇರೆಗೆ ಗುಣಸಾಗರ ಮತ್ತು ಆತನ ಮಗ ಮೊದಲನೆಯ ಚಿತ್ರವಾಹನ ಕದಂಬ ಮಂಡಲದ ಅರಸರೆಂದು ಕರೆದುಕೊಂಡಿದ್ದರು. ಅವರಲ್ಲಿನ ಎರಡನೆಯಾತ ದಾನ, ಧರ್ಮಗಳಿಗೆ ಉತ್ತೇಜನೆ, ವಿದ್ಯೆಗೆ ಆಶ್ರಯವಿತ್ತಿದ್ದ ಯಶಸ್ವಿ ಅರಸನೊಬ್ಬನೆಂದೆನಿಸಿಕೊಂಡ. ರಾಷ್ಟ್ರಕೂಟರ ದಂತಿದುರ್ಗ ಎರಡನೆಯ ಕೀರ್ತಿವರ್ಮನನ್ನು

ಸೋಲಿಸಿ ೭೫೪ರಲ್ಲಿ ಚಾಲುಕ್ಯರ ಪ್ರಾಂತ್ಯವನ್ನು ' ವಶಪಡಿಸಿಕೊಂಡ. ಚಾಲುಕ್ಯರ ಪತನದ ನಂತರವೂ ಕದಂಬ ಮಂಡಲ ಸುಮಾರು ೮೦೦ರ ವರೆಗೆ, ಅಂದರೆ ಶತಮಾನವೊಂದರ ಕಾಲ ಅವರ ಅಧೀನದಲ್ಲಿಯೇ ಉಳಿಯಿತು.

೫. ರಾಷ್ಟ್ರಕೂಟರು ಮತ್ತು ಕಲ್ಯಾಣದ ಚಾಲುಕ್ಯರು

೯ನೇಯ ಶತಮಾನದ ಮೊದಲ ದಿನಗಳಲ್ಲಿ ಮೂರನೆಯ ಗೋವಿಂದನ ಸಾಮಂತರು ಆತನ ವಿರುದ್ಧ ಬಂಡಾಯ ಹೂಡಿದರು. ಆ ದಿನಗಳಲ್ಲಿನ ಗೊಂದಲದ ಲಾಭ ಪಡೆದುಕೊಂಡ ಎರಡನೆಯ ಚಿತ್ರವಾಹನ ತಾನೂ ಬಂಡಾಯ ಹೂಡಿ ಸ್ವಾತಂತ್ರ್ಯ ಸಾರಲೆತ್ನಿಸಿ ಅಯಶಸ್ವಿಯಾದ ; ಆಳುಪ ಅರಸು ಬನವಾಸಿ ಪ್ರಾಂತ ಕಳೆದುಕೊಂಡ.

೬. ಹಾನಗಲ್‌ನ ಕದಂಬರು

೯೭೩ರಲ್ಲಿ ಎರಡನೆಯ ತೈಲಪ ರಾಷ್ಟ್ರಕೂಟರನ್ನು ಸೋಲಿಸಿ ಕಲ್ಯಾಣದ ಉತ್ತರ ಚಾಲುಕ್ಯರ ರಾಜವಂಶ ಸ್ಥಾಪಿಸಿದ. ಹಾನಗಲ್‌ನ (ಧಾರ್ವಾರ ಜಿಲ್ಲೆಯ ಹಾನಗಲ್ ತಾಲೂಕಿನ) ಕದಂಬ ರಾಜವಂಶದ ಸ್ಥಾಪಕ ಇರಿವ ಬೆಡಂಗ ದೇವನಿಗೆ, ವಂಶಪಾರಂಪಾರಿಕವಾಗಿ ಬಂದಿದ್ದ ಬನವಾಸಿಯ ರಾಜ್ಯ ಮತ್ತೆ ಪಡೆದುಕೊಳ್ಳುವಲ್ಲಿ ಹಾಗೂ ಉತ್ತರ ಚಾಲುಕ್ಯರ ಸಾಮಂತತನ ಉಳಿಸಿಕೊಳ್ಳುವಲ್ಲಿ ಈತನ ಅತ್ಯಮೂಲ್ಯ ಬೆಂಬಲ ದೊರಕಿತ್ತು. ಧೀರೋದಾತ್ತ ರಾಜಕಾರಣಿ, ದಾನಶೂರ, ಜ್ಞಾನ ವಿಜ್ಞಾನಗಳ ಪೋಷಕನಿದ್ದ ಚಟ್ಟಯ್ಯದೇವನ ಕಾಲದಲ್ಲಿ ಪ್ರಭುತ್ವ ಭದ್ರವಾಗಿ ನೆಲೆಗೊಂಡು ಈ ರಾಜವಂಶ ೧೩೪೭ರ ತನಕ ಹೈಗವನ್ನಾಳಿತು.

೭. ಆಳುಪರು (ಮುಂದುವರಿದುದು)

೧೦ನೆಯ ಶತಮಾನದಲ್ಲಿ ಆಳುಪರು ತಮ್ಮ ರಾಜಧಾನಿಯನ್ನು ಬಾರ್ಕೂರಿಗೆ ಸ್ಥಾನಾಂತರಗೊಳಿಸಿದರು. ೧೧ನೆಯ ಶತಮಾನದ ಆದಿಭಾಗದಲ್ಲಿನ ಬನವಾಸಿಯ ಮೇಲಣ ಚೋಳರ ದಂಡಯಾತ್ರೆಯ ಲಾಭಕೊಂಡು ಹೈಗವನ್ನು ತಮ್ಮ ರಾಜ್ಯದೊಂದಿಗೆ ಸೇರಿಸಿಕೊಂಡರು. ತೋರಿಕೆಗೆ ತಾವು ಕಲ್ಯಾಣದ ಉತ್ತರ ಚಾಲುಕ್ಯರ ಸಾಮಂತರಂತೆ ವರ್ತಿಸುತ್ತಿದ್ದ ಆಳುಪರು ಭುಜಬಲ ಕವಿ ಆಳುಪೇಂದ್ರ ದೇವ (೧೧೧೮-೧೧೫೫) ನ ಕಾಲದಲ್ಲಿ ತಮ್ಮ ಸ್ವಾತಂತ್ರ್ಯವನ್ನು ಮರಳಿಗಳಿಸಿದರು. ಕೆಲವೊಬ್ಬ ಆಳುಪ ಅರಸರು ಮಂಗಳೂರಿನಿಂದಲೂ ರಾಜ್ಯವಾಳಿದ್ದರು.

೮. ಯಾದವರು ಮತ್ತು ಹೊಯ್ಸಳರು

ಕಲ್ಯಾಣದ ಚಾಲುಕ್ಯರು ಇತಿಹಾಸದ ಕಡತ ಸೇರಿದ ನಂತರ ೧೧೮೯ರಲ್ಲಿ ಯಾದವರು ಬನವಾಸಿಯನ್ನು ಗೆದ್ದುಕೊಂಡರು. ಹಾನಗಲ್ಲಿನ ಕದಂಬರು ಅವರ ಮಾಂಡಲಿಕರಾಗಿ ರಾಜ್ಯವಾಳಿದರು.

ಬಾರ್ಕೂರಿನಿಂದ ' ಆಳಲ್ಪಡುತ್ತಿದ್ದ ಹೈಗ ಮತ್ತು ತುಳುವ ಪ್ರಾಂತವನ್ನು ಹೊಯ್ಸಳರ

ವಿಷ್ಣುವರ್ಧನ ಗೆದ್ದುಕೊಂಡ. ಆತನ ಉತ್ತರಾಧಿಕಾರಿಗಳು ಕೆನರಾದ ದಕ್ಷಿಣಭಾಗವನ್ನಾಳಿದರು. ೧೧೩೭ರಲ್ಲಿ ಆತ ಜೈನ ಧರ್ಮ ತೊರೆದು ಶ್ರೀ ವೈಷ್ಣವ ಧರ್ಮಕ್ಕೆ ಮತಾಂತರಗೊಂಡ. ಇದರಿಂದ ಕೆನರಾದ ಜೈನರೊಡೆಯರ ಮೇಲಣ ಆತನ ಹಿಡಿತ ದುರ್ಬಲವಾಯಿತು. ತುಳುವ ಪ್ರಾಂತ ದಕ್ಷಿಣ ಭಾರತದಲ್ಲಿನ ಜೈನ ಸಂಪ್ರದಾಯದ ಕೇಂದ್ರವೊಂದಾಯಿತು. ಈ ಕಾಲದಲ್ಲಿ ಪಶ್ಚಿಮ ಘಟ್ಟದಿಂದಾಗಿ ಬಂದ ಜಿನ ವಾಸ್ತುಗಳ ನಿರ್ಮಾಪಕರು ತಮ್ಮ ಕೌಶಲ್ಯ, ಸೇವೆಗಳನ್ನು ಸ್ಥಾನೀಯ ಅರಸರಿಗೊದಗಿಸಿದರು. ಮತ್ತೆ ಮುಂದಿನ ನಾಲ್ಕೈದು ಶತಮಾನಗಳ ಅವಧಿಯಲ್ಲಿ ಕಾರ್ಕಳ, ಮೂಡಬಿದರೆ, ಇನ್ನಿತರ ಸ್ಥಾನಗಳಲ್ಲಿ 'ಸ್ತಂಭ, ಬಸದಿ, ವಿಗ್ರಹ ಮುಂತಾದ ಚಿರಸ್ಥಾಯಿ ವಾಸ್ತುಗಳು ನಿರ್ಮಿಸಲ್ಪಟ್ಟವು.

೯. ಸ್ಥಾನೀಯ ನಾಯಕರು

ಈ ಕಾಲದುದ್ದ ಕೆನರಾದ ವಿಭಿನ್ನ ಭಾಗಗಳು ಸ್ವಾತಂತ್ರ್ಯ ಬಯಸುತ್ತಿದ್ದ ಕಾರ್ಕಳ, ಗೆರ್ಸೊಪ್ಪ (ಭಲ್ಲಾತಿಕಪುರ) ಹಾಡುವಳ್ಳಿ (ಸಂಗೀತಪುರ) ಮತ್ತು ಸೋದೆಗಳ ಸ್ಥಾನೀಯ ಒಡೆಯರಿಂದ ಆಳಲ್ಪಡುತ್ತಿದ್ದವು. ಅವರಲ್ಲಿ ಕಾರ್ಕಳದ '' ಸಾಂತರ ನಾಯಕರು ಅತಿ ಶಕ್ತಿ ಶಾಲಿಗಳಾಗಿದ್ದರು; ಗೆರ್ಸೊಪ್ಪದ ನಾಯಕ ಅವರ ಸಂಬಂಧಿಕರಲ್ಲೊಬ್ಬ. ಬಿಳಿಗಿ (ಶ್ವೇತಪುರ) ಯ ನಾಯಕರು, ಉಲ್ಲಾಳ ಮತ್ತು ಮೂಡಬಿದ್ರಿಯ ಚೌಟರು, ಮಂಗಳೂರು ಮತ್ತು ನಂದಾವರದ ಬಂಗರು, ಮುಲ್ಕಿಯ ಸಾವಂತರು, ಅಳ್ದಂಗಡಿ ಮತ್ತು ವೇಣೂರುಗಳ ಅಜಿಲರು, ಬೈಲಂಗಡಿಯ ಮೂಳರು, ಸುರಾಲಿನ ತೋಳರು ಮತ್ತೆ ಹಾಡುವಳ್ಳಿಯ (ಸಂಗೀತಪುರ) ನಾಯಕರು ಅನ್ಯ ಜೈನ ನಾಯಕರಿದ್ದರು.

೧೦. ಯಾದವರು, ಹೊಯ್ಸಳರು ಮತ್ತು ಹಾನಗಲ್‌ನ ಕದಂಬರು

(ಮುಂದುವರಿದುದು)

ಯಾದವರ ಮತ್ತು ಹೊಯ್ಸಳರ ನಡುವೆ ಪ್ರತಿಷ್ಠೆಗಾಗಿ ದೀರ್ಘಕಾಲ ಸಂಘರ್ಷ ನಡೆದಿತ್ತು; ತಮ್ಮ ಪ್ರಾಂತದ ಮೇಲಕ್ಕೆ ಆಗಾಗ ದಂಡೆತ್ತಿ ಬಂದು ಅದನ್ನು ವಶಪಡಿಸಿಕೊಳ್ಳಲು ಯತ್ನಿಸುತ್ತಿದ್ದ ಹೊಯ್ಸಳರ ವಿರುದ್ಧ ಹೋರಾಡಲು ಹಾನಗಲ್‌ನ ಕದಂಬರು ಯಾದವರಿಗೆ ನೆರವಿತ್ತರು. ೧೧೯೨ರಲ್ಲಿ ಎರಡನೆಯ ಬಲ್ಲಾಳ ಬನವಾಸಿಯನ್ನು ವಶಪಡಿಸಿಕೊಂಡ. ಕದಂಬರ ಕಾಮದೇವ (೧೧೮೦-೧೨೦೨) ಅವರನ್ನು ಹೊಡೆದೋಡಿಸಿದನಷ್ಟೇ ಅಲ್ಲ ಸಾಂತರಸರಿಂದ ತುಳುವ ಮತ್ತು ನಲ್ನಾಡನ್ನು ಗೆದ್ದುಕೊಂಡ. ಆದರೆ ಆತನ ಮರಣಾನಂತರ ಕದಂಬರ ಪ್ರಾಬಲ್ಯ ಕುಂದಲಾರಂಭಿಸಿತು. ಹೊಯ್ಸಳರು ಮಾತ್ರ ತಮ್ಮ ಕೊನೆಯ ದಿನಗಳ ತನಕ ಘಟ್ಟದ ಮೇಲಕ್ಕೆ ದಂಡೆತ್ತಿ ಹೋಗಿದ್ದರು. ಮೂರನೆಯ ವೀರಬಲ್ಲಾಳ ೧೩೦೦ರಲ್ಲಿ ಬನವಾಸಿಯನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾದ. ೧೩೨೨ರಲ್ಲಿ ಕದಂಬರು ತಾವು ಕಳೆದುಕೊಂಡ ಭೂಭಾಗಗಳನ್ನು ಮರಳಿಗಳಿಸಿದರು.

ಮಲ್ಲಿಕ್ ಕಾಫರ್, ಯಾದವರು ಮತ್ತು ಹೊಯ್ಸಳರನ್ನು ಸದೆಬಡಿದ. ಪರಿಸ್ಥಿತಿಯ ಲಾಭಗೊಂಡ ಹಾನಗಲ್ಲಿನ ಕದಂಬರು ಮತ್ತು ಕೆನರಾದ ತುಂಡರಸರು ಸ್ವಾತಂತ್ರ್ಯ ಸಾರಿಕೊಂಡಿದ್ದಿರಬೇಕು.

೧೧. ಆಳುಪರು (ಮುಂದುವರಿದುದು)

ಆಳುಪರು ಬಾರ್ಕೂರಿನಿಂದ ಆಳುತ್ತಿದ್ದರೂ ಅವರಲ್ಲಿನ ಕೆಲವರು ಮಂಗಳೂರಿನಿಂದಲೂ ರಾಜ್ಯವಾಳಿದ್ದರು. ಬಂಕಿದೇವ ಆಳುಪೇಂದ್ರ ದೇವ (೧೩೦೨) ನ ರಾಜ್ಯಾಡಳಿತೆಯ ಕಾಲದಲ್ಲಿ ಆಳುಪರ ವರ್ಚಸ್ಸು ಕುಂದತೊಡಗಿತ್ತು. ೧೪೪೪ರಲ್ಲಿ ಮೂಡಬಿದ್ರಿಯಲ್ಲಿ ದೊರಕಿದ ಶಾಸನ ಆಳುಪರ ಕೊನೆಯ ಅರಸು ಕುಲಸೇಖರ ದೇವನಿಗೆ ಸಂಬಂಧಿಸಿದೆ. ೧೩೩೬ರಲ್ಲಿ ವಿಜಯನಗರದ ಸ್ಥಾಪನೆಯಾಯಿತು. ತಾನಾಗಿ ಕುಸಿದು ಬಿದ್ದಿದ್ದ ತುಳುನಾಡು ವಿಜಯನಗರದೊಂದಿಗೆ ವಿಲೀನವಾಯಿತು.

೧೨೯೦ರಲ್ಲಿ ವೆನಿಸ್ ದೇಶದ ಯಾತ್ರಿಕ ಮಾರ್ಕೋಪೋಲೋ ಮಲಬಾರ್ ಮತ್ತು ಕೆನರಾವನ್ನು ಸಂದರ್ಶಿಸಿದ್ದ. ಆತ ಮಲಬಾರಿನಲ್ಲಿ ಕಂಡಿದ್ದ ವೈಭವವನ್ನು ತುಳುವನಾಡೂ ಅನುಭೋಗಿಸಿದ್ದಿರಬೇಕು. ಅದು ಕರಿಮೆಣಸು, ಶುಂಠಿ, ದಾಲ್ಚೀನಿಗಳಿಂದ ಸಮೃದ್ಧವಾಗಿತ್ತು. ಅಲ್ಲಿ ಅತ್ಯುತ್ತಮವಾದ ಬಟ್ಟೆಯೂ ತಯಾರಾಗುತ್ತಿತ್ತು. ಅವುಗಳ ಖರೀದಿಗಾಗಿ ಏಡನ್ ಅಲೆಕ್ಸಾಂಡ್ರಿಯಾ, ದಕ್ಷಿಣ ಚೀನಾದ ಹಡಗುಗಳು ಬರಲಾರಂಭಿಸಿದ್ದವು. ಇವುಗಳೊಂದಿಗಿನ ವ್ಯವಹಾರ ಅದು ಕೆಂಪು ಸಾಗರದೊಂದಿಗಿನ ವ್ಯಾಪಾರದ ಎಷ್ಟೋಂದೋ ಪಾಲು ದೊಡ್ಡದಿತ್ತು.

೧೨. ವಿಜಯ ನಗರ

೧೩೩೬ರಲ್ಲಿ ವಿಜಯನಗರದ ಸ್ಥಾಪನೆಯಾದಂತೆ ಕೆನರಾದ (ಅಲ್ಲಿ ಆಗ ಜೈನ ನಾಯಕರ ನಡುವೆ ಅಂತರ್ಯುದ್ಧ ನಡೆಯುತ್ತಿತ್ತು) ಪತನವಾಗಿ ಅನಾಯಾಸ ವಿಜಯನಗರ ಸಾಮ್ರಾಜ್ಯದೊಂದಿಗೆ ವಿಲೀನಗೊಂಡಿದ್ದಿರಬೇಕು.

ಹಾನಗಲ್ಲಿನ ಕದಂಬರ ಕೊನೆಯ ಅರಸು ಪುರಂದರರಾಜ ೧೩೪೭ರಲ್ಲಿ ದಂಡಿನೊಂದಿಗೆ ಗೋಕರ್ಣದತ್ತ ಸಾಗುತ್ತಿದ್ದಾಗ ಮೊದಲನೆಯ ಹರಿಹರನ ಸಹೋದರ ಮಾರಪ್ಪನಿಂದ ಪರಾಜಿತನಾದ. ಆತನ ರಾಜ್ಯ ವಿಜಯನಗರ ಸಾಮ್ರಾಜ್ಯದೊಂದಿಗೊಂದಾಯಿತು. ಎರಡು ಶತಮಾನಗಳಿಗೂ ಮಿಕ್ಕ ಕಾಲಾವಧಿಯ ವಿಜಯನಗರದ ಆಳ್ವಿಕೆ, ಗೋವಾದಂತೆ, ಕೆನರಾದ ಇತಿಹಾಸದಲ್ಲಿನ ವೈಭವ ಶಾಲಿ ಪರ್ವವೊಂದಾಗಿತ್ತು. ಅದು ಧರ್ಮಶೀಲ, ದಕ್ಷ ಸರಕಾರದಿಂದ ನಿಷ್ಠಾಪೂರ್ವಕವಾಗಿ ಆಳಲ್ಪಟ್ಟಿತು. ಕಾರವಾರದಿಂದ ಕೋಝಿಕ್ಕೋಡ್ ತನಕ ಭೂಮಾರ್ಗವಾಗಿ ಪ್ರವಾಸ ಮಾಡಿದ್ದ ಆಫ್ರಿಕಾದ ಮುಸಲ್ಮಾನ ಯಾತ್ರಿ ಅಬ್ದುಲ್ಲಾ ಮೊಹಮ್ಮದ್, ನಾಡು ಶ್ರೀಮಂತವಿತ್ತೆಂದೂ, ಅಲ್ಲಿ ಗಾಲಿಗಳ ವಾಹನಗಳು ಕಾಣಬಾರದಿದ್ದು ಕೇವಲ ಧನಾಢ್ಯರು ಪಾಲಕಿಗಳನ್ನು, ಅರಸರು ಕುದುರೆಗಳನ್ನು ಬಳಸುತ್ತಿದ್ದುದನ್ನು ಕಂಡಿರುವುದಾಗಿ ಹೇಳಿರುತ್ತಾನೆ. ಹಿನೌರ್ (ಹೊನ್ನಾವರ) ನ್ನು ಹರಿಹರನ (೧೩೩೬-೧೩೫೦) ಆಶ್ರಿತ ಜಮಾಲ್ - ಉದ್ - ದಿನ್ ಆಳಿಕೊಂಡಿದ್ದ. ಕೋಝಿಕ್ಕೋಡಿನಿಂದ ಮರಳುತ್ತಿದ್ದಾಗ ಈ ಮುಸಲ್ಮಾನ ದೊರೆ ಸಿಂದಾಪುರ (ಚಂದ್ರಪುರ) ದ ಮೇಲಣ ದಂಡಯಾತ್ರೆಗೆ ತಯಾರಿಮಾಡುತ್ತಿದ್ದುದನ್ನು ಕಂಡಿದ್ದ. ಆತ ಈ ದಂಡಯಾತ್ರೆಯೊಂದಿಗೆ ಸಾಗಿದ್ದ. ಪರ್ಸಿಯಾದ ಅರಸು ವಿಜಯನಗರಕ್ಕೆ ರವಾನಿಸಿದ್ದ ರಾಜದೂತ ಅಬ್ದುಲ್ ರಝಾಕ್ ೧೪೪೩ರ ನವಂಬರ್ ತಿಂಗಳಲ್ಲಿ ಮಂಗಳೂರಿನಲ್ಲಿ ಇಳಿದು

ಅಲ್ಲಿಂದ ವಿಜಯನಗರಕ್ಕೆ ತೆರಳಿದ; ೧೪೪೪ರ ಜನವರಿ ತಿಂಗಳಲ್ಲಿ ಮರಳಿದಾತ ಮಂಗಳೂರಿನಿಂದ ಹನ್ನೆರಡು ಮೈಲು ದೂರದ 'ಹೊನ್ನಾವರ' ದಲ್ಲಿನ ಅತ್ಯದ್ಭುತವಿದ್ದ ದೇವಸ್ಥಾನದತ್ತ ಸಾಗಿದ್ದ. ಪ್ರಾಯಶಃ ಇದು ಪೊಳಲಿಯಲ್ಲಿನ ಪರಮೇಶ್ವರಿಯ ದೇವಸ್ಥಾನವಿದ್ದಿರಬೇಕು. ೧೫೧೪ರಲ್ಲಿ ಕೆನರಾವನ್ನು ಸಂದರ್ಶಿಸಿದ ಪೋರ್ಚುಗೀಸ್ ಪ್ರವಾಸಿ ಡ್ಯುರೆಟ್ ಬಾರ್ಬೋಸಾ ಅಲ್ಲಿನ ಬಂದರುಗಳಲ್ಲಿ ಸರಕಿನ ಸಾಗಾಣಿಕೆ, ವ್ಯಾಪಾರ ಹೇರಳವಿತ್ತೆನ್ನುತ್ತಾನೆ. ಹೊನ್ನಾವರ, ಭಟ್ಕಳ, ಬಸ್ರೂರು ಮತ್ತು ಮಂಗಳೂರು ಇವು ವಿಜಯನಗರ ಸಾಮ್ರಾಜ್ಯದ ಪ್ರಮುಖ ಬಂದರುಗಳಾಗಿದ್ದವು. ಅರಬಿ ಭೂಗೋಳ ಶಾಸ್ತ್ರಜ್ಞ ಅಬುಲ್‌ಫಿದಾ (೧೨೭೩-೧೩೩೧) ಗೆರ್ಸೊಪ್ಪದ ಅಳಿವೆಯ ಪಶ್ಚಿಮಕ್ಕೆ, ಎರಡು ಮೈಲು ದೂರದಲ್ಲಿದ್ದ ಹೊನ್ನಾವರದ ಉಲ್ಲೇಖ ಮಾಡಿರುತ್ತಾನೆ. ಅಲ್ಲಿ ದೊಡ್ಡ ಹಡಗುಗಳು ಬರುತ್ತಿದ್ದವೆಂದು ಪ್ರವಾಸಿ ಇಬ್ನ ಬತೂತಾ (೧೩೪೨) ನುಡಿದಿರುತ್ತಾನೆ. ೧೫-೧೬ನೆಯ ಶತಮಾನಗಳಲ್ಲಿ ಅದು ಪರ್ಶಿಯಾದ ಕೊಲ್ಲಿಯಿಂದ ಬರುವ ಕುದುರೆಗಳ ದೊಡ್ಡ ವ್ಯಾಪಾರ ಕೇಂದ್ರವಾಗಿತ್ತು. ನದಿಯ ಮುಖದಿಂದ ಮೂರು ಮೈಲುಗಳ ಒಳಕ್ಕಿದ್ದ ಭಟ್ಕಳ ೧೪ರಿಂದ ೧೬ನೇಯ ಶತಮಾನಗಳ ನಡುವೆ ಅಕ್ಕಿ, ಅಡಿಕೆ, ತೆಂಗಿನಕಾಯಿ, ಬಟ್ಟೆ ಇತ್ಯಾದಿಗಳ ಸಮೃದ್ಧ ವ್ಯಾಪಾರ ಕೇಂದ್ರವಾಗಿತ್ತು. ಅಕ್ಕಿ, ಸಕ್ಕರೆಗಳಿಗಾಗಿ ಅಲ್ಲಿಗೆ ಒರ್ಮುಜ್‌ರ್ಝ್ ಮತ್ತು ಗೋವಾಗಳಿಂದಲೂ ಹಡಗುಗಳು ಬರುತ್ತಿದ್ದವು. ೧೫ - ೧೬ನೆಯ ಶತಮಾನಗಳ ಕಾಲಾವಧಿಯಲ್ಲಿ ಹೊನ್ನಾವರದಂತೆ ಇದೂ ಪರ್ಶಿಯನ್ ಕೊಲ್ಲಿಯ ಕುದುರೆಗಳ ದೊಡ್ಡ ವ್ಯಾಪಾರಕೇಂದ್ರವೆಂದು ಪ್ರಸಿದ್ಧವಾಗಿತ್ತು. ಡ್ಯುರೆಟ್ ಬಾರ್ಬೋಸಾ ಅಕ್ಕಿ ತುಂಬಿದ್ದ ಅನೇಕ ಹಡಗುಗಳು ಭಟ್ಕಳದತ್ತ ಸಾಗುವ ತಯಾರಿಯಲ್ಲಿರುವುದನ್ನು ಕಂಡಿದ್ದ. ೧೫೭೦ರಲ್ಲಿ ಪೋರ್ಚುಗೀಸರು ಗೋವಾವನ್ನು ಗೆದ್ದುಕೊಂಡರು. ಆ ಬಳಿಕ ಭಟ್ಕಳ ತನ್ನ ಮಹತ್ವವನ್ನು ಕಳೆದುಕೊಂಡಿತು. ಸಾರಿಗೆಯ ಸಾಧನಗಳ ಅಭಾವದ ನಿಮಿತ್ತ ಮೈಸೂರಿನ ಹೆಚ್ಚಿನ ವ್ಯಾಪಾರ ಅನ್ಯ ಸ್ಥಾನಗಳತ್ತ ಸಾಗಿತು. ಉಳಿದ ಅಲ್ಪ ವ್ಯಾಪಾರವನ್ನು ಊರಿನ ಅರವಾಸಿಗೂ ಮಿಕ್ಕ ಉದ್ಯಮಶೀಲ ನವಾಯಿತರು ನಡೆಸಿಕೊಂಡು ಬಂದರು. ಅದು ಈಗ ನಾಶವಾಗಿದ್ದರೂ ಅಲ್ಲಿ ಕೆನರಾದ ಕರಾವಳಿಯಲ್ಲಿನ ಅನ್ಯ ಪಟ್ಟಣಗಳಲ್ಲೆಲ್ಲೂ ಕಾಣಬಾರದಿದ್ದ ವೈಭವವನ್ನು ಸೂಚಿಸುವ, ಗಟ್ಟಿಮುಟ್ಟಾದ ತಡೆಗೋಡೆಗಳಿಂದ ಆವರಿಸಲ್ಪಟ್ಟ ಮನೆ, ಉದ್ಯಾನಗಳು, ವ್ಯಾಪಕವಿದ್ದ ಮಗ್ಗನ ದಂಡೆ, ಕೆಲವೊಂದು ದೇವಸ್ಥಾನಗಳ ಮುಂತಾದವುಗಳ ಕುರುಹುಗಳನ್ನು ಈಗಲೂ ಕಾಣಬಹುದು.

ಅದೊಂದು ಕಾಲದಲ್ಲಿ ಬಸ್ರೂರು (ಬಾರ್ಸೆಲೋರ್) ಕೋಟೆಯೊಳಗಣ ದೊಡ್ಡ ಪಟ್ಟಣವೊಂದಾಗಿತ್ತು. ಕೋಟೆಯೊಳಕ್ಕೆ ದೇವಸ್ಥಾನವೊಂದಿತ್ತು. ಬಸ್ರೂರು ವ್ಯಾಪಾರದ ಪ್ರಮುಖಕೇಂದ್ರವೊಂದಾಗಿತ್ತೆಂದು ಅರಬಿ ಭೂಗೋಳ ಶಾಸ್ತ್ರಜ್ಞರು ನುಡಿದಿರುತ್ತಾರೆ. ಅದು ಮಲಬಾರು ಮತ್ತು ಅರೇಬಿಯಾಗಳೊಂದಿಗೆ ದೊಡ್ಡ ಪ್ರಮಾಣದಲ್ಲಿ ವ್ಯಾಪಾರ ನಡೆಸುತ್ತಿತ್ತು.

ಡ್ಯುರೆಟ್ ಬಾರ್ಬೋಸಾ ಬಸ್ರೂರಿನಲ್ಲಿ ಒರ್ಮುಜ್‌ರಝ್, ಏಡನ್ ಮತ್ತು ರ್ಝಹರ್ (ಜಹರ್) ಮುಂತಾದ ದೇಶಗಳ ಹಲವು ಹಡಗುಗಳನ್ನು ಕಂಡಿದ್ದ. ಅಲ್ಲಿನ ಕೋಟೇಶ್ವರ ದೇವಸ್ಥಾನ ಎರಡನೆಯ ದೇವರಾಯನಿಂದ (೧೪೨೪-೧೪೪೬) ಮತ್ತೆ ಮಹಾಲಿಂಗೇಶ್ವರ

ದೇವಸ್ಥಾನ ಎರಡನೆಯ ದೇವರಾಯ ಮತ್ತು ಮಲ್ಲಿಕಾರ್ಜುನ ೧೪೪೬-೧೪೬೭ರಿಂದ ದತ್ತಿಕೊಂಡಿತ್ತು. ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಮಲ್ಲಿಕಾರ್ಜುನನ ಉತ್ತರಾಧಿಕಾರಿ ವಿರೂಪಾಕ್ಷನ (೧೪೬೭-೧೪೭೮) ಶಿಲಾಶಾಸನವಿದೆ. ಕೃಷ್ಣದೇವರಾಯ ಸತ್ರಶಾಲೆಯೊಂದನ್ನು ಕಟ್ಟಿಸಿ ದೇವಸ್ಥಾನಕ್ಕೆ ಅರ್ಪಿಸಿದ. ೧೫೩೪ರಲ್ಲಿ ಶಾಂತೇಶ್ವರ ದೇವಸ್ಥಾನ ತಿರುಮಲ ರಾಯನಿಂದ ಶಾಶ್ವತ ವರಮಾನಕೊಂಡಿತು. ಈ ದೇವಸ್ಥಾನದಲ್ಲಿ ಸದಾಶಿವ ರಾಯನ (೧೫೪೭-೧೫೭೦) ಮೂರು ಶಾಸನಗಳು ಕಾಣಬರುತ್ತವೆ. ಬಸ್ರೂರು ಕೆಳದಿಯ ಅರಸರ ಮತ್ತೆ ಪೋರ್ಚುಗೀಸರ ನಡುವಣ ಕಲಹಕ್ಕೆ ಕಾರಣವೊಂದಾಗಿತ್ತು. ಬಸ್ರೂರು ಈಗ ಬರೇ ಹಳ್ಳಿಯೊಂದಾಗಿ ಉಳಿದಿದೆ. ದಟ್ಟವಾಗಿ ಬೆಳೆದಿದ್ದ ಮರ, ಪೊದರುಗಳಿಂದೊಡಗೂಡಿದ್ದ, ಆಳವಾದ ಕಂದಕಗಳಿಂದ ಆವರಿಸಲ್ಪಟ್ಟ ಹಳೆಯ ಪಟ್ಟಣದ ಹೊರಗಣ ಪ್ರಾಕಾರದ ಭಾಗ ಮತ್ತು ಒಳಗಣ ಕೋಟೆ, ಇವನ್ನು ಇಂದಿಗೂ ಕಾಣಬಹುದಾಗಿದೆ.

ನೇತ್ರಾವತಿ ಮತ್ತು ಗುರುಪುರ ನದಿಗಳು ಸೇರುವಲ್ಲಿನ ಮಂಗಳೂರು, ಮೈಸೂರು ಮತ್ತು ಕೊಡಗುಗಳಲ್ಲಿನ ಉತ್ಪನ್ನದ ಮಾರುಕಟ್ಟೆಯಾಗಿತ್ತು. ೧೩೪೨ರಲ್ಲಿ ಇತ್ತ ಬಂದಿದ್ದ ಇಬ್ನ ಬತೂತಾ ಇದನ್ನು ಮಂಜಾರುಣ ಅಥವಾ ಮಂದ್ಜಾವುರ್ ಎಂದು ಕರೆದಿರುತ್ತಾನೆ. ಇಲ್ಲಿಂದ ವಿದೇಶಕ್ಕೆ ಸಾಗುವ ಸರಕುಗಳಲ್ಲಿ ಶುಂಠಿ ಮತ್ತು ಕರಿಮೆಣಸು ಪ್ರಾಮುಖ್ಯವಾಗಿದ್ದವು. ಇಲ್ಲಿ ಪರ್ಷಿಯಾ ಮತ್ತು ಯೆಮನ್‌ಗಳ ನಾಲ್ಕು ಸಾವಿರಕ್ಕೂ ಮಿಕ್ಕ ಮುಸಲ್ಮಾನ ವ್ಯಾಪಾರಿಗಳಿದ್ದರು. ೧೪೪೩ರ ನವೆಂಬರ್ ತಿಂಗಳಲ್ಲಿ ಮಂಗಳೂರಿಗೆ ಬಂದಿದ್ದ ಅಬ್ದುಲ್ ರಝಾಕ್, ಶ್ರೀಮಂತರೊಂದಿಗೆ ಬೀದಿಯಲ್ಲಿನ ಕೆಲಸಗಾರರೂ ಮೇಲು ಕೀಳೆನ್ನದೆ ಕಿವಿ, ಕತ್ತು, ತೋಳು, ಮಣಿಕಟ್ಟುಗಳಲ್ಲಿ ರತ್ನಖಚಿತ ಆಭರಣಗಳನ್ನು ಧರಿಸಿದ್ದರೆಂದು ನುಡಿದಿರುತ್ತಾನೆ. ಇಲ್ಲಿನ ವಾತಾವರಣದಿಂದ ಪ್ರಭಾವಿತನಾಗಿದ್ದ ಡ್ಯುರೆಟ್ ಬಾರ್ಬೋಸಾ ಹೀಗೆ ಹೇಳಿರುತ್ತಾನೆ : 'ನದಿಯ ತಡಿ ರಫ್ತಿಗಾಗಿ ಸಿದ್ಧಗೊಳಿಸಿದ್ದ ಸರಕಿನಿಂದ ತುಂಬಿದೆ. ತಾಳೆಯ ಮರಗಳಿಂದೊಡಗೂಡಿದ್ದ ನಿಸರ್ಗದ ದೃಶ್ಯ ರಮ್ಯವಿದೆ. ಇಲ್ಲಿ ಮೂರ್ ಮತ್ತು ಅನ್ಯ ಜನಾಂಗಗಳ ಜನರು ವಾಸಿಸುತ್ತಿದ್ದಾರೆ. ಅವರ ವಾಸ್ತವ್ಯದ ಮನೆಗಳು, ಪ್ರಾರ್ಥನಾಲಯಗಳು ಆಕರ್ಷಕವಿವೆ ; ಇಲ್ಲಿ ಎಷ್ಟೊಂದೋ ಮಸೀದಿಗಳು ಕಾಣಬರುತ್ತಿದ್ದು ಮಹಮ್ಮದನಿಗೆ ಭಾರೀ ಗೌರವ ತೋರಲಾಗುತ್ತಿತ್ತು'

೧೭೨೦ರಲ್ಲಿ ಕಾನ್ಹೋಜಿ ಆಂಗ್ರೆಯ ಮಂಗಳೂರಿನ ಮೇಲಕ್ಕೆ ದಂಡೆತ್ತಿ ಹೋಗಿದ್ದ. ಆದರೆ ಆತನನ್ನು ಓಡಿಸಲಾಯಿತು. ೧೭೪೦ರಲ್ಲಿ ತುಲಾಜಿ ಆಂಗ್ರೆಯು ತನ್ನ ನೌಕಾಪಡೆಯೊಂದಿಗೆ ಬಂದು ಮಂಗಳೂರನ್ನು ಸುಲಿದ. ೧೮೫೨ರ ದಿನಗಳಲ್ಲೂ ಮಂಗಳೂರು ಬಂದರು, ಅರೇಬಿಯಾದೊಂದಿಗೆ ಭಾರೀ ವ್ಯಾಪಾರಕೊಂಡಿತ್ತು. ರಫ್ತು ಮಾಡುವ ಸರಕುಗಳಲ್ಲಿ ಅಕ್ಕಿ (ಗೋವಾ, ಮಲಬಾರ್ ಮತ್ತೆ ಅರೇಬಿಯಾ, ಪರ್ಷಿಯನ್ ಕೊಲ್ಲಿಯ ಬಂದರುಗಳಿಗೆ), ಕಾಫಿ (ಪರ್ಷಿಯಾ, ಆಸ್ಟ್ರೇಲಿಯಾ ಮತ್ತು ಅಮೇರಿಕಾ ದೇಶಗಳಿಗೆ), ಗೇರುಬೀಜ, ಅಡಿಕೆ, ಕರಿಮೆಣಸು, ಏಲಕ್ಕಿ, ಶ್ರೀಗಂಧ, ಹಂಚು ಮುಂತಾದವುಗಳ ಸಮಾವೇಶವಿತ್ತು. ಹಾಲೆಂಡ್, ಜರ್ಮನಿ ಮತ್ತು ಬೆಲ್ಜಿಯಮ್‌ಗಳಿಂದ ಯಾಂತ್ರಿಕ ಸಾಧನಗಳ ಆಯಾತವಾಗುತ್ತಿತ್ತು. ಮತ್ತು ಬೊಂಬೇಯಿಂದ ಸುಂಕ ತೆತ್ತ ಉಪ್ಪು, ಹತ್ತಿಯ ಬಟ್ಟೆ ಇತ್ಯಾದಿಗಳನ್ನು ತರಲಾಗುತ್ತಿತ್ತು.

೧೩. ಪೋರ್ಚುಗೀಸರು

ವಿಜಯನಗರದ ಆಳ್ವಿಕೆಯ ಕೊನೆಯ ದಿನಗಳಲ್ಲಿ ಕೆನರಾದ ಕರಾವಳಿಯ ಭಾಗ ಪೋರ್ಚುಗೀಸರ ದುರಾಕ್ರಮಣದಿಂದ ಬಹಳ ಕಷ್ಟ, ನಷ್ಟಗಳಿಗೊಳಗಾಯಿತು. ೧೪೯೮ರಲ್ಲಿ ಮಲಬಾರಿನಿಂದ ಮರಳುತ್ತಿದ್ದ ವಾಸ್ಕೋಡಾಗಾಮ (ಮಲ್ಪೆಯ ಸಮೀಪದ) ಸೈಂಟ್ ಮೇರಿ ದ್ವೀಪದಲ್ಲಿ ಇಳಿದು ಶಿಲುಬೆಯೂರಿದ್ವೀಪವನ್ನು 'ಎಲ್ ಪಾದ್ರೋ ದಿ ಸಾಂತ ಮಾರಿಯಾ' ಎಂದಾಗಿ ಕರೆದ. ೧೫೦೫ರಲ್ಲಿ ಪೋರ್ಚುಗೀಸರ ಮೊದಲ ವೈಸರಾಯ್ ದೋಮ್‌ಫ್ರಾನ್ಸಿಸ್ಕ ಅಲ್‌ಮೇಡಾ ಅಂಜಿದೀವ ದ್ವೀಪದಲ್ಲಿ ದುರ್ಗ ಕಟ್ಟಿಸಿದ; ಹೊನ್ನಾವರದ ಮೇಲೆ ಆಕ್ರಮಣ ಮಾಡಿ ಭಟ್ಕಳದ ಮುಖ್ಯಾಧಿಕಾರಿಯು ಶರಣಾಗತಿ ಸ್ವೀಕರಿಸಿದ. ೧೫೨೬ರಲ್ಲಿ ಪೋರ್ಚುಗೀಸರು ಪಡುವಣ ಕರಾವಳಿಯಲ್ಲಿನ ವ್ಯಾಪಾರವನ್ನು (ಮುಸಲ್ಮಾನರನ್ನು ಬಿಟ್ಟು) ಸ್ವಾಧೀನ ಪಡಿಸಿಕೊಂಡರು. ಮತ್ತು ಬಂದರುಗಳಲ್ಲಿ ಗೋಣಿ ಅಕ್ಕಿಯ ಪೊಗದಿ ಹೊರಿಸಿದರು. ಇದು ಕೆಲವೊಮ್ಮೆ ಸಂಘರ್ಷಣಕ್ಕೆ ಕಾರಣವಾಗುತ್ತಿತ್ತು. ೧೫೩೦ ಮತ್ತು ೧೫೩೨ರಲ್ಲಿ ಇದು ಮಂಗಳೂರಿನ ಮೇಲಣ ಆಕ್ರಮಣಕ್ಕೆ ಕಾರಣವಾಯಿತು. ೧೫೫೫ರಲ್ಲಿ ಉಳ್ಳಾಳದ ಚೌಟರ ರಾಣಿ ಪೊಗದಿ ಕೊಡಲು ನಿರಾಕರಿಸಿದಾಗ ದೋಮ್ ಅಲ್ವಾರೊ ದ ಸಿಲ್ವೇರಾ ನ ನೇತೃತ್ವದಲ್ಲಿನ ಪೋರ್ಚುಗೀಸರ ಹಡಗುಗಳ ಪಡೆ ಮಂಗಳೂರನ್ನು ಸುಲಿಯಿತು. ೧೫೫೮ರಲ್ಲಿ ಮಂಗಳೂರಿನ ಬಂದರಿನಲ್ಲಿದ್ದ ಕಣ್ಣನೂರಿನ ಆಲಿ ರಾಜನ ಹಡಗಿನ ಮೇಲಕ್ಕೆ ಪೋರ್ಚುಗೀಸರು ಹಲ್ಲೆ ಮಾಡಿದರು. ಆದರೆ ಸ್ಥಾನಿಕರ ಸಹಾಯದಿಂದ ಇದನ್ನು ನಿಷ್ಫಲಗೊಳಿಸಲಾಯಿತು. ಆಗ ಪೋರ್ಚುಗೀಸರ ಹಡಗುಗಳ ಮುಖ್ಯಾಧಿಕಾರಿ ಮಂಗಳೂರಿನ ಮೇಲಕ್ಕೆ ದಾಳಿಯಿಕ್ಕಿ ಕೆಲವೊಬ್ಬರನ್ನು ಕೊಂದಿಕ್ಕಿದ. ಮತ್ತೆ ಮಂಗಳೂರು ನಗರಕ್ಕೆ ಬೆಂಕಿಯಿತ್ತ.

೧೪. ಸೋಂದಾದ ಅರಸರು

ಶಿರ್ಸಿ (ಉತ್ತರ ಕನ್ನಡ) ಯಿಂದ ಹತ್ತು ಮೈಲು ಉತ್ತರಕ್ಕಿದ್ದ ಸೋಂದಾ ನಾಯಕರ ವಂಶ ೧೫೯೧ರಲ್ಲಿ ವೆಂಕಟಪತಿ ರಾಜೇಂದ್ರನಿಂದ ಸ್ಥಾಪಿಸಲ್ಪಟ್ಟಿತು. ಸೋಂದಾದ ನಾಯಕರು ಆಗ ಪಶ್ಚಿಮ ಘಟ್ಟದ, ಪೂರ್ವ ದಿಶೆಯಲ್ಲಿನ ಒಳಪ್ರಾಂತವನ್ನಾಳುತ್ತಿದ್ದರು. ಅರಸಪ್ಪ ನಾಯಕನ ಆಶ್ರಯದಲ್ಲಿದ್ದ ಇವರು ಕಾಲಾಂತರದಲ್ಲಿ ಪ್ರಾಧಾನ್ಯಕೊಂಡರು.

೧೫೬೫ರಲ್ಲಿನ ವಿಜಯನಗರದ ಪತನಾನಂತರ ಬಿಜಾಪುರದ ಸತ್ತೆ ಕೆನರಾದ ಉತ್ತರಭಾಗದಲ್ಲಿ ಸ್ಥಿರತೆಕೊಂಡಿತು. ಸೋಂದಾ ಮತ್ತು ಕಾರವಾರದ ನಾಯಕರು ಬಿಜಾಪುರದ ಸ್ವಾಮ್ಯಕ್ಕೊಪ್ಪಿಕೊಂಡರು. ಅರಸಪ್ಪನಾಯಕನ ಬಳಿಕ ೧೫೯೮ರಲ್ಲಿ ರಾಮಚಂದ್ರನಾಯಕ ಆತನ ಉತ್ತರಾಧಿಕಾರಿಯಾಗಿ ಬಂದ. ಅನಂತರ ೧೬೧೮ರಲ್ಲಿ ರಘುನಾಥ ನಾಯಕ ಗದ್ದುಗೆಯೇರಿದ. ೧೬೩೮ರಲ್ಲಿ ರಾಜ್ಯಭಾರದ ಸೂತ್ರಗಳನ್ನು ಕೈಗಳಲ್ಲಿ ಕೊಂಡ ಮಧುಲಿಂಗ ನಾಯಕ ವೀರಶೈವ ಧರ್ಮವನ್ನು ಸ್ವೀಕರಿಸಿ, ೧೬೭೪ರ ತನಕ ರಾಜ್ಯವಾಳಿದ. ಆತ ಪ್ರಾಯಶಃ ಗೋವಾದಲ್ಲಿನ ಫೋಂಡಾದ ಮೇಲಕ್ಕೂ ಅಧಿಕಾರ ಸ್ಥಾಪಿಸಿದ್ದಿರಬೇಕು. ಫೋಂಡೆ ಮಹಾಲನ್ನು ೧೬೬೫ರಲ್ಲಿ ಶಿವಾಜಿ ಬಿಜಾಪುರದ ಅರಸರೊಂದಿಗಿನ ಯುದ್ಧದ ಸಮಯ ವಶಪಡಿಸಿಕೊಂಡಿದ್ದ. ಮಧುಲಿಂಗ ನಾಯಕನ ಮಗ ಸದಾಶಿವ ನಾಯಕ (೧೬೭೪-೧೬೯೭)

ಸೋಂಡಾ ರಾಜಮನೆತನದಲ್ಲಿನ ಶಕ್ತಿಶಾಲಿ ದೊರೆಯೊಬ್ಬ. ೧೬೭೯ರ ಹೊತ್ತಿಗೆ ಆತ ಕಾರ್ವಾರವನ್ನು '' ವಶಪಡಿಸಿ ತನ್ನ ರಾಜ್ಯವನ್ನು ಅರಬಿಸಮುದ್ರದ ತನಕ ವಿಸ್ತರಿಸಿದ. ೧೬೮೫ರಲ್ಲಿ ಮರಾಠರ ಕಲಹದ ಲಾಭಕೊಂಡು ಫೋಂಡೆಯ ಮಹಾಲನ್ನು ಮರಳಿ ಗಳಿಸಿದ. ಮತ್ತೆ ಮರಾಠರೆಡೆಯಲ್ಲಿನ ಸ್ವಾಮಿನಿಷ್ಠೆ ಸಮಾಪ್ತಿಗೊಳಿಸಿದ. ಆತನ ಪ್ರಾಂತ ಫೋಂಡೆ ಮತ್ತು ಜಾಂಬವಲಿ ಮಹಾಲುಗಳನ್ನೊಳಗೊಂಡಿತ್ತು.

೧೬೮೬ರಲ್ಲಿನ ಬಿಜಾಪುರದ ಮೇಲಣ ವಿಜಯದ ನಂತರ ಸವಣೂರಿನ ನವಾಬನ ಸಹಾಯದಿಂದ ಔರಂಗಜೇಬ್ ಗಂಗಾವಳಿಯ ಉತ್ತರದಲ್ಲಿನ ಕರ್ನಾಟಕದ ಮೇಲಕ್ಕೆ ತನ್ನ ಪ್ರಭುತ್ವ ಸಾರಿದ. ಆ ಬಳಿಕ ಸೋಂಡಾದ ಅರಸು (ಕೆಳದಿಯ ಅರಸನ ಸಮೇತ) ಮೊಗಲರ ಸ್ವಾಮ್ಯ ಸ್ವೀಕರಿಸಿದ. ೧೭೨೦ರಲ್ಲಿ ಮೊಗಲರು ಈ ಭೂಭಾಗವನ್ನು ಮರಾಠರ ಪಾಲಿಗೆ ಬಿಟ್ಟರು. ೧೭೨೬ರಲ್ಲಿ ಸೆರಿಂಗ ಪಟಂದತ್ತ ಸಾಗುತ್ತಿದ್ದ ಮೊದಲನೆಯ ಬಾಜೀರಾವ್ ಇದರ ಮೇಲಕ್ಕೆ ದಾಳಿಯಿಕ್ಕಿದ. ೧೭೪೯ರಲ್ಲಿ ಇಮ್ಮಡಿ ಸದಾಶಿವ ನಾಯಕ ಮರಾಠರ ವಿರುದ್ಧ ನಡೆದ ಯುದ್ಧದಲ್ಲಿ ಪೋರ್ಚುಗೀಸರಿಗೆ ಸಹಾಯ ಮಾಡಿದ; ಅವರು ಫೊಂಡೆ ಮಹಾಲನ್ನು ಗೆದ್ದುಕೊಂಡರು. ಆದರೆ ಅದನ್ನು ೧೭೬೦ರಲ್ಲಿ ಮರಾಠರ ಸಾಮ್ಯಕ್ಕೊಪ್ಪಿದ್ದ ಆತನ ಮಗ ಸಾಸವಲಿಂಗ ನಾಯಕನಿಗೆ ಹಿಂದಿರುಗಿಸಿದರು.

೧೫. ಕೆನರಾದ ಅನ್ಯ ಪಾಳೆಯಗಾರರು

೧೫೬೫ರ ನಂತರ ಕಾರ್ಕಳದ ಭೈರವೇಂದ್ರ ಒಡೆಯನೊಂದಿಗೆ ಗಂಗಾವಳಿಯ ದಕ್ಷಿಣದಲ್ಲಿನ ಅನ್ಯ ಸ್ಥಾನಿಕ ನಾಯಕರೂ ಸ್ವಾತಂತ್ರ್ಯ ಸಾರಿದರು. ಪೋರ್ಚುಗೀಸರ ಎಡೆಬಿಡದ ದಾಳಿಯಿಂದ ಕೆನರಾದ ಕರಾವಳಿ ನರಳತೊಡಗಿತು. ೧೫೬೭ರಲ್ಲಿ ಪೋರ್ಚುಗೀಸರು ಉಲ್ಲಾಳದ ಚೌಟರ ರಾಣಿ ಎರಡನೆಯ ಅಬ್ಬಕ್ಕ ದೇವಿಯ ಮೇಲೆ ಹೊರಿಸಲಾದ ಕಪ್ಪದ ವಸೂಲಿಗಾಗಿ ಜುವಾವ್ ಪಿಶೊಟೊನ ನೇತೃತ್ವದಲ್ಲಿ ನೌಕಾದಳವನ್ನು ಕಳುಹಿಸಿದರು.

ಉಳ್ಳಾಲವನ್ನು ವಶಪಡಿಸಿಕೊಂಡ ಆತ ಅರಮನೆಯನ್ನು ಪ್ರವೇಶಿಸಿದ. ಪೋರ್ಚುಗೀಸ್ ಸೈನಿಕರು ಊರಲ್ಲಿನ ಮನೆಗಳನ್ನು ಸುಲಿಯಲಾರಂಭಿಸಿದರು. ಪೋರ್ಚುಗೀಸ್ ಸೇನೆಯಲ್ಲಿನ ಗೊಂದಲ, ಊರಿನಲ್ಲಿನ ಗಲಭೆಯ ಲಾಭಕೊಂಡು ರಾಣಿಯ ಸೇನೆ ಪಿಶೊಟೊನ ಸಮೇತ ಅನ್ಯ ೨೦ ಮಂದಿ ಸೈನಿಕರನ್ನು ಕೊಂದಿಕ್ಕಿತು. ಮತ್ತೆ ಪೋರ್ಚುಗೀಸರನ್ನು ತಮ್ಮ ಹಡಗುಗಳಿಗೆ ಮರಳುವಂತೆ ಮಾಡಿತು. ರಾಣಿಯನ್ನು ಶಿಕ್ಷಿಸುವ ಹಠಹಿಡಿದ ಪೋರ್ಚುಗೀಸ್ ವೈಸ್‌ರಾಯ್ ೧೫೬೮ರ ಜನವರಿ ತಿಂಗಳಲ್ಲಿ ಉಲ್ಲಾಳದ ಮೇಲೆ ದಾಳಿಯಿಕ್ಕಿದ; ಭೀಕರ ಯುದ್ಧ ನಡೆದ ಬಳಿಕ ರಾಣಿಯ ಸೇನೆಯನ್ನು ಸಂಪೂರ್ಣ ಸೋಲಿಸಿ ಉಲ್ಲಾಳಕ್ಕೆ ಬೆಂಕಿಇತ್ತ. ನೇತ್ರಾವತಿ ದಾಟಿ ಮಂಗಳೂರಿಗೆ ಬಂದು ಅಲ್ಲಿ ಸಾವ್ ಸಬಾಸ್ತಿಯಾಂವ್ ಕೋಟೆ ಕಟ್ಟಿಸಿದ. ೧೫೬೯ರಲ್ಲಿ ರಾಣಿ ಪೋರ್ಚುಗೀಸರೊಂದಿಗೆ ಸಂಧಿ ಮಾಡಿದಳು.

ಚೌಟ ಕುಟುಂಬಕ್ಕೆ ಸೇರಿದ ನಾಯಕರು ಸದ್ಯದ ಉಡುಪಿ, ಕುಂದಾಪುರ ತಾಲೂಕುಗಳ ಹೆಚ್ಚಿನ ಭಾಗಗಳನ್ನಾಳಿದ್ದರು. ಅವರು ಪೋರ್ಚುಗೀಸರ ವಿರುದ್ಧ ಕೆಚ್ಚೆದೆಯಿಂದ

ಕಾದಾಡಿ ವಸಾಹತುಗಳ ಸ್ಥಾಪನೆಗೆ ಯತ್ನಿಸಿದ ಮೊದಲ ದಿನಗಳ ಪ್ರಯತ್ನಗಳನ್ನು ವಿಫಲಗೊಳಿಸಿದರು. ೧೫೬೯ರಲ್ಲಿ ಅಪಾರ ಸೇನೆಯೊಂದಿಗೆ ಬಸ್ರೂರಿಗೆ ಬಂದ ಪೋರ್ಚುಗೀಸರು ಕೋಟೆಯ ಕಿಲ್ಲೆದಾರನಿಗೆ ಆಮಿಷ ತೋರಿ, ಕೋಟೆ ವಶಪಡಿಸಿ, ನಗರ ಸುಲಿದರು. ಅಲ್ಲಿ ಪೋರ್ಚುಗೀಸ್ ಮತ್ತು ತೋಳಾರ್, ಹೊಸಂಗಡಿ, ಹೊನ್ನೆಯ ಕಂಬ್ಳಿ, ಪೆರ್ಡೂರಿನ ನಾಯಕರ ಕೂಟದೊಂದಿಗೆ ನಡೆದ ಭೀಷಣ ಕಾದಾಟದಿಂದ ರಕ್ತಪಾತವಾಯಿತು. ಇಕ್ಕಡೆಯ ಸೇನೆಗಳಿಗೆ ಅಪಾರ ಹಾನಿಯಾಯಿತು. ಪೋರ್ಚುಗೀಸರು ಕೋವಿ, ಅನ್ಯ ಯುದ್ಧ ಸಾಮಗ್ರಿಗಳನ್ನು ಹಿಂದಕ್ಕೆ ಬಿಟ್ಟು ತಮ್ಮ ಹಡಗುಗಳಿಗೆ ಮರಳಬೇಕಾಯಿತು. ಸ್ವಲ್ಪ ಕಾಲಾನಂತರ ಪೋರ್ಚುಗೀಸರು ಮಗುದೊಮ್ಮೆ ಬಸ್ರೂರಿನ ಮೇಲಕ್ಕೆ ದಾಳಿಯಿಕ್ಕಿದರು; ತೋಳಾರ್ ಹಾಗೂ ಕಂಬ್ಳಿ ನಾಯಕರು ತಮ್ಮ ನೇತೃತ್ವದಲ್ಲಿನ ಹನ್ನೊಂದು ಸಾವಿರ ಸೈನಿಕರು ಸೋಲು ಕಂಡಾಗ ಕಪ್ಪ ಕೊಡಲೊಪ್ಪಿದರು. ಅವರಿಗೆ ಅಲ್ಲಿ ತಮ್ಮದೇ ಆದ ಕೋಟೆಯ ನಿರ್ಮಾಣಕ್ಕೆ ಅನುಮತಿ ಈಯಲಾಯಿತು. ೧೫೭೧ರಲ್ಲಿ ಅವರು ಕೋಟೆ ನಿರ್ಮಿಸಿದರು.

ಅಹಮ್ಮದ್ ನಗರ, ಬಿಜಾಪುರಗಳ ಅರಸರು ಮತ್ತು ಝಾಮೋರಿನ್ ಒಂದುಸೇರಿ ಪೋರ್ಚುಗೀಸರನ್ನು ಭಾರತದಿಂದ ಹೊಡೆದೋಡಿಸಲಾಗಿ ೧೫೭೩ರಲ್ಲಿ ಒಕ್ಕೂಟದ ಯೋಜನೆ ರಚಿಸಿದರು. ಇದರ ಮೇರೆಗೆ ಗೋವಾ ಮತ್ತು ಬಸ್ರೂರು ಬಿಜಾಪುರದ ಅರಸನ, ಮಂಗಳೂರು ಝಾಮೋರಿನ್‌ನ ಕೈಸೇರಬೇಕಿತ್ತು. ಗೆರ್ಸೋಪ್ಪದ ರಾಣಿ ಭೈರಾದೇವಿ ಬಸ್ರೂರನ್ನು ಬಿಟ್ಟುಕೊಟ್ಟು (ಸ್ಥಾನೀಯ ಅಧಿಕಾರಿ ವಿರೋಧಿಸಿದ ನಿಮಿತ್ತ ವಾಸ್ತವಿಕವಾಗಿ ಅದು ಹಸ್ತಾಂತರಗೊಳ್ಳಲಿಲ್ಲ) ಬಿಜಾಪುರದ ಸ್ವಾಮ್ಯಕೊಳ್ಳಲು ಒಪ್ಪಿಕೊಂಡಳು. ಉಲ್ಲಾಳದ ರಾಣಿಯಂತೆ ಕೆನರಾದಲ್ಲಿನ ಅನ್ಯ ನಾಯಕರೂ ಅವರನ್ನು ಸೇರಿದರು. ಗೆರ್ಸೋಪ್ಪದ ರಾಣಿ ಹೊನ್ನಾವರದಲ್ಲಿ ಪೋರ್ಚುಗೀಸರ ಮೇಲಕ್ಕೆ ದಾಳಿ ಮಾಡಿದಳು. ಆದರೆ ಗೋವಾದಿಂದ ಬೆಂಬಲಕ್ಕಾಗಿ ಹೆಚ್ಚಿನ ಸೇನೆ ಬಂದ ನಿಮಿತ್ತ ಅವರನ್ನು ಸೋಲಿಸಲು ಅಸಮರ್ಥಳಾದಳು. ೧೫೭೧ರಲ್ಲಿ ನೌಕಾಪಡೆಯೊಂದಿಗೆ ಅಲ್ಲಿಗೆ ಹೋದ ಗೋವಾದ ವೈಸ್‌ರಾಯ್ ಬಂದರಿನಲ್ಲಿದ್ದ ಒಕ್ಕೂಟದ ಹಡಗುಗಳನ್ನು ನಾಶಪಡಿಸಿ ಹೊನ್ನಾವರ ಸೂರೆ ಮಾಡಿ ಅದಕ್ಕೆ ಬೆಂಕಿ ಇಟ್ಟ. ನಾಲ್ಕು ದಿನಗಳ ಗುಂಡಿನ ಸುರಿಮಳೆಯ ನಂತರ ಬಂದರು ಶರಣಾಗತಿ ಸ್ವೀಕರಿಸಿತು. ಉಲ್ಲಾಳದ ರಾಣಿ ಅಬ್ಬಕ್ಕದೇವಿ ಪೋರ್ಚುಗೀಸರಿಗೆ ಕಪ್ಪ ಕೊಡಲೊಪ್ಪಲಿಲ್ಲ. ಆಕೆಯ ಆಮಂತ್ರಣದ ಮೇರೆಗೆ ಝಾಮೋರಿನ್‌ನ ಪ್ರಧಾನ ನೌಕಾಧಿಪತಿ ಕುಥ್ಯೊಕರ್ ಮರಕ್ಕಾಯರ್ ೧೫೭೦ರಲ್ಲಿ ಮಂಗಳೂರಿಗೆ ಬಂದ. ಮತ್ತೆ ರಾತ್ರಿಯ ಹೊತ್ತಿಗೆ ಪೋರ್ಚುಗೀಸರ ಕೋಟೆಯ ಗೋಡೆ ಹತ್ತಿದ. ಆದರೆ ಪೋರ್ಚುಗೀಸರು ಆತನನ್ನು ಹೊಡೆದೋಡಿಸಿದರು. ೧೫೮೧ರಲ್ಲಿ ಪೋರ್ಚುಗೀಸರು ಉಲ್ಲಾಳಕ್ಕೆ ಮಗುದೊಮ್ಮೆ ಬೆಂಕಿಯಿತ್ತರು. ೧೫೯೪ರಲ್ಲಿ ಅಬ್ಬಕ್ಕದೇವಿಯ ಮಗಳು ತಿರುಮಲಾ ದೇವಿ ಮಂಗಳೂರಿನಲ್ಲಿನ ಪೋರ್ಚುಗೀಸರ ಕೋಟೆಯ ಎದುರು, ಉಳ್ಳಾಲದಲ್ಲಿ ಇನ್ನೊಂದು ಕೋಟೆ ಕಟ್ಟಿಸಿದಳು. ೧೫೯೯ರಲ್ಲಿ ಶಾಂತಿ ಸಂಧಾನವಾಯಿತು. ಮತ್ತೆ ಉಲ್ಲಾಳದಲ್ಲಿನ ಕೋಟೆಯನ್ನು ಕೆಡವಿ ಹಾಕಲಾಯಿತು.

೧೬ ಕೆಳದಿಯ ಅರಸರು

ಕೆನರಾದ ಮೇಲೆ ಪರಮಾಧಿಕಾರ ಸ್ಥಾಪಿಸಲು ಕೆಳದಿಯ ಅರಸರು ಕಸುವಿನ ಪ್ರಯತ್ನ ಮಾಡುತ್ತಿದ್ದರು. ೧೫೭೭ರ ದಿನಗಳಲ್ಲಿ ಮೊದಲನೆಯ ರಂಗರಾಯನ ಸ್ವಾಮ್ಯಕೊಂಡಿದ್ದ ಸದಾಶಿವ ನಾಯಕ ಮತ್ತು ಆತನ ಮೊಮ್ಮಗ ರಾಮರಾಜನಾಯಕ ಆಳುತ್ತಿದ್ದ ಕೆನರಾದ ಮೇಲಣ ಬಿಜಾಪುರದ ಪ್ರಭಾವವನ್ನುಮತ್ತು ಮಂಗಳೂರು, ಬಸ್ರೂರು ಮತ್ತು ಹೊನ್ನಾವರಗಳಲ್ಲಿ ತಳವೂರಿದ್ದ ಪೋರ್ಚುಗೀಸರ ಬೆಳೆಯುತ್ತಿರುವ ವರ್ಚಸ್ಸನ್ನು ಮೊದಲನೆಯ ವೆಂಕಟಪ್ಪ ನಾಯಕ ಸಹಿಸಲಾರದಿದ್ದ. ಅವಕಾಶವೊಂದರ ಪ್ರತೀಕ್ಷೆಯಲ್ಲಿದ್ದ ಆತನಿಗೆ ಅದು ಸ್ಥಾನೀಯ ಪಾಳೆಯಗಾರನೊಬ್ಬನಿಂದ ಒದಗಿಬಂತು.

ಕೆನರಾದಲ್ಲಿನ ಪೋರ್ಚುಗೀಸರ ಪ್ರಗತಿಯನ್ನು ತಡೆಹಿಡಿಯುವುದು ಕಠಿಣವಿತ್ತು. ಧೌರ್ಭಾಗ್ಯವೆನ್ನುವಂತೆ ಗೆರ್ಸೊಪ್ಪದ ರಾಣಿ ಭೈರಾದೇವಿಯ ಕೆಳಜಾತಿಯೊಬ್ಬನೊಂದಿಗಿನ ಅವೈಧ ಸಂಬಂಧ ಬಂಡಾಯವೊಂದಕ್ಕೆ ಕಾರಣವಾಯಿತು.

ಪ್ರಿಯಕರನೊಂದಿಗಿನ ಮತಭೇದದ ನಿಮಿತ್ತ ರಾಣಿ ಪೋರ್ಚುಗೀಸರ ನೆರವನ್ನು ಕೋರಿದಳು. ಪ್ರಿಯಕರನ ಹಿತಚಿಂತಕನ ಸೋಗುಕೊಂಡ ವೆಂಕಟಪ್ಪ ನಾಯಕ ಹಠಾತ್ತಾಗಿ ಆಕೆಯ ರಾಜ್ಯದ ಮೇಲಕ್ಕೆ ದಾಳಿಯಿಕ್ಕಿ ಪೋರ್ಚುಗೀಸರನ್ನು ಹೊಡೆದೋಡಿಸಿದ. ರಾಣಿ ಮತ್ತು ಆಕೆಯ ಪ್ರಿಯಕರನನ್ನು ಕೊಂದಿಕ್ಕಿದ. ಮತ್ತೆ ಗೆರ್ಸೊಪ್ಪ, ಬಾರ್ಕೂರುಗಳಿಗೆ ಬೆಂಕಿಯಿತ್ತು ಅಲ್ಲಿನ ಕಟ್ಟಡಗಳನ್ನು ನೆಲಸಮ ಮಾಡಿದ.

ಉಲ್ಲಾಳದ ರಾಣಿ ಅಬ್ಬಕ್ಕದೇವಿ ಮತ್ತು ಬಂಗರನಾಯಕನಿದ್ದ ಆಕೆಯ ಪತಿ ಲಕ್ಷ್ಮಣ ಬಂಗರಸರೊಳಗಣ ಸಂಬಂಧ ಹಾಳಾಗತೊಡಗಿತ್ತು. ೧೬೧೭ರಲ್ಲಿ ಬಂಗರ ನಾಯಕ ಪೋರ್ಚುಗೀಸರೊಂದಿಗೆ ಸಂಧಿ ಮಾಡಿ ಮಂಗಳೂರಿನಲ್ಲಿದ್ದ ಕೋಟೆಯನ್ನು ಅವರಿಗಿತ್ತ. ಸರಕು ತುಂಬಿಸಿ, ಮಕ್ಕಾದಿಂದ ಬರುತ್ತಿದ್ದ ತನ್ನ ಹಡಗನ್ನು ಪೋರ್ಚುಗೀಸರು ಸ್ವಾಧೀನ ಪಡಿಸಿಕೊಂಡಾಗ ಉಲ್ಲಾಳದ ರಾಣಿ ಮೊದಲನೆಯ ವೆಂಕಟಪ್ಪ ನಾಯಕನ ಸಹಾಯ ಕೋರಿದಳು. ಆತ ಕಳುಹಿಸಿದ ದೊಡ್ಡ ಸೈನ್ಯ ಬಂಗರ ಕೋಟೆಗೆ ಮುತ್ತಿಗೆ ಹಾಕಿ ಅದಕ್ಕೆ ಬೆಂಕಿ ಇತ್ತಿತು. ಹೋರಾಟದ ಪರಿಣಾಮ ಅನಿಶ್ಚಿತವಾಗುಳಿಯಿತು. ೧೬೧೮ರಲ್ಲಿ ಸಹಾಯಕ್ಕಾಗಿ ಮಲಬಾರಿನಿಂದ ಹೆಚ್ಚಿನ ಸೇನೆ ಬಂದಿದ್ದರೂ ಆತ ಅದನ್ನು ಸೋಲಿಸಿ ಅವರನ್ನು ಮಂಗಳೂರಿನಿಂದ ಹೊಡೆದೋಡಿಸಿದ. ಉಲ್ಲಾಳದ ರಾಣಿ ಆತನ ಸಾರ್ವಭೌಮತ್ವಕ್ಕೆ ಒಪ್ಪಿಕೊಂಡಳು. ಇಂಗ್ಲಿಷ್ ಮತ್ತು ಡಚ್ಚರ ನಡುವೆ ತೀವ್ರ ಸ್ಪರ್ಧೆಗೊಳಗಾಗಿದ್ದ ಕರಿಮೆಣಸಿನ ವ್ಯಾಪಾರವನ್ನು ತಮ್ಮ ಹಿಡಿತಕ್ಕೆ ತರುವುದನ್ನು ಬಯಸಿದ್ದ ಪೋರ್ಚುಗೀಸರು ೧೬೨೩ರಲ್ಲಿ ಆತನಲ್ಲಿಗೆ ವಿಶೇಷ ಅಧಿಕಾರಿಯೊಬ್ಬನನ್ನು ಕಳುಹಿಸಿದರು.

ವೆಂಕಟಪ್ಪ ನಾಯಕ ಕೆನರಾದಲ್ಲಿನ ಜೈನ ನಾಯಕರು ಮತ್ತು ಇನ್ನಿತರ ಪಾಳೆಯಗಾರರ ಮೇಲೆ ತನ್ನ ಅಧಿಕಾರ ಸ್ಥಾಪಿಸಿದ. ಆತ ಬಾರ್ಕೂರಿನ ಮೇಲಕ್ಕೆಸೇಕಡಾ ೫೦ಷ್ಟು ಹೆಚ್ಚು ತೆರಿಗೆ ಹೇರಿದ. ಮಂಗಳೂರು ಪ್ರಾಂತದಲ್ಲಿನ ಪಾಳೆಯಗಾರರನ್ನು ಹತೋಟಿಗೆ ತರಲು ತನ್ನಲ್ಲಿನ ಶಕ್ತಿಯ ಬಗೆಗೆ ಶಂಕೆಗೊಂಡ ಆತ ಹೆಚ್ಚುವರಿ ತೆರಿಗೆಯನ್ನು ಅಂಶತಃ ಹೇರಿದ.

೧೬೨೩ರಲ್ಲಿ ಕೆನರಾವನ್ನು ಸಂದರ್ಶಿಸಿದ ಪಿಯತ್ರೋ ಡೆಲ್ಲಾ ವಾಲ್ ಬಸ್ರೂರಿನಲ್ಲಿ ಪ್ರಶಸ್ತವಾದ, ಅಗಲವಿದ್ದು ನೇರಕ್ಕಿದ್ದ ಹೆದ್ದಾರಿಯ ಇಕ್ಕೆಲಗಳಲ್ಲಿನ ತಾಳೆಯ ಮರಗಳು, ಉದ್ಯಾನಗಳು ಮತ್ತು ಗಣನೀಯ ಜನಜಂಗುಳಿಯ ಕುರಿತಾಗಿ ಹೀಗೆ ನುಡಿದಿರುತ್ತಾನೆ: 'ಗೇರ್ಸೊಪ್ಪದಿಂದ ೯ ಮೈಲು ದೂರ ಸಾಗಿದ ಬಳಿಕ ಕಾಣಸಿಗುವ ಒಳನಾಡು ನಯನ ರಮ್ಯವಿದ್ದು ಅಲ್ಲಿ ದಟ್ಟವಾಗಿ ಬೆಳೆದಿದ್ದ ಕಾಡುಗಳು, ಅವುಗಳನ್ನು ಹಾದುಹೋಗುವ ನೀರಿನ ಮನಮೋಹಕ ತೊರೆಗಳು, ಹಚ್ಚಹಸುರಾದ ಬಿದಿರಿನಮೆಳೆ, ಹೂವಿನ ಬಳ್ಳಿಗಳು, ಸುಂದರವಿದ್ದ ಶರಾವತಿ ನದಿ, ಚಿತ್ತಾಕರ್ಷಕವಿದ್ದವು: ಕರಿಮೆಣಸಿಗಾಗಿ ಪ್ರಸಿದ್ಧವಾಗಿದ್ದ ನಾಡಿನಅರಸಿಯನ್ನು 'ಕರಿಮೆಣಸಿನ ರಾಣಿ' ಎಂದು ಕರೆಯುತ್ತಿದ್ದರು. ಬಂಗ ರಾಜನ ಅರಮನೆಯನ್ನು ನೆಲಸಮ ಮಾಡಲಾಗಿತ್ತು. ಆದರೆ ಅಂಗಡಿ ಬೀದಿ, ಸಂತೆಕಟ್ಟೆ ಎಂದಿನಂತೆ ಸರಕಿನಿಂದ ತುಂಬಿತ್ತು. ಆತ ಉಳ್ಳಾಲವನ್ನು ಸಂದರ್ಶಿಸಿದ್ದ. ಅಲ್ಲಿ ಪೇಟೆ ಸಾಧಾರಣವಾಗಿ ಸಮೃದ್ಧವಿದ್ದು ಅಂಗಡಿಗಳು ನಿತ್ಯೋಪಯೋಗಿ ಸಾಮಾನು, ದೊರಗಾದ, ಬೆಳ್ಳಗಿನ ಹಾಗೂ ಬಣ್ಣದ ಪಟ್ಟೆಗಳ ಕೈಮಗ್ಗದ ಬಟ್ಟೆಗಳಿಂದ ತುಂಬಿದ್ದವು. ತಾನು ತೋಡಿಸಿದ್ದ ಕಾಲುವೆಯ ನಿರೀಕ್ಷಣೆಗಾಗಿ ಸಾಗುತ್ತಿದ್ದ ರಾಣಿ ಅಬ್ಬಕ್ಕದೇವಿಯನ್ನು ಆತ ನೋಡಿದ್ದ. ಘನಸ್ಥಿಕೆಯ, ಮೃದು ಸ್ವಭಾವದ, ಕಂದು ಮೈ ಬಣ್ಣದ ಆಕೆ ೪೦ರ ವಯಸ್ಸಿನವಳಿದ್ದಳು; ಚಿತ್ತಾಕರ್ಷಕ ರೂಪು, ಗಂಭೀರ ವಾಣಿ, ಚೊಕ್ಕ-ಚೊಕ್ಕ ನುಡಿ ಆಕೆಯ ಕುಲೀನತೆಯನ್ನು ಸಾರುತ್ತಿದ್ದವು.

ಆಕೆಯ ಕರ್ತವ್ಯನಿಷ್ಠೆಗೆ ಆತ ಬೆರಗಾಗಿದ್ದ. ಆತ ಇನ್ನೊಬ್ಬ ಪ್ರಸಿದ್ಧ, ಕುಲೀನ ಮಹಿಳೆ 'ದಿ ನೋಬಲ್ ಕ್ವೀನ್ ಆಫ್ ಕರ್ನಾಟೆ', ಮುಲ್ಕಿಯ ಕಾರ್ನಾಡ್‌ನ ಗೌರವಾನ್ವಿತ ರಾಣಿಯ ಉಲ್ಲೇಖ ಮಾಡಿರುತ್ತಾನೆ. ಕದ್ರಿಯ ಅತಿ ವಿಸ್ತೃತ ವರ್ಣನೆ ಮಾಡಿದ್ದು ಅಲ್ಲಿನ ಯೋಗಿಗಳ ಕುತೂಹಲಕಾರಿ ವೃತ್ತಾಂತವೀಯುತ್ತಾನೆ.

ಶಿವಪ್ಪ ನಾಯಕ ಕನ್ನಡ ನಾಡಿನ ಮೇಲಕ್ಕೆ ಯೋಜನಾಬದ್ಧ ದಂಡಯಾತ್ರೆಗಾರಂಭಿಸಿದ. ಆತ ಕಾರ್ಕಳದ ಭೈರರಸ ಒಡೆಯನನ್ನು ಸೋಲಿಸಿದ. ಆನಂತರ ಆ ಮನೆತನ ಅಳಿದುಕೊಂಡಿತು. ಆತ ಕೊಡಗನ್ನು ಹಾದುಹೋಗಿ ನೀಲೇಶ್ವರದವರೆಗಿನ ಪ್ರಾಂತವನ್ನು ಗೆದ್ದುಕೊಂಡ. ಅದು ಕೋಳತ್ತಿರಿ ಅಥವಾ ಚಾರಕ್ಕಲ್ ಅರಸರ ರಾಜ್ಯದಭಾಗವಾಗಿತ್ತು. ಆತ ನೀಲೇಶ್ವರದಲ್ಲಿ ವಿಜಯಸ್ತಂಭ ಸ್ಥಾಪಿಸಿದ. ಪೋರ್ಚುಗೀಸರನ್ನು ಕೆನರಾದಿಂದ ಹೊಡೆದೋಡಿಸುವಲ್ಲಿ ಆತನಿಗೆ ದೊರಕಿದ ಯಶಸ್ಸು ಅದು ದಂಡಯಾತ್ರೆಯ ಪರಾಕಾಷ್ಠೆ ಇತ್ತು. (ಅಧ್ಯಾಯ ೮ ನೋಡಿ). ಆತನ ರಾಜ್ಯ ಉತ್ತರೆಯ ಗಂಗಾವಳಿಯಿಂದ ದಕ್ಷಿಣದ ಕಾಸರಗೋಡಿನ ತನಕ ವ್ಯಾಪಿಸಿಕೊಂಡಿತ್ತು.

ಮೊದಲನೆಯ ಸೋಮಸೇಖರನ ಆಳ್ವಿಕೆಯ ಕಾಲದಲ್ಲಿ (೧೬೬೪-೧೬೭೧) ಶಿವಾಜಿ ನಾಲ್ಕು ಹಡಗುಗಳೊಂದಿಗೆ ಬಾರ್ಕೂರಿಗೆ ಬಂದು ಭಾರೀ ಬಾಧೆಯಿತ್ತ; ಅಲ್ಲಿಂದ ಮರಳಿದ ಆತ ಬೈದನೂರಿಗೆ ಸಾಗಿದ; ಮರಳಿ ಬಂದ ಆತ ಗೋಕರ್ಣದತ್ತ ತೆರಳಿದ. ಅಲ್ಲಿ ತನ್ನ ನೌಕಾದಳದ ದೊಡ್ಡ ಭಾಗಕ್ಕೆ ಬಿಡುವಿತ್ತ. (ಅಧ್ಯಾಯದ ೮ ನೋಡಿ)

ಕೋಳತ್ತಿರಿಯರೊಂದಿಗಿನ ಯುದ್ಧದಲ್ಲಿ ಪೋರ್ಚುಗೀಸರ ನೌಕಾಬಲ ಆತನಿಗೆ ಸಹಾಯ ಮಾಡಿತು. ೧೬೭೦ರಲ್ಲಿ ಆತ ಅವರಿಗೆ ಮಂಗಳೂರು, ಬಸ್ರೂರು ಮತ್ತು

ಹೊನ್ನಾವರಗಳಲ್ಲಿ ವ್ಯಾಪಾರದ ಮಳಿಗೆ ಕಟ್ಟಲು ಅನುಮತಿ ಇತ್ತ. ೧೬೭೮ರ ಸಂಧಿಯ ಮೇರೆಗೆ ರಾಣಿ ಚೆನ್ನಮ್ಮಾಜಿ ಪೋರ್ಚುಗೀಸರಿಗೆ ಮಿರ್ಜಾನ್, ಚಂದಾವರ, ಹೊನ್ನಾವರ ಮತ್ತು ಕಲ್ಯಾಣಪುರಗಳಲ್ಲಿ ಪ್ರಾರ್ಥನಾಲಯಗಳನ್ನು ಕಟ್ಟಲು ಪರವಾನಿಗೆ ಇತ್ತಳು. ಲಿಖಿತ ಪರವಾನಿಗೆ ಇಲ್ಲದೆ ಕೆನರಾದ ಬಂದರುಗಳಲ್ಲಿ ವ್ಯಾಪಾರ ಮಾಡುತ್ತಿದ್ದ ಅರಬರ ಕೆಲವೊಂದು ಹಡಗುಗಳನ್ನು ಪೋರ್ಚುಗೀಸರು ತಮ್ಮ ವಶಕ್ಕೆಕೊಂಡರು; ೧೬೯೫ರಲ್ಲಿ ಅರಬರ ಹಡಗುಗಳ ದೊಡ್ಡ ಪಡೆಯೊಂದು ಮಂಗಳೂರು ಮತ್ತು ಬಸ್ರೂರನ್ನು ಸುಲಿದು ಅವುಗಳಿಗೆ ಬೆಂಕಿ ಇತ್ತು ಅಪಾರ ಸಂಪತ್ತಿನೊಂದಿಗೆ ಮರಳಿತು.

ತನಗೆ ಸಲ್ಲಬೇಕಾಗಿರುವ ಬಾಕಿ ಸಲ್ಲಿಸಲು ವಿಫಲರಾದಾಗ ಬಂದರುಗಳನ್ನು ಮುಚ್ಚಿ ಅಕ್ಕಿಯ ಸರಬರಾಯಿ ಅವರಿಗೆ ಸೇರದಂತೆ ಮಾಡಿದ ಮೊದಲನೆಯ ಬಸಪ್ಪ ನಾಯಕ ಮತ್ತು ಪೋರ್ಚುಗೀಸರ ನಡುವೆ ವೈಮನಸ್ಸಿತ್ತು. ೧೭೦೭ರಲ್ಲಿ ಪೋರ್ಚುಗೀಸರು ಮಂಗಳೂರಿನ ಮೇಲಕ್ಕೆ ದಾಳಿಯಿಕ್ಕಿದರು. ಅವರನ್ನು ಹಿಮ್ಮೆಟ್ಟಿಸಲಾಯಿತು; ಅನಂತರ ತಮ್ಮಿಬ್ಬರ ನಡುವಣ ವೈಮನಸ್ಸನ್ನು ಮರೆಮಾಜಿಸಿಕೊಂಡರು. ೧೭೧೪ರಲ್ಲಿ ಪೋರ್ಚುಗೀಸ್ ಸೇನೆಯ ತುಕಡಿಯೊಂದು ಬಸ್ರೂರು ಮತ್ತು ಕಲ್ಯಾಣಪುರವನ್ನು ಸ್ವಾಧೀನ ಪಡಿಸಿಕೊಂಡು ಅಲ್ಲಿನ ಸರಕನ್ನು ಪೂರ್ಣ ನಾಶಮಾಡಿತು. ಮಂಗಳೂರು, ಕುಮ್ಟ, ಗೋಕರ್ಣ ಮತ್ತು ಮೋಯನ್‌ಗಳ ಮೇಲಕ್ಕೆ ಗುಂಡಿನ ಮಳೆ ಸುರಿಸಲಾಯಿತು. ಮುಂದೆ ಅತ್ಯಲ್ಪ ಕಾಲದಲ್ಲಿ ಹಗೆತನ ಕೊನೆಗೊಂಡಿತು.

ಎರಡನೆಯ ಸೋಮಸೇಖರ ಮತ್ತು ಕೊಳತ್ತಿರಿ ರಾಜ ಇವರಿಬ್ಬರ ನಡುವೆ ದೀರ್ಘಕಾಲ ಯುದ್ಧ ನಡೆದಿತ್ತು. ೧೭೩೨ರಲ್ಲಿ ಬೆದನೂರಿನ ಸೇನೆ ಕೊಳತ್ತಿರಿಯ ಸೇನೆಯನ್ನು ಪೂರ್ತಿ ಸೋಲಿಸಿ ತೆಲ್ಲಿಚೇರಿಯವರೆಗಿನ ಪ್ರಾಂತವನ್ನು ಗೆದ್ದುಕೊಂಡಿತು. ಮತ್ತೆ ಕಣ್ಣನೂರಿನ ಆಲಿರಾಜನ ವಿರುದ್ಧ ದಂಡೆತ್ತಿ ಸಾಗಲು ನಿರ್ಧರಿಸಿತು. ಇದರಿಂದ ತೆಲ್ಲಿಚೇರಿಯಲ್ಲಿನ ಇಂಗ್ಲಿಷ್ ಮತ್ತು ಕಣ್ಣನೂರಿನಲ್ಲಿನ ಡಚ್ಚರ ಮಳಿಗೆಗಳಲ್ಲಿನ ವ್ಯಾಪಾರದ ಮೇಲಕ್ಕೆ ಗಂಭೀರ ಪರಿಣಾಮವಾಯಿತು.

ಇಂಗ್ಲಿಷ್ ಮತ್ತು ಡಚ್ಚರ ಸೇನೆಗಳು ಒಟ್ಟುಸೇರಿ ಬೆದನೂರಿನ ಸೈನ್ಯವನ್ನು ಸೋಲಿಸಿದವು. ಬೆದನೂರಿನ ಸೇನಾಧಿಪತಿ ಯುದ್ಧದಲ್ಲಿ ಕೊಲ್ಲಲ್ಪಟ್ಟ. ಮಲಬಾರ್ ಕರಾವಳಿ ಭಾಗದಲ್ಲಿನ ತುಂಡರಸರ ಕಚ್ಚಾಟ ಇಂಗ್ಲಿಷರನ್ನು ೧೭೩೭ರಲ್ಲಿ ಒಪ್ಪಂದವೊಂದಕ್ಕೆ ಒತ್ತರಿಸಿತು. ಇದು ಬೆದನೂರಿನ ಸೇನೆಗೆ ಕೊಳತ್ತಿರಿ ಪ್ರದೇಶದೊಳಕ್ಕೆ ನುಗ್ಗಲು ಅವಕಾಶವಿತ್ತಿತು. ಇಂಗ್ಲಿಷರಿಗೆ ಹೊನ್ನಾವರದಲ್ಲಿ ವ್ಯಾಪಾರದ ಮಳಿಗೆಯನ್ನು ಕಟ್ಟಲು ಅನುಮತಿಯೊಯಲಾಯಿತು. ಮಂಗಳೂರಿನಿಂದ ರಫ್ತು ಮಾಡಲಾಗುವ ಅಕ್ಕಿಯನ್ನು ಕರಮುಕ್ತ ಮಾಡಲಾಯಿತು; ಗೆದ್ದುಕೊಂಡ ಭೂಭಾಗದ ಮೇಲೆ ಅವರು ಏಕಾಧಿಕಾರದ ಹಕ್ಕುಕೊಂಡರು. ೧೭೩೮ರಲ್ಲಿ ಇಂಗ್ಲಿಷರ ಕೆಲವೊಂದು ಹಡಗುಗಳನ್ನು ತಡೆಹಿಡಿದಾಗ ಹಗೆತನ ಮತ್ತೆ ತಲೆಎತ್ತಿಕೊಂಡಿತು. ಉದ್ದಕ್ಕೆಳೆದ ಸಮಾಲೋಚನೆಯ ಬಳಿಕ ೧೭೩೯ರಲ್ಲಿ ಹಿಂದಣ ಶರ್ತಗಳೊಂದಿಗೆ ಒಪ್ಪಂದವಾಯಿತು.

೧೭೩೦ರಲ್ಲಿ ಎರಡನೆಯ ಸೋಮಸೇಖರ ನಾಯಕ ಕೊಡಗಿನ ರಾಜ

ದೊಡ್ಡವೀರಪ್ಪನಿಗೆ ಯುದ್ಧದಲ್ಲಿ ಮಾಡಿದ ಸಹಾಯಕ್ಕಾಗಿ ಅಮರಮಾಗಣೆ (೫ ಅಥವಾ ೬ ಗ್ರಾಮಗಳ ದತ್ತಿ) ಗಳನ್ನಿತ್ತ. ಅದೇ ಹೊತ್ತಿಗೆ ತಲಕಾವೇರಿ ದೇವಸ್ಥಾನದ ಉತ್ಪನ್ನದಿಂದ ಸುಳ್ಯ ಮಾಗಣೆಯನ್ನೂ ಕ್ರಯಕ್ಕೆ ಕೊಂಡ.

೧೭೩೯ರ ನಂತರ ಬಿದನೂರಿನ ಅರಸರ ಅಧಿಕಾರ ಕ್ಷಯಿಸಲಾರಂಭಿಸಿತು. ಅಲ್ಲಲ್ಲಿ ಸ್ಥಾನೀಯ ಅಧಿಕಾರಿಗಳ ದಬ್ಬಾಳಿಕೆಯ ಕೃತ್ಯಗಳು ತಲೆದೋರತೊಡಗಿದವು.

೧೭೫೫ರಲ್ಲಿ ಆಂಗ್ರಿಯಾನ್ನು ಸೇರಿಕೊಂಡ ಕಣ್ಣನೂರಿನ ಆಲಿರಾಜ ಕರಾವಳಿ ಭಾಗವನ್ನು ಉಧ್ವಸ್ತಗೊಳಿಸಿದ. ಮಂಜೇಶ್ವರವನ್ನು ದೋಚಿದ. ಕೊಲ್ಲೂರದಲ್ಲಿನ ದೇವಸ್ಥಾನದಿಂದ ೪೦ ಲಕ್ಷ ಪಗೋಡಗಳನ್ನು ದೋಚಿಕೊಂಡು ಹೋದ.

೧೭. ಹೈದರ್ ಆಲಿ ಮತ್ತು ಟಿಪ್ಪು ಸುಲ್ತಾನ್

೧೭೬೩ರಲ್ಲಾದ ಬಿದನೂರಿನ ಪತನದ ಬಳಿಕ ಹೈದರ್ ಆಲಿ ಕೆನರಾದ ಕೆಲವೊಂದು ಭೂಭಾಗಗಳನ್ನು ತನ್ನ ರಾಜ್ಯದೊಂದಿಗೆ ಸೇರಿಸಿಕೊಂಡ. ಮತ್ತು ಮಂಗಳೂರಿನಲ್ಲಿ ಹಡಗುಗಳ ಕಾರ್ಯಾಗಾರ ಮತ್ತು ಶಸ್ತ್ರಾಗಾರಗಳನ್ನು ಕಟ್ಟಿದ. ಹೈದರನ ಸೇನೆ ಸೂಂದಾ ಸೀಮೆಯೊಳಕ್ಕೆ ನುಗ್ಗಿತು. ಅದೇ ಹೊತ್ತಿಗೆ ಗೋವಾದಲ್ಲಿನ ಸೂಂದಾ ಅರಸರ ಭೂಭಾಗವನ್ನು ಪೋರ್ಚುಗೀಸ್ ವೈಸ್‌ರಾಯ್ ದೋಮ್ ಮಾನುವೆಲ್ ಸಲ್ದಾನಾ ದಿ ಅಲ್ಬುಕರ್ಕ್ ಆಕ್ರಮಿಸಿದ. ಸೂಂದಾದ ಸವಾಯಿ ಇಮ್ಮಡಿ ಸದಾಶಿವ ನಾಯಕ ಗೋವಾಕ್ಕೆ ಪಲಾಯನ ಮಾಡಿದ. ಮತ್ತೆ ಪೋರ್ಚುಗೀಸರಿಂದ ನಿವೃತ್ತಿ ವೇತನ ಸ್ವೀಕರಿಸಿದ. ೧೭೯೧ರಲ್ಲಿ ಆತನ ಮಗ ಗೋವಾದಲ್ಲಿನ ತನ್ನ ಪ್ರಾಂತವನ್ನು ಬಿಟ್ಟುಕೊಟ್ಟ. (ಅಧ್ಯಾಯ ೪ ನೋಡಿರಿ)

೧೭೬೮ರಲ್ಲಿ ಬ್ರಿಟಿಷರು ಮಂಗಳೂರನ್ನು ಸ್ವಾಧೀನ ಪಡಿಸಿಕೊಂಡರು. ಹೈದರ್‌ಆಲಿ ಸೇನೆಯೊಂದಿಗೆ ಅತ್ತ ಸಾಗಿದಾಗ ಅವರು ಅದನ್ನು ಬಿಟ್ಟುಹೋದರು. ಹೈದರ್ ಆಲಿ ಮತ್ತು ಟಿಪ್ಪುವಿನ ಆಳ್ವಿಕೆಯ ಕಾಲ ಜನರು ಬಹಳ ಕಷ್ಟಕ್ಕೊಳಗಾದರು. ಪ್ರಾಂತ ಉತ್ತಮ ಸ್ಥಿತಿಯಲ್ಲಿದ್ದುದನ್ನು ಕಂಡು ಅದನ್ನು ಸಾಧ್ಯವಿದ್ದಷ್ಟು ಸುಲಿದರು. ಜನರನ್ನು ಖಡ್ಗಕ್ಕೆ ಬಲಿಯಿತ್ತು, ಊರಿಗೆ ಬೆಂಕಿಕೊಟ್ಟು ಸರ್ವನಾಶ ಮಾಡಿದರು.

ಮೈಸೂರಿನ ಎರಡನೆಯ ಯುದ್ಧದ ವೇಳೆಗೆ ಬ್ರಿಟಿಷರು ಮಂಗಳೂರನ್ನು ಮತ್ತೆ ಸ್ವಾಧೀನ ಪಡಿಸಿಕೊಂಡರು. ಟಿಪ್ಪು ಅದಕ್ಕೆ ಮುತ್ತಿಗೆ ಹಾಕಿದ. ದೀರ್ಘ ಕಾಲದ ಹೋರಾಟದ ಬಳಿಕ ಅವರು ಅದರ ಕೈಬಿಟ್ಟರು. ಎರಡನೆಯ ಮೈಸೂರಿನ ಯುದ್ಧದ ವೇಳೆಗೆ ಕೆನರಾದಲ್ಲಿನ ಕ್ರೈಸ್ತ ಮತೀಯರು ಗುಟ್ಟಿನಲ್ಲಿ ಬ್ರಿಟಿಷರಿಗೆ ನೆರವಿತ್ತಿರಬೇಕೆಂದು ಟಿಪ್ಪು ಭಾವಿಸಿದ್ದ. ೧೭೮೪ರ ಸಂಧಿಯ ಬಳಿಕ ಆತ ಧರ್ಮ, ರಾಜಕೀಯ ಕಾರಣಗಳಿಗಾಗಿ ಅವರನ್ನು ಮತಾಂತರಗೊಳಿಸಲು ನಿರ್ಧರಿಸಿದ. ಗುಪ್ತವಾಗಿ ಕ್ರೈಸ್ತ ಮತೀಯರ ಜನಗಣನೆ ಮಾಡಲಾಯಿತು. ಒಂದು ರಾತ್ರಿ, ಸರಿ ಸುಮಾರು ೩೦ ರಿಂದ ೬೦ ಸಾವಿರ ಕ್ರೈಸ್ತ ಮತೀಯರನ್ನು ಹಿಡಿದು ಬಲವತ್ತರ ಮಂಗಳೂರಿಗೆ ತಂದರು. ಅವರ ಸಂಪತ್ತನ್ನು ಕಸಿದುಕೊಂಡು ದೇವಾಲಯಗಳನ್ನು ನಾಶಗೊಳಿಸಿದರು. ದಾರಿಯಲ್ಲಿನ ಕಷ್ಟ ಸಹಿಸಲಾರದೆ ಎಷ್ಟೊಂದೋ ಮಂದಿ ಸತ್ತರು. ಉಳಿದವರನ್ನು ಸೆರಿಂಗಪಟಂಗೆ ಕೊಂಡುಹೋದರು. ಗಂಡಸರ 'ಸುನತಿ

ಶುದ್ಧಿ', ಮತಾಂತರದ ಬಳಿಕ ಸಶಕ್ತರನ್ನು ಸಿಪಾಯಿಯ ನೌಕರಿಗಾಗಿ ಆರಿಸಿದರು. ಹೆಣ್ಣು ಮಕ್ಕಳನ್ನು ರಾಣಿ ವಾಸಕ್ಕೆ ಕಳುಹಿಸಿದರು. ವಿವಾಹಿತ ಸ್ತ್ರೀಯರ ಮಾನಭಂಗ ಮಾಡಲಾಯಿತು. ಉಳಿದವರನ್ನು ಮಕ್ಕಳ ಸಮೇತ ಮೈಸೂರಿನ ಹಳ್ಳಿಗಳೆಲ್ಲವುಗಳಿಗೆ ಹಂಚಿದರು. ೧೭೯೯ರಲ್ಲಾದ ಸೆರಿಂಗಪಟಂದ ಪತನದ ಬಳಿಕ ಬದುಕುಳಿದ ಸುಮಾರು ೧೫,೦೦೦ ಮಂದಿ ಕ್ರೈಸ್ತ ಮತೀಯರು ಮಂಗಳೂರಿಗೆ ಮರಳಿದರು.

೧೭೯೯ರಲ್ಲಿನ ಕೊಡಗರ ವಿಧ್ವಂಸಕಾರಿ ಕೃತ್ಯಗಳಿಂದ ಕೆನರಾದ ದಕ್ಷಿಣ ಭಾಗ ದೊಡ್ಡ ಪ್ರಮಾಣದ ಹಾನಿಗೊಳಗಾಯಿತು. ಕೊಡಗಿನ ರಾಜ ಮೈಸೂರಿನ ಕೊನೆಯ ಯುದ್ಧದ ಲಾಭ ಕೊಂಡು ಉಪ್ಪಿನಂಗಡಿ ತಾಲೂಕನ್ನು ಉಧ್ವಸ್ತಗೊಳಿಸಿದ ಮತ್ತು ಶತ್ರುವಿದ್ದ ಕುಂಬ್ಳೆದ ಅರಸನ ರಾಜ್ಯದ ಭಾಗ ಬಂಟ್ವಾಳ, ನಂದಾವರ, ಕಾರ್ಕಳ ಮತ್ತು ಇನ್ನಿತರ ತಾಣಗಳ ಮೇಲಕ್ಕೆ ದಾಳಿಯಿಕ್ಕಿದ. ೧೮೦೪ರಲ್ಲಿ ಬ್ರಿಟಿಷರು ಕೆನರಾವನ್ನು ವಶಪಡಿಸಿಕೊಂಡಾಗ ಅವರು ಆತನಿಗೆ ಅಮರ ಮತ್ತು ಸುಳ್ಯಗಳನ್ನು ಬಹುಮಾನವಾಗಿ ಕೊಟ್ಟರು. ಅವು ೧೮೩೪ರ ತನಕ (ಕೊಡಗಿನ ಕೊನೆಯ ಅರಸು ವೀರರಾಜೇಂದ್ರ ಒಡೆಯರ್‌ನನ್ನು ಪದಚ್ಯುತಿಗೊಳಿಸಿ ಬ್ರಿಟಿಷರು ಕೊಡಗನ್ನು ಸ್ವಾಧೀನಗೊಳಿಸುವ ತನಕ) ಕೊಡಗಿನ ಭಾಗಗಳಾಗಿ ಉಳಿದವು.

೧೮. ಬ್ರಿಟಿಷರು

ಕೊಯಂಬತ್ತೂರಿನ ಮಾಜಿ ಶಿರಸ್ತೇದಾರ ಸುಬ್ಬರಾವ್ ೧೮೦೦ರಲ್ಲಿ ಟಿಪ್ಪುವಿನ ಮಗ ಫತ್ತೇ ಹೈದರ್‌ನನ್ನು ಬೈಲಂಗಡಿಯಲ್ಲಿ ಗದ್ದುಗೆಗೇರಿಸಿ ಬಂಡಾಯ ಹೂಡಿದ. ತೆಲ್ಲಿಚೇರಿಗೆ ಓಡಿಹೋಗಿದ್ದ ವಿಟ್ಲದ ಹೆಗ್ಡೆ ಮರಳಿ ಬಂದು ೧೮೦೦ರ ಮೇ ತಿಂಗಳಲ್ಲಿ ಆತನನ್ನು ಸೇರಿದ. ಬಂಡಾಯಗಾರರು ಉಪ್ಪಿನಂಗಡಿಯಲ್ಲಿ ತಂಗಿದ್ದ ಕಡಬಾದ ತಹಸೀಲುದಾರನ ಮೇಲಕ್ಕೆ ಹಲ್ಲೆ ಮಾಡಿದರು. ಆದರೆ ಆತ ಕತ್ತಲ ಹೊತ್ತಿನಲ್ಲಿ ಪಲಾಯನ ಮಾಡಿದ್ದ. ಸುಬ್ಬರಾವ್ ಪುತ್ತೂರಿನಲ್ಲಿ ತನ್ನ ಮುಖ್ಯ ಕಛೇರಿ ಸ್ಥಾಪಿಸಿದ. ಬಂಟ್ವಾಳವನ್ನು ಸುಲಿದು ತೆರಿಗೆಯ ವಸೂಲಿಗೆ ಆರಂಭಿಸಿದ. ಆದರೆ ಅದೇ ತಿಂಗಳಲ್ಲಿ ಧರ್ಮಸ್ಥಳದ ಕುಮಾರ ಹೆಗ್ಡೆ, ಕ್ಯಾಪ್ಟನ್ ಮುನ್ರೋ ಕಳುಹಿಸಿದ ನೂರು ಸಶಸ್ತ್ರ ಸೈನಿಕರ ಸಹಾಯದಿಂದ ಆತನನ್ನು ಸೋಲಿಸಿದ. ಕಡಬಾದ ತಹಸೀಲುದಾರ ವಿಟ್ಲದಲ್ಲಿ ಹೆಗ್ಡೆಯನ್ನು ಸೋಲಿಸಿದ. ಅಜೀವ ಗಡಿಪಾರಿನ ಶಿಕ್ಷೆಗೊಳಗಾಗಿದ್ದ ಆತನನ್ನು ಸಾಯುವ ತುಸು ಮುನ್ನವಷ್ಟೆ ವಿಟ್ಲಕ್ಕೆ ತಂದರು.

೧೮೦೧ರಲ್ಲಿ ಮಾರ್ಕ್ವಿಸ್ ಆಫ್ ವೆಲ್ಲೆಸ್ಲಿ, ಡಾ. ಜೇಮ್ಸ್ ಬುಖಾನನ್ ಮೈಸೂರು, ಮಲಬಾರು ಮತ್ತು ಕೆನರಾವನ್ನು ಸಂದರ್ಶಿಸಲು ಕಳುಹಿಸಿದ. ಡಾ. ಬುಖಾನನ್, ಕ್ಯಾಪ್ಟನ್ (ಮುಂದೊಂದು ದಿನ ಸರ್ ಥಾಮಸ್ ಎಂದು ಪರಿಚಿತನಾಗಿದ್ದ) ಮುನ್ರೋ, ಕೆನರಾದ ಮೊತ್ತ ಮೊದಲ ಕಲೆಕ್ಟರ್‌ನ ಆಡಳಿತೆಯ ಕುರಿತಾಗಿ ಅದರ ಪೂರ್ವಕ ನುಡಿದಿರುತ್ತಾನೆ. ಆತ ಯುದ್ಧ ಮತ್ತು ಬರಗಾಲದ ನಿಮಿತ್ತ ಹೊಸದುರ್ಗ ಮತ್ತು ಚಂದ್ರಗಿರಿಯ ನಡುವಣ ಭೂಭಾಗ ಹಾಳು ಬಿದ್ದುದನ್ನು ಕಂಡಿದ್ದ. ಭರ್ಜರಿ ವ್ಯಾಪಾರದ ನಿಮಿತ್ತ ಬಂಟ್ವಾಳದ ಜನರು ಒಳ್ಳೆಯ ಸ್ಥಿತಿಯಲ್ಲಿರುವುದನ್ನು ನೋಡಿದ್ದ. ಬೆಳ್ತಂಗಡಿಯುತ್ತಣ ಭೂಭಾಗವನ್ನು ಕೊಡಗರು ಉಧ್ವಸ್ತಗೊಳಿಸಿದ್ದರು. ಅದರ ನೆರಕರೆಯ ಭಾಗ ಆತ ಕಂಡಿದ್ದವುಗಳಲ್ಲಿ ಅತೀ

ಕೃಷ್ಟವಾದುದಾಗಿತ್ತು. ಕಾರ್ಕಳದಲ್ಲಿನ ಹಾಳು ಬಿದ್ದಿದ್ದ ಜಿನಾಲಯುಗಳ ಸ್ತಂಭಗಳಲ್ಲಿನ ಕುಸುರಿನ ಕೆಲಸ ಭಾರತದಲ್ಲಿ ಆತ ಕಂಡಿದ್ದೆಲ್ಲವುಗಳಿಂತಲೂ ಉತ್ತಮವಾದುದಾಗಿತ್ತು. ಕಾರ್ಕಳದ ಪರಿಸರದಲ್ಲಿನ ಹಳ್ಳಿಗಳು ಹೈದರನ ಕಾಲದಿಂದ ನಿರ್ಜನವಾಗಿದ್ದವು. ಎರಿಯಡ್ಕದಲ್ಲಿನ ಬೆಳೆಗನುಕೂಲವಾಗಿದ್ದ ಭೂಭಾಗದ ಕಾಲು ಭಾಗ, ಉಳುವವರ ಮತ್ತೆ ಜಾನುವಾರಗಳ ಅಭಾವದ ನಿಮಿತ್ತ ಹಾಳುಬಿದ್ದಿತ್ತು. ಮಲಬಾರಿನ ರೈತರಿಗಿಂತ ತುಳುವ ರೈತರು ಸಿರಿವಂತರಾಗಿದ್ದುದು ಕಾಣಬರುತ್ತಿತ್ತು. ಬ್ರಹ್ಮಾವರದ ಉತ್ತರ ಭಾಗ ಉತ್ತಮವಿತ್ತು. ಸುವರ್ಣ ಮತ್ತು ಅನ್ಯ ನದಿಗಳೆಡೆಯಲ್ಲಿ ಉತ್ತಮವಾದ ತೆಂಗಿನ ತೋಟಗಳಿದ್ದವು. ಕುಂದಾಪುರದ ಕುರಿತಾಗಿ ಆತನು ನುಡಿಯುತ್ತಾನೆ:

"ನಾನು ಇದಕ್ಕಿಂತಲೂ ಸುಂದರವಾದ ಇನ್ನೊಂದು ಪ್ರದೇಶ ನೋಡಿದ್ದುದಿಲ್ಲ. ನಗರದ ತುಸು ಎತ್ತರ ಭಾಗದಲ್ಲಿದ್ದ ಹಳೆಯ ಕೋಟೆ ಪ್ರಪಂಚದಲ್ಲಿನ ಅತೀ ಭವ್ಯ ದೃಶ್ಯವೊಂದನ್ನು ತೋರಗೊಡುತ್ತದೆ".

ಭಟ್ಕಳದ ಕಣಿವೆಯಲ್ಲಿ ಅಣೆಕಟ್ಟಿನ ನೀರಿನಿಂದ ಅತ್ಯುತ್ತಮವಾದ ಸಾಗುವಳಿ ಮಾಡಲಾಗುತ್ತಿತ್ತು. ಭಟ್ಕಳ ಮತ್ತು ಶಿರಾಲಿಗಳ ನಡುವಣ ಕೆಂಬಣ್ಣದ ಮಣ್ಣಿನ ಗುಡ್ಡೆಗಳ ಇಳುಕಲನ್ನು ಕಡಿದು ಭತ್ತದ ಬೆಳೆಗಾಗಿ ಮೆಟ್ಟಿಲ ಗದ್ದೆಗಳನ್ನು ತಯಾರಿಸಲಾಗಿತ್ತು. ನದಿಯ ಕಿನಾರೆ ತೆಂಗಿನ ಮರಗಳಿಂದ ತುಂಬಿತ್ತು. ಬೈಲೂರು ಮರಾಠರ ಬಾಧೆಗೊಳಗಾಗಿತ್ತು. ಸಾಗುವಳಿಯ ಅಭಾವದಿಂದ ಅದರ ಅರ್ಧ ಭಾಗ ಹಾಳು ಬಿದ್ದಿತ್ತು. ಎಷ್ಟೊಂದೋ ತೆಂಗಿನಮರಗಳು ಸತ್ತುಹೋಗಿದ್ದವು. ಬೈಲೂರಿನ ಉತ್ತರಕ್ಕಿದ್ದ ಸುಮಾರು ಹತ್ತು ಮೈಲು ಉದ್ದದ ಪ್ರದೇಶ ಆತ ನೋಡಿದ್ದವುಗಳೆಲ್ಲವುಗಳಲ್ಲಿ ತೀರಾ ಹಾಳು ಬಿದ್ದಿದ್ದ ಭೂಮಿಯೊಂದಾಗಿತ್ತು. ಹೊನ್ನಾವರ ೧೭೮೪ರಲ್ಲಿ ಟಿಪ್ಪುವಿನಿಂದ ನಾಶವಾಗಿತ್ತು. ಅಲ್ಲಿ ೧೭೯೯ರ ಬಳಿಕ ಕೆಲವೇ ಅಂಗಡಿಗಳು ತೆರೆದುಕೊಂಡವು. ಮರಾಠಾ ಕಡಲುಗಳ್ಳರಿಂದ ಅಲ್ಲಿನ ವ್ಯಾಪಾರಕ್ಕೆ ಹಾನಿಯೊದಗಿತ್ತು. ಜನರು ಹಡಗುಗಳ ನಿರ್ಮಾಣಕ್ಕೆ ಅಂಜಿಕೊಂಡರು. ಹೊನ್ನಾವರ ಮತ್ತು ಹಳ್ಳಿಪುರಗಳ ನಡುವಣ ಆರೊಂದು ಮೈಲುಗಳ ಭೂಭಾಗದ ಮಣ್ಣು ನಿಸ್ಸಾರವಿತ್ತು. ಮತ್ತೆ ಅದು ತೊರೆ, ತೋಡುಗಳಿಂದ ತುಂಬಿತ್ತು. ಟಿಪ್ಪುವಿನ ಸೇನೆ ಕುಮ್ಟಾಕ್ಕೆ ಎರಡು ಬಾರಿ ಬೆಂಕಿಯಿತ್ತಿತ್ತು. ಮಿರ್ಜಾನ್ ಸಂಪೂರ್ಣ ಉಧ್ವಸ್ತವಾಗಿತ್ತು. ಅದರ ಪೂರ್ವಕ್ಕಿದ್ದ ಗುಡ್ಡಗಳ ನಡುವಣ ಜಲಸಮೃದ್ಧ ಕಣಿವೆಯಲ್ಲಿನ ಸಾಗುವಳಿಕೆ ದುಡಿಯುವ ಜನರ ಅಭಾವದಿಂದ ಅಪೂರ್ಣವಿತ್ತು. ಮಿರ್ಜಾನ್‌ನ ಉತ್ತರ ಭಾಗದ ಮಣ್ಣು ಫಲವತ್ತರವಾಗಿದ್ದರೂ ಅದು ಉಳುವವರಿಲ್ಲದೆ ದುರ್ಲಕ್ಷ್ಯಕ್ಕೊಳಗಾಗಿತ್ತು. ಗೋಕರ್ಣದ ಬಯಲು ಭಾಗ ಸಾಗುವಳಿಯಿಂದ ಹಸನಾಗಿತ್ತು, ಅದು ಭತ್ತದ ಗದ್ದೆ, ಅಲ್ಲಲ್ಲಿ ಕಾಣಬರುವ ತೆಂಗಿನ ತೋಟಗಳಿಂದೊಳಗೊಂಡಿತ್ತು. ಅಂಕೋಲ ಚೇತರಿಸಿಕೊಳ್ಳತೊಡಗಿತ್ತು. ಅದರ ಉತ್ತರಕ್ಕಿದ್ದ, ಅದೊಮ್ಮೆ ಸಾಗುವಳಿಗಾಗಿ ಬಳಸಿದ್ದ ಪ್ರದೇಶ ಗಿಡ, ಮರಗಳಿಂದ ತುಂಬಿತ್ತು. ಯುರೋಪಿನೊಂದಿಗಿನ ವ್ಯಾಪಾರದ ನಿಮಿತ್ತ ಪ್ರಸಿದ್ಧವಾಗಿದ್ದ ಕಾರವಾರ ಹಾಳು ಬಿದ್ದಿತ್ತು. ಎಲ್ಲಾಪುರದತ್ತ ಸಾಗುವ ದಾರಿಯ ಸುಮಾರು ೧೭ ಮೈಲುಗಳಷ್ಟರ ಭೂಭಾಗದಲ್ಲಿ ತೋಟ, ಗದ್ದೆಗಳಿದ್ದವು. ಅದರ ಮುಕ್ಕಾಲುಭಾಗ ಉಳುವವರ ಅಭಾವದಿಂದ ಹಾಳು ಬಿದ್ದಿತ್ತು.

ಕೊಡಗರ ರಾಜ್ಯದಲ್ಲಿ ಗೇಣಿಯನ್ನು ಹಣದ ಬದಲಿಗೆ ಅನ್ಯ ವಸ್ತುಗಳ ರೂಪದಲ್ಲಿ ಸಂದಾಯ ಮಾಡುವ ಪದ್ಧತಿ ಇತ್ತು. ಅದಕ್ಕೆ ಪ್ರತಿಯಾಗಿ ಬ್ರಿಟಿಷರು ನಗದು ಹಣದ ಮೂಲಕ ಸಲ್ಲಿಸಬೇಕಿರುವ ಪದ್ಧತಿಯನ್ನು ಕಾರ್ಯರೂಪಕ್ಕೆ ತಂದರು. ಇದರಿಂದ ಅಮರ ಮತ್ತು ಸುಳ್ಯಗಳ ಜನತೆ ಅಸಂತುಷ್ಟವಿತ್ತು. ಕೊಡಗಿನ ಕೊನೆಯ ಅರಸು ವೀರರಾಜನ ಚಿಕ್ಕಪ್ಪ ನಂಜುಂಡಪ್ಪನ ಸೋಗುಕೊಂಡ ಕಲ್ಯಾಣ ಸ್ವಾಮಿ (ಪುಟ್ಟ ಬಸಪ್ಪ) ೧೮೩೭ರಲ್ಲಿ ಬಂಡಾಯ ಹೂಡಿದಾಗ ಅಸಂತೃಪ್ತರಿದ್ದ ಕೆಲವೊಬ್ಬರು ಆತನನ್ನು ಸೇರಿಕೊಂಡಿದ್ದರು. ಬಂಗ ನಾಯಕರ ಮನೆತನದ ಕೊನೆಯಾತನಿದ್ದ ಲಕ್ಕಪ್ಪ ಬಂಗರಸನೂ ಆತನನ್ನು ಸೇರಿದ. ಮಂಗಳೂರಿಗೆ ತೆರಳಿದ ಆತ ಹಠಾತ್ತಾಗಿ ಉತ್ಪೂರಿನಲ್ಲಿದ್ದ ಈಸ್ಟ್ ಇಂಡಿಯಾ ಕಂಪನಿಯ ಚಿಕ್ಕ ಸೇನೆಯ ಮೇಲೆರಗಿ ಬಿದ್ದ. ಜಿಲ್ಲಾಧಿಕಾರಿ ಯುರೋಪಿಯನ್ನರ ಕುಟುಂಬಗಳನ್ನು ಕಣ್ಣಾನೂರಿಗೆ ರವಾನಿಸಿ ತಾನು ಹೊನ್ನಾವರಕ್ಕೆ ಹಿಮ್ಮೆಟ್ಟಿದ. ಪುಟ್ಟ ಬಸಪ್ಪ ಮಂಗಳೂರಿನ ಸೆರೆ ಮನೆಯಲ್ಲಿದ್ದ ಬಂದಿಗಳನ್ನು ಬಿಡುಗಡೆ ಮಾಡಿದ. ಬೆಂಬಲಕ್ಕಾಗಿ ಕಣ್ಣಾನೂರಿನಿಂದ ಬಂದ ಸೇನೆ ಬಂಡಾಯಗಾರರನ್ನು ತ್ವರ್ಯ ಹತ್ತಿಕ್ಕಿತು; ಕಲ್ಯಾಣ ಸ್ವಾಮಿ ಮತ್ತು ಲಕ್ಕಪ್ಪ ಬಂಗರಸನನ್ನು ಗಲ್ಲಿಗೇರಿಸಲಾಯಿತು.

೧೮೪೪-೪೫ರಲ್ಲಿನ ಈ ಬಂಡಾಯದ ಬಳಿಕ ಸೆರೆ ಹಿಡಿಯಲ್ಪಟ್ಟಿದ್ದ ಫೊಂಡಾ ಸಾವಂತನ ಮೂರು ಮಕ್ಕಳು ೧೮೫೪ರ ಫೆಬ್ರವರಿ ತಿಂಗಳಲ್ಲಿ ಪಲಾಯನ ಮಾಡಿದರು. ಅವರು ೧೫೦ ಮಂದಿಗಳ ತಂಡದೊಂದಿಗೆ ಕೆನರಾದ ಮೇಲೆ ದಾಳಿಯಿಕ್ಕಿದರು. ಹಲಿಯಾಳ ತಾಲೂಕಿನ ಗುಡ್ಡಗಾಡಿನ ದುರ್ಗಮ ಭಾಗದಲ್ಲಿ ನೆಲೆಯೂರಿದ್ದ ಇವರು, ತಮ್ಮ ವಿರುದ್ಧ ಪುನಃ ಪುನಃ ಶಕ್ತಿಶಾಲಿ ಸೇನೆ ಕಳುಹಿಸಿದ್ದಾಗಲೂ ಬೆದರದೆ, ಸುಮಾರು ೨ ವರ್ಷಗಳ ಕಾಲ ಸ್ವತಂತ್ರರಾಗಿ ಉಳಿದರು. ಸೇನೆಯ ತೆರಪಿಲ್ಲದ ಬಲಪ್ರಯೋಗದಿಂದ ಕ್ರಮೇಣ ದುರ್ಬಲವಾದ ಈ ತಂಡ ೧೮೫೮ರ ಡಿಸೆಂಬರ್ ತಿಂಗಳಲ್ಲಿ ತನ್ನ ಕೊನೆಕಂಡಿತು.

೧೮೬೨ರ ಎಪ್ರಿಲ್ ತಿಂಗಳ ೧೬ರಂದು ಉತ್ತರ ಕನ್ನಡವನ್ನು ಮದ್ರಾಸ್ ಪ್ರಸಿಡೆನ್ಸಿಯಿಂದ ವಿಂಗಡಿಸಿ, ಬೊಂಬೇ ಪ್ರಸಿಡೆನ್ಸಿಗೆ ವರ್ಗಾಯಿಸಲಾಯಿತು. ಕಾರಣ ಅದು ಆ ರಾಜ್ಯದ ಹತ್ತಿ ಉತ್ಪಾದಿಸುವ ಪ್ರಮುಖ ಜಿಲ್ಲೆಗಳ ನಡುವಣ ಅಗಲ ಕಿರಿದಾದ ಭಾಗವೊಂದಾಗಿತ್ತು.

೧೯. ಕೆನರಾದಲ್ಲಿ ಸಾರಸ್ವತರು

ಪೋರ್ಚುಗೀಸರ ಧರ್ಮದ ಕುರಿತಾದ ಧೋರಣೆಯಿಂದ ಪೀಡಿತರಾಗಿದ್ದ ಸಾರಸ್ವತರು ಗೋವಾದಿಂದ ವಲಸೆ ಹೋಗುವ ಮೊದಲೇ ಎಷ್ಟೊಂದೋ ಮಂದಿ ಕೆನರಾದಲ್ಲಿ ತಳವೂರಿದ್ದರು. ೧೨೬೩ರಲ್ಲಿನ ಮಧ್ವಾಚಾರ್ಯರು ಮದನಂತೇಶ್ವರ ದೇವಾಲಯವನ್ನು ಮೊದಲ ಬಾರಿಗೆ ಸಂದರ್ಶಿಸಿದ್ದರು. ಆಗ ಈ ದೇವಾಲಯ ಸಾರಸ್ವತರ ಸ್ವಾಧೀನವಿತ್ತು.

ಮಂಗಳೂರು, ಭಟ್ಕಳಗಳಲ್ಲಿ ವ್ಯಾಪಾರವನ್ನುದ್ದೇಶಿಸಿ ಬಂದ ಸಾರಸ್ವತರ ದೊಡ್ಡ ವಸಾಹತುಗಳಿದ್ದವು. ಕರಾವಳಿಯ ಅನ್ಯ ಶಹರಗಳಲ್ಲೂ ಸಾರಸ್ವತರ ಕುಟುಂಬಗಳು ನೆಲೆಸಿದ್ದವು. ಮುಸಲ್ಮಾನರ ದಬ್ಬಾಳಿಕೆಯ ದಿನಗಳಲ್ಲಿ ಎಷ್ಟೊಂದೋ ಕುಟುಂಬಗಳು

ಗೋವಾವನ್ನು ಬಿಟ್ಟು ಹೋಗಿದ್ದವು; ೧೬ನೇಯ ಶತಮಾನದಲ್ಲಿ ನಾಡಕರ್ಣಿ ಕುಟುಂಬಗಳು ಬಂಡಿಕೊಡ್ಲದಲ್ಲಿ ಕುಲಕರ್ಣಿ ಕುಟುಂಬಗಳು ಬಂಡಿಕೊಡ್ಲದ ಸಮೀಪದಲ್ಲಿನ ಹಣತೆ ಹಳ್ಳಿಯಲ್ಲಿ ಮತ್ತೆ ಕೊಳ್ಳಿ ಕುಟುಂಬಗಳು ಬ್ರಹ್ಮಾವರದಲ್ಲಿ ವಾಸಮಾಡತೊಡಗಿದವು. ಅನ್ಯ ವ್ಯಾಪಾರಿಗಳ ಪ್ರಯಾಣದ ಬಗೆ ಹೇಗಿದ್ದರೂ, ಇವರು ಮಾತ್ರ ನೆಲಮಾರ್ಗವಾಗಿ ಬಂದಿರಬೇಕು. ಕಾರಣ ಇವರ ಕುಟುಂಬೀಯರನ್ನು ಅಂಕೋಲದಲ್ಲಿ ಇಂದಿಗೂ ಕಾಣಬಹುದು.

ಪೋರ್ತುಗೀಸರ ದಬ್ಬಾಳಿಕೆಯ ದಿನಗಳಲ್ಲಿ ಅಸಂಖ್ಯ ಸಾರಸ್ವತರು ಗೋವಾ ಬಿಟ್ಟು ಹೋದರು. ಸ್ವಾಭಾವಿಕವಾಗಿ ಅವರು ಸಾರಸ್ವತರ ವಸತಿಯಿದ್ದ ಹೊನ್ನಾವರ, ಭಟ್ಕಳ, ಬಸ್ರೂರು,ಬ್ರಹ್ಮಾವರ, ಮುಲ್ಕಿ, ಮಂಗಳೂರು,ಉಲ್ಲಾಳ,ಕುಂಬ್ಳೆ, ನೀಲೇಶ್ವರಗಳತ್ತ ಗುಂಪಾಗಿ ತೆರಳಿದರು. ಪೋರ್ತುಗೀಸರೊಂದಿಗೆ ಕಾದಾಟವಾಡುತ್ತಿದ್ದ ಸ್ಥಾನೀಯ ಜೈನನಾಯಕರು ಕರಾವಳಿಯಲ್ಲಿ ಅವರಿಗೆ ಆಸರೆಯಿತ್ತರು. ಮತ್ತೆ ಅವರು ಅಲ್ಲಿಯೇ ನೆಲಸಿದರು. ವ್ಯಾಪಾರಿಗಳು ಬಂದರುಗಳ ಸಮೀಪ ತಳವೂರಿದರು. ಉಳಿದವರು ಒಳಭಾಗದ ಹಳ್ಳಿಗಳಲ್ಲಿ ವಾಸಕ್ಕಾರಂಭಿಸಿದರು. ಅವರಲ್ಲಿನ ಕೆಲವರು ಜಮೀನಿನ ಖರೀದಿ ಮಾಡಿದರು. ಕೆಲವೊಬ್ಬರು ಸ್ಥಾನೀಯ ಪಾಳೆಯಗಾರರಲ್ಲಿ ನೌಕರರ ಹುದ್ದೆಕೊಂಡರು. ಮತ್ತೆ ಕೆಲವರು, ೧೬೦೦ ರಿಂದ ೧೬೩೪ರ ನಡುವಣ ಕಾಲದಲ್ಲಿ ಕೊಡಗನ್ನು ಆಳುತ್ತಿದ್ದ ಕೆಳದಿ ರಾಜವಂಶದ ಸಣ್ಣ ಶಾಖೆಯೊಂದರ ಅರಸರಲ್ಲಿ ಸೇವೆಗೆ ನಿಂತರು. ಈ ಅರಸರಲ್ಲೊಬ್ಬನ ಆಳ್ವಿಕೆಯ ದಿನಗಳಲ್ಲಿ ಬೆಳ್ಳಾರೆ ಕಾಳಪ್ಪಯ್ಯ ಮತ್ತು ಬೆಳ್ಳಾರೆ ಶೇಷಯ್ಯ ಕ್ರಮವಾಗಿ ಶಿರಸ್ತೆದಾರ ಮತ್ತು ವಿದೂಷಕರಾಗಿದ್ದರು. ಕಬಾಡ ಮನೆತನದ ಪೂರ್ವಜರಲ್ಲೊಬ್ಬ ಕರಣಿಕನಾಗಿದ್ದನೆನ್ನಲಾಗುತ್ತದೆ.

ಸ್ಮಾರ್ತಸಾರಸ್ವತರಲ್ಲಿನ ಹೆಚ್ಚಿನವರು ಗ್ರಾಮಗಳ ಶಾನುಭಾಗರಾಗಿ ನೇಮಿಸಲ್ಪಟ್ಟಿದ್ದರು. ಇವರ ಲೆಕ್ಕಾಚಾರದ ದಾಖಲೆಗಳು, ನಾನ್ನೂರು ವರ್ಷಗಳ ಕಾಲಾವಧಿಯಲ್ಲಿ ತೆತ್ತ ಕಂದಾಯದ ವಿವರಗಳ ಸಾರಾಂಶವನ್ನು ಅನಾಯಾಸ ಒದಗಿಸುವಷ್ಟು ಉತ್ಕೃಷ್ಟ, ನಿರ್ದುಷ್ಟವಿದ್ದುವೆಂದು ೧೮೦೦ರಲ್ಲಿ ಕೆನರಾದ ಮೊದಲ ಜಿಲ್ಲಾಧಿಕಾರಿ ಸರ್ ಥೋಮಸ್ ಮುನ್ರೋ ಉದ್ಗಾರವೆತ್ತಿರುತ್ತಾನೆ.

೧೮೦೧ರಲ್ಲಿ ದಕ್ಷಿಣ ಕನ್ನಡ ಸಂದರ್ಶಿಸಿದ್ದ ಡಾ. ಜೇಮ್ಸ್ ಬುಖಾನನ್, ಸಾರಸ್ವತರು ಕಾರ್ಕಳ, ಮೂಡಬಿದ್ರಿ ಮತ್ತೆ ಬಂಟ್ವಾಳಗಳಲ್ಲಿ ಅತ್ಯನುಕೂಲ ಪರಿಸ್ಥಿತಿಯಲ್ಲಿರುವುದನ್ನು ಕಂಡಿದ್ದ.

೨೦. ವೈಷ್ಣವ ಸಾರಸ್ವತರು

ವೈಷ್ಣವ ಸಾರಸ್ವತರು ವ್ಯಾಪಾರದ ಕ್ಷೇತ್ರದಲ್ಲಿ ಅತ್ಯಲ್ಪ ಕಾಲದಲ್ಲೇ ಪ್ರಸಿದ್ಧಿಕೊಂಡರು. ಹೊನ್ನಾವರ, ಭಟ್ಕಳ, ಮಂಗಳೂರು ಬಂದರುಗಳಲ್ಲಿನ ವ್ಯಾಪಾರ ಕ್ರಮೇಣ ಅವರ ಕೈ ಸೇರಿತು. ವಿಜಯನಗರದ ಆಳ್ವಿಕೆಯ ದಿನಗಳಲ್ಲಿ ವೈಷ್ಣವ ಸಾರಸ್ವತ ಸಮಾಜ ಅದೆಷ್ಟು ಪ್ರಗತಿ ಮಾಡಿತ್ತೆಂಬುದನ್ನು ಭಟ್ಕಳದಲ್ಲಿನ ಸುಂದರವಾದ ದೇವಸ್ಥಾನಗಳು ಸೂಚಿಸುತ್ತವೆ. ಮುಂದೆ ಅವರು ಕೆಳದಿಯ ಅರಸರಲ್ಲಿ ಕೆಲಸಕ್ಕೆ ತೊಡಗಿ ಪ್ರಸಿದ್ಧಿಕೊಂಡರು. ಅವರಲ್ಲೊಬ್ಬಾತ

ಹೊನ್ನಾವರದ ಗವರ್ನರ್‌ನ ಪದವಿಗೇರಿದ್ದ. ಬಂಗರ ಹಾವಳ್ಳಿ ಲಕ್ಷ್ಮಣ ಬಂಗರಾಜ ಕಪ್ಪಕೊಡಲು ಅಸಮರ್ಥನಾದಾಗ ೧೬೩೧ರಲ್ಲಿ ಶಿವಪ್ಪ ನಾಯಕ ಆತನನ್ನು ಬಂಧಿಸಿದ. ಆಗ ದಾಮರ್ಸ ಪೈ ಜಾಮೀನು ನಿಂತು ಬಿಡುಗಡೆ ಮಾಡಿದ. ಕೃತಜ್ಞನಿದ್ದ ಬಂಗನಾಯಕ ಮೊಗುನಾಡಿನಲ್ಲಿದ್ದ ದಾಮರ್ಸ ಪೈಯ ದೇವಸ್ಥಾನಕ್ಕೆ ಉಂಬಳಿಯಿತ್ತ.

೨೧. ಲಕ್ಷ್ಮೀಕಾಂತ ಶೆಣೈ

ಲಕ್ಷ್ಮೀಕಾಂತ ಶೆಣೈ ಉತ್ತರ ಕನ್ನಡದ ವ್ಯಾಪಾರಿಯಿದ್ದ. ಆತ ಬ್ರಿಟಿಷ್ ಮತ್ತು ಸೋಂಡ ಅರಸರ ನಡುವಣ ಒಪ್ಪಂದದಲ್ಲಿನ ಮುಖ್ಯ ಮಧ್ಯಸ್ಥನಿದ್ದು ಕಷ್ಟಸಾಧ್ಯವಿದ್ದ ಕಾರ್ಯವನ್ನು ಯಶಸ್ವಿಗೊಳಿಸಿದ್ದನೆನ್ನಲಾಗುತ್ತದೆ.

೨೨. ಅಪ್ಪಾಜಿರಾಮ್

ಅಪ್ಪಾಜಿರಾಮ್ ಹೈದರ್ ಆಲಿಯ ಅಧಿಕಾರಿಯೊಬ್ಬ. ಸದ್ಯದ ಬೆಳಗಾಂ ಮತ್ತು ಧಾರ್ವಾರ್ ಜಿಲ್ಲೆಗಳನ್ನು ಗೆದ್ದ ಹೈದರ್ ಆಲಿ ಅಪ್ಪಾಜಿ ರಾಮನಿಗೆ ಬಂಕಾಪುರದ ಹೊಣೆಗಾರಿಕೆಯಿತ್ತಿದ್ದ. ಮಧ್ಯಸ್ಥಿಕೆಯಲ್ಲಿ ಚತುರ, ನಿಪುಣನಿದ್ದ ಈತನನ್ನು ಹೈದರ್ ಅನ್ಯ ರಾಜ್ಯಗಳೊಂದಿಗಿನ ಮಧ್ಯಸ್ಥಿಕೆಗಾಗಿ ಬಳಸುತ್ತಿದ್ದ.

ಕಾಲಾಂತರದಲ್ಲಿ ಟಿಪ್ಪು ಸುಲ್ತಾನ್ ಆತನ ಸ್ಥಾನದಲ್ಲಿ, ತನ್ನ ದುರ್ದಶೆಗೆ ಕಾರಣೀಭೂತನಾಗಿದ್ದ ಸೋದರಮಾವ, ರಾಜದ್ರೋಹಿ, ಮಿರ್ ಸಾದಕ್‌ನನ್ನು ನೇಮಿಸಿದ.

೨೩. ಬ್ರಿಟಿಷರ ಕೈಕೆಳಗಿನ ಸಾರಸ್ವತರ ಸ್ಥಿತಿ

ಡಾ. ಜೇಮ್ಸ್ ಬುಖಾನನ್ ಮಂಜೇಶ್ವರ, ಬಂಟ್ವಾಳ ಮತ್ತು ಕಾರ್ಕಳಗಳಲ್ಲಿನ ವೈಷ್ಣವ ಸಾರಸ್ವತರು ಒಳ್ಳೆಯ ಸ್ಥಿತಿಯಲ್ಲಿದ್ದುದನ್ನು ಕಂಡಿದ್ದ. ೧೮೩೭ರಲ್ಲಿನ ಕಲ್ಯಾಣ ಸ್ವಾಮಿಯ ಬಂಡಾಯದ ಸಮಯ ಸಾರಸ್ವತರಲ್ಲಿನ ಇಬ್ಬರು ಬ್ರಿಟಿಷರಿಗೆ ತಮ್ಮ ಸೇವೆ ಸಲ್ಲಿಸಿದ್ದರು. ಕಲ್ಯಾಣ ಸ್ವಾಮಿ ಪುತ್ತೂರನ್ನು ವಶಪಡಿಸಿಕೊಂಡಾಗ ಪರಿಸ್ಥಿತಿಯ ವರದಿ ಕಳುಹಿಸಲಾಗಿ ಮತ್ತೆ ಸಾಧ್ಯವಾದಲ್ಲಿ ಕಲ್ಯಾಣ ಸ್ವಾಮಿಯನ್ನು ಬಂಧಿಸುವರೆ ಜಿಲ್ಲಾಧಿಕಾರಿ, ಕರಣಿಕ ದೇವಪ್ಪಯ್ಯನನ್ನು ಸೇನೆಯೊಂದಿಗೆ ಕಳುಹಿಸಿದ್ದ. ಆದರೆ ಆತ ಪುತ್ತೂರನ್ನು ಸೇರುವ ಮುನ್ನವೇ ಸೋಗುಕೊಂಡಾತ ಅಲ್ಲಿ ತಳವೂರಿದ್ದ. ತನ್ನ ಜೀವಕ್ಕೆ ಅಪಾಯವಿದ್ದುದನ್ನು ದುರ್ಲಕ್ಷಿಸಿದ ದೇವಪ್ಪಯ್ಯ ನದಿ ದಾಟುತ್ತಿದ್ದ ಕಲ್ಯಾಣ ಸ್ವಾಮಿಯ ನಾವೆಗಳನ್ನು ಸೈನಿಕರ ಸಮೇತ ನೀರು ಪಾಲಾಗಿಸಿದ.

ಪುತ್ತೂರಿನಿಂದ ಮಂಗಳೂರಿಗೆ ಹಿಮ್ಮೆಟ್ಟುತ್ತಿದ್ದ ಈಸ್ಟ್ ಇಂಡಿಯಾ ಕಂಪನಿಯ ಸೈನ್ಯಕ್ಕೆ ಸರಬರಾಯಿಯ ವ್ಯವಸ್ಥೆ ಮಾಡಿ, ನೇತ್ರಾವತಿ ನದಿಯನ್ನು ದಾಟಲು ಸಹಾಯ ಮಾಡಿದ ಬಂಟ್ವಾಳದ ವ್ಯಾಪಾರಿ ರಂಗಬಾಳಿಗ, ಕಲ್ಯಾಣ ಸ್ವಾಮಿಯಿಂದ ಕೊಲ್ಲಲ್ಪಟ್ಟ. ಆತನಿಗೆ ಮರಣೋತ್ತರ 'ಚಾವಲಿ ರಾಜ' ನೆಂಬ ಬಿರುದನ್ನಿತ್ತು ಆತನ ಮೂರು ತಲೆಮಾರುಗಳ ಭೂಕಂದಾಯ ವಿನಾಯತಿ ಮಾಡಲಾಯಿತು.

೨೪. ಉದಿಯಾವರ ಮಂಗೇಶ ರಾವ್

೧೮೫೮-೧೮೫೯ ರಲ್ಲಾದ ಫೊಂಡ ಸಾವಂತನ ಮಕ್ಕಳ ಬಂಡಾಯದ ವೇಳೆಗೆ

ಬದಿಯಾವರ ಮಂಗೇಶರಾವ್ ಉತ್ತರ ಕನ್ನಡದಲ್ಲಿ ದಫೇದಾರನಾಗಿದ್ದ. ಆತ ತನ್ನ ಪ್ರಾಣದ ಹಂಗೆ ತೆತ್ತು ಜಿಲ್ಲಾಧಿಕಾರಿಯ ಜೀವ ಉಳಿಸಿದ.

೨೫. ಸ್ಮಾರ್ತ ಸಾರಸ್ವತರು

ಇಂಗ್ಲಿಷ್ ಶಿಕ್ಷಣದ ಲಾಭಕೊಂಡ ಸ್ಮಾರ್ತ ಸಾರಸ್ವತ ಸಮಾಜ ಸರಕಾರಿ ಉದ್ಯೋಗಗಳ ಮೇಲಕ್ಕೆ ತನ್ನ ಹಿಡಿತಕೊಂಡಿತ್ತು. ಉಚ್ಚ ಶಿಕ್ಷಣ ಗಳಿಸಿದ್ದ ಸ್ತ್ರೀ, ಪುರುಷರು ಪ್ರಗತಿಶೀಲ ದೃಷ್ಟಿಕೋನಕೊಂಡಿದ್ದರು. ಸರ್‌ನಾರಾಯಣ ಗಣೇಶ ಚಂದಾವರಕರ್, ಕುಡ್ಮುಲರಂಗರಾವ್, ಸರ್‌ಬೆನೆಗಲ್ ನರಸಿಂಗರಾವ್ ಮುಂತಾದವರು ಖ್ಯಾತನಾಮರಿದ್ದವರಲ್ಲಿನ ಕೆಲವೊಬ್ಬರು. ಸ್ಮಾರ್ತಸಾರಸ್ವತದಲ್ಲಿನ ಬಹು ಸಂಖ್ಯಾಕರು ಬೊಂಬೇ, ಬೆಂಗಳೂರುಗಳಲ್ಲಿ ನೆಲಸಿದರು.

ವೈಷ್ಣವ ಸಾರಸ್ವತರು ವ್ಯಾಪಾರದಲ್ಲಿ ಸಫಲರಾದರೂ ಆಧುನಿಕ ಶಿಕ್ಷಣ ಕ್ಷೇತ್ರದಲ್ಲಿ ಮಾತ್ರ ಅವರು ಹಿಂದುಳಿದರು. ಮಂಗಳೂರಿನಲ್ಲಿ ವ್ಯವಹಾರಕ್ಕನುಕೂಲವಾದ ಹಣಕಾಸಿನ ವ್ಯವಸ್ಥೆಯು ಕೊರತೆಯಿತ್ತು. ಈ ಸಮಸ್ಯೆ ೧೮೯೧ರಲ್ಲಿ ಮಂಗಳೂರಿನಲ್ಲಿ [೧೪] ಕೆನರಾ ಹೈಸ್ಕೂಲನ್ನು ಸ್ಥಾಪಿಸಿದ ಅಮ್ಮೆಂಬಳ ಸುಬ್ಬರಾವ್ ಪೈಯವರ ಲಕ್ಷ್ಯವನ್ನಾಕರ್ಷಿಸಿತು, ೧೯೦೬ರಲ್ಲಿ ಅವರು, ಮುಂದೊಂದು ದಿನ 'ಕೆನರಾ ಬ್ಯಾಂಕ್ ಲಿಮಿಟೆಡ್' [೧೫] ಎಂದಾಗಿ ಪರಿವರ್ತಿತವಾದ 'ಕೆನರಾ ಹಿಂದು ಪರ್ಮನೆಂಟ್ ಫಂಡ್' ಸ್ಥಾಪಿಸಿದರು. ಆ ಮೊದಲ್ಗೊಂಡು ದಕ್ಷಿಣ ಕನ್ನಡದ ವೈಷ್ಣವ ಸಾರಸ್ವತರು ಆಧುನಿಕ ವಿದ್ಯಾಕ್ಷೇತ್ರದಲ್ಲಿ ಪ್ರಚಂಡ ಪ್ರಗತಿ ಮಾಡಿದರು. ಮಂಗಳೂರು ಈಗ ದಾಕ್ಷಿಣಾತ್ಯ ಸಾರಸ್ವತರ ಪ್ರಗತಿಪರ ಕ್ಷೇತ್ರವೊಂದೆಂದು ಪರಿಗಣಿಸಲ್ಪಟ್ಟಿದೆ.

ಉಡುಪಿಯ ಉದ್ಯಮಶೀಲ ಡಾ. ತೋನ್ಸೆ ಮಾಧವ ಪೈಯವರು ಉಡುಪಿ [೧೬] ಮತ್ತು ನೆರೆಯೂರುಗಳಲ್ಲಿ ಶೈಕ್ಷಣಿಕ ಸಂಸ್ಥೆಗಳ ಸ್ಥಾಪನೆಗೆ ಕಾರಣೀಭೂತರಾದರು; ಅವರು ಅಕಾಡೆಮಿ ಆಫ್ ಜನರಲ್ ಎಜ್ಯುಕೇಶನ್, ಉಡುಪಿ, ಸ್ಥಾಪಿಸಿದರು. ಅದರ ಆಶ್ರಯದಲ್ಲಿ ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜು (ಕಲಾ, ವಿಜ್ಞಾನ, ವಾಣಿಜ್ಯ ವಿಭಾಗಗಳೊಂದಿಗಿನ), ದ ಕಸ್ತೂರಿ ಬಾ ಮೆಡಿಕಲ್ ಕಾಲೇಜು, ದ ಲಾ ಕಾಲೇಜು ಮತ್ತು ದಿ ಇಂಜಿನಿಯರಿಂಗ್ ಕಾಲೇಜುಗಳು ಆರಂಭಿಸಲ್ಪಟ್ಟವು.

ಸಂದರ್ಭ ಸೂಚಿ

೧. ಹೈಗ ಅಥವಾ ಹವ್ಯೆ ಎಂಬುದು ಕನ್ನಡದ ಹಾವು ಅಥವಾ ಅದರ ವಿಕೃತ ರೂಪ ಹೈ ಶಬ್ದದಿಂದ ಉದ್ಭೂತವಾಗಿದ್ದು ಹಾವಿನ ನಾಡು ಎಂಬುದನ್ನು ಸೂಚಿಸುತ್ತದೆ. ಅದು ನಾಮ ರೂಪ ಅಹಿಕ್ಷೇತ್ರಕ್ಕೆ ಅನುರೂಪವಾಗಿವೆ. ಸೋಂದದಲ್ಲಿನ ಹವ್ಯಕ ಬ್ರಾಹ್ಮಣರ ಹೊನ್ನಾಳಿ ಮಠದ ಇತಿಹಾಸದಲ್ಲಿ ಗೋಕರ್ಣವನ್ನು ಅಹಿ ಕ್ಷೇತ್ರ ಎಂದಾಗ ನಮೂದಿಸಲಾಗಿದೆ.

೨. 'ತುಳುವ' ಶಬ್ದ ಸೌಮ್ಯ, ದೀನ ಎಂಬ ಅರ್ಥ ಸೂಚಿಸುವ ತುಳು ಶಬ್ದದಿಂದ ಉತ್ಪನ್ನವಾಯಿತೆಂದು ನಂಬಲಾಗುತ್ತದೆ. ಆದರೆ ಅದು ತಪ್ಪು; ಈ ಶಬ್ದದ ವ್ಯುತ್ಪತ್ತಿ ಕನ್ನಡದಿಂದಾಯಿತು. ಅದು 'ಆಕ್ರಮಿಸು' ಎಂಬ ಅರ್ಥವನ್ನೀಯುವ ಕನ್ನಡ ಮೂಲದ

‘ತುಳು’ವಿನತ್ತ ಸಾಗುವುದನ್ನು ಕಂಡುಹಿಡಿಯಲಾಗಿದೆ. ತುಳು ಪರಿಪೂರ್ಣ ವಿಕಾಸಗೊಂಡಿದ್ದ ದ್ರಾವಿಡ ಭಾಷೆಗಳಲ್ಲೊಂದಿರುವುದೆಂದು ಬಿಷಪ್ಪ್ ಕಾಲ್ಡ್‌ವೆಲ್ಲ್ ನುಡಿದಿರುತ್ತಾರೆ. ಎರಡನೆಯ ಬೆಳೆಗೆ ಬೇಕಾಗಿರುವ ನೀರನ್ನು ಅತೀ ತಗ್ಗಿನ ಪಾತ್ರದಲ್ಲಿ ಹರಿಯುತ್ತಿದ್ದ ತೊರೆಯಿಂದ, ಮುರ ಮಣ್ಣನ್ನು ಅಗೆದು ಮಾಡಿದ ತೋಡುಗಳ ಮೂಲಕ, ಎತ್ತರದಲ್ಲಿದ್ದ ಬೆಟ್ಟದ ಇಳಿಜಾರನ್ನು ಕಡಿದು ತಯಾರಿಸಿದ ಮೆಟ್ಟಲ ಗದ್ದೆಗಳತ್ತ, ಬಗೆ ಬಗೆಯ ಸಾಧನೆಗಳನ್ನು ಬಳಸಿ ಸಾಗಿಸುವ ವಿಸ್ಮಯಕಾರಿ ವ್ಯವಸ್ಥೆಯನ್ನು ಕಂಡ ಮದ್ರಾಸಿನ ನೀರಾವರಿ ವಿಭಾಗದ ಚೀಫ್ ಇಂಜಿನಿಯರ್, ತುಳುವ ಬೇಸಾಯಗಾರರ ಪ್ರಶಂಸೆ ಮಾಡಿರುತ್ತಾನೆ. ಅವರಲ್ಲಿನ ಕೆಲವರು ತುಳುವ ವೆಲ್ಲಾಳರ ಪೂರ್ವಜರಿದ್ದರು. ಕುಲೋತ್ತುಂಗ ಚೋಳ ಹಾಗೂ ಆತನ ಮಗನ ಕಾಲದಲ್ಲಿ ಅವರಿಗೆ ‘ಕಣಿಯಾಣಿ, ಮುರಸಿ’ ಹಾಗೂ ಇನ್ನಿತರ ವಿಶೇಷ ಸವಲತ್ತುಗಳನ್ನಿತ್ತು ತೊಂಡ ಮಂಡಲಂನ ವಿಶಾಲ ಭೂಭಾಗದಲ್ಲಿ ನೆಲಸುವರೇ ಪ್ರೋತ್ಸಾಹನೆಯಿಯಲಾಯಿತು. ಅವರ ಉತ್ತರಾಧಿಕಾರಿಗಳು ಇಂದಿಗೂ ಆ ಸವಲತ್ತುಗಳನ್ನು ಅನುಭವಿಸುತ್ತಿದ್ದಾರೆ.

ಕೃಷ್ಣದೇವರಾಯನ ವಿಜಯನಗರದ ತುಳುವ ರಾಜಮನೆತನದ ಮೂಲಪುರುಷ ತಿಮ್ಮ, ತುಳುವರ ಅತಿ ಪ್ರಸಿದ್ಧ ನಾಯಕನಿದ್ದ. ಆತನ ಮಗ ಈಶ್ವರ (ದೇವಕಿಯಿಂದ ಹುಟ್ಟಿದ್ದ), ಉದಯಗಿರಿಯನ್ನು ಗೆದ್ದ ಮೊದಲನೆಯ ಸಾಳ್ವ ನರಸಿಂಹನ ಸೇನಾಪತಿಯಿದ್ದ. ಆತ ಕಂಡುಕೂರ್ (ನೆಲ್ಲೂರು ಜಿಲ್ಲೆಯ) ನಿಂದ ಮುಸಲ್ಮಾನರನ್ನು ಹೊಡೆದೋಡಿಸಿದ. ೧೭೫೪ರಲ್ಲಿನ ದಾಖಲೆಯೊಂದರಲ್ಲಿ ಆತ ದಳವಾಯಿ (ಸೇನಾಧಿಪತಿ) ಇದ್ದುದರ ಉಲ್ಲೇಖ ಮಾಡಲಾಗಿದೆ. ಬುಕ್ಕಮಾಂಬಳಿಂದ ಹುಟ್ಟಿದ ಈಶ್ವರನ ಮಗ ನರಸನಾಯಕ ಈ ಮನೆತನದ ಮೊದಲ ಅರಸು ಮತ್ತು ಕೃಷ್ಣದೇವರಾಯನ ತಂದೆ. (ಸಿ. ಹಯವದನ ರಾವ್, ಬಿ.ಎ., ಬಿ.ಎಲ್. ಇವರಿಂದ ೧೯೩೦ರಲ್ಲಿ ಸಂಪಾದಿಸಲ್ಪಟ್ಟ ಮೈಸೂರು ಗಝೆಟೀಯರ್‌ನ ಸಂಪುಟ ೨ರ ಭಾಗ ೩, ಪುಟ ೧೭೫೪)

೩. ಹಿರಣ್ಯಾಕ್ಷನ ವಧೆ ಮಾಡಿ ಭೂಮಿಯನ್ನು ರಕ್ಷಿಸಿದ ವರಹಾವತಾರಿ ವಿಷ್ಣು ವೇದಪಾದ ಪರ್ವತದಲ್ಲಿ ವಿಶ್ರಮಿಸುತ್ತಿದ್ದಾಗ ಆತನ ಬಲಭಾಗದ ದಾಡೆ ಮುರಿಯಿತು. ಮತ್ತು ಅಲ್ಲಿಂದ ಭದ್ರಾ ಹೊರಕ್ಕೆ ಹೊಮ್ಮಿದಳು. ಅದೇ ಹೊತ್ತಿಗೆ ಎಡಭಾಗದಲ್ಲಿನ ದೊಡ್ಡ ದಾಡೆಯಡೆಯಿಂದ ತುಂಗ ಚಿಮ್ಮಿದಳು. ಮತ್ತೆ ಆತನ ಕಣ್ಣುಗಳಿಂದ ನೇತ್ರಾವತಿ ಹರಿದುಬಂದಳೆಂದು ಭವಿಷ್ಯೋತ್ತರ ಪುರಾಣದಲ್ಲಿ ಹೇಳಲಾಗಿದೆ.

- ಭಾಸ್ಕರ ಆನಂದ ಸಾಲೆತ್ತೂರು ಎಂ.ಎ., ಪಿ.ಎಚ್.ಡಿ. ಇವರು ಬರೆದ ‘ಏನ್‌ಷಂಟ್ ಕರ್ನಾಟಕ’ ಸಂಪುಟ ೧, ‘ದಿ ಹಿಸ್ಟರಿ ಆಫ್ ತುಳುವ’, ೧೯೩೬.

೪. ೧೭೫೦ರ ಹೊತ್ತಿಗೆ ಭೂತಾಳ ಪಾಂಡ್ಯ ಬಾರ್ಕೂರಿನಿಂದ ರಾಜ್ಯವಾಳುತ್ತಿದ್ದನೆನ್ನುವ ಮತ್ತು ಕಾರ್ಕಳವನ್ನಾಳಿದ ಸಾಂತರ ಕುಟುಂಬಕ್ಕೆ ಸೇರಿದಾತನೆಂಬ ಅಭಿಮತಕ್ಕೆ ಆಧಾರವಿಲ್ಲ. ನವರಾತ್ರಿಯ ದಿನಗಳಲ್ಲಿ ಭೂತಾಳ ಪಾಂಡ್ಯ ಸಿಂಹಾಸನವೇರುತ್ತಿದ್ದನೆನ್ನುವ ಸ್ಥಾನದಲ್ಲಿನ ಪೀಠದ ಪೂಜೆಗಾಗಿ ರೂಪಾಯಿ ೪೦ರ ವರ್ಷಾಶನ ಇದೆ. ಇದೇ ಸಮಯದಲ್ಲಿ ನಾಯಕಸಾನಿ ಮತ್ತು ಇನ್ನಿತರರು ಅಲ್ಲೇ ಕಟ್ಟಲಾಗಿದ್ದ ಗುಡಿಯಿದ್ದೆಡೆಗೆ ಸಾಗಿ ಕ್ಷುಲ್ಲಕವೆನ್ನಬಹುದಾದ ವಾರ್ಷಿಕ ಭತ್ತೆಯನ್ನು ಸರಕಾರಿ ಅಧಿಕಾರಿಗಳಿಂದ ಪಡೆಯುತ್ತಿದ್ದರು.

೫. ವಸ್ತುತ : ಕೆನರಾದ ಇತಿಹಾಸಕ್ಕೆ ಸಂಬಂಧಿಸಿದ, ಒಂಭತ್ತು, ಹತ್ತು ಶತಮಾನಗಳಿಗೂ ಹಿಂದಣ ಯಾವೊಂದೂ ದಾಖಲೆಗಳು ಕಾಣಬಂದಿಲ್ಲ. ಮಲಯಾಳಂನ ಕೆಲವೊಂದು

ಅಕ್ಷರಗಳೊಂದಿಗೆ ಸಾಮ್ಯಕೊಂಡ ಲಿಪಿ ಬಳಸಿ ತುಳು ಬರೆಯಲಾಗುತ್ತಿತ್ತು. ಕನ್ನಡ ನುಡಿಯುವ ಹವೀಕ ಬ್ರಾಹ್ಮಣರು ಮಲಯಾಳಂನ ಉಚ್ಚಾರದತ್ತ ವಾಲುವ ಕನ್ನಡ ನುಡಿಯುತ್ತಿದ್ದರು. ಅವರು ತಮ್ಮ ಕುಟುಂಬದ ದಾಖಲೆಗಳನ್ನು ಶಿವಳ್ಳಿ ಬ್ರಾಹ್ಮಣರಂತೆ ತುಳು, ಮಲಯಾಳಂ ಲಿಪಿ ಬಳಸಿ ಬರೆಯುತ್ತಿದ್ದರು.

೬. ಕಾಕುಸ್ಥನ ತಲಗುಂದ (ಶಿವಮೊಗ್ಗ ಜಿಲ್ಲೆಯಲ್ಲಿನ)ದಲ್ಲಿನ ಪರಮೇಶ್ವರ ದೇವಸ್ಥಾನದ ಮುಂಭಾಗದಲ್ಲಿನ ಕಂಬಗಳ ಮೇಲೆ ಕೊರೆದು ಬರೆಯಲಾದ ಪೂರ್ವಾಚಾರದ ವಿವರಗಳ ಮೇರೆಗೆ ಆತನ ಮುತ್ತಜ್ಜ ಮುಕ್ಕಣ್ಣ (ತ್ರಿಲೋಚನ ಕದಂಬ) ೧೨,೦೦೦ ಅಗ್ನಿಹೋತ್ರರಿಂದ ಶುದ್ಧೀಕರಿಸಲ್ಪಟ್ಟ ಬ್ರಾಹ್ಮಣರ ಕುಟುಂಬಗಳೆರಡನ್ನು ಬರಮಾಡಿಸಿದ (ಸದ್ಯದ ಹವೀಕ, ಕೋಟ, ಸಕಲೇಶಪುರ, ಶಿವಳ್ಳಿ ಬ್ರಾಹ್ಮಣರ ಪೂರ್ವಜರು); ಈ ಬ್ರಾಹ್ಮಣರು ಅಹಿಛತ್ರ (ರೋಹಿಲ್ ಖಂಡದಲ್ಲಿನ ಬರೇಲಿಯ ೨೦ ಮೈಲುಗಳ ದೂರಕ್ಕೆ, ಪಶ್ಚಿಮದಲ್ಲಿದ್ದ ಪ್ರಾಚೀನ ಪಾಂಚಾಲದ ರಾಜಧಾನಿ ರಾಮನಗರದೊಂದಿಗೆ ಗುರುತಿಸಲಾದ ಅಹಿಕ್ಷೇತ್ರ)ದ ನಿವಾಸಿಗಳು. ಇವರನ್ನು ಅಶ್ವಮೇಧ ಯಾಗದ ನಿರ್ವಹಣೆಗಾಗಿ (ಶಿವಮೊಗ್ಗ ಜಿಲ್ಲೆಯಲ್ಲಿ ಶಿಕಾರಿಪುರ ತಾಲೂಕಿನ ಬೆಳಗಾಮೆ) ಬೆಳ್ಳಿಗಾಮೆಯ ನೆರೆಯ ಸ್ಥಾನಗುಢದಲ್ಲಿನ ದೊಡ್ಡ ಅಗ್ರಹಾರದಲ್ಲಿ ನೆಲೆಗೊಳಿಸಿದ. ಪ್ರಾಯಶಃ ಅವರನ್ನು ೭೫೦ರ ಹೊತ್ತಿಗೆ ಮಯೂರವರ್ಮ ಬರಮಾಡಿದ್ದಿರಬೇಕು.

೭. ಎಂಟನೆಯ ಶತಮಾನದಲ್ಲಿ ಪಾಂಡ್ಯರ ದಂಡಾಧಿಕಾರಿಯೊಬ್ಬ ರಾಷ್ಟ್ರಕೂಟರ ಎರಡನೇ ಗೋವಿಂದನ ಸಾಮಂತರನ್ನು ಮಂಗಲಪುರದಲ್ಲಿ ಪ್ರಚಂಡ ಪರಾಭವಕ್ಕೊಳಗಾಗಿಸಿದ್ದ.

೮. ಬಾರ್ಕೂರು (ಬಾರಕನ್ಯಾಪುರ) ಪ್ರಾಚೀನ ನಗರವೊಂದಾಗಿದ್ದು ಅಲ್ಲಿನ ಖಾಸಗಿ ಮನೆ ಮತ್ತು ದೇವಸ್ಥಾನಗಳಲ್ಲಿನ ಶಿಲಾಸ್ತಂಭ, ಫಲಕಗಳಲ್ಲಿ ಅಸಂಖ್ಯ ಶಾಸನಗಳಿವೆ. ಅಲ್ಲಿನ ದೇವಾಲಯಗಳ ಭಿತ್ತಿಗಳಲ್ಲಿ ಕೊರೆಯಲಾದ ಶಿಲ್ಪ ಯೋಧರನ್ನು ಪ್ರತಿಬಿಂಬಿಸುತ್ತಿದ್ದು ಅವು ಗ್ರೀಕ್ ಯೋಧರನ್ನು ಹೋಲುತ್ತವೆ. ಬಾರ್ಕೂರಿನಲ್ಲಿ ಚೋಳರ ವಾಸ್ತವ್ಯದ ಸುಸ್ಪಷ್ಟ ಕುರುಹುಗಳಿವೆ. ಅಲ್ಲಿನ ಬೀದಿಯೊಂದು ಚೋಳಕೇರಿ (ಚೋಳರ ಬೀದಿ) ಎಂದಾಗಿ ಪರಿಚಿತವಾಗಿದೆ. ಅಲ್ಲಿ ದೊಡ್ಡ ಕೆರೆಯೊಂದಿದ್ದು ಅದು ನೀರಾವರಿಗಾಗಿ ಪೂರ್ವದ ಕರಾವಳಿಯಲ್ಲಿ ಬಳಸಲಾಗುತ್ತಿದ್ದ ಜಲಾಶಯವೊಂದರಂತೆ ಕಾಣಬರುತ್ತದೆ. ಕೆಲವೊಂದು ದೇವಸ್ಥಾನಗಳ ಆವಾರಕ್ಕೆ ಸುಣ್ಣ, ಕಾವಿನ ಪಟ್ಟೆ ಬಳಿಯಲಾಗಿತ್ತು; ಮಾಹೇಶ್ವರ ದೇವಸ್ಥಾನದಲ್ಲಿ ಕೆಂಡದ ಮೇಲಕ್ಕೆ ನಡೆಯುವ ವ್ರತಾಚರಣೆಯಿತ್ತು. ಮಲಯಾಳಂ ಭಾಷೆಯಲ್ಲಿ ಅದಕ್ಕೆ 'ವಕ್ಕನೂರು' ಎನ್ನಲಾಗುತ್ತಿದ್ದರೆ, ಪೋರ್ಚುಗೀಸ್ ಭಾಷೆಯಲ್ಲಿ 'ಬಕನೋರ್' ಎನ್ನಲಾಗುತ್ತಿತ್ತು. ಈ ಸ್ಥಾನ ಸೀತಾನದಿ ಮತ್ತು ಸುವರ್ಣ ನದಿಗಳಿಗೆ ಸಮಾನವಿದ್ದ ಅಳಿವೆಯ ದಡದಲ್ಲಿದ್ದಿರಬೇಕು. ಕಳೆದ ಶತಮಾನದಲ್ಲಿ ಬಾರ್ಕೂರನ್ನು ಸಂದರ್ಶಿಸಿದ್ದ ವೇಲ್‌ಹೌಸ್ ಈ ಸ್ಥಾನ ದೊಡ್ಡ ಪಟ್ಟಣವೊಂದಾಗಿದ್ದಿರಬೇಕೆಂದು ನುಡಿದಿರುತ್ತಾನೆ; ಕುಸಿದ ಕಲ್ಲಿನ ಗೋಡೆ ಇತ್ಯಾದಿಗಳು ನೂರೊಂದು ಎಕ್ರೆ ಭೂಭಾಗದಲ್ಲಿ ಹರಡಿಕೊಂಡಿದ್ದವೆಂದೂ, ಸ್ತಂಭಗಳ ಮೇಲಕ್ಕೆ ಪುರಾಣಗಳಲ್ಲಿನ ಕಾಳಗಗಳ ಚಿತ್ತಾಕರ್ಷಕ ದೃಶ್ಯಗಳನ್ನು ಕೊರೆಯಲಾಗಿತ್ತೆಂದೂ ನುಡಿದಿರುತ್ತಾನೆ. ಮೊದಲನೆಯ ವೆಂಕಟಪ್ಪ ನಾಯಕನ ಸುಲಿಗೆಯ ಬಳಿಕ ಅದು ತನ್ನ ಮಹತ್ತನ್ನು ಕಳೆದುಕೊಂಡಿತು.

೯. ಮೂಡಬಿದ್ರಿ, ಸುಂದರವಿದ್ದ ಪ್ರಖ್ಯಾತ ಚಂದ್ರನಾಥ ಮತ್ತು ಅನ್ಯ ಹದಿನೆಂಟು ಬಸ್ತಿಗಳೊಂದೊಡಗೂಡಿದೆ. ಬಸ್ತಿಯ ಸ್ತಂಭಗಳು ದೇವತೆಗಳ, ರಾಕ್ಷಸರ, ಎಲೆ, ಹೂಗಳ,

ಪರಸ್ಪರ ಹಣೆದುಕೊಂಡ ಬಳ್ಳಿಗಳ, ಅತೀ ನಾಜೂಕಾಗಿ ಕೊರೆದ, ದಂಗು ಬಡಿಸುವ ಶಿಲ್ಪದಿಂದ ಸಿಂಗರಿಸಲ್ಪಟ್ಟಿದ್ದವು. ಅಲ್ಲಿನ ಪ್ರತಿಯೊಂದು ಸ್ತಂಭ ಅನ್ಯ ಸ್ತಂಭದಂತಿರದಿದ್ದು ಚಿತ್ತಾಕರ್ಷಕವಿತ್ತು. ಬಸ್ತಿಗಳು ಮೂರು ಮಹಡಿಗಳಿಂದೊಡಗೂಡಿದ್ದು ಅವುಗಳ ಮಾಡುಗಳು ಚೀನೀ ಪದ್ಧತಿಯನ್ನು ಅನುಕರಿಸಿದಂತಿವೆ. ಮಾತ್ರ ಅತೀ ಮೇಲಣ ಮಾಡು ಬಳಪದ ಕಲ್ಲು ಹಾಸಿದಂತೆ ತಾಮ್ರದ ಹಾಳೆಗಳಿಂಚ್ಛಾದಿಸಲ್ಪಟ್ಟಿತ್ತು. (ಜೆ. ಶಿನ್ನೋಕ್, ಐ.ಸಿ.ಎಸ್., ೧೮೯೪ ಇವರು ಮಿ. ವೇಲ್‌ಹೌಸ್ ಬರೆದ 'ಮದ್ರಾಸ್ ಡಿಸ್ಟ್ರಿಕ್ಟ್ ಮ್ಯಾನ್ಯುವಲ್, ಸೌತ್ ಕೆನರಾ' ದಿಂದ ಆರಿಸಿದ ವರ್ಣನಾತ್ಮಕ ವಿವರಗಳು)

೧೦. ಕಾರ್ಕಳದ ಒಡೆಯ ಪಟ್ಟಿ ಪಣ್ಣುರ್ಚದ (ಶಿಮೊಗ್ಗ ಜಿಲ್ಲೆಯ ನಗರ ತಾಲೂಕಿನಲ್ಲಿನ ಹುಮ್ಚ) ಸಾಂತರ ಮನೆತನಕ್ಕೆ ಸೇರಿದಾತನಿದ್ದ. ಈ ರಾಜ್ಯ, ಜೈನರ ದೇವಿ ಪದ್ಮಾವತಿಯ ವಿಗ್ರಹದೊಂದಿಗೆ ಮಧುರೆ ಬಿಟ್ಟೋಡಿದ ಪಾಂಡ್ಯರ ಅರಸು ಜಿನದತ್ತನಿಂದ ಸ್ಥಾಪಿಸಲ್ಪಟ್ಟಿತ್ತೆನ್ನಲಾಗುತ್ತದೆ. ಆರನೆಯ ಶತಮಾನದಲ್ಲಿ ಪ್ರಾಬಲ್ಯಕ್ಕೆ ಬಂದ ಆತನ ವಂಶಜರು ಸದ್ಯ ತೀರ್ಥಹಳ್ಳಿಯೆಂದು ಪರಿಚಿತವಾಗಿರುವ ಸಂತಾಲಿಗವನ್ನಾಳಿದ್ದರು. ತಾವು ಆಳಿಕೊಂಡಿದ್ದ ರಾಜ್ಯದ ಮೇಲಣ ಪ್ರಭಾವವನ್ನುಳಿಸಿಕೊಳ್ಳಲಾಗಿ ಹಾನಗಲ್ಲಿನ ಕದಂಬರೊಂದಿಗೆ ನಡೆಸಿದ ಸೆಣಸಾಟ ವ್ಯರ್ಥವಿರುವುದನ್ನು ಕಂಡ ಅವರು (ಒಂಭತ್ತನೆಯ ಶತಮಾನದ ತನಕ) ದಕ್ಷಿಣದಲ್ಲಿನ ತುಳುವನಾಡಿನತ್ತ ಸರಿದರು. ೧೨೯೦ರಿಂದ ಅವರ ರಾಜ್ಯ ಕಳಸವೆಂದಾಗಿ ಕರೆಯಲ್ಪಡತೊಡಗಿತು. ಮುಂದೊಂದುದಿನ ಅವರು ತಮ್ಮ ರಾಜಧಾನಿಯನ್ನು ಕಾರ್ಕಳಕ್ಕೆ ಸ್ಥಳಾಂತರಿಸಿದರು. ಮತ್ತೆ ಅವರು ಕಾರ್ಕಳದ ಭೈರರಸರು ಅಥವಾ ಭೈರಸ ಒಡೆಯರ್ ಎಂದಾಗಿ ಕರೆಯಲ್ಪಡತೊಡಗಿದರು. ಅವರಿಗೆ 'ಅರಿರಾಯರ - ಗೆಂದರ ದಾವಣಿ', ಶತ್ರುಗಳ ಪಶುರಜ್ಜು) ಎಂಬ ಬಿರುದಿತ್ತು. ಕೆಲವೊಬ್ಬ ಅರಸರು 'ಪಾಂಡ್ಯ'ವನ್ನು ತಮ್ಮ ಹೆಸರಿನೊಂದಿಗೆ ಜೋಡಿಸಿಕೊಂಡರು. ಅವರು ಸೇನೆಯಲ್ಲಿ ತಮಿಳರ ಸೈನಿಕರೂ ಇದ್ದರು.

೧೪೩೨ರಲ್ಲಿ ವೀರಪಾಂಡ್ಯ ಭೈರರಸ ಕಾರ್ಕಳದಲ್ಲಿನ ಗುಡ್ಡೆಯ ಮೇಲಕ್ಕೆ ಬೃಹದಾಕಾರದ ಗುಮ್ಮಟನ (ಬಾಹುಬಲಿಯ) ವಿಗ್ರಹ ಸ್ಥಾಪಿಸಿದ. ವಿಗ್ರಹದ ಪ್ರತಿಷ್ಠಾಪನೆ ವಿಜಯನಗರದ ಎರಡನೆಯ ದೇವರಾಯನ ಉಪಸ್ಥಿತಿಯಲ್ಲಾಯಿತು. ೧೫೮೬ರಲ್ಲಿ ಇಮ್ಮಡಿ ಪಾಂಡ್ಯವೊಡೆಯರ್ ಅತಿಸುಂದರವಾದ ಚತುರ್ಮುಖ ಬಸ್ತಿಯನ್ನು ಕಟ್ಟಿಸಿದ. ಕಟ್ಟಡದ ರೂಪರೇಖೆ ತುಳುವ ನಾಡಿನಲ್ಲಿನ ಜೈನ ಬಸ್ತಿಗಳಂತಿರದೆ ಭಾರತದ ಅನ್ಯ ಪ್ರದೇಶಗಳಲ್ಲಿನ ಜೈನ ಮಂದಿರಗಳನ್ನು ಹೋಲುತ್ತಿತ್ತು. ಅವರ ರಾಜಧಾನಿಯಿದ್ದ ಕಾರ್ಕಳದ ಸಮೀಪದಲ್ಲಿದ್ದ ಹಳೆಯಂಗಡಿಯಲ್ಲಿ 'ಸ್ತಂಭ' ವೊಂದಿದ್ದು ಅದು ಆ ದಿನಗಳಲ್ಲಿನ ಸುಂದರ ಶಿಲ್ಪ ಕಲೆಯ ಮಾದರಿಯೊಂದಾಗಿದೆ. ಗೆರ್ಸೊಪ್ಪದ ರಾಣಿ ಭೈರಾದೇವಿ ಕಾರ್ಕಳದ ಒಡೆಯನೊಬ್ಬನ ಮಗಳು.

೧೧. ಅತಿ ವಿಶಾಲವಿದ್ದು, ವರ್ಷವಿಡೀ ಹಡಗುಗಳ ಯಾತಾಯಾತಕ್ಕೆ ಅನುಕೂಲವಿದ್ದ 'ಕಾರ್ವಾರ'ದ ಹೆಸರು ಕಡೆವಾಡಿ (ಕೊನೆಯ ಹಳ್ಳಿ) ನಾಮರೂಪದ ಅಭ್ರಂಶವಾಗಿದೆ. ಕಡೆವಾಡಿ ಸೋಂಡಾ ರಾಜ್ಯದ ಗಡಿಯಲ್ಲಿನ ಗ್ರಾಮವೊಂದು. ಕಾರ್ವಾರದಿಂದ ಮೂರು ಮೈಲು ದೂರದಲ್ಲಿ ಹರಿಯುವ ಕಾಳಿಂದಿ ನದಿಯ ಉತ್ತರ ತೀರದಲ್ಲಿ ಸದಾಶಿವ ಗಡವಿದ್ದು ಅದು ಅದರ ನಿರ್ಮಾತ ಸದಾಶಿವ ನಾಯಕನ ಹೆಸರುಕೊಂಡಿದೆ.

೧೨. ಕಾರ್ವಾರದಲ್ಲಿ ವ್ಯಾಪಾರದ ಮಳಿಗೆಕೊಂಡಿದ್ದ ಇಂಗ್ಲಿಷರಿಂದ ಶಿವಾಜಿ ೧೧೨ ಪೌಂಡ್‌ಗಳ

ದೇಣಿಗೆ ವಸೂಲಿ ಮಾಡಿದ್ದ ನಿಮಿತ್ತ ಆ ಮಳಿಗೆ ೧೬೬೪ರ ತನಕ ತಾತ್ಕಾಲಿಕವಾಗಿ ಮುಚ್ಚಲ್ಪಟ್ಟಿತ್ತು. ಗೋಕರ್ಣದಲ್ಲಿ ಆತ ಮಹಾಬಲೇಶ್ವರನ ದೇವಸ್ಥಾನವನ್ನು ಸಂದರ್ಶಿಸಿದ್ದ. ಈ ದೇವಸ್ಥಾನ ವಿಜಯ ನಗರದ ಅರಸರಿದ್ದ ಮೊದಲನೆಯ ಬುಕ್ಕ, ಕೃಷ್ಣದೇವರಾಯ ಮತ್ತು ಸದಾಶಿವರಾಯ ಇವರಿಂದ ದತ್ತಿಕೊಂಡಿತ್ತು. ದೇವಸ್ಥಾನ ಇಂದೋರಿನ ರಾಣಿ ಅಹಿಲ್ಯಾಬಾಯಿಯಿಂದ ಕಟ್ಟಿಸಲ್ಪಟ್ಟಿದ್ದು ಆಕೆ ಅದಕ್ಕೆ ಉಂಬಳಿಯಿತ್ತಿದ್ದಳು.

೧೩. ಈ ಕಾಲದಲ್ಲಿ ಗೋವಾದಿಂದ ಬಂದ, ಕೊಂಕಣಿ ನುಡಿಯುವ ಚಿತ್ಪಾವನ ಕುಟುಂಬಗಳು ಕಾರ್ಕಳದ ಸಮೀಪದಲ್ಲಿನ ದುರ್ಗಿ ಮತ್ತು ಬೆಳ್ತಂಗಡಿಯ ಸಮೀಪದ ನಾರಾವಿಯಲ್ಲಿ ನೆಲೆಸಿದವು. ಪಂಡಿತ ರಮಾಬಾಯಿ ದುರ್ಗಿಯಲ್ಲಿ ನೆಲಸಿದ್ದ ಕುಟುಂಬಗಳಲ್ಲಿನೊಂದಕ್ಕೆ ಸೇರಿದವಳಿದ್ದಳು.

೧೪. '೧೮೯೧ ರಲ್ಲಿ ಐದು ಮಂದಿ ತರುಣರು ಪ್ರಾರಂಭಿಸಿದ, ಮುಂದಿನ ಮೂರು ವರ್ಷಗಳೊಳಕ್ಕೆ ಮದ್ರಾಸ್ ವಿಶ್ವವಿದ್ಯಾಲಯದ ಮನ್ನಣೆಕೊಂಡ ಮತ್ತು ೧೮೯೪ರ ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಮೊದಲ ಮೂರು ಸ್ಥಾನಗಳನ್ನು ಗಳಿಸುತ್ತಲೇ ಇದು ಮಂಗಳೂರಿನಾದ್ಯಂತ ಜನಪ್ರಿಯವಾದ ಹೈಸ್ಕೂಲೊಂದೆಂದು ಪರಿಗಣಿಸಲ್ಪಟ್ಟಿತು. ಆ ಮೊದಲ್ಗೊಂಡು ಅದು ತನ್ನ ಉಚ್ಚ ಮಟ್ಟವನ್ನುಳಿಸಿಕೊಂಡಿದೆ'. (ಮದ್ರಾಸ್ ಡಿಸ್ಟ್ರಿಕ್ಟ್ ಗಝೆಟೀಯರ್ಸ್, ಸಪ್ಲಿಮೆಂಟ್ ಟು ದ ಟೂ ಡಿಸ್ಟ್ರಿಕ್ಟ್ ಮ್ಯಾನುವಲ್ಸ್ ಆಫ್ ಸೌತ್ ಕೆನರಾ ಡಿಸ್ಟ್ರಿಕ್ಟ್ ಪು. ೨೫೧) ಇದರ ಯಶಸ್ಸು ದಿವಂಗತ ಬಿ. ಪದ್ಮನಾಭ ಬಾಳಿಗ ಬಿ.ಎ., ಎಲ್.ಟಿ. (ಗೋತ್ರ ಕಾಶ್ಯಪ, ಕುಲದೇವತೆ ದಾಮೋದರ) ಇವರಿಗೆ ಸೇರಿದೆ. ಇದರ ಹಲವೊಬ್ಬ ಗಣಮಾನ್ಯ ಹಳೆ ವಿದ್ಯಾರ್ಥಿಗಳಲ್ಲಿನ ಇಬ್ಬರು ದಿವಂಗತ ಸರ್ ಬೆನೆಗಲ್ ನರಸಿಂಗರಾವ್, ಐ.ಸಿ.ಎಸ್. ಮತ್ತು ಅವರ ಸಹೋದರ ಸರ್ ಬೆನೆಗಲ್ ರಾಮರಾವ್, ಐ.ಸಿ.ಎಸ್. ಈ ಹೈಸ್ಕೂಲು ಅತಿದೊಡ್ಡ ಮತ್ತು ಶ್ರೇಷ್ಠ ಪ್ರಯೋಗ ಶಾಲೆಕೊಂಡಿದೆ; ಗ್ರಂಥ ಭಂಡಾರದಲ್ಲಿ ಸುಮಾರು ೨೦೦೦ ಪುಸ್ತಕಗಳಿವೆ. ವಿಶಾಲ ಸಭಾಗೃಹ ಕಾಶಿಮಠದ ಭುವನೇಂದ್ರ ತೀರ್ಥ ಸ್ವಾಮಿಗಳ ಹೆಸರುಕೊಂಡಿದ್ದು ಅದರೊಳಕ್ಕೆ ಕೆನರಾ ಬೇಂಕ್ ಲಿ., ಅರ್ಪಿಸಿದ ಎ. ಸುಬ್ಬರಾವ್ ಪೈ ಅವರ ಸಂಗಮವರಿಶಿಲೆಯ, ಎದೆಭಾಗದಷ್ಟರ ಪ್ರತಿಮೆಯಿದೆ. ಅವರ ಹುಟ್ಟು ದಿನವನ್ನು ಹಳೆ ವಿದ್ಯಾರ್ಥಿ ಸಂಘ ವಿಜೃಂಭಣೆಯಿಂದ ಆಚರಿಸುತ್ತದೆ.

೧೫. ಕೆನರಾ ಹಿಂದು ಪರ್ಮನೆಂಟ್ ಫಂಡ್‌ನ ಹೆಸರು ೧೯೧೦ರಲ್ಲಿ ಕೆನರಾ ಬೇಂಕ್ ಲಿ., ಎಂದಾಗಿ ಬದಲಾಯಿಸಲ್ಪಟ್ಟಿತು. ಈ ಸಂಸ್ಥೆಯ ಹೊರತಾಗಿ ವೈಷ್ಣವ ಸಾರಸ್ವತರು ಈ ಮುಂದಣ ಸಂಸ್ಥೆಗಳ ಒಡೆತನ ಅಥವಾ ನಿಯಂತ್ರಣ ಕೊಂಡಿದ್ದರು:

ಕೆನರಾ ಪಬ್ಲಿಕ್ ಕನ್ವೇಯನ್ಸ್ ಕಂಪನಿ ಲಿಮಿಟೆಡ್ (ಇದರ ಪೂರಕ ಸಂಸ್ಥೆಗಳಾದ ಕೆನರಾ ಸೇಲ್ಸ್ ಕಾರ್ಪೋರೇಶನ್ ಲಿಮಿಟೆಡ್, ದ ಕೆನರಾ ಮೋಟರ್ ಇನ್‌ಷುರನ್ಸ್ ಕಂಪನಿ ಲಿಮಿಟೆಡ್ ಮತ್ತು ಕೆನರಾ ಟಯರ್ ಎಂಡ್ ರಬ್ಬರ್ ವರ್ಕ್ಸ್ ಲಿಮಿಟೆಡ್ ಮತ್ತು ಕೆನರಾ ವರ್ಕ್‌ಶಾಪ್ಸ್ ಲಿಮಿಟೆಡ್, ಮಂಗಳೂರು)

೧೬. ಡಾಕ್ಟರ್ ತೋನ್ಸೆ ಮಾಧವ ಪೈಗಳ ಗೋತ್ರ ಭರಧ್ವಾಜ ಮತ್ತು ಅವರ ಕುಲದೇವತೆ

ಮ್ಯಾಳಸಾ. ೧೯೨೫ರಲ್ಲಿ ಮದ್ರಾಸ್ ವಿಶ್ವ ವಿದ್ಯಾಲಯದ ಎಂ.ಬಿ., ಬಿ.ಎಸ್. ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಉಡುಪಿಯಲ್ಲಿ ವೈದ್ಯಕೀಯ ವ್ಯವಸಾಯಕ್ಕೆತೊಡಗಿದರು. ೧೯೩೨ರಲ್ಲಿ ಅವರು ಕೆನರಾ ಲೇಂಡ್ ಇನ್ವೆಸ್ಟ್‌ಮೆಂಟ್ಸ್ ಲಿಮಿಟೆಡ್ ಸಂಸ್ಥೆ ಸ್ಥಾಪಿಸಿದರು. ಅದು ಈಗ ಕಾರ್ಖಾನೆ, ಮರದ ಮಿಲ್ಲು, ವ್ಯವಸಾಯದ ಜಮೀನು, ಅಕ್ಕಿಯ ಮಿಲ್ಲು ಇತ್ಯಾದಿಗಳನ್ನು ಕೊಂಡಿದೆ.

ಅಧ್ಯಾಯ ೧೦

ಕೇರಳದಲ್ಲಿ ಸಾರಸ್ವತರು

೧. ಮಲಬಾರ್

೧೬ನೆಯ ಶತಮಾನದಲ್ಲಿನ ವಲಸೆಯು ಎಷ್ಟೋಂದೋ ಕಾಲದ ಮೊದಲೇ ಕೋಝಿಕ್ಕೋಡ್‌ನಲ್ಲಿ ಸಾರಸ್ವತರ ವಾಸ್ತವ್ಯವಿತ್ತು.

೧೪೯೮ ' ರಲ್ಲಿ ವಾಸ್ಕೋಡಗಾಮಾ ಕೋಝಿಕ್ಕೋಡಿಗೆ ಬಂದಾಗ ಸಾರಸ್ವತರು ಅಲ್ಲಿದ್ದರು. ತಮ್ಮೊಂದಿಗಿನ ಕಚ್ಚಾಟದ ನಂತರ ಮೂರ್ ಜನರು (ಸ್ಥಾನೀಯ ಮುಸಲ್ಮಾನರು ಮತ್ತು ಅರಬರು) ವಾಸ್ಕೋಡಗಾಮನಿಗೆ ಮಸಾಲೆ ಖರೀದಿಸುವಲ್ಲಿ ಅಡೆತಡೆಗಳನ್ನೊಡ್ಡಿದರು. ಝಾಮೋರಿನ್ ಆತನ ಸಾಮಾನನ್ನು ಖರೀದಿಸಲು ಕೊಂಕಣಿಗ (ವೈಷ್ಣವ ಸಾರಸ್ವತ) ರನ್ನು ಕಳುಹಿಸಿದ. ಆತನ ಮಳಿಗೆಗಳ ² ರಕ್ಷಣೆಗೆ ನಾಯರರನ್ನು ಕಳುಹಿಸಿದ.

ಪೋರ್ಚುಗೀಸರ ಸತಾವಣೆ ಸಹಿಸಲಾರದೆ ಅತೀ ದೊಡ್ಡ ಸಂಖ್ಯೆಯಲ್ಲಿನ ಸಾರಸ್ವತರು ಕೋಝಿಕ್ಕೋಡಿಗೆ ಬಂದಾಗ ವ್ಯಾಪಾರದ ಮೇಲಕ್ಕೆ ಪೂರ್ಣಾಧಿಕಾರಕೊಂಡಿದ್ದ ಮೂರ್ ಜನರೂ ಹೊಸಬರಿದ್ದ ಇವರ ಪ್ರತಿ ಪ್ರತಿರೋಧ ತೋರತೊಡಗಿದರು. ಝಾಮೋರಿನ್‌ನ ಬೆಂಬಲಕೊಂಡಿದ್ದ ಇವರು ಅಲ್ಲಿ ವ್ಯಾಪಾರಕ್ಕೆ ಅವಕಾಶವಿರುವುದನ್ನು ಕಂಡು ಪಯ್ಯನೂರಿನಿಂದ ಕೋಝಿಕ್ಕೋಡ್ ತನಕದ ಕರಾವಳಿ ಭಾಗದಲ್ಲಿನ ಹಳ್ಳಿಗಳಲ್ಲಿ ಹರಡಿಕೊಂಡರು.

ತೆಲ್ಲಿಚೇರಿಯಲ್ಲಿ ಈಗ ಸುಮಾರು ೧೫೦ ಸಾರಸ್ವತರ ಕುಟುಂಬಗಳಿದ್ದು ಅವುಗಳಲ್ಲಿನ ಹೆಚ್ಚಿನವು ವ್ಯಾಪಾರದ ಉದ್ಯೋಗಕೊಂಡಿವೆ. ೧೯೫೬ರ ನವಂಬರ್ ತಿಂಗಳಲ್ಲಾದ ರಾಜ್ಯ ಪುನರ್ಘಟನೆಯ ಪರಿಣಾಮವಾಗಿ ಕೇರಳಕ್ಕೆ ವರ್ಗಾಯಿಸಲಾದ ಕಾಸರಗೋಡ್, ಕುಂಬ್ಳ, ಮಂಜೇಶ್ವರ ಮತ್ತು ಹೊಸದುರ್ಗಗಳಲ್ಲೂ ಸಾರಸ್ವತರ ಅನೇಕ ಕುಟುಂಬಗಳಿವೆ.

ಪ್ರಚಾರದಲ್ಲಿರುವ ನಂಬಿಕೆಯೊಂದರ ಮೇರೆಗೆ ಸಾರಸ್ವತರು ಕೊಚ್ಚಿಯ ಅರಸನಿಂದ ತಲೆಕಂದಾಯ ತೊಡೆದು ಹಾಕುವ ಆಶ್ವಾಸನೆ ಕೊಂಡ ಬಳಿಕವೇ ನೆಲಸಲಾಗಿ ಅಲ್ಲಿಗೆ ತೆರಳಿದರು. ಅಲ್ಲಿ ಅವರಿಗೆ ಯೋಗ್ಯ ನಿವೇಶ, ಉದ್ಯೋಗಕ್ಕೆ ಅನುಕೂಲವಾದ ವಾತಾವರಣ ಇತ್ಯಾದಿಗಳು ದೊರಕಿದವು.

ಪಶ್ಚಿಮ ಕರಾವಳಿಯಲ್ಲಿನ ಮುಸಲ್ಮಾನರ ವ್ಯಾಪಾರವನ್ನು ಪೋರ್ಚುಗೀಸರು ಪೂರ್ತಿ ನಾಶಗೊಳಿಸಿದಾಗ ಅದು ಕೊಂಕಣಿಗರ ಮತ್ತು ಪೋರ್ಚುಗೀಸರ ' ದಲಾಲರಾಗಿ ವ್ಯಾಪಾರ ಮಾಡತೊಡಗಿದ್ದ ವೈಷ್ಣವ ಸಾರಸ್ವತರ ಕೈಸೇರಿತು. ಖ್ಯಾತನಾಮ ಫ್ರೆಂಚ್ ಪ್ರವಾಸಿ ಫ್ರಾನ್ಸಿಸ್ ಪಿರಾಡ್ ದಿ ಲಾವಲ್ ೧೬೦೧ರ ಹೊತ್ತಿಗೆ ಕೋಝಿಕ್ಕೋಡ್‌ನ್ನು ಸಂದರ್ಶಿಸಿದ್ದಾಗ ಅವರು ಉತ್ತಮ ಸ್ಥಿತಿಯಲ್ಲಿದ್ದುದನ್ನು ಕಂಡಿದ್ದ.

ಕೊಚ್ಚಿನ್

೨. ಪೋರ್ಚುಗೀಸರು

ಪೋರ್ಚುಗೀಸರು ಭಾರತಕ್ಕೆ ಬರುವ ಹೊತ್ತಿಗೆ ತನ್ನ ನೌಕಾಬಲವನ್ನು ನಿರ್ವಹಿಸುತ್ತಿದ್ದ ಮೂರರ (ಅರಬಿ ನೆಲಸಿಗತ್ತು ಮಾಪಿಳ್ಳೆಗಳು) ಸಕ್ರಿಯ ನೆರವಿನಿಂದ ಮಲಬಾರಿನ ಸಣ್ಣ ದೊಡ್ಡ ಅರಸರು, ನಾಯಕರು ಮೇಲಕ್ಕೆ ನಿಯಂತ್ರಣವಿಟ್ಟಿದ್ದ ಝಾಮೋರಿನ್ ಅಧಿಕಾರಕ್ಷೇತ್ರ ವಿಸ್ತರಿಸಿ ಕೇರಳದ ಸಾರ್ವಭೌಮನಾಗುವ ದಾರಿಯಲ್ಲಿದ್ದ. ಕ್ರಂಗನೂರ್‌ನ ಮತ್ತು ಕೊಚ್ಚಿನ್‌ನ ರಾಜಾ ಇವರು ಝಾಮೋರಿನ್‌ನ ಸಾಮಂತರಿದ್ದರು. ಝಾಮೋರಿನ್‌ನ ಅಧಿಕಾರ ದಕ್ಷಿಣದಲ್ಲಿನ ಪುರಕ್ಕಾಡ್ ತನಕ ವ್ಯಾಪಿಸಿಕೊಂಡಿತ್ತು. ಪೋರ್ಚುಗೀಸರು ಕೊಚ್ಚಿನ್‌ಗೆ ಬರುತ್ತಲೇ ಅಲ್ಲಿನ ರಾಜಾನನ್ನು ಗದ್ದುಗೆಯಲ್ಲಿ ಕುಳ್ಳಿರಿಸಿದರು. ರಾಜಾ ಅವರೊಂದಿಗೆ ಸಂಧಿ ಮಾಡಿಕೊಂಡು ಸ್ವಾತಂತ್ರ್ಯ ಸಾರಿದ. ಇದು ಝಾಮೋರಿನ್ ಮತ್ತು ಪೋರ್ಚುಗೀಸ್, ಡಚ್ಚರ ಬೆಂಬಲ ನಂಬಿಕೊಂಡಿರಬೇಕಾಗಿದ್ದ ಕೊಚ್ಚಿನ್‌ನ ರಾಜಾನ ನಡುವಣ ಆ ಮುಂದಿನ ೨೫೦ ವರ್ಷಗಳ ಎಡಬಿಡದ ಕಾದಾಟಕ್ಕೆ ಕಾರಣವಾಯಿತು. ಅರೇಬಿಯಾ, ಇಜಿಪ್ತಗಳೊಂದಿಗಿನ ಮಲಬಾರಿನ ವ್ಯಾಪಾರ ವ್ಯವಹಾರಗಳನ್ನು ಪೋರ್ಚುಗೀಸರು ಯುರೋಪೀಯ ಮಾರುಕಟ್ಟೆಗೆ ಸ್ಥಳಾಂತರಿಸಿದರು. ಕರಿಮೆಣಸು, ಮಲಬಾರಿನ ಅನ್ಯ ಉತ್ಪನ್ನಗಳನ್ನು ನೇರವಾಗಿ ಯುರೋಪಿಗೆ ನಿರ್ಯಾತ ಮಾಡಲಾರಂಭಿಸಿದಂತೆ ಅವುಗಳ ಬೇಡಿಕೆ ವಿಶ್ವವ್ಯಾಪಿಯಾಯಿತು.

ಪೋರ್ಚುಗೀಸರು ಕಾಲಿಡುವ ಹೊತ್ತಿಗೆ ಬರೆಯ ಹಳ್ಳಿಯೊಂದಾಗಿದ್ದ ಕೊಚ್ಚಿನ್ ಸರ್ವಾಂಗೀಣ ಅಭಿವೃದ್ಧಿಗೊಂಡು, ಪಶ್ಚಿಮ ಕರಾವಳಿಯಲ್ಲಿನ ಗೋವಾದ ನಂತರದ ಪ್ರಮುಖ ವ್ಯಾಪಾರ ಕೇಂದ್ರವೊಂದೆನಿಸಿಕೊಂಡಿತು. ೧೫೦೩ರ ಮಾರ್ಚ್ ತಿಂಗಳಲ್ಲಿ ಝಾಮೋರಿನ್ ಕೊಚ್ಚಿನ್ ಮೇಲಕ್ಕೆ ದಂಡೆತ್ತಿ ಹೋಗಿ ಅಲ್ಲಿನ ಸೇನೆಯನ್ನು ಸೋಲಿಸಿದ. ೧೫೦೩ರ ಸಪ್ಟೆಂಬರ್ ತಿಂಗಳಲ್ಲಿ ಬಂದ ಫ್ರಾನ್ಸಿಸ್ ದಿ ಆಲ್ಬುಕೆರ್ಕ್‌ನ ನೇತೃತ್ವದಲ್ಲಿನ ಪೋರ್ಚುಗೀಸ್ ಹಡಗುಗಳ ಪಡೆ ಝಾಮೋರಿನ್‌ನನ್ನು ಒದ್ದೋಡಿಸಲು ರಾಜಾ ಗೋದಾವರ್ಮನಿಗೆ ಸಹಾಯ ಮಾಡಿತು. ಕೃತಜ್ಞನಿದ್ದ ರಾಜಾ ಪೋರ್ಚುಗೀಸರಿಗೆ ಕೊಚ್ಚಿನ್‌ನಲ್ಲಿ ಕೋಟೆಯೊಂದರ ನಿರ್ಮಾಣಕ್ಕೆ ಅನುಮತಿಯಿತ್ತ. ಕೋಟೆಗೆ ಆ ದಿನಗಳಲ್ಲಿ ರಾಜ್ಯವಾಳುತ್ತಿದ್ದ ಪೋರ್ಚುಗೀಸ್ ಅರಸು ಮಾನುಎಲ್‌ನ ಹೆಸರನ್ನೀಯಲಾಯಿತು. ಅದು ಭಾರತದಲ್ಲಿ ಕಟ್ಟಲ್ಪಟ್ಟ ಯುರೋಪೀಯರ ಮೊತ್ತ ಮೊದಲ ಕೋಟೆಯಾಗಿತ್ತು.

೩. ಸಾರಸ್ವತರ ಆಗಮನ

ಕೌಟುಂಬಿಕ ಸಂಬಂಧ, ವ್ಯಾಪಾರೋದ್ಯಮಗಳಿಗೆ ಬೇಕಿದ್ದ ಅವಕಾಶ ಮತ್ತು ಭಂಡವಾಳ ಇವನ್ನಾಧರಿಸಿ ಕೊಚ್ಚಿನ್‌ಗೆ ವಲಸೆ ಹೋದ ಸುಮಾರು ೩೬೦ ಕುಟುಂಬಗಳು ಗೋವಾದ ಸಾರಸ್ವತ ಸಮಾಜದಿಂದ ಆಯ್ದಂತಹವಾಗಿದ್ದವು. ಕೋಝಿಕ್ಕೋಡ್‌ನಲ್ಲಿದ್ದಂತೆ ಕೊಚ್ಚಿನ್‌ನಲ್ಲೂ ಕೆಲವೊಂದು ಸಾರಸ್ವತ ವ್ಯಾಪಾರಿಗಳ ಕುಟುಂಬಗಳಿದ್ದಿರಬೇಕು. ಕೊಚ್ಚಿನ್ ಮತ್ತು ಕೋಝಿಕ್ಕೋಡ್‌ಗಳೆಡೆಯಲ್ಲಿನ ಅವರ

ಆಗಮನದ ವಿವರಗಳನ್ನು ಕೊಚ್ಚಿನ್‌ನಲ್ಲಿನ ತಿರುಮಲ ದೇವಸ್ಥಾನದ ದಾಖಲೆಗಾಗಿ ೧೬೫೪ರಲ್ಲಿ ಕಾಶಿ ಮಠದ ಗುರುಗಳು ತಯಾರಿಸಿದ ನಿಯಮಾವಳಿ ಪತ್ರಿಕೆಯಲ್ಲಿ ನಮೂದಿಸಲಾಗಿದೆ. ಕ್ರಮೇಣ ಈ ಕುಟುಂಬಗಳು ಎರ್ನಾಕುಲಂ, ತ್ರಿಪುಣ್ಣಿತ್ತುರ, ಥುರವೂರ್, ಅಲ್ಲೆಪ್ಪಿ ಮುಂತಾದ ಹದಿನಾರು ವಸಾಹತು (ಗ್ರಾಮಂ ಎಂದಾಗಿ ಪರಿಚಿತವಾದ) ಗಳಲ್ಲಿ ಹರಡಿಕೊಂಡವು; ಮತ್ತೆ 'ಕೊಂಕಣಾರು' ಮತ್ತು 'ಮಹಾಜನಂ' ಹೆಸರಿನ ಸಮಾಜಗಳನ್ನು ರಚಿಸಿದವು.

ಗೋವಾ ಬಿಟ್ಟು ತಮ್ಮ ಕುಟುಂಬೀಯರೊಂದಿಗೆ ಕೇರಳಕ್ಕೆ ವಲಸೆ ಹೋದವರಲ್ಲಿ ನಾಮವಂತ ವ್ಯಾಪಾರಿ ದೇವರಾಯ ಕಾಮತಿಯ ಸಂಸಾರವೂ ಒಂದಾಗಿತ್ತು. ಗೋವಾ ಬಿಟ್ಟು ಹೋಗುವಾಗ ದೇವರಾಯ ಕಾಮತಿ ಚಿನ್ನದ ನಾಣ್ಯಗಳಿಂದ ತುಂಬಿದ್ದ ಗೋಣಿಗಳನ್ನೂ ಕೊಂಡು ಹೋಗಿದ್ದ. ಅವುಗಳ ಸಾಗಾಣಿಕೆಗೆ ಸುಮಾರು ಇನ್ನೂರು ಮಂದಿ ಬೇಕಾದರು. ಕೊಚ್ಚಿನ್ ಸೇರುತ್ತಲೇ ಆತ ಆಗಿನ ಅರಸು ಅಂದಿ ಕಡವನಿಂದ ಮಟ್ಟಾಂಚೇರಿಯ ದಕ್ಷಿಣಕ್ಕೆ ಎಂಟು ಮೈಲುಗಳ ದೂರದಲ್ಲಿನ, ಆಗ ಕಾಡೊಂದಾಗಿದ್ದ ಭೂಮಿಯನ್ನು ಬೆಲೆಕೊಟ್ಟು ಕೊಂಡ. ಮತ್ತೆ ಅಪಾರ ಧನವ್ಯಯಿಸಿ ಅದನ್ನು ಅತಿ ಸುಂದರವಾದ ನಗರವೊಂದಾಗಿ ಪರಿವರ್ತಿಸಿದ. ಜನರು ಆತನನ್ನು 'ಚೆರಿಯ ಆನಂದಪುರತ್ತಿ ಕಾಮತಿ' ಎಂದಾಗಿ ಕರೆಯಲಾರಂಭಿಸಿದರು. ಕೊಚ್ಚಿನ್‌ನ ರಾಜಾ ಆತನಿಗೆ, ಸರ್ವ ಸಾಮಾನ್ಯವಾಗಿ ಮೂರನೆಯ ರಾಜಕುಮಾರನಿಗೀಯುವ ಸ್ಥಾನ, ಮಾನಗಳನ್ನಿತ್ತು ಗೌರವಿಸಿದ. ಇಂದಿಗೂ 'ಅನ್ನಕಿಲಿ' (ಮಯೂರಾಕೃತಿಗಳ ಪ್ರದರ್ಶನ) ಉತ್ಸವದಂದು ಆತನ ಕುಟುಂಬದ ಸದಸ್ಯನೊಬ್ಬನನ್ನು ರೇಶ್ಮೆಯ ಛತ್ರ 'ಕುಟ್ಟು ವಿಳಕ್ಕು' ಮತ್ತು ಇನ್ನಿತರ ರಾಜೋಚಿತ ಲಾಂಛನಗಳೊಂದಿಗೆ ಕರೆದೊಯ್ಯುತ್ತಾರೆ.

ಕೊಚ್ಚಿನ್‌ನ ರಾಜಾನ ಸಾಮಂತನಿದ್ದ ಪಾರೂರ್‌ನ ಬ್ರಾಹ್ಮಣನಿಗೆ ಸಂಬಂಧಿಸಿದ್ದ ಬಾರಂಪಳ್ಳಿಯನ್ನು ಬೆಲೆಯಿತ್ತು ಖರೀದಿಸಿದ ಪೈ ಇನ್ನೊಬ್ಬಾತನಿದ್ದ.

ವ್ಯಾಪಾರದಲ್ಲಿ ಕ್ರಮೇಣ ಅಭಿವೃದ್ಧಿಯಾಯಿತು. ಅವರಲ್ಲಿನ ಕೆಲವರು ಮಾರುಕಟ್ಟೆಯ ಏಕಾಧಿಕಾರಕೊಂಡು ಪೋರ್ಚುಗೀಸರೊಂದಿಗಿನ ವ್ಯಾಪಾರವನ್ನು ಪೂರ್ಣ ನಿಯಂತ್ರಣದಲ್ಲಿಟ್ಟುಕೊಂಡರು. ಉಳಿದವರು ಜಾನುವಾರಗಳ ಹೊರತಾಗಿ ಅನ್ಯ ಸರಕುಗಳ ಚಿಲ್ಲರೆ ವ್ಯಾಪಾರಿಗಳಾಗಿದ್ದರು. ಕೊಚ್ಚಿನ್‌ನ ಅಭಿವೃದ್ಧಿಗೆ ಧಾರಾಳ ನೆರವು ದೊರಕಿದ ನಿಮಿತ್ತ ಅದು ಪಶ್ಚಿಮ ಕರಾವಳಿಯಲ್ಲಿನ,ಗೋವಾದ ನಂತರದ ಶ್ರೀಮಂತ ನಗರವೊಂದಾಗಿ ಬೆಳೆದುಕೊಂಡಿತು.

೧೬೪೮ರಲ್ಲಿ ಆಗಿನ ರಾಜಾ, ವೀರ ಕೇರಳ ವರ್ಮ (೧೬೪೬-೧೬೫೦) ಅವರಿಗೆ 'ತಿರುಮಲ ದೇವಸ್ವೋಮ್ ಸಂಕೇತಂ' ಎಂಬ ಅತಿ ವಿಶಾಲ ಭೂಭಾಗವನ್ನು ದಾನವಾಗಿತ್ತ. ಮತ್ತು ತಮ್ಮ ಸಮಾಜದ ಸಮಸ್ಯೆಗಳ ಪರಿಹಾರಕ್ಕಾಗಿ ಅಧಿಕಾರಿಯೊಬ್ಬನನ್ನು ಆರಿಸುವ ಅನುಮತಿಯೊಂದಿಗೆ ವಿವಾದಗಳನ್ನು ತೀರ್ಮಾನಿಸುವ ಹಕ್ಕನ್ನೂ ಇತ್ತ. ಅಪರಾಧಿಗೆ ಮರಣದಂಡನೆಯನ್ನೀಯುವ ಅಥವಾ ಆತನ ಅಪರಾಧ ಕ್ಷಮಿಸುವ ಹಕ್ಕನ್ನು ಮಾತ್ರ ಅರಸು ತನ್ನಲ್ಲುಳಿಸಿಕೊಂಡ. ತೀರಿಕೊಂಡವರ ಸಂಪತ್ತಿಗೆ ವಾರಸುದಾರರು ಇಲ್ಲದಾಗ ಅದರ

ಅರ್ಧಪಾಲನ್ನು ಸರಕಾರಕ್ಕೂ ಇನ್ನುಳಿದ ಅರ್ಧಪಾಲನ್ನು ಅವರ ದೇವಸ್ಥಾನಕ್ಕೂ ಸೇರಿಸಬೇಕಾಗಿರುವುದನ್ನು ಸಾರಿದ. ರಾಜ್ಯದ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡುತ್ತಿದ್ದ ಪೋರ್ಚುಗೀಸರೊಂದಿಗೆ ನಿರಂತರ ನಡೆಯುತ್ತಿದ್ದ ತಿಕ್ಕಾಟಗಳೆಡೆಯಲ್ಲಿ ಅವರ ಸಹಕಾರ ಸಹಾನುಭೂತಿ ಗಳಿಸಲಾಗಿ ರಾಜಾ ಈ ಸವಲತ್ತುಗಳನ್ನು ಅವರಿಗಿತ್ತಿರಬೇಕು.

ರಾಜಾ ಬಯಸಿದಾಗಲೆಲ್ಲಾ ಅವರು ಸಾಕಷ್ಟು ಹಣ ಕೊಟ್ಟಿರಬೇಕು. ರಾಜಾರಲ್ಲಿನ ಒಬ್ಬಾತ ಅವರಿಗೆ ಬ್ರಾಹ್ಮಣರಿಗೀಯುವ ಗೌರವಗಳನ್ನೀಯಬೇಕೆಂದು ಸಾರಿದ. " ರಾಜಾರ ಕುಟುಂಬದಲ್ಲಿನ 'ತಿರುತ್ತಾಳಿ ಥರ್ತ' (ಅರಮನೆಯಲ್ಲಿನ ವಿವಾಹ) ದ ಸಮಯ ಸುಮಾರು ಐದು ತೊಲೆಗಳಷ್ಟರ ಬಂಗಾರದ ಬಳೆಯುನ್ನು ಕೊಚ್ಚಿನ್‌ನ ಮಹಾಜನರು ತಿರುಮಲ ದೇವಳದ ಮೂಲಕ ಅರ್ಪಿಸಬೇಕಾಗುವ ಪದ್ಧತಿ ಇಂದಿಗೂ ನಡೆದು ಬಂದಿದೆ.

೪. ಕೇರಳದಲ್ಲಿನ ಪೋರ್ಚುಗೀಸರ ಅಧಿಕಾರದ ಸಮಾಪ್ತಿ

ಮಲಬಾರಿನಲ್ಲಿನ ಪೋರ್ಚುಗೀಸರ ಪ್ರಭಾವ ಹದಿನಾರನೆಯ ಶತಮಾನದ ಮುಕ್ತಾಯದ ಮುನ್ನವೇ ಕುಂದತೊಡಗಿತ್ತು.

೧೬೫೬-೧೬೫೮ರ ನಡುವೆ ಡಚ್ಚರು ಸಿಲೋನಿನಲ್ಲಿದ್ದ ಪೋರ್ಚುಗೀಸರ ಸೊತ್ತು ಸಂಪತ್ತುಗಳನ್ನು ವಶಪಡಿಸಿಕೊಂಡರು. ೧೬೫೦ರಲ್ಲಿ ವೀರಯಿರವರ್ಮ ತೀರಿಕೊಂಡಾಗ ಆತನ ಉತ್ತರಾಧಿಕಾರಿಯ ಕುರಿತಾದ ವಾದದಲ್ಲಿ ಪೋರ್ಚುಗೀಸರು ಹಸ್ತಕ್ಷೇಪ ಮಾಡಿದರು. ೧೬೫೮ರಲ್ಲಿ ಅವರು ತಮ್ಮ ಮಿತ್ರರಿದ್ದ ವೆಟ್ಟಾಳ ನಾಯಕರ ಕುಟುಂಬದ ವ್ಯಕ್ತಿಯೊಬ್ಬನನ್ನು ದತ್ತಕ್ಕೆ ಕೊಳ್ಳುವಂತೆ ಮಾಡಿ ಉತ್ತರಾಧಿಕಾರಿಯ ರೂಪದಲ್ಲಿ ಸಿದ್ಧಗೊಳಿಸಿದರು.

ನೊಂದುಕೊಂಡ ರಾಜಮನೆತನ ತಲತಲಾಂತರಗಳ ಶತ್ರು ಝಾಮೋರಿನ್‌ನ ನೆರವನ್ನು ಬಯಸಿತು. ಆತನ ಹಸ್ತಕ್ಷೇಪ ಎರಡೊಂದು ವರ್ಷಗಳ (೧೬೬೦-೧೬೬೧) ಅಂತರ್ಯುದ್ಧಕ್ಕೆ ಕಾರಣವಾಗಿ ಪರಿಣಾಮ ಅನಿರ್ಣಾಯಕವಾಗುಳಿಯಿತು. ಪಾಲಿಯಮ್‌ನ ನಾಯಕ ಕೋಮಿ ಅಚ್ಚನ್‌ನ ಸಲಹೆಯ ಮೇರೆಗೆ, ನ್ಯಾಯವಾಗಿ ಉತ್ತರಾಧಿಕಾರಿಯಾಗ ಬೇಕಿದ್ದ ವೀರಕೇರಳವರ್ಮ, ಅಚ್ಚನ್‌ನ ಸಮೇತ ಕೊಲಂಬೋಕ್ಕೆ ಹೋಗಿ ಅಲ್ಲಿದ್ದ ಡಚ್ ಗವರ್ನರ್ ಜನರಲ್‌ನ ಸಹಾಯ ಬೇಡಿದ.

ಸುಮಾರು ಒಂದೂವರೆ ಶತಮಾನಗಳ ಕಾಲ ರಾಜ್ಯದ ಮೇಲಕ್ಕೆ ಪ್ರಭಾವ ಬೀರಿದ್ದ ಪಾಲಿಯಮ್ ಅಚ್ಚನ್ ಮೂಲತಃ ಚನ್ನಮಂಡಲಮ್‌ನ ತುಂಡರಸರಾಗಿದ್ದ. ಕ್ಷತ್ರಿಯ ನಾಯಕ ವಿಲ್ಲಾರ್ ವಟ್ಟೆಯ ಮನೆತನ ಉತ್ತರಾಧಿಕಾರಿಯ ಅಭಾವದ ನಿಮಿತ್ತ ಅಳಿಯುವ ಭೀತಿ ಇತ್ತು. ೧೫೫೫ರಲ್ಲಿ ಕೊಚ್ಚಿನ್‌ನ ರಾಜಾನ ಅನುಮತಿಯಿಲ್ಲದೆ ಆತ ಪಾಲಿಯಮ್‌ನ ನಾಯಕ ಕೋಮಿ ಅಚ್ಚನ್‌ನನ್ನು ಉತ್ತರಾಧಿಕಾರಿಯೆಂದು ಸ್ವೀಕರಿಸಿದ. (ಮರುಮಕ್ಕತ್ತಯಮ್ ಪದ್ಧತಿಯ ಮೇರೆಗೆ ಸಾಮಾನ್ಯರ ಮತ್ತು ಆಳುವವರ ದಾಯಭಾಗ ಹೆಣ್ಣು ಮಕ್ಕಳ ಸಂತಾನಕ್ಕೆಹೋಗುತ್ತದೆ)

೧೬೬೨ರಲ್ಲಿ ರಿಕ್ಲೋಫ್ ವಾನ್ ಗೋಯೆನ್ಸ್ ಡಚ್ಚ್ ಹಡಗುಗಳ ಪಡೆಯೊಂದಿಗೆ ಕೊಚ್ಚಿನ್‌ಗೆ ಬಂದು ಅಲ್ಲಿನ ವೈಪಿನ್ ದ್ವೀಪವನ್ನು ವಶಪಡಿಸಿಕೊಂಡ. ವೀರಕೇರಳ

ವರ್ಮನೊಂದಿಗೆ ಬಂದ ರಘಾವೋರಿನ್ ಅವರಿಗೆ ಸಹಾಯ ಮಾಡಿದ. ಅಲ್ಲಿ ಭೀಕರ ಯುದ್ಧವಾಯಿತು. ಡಚ್ಚರು ಮೂರು ವಾರಗಳ ಕಾಲ ಪೋರ್ಚುಗೀಸರ ಕೋಟೆಗೆ ಮುತ್ತಿಗೆ ಹಾಕಿದರು. ಈ ನಡುವೆ ಪೋರ್ಚುಗೀಸರಿಗೆ ಯುದ್ಧ ನೌಕೆಗಳ ದೊಡ್ಡ ಪ್ರಮಾಣದ ನೆರವೂ ದೊರಕಿದ ನಿಮಿತ್ತ ವಾನ್ ಗೋಯೆನ್ಸ್ ೧೬೬೨ರ ಮಾರ್ಚ್ ತಿಂಗಳಲ್ಲಿ ಹಿಮ್ಮೆಟ್ಟಿದ. ಡಚ್ಚರು ಹಿಂದಿರುಗುತ್ತಲೇ ಸಾರಸ್ವತರು, ಸ್ಥಾನೀಯ ಯಹೂದಿಗಳು ಅವರಿಗೆ ನೆರವಿತ್ತಿದ್ದರೆಂದು ಭಾವಿಸಿದ ಪೋರ್ಚುಗೀಸರು ಅವರ ಮನೆಗಳನ್ನು ಸುಲಿದರು; ಸಾರಸ್ವತರ ಅಂಗಡಿ, ದೇವಸ್ಥಾನಗಳನ್ನು ದೋಚಿದರು.

೧೬೬೨ರ ಅಕ್ಟೋಬರ್ ತಿಂಗಳಲ್ಲಿ ಜನರಲ್ ಜೇಕಬ್ ಹುಸ್ತಾರ್ತ್‌ನ ನೇತೃತ್ವದಲ್ಲಿನ ಡಚ್ಚರ ಹಡಗುಗಳ ಪಡೆ ಕೊಚ್ಚಿನ್‌ನ ಹೊರಭಾಗದಲ್ಲಿ ಕಾಣಬಂತು. ಹಾಗೆಯೇ ಬೆಂಬಲದ ನೆರವೂ ಬಂದು ಸೇರಿತು. ಅವರು ಪೋರ್ಚುಗೀಸರ ಕೋಟೆಯ ಸರಬರಾಯಿಗೆ ತಡೆವೊಡ್ಡಿದರು; ಮತ್ತೆ ೧೬೬೩ರ ಜನವರಿ ತಿಂಗಳ ೬ರಂದು ದಾಳಿಯಿಕ್ಕಿ ದೇಶದ ನಿರ್ವಿವಾದಿತ ಒಡೆಯರೆಂದೆನಿಸಿಕೊಂಡರು. ಡಚ್ ಮತ್ತು ಪೋರ್ಚುಗೀಸರ ನಡುವಣ ಜನವರಿ ೭ರ ಸಂಧಿಯ ಅಧಿನಿಯಮ ೭ರ ಮೇರೆಗೆ ಮಿಶ್ರ ಜಾತಿಯ ಎಲ್ಲೊಬ್ಬರ ಮತ್ತು ಕೊಂಕಣಿಗರ ಹೊಣೆಗಾರಿಕೆಯನ್ನು ಡಚ್ ಕಮಾಂಡರನಿಗೀಯಲಾಯಿತು. ಭಾರತದಲ್ಲಿನ ಪೋರ್ಚುಗೀಸರ ಆಳ್ವಿಕೆ, ಅದರಲ್ಲೂ ಪ್ರಾಮುಖ್ಯವಾಗಿ ಕೇರಳದಲ್ಲಿನ ಒಂದೂವರೆ ಶತಮಾನಗಳ ಆಡಳಿತೆ, ಕ್ರೌರ್ಯ, ದೌರ್ಜನ್ಯಗಳ, ಸೂರೆ, ಸುಲಿಗೆಗಳದ್ದಿತ್ತು. ಭಾರತೀಯ ಸಂಸ್ಕೃತಿಯ ಬೆಳವಣಿಗೆಗೆ ಪೋರ್ಚುಗೀಸರ ಕೊಡುಗೆ ಶೂನ್ಯವಿತ್ತು !

೫. ಡಚ್ಚರು

ಕೊಚ್ಚಿನ್‌ನಲ್ಲಿ ವಾಸ್ತವ್ಯಕ್ಕಿದ್ದ ಡಚ್ ಕಮಾಂಡರ್ ಮಲಬಾರಿನ ಕರಾವಳಿಯುದ್ದಕ್ಕಿದ್ದ ಅವರ ವಸಾಹತುಗಳನ್ನು ಮತ್ತು ಕೆನರಾ, ವೆಂಗುರ್ಲಾಗಳನ್ನು ಕೊಚ್ಚಿಯಲ್ಲಿನ ಸಮಿತಿಯೊಂದರ ಮೂಲಕ ಆಳಿದ. ಸ್ಥಾನ ಗವರ್ನರ್‌ನ ಪದವಿಗಿಂತ ಕೆಳಮಟ್ಟದ್ದಿದ್ದರೂ, ಆತ ಮಾತ್ರ ಉನ್ನತ ಪದವಿಯ ಸಂಪೂರ್ಣ ಅಧಿಕಾರ ಹೊಂದಿದ್ದ. ಹಾಗಿದ್ದೂ ಆತ ಗೋವಾ ಸರಕಾರದ ಸಾಮಾನ್ಯ ಅಧಿಕಾರಿಯೊಬ್ಬನಾಗಿದ್ದ. ಈ ನಡುವೆ ಹಕ್ಕುದಾರ ತೀರಿಕೊಂಡಿದ್ದ ನಿಮಿತ್ತ ಆತ್ಮ ರಕ್ಷಣೆಗಾಗಿ ಗುಪ್ತಗಾಡುಗಳಲ್ಲಿ ಅಲೆದಾಡುತ್ತಿದ್ದ, ಸಮಾನ ನಾಮಧಾರಿ ಉತ್ತರಾಧಿಕಾರಿ, ವೀರಕೇರಳ ವರ್ಮನನ್ನು ತಂದು (೧೬೬೩-೧೬೮೭) ೧೬೬೩ರ ಮಾರ್ಚ್ ತಿಂಗಳ ೧೮ರಂದು ಕೊಚ್ಚಿನ್‌ನ ಅರಸನೆಂದು ಘೋಷಿಸಲಾಯಿತು. ಅಂದು ವಾನ್‌ಗೋಯೆನ್ಸ್ ಸಿಂಹಾಸನಾರೂಢನಾಗಿದ್ದ. ಆತ ಡಚ್ ಇಂಡಿಯಾ ಕಂಪನಿಯ ಚಿಹ್ನೆ ಕೊಂಡ ಕಿರೀಟವನ್ನು ರಾಜನ ತಲೆಯ ಮೇಲಿಕ್ಕೆ ಇಟ್ಟ. ಇದನ್ನು ಕಂಡ ಜನರು ಡಚ್ಚರು ರಾಜನನ್ನು ಕೈಗೊಂಬೆಯಂತೆ ಬಳಸುತ್ತಿರುವರೆಂದು ಭಾವಿಸಿ ಉದ್ರಿಕ್ತರಾದರು. ಬಂದರುಗಳಲ್ಲಿನ ಆಯಾತ ನಿರ್ಯಾತಗಳ ಮೇಲಣ ಸುಂಕದ ಸಂಗ್ರಹದ ಕುರಿತಾಗಿ ಅಂತ್ಯವಿಲ್ಲದ ಅಡೆತಡೆಗಳು ತಲೆಯೆತ್ತಿಕೊಂಡವು. ಆ ವೇಳೆಯ ಕಮಾಂಡರ್ ಮಾರ್ಟಿನ್ ಹಿಸ್ಮೇನ್ ೧೬೮೧ರಲ್ಲಿ ರಾಜನನ್ನು ಹೊಸ ಕರಾರಿಗೆ ಒಪ್ಪುವಂತೆ ಒತ್ತರಿಸಿದ. ಇದಕ್ಕನುಗುಣವಾಗಿ ಡಚ್ಚರ ಅಧಿಕಾರಿಯೊಬ್ಬನನ್ನು ಮಂತ್ರಿಯಾಗಿ ಮತ್ತು ಕನ್ನಡವನ್ನಾಡುವ

ಪೆರಿಂಬಲ ಶೆಣ್ಯೆಯನ್ನು ಕೋಶಾಧಿಕಾರಿಯಾಗಿ ನೇಮಿಸಲಾಯಿತು. ಹಾಗೂ ಮುಖ್ಯ ಮಂತ್ರಿಯಾಗಿ ನೇಮಿಸಲ್ಪಟ್ಟಿದ್ದ ಪಾಲಿಯಮ್‌ನ ನಾಯಕ ಕೋಮಿ ಅಚ್ಚನ್, ಡಚ್ ಅಧಿಕಾರಿಗಳ ಸಲಹೆಯ ಮೇರೆಗೆ ಕಾರ್ಯಭಾರ ನಡೆಸಬೇಕೆಂದು ಹೇಳಲಾಯಿತು. ಕೋಶಾಧಿಕಾರಿಗೆ 'ಕೆನರಿನ್ಸ್' ಬಜಾರಿನಲ್ಲಿ ಉಳಿದುಕೊಳ್ಳಬೇಕಾಯಿತು. ಆತ ಸಂಗ್ರಹಿಸಲ್ಪಟ್ಟ ಹಣಕಾಸಿನ ಲೆಕ್ಕವಿಡಬೇಕಾಗಿತ್ತು. ೧೬೬೩ರ ಮಾರ್ಚ್ ತಿಂಗಳ ೨೨ರಂದು ವೀರಕೇರಳವರ್ಮ ಕ್ರಿಸ್ತೀಯರು ಮತ್ತು ಶ್ವೇತವರ್ಣೀಯ ಯಹೂದಿಗಳಿಗೆ ಸಂಬಂಧಿಸಿದ ಮೂಲಾಧಿಕಾರಿಗಳ ನ್ಯಾಯಕ್ಷೇತ್ರವನ್ನು ಮತ್ತು ಕೊಂಕಣಿಗರ ಅಪೀಲಿನ ನಿರ್ವಹಣೆಯ ಹೊಣೆಗಾರಿಕೆಯನ್ನು ಡಚ್ಚರಿಗೆ ಬಿಟ್ಟುಕೊಟ್ಟ. ತಾನು ಕೇವಲ ದೇವಸ್ಥಾನಗಳ ಮೇಲಣ ಅಧಿಕಾರವನ್ನಷ್ಟೇ ಉಳಿಸಿಕೊಂಡ. ಮತ್ತೆ ಡಚ್ಚರೊಂದಿಗೆ ವ್ಯಾಪಾರ ಮಾಡುವ ಅನ್ಯ ವ್ಯಾಪಾರಿಗಳ ಮೇಲಕ್ಕೆ ಅವರ ಸಹಮತಿಯು ವಿನಾ ಹೊಸ ಕರ ಹೇರಲಾರೆನೆಂಬ ಭರವಸೆಯನ್ನಿತ್ತ. ಡಚ್ಚರು ಆತನಿಗೆ ಪರಕೀಯರ ಆಕ್ರಮಣದ ವಿರುದ್ಧ ಸಂರಕ್ಷಣೆವೀಯಲು ಒಪ್ಪಿಕೊಂಡರು. ಆತ ಅವರಿಗೆ ತನ್ನ ರಾಜ್ಯದಲ್ಲಿ ಉತ್ಪಾದಿಸಲ್ಪಡುವ ಕರಿಮೆಣಸು ಮತ್ತು ದಾಲ್ಚೀನಿಗಳ ಸರಬರಾಯಿಯೊಂದಿಗೆ ಅಫೀಮಿನ ಆಯಾತದ ಏಕಾಧಿಕಾರವಿತ್ತ. ಪಾಲಿಯಮ್‌ನ ಅಚ್ಚನ್‌ನ ಮುಖ್ಯಮಂತ್ರಿ ಪದವನ್ನು ದೃಢಪಡಿಸಲಾಯಿತು. ಮಹತ್ವದ ವಿಷಯಗಳ ಮೇಲಕ್ಕೆ ಮಾತ್ರ ರಾಜಾ ಮತ್ತು ಡಚ್ಚರ ನಿಯಂತ್ರಣವಿತ್ತು; ಅನ್ಯ ವಿಷಯಗಳಲ್ಲಿ ಆತನಿಗೆ ಸಂಪೂರ್ಣ ಸ್ವಾತಂತ್ರ್ಯವೀಯಲಾಯಿತು. ಸ್ಥಾನೀಯ ತುಂಡರಸರನ್ನು ಬಗ್ಗು ಬಡೆಯಲು ಮತ್ತು ಕೊಚ್ಚಿನ್‌ನ ಮೇಲಣ ವಿಜಯಕ್ಕೆ ಅಪಾರ ನೆರವಿತ್ತ ಕೇರಳದ ಶಕ್ತಿಶಾಲಿ ಅರಸು ಝಾಮೋರಿನ್‌ನ ರಾಜಕೀಯ ಮಹತ್ವಾಕಾಂಕ್ಷೆಯನ್ನು ಹತ್ತಿಕ್ಕಲಾಗಿ ಡಚ್ಚರು ತಮ್ಮ ಮಿತ್ರರ ಸಂರಕ್ಷಣೆಯ ನೆಪವೊಡ್ಡಿ ಆತನನ್ನು ದೂರಕ್ಕಿಡಲು ಪ್ರಯತ್ನಿಸಿದರು. ಆದರೆ ಅದು ಒಂದಲ್ಲದಿದ್ದರೆ ಇನ್ನೊಂದು ವಿವಾದಕ್ಕೆ ಕಾರಣವಾಯಿತು.

೬. ಡಚ್ಚರ ಕೈಕೆಳಗಿನ ಕೊಚ್ಚಿನ್‌ನ ಸಾರಸ್ವತರು

ಪೋರ್ಚುಗೀಸರೊಂದಿಗಿನ ವ್ಯಾಪಾರದ ಮೇಲಕ್ಕೆ ಕೊಚ್ಚಿನ್‌ನ ಸಾರಸ್ವತರ ಪೂರ್ಣ ನಿಯಂತ್ರಣವಿತ್ತು. ಹಾಗಿದ್ದರೂ ಡಚ್ಚರೊಂದಿಗಿನ ೧೬೬೩ರ ಕರಾರಿನ ಉಪವಾಕ್ಯವೊಂದರ ಆಧಾರಕೊಂಡು ಪೋರ್ಚುಗೀಸರು ಸಾರಸ್ವತರು, ವಾಣಿಗಳು (ವೈಷ್ಣವ ವ್ಯಾಪಾರಿಗಳು), ಸೋನಾರರು (ಚನಿವಾರರು) ಮುಂತಾದವರಿಂದೊಡಗೂಡಿದ್ದ ಕೊಂಕಣಿಗರ ಮೇಲಕ್ಕೆ ಅಧಿಕಾರ ಚಲಾಯಿಸುತ್ತಿದ್ದುದು ತೋರಿಬಂದಿದೆ. ಕ್ರಿಸ್ತೀಯರ ಮೇಲಣ ಈ ಅಧಿಕಾರ ಮುಖ್ಯತಃ ಲ್ಯಾಟಿನ್ ಅಥವಾ ರೋಮನ್ ಕೆಥೊಲಿಕರಿಗಷ್ಟೇ ಸೀಮಿತವಿತ್ತು. ಮಾರ್‌ಥೋಮ್ ಅಥವಾ ಸಿರಿಯನ್ ಕ್ರಿಸ್ತೀಯರು ಸಾಮಾನ್ಯ ಕ್ರಿಸ್ತೀಯರ ಅಧಿಕಾರ ಕ್ಷೇತ್ರದೊಳಕ್ಕಿದ್ದರು.

ಕೊಂಕಣಿಗರ ಮಟ್ಟಿಗೆ ನುಡಿಯುವಲ್ಲಿ ಸೋನಾರ, ವಾಣಿಗಳಿಂದ ಯಾವೊಂದೂ ತರಹದ ಬಾಧೆಯಿಲ್ಲವಿತ್ತು; ಅವರು ಡಚ್ಚರ ಅಧಿಕಾರದ ಸೀಮೆಯೊಳಕ್ಕಿದ್ದರು. ಡಚ್ಚರ ಪಾಲಿನ ಜಟಿಲ ಸಮಸ್ಯೆಗಳು ಸಾರಸ್ವತ ವ್ಯಾಪಾರೋದ್ಯಮಗಳ ಸಂರಕ್ಷಣೆ, ಅವರ ನಿತ್ಯದ ಭಾರೀ ಪ್ರಮಾಣದಲ್ಲಿನ ವ್ಯಾಪಾರ, ಕೊಚ್ಚಿನ್‌ನ ಅರಸನ ಅನ್ಯ ಆಶ್ರಿತರೊಂದಿಗಿನ ವಿವಾದ, ಇವುಗಳಿಗೆ ಸಂಬಂಧಿಸಿದ್ದವು.

ಅತ್ಯಲ್ಪ ಕಾಲದಲ್ಲೇ ಸಾರಸ್ವತರು ಡಚ್ಚರ ವ್ಯಾಪಾರದ ಮೇಲಕ್ಕೆ ಪೂರ್ಣಾಧಿಕಾರ ಸ್ಥಾಪಿಸಿದರು. ಡಚ್ ಕಂಪನಿಯ ಮುಖ್ಯ ವ್ಯಾಪಾರಿಗಳು, ಅವರ ದಲಾಲಿಗಳು ಸಾಮಾನ್ಯವಾಗಿ ಸಾರಸ್ವತರೇ ಇದ್ದರು. ವಿಭಿನ್ನ ಕಾರ್ಯಗಳ ನಿಭಾವಣೆಯಲ್ಲಿ ಅವರ ನಿಷ್ಠೆ ಮುಖ್ಯವಾಗಿ ಡಚ್ಚರತ್ತ ಇರುವುದನ್ನು ರಾಜಾ ನೋಡಿದ್ದ. ತನ್ನ ನಿರ್ಣಯಗಳ ವಿರುದ್ಧ ಡಚ್ಚರಿಗೆ ಅಪೀಲು ಮಾಡುವ ಅವರ ಹಕ್ಕಿನಿಂದ ಪರಿಸ್ಥಿತಿ ಬಿಗಡಾಯಿಸಿತು.

೭. ಪೆರಿಂಬಲ ಶೆಣ್ಯೆ

'ದ ಮೆಮ್ವಾರ್ ಆಫ್ ವಾನ್‌ಗ್ಲೀಡ್' (ಡಚ್ಚರ ರೆಕಾರ್ಡ್ ನಂ. ೧೪, ಅಧ್ಯಾಯ ೧೯, ಪುಟ ೨೧೪-೨೧೯) ನಲ್ಲಿ ವಾನ್‌ಗ್ಲೀಡ್‌ನ ನಂತರ ಅಧಿಕಾರಕ್ಕೆ ಬಂದ ಜೇಕಬ್ ಲೋಬೋನ ಕಾಲಾವಧಿಯಲ್ಲಿ ಪ್ರತಿಸ್ಪರ್ಧಿ ಸಾರಸ್ವತ ವ್ಯಾಪಾರಿಗಳ ಬಣಗಳು ೧೬೭೮ರಲ್ಲಿ ಬಟಾವಿಯಾದ ಗವರ್ನರ್ ಜನರಲ್‌ನಿಗೆ ಬರೆದ ಸರಣಿ ಪತ್ರಗಳನ್ನು ಕಾಣಬಹುದು. ೧೬೭೪ರಲ್ಲಿ ವಾನ್‌ಗ್ಲೀಡ್, ಪೆರಿಂಬಲ (ಇದು ಮನೆತನದ ಹೆಸರಾಗಿರಬೇಕು) ನ 'ಕಂಪನಿಯ ವ್ಯಾಪಾರಿ'ಯ ಅಧಿಕಾರವನ್ನು ರದ್ದುಗೊಳಿಸಿ, ಆತನ ಕೊಚ್ಚಿನ್‌ನಲ್ಲಿನ ವಾಸ್ತವ್ಯಕ್ಕೆ ತಡೆಹಾಕಿರಬೇಕು. ಕರಿಮೆಣಸು, ದಾಲ್ಚಿನಿ, ಲವಂಗ, ಜಾಯಿಕಾಯಿ, ತಾಮ್ರ, ಇಂಗಲೀಕ ಮುಂತಾದ ವಸ್ತುಗಳ ೧೬೭೪-೧೬೭೮ರ ಸರಬರಾಯಿಯ ಗುತ್ತಿಗೆಯನ್ನು ಪ್ರತಿಸ್ಪರ್ಧಿ ಕಂಪನಿಗಳ ಸಮೂಹಕ್ಕೀಯಲಾಯಿತು. ತನ್ನ ಹಾಗೂ ಕೊಚ್ಚಿನ್‌ನಲ್ಲಿನ ಅನ್ಯ ವ್ಯಾಪಾರಿಗಳ ಅವರ ಪಾಲನ್ನು ಪರಿಗಣಿಸುತ್ತಿಲ್ಲವೆಂದೂ, ಪ್ರತಿಸ್ಪರ್ಧಿಗಳು ಡಚ್ ಕಂಪೆನಿಯೊಂದಿಗಿನ ಗುತ್ತಿಗೆಯ ಏಕಾಧಿಕಾರದ ದುರುಪಯೋಗ ಮಾಡುತ್ತಿರುವರೆಂದೂ, ಸರಕುಗಳಲ್ಲಿನ ಕೆಲವೊಂದನ್ನು ತಟ ರಕ್ಷಕರಿಗೆ ಲಂಚವಿತ್ತು ತಾನೂರು, ಪೊನ್ನಾನೀ ಮತ್ತು ಕೋಳಿಕ್ಕೋಡ್‌ಗಳಿಗೆ ಕಳ್ಳತನದಿಂದ ಸಾಗಿಸುತ್ತಿರುವರೆಂದೂ ಆತ ದೂರನ್ನಿತ್ತ. ೧೬೭೯ರಲ್ಲಿ ಪೆರಿಂಬಲ ಗುತ್ತಿಗೆಯನ್ನು ಮರಳಿ ಪಡೆಯುವಲ್ಲಿ ಯಶಸ್ವಿಯಾದ. ಪ್ರತಿಸ್ಪರ್ಧಿಗಳು ಇದಕ್ಕೆ ಪ್ರಬಲ ವಿರೋಧ ಮಾಡಿದರು. ಅವರು ವಾನ್‌ಗ್ಲೀಡ್ ತಮ್ಮನ್ನು ಕಾಯಂಕುಲಂದಿಂದ ಬರಮಾಡಿಸಿ ಕೊಚ್ಚಿನ್‌ನಲ್ಲಿ ನೆಲೆಸಿಕೊಳ್ಳುವಂತೆ ಒತ್ತರಿಸಿದ್ದನೆಂದೂ ಕಂಪನಿಯ ಮೇಲಿನ ಭರವಸೆಯಿಂದ ಮಲಬಾರಿನ ಕರಿಮೆಣಸಿನ ಬೆಳೆಗಾರರಿಗೆ ಮುಂಗಡವಾಗಿ ಅಪಾರ ಹಣವಿತ್ತಿದ್ದು ಅವರ ವಸೂಲಿ ಕೇವಲ ಕರಿಮೆಣಸಿನ ಖರೀದಿಯ ಮೂಲಕವಷ್ಟೇ ಸಾಧ್ಯವೆಂದು ನುಡಿದು ತಮ್ಮ ಪ್ರಾಣಕ್ಕಿದ್ದ ಅಪಾಯವನ್ನು ದುರ್ಲಕ್ಷಿಸಿ ಕಂಪನಿಗಾಗಿ ದುಡಿದುದ್ದರ ನೆನಪರಿಕೆ ಇತ್ತರು ; ಆಮದು ಮಾಡಲಾದ ಸರಕಿನ ಸರಬರಾಯಿಯ ಕುರಿತಾದ ಕರಾರಿನ ಪರಿಪಾಲನೆಯತ್ತ ಡಚ್ಚರು ದುರ್ಲಕ್ಷ್ಯ ಮಾಡುತ್ತಿರುವರೆಂದು ಪ್ರಸಂಗೋಚಿತ ಉಲ್ಲೇಖ ಮಾಡಿದರು. ಆದರೆ ಅವರ ಈ ತಕರಾರಿನಿಂದ ಏನೊಂದೂ ಪರಿಣಾಮವಾಗಲಿಲ್ಲ. ಕಾರಣ ಆ ಹೊತ್ತಿಗೆ ಪೆರಿಂಬಲ ಡಚ್ಚರ ವಿಶ್ವಾಸ ಗಳಿಸಿದ್ದ.

ಸರಕಾರೀ ಅಧಿಕಾರಿಗಳ ವಿರೋಧದಿಂದಾಗಿ ಬಂದರುಗಳಲ್ಲಿ ಸುಂಕ ಸಂಗ್ರಹಿಸುವ ಕಾರ್ಯದಲ್ಲಿ ಅಂತವಿಲ್ಲದ ತಡೆತೊಡರುಗಳು ತಲೆಯೆತ್ತಿಕೊಂಡವು. ೧೬೮೧ರಲ್ಲಿ ಕಮಾಂಡರ್ ಮಾರ್ಟಿನ್ ಹಿಸ್ಮೇನ್ ಡಚ್ ಅಧಿಕಾರಿಯೊಬ್ಬನನ್ನು ತಮ್ಮ ಮಂತ್ರಿಯಾಗಿ ನೇಮಿಸಬೇಕಿರುವ ಕರಾರಿಗೆ ಒಪ್ಪುವಂತೆ ರಾಜಾನನ್ನು ಒತ್ತರಿಸಿದ. ರಾಜಾ ಪ್ರಧಾನ ಮಂತ್ರಿ

ಕೋಮಿ ಅಚ್ಚನ್ ಡಚ್ ಅಧಿಕಾರಿಗಳ ಸಲಹೆಗನುಗುಣವಾಗಿ ಕಾರ್ಯನಿರ್ವಹಿಸಬೇಕಿರುವ, ಮತ್ತೆ ಪೆರಿಂಬಲ ಶೆಣ್ಯೆಯನ್ನು ಕೋಶಾಧಿಕಾರಿಯಾಗಿ ನೇಮಿಸಬೇಕಿರುವ ಶರ್ತಗಳಿಗೆ ಸಮ್ಮತಿಯಿತ್ತ. ಪೆರಿಂಬಲ 'ಕೆನರಿನ್ಸ್ ಬರ್ಘಾರ್' ನಲ್ಲಿ ವಾಸ್ತವ್ಯಕ್ಕಿದ್ದು, ಜಮಾ, ಖರ್ಚುಗಳ ವಿವರಗಳನ್ನು ಸರಕಾರದ ನಾಲ್ಕು ಮಂದಿ ಸಭಾಸದರಿಗೀಯಬೇಕಿತ್ತು. ಅಷ್ಟೇ ಅಲ್ಲದೇ ಕಂಪೆನಿಯ ಲಿಖಿತ ಆದೇಶದ ವಿನಹ ಸರಕಾರದ ಆಂತರಿಕ ವ್ಯವಹಾರಗಳಲ್ಲಿ ಆತನ ಹಸ್ತಕ್ಷೇಪಕ್ಕೆ ತಡೆಯಿತ್ತು. ೧೬೮೪ರಲ್ಲಿ ಕೋಮಿ ಅಚ್ಚನ್ ತೀರಿಕೊಂಡಾಗ ಅಪ್ರಾಪ್ತ ವಯಸ್ಸಿನ ಉತ್ತರಾಧಿಕಾರಿಯ ನೆಪದ ಲಾಭಕೊಂಡ ಕಮಾಂಡರ್ ತನ್ನ ಹೆಸರಿನಲ್ಲಿ ಆಡಳಿತೆಯ ಕೆಲಸ ನಿರ್ವಹಿಸಲಾಗಿ ಡಚ್ ಅಧಿಕಾರಿಯೊಬ್ಬನನ್ನು ನೇಮಿಸಿದ. ರಾಜಾ, ಪೆರಿಂಬಲ ಜಮಾ-ಖರ್ಚುಗಳ ವಿವರಗಳತ್ತ ದುರ್ಲಕ್ಷ ತೋರುತ್ತಿರುವನೆಂಬ, ತನ್ನ ಅಧಿಕಾರಿಗಳೊಂದಿಗೆ ಸೌಹಾರ್ದತೆಯಿಂದ ವರ್ತಿಸುತ್ತಿಲ್ಲವೆಂಬ ದೋಷಾರೋಪಣೆ ಮಾಡಿ ಆತನನ್ನು ಕೆಲಸದಿಂದ ತೆಗೆದುಹಾಕಬೇಕೆಂದು ಒತ್ತರಿಸಿದ. ಆದರೆ ಕಮಾಂಡರ್ ಆತನ ಅಪಾದನೆಗಳತ್ತ ದುರ್ಲಕ್ಷ್ಯ ತೋರಿದ.

ಮಾರ್ಟಿನ್ ಹಿಸ್ಮೇನನ ಹೇಳಿಕೆಯ ಮೇರೆಗೆ ವೀರಕೇರಳ ವರ್ಮ, ಡಚ್ಚರನ್ನು ಸದಾ ನಂಬಿಕೊಂಡಿದ್ದ ಅರುಸುಮನೆತನದ ಶಾಖೆಯೊಂದರಿಂದ ಇಬ್ಬರು ರಾಜಕುಮಾರರನ್ನು ಮತ್ತು ನಾಲ್ಕು ಮಂದಿ ರಾಜಕುಮಾರಿಯರನ್ನು ದತ್ತಕ್ಕೆ ಕೊಂಡ ನಿಮಿತ್ತ ಸ್ಥಾನೀಯ ನಾಯಕರಲ್ಲಿ ಅಸಮಾಧಾನವಿತ್ತು. ಪಾರೂರಿನ ರಾಜಾನಾ ನೇತೃತ್ವದಲ್ಲಿನ ಡಚ್ ವಿರೋಧಿ ಒಳಪಂಗಡದ ಪ್ರಮುಖ ಸದಸ್ಯರಲ್ಲಿ ಪೆರಿಂಬಲ ಮತ್ತು ಅನ್ಯ ಕೆಲವೊಬ್ಬ ಸ್ಥಾನೀಯ ನಾಯಕರು ಪ್ರಮುಖರಾಗಿದ್ದರು. ೧೬೯೮ರಲ್ಲಿ ಇವರು ರಾಜಾನಾ ದುರ್ಬಲ ಉತ್ತರಾಧಿಕಾರಿ ರಾಮವರ್ಮನ (೧೬೮೭-೧೬೯೩) ಪ್ರತಿ ಶಸ್ತ್ರ ಬಳಸುವ ನಿರ್ಧಾರ ಮಾಡಿದರು.

ಡಚ್ಚರು ಕೋರಿಝಿಕೋಡ್‌ನ ಪ್ರತಿಭಾವಂತ ಝಾಮೋರಿನ್ ಭರಣಿ ತಿರುನಾಳ್‌ನ ನೆರವು ಕೋರಿದರು. ಡಚ್ಚರ ಕಮಾಂಡರ್ ಆತನನ್ನು ಕ್ರಂಗನೂರಿನಲ್ಲಿ ಭೇಟಿಯಾದ. ಆತನ ನೆರವು ಕೊಂಡು ಬಂಡಾಯ ಹೂಡಿದ ನಾಯಕರನ್ನು ಹತೋಟಿಗೆ ತಂದ. ೧೬೯೧ರಲ್ಲಿ ಅವರು ಝಾಮೋರಿನ್‌ನಿಗೆ ಚೆಟ್ಟಿವಾಯ ಮತ್ತು ಅನ್ಯ ಕೆಲವು ಭೂಭಾಗಗಳನ್ನಿತ್ತರು.

೮. ಬಾವನ ಪ್ರಭು

ಝಾಮೋರಿನ್ ತನ್ನ ಕುರಿತಾದ ಡಚ್ಚರ ವರ್ತನೆಯ ವಾಸ್ತವಿಕತೆ ಅರಿತಿದ್ದ. ಆತ ತನ್ನ ಕೋಟೆಗಳನ್ನು ಇನ್ನಷ್ಟು ಬಲವತ್ತರಗೊಳಿಸುವ ಯೋಜನೆ ಮಾಡಿದ. ಮತ್ತೆ ಡಚ್ಚರಿಂದಾಗಬಹುದಾದ ಆಕ್ರಮಣ ತಡೆಹಿಡಿಯಲು ಅನ್ಯ ನಾಯಕರೊಂದಿಗೆ ಮಾತುಕತೆ ನಡೆಸಿದ. ಆತ ಪಾಲಿಯಮ್ ನಾಯಕನಿದ್ದ ಇತ್ತಿ ಕಣ್ಣನ್ ಅಚ್ಚನ್‌ನನ್ನು ಒಲಿಸಿಕೊಂಡ.

ಚಾಣಾಕ್ಷನಿದ್ದ ಬಾವನ (ವಾಮನ) ಪ್ರಭು ಆಗ ಡಚ್ ಕಂಪನಿಯ ಪ್ರತಿನಿಧಿಯೊಬ್ಬನಾಗಿದ್ದ. ಝಾಮೋರಿನ್ ತನ್ನ ಕಾರ್ಯಪೂರ್ತಿಗಾಗಿ ಆತನನ್ನು ಒಲಿಸಿಕೊಂಡಿರಬೇಕು. ಬಾವನ ಪ್ರಭುವಿನ ಕುಶಲ ರಾಜತಂತ್ರದ ಪರಿಣಾಮವಾಗಿ ಕೊಚ್ಚಿನ್‌ನ ರಾಜಾನ ಮಿತ್ರರು ಒಬ್ಬೊಬ್ಬರಾಗಿ ಆತನ ಕೈಬಿಟ್ಟರು. ಬಟಾವಿಯಾದಲ್ಲಿದ್ದ

ಗವರ್ನರ್ ಜನರಲ್‌ನಿಗೆ ತನ್ನ ರಾಜ್ಯದಲ್ಲಿನ ಪರಿಸ್ಥಿತಿಯ ಅರಿವೀಯಲಾಗಿ ೧೭೯೩ರಲ್ಲಿ ಕೊಚ್ಚಿನ್ ರಾಜಾ ಪತ್ರವೊಂದನ್ನು ಬರೆದ. ಭಾವನ ಪ್ರಭು ತನ್ನ ಪ್ರತಿ ಶತ್ರುತ್ವಕೊಂಡಿದ್ದ ಇತ್ತಿಕಣ್ಣನ್ ಅಚ್ಚನ್‌ನನ್ನು ಪ್ರತಿಸ್ಪರ್ಧಿಯೊಬ್ಬನನ್ನಾಗಿ ಮಾಡಿರುವನೆಂದೂ, ತನ್ನ ಸೇವೆಯಲ್ಲಿದ್ದ ಮೆನನ್‌ರಿಗೆ (ಲೆಕ್ಕಿಗರಿಗೆ) ಸರಿಯಾದ ಲೆಕ್ಕ ಕೊಡಬೇಡದ್ದು ಕೊಚ್ಚಿನ್ ಬಂದರಿನಲ್ಲಿ ಸಂಗ್ರಹಿಸಲಾಗಿದ್ದ ಸುಂಕ ಮತ್ತು ಇನ್ನಿತರ ಕರಗಳ ಜಮಾಬಂದಿಯಾಗುತ್ತಿಲ್ಲವೆಂದೂ, ಭಾವನ ಪ್ರಭು ಶತ್ರುವಿದ್ದ ರಘಾವೋರಿನ್‌ನನ್ನು ಸೇರಿರುವನೆಂದೂ ದೂರು ಕೊಟ್ಟ. ೧೭೯೪ರ ಜನವರಿ ತಿಂಗಳ ೨೨ರಂದು ಕೊಚ್ಚಿನ್‌ನ ರಾಜಾ ಗವರ್ನರ್ ಜನರಲ್‌ನಿಗೆ ಇನ್ನೊಂದು ಪತ್ರ ಬರೆದು ಬಾವನ ಪ್ರಭುವಿನ ದಲಾಲರು ಎಲ್ಲೆಂದರಲ್ಲಿ ಕಾಣಬರುತ್ತಿದ್ದು ಕೆಲವೊಬ್ಬ ಉಚ್ಚಾಧಿಕಾರಿಗಳು ಆತನ ಗುಪ್ತಚರರಿರುವರೆಂದೂ, ಸಹಕಾರಗಳಿಸಲಾಗಿ ಆತ ಪುರಕ್ಕಾಡ್, ಪಾರೂರ್, ತೆಕ್ಕುಮುಕ್ಕೂರ್ ಮತ್ತು ವಡಕ್ಕುಮುಕ್ಕೂರ್ ಸಂದರ್ಶಿಸಿದ್ದನೆಂದೂ, ಸದ್ಯದ ಗೊಂದಲಗಳ ಮೂಲ ಕಾರಣ ಆತನಿರುವನೆಂದು ತಿಳಿಸಿದ. ರಾಜಾ ಮಾತ್ರ ಹೊಸದಾಗಿ ನೇಮಿಸಲ್ಪಟ್ಟ ಕೊಚ್ಚಿನ್‌ನ ಕಮಾಂಡರ್ ಮತ್ತು ಕಮಿಸ್ಸಾರ್ ಜನರಲ್ ಯೋಗ್ಯ ಆದೇಶ ಕೊಂಡಿದ್ದು ಆತ ಪರಿಸ್ಥಿತಿಯು ಸುಧಾರಣೆ ಮಾಡುವನೆಂಬ ನುಣುಚಿನ ಉತ್ತರಕೊಂಡ. ಅವ್ಯವಸ್ಥೆ, ಗೊಂದಲಗಳ ನಿಮಿತ್ತ ರಾಜ್ಯದ ಕಾರ್ಯಭಾರ ಹದಗೆಟ್ಟಿತು. ಡಚ್ಚರು ರಘಾವೋರಿನ್‌ನೊಂದಿಗಿನ ಸಂಬಂಧದ ಸುಧಾರಣೆಗೆ ಉತ್ಸುಕರಿದ್ದರು. ೧೭೯೬ರಲ್ಲಿ ಕಮಿಸ್ಸಾರ್ - ಜನರಲ್ ಬಾವನ ಪ್ರಭುವಿನ ಉಪಸ್ಥಿತಿಯಲ್ಲಿ ರಘಾವೋರಿನ್‌ನ ಭೇಟಿಕೊಂಡ.

ಯುದ್ಧ ತಡೆಹಿಡಿಯಲಾಗಿ ಡಚ್ಚರು ಯತ್ನಿಸಿದರಾದರೂ ಅವರಿಗೆ ರಘಾವೋರಿನ್‌ನ ವಿರುದ್ಧ ಯುದ್ಧ ಸಾರಬೇಕಾಯಿತು. ತತ್ಪರಿಣಾಮ ತಾವು ಆತನಿಗೆ ಬಿಟ್ಟುಕೊಟ್ಟಿದ್ದ ಚೆಟ್ಟಿವಾಯ ಮತ್ತು ಇತರ ಭೂಭಾಗಗಳನ್ನು ಮರಳಿಕೊಳ್ಳಬೇಕಾಯಿತು.

೯. ಮ್ಯಾಳಪ್ಪೆ

ರಾಮವರ್ಮನ (೧೭೯೮-೧೮೦೫) ರಾಜ್ಯ ಭಾರದ ಕಾಲ ದುರಹಂಕಾರಿ, ಸ್ವೇಚ್ಛಾಚಾರಿಯಿದ್ದ, ಪಾಲಿಯಮ್ ಮನೆತನದ ಹಿರಿಯ ಅಚ್ಚನ್ ಇತ್ತಿಮ್ಮುಮಾರನ್ ಡಚ್ ಕಂಪನಿಯ ಮುಖ್ಯ ವ್ಯಾಪಾರಿ ಮ್ಯಾಳಪ್ಪೆಯನ್ನು ಕ್ಷುಲ್ಲಕ ಕಾರಣಕ್ಕಾಗಿ ಕೊಂದಿಕ್ಕಿದ. ಇದು ರಾಜಾನ ಬಗೆಗಿದ್ದ ಡಚ್ಚರ ಸಹಾನುಭೂತಿಗೆ ಕುಂದೊದಗಿಸಿತು. ಅವರು ಹಗೆತನ ಕೊಂಡಿದ್ದ ಆತನನ್ನು ದೂರಕ್ಕಿಟ್ಟರು. ದುರ್ಬಲನಿದ್ದ ಆತನ ಸೋದರಳಿಯ, ರವಿವರ್ಮ (೧೮೦೫-೧೮೦೯) ಗದ್ದುಗೆಯೇರಿದಾಗ ಒಳಸಂಚಿನ ಪರಿಣಾಮವಾಗಿ ರಾಜಾ, ಇತ್ತಿಮ್ಮುಮಾರನ್‌ನ ವಿರುದ್ಧ ಹೋದ. ಡಚ್ಚರ ಸಹಾಯದಿಂದ ಆತನನ್ನು ಆತಕೊಂಡಿದ್ದ ಉಚ್ಚಸ್ಥಾನದಿಂದ ತೆಗೆದು ಹಾಕಲಾಯಿತು. ಮತ್ತು ಆತನ ಸಂಪತ್ತನ್ನು ಜಪ್ತಿ ಮಾಡಲಾಯಿತು. ಇತ್ತಿಮ್ಮುಮಾರನ್‌ನ ಉತ್ತರಾಧಿಕಾರಿ ಕ್ರಮೇಣ ರಾಜಾನೊಂದಿಗಿನ ಸಂಬಂಧವನ್ನು ಸುಧಾರಿಸಿದ; ಕಳೆದುಕೊಂಡಿದ್ದ ಹುದ್ದೆ, ಭೂಮಿಗಳನ್ನು ಆತನಿಗೆ ಮರಳಿಸಲಾಯಿತು.

೧೦. ಡಚ್ಚರ ಅವನತಿ

ಆಧುನಿಕ ಟ್ರಾವಂಕೂರಿನ ನಿರ್ಮಾತ ಮತ್ತು ಕೇರಳದ ಇತಿಹಾಸದಲ್ಲಿ ಅತಿ

ಪ್ರಸಿದ್ಧನಿದ್ದ ಮಾರ್ತಾಂಡವರ್ಮ (೧೭೨೯-೧೭೫೮) ಪ್ರತಿಕೂಲ ಪರಿಸ್ಥಿತಿಯಲ್ಲಿ ಗದ್ದುಗೇರಿದಾಗ ರಾಜ್ಯದಲ್ಲಿನ ರಾಜಕಾರಣದಲ್ಲಿ ಮಹತ್ವದ ಬದಲಾವಣೆಗಳಾಗಿದ್ದವು. ಈ ದುಸ್ತರ ಪರಿಸ್ಥಿತಿಯಲ್ಲೂ ಆತ ತನ್ನ ರಾಜ್ಯದಲ್ಲಿ ರಾಜಕೀಯ ಏಕೀಕರಣ ಸಾಧಿಸಿದ. ಆತನ ವಿಸ್ಮಯಕಾರಿ ಯಶಸ್ಸಿನಿಂದ ಕ್ವಿಲೋನ್ ಮತ್ತು ಕನ್ಯಾಕುಲಮ್‌ಗಳಲ್ಲಿ ಮಳಿಗೆಗಳನ್ನು ಕೊಂಡಿದ್ದ ಡಚ್ಚರು ಗಾಬರಿಗೊಂಡರು. ಅವರು ಗಡಿಪಾರು ಮಾಡಲ್ಪಟ್ಟ ರಾಜಕುಮಾರಿಯೊಬ್ಬಳಿಗೆ ಬೆಂಬಲವಿತ್ತು, ಸಿಲೋನಿನಿಂದ ಹೆಚ್ಚುವರಿ ಸೈನ್ಯ ತರಿಸಿ ಟ್ರಾವಂಕೂರಿನೊಳಕ್ಕೆ ನುಗ್ಗಿದರು. ೧೭೪೭ರ ಅಗಸ್ಟ್ ತಿಂಗಳ ೧೦ರಂದು ಮಾರ್ತಾಂಡವರ್ಮ ಮತ್ತು ಸೇನಾಧಿಪತಿ ರಾಮ ಅಯ್ಯನ್ ದಳವ ಕೊಲಚೆಲ್ ಎಂಬಲ್ಲಿ ಡಚ್ಚರನ್ನು ಪೂರ್ತಿ ಸೋಲಿಸಿದರು. ೧೭೫೩ರಲ್ಲಿ ಡಚ್ಚರಿಗೆ ಮಾರ್ತಾಂಡ ವರ್ಮನೊಂದಿಗೆ ಲಜ್ಜಾಸ್ಪದ ಸಂಧಿ ಮಾಡಿಕೊಳ್ಳಬೇಕಾಯಿತು. ಮಾರ್ತಾಂಡವರ್ಮನ ಲಕ್ಷ್ಯ ಈಗ ಕೊಚ್ಚಿನ್‌ನತ್ತ ಸಾಗಿತು. ೧೭೫೩ರಲ್ಲಿ ಆತ ಕೊಚ್ಚಿನ್‌ನ ಮೇಲಕ್ಕೆ ದಾಳಿಯಿಕ್ಕಿದ. ಮತ್ತೆ ಪುರಕ್ಕಾಡ್, ವಡ್ಡಕು ಮುಕ್ಕೂರ್, ತೆಕ್ಕುಮುಕ್ಕೂರ್ ಹಾಗೂ ಇನ್ನಿತರ ಭೂಭಾಗಗಳನ್ನು ತನ್ನ ರಾಜ್ಯದೊಂದಿಗೆ ಸೇರಿಕೊಂಡ. ಅದೇ ಹೊತ್ತಿಗೆ ಡಚ್ಚರ ವರ್ತನೆಯಿಂದ ಪ್ರೇರಿತನಾದ ಝಾಮೋರಿನ್ ಕೊಚ್ಚಿನ್‌ನ ಮೇಲಕ್ಕೆ ಉತ್ತರ ದಿಕ್ಕಿನಿಂದ ದಾಳಿ ಮಾಡಿದ. ಸಂಧಿಯೊಂದರ ಮೇರೆಗೆ ಅಪತ್ಕಾಲದಲ್ಲಿ ನೆರವನ್ನೀಯಬೇಕಾಗಿರುವುದರ ನೆನಪರಿಕೆಯಿತ್ತರೂ ಡಚ್ಚರು ರಾಜಾನಿಗೆ ಸಹಾಯ ಮಾಡಲು ನಿರಾಕರಿಸಿದರು. ೧೭೫೬ರ ಹೊತ್ತಿಗೆ ಝಾಮೋರಿನ್ ಕೊಚ್ಚಿನ್‌ನ ದೊಡ್ಡ ಭಾಗವನ್ನು ಆಕ್ರಮಿಸಿ ಅದನ್ನು ತ್ರಿಚೂರಿನಿಂದ ಆಳತೊಡಗಿದ. ದೂರದೃಷ್ಟಿಯ ಚತುರ, ಅತಿಸಮರ್ಥನಿದ್ದ, ಪಾಲಿಯಮ್‌ನ ಆಗಿನ ಮುಖ್ಯಾಧಿಕಾರಿ, ಕೋಮಿ ಅಚ್ಚನ್ ಪರಿಸ್ಥಿತಿ ಹದಗೆಡುವುದನ್ನು ತಡೆದ. ಅಂಬಲಪುಝುದಲ್ಲಿನ ಯುದ್ಧದ ವೇಳೆ ಯುದ್ಧ ಕೈದಿಯಾಗಿ ಸೆರೆಮನೆ ಸೇರಿದ್ದ ಈತ ಮಾರ್ತಾಂಡವರ್ಮನ ಮೆಚ್ಚಿಗೆ ಗಳಿಸಿದ್ದ. ೧೭೫೭ರಲ್ಲಿ ಈತ ಟ್ರಾವಂಕೂರ್ ಮತ್ತು ಕೊಚ್ಚಿನ್‌ಗಳ ನಡುವೆ ಶಾಶ್ವತ ಸಂಬಂಧದ ಸಂಧಾನ ಸಾಧಿಸಿದ. ಮತ್ತೆ ಟ್ರಾವಂಕೂರ್ ಗೆದ್ದುಕೊಂಡಿದ್ದ. ಪಾರೂರ್ ಮತ್ತು ಅಲಂಗುಡಿಗಳ ಹೊರತಾಗಿ ಅನ್ಯ ಭೂಭಾಗಗಳನ್ನು ಬಿಟ್ಟುಕೊಟ್ಟ. ಇದರಿಂದ ರಾಜ್ಯಗಳೆರಡರ ನಡುವಣ ಸಂಬಂಧ ದೀರ್ಘಕಾಲ ಸೌಹಾರ್ದ ಪೂರ್ವಕ ಉಳಿದುಕೊಂಡಿತು. ಮತ್ತೆ ಕೊಚ್ಚಿನ್, ರಾಜ್ಯದ ಎಲ್ಲೊಂದು ವಿಷಯಗಳ ಕುರಿತು ಟ್ರಾವಂಕೂರಿನೊಂದಿಗೆ ಸಮಾಲೋಚನೆ ನಡೆಸತೊಡಗಿತು.

೧೧. ಸಕ್ತನ್ ತಂಪುರನ್

ರಾಮವರ್ಮ (೧೭೬೦-೧೭೭೫) ಮತ್ತು ಆತನ ಸಹೋದರ ವೀರ ಕೇರಳವರ್ಮ ೧೭೭೫-೧೭೯೦ ಪೂರ್ವಜರಿಂದ ನಡೆದು ಬಂದಿದ್ದ ಬಿಕ್ಕಟ್ಟಿನ ಸಮಸ್ಯೆಗಳನ್ನು ಬಗೆಹರಿಸಲು ಅಸಮರ್ಥರಾಗಿದ್ದರು. ೧೭೬೯ರಲ್ಲಿ ಕಾರ್ತಿಕ ತಿರುನಾಳ್ ಎಂಬ ಹೆಸರಿನಿಂದ ಪ್ರಸಿದ್ದನಾಗಿದ್ದ ವಿದ್ವಾಂಸ, ಗೀತಕಾರ, ಕವಿ, ಎಲ್ಲೊಂದು ಕಲೆಗಳ ಪೋಷಕನಿದ್ದ ಪ್ರತಿಭಾನ್ವಿತ ಅರಸು ಮಾರ್ತಾಂಡವರ್ಮನ ಖ್ಯಾತನಾಮ ಉತ್ತರಾಧಿಕಾರಿ ರಾಮವರ್ಮ (೧೭೫೮-೧೭೯೮) ಸಹೋದರರಿಬ್ಬರು ತಮ್ಮ ಅಧಿಕಾರವನ್ನು ಸಕ್ತನ್ ತಂಪುರನ್ (ಬಲಾಢ್ಯ ಅರಸು) ಎಂದಾಗಿ ಪರಿಚಿತನಾಗಿದ್ದ ಇಳಯರಾಜಾ (ಸಂಭಾವ್ಯ ಉತ್ತರಾಧಿಕಾರಿ) ನಿಗೆ ಹಸ್ತಾಂತರಿಸುವರೆ ಒತ್ತರಿಸಿದ.

ಡಚ್ಚರ ನಗರಕ್ಕೆ ಹೊಂದಿಕೊಂಡಿದ್ದ ಮಟ್ಟಾಂಚೇರಿ, ಚೆಲ್ಲಾಯಿ ಮತ್ತು ಅಮರಾವತಿ ಇವನ್ನು ಕೊಚ್ಚಿನ್‌ನ ಭಾಗಗಳೆಂದು ಪರಿಗಣಿಸಲಾಗಿದ್ದರೂ ಡಚ್ಚರು ಅಲ್ಲಿನ ಕೊಂಕಣಿಗರ, ಕ್ರಿಶ್ಚಿಯನರ ಹಾಗೂ ಅನ್ಯ ಕೆಲವೊಬ್ಬರ ಮೇಲಕ್ಕೆ ತಮ್ಮ ಅಧಿಕಾರ ನಡೆಸುತ್ತಿದ್ದರು. ಕೊಚ್ಚಿನ್‌ನ ರಾಜಾ ಮಾತ್ರ ಈ ಪ್ರಾಂತಗಳ ಮೇಲಕ್ಕೆ ಕಂದಾಯ, ಸುಂಕ ಹಾಗೂ ಅನ್ಯ ತೆರಿಗೆಗಳನ್ನಷ್ಟೆ ಹೇರುತ್ತಿದ್ದ. ೧೭೬೭ರಲ್ಲಿ ರಾಜಾ ಸುಂಕದ ದರದೊಂದಿಗೆ ವ್ಯಾಪಾರಿಗಳೊಂದಿನ ತನ್ನ ಅಪೇಕ್ಷೆಯ ಸ್ತರವನ್ನೂ ಏರಿಸಿದ. ಇದು ವ್ಯಾಪಾರಕ್ಕೆ ಘಾತಕವಾಯಿತು. ಕಮಾಂಡರ್ ಸನ್ನಿವೇಶದ ಲಾಭಕೊಂಡು ಈ ಪ್ರಾಂತಗಳಲ್ಲಿ ಹೇರಲಾಗುತ್ತಿದ್ದ ಸುಂಕ, ತೆರಿಗೆಗಳ ಬಗೆಗಿನ ಕೊಚ್ಚಿನ್‌ನ ಅಧಿಕಾರವನ್ನು ನಿರಾಕರಿಸಿದ. ಇದು ಡಚ್ ಮತ್ತು ರಾಜಾನ ನಡುವಣ ಸಂಬಂಧದ ಮೇಲಕ್ಕೆ ಒತ್ತಡ ತಂದಿತು. ಡಚ್ಚರ ಪ್ರಭಾವ ಕುಂದುತ್ತಿರುವುದನ್ನು ಕಂಡ ರಾಜಾ ಅವರ ಕೋಟೆಯ ಎದುರಿಗೆ ಸುಭದ್ರವಾದ ತನ್ನ ಕೋಟೆ ಕಟ್ಟಿಸಿದ. ಮತ್ತೆ ಸಹಾಯಕ್ಕಾಗಿ ಟ್ರಾವಂಕೂರಿನ ರಾಜಾನಿಗೆ ಮನವಿ ಮಾಡಿದ. ಆತ ಗುಪ್ತವಾಗಿ ೧೫೦೦ ಸೈನಿಕರನ್ನು ಕೊಚ್ಚಿನ್‌ಗೆ ರವಾನಿಸಿದ. ಆ ಬಳಿಕ ಕೊಚ್ಚಿನ್ ಮತ್ತು ಡಚ್ಚರ ಸೇನೆಯ ನಡುವೆ ಸಣ್ಣ ಚಕಮಕಿಗಳಾಗತೊಡಗಿದವು.

ಡಚ್ಚರು ಪ್ರಸಿದ್ಧ ಸಾರಸ್ವತ ವ್ಯಾಪಾರಿ ಕಲಗ ಪ್ರಭುವನ್ನು ಭಾರತದಲ್ಲಿನ ತಮ್ಮ ಮುಖ್ಯ ವ್ಯಾಪಾರಿ ಮತ್ತು ಕೊಚ್ಚಿನ್‌ನಲ್ಲಿನ ಪ್ರತಿನಿಧಿಯಾಗಿ ನೇಮಿಸಿದರು. ಹೊಸ ಕೋಟೆಯ ಮೇಲಕ್ಕೆ ಆ ಕೂಡಲೇ ಧ್ವಜವೇರಿಸಿದರು; ಮತ್ತು ಅದನ್ನು ಉಧ್ವಸ್ತಮಾಡಬೇಕೆಂದೂ, ಟ್ರಾವಂಕೂರಿನ ಸೈನಿಕರನ್ನು ಮರಳಿ ಕಳುಹಿಸಬೇಕೆಂದೂ ಒತ್ತಾಯ ಮಾಡಿದರು. ೧೭೭೧ರಲ್ಲಿ ಕೊಚ್ಚಿನ್ ಮತ್ತು ಟ್ರಾವಂಕೂರಿನ ರಾಜಾ ಇಬ್ಬರೂ ಸೇರಿ ಬಟಾವೀಯದಲ್ಲಿನ ಗವರ್ನರ್ ಜನರಲ್‌ಗೆ ದೂರು ಕೊಟ್ಟರು. ಕಮಾಂಡರ್‌ನೊಂದಿಗಿನ ಎಲ್ಲೊಂದೂ ತಪ್ಪು ಗ್ರಹಿಕೆಗೆ ಕಲಗ ಪ್ರಭು ಕಾರಣೀಭೂತನಿದ್ದು ಆತನನ್ನು ಕೆಲಸದಿಂದ ತೆಗೆದುಹಾಕಬೇಕೆಂದು ೧೭೭೩ರ ಎಪ್ರಿಲ್ ತಿಂಗಳಲ್ಲಿ ಕೊಚ್ಚಿನ್‌ನ ರಾಜಾ ಗವರ್ನರ್ ಜನರಲ್‌ನಿಗೆ ಬರೆದು ತಿಳಿಸಿದ. ಸಕಾಲದಲ್ಲಿ ಕಮಾಂಡರ್‌ನನ್ನು ಹಿಂಗರೆಸಿ ಆತನ ಸ್ಥಾನದಲ್ಲಿ ಅದ್ರಿಯಾ ಮೊಯಿನ್ಸ್‌ನನ್ನು ನೇಮಿಸಿದ ನಿಮಿತ್ತ ಸಂಭವಿಸಬಹುದಿದ್ದ ಯುದ್ಧ ಘಟಿಸಲಿಲ್ಲ.

ಮೊಯಿನ್ಸ್ ಕೊಚ್ಚಿನ್‌ನ ಸಮರ್ಥ ಕಮಾಂಡರ್‌ನೊಬ್ಬನಿದ್ದ. ಹಿಂದಣ ದಿನಗಳಲ್ಲಿನ ಸಂಧಿಪತ್ರದರ ಮೇರೆಗೆ ಮಟ್ಟಾಂಚೇರಿಯು ಮೇಲಣ ಕೊಚ್ಚಿನ್‌ನ ರಾಜಾನ ಬೇಡಿಕೆ ಒಪ್ಪಲಾಗದ ವಿಷಯವೊಂದಿರುದೆಂಬುದನ್ನು ತೋರಿಕೊಟ್ಟ. ಹಾಗೆಯೇ ಈ ಹಿಂದೆ ಪೋರ್ಚುಗೀಸರ ಸಂರಕ್ಷಣೆಕೊಂಡಿದ್ದ ಕೊಂಕಣಿಗರು ಮತ್ತು ಅನ್ಯ ಮಿಶ್ರ ಜಾತಿಯವರ ಮೇಲೆ ೧೬೬೩ರ ಸಂಧಿಯ ಮೇರೆಗೆ ಕಂಪನಿ ಕೂಡಾ ಅಧಿಕಾರ ನಿಭಾಯಿಸುತ್ತಿತ್ತೆಂದೂ, ಕೊಂಕಣಿಗರು ಡಚ್ಚರ ವಿನಃ ಅನ್ಯ ಯಾರೊಬ್ಬರ ಪ್ರಭುತ್ವ ಸ್ವೀಕರಿಸಲು ಒಪ್ಪುತ್ತಿಲ್ಲವೆಂದೂ, ಸದ್ಯದ ತೊಡಕು ತೊಂದರೆಗಳು ಮಟ್ಟಾಂಚೇರಿಯ ವ್ಯಾಪಾರಿಗಳ ಮೇಲಕ್ಕೆ ರಾಜಾ ಹೇರಿದ್ದ ಹೆಚ್ಚುವರಿ ಆಯಾತಕರದ ಪರಿಣಾಮವೆಂಬುದರ ಅರಿವನ್ನಿತ್ತ. ಸತತ ಪತ್ರವ್ಯವಹಾರದ ಬಳಿಕ ೧೭೭೨ರಲ್ಲಿ ಉಭಯಾತರಲ್ಲಿನ ವಿವಾದಗಳನ್ನು ಸೌಹಾರ್ದಪೂರ್ಣ ಮುಕ್ತಾಯಗೊಳಿಸಲಾಯಿತು. "ಕ್ರಮೇಣ ಡಚ್ಚರು ಮಟ್ಟಾಂಚೇರಿ ಮತ್ತು ಚೆಲ್ಲಾಯಿಗಳ

ಬೇಸಾಯಕ್ಕೆ ಸಂಬಂಧಿಸಿದ ಕಂದಾಯ ಒಟ್ಟುಗೂಡಿಸುವ, ಕೊಂಕಣಿಗರು ಮತ್ತು ಅವರ ದೇವಸ್ಥಾನಗಳಿಗೆ ಸಂಬಂಧಿಸಿದ ಆಂತರಿಕ ವ್ಯವಹಾರಗಳನ್ನು ನೋಡಿಕೊಳ್ಳುವ ಅಧಿಕಾರವನ್ನು ಕೊಚ್ಚಿನ್ ರಾಜಾನಿಗೆ ಇತ್ತರು''.

ಕೊಂಕಣಿಗರ ಮೇಲಕ್ಕೆ ಹೊಸಬೇಡಿಕೆ ಹೇರಲು ಮತ್ತು ಅವರ ದೇವಸ್ಥಾನಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಕಂಪನಿಯ ಅನುಮತಿಯ ವಿನಹ ಹಸ್ತಕ್ಷೇಪ ಮಾಡಲು ರಾಜಾನಿಗೆ ನಿರ್ಬಂಧವಿತ್ತು. ಹಾಗೆಯೇ ತಮಗೆ ಅನ್ಯಾಯವಾಗಿದ್ದಲ್ಲಿ ಡಚ್ ಕಮಾಂಡರ್‌ನಿಗೆ ದೂರನ್ನೀಯಲು ಕೊಂಕಣಿಗರಿಗೆ ಸ್ವಾತಂತ್ರ್ಯವಿತ್ತು.

ಸರಕಿನ ಬಳಕೆ ಮತ್ತು ಸಂಪ್ರದಾಯಗಳಿಗನುಗುಣವಾಗಿ ರಾಜಾ ಹೇರಬಹುದಾದ ಕರಗಳ ಯಾದಿಯೊಂದನ್ನು ಆತ ತಯಾರಿಸಿದ. ಡಚ್ ಅಧಿಕಾರಿಗಳು ಭಾರತದ ವ್ಯಾಪಾರಿಗಳ ನೆರವು ಕೊಂಡು ಈ ಪಟ್ಟಿಯನ್ನು ರಾಜಾನ ಮಂತ್ರಿಗಳ ಸಮಕ್ಷಮ ಕೂಲಂಕಷ ಪರಿಶೀಲಿಸಿದರು. ಅನಂತರ ಡಚ್ ಮತ್ತು ರಾಜಾರ ನಡುವೆ ಕರಾರು ಮಾಡಲಾಯಿತು. ಈ ಕರಾರಿನ ಉಲ್ಲಂಘನೆಯಾಗದಂತೆ, ಬಡವರ ನಿತ್ಯದ ಬಳಕೆಯ ವಸ್ತುಗಳ ಬೆಲೆಯೇರದಂತೆ ಡಚ್ಚರು ನೋಡಿಕೊಂಡರು.

೧೨. ಆನಂದ ಮಲ್ಲನ್

ಮೊಯಿನ್ಸ್ ತನ್ನ ಆತ್ಮ ವೃತ್ತಾಂತದಲ್ಲಿ ಟ್ರಾವಂಕೂರಿನ ರಾಜಾನ ಪ್ರತಿನಿಧಿ, ಕನ್ನಡಿಗ ಮತ್ತು ಕೊಚ್ಚಿನ್‌ನ ನಿವಾಸಿ ಇದ್ದ ಆನಂದ ಮಲ್ಲನ್ (ಮಹಾಲ, ಮಲ್ಯ) ನ ಕುರಿತಾಗಿ ಹೀಗೆ ಉಲ್ಲೇಖ ಮಾಡಿರುತ್ತಾನೆ :

'ತನಗೆ ಸಂಬಂಧಪಟ್ಟ ಮತ್ತು ಸಂಬಂಧಿಸಿರದಿದ್ದ ಎಲ್ಲೊಂದು ವಿಷಯಗಳಲ್ಲಿ ಈತ ಕೈ ಹಾಕುತ್ತಿದ್ದ. ತನ್ನ ಸುತ್ತಣ ಪ್ರತಿಯೊಂದು ಘಟನೆಗಳತ್ತ ಲಕ್ಷ್ಯವೀಯುತ್ತಿದ್ದ ಈತ ನಗದು ಹಣವನ್ನು ಮುಂಗಡವಾಗಿ ಕೊಂಡು, ಶಸ್ತ್ರಾಸ್ತ್ರಗಳನ್ನು ಸಾಲದ ರೂಪದಲ್ಲಿ ಖರೀದಿ ಮಾಡುತ್ತಿದ್ದ. ಆಸ್ಥಾನ (ಟ್ರಾವೆಂಕೂರಿನ) ದಿಂದ ಪ್ರಸ್ತಾವ ಬಂದರೆ ಆತ ಭೇಟಿಯ ಅವಕಾಶ ಅಪೇಕ್ಷಿಸುತ್ತಿದ್ದ. ಯಾರೊಬ್ಬ ಆತನನ್ನು ಕಾಣಬಯಸಿದ್ದಲ್ಲಿ ಅಥವಾ ಭೇಟಿಗೆ ಕರೆಕಳುಹಿಸಿದ್ದಲ್ಲಿ ಆತ ಅವರನ್ನು ಡಚ್ಚರ ನಗರಕ್ಕೆ ಬರಮಾಡುತ್ತಿದ್ದ. ಪ್ರಸನ್ನ ಚಿತ್ತನಿದ್ದ ಆತನೊಂದಿಗೆ ಸುಲಭವಾಗಿ ಹೊಂದಿಕೊಳ್ಳಬಹುದಿತ್ತು'.

೧೩. ಹೈದರ್ ಆಲಿ

ಝಾಮೋರಿನ್‌ನ ರಾಜ್ಯವನ್ನು ಮರಳಿ ಗೆದ್ದುಕೊಂಡ ಹೈದರ್‌ಆಲಿ ೧೭೭೫ರಲ್ಲಿ ಕೊಚ್ಚಿನ್‌ನತ್ತ ಲಕ್ಷ ಕೇಂದ್ರೀಕರಿಸಿದ. ೧೭೭೬ರ ಸೆಪ್ಟೆಂಬರ್ ತಿಂಗಳಲ್ಲಿ ಆತ ದಂಡೆತ್ತಿ ಹೋದ; ಕೊಚ್ಚಿನ್ ಹೋರಾಡದೆ ಸೋಲೊಪ್ಪಿಕೊಂಡಿತು. ಹೈದರ್ ಆಲಿ ಡಚ್ಚರ ಪ್ರಾಂತದ ಮೂಲಕ ಸುರಕ್ಷಿತವಾಗಿ ಹೋಗುವ ಇಚ್ಛೆ ತೋರಿದ; ಮೊಯಿನ್ಸ್ ಮಾತ್ರ ನುಣುಚಿನ ಉತ್ತರವಿತ್ತ. ಹೈದರ್ ಚೆಟ್ಟಿವಾಯ ವಶಪಡಿಸಿಕೊಂಡ. ಆತನ ಅತಿಕ್ರಮಣ ತಡೆ ಹಿಡಿಯಲಾಗಿ ಮೊಯಿನ್ಸ್ ಟ್ರಾವೆಂಕೂರಿಗೆ ಪ್ರತಿನಿಧಿಗಳ ತಂಡವೊಂದನ್ನು ಕಳುಹಿಸಿದ. ಅಲ್ಲಿನ ಆಶ್ವಾಸನೆ ದೊರಕಿ ಆತ ಚೆಟ್ಟಿ ವಾಯುದ ಮೇಲಕ್ಕೆ ಸೇನೆ ಕೊಂಡುಹೋದ. ದಂಡ ಯಾತ್ರೆ ಅಯಶಸ್ವಿಯಾಯಿತು.

ಡಚ್ಚರು ಸಿಲೋನಿನಿಂದ ಹೆಚ್ಚಿನ ಸೇನೆ, ಶಸ್ತ್ರಾಸ್ತ್ರಗಳನ್ನು ತರಿಸಿದರು. ಮತ್ತೆ ಕೊಚ್ಚಿನ್ ಮತ್ತು ಟ್ರಾವಂಕೂರಿನ ಸಹಾಯ ಕೋರಿದರು. ಸ್ಥಾನೀಯ ಸೇನೆಗಳು ಸಹಕರಿಸಲು ನಕಾರವಿತ್ತರೂ ಅವರು ಚೆಟ್ಟಿವಾಯಕ್ಕೆ ತಮ್ಮ ಸೇನೆಯೊಂದಿಗೆ ಸಾಗಿದರು. ಈ ಸಂದರ್ಭದಲ್ಲಿ ಟ್ರಾವಂಕೂರಿನ ರಾಜಾ ಅನಂದ ಪಿಳ್ಳನ್‌ನನ್ನು ಬರಮಾಡಿಸಿ ಆತನ ಮೂಲಕ, ತಾನು ಸ್ವತಃ ಬಂದು ಚರ್ಚೆ ಮಾಡುವ ತನಕ ಪರಿಸ್ಥಿತಿ ವಿಕೋಪಕ್ಕೆ ಹೋಗದಂತೆ ನೋಡಿಕೊಳ್ಳಬೇಕೆಂಬ ಆಶಯದ ವೈಯಕ್ತಿಕ ಸಂದೇಶವನ್ನು ಮೊಯಿನ್ಸ್‌ನಿಗೆ ಕಳುಹಿಸಿದ. ರಾಜಾ ಪ್ರತ್ಯಕ್ಷ ಭೇಟಿಯನ್ನು ತಪ್ಪಿಸಿಕೊಂಡ. ಸ್ವಲ್ಪ ಸಮಯದ ನಂತರ ಆತನ ಮುಖ್ಯ ಮಂತ್ರಿ ಮೊಯಿನ್ಸ್‌ನನ್ನು ಕಂಡ. ಯುದ್ಧದ ಖರ್ಚಿನ ಪಾಲಿನ ಕುರಿತಾಗಿ ಮೊಯಿನ್ಸ್ ಮಾಡಿದ ಪ್ರಸ್ತಾಪದತ್ತ ಆತ ದುರ್ಲಕ್ಷ್ಯ ಮಾಡಿದ. ಡಚ್ಚರು ಚೆಟ್ಟಿವಾಯಾದಲ್ಲಿನ ಕೋಟೆಯನ್ನು ಬಿಟ್ಟು ಬಿಡುವಂತೆ ಒತ್ತರಿಸಲಾಯಿತು. ಇದು ಅವರ ಪ್ರತಿಷ್ಠೆಗೆ ಕುಂದು ತಂದಿತು. ೧೭೭೮ರ ಜನವರಿ ತಿಂಗಳಲ್ಲಿ ಅದನ್ನು ಮರಳಿ ಪಡೆಯಲು ಮಾಡಿದ ಪ್ರಯತ್ನ ವಿಫಲವಾಯಿತು. (೧೭೮೧ರಲ್ಲಿ ಮೊಯಿನ್ಸ್ ತನ್ನ ಅಧಿಕಾರ ತ್ಯಜಿಸಿದ). ಮಲಬಾರಿನ ಮೇಲಕ್ಕೆ ದಂಡೆತ್ತಿ ಹೋದ ಟಿಪ್ಪು ಸುಲ್ತಾನ್ ಡಚ್ಚರೊಂದಿಗೆ ಕ್ರಾಂಗನೂರ್ ಮತ್ತು ಆಯಕೊಟ್ಟ ಕೋಟೆಗಳನ್ನು ಕ್ರಯಕ್ಕೆ ಕೊಳ್ಳುವ ಮಾತುಕತೆ ನಡೆಸಿದ. ಕೋಟೆಗಳೊಡೆಯರು ಕೊಚ್ಚಿನ್‌ನ ರಾಜಾನ ಆಶ್ರಿತರಾಗಿದ್ದರೂ ರಾಜಾ, ಟಿಪ್ಪುವಿನ ಸಾಮಂತನಾಗುಳಿದಿದ್ದ. ಕೋಟೆಗಳು ಟಿಪ್ಪುವಿನ ಕೈಸೇರುವುದು ಅಪಾಯಕಾರಿಯೆಂದು ಭಾವಿಸಿದ ಅವುಗಳೊಡೆಯರು ಅವನ್ನು ಟ್ರಾವಂಕೂರಿನ ಸರಕಾರಕ್ಕೆ ಮಾರಿದರು. ಈ ಪ್ರಕರಣ ೧೭೯೦ರಲ್ಲಿನ ಟ್ರಾವಂಕೂರಿನ ಮೇಲಣ ಟಿಪ್ಪುವಿನ ಅತಿಕ್ರಮಣಕ್ಕೆ ಕಾರಣವಾಯಿತು. ಅತಿಕ್ರಮಣದಿಂದ ಕೊಚ್ಚಿನ್‌ನ ವಿನಾಶವಾಯಿತು. ಟಿಪ್ಪು ಹಿಂದೂ ದೇವಸ್ಥಾನ ಮತ್ತು ಅನ್ಯ ಧಾರ್ಮಿಕ ಸಂಸ್ಥೆಗಳನ್ನು ಸುಲಿದ.

೧೪. ಸಕ್ತನ್ ತಂಪುರನ್ (ಮುಂದುವರಿದುದು)

ಈಗ ಸಕ್ತನ್ ತಂಪುರನ್ ವಾಸ್ತವಿಕವಾಗಿ ಕೊಚ್ಚಿನ್‌ನ ಅರಸನಾಗಿದ್ದ. ಆದರೆ ಕೊಚ್ಚಿನ್‌ನ ಪರಿಸ್ಥಿತಿ ಮಾತ್ರ ಶೋಚನೀಯವಿತ್ತು. ರಾಜ್ಯದ ಕಾರ್ಯಭಾರದ ನಿರ್ವಹಣೆಗಾಗಿ ಸಮರ್ಥ ಆಡಳಿತಾಂಗ ರಚಿಸಲು ಆತ ತನ್ನ ಕೊನೆಯ ದಿನಗಳ ತನಕ (೧೮೦೫) ದುಡಿದ. ರಾಜ್ಯದಾದ್ಯಂತ ಸಂಚರಿಸಿ ಆಡಳಿತೆಯ ವಿವಿಧ ಭಾಗಗಳತ್ತ ಸೂಕ್ಷ್ಮಾತಿಸೂಕ್ಷ್ಮ ಲಕ್ಷ್ಯವಿತ್ತ. ಆತನ ಜಾಗ್ರತ ದೃಷ್ಟಿಯಿಂದ ಏನೊಂದೂ ಮರೆಮಾಚುತ್ತಿಲ್ಲವಿತ್ತು. ಅಧಿಕಾರಿಗಳ ವರ್ತನೆಯ ಮೇಲೆ ಕಣ್ಣಿಡಲು ತನ್ನದೇ ಆದೊಂದು ಪದ್ಧತಿ ಬಳಸಿದ; ಲಂಚಕೋರರಿಗೆ ಕಠೋರ ಶಿಕ್ಷೆಯಿತ್ತ. ನೀರಾವರಿಗಾಗಿದ್ದ ಜಲಾಶಯಗಳ ದುರಸ್ತಿ ಮಾಡಿಸಿ ಬೇಸಾಯಕ್ಕೆ ಪ್ರೋತ್ಸಾಹನೆ ಇತ್ತ. ಮುಖ್ಯತಃ ಆತ ಬ್ಯಾಂಕಿಂಗ್, ವ್ಯಾಪಾರಗಳತ್ತ ಅತ್ಯಾಸಕ್ತಿಕೊಂಡಿದ್ದ. ಆತ ಸಾಲು ಮರಗಳೊಂದಿಗಿನ ರಸ್ತೆ, ಸಂಕ, ಅವಶ್ಯಕತೆಯಿದ್ದಲ್ಲಿ ವಿಶ್ರಾಮ ಗೃಹಗಳ ನಿರ್ಮಾಣ ಮಾಡಿದ. ಮುಖ್ಯವಾದ ಸ್ಥಾನಗಳಲ್ಲಿ ಮಾರುಕಟ್ಟೆಗಳಿಗಾಗಿ ಪ್ರತ್ಯೇಕ ಸ್ಥಳ ಕಾದಿರಿಸಿದ. ಉಗ್ರಾಣಗಳನ್ನು ಕಟ್ಟಿಸಿ ಅವನ್ನು ಗುತ್ತಿಗೆಗಿತ್ತ. ಜನಸಾಮಾನ್ಯರು ಹಿಂದಣ ಅರಸರ ರಾಜ್ಯಭಾರದ ಕಾಲ ಅನುಭವಿಸಿರದಿದ್ದ ಸುರಕ್ಷೆ ಅನುಭವಿಸಿದರು.

ಕೊಚ್ಚಿನ್ ರಾಜಾನ ಅಧಿಕಾರ ಅತೀ ಚಿಕ್ಕ ಕ್ಷೇತ್ರಕ್ಕಷ್ಟೇ ಸೀಮಿತವಾಗಿತ್ತು. ರಾಜ್ಯದ ಬಹುತಾಂಶ ಭೂಭಾಗ, ಅರಮನೆಯ ನೆರೆಕರೆಯ ಭೂಮಿ ಮತ್ತು ದೇವಸ್ಥಾನಗಳು ನಾಯರ್ ಮುಖಂಡರ ಆಧೀನವಿದ್ದವು. ಕೊಚ್ಚಿನ್ ರಾಜಾನ ನಿಷ್ಠಾವಂತ ನಾಯರ್ ಮುಖಂಡರು ಆಗೊಮ್ಮೆ, ಈಗೊಮ್ಮೆ ಝಾಮೋರಿನ್‌ನಿಗೂ ತಮ್ಮ ಬೆಂಬಲವೀಯುತ್ತಿದ್ದರು. ದೇಶಪ್ರೇಮದಿಂದ ಪ್ರೇರೇಪಿತನಾದ ಪಾಲಿಯಮ್‌ನ ನಾಯಕ ಕೋಮಿ ಅಚ್ಚನ್ ಜಹಗೀರುದಾರರ ಸ್ಥಾನೀಯ ವರ್ಚಸ್ಸಿಗೆ ಮುಟ್ಟುಗೋಲು ಹಾಕಲು ದೃಢ ನಿಶ್ಚಯ ಮಾಡಿದ. (ಇದು ಪ್ರಶಂಸನೀಯವಿತ್ತು ಕಾರಣ ಆತ ಸ್ವತಃ ಆ ವರ್ಗಕ್ಕೆ ಸೇರಿದವರಲ್ಲೊಬ್ಬನಿದ್ದ) ಮೂರು ವರ್ಷಗಳ ಕಾಲಾವಧಿಯೊಳಕ್ಕೆ ಆತ ತನ್ನ ರಾಜ್ಯದಲ್ಲೂ, ಟ್ರಾವಂಕೂರಿನ ಮಾರ್ತಾಂಡ ವರ್ಮನ ರಾಜ್ಯದ ಮಾದರಿಯನ್ನು ಸೂಕ್ತ ಬದಲಾವಣೆಗಳೊಂದಿಗೆ ಆಚರಣೆಗೆ ತಂದ. ೧೭೭೯ರಲ್ಲಿ ಈತ ಕಾಲಾಧೀನನಾದ. ಉತ್ತರಾಧಿಕಾರಿ ಅಪ್ರಾಪ್ತವಯಸ್ಕನಿದ್ದ ನಿಮಿತ್ತ ಆತನನ್ನು ಮಂತ್ರಿಯಾಗಿ ನೇಮಿಸಲು ಸಕ್ತನ್ ತಂಪುರನ್ ಒಪ್ಪದಿದ್ದ. ರಾಜ್ಯದ ಐಕ್ಯತೆಗಾಗಿ ಮತ್ತು ಕೊಚ್ಚಿನ್‌ನನ್ನು ಆಧುನಿಕ ಮತ್ತು ಶ್ರೀಮಂತವಾಗಿಸಲು ನೆಲಗಟ್ಟು ಹಾಕಿದ ಈತನನ್ನು ಜನಸಾಮಾನ್ಯರು ಇಂದಿಗೂ ಅರಸನೊಬ್ಬನಿಗೆ ಸಲ್ಲುವ ಗೌರವಾದರ ತೋರುತ್ತಾರೆ.

ಸ್ವೈರ ವೃತ್ತಿಯ ಈತ ಅಳುಕಿಲ್ಲದೆ ತನ್ನ ಮನಸ್ಸಿಗೆ ಬಂದ ನಿಷ್ಠಾವಂತರು ಮತ್ತು ನ್ಯಾಯ ನಿಯಮಗಳನ್ನು ಪಾಲಿಸುವವರಿಗೆ ಭೂಮಿಯನ್ನು ಬಹುಮಾನದ ರೂಪದಲ್ಲೀಯುತ್ತಿದ್ದ. ತನ್ನ ವಿರುದ್ಧ ವರ್ತಿಸುವವರ ಪಾಲಿಗೆ ಮಾತ್ರ ಆತ ನಿರ್ದಯಿಯಿದ್ದ. ಲೋಭಿಯಿದ್ದ ಈತ ಏನನ್ನೂ ಮಾಡಲು ಸಿದ್ಧನಿದ್ದ. ಸ್ಥಾನೀಯ ವ್ಯಾಪಾರಿ, ಶ್ರೀಮಂತರಿಂದ, ಸಂಚಾರೀ ನೌಕೆಗಳ ಯುರೋಪೀಯ ಅಧಿಕಾರಿಗಳಿಂದ ಹಣ ಸುಲಿಯುತ್ತಿದ್ದ. 'ವಸ್ತುತಃ ದುಶ್ಕೃತ್ಯಗಳು ಘಟಿಸಿಕೊಂಡಲ್ಲಿ ಅವುಗಳ ಹೊಣೆಗಾರಿಕೆ ತಾನು ಕೊಳ್ಳುತ್ತಿದ್ದ. ತನ್ನ ಪ್ರಜೆಗಳಿಗೆ ಬೇರೆ ಯಾರೊಬ್ಬರೂ ಬಾಧೆಯೊಯದಂತೆ ನೋಡಿಕೊಳ್ಳುತ್ತಿದ್ದ.'[೬]

ಆತ ರಾಜ್ಯದ ಕಾರ್ಯಭಾರಗಳನ್ನು ತನ್ನ ಕೈಗಳಲ್ಲಿ ಕೊಳ್ಳುವಾಗ ಕೊಂಕಣಿಗರ ಮತ್ತು ಕ್ರಿಸ್ತೀಯರ ಮೇಲಣ ಡಚ್ಚರ ಅಧಿಕಾರ ಕ್ಷೇತ್ರದ ಕುರಿತಾಗಿ ವಿವಾದವಿತ್ತು. ಆದರೆ ಆತ ತಕರಾರಿನ ಕಟ್ಟುಪಾಡುಗಳನ್ನು ದುರ್ಲಕ್ಷಿಸಿ ಪ್ರಜೆಗಳೆಲ್ಲರ ಮೇಲಣ ಸಂಪೂರ್ಣ ಅಧಿಕಾರವನ್ನು ತನ್ನ ಕೈಗಳಲ್ಲಿ ಕೊಳ್ಳುವ ನಿರ್ಧಾರ ಮಾಡಿದ.

ಅಂದಿನ ದಿನಗಳಲ್ಲಿ ಕೊಚ್ಚಿನ್‌ನ ಸಾರಸ್ವತರು ಶ್ರೀಮಂತರಿದ್ದು ತಮ್ಮದೇ ಆದ ವರ್ಚಸ್ಸು ಕೊಂಡಿದ್ದರು. ಈ ಮೊದಲೇ ಹೇಳಿದಂತೆ ಆತ ಅವರ ಮೇಲಕ್ಕೆ ಕರ, ಕಂದಾಯಗಳನ್ನು ಹೇರಿದ. ಮತ್ತೆ ಡಚ್ಚರಿಂದ ಕೆಲವೊಂದು ಸವಲತ್ತುಗಳನ್ನು ಶಕ್ತಿ ಪ್ರಯೋಗಿಸಿ ಕೊಂಡ. ಲ್ಯಾಟಿನ್ ಕ್ರಿಸ್ತೀಯರಿಗೂ ಸಂಬಂಧಿಸಿದ ಈ ಬಗೆಯ ಸವಲತ್ತುಗಳ ದುರುಪಯೋಗ ಮಾಡಿದ ಆತ ಅವರಲ್ಲಿನ ಕೆಲವೊಬ್ಬರ ನಿರ್ಘೃಣಹತ್ಯೆ ಮಾಡಿದ. ಅನ್ಯ ಕೆಲವೊಬ್ಬರನ್ನು ರಾಜ್ಯದಿಂದ ಹೊರಕ್ಕೋಡಿಸಿ ಅವರ ಸಂಪತ್ತನ್ನು ವಶಪಡಿಸಿಕೊಂಡ.

ಡಚ್ಚರೊಂದಿಗಿನ ೧೭೮೯ರ ಕೊನೆಯ ಒಪ್ಪಂದದಲ್ಲಿ ಕ್ರಿಸ್ತೀಯ ಪ್ರಜೆಗಳ ಉಲ್ಲೇಖ ಮಾಡಲಾಗಿದ್ದರೂ ಕೊಂಕಣಿಗರ ಕುರಿತಾಗಿ ಅಲ್ಲಿ ಯಾವೊಂದು ಪ್ರಸ್ತಾಪವಿರಲಿಲ್ಲ. ಡಚ್ಚರ ಪರಮಾಧಿಕಾರವನ್ನು ಹತ್ತಿಕ್ಕಲಾಗಿ ೧೭೯೦ರ ಅಗಸ್ಟ್ ತಿಂಗಳಲ್ಲಿ ಆತ ಇಂಗ್ಲಿಷರ ನೆರವು

ತೋರಿದ. ಬದಲಿಗೆ ಆತ ಟಿಪ್ಪು ಸುಲ್ತಾನನೆಡೆಯಲ್ಲಿನ ರಾಜನಿಷ್ಠೆ ತೊರೆಯಲು ಮತ್ತು ಈಸ್ಟ್ ಇಂಡಿಯಾ ಕಂಪನಿಯ ಸಾರ್ವಭೌಮತ್ವಕ್ಕೆ ಮಾನ್ಯತೆ ಕೊಡಲು ಒಪ್ಪಿಕೊಂಡ. ಆದರೆ ಆತನ ಈ ಒಪ್ಪಂದ ೧೭೯೧ರ ಜನವರಿ ತಿಂಗಳ ೬ರಂದು, ಟಿಪ್ಪು ಕೊಚ್ಚಿನ್‌ನ ಮೇಲಕ್ಕೆ ದಾಳಿ ಮಾಡಿದ ಬಳಿಕವಷ್ಟೇ ಸ್ವೀಕರಿಸಲ್ಪಟ್ಟಿತು. ಈ ಒಪ್ಪಂದದಲ್ಲೂ ಕೊಂಕಣಿಗರ ಕುರಿತಾಗಿ ಯಾವೊಂದು ಉಲ್ಲೇಖ ಕಾಣದಿತ್ತು.

ಈ ನಡುವೆ ಆತ ಸಾರಸ್ವತರನ್ನು ಹಣಕ್ಕಾಗಿ ಒತ್ತರಿಸತೊಡಗಿದ. ಒಮ್ಮೆ ಆತ ಅವರಿಂದ ೫೦,೦೦೦ ರೂಪಾಯಿಗಳ ಸಾಲಕೊಂಡ. ಇನ್ನೊಂದು ಸಂದರ್ಭದಲ್ಲಿ ಆತ ೩೦,೦೦೦ರೂಪಾಯಿಗಳನ್ನು ಕೇಳಿದ. ಹಣ ಕೊಡಲು ಒಪ್ಪದಾಗ ಆತ ಅವರಿಗೆ ಬಾಧೆ ಕೊಡಲಾರಂಭಿಸಿದ. ಹಸ್ತಕ್ಷೇಪ ಮಾಡಿದ ಡಚ್ಚರು ಆತನ ಬೇಡಿಕೆಯನ್ನು ೨೦,೦೦೦ರೂಪಾಯಿಗಿಳಿಸಿದರು. ಆದರೂ ಬಾಧೆಯೀಯುವುದನ್ನು ನಿಲ್ಲಿಸದಿದ್ದಾಗ ಕಮಾಂಡರ್‌ನಿಗೆ ಮನವಿ ಸಲ್ಲಿಸಿದರು. ಡಚ್ಚರು ಅವರ ವಾಸ್ತವ್ಯದೆಡೆಯಲ್ಲಿ ತಮ್ಮ ರಕ್ಷಣಾಧಿಕಾರಿಗಳನ್ನಿರಿಸಿದರು.

೧೫. ದೇವರ್ಸ ಕಿಣಿ

ಸಾರಸ್ವತರಲ್ಲಿನ ಗಣ್ಯಮಾನ್ಯ ವ್ಯಾಪಾರಿಯೂ ಅದೊಮ್ಮೆ ದೇವಸ್ಥಾನವೊಂದರ ಅಧಿಕಾರಿಯೂ ಆಗಿದ್ದ ದೇವರ್ಸ ಕಿಣಿಯ ಕೊಲೆ ಸಾರಸ್ವತ ಸಮಾಜಕ್ಕಾದ ಭೀಷಣ ಆಘಾತವೊಂದಾಗಿತ್ತು. ಅವರು ಕೊಲೆಯ ಕಾರಣ ಮತ್ತೆ ಅದರ ಸೂಕ್ಷ್ಮಾತಿಸೂಕ್ಷ್ಮ ವಿವರಗಳನ್ನು ಇಂದಿಗೂ ಮರೆತಿಲ್ಲ.[೬]

ತ್ರಿಪ್ಪೂಣ್ಣಿತುರ 'ಶ್ರದ್ಧಾ' ಹಬ್ಬದ ಆಚರಣೆಗಾಗಿ ನೂರು 'ತುಲಾಂ'ಗಳಷ್ಟರ ಬೆಲ್ಲವನ್ನು ಸಾರಸ್ವತ ವ್ಯಾಪಾರಿಗಳಿಂದ ತಲಾ ಮುದ್ದೆಯೊಂದರಂತೆ ಸಂಗ್ರಹಿಸಿ ಸಮರ್ಪಿಸಬೇಕಾಗಿದ್ದು ಈ ಕಾರ್ಯದ ಹೊಣೆಗಾರಿಕೆಯನ್ನು ೧೭೯೧ರ ಸೆಪ್ಟೆಂಬರ್ ತಿಂಗಳಲ್ಲಿ ಸಕ್ತನ್ ತಂಪುರನ್ ನಾಮವಂತ ಸಾರಸ್ವತ ವ್ಯಾಪಾರಿ ದೇವರ್ಸ ಕಿಣಿಗೆ ಒಪ್ಪಿಸಿದ. ಅದಷ್ಟೆ ಅಲ್ಲದೆ ತಮ್ಮ ಸಂಪತ್ತಿನ ಸಂರಕ್ಷಣೆಗೆ ಡಚ್ಚರ ಕೋಟೆಯ ರಕ್ಷಣಾಧಿಕಾರಿಗಳನ್ನು ಬಳಸುವ ರೂಢಿಯನ್ನು ನಿಲ್ಲಿಸಬೇಕೆಂದು ಆಜ್ಞಾಪಿಸಿದ. ಈ ಹೊಸ ಬಂಧನ ೧೭೭೨ರಲ್ಲಿ ರಾಜಾ ಮತ್ತು ಡಚ್ಚರ ನಡುವಣ ಕರಾರಿನ ವಿರುದ್ಧವಿರುವುದಾಗಿ ಭಾವಿಸಿದ ಸಾರಸ್ವತರು ಅದನ್ನು ತಿರಸ್ಕರಿಸಿದರು. ಪೇಚಾಟಕ್ಕೊಳಗಾದ ದೇವರ್ಸ ಕಿಣಿ ರಾಜಾನನ್ನು ಕಂಡು ಸಾರಸ್ವತ ವ್ಯಾಪಾರಿಗಳಿಂದ ಸಂಗ್ರಹಿಸಬೇಕಾಗಿದ್ದ ಬೆಲ್ಲವನ್ನು ತಾನೊಬ್ಬನೇ ಸಲ್ಲಿಸುವ ಸಿದ್ಧತೆಯನ್ನು ಆಡಿತೋರಿದ. ದೇವರ್ಸ ಕಿಣಿಯ ಈ ನಿವೇದನೆ ಆತನ ಶ್ರೀಮಂತಿಕೆಯಿಂದ ಪ್ರೇರಿತವಾದುದೆಂದು ಅಪಾರ್ಥ ಮಾಡಿಕೊಂಡ ಸಕ್ತನ್ ತಂಪುರನ್ ಉದ್ವಿಗ್ನನಾದ. ಆತನ ಅಧಿಕಾರಿಗಳಲ್ಲೊಬ್ಬ ಮರುದಿನ ರಾಜಾ ಕಾಣುವ ಮೊದಲ ವಸ್ತು ದೇವರ್ಸ ಕಿಣಿಯ ರುಂಡವಿರುವುದಾಗಿ ನುಡಿದ.

ಮರುದಿನ, ದೀಪಾವಳಿಯ ಮುಂಜಾನೆ, ಕ್ಯಾಪ್ಟನ್ ಪಣಿಕ್ಕರ್ ಇಬ್ಬರು ಯೂರೋಪಿಯನ್ ಅಧಿಕಾರಿಗಳ ಸಮೇತ ದೇವರ್ಸ ಕಿಣಿಯ ಮನೆಗೆ ಹೋದ. ಮತ್ತೆ ಭಾರೀ ಪ್ರಮಾಣದಲ್ಲಿ ರೇಶ್ಮೆಯ ಬಟ್ಟೆ ಖರೀದಿಸಬೇಕಿರುವ ಅವಶ್ಯಕತೆಯ ಕುರಿತು ನುಡಿದು

ಆತನನ್ನು ಅಂಗಡಿಗೆ ಕೊಂಡುಹೋದ. ಆತ ಬಟ್ಟೆ ತೋರಿಸುತ್ತಿರುವ ಹೊತ್ತಿಗೆ ಪಣಿಕ್ಕರ್ ನಡುವಿಗೆ ಕಟ್ಟಿದ್ದ ಮಡಚುವ ಖಡ್ಗ ಎಳೆದು ಆತನ ರುಂಡ ಕತ್ತರಿಸಿದ. ರೇಶ್ಮೆಯ ಬಟ್ಟೆಯಿಂದ ಸುತ್ತಿದ್ದ ರುಂಡವನ್ನು ಆತ ರಾಜಾನಿಗೆ ಅರ್ಪಿಸಿದ. "ದೇವರ್ಸ ಕಿಣಿಯ ಮಗ ಕೃಷ್ಣ, ಮಣಕು ಶೆಣೈ, ರವಳ ಮಲ್ಲ (ಮಲ್ಯ), ಆನಂದ ಪ್ರಕ್ಕಟ್ (ಪುರಕ್ಕಾಡ್), ರಂಗಪ್ಪ ಮತ್ತು ನಾಗೇಂದ್ರ ಪೈ (ಪುರಕ್ಕಾಡ್‌ನ ವ್ಯಾಪಾರಿ) ಇವರೂ ಕೊಲ್ಲಲ್ಪಟ್ಟರು. ಶಿಸ್ತಾ ಪೈ, ಸುಕ್ಕಡೊ ಪೈ, ತಿಮ್ಮಣ್ಣ ಮತ್ತು ಪ್ರಕ್ಕಟ್ ಮರ್ಥ್ಯ ಇವರು ಗಾಯಗೊಂಡರು. ಇದಾಗುತ್ತಲೇ ಅವರು ಅಂಗಡಿ, ಮನೆಗಳನ್ನು ದೋಚಿದರು. ಹಣ, ರತ್ನಾಭರಣಗಳನ್ನು ವಶಪಡಿಸಿಕೊಂಡರು. ದೇವಸ್ಥಾನ ಸುಲಿದು, ಅಲ್ಲಿನ ಕೆಲವೊಬ್ಬ ಅರ್ಚಕರನ್ನು ಬಂಧಿಸಿ ಅರಮನೆಗೆ ರವಾನಿಸಿದರು. ಹಲವೊಂದು ಲಕ್ಷ ರೂಪಾಯಿಗಳ ಸೊತ್ತನ್ನು ಸುಲಿದುಕೊಂಡು ಹೋದರು."

ಕೊಂಕಣಿಗರ ಸುರಕ್ಷೆಯ ಹೊಣೆಗಾರಿಕೆಕೊಂಡಿದ್ದ ಡಚ್ಚರು ಕೋಪೋದ್ರಿಕ್ತರಾಗಿ ರಾಜಾನಿಂದ ಸ್ಪಷ್ಟೀಕರಣ ಕೇಳಿದರು. ಆತ ರಾಜ್ಯದಲ್ಲಿನ ಹಿಂದುಗಳು ತನ್ನ ಅಧೀನವಿದ್ದು, ಡಚ್ಚರು ತಮ್ಮ ವ್ಯವಹಾರದತ್ತ ಮಾತ್ರ ಲಕ್ಷ್ಯವಿತ್ತಲ್ಲಿ ಒಳಿತಿರುವುದಾಗಿ ನುಡಿದ. ೧೭೯೧ರ ಅಕ್ಟೋಬರ್ ತಿಂಗಳಲ್ಲಿ ಡಚ್ಚರು ಯುರೋಪಿಯರ ತುಕಡಿ ಮತ್ತು ಆರು ತೋಪುಗಳೊಂದಿಗೆ ಮಟ್ಟಂಚೇರಿಯ ಅರಮನೆಯ ಮೇಲಕ್ಕೆ ದಂಡೆತ್ತಿ ಹೋದರು. ಮತ್ತೆ ಕೊಂಕಣಿಗರಿಂದ ಸುಲಿದ ಸಂಪತ್ತನ್ನು ಸಾಧ್ಯವಾದಷ್ಟು ಒಂದುಗೂಡಿಸಿ ರಾಜಾನನ್ನು ತ್ರಿಪುಣ್ಣಿಥುರಕ್ಕೆ ಓಡಿಸಿದರು. ರಾಜಾ, ಕೊಚ್ಚಿನ್‌ನಲ್ಲಿದ್ದ ಡಚ್ಚರ ಕೋಟೆಯ ಮೇಲಕ್ಕೆ ಹಲ್ಲೆ ಮಾಡಿ ಅವರನ್ನು ನಗರದಿಂದ ಹೊಡೆದೋಡಿಸುವ ಸಿದ್ಧತೆ ಮಾಡಿದ. ಈಸ್ಟ್ ಇಂಡಿಯಾ ಕಂಪನಿಯ ಪ್ರತಿನಿಧಿ ಮಿಸ್ಟರ್ ಪೌನಿಯ ಹಸ್ತಕ್ಷೇಪದ ಪರಿಣಾಮವಾಗಿ ಪರಿಸ್ಥಿತಿ ನಿಯಂತ್ರಣದಲ್ಲುಳಿಯಿತು. ಪಕ್ಷಗಳೆರಡು ಪರಸ್ಪರ ತಿಕ್ಕಾಟಕ್ಕೆ ತೊಡಗಿದಂತೆ ಆತ ತನ್ನ ಬುದ್ಧಿ ಕೌಶಲ್ಯ, ಚಾತುರ್ಯಗಳಿಂದ ಅವರಿಬ್ಬರಲ್ಲಿ ಮೈತ್ರಿ ಸಾಧಿಸಿದ. ಡಚ್ ಇತಿಹಾಸದ ದಾಖಲೆ ಪತ್ರಗಳಲ್ಲಿ ಈ ಘಟನೆಯನ್ನು 'ದುಗ್‌ವರ್ಡ್ಸ್ ಕಿನ್ನಿ ವಾರ್' ಎಂದಾಗಿ ನಮೂದಿಸಲಾಗಿದೆ.

ಈ ಘಟನೆಯ ನಂತರ ಡಚ್ಚರು ರಾಜಾನೊಂದಿಗೆ ಹೋರಾಡಲು ತಮ್ಮಲ್ಲಿ ಸಾಕಷ್ಟು ಸೇನಾಬಲವಿರದಿರುವುದರ ಅರಿವು ಕೊಂಡರು. ಡಚ್ಚರು ಕೈಬಿಟ್ಟ ಕೊಂಕಣಿಗರು ಮತ್ತು ಕ್ರಿಸ್ತೀಯರು ರಾಜಾನ ಕ್ರೂರ ವರ್ತನೆಗೆ ಬಲಿಬಿದ್ದರು.

೧೬. ವಿಗ್ರಹವನ್ನು ಅಲ್ಲೆಪ್ಪಿಗೆ ಕೊಂಡುಹೋದುದು

ಈ ನಡುವೆ ವೆಂಕಟಾಚಲಪತಿಯ ವಿಗ್ರಹ ಮತ್ತು ದೇವಸ್ಥಾನಕ್ಕೆ ಸಂಬಂಧಿಸಿದ ಬೆಲೆ ಬಾಳುವ ಸೊತ್ತುಕೊಂಡ ಪೆಟ್ಟಿಗೆಯ ಸಮೇತ ಓಡಿ ಹೋದ ಅರ್ಚಕ ಮತ್ತು ಕೆಲವೊಬ್ಬ ಸಾರಸ್ವತ ಗೃಹಸ್ಥರು ಡಚ್ಚರ ನಗರದ ಹೊರಭಾಗದಲ್ಲಿ ವಾಸ್ತವ್ಯಕ್ಕೆ ತೊಡಗಿದರು. ಮಿ. ಪೌನಿಯ ಹಸ್ತಕ್ಷೇಪದ ಬಳಿಕ ರಾಜಾ ಮತ್ತು ಡಚ್ಚರ ನಡುವಣ ಒಡಂಬಡಿಕೆಯ ಪರಿಣಾಮ ಸ್ವರೂಪ ಡಚ್ಚರು ದೇವಸ್ಥಾನದ ಸೊತ್ತುಕೊಂಡ ಪೆಟ್ಟಿಗೆಯನ್ನು ಸಕ್ತನ್ ತಂಪುರನ್‌ನಲ್ಲಿಗೆ ಕಳುಹಿಸಿ ಸಾರಸ್ವತರು ಆತನನ್ನು ಕಾಣಬೇಕೆಂದರು. ಸಾರಸ್ವತರು ವಿಗ್ರಹವನ್ನು ದೋಣಿಯ ಮೂಲಕ ಟ್ರಾವಂಕೂರಿನ ಶೇರ್ತಲ್ಲೈ ತಾಲೂಕಿನ ಥುರವೂರ್‌ಗೆ ಸಾಗಿಸಿ, ಅಲ್ಲಿಂದ ಮುಂದೆ ಪುರಕ್ಕಾಡ್‌ಗೆ ಕೊಂಡುಹೋದರು.

ಕೊಚ್ಚಿನ್ ಮತ್ತು ಟ್ರಾವಂಕೂರ್‌ಗಳ ನಡುವಣ ಸೌಹಾರ್ದಪೂರ್ಣ ಸಂಬಂಧದ ಗಾಭಕೊಂಡು ಸಂಧಾನದ ಮೂಲಕ ವಿಗ್ರಹವನ್ನು ಮರಳಿ ಪಡೆದುಕೊಳ್ಳಬಹುದೆಂದು ಸಕ್ತನ್ ಂಪುರನ್ ಭಾವಿಸಿದ್ದ. ಸಾರಸ್ವತರು ತಮ್ಮ ಹಾಗೂ ವಿಗ್ರಹದ ಸಂರಕ್ಷಣೆಗೆ ಟ್ರಾವಂಕೂರಿನ ರಸು ಕಾರ್ತಿಕ ತಿರುನಾಳ್‌ನ ಆಶ್ವಾಸನೆ ಕೊಂಡರು. ವಿಗ್ರಹವನ್ನು ಅಲ್ಲೆಪ್ಪಿ ನದಿಯ ೀರದಲ್ಲಿನ ಸಾರಸ್ವತರ ದೇವಸ್ಥಾನದ ಅಗ್ರಶಾಲೆಯ ಪಶ್ಚಿಮದಲ್ಲಿನ ೂಠಡಿಯೊಂದರಲ್ಲಿರಿಸಲಾಯಿತು.

ಅಲ್ಲೆಪ್ಪಿ ಆ ದಿನಗಳಲ್ಲಿ ಕಾಡೊಂದಾಗಿತ್ತು.[೧೯] ನಯವಾದ ಮಣ್ಣಿನ ತೀರಕೊಂಡ ಂಗರು ಹಾಕಲು ಬೇಕಿದ್ದ ಅನುಕೂಲತೆಕೊಂಡ ಈ ಸ್ಥಾನ ವರ್ಷದ ಯಾವೊಂದು ಕಾಲದಲ್ಲೂ, ಎಲ್ಲೊಂದು ಬಗೆಯ ಹಡಗುಗಳ ಚಟುವಟಿಕೆಗೆ ಯೋಗ್ಯವಿತ್ತು. ಕೊಚ್ಚಿನ್ ಮತ್ತು ಅನ್ಯ ಸ್ಥಾನಗಳಲ್ಲಿನ ಎಷ್ಟೋ ಮಂದಿ ಸಾರಸ್ವತ ವ್ಯಾಪಾರಿಗಳು ತಮ್ಮ ಕುಟುಂಬೀಯರ ಸಮೇತ ಅಲ್ಲೆಪ್ಪಿಗೆ ಬಂದು ನೆಲೆಗೊಂಡರು. ಅಷ್ಟೆ ಅಲ್ಲದೆ ಕಾಶಿಮಠದ ಗುರುಗಳ ಮತ್ತು ತಿರುಮಲ ದೇವಸ್ಥಾನದ ಅನುಮತಿಕೊಂಡು ೧೭೯೩ರಲ್ಲಿ ಸಕ್ತನ್ ತಂಪುರನ್‌ನ ಪ್ರತಿ ಸಂರಕ್ಷಣೆ ಕೋರಿ ಟ್ರಾವಂಕೂರಿನ ರಾಜಾನಿಗೆ ಬಿನ್ನವತ್ತಳೆ ಕಳುಹಿಸಿದರು. ಇದಕ್ಕೆ ಅನುಕೂಲವಾದ ಪ್ರತಿಕ್ರಿಯೆ ದೊರಕಿತು. ಟ್ರಾವಂಕೂರು ಸರಕಾರ ಅವರಿಗೆ ಮನೆ ಉಗ್ರಾಣಗಳನ್ನು ಕಟ್ಟಲು ಭೂಮಿ ಮತ್ತು ಇನ್ನಿತರ ಸಹಾಯವಿತ್ತಿತು[೨೦]. ಕ್ರಮೇಣ ಅಲ್ಲೆಪ್ಪಿ ವ್ಯಾಪಾರದ ಕೇಂದ್ರವೊಂದಾಗಿ ಬೆಳೆದುಕೊಂಡಿತು. ಅದು ಕೊಚ್ಚಿನ್‌ನ ಪ್ರಮುಖ ಬಂದರೊಂದೆಂದು ಪರಿಗಣಿಸಲ್ಪಟ್ಟಿತು. ಅಲ್ಲೆಪ್ಪಿಯ ಅನಿರೀಕ್ಷಿತ ಶ್ರೀಮಂತಿಕೆಗೆ ವೆಂಕಟಾಚಲಪತಿಯ ವಿಗ್ರಹ ಕಾರಣವೆಂಬ ನಂಬಿಕೆ ವ್ಯಾಪಕವಾಗಿ ಹರಡಿಕೊಂಡಿತು. ಕೊಚ್ಚಿನ್ ಮತ್ತು ಟ್ರಾವಂಕೂರಿನ ಅರಸರಲ್ಲೂ ಈ ನಂಬಿಕೆಯಿತ್ತು. ಕೊಚ್ಚಿನ್‌ನಲ್ಲಿ ಈ ವಿಗ್ರಹ ಸಾರಸ್ವತರಿಂದ ಪೂಜಿಸಲ್ಪಡುತ್ತಿದ್ದರೂ ಅನ್ಯ ಧರ್ಮೀಯರೂ ಇದಕ್ಕೆ ತಮ್ಮ ಕಾಣಿಕೆ ಅರ್ಪಿಸುತ್ತಿದ್ದರು. ಈ ದೈವತ ಸರ್ವಸ್ತರದ ಹಿಂದುಗಳಿಂದ, ಮುಖ್ಯತಃ ಅಲ್ಲೆಪ್ಪಿಯ ವ್ಯಾಪಾರಿಗಳೆಲ್ಲರಿಂದ ಪೂಜಿಸಲ್ಪಡುತ್ತಿತ್ತು. ಕಾರ್ತಿಕ ತಿರುನಾಳ್‌ನ ಕಾಲದಲ್ಲಿ ಸಕ್ತನ್ ತಂಪುರನ್ ವೆಂಕಟಾಚಲಪತಿಯ ವಿಗ್ರಹವನ್ನು ಮರಳಿ ತರಲಾಗಿ ಎಡೆಬಿಡದೆ ಪ್ರಯತ್ನ ಮಾಡಿದ. ಆದರೆ ಟ್ರಾವಂಕೂರಿನ ರಾಜಾ ಅವನತ್ತ ಲಕ್ಷ್ಯವೀಯಲಿಲ್ಲ.

೧೭. ಕೊಚ್ಚಿನ್‌ನಲ್ಲಿ ಬ್ರಿಟಿಷರು

ಸಕ್ತನ್ ತಂಪುರನ್ ಬ್ರಿಟಿಷರ ಸಾರ್ವಭೌಮತ್ವಕ್ಕೊಪ್ಪಿಕೊಂಡ ಬಳಿಕ ಡಚ್ಚರು ಕೇವಲ ಮೂಕ ಸಮ್ಮತಿಯ ಆಧಾರದ ಮೇಲೆ ಉಳಿದುಕೊಂಡರು. ಇದಕ್ಕೂ ಮೊದಲೇ ಅವರು 'ಸೇನಾಶಕ್ತಿ'ಯ ಸೋಗು ತೋರಿದ್ದರು. ಅವರ ಅಧಿಕಾರ ಕೊಚ್ಚಿನ್, ಅದರ ನೆರೆಕರೆ ಮತ್ತು ಕ್ವಿಲೋನ್‌ಗಳಿಗಷ್ಟೆ ಸೀಮಿತವಿತ್ತು. ಅವರು ತಮ್ಮ ವ್ಯವಹಾರವನ್ನು ಕೊಚ್ಚಿನ್‌ನ ರಾಜಾ ಮತ್ತು ತಮ್ಮ ವಿಶೇಷ ಅಧಿಕಾರಕ್ಕೊಳಗಾಗಿದ್ದ ಕ್ರಿಸ್ತೀಯರ ಮೂಲಕ ನಡೆಸುತ್ತಿದ್ದರು. ಬಟಾವಿಯಾ ಗಣರಾಜ್ಯ ಮತ್ತು ಕ್ರಾಂತಿವಾದಿ ಫ್ರಾನ್ಸ್‌ನ ನಡುವಣ ಸಂಬಂಧದ ದುಷ್ಪರಿಣಾಮ ಪೌರಾತ್ಯ ದೇಶಗಳಲ್ಲಿನ ಅವರ ರಾಜ್ಯಗಳ ಮೇಲಕ್ಕೂ ಆಗಿತ್ತು. ೧೭೯೫ರಲ್ಲಿ ಮೇಜರ್ ಪೆಟ್ರಿಯಾನ ನೇತೃತ್ವದಲ್ಲಿನ ಬ್ರಿಟಿಷ್ ಸೇನೆ ಕೊಚ್ಚಿನ್‌ನ ವಿರುದ್ಧ ಕೋರಿಖಕ್ಕೋಟ್‌ನತ್ತ

ಸಾಗಿದಾಗ ಡಚ್ಚರು ಕಾದಾಡದೆ ಸೋಲೊಪ್ಪಿಕೊಂಡರು. ಅವರ ಶರಣಾಗತಿ, ಪೋರ್ಚುಗೀಸರು ತಮ್ಮ ದುರ್ದಿನಗಳಲ್ಲಿ ವಾನ್‌ಗೋಯೆನ್ಸ್ ಪ್ರತಿ ಕೆಚ್ಚೆದೆಯಿಂದ ಕಾದಾಡಿ ಕೊಂಡ ಸೋಲಿಗಿಂತಲೂ ನಿಕೃಷ್ಟವಿತ್ತು. ೧೮೧೪ರಲ್ಲಿ ಪೇರಿಸ್‌ನಲ್ಲಾದ ಒಡಂಬಡಿಕೆಯ ಮೇರೆಗೆ ಡಚ್ಚರು ಕೊಚ್ಚಿನ್‌ನನ್ನು ಬ್ರಿಟಿಷರಿಗೆ ಔಪಚಾರಿಕವಾಗಿ ಹಸ್ತಾಂತರಗೊಳಿಸಿದರು.

೧೮. ಡಚ್ಚರ ಅಧಿಕಾರದ ಸಮಾಪ್ತಿ

ಭಾರತದಲ್ಲಿನ ಡಚ್ಚರ ಪ್ರಭುತ್ವದ ವಿನಾಶ ಪೋರ್ಚುಗೀಸರ ಅಧೋಗತಿಗೆ ಸರಿಹೋಲದಿತ್ತು. ಡಚ್ಚರ ವಿಜಯು ನರಸಂಹಾರ, ಅಮಾನವೀಯ ಕ್ರೌರ್ಯಗಳಿಂದ ದೂರಕ್ಕುಳಿದಿತ್ತು. ಅವರ ಆಳ್ವಿಕೆ ದಕ್ಷ ಮತ್ತು ಸಕ್ಷಮವಿತ್ತು. ಡಚ್ ಅಧಿಕಾರಿಗಳು ಕುಶಲರಿದ್ದು, ರಾಜ್ಯಾಡಳಿತೆಯಲ್ಲಿ ಪ್ರಾವೀಣ್ಯಕೊಂಡವರಿದ್ದರು. ಆರ್ಥಿಕ ದಾರಿದ್ರ್ಯ ಕೊಂಡಿದ್ದ ಪೋರ್ಚುಗೀಸರ ತುಲನೆಯಲ್ಲಿ ಡಚ್ಚರ ಹಣಕಾಸಿನ ಪರಿಸ್ಥಿತಿ ಸುದೃಢವಿತ್ತು. ಕಂಪನಿಯ ಮುಖ್ಯ ಉದ್ದೇಶ ಕೇವಲ ವ್ಯಾಪಾರವಿರುವುದನ್ನು ಅಧಿಕಾರಿಗಳು ಮರೆಯದಂತೆ ಡಚ್ಚರು ನೋಡಿಕೊಳ್ಳುತ್ತಿದ್ದರು. ಕಾರ್ಯಸಿದ್ಧಿಗೆಂದು ಮಾಡುವ ಅನಾವಶ್ಯಕ ಖರ್ಚನ್ನು ಲಾಭದಾಯಿಯಿದ್ದಾಗಲೂ ನಿರ್ದಾಕ್ಷಿಣ್ಯವಾಗಿ ತಡೆಹಿಡಿಯಲಾಗುತ್ತಿತ್ತು. ಸರ್ವಸಾಮಾನ್ಯವಾಗಿ ಡಚ್ಚರು ಭಾರತೀಯರತ್ತ ಔದಾರ್ಯ, ತಾಳ್ಮೆ ಕೊಂಡವರಿದ್ದರು. ಅವರ ಈ ವರ್ತನೆ ಕೇರಳದ ಪಾಲಿಗೆ ಲಾಭದಾಯಕವಾಯಿತು. ಕಂಪನಿ ದೊಡ್ಡ ಪ್ರಮಾಣದಲ್ಲಿ ಬೇಸಾಯ, ತೆಂಗಿನಕೃಷಿಗೆ ತೊಡಗಿ ಅವುಗಳ ಸುಧಾರಣೆಗೆ ದುಡಿಯಿತು. ಮಲಬಾರಿನ ಕರಿಮೆಣಸಿನ ಕುರಿತು ವಿಶ್ವದ ಮಾರುಕಟ್ಟೆಗಳಲ್ಲಿ ಜಾಹೀರಾಗಿ ನುಡಿದ ಡಚ್ಚರು ತಮ್ಮ ವ್ಯಾಪಾರದ ವಿಕಾಸ ಮಾಡಿದರು. ಮಡಿಗಳ ಒಡೆತನ ಕೊಂಡ ಕಂಪನಿ ಉಪ್ಪನ್ನು ತಯಾರಿಸುತ್ತಿತ್ತು. ಡಚ್ಚರು ನೀಲಿಯ ಸಾಗುವಾಳಿಯನ್ನು ಬಳಕೆಗೆ ತಂದರು. ಗೊಲ್ಲೆನೇಸ್ ಮತ್ತು ಮೊಯಿನ್ಸ್ ಇವರು ಬಟ್ಟೆಗೆ ರಂಗನ್ನೀಯುವ ಮತ್ತು ಅಚ್ಚೊತ್ತುವ ಹೊಸ ಕಲೆಯ ಪ್ರಚಾರ ಮಾಡಿದರು.

ಕೋಯಿಲ್ ಪಟ್ಟಂ (ಟುಟಿಕೊರಿನ್)[೨] ದಿಂದ ರಂಗಾರನೊಬ್ಬನನ್ನು ಕರೆದು ತಂದ ಬಾಬಾ ಪ್ರಭು ರಂಗಾರರ ಸಮಾಜವನ್ನೇ ಅಲ್ಲಿ ನೆಲೆಗೊಳಿಸಿದ. ಚಿತ್ರಕಾರನೂ ಆಗಿದ್ದ ಈ ರಂಗಾರನನ್ನು ಮಗ್ಗದ ಹಾಸು ಅಳವಡಿಸುವ ಕೆಲಸಕ್ಕೂ ಬಳಸಲಾಗುತ್ತಿತ್ತು. ಸುಮಾರು ಐವತ್ತು ವರ್ಷಗಳ ನಂತರ, ವಾನ್‌ಗೊಲ್ಲೆನೇಸ್ (೧೭೩೬-೧೭೪೩)ನ ಅಧಿಕಾರದ ಅವಧಿಯಲ್ಲಿ ಕೊರಮಂಡಲದ ಕರಾವಳಿ ಭಾಗದಿಂದ ಕರೆದು ತಂದ ರಂಗಾರರಿಂದ ಚೀಟಿ ಬಟ್ಟೆಯ ಬಣ್ಣದ ಕೆಲಸ ಆರಂಭಿಸಲ್ಪಟ್ಟಿತು. ನಿರೀಕ್ಷಿಸಿದಷ್ಟು ಯಶಸ್ಸು ದೊರಕದ ನಿಮಿತ್ತ ಅದರ ಕೈಬಿಡಲಾಯಿತು ಮತ್ತು ಅವರಲ್ಲಿನ ಕೆಲವು ರಂಗಾರರನ್ನು ಅವರ ಹುಟ್ಟೂರಿಗೆ ಕಳುಹಿಸಲಾಯಿತು. ಉಳಿದವರು ಬಾಬಾ ಪ್ರಭು ಕರೆದು ತಂದಿದ್ದ ರಂಗಾರರೊಂದಿಗೆ, ಡಚ್ಚರ ನಗರದ ಹೊರಭಾಗದಲ್ಲಿ ಅವರಿಗಾಗಿ ನಿರ್ಮಿಸಿದ್ದ ನಿವೇಶದಲ್ಲಿ ವಾಸಮಾಡತೊಡಗಿದರು.

೧೯. ಸಕ್ತನ್ ತಂಪುರನ್ (ಮುಂದುವರಿದುದು)

ಸಕ್ತನ್ ತಂಪುರನ್ ಬ್ರಿಟಿಷರ ಸಂಬಂಧವನ್ನು ಸ್ವಾಗತಿಸಿದ. ಆತ ಟ್ರಾವಂಕೂರ್

ಶಪಡಿಸಿಕೊಂಡಿದ್ದ ಪಾರೂರ್ ಮತ್ತು ಅಲಂಗಡ್‌ಗಳ ಮೇಲಿನ ತನ್ನ ಹಕ್ಕಿನ ಕುರಿತು ಒತ್ತಡ ಹಾಕಿದ. ಬ್ರಿಟಿಷ್ ಕಮಿಷನರ್‌ನನ್ನು ಒಲಿಸಿಕೊಳ್ಳಲಾಗಿ ಸೇನಾಧಿಕಾರಿಯೂ ಆಗಿದ್ದ ತಂಪುರನ್‌ನ ಮುಖ್ಯ ಮಂತ್ರಿ ಎರಡೊಂದು ವರ್ಷಗಳ ಕಾಲ ಅಪಾರ ಧನವ್ಯಯಿಸಿದ. ಆದರೆ ಸರ್ಕಾರದ ತೀರ್ಮಾನ ತನ್ನ ವಿರುದ್ಧವಾದಾಗ ತಂಪುರನ್ ಬ್ರಿಟಿಷರನ್ನು ಧಿಕ್ಕರಿಸಿದ. ಮತ್ತೆ ಅವರ ಪ್ರಜೆಗಳನ್ನು ಬಂಧಿಸಲಾರಂಭಿಸಿದ. ಬ್ರಿಟಿಷರ ಕುರಿತಾದ ಮನಸ್ತಾಪ ೧೮೦೫ರ ಸಪ್ಟಂಬರ್ ತಿಂಗಳಲ್ಲಾದ ಆತನ ಮರಣದ ತನಕ ಉಳಿದುಕೊಂಡಿತ್ತು.

೨೦. ನಾರಾಯಣ ಕಾಮತಿ

ಸಕ್ತನ್ ತಂಪುರನ್ ಸಾರಸ್ವತ ಮತ್ತು ಲೆಟಿನ್ ಕ್ರಿಸ್ತೀಯರನ್ನು ಪಟ್ಟು ಹಿಡಿದು ಪೀಡಿಸತೊಡಗಿದ್ದ. ಬ್ರಿಟಿಷರು ಕೊಚ್ಚಿನ್‌ನಲ್ಲಿ ತಳವೂರಿದ ಬಳಿಕ ಅವರಿಗೆ ತುಸು ನೆಮ್ಮದಿ ದೊರಕಿತು.

೧೭೯೧ರಲ್ಲಿನ ಸಂಧಿಯ ನಿರ್ದಿಷ್ಟ ಅರ್ಥದ ಕುರಿತಾಗಿ ಬ್ರಿಟಿಷ್ ಮತ್ತು ರಾಜಾರ ನಡುವೆ ಹಲವೊಂದು ವಿವಾದಗಳಿದ್ದವು. ತಂಬಾಕಿನ ಅಧಿಕಾರಿಗಳಿಗೆ ಮತ್ತು ಇನ್ನು ಕೆಲವರಿಗೆ ಬಾಧೆಯಿತ್ತಿದ್ದನೆಂಬ ಕಾರಣಕೊಂಡು ಚೆರಿಯಾನಂದಿಪುರಂ (ಅಂದಿಕಡವು) ದ ನಾರಾಯಣ ಕಾಮತಿಯನ್ನು ಸಕ್ತನ್ ತಂಪುರನ್ ೧೮೦೩ರಲ್ಲಿ ಬಂಧಿಸಿದಾಗ, ಸಾರಸ್ವತರ ಮೇಲಣ ಅಧಿಕಾರ ಕ್ಷೇತ್ರದ ಕುರಿತು ಪ್ರಶ್ನಿಸಲಾಯಿತು.

ಬ್ರಿಟಿಷ್ ಕೊಚ್ಚಿನ್‌ನ ಅಸಿಸ್ಟೆಂಟ್ ಕಲೆಕ್ಟರ್ ಡ್ರಮ್ಮಂಡ್, ಬಂಧನದಲ್ಲಿದ್ದ ನಾರಾಯಣ ಕಾಮತಿಯನ್ನು ತನ್ನ ವಶಕ್ಕೀಯಬೇಕೆಂದ. ಈ ಸಂದರ್ಭದಲ್ಲಿ ಉಭಯತರಲ್ಲಿ ಅಪ್ರಿಯ ಪತ್ರವ್ಯವಹಾರ ನಡೆಯಿತು; 'ಕಾಮತಿಯ ಬಿಡುಗಡೆಯಾದಲ್ಲಿ ಅಪರಾಧದ ಕುರಿತು ವಿಚಾರಣೆ ನಡೆಸಿ ರಾಜಾನಿಗೆ ವರದಿಯನ್ನೀಯುವುದಾಗಿ ನುಡಿದ. ಈ ವಿಷಯವನ್ನು ಉಚ್ಚಾಧಿಕಾರಿಗಳಿಗೆ ತಿಳಿಸುವ ಬೆದರಿಕೆಯನ್ನೂ ಇತ್ತ. ಬ್ರಿಟಿಷರೊಂದಿಗಿನ ಒಡಂಬಡಿಕೆಯಲ್ಲಿ ಕೊಂಕಣಿಗರ ಕುರಿತು ಯಾವೊಂದೂ ಉಲ್ಲೇಖವಿರದಿರುವುದನ್ನು ಸಕ್ತನ್ ತಂಪುರನ್ ತೋರಿಗೊಟ್ಟ. ೧೮೦೩ರ ಆಗಸ್ಟ್ ತಿಂಗಳ ೭ರಂದು ರೆಸಿಡೆಂಟ್ ಮೇಜರ್ ಮೆಕಾಲೀ ಈ ವಿಷಯವನ್ನು ಮದ್ರಾಸ್ ಸರಕಾರಕ್ಕೆ ತಿಳಿಸಿದ. ಕೊಚ್ಚಿನ್‌ನಲ್ಲಿನ ಸಾರಸ್ವತರ ಮೇಲಕ್ಕೆ ಅಧಿಕಾರ ಸ್ಥಾಪಿಸಲೆತ್ನಿಸಿದ ಡಚ್ಚರು ತಮ್ಮ ಪ್ರಯತ್ನವನ್ನು ತೀವ್ರ ವಿರೋಧದ ನಿಮಿತ್ತ ಕೈಬಿಡಬೇಕಾಗಿತ್ತೆಂದೂ, ವಾಸ್ತವಿಕವಾಗಿ ಡಚ್ ಮತ್ತು ರಾಜಾನ ನಡುವಣ ಈ ಕುರಿತಾದ ಕರಾರು ಬೆಲೆಯಿಲ್ಲದ ಕಾಗದದ ತುಣುಕೊಂದಾಗಿ ಉಳಿದಿರುವುದಾಗಿಯೂ, ಸಕ್ತನ್ ತಂಪುರನ್ ಅವರ ಮೇಲಕ್ಕೆ ತನ್ನ ಅಧಿಕಾರ ಸ್ಥಾಪಿಸಿರುವನೆಂದೂ, ನಾರಾಯಣ ಕಾಮತಿಯ ಬಂಧನದ ವಿಷಯದಲ್ಲಿ ರಾಜಾ ಪೂರ್ವಾಚಾರವನ್ನನುಸರಿಸಿದ್ದು, ಆತನ ಪ್ರತಿ ಕಠೋರ ಕಾರ್ಯಕ್ಕೆಗೊಳ್ಳಬೇಕಿರುವುದರ ಯೋಗ್ಯಾಯೋಗ್ಯತೆ ಪರಿಶೀಲನೆಯ ಪ್ರಶ್ನೆಯೊಂದಾಗಿರುವುದೆಂದು ತಿಳಿಸಿದ.

೧೮೧೮ರಲ್ಲಿ ಬ್ರಿಟಿಷರು, ಕೊಂಕಣಿಗರು ಮತ್ತು ಕ್ರಿಸ್ತೀಯರ ಮೇಲಣ ತಮ್ಮ ಅಧಿಕಾರ ತ್ಯಜಿಸಿದರು.

೨೧. ವೆಂಕಟಾಚಲಪತಿಯ ವಿಗ್ರಹವನ್ನು ಕೊಚ್ಚಿನ್‌ಗೆ ಮರಳಿಸಿದುದು

ಕೊಚ್ಚಿನ್ ಸಾರಸ್ವತರು ವೆಂಕಟಾಚಲಪತಿಯ ವಿಗ್ರಹದ ಸ್ಥಾನದಲ್ಲಿ ಸಾಲಿಗ್ರಾಮವೊಂದನ್ನಿಟ್ಟು ಅದರ ಪೂಜೆ ಮಾಡಿ ಉತ್ಸವಾದಿಗಳನ್ನಾಚರಿಸುತ್ತಿದ್ದರು. ಸಕ್ತನ್ ತಂಪುರನ್‌ನ ಮರಣಾನಂತರ (ನಿರಂಕುಶಾಧಿಕಾರ ಕೊನೆಗಂಡ ಬಳಿಕ) ಅವರು ಕೊಚ್ಚಿನ್ ಸರಕಾರದ ನೆರವಿನಿಂದ ವಿಗ್ರಹವನ್ನು ಮರಳಿ ಪಡೆಯಲು ಪ್ರಯತ್ನ ಮಾಡಿದರು. ಟ್ರಾವಂಕೂರಿನ ಥುರವೂರ್, ಕೊಟ್ಟಾಯಂ, ಕ್ವಿಲೋನ್, ಪುರಕ್ಕಾಡ್, ಪರುವು ಮತ್ತು ಅಲ್ಲೆಪ್ಪಿಗಳಲ್ಲಿನ ಬಹುಸಂಖ್ಯೆಯ ಸಾರಸ್ವತರೂ ಅದಕ್ಕೆ ಬೆಂಬಲವಿತ್ತರು. ಅಲ್ಲೆಪ್ಪಿ ದೇವಸ್ಥಾನದ ಅಗ್ರಶಾಲೆಯಲ್ಲಿರಿಸಲ್ಪಟ್ಟ ವಿಗ್ರಹಕ್ಕೆ ನಿತ್ಯದ ಪೂಜೆಯ ವಿನಹ ಇನ್ನೇನನ್ನೂ ಮಾಡಲು ಅಸಾಧ್ಯವೆಂದು ಅರಿತ ಅವರು ರೂಢಿಯ ಉತ್ಸವಾದಿಗಳ ಆಚರಣೆಗಾಗಿ ವಿಗ್ರಹವನ್ನು ಮರಳಿಸುವುದು ಯೋಗ್ಯವೆಂದರು.

ಕೊಚ್ಚಿನ್‌ನ ಸಾರಸ್ವತರು ಮೇಲಿಂದ ಮೇಲೆ ಮಾಡಿದ ಮನವಿ ಕಾರ್ತಿಕ ತಿರುನಾಳ್‌ನ ಮೇಲಕ್ಕೆ ಏನೊಂದೂ ಪರಿಣಾಮ ಮಾಡಲಿಲ್ಲ. ಮನವಿಯೊಂದಕ್ಕೆ ಸಂಪೂರ್ಣ ಬೆಂಬಲವಿತ್ತ ತತ್ಕಾಲೀನ ರೆಸಿಡೆಂಟ್ ಕರ್ನಲ್ (ನಂತರ ಸರ್, ಬಿರುದುಕೊಂಡ) ಥೋಮಸ್ ಮುನ್ರೋ ೧೮೧೧ರಲ್ಲಿ ಟ್ರಾವಂಕೂರಿನ ರಾಣಿಗೆ ಪತ್ರ ಬರೆದ. ರಾಣಿ ಲಕ್ಷ್ಮೀಬಾಯಿ (೧೮೧೦-೧೮೧೫) ವಿಗ್ರಹವನ್ನು ಕೊಚ್ಚಿನ್‌ಗೆ ಮರಳಿಸುವರೆ ಆಜ್ಞೆ ಇತ್ತಳು. ಇದು ಅಲ್ಲೆಪ್ಪಿಯ ಜನರಲ್ಲಿನ ವ್ಯಾಪಕ ಅಸಮಾಧಾನಕ್ಕೆ ಕಾರಣವಾಯಿತು. ವಿಗ್ರಹದ ಸ್ಥಾನಾಂತರ ಅಲ್ಲೆಪ್ಪಿಯ ಅಭ್ಯುದಯಕ್ಕೆ ಘಾತಕವಾದೀತೆಂದು ಅವರು ಭಾವಿಸಿದರು. ಟ್ರಾವಂಕೂರ್‌ನ ಸರಕಾರೀ ಅಧಿಕಾರಿಗಳ ಬಿನ್ನವತ್ತಳೆ ಮನ್ನಿಸಿದ ರಾಣಿ ಕೆಲವೊಂದು ದಿನಗಳ ಬಳಿಕ ತನ್ನ ಮೊದಲಿನ ಆಜ್ಞೆಯನ್ನು ಹಿಂದಕ್ಕೆ ಕೊಂಡಳು. ಪರಿಸ್ಥಿತಿಯ ಅರಿವುಕೊಂಡ ಕರ್ನಲ್ ಮುನ್ರೋ ಕೂಡಾ ಇದಕ್ಕೆ ಸಮ್ಮತಿ ವ್ಯಕ್ತಪಡಿಸಿದ.

ಈ ನಡುವೆ ಕೊಚ್ಚಿನ್‌ನ ಅರಮನೆಯಲ್ಲಿನ ಪರಿಸ್ಥಿತಿ ಹಾಳಾಗತೊಡಗಿತ್ತು.

ಕೊಚ್ಚಿನ್‌ನ ಗದ್ದುಗೆಯ ಹಕ್ಕುದಾರನಿದ್ದ ಕೇರಳವೀರವರ್ಮ (೧೮೦೫-೧೮೨೮) ಸಂಸ್ಕೃತ ಮತ್ತು ಮಲಯಾಳಂಗಳ ಪಂಡಿತನಿದ್ದ. ೧೮೧೬ರಲ್ಲಿ ಈತ ಕರ್ನಲ್ ಮುನ್ರೋನಿಗೆ ಪತ್ರವೊಂದನ್ನು ಬರೆದು ತಾನು ಸಂಧಿವಾತ ಮತ್ತು ಹರ್ನಿಯಾಗಳಿಂದ ಬಳಲುತ್ತಿರುವುದಾಗಿಯೂ, ಕೊಚ್ಚಿನ್‌ನ ತಿರುಮಲ ದೇವರ ಕೋಪಕ್ಕೊಳಗಾಗಿರುವುದಾಗಿ ಜ್ಯೋತಿಷಿ ನುಡಿದಿರುವುದಾಗಿಯೂ, ತಾನು ದೇವರ ವಿಗ್ರಹವನ್ನು ಮರಳಿ ತಂದು ಪೂಜೆಯನ್ನು ಯಥಾ ಪ್ರಕಾರ ತೊಡಗಿಸುವುದಾಗಿ ಶಪಥಕೊಂಡಿದ್ದು ತನ್ನ ಬಯಕೆ ಪೂರೈಸಲು ನೆರವನ್ನೀಯಬೇಕಾಗಿ ಕೇಳಿಕೊಂಡ. ಆದರೆ ತನ್ನ ಅಪ್ರಾಪ್ತ ವಯಸ್ಸಿನ ಮಗ ರಾಮವರ್ಮನ ಪ್ರತಿನಿಧಿಯಾಗಿ ರಾಜ್ಯಾಡಳಿತೆ ಕೈಗಳಲ್ಲಿ ಕೊಂಡಿದ್ದ ರಾಣಿ ಲಕ್ಷ್ಮೀಬಾಯಿಯ ತಂಗಿ ಪಾರ್ವತಿಬಾಯಿ ಇದಕ್ಕೊಪ್ಪಲಿಲ್ಲ.

ಅಲ್ಲೆಪ್ಪಿಯಲ್ಲಿ ವೆಂಕಟಾಚಲಪತಿಯ ಉತ್ಸವ ಇತ್ಯಾದಿಗಳನ್ನು ಯೋಗ್ಯ ರೀತಿಯಿಂದ ಆಚರಿಸುವುದು ಅಸಾಧ್ಯವೆಂದು ಕೊಚ್ಚಿನ್‌ನಲ್ಲಿನ ಪಕ್ಷ ಅಸಮಾಧಾನ ವ್ಯಕ್ತಪಡಿಸಿದಾಗ ಟ್ರಾವಂಕೂರ್ ಸರಕಾರ ೧೮೧೪ರಲ್ಲಿ ದೇವಸ್ಥಾನವೊಂದರ ನಿರ್ಮಾಣದ ಯೋಜನೆ

ಡಿತು. ಟ್ರಾವಂಕೂರ್ ಸರಕಾರ ಕಾಶಿಮಠದ ಹದಿನೆರಡನೆಯ ಗುರು ಸುಮತೀಂದ್ರ ರ್ಥರಿಗೆ 'ಅಭಿಮಾನ ಪತ್ರ' ಕಳುಹಿಸಿ ಅವರನ್ನು ಅಲ್ಲೆಪ್ಪಿಗೆ ಬರಮಾಡಿಸಿತು. ಮತ್ತೆ ಗ್ರಹವನ್ನು ಮರಳಿಸುವುದು ಅಸಾಧ್ಯವಿದ್ದ ನಿಮಿತ್ತ ಅಲ್ಲೆಪ್ಪಿಯಲ್ಲಿ ಹೊಸದಾಗಿ ಟ್ಟಲ್ಪಡುತ್ತಿದ್ದ ದೇವಸ್ಥಾನದಲ್ಲಿ ಅದನ್ನು ಸ್ಥಾಪಿಸಲು ಒಪ್ಪಬೇಕೆಂಬ ಆಶಯದ ಪತ್ರ ರೆಯುವಂತೆ ಮಾಡಿತು.

ಸರಕಾರದ ಬೆಂಬಲಕೊಂಡು ಕೊಚ್ಚಿನ್‌ನ ಸಾರಸ್ವತರು ವಿಗ್ರಹವನ್ನು ಮರಳಿಕೊಂಡು ಹೋಗುವುದರ ಸಾಧ್ಯತೆಗೆ ಬೆದರಿದ್ದ ಟ್ರಾವಂಕೂರ್ ಸರಕಾರ ವಿಗ್ರಹಕ್ಕೆ ಕಟ್ಟುನಿಟ್ಟಿನ ವಲನ್ನಿಟ್ಟಿತು. ಅಪಾರ ಧನ ವ್ಯಯಿಸಿ ಕಟ್ಟಿಸಿದ ಹೊಸ ದೇವಸ್ಥಾನದ ನಿರ್ಮಾಣ ಕಾರ್ಯ ಮುಗಿದಂತೆ ಮಾರ್ತಾಂಡವರ್ಮ ೧೮೫೨ರಲ್ಲಿ ಕಾಶಿಮಠದ ಹದಿಮೂರನೆಯ ಗುರು ವನೇಂದ್ರ ತೀರ್ಥರಿಂದ ವಿಗ್ರಹದ ಪುನಃಪ್ರತಿಷ್ಠಾಪನೆ ಮಾಡಿಸಿದ. ರಾಜಾ ದೇವಸ್ಥಾನಕ್ಕೆ ಚ್ಚರದ ಕಾವಲನ್ನಿಟ್ಟ. ಹಾಗೆಯೇ ದೇವಸ್ಥಾನದಲ್ಲಿನ ಪೂಜೆಗೆ ಪ್ರತಿ ತಿಂಗಳಿಗೆ ೧೦೫ ರೂಪಾಯಿಗಳ ದತ್ತಿಯ ವ್ಯವಸ್ಥೆ ಮಾಡಿದ. ಅರಸನ ಆಶ್ರಯದಲ್ಲಿನ ಹೊಸದೇವಸ್ಥಾನ ನೀಯ ಸಾರಸ್ವತರ ಬೆಂಬಲಕೊಂಡಿತು.

೧೮೫೨ರಲ್ಲಿ ಕೊಚ್ಚಿನ್‌ನ ರಾಜಾ, ವೀರಕೇರಳವರ್ಮ (೧೮೫೧-೧೮೫೩) ತಾನು ನಾರಸಿಗೆ ತೆರಳುವ ಮುನ್ನ (ಆತ ಅಲ್ಲಿಯೇ ತೀರಿಕೊಂಡ) ವಿಗ್ರಹವನ್ನು ಯಾವ ರೀತಿಯಿಂದಾದರೂ ಮರಳಿ ತರುವಂತೆ ಕೊಚ್ಚಿನ್‌ನ ಸಾರಸ್ವತರನ್ನು ಕೇಳಿಕೊಂಡ. ಗ್ರಹವನ್ನು ಮರಳಿ ತರಲಾಗಿ ಸಾರಸ್ವತರಿಗೆ ಸರಕಾರಿ ಅಧಿಕಾರಿಗಳ ಬೆಂಬಲ ದೊರಕಿತು. ಂಕಟೇಶ್ವರ ಶೆಣೈಯ ನೇತೃತ್ವ, ಅವರ ದೃಢ ಸಂಕಲ್ಪ ಅವ್ಯಾಹತ ಪ್ರಯತ್ನಕ್ಕೆ ಕಾರಣವಾಯಿತು. ಕೊಚ್ಚಿನ್‌ನಿಂದ ಅಲ್ಲೆಪ್ಪಿಗೆ ಪ್ರವಾಸಿಗಳನ್ನು ತರಬಾರದಾಗಿ ಅಂಬಿಗರಿಗೆ ಕಟ್ಟಾಜ್ಞೆಯಿತ್ತು. ಆದರೂ ಸಾರಸ್ವತರು ತಾವು ಟ್ರಾವಂಕೂರಿನ ಸೀಮಾ ಪ್ರದೇಶದ ವಾಸಿಗಳೆಂದು ನುಡಿದು ಅಲ್ಲೆಪ್ಪಿಗೆ ಬರುತ್ತಿದ್ದರು. ಅವರು ದೇವಸ್ಥಾನದ ಪ್ರಧಾನ ಅರ್ಚಕ ಮಣಾಕು ಭಟ್ಟನನ್ನು ವಿಶ್ವಾಸಕ್ಕೆ ಕೊಂಡು ತಮ್ಮ ಯೋಜನೆಗೆ ಆತನ ಸಹಾಯ ಕೋರಿದರು. ಅರ್ಚಕ ಮೊದಲು ತನ್ನ ಕುಟುಂಬವನ್ನು ಕೊಚ್ಚಿನ್‌ಗೆ ಕಳುಹಿಸಿದ. ೧೮೫೩ರ ಫೆಬ್ರವರಿ ತಿಂಗಳ ೭ರ ರಾತ್ರಿ, ಕೊಚ್ಚಿನ್ ಸಾರಸ್ವತರ ಖರ್ಚಿನಿಂದ ರಾತ್ರಿ ಪೂಜೆ ಜರಗುತ್ತಿದ್ದಾಗ ಆತ ಮೂಲ ವಿಗ್ರಹವನ್ನು ಚಿಕ್ಕ ಪೆಟ್ಟಿಗೆಯೊಂದರಲ್ಲಿ ಅಡಗಿಸಿಟ್ಟು ಪೆಟ್ಟಿಗೆಯ ಸಮೇತ ದೇವಸ್ಥಾನದಿಂದ ಹೊರಬಿದ್ದ; ಮತ್ತೆ ದೋಣಿಯ ಮೂಲಕ ತುಸು ದೂರ ಸಾಗಿ, ತೀವ್ರಗತಿಯ ದೋಣಿಯೊಂದಿಗೆ ದಾರಿಕಾಯುತ್ತಿದ್ದ ರಾಮ ಪೈ ಮತ್ತು ಕೊಚ್ಚಿನ್‌ನ ಅನ್ಯ ಕೆಲವೊಬ್ಬರ ಸಮೇತ ಮರುದಿನ ಬೆಳಗಿನ ೮ರ ಹೊತ್ತಿಗೆ ಮಟ್ಟಾಂಚೇರಿ ಸೇರಿದ. ವಿಗ್ರಹವನ್ನು ತಾಲೂಕು ಆಫೀಸಿನ ಸಮೀಪದ ಕೊಠಡಿಯೊಂದರಲ್ಲಿಟ್ಟರು. ಅಲ್ಲಿಂದ ಅದನ್ನು ಸರಕಾರದ ಅಧಿಕಾರಿಗಳು ಪೋಲೀಸರ ಸಮೇತ ಮೆರವಣಿಗೆಯಲ್ಲಿ ತಿರುಮಲ ದೇವಸ್ಥಾನಕ್ಕೆ ಕೊಂಡೊಯ್ದರು.

ಈ ಪ್ರಕರಣ ರಾಜ್ಯಗಳೆರಡರ ನಡುವೆ ದೊಡ್ಡ ಜಗಳಕ್ಕೆ ಕಾರಣವಾಯಿತು. ಟ್ರಾವಂಕೂರಿನ ರಾಜಾ ವಿಗ್ರಹವನ್ನು ಪಡೆದುಕೊಳ್ಳಲಾಗಿ ಸೇನೆಯನ್ನು ಕಳುಹಿಸುವ ಸಿದ್ಧತೆ

ಮಾಡುತ್ತಿದ್ದಾಗ[೧೩] ಅಲ್ಲಿದ್ದ ಬ್ರಿಟಿಷ್ ರೆಸಿಡೆಂಟ್, ಲೆಫ್ಟಿನೆಂಟ್ ಕರ್ನಲ್ ಕಲ್ಲನ್ ಹಸ್ತಕ್ಷೇಪ ಮಾಡಿದ. ಟ್ರಾವಂಕೂರ್ ಸರಕಾರ ವಿಗ್ರಹವನ್ನು ಮರಳಿ ತರುವಾತನಿಗೆ ಅತಿ ದೊಡ್ಡ ಬಹುಮಾನವೀಯುವ ವಿಚಾರ ಮಾಡಿತು. ಇದು ಹಿಂಸಾಚಾರಕ್ಕೆ ಕಾರಣವಾದೀತೆಂದು ಭಾವಿಸಿದ ರೆಸಿಡೆಂಟ್ ಸರಕಾರದ ಯೋಜನೆಗೆ ನಕಾರವಿತ್ತ. ಈ ವಿಷಯವಾಗಿ ೧೮೫೩ರಲ್ಲಿ ಟ್ರಾವಂಕೂರಿನ ರಾಜಾ ಮದ್ರಾಸ್ ಸರಕಾರಕ್ಕೆ ಪತ್ರ ಬರೆದ. ಸರಕಾರ ಹಸ್ತಕ್ಷೇಪಕ್ಕೊಪ್ಪಲಿಲ್ಲ. ರಾಜಾ ಮಗುದೊಮ್ಮೆ ಬಿನ್ನವಿಸಿದಾಗ ಮದ್ರಾಸ್ ಸರಕಾರ, ಈಸ್ಟ್ ಇಂಡಿಯಾ ಕಂಪನಿಯ ನಿರ್ದೇಶಕರ ೧೮೫೪ರ ಜುಲೈ ತಿಂಗಳ ೧೫ನೇ ತಾರೀಕಿನ ಈ ಮುಂದಣ ಆದೇಶವನ್ನು ಬರೆದು ತಿಳಿಸಿತು:

''ಗೋಪ್ಯವಾಗಿ ವಿಗ್ರಹಗಳನ್ನು ಅಪಹರಿಸಿದ.... ಅನೈತಿಕ ಕೃತ್ಯಕ್ಕೆ ಪ್ರಾಯಶ್ಚಿತ್ತವೆಂದು.... ವಿಗ್ರಹಗಳನ್ನು ಮರಳಿಸಬೇಕು. ಆನಂತರ ಮದ್ರಾಸ್ ಸರಕಾರ ಪಕ್ಷಗಳೆರಡರ ನಡುವಣವಾದದ ನಿಷ್ಪಕ್ಷಪಾತ ತನಿಕೆಯ ಆಶ್ವಾಸನೆಯಿಯುತ್ತದೆ''

ಈ ನಿರ್ದೇಶ ಕೈ ಸೇರುತ್ತಲೇ ಕೊಚ್ಚಿನ್‌ನ ಸಾರಸ್ವತರು ಗಲಿಬಿಲಿಗೊಂಡು ದುಃಖಿತರಾದರು. ನಿರ್ದೇಶದ ಪುನರ್ವಿಚಾರಕ್ಕಾಗಿ ಗವರ್ನರ್-ಇನ್-ಕೌನ್ಸಿಲ್ ಇವರಿಗೆ 'ಜ್ಞಾಪಕ ಪತ್ರ'ವೊಂದನ್ನು ಕಳುಹಿಸಿದರು; ಮದ್ರಾಸ್ ಸರಕಾರ ಹಿಂದೊಮ್ಮೆ ಈ ವಿಷಯವಾಗಿ ಹಸ್ತಕ್ಷೇಪ ಮಾಡಲು ನಿರಾಕರಿಸಿತ್ತೆಂದೂ, ವಿಚಾರಣೆ, ನಿರ್ಣಯಗಳ ದಾರಿಕೊಳ್ಳುವಲ್ಲಿ ವಿಗ್ರಹವನ್ನು ಮರಳಿಸುವುದು ಅನಗತ್ಯವೆಂದೂ, ಮರಳಿಸಿದಲ್ಲಿ ವೆಂಕಟಾಚಲ ಪತಿಯ ಮೂಲವಿಗ್ರಹವನ್ನು ಬಚ್ಚಿಟ್ಟು ಅದರ ಸ್ಥಾನದಲ್ಲಿ ಅನ್ಯ ವಿಗ್ರಹವೊಂದನ್ನಿಡುವುದರ ಸಾಧ್ಯತೆಯಿರುವುದೆಂದೂ ನುಡಿದ ಅವರು, ತಮ್ಮ ಬೇಡಿಕೆ ವಿಧಿ ವಿಹಿತವಲ್ಲವೆಂದು ಕಂಡು ಬಂದಲ್ಲಿ ವಿಚಾರಣೆ ಮುಗಿಯುವ ತನಕ ವಿಗ್ರಹವನ್ನು ಈಸ್ಟ್ ಇಂಡಿಯಾ ಕಂಪನಿಯ ಅಧಿಕಾರ ಕ್ಷೇತ್ರದಲ್ಲಿನ ಅಧಿಕಾರಿಯೊಬ್ಬನ ವಶದಲ್ಲಿರಿಸಬೇಕೆಂದು ಹೇಳಿದರು. ಕೊಚ್ಚಿನ್‌ನ ಸಾರಸ್ವತರು ವಿಗ್ರಹವನ್ನು ಮರಳಿಸುವ ಇರಾದೆ ಕೊಂಡಿರದಿದ್ದ ನಿಮಿತ್ತ ಬಲಪ್ರಯೋಗದ ವಿನಹಾ ಗತ್ಯಂತರವಿಲ್ಲವೆಂದು ಕೊಚ್ಚಿನ್‌ನ ದಿವಾನ್ ಸಂಕರ ನಾಯರ್ ಕಂಪನಿಯ ರೆಸಿಡೆಂಟ್‌ನಿಗೆ ಬರೆದು ತಿಳಿಸಿದ. ಆಗ ತಿರುಮಲ ದೇವಸ್ಥಾನಕ್ಕೆ ಸಂಬಂಧಿಸಿದ ಹಾಗೂ ಅನ್ಯಗಣಮಾನ್ಯ ಸಾರಸ್ವತರ ಭೂಮಿಯನ್ನು ವಶಪಡಿಸಿಕೊಳ್ಳಲಾಯಿತು. ಇದು ಕೊಚ್ಚಿನ್‌ನಲ್ಲಿನ ಸಾರಸ್ವತರ ಸಮಾಜದಲ್ಲಿ ಭಯ ಹರಡಿಸಿತು. ಅವರ ಆನಂತರದ ಮನವಿಗಳತ್ತ ಮದ್ರಾಸ್ ಸರಕಾರ ದುರ್ಲಕ್ಷ್ಯ ತೋರಿತು.

೧೮೫೭ರ ಜನವರಿ ತಿಂಗಳ ೨೮ರಂದು ದಿವಾನ್ ವೆಂಕಟರಾವ್ ವಿಗ್ರಹವೊಂದನ್ನು ಕೊಚ್ಚಿನ್‌ನಿಂದ ಅಲ್ಲೆಪ್ಪಿಗೆ ಕಳುಹಿದ. ಅಲ್ಲಿ ವಿಗ್ರಹ ಮತ್ತು ದೇವಸ್ಥಾನಕ್ಕೆ ಸಂಬಂಧಿಸಿದ ಅನ್ಯ ವಸ್ತುಗಳನ್ನು ಗೌರವಾದರಗಳಿಂದ ಸ್ವೀಕರಿಸಲು ನಾಯರ್ ಬ್ರಿಗೇಡ್‌ನ ಪಡೆಯೊಂದು ದಾರಿ ಕಾಣುತ್ತಿತ್ತು. ಮೂಲ ವಿಗ್ರಹವನ್ನು ಸುಭದ್ರ ಸ್ಥಾನದಲ್ಲಿ ಅಡಗಿಸಿಡಲಾಗಿದೆಯೆಂಬ ವದಂತಿ ಹರಡಿತು.

ಅಲ್ಲೆಪ್ಪಿಯಲ್ಲಿ ವಿಗ್ರಹವನ್ನು ಸ್ಥಾನೀಯ ಸಾರಸ್ವತರು, ದಿವಾನ್, ಟ್ರಾವಂಕೂರ್ ಸರಕಾರದ ಅಧಿಕಾರಿಗಳು, ಅಲ್ಲೆಪ್ಪಿಯಲ್ಲಿನ ಬ್ರಿಟಿಷ್ ಕಮರ್ಶಿಯಲ್ ಏಜಂಟ್ ಮಿಸ್ಟರ್

ಕ್ರಾವ್‌ಫೋರ್ಡ್ ಪರೀಕ್ಷಿಸಿದಾಗ ಅದು ಕೃತ್ರಿಮವಿರುವುದಾಗಿ ತೋರಿಬಂತು. ಮೂಲದ ವಿಗ್ರಹದ ವಾಪಸಾತಿಗೆ ಟ್ರಾವಂಕೂರ್ ಸರಕಾರ ಕೊಚ್ಚಿನ್ ಸರಕಾರಕ್ಕೆ ಮತ್ತೆ ಬರೆದು ತಿಳಿಸಿತು. ೧೮೫೭ರ ಜನವರಿ ತಿಂಗಳ ೩೧ರಂದು ಇನ್ನೊಂದು ವಿಗ್ರಹವನ್ನು ಕಳುಹಿಸಲಾಯಿತು. ಅದು ಕೂಡಾ ನಕಲಿಯಿರುವುದಾಗಿ ತೋರಿಬಂತು.

ಕಟ್ಟಕಡೆಗೆ ರೆಸಿಡೆಂಟ್, ಕೊಚ್ಚಿನ್‌ನ ಸಾರಸ್ವತರ ವರ್ತನೆ ಸಂಶಯಾಸ್ಪದವಿದ್ದು, ಅಲ್ಲೆಪ್ಪಿಗೆ ಕಳುಹಿಸಿದ ವಿಗ್ರಹ ಅಸಲು ಅಥವಾ ನಕಲಿ ಇರುವುದನ್ನು ನಿಶ್ಚಿತವಾಗಿ ಹಿಡಿಯುವುದು ಅಸಾಧ್ಯವೆಂದು ಮದ್ರಾಸ್ ಸರಕಾರಕ್ಕೆ ಬರೆದು ತಿಳಿಸಿದ. ಸರಕಾರ ೧೮೫೯ರ ಆಗಸ್ಟ್ ತಿಂಗಳ ೧೯ರ ಅಪ್ಪಣೆ ಕ್ರಮಾಂಕ ೫೨೯ರ ಮೂಲಕ ವಿಗ್ರಹ ಕೊಚ್ಚಿನ್‌ನ ಸಾರಸ್ವತರದ್ದೆಂದು ಸಾರಿತು. ಮತ್ತು ಅಂದಿನಿಂದ ಅದು ಅಲ್ಲಿಯೇ ಉಳಿದಿದೆ."

ಮದ್ರಾಸ್ ಸರಕಾರದ ೧೮೫೯ರ ಆಗಸ್ಟ್ ತಿಂಗಳ ೧೯ರ ಅಪ್ಪಣೆಯ (ಸಂಕ್ಷಿಪ್ತ) ಉದ್ಧೃತಭಾಗ ಈ ಮುಂದಿನಂತಿದೆ :

"ಅಲ್ಲೆಪ್ಪಿಗೆ ಮೂಲದ ಬಿಂಬವನ್ನು ಹಿಂದಿರುಗಿಸಲಾಗಿದೆಯೆಂಬುದನ್ನು ನಿಶ್ಚಿತವಾಗಿ ಹಿಡಿಯುವುದು ಅಸಾಧ್ಯ. ಅಲ್ಲೆಪ್ಪಿಯ ಅಭ್ಯುದಯಕ್ಕೆ ಈ ವಿಗ್ರಹದ ನಿಕಟ ಸಂಬಂಧವಿರುವುದಾಗಿ ನುಡಿದ ಟ್ರಾವಂಕೂರಿನ ಅಧಿಕಾರಿಗಳ (ವಿಗ್ರಹಗಳ ವಾಪಸಾತಿಯ ಕುರಿತಾದ) ಬೇಡಿಕೆಯನ್ನು ಕರ್ನಲ್ ಮುನ್ರೋ ತಿರಸ್ಕರಿಸಿರುತ್ತಾರೆ. ಬಿಂಬವನ್ನು ಅಲ್ಲೆಪ್ಪಿಗೆ ಕಳುಹಿಸಲಾಗಿದೆ. ರೆಸಿಡೆಂಟ್ ಬಿಂಬವನ್ನು ಆದಷ್ಟು ಬೇಗ ಕೊಚ್ಚಿನ್‌ಗೆ ಮರಳಿಸುವ ಕಾರ್ಯ ಪೂರೈಸುತ್ತಾರೆ".

೨೨. ಕೊಚ್ಚಿನ್‌ನಲ್ಲಿ ಸಾರಸ್ವತ ವಸಾಹತುಗಳು

ಕೊಚ್ಚಿನ್ - ಕನ್ನನೂರ್ ತಾಲೂಕುಗಳಲ್ಲಿನ ೮೦% ಕ್ಕೂ ಮಿಕ್ಕ ಸಾರಸ್ವತರು ಕೊಚ್ಚಿನ್‌ನ ಸುತ್ತಣ ೧೦ ಮೈಲುಗಳ ಅಂತರದಲ್ಲಿ ವಾಸಮಾಡುತ್ತಿದ್ದಾರೆ. ಹೆಚ್ಚಿನವರು ಕೊಚ್ಚಿನ್ ಮತ್ತು ಎರ್ನಾಕುಲಂಗಳಲ್ಲಿ ವಾಸ ಮಾಡುತ್ತಿದ್ದಾರೆ. ಕೇರಳದ ವ್ಯಾಪಾರದ ಏಕಾಧಿಕಾರಕೊಂಡ ಗುಜರಾತಿ ವ್ಯಾಪಾರಿಗಳ ಆಗಮನಾನಂತರ ಸಾರಸ್ವತರ ಏಳಿಗೆಯಾಗಲಿಲ್ಲ.

೨೩. ಪುರಕ್ಕಾಡ್

ಸಾರಸ್ವತರ ಅತಿ ಹಳೆಯ ವಸಾಹತು ಕ್ವಿಲೋನ್‌ನ ದಕ್ಷಿಣಕ್ಕೆ ೧೫ ಮೈಲುಗಳ ದೂರದಲ್ಲಿದ್ದ ಪುರಕ್ಕಾಡ್‌ನಲ್ಲಿತ್ತು. ಅದು ಕೊಚ್ಚಿನ್ ಮತ್ತು ಕ್ವಿಲೋನ್‌ಗಳ ನಡುವಣ ಪ್ರಮುಖ ಬಂದರವೊಂದಾಗಿತ್ತು. ಅಲ್ಲಿನ ವ್ಯಾಪಾರಿಗಳು ತಮ್ಮದೇ ಆದ ಹಡಗುಗಳನ್ನು ಕೊಂಡವರಿದ್ದು ಸಿಲೋನ್ ಮತ್ತು ಅನ್ಯ ದೇಶಗಳೊಂದಿಗೆ ಕರಿಮೆಣಸು, ಅಕ್ಕಿ, ಮುತ್ತು ಮತ್ತು ಹಸ್ತಿದಂತಗಳ ವ್ಯಾಪಾರ ಮಾಡುತ್ತಿದ್ದರು. ಇದರ ದಾಖಲೆ ಪೋರ್ಚುಗೀಸ್ ಮತ್ತು ಡಚ್ಚರ ಇತಿಹಾಸಗಳಲ್ಲಿ ಎದ್ದು ಕಾಣ ಬರುತ್ತದೆ. ಇದು ಪಶ್ಚಿಮ ಕರಾವಳಿಯಲ್ಲಿನ ಕುಖ್ಯಾತ ಬ್ರಿಟಿಷ್ ಕಡಲು ಕಳ್ಳ ಕೇಪ್ಟನ್ ಕಿಡ್ಡ್‌ನ ಕಾರ್ಯಕ್ಷೇತ್ರವೆನ್ನಿಸಲಾಗುತ್ತದೆ.

ಬಂದರು ಕಡಲ ಕೊರೆತದಿಂದ ಹಾಳುಬಿತ್ತು. ಹದಿನೆಂಟನೆಯ ಶತಮಾನದ

ಕೊನೆಯಲ್ಲಿ ಅಲ್ಲೆಪ್ಪಿ ಅಭಿವೃದ್ಧಿಗೊಂಡ ಬಳಿಕ, ಮಳೆಗಾಲದ ದಿನಗಳಲ್ಲಿ ಕೆಲವೊಂದು ಹಡಗುಗಳು ಇಲ್ಲಿಗೆ ಬರುತ್ತಿದ್ದರೂ, ಅದು ತನ್ನ ಮಹತ್ವ ಕಳೆದುಕೊಂಡಿತು. ಸಾರಸ್ವತರಲ್ಲಿನ ಹೆಚ್ಚಿನವರು ಅಂಬಲಪುಝ ಮತ್ತು ಇನ್ನಿತರ ಸ್ಥಾನಗಳಿಗೆ ವಲಸೆಹೋದರು. ಪುರಕ್ಕಾಡ್ ಈಗ ಚಿಕ್ಕ ಹಳ್ಳಿಯೊಂದಾಗುಳಿದಿದೆ.

೨೪. ಟ್ರಾವಂಕೂರಿನಲ್ಲಿನ ಇತರ ವಸಾಹತುಗಳು

ಟ್ರಾವಂಕೂರಿನ ಅರೆವಾಸಿ ಸಾರಸ್ವತರು ಶೇರ್ತಲ್ಲೈ (ಶೇರ್ತಲ) ಯಲ್ಲಿ ವಾಸಮಾಡುತ್ತಿದ್ದಾರೆ. ಇನ್ನುಳಿದವರು ೧೭೫೬ರಲ್ಲಿ ಮಾರ್ತಾಂಡವರ್ಮ ಕೊಚ್ಚಿನ್‌ನಿಂದ ವಶಪಡಿಸಿಕೊಂಡ ಅಂಬಲಪುಝ (ಅಂಬಲಪ್ಪುಲ) ತಾಲೂಕಿನಲ್ಲಿ ವಾಸಿಸುತ್ತಿದ್ದಾರೆ. ಎಂಟು ಗ್ರಾಮ (ಗ್ರಾಮಂ) ಗಳೆಂದು ಪರಿಚಿತವಾದ ಅಲ್ಲೆಪ್ಪಿ, ಥುರವೂರ್, ಪುರಕ್ಕಾಡ್, ಶೇರ್ತಲ್ಲೈ, ಪಾರೂರ್, ಕೊಟ್ಟಾಯಂ, ಕನ್ಯಾಕುಲಂ ಮತ್ತು ಕ್ವಿಲೋನ್ ಇವು ಅವರ ಪ್ರಮುಖ ವಾಸಸ್ಥಾನಗಳಾಗಿವೆ.

ಸಂದರ್ಭಸೂಚಿ

೧. ವಾಸ್ಕೋಡಗಾಮಾ ಪೂರ್ವ ಆಫ್ರಿಕಾದಲ್ಲಿನ ಮೆಲಿಂದೆಯ ಸುಲ್ತಾನ್ ಒದಗಿಸಿದ ಹಡಗಿನ ಕಪ್ತಾನನೊಂದಿಗೆ ಕೋಝಿಕೋಡಿಗೆ ಬಂದ. ಶ್ರೀ ಸಿ. ಆರ್. ಕೃಷ್ಣ ಐಯ್ಯರ್, ಎಮ್.ಎ.ಎಲ್.ಟಿ., ಈತನ ಮೇರೆಗೆ ಹಡಗಿನ ಕಪ್ತಾನ ಕೊಂಕಣಿ ನುಡಿಯುತ್ತಿದ್ದ. 'ದ ಝೂಮೊರಿನ್ ಆಫ್ ಕೆಲಿಕಟ್' ಪುಟ ೧೩೮. ಶ್ರೀ ಕೆ. ಎಮ್. ಪಣಿಕ್ಕರ್ ಆತ ಅರಬನಿದ್ದನೆಂದು ಹೇಳಿರುತ್ತಾನೆ. ದ. ಮಲಬಾರ್ ಎಂಡ್ ದ ಪೋರ್ಚುಗೀಸ್' (ಪುಟ ೩೦)

೨. 'ದ ಝೂಮೊರಿನ್ಸ್ ಆಫ್ ಕೆಲಿಕಟ್' ಶ್ರೀ ಸಿ. ಆರ್. ಕೃಷ್ಣ ಐಯರ್,ಪುಟ ೧೪೭.

೩. 'ದ ಮಲಬಾರ್ ಎಂಡ್ ದ ಡಚ್ - ಶ್ರೀ ಕೆ. ಎಮ್. ಫಣಿಕ್ಕರ್, ೧೯೩೧, ಪುಟ-೭.

೪. ಕೊಚ್ಚಿನ್‌ನ ಸಾರಸ್ವತರ ವಿವರಗಳನ್ನು ಶ್ರೀ ಕೆ. ಪಿ. ಪದ್ಮನಾಭ ಮೆನನ್ ಬಿ.ಎ., ಬಿ.ಎಲ್. ಈತನ 'ಹಿಸ್ಟರಿ ಆಫ್ ಕೇರಳ' ಸಂ. ೩, ಶ್ರೀ ಅಚ್ಚುತ ಮೆನನ್. ಬಿ.ಎ. ೧೯೧೧ ಈತನ 'ದ ಕೊಚ್ಚಿನ್ ಸ್ಟೇಟ್ ಮ್ಯಾನ್ಯುಅಲ್, ಡಾ. ಪಿ.ಸಿ. ಅಲೆಕ್ಸಾಂಡರ್ ೧೯೪೬ ಈತನ 'ದ ಡಚ್ ಇನ್ - ಮಲಬಾರ್' ಪುತ್ತೆಝಥ್ ರಾಮನ್ ಮೆನನ್ ಈತನ 'ಸಕ್ತನ್ ತಂಪುರನ್, 'ದ ರೆಕಾರ್ಡ್ ಇನ್ ಓರಿಯೆಂಟಲ್ ಲೇಂಗ್ವೇಜಸ್, ಕೊಚ್ಚಿನ್ ಸ್ಟೇಟ್', ಪುಸ್ತಕ ೧ ಮತ್ತು ೨, 'ಸಿಲೆಕ್ಷನ್ ಫ್ರಮ್ ದ ರೆಕಾರ್ಡ್ ಆಫ್ ದ ಮದ್ರಾಸ್ ಗವರ್ನಮೆಂಟ್ - ಡಚ್ ರೆಕಾರ್ಡ್ಸ್', ನಂ.೧೩, 'ಫೋರ್ಟ್ ಸೈಂಟ್ ಜೋರ್ಜ್ - ಪೊಲಿಟಿಕಲ್ ಕನ್ಸಲ್ಟೇಷನ್ಸ್ - ೨೯ ಸೆಪ್ಟೆಂಬರ್ ೧೮೫೭ ಮತ್ತು ಶ್ರೀ ಎಸ್. ಜೆ.ಕಾಮತಿ ಈತನ 'ಶ್ರೀ ಕೊಚ್ಚಿನ್ ತಿರುಮಲ ದೇವಸ್ಥೋವಮ್', ಕೊಚ್ಚಿನ್ ಇತ್ಯಾದಿಗಳ ಆಧಾರಕೊಂಡು ಸಂಗ್ರಹಿಸಲಾಗಿದೆ. ಶ್ರೀ ಕಾಮತಿ ತನ್ನ ತಂದೆ ಶ್ರೀ ಅಲ್ಲು ನಾರಾಯಣ ಕಾಮತಿಯಂತೆ ೧೮೭೬-೧೯೦೭ ರ ಕಾಲಾವಧಿಯಲ್ಲಿ ಕೊಚ್ಚಿನ್‌ನ ದೇವಸ್ಥಾನದ 'ಅಧಿಕಾರಿ'ಗಳಲ್ಲೊಬ್ಬನಾಗಿದ್ದ. ಶ್ರೀ ನಾರಾಯಣ ಕಾಮತಿ ೧೮೮೩ರಲ್ಲಿ ವೆಂಕಟಾಚಲಪತಿಯ ವಿಗ್ರಹವನ್ನು ಕೊಚ್ಚಿನ್‌ಗೆ ಮರಳಿ ತರುವ ವ್ಯವಸ್ಥೆ ಮಾಡಿದವರೊಂದಿಗೆ ಅತಿ ನಿಕಟ, ವೈಯಕ್ತಿಕ ಸಂಬಂಧ ಕೊಂಡಿದ್ದ.

೫. ಇದು ೧೬೬೩ರಲ್ಲಿ ವೀರ ಕೇರಳವರ್ಮ ಮತ್ತು ಡಚ್ಚರ ನಡುವೆ ಆದ ಕರಾರಿನಲ್ಲಿ ಉಲ್ಲೇಖಿಸಲ್ಪಟ್ಟಿದೆ. ಪುತ್ತೆಝಥ್ ರಾಮನ್ ಮೆನನ್ ಬರೆದ 'ಸಕ್ತನ್ ತಂಪುರನ್', ಪುಟ ೪೧೬.

೬. ಶ್ರೀ ಸಿ. ಅಚ್ಯುತ ಮೆನನ್ ಬಿ.ಎ., ಈತನ 'ದ ಕೊಚ್ಚಿನ್ ಸ್ಟೇಟ್ ಮ್ಯಾನ್ಯುಅಲ್' ೧೯೧೧, ಪುಟ ೧೩೯.

೭. ಈ ಘಟನೆಯ ವಿವರಗಳನ್ನು ಶ್ರೀ ಕೆ. ಪಿ. ಪದ್ಮನಾಭ ಮೆನನ್, ಬಿ.ಎ., ಬಿ.ಎಲ್ ಬರೆದ 'ಹಿಸ್ಟರಿ ಆಫ್ ಕೇರಳ' ಸಂ. ೩, ಪುಟ ೬೧೨ ರಲ್ಲಿ ಕಾಣಬಹುದು.

೮. ಸಪ್ಟೆಂಬರ್ ತಿಂಗಳ ಮೂರನೆಯ ವಾರದಲ್ಲಿ ರಾಜಾನ ಯುರೇಷಿಯಾ ಮೂಲದ ಅಧಿಕಾರಿಗಳಿಬ್ಬರು ರೋಜಿಮೋರ್ ಹೆಸರಿನ ಕುಲೀನ, ಉಚ್ಚ ಪದಾಧಿಕಾರಿಯೊಂದಿಗೆ ಕಣಿಯ ಅಂಗಡಿಗೆ ಹೋದರು. ಕಣಿ ಅವರಿಗೆ ರೇಷ್ಮೆಯ ಬಟ್ಟೆಯನ್ನು ತೋರಿಸುತ್ತಿದ್ದಾಗ ಅಧಿಕಾರಿಗಳಲ್ಲೊಬ್ಬ ಆತನ ಕತ್ತನ್ನು ಕತ್ತರಿಸಿ ರಾಜಾನಲ್ಲಿಗೆ ಕೊಂಡುಹೋದ. ಆ ನಂತರ ಸೈನ್ಯ ಕನರಿನ್ ಬಝಾರ್' ನ ಮೇಲಕ್ಕೆರಗಿತು - ಫ್ರಾನ್ಸಿಸ್ ಡೇ, ಎಫ್.ಎಲ್.ಎಸ್., ಈತನ 'ದ ಲೇಂಡ್ ಆಫ್ ಪೆರುಮೌಲ್ಸ್ ಆರ್ ಕೊಚ್ಚಿನ್ - ಇಟ್ಸ್ ಪಾಸ್ಟ್ ಆಂಡ್ ಪ್ರಸೆಂಟ್', ೧೮೬೩, ಪು. ೩೬೨

೯. “ಆ ದಿನಗಳಲ್ಲಿ ವ್ಯಾಪಾರಿಗಳಿದ್ದ ಕೊಂಕಣಿಗರ ಸಮಾಜ ಶ್ರೀಮಂತವಿತ್ತು. ರಾಜಾ, ಬೆದರಿಕೆಯಿತ್ತು ಧನಾಢ್ಯರಿಂದ ಹಣ ವಸೂಲಿ ಮಾಡುತ್ತಿದ್ದ. ಅವರ ಬೆಲೆ ಬಾಳುವ ರತ್ನ, ಚಿನ್ನಾಭರಣ, ದೇವಸ್ಥಾನಗಳಲ್ಲಿನ ರತ್ನಖಚಿತ ವಿಗ್ರಹ ಇತ್ಯಾದಿಗಳನ್ನು ಬಲವತ್ತರ ಕೊಂಡೊಯ್ಯ ತೊಡಗಿದ. ದೇವಸ್ಥಾನಗಳ ವ್ಯವಸ್ಥಾಪಕರು ನಿಯೋಜಿತ ಸುಲಿಗೆಯ ಸುದ್ದಿಯನ್ನು ಮುಂದಾಗಿ ಪಡೆದುಕೊಂಡು, ವಜ್ರಾಭರಣ, ಸ್ವರ್ಣಾಲಂಕಾರ, ವಿಗ್ರಹ ಇತ್ಯಾದಿಗಳನ್ನು ಅಲ್ಲೆಪ್ಪಿಗೆ ರವಾನಿಸಿದರು. ತತ್ಪರಿಣಾಮ ದೇವಸ್ಥಾನದ 'ಅಧಿಕಾರಿ'ಗಳು ಬಂಧಿಸಲ್ಪಟ್ಟರು. ಮತ್ತೆ ಅರಸನ ಆಜ್ಞೆಯ ಮೇರೆಗೆ ಅವರನ್ನು ಗಲ್ಲಿಗೇರಿಸಲಾಯಿತು.-” ಶ್ರೀ ಸಿ. ಅಚ್ಯುತ ಮೆನನ್ ಬಿ.ಎ., ಈತನ 'ದ ಕೊಚ್ಚಿನ್ ಸ್ಟೇಟ್ ಮ್ಯಾನ್ಯುವಲ್' ೧೯೧೧ ಪುಟ ೧೫೦.

೧೦. ಶ್ರೀ ಸದಯಾತಿಲ್ಯ ಟಿ. ಕೆ. ವೇಲು ಪಿಳ್ಳೈ, ಬಿ.ಎ., ಬಿ.ಎಲ್., 'ದಿ ಟ್ರಾವಂಕೂರ್ ಸ್ಟೇಟ್ ಮ್ಯಾನ್ಯುಅಲ್' ೪, ಪುಟ ೬೮೧ ಮತ್ತು ಶ್ರೀ ಪುತ್ತೆ ್ರಝಥ್ - ರಾಮನ್ ಮೆನನ್ ಈತನ 'ಸಕ್ತನ್ ತಂಪುರನ್' ಪು. ೪೨೮.

೧೧. ತಿರುಮಲ ದೇವರ್ ಪಗೋಡದ 'ಅಧಿಕಾರಿ'ಗಳು ಅಧಿಕೃತಗೊಳಿಸಿದ್ದ ಪ್ಯಕಾಸಿಯಾ ೨೩ರಂದಿನ (ಕ್ರಿ.ಶ.೧೮೦೩) 'ಚಿಟ್' ದಸ್ತಾವೇಜನ್ನು ಟ್ರಾವಂಕೂರಿನ ದಿವಾನ ವಿ.ಕೆ. ಕೃಷ್ಣರಾವ್ ತ್ರಿವಂದ್ರಮ್‌ನ ರೆಸಿಡೆಂಟ್ ಲೆ.ಜ. ಡಬ್ಲ್ಯು ಕಲ್ಲೆನ್‌ಗೆ ಬರೆದ ೩೦-೭ ೧೮೫೭ರ ಪತ್ರದೊಂದಿಗೆ ಲಗ್ತೀಕರಿಸಿದ್ದ. ಅದು ಟ್ರಾವಂಕೂರ್ ಸರಕಾರ ಇತ್ತ ಆರ್ಥಿಕ ಸಹಾಯ ಮತ್ತು ರಾಮ ಕಣಿಗಾಗಿ ಕಟ್ಟಿಸಲಾಗಿದ್ದ ಉಗ್ರಾಣಕ್ಕೆ ಸಂಬಂಧಿಸಿದ್ದಾಗಿದೆ.

೧೨. ಶ್ರೀ ಕೆ. ಎಮ್. ಪಾಣಿಕ್ಕರ್ ಬರೆದ 'ದ ಮಲಬಾರ್ ಎಂಡ್ ದ ಡಚ್' ೧೯೩೧ ಪುಟ ೧೫೮.

೧೩. ಇದು ಟ್ರಾವಂಕೂರಿನ ರಾಜಾ ೧೮೫೫ರಲ್ಲಿ ಮದ್ರಾಸಿನ ಗವರ್ನರ್‌ನಿಗೆ ಮಾಡಿದ ಮನವಿಯಲ್ಲಿದೆ.

೧೪. ರೂಢಿಯಲ್ಲಿರುವ ಕಥೆಯೊಂದರ ಮೇರೆಗೆ ವೆಂಕಟಾಚಲಪತಿಯ ವಿಗ್ರಹವನ್ನು ಗುಟ್ಟಾಗಿ

ತಂದಿರುವುದರ ಕುರಿತಾಗಿ ಕೊಚ್ಚಿನ್‌ನ ಅಧಿಕಾರಿಗಳು ವಿಚಾರಣೆ ಮಾಡುತ್ತಿರುವುದನ್ನರಿತಾಗ ದೇವಸ್ಥಾನದ ಅರ್ಚಕರು ವಿಗ್ರಹವನ್ನು ರಾಮ ಪೈಗಳಿಗೊಪ್ಪಿಸಿದರು. ರಾಮ ಪೈ ವಿಗ್ರಹದೊಂದಿಗೆ ದಕ್ಷಿಣಕ್ಕೆ ಹೋಗಿ ಅಲ್ಲಿನ ಹಳ್ಳಿಯೊಂದರಲ್ಲಿದ್ದ ದೇವಸ್ಥಾನದ ಬಾಡಿಗೆದಾರರ ನಡುವೆ ಸನ್ಯಾಸಿಯೊಬ್ಬನಂತೆ ದಿನಗಳೆಯ ತೊಡಗಿದ. ಮದ್ರಾಸ್ ಸರಕಾರ ೧೮೫೭ರಲ್ಲಿ ವಿಗ್ರಹವನ್ನು ಅಲ್ಲೆಪ್ಪಿಗೆ ಮರಳಿಸಬೇಕೆಂಬ ಅಪ್ಪಣೆ ಜಾರಿ ಮಾಡಿದಾಗ ಆತ ನಕಲಿ ವಿಗ್ರಹವೊಂದನ್ನು ಅಧಿಕಾರಿಗಳಿಗೊಪ್ಪಿಸಿದ. ಅವರು ಅದನ್ನು ಅಲ್ಲೆಪ್ಪಿಗೆ ರವಾನಿಸಿದರು. ಮದ್ರಾಸ್ ಸರಕಾರ ಅಖೇರಿಗೆ ೧೮೫೯ರಲ್ಲಿ ಅಪ್ಪಣೆಯೊಂದನ್ನು ಜಾರಿ ಮಾಡಿ ಟ್ರಾವಂಕೂರ್‌ನ ಅಧಿಕಾರಿಗಳು ವಿಗ್ರಹವನ್ನು ಕೊಚ್ಚಿನ್‌ಗೆ ಮರಳಿಸಬೇಕೆಂದಾಗ ಅವರು ಅಲ್ಲೆಪ್ಪಿಯಲ್ಲಿದ್ದ ವಿಗ್ರಹವನ್ನು ರವಾನಿಸುವ ವ್ಯವಸ್ಥೆ ಮಾಡಿದರು. ಕೊಚ್ಚಿನ್‌ನ ಸಾರಸ್ವತರ ಅಪೇಕ್ಷೆಯ ಮೇರೆಗೆ ದಿವಾನ ವೆಂಕಟರಾವ್ ವಿಗ್ರಹವನ್ನು ಸ್ವೀಕರಿಸಿ ಎರ್ನಾಕುಲಂದಲ್ಲಿನ ಹುಝೂರ್ ಆಫೀಸಿನಲ್ಲಿಟ್ಟ. ಮರುದಿನ ಮುಂಜಾನೆ ರಾಮ ಪೈ ಆರಾಧನೆಗೆಂದು ತಿರುಮಲ ದೇವಸ್ಥಾನಕ್ಕೆ ಹೋಗಿ ರೇಶ್ಮೆ ಬಟ್ಟೆ ಸುತ್ತಿದ್ದ ಗಂಟೊಂದನ್ನು ಕಾಣಿಕೆಯ ರೂಪದಲ್ಲಿ ಅರ್ಚಕನ ಕೈಗಿತ್ತ. ಈ ಗಂಟಿನೊಳಕ್ಕೆ ವೆಂಕಟಾಚಲಪತಿಯ ಮೂಲ ವಿಗ್ರಹವಿತ್ತು.

ಭಾಗ ೨

ಅಧ್ಯಾಯ ೧೧

ಸಾರಸ್ವತರ ಜಾತಿ ಮತ್ತು ಧರ್ಮ

೧. ಸಾರಸ್ವತರು, ಗೋವಾದ ಬಾಮಣರು (ಬ್ರಾಹ್ಮಣರು)

ಪುರಾತನ ಕಾಲದಿಂದ ಗೋವಾ ಮತ್ತು ಕಾರ್ವಾರಗಳ ನಡುವಣ ಸಾರಸ್ವತರು ಬಾಮಣ (ಬ್ರಾಹ್ಮಣರು)[1] ರೆಂದಾಗಿಯೂ ಇನ್ನುಳಿದ ಬ್ರಾಹ್ಮಣರು ಅವರ ಸಮಾಜದ ಹೆಸರಿನಿಂದಲೂ (ಉದಾ : ಭಟ್ (ಚಿತ್ಪಾವನ), ಕರ್ಹಾಡ ಬ್ರಾಹ್ಮಣರು ಇತ್ಯಾದಿ) ಪರಿಚಿತರಾಗಿದ್ದರು. ಉತ್ತರೆಯ ಸಾರಸ್ವತರು ಮತ್ತು ದಕ್ಷಿಣದ ಅನ್ಯ ಬ್ರಾಹ್ಮಣರಂತೆ, ಅವರ ಪುರೋಹಿತರು ಸಮಾಜದ ಇನ್ನಿತರ ವರ್ಗಗಳ ಪೌರೋಹಿತ್ಯ ನಿರ್ವಹಿಸದಿದ್ದರು; ಚಡ್ಡೆ ಅಥವಾ ಚಾರ್ಡೋಸ್ (ಕ್ಷತ್ರಿಯ), ವಾಣಿಗಳು (ವೈಶ್ಯರು) ಮತ್ತು ಸುದಿರರು (ಶೂದ್ರರು) ಕರ್ಹಾಡ ಬ್ರಾಹ್ಮಣರನ್ನು ಬಳಸುತ್ತಿದ್ದರು. ಉದರಂಭರಣೆಗಾಗಿ ಶೂದ್ರರ ಮತ್ತು ಇನ್ನಿತರ ಕೆಳಜಾತಿಯವರಲ್ಲಿನ ಪೌರೋಹಿತ್ಯ ನಿರ್ವಹಿಸಬೇಕಾಗಿದ್ದ ಸಾರಸ್ವತರಲ್ಲಿನ ಕೆಲವು ಬಡಕುಟುಂಬಗಳು ತಮ್ಮ ಸಮಾಜದಿಂದ ದೂರಕ್ಕೆ ಸರಿದುಕೊಂಡವು. ಕಿರವಂತರೆಂದು ಪರಿಚಿತರಾಗಿದ್ದ ಇವರು ಈಗ ಕರ್ಹಾಡ ಬ್ರಾಹ್ಮಣ ಸಮಾಜದೊಂದಿಗೆ ಬೆರೆತುಕೊಂಡಿರುತ್ತಾರೆ.[2]

೨. ಸಾರಸ್ವತರು ಅನುಸರಿಸುತ್ತಿದ್ದ ವೇದ ಮತ್ತು ಸೂತ್ರಗಳು

ಋಗ್ವೇದದ ಶಾಕಲ ಮತ್ತು ಬಾಷ್ಕಲ ಎಂಬೀ ಶಾಖೆಗಳೆರಡರಲ್ಲಿ ಸಾರಸ್ವತರು ಶಾಕಲ ಶಾಖೆಯನ್ನು ಅನುಸರಿಸುತ್ತಾರೆ. ಅಶ್ವಲಾಯನ ಮತ್ತು ಸಾಂಖ್ಯಾಯನ ಸೂತ್ರ (ವ್ಯಕ್ತಿಯ ನಡತೆ, ಕರ್ಮಾಚರಣೆಗಳನ್ನು ವಿಧಿಸುವ ಸೂಕ್ತಿಗಳು) ಗಳಲ್ಲಿ ಅವರು (ವೈಷ್ಣವರು ಕೂಡಾ) ಅಶ್ವಲಾಯನ ಸೂತ್ರಗಳನ್ನು ಅನುಸರಿಸುತ್ತಿದ್ದರು. ಅವರು ಸ್ಮಾರ್ತ ಭಾಗವತ ಸಂಪ್ರದಾಯಸ್ಥರೂ ಆಗಿದ್ದರು. ಕೌಟುಂಬಿಕವಿದ್ದ (ಜನನದಿಂದ ಮರಣದ ತನಕದ) ವಿಧಿ ವಿಧಾನಗಳ ಆಚರಣೆಗೆ ಅವರು ಅಶ್ವಲಾಯನ ಸೂತ್ರದಲ್ಲಿನ ಗೃಹ್ಯ ಸೂತ್ರವನ್ನನುಸರಿಸುತ್ತಿದ್ದರು.

ವೇದಗಳ ಕುರಿತು ನುಡಿಯುವಾಗ ಶ್ರೀ ಎಸ್.ಎಸ್. ತಾಲ್ಮಕಿ[3] ಇವರು, ಕೌಂಡಿನ್ಯ ಗೋತ್ರದವರು ಋಗ್ವೇದವನ್ನೂ, ಕೌಶಿಕಗೋತ್ರದವರು ಯಜುರ್ವೇದವನ್ನೂ, ಭರದ್ವಾಜ ಗೋತ್ರದವರು ಸಾಮ ವೇದವನ್ನೂ ಅನುಸರಿಸುತ್ತಿದ್ದರೆಂಬುದಕ್ಕೆ ಆಂತರಿಕ ಪ್ರಮಾಣಗಳಿವೆಯೆನ್ನುತ್ತಾರೆ. ಕೌಶಿಕ ಗೋತ್ರದವರು ಉಪಾಕರ್ಮವನ್ನು ಇಂದಿಗೂ ಯಜುರ್ವೇದಿ, ಸಾಮವೇದಿ ಹಾಗೂ ಇನ್ನುಳಿದವರಿಗಾಗಿ ವಿಧಿಸಲಾದ ಶ್ರಾವಣ ಮಾಸದ ಹಸ್ತ ನಕ್ಷತ್ರದಂದು ನೆರವೇರಿಸುತ್ತಾರೆ. ಉತ್ತರೆಯ ಬಹ್ವಂಶದ ಸಾರಸ್ವತರಂತೆ ಮೂಲತಃ ಅವರು ಯಜುರ್ವೇದಿಗಳಾಗಿದ್ದರು.

ಒಂಭತ್ತು ಮತ್ತು ಹತ್ತನೆಯ ಶತಮಾನಗಳ ಕಾಲಾವಧಿಯಲ್ಲಿ ಗೋವಾದ

ಸಾರಸ್ವತರಲ್ಲಿ ನಿಶ್ಚಿತವಾಗಿ ಯಜುರ್ವೇದಿಗಳಿದ್ದರು [೪]. ಕೆಲವೊಬ್ಬ ಸಾಮವೇದಿಗಳೂ ಅಲ್ಲಿದ್ದಿರಬೇಕು. ಆದರೆ ಆ ಕುರಿತು ನಂಬಲಾರ್ಹವಾದ ಪುರಾವೆಗಳು ದೊರಕಿಲ್ಲ. ಕ್ರಮೇಣ, ಅಧಿಕಾಂಶ ಜನರು ಅನುಸರಿಸುತ್ತಿರುವ ಋಗ್ವೇದದ ವಿಧಿ ವಿಧಾನಗಳಲ್ಲಷ್ಟೆ ಪುರೋಹಿತರನ್ನು ತರಬೇತು ಮಾಡುವುದು ಯೋಗ್ಯವೆಂದು ಕಂಡುಬಂದಿರಬೇಕು. ಹದಿಮೂರನೆಯ ಶತಮಾನ ಕೊನೆಗೊಳ್ಳುವ ಹೊತ್ತಿಗೆ ಎಲ್ಲೊಬ್ಬರೂ ಋಗ್ವೇದಿಗಳಾಗಿದ್ದರು.

೩. ಅವರ ಧಾರ್ಮಿಕ ನಂಬಿಕೆ

ಗೋವಾದಲ್ಲಿ ವಿಷ್ಣುವಿಗೆ ಸಂಬಂಧಿಸಿದ ದೇವಸ್ಥಾನಗಳು ಕಾಣಬರುತ್ತಿಲ್ಲ. ಸಾರಸ್ವತರ ಧರ್ಮ ವೈದಿಕವಿದೆ. ಅಂದರೆ ಅದು ವೇದ, ಶ್ರುತಿಗಳು ವಿಧಿಸಿದ್ದಂತೆ ಇದೆ. ಮೂಲತಃ ಅವರು ಸ್ಮಾರ್ತರಿದ್ದರು. ಮೊದಲ ದಿನಗಳಲ್ಲಿ ಕುಶಸ್ಥಳಿ ಎಂಬಲ್ಲಿ ಇದ್ದ ಕೈವಲ್ಯ ಮಠದ ಮೊದಲ ಗುರು ವಿವರಣಾಚಾರ್ಯರು, ಗೌಡಪಾದಾಚಾರ್ಯರ ಶಿಷ್ಯದ್ವಯರಲ್ಲಿನೊಬ್ಬರಿದ್ದರು. ಸ್ಮಾರ್ತರಲ್ಲಿನ ಕೆಲವರು ಶಾಕ್ತರಿದ್ದು ಶ್ರೀ ಚಕ್ರದ ಉಪಾಸಕರಿದ್ದರು.

೪. ಗೌಡ ಪಾದಾಚಾರ್ಯರು ಮತ್ತು ಶಂಕರಾಚಾರ್ಯರು

ಗೌಡಪಾದಾಚಾರ್ಯರು ಎಂಟನೆಯ ಶತಮಾನದ ಉತ್ತರಾರ್ಧದಲ್ಲಿ ಬಾಳಿದವರಿದ್ದರು. ಅವರ ಮಾಂಡೂಕ್ಯ ಉಪನಿಷತ್ತಿನ ಮೇಲಣ ಕಾರಿಕ (ಭಾಷ್ಯ), ಭಾರತೀಯ ತತ್ವ ಶಾಸ್ತ್ರದ ಅತ್ಯಪೂರ್ವ ಕೃತಿಯೊಂದಾಗಿದೆ. ಅವರ ಸಾಂಖ್ಯಕಾರಿಕವೂ ಅಷ್ಟೇ ಮಹತ್ವಪೂರ್ಣವಾಗಿದೆ. ಅವರು ಮಾಯಾ ಸಿದ್ಧಾಂತಕ್ಕೆ ಆಕಾರವಿತ್ತ ಮೊದಲ ವ್ಯಕ್ತಿಯಿದ್ದರು.

ಗುರುವನ್ನರಸಿ ಭ್ರಮಣ ಮಾಡುತ್ತಿದ್ದ ಶಂಕರಾಚಾರ್ಯರು (೭೭೮-೮೨೦) ಗೌಡಪಾದಾಚಾರ್ಯರನ್ನು ಕಂಡ ಬಳಿಕ ಅವರೊಂದಿಗೆ ನಡೆಸಿದ ಸಂವಾದದ ವಿವರ ಇತ್ಯಾದಿಗಳನ್ನು ವಿದ್ಯಾರಣ್ಯ ಮಾಧವರ ಶಂಕರ ದಿಗ್ವಿಜಯದಲ್ಲಿ ಕಾಣಬಹುದು:

'ಗಂಗಾ (ನರ್ಮದಾ?) ನದಿಯ ತೀರದಲ್ಲಿ ಸಂಧ್ಯಾ ವಂದನೆ ಮಾಡುತ್ತಿದ್ದಾಗ ಶಂಕರಾಚಾರ್ಯರು ಗೌಡಪಾದ ನಾಮಕ ಮಹಾಯೋಗಿಯನ್ನು ಕಂಡರು. ಶಂಕರರು ಅವರ ಪಾದ ಪ್ರಕ್ಷಾಲನ, ಪೂಜೆ ಇತ್ಯಾದಿಗಳನ್ನು ಪೂರೈಸಿ ಕೈ ಮುಗಿದು ನಿಂತರು. ಅವರಿಬ್ಬರ ನಡುವೆ ಸಂವಾದಗಳಾದವು. ಮಾಂಡೂಕ್ಯೋಪನಿಷತ್ತಿನ ಕುರಿತಾದ ತನ್ನ ಕಾರಿಕಗಳ ಮೇಲಕ್ಕೆ ಭಾಷ್ಯ ಬರೆದಿರುವುದನ್ನು ಗೋವಿಂದನಿಂದ ಅರಿತಿದ್ದ ಗೌಡಪಾದಾಚಾರ್ಯರು ತಾನು ಪ್ರಸನ್ನನಾಗಿರುವೆನೆಂದು ಶಂಕರಾಚಾರ್ಯರಿಗೆ ತಿಳಿಸಿದರು. ಮತ್ತೆ ಅವರಿಗೆ ಆಶೀರ್ವಾದವಿತ್ತು ಅಲ್ಲಿಂದ ತೆರಳಿದರು.'

ಕಲಿಪುರುಷನಿಂದ ಕಲುಷಿತವಾದ ಪ್ರಪಂಚದಲ್ಲಿ ಮರಳಿ ಹುಟ್ಟಿ ಬರುವ ಇಚ್ಛೆ ಕೊಂಡಿರದ ಗೌಡಪಾದರು ಶಂಕರರಿಗೆ ಗೋವಿಂದಪಾದರನ್ನು ಗುರುವೆಂದು ಸ್ವೀಕರಿಸುವಂತೆ ತಿಳಿಸಿದರು. ಅವರ ಆಜ್ಞೆಯಂತೆ ಶಂಕರರು ಗೋವಿಂದ ಪಾದರಿಂದ ಸನ್ಯಾಸ ಸ್ವೀಕರಿಸಿದರು.

ಜಯದಲ್ಲಿ ಗೋವಿಂದಪಾದರನ್ನು ಗೋವಿಂದ ಯತಿಯೆಂದಾಗಿ ಸಂಭೋಧಿಸಲಾಗಿದೆ. ಲ್ಲಿ ಗೌಡ ಪಾದ ಮತ್ತು ಗೋವಿಂದರನ್ನು ಗೌಡ ಬ್ರಾಹ್ಮಣರೆಂದು ಉಲ್ಲೇಖಿಸಲಾಗಿದೆ; ವರು ಸಾರಸ್ವತರೆಂದು ನಂಬಲಾಗಿದೆ. ಶಂಕರರು ತಮ್ಮ ಪ್ರತಿಯೊಂದು ಕೃತಿಯಲ್ಲಿ ತಾನು ೋವಿಂದ ಭಗವತ್ಪಾದರ ಶಿಷ್ಯನೆಂದು ಗೌರವಪೂರ್ಣ ಉಲ್ಲೇಖ ಮಾಡಿರುತ್ತಾರೆ. ಅವರು ಡಪಾದರನ್ನು ತನ್ನ ಪರಮ ಗುರುವೆಂದೂ ವರ್ಣಿಸಿರುತ್ತಾರೆ.

೪. ಗೋವಾದಲ್ಲಿ ಮಧ್ವಾಚಾರ್ಯರು

ಉಡುಪಿಯ ಸಮೀಪದ ಬೆಳ್ಳೆಯಲ್ಲಿ ೧೨೩೮ರಲ್ಲಿ ಹುಟ್ಟಿದ ಮಧ್ವಾಚಾರ್ಯರು ೧೩೧೭-೧೮ರ ನಡುವೆ " ಕಾಲಾಧೀನರಾದರು. ನಾರಾಯಣ ಪಂಡಿತರ 'ಮಧ್ವವಿಜಯದ' ಮೇರೆಗೆ ಸನ್ಯಾಸಕೊಂಡ ಬಳಿಕ ದೇಶಾಟನೆಗೆಂದು ದಕ್ಷಿಣಕ್ಕೆ ತೆರಳಿದ ಮಧ್ವಾಚಾರ್ಯರು ಮಂಜೇಶ್ವರದ ಉತ್ತರಕ್ಕೆ ಎರಡು ಮೈಲುಗಳ ದೂರದ ಕಡಲತೀರದಲ್ಲಿನ ಕಣ್ವತೀರ್ಥ ಹಳ್ಳಿಯಲ್ಲಿ ಚಾತುರ್ಮಾಸದ ವ್ರತಾಚರಣೆ ಪೂರೈಸಿದರು. ಇಲ್ಲಿಯೇ ಅವರು ಎಂಟು ಮಂದಿ ಶಿಷ್ಯರಿಗೆ ಸನ್ಯಾಸಾಶ್ರಮದ ದೀಕ್ಷೆ ಇತ್ತರು. (ಈ ಶಿಷ್ಯರು ಮುಂದೆ ಉಡುಪಿಯಲ್ಲಿನ ಎಂಟು ಮಠಗಳ ಅಧಿಪತಿಗಳಾದರು). ಆ ಬಳಿಕ ಮಧ್ವಾಚಾರ್ಯರು ಉಡುಪಿಗೆ ಮರಳಿದರು.

ಕೆಲವೊಂದು ವರ್ಷಗಳ ಬಳಿಕ ಮಧ್ವಾಚಾರ್ಯರು ಉತ್ತರದಲ್ಲಿನ ಬದರಿಕಾಶ್ರಮದ ದರ್ಶನಕ್ಕಾಗಿ ತೆರಳಿದರು. ದರ್ಶನಾನಂತರ ಆಂಧ್ರದೇಶಕ್ಕೆ ಮರಳುತ್ತಿದ್ದ ಅವರು ಬಹುತೇಕ ಬಿಹಾರ, ಬಂಗಾಳ, ಜಗನ್ನಾಥ ಪುರಿಗಳನ್ನು ಸಂದರ್ಶಿಸಿರಬೇಕು. ಆಂಧ್ರದೇಶದಲ್ಲಿ ಪಂಡಿತ ಶ್ರೇಷ್ಠ ಶೋಭನ ಭಟ್ಟರ ಭೇಟಿಕೊಂಡು ಗೋದಾವರಿ ತೀರದಲ್ಲಾದ 'ತರ್ಕ' ದಲ್ಲಿ ಅವರನ್ನು ಸೋಲಿಸಿದರು. ಶೋಭನ ಭಟ್ಟರು ಮಧ್ವಾಚಾರ್ಯರ ಶಿಷ್ಯರಾಗಿ ಪದ್ಮನಾಭತೀರ್ಥರೆಂಬ ನಾಮಾಭಿಧಾನ ಕೊಂಡರು. ಸಾಮಿಶಾಸ್ತ್ರಿ ಹೆಸರಿನ ವಿದ್ವಾಂಸರೊಬ್ಬರಿಗೆ ಸನ್ಯಾಸದ ದೀಕ್ಷೆಯಿತ್ತು ನರಹರಿತೀರ್ಥರೆಂಬ ಹೆಸರನ್ನಿತ್ತರು. ಮಧ್ವಾಚಾರ್ಯರ ಅಪ್ಪಣೆಯ ಮೇರೆಗೆ ಅವರು ಕಳಿಂಗಕ್ಕೆ ತೆರಳಿ, ೧೨೬೪-೧೨೭೩ರ ನಡುವಣ ಕಾಲದಲ್ಲಿ ಅಲ್ಲಿನ ಅಪ್ರಾಪ್ತ ವಯಸ್ಸಿನ ಅರಸನ ಪ್ರತಿನಿಧಿಯಾಗುಳಿದರು.

ಸ್ವಲ್ಪ ಕಾಲದ ನಂತರ ಮಧ್ವಾಚಾರ್ಯರು ಮರಳಿ ಉತ್ತರಕ್ಕೆ ತೆರಳಿದರು. ತನ್ನ ಪ್ರವಾಸದ ವೇಳೆಗೆ ಅವರು ಗೋವಾದ ಮಡಗಾಂವ್ (ಮಠಗ್ರಾಮ) ನ ಬಳಿಯ ಬನವಲ್ (ಬನೌಲಿಮ್) ನಲ್ಲಿ ಕೆಲಕಾಲ ಉಳಿದುಕೊಂಡರು.

'ಮಧ್ವವಿಜಯ' ದ ಮೇರೆಗೆ ಆ ದಿನಗಳಲ್ಲಿ ಸ್ಮಾರ್ತರಿದ್ದ ಸಾರಸ್ವತರು ಗೌಡ ಪಾದಾಚಾರ್ಯರೆಂದು ಪರಿಚಿತರಾಗಿದ್ದ ಕೈವಲ್ಯ ಮಠದ ಗುರುಗಳ ಅನುಯಾಯಿಗಳಾಗಿದ್ದರು. ೧೫೬೨ರ ತಾಮ್ರ ಶಾಸನದಲ್ಲಿನ ಬರಹ, ಸಾರಸ್ವತರ ಮುಖ್ಯಸ್ಥನಿದ್ದ ನಾರಾಯಣ ವೈಷ್ಣವಧರ್ಮ ' ಸ್ವೀಕರಿಸಿದ್ದನ್ನು ಸೂಚಿಸುತ್ತದೆ. ಸಾಷಷ್ಟಿ ಬಾರ್ದೇಶ್ ಮತ್ತು ಅಂತ್ರುಜ್ ಮಹಾಲುಗಳಲ್ಲಿನ ಹಲವೊಬ್ಬ ಸಾರಸ್ವತರು ವೈಷ್ಣವ ಧರ್ಮ ಸ್ವೀಕರಿಸಿ ಪದ್ಮನಾಭ ತೀರ್ಥರ ಅನುಯಾಯಿಗಳಾದರು. ಇವರು ಮಧ್ವಾಚಾರ್ಯರ ಆದಿಮಠದ ಮೊದಲ (೧೩೧೮-೧೩೨೪) ಗುರುಗಳು. ಈ ಮಠ ಕ್ರಮೇಣ ಪೂರ್ವಾದಿ (ವ್ಯಾಸರಾಯ) ಮತ್ತು ಉತ್ತರಾದಿ ಎಂಬೀ ಶಾಖೆಗಳೆರಡರಲ್ಲಿ ವಿಭಾಗಿಸಲ್ಪಟ್ಟಿತು.

ಕಾಲಾಂತರದಲ್ಲಿ ಉತ್ತರಾದಿಮಠ ಕುಂಬಕೋಣಂ (ರಾಘವೇಂದ್ರ ಮಠ) ಹೆಸರಿನ ಉಪಶಾಖೆಕೊಂಡಿತು. ತುಂಗಭದ್ರಾ ನದಿಯ ತೀರದಲ್ಲಿ ಮಧ್ವರ ಸಮಾಧಿ ಇದೆ.

ಗೋವಾ ಮತ್ತು ಇನ್ನಿತರ ಸ್ಥಾನಗಳಲ್ಲಿ ವಾಸ ಮಾಡುತ್ತಿದ್ದ ಅಧಿಕಾಂಶ ಸಾರಸ್ವತರು ಈಗ ವೈಷ್ಣವರಿದ್ದಾರೆ. ಪಶ್ಚಿಮ ಕರಾವಳಿಯಲ್ಲಿನ ಶ್ರೀಮಂತ ವ್ಯಾಪಾರಿ ವರ್ಗದ, ಬಹುತೇಕ ಎಲ್ಲೊಬ್ಬರು, ಈಗ ಮಾಧ್ವರಿದ್ದಾರೆ. ಕೆಲವೊಬ್ಬರು ವೈಷ್ಣವ ಧರ್ಮ ಸ್ವೀಕರಿಸಿದಾಗ ಸಾರಸ್ವತ ಸಮಾಜದಲ್ಲಿ ತಾತ್ಕಾಲಿಕ ಒಡಕು ಕಾಣಬಂದಿತ್ತು. ಮುಂದೆ ಅಂತರ್ವಿವಾಹ, ಸಾಮಾಜಿಕ ಸಂಬಂಧಗಳು, ಯಥಾಪೂರ್ವ ನಡೆಯತೊಡಗಿದವು.

ಧಾರ್ಮಿಕ ನಂಬಿಕೆಗಳಲ್ಲಿ ಬದಲಾವಣೆಗಳಾದರೂ ವೈಷ್ಣವರು ತಮ್ಮ ಕೌಟುಂಬಿಕ ದೈವಾರಾಧನೆಯಲ್ಲಿ ವ್ಯತ್ಯಯಕ್ಕೆಡೆಯೀಯಲಿಲ್ಲ; ಬದಲಾವಣೆಯಾಗಿದ್ದರೆ ಅದು ತಾಂತ್ರಿಕ ಪೂಜಾ ವಿಧಿವಿಧಾನಗಳಲ್ಲಷ್ಟೆ. ಉದಾಹರಣೆಗಾಗಿ, ಶಿವಲಿಂಗದ ರೂಪದಲ್ಲಿ ಪೂಜಿಸಲ್ಪಡುತ್ತಿದ್ದ ನಾಗೇಶನ ಕುಳಾವಿಗಳಲ್ಲಿನ ಹೆಚ್ಚಿನವರು ವೈಷ್ಣವರಿದ್ದರು. ಅನ್ಯ ಮಾಧ್ವರಂತಿರದಿದ್ದ ಇವರು ಸ್ಮಾರ್ತರಂತೆ ಭಾಗವತ ಸಂಪ್ರದಾಯವನ್ನನುಸರಿಸುತ್ತಿದ್ದಾರೆ. ವಾಸ್ತವಿಕವಾಗಿ ಸ್ಮಾರ್ತ ಮತ್ತು ವೈಷ್ಣವರ ನಡುವಣ ಪ್ರಭೇದ ಕೃತಕವಿತ್ತು. ಕಾರಣ ವೈಷ್ಣವರು ವಿಷ್ಣು ಮತ್ತು ಶಂಕರನನ್ನು ಪೂಜಿಸುತ್ತಿದ್ದರೆ ಸ್ಮಾರ್ತರು ಸ್ಮೃತಿಗಳನ್ನು ಅನುಸರಿಸುತ್ತಿದ್ದರು.

೬. 'ದೇವಕಾರ್ಯ', 'ವಾಡಪ' ವ್ರತಾಚರಣೆ ಇತ್ಯಾದಿಗಳು

ಸಾರಸ್ವತರಲ್ಲಿನ ಹೆಚ್ಚಿನವರು ಶ್ರಾವಣ, ಅಶ್ವಿನ, ಮಾಘ ಮಾಸಗಳ ವಿಶೇಷ ದಿನಗಳಂದು ಕುಲದೇವರ ಪ್ರೀತ್ಯರ್ಥ 'ದೇವಕಾರ್ಯ' ಮಾಡುತ್ತಾರೆ. ಈ ದೇವಕಾರ್ಯದ ದಿನಗಳು ಕುಟುಂಬದ ಗೋತ್ರ ಮತ್ತು ಕುಲಗಳನ್ನು ಅವಲಂಬಿಸಿಕೊಂಡಿರುತ್ತವೆ. ಕೆಲವರು 'ದೇವಕಾರ್ಯ'ವನ್ನು ವೈಶಾಖ, ಮಾರ್ಗಶಿರ ಮಾಸಗಳಲ್ಲೂ ಮಾಡುತ್ತಾರೆ. ಕೆಲವೊಂದು ಕುಟುಂಬಗಳಲ್ಲಿ ಈ ಕಾರ್ಯವನ್ನು ಕುಲದೇವಿಯ ಪ್ರೀತ್ಯರ್ಥ ನೆರವೇರಿಸಲಾಗುತ್ತದೆ. ನಾಡಕರ್ಣಿ, ಗೋಕರ್ಣ ಮತ್ತು ಕುಲಕರ್ಣಿಯವರು ಈ ಕಾರ್ಯಕ್ರಮವನ್ನು ತಮ್ಮಲ್ಲಿನ ಉಪನಯನ ಅಥವಾ ವಿವಾಹ ಸಮಾರಂಭಗಳ ಪೂರ್ವಭಾವಿ ಅನುಷ್ಠಾನದ ರೂಪದಲ್ಲಿ ನೆರವೇರಿಸುತ್ತಾರೆ. ಆಗ ಮಾತ್ರ 'ವಾಡಪ' ಕಾರ್ಯಕ್ರಮವನ್ನು ಅದಕ್ಕೂ ಮೊದಲೇ ಪೂರೈಸಬೇಕಾಗುತ್ತದೆ.

'ವಾಡಪ' ಕುಟುಂಬದಲ್ಲಿನ, ಮುತ್ತೈದೆಯರಿದ್ದು ದೈವಾಧೀನರಾಗಿದ್ದ ಹಿರಿಯರ ಗೌರವಾರ್ಥ ಆಚರಿಸಲಾಗುತ್ತದೆ. ವರ್ಷಕ್ಕೊಂದು ಬಾರಿ ಹೊಸಸೀರೆಯನ್ನುಡುವ ಮೊದಲು ಮತ್ತು ಉಪನಯನ, ವಿವಾಹಗಳ ಮುನ್ನ ಈ ವ್ರತವನ್ನು ಆಚರಿಸಲಾಗುತ್ತದೆ. ಈ ವ್ರತ ಜಕಣ ಅಥವಾ ಜಕೀಣ ಎಂದೂ ಪರಿಚಿತವಾಗಿದೆ.

ಕೆಲವೊಂದು ಮನೆಗಳಲ್ಲಿ ಭಾದ್ರಪದ, ಶುದ್ಧ, ಅಷ್ಟಮಿಯಂದು ಸ್ತ್ರೀಯರು ಎಲೆಗೌರಿಯ ವ್ರತಾಚಾರಣೆ ಮಾಡುತ್ತಾರೆ. ಅಕ್ಕಿ ತುಂಬಿದ್ದ ಪಂಚಪಾತ್ರೆಯಲ್ಲಿ ತೆಂಗಿನಕಾಯಿಯೊಂದನ್ನಿಟ್ಟು ಅದಕ್ಕೆ ತೆಂಗಿನಕಾಯಿಗಳನ್ನು ಸಮರ್ಪಿಸಲಾಗುತ್ತದೆ. ಈ ವಿಧಿಯನ್ನು ಭಾದ್ರಪದ, ಶುದ್ಧ, ತೃತೀಯದಂದಿನ ಗೌರೀ ತೃತೀಯದ ಹೊರತು, ಪ್ರತ್ಯೇಕವಾಗಿ

ಚರಿಸಲಾಗುತ್ತದೆ.

ಕೆನರಾದಲ್ಲಿ ಇದನ್ನು ಸ್ಮಾರ್ತ ಸಂಪ್ರದಾಯಸ್ಥರು ಮತ್ತು ಕೆಲವೊಬ್ಬ ವೈಷ್ಣವರು ಚರಿಸುತ್ತಾರೆ. ಗೋವಾದಲ್ಲಿ ಈ ವ್ರತದ ಆಚರಣೆ ಕಾಣಬರುತ್ತಿಲ್ಲ. ಭಾದ್ರಪದ, ಶುದ್ಧ, ತುರ್ಥಿಯಂದು ಗಣಪತಿಯ ವಿಗ್ರಹದ ಸಾನಿಧ್ಯದಲ್ಲಿ ಎಲ್ಲೊಬ್ಬರ ಪರಿಚಯದ ಣಹೋಮ ಮಾಡಲಾಗುತ್ತದೆ. ಆದರೆ ಇದನ್ನು ಕೆನರಾದಲ್ಲಿ ಕೆಲವೊಬ್ಬ ಸಾರಸ್ವತರಷ್ಟೇ ಚರಿಸುತ್ತಾರೆ. ಈ ವಿಧಿಯನ್ನು ಕೆನರಾದಲ್ಲಿನ ಹವೀಕ ಬ್ರಾಹ್ಮಣರಿಂದ ಎರವಲು ೂಂಡಂತಿದೆ.

ಸಂದರ್ಭಸೂಚಿ

೧. ಸಾರಸ್ವತರು ಹುಡುಗನ ಕುರಿತಾಗಿ ಬಳಸುವ 'ಚಿಲ್ಲೋ' ಶಬ್ದದ ಮೂಲ, ಸಂಸ್ಕೃತದ ಚೇಲವಾಗಿದ್ದರೆ ಅದು ಅರ್ಥಪೂರ್ಣವಾಗಿದೆ. ಚಿತ್ಪಾವನ, ಕರ್‍ಹಾಡ ಬ್ರಾಹ್ಮಣರು ಮತ್ತು ಗೋವಾದಲ್ಲಿನ ಅನ್ಯ ಸಮಾಜದವರು ಬಳಸುವ 'ಚೇಡೋ' ಶಬ್ದದ ವ್ಯುತ್ಪತ್ತಿ ಸಂಸ್ಕೃತದ 'ಚೇಡ' (ಸೇವಕ) ಶಬ್ದದಿಂದಾಗಿದೆ.

೨. ಕಿರವಂತರು ಮೂಲತಃ ಸಾರಸ್ವತರಿದ್ದರು. ಅಂತರ್ಜಾತೀಯ ವಿವಾಹದ ಮೂಲಕ ಅವರು ಸಾರಸ್ವತರೊಂದಿಗಿನ ಸಂಬಂಧವನ್ನು ದೀರ್ಘಕಾಲ ಉಳಿಸಿಕೊಂಡರು. ಈ ತರಹದ ವಿವಾಹಗಳ ಕುರಿತು ಈಗ ಏನೊಂದೂ ತಿಳಿದುಬರುತ್ತಿಲ್ಲ.

೩. ಶ್ರೀ ಎಸ್. ಎಸ್. ತಾಲ್ಮಕಿಯವರ 'ಸಾರಸ್ವತ ಫ್ಯಾಮಿಲೀಸ್' ಪುಟ ೧೧, ೧೨

೪. ನಾಗಪುರದ ಸಮೀಪದ ಸೀತಾಬಲ್ಡಿಯಲ್ಲಿನ ಶಿಲಾಸ್ತಂಭವೊಂದರ ಮೇಲಣ ೧೦೮೭ರ ಸಂಸ್ಕೃತದಲ್ಲಿನ ಶಾಸನ ವಿಟಾ ಪೈ ಭಟ್ಟನ ಮರಿಮೊಮ್ಮಗ, ಭೋಪಾ ಪೈ ಭಟ್ಟನ ಮೊಮ್ಮಗ ಪದ್ಮನಾಭ ಭಟ್ಟನ ಮಗ ವಾಸುದೇವ ಹುಲ್ಲುಗಾವಲನ್ನು ದತ್ತಿಗಿತ್ತುದರ ಕುರಿತಾಗಿದೆ. ರಾಷ್ಟ್ರಕೂಟರ ಧಂಡಿಯ ನಾಯಕನೊಂದಿಗೆ ದೇವಗಿರಿಗೆ ತೆರಳಿದ್ದ ಈತ ಚಾಲುಕ್ಯ (ತ್ರಿಭುವನ ಮಲ್ಲನಲ್ಲಿ) ಸೇವಾವೃತ್ತಿಗೆ ತೊಡಗಿದ್ದ. ಶಿಲಾಸ್ತಂಭದಲ್ಲಿನ ಶಾಸನದಲ್ಲಿ ಕೊಂಕಣಿ ಶಬ್ದಗಳನ್ನು ಬಳಸಲಾಗಿದೆ. ವಾಸುದೇವ ವತ್ಸಗೋತ್ರದವನಿದ್ದು ಯಜುರ್ವೇದದ ಕಣ್ವಶಾಖೆಯ ಅನುಚರನೂ, ನರಸಿಂಹನ ಕುಳಾವಿಯೂ ಆಗಿದ್ದ.

೫. ಮಧ್ವಾಚಾರ್ಯರ ಜನ್ಮ ವಿಲಂಬಿ ಸಂವತ್ಸರದ ವಿಜಯದಶಮಿಯಂದಾಗಿದ್ದು ಪಿಂಗಲ ಸಂವತ್ಸರದಲ್ಲಿ ಅವರು ಕಾಲಾಧೀನರಾಗಿದ್ದರು. ಅದೊಮ್ಮೆ ಅವರ ಚಾತುರ್ಮಾಸದ ವೇಳೆಗೆ ಸೂರ್ಯಗ್ರಹಣವಾಗಿತ್ತೆಂದು ಮಧ್ವವಿಜಯದಲ್ಲಿ ಉಲ್ಲೇಖಿಸಲಾಗಿದೆ. ೧೯೪೦ರ ಜನವರಿ ತಿಂಗಳಲ್ಲಿ ಪ್ರಕಾಶಿಸಲ್ಪಟ್ಟ 'ಕೆನರಾ ಬ್ರದರ್ ಹುಡ್ ಜರ್ನಲ್' ನಲ್ಲಿ ಶ್ರೀ ಮಂಜೇಶ್ವರ ಗೋವಿಂದ ಪೈಗಳು ತಮ್ಮ 'ದ ಸೋಲಾರ್ ಎಕ್ಲಿಪ್ಸ್ ಇನ್ ದ ಮಧ್ವ ವಿಜಯ' ಲೇಖನದಲ್ಲಿ, ಮಧ್ವವಿಜಯದಲ್ಲಿ ಉಲ್ಲೇಖಿಸಲ್ಪಟ್ಟ ಸೂರ್ಯಗ್ರಹಣ ೧೨೯೩ರ ಜುಲೈ ತಿಂಗಳ ೫ರಂದು (ಆದಿತ್ಯವಾರ, ಆಷಾಢ, ಅಮಾವಾಸ್ಯೆ) ಅಥವಾ ೧೩೦೦ರ ಅಗಸ್ಟ್ ತಿಂಗಳ

೧೫ರಂದು (ಸೋಮವಾರ, ಶ್ರಾವಣ, ಅಮಾವಾಸ್ಯೆ) ಆಗಿರಬೇಕೆಂದು ನುಡಿದಿರುತ್ತಾರೆ. ಹಾಗೂ ಮಧ್ವಾಚಾರ್ಯರು ೧೨೩೮ರಲ್ಲಿ ಹುಟ್ಟಿದ್ದು ೧೩೧೭-೧೮ರಲ್ಲಿ ಕಾಲಾಧೀನರಾಗಿದ್ದ ಕುರಿತಾದ ತನ್ನ ಅಭಿಪ್ರಾಯಕ್ಕೆ ಕಾರಣಗಳನ್ನೂ ಇತ್ತಿದ್ದಾರೆ. (ಕನ್ನಡ ಸಾಹಿತ್ಯ ಪತ್ರಿಕೆ, ೧೯೪೬ ಜೂನ್ ತಿಂಗಳು, ಸಂಪುಟ ೫೦, ಸಂಚಿಕೆ ೨, ಪುಟ ೨೫ ಕೂಡಾ ನೋಡಿ)

೬. ರಾವ್ ಸಾಹೇಬ್ ಡಾ. ವಿ. ಪಿ. ಚೌವ್ಹಾಣ್ ಇವರ 'ವೈಷ್ಣವಿಸಮ್ ಆಫ್ ಗೌಡ ಸಾರಸ್ವತ್ಸ್' ಪುಟ ೨೨.

೭. ಗೋವಾದಲ್ಲಿ ಮೊತ್ತಮೊದಲು ದೇವಸ್ಥಾನ ಕಟ್ಟಿಸಿ, ದೇವರ ಮೂಲ ವಿಗ್ರಹ ಸ್ಥಾಪಿಸಿದವರ ವಂಶಜರನ್ನು ಆ ದೇವರ ಕುಳಾವಿಗಳು ಅಥವಾ ಮಹಾಜನರೆಂದು ಕರೆಯುತ್ತಾರೆ. ದೇವಸ್ಥಾನ ಸಂದರ್ಶಿಸುವ ಈ ಕುಳಾವಿಗಳಿಗೆ ಗರ್ಭಗುಡಿಯನ್ನು ಸೇರಿ ದೇವರಿಗೆ ಅಭಿಷೇಕವನ್ನು ಮಾಡುವ ಪ್ರತ್ಯೇಕವಾದ ಹಕ್ಕು ಇದೆ.

ಅಧ್ಯಾಯ ೧೨

ಸಾರಸ್ವತರ ಕುಲದೇವರು ಅಥವಾ ರಕ್ಷಕ ದೇವರು

. ಐದು ದೇವರ ಮಂಡಲ

ಸಾರಸ್ವತರ ಕುಲದೇವರು ಐದು ದೇವರುಗಳ ಮಂಡಲದಲ್ಲಿನ್ನೊಂದಾಗಿದ್ದು, ಟುಂಬದ ದೇವರ ಸ್ಥಾನ ಮಂಡಲದ ಮಧ್ಯ ಭಾಗದಲ್ಲಿರುತ್ತದೆ. ದೈವಗಳ ಈ ಬಗೆಯ ರಾಧನೆ 'ಪಂಚಾಯತನ' ಎಂದು ಪರಿಚಿತವಾಗಿದ್ದು ಇದಕ್ಕೆ ಶಂಕರಾಚಾರ್ಯರು ರಣೀಭೂತರೆಂದೆನ್ನಲಾಗುತ್ತದೆ.[೧]

೨. ಕುಲದೇವರು

ತ್ರಿಹೋತ್ರದಿಂದ ಗೋಮಾಂತಕಕ್ಕೆ ಬಂದ ಸಾರಸ್ವತರು ತಮ್ಮೊಂದಿಗೆ ಮಾಂಗಿರೀಶ ಮಂಗೇಶ), ಮಹಾದೇವ, ಮಹಾಲಕ್ಷ್ಮಿ, ಮ್ಹಾಳಸಾ, ಶಾಂತಾದುರ್ಗಾ, ನಾಗೇಶ ಮತ್ತು ಪ್ತಕೋಟೀಶ್ವರ ಎಂಬೀ ದೇವರುಗಳನ್ನಷ್ಟೇ ತಂದಿದ್ದರು. ಈಗ ಸಾರಸ್ವತರು ರಾಮನಾಥ, ವಳನಾಥ, ವಿಮಲೇಶ್ವರ, ಹಟಕೇಶ್ವರ, ಸೋಮೇಶ್ವರ, ಸಿದ್ಧೇಶ್ವರ, ರುದ್ರೇಶ್ವರ, ಸಾಂತೇರಿ, ಾಮಾಕ್ಷಿ, ವಿಜಯದುರ್ಗಾ, ಆರ್ಯದುರ್ಗಾ, ನವದುರ್ಗಾ, ಕಾತ್ಯಾಯಿನಿ, ಮಹಿಷಾಸುರ ಮರ್ದಿನಿ, ಮಹಾಮಾಯಾ[೨] ಎಂಬಿತ್ಯಾದಿ ದೇವರುಗಳನ್ನು ಪೂಜಿಸುತ್ತಾರೆ. ಪುರುಷ ಪ್ರಧಾನ ದೈವಗಳೆಲ್ಲವೂ ಶಿವಲಿಂಗಗಳ ರೂಪದಲ್ಲಿದ್ದರೆ, ಸ್ತ್ರೀಪ್ರಧಾನ ದೇವತೆಗಳು ಶಕ್ತಿ ಅಥವಾ ಭಗವತಿಯ ರೂಪದಲ್ಲಿವೆ. ದೇವಿಯರನ್ನು 'ಸಾಯ್ಬಿಣ', ಎಂದು ಕರೆಯುತ್ತಾರೆ. ಪೂರ್ವ ಭಾರತದಲ್ಲಿ ಶರದೃತುವಿನಲ್ಲಿನ ದುರ್ಗೆಯ ಮುಖ್ಯ ಹಬ್ಬವನ್ನು ಪ್ರಾಣಿಗಳ ಬಲಿಯಿತ್ತು ಆಚರಿಸಲಾಗುತ್ತದೆ. ಆರ್ಯರ ಉಮಾ, ಸೌಮ್ಯ ಭಾವದ, ಘನಸ್ಥಿತೆಕೊಂಡ, ಸ್ಫುರದ್ರೂಪಿ ದೇವಿಯೊಬ್ಬಳಾಗಿದ್ದರೆ, ದಕ್ಷಿಣ ಭಾರತದಲ್ಲಿ ಸಾರಸ್ವತರು ಆಕೆಯ ಶಾಂತರೂಪವನ್ನಷ್ಟೇ ಪೂಜಿಸುತ್ತಾರೆ. ಆಕೆಗೆ ಅಕ್ಕಿ, ಹಣ್ಣು, ತೆಂಗಿನಕಾಯಿ, ಅಡಿಕೆ, ಕುಂಕುಮ, ಬಣ್ಣದ ಬಟ್ಟೆಯನ್ನು ಅರ್ಪಿಸುತ್ತಾರೆ; ವಸಂತಋತುವಿನಲ್ಲಿ ದೊಡ್ಡ ಹಬ್ಬ ಜರಗುತ್ತಿದ್ದು, ದೇವಿಯ ದರ್ಶನಕ್ಕೆ ಬರುವ ಕುಳಾವಿಗಳು ಆ ದಿನಗಳಲ್ಲಿ ಮೀನನ್ನು ವರ್ಜಿಸುತ್ತಾರೆ. ಮಹಾಲಕ್ಷ್ಮಿಯನ್ನು ವಿಷ್ಣುವಿನ ಪತ್ನಿಯಂತೆ ಕಾಣದೆ ಮಾರ್ಕಾಂಡೇಯ ಪುರಾಣದ ದುರ್ಗಾಸಪ್ತಶತಿಯಲ್ಲಿನ ಮಧ್ಯಚರಿತ್ರದಲ್ಲಿ ಬಣ್ಣಿಸಲಾದ ಭಗವತಿಯ ರೂಪದಲ್ಲಿ ಆರಾಧಿಸುತ್ತಾರೆ.

ಅವರು ಇನ್ನಿತರ ವೈಷ್ಣವ ದೇವರನ್ನೂ ಪೂಜಿಸುತ್ತಾರೆ. ಅವುಗಳಲ್ಲಿನ ದಾಮೋದರ (ರಿವಾಣ, ರಿವೋಣಾದಲ್ಲಿನ) ಮತ್ತು ನರಸಿಂಹ (ವೇಲಿಂಗ್‌ನಲ್ಲಿನ) ಇವು ವಿಗ್ರಹದ ರೂಪದಲ್ಲಿರದಿದ್ದು ಶಿವಲಿಂಗದ ಆಕಾರದಲ್ಲಿವೆ. ದಾಮೋದರನ ಪಕ್ಕದಲ್ಲಿ ಲಕ್ಷ್ಮೀ ನಾರಾಯಣರ ವಿಗ್ರಹ ಮತ್ತು ಮಾಶೆಲ್ (ಮಾರ್ಸೆಲ್)ನಲ್ಲಿನ ರವಳನಾಥನೊಂದಿಗೆ ದೇವಕಿ ಕೃಷ್ಣರ ವಿಗ್ರಹಗಳು ಕಾಣಬರುತ್ತಿದ್ದರೆ ಈ ಕ್ರಮ ಮಾಧ್ವ ತತ್ವಗಳಿಂದ ಪ್ರೇರೇಪಿತವಾದಂತಹುದಾಗಿದೆ. ಬಂದಿವಡೆಯಲ್ಲಿ ಈಗ ಕಾಣಬರುವ ರಾಮನಾಥ ಮತ್ತು

ನಾಗೇಶನೊಂದಿಗಿನ ಲಕ್ಷ್ಮೀನಾರಾಯಣ ವಿಗ್ರಹಗಳು ಗೋಕರ್ಣ ಮಠದ ಕೈಲಾಸವಾಸಿ ಶ್ರೀಮತ್ ಇಂದಿರಾಕಾಂತ ತೀರ್ಥರು ಸ್ಥಾಪಿಸಿದ್ದುವಾಗಿವೆ.

೩. ಅವರ ಕುಲದೇವರ ಶೈವತ್ವದ ಮೂಲ

ವೈಷ್ಣವ ದೇವರೊಂದಿಗೆ ಅನ್ಯ ಎಷ್ಟೊಂದೋ ದೇವರುಗಳೆದುರು ಹಾಡುವ ಈ ಮುಂದಣ ಕೊಂಕಣಿ ಪಂಕ್ತಿಗಳನ್ನು ದೇವಸ್ಥಾನವೊಂದರ ಅಧಿಕೃತ ಹೊತ್ತಗೆಯಿಂದ ಉದ್ಧರಿಸಲಾಗಿದ್ದು ಅವು ಶೈವತ್ವದ ಮೂಲ ರೂಪದ ಅರಿವನ್ನೀಯುತ್ತವೆ :

ತ್ರಿನೇತ್ರ ತೂ ಕರ್ಪೂರ ಗೌರಾ
ತ್ರಿಶೂಲ ಡಮರು ತೂ ದಿಗಂಬರಾ
ವಿಭೂತಿಭೂಷಣ ಕರಭಾಸತೀ ಹರಾ
ನೀಲ ಕಂಠ ತೂ ನಾಗೇಶ್ವರಾ
ಭಾಲಚಂದ್ರ ಉಮಾವಲ್ಲಭ
ಭಾಲೇ ತ್ರಿಪುಂಡ್ರ ನಾಮಯೇ ಶೋಭಾ
ಜಟಾಮುಕುಟ ಗಂಗೇಸಿ ಶೋಭಾ
ಭೈರವಗಣ ಜನಮೂರ್ತ ಉಭಾ
ಅಗಣಿತ ಲಿಂಗ ಮಾಝೀ ಉತ್ತಮ
ಜಗೀಪ್ರಸಿದ್ಧ ರಾಮೇಶ್ವರ ನಾಮ
ಭಕ್ತ ಜನಾಸಿ ತೂ ವಿಶ್ರಾಮಾ
ದಿವ್ಯ ಸ್ವರೂಪ ತೂ ಪರಬ್ರಹ್ಮಾ
ತ್ರಿನೇತ್ರ ತೂ ಕರ್ಪೂರ ಗೌರಾ
ತ್ರಿಶೂಲ ಡಮರು ತೂ ದಿಗಂಬರಾ

೪. ಪಾಲವಿ ಕುಲದೇವರು

ಇದರ ಹೊರತು ಎರಡನೆಯ ಸ್ಥರದವೆನ್ನಬಹುದಾದ 'ಪಾಲವಿ' (ಕೊಂಕಣಿಯಲ್ಲಿ ಸಹಾಯ ಮಾಡುವ ಅರ್ಥವನ್ನೀಯುವ) ಕುಲದೇವರು, ದೇವಿಯರನ್ನೂ ಕಾಣಬಹುದು. ಮಂಗೇಶನನ್ನು ಪೂಜಿಸುವ ಹೆಚ್ಚಿನ ಕುಟುಂಬಗಳು ಮತ್ತು ಶಾಂತಾದುರ್ಗಾ, ನಾಗೇಶ, ದಾಮೋದರ, ಗಜಾನನ, ಮಹಾಲಕ್ಷ್ಮೀ, ಮಹಾದೇವ, ಮುಂತಾದ ದೇವರುಗಳನ್ನು ಪೂಜಿಸುವ ಅನ್ಯ ಕುಟುಂಬಗಳು ತಮ್ಮದೇ ಆದ 'ಪಾಲವಿ' ದೇವರನ್ನು ಕೊಂಡಿದ್ದವು.

ಮಂಗೇಶ ದೇವಸ್ಥಾನದ ಅರ್ಚಕರು ಮಹಾಲಕ್ಷ್ಮಿಯ ಅರ್ಚನೆಯನ್ನೂ (ಶ್ರೀ ಮಂಗೇಶ, ಮಹಾಲಕ್ಷ್ಮಿ ದೇವತಾಭ್ಯೋ ನಮಃ) ಮಾಡುತ್ತಿದ್ದರು. ಮ್ಹಾಳಸಾ, ಶಾಂತಾದುರ್ಗಾ ದೇವಿಯರನ್ನು ಪೂಜಿಸುವ ಕುಟುಂಬೀಯರಲ್ಲಿನ ಕೆಲವರು ಮ್ಹಾಳಸಾ ದೇವಿಯನ್ನು 'ಪಾಲವಿ' ದೇವಿಯ ರೂಪದಲ್ಲಿ ಪೂಜಿಸುತ್ತಾರೆ.

ಮಂಗೇಶ, ಮಹಾದೇವ, ಮಹಾಲಕ್ಷ್ಮಿ, ಮ್ಹಾಳಸಾ, ಶಾಂತಾದುರ್ಗಾ, ಸಪ್ತಕೋಟೇಶ್ವರ, ರಾಮನಾಥ ಮತ್ತು ರವಳನಾಥ ಇವು ಕುಲದೇವರು, ದೇವಿಯರಲ್ಲಿನ ಪ್ರಮುಖ ದೈವಗಳಾಗಿವೆ. ಹೆಚ್ಚಾದ ಕುಲದೇವರು, ದೇವಿಯರ ಪೌರಾಣಿಕ ಮೂಲದ ವಿವರಗಳನ್ನು ಸಹ್ಯಾದ್ರಿಖಂಡ'ದಲ್ಲಿ ಕಾಣಬಹುದು.

೧. ಸಪ್ತ ಕೋಟೇಶ್ವರ

ಸಪ್ತ ಕೋಟೇಶ್ವರ ಮತ್ತು ಹಟಕೇಶ್ವರರ ದೇವಸ್ಥಾನಗಳು ಸಾರ್ವಜನಿಕವಿದ್ದು ಅವು ಎಲ್ಲೊಂದು ವರ್ಗದವರ ಬೆಂಬಲಕೊಂಡಿವೆ. ಸಪ್ತಕೋಟೇಶ್ವರ ದೇವಸ್ಥಾನದ ಇತಿಹಾಸ ಗೋವಾದ ಇತಿಹಾಸದೊಂದಿಗೆ ನಿಕಟ ಸಂಬಂಧಕೊಂಡಿದೆ. ಮೂಲತಃ ಜೈನ ಧರ್ಮೀಯರಿದ್ದ ಕದಂಬರು ಹಿಂದೂ ಧರ್ಮ ಸ್ವೀಕರಿಸಿ ಸಪ್ತ ಕೋಟೇಶ್ವರನನ್ನು ತಮ್ಮ ಕುಲದೈವದ ರೂಪದಲ್ಲಿ ನಂಬತೊಡಗಿದ್ದರು. ವಿಜಯನಗರದ ಅರಸರು ಈ ದೇವಸ್ಥಾನದ ಆಶ್ರಯದಾತರಾಗಿದ್ದರು.

ಅದೊಮ್ಮೆ ಶಿವ ಹಿಮಾಲಯದಲ್ಲಿನ ತನ್ನ ವಾಸ್ತವ್ಯ ಬಿಟ್ಟು ಗೋಮಾಂತಕದಲ್ಲಿ ಗೋಮಾಂತಕೇಶನೆಂಬ ಹೆಸರು ಕೊಂಡು, (ಪಾರ್ವತಿ ಆತನನ್ನು ಹುಡುಕಿ ತೆಗೆಯುವ ತನಕ) ವಾಸ ಮಾಡಿದ್ದನೆನ್ನಲಾಗುತ್ತದೆ; ಆತನನ್ನು ಒಲಿಸಿಕೊಳ್ಳಲಾಗಿ ಸಪ್ತಋಷಿಗಳು ದೀರ್ಘಕಾಲ ತಪಾಚರಣೆ ಮಾಡಿದ್ದ ನಿಮಿತ್ತ ಸಪ್ತಕೋಟೇಶ್ವರನೆಂಬ ಹೆಸರು ಪ್ರಚಾರಕ್ಕೆ ಬಂದಿತೆಂಬ ಆಖ್ಯಾಯಿಕೆಯೊಂದೂ ಇದೆ. ಈ ದೇವಸ್ಥಾನ ದಿವಾಡಿ ದ್ವೀಪದಲ್ಲಿನ ನಾರಾವೆಯಲ್ಲಿತ್ತು.

ಬಹುಮನಿ ಅರಸರ ರಾಜ್ಯಾವಳಿತೆಯ ಕಾಲದಲ್ಲಿ ಈ ದೇವಸ್ಥಾನ ದುರ್ದಶೆ ಕಂಡಿತು. ೧೩೯೧ರ ಶಿಲಾಶಾಸನವೊಂದರ ಮೇರೆಗೆ ಈ ದೇವಸ್ಥಾನದ ಜೀರ್ಣೋದ್ಧಾರ ವಿಜಯನಗರದ ಸೇನಾಧಿಕಾರಿ ಮತ್ತು ಕಾರ್ಯವಾಹಕನಿದ್ದ ಮಾಧವ ಮಂತ್ರಿಯ ಕೈಗಳಿಂದಾಯಿತು. ಈ ದೇವಸ್ಥಾನದ ಮಹತ್ವವನ್ನು ಫಾದರ್ ಲೂಯಿಸ್ ಫ್ರೋಯಿಸ್ ಮತ್ತು ಫಾದರ್ ಪೆದ್ರು ದಿ ಅಲ್ಮೇಡಾ ಎಂಬೀ ಪೋರ್ತುಗೀಸ್ ಲೇಖಕರು ತಮ್ಮ ಬರಹಗಳಲ್ಲಿ ವರ್ಣಿಸಿರುತ್ತಾರೆ.

೧೫೬೦ರಲ್ಲಿ ಗೋವಾದ ಬಿಷಪ್‌ನ ಕಾರ್ಯ ನಿರ್ವಹಿಸುತ್ತಿದ್ದ ಪೇಟ್ರಿಯಾರ್ಕ್ ಆಫ್ ಇತಿಯೋಪಿಯಾ, ಡೋಮ್ ಜುವಾವ್ ನ್ಯೂನ್ಸ್ ಬರೇರಾನ ಆಜ್ಞೆಯ ಮೇರೆಗೆ ಈ ದೇವಸ್ಥಾನವನ್ನು ಮುರಿದಿಕ್ಕಲಾಯಿತು. ದೇವರ ವಿಗ್ರಹವನ್ನು ಹಿಂದಾಳೆ ನದಿಯಾಚೆಗಿನ ಮಟ್ಟಿ ನಾರಾಯಣ ರಾವ್ ಸೂರ್ಯರಾವ್ ದೇಸಾಯಿ ಕಟ್ಟಿಸಿದ್ದ ದೇವಾಲಯಕ್ಕೆ ಕೊಂಡೊಯ್ಯಲಾಯಿತು. ಅನಂತರ ಹಿಂದಾಳೆಯನ್ನು ನವ (ಹೊಸ) ನಾರಾವೆ (ಕೊಂಕಣಿ ನಾರಾವೆ ಅಥವಾ ನಿಬಿಟ್ ನಾರಾವೆ) ಎಂದಾಗಿ ಕರೆಯಲಾರಂಭಿಸಿದರು. ೧೬೬೮ರಲ್ಲಿ ದೇವಸ್ಥಾನವನ್ನು ಸಂದರ್ಶಿಸಿದ ಶಿವಾಜಿ ಅದರ ಜೀರ್ಣೋದ್ಧಾರ, ಸುಧಾರಣೆಗೆ ಆದೇಶವಿತ್ತ.[೪]

೬. ಮಂಗೇಶ

ಮಾಂಗಿರೀಶ ಮಹಾತ್ಮೆಯು ಮೇರೆಗೆ ಅದೊಮ್ಮೆ ಕುಶಸ್ಥಳಿಯಲ್ಲಿ ಹುಲಿಯ ರೂಪಕೊಂಡ ಶಿವ ಚೆಲ್ಲಾಟವಾಡುತ್ತಾ ಪಾರ್ವತಿಯ ಮೇಲೆರಗಿದಾಗ ಭಯಭೀತಳಾದ ಆಕೆ 'ತ್ರಾಹಿಮಾಮ್ ಗಿರೀಶ' (ಗಿರೀಶ ನನ್ನನ್ನು ರಕ್ಷಿಸು) ಎಂದಾಗಿ ಮೊರೆಯಿಟ್ಟಳು. ಆಕೆಯ ನುಡಿಗಳು 'ಮಾಂಗಿರೀಶ' ಎಂಬಂತೆ ಕೇಳಬಂದವು. ಪಾರ್ವತಿಯ ಅಪೇಕ್ಷೆಯ ಮೇರೆಗೆ ಶಿವ ಆವೊದಲ್ಗೊಂಡು 'ಮಾಂಗಿರೀಶ' ಎಂದಾಗಿ ಪರಿಚಿತನಾದ. ತಾನು ಕುಶಸ್ಥಳಿಯಲ್ಲಿ ಸ್ಥಾಯಿಯಾಗುವುದಾಗಿ ನುಡಿದ ಶಿವ, ಪಾರ್ವತಿಯನ್ನು ಕೆಳೋಶಿಯಲ್ಲಿ ಉಳಿದುಕೊಳ್ಳುವಂತೆ ಹೇಳಿದ. ಅನ್ಯ ಮಾಹಾತ್ಮ್ಯವೊಂದರ ಮೇರೆಗೆ ಕುಲಕೇಶ್ವರ ಶಿವಲಿಂಗ ದೇವಶರ್ಮನಿಗೆ ಅಗಾಶಿ ನದಿಯ ಪಾತ್ರದಲ್ಲಿ ದೊರಕ್ಕಿದ್ದುದಾಗಿದೆ.

'ತ್ರಿ ಹೋತ್ರ'ದ ಪೂರ್ವ ದಿಶೆಯಲ್ಲಿ ಮಾಂಗಿರೀಶ ಪರ್ವತವಿದೆ. ಅಲ್ಲಿ ಬ್ರಹ್ಮ, ಮಂಗೇಶ ಹೆಸರಿನ ಶಿವಲಿಂಗವನ್ನು ಸ್ಥಾಪಿಸಿದ. ಅದು ಅಲ್ಲಿನ ಬ್ರಾಹ್ಮಣರ ಪ್ರಸಿದ್ಧ ದೈವವಾಗಿದೆ. [೫] ಈ ಉಲ್ಲೇಖ ಸಹ್ಯಾದ್ರಿ ಖಂಡದಲ್ಲಿದೆ. ಕೆಲವೊಬ್ಬರು ಭಾಗೀರಥಿ ನದಿಯ ತೀರದಲ್ಲಿನ ಮೋಂಘ್ಯಾವನ್ನೇ ಮಾಂಗಿರೀಶ ಎಂದು ಗುರುತಿಸಿರುತ್ತಾರೆ.

ಮೋಂಘ್ಯಾದ ಹಳೆಯ ಹೆಸರು ಮೂಡಗಿರಿ ಇದ್ದು ಮೋಂಘ್ಯಾದ ಉತ್ಪತ್ತಿ ಈ ಶಬ್ದದಿಂದಾಯಿತೆಂಬ ವಾದವಿದೆ. ಆದರೆ ಅದು ನಿರಾಧಾರವಾದುದಾಗಿದೆ.

ಮಂಗೇಶ ಶಬ್ದ ಬಹುತೇಕ ಮಂಗಲೇಶ [೬] ಶಬ್ದದ ಮೊಟಕು ರೂಪವೊಂದಾಗಿರಬೇಕೆಂದು ಶ್ರೀ ಆರ್. ಎಸ್. ಪಂಡಿತರು ಭಾವಿಸುತ್ತಾರೆ. ಭವಿಷ್ಯೋತ್ತರ ಪುರಾಣ [೭], ಪಾರ್ವತಿಯು ಅನೇಕ ಹೆಸರುಗಳಲ್ಲಿ ಮಂಗಲ ಒಂದಾಗಿದೆಯೆಂದು ನುಡಿಯುತ್ತದೆ.

ಮಂಗಲೇಶ (ಮಂಗಲಳ ಒಡೆಯ) ಶಿವನ ಹೆಸರುಗಳಲ್ಲೊಂದಾಗಿದೆ. ಅಮರ ಕೋಶದ ಮೇರೆಗೆ ಸರ್ವಮಂಗಲ, ಪಾರ್ವತಿಯು ಹೆಸರುಗಳಲ್ಲೊಂದಾಗಿದೆ. ಮಹಾರಾಷ್ಟ್ರದಲ್ಲಿ ಮಂಗಲಾ ಅಥವಾ ಮಂಗಳಾಯಿಯ ಪ್ರಾಚೀನ ದೇವಸ್ಥಾನಗಳಿವೆ. ಅವುಗಳಲ್ಲೊಂದು ಸತಾರಾ ದುರ್ಗದಲ್ಲಿದ್ದು ಅದನ್ನು ಭೋಜರಾಜ ಹತ್ತನೇ ಶತಮಾನದಲ್ಲಿ ಕಟ್ಟಿಸಿದನೆಂದೆನ್ನಲಾಗುತ್ತದೆ. ಪ್ರಾಚೀನ ಕಾಲದ್ದೆನ್ನಲಾಗುವ ಐಹೊಳೆಯ (ಬಿಜಾಪುರ ಜಿಲ್ಲೆಯ ಹಣಗುಂಡೆ ತಾಲೂಕಿನಲ್ಲಿನ) ದೇವಸ್ಥಾನದಲ್ಲಿನ ಶಿಲಾಲೇಖ ಕ್ರಮಾಂಕ ೬೩೪ರಲ್ಲಿ ಮಂಗಲವನ್ನು ಪಶ್ಚಿಮ ಚಾಲುಕ್ಯರ ಶಕ್ತಿಶಾಲಿ ಅರಸನೊಬ್ಬನ ಹೆಸರಿನ ರೂಪಿನಲ್ಲಿ ಸೂಚಿಸಲಾಗಿದೆ. ಕಾಥಿಯಾವಾರ್‌ನ ಗಿರ್ನಾರ್‌ನಲ್ಲೂ ಮಂಗಲೇಶ ಹೆಸರಿನ ಶಿವನ ದೇವಸ್ಥಾನವಿದೆ. ಹಾಗೆಯೇ ಅಲ್ಲಿನ ಪ್ರಭಾಸ ಪಟ್ಟಣದ ಸಮೀಪ ಕುಶಸ್ಥಳಿ ಹೆಸರಿನ ಪವಿತ್ರಸ್ಥಾನವೊಂದೂ ಇದೆ.

ಸಹ್ಯಾದ್ರಿ ಖಂಡದಲ್ಲಿನ ಅನ್ಯ ಮಹತ್ಮ್ಯಗಳೊಂದಿಗೆ ಕಾಲಾಂತರದಲ್ಲಿ ಮಂಗೇಶ ಮಹಾತ್ಮೆಯನ್ನು ಜೋಡಿಸಿದ್ದಿರಬೇಕೆಂಬ ಅಭಿಪ್ರಾಯವನ್ನು ಡಾ. ಜೆರ್ಸನ್ ದ ಕುನ್ಹಾ ಈ ಗ್ರಂಥಕ್ಕೆ ತಾನು ಬರೆದ ಮುನ್ನುಡಿಯಲ್ಲಿ ವ್ಯಕ್ತಪಡಿಸಿರುತ್ತಾರೆ. ಈ ವಾದದ ಸಮರ್ಥನೆಗಾಗಿ ರಾಜಾಪುರ (ರತ್ನಗಿರಿ ಜಿಲ್ಲೆಯಲ್ಲಿನ) ದಲ್ಲಿನ, ಸಾರಸ್ವತರ ಉಪವಿಭಾಗವಿದ್ದ ರಾಜಾಪುರಿ

ಸಾರಸ್ವತರ ಕುಲದೈವ ಮಂಗಲೇಶನಿರುವುದಾಗಿ ಕೊಂಕಣಾಖ್ಯಾನದಲ್ಲಿ ನುಡಿದಿರುವ ವಿಚಾರದ ಉಲ್ಲೇಖ ಮಾಡಲಾಗುತ್ತದೆ.

ಕುಶಸ್ಥಳಿಯಲ್ಲಿನ ಮಂಗೇಶನ ಮೊತ್ತ ಮೊದಲಿನ ದೇವಸ್ಥಾನವನ್ನು ಪೋರ್ಚುಗೀಸರು ೧೫೬೦ರಲ್ಲಿ ನೆಲಸಮ ಮಾಡಿದರು. ಅಲ್ಲಿನ ವಿಗ್ರಹವನ್ನು ರಾತ್ರಿಯ ಹೊತ್ತಿಗೆ ಪಲ್ಲಕಿಯಲ್ಲಿರಿಸಿ ಸೋಂದೆ ರಾಜನ ರಾಜ್ಯದಲ್ಲಿನ ಪ್ರಿಯೋಳ್ ಎಂಬಲ್ಲಿಗೆ ಸಾಗಿಸಲಾಯಿತು. ಮತ್ತೆ ಅದೇ ವರ್ಷ ಹೊಸದಾಗಿ ಕಟ್ಟಿದ ದೇವಸ್ಥಾನದಲ್ಲಿ ಈ ವಿಗ್ರಹವನ್ನು ಸ್ಥಾಪಿಸಲಾಯಿತು. ಈ ದೇವಸ್ಥಾನದ ಭೂಭಾಗವನ್ನು ಮಂಗೇಶಿ ಎಂದು ಕರೆಯುತ್ತಾರೆ.

ಸದ್ಯದ ದೇವಸ್ಥಾನ ಸುಂದರವಾದ ತಾಣದಲ್ಲಿದೆ; ಸಮೀಪದಲ್ಲೇ ಕೊಳವೊಂದಿದ್ದು ಅದರ ಪಕ್ಕದಲ್ಲಿ ಅಗ್ರ ಶಾಲೆ ಇದೆ. ಮಂಗೇಶನ ಲಿಂಗ ಕೊಂಡ ಗರ್ಭಗೃಹದಲ್ಲಿ ನಂದಿಕೇಶ್ವರ, ಗಜಾನನ, ಭಗವತಿ ಮತ್ತು ಗ್ರಾಮಪುರುಷ (ಪ್ರಸಿದ್ಧ ಕುಳಾವಿಗಳ ಮನೆತನದಲ್ಲಿನ ಅತಿಶ್ರೇಷ್ಠನೆಂದು ಪೂಜಿಸಲ್ಪಡುತ್ತಿದ್ದ ವ್ಯಕ್ತಿ - ಇಲ್ಲಿ ವತ್ಸ ಗೋತ್ರದ ದೇವಶರ್ಮ) ಮುಂತಾದವರ ವಿಗ್ರಹಗಳೂ ಇವೆ. ಹಿಂಭಾಗದಲ್ಲಿ ಮೂಲಕೇಶ್ವರ, ವೀರಭದ್ರ, ಲಕ್ಷ್ಮೀನಾರಾಯಣ, ಶಾಂತಾದುರ್ಗಾ, ಕಾಲಭೈರವ ಮುಂತಾದವರ ವಿಗ್ರಹಗಳಿವೆ. ಅಲ್ಲಿಯೇ ದಕ್ಷಿಣ ಭಾಗದಲ್ಲಿ ಕೌಂಡಿನ್ಯ ಗೋತ್ರದ ಲೋಮಶರ್ಮನ ಚಿಕ್ಕ ಗುಡಿಯಿದೆ.

ಈ ದೇವಸ್ಥಾನ ಪ್ರಿಯೋಳ್‌ನಲ್ಲಿ ಅಗ್ರಹಾರವೊಂದನ್ನು ಕೊಂಡಿದೆ. ದೇವಸ್ಥಾನಕ್ಕೆ ರಾಮಚಂದ್ರ ಬಾಬಾ ಸುಖ್ತಣ್ಕರರ ವಿನಂತಿಯ ಮೇರೆಗೆ ಮೊದಲನೆಯ ಪೇಶ್ವ ಬಾಜಿರಾವ್ ಅನುಗ್ರಹಿಸಿದ್ದ ೨೫೦೦೦ರೂಪಾಯಿಗಳ ವಾರ್ಷಿಕ ಕೊಡುವಳಿ ದೊರಕುತ್ತದೆ. ದೇವಸ್ಥಾನದ ಹಿಂಭಾಗದಲ್ಲಿ ೧೮೫೦ರ ಸುಮಾರಿಗೆ ಬಾಳಿದ್ದ ನಾಯಕ ಸ್ವಾಮಿ (ಶಂಕರ ಮಂಗೇಶ ನಾಯಿಕ್ ಕರಂಡೆ ದೇಸಾಯಿ)ಯ ಸಮಾಧಿ ಇದೆ. ಈತ ಮರಾಠಿ ಭಾಷೆಯಲ್ಲಿನ ಶಿವಗೀತೆ ಮತ್ತು ರುಬಳವೆ (ಸ್ತುತಿಪರ ಗೀತೆ)ಗಳ ಪ್ರಸಿದ್ಧ ರಚಯಿತನಿದ್ದ. ಈತನ ಕೃತಿಗಳನ್ನು ಇಲ್ಲಿನ ದೇವಸ್ಥಾನಗಳಲ್ಲಿ ಹಾಡಲಾಗುತ್ತದೆ.

೨. ಶಾಂತಾದುರ್ಗಾ

ಮೊದಲು ಶಾಂತಾದುರ್ಗಾ ದೇವಸ್ಥಾನ ಕೆಳೋಶಿಯಲ್ಲಿತ್ತು. ಸ್ಥಳ ಪುರಾಣದ ಮೇರೆಗೆ ಅದೊಮ್ಮೆ ಶಿವ (ಈತ ಪಾಶುಪತಾಸ್ತ್ರ ಬಳಸಿದ) ಮತ್ತು ವಿಷ್ಣುಗಳಿಬ್ಬರ ನಡುವೆ ಭೀಷಣ ಕಾಳಗವಾಯಿತು. ಇದರಿಂದಾಗಿ ಪ್ರಪಂಚ ನಿರ್ನಾಮವಾಗುವುದರಲ್ಲಿತ್ತು. ಬ್ರಹ್ಮನ ಪ್ರಾರ್ಥನೆ ಮನ್ನಿಸಿದ ಆದಿಶಕ್ತಿ ಹಸ್ತಕ್ಷೇಪ ಮಾಡಿದಳು. ವಿಷ್ಣುವನ್ನು ತನ್ನ ಬಲಗೈಯಿಂದಲೂ ಶಿವನನ್ನು ಎಡಗೈಯಿಂದಲೂ ದೂರಮಾಡಿ ಅವರನ್ನು ಶಾಂತಗೊಳಿಸಿದಳು. ಈ ಕಾರಣ ಆಕೆ ಶಾಂತಾ (ಶಾಂತಕಾರಿ, ಸಾಂತೇರಿ) ಎಂದಾಗಿ ಕರೆಯಲ್ಪಡುತ್ತಿದ್ದಾಳೆ. ಈ ದೇವಿ ನಾರಾಯಣಿ, ಭವಾನಿ, ಮಹಿಷಾಸುರಮರ್ದಿನಿ, ಚಾಮುಂಡಿ ಎಂಬೀ ಹೆಸರುಗಳಿಂದಲೂ ಪರಿಚಿತಳಾಗಿರುತ್ತಾಳೆ.

ಮಾಂಗಿರೀಶ ಮಾಹಾತ್ಮ್ಯದ ಮೇರೆಗೆ ಶಿವನ ಅಪ್ಪಣೆ ಕೊಂಡು ಪಾರ್ವತಿ ತನ್ನ ಸ್ನೇಹಿತೆಯರೊಂದಿಗೆ ಕುಶಸ್ಥಳಿಯನ್ನು ಬಿಟ್ಟಳು. ಆಕೆ ಅಗಾಶಿ ನದಿಯ ತೀರದಲ್ಲಿ ತಪಸ್ಸು ಮಾಡುತ್ತಿದ್ದ ಬ್ರಾಹ್ಮಣರನ್ನು ಗೌರವಿಸಿ, ಸಂಖಾವಲಿಗೆ ಹೋಗಿ ಅಲ್ಲಿ ಬ್ರಾಹ್ಮಣರ ಮಾನ

ಭಂಗ ಮಾಡುತ್ತಿದ್ದ ರಕ್ಕಸರ ಸಂಹಾರ ಮಾಡಿದಳು. ಅನಂತರ ಕೆಳೋಶಿಯಲ್ಲೇ ಉಳಿದುಕೊಂಡಳು. ಈ ನಿಮಿತ್ತ ಆಕೆ ವಿಜಯಾಳೆಂದು ಕರೆಯಲ್ಪಡತೊಡಗಿದಳು.

ಪೂರ್ವಕಾಲದ ದೇವಸ್ಥಾನವನ್ನು ಪೋರ್ಚುಗೀಸರು ೧೫೬೪ರಲ್ಲಿ ಉಧ್ವಸ್ತಗೊಳಿಸಿದಾಗ ದೇವಿಯ ವಿಗ್ರಹವನ್ನು ಸೋಂಡೆರಾಜನ ರಾಜ್ಯದಲ್ಲಿನ ಕವಳೆಗೆ ಕೊಂಡೊಯ್ದು ಅಲ್ಲಿನ ಮಹಾರರ (ಹರಿಜನರ) ಕೇರಿಯಲ್ಲಿಡಲಾಯಿತು. ದೇವಿಯ ವಿಗ್ರಹವನ್ನು ವರ್ಷಕ್ಕೊಂದು ಬಾರಿ ಆರಾಧಿಸಲು ಅನುಮತಿಯೀಯಬೇಕೆಂಬ ಶರ್ತದ ಮೇರೆಗೆ ಮಹಾರರು ದೇವಸ್ಥಾನದ ನಿರ್ಮಾಣಕ್ಕೆ ಬೇಕಿರುವ ಭೂಭಾಗವನ್ನಿತ್ತರು. ಆನಂತರ ವಿಗ್ರಹವನ್ನು ಸಧ್ಯದ ದೇವಸ್ಥಾನಕ್ಕೆ ಸ್ಥಳಾಂತರ ಮಾಡಲಾಯಿತು. ಕೃತಜ್ಞತೆಯ ರೂಪದಲ್ಲಿ ಮಾಘ, ಶುದ್ಧ, ಪಂಚಮಿಯಂದು ನಡೆಯುವ ದೊಡ್ಡ ಜಾತ್ರೆಯಂದು ಮಹಾರ (ಹರಿಜನ) ರಿಗೆ ದೇವಸ್ಥಾನದ ಮುಖ್ಯದ್ವಾರದ ತನಕ ಸಾಗಿ ದೇವಿಯನ್ನು ಪೂಜಿಸುವ ಅನುಮತಿಯೀಯಲಾಯಿತು.

ನಾರೋರಾಮ್ ಮಂತ್ರಿ [8], ರಾಮಚಂದ್ರ ಬಾಬಾಸುಖ್ತಣ್ಕರ್ [9] ಮತ್ತು ಇನ್ನಿತರ ಕುಳಾವಿಗಳು ದೊಡ್ಡ ಪ್ರಮಾಣದಲ್ಲಿ ಧನವ್ಯಯಿಸಿ ದೇವಸ್ಥಾನದ ಜೀರ್ಣೋದ್ಧಾರ ಮಾಡಿದರು. ರಾಮಚಂದ್ರ ಬಾಬಾ ಸುಖ್ತಣ್ಕರ್ ದೇವಸ್ಥಾನಕ್ಕೆ ವಿಶಾಲ ಭೂಮಿಯನ್ನು ದತ್ತಿಯ ರೂಪದಲ್ಲಿತ್ತನಷ್ಟೇ ಅಲ್ಲ, ನಿತ್ಯದ ಪೂಜೆ ಇತ್ಯಾದಿಗಳನ್ನು ನಿರಂತರ ನಿರ್ವಹಿಸಲು ಬೇಕಾಗಿರುವ ಧನದ ವ್ಯವಸ್ಥೆ ಮಾಡಿದ.

೧೭೩೮ರಲ್ಲಿ ಸೋಂಡದ ಅರಸು ದೇವಸ್ಥಾನಕ್ಕಿತ್ತಿದ್ದ ಕವಳೆ ಗ್ರಾಮದ ಇನಾಮನ್ನು ರಾಮಚಂದ್ರ ಬಾಬಾ ಸುಖ್ತಣ್ಕರ್‌ನ ವಿನಂತಿಯ ಮೇರೆಗೆ ೧೭೩೯ರಲ್ಲಿ ಮೊದಲನೆಯ ಪೇಶ್ವೆ ಬಾಜೀರಾವ್ ಮತ್ತು ೧೭೫೫ರಲ್ಲಿ ಬಾಳಾಜಿ ಬಾಜೀರಾವ್ ದೃಢೀಕರಿಸಿದರು. ಕವಳೆಯಲ್ಲಿನ ಸಧ್ಯದ ದೇವಸ್ಥಾನದ ನಿವೇಶನ ಕೆಳೋಶಿಯಲ್ಲಿದ್ದ ದೇವಸ್ಥಾನದ ಹಳೆಯ ನಿವೇಶನದಂತೆ ಕಾಣಬರುತ್ತದೆ. ಅದು ಸರಣಿಗುಡ್ಡಗಳ ಇಳುಕಲಲ್ಲಿ, ಪಿರಮಿಡ್‌ನ ಆಕಾರದ ಚಾವಣಿಗಳ ಸಮುಚ್ಚಯದ ನಟ್ಟನಡುವೆ ಗುಮ್ಮಟಕೊಂಡ ವಾಸ್ತುವೊಂದಾಗಿದೆ. ದೇವಸ್ಥಾನದ ಕಂಬಗಳನ್ನು ಕಾಶ್ಮೀರಿ ಕಲ್ಲಿನಿಂದ [10] ತಯಾರಿಸಲಾಗಿದ್ದು ನೆಲಕ್ಕೂ ಅದೇ ಕಲ್ಲನ್ನು ಹಾಸಲಾಗಿದೆ.

ಗರ್ಭಗೃಹದಲ್ಲಿ ಶಾಂತಾದುರ್ಗಾಳ ಪಂಚಧಾತುವಿನಿಂದ ತಯಾರಿಸಲಾದ ವಿಗ್ರಹವಿದ್ದು ಅದರ ಪಕ್ಕದಲ್ಲಿ ಶಿವಲಿಂಗವಿದೆ. ಅಲ್ಲಿ ನಾರಾಯಣ, ಗಣಪತಿಯರ ವಿಗ್ರಹಗಳೂ ಇವೆ. ದೀಪಸ್ಥಂಭದ ಸಮೀಪ ಕಾಳಭೈರವನ ವಿಗ್ರಹವಿದೆ. ದೇವಸ್ಥಾನದ ಮುಂಭಾಗದಲ್ಲಿ ದೊಡ್ಡ ಕೊಳವೊಂದಿದ್ದು ಅದರ ಇಕ್ಕಡೆಗಳಲ್ಲಿ ಯಾತ್ರಿ ನಿವಾಸ ಸ್ಥಾನಗಳಿವೆ. ಮುಖ್ಯ ದೇವಸ್ಥಾನದ ಹೊರಭಾಗದಲ್ಲಿ ಗ್ರಾಮಪುರುಷ, ಕೌಶಿಕ ಗೋತ್ರೀಯ ಶಿವಶರ್ಮನ ಸಣ್ಣ ಗುಡಿಯಿದೆ. ಈ ವಿಗ್ರಹಗಳೆಲ್ಲವುಗಳನ್ನು ಕೆಳೋಶಿಯ [11] ಯಿಂದ ತರಲಾಯಿತು. ತುಸು ದೂರದಲ್ಲಿದ್ದ ಪಾರಿಜಾತದ ವೃಕ್ಷದಲ್ಲಿ ಬರವೀರ ಭಗವತಿ ಇದ್ದಾಳೆ. ದೇವಸ್ಥಾನದ ಹಿಂಬಾಗದಲ್ಲಿ ದಟ್ಟಗಿನ ಅಡವಿ ಇದೆ. ಇಲ್ಲಿನ ದೇವಿಯ ಸ್ತೋತ್ರ ಪ್ರಸಿದ್ಧ ಪಂಡಿತ ಮಹೇಶ್ವರ

ಟ್ಟಿ ಸುಬ್ರಹ್ಮಣ್ಯರ್‌ನ ಮೊಮ್ಮಗ ರಘುನಾಥ ಶಾಸ್ತ್ರಿಯ ರಚನೆಯಾಗಿದೆ.

. ನಾಗೇಶ

ನಾಗೇಶ ಮಹಾರುದ್ರನ ದೇವಸ್ಥಾನ ತನ್ನ ಮೂಲದ ವಾಸ್ತುವನ್ನುಳಿಸಿಕೊಂಡ ಕೆಲವೇ ಮುಖ್ಯ ದೇವಸ್ಥಾನಗಳಲ್ಲೊಂದಾಗಿದೆ. ಅದು ಬಾಂದಿವಡೆ (ಬಾಂದೋಡೆ, ಬಾಂದೋರಾ)ಯಲ್ಲಿದೆ. ದೇವಸ್ಥಾನ ಅಂತ್ರುಜ್ ಮಹಾಲಿನಲ್ಲಿದ್ದ ನಿಮಿತ್ತ ಅದು ಪೋರ್ಚುಗೀಸರ ನಾಶಕಾರಿ ಕೃತ್ಯಗಳಿಂದ ಸುರಕ್ಷಿತವಾಗಿ ಉಳಿಯಿತು. ಅಂತ್ರುಜ್ ಮಹಾಲು ಸೋಂಡೆ ರಾಜ್ಯದ ಒಂದು ಭಾಗವಾಗಿತ್ತು. ದೇವಸ್ಥಾನದಲ್ಲಿ ಲಕ್ಷ್ಮೀನಾರಾಯಣ, ಗಣಪತಿ, ರವಳನಾಥ, ರಡೊ, ಕಾಲಭೈರವ ಮತ್ತು ಪೂರ್ವಾಚಾರಿಯ ವಿಗ್ರಹಗಳೂ ಇವೆ.

. ಶ್ರೀ ನಾಗೇಶ ದೇವಸ್ಥಾನದಲ್ಲಿ ಕೊಂಕಣಿ ಭಾಷೆಯ ಶಿಲಾಫಲಕ

ನಾಗೇಶ ದೇವಸ್ಥಾನದ ಮುಂಭಾಗದಲ್ಲಿ, ಕೋಳದತ್ತ ತೆರವಾಗಿದ್ದ ಪ್ರವೇಶ ದ್ವಾರದ ಮಾಡಿನ ಮೇಲೆ, ೧೪೧೩ರ ಕೊಂಕಣಿ ಭಾಷೆಯ ಬರಹಕೊಂಡ ಕುತೂಹಲಕಾರಿ ಶಿಲಾಫಲಕವಿದೆ. ಅದು ರಾಮಪ್ರಭು ಮತ್ತು ಮಾಂಗೀ ಪ್ರಭುಗಳ ಉಪಸ್ಥಿತಿಯಲ್ಲಿ ಪ್ರಸೋಣೆಶೆಣ್ಯ ಮಗ ಮಾಯೀಶೆಣ್ಯ ದೇವಪೂಜೆಗಾಗಿ ಇತ್ತಿದ್ದ ದತ್ತಿಯ ಉಲ್ಲೇಖ ಮಾಡುತ್ತದೆ. ಇದು ನಾಗ್ವಾ ನಾಯಕ ದೇವಸ್ಥಾನದ ವಿಶ್ವಸ್ತನಿದ್ದುದನ್ನು ಸೂಚಿಸುತ್ತದೆ. ಈ ಗುಡುವಳಿ ಬೆಳಗಿನ ಪೂಜೆಯ ಹೊತ್ತಿಗೆ ಮಾಡುವ ಅಕ್ಕಿಯ ನೈವೇದ್ಯ ಮತ್ತು ನಾಗೇಶ ಮತ್ತು ರೆಯಲ್ಲಿನ ಮಹಾಲಕ್ಷ್ಮಿಯ ದೇವಸ್ಥಾನಗಳಲ್ಲಿ ಕಾರ್ತಿಕ ಪೂರ್ಣಿಮೆಯಂದು ಜರಗುವ ಉತ್ಸವಗಳಿಗೆ ಸಂಬಂಧಿಸಿದ ಖರ್ಚಿಗಾಗಿದೆ. ವಿಜಯನಗರದ ಮೊದಲನೆಯ ಬುಕ್ಕನಲ್ಲಿಗೆ ತೆರಳಿದ್ದ ಗೋವಾದ ಪ್ರತಿನಿಧಿಗಳಿಬ್ಬರಲ್ಲಿ ಮಾಯೀಶೆಣ್ಯ ವಾಗ್ಲೆ ಒಬ್ಬಾತನಿದ್ದ.

೧೦. ಮಹಾಲಕ್ಷ್ಮಿ

ಮಹಾಲಕ್ಷ್ಮಿಯ ದೇವಸ್ಥಾನ ಮೊದಲು ಮಡಗಾಂವ್‌ನ ಕರಾವಳಿ ಭಾಗದಲ್ಲಿ ಸುಮಾರು ಎರಡು ಮೈಲಿಗಳ ದೂರದಲ್ಲಿದ್ದ ಕೋಳಂಬಿಯಲ್ಲಿತ್ತು. ಪೋರ್ಚುಗೀಸರು ಈ ದೇವಸ್ಥಾನ ಉಧ್ವಸ್ತ ಮಾಡಲು ಯತ್ನಿಸಿದಾಗ ಸಪ್ತೋಘಾಟೆ ರಾತ್ರಿಯ ಹೊತ್ತಿಗೆ ಮುಖ್ಯ ವಿಗ್ರಹವನ್ನು ತನ್ನ ಹೆಗಲಮೇಲಿಕ್ಕರಿಸಿ ತಳವಲಿಗೆ ಕೊಂಡುಹೋದ; ಅಲ್ಲಿ ಗ್ರಾಮಸ್ಥರು ಅದನ್ನು ಪೂಜಿಸಲಾರಂಭಿಸಿದರು. ೧೮೮೭ರಲ್ಲಿ ಬಂದಿವಡೆಯಲ್ಲಿ ಸಣ್ಣ ದೇವಸ್ಥಾನವನ್ನು ಕಟ್ಟಲಾಯಿತು. ಅದು ಮಹಾಲಕ್ಷ್ಮಿಯ ಮುಖ್ಯ ವಿಗ್ರಹದೊಂದಿಗೆ ರವಳನಾಥ, ಲಕ್ಷ್ಮೀನಾರಾಯಣ, ಸಪ್ತೋಘಾಟೆ, ನಾರಾಯಣ ಪುರುಷ ಮತ್ತು ವಲೇಶ್ವರರ ವಿಗ್ರಹಗಳನ್ನೊಳಗೊಂಡಿದೆ. ಸದ್ಯದ ದೇವಸ್ಥಾನ ಬೊಂಬಾಯಿಯ ಪಾರ್ಸಿ ಗೃಹಸ್ಥ ಸೋರಾಬ್ಜಿ ಶಾಪೂರ್ಜಿ, ತನ್ನ ಹರಕೆ ಸಲ್ಲಿಸಲಾಗಿ ಪಣಜಿಯ ವಿಷ್ಣುಶೆಣ್ವಿ ಧೆಂಪೆಯ ಮುಖಾಂತರ ೧೯೧೩ರಲ್ಲಿ ಕಟ್ಟಿಸಿದ್ದುದಾಗಿದೆ.

ತಳವಲ್ಲಿಯಲ್ಲೂ ಇನ್ನೊಂದು ಸಣ್ಣ ದೇವಸ್ಥಾನವಿದ್ದು ಅಲ್ಲಿನ ದೈವವನ್ನು ವಾಣೆ, ಪಾದ್ಯೆ, ಜೋಶಿಯರು ಮತ್ತ ಬೇರೆ ಕೆಲವರು ಪೂಜಿಸುತ್ತಾರೆ.

೧೧. ಮ್ಹಾಳಸಾ

ದೇವ, ದಾನವರ ಯುದ್ಧದ ವೇಳೆ ಶಿವನನ್ನು ಭಸ್ಮಾಸುರನಿಂದ ರಕ್ಷಿಸಲಾಗಿ ವಿಷ್ಣು ಮೋಹಿನಿಯ ರೂಪಕೊಂಡ; ಮ್ಹಾಳಸಾ ಮೋಹಿನಿಯ ಇನ್ನೊಂದು ರೂಪವೆಂದು ಸ್ಥಳ ಪುರಾಣ ನುಡಿಯುತ್ತದೆ. ಮ್ಹಾಳಶರ್ಮ ಗುಡ್ಡವೊಂದರಲ್ಲಿ ಹಸುಗಳನ್ನು ಮೇಯಿಸುತ್ತಿದ್ದಾಗ ಮ್ಹಾಳಸಾ ದೇವಿ ಪ್ರತ್ಯಕ್ಷಳಾಗಿ ಆಕೆ ತೋರಿದ ಜಾಗದಲ್ಲಿ ಅಗೆದಾಗ ಆತನಿಗೆ ಆಕೆಯ ವಿಗ್ರಹ ದೊರಕಿತು. ಅದನ್ನಾತ ಸಾಷಷ್ಟಿಯ ಮ್ಹದ್ದೋಳ್ ಮಹಾಲಿನಲ್ಲಿನ ವೆರ್ಣೆ (ವರುಣಾಪುರ ವರೇಣ್ಯ) ಎಂಬಲ್ಲಿ ಸ್ಥಾಪಿಸಿದ. ಇದು ಮ್ಹಾಳಸಾ ದೇವಿಯ ಮೂಲಸ್ಥಾನ. ದೇವಿಯ ವಿಗ್ರಹದ ಪಾದಗಳೆಡೆಯಲ್ಲಿ ಲಿಂಗದ ಆಕಾರದ ಮ್ಹಾಳಪುರುಷನ ವಿಗ್ರಹವಿದೆ. ಪೋರ್ಚುಗೀಸರು ದೇವಸ್ಥಾನವನ್ನು ನಾಶಗೊಳಿಸಿದಾಗ ಅಲ್ಲಿನ ವಿಗ್ರಹವನ್ನು ಪ್ರಿಯೋಳ್‌ಗೆ ಕೊಂಡೊಯ್ಯಲಾಯಿತು. ದೇವಿಯ ಹೊಸ ದೇವಸ್ಥಾನದೊಂದಿಗಿನ ಅಗ್ರಹಾರಕ್ಕೆ ಮ್ಹಾದ್ದೋಳ್ (ಮ್ಹಾರ್ದೋಳ್) ಎಂಬ ಹೆಸರಿಡಲಾಯಿತು. ಹಳೆಯ ದೇವಸ್ಥಾನದ ಅವಶೇಷಗಳನ್ನು ವೆರ್ಣೆಯ ಗುಡ್ಡದಲ್ಲಿ ಇಂದಿಗೂ ಕಾಣಬಹುದು. ಸದ್ಯದ ದೇವಸ್ಥಾನ ಅಂತ್ರುಜ್‌ಮಹಾಲಿನಲ್ಲಿನ ಏಕಮೇವ ಸುಂದರ ದೇವಸ್ಥಾನವಾಗಿದೆ. ರಾಮಚಂದ್ರ ಬಾಬಾ ಸುಖ್ತಣ್‌ಕರ್‌ನ ಅಗ್ರಹಕ್ಕೆ ಮನ್ನಣೆಯಿತ್ತ ಮೊದಲನೆಯ ಪೇಶ್ವೆ ಬಾಜೀರಾವ್ ಈ ದೇವಸ್ಥಾನಕ್ಕೆ ಅಗ್ರಹಾರವೊಂದನ್ನು ಇನಾಮಿನ ರೂಪದಲ್ಲಿತ್ತ.

ಚಂಪಾಷಷ್ಠಿಯಂದು ದೈತ್ಯಮಲ್ಲನನ್ನು ಸಂಹಾರ ಮಾಡಿದ ಮಲ್ಲಾರಿ ಮ್ಹಾಳಸಾಳಪತಿ ಯೆಂದು ಬ್ರಹ್ಮಾಂಡಪುರಾಣದಲ್ಲಿನ ಮಲ್ಲಾರಿ ಮಾಹಾತ್ಮ್ಯ ನುಡಿಯುತ್ತದೆ. ಮಂಗೇಶ ದೇವಸ್ಥಾನದಿಂದ ಮ್ಹಾಳಸಾ ದೇವಸ್ಥಾನಕ್ಕೆ ಹೋಗುವ ದಾರಿಯಲ್ಲಿ ನ ಮ್ಹದ್ದೋಳ್ ಎಂಬಲ್ಲಿ ಮಲ್ಲನ ದೇವಸ್ಥಾನವಿದೆ.

ದೇವಸ್ಥಾನದಲ್ಲಿನ ಮುಖ್ಯ ದೇವರು ಮ್ಹಾಳಸಾಳಿದ್ದು ಅಲ್ಲಿ ಶಾಂತಾದುರ್ಗಾ, ಲಕ್ಷ್ಮೀನಾರಾಯಣ, ಗಣಪತಿ, ಗ್ರಾಮಪುರುಷ, ಭಗವತಿ, ಸೋನಾಲ, ಭೈರವ, ಕಾಲಭೈರವ ಮುಂತಾದ ದೇವರುಗಳ ಉಪಸ್ಥಿತಿಯಿದೆ.

ಮ್ಹಾಳಸಾಳ ವಿಗ್ರಹ ನಾಲ್ಕು ಕೈಗಳನ್ನು ಕೊಂಡಿದೆ. ಮೇಲಣ ಬಲಗೈಯಲ್ಲಿ ತ್ರಿಶೂಲವಿದೆ. ಮತ್ತು ಕೆಳಗಣ ಬಲಗೈ ಖಡ್ಗಕೊಂಡಿದೆ ; ಮೇಲಣ ಎಡಕೈಯಲ್ಲಿ ಪಂಚಪಾತ್ರೆಯಿದೆ. ಕೆಳಗಣ ಎಡಕೈ ರುಂಡಕೊಂಡಿದೆ. ನೆಲದ ಮೇಲೆ ಮುಂಡದಿಂದ ಸುರಿದ ರಕ್ತವನ್ನು ನೆಕ್ಕುವ ಹುಲಿ ಅಥವಾ ಸಿಂಹವನ್ನು ಹೋಲುವ ಪ್ರಾಣಿಯನ್ನು ಅಲ್ಲಿ ಕಾಣಬಹುದು. ವಕ್ಷಸ್ಥಳದ ಮೇಲಕ್ಕೆ ಹಾರವೊಂದಿದ್ದು ಅದು ತಲೆಬುರುಡೆಗಳಂತಿನ ಆಕೃತಿಗಳಿಂದೊಡಗೂಡಿದ್ದುದನ್ನು ಕಾಣಬಹುದು. ದೇವಿ ಅಡ್ಡ ಬಿಡ್ಡ ವ್ಯಕ್ತಿಯೊಬ್ಬನ ಮೇಲಕ್ಕೆ ನಿಂತಿದ್ದು ಆ ವ್ಯಕ್ತಿ ಮಾನವ, ದಾನವರಲ್ಲಿ ಯಾರಿಗೆ ಸಂಬಂಧಿಸಿರುವನೆಂಬುದರ ಅರಿವಾಗುತ್ತಿಲ್ಲ. ವಿಗ್ರಹದ ರೂಪ, ಭಂಗಿಗಳನ್ನು ಕಾಣುವಾಗ ಅದು ಶಾಕ್ತ ಪಾಂಥೀಯ ತಾಂತ್ರಿಕರ ದೇವಿಯಂತೆ ಭಾಸವಾಗುತ್ತದೆ.

ಮ್ಹಾಳಸಾ ದೇವಿಯನ್ನು ನಾರಾಯಣಿ ಎಂದಾಗಿ ಕರೆಯಲ್ಪಡುವ, ವಿಷ್ಣುಕೊಂಡ ಮೋಹಿನಿಯ ರೂಪವೆಂದೂ ಭಾವಿಸಲಾಗುತ್ತದೆ.

೧೨. ರಾಮನಾಥ

ಮೊತ್ತಮೊದಲನೆಯ ರಾಮನಾಥ ದೇವಸ್ಥಾನ ಲೋಟ್ಲಿಯಲ್ಲಿತ್ತು; ಪೋರ್ಚುಗೀಸರು ದೇವಸ್ಥಾನವನ್ನು ಉಧ್ವಸ್ತಗೊಳಿಸಿದಾಗ ವಿಗ್ರಹವನ್ನು ಬಂಡಿವಡೆಗೆ ಕೊಂಡೊಯ್ಯಲಾಯಿತು. ಹೊಸದಾಗಿ ಕಟ್ಟಿಸಿದ ದೇವಸ್ಥಾನದ ಪರಿಸರಕ್ಕೆ ರಾಮನಾಥಿ ಎಂಬ ಹೆಸರಿಡಲಾಯಿತು. ದೇವಸ್ಥಾನದಲ್ಲಿ ಲಕ್ಷ್ಮೀನಾರಾಯಣ, ಶಾಂತಾದುರ್ಗಾ, ಬೇತಾಳ, ಸಿದ್ಧನಾಥ, ಕಾಮಾಕ್ಷಿ, ಕಾಲಭೈರವರ ವಿಗ್ರಹಗಳೂ ಇವೆ.

೧೩. ಕಾಮಾಕ್ಷಿ

ಈ ದೇವಸ್ಥಾನದ ಮಾಹಾತ್ಮ್ಯವನ್ನು ಸಹ್ಯಾದ್ರಿ ಖಂಡದ ಸಹ್ಯಾಚಲೋಪಾಖ್ಯಾನದಲ್ಲಿ ನಾರದ ಮತ್ತು ಅಂಬರೀಶನ ಸಂವಾದದ ನಡುವೆ ಬರುವ ಸುಂದರವಾದ ಸಂಸ್ಕೃತ ಶ್ಲೋಕಗಳಲ್ಲಿ ಕಾಣಬಹುದು. ಮೊತ್ತ ಮೊದಲ ದೇವಸ್ಥಾನ ರಾಯಥುರ್‌ನಲ್ಲಿತ್ತು. ಪೋರ್ಚುಗೀಸರು ಅದನ್ನು ನಾಶಗೊಳಿಸಿದ ಬಳಿಕ ವಿಗ್ರಹವನ್ನು ಶಿರೋಡೆಗೆ ಕೊಂಡುಹೋಗಿ ಅಲ್ಲಿ ಕಟ್ಟಿದ ಹೊಸ ದೇವಸ್ಥಾನದಲ್ಲಿ ಸ್ಥಾಪಿಸಲಾಯಿತು.

ಪೂಜಿಸಲ್ಪಡುವ ದೇವಿ ಚತುರ್ಭುಜಗಳ ಮಹಿಷಾಸುರ ಮರ್ದಿನಿ ಇದ್ದು ಆಕೆಯ ಕೈಗಳಲ್ಲಿ ತ್ರಿಶೂಲ, ಖಡ್ಗ, ತಾಳ ಮತ್ತು ರುಂಡಗಳಿವೆ. ಅಲ್ಲಿ ಲಕ್ಷ್ಮೀನಾರಾಯಣ, ಗ್ರಾಮಪುರುಷ, ರಾಮೇಶ್ವರ, ಶಾಂತಾದುರ್ಗಾ, ಬೇತಾಳ ಮತ್ತು ಕಾಳಭೈರವರ ವಿಗ್ರಹಗಳೂ ಇವೆ.

೧೪. ಶಿರಾಲಿಯಲ್ಲಿನ ಮಹಾಗಣಪತಿ ಮತ್ತು ಮಹಾಮಾಯಾ ದೇವಸ್ಥಾನಗಳು

ಮಹಾಗಣಪತಿ ಮತ್ತು ಮಹಾಮಾಯಾ ದೇವಸ್ಥಾನಗಳು ಗೋವಾದ ದ್ವಾಡಿ ದ್ವೀಪದಲ್ಲಿನ ನವೇಲಿ ಮತ್ತು ಗೊಲಾಟಿ ಎಂಬಲ್ಲಿದ್ದವು. ೧೫೬೦ರಲ್ಲಿ ಪೋರ್ಚುಗೀಸರು ಈ ದೇವಸ್ಥಾನಗಳನ್ನು ಧ್ವಂಸಗೊಳಿಸಿದರು. ಈ ದೇವಸ್ಥಾನಗಳ ಅರ್ಚಕರು ಮಹಾಗಣಪತಿಯ ಸೊಂಡಿಲ ಮೇಲಿನ ದುಂಡು ಪಟ್ಟಿ, ಮಹಾಮಾಯಾಳ ಮುಖವಾಡ, ಸಪ್ತಕೋಟೇಶ್ವರನ ಪೀಠ ಹಾಗೂ ಅನ್ಯ ಕೆಲವೊಂದು ವಿಗ್ರಹಗಳೊಂದಿಗೆ ಉತ್ತರ ಕನ್ನಡದಲ್ಲಿನ ಶಿರಾಲಿಗೆ ಹೋದರು; ಅದೇ ವರ್ಷ ಅಲ್ಲಿ ಹೊಸ ದೇವಸ್ಥಾನವೊಂದನ್ನು ಕಟ್ಟಿದರು. ಶಿರಾಲಿಯಲ್ಲಿನ ಮಹಾಗಣಪತಿ ಮತ್ತು ಮಹಾಮಾಯಾಳ ದೇವಸ್ಥಾನ ಕೌಶಿಕ ಗೋತ್ರದ ಕುಡ್ವರ, ಕಶ್ಯಪ ಗೋತ್ರದ ಹಟ್ಟಿಯಂಗಡಿ ಕಾಮತರ ಮತ್ತು ಅನ್ಯ ಕೆಲವೊಬ್ಬ ಕುಟುಂಬೀಯರ ಕುಲದೈವಗಳನ್ನು ಕೊಂಡಿದೆ. ಅವರ ಮಂಡಲದಲ್ಲಿ ಆದಿತ್ಯ, ಮಹಾಮಾಯ, ಗಣಪತಿ, ಲಕ್ಷ್ಮೀನಾರಾಯಣ ಮತ್ತು ಸಪ್ತಕೋಟೇಶ್ವರ ದೇವರುಗಳಿದ್ದು ಮಧ್ಯಭಾಗದಲ್ಲಿ ಗಣಪತಿಯನ್ನು ಕೊಂಡಿದೆ.

ನವೇಲಿಯ ಹಳೆಯ ದೇವಸ್ಥಾನದಲ್ಲಿನ ಸಪ್ತಕೋಟೇಶ್ವರನ ವಿಗ್ರಹವನ್ನು ಹೋಲುವ ವಿಗ್ರಹವೊಂದನ್ನು ಇತ್ತೀಚಿಗಿನ ದಿನಗಳ ಪರ್ಯಂತ ಉತ್ಸವ ಮೂರ್ತಿಯ ರೂಪದಲ್ಲಿ

ಬಳಸಲಾಗುತ್ತಿತ್ತು. ಅಲ್ಲಿ ಆದಿತ್ಯನ ಬೇರೆಯೇ ಆದ ವಿಗ್ರಹವಿರದಿದ್ದು ಅದರೆಡೆಯೆಡೆಯಲ್ಲಿ ಸೂರ್ಯಕಾಂತ ಸ್ಪಟಿಕ ಮಣಿಯನ್ನಿಟ್ಟು ಪೂಜಿಸಲಾಗುತ್ತದೆ.

ದೇವಸ್ಥಾನದಲ್ಲಿ ಸಪ್ತಕೋಟೀಶ್ವರನ ಲಿಂಗ, ರವಳನಾಥ ಮತ್ತು ಗ್ರಾಮಪುರುಷನ ವಿಗ್ರಹಗಳಿವೆ. ಶಿರಾಲಿಯಲ್ಲಿನ ಈ ದೇವಸ್ಥಾನದ ಮುಂಭಾಗದಲ್ಲಿ ಕೇಶವನಾರಾಯಣ ದೇವಸ್ಥಾನವಿತ್ತು. ಶೆಣ್ವಿ- ಪೈಕ ವರ್ಗ ಸಮಾಜದಿಂದ ಹೊರಬಿದ್ದಾಗ ದೇವಸ್ಥಾನದ ಅರ್ಚಕರು ಅವರನ್ನು ಸೇರಿಕೊಂಡರು; ದೇವಸ್ಥಾನವನ್ನು ಚಿತ್ರಾಪುರ ಮಠಕ್ಕೆ ಸ್ಥಳಾಂತರಗೊಳಿಸಲಾಯಿತು.

೧೫. ಪೋರ್ಚುಗೀಸರ ಆಳ್ವಿಕೆಯ ದಿನಗಳಲ್ಲಿ ದೇವರ ವಿಗ್ರಹಗಳನ್ನು ವಿಭಿನ್ನ ಸ್ಥಾನಗಳಿಗೆ ಕೊಂಡುಹೋದುದು.

ಗೋವಾದಲ್ಲಿನ ದೇವಸ್ಥಾನಗಳನ್ನು ಪೋರ್ಚುಗೀಸರು ಒಡೆದಿಕ್ಕಿ ನಾಶಗೊಳಿಸಿದಾಗ ಎಷ್ಟೊಂದೋ ಮಂದಿ ಸಾರಸ್ವತರು ತಮ್ಮ ಕುಟುಂಬದ ದೇವರುಗಳೊಂದಿಗೆ ಸೋಂಡೆ ಅರಸರ ಅಂತ್ರುಜ್ ಮಹಾಲಿನತ್ತ ಪಲಾಯನ ಮಾಡಿದರು.

ಈ ಕೆಳಗಣ ತಖ್ತೆ ಕೆಲವೊಂದು ಪ್ರಮುಖ ಕುಲದೇವರು, ದೇವಿಯರ ಹೆಸರು ಮತ್ತು ದೇವಸ್ಥಾನಗಳಿದ್ದ ಹಳೆಯ ಹಾಗೂ ಈಗಿನ ತಾಣಗಳ ವಿವರಗಳನ್ನೀಯುತ್ತದೆ :

ಕುಲದೇವರು	ಮೂಲ ದೇವಸ್ಥಾನ	ಈಗಿನ ದೇವಸ್ಥಾನ	ಕುಳಾವಿಗಳ ಗೋತ್ರ
ಸಪ್ತ ಕೋಟೀಶ್ವರ	ನಾರಾವೆ	ಹೊಸ ನಾರಾವೆ	—
ಮ್ಹಾಳಸಾ	ವೆರ್ಣೆ (ವರೇಣ್ಯ)	ಪ್ರಿಯೋಳ್‌ನಲ್ಲಿನ ಮ್ಹಾರ್ದೋಳ್	ಕೌಶಿಕ, ಗಾರ್ಗ್ಯ, ಭರದ್ವಾಜ ಮತ್ತು ಅತ್ರಿ
ಮಂಗೇಶ	ಕುಶಸ್ಥಳಿ	ಪ್ರಿಯೋಳ್‌ನಲ್ಲಿನ ಮಂಗೇಶಿ	ಜಾಮದಗ್ನ್ಯ, ವತ್ಸ ಮತ್ತು ಕೌಂಡಿನ್ಯ
ಶಾಂತಾದುರ್ಗಾ	ಕೆಳೋಶಿ	ಕವಳೆ	ಕೌಶಿಕ, ಭರದ್ವಾಜ ಮತ್ತು ವತ್ಸ
ಸಾಂತೇರಿ (ಸಾಂತೇರಿ- ಕಾಮಾಕ್ಷಿ)	ಲೊಟ್ಲಿ	ಕವಳೆ	ಕೌಶಿಕ, ಭರಧ್ವಾಜ ಮತ್ತು ವತ್ಸ
ಕಾಮಾಕ್ಷಿ	ರಾಯಥುರ್	ರಾಯಶಿರೋಡೆ	ಕೌಶಿಕ ಮತ್ತು ಅತ್ರಿ
ರವಳನಾಥ	ಬಂಧಿವಡೆ (ಚೋಡಣ ದ್ವೀಪದಲ್ಲಿನ)	ಮಾಶೆಲ್ (ಮಾರ್ಸೆಲ್)	ಕಾಶ್ಯಪ
ನಾಗೇಶ	ಬಂದಿವಡೆ	ಬಂದಿವಡೆ	ವತ್ಸ ಮತ್ತು ಕೌಶಿಕ
ಮಹಾಲಕ್ಷ್ಮಿ	ಕೊಳಂಬೆ	ಬಂದಿವಡೆ	—
ರಾಮನಾಥ	ಲೊಟ್ಲಿ	ಕವಳೆ	ಕೌಂಡಿನ್ಯ ಮತ್ತು ವತ್ಸ
ದಾಮೋದರ	ಮಡ್ಗಾಂವ್	ಜಾಂಬೋಲಿ	ಕೌಶಿಕ, ಭರದ್ವಾಜ, ಅತ್ರಿ ಇತ್ಯಾದಿ

ಮಹಾಮಾಯಾ	ಗೊಲಾಟಿ	ಖೇದಾರ	ಕಾಶ್ಯಪ, ಭರಧ್ವಾಜ,
	ಗಿರದೋಳಿ	ಬಲಿಗ್ರಾಮ	ಗೌತಮ ಮತ್ತು ವಸಿಷ್ಠ
ವಿಜಯದುರ್ಗಾ	ಸಾಂಖಲಿ	ವೇಲಿಂಗ್	—
ಭಗವತಿ	ಚಿಂಬಳ	ಮಾಶೆಲ್ (ಮಾರ್ಸೆಲ್)	
ದೇವಕಿ ಕೃಷ್ಣ	ಚೋಡಣಾ	ಮಾಶೆಲ್ (ಮಾರ್ಸೆಲ್)	ಜಾಮದಗ್ನ್ಯ, ವತ್ಸ, ಭರದ್ವಾಜ
ಗಜಾನನ	ಕೇರ	ಖಾಂಡೋಳಿ	ಅತ್ರಿ, ಕಾಶ್ಯಪ ಮತ್ತು ಕೌಂಡಿನ್ಯ
ಮಹಾಗಣಪತಿ	ನವೇಲಿ	ಶಿರಾಲಿ (ಉ.ಕನ್ನಡ)	ಕೌಶಿಕ, ವತ್ಸ, ಕಾಶ್ಯಪ, ಭರದ್ವಾಜ ಮತ್ತು ಗೌತಮ
ಲಕ್ಷ್ಮೀನಾರಾಯಣ	ನಾಗಾವೆ (ನಾಗವಾಹ್ಯ)	ಅಂಕೋಲಾ (ಉ.ಕನ್ನಡ)	ಕೌಶಿಕ, ವತ್ಸ
ಲಕ್ಷ್ಮೀನಾರಾಯಣ	ಅಡೋಶಿ	—	—

ಭಟ್ಕಳ (ಉ.ಕನ್ನಡ) ದಲ್ಲಿನ ಕಾಶಿ ಮಠದ ಪಕ್ಕದಲ್ಲಿದ್ದ ಸಾಂತೇರಿ-ಕಾಮಾಕ್ಷಿ ದೇವಸ್ಥಾನ ಮುಲ್ಕಿಯ ವರ್ದೇರ್‌ಬೆಟ್ ಕಾಮತರ ಕುಲದೇವಿಯದ್ದಾಗಿದೆ.

೧೬. ಕೆಲವು ಕುಲದೇವರ ಸ್ಥಾನೀಯ ಮೂಲ

ಬನವಾಸಿಯ ಕದಂಬರು ಬ್ರಾಹ್ಮಣ ಅರ್ಚಕರನ್ನು ನೇಮಿಸುವ ತನಕ, ಗೋಕರ್ಣದ ಮಹಾಬಲೇಶ್ವರನ ದೇವಸ್ಥಾನದಲ್ಲಿನ ಪೂಜೆಯನ್ನು ಬೀದರದ ಅರಸರು ನೇಮಿಸಿದ್ದ ಪಡ್ಯಾರ್ ಅರ್ಚಕರು ನಿರ್ವಹಿಸುತ್ತಿದ್ದರು. ಗೋವಾದಲ್ಲಿನ ಸಾರಸ್ವತರ ದೇವಸ್ಥಾನಗಳಲ್ಲೂ ಬ್ರಾಹ್ಮಣ ಅರ್ಚಕರನ್ನು ನೇಮಿಸುವ ತನಕ ಗುರವ (ಶೂದ್ರರಲ್ಲಿ ಉಚ್ಚ ವರ್ಗದವರು) ಅರ್ಚಕರು ನಿತ್ಯಾನುಷ್ಠಾನಗಳನ್ನು ನಿರ್ವಹಿಸುತ್ತಿದ್ದರು. ಬೊಂಬೇಯಲ್ಲಿನ ಸಾರಸ್ವತರ ಪ್ರಾಚೀನ ವಾಲುಕೇಶ್ವರ ಮತ್ತು ಭೂಲೇಶ್ವರ ದೇವಸ್ಥಾನಗಳಲ್ಲಿ ಗುರವ ಅರ್ಚಕರಿದ್ದಾರೆ.

ಗೋಕರ್ಣ ಮಠದ ೨೦ನೇಯ ಗುರು ಕೈಲಾಸವಾಸಿ ಇಂದಿರಾಕಾಂತ ತೀರ್ಥರು ಹೆಚ್ಚಿನ ವೈಷ್ಣವ ದೇವಸ್ಥಾನಗಳಲ್ಲಿ ಗುರವರ ಸ್ಥಾನದಲ್ಲಿ ಸಾಮಂತ ಜೋಯಿಶಿ ಕುಟುಂಬಗಳ ಪೂಜಾರಿಗಳನ್ನು ನೇಮಿಸಿದರು. ಈ ವ್ಯವಸ್ಥೆಯಲ್ಲಿ ಬಾರ್ದೇಶ್‌ದಲ್ಲಿನ ಮ್ಹಾಪ್ಸೆ, ಶಿವೋಲಿ ಮತ್ತು ವಾಗಳೆ, ತೀಸ್‌ವಾಡಿಯಲ್ಲಿನ ಪಂಜಿಮ್ (ಪಣಜಿ) ಮತ್ತು ತಳಗಾಂ ಹಾಗೂ ಮುರ್ಗಾಂವ್ (ಮರ್ಮಗೋವಾ) ಇಲ್ಲಿನ ಜೋಯಿಶಿ ಕುಟುಂಬಗಳ ಸಮಾವೇಶವಿತ್ತು.

ಮ್ಹದ್ದೋಳ್‌ನಲ್ಲಿನ ಮ್ಹಾಳಸಾ ದೇವಸ್ಥಾನದಲ್ಲಿ ಕೆಲವೊಬ್ಬ ಗುರವರಿದ್ದಾರೆ. ಸ್ಮಾರ್ತರ ದೇವಸ್ಥಾನಗಳಲ್ಲಿ ಅವರು ಇಂದಿಗೂ ಕಾಣಬರುತ್ತಾರೆ.

ಶ್ರೀ ಎಸ್. ಎಸ್. ತಾಲ್ಮಕಿಯವರು ಪಂಜಾಬ, ಕಾಶ್ಮೀರ, ಬಿಹಾರ, ಬಂಗಾಲಗಳಲ್ಲಿ ಈ ಮೇಲಿನ ದೇವ, ದೇವಿಯರು ಕಾಣಬರುತ್ತಿಲ್ಲವೆಂದೂ, ಮಂಗೇಶನ ಲಿಂಗ ದೇವಶರ್ಮನಿಗೆ ಅಗಾಶಿಯ ನದಿಯಲ್ಲಿ ದೊರಕಿತ್ತೆಂದೂ ಹೇಳುತ್ತಾರೆ; ಸಪ್ತ ಕೋಟೇಶ್ವರ

ಮತ್ತು ವಿಜಯದುರ್ಗಾ ಇವು ಸ್ಥಳೀಯ ಮೂಲದ್ದವೆಂದಾಗಿ ಸಹ್ಯಾದ್ರಿ ಖಂಡದಲ್ಲಿನ ಮಾಂಗಿರೀಶ ಮಹಾತ್ಮ್ಯದಲ್ಲಿ ಉಲ್ಲೇಖಿಸಲಾಗಿದೆಯೆಂದು ಅವರು ನುಡಿಯುತ್ತಾರೆ. ಸಾರಸ್ವತರು ಗೋವಾಕ್ಕೆ ವಲಸೆ ಬಂದಾಗ ತಮ್ಮೊಂದಿಗೆ ಯಾವೊಂದೂ ದೇವ, ದೇವಿಯರ ವಿಗ್ರಹಗಳನ್ನು ತರಲಿಲ್ಲವೆಂದೂ, ಆರ್ಯ ಸಂಪ್ರದಾಯದ ಹೆಸರನ್ನಿತ್ತು ಸ್ಥಳೀಯ ಮೂಲದ ದೇವ,ದೇವಿಯರನ್ನೇ ಅವರು ತಮ್ಮದಾಗಿಸಿಕೊಂಡರೆಂದು ಶ್ರೀ ತಾಲ್ಮಕಿಯವರು ಅಭಿಪ್ರಾಯ ಪಡುತ್ತಾರೆ.

ಹೆಚ್ಚಾದ ದೇವ, ದೇವಿಯರ ಮಾಹಿತಿ ಸಹ್ಯಾದ್ರಿ ಖಂಡದಲ್ಲಿರುವುದಾಗಿ [೯] ನುಡಿದ ಶ್ರೀ ಎಮ್. ಗೋವಿಂದ ಪೈಗಳು ಸಪ್ತಕೋಟೇಶ್ವರ ಮಾತ್ರ ಪೂರ್ವೇತಿಹಾಸಕೊಂಡ ಕುಟುಂಬವೊಂದಕ್ಕೆ ಸಂಬಂಧಿಸಿದ್ದ ದೇವರೆಂದು ಹೇಳುತ್ತಾರೆ.

ಗೋವಾದ ಕ್ರಿಸ್ತೀಯರು ತಮ್ಮ ಪೂರ್ವಜರ ಕುಲದೇವ, ದೇವಿಯರಿಗೆ ಇಂದಿಗೂ ಅತ್ಯಾದರ ತೋರುತ್ತಾರೆ. ಮತ್ತೆ ಒಂದಲ್ಲದಿದ್ದರಿನ್ನೊಂದು ದೇವಸ್ಥಾನದ ಭಕ್ತರು, ಸಮರ್ಥಕರೆನ್ನಿಸಿಕೊಳ್ಳುವುದರಲ್ಲಿ ಹೆಮ್ಮೆ ಪಡುತ್ತಾರೆ. ಅವರು ತೆಂಗಿನಕಾಯಿ, ಹೊಸಫಲ, ಫಸಲಿನ ಮೊದಲ ಅಕ್ಕಿ ಈ ಕುಲದೇವ, ದೇವಿಯರಿಗೆ ಅರ್ಪಿಸುತ್ತಾರೆ. ಹೊಸ ಉದ್ಯೋಗ ತೊಡಗಿಸುವ ಮುನ್ನ ದೇವ, ದೇವಿಯರ ಕೃಪೆಗಾಗಿ ಅರ್ಚಕರಿಂದ ಪ್ರಸಾದ ಕೊಳ್ಳುತ್ತಾರೆ. ಕೆಲೋಶಿಯಲ್ಲಿನ ಶಾಂತಾದುರ್ಗಾ ಹಳೆ ದೇವಸ್ಥಾನದ ಸ್ಥಳ ತೋರಿಸುವ ಕ್ರಿಸ್ತೀಯ ರೈತರು ಭಕ್ತಿ ಭಾವದಿಂದ ದೇವಿಯನ್ನು ಮಾಯಿ (ತಾಯಿ) ಎಂದಾಗಿ ಸಂಭೋದಿಸುತ್ತಾರೆ. ದೇವಸ್ಥಾನಕ್ಕೆ ಪ್ರಸಾದಕ್ಕಾಗಿ ಬರುವ ಕ್ರಿಸ್ತೀಯ ಭಕ್ತರಿಗೆ ಆದ್ಯತೆ ಈಯಬೇಕಿರುವ ಸ್ಥಾಯೀ ನಿಯಮವಿದೆ.

ಸಂದರ್ಭ ಸೂಚಿ

೧. ಪಂಚಾಯತನ ಎನ್ನಲಾಗುವ ಆರಾಧನೆಯ ಪದ್ಧತಿಯಲ್ಲಿ ೧) ಆದಿತ್ಯ, ೨) ಅಂಬಿಕಾ, ೩) ವಿಷ್ಣು, ೪) ಗಣನಾಥ, ೫) ಮಹೇಶ್ವರ ಎಂಬೀ ಐದುದೇವರು, ದೇವಿಯರನ್ನೊಟ್ಟಿಗಿಟ್ಟು ಪೂಜಿಸಲಾಗುತ್ತದೆ ; ಒಂದೇ ನೈವೇದ್ಯ, ಒಂದೇ ಮಂಗಳಾರತಿ ಅರ್ಪಿಸಲಾಗುತ್ತದೆ. ಈ ಬಗೆಯ ಪೂಜೆ ಶೃಂಗೇರಿ ಮಠದಲ್ಲಿ ಮತ್ತು ಸ್ಮಾರ್ತ ಸಾರಸ್ವತರ ಕವಳೆ ಮಠದಲ್ಲಿ ನಡೆಯುತ್ತದೆ. ವೈಷ್ಣವ ಸಾರಸ್ವತರ ಕಾಶಿ ಮತ್ತು ಗೋಕರ್ಣ ಮಠಗಳಲ್ಲಿ ಈ ಪೂಜೆಯ ರೂಢಿ ಇಲ್ಲ.

೨. ಕೊಂಕಣ ಪ್ರಾಂತ ಬಿಟ್ಟು ಇನ್ನೆಲ್ಲೂ ಮಂಗೇಶ, ಶಾಂತದುರ್ಗಾ, ಸಾಂತೇರಿ, ರವಳನಾಥ ಮತ್ತು ದೇವಕೀ ಕೃಷ್ಣರ ದೇವಸ್ಥಾನಗಳು ಕಾಣಬರುತ್ತಿಲ್ಲ. ಕುಡಾಲ ಮತ್ತು ಕಾರ್ವಾರಗಳ ನಡುವಣ ಭಾಗದಲ್ಲಿ ರವಳನಾಥ ಮತ್ತು ಸಾಂತೇರಿಯರ ದೇವಸ್ಥಾನಗಳು ಸರ್ವ ಸಾಮಾನ್ಯವಾಗಿ ಕಾಣಬರುತ್ತವೆ.

ಶ್ರೀ ವಾಮನ ರಘುನಾಥ ವಾಲಾವಲಕರರು ರವಳ, ರಾಹುಲ ಶಬ್ದದ ತದ್ಭವವೆನ್ನುತ್ತಾರೆ. ಭಟಾಗ್ರಾಮ್ ಮಹಾಲಿನಲ್ಲಿನ ಮುಳ್ಗಾಂವ್ ಮತ್ತು ದಿವ್ಚಲ್‌ಗಳಲ್ಲಿ ರವಳನಾಥನ

ಪ್ರಮುಖ ದೇವಸ್ಥಾನಗಳಿವೆ. ಅಲ್ಲಿನ ವಿಗ್ರಹಗಳು ಕಗ್ಗಲ್ಲಿನಿಂದ ಕಡೆಯಲ್ಪಟ್ಟದ್ದಾಗಿದ್ದು ಚತುರ್ಭುಜಕೊಂಡ ಅವುಗಳ ಕೈಗಳಲ್ಲಿ ತ್ರಿಶೂಲ, ಖಡ್ಗ, ಖಟ್ವಾಂಗ (ಬಟ್ಟಲಿನ ಆಕಾರಕೊಂಡ ತಟ್ಟೆ) ಮತ್ತು ಡಮರುಗಳಿವೆ. ಮುಳ್ಗಾಂವ್‌ನಲ್ಲಿನ ವಿಗ್ರಹ ಕುದುರೆಗಳತ್ತ ವಾಲಿಕೊಂಡಿದ್ದು ಅದು ಮಹಾದೇವನ ಅಶ್ವಪತಿಯೆಂಬ ಹೆಸರನ್ನು ಸಮರ್ಥಿಸುವಂತಿದೆ. ವಿಷ್ಪಲ್‌ನಲ್ಲಿನ ವಿಗ್ರಹ ದಂಡಪಾಲಾಧಾರಿ ಇದೆ. ಅಲ್ಲಿ ಕುದುರೆಗಳಿಲ್ಲ. ಈ ದೇವಳನಾಥನನ್ನು ಭೂತಪತಿ (ಭೂತಗಳ ಒಡೆಯ) ಎಂದು ಕರೆಯುತ್ತಾರೆ.

ಶಾಂತೇರಿ ಕೊಂಕಣಿಯಲ್ಲಿನ ಶಾಂತಿಕಾರಿ (ಶಾಂತಗೊಳಿಸುವ) ಶಬ್ದದ ರೂಪವೊಂದಾಗಿದೆ. ಸಾಷ್ಟಿಯಲ್ಲಿ, ಅಲ್ಲಲ್ಲಿ ರೋಯ್ನು (ಸಂಸ್ಕೃತದಲ್ಲಿನ ರೋಹಿಣಿ) ಎಂದಾಗಿ ಕರೆಯಲ್ಪಡುವ ವಾಲ್ಮೀಕದ ಮಣ್ಣು ಗುಪ್ಪೆಗಳನ್ನು ಶಾಂತೇರಿಯ ಪ್ರತೀಕದ ರೂಪಿನಲ್ಲಿ ಪೂಜಿಸುತ್ತಾರೆ. ಸರ್ವಸಾಮಾನ್ಯವಾಗಿ ದೇವಿಯ ಮುಖವಾಡವನ್ನು ಈ ಗುಪ್ಪೆಯ ಮೇಲಿಕ್ಕಿಡುತ್ತಾರೆ.

೨. ಸಹ್ಯಾದ್ರಿ ಖಂಡದಲ್ಲಿನ ಮಂಗೇಶ ಮಹಾತ್ಮ್ಯದ ಭಾಗ

೩. ಶಿವಾಜಿ ಈ ದೇವಸ್ಥಾನವನ್ನು ೧೬೬೮ರ ನವಂಬರ್ ತಿಂಗಳಲ್ಲಿ ಸಂದರ್ಶಿಸಿದ್ದು ಇದನ್ನು ದುರಸ್ತು ಮಾಡಲು ಆಜ್ಞೆ ಇತ್ತನೆಂಬ ವಿಚಾರ 'ಶಿವರಾಜ್ಯಾಭಿಷೇಕ' ದಲ್ಲಿದೆ. ಈ ಕುರಿತಾದ ಶಿಲಾಶಾಸನವೊಂದೂ ಈ ದೇವಸ್ಥಾನದಲ್ಲಿದೆ.

೪. ಸಹ್ಯಾದ್ರಿ ಖಂಡ, ಉತ್ತರಾರ್ಧ, ಅಧ್ಯಾಯ ೧೧, ಪುಟ ೩೩.

೫. ಶ್ರೀ ಆರ್. ಎಸ್. ಪಂಡಿತ್ ಇವರ 'ದ ಟೆಂಪಲ್ ಆಫ್ ಶಾಂತಾದುರ್ಗಾ' ಲೇಖನ 'ದ ಮೋಡರ್ನ್ ರಿವ್ಯೂ' ವಿನ ೧೯೩೨ರ ಜುಲೈ ತಿಂಗಳ ಸಂಚಿಕೆಯಲ್ಲಿ ಪ್ರಸಿದ್ಧವಾಗಿದ್ದು ಅದು 'ಆಲ್ ಇಂಡಿಯಾ ಸಾರಸ್ವತ' ಮಾಸಪತ್ರಿಕೆಯ ೧೯೩೨ರ ನವಂಬರ್ ತಿಂಗಳ ಸಂಚಿಕೆಯಲ್ಲಿ ಉದ್ಧೃತವಾಗಿದೆ.

೬. ಭವಿಷ್ಯೋತ್ತರ ಪುರಾಣದಲ್ಲಿನ ಮಂಗಳ ಗೌರಿಗೆ ಸಂಬಂಧಿಸಿದ ಅಧ್ಯಾಯ.

೭. ಅತಿ ಬಡವನಿದ್ದ ನಾರೋರಾಮ್ ಶಾಂತಾದುರ್ಗಾಳ ದರ್ಶನಕೊಂಡು ಆತ್ಮಹತ್ಯೆ ಮಾಡುವ ನಿರ್ಧಾರ ಮಾಡಿದ. ದೇವಸ್ಥಾನದಲ್ಲಿ ಮಲಗಿದ್ದ ಈತನಿಗೆ ದೇವಿ ಸ್ವಪ್ನದಲ್ಲಿ ಕಾಣಿಸಿಕೊಂಡಳು. ಆತನ ಬೆನ್ನು ಸವರಿದ ದೇವಿ ತಾನು ಆತನ ಭಕ್ತಿಗೆ ಮೆಚ್ಚಿಕೊಂಡಿದ್ದು, ಒಳ್ಳೆಯ ದಿನಗಳನ್ನು ಕಾಣಲಿರುವ ಆತ ಆತ್ಮಹತ್ಯೆಯ ವಿಚಾರ ತ್ಯಜಿಸಬೇಕೆಂದು ನುಡಿದಳು. ಅಲ್ಲಿಂದ ಸತಾರಕ್ಕೆ ಹೋದ ನಾರೋರಾಮ್ ಮುಂದೊಂದು ದಿನ ಸಾಹು ಛತ್ರಪತಿಯ ಮಂತ್ರಿಯಾದ. ಆ ಬಳಿಕ ಶಾಂತಾದುರ್ಗಾ ದೇವಸ್ಥಾನಕ್ಕೆ ಬಂದ ಆತ ಅದರ ಸುಧಾರಣೆಗೆ ಅಪಾರ ಧನ ವ್ಯಯಿಸಿದ. ದೇವಸ್ಥಾನ ಸಂದರ್ಶಿಸಲು ಬರುವ ಆತನ ವಂಶಜರಿಗೆ ಇಂದಿಗೂ ವಿಶೇಷ ಗೌರವಾದರ ತೋರಲಾಗುತ್ತದೆ. ಚೌಕಿಯ ಉತ್ತರಭಾಗದಲ್ಲಿ, ಅವರಿಗಾಗಿ ಕಾದಿಟ್ಟ ಸ್ಥಾನದಲ್ಲಿ, ಸ್ತಂಭವೊಂದಿದ್ದು ಅದು ಮಂತ್ರಿ ಸ್ತಂಭವೆಂದು ಪ್ರಸಿದ್ಧವಾಗಿದೆ.

೮. ರಾಮಚಂದ್ರ ಬಾಬಾನಿಗೆ ಆರಾಧಳಿಯನ್ನು ಬಿಡಬೇಕಾಯಿತು. ಆತ ರತ್ನಾಗಿರಿ ಜಿಲ್ಲೆಯ ಮಾಲ್ವಣ್ ತಾಲೂಕಿನ ಅಚರೆಯಲ್ಲಿದ್ದ ತನ್ನ ಮಿತ್ರ ಕನವಿಂದೆಯಲ್ಲಿಗೆ ಹೋದ. ಅಚರೆಯಲ್ಲಿ ಕೆಲವು ಕಾಲ ಗ್ರಾಮದ ಕರಣಿಕನ ಕೆಲಸ ಮಾಡಿದ. ತನ್ನಲ್ಲಿನ ಪ್ರತಿಭೆಗೆ ಇನ್ನೂ

ಒಳ್ಳೆಯ ಅವಕಾಶ ಇರುವುದಾಗಿ ಭಾವಿಸಿದ ಆತ ಅದೃಷ್ಟವನ್ನರಸಲೆತ್ನಿಸಿದ. ಆತ ಶಾಂತಾದುರ್ಗಾ ದೇವಸ್ಥಾನಕ್ಕೆ ತೆರಳಿ ದೇವಿಗೆ ಅಭಿಷೇಕ, ನೈವೇದ್ಯ ಅರ್ಪಿಸುವರೇ ಅರ್ಚಕನಿಗೆ ನುಡಿದು ತನ್ನಲ್ಲಿದ್ದ ನಾಲ್ಕಾಣೆಯನ್ನಿತ್ತ. ಅನುಷ್ಠಾನಗಳಿಗೆ ತಗಲುವ ಖರ್ಚಿಗೆ ಐದು ರೂಪಾಯಿಗಳನ್ನು ಕೇಳಿ ಅರ್ಚಕ ಆತನನ್ನು ತೆಗಳಿದ. ದೇವಿಯ ಪ್ರಾರ್ಥನೆ ಮಾಡಿದ ಬಾಬಾ ನಾಲ್ಕಾಣೆಯನ್ನು ತುಳಸೀ ವೃಂದಾವನದಲ್ಲಿನ ದೀಪಮಾಲೆಯ ಅಡಿಯಲ್ಲಿ ಹುಗಿದು ದಾರಿಸಾಗಿದ. ಕೆಲವೊಂದು ವರ್ಷಗಳ ಬಳಿಕ ಉಚ್ಚ ಪದವಿಗೇರಿದ್ದ ಬಾಬಾ ಕವಳೆಯಲ್ಲಿನ ದೇವಸ್ಥಾನವನ್ನು ಮತ್ತೆ ಸಂದರ್ಶಿಸಿದ. ಅಲ್ಲಿ ಪೂಜೆಗೆ ಕುಳಿತಿದ್ದಾಗ ಆತ ಆ ಹಿಂದೆ ಭೇಟಿಯಾಗಿದ್ದ ಅರ್ಚಕನನ್ನು ಕಂಡು ಆತನನ್ನು ದೀಪಮಾಲೆಯ ಸಮೀಪ ಕೊಂಡು ಹೋದ. ಅಲ್ಲಿ ತಾನು ಹುದುಗಿದ್ದ ನಾಣ್ಯವನ್ನು ಅಗೆದು ತೆಗೆದು ದೇವಸ್ಥಾನದ ಅಧಿಕಾರಿಗಳಿಗೆ ಈ ಹಿಂದೆ ನಡೆದಿದ್ದ ಘಟನೆಯ ಅರಿವಿತ್ತ. ಮತ್ತೆ ಆ ನಾಣ್ಯದ ಮೊಬಲಗಿನಿಂದ ಅಭಿಷೇಕ, ನೈವೇದ್ಯಗಳನ್ನು ಮಾಡುವರೆ ಒತ್ತರಿಸಿದ. ಅನಂತರ ಏಕಾದಶಿ, ಲಘುರುದ್ರ ಮತ್ತು ಇನ್ನಿತರ ಪೂಜೆಗಳನ್ನು ಮಾಡಿಸಿ ದೇವಸ್ಥಾನಕ್ಕೆ ಅಮೂಲ್ಯ ವಸ್ತುಗಳನ್ನು ಅರ್ಪಿಸಿದ. ಭವಿಷ್ಯ ಕಾಲದಲ್ಲಿ ಹಣದ ಅಭಾವದ ಕಾರಣ ಕೊಂಡು ಯಾರೊಬ್ಬನಿಗೂ ಪೂಜೆಯನ್ನು ನಿರಾಕರಿಸಬಾರದೆಂದೂ, ಅದರ ಖರ್ಚನ್ನು ತಾನು ತುಂಬಿಕೊಡುವುದಾಗಿಯೂ ದೇವಸ್ಥಾನದ ಅಧಿಕಾರಿಗಳಿಗೆ ತಿಳಿಸಿದ.

೧೦. ಈ ದೇವಸ್ಥಾನ ಕಾಶ್ಮೀರದಲ್ಲಿನ ಬಾರಾಮುಲದ ಪಶ್ಚಿಮಕ್ಕೆ, ಕೆಲವೇ ಮೈಲುಗಳ ಅಂತರದಲ್ಲಿದ್ದ ಭನಿಯರ್ ಮತ್ತು ಕತ್ರುಯಿಗಳಲ್ಲಿನ ಹಿಂದೂ ದೇವಸ್ಥಾನಗಳನ್ನು ಹೋಲುವುದಾಗಿ ಶ್ರೀ ಆರ್.ಎಸ್.ಪಂಡಿತ್ ನುಡಿಯುತ್ತಾರೆ. ಈ ದೇವಸ್ಥಾನಗಳು ದಟ್ಟವಾಗಿ ಬೆಳೆದಿದ್ದ ಮರಗಳೊಂದಿಗಿನ ಕಡಿದಾದ ಮಗ್ಗಲಿನ ಐದು ಬೆಟ್ಟಗಳ ಹಿನ್ನಲೆ ಕೊಂಡಿವೆ. ಕುಶಸ್ಥಳಿಯಲ್ಲಿನ ಹಳೆಯ ಮಂಗೇಶ ಮತ್ತು ಕೆಳೋಶಿಯಲ್ಲಿನ ಶಾಂತಾದುರ್ಗಾ ದೇವಸ್ಥಾನಗಳು ಕವಳೆಯಲ್ಲಿನ ಶಾಂತಾದುರ್ಗಾದೇವಸ್ಥಾನವನ್ನು ಹೋಲುತ್ತಿರುವುದಾಗಿ ಅವರು ನುಡಿಯುತ್ತಾರೆ.

ಗೋವಾದಲ್ಲಿನ ಹಿಂದೂ ದೇವಸ್ಥಾನಗಳಿಗೆ ಸರ್ವಸಾಮಾನ್ಯವಾಗಿ ಸುಣ್ಣ ಬಳೆಯಲಾಗುತ್ತಿದ್ದು ಅವು ಕ್ರಿಸ್ತೀಯರ ಧಾರ್ಮಿಕ ಮಂದಿರಗಳಂತೆ ಕಾಣುತ್ತವೆ. ಮಂಗೇಶ ದೇವಸ್ಥಾನಕ್ಕೂ ಈಗ ಸುಣ್ಣ ಬಳೆಯುತ್ತಾರೆ. ಶಾಂತಾ ಶಬ್ದ ಪೋರ್ಚುಗೀಸ್ ಭಾಷೆಯಲ್ಲಿನ 'ಸಾಂಥಾ' (ಸಾಂತಾಮಾರಿಯಾದಲ್ಲಿನ 'ಸಂತ'ಇದ್ದಂತೆ) ದಿಂದ ಉತ್ಪನ್ನವಾಗಿರಬೇಕು. ಮಾಶೆಲ್ ಮತ್ತು ದಿವಡಿಗಳಲ್ಲಿನ ದೇವಕೀ ಕೃಷ್ಣ ದೇವಸ್ಥಾನಗಳಲ್ಲಿನ ದೇವಕಿ ಕೃಷ್ಣನನ್ನು ಎತ್ತಿಹಿಡಿದ ಭಂಗಿ ರೋಮನ್ ಕ್ರಿಸ್ತೀಯರಿಂದ ಎರವಲಾಗಿ ಪಡೆದಂತಹುದಾಗಿದೆ.

ಶ್ರೀ ಆರ್. ಎಸ್. ಪಂಡಿತ್ ಇವರ 'ದ ಟೆಂಪಲ್ ಆಫ್ ಶಾಂತಾದುರ್ಗಾ'

೧೧. ಮುರಘೂಂಬಿಕ್‌ನ ದಾದಾ ರಾಣೆ ಅದ್ವೈಕರ್‌ನ ನೇತೃತ್ವದಲ್ಲಿ ಕಾಫಿರರು ಬಂಡಾಯ ಹೂಡಿದಾಗ ೧೮೫೨ರಲ್ಲಿ ಪೋರ್ಚುಗೀಸ್ ಸರಕಾರ ಅತ್ತ ಸಾಗುವರೇ ಇತ್ತಿದ್ದ ಆಜ್ಞೆಯನ್ನು ಭಾರತೀಯ ಸೈನಿಕರು ಧರ್ಮದ ಕಾರಣಕೊಂಡು ವಿರೋಧಿಸಿದರು. ಆ ಹೊತ್ತಿನಲ್ಲಿ

ಬೆಳಗಾಂವ ಪರಾಣಾರು ಪ್ರಿಯೋಳ್‌ನಲ್ಲಿನ ಮಂಗೇಶ ಮತ್ತು ಕವಳೆಯಲ್ಲಿನ ಶಾಂತಾದುರ್ಗಾ ದೇವಸ್ಥಾನಗಳನ್ನು ದೋಚಿ ದೇವರ ವಿಗ್ರಹಗಳನ್ನು ಕೊಂಡುಹೋದರು. ೧೯೦೧ರಲ್ಲಿ ಪುನರ್ಪ್ರತಿಷ್ಠೆ ಮಾಡಿದ್ದ ಶಾಂತಾದುರ್ಗಾ ವಿಗ್ರಹ ಕಾರ್ಕಳದ ಚಿತ್ರಕಲಾ ಮಂದಿರದ ನಾಮವಂತ ಶಿಲ್ಪಿ ರಂಜಾಳ್ ಗೋಪಾಲ ಜನಾರ್ಧನ ಶೆಣೈ ಇವರು ತಯಾರಿಸಿದ್ದುದಾಗಿದೆ. (ಮಾತಸ್ಕ ಗಣೇಶ ರಾಮಚಂದ್ರ ಶರ್ಮ ಇವರ 'ಸಾರಸ್ವತ ಭೂಷಣ', ಇಸವಿ ೧೯೫೦ ಪುಟ ೪೦೮.) ಇದನ್ನು ದಕ್ಷಿಣ ಕನ್ನಡದಲ್ಲಿನ ಕಾರ್ಕಳದ 'ಶ್ರೀ ಮದ್ಭುವನೇಂದ್ರ ಶಿಲ್ಪ ಶಾಲಾ'ದ ರಂಜಾಳ್ ಗೋಪಾಲ ಜನಾರ್ಧನ ಶೆಣೈ ಇವರ ತಂದೆ ರಂಜಾಳ್ ಜನಾರ್ಧನ ಶೆಣೈ ಇವರು ತಯಾರಿಸಿದ್ದಿರಬೇಕು.

ರಂಜಾಳ್ ಜನಾರ್ಧನ ಶೆಣೈಯವರ ಗೋತ್ರ ವತ್ಸ, ಕುಲದೇವತೆ ಮಹಾಲಕ್ಷ್ಮಿ. ಕಾಶಿಮಠದ ೧೬ನೇಯ ಗುರು ಭುವನೇಂದ್ರ ತೀರ್ಥರು ಕಾರ್ಕಳಕ್ಕೆ ಬಂದಿದ್ದಾಗ ಬಾಲ್ಯಾವಸ್ಥೆಯಲ್ಲಿದ್ದ ಅವರು ಕಷ್ಟದ ದಿನಗಳನ್ನು ಕಳೆಯುತ್ತಿದ್ದುದನ್ನು ಕಂಡರು. ತಂದೆಯನ್ನು ಕಳೆದುಕೊಂಡಿದ್ದ ಅವರ ಸಂಸಾರದ ಹೊಣೆಗಾರಿಕೆಯನ್ನು ತನ್ನ ಕೈಗಳಲ್ಲಿಕೊಂಡು ಅವರನ್ನು ತನ್ನೊಂದಿಗೆ ಕೊಂಡುಹೋದರು. ತನ್ನಲ್ಲಿನ ಶಿಲ್ಪಕಾರನ ಪ್ರತಿಭೆಗೆ ಗುರುಗಳ ದಯೆ ಮತ್ತು ಪ್ರೇರಣೆ ಕಾರಣ ಎಂದು ಅವರು ನಂಬಿದ್ದರು. ಅವರ ಶಿಲ್ಪ ಕೃತಿಗಳಲ್ಲಿ ಕೊಚ್ಚಿನ್‌ನಲ್ಲಿನ ತಿರುಮಲ ದೇವಸ್ಥಾನದ ದ್ವಾರಪಾಲಕರ ವಿಗ್ರಹಗಳೂ ಸೇರಿವೆ.

ಅವರ ಮಗ ರಂಜಾಳ್ ಗೋಪಾಲ ಶೆಣೈ ಪ್ರಸಿದ್ಧ ಶಿಲ್ಪಕಾರರೊಬ್ಬರು. ಅವರು ತೆಂಗಿನ ಚಿಪ್ಪಿನ ಮೇಲೆ ಕೊರೆದಿದ್ದ ಚಾಮರಾಜರ ಪ್ರತಿಮೆ, ಚೌಕದಿಂದ ಕಾಣಬರುವ ಅರಮನೆ, ಮೈಸೂರಿನ ಚಾಮುಂಡಿ ಬೆಟ್ಟ ದುಂತಾದವುಗಳ ದೃಶ್ಯ, ಕೆಂಬೇ ಕಲ್ಲಿನಿಂದ ತಯಾರಿಸಿದ್ದ ಚಾಮುಂಡಿಯ ವಿಗ್ರಹ ಇತ್ಯಾದಿಗಳನ್ನು ಕಂಡು ಮೆಚ್ಚಿದ್ದ ಕೃಷ್ಣರಾಜೇಂದ್ರ ಒಡೆಯರ್ ೧೯೩೪ರ ದಸರಾ ಉತ್ಸವದಂದು ಅವರಿಗೆ ಬಹುಮಾನವಿತ್ತು ಗೌರವಿಸಿದರು. ಅವರು ದಕ್ಷಿಣ ಕನ್ನಡ ಮತ್ತು ಮೈಸೂರಿನಲ್ಲಿನ ದೇವಸ್ಥಾನಗಳಿಗೆ ಬೆಳ್ಳಿ, ಚಿನ್ನ, ಪಂಚಧಾತುಗಳ ಅನೇಕ ವಿಗ್ರಹಗಳನ್ನು ತಯಾರಿಸಿದ್ದರು. ಅವರು ತಯಾರಿಸಿದ ಎಷ್ಟೊಂದೋ ವಿಗ್ರಹಗಳಲ್ಲಿ ಹೃಷಿಕೇಶದ ಶಿವಾನಂದ ಆಶ್ರಮದಲ್ಲಿನ ಶ್ರೀಕೃಷ್ಣನ ವಿಗ್ರಹ, ಕಾಶಿಮಠದ ೧೯ನೇ ಗುರುಗಳಾದ ಸುಕೃತೀಂದ್ರ ತೀರ್ಥರ ಕೊಚ್ಚಿನ್‌ನಲ್ಲಿನ ಸಮಾಧಿಯ ಮೇಲಿನ ವೀರಮಾರುತಿಯ ವಿಗ್ರಹಗಳೂ ಸೇರಿವೆ. ಕಾರ್ಕಳದಲ್ಲಿ ಗಾಯತ್ರೊಂದೆ ಕುಲನಾಮದ ಇನ್ನೊಂದು ಪ್ರಸಿದ್ಧ ಕುಟುಂಬವಿತ್ತು. ಈ ಕುಟುಂಬದ ಪ್ರತಿಭಾವಂತ, ಕಾರ್ಕಳ ಕೃಷ್ಣರಾವ್ ಕೂಡಾ ದೇವರ ಕೆಲವೊಂದು ವಿಗ್ರಹಗಳನ್ನು ನಿರ್ಮಿಸಿದ್ದರು. ಮಂಗಳೂರಿನ ಗಣಪತಿ ಮಾಧ್ಯಮಿಕ ಶಾಲೆಯಲ್ಲಿನ ಸರಸ್ವತಿಯ ವಿಗ್ರಹ ಅವರು ತಯಾರಿಸಿದ್ದುದಾಗಿದೆ. ತನ್ನ ಕಲೆಯ ತರಬೇತಿಗಾಗಿ ಅವರು ಮುಂಬೆಯ ಸರ್ ಜೆ.ಜೆ. ಸ್ಕೂಲ್ ಆಫ್ ಆರ್ಟ್ಸನ್ನು ಸೇರಿದರು. ಕಾರ್ಕಳಕ್ಕೆ ಮರಳಿದ ಮೂರು ವರ್ಷಗಳ ನಂತರ, ೧೯೩೦ರಲ್ಲಿ ತನ್ನ ವಯಸ್ಸಿನ ೩೫ನೇ ವರ್ಷದಲ್ಲಿ, (ವ್ಯವಸಾಯದ ಆರಂಭದ ದಿನಗಳಲ್ಲೇ) ದೈವಾಧೀನರಾದರು. ಹಲವೊಂದು ಪ್ರದರ್ಶನಗಳಲ್ಲಿ ಅವರು ಪದಕ, ಬಹುಮಾನಗಳನ್ನು ಪಡೆದಿದ್ದರು. ಈಗ

ಅವರ ಕುಟುಂಬದಲ್ಲಿ ಶಿಲ್ಪಕಲೆಯ ವ್ಯವಸಾಯಕೊಂಡ ಯಾರೊಬ್ಬರೂ ಕಾಣಬರುತ್ತಿಲ್ಲ.

೧೨) ಪೋರ್ಚುಗೀಸ್ ಸರಕಾರ ಮಹಾಗಣಪತಿಯ ದೊಡ್ಡ ಆದರೆ ಮುರಿದಿದ್ದ ವಿಗ್ರಹವನ್ನು ಐತಿಹಾಸಿಕ ಅವಶೇಷವೊಂದರ ರೂಪಿನಲ್ಲಿ ವೆಲ್ಹಾ ಗೋವಾದಲ್ಲಿನ ಹಳೆಯ ಸಭಾ ಮಂಟಪದಲ್ಲಿ ಇಟ್ಟಿದೆ.

೧೩) ದಕ್ಷಿಣ ಕನ್ನಡದಲ್ಲಿ ಕುಲನಾಮ ಕುಡವ್ ಕನ್ನಡದ ಕುಡವ ಎಂಬೀ ರೂಪುಕೊಂಡಿದೆ. ಈ ಕುಟುಂಬೀಯರು ಕೊಂಕಣಿಯಲ್ಲಿ ಕುಡವ್ ಎಂದಾಗಿಯೇ ಕರೆಯಲ್ಪಡುತ್ತಿದ್ದಾರೆ. ಕಾರ್ಕಳ, ಮುಲ್ಕಿ, ಉಡುಪಿ, ಪುತ್ತೂರುಗಳಲ್ಲಿ ಈ ಕುಟುಂಬದ ಶಾಖೆಗಳಿವೆ.

೧೪) ಇದು ಶಿವಪುರದಲ್ಲಿನ ಶ್ರೀ ರಾಮದೇವನ ಸಮಕ್ಷಮ ಬರೆದ ಮರಾಠಿ ಭಾಷೆಯಲ್ಲಿನ 'ಕೊಂಕಣಾಖ್ಯಾನದ ವಿವರಗಳನ್ನಾಧರಿಸಿಕೊಂಡಿದೆ. ಈ ಕೃತಿಯನ್ನು ಶಕ ವರ್ಷ ೧೬೪೩ (ಸನ್ ಇಸವಿ ೧೭೨೧) ಶಾಲಿವಾಹನ ಶಕದ ಚೈತ್ರ ಶುಕ್ಲ ನವಮಿಯಂದು ಶ್ರೀಪಾದ ವೆಂಕಟೇಶ ವಾಗ್ಳೆಯವರು ಬರೆದು ಮುಗಿಸಿದರು; ಎರಡು ಭಾಗಗಳಲ್ಲಿದ್ದು ಪ್ರತಿ ಭಾಗ ಎಂಟು ಅಧ್ಯಾಯಗಳಿಂದೊಳಗೊಂಡಿದೆ. ಈ ಕೃತಿ ೧೯೨೦ರಲ್ಲಿ ಮುದ್ರಿಸಲ್ಪಟ್ಟಿತು.

೧೫) ಗೋವಾದಲ್ಲಿನ ಕೆಲವೊಂದು ಸ್ಮಾರ್ತ ಸಾರಸ್ವತರ ದೇವಸ್ಥಾನಗಳಲ್ಲಿ ಕರ್ಹಾಡ ಬ್ರಾಹ್ಮಣ ಅರ್ಚಕರಿದ್ದಾರೆ.

೧೬) ಸಹ್ಯಾದ್ರಿ ಖಂಡ, ಭಾಗ ೨, ಅಧ್ಯಾಯ ೧, ಪುಟ ೫೩ ಮತ್ತು ಅಧ್ಯಾಯ ೩, ಪುಟ ೨೪, ೨೫.

ಅಧ್ಯಾಯ ೧೩

ಕುಶಸ್ಥಳಿಯರು, ಶೆಣ್ವಿ- ಪೈಕಿಯರು ಅಥವಾ ಚಿತ್ರಾಪುರ ಸಾರಸ್ವತರು

ಕುಶಸ್ಥಳಿಯರೆಂದೂ ಪರಿಚಿತರಾಗಿರುವ ಚಿತ್ರಾಪುರ ಸಾರಸ್ವತರು, ಉತ್ತರ ಕನ್ನಡದಲ್ಲಿನ ಗಂಗಾವಳಿಯ ದಕ್ಷಿಣ ಭಾಗದಲ್ಲಿ ನೆಲಸಿದ್ದ ಆರು ಗೋತ್ರಗಳ, ಎಂಭತ್ತು-ತೊಂಬತ್ತು ಶೆಣ್ವಿ ಕುಟುಂಬಗಳ ವಂಶಜರಾಗಿತ್ತಾರೆ. ಅವರಲ್ಲಿನ ಕೆಲವರು ಶಾಕ್ತರು, ಮತ್ತೆ ಕೆಲವರು ವೈಷ್ಣವರಿದ್ದರು. ದಕ್ಷಿಣ ಕನ್ನಡದಲ್ಲಿನ ತುಳು ಜನರು ಅವರನ್ನು 'ಶೆಣವೇರ್' ಅಥವಾ ಶೇಣೇರ್ (ಶೆಣ್ವಿಗಳು ಅಥವಾ ಶೆಣೈಯವರು) ಎಂಬುದಾಗಿ ಇಂದಿಗೂ ಸಂಬೋಧಿಸುತ್ತಾರೆ.

ಜಾತಿ ಪ್ರಧಾನ ಸಮಾಜದಲ್ಲಿ ವ್ಯಕ್ತಿಯ ಸ್ಥಾನ, ಮಾನ ಆತನ ಜಾತಿಯನ್ನು ಹೊಂದಿಕೊಂಡಿತ್ತು. ನಗರ ರಾಜ್ಯದ ಕೆಳದಿಯ ಅರಸರಲ್ಲಿ ಸಾರಸ್ವತರು ಮಹತ್ವದ ಹುದ್ದೆ ಕೊಂಡಿದ್ದರು. ಈ ಕುರಿತು ಅನ್ಯರು ಅಸೂಯೆ ಪಡುತ್ತಿದ್ದರು; ಸಾರಸ್ವತರು ತ್ರಿಕರ್ಮಿಗಳಿದ್ದು ಕ್ಷತ್ರಿಯ, ವೈಶ್ಯರಂತೆ ಯಜ್ಞ (ಬಲಿ ಸಮರ್ಪಣೆ), ಅಧ್ಯಯನ (ಧಾರ್ಮಿಕ ಗ್ರಂಥಗಳ ಅಧ್ಯಯನ ಮತ್ತು ದಾನ (ಬಹುಮಾನಗಳನ್ನೀಯುವುದು) ಎಂಬೀ ಕರ್ಮತ್ರಯಗಳಿಗಷ್ಟೇ ಬಾಧ್ಯರಾಗಿದ್ದು, ಯಾಜನ (ಬೇರೆಯವರಿಂದ ಯಜ್ಞ ಮಾಡಿಸಿಕೊಳ್ಳುವುದು), ಅಧ್ಯಾಪನ (ಧರ್ಮಗ್ರಂಥಗಳ ಬೋಧನೆ) ಮತ್ತು ಪ್ರತಿಗ್ರಹ (ದಾನ ಮಾನಾದಿಗಳನ್ನು ಸ್ವೀಕರಿಸುವುದು) ಎಂಬೀ ಕರ್ಮಗಳಿಗೆ ಪಾತ್ರರಲ್ಲ ಎಂಬೀ ನಿರರ್ಥಕವಾದ ಅಪಾದನೆ ಮಾಡುತ್ತಿದ್ದರು. ಶ್ರೀ ಎಸ್.ಎಸ್.ತಾಲ್ಮಕಿಯವರ ಮೇರೆಗೆ ನಗರ ರಾಜ್ಯದಲ್ಲಿನ ಹೆಚ್ಚಿನ ಸ್ಮಾರ್ತ ಸ್ವಾರಸ್ವತರು ಸಮಾಜದ ಇನ್ನುಳಿದವರಿಂದ ದೂರ ಸರಿದಿದ್ದರೆ ಅದಕ್ಕಿದ್ದ ಕಾರಣಗಳು ಅತಿ ಸಂವೇದನಶೀಲವಿದ್ದವು.

ಹದಿನೇಳನೇ ಶತಮಾನದ ಆದಿಭಾಗದಲ್ಲಿ, ಯಾವುದೋ ಒಂದು ಸಂದರ್ಭದಲ್ಲಿ, ಏನೋ ಒಂದು ಘಟನೆ ಘಟಿಸಿದಾಗ ಸ್ಮಾರ್ತ ಸಾರಸ್ವತರ ಕೇಡೆಣಿಸುವವರು ಅವರ ಸಾಮಾಜಿಕ ಸ್ಥಾನ, ಮಾನಗಳ ಕುರಿತು ನಗರದ ಅರಸು ಪ್ರಶ್ನಿಸುವ ಅವಕಾಶವೊದಗಿಸಿದ್ದಿರಬೇಕು.[೨]

ಅವರು ಗೋವಾದಲ್ಲಿನ ಕುಶಸ್ಥಳಿಗಳ ಗುರುಗಳಿಂದ 'ಸ್ಮಾರ್ತ ಸಾರಸ್ವತರು ತಮ್ಮ ಅನುಯಾಯಿಗಳೆಂಬ' ಅಶಯದ ರಾಯಸ ಪಡೆದುಕೊಳ್ಳಲು ಹರಕಾರರನ್ನು ಕಳುಹಿಸಿದರು. ದೌರ್ಭಾಗ್ಯವೆಂಬಂತೆ ಗುರುಗಳು ಕಾಶಿಗೆ ಹೋಗಿದ್ದು ಅಲ್ಲಿನ ಅವರ ವಾಸ್ತವ್ಯದ ಬಗೆಗೆ ಯಾರೊಬ್ಬರೂ ಅರಿಯದಿದ್ದರು. ಆಗ ಅವರು ಶೃಂಗೇರಿಯ ಶಂಕರಾಚಾರ್ಯರನ್ನು ಕಂಡರು. ಸುರೇಶಾಚಾರ್ಯ ಮೊದಲಾದ ಪೀಠಾಧಿಪತಿಗಳು (ಶ್ರೀ ಶೃಂಗೇರಿ ಶಾರದಾಪೀಠದ ಉತ್ತರಾಧಿಕಾರಿ ಇದ್ದ ಖ್ಯಾತ ನಾಮ ಮಂಡನ ಮಿಶ್ರ) ಕಾಶ್ಮೀರಿ ಸಾರಸ್ವತರಿದ್ದುದನ್ನು ನೆನಪರಿಸಿದ ಜಗದ್ಗುರುಗಳು ಅವರು ಬ್ರಾಹ್ಮಣರಿರುವುದನ್ನು ಸಮರ್ಥಿಸುವ

ಪತ್ರವೊಂದನ್ನಿತ್ತರು. ಈ ಪತ್ರಕೊಂಡು ಮರಳಿದ ಅವರು ಎದುರಾಳಿಗಳ ಬಾಯಿಮುಚ್ಚಿಸಿ ಸಂಕಟ ನಿವಾರಿಸಿದರು.

ತಾವು ಅನುಭವಿಸಿದ್ದ ಕಷ್ಟ, ಅಡ್ಡಿ ಅಡಚಣೆಗಳಿಗೆ ವೈಷ್ಣವ ಸಾರಸ್ವತರು ಕಾರಣೀಭೂತರಿದ್ದರೆಂದು ನಂಬಿದ ಇವರು ಅವರಿಂದ ದೂರಕ್ಕೆ ಸರಿದು ಕ್ರಮೇಣ ಬೇರ್ಪಟ್ಟರು. [೨]

ಇದರ ಫಲಸ್ವರೂಪ ಉತ್ತರ ಕನ್ನಡದಲ್ಲಿನ ಗಂಗಾವಳಿಯ ದಕ್ಷಿಣದಲ್ಲಿ ವಾಸಿಸುತ್ತಿದ್ದ ಸಾರಸ್ವತರು, ವೈಷ್ಣವರಿದ್ದ ಗೌಡ ಸಾರಸ್ವತರು ಮತ್ತು ಸ್ಮಾರ್ತರಿದ್ದ ಚಿತ್ರಾಪುರ ಸಾರಸ್ವತರು ಎಂಬೀ ಸಮಾಜಗಳೆರಡರಲ್ಲಿ ಪ್ರತ್ಯೇಕಿಸಲ್ಪಟ್ಟರು. ಚಿತ್ರಾಪುರ ಸಾರಸ್ವತರು ಶೆಣ್ವಿ ಪೈಕಿ (ಶೆಣ್ವಿಗಳಲ್ಲಿನ ಶಾಖೆ)ಯರೆಂದೂ ಪರಿಚಿತರಾಗಿರುತ್ತಾರೆ.

ವಿಘಟನೆ ಕೇವಲ ಧರ್ಮ, ಶ್ರದ್ಧೆಗಳನ್ನು ಹೊಂದಿಕೊಂಡಿರದಿತ್ತು. ಗೌಡ ಸಾರಸ್ವತರಲ್ಲಿ ಸ್ಮಾರ್ತರ ಕುಟುಂಬಗಳ ಸಮಾವೇಶವಿದ್ದು ಅವುಗಳಲ್ಲಿನ ಕೆಲವೊಬ್ಬರು ಇಂದಿಗೂ ಕವಳೆ ಮಠದ ಅನುಯಾಯಿಗಳಾಗಿ ಉಳಿದಿರುತ್ತಾರೆ. ಈ ಮುಂದಣ ಕುಟುಂಬಗಳು ಅಂತಹವುಗಳಾಗಿವೆ : ಉಡುಪಿಯ ಕಿಣಿಯರು (ಗೋತ್ರ: ವತ್ಸ, ಕುಲದೇವರು : ಮಂಗೇಶ), ಉಡುಪಿ ತಾಲೂಕಿನ ಪರ್ಕಳದ ಶೆಣೈಯವರು (ಗೋತ್ರ : ವತ್ಸ, ಕುಲದೇವರು : ಮಂಗೇಶ), ಉತ್ತರ ಕನ್ನಡದ ಹಳ್ದಿಪುರದಲ್ಲಿನ [೩] ಶಾನುಭಾಗರು (ಗೋತ್ರ : ಕೌಂಡಿನ್ಯ, ಕುಲದೇವರು : ಮಂಗೇಶ), ಕಾರ್ಕಳದ ಶೆಣೈಯವರು (ಕುಲನಾಮ : ಗಾಯ್ತೊಂಡೆ, ಗೋತ್ರ : ಕೌಶಿಕ, ಕುಲದೇವಿ : ಶಾಂತಾದುರ್ಗ), ದಿ. ಬಂಟ್ವಾಳ ಮಂಗೇಶ ರಾವ್ ಇವರ ಕುಟುಂಬ (ಕುಲನಾಮ : ಮುಜುಮ್‌ದಾರ್, ಗೋತ್ರ : ಕೌಂಡಿನ್ಯ, ಕುಲದೇವರು : ಮಂಗೇಶ), ಕೋಝಿಕ್ಕೋಡ್‌ನ ದಿ. ಶ್ರೀ ಡಿ ಗಣಪತ್ ರಾವ್ (ನಂತರ ಸುವಿಚಾರಾನಂದರೆಂದೆನಿಸಿಕೊಂಡವರು) (ಕುಲನಾಮ : ನಾಯಕ್, ಗೋತ್ರ : ಕೌಶಿಕ, ಕುಲದೇವರು : ನಾಗೇಶ) ಇವರ ಕುಟುಂಬ, ಕುಂದಾಪುರ ತಾಲೂಕಿನ ಮೂಡ್ಕಟ್ಟೆಯ ಶೆಣೈಯವರು (ಗೋತ್ರ : ವತ್ಸ, ಕುಲದೇವರು : ಮಂಗೇಶ), ಅನಂತ ಶೆಣೈ (ಗೋತ್ರ : ವತ್ಸ, ಕುಲದೇವಿ : ಮಹಾಮಾಯಿ) [೪] ಇವರ ಕುಟುಂಬ.

ಅದೇ ಕಾಲಕ್ಕೆ ಅಂತರ್ವಿವಾಹ ಮತ್ತು ಇನ್ನಿತರ ಸಂಬಂಧಗಳ ಮೂಲಕ ಸ್ಮಾರ್ತರೊಂದಿಗೆ ನಿಕಟ ಸಂಬಂಧಕೊಂಡಿದ್ದ ಕೆಲವೊಂದು ವೈಷ್ಣವ ಕುಟುಂಬಗಳು ಸ್ಮಾರ್ತರನ್ನು ಸೇರಿಕೊಂಡವು. ಅವರ ವಂಶಜರನ್ನು ಈಗ ಚಿತ್ರಾಪುರ ಸಾರಸ್ವತರೊಂದಿಗೆ ಸೇರಿಸಲಾಗಿದೆ. ಉದಾಹರಣೆಗಾಗಿ ಅನೇಕ ಶಾಖೆಗಳನ್ನು ಕೊಂಡ [೫] ಹಟ್ಟಿಯಂಗಡಿಕರರ ಮತ್ತು ಉಭಯಕರರ [೬] ಕುಟುಂಬಗಳ ಉಲ್ಲೇಖ ಮಾಡಬಹುದಾಗಿದೆ. ಎಷ್ಟೋ ಸಮಯದ ನಂತರ, ೧೭೦೮ರಲ್ಲಿ [೭] ಅವರು ಚಿತ್ರಾಪುರ ಮಠದ ಸ್ಥಾಪನೆ ಮಾಡಿದರು.

ಚಿತ್ರಾಪುರ ಸಾರಸ್ವತರು ಆರು ಗೋತ್ರಗಳಿಗೆ ಸಂಬಂಧಿಸಿದ್ದವರಾಗಿರುತ್ತಾರೆ. ಕೌಂಡಿನ್ಯ, ಕೌಶಿಕ, ವತ್ಸ, ಅತ್ರಿ, ಭರದ್ವಾಜ ಮತ್ತು ಶಂಖ-ಪಿಂಗಳ-ಕುತ್ಸ; ಇವು ಹತ್ತು (ಅಥವಾ ಹದಿನೆರಡು) ಮುಖ್ಯ ಕುಲಗಳಿಗೆ ಸಂಬಂಧಿಸಿವೆ. [೮] ಮೂರು ಕುಲಗಳು ಕುಶಸ್ಥಳಿ ಮತ್ತು ಕೆಳೋಶಿಗಳಲ್ಲಿ ನೆಲಸಿದ್ದ ಕನ್ಯಾಕುಬ್ಜದ ದೇವಶರ್ಮ, ಲೋಮಶರ್ಮ, ಶಿವಶರ್ಮರ

ವಂಶಜರನ್ನೊಳಗೊಂಡಿವೆ. ಅವರ ಕುಟುಂಬಗಳು ತ್ರಿಗೋತ್ರಿಗಳು ಅಥವಾ ತ್ರಿವರ್ಗೀಯರೆಂದಾಗಿ ಪರಿಚಿತವಾಗಿದ್ದುವು. ಆ ದಿನಗಳಲ್ಲಿ ಸಾಷಷ್ಟಿಕಾರರು ತಮ್ಮ ಹೆಣ್ಣುಮಕ್ಕಳನ್ನು ಅವರಲ್ಲಿಗೆ ವಿವಾಹದಲ್ಲೀಯುತ್ತಿದ್ದರಷ್ಟೆ ಹೊರತು ಅವರ ಹೆಣ್ಣುಮಕ್ಕಳನ್ನು ತಮ್ಮ ಕುಟುಂಬಗಳೊಳಕ್ಕೆ ಸೇರಿಸುತ್ತಿದ್ದರು. ಹದಿಮೂರನೆಯ ಶತಮಾನದ ಹೊತ್ತಿಗೆ ಸಾಷಷ್ಟಿಕಾರರಲ್ಲಿನ ಇಬ್ಬರು ಕೆಳೋಶಿಯವರ ಹೆಣ್ಣು ಮಕ್ಕಳನ್ನು ಕೆಳೋಶಿಯಲ್ಲೇ ವರಿಸಿಕೊಂಡರು.

ಮೊದಲಿನದ್ದೆನ್ನಬಹುದಾದ ವಿವಾಹ, ಲೊಟ್ಲಿಯ ವತ್ಸ ಗೋತ್ರದ ವರ್ದೆ ಕುಟುಂಬದ, ಸಾಷಷ್ಟಿಯ ವರನೊಬ್ಬನಿಗೆ ಸಂಬಂಧಿಸಿತ್ತು. ತನ್ನ ಖಾಸಗಿ ಕೆಲಸದ ನಿಮಿತ್ತ ಕೆಳೋಶಿಗೆ ಹೋಗಿದ್ದ ಈತ ಅಲ್ಲಿನ ಕೌಶಿಕ ಗೋತ್ರದ ವಧುವನ್ನು ವರಿಸಿದ. ಅವರು ಕುಲದೇವಿ ಶಾಂತಾದುರ್ಗಾ ಮತ್ತು ಕೆಳೋಶಿಯಲ್ಲಿನ ಪೂರ್ವಜರ 'ಪಾಲವಿ' ದೇವತೆ ಮಹಾಲಕ್ಷ್ಮಿಯನ್ನು ನಂಬಲಾರಂಭಿಸಿದರು. ಗೋವಾದ ಯಾತ್ರೆಯ ವೇಳೆಗೆ ಅವರು ಮೊದಲಿಗೆ ಶಾಂತಾದುರ್ಗಾ ದೇವಸ್ಥಾನ ಸಂದರ್ಶಿಸಿ ಅನಂತರ ಮಂಗೇಶನ ದರ್ಶನಕೊಳ್ಳುತ್ತಾರೆ.

ಈ ಕುಟುಂಬದ ಶಾಖೆಯೊಂದರ ವಂಶಜರು ಪರಂಪರಾಗತವಿದ್ದ ಕುಲಕರ್ಣಿಯ ವೃತ್ತಿಕೊಂಡು, ವಲವಲಿಯಲ್ಲಿ ವರ್ದೆ-ವಾಲಾವಲಕರರೆಂದು ಪರಿಚಿತರಾಗಿರುತ್ತಾರೆ. ಈ ಕುಟುಂಬದ ಉಪಶಾಖೆಯ ವಂಶಜರು ಗೋವಾದಲ್ಲಿನ ಚೋರಿಯಲ್ಲಿ ನೆಲಸಿ ಸ್ಥಾನೀಯ ನವದುರ್ಗಾ ದೇವಿ ಮತ್ತು ಸಿಂಹ ಪುರುಷ ದೈವವನ್ನು ನಂಬತೊಡಗಿದರು. ಗೋವಾದಲ್ಲಿ ಚೋರ್ಕರರೆಂದೂ, ಕೆನರಾದಲ್ಲಿ ಬಲವಳ್ಳಿಗಳೆಂದೂ ಪರಿಚಿತರಾಗಿದ್ದ ಇವರು ಒಂದೇ ಕುಲದವರಾಗಿರುತ್ತಾರೆ.

ಅದೇ ಹೊತ್ತಿಗೆ ಕೆಳೋಶಿಯ ಗೋವಾದಲ್ಲಿನ ಪಾಣಂದಿಯ, ಭರದ್ವಾಜ ಗೋತ್ರದ ಪುರೋಹಿತನೊಬ್ಬನ ಮಗ ಗೋವಿಂದಶರ್ಮ ಕೆಳೋಶಿಯ ಕೌಶಿಕ ಗೋತ್ರಿಯ ಕನ್ಯೆಯೊಂದಿಗೆ ವಿವಾಹ ಮಾಡಿಕೊಂಡ. ಆತನ ಕುಲದೇವರು ದಾಮೋದರ. ಆದರೆ ವಿವಾಹದ ನಂತರ ಆತ ತನ್ನ ಪತ್ನಿಯೊಂದಿಗೆ ಕೆಳೋಶಿಯಲ್ಲಿ ವಾಸಮಾಡತೊಡಗಿ ಆಕೆಯ ಕುಲದೇವಿ ಶಾಂತಾದುರ್ಗಾಳನ್ನು ನಂಬಲಾರಂಭಿಸಿದ. ಆತನ ವಂಶಜರು ಈಗಲೂ ಶಾಂತಾದುರ್ಗಾಳನ್ನೇ ತಮ್ಮ ಕುಲದೇವಿಯೆಂದು ನಂಬುತ್ತಾರೆ.'

ವತ್ಸ ಮತ್ತು ಅತ್ರಿ ಗೋತ್ರಗಳಿಗೆ ಸಂಬಂಧಿಸಿದ್ದ ಕುಟುಂಬಗಳ ಎರಡು ಬುಡಕಟ್ಟುಗಳಿವೆ. ಇವರ ಕುಲದೇವರು ಅಂಕೋಲದ ಪಟ್ಟೊಡದಲ್ಲಿನ ಲಕ್ಷ್ಮೀನಾರಾಯಣ.

ಇನ್ನೆರಡು ಕುಲಗಳು ಸಾರಸ್ವತರಿದ್ದ ಭಟ್ಟಾ ಮತ್ತು ದುಲ್ಬಾ ಎಂಬೀ ಅರ್ಚಕರ ವಂಶಜರಿಗೆ ಸಂಬಂಧಿಸಿವೆ. ಕಾಶಿಯಿಂದ ಬಂದ ಮೊದಲನೆಯ ಪರಿಜ್ಞಾನಾಶ್ರಮರೊಂದಿಗಿದ್ದ ಇವರು ರಾಮ ಮತ್ತು ಕೃಷ್ಣರೆಂಬ ಹೊಸ ಹೆಸರುಕೊಂಡು ಸಮಾಜದಲ್ಲಿನ ಯೋಗ್ಯ ವಧುಗಳನ್ನು ವರಿಸಿದರು.

ಚಿತ್ರಾಪುರ ಸಾರಸ್ವತರಲ್ಲಿನ ಎಷ್ಟೊಂದೋ ಮಂದಿ ಉಡುಪಿಯ ಮಠವೊಂದರ ನಿಷ್ಠಾವಂತರಾಗಿರುತ್ತಾರೆ. ಅವರು ಎರಡನೆಯ ಗುರು ಶಂಕರಾಶ್ರಮರಿಗೆ ಬರೆದ ಪತ್ರದಲ್ಲಿ

ಉಡುಪಿಯ ಸುಮತೀಂದ್ರ ಸ್ವಾಮಿಗಳು ತಮ್ಮ ಹಳ್ಳಿಗಳನ್ನು ಸಂದರ್ಶಿಸಿದಾಗ ತಾವು ಅವರಿಗೆ ಗೌರವಾದರ ತೋರುವ ಹಕ್ಕನ್ನು ಸುರಕ್ಷಿತವಾಗಿಟ್ಟಿರುವುದಾಗಿ ಸೂಚಿಸಿರುವುದು ಮಹತ್ವಪೂರ್ಣ ವಿಚಾರವೊಂದಾಗಿದೆ. ಆದರಾತಿಥ್ಯ, ಪೂಜೆ ಇತ್ಯಾದಿಗಳ ನಿರ್ವಹಣೆಗೆ ವೈಷ್ಣವ ಅರ್ಚಕರ ವ್ಯವಸ್ಥೆ ಮಾಡಲಾಗುತ್ತಿತ್ತು. ಮೊದಲ ಗುರುಗಳಾದ ಮೊದಲನೆಯ ಪರಿಜ್ಞಾನಾಶ್ರಮ ಇವರು ಅವರಲ್ಲಿನ ಕೆಲವರನ್ನು ಅದ್ವೈತ ಧರ್ಮಕ್ಕೆ ಪರಿವರ್ತಿಸಿದರೆನ್ನಲಾಗುತ್ತದೆ. ಐದನೆಯ ಗುರು ಕೇಶವಾಶ್ರಮರ ಕಾಲದಲ್ಲಿ ವೈಷ್ಣವರ ಕಟ್ಟು ಕಟ್ಟಳೆ, ರೂಢಿಗಳ ವಿರುದ್ಧ ಚಳವಳ ಆರಂಭವಾಗಿ ಪ್ರಚಾರದಲ್ಲಿದ್ದ ರೀತಿ ರಿವಾಜುಗಳನ್ನು ಪ್ರತಿಬಂಧಿಸಲಾಯಿತು. ಏಳನೆಯ ಗುರು ಕೃಷ್ಣಾಶ್ರಮರು (೧೮೩೫-೧೮೬೩) ನಾಮ, ಮುದ್ರಾಧಾರಣೆಗಳ ರೂಢಿಗೆ ಬಹಿಷ್ಕಾರ ಹಾಕಿದರು.

ಈ ಕುಲಗಳು ಕೇವಲ ಶೆಣ್ವೆ -ಪೈಕಿಗಳಿಗಷ್ಟೆ ಸೀಮಿತವಾಗಿರದಿದ್ದುದನ್ನು ಇಲ್ಲಿ ಲಕ್ಷ್ಯದಲ್ಲಿರಿಸಿಕೊಳ್ಳಬೇಕು. ಬಲವಳ್ಳಿ (ವರ್ದೆ-ವಾಲಾವಲಕರ್), ಪಾಣಂದಿಕರ್ ಮತ್ತು ಕುಲಕರ್ಣಿಯರ ಕುಟುಂಬೀಯರೂ ಗೋವಾದಲ್ಲಿನ ಶೆಣ್ವೆಯವರಲ್ಲಿ ಕಾಣಬರುತ್ತಾರೆ. ತಮ್ಮನ್ನು ಬೋರ್ಕರ್ ಎಂದಾಗಿ ಕರೆಸಿಕೊಳ್ಳುತ್ತಿದ್ದ ಬಂಡಿಕೊಪ್ಲದ ಬಲವಳ್ಳಿ ಕುಟುಂಬದ ಶಾಖೆಯೊಂದು ಅಂಕೋಲಾದ (ಬಂಡಿಕೊಪ್ಲದಿಂದ ನಾಲ್ಕು ಮೈಲಿಗಳ ಅಂತರದಲ್ಲಿದ್ದ) ಶೆಣ್ವೆಯರಲ್ಲೂ ಕಾಣಬಂದಿದೆ. ಆದರೆ ಅವರು ಬೋರ್ಕರ್ ಕುಲನಾಮದಿಂದ ಪರಿಚಿತರಾಗಿರುತ್ತಾರೆ.

ಸಂದರ್ಭ ಸೂಚಿ

೧. ರಾಜಗುರು ತಿಕ್ಕ ಪೈಗೆ ಚನಿವಾರ ಗ್ರಾಮವನ್ನಿತ್ತಿದ್ದ ಉತ್ತರಕೊಂಕಣದ ಅರಿಕೇಸರಿ (ಕೇಶಿದೇವ)ಯ ೧೦೧೭ರ ತಾಮ್ರ ಶಾಸನದಲ್ಲಿ ಅತನನನ್ನು ''ಯಜ್ಞ ಯಾಜನಾದಿ ಷಟ್ಕರ್ಮನಿರತ'' ಎಂದಾಗಿ ಬಣ್ಣಿಸಲಾಗಿದೆ.

ವಿಧರ್ಮಿಯರನ್ನು ಹತ್ತಿಕ್ಕಲಾಗಿ ಚರ್ಚ್ ಸಂಘಟಿಸಿದ್ದ ನ್ಯಾಯಸ್ಥಾನ ಅರ್ಚಕರನ್ನು ಬಂಧಿಸಿದಾಗ ಸಾರಸ್ವತರು ತಮ್ಮ ಧಾರ್ಮಿಕ ಕ್ರಿಯಾಚರಣೆಗಳಿಗೆ ಕರ್ಹಾಡ ಬ್ರಾಹ್ಮಣರನ್ನು ನಂಬಿಕೊಳ್ಳಬೇಕಾಯಿತು. ಈ ಪರ್ಯಾಯ, ಉತ್ತರಾದಿ ಮಠದ ಗುರುಗಳನ್ನು ಒತ್ತರಿಸಿದ ಫಲವಾಗಿ ಅವರು ಹೊಸ ಪುರೋಹಿತರನ್ನು ತರಬೇತು ಮಾಡುವ ತನಕ ನಡೆದುಕೊಂಡಿತು. ಗೋವಾದಲ್ಲಿನ ಸ್ಮಾರ್ತರ ದೇವಸ್ಥಾನಗಳಲ್ಲಿ ಮಾತ್ರ ಕರ್ಹಾಡ ಬ್ರಾಹ್ಮಣರು ಇಂದಿಗೂ ಅರ್ಚಕರ ವೃತ್ತಿಯನ್ನು ನಡೆಸಿಕೊಂಡು ಬರುತ್ತಿದ್ದಾರೆ; ಕೆನರಾದಲ್ಲಿನ ಚಿತ್ರಾಪುರ ಬ್ರಾಹ್ಮಣರ ಕೆಲವೊಂದು ದೇವಸ್ಥಾನಗಳಲ್ಲೂ ಅವರು ಅರ್ಚಕರ ವೃತ್ತಿಯನ್ನು ನಡೆಸಿಕೊಂಡು ಬಂದಿರುತ್ತಾರೆ. ವೈಷ್ಣವ ಪುರೋಹಿತರ ಮೊದಲ ಪಂಗಡ ದಕ್ಷಿಣ ಕನ್ನಡದ ಬಸ್ರೂರಿನಲ್ಲಿ ತರಬೇತುಗೊಂಡಿತು. ಈ ಪಂಗಡದಲ್ಲಿನ ಪುರೋಹಿತರೊಬ್ಬರು ಜೀವೋತ್ತಮ ತೀರ್ಥರೆಂಬ ಅಭಿದಾನ ಕೊಂಡು ಗೋಕರ್ಣ ಮಠದ ಮೂರನೆಯ ಗುರುಗಳೆನಿಸಿ ಕೊಂಡರು. ಈ ಪಂಗಡದ ಪುರೋಹಿತರು ಪೌರೋಹಿತ್ಯಕ್ಕೆ ತೊಡಗಿದಾಗ ಅದಕ್ಕೆ ವಿರೋಧವಿತ್ತು. ಕಾರಣ ಸಾರಸ್ವತರು ಕೇವಲ ತ್ರಿಕರ್ಮಿಗಳೆಂಬ ವಾದವಿತ್ತು.

ಪೇಶ್ವೆಗಳ ರಾಜ್ಯಾಡಳಿತೆಯ ಕಾಲದಲ್ಲಿ ಚಿತ್ಪಾವನ ಮತ್ತು ಕರ್ಹಾಡ ಬ್ರಾಹ್ಮಣರು ಈ

ವಿಚಾರದ ಕುರಿತು ಅಸಹಮತಿ ವ್ಯಕ್ತ ಪಡಿಸಿದಾಗ ಮಹಾರಾಷ್ಟ್ರದಲ್ಲಿ ಅದು ವಾದದ ವಿಷಯವೊಂದೆನಿಸಿಕೊಂಡಿತು. ಈ ಸಂಧರ್ಭದಲ್ಲಿ ಶಿವಾಜಿಯ ಯಶಸ್ಸಿನಲ್ಲಿ ತಮ್ಮದೇ ಆದ ಪಾಲು ಕೊಂಟಿದ್ದ ದೇಶಸ್ಥ ಬ್ರಾಹ್ಮಣರು ಷಟ್ಕರ್ಮಿಗಳಿದ್ದುದನ್ನು ಮರೆಯಲಾಗದು. ಶಿವಾಜಿಯ ಗುರು ರಾಮದಾಸರು, ಆತನ ಮುಖ್ಯ ಪ್ರಧಾನರಿದ್ದ ಶಾಮರಾವ್ ಪಂತ ಪಿಂಗ್ಳೆ, ಪಂತ ಪ್ರತಿನಿಧಿ, ಪಂತ ಅಮಾತ್ಯ, ಕಾರಬಾರಿ ಮುಂತಾದವರು ದೇಶಸ್ಥ ಬ್ರಾಹ್ಮಣರಿದ್ದರು. ಸಾಹು ಛತ್ರಪತಿ ೧೭೧೩ರಲ್ಲಿ ಬಾಳಾಜಿ ವಿಶ್ವನಾಥನನ್ನು ತನ್ನ ಪೇಶ್ವೆಯಾಗಿ ನೇಮಿಸಿದ ಬಳಿಕವಷ್ಟೇ ಉತ್ತರ ಕೊಂಕಣದಲ್ಲಿನ ಚಿತ್ಪಾವನ ಬ್ರಾಹ್ಮಣರು ಪ್ರಸಿದ್ಧಿಕೊಂಡರು. ಅಧಿಕಾರಕ್ಕಾಗಿ ಸಾರಸ್ವತರೊಂದಿಗೆ ಪೈಪೋಟಿ ನಡೆಯುತ್ತಿದ್ದಾಗ ಅವರು ಈ ವಾದವನ್ನು ಆರಂಭಿಸಿರುವುದನ್ನು ಅಲ್ಲಗಳೆಯಲಾಗದು. ಆ ದಿನಗಳಲ್ಲಿ ಮಹಾದ್ಜಿ ಸಿಂಧಿಯಾನ ಆಸ್ಥಾನದಿಂದ ಆಕರ್ಷಿಸಲ್ಪಟ್ಟ ಎಷ್ಟೊಂದೋ ಸಾರಸ್ವತ ಕುಟುಂಬಗಳು ಅತ್ತ ವಲಸೆ ಹೋದವು. ಮತ್ತೆ ಅಲ್ಲಿ ಅವು ಪ್ರಸಿದ್ಧಿ, ಪ್ರತಿಷ್ಠೆ ಕೊಂಡವು. ಮಹಾರಾಷ್ಟ್ರದಲ್ಲಿ ಕಿಡಿ ಕೆದರಿದ ಈ ವಾದ ಹೋಳ್ಕರ್, ಗಾಯಕ್‌ವಾಡ್ ಇವರ ರಾಜ್ಯಗಳಿಗೆ ಮತ್ತು ಕರ್ನಾಟಕ, ಕೇರಳ ರಾಜ್ಯಗಳತ್ತವೂ ಹರಡಿಕೊಂಡಿತು.

ಈ ವಾದವನ್ನು ಪಂಡಿತರ ಮುಂದೆ ಮಂಡಿಸಿದಾಗ, ಕಾಶಿ ಮತ್ತು ತ್ರಯಂಬಕಗಳಲ್ಲಿನ ಚಿತ್ಪಾವನ ಬ್ರಾಹ್ಮಣರ ಪಂಡಿತರು ತಮಗೆ ಅನುಕೂಲವಾಗುವ ನಿರ್ಣಯಕೊಂಡರು.

ವಿಠ್ಠಲ ಶೆಣೈ ರಾಂಗ್ಣೇಕರ್‌ರಿಗೆ ದೀಕ್ಷೆ ಇತ್ತು ಸಚ್ಚಿದಾನಂದ ಸಾರಸ್ವತರೆಂಬ ಅಭಿದಾನವಿತ್ತ ದಿನಗಳಲ್ಲಿ (೧೬೩೦) ಮೂಲತಃ ಗೌಡ ದೇಶದಿಂದ ಬಂದಿದ್ದ ಸಾರಸ್ವತರು ಮೀನು ತಿನ್ನುವಲ್ಲಿ ತಪ್ಪೇನಿಲ್ಲವೆಂದು ಸಾರಲಾಯಿತು. ಪಂಚಗೌಡ ಬ್ರಾಹ್ಮಣರು ಮೀನು, ಮಾಂಸ ತಿನ್ನುವಲ್ಲಿ ಅದು ಆಕ್ಷೇಪಾರ್ಹವಿರದೆಂದು ೧೬೬೪ರಲ್ಲಿ ಕಾಶಿಯ ಪಂಡಿತರು ಸಾರಿದರು. ೧೮೫೫ರಲ್ಲಿ ಸಾರಸ್ವತರು ಷಟ್ಕರ್ಮಿಗಳೆಂದು ಸಾರಿದರು. ಮತ್ತೆ ಇವರಲ್ಲಿನ ಪ್ರೇತ ಸಂಸ್ಕಾರಾದಿ ವಿಧಿಗಳಿಗೆ ಅನ್ಯ ಬ್ರಾಹ್ಮಣರು ನೆರವೀಯುವರೆ ನಿರ್ದೇಶವಿತ್ತರು. ವಸ್ತ್ರಾಡಿಯಲ್ಲಿನ ಗಣಪತಿಯ ದೇವಸ್ಥಾನಕ್ಕಿದ್ದ ಉಂಬಳಿಯನ್ನು ಮುಂದುವರಿಸುವುದರ ವಿರುದ್ಧ ಮಾಡಿದ್ದ ಅಪೀಲಿನ ಸಂದರ್ಭದಲ್ಲಿ ಗಾಯಕ್‌ವಾಡ್ ಈ ಪ್ರಶ್ನೆಯನ್ನು ಕೂಲಂಕಷ ಪರೀಕ್ಷಿಸಿದಾಗ, ಮೊದಲನೆಯ ಮಾಧವರಾವ್ ಪೇಶ್ವೆ ೧೭೬೪ರಲ್ಲಿ ಖಾನಾಪುರ ಮಠಕ್ಕಿತ್ತ ಹೊಸ ಸನದಿನಲ್ಲಿ ತಾನು ಕವಳೆಮಠದ ಎರಡನೆಯ ರಮಾನಂದ ಸರಸ್ವತಿ ಮತ್ತು ಎರಡನೆಯ ಪೂರ್ಣಾನಂದ ಸರಸ್ವತಿ ಇವರ ಶಿಷ್ಯನಿರುವುದಾಗಿ ನುಡಿದಿರುವುದು ತೋರಿಬಂತು.

ತ್ರಿಕರ್ಮಿಗಳಿಗೆ ಕ್ಷತ್ರಿಯರು ಮತ್ತು ವೈಶ್ಯರಷ್ಟೆ ಅರ್ಹರಿರುವುದಾಗಿ ನುಡಿಯುವ ಮತ್ತು ಆ ಕುರಿತು ಬ್ರಾಹ್ಮಣರ ಉಲ್ಲೇಖವನ್ನೆಲ್ಲೂ ಮಾಡದಿದ್ದ ಸ್ಮೃತಿಗಳನ್ನಾಧರಿಸಿ ೧೮೮೩ರ ಡಿಸೆಂಬರ್ ತಿಂಗಳ ೭ರಂದು ನಿರ್ಣಯವೊಂದನ್ನು ಕೊಳ್ಳಲಾಯಿತು. ಮತ್ತು ತನ್ನ ರಾಜ್ಯದಲ್ಲಿನ ವಾಡಿಕೆಯಂತೆ ಬಡ ಸಾರಸ್ವತರು ದಾನ ಮತ್ತು ದಕ್ಷಿಣೆಗಳಿಗೆ ಬಾಧ್ಯರಿರುವುದಾಗಿ ಸಾರಲಾಯಿತು.

ಸಿಂಧಿಯಾನ ರಾಜ್ಯದಲ್ಲಿ ಹಲವೊಂದು ತಲೆಮಾರುಗಳಿಂದ ವಾಸಮಾಡಿಕೊಂಡಿದ್ದ ಸಾರಸ್ವತರ ಕುರಿತೂ ಈ ಬಗೆಯ ಪ್ರಶ್ನೆ ೧೯೦೭ರಲ್ಲಿ ತಲೆಯೆತ್ತಿಕೊಂಡಾಗ ಅವರು ೧೯೦೮ರ ಜುಲೈ ತಿಂಗಳ ೨ರಂದು ಸರಕಾರದಿಂದ ನಿರ್ಣಯವೊಂದನ್ನು ಕೊಂಡರು.

ಕಾಶಿಮಠದ ಗುರುಗಳು ಕುಂಬಕೋಣಂ ಮಠವಿತ್ತ ಬಿರುದಾವಳಿಗಳೊಂದಿಗೆ ಪ್ರಯಾಣ

ಮಾಡುವುದಕ್ಕೆ ಉಡುಪಿಯ ಮಠಾಧಿಪತಿಗಳು ವಿರೋಧ ತೋರಿದಾಗ ೧೯ನೆಯ ಶತಮಾನದ ಮೊದಲ ದಶಕದಲ್ಲಿ ಕೆನರಾದ ಕಲೆಕ್ಟರ್ ಆಗಿದ್ದ ಕ್ಯಾಪ್ಟನ್ (ಮುಂದ ಸರ್‌ಥೋಮಸ್) ಮುನ್ರೋ ಅವರು ಕಾಶಿಮಠದ ಗುರುಗಳಿಗೆ ಅನುಕೂಲವಾದ ನಿರ್ಣಯವಿತ್ತಿದ್ದರು.

ಅದೊಮ್ಮೆ ಸ್ಥಾನೀಯ ಅರ್ಚಕರು, ವೈಷ್ಣವ ಸಾರಸ್ವತರ ಮುಖ್ಯಪ್ರಾಣ ದೇವಸ್ಥಾನದ ಅರ್ಚಕನ ಅಪಮಾನ ಮಾಡಿದಾಗ ಆತ ದೇವರ ಮುಂದೆ ಉಪೋಷಣಕ್ಕೆ ತೊಡಗಿದ. ತತ್ಕಾಲೀನ ಅರಸು ಶಿವಪ್ಪ ನಾಯಕನ (೧೬೪೫-೧೬೬೦) ಕನಸಿನಲ್ಲಿ ಬಂದ ದೇವರು ಅರ್ಚಕನಿಗೆ ಬಾಧೆ ಈಯಲಾಗದೆಂದು ನುಡಿದಾಗ ಆತ ರಾಮಚಂದ್ರ ಮಲ್ಯನನ್ನು ಕಳುಹಿಸಿ ತಪ್ಪನ್ನು ಸುಧಾರಿಸುವ ಆಶ್ವಾಸನೆ ಇತ್ತ. ಆದರೆ ಅರ್ಚಕ, ಅರಸು ಸಭೆಯೊಂದನ್ನು ಆಯೋಜಿಸಿ ಸಾರಸ್ವತರ ಷಟ್ಕರ್ಮದ ವಿವಾದವನ್ನು ಬಗೆಹರಿಸುವ ತನಕ ಉಪವಾಸ ಮುಂದುವರಿಸುವ ನಿರ್ಧಾರ ವ್ಯಕ್ತಪಡಿಸಿದ.

ಸಾರಸ್ವತರ ನಿಲುವಿಗೆ ವೈಯಕ್ತಿಕವಾಗಿ ತಮ್ಮ ವಿರೋಧ ತೋರಿದ ಶೃಂಗೇರಿ ಮತ್ತು ಉಡುಪಿಯ ಮಠಾಧಿಪತಿಗಳೂ ಸಭೆಯಲ್ಲಿ ಭಾಗವಹಿಸಲಾಗಿ ತೆರಳಿದರು. ಮಠಾಧಿಪತಿಗಳ ಅಭಿಪ್ರಾಯಕ್ಕೆ ಬೆಂಬಲವಿತ್ತ ಕುಂಬಕೋಣಂ ಮಠದ ಗುರುಗಳೂ ಭಾಗವಹಿಸಿದರು. ಕೊಂಕಣಾಖ್ಯಾನದ ಲೇಖಕರಿದ್ದ ಸಾಗರದ ಸುಪ್ರಸಿದ್ಧ ಸಾರಸ್ವತ ಪಂಡಿತ ಘಟಿಕಾಷ್ಟಕೆ ಮತ್ತು ಅವರ ಸಹೋದರ ಲಕ್ಷ್ಮಣಾಚಾರ್ಯರು ತಮ್ಮ ವಾದವನ್ನು ಪರಿಣಾಮಕಾರಿಯಾಗಿ ಮಂಡಿಸಿದರು. ಶಿವಪ್ಪ ನಾಯಕರು ಸಾರಸ್ವತರ ಪರವಾಗಿ ನಿರ್ಣಯವಿತ್ತರು.

೨) ಕೊಂಕಣಾಖ್ಯಾನದ ಮೇರೆಗೆ ಕೆಳೋಶಿ ಕುಶಸ್ಥಳಿಯರು (ಶೆಣ್ವೈ-ಪೈಕಿಯಯರ ಪೂರ್ವಜರಿದ್ದು ಶೆಣ್ವೆಯರೊಂದಿಗೆ ಸ್ಮಾರ್ತರಾಗಿ ಉಳಿದವರು) ಮತ್ತು ಸಾಷಷ್ಟಿಕರರ (ವೈಷ್ಣವ ಸಾರಸ್ವತರ ಪೂರ್ವಜರು) ನಡುವೆ ಈ ಬಗೆಯ ತೀವ್ರ ಮತಬೇಧ ಈ ಹಿಂದೆಯೂ ತಲೆಯೆತ್ತಿಕೊಂಡಿತ್ತು.

ಸಾಷಷ್ಟಿಯಲ್ಲಿನ ೧) ಮಡ್ಗಾಂವ್, ೨) ವೆರ್ಣೆ, ೩) ಕುಡಥರಿ, ೪) ಬನವಲಿ, ೫) ಸಾಂಖಲಿ, ೬) ರಾಯಚುರ್, ೭) ಲೋಟ್ಲಿ ಮತ್ತು ನಾಗಾವೆ ಎಂಬೀ ಎಂಟು ಗ್ರಾಮಗಳ ಸಾರಸ್ವತರು ಸ್ಥಾನೀಯ ದೊರೆಗಳಲ್ಲಿ ಸೇವಾ ವೃತ್ತಿಗೆ ತೊಡಗಿದವರಲ್ಲಿ ಮೊತ್ತ ಮೊದಲಿನವರಾಗಿದ್ದರು. ಕುಶ ಸ್ಥಳಿಯರು ಮತ್ತು ಇವರ ನಡುವೆ ಅಗ್ರಸ್ಥಾನ, ಮರ್ಯಾದೆ ಇತ್ಯಾದಿಗಳ ಕುರಿತಾಗಿ ಕಟ್ಟರ ವಾದವಿತ್ತು. ಸಾಷಷ್ಟಿಕಾರರು ಕುಶಸ್ಥಳಿಯರ ಸ್ಥಾನಮಾನಗಳಿಗೆ ತಡೆಯೊಡ್ಡಲು ಎಲ್ಲೊಂದು ಬಗೆಯ ಪ್ರಯತ್ನ ಮಾಡುತ್ತಿದ್ದರು. ಕುಶಸ್ಥಳಿಯರನ್ನು ಸೇರಿಕೊಂಡ ಕೆಳೋಶಿಕರರು ಮಂಗೇಶ ಮತ್ತು ಶಾಂತಾದುರ್ಗಾರ ಸಾನಿಧ್ಯದಲ್ಲಿ ತಮ್ಮ ಇನ್ನಿತರ ಉದ್ಯೋಗಗಳೆಲ್ಲವುಗಳನ್ನು ತೊರೆದು, ಲೇಖನಿಕೊಂಡು ಸರಕಾರಿ ಸೇವೆಯನ್ನಷ್ಟೇ ಕೊಳ್ಳುವ ಶಪಥಕೊಂಡರು. ಕಾಲಾಂತರದಲ್ಲಿ ಅವರು ಮಹತ್ವದ ಹುದ್ದೆಗಳನ್ನು ಕೊಳ್ಳುವರಲ್ಲಿ ಯಶಸ್ವಿಗಳಾಗಿ ಅನ್ಯರ ಸ್ಥಾನ, ಹುದ್ದೆಗಳನ್ನು ಆಕ್ರಮಿಸಿಕೊಂಡರು. ಇದರಿಂದ ಸಿಡಿದೆದ್ದ ಎಂಟು ಗ್ರಾಮಗಳ ನಿವಾಸಿಗಳು ಪ್ರತಿಸ್ಪರ್ಧಿಗಳನ್ನು ಕೊಂದಿಕ್ಕುವ ಗುಪ್ತ ಯೋಜನೆಯನ್ನು ಮಾಡಿದರು. ಈ ಕಾರಸ್ಥಾನದ ಸುಳಿವು ಕೊಂಡ ಲೋಟ್ಲಿಕರರಲ್ಲೊಬ್ಬನನ್ನು ವರಿಸಿದ್ದ ಕೆಳೋಶಿಯ ಹೆಣ್ಣು, ರಾತ್ರಿಯ ಹೊತ್ತಿಗೆ ಧಾವಿಸಿ ಎರಡೂ ಗ್ರಾಮದ ನಿವಾಸಿಗಳಿಗೆ ಮುನ್ನೆಚ್ಚರಿಕೆಯಿತ್ತಳು. ಭಯಭೀತರಾದ ಅವರು, ಎಂಟು ಗ್ರಾಮಗಳ ಸಶಸ್ತ್ರ ತಂಡ ಬರುವ

ಮುನ್ನವೇ ಮನೆ ಬಿಟ್ಟು ಓಡಿಹೋದರು.

ಈ ಪ್ರಕರಣ ಕುಶಸ್ಥಳಿ, ಕೆಳೋಶಿಕರರ ಪಕ್ಷ ಮತ್ತು ಸಾಷಷ್ಟಿಯಲ್ಲಿನೆಲ್ಲೊಬ್ಬರ ನಡುವೆ ಗಂಭೀರವಾದ ವಿವಾದವೊಂದಕ್ಕೆ ಕಾರಣವಾಯಿತು.

ಕುಶಸ್ಥಳಿ, ಕೆಳೋಶಿಕರರು ಇನ್ನುಳಿದವರಿಂದ ಬೇರೆಯಾಗಿ, ಸಾಷಷ್ಟಿಕರರೆಂಬ ಹೆಸರಿನ ಕೈಬಿಟ್ಟು ಕೆಳೋಶಿ ಸಾಷಷ್ಟಿಕರರೆಂಬ ಹೆಸರನ್ನು ತಮ್ಮದಾಗಿಸಿಕೊಂಡರು. ಅವರು ಅಂತರ್ವಿವಾಹ, ಅಂತರ್ಭೋಜನ ಇತ್ಯಾದಿಗಳಿಗೆ ತಾತ್ಕಾಲಿಕವಾಗಂಬಂತೆ ತಡೆಹಾಕಿದರು. ಈ ವಿವಾದ ರಾಜ್ಯದ ಕಾರ್ಯನಿರ್ವಹಣೆಗೆ ಬಾಧೆ ತರುತ್ತಿದ್ದ ನಿಮಿತ್ತ ಸ್ಥಾನೀಯ ಮೌರ್ಯ ಅರಸು ಅದಕ್ಕೆ ತೇಪೆ ಹಾಕಿದ.

ಮುಂದೊಂದು ದಿನ ಗ್ರಾಮಗಳೆರಡರ ನಿವಾಸಿಗಳ ನಡುವೆ ಹುದ್ದೆಗಳ ವಿತರಣೆಯ ನಿಮಿತ್ತ ವೈಷಮ್ಯ ಮತ್ತೆ ಬೆಳೆದುಕೊಂಡಿತೆನ್ನುತ್ತಾರೆ. ಕೆಳೋಶಿಕರರಲ್ಲಿ ಎಲ್ಲೊಬ್ಬರು ಕೌಶಿಕ ಗೋತ್ರೀಯರಿದ್ದ ನಿಮಿತ್ತ ಕುಶಸ್ಥಳಿಯರು ಅವರೊಂದಿಗೆ ವಿವಾಹ ಸಂಬಂಧ ಬೆಳೆಸಲು ನಿರಾಕರಿಸಿ ಬುದ್ಧಿ ಕಲಿಸುವ ನಿರ್ಧಾರ ಮಾಡಿದರು.

ನಗರ ರಾಜ್ಯದಲ್ಲಿ ರಾಜ್ಯಾಡಳಿತೆಯ ಕಾರ್ಯ ನಿರ್ವಹಿಸುತ್ತಿದ್ದ ವಿವಿಧ ಹುದ್ದೆಗಳಲ್ಲಿನ ಸ್ಮಾರ್ತ ಸಾರಸ್ವತರು, ವೈಷ್ಣವ ಸಾರಸ್ವತರನ್ನು ಕೇವಲ ವ್ಯಾಪಾರಿಗಳೆಂದು ಕಡೆಗಣಿಸಲಾರಂಭಿಸಿದ್ದುದರ ಪರಿಣಾಮ ಸ್ವರೂಪವಾಗಿ ಅವರ ನಡುವೆ ದ್ವೇಷ ಉತ್ಪನ್ನವಾಗಿತ್ತೆಂದು ಕೊಂಕಣಾಖ್ಯಾನ ನುಡಿಯುತ್ತದೆ; ಸ್ಮಾರ್ತ ಸಾರಸ್ವತರು ತಮ್ಮ ಅಧಿಕಾರವನ್ನು ವೈಷ್ಣವ ಸಾರಸ್ವತರಿಗೆ ಬಾಧೆಯೊಯಲಾಗಿ ಬಳಸಲಾರಂಭಿಸಿದರು. ವೈಷ್ಣವ ಸಾರಸ್ವತರು, ಕೆಲವೊಬ್ಬ ಸ್ಮಾರ್ತ ಸಾರಸ್ವತರು ಆರಾಧಿಸುತ್ತಿದ್ದ 'ಶಕ್ತಿ'ಯನ್ನು ತಾಂತ್ರಿಕ ವಿಧಿಗಳ ಸಮೇತ ತಮ್ಮದಾಗಿಸಿಕೊಂಡರು. ಮತ್ತೆ ನೈವೇದ್ಯವೆಂದು ದೇವಿಗೆ ಸಮರ್ಪಿಸುತ್ತಿದ್ದ ಮಾಂಸ, ಮದಿರೆಗಳ ಪ್ರಾಶನಕ್ಕೆ ತೊಡಗಿದರು. ಇದನ್ನು ಕಂಡ ಅರಸು ಅವರ ಸಾಮಾಜಿಕ ಸ್ಥಾನ, ಮಾನಗಳ ಕುರಿತು ಪ್ರಶ್ನೆ ಎತ್ತಿದ. ಅನಂತರ ಅವರು ಬೇರೆಯೇ ಆದ ಸಮಾಜವೊಂದರ ನಿರ್ಮಾಣ ಮಾಡಿದರು.

೧೮೮೩ರ ಕೆನರಾ ಗೆಝೆಟೀಯರ್‌ನಲ್ಲಿನ ಈ ಮುಂದಣ ಉದ್ಧೃತ ಭಾಗದಲ್ಲಿ ಚಿತ್ರಾಪುರ ಸಾರಸ್ವತರನ್ನು 'ಕುಶಸ್ಥಳಿಯರು' ಮತ್ತು 'ಸಾರಸ್ವತ' ರೆಂದು ಸಂಬೋಧಿಸಿದ್ದುದನ್ನು ಕಾಣಬಹುದು.

'ಶೆಣ್ವಿಗಳಂತೆ ಶಾಕ್ತರಿದ್ದ ಇವರು (ಕುಶಸ್ಥಳಿಕರರು ಅಥವಾ ಸಾರಸ್ವತ ಬ್ರಾಹ್ಮಣರು) ದುರ್ಗೆಯನ್ನು ಪೂಜಿಸುವಾಗ ಕೋಳಿ ಅಥವಾ ಕುರಿಯ ಮಾಂಸವನ್ನು ತಿಂದು ಮದ್ಯಪ್ರಾಶನ ಮಾಡುತ್ತಾರೆ.

೧೯೨೦ರ ಫೆಬ್ರವರಿ ತಿಂಗಳ ೨೦ರಂದು ಹೊಸ ಗೋಕರ್ಣ ಮಠ ಉದ್ಘಾಟಿಸಲ್ಪಟ್ಟಿತು. ಮತ್ತು ಚಕ್ರವರ್ತಿ ಹೆಸರಿನ ಶಿವಲಿಂಗದ ಸ್ಥಾಪನೆಯಾಯಿತು. ಇದಾದ ಎರಡು ವಾರಗಳ ಬಳಿಕ (೧೯೨೦ರ ಮಾರ್ಚ್ ತಿಂಗಳಲ್ಲಿ) ಗೋಕರ್ಣ ಸಂದರ್ಶಿಸಿದ್ದ ಶ್ರೀ ಎಚ್. ಲಕ್ಷ್ಮೀನಾರಾಯಣ ಕಾಮತರು, ಅದಾವ ಕಾರಣದ ನಿಮಿತ್ತ ಚಿತ್ರಾಪುರ ಸಾರಸ್ವತರು ಇನ್ನುಳಿದ ಶೆಣ್ವಿಗಳಿಂದ ಪ್ರತ್ಯೇಕಿಸಲ್ಪಟ್ಟರೆಂದು ಪಾಳ್ಯನೆಯ ಪೂರ್ಣಾನಂದ ಸರಸ್ವತಿ (ಆ ಮಠದ ೭೫ನೇಯ ಗುರುಗಳು) ಯವರನ್ನು ಕೇಳಿದಾಗ ಅವರು ಹೀಗೆ ನುಡಿದರು : ಗೋವಾದಿಂದ ಮರಳಿದ ಸಚ್ಚಿದಾನಂದ ಸರಸ್ವತಿಯವರು ೧೬೩೦ರಲ್ಲಿ ಕವಳೆಯಲ್ಲಿ ತಮ್ಮ

ಮಠ ಸ್ಥಾಪಿಸಿ, ಸ್ಮಾರ್ತರೆಲ್ಲರೂ ತನ್ನನ್ನು ಗುರುವೆಂದು ಸ್ವೀಕರಿಸಬೇಕೆಂಬ ಆಶಯದ ರಾಯಸವನ್ನು ಕಳುಹಿಸಿದಾಗ ಅವರು ಅದನ್ನು ತಳ್ಳಿಹಾಕಿದರು. ಆಗ ಸಚ್ಚಿದಾನಂದ ಸರಸ್ವತಿಗಳು ಕಳುಹಿಸಿದ ಮಗದೊಂದು ರಾಯಸದ ಮೂಲಕ ಅವರನ್ನು ಇನ್ನುಳಿದ ಶೆಣ್ವಿ ಸಮಾಜದಿಂದ ಹೊರಕ್ಕೆ ಹಾಕಿದರು. ಪ್ರಾಯಶಃ ತಮ್ಮ ಕಷ್ಟದ ದಿನಗಳಲ್ಲಿ ಮಠ ನೆರವಿಗೆ ಬಾರದೆ ತಮ್ಮ ಕೈಬಿಟ್ಟಿತ್ತೆಂದು ಅವರು ತಪ್ಪಾಗಿ ತಿಳಿದುಕೊಂಡಿದ್ದಿರಬೇಕು. ಸಚ್ಚಿದಾನಂದ ಸರಸ್ವತಿಗಳು ಸ್ಮಾರ್ತರ ಕವಳೆ ಮಠದ ಗುರುಪದಕ್ಕೇರಿದ್ದುದನ್ನು ಅಂಗೀಕರಿಸಿದ ನಗರ ರಾಜ್ಯದಲ್ಲಿನ ಕೆಲವೊಂದು ಸ್ಮಾರ್ತ ಸಾರಸ್ವತ ಕುಟುಂಬಗಳು ಇಂದಿಗೂ ಶೆಣ್ವಿ ಸಮಾಜದೊಂದಿಗೆ ಉಳಿದುಕೊಂಡಿವೆ.

ಶೆಣ್ವಿ ಸಮಾಜದಿಂದ ಶೆಣ್ವಿ-ಪೈಕಿಗಳು ಹೊರಬಿದ್ದಿದ್ದರೆ ಅದು ಕೇವಲ ಸಚ್ಚಿದಾನಂದ ಸರಸ್ವತಿಯರನ್ನು ಗುರುಗಳಾಗಿ ಸ್ವೀಕರಿಸುವ ಪ್ರಶ್ನೆಗೆ ಸಂಬಂಧಿಸಿತ್ತಷ್ಟೆ ಹೊರತು ಜಾತಿಗೆ ಸಂಬಂಧಿಸಿದ ಅನ್ಯ ವಿಚಾರಗಳಿಗಲ್ಲ ವಾದ ನಿಮಿತ್ತ ಕವಳೆ ಮಠ, ಶೆಣ್ವಿ,-ಪೈಕಿಗಳ ನಡುವೆ ಯಾವೊಂದು ಬೇದ-ಭಾವವಿರದಿದ್ದು ಶೆಣ್ವಿಯರ ಕನ್ಯೆ ಶೆಣ್ವಿ - ಪೈಕಿಗಳ ವರನನ್ನು ವರಿಸಿದಲ್ಲಿ ತಪ್ಪೇನಿಲ್ಲವೆಂದು ಸಾರಿತು. ಚಿತ್ರಾಪುರ ಮಠದ ಪಾಂಡುರಂಗ ಸ್ವಾಮಿಗಳು ಪ್ರಿಯೋಳ್‌ನಲ್ಲಿನ ಮಂಗೇಶ ದೇವಸ್ಥಾನ ಸಂದರ್ಶಿಸಿದಾಗ, ಅಲ್ಲಿನ ಅಧಿಕಾರಿಗಳು ಸರ್ವಸಾಮಾನ್ಯವಾಗಿ ಕವಳೆ ಮಠದ ಸ್ವಾಮಿಗಳಿಗೀಯುವ ಮಾನ ಮರ್ಯಾದೆ ಇತ್ತು ಆದರದಿಂದ ಬರಮಾಡಿಕೊಂಡಿದ್ದರು.

೩. ದಿ. ಹಳ್ದಿಪುರ್ ರಾಮಚಂದ್ರಯ್ಯ ಈ ಕುಟುಂಬಕ್ಕೆ ಸಂಬಂಧಿಸಿದವರಿದ್ದು ಅವರ ಕುಟುಂಬೀಯರು ಈಗ ಕಾರ್ವಾರದಲ್ಲಿ ವಾಸಮಾಡುತ್ತಿದ್ದಾರೆ. ಮೂಲತಃ ಅವರು ಕವಳೆ ಮಠದ ಅನುಯಾಯಿಗಳಾಗಿದ್ದರು. ಇಂದಿರಾಕಾಂತ ತೀರ್ಥರು ಗೋಕರ್ಣಮಠದ ಗುರುಗಳಾಗಿದ್ದ ದಿನಗಳಲ್ಲಿ ವೈಷ್ಣವ ಸಂಪ್ರದಾಯ ಸ್ವೀಕರಿಸಿದ ಅವರು ಈಗ ಈ ಮಠಕ್ಕೆ ತಮ್ಮ ನಿಷ್ಠೆ ಸಲ್ಲಿಸುತ್ತಿದ್ದಾರೆ.

೪. ಕೊಚ್ಚಿನ್‌ನಲ್ಲಿನ ಸಾರಸ್ವತ ಕುಟುಂಬಗಳು ತಮ್ಮ ಕುಲದೇವರ ಬಗೆಗೆ ಏನೊಂದನ್ನೂ ಅರಿಯದಿದ್ದರೆ ಅದು ದೌರ್ಭಾಗ್ಯದ ವಿಷಯವೊಂದು; ಪ್ರಾಯಶಃ ಅದು ಅವರು ವೆಂಕಟಾಚಲಪತಿಯತ್ತ ತೋರುತ್ತಿದ್ದ ಅನುರಾಗ, ಆಸ್ಥೆಗಳ ಫಲವಾಗಿದ್ದಿರಲೂ ಬಹುದು. ಈ ಕುಟುಂಬಗಳ ಕೆಲವೊಬ್ಬ ಸದಸ್ಯರು ಏನೊಂದರ ಅರಿವುಕೊಂಡಿದ್ದರೆ ಅದು ಶಿವ ತಮ್ಮ ಕುಲದೈವ ಎನ್ನುವ ವಿಚಾರಕ್ಕಷ್ಟೇ ಸೀಮಿತವಾಗಿವೆ.

೫. ವತ್ಸ ಗೋತ್ರದ ಹಟ್ಟಿಯಂಗಡಿಕಾರರಲ್ಲಿ ೭ ಶಾಖೆಗಳಿವೆ : ಕಳಾವರ, ಬಲ್ಸಾವರ, ಗುಲ್ವಾಡಿ, ಕಲ್ಲಿಯಾಣ ಪುರ, ವೊಂಭತ್ತರೆ, ಮುರುಡೇಶ್ವರ ಮತ್ತು ಪಡುಕೋಣೆ. ಅವರ ಪೂರ್ವಜರು ಗೋವಾದಲ್ಲಿನ ನಾಗಾವೆಯ ನಿವಾಸಿಗಳಾಗಿದ್ದರು. ಬಹುಶಃ ನಾಯಕ್ ಅವರ ಕುಲನಾಮವಿತ್ತು. ಅವರು ಉತ್ತರ ಕನ್ನಡದ ಅಂಕೋಲದಲ್ಲಿನ ಲಕ್ಷ್ಮೀನಾರಾಯಣನ ಕುಳಾವಿಗಳು. ಈ ದೇವಸ್ಥಾನದ ನಾಲ್ಕು ಮುಕ್ತೇಶ್ವರರಲ್ಲಿ ಒಬ್ಬರು ಮುರುಡೇಶ್ವರ್‌ಕರರಾಗಿದ್ದರು; ಗೋವಾದ ಧೆಂಪೆ, ಕಟ್ಪಾಡಿಯ ನಾಯಕ್, ಮತ್ತು ಅಂಕೋಲದ ವೈಷ್ಣವರಲ್ಲೊಬ್ಬಾತ ಇವರು ಇನ್ನುಳಿದ ಮೂರು ಮಂದಿಗಳು.

೬. ಶಂಕ-ಪಿಂಗಲ-ಕುತ್ಸ ಗೋತ್ರದ ಉಭಯಕರರು ಎಷ್ಟೊಂದೋ ಕಾಲದ ಬಳಿಕ ಚಿತ್ರಾಪುರ ಸಾರಸ್ವತ ಮಠದ ಅನುಯಾಯಿಗಳಾದರು. ಅವರು ನರಸಿಂಹನ ಕುಳಾವಿಗಳು. ವೈಷ್ಣವ ಸಾರಸ್ವತರು ವ್ಯಾಪಾರಿಗಳಾಗಿದ್ದಂತೆ ಇವರ ಪೂರ್ವಜರೂ ವ್ಯಾಪಾರಿಗಳಾಗಿದ್ದರು.

ಬಹುತೇಕ ಅವರ ಮೊದಲ ಕುಲನಾಮ ಕಾಮತ್ ಇದ್ದಿರಬೇಕು.

೨. ಶ್ರೀ ಶಂಕರರಾವ್ ಇವರು ತನ್ನ 'ಚಿತ್ರಾಪುರ ಸಾರಸ್ವತ ಮಿಸೆಲನಿ'ಯಲ್ಲಿತ್ತ ವಿವರಗಳ ಮೇರೆಗೆ ಅದೊಮ್ಮೆ ನಗರದ ಅರಸು ಮೊದಲನೆಯ ಬಸಪ್ಪ ನಾಯಕ, ಅವರ ಗುರುಗಳ ಕುರಿತಾಗಿ ಪ್ರಶ್ನೆ ಮಾಡಿದಾಗ ಚಿಂತಾಗ್ರಸ್ತರಾದ ಅವರು ಗೋಕರ್ಣದಲ್ಲಿದ್ದ ತಮ್ಮ ಹಿರಿಯರ ನೆರವು ಬಯಸಿದರು. ಹಿರಿಯರೆಲ್ಲರೂ ಒಂದು ಸೇರಿ, ಉಪವಾಸ ಮಾಡಿ ಗೋಕರ್ಣದ ದೈವ ಮಹಾಬಲೇಶ್ವರನಿಗೆ ಶರಣು ಬಂದರು; ಸ್ವಪ್ನದಲ್ಲಿ ಕಾಣಿಂದ ದೇವರು, ಮುಂಜಾನೆಯ ಹೊತ್ತಿಗೆ ಗೋಕರ್ಣದ ಕೋಟಿ ತೀರ್ಥದ ಕಿನಾರೆಯಲ್ಲಿ ಸನ್ಯಾಸಿಯೊಬ್ಬ ಕಾಣಬರುವನೆಂದು ನುಡಿದರು. ಈ ಸನ್ಯಾಸಿ ಉತ್ತರೆಯ ಸಾರಸ್ವತನೊಬ್ಬನಿದ್ದು ಅವನನ್ನು ಚಿತ್ರಾಪುರ ಮಠದ ಗುರುಗಳಾಗುವಂತೆ ಒತ್ತರಿಸಿದರು.

೩. ಎಸ್. ಎಸ್. ತಾಲ್ಮಕಿಯವರ 'ಸಾರಸ್ವತ್ ಫ್ಯಾಮಿಲೀಸ್', ಭಾಗ ೧, ಪುಟ ೩೮-೩೯.

೪. ಕೆಳೋಶಿಯಲ್ಲಿನ ತ್ರಿವರ್ಗೀಯರ ಕನ್ಯೆಯನ್ನು ವರಿಸಲು ಒಪ್ಪಿದ ಗೋವಿಂದ ಶರ್ಮನ ಗೌರವಾರ್ಥ ಆತನ ವಂಶಜರಿಗೆ ಕೆಳೋಶಿಯಲ್ಲಿನ ಶುಭ ಕಾರ್ಯಗಳಂದು ಮಾನದ ಸ್ಥಾನ ನೀಯಲಾಗುತ್ತದೆ.

ಪಾಣಂದಿಕರರ ಮೊದಲ ಕುಲನಾಮ ಪೈ. ಅವರು ಪೈ - ಪಾಣಂದಿಕರ್ ಅಥವಾ ಪೈ–ಪಾಣಂದಿಕರರೆಂದು ಸಂಬೋಧಿಸಲ್ಪಡುತ್ತಿದ್ದಾರೆ.

ಅಧ್ಯಾಯ ೧೪

ಸಾರಸತ್ವರ ಉಪವಿಭಾಗಗಳು

೧೮೫೧ರಲ್ಲಿ ಗೋವಾ ಸಂದರ್ಶಿಸಿದ ಆರ್.ಬಿ.ಬರ್ಟನ್, ಸಾರಸ್ವತರು "ಸೊಗಸಾದ, ನಸು ಹಳದಿ ಬಣ್ಣ ಕೊಂಡಿದ್ದಂತೆ ತೋರುತ್ತಿದ್ದರೆಂದೂ, ಸ್ತ್ರೀಯರ ರೂಪ ಮೋಹಕವಿತ್ತೆಂದೂ, ಗಂಡಸರು ಸರ್ವಸಾಮಾನ್ಯವಾಗಿ ಪೋರ್ಚುಗೀಸ್ ವೀರರ ವಂಶಜರಿಗಿಂತಲೂ ಮಿಕ್ಕ ಅಂಗ ಸೌಷ್ಠವ, ಶಕ್ತಿ ಕೊಂಡಂತೆ ಕಾಣಬರುತ್ತಿದ್ದರು" ಎಂದು ಬರೆದಿರುತ್ತಾನೆ.

ಸಾರಸ್ವತರಲ್ಲಿ ವಿಶಿಷ್ಟವಾದ ಮೂರು ವರ್ಗಗಳಿದ್ದವು :

೧) ಕುಶಸ್ಥಳಿ ಮತ್ತು ಕೆಳೋಶಿಯಾಲ್ಲಿ ನೆಲಸಿದ್ದ, ಮಂಗೇಶ ಮತ್ತು ಶಾಂತಾದುರ್ಗಾದೇವರನ್ನು ಪೂಜಿಸುವ ವರ್ಗ: ಇವರಲ್ಲಿನ ಹೆಚ್ಚಿನವರು ಬರವಣಿಗೆಯ ವೃತ್ತಿ ಕೊಂಡಿದ್ದು ದಕ್ಷಿಣ ಮತ್ತು ಮಧ್ಯ ಕೊಂಕಣದ ಬಹುತಾಂಶ ಭಾಗಗಳಲ್ಲಿ ಗುಮಾಸ್ತರು ಮತ್ತು ಶಿಕ್ಷಕರಿದ್ದರು. ಕಾರಕೂನ, ಜಿಲ್ಲಾಧಿಕಾರಿ, ಮಂತ್ರಿ, ರಾಯಭಾರಿ ಮುಂತಾದ ಹುದ್ದೆ, ಪದವಿಗಳಲ್ಲಿ ಇದ್ದ ಇವರು ಅರಸು ಹಿಂದುವಿರಲಿ ಅಥವಾ ಮುಸಲ್ಮಾನನೇ ಇರಲಿ, ಅತಿ ಪ್ರಾಮಾಣಿಕತೆಯಿಂದ ತಮ್ಮ ಸೇವೆಯನ್ನು ಸಲ್ಲಿಸುತ್ತಿದ್ದರು. ಅವರ ಕುಲನಾಮಗಳು ಬಹುಮಟ್ಟಿಗೆ ಅವರು ಕೊಂಡಿದ್ದ ವೃತ್ತಿಗಳಿಂದ ಹುಟ್ಟಿಬಂದಿವೆ. ಸಮಾಜ, ಧರ್ಮ, ರಾಜಕಾರಣಗಳ ಕುರಿತಾದ ಅವರ ನೀತಿ ಪ್ರಗತಿಪರ ಮತ್ತು ಉದಾರವಿತ್ತು. ಅವರು ಶೆಣ್ವಿ ಅಥವಾ ಶೆಣೈ ಎಂದು ಪರಿಚಿತರಾಗಿದ್ದರು. ಕಾಲಾಂತರದಲ್ಲಿ ಶೆಣೈ ಶಿಕ್ಷಕರ ಪರ್ಯಾಯ ಶಬ್ದವೊಂದಾಗಿ ಪ್ರಚಾರಕ್ಕೆ ಬಂತು.

೨) ಸಾಗರೋದ್ಯಮಗಳ ಪ್ರಾಂತವಿದ್ದ ಸಷ್ಟಿ ಅಥವಾ ಸಾಷಷ್ಟಿ (ಷಟ್‌ಷಷ್ಟಿ) ಯ ಮಿತವ್ಯಯಿ ಮತ್ತು ಶ್ರಮಜೀವಿಗಳು. ಅವರು ವ್ಯಾಪಾರವನ್ನು ಪರಂಪರಾಗತವಾಗಿ ಬಂದ ಉದ್ಯಮವೊಂದಾಗಿ ಕೊಂಡವರಿದ್ದರು. ೧೯ನೇಯ ಶತಮಾನದ ಹೊತ್ತಿಗೆ ಅವರು ತಮ್ಮ ವ್ಯಾಪಾರವನ್ನು ಆಫ್ರಿಕಾ ಮತ್ತು ಯುರೋಪಿನ ದೇಶಗಳತ್ತ ವಿಸ್ತರಿಸಿದರು. ಕಾಲಾಂತರದಲ್ಲಿ ಅವರು ಸಾಷಷ್ಟಿಕಾರರೆಂದು ಪರಿಚಿತರಾದರು. ಇತ್ತೀಚೆಗೆ ಆಧುನಿಕ, ಉಚ್ಚ ಶಿಕ್ಷಣ ಗಳಿಸಿದ ಅವರು ಅಸಾಮಾನ್ಯ ಪ್ರಗತಿ ಮಾಡಿಕೊಂಡಿರುತ್ತಾರೆ.

೩) ಗೋವಾದ ಒಳಭಾಗದಲ್ಲಿ, ಉತ್ತರೆಯಾಲ್ಲಿದ್ದ ಬಾರ್ದೇಶ್ ಮತ್ತು ಕುಡಾಲ್‌ಗಳಲ್ಲಿ ನೆಲೆಸಿದವರು ; ಇವರು ತಮ್ಮ ಸಾಧನ, ಸಂಪತ್ತುಗಳನ್ನು ಮುಖ್ಯವಾಗಿ ಕೃಷಿಗೆ ಮುಡಿಪಾಗಿಟ್ಟಿದ್ದರು.

೧೪ನೇ ಶತಮಾನದ ಕೊನೆಯ ದಿನಗಳಲ್ಲಿ ಇವರ ನಡುವೆ ವಿವಾದ, ಕಟ್ಟಿರಮ್ಮೆರತ್ವ ಬೆಳೆದಿತ್ತು. ಅವರು ಹಲವೊಂದು ಸಣ್ಣ, ಸಣ್ಣ ಉಪವಿಭಾಗಗಳಾಗಿ ವಿಭಜಿಸಲ್ಪಟ್ಟು (ಶೆಣ್ವಿ ಮತ್ತು ಸಾಷಷ್ಟಿಕಾರರನ್ನು ಬಿಟ್ಟು) ಅಂತರ್ಭೋಜನ, ಅಂತರ್ವಿವಾಹಗಳ ಕೈಬಿಟ್ಟರು.

೧೬ನೆಯ ಶತಮಾನ ಮುಗಿಯುವ ಹೊತ್ತಿಗೆ ಅವರಲ್ಲಿ ಏಳೊಂದು ಉಪವಿಭಾಗಗಳು ಕಾಣಬಂದವು. ಅವು ಈ ಕೆಳಗಿನಂತಿವೆ.

೧. ಶೆಣ್ವಿಯರು

ಶೈವರಿದ್ದ ಇವರು ಕಾರ್ವಾರ, ಅಂಕೋಲ, ಕರಾವಳಿ ಪ್ರದೇಶ ಮತ್ತು ಹಲಿಯಾಳದ ಒಳಭಾಗದಲ್ಲಿನ ಹಳ್ಳಿಗಳಲ್ಲಿ, ಉತ್ತರ ಕನ್ನಡದಲ್ಲಿನ ಸೂಪ ಮತ್ತು ಶಿರ್ಸಿ ತಾಲೂಕು ಮುಂತಾದೆಡೆಗಳಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ಕಾಣಬರುತ್ತಾರೆ. ಹಾಗೆಯೇ ಶಹಾಪುರ್ ವಿಭಾಗ, ಬೆಳಗಾಂನ ಭಾಗಗಳು, ಬಂಕಾಪುರ, ಗದಗ, ಹುಬ್ಬಿ, ಧಾರ್ವಾರದಲ್ಲಿನ ನವಲಗುಂಡ, ರತ್ನಾಗಿರಿಯಲ್ಲಿನ ಮಾಲ್ವಣ್, ವೆಂಗುರ್ಲ, ಪನ್ವೇಲ್, ಭಿವಂಡಿ, ಕಲ್ಯಾಣ, ಸಾಲ್ಸೆಟ್ ದ್ವೀಪ, ಥಾಣಾ ಜಿಲ್ಲೆಯ ಕೆಲವೊಂದು ಭಾಗಗಳು, ಸಾವಂತವಾಡಿ ಸಂಸ್ಥಾನ ಮುಖ್ಯತಃ ಸಾವಂತವಾಡಿ, ಬಾಂದಾ, ಕುಡಾಲ್ ಮುಂತಾದೆಡೆಗಳಲ್ಲೂ ಕಾಣಬರುತ್ತಾರೆ. ಇವರಲ್ಲಿನ ಹೆಚ್ಚಿನವರು ವತ್ಸ, ಕೌಂಡಿನ್ಯ ಮತ್ತು ಕೌಶಿಕ ಗೋತ್ರೀಯರಿದ್ದು, ಶೆಣ್ವಿ-ಪೈಕಿ ಅಥವಾ ಚಿತ್ರಾಪುರ ಸಾರಸ್ವತರಂತೆ ಕನ್ಯಾಕುಬ್ಜದ ದೇವಶರ್ಮ, ಲೋಮಶರ್ಮ ಮತ್ತು ಶಿವಶರ್ಮ ಇವರ ವಂಶಜರಿದ್ದರು. ಇವರಲ್ಲಿ ಅನ್ಯ ಏಳು ಗೋತ್ರಗಳ ಅನೇಕ ಕುಟುಂಬಗಳ ಸಮಾವೇಶವಿದೆ. ಉತ್ತರ ಕನ್ನಡದ ಗಂಗಾವಳಿಯ ದಕ್ಷಿಣ ಭಾಗದಲ್ಲಿ ಶೆಣ್ವಿಯರು ಕಾಣಬರುತ್ತಿಲ್ಲ. ಗಂಗಾವಳಿಯ ದಕ್ಷಿಣದಲ್ಲಿ ನೆಲೆಸಿದ್ದ ಕೆಲವು ಕುಟುಂಬಗಳು ಸಾಷಷ್ಟಿಕಾರರೊಂದಿಗೆ ವಿಲೀನವಾದವು. ಈ ಕುಟುಂಬಗಳಲ್ಲಿನ ಕೆಲವು ವೈಷ್ಣವ ಸಂಪ್ರದಾಯ ಸ್ವೀಕರಿಸಿದವು. ಇವರಲ್ಲಿನ ಬಹುಸಂಖ್ಯಾಕರು ಕುಲಕರ್ಣಿ (ಗ್ರಾಮದ ಕರಣಿಕನ ವೃತ್ತಿ ಕೊಂಡವರು) ಗಳಾಗಿದ್ದರು.

ಮರಾಠಾ ಪರಮಾಧಿಕಾರದ ದಿನಗಳಲ್ಲಿ ಇವರಲ್ಲಿನ ಕೆಲವರು ಕೊಲ್ಹಾಪುರ, ಬರೋಡ, ರಜಪುತಾನಾ, ಇಂದೋರ್ ಮತ್ತು ಗ್ವಾಲಿಯರ್‌ಗಳಲ್ಲಿ ನೆಲಸಿ ಸೇನಾಪತಿ, ರಾಜನೀತಿಜ್ಞ ಮುಂತಾದ ಉಚ್ಚಾಧಿಕಾರಗಳನ್ನು ಕೊಂಡು ಪ್ರಸಿದ್ಧರಾದರು. ಬ್ರಿಟಿಷರು ಅವರನ್ನು 'ಗ್ಯಾಲಂಟ್ ಸೈನೊವೀಸ್' ಎಂದಾಗಿ ಕರೆಯಲಾರಂಭಿಸಿದರು. ೧೬೪೧ರಲ್ಲಿ ಗೋವಾ ಸಂದರ್ಶಿಸಿದ ವಿದೇಶಿ ಪ್ರವಾಸಿ ಟ್ರವರ್ನಿಯರ್‌ನ ನಿರೀಕ್ಷಣೆ ಈ ಮುಂದಿನಂತಿದೆ:

'ಜಗತ್ತಿನಲ್ಲಿ ಇವರನ್ನು ಮಿಕ್ಕ ಚತುರ, ಸೂಕ್ಷ್ಮ ಗ್ರಾಹಿಗಳು ಇನ್ನಿಲ್ಲ... ಅವರು ಅತಿ ಬುದ್ಧಿವಂತರು ಮತ್ತು ಉತ್ತಮ ಸೈನಿಕರಾಗಿದ್ದರು'[೧]

೧೮೮೩ರ ಕೆನರಾ ಗಝೆಟಿಯರ್‌ನಲ್ಲಿ ಅವರ ಹವ್ಯಾಸ, ಜೀವನ ಪದ್ಧತಿ, ಧಾರ್ಮಿಕ ಆಚಾರ, ಪೂಜಾ ವಿಧಿ-ವಿಧಾನ ಇತ್ಯಾದಿಗಳನ್ನು ಸವಿಸ್ತಾರವಾಗಿ ವಿವರಿಸಲಾಗಿವೆ.

೨. ಸಾಷಷ್ಟಿಕಾರರು

ವೈಷ್ಣವರಿದ್ದ ಇವರ ಸಮಾಜ ಉತ್ತರ ಕನ್ನಡದ ದಕ್ಷಿಣ ಭಾಗ, ದಕ್ಷಿಣ ಕನ್ನಡ ಮತ್ತು ಸಮಗ್ರ ಕೇರಳದಲ್ಲಿನ ಸಾರಸ್ವತರಿಂದೊಳಗೂಡಿದೆ. ಅವರ ಸಂಪ್ರದಾಯ, ವ್ರತಾಚರಣೆ, ರೂಢಿ, ರಿವಾಜುಗಳ ವಿಸ್ತೃತ ವಿವರಗಳ ಕುರಿತು ದಿ. ಶ್ರೀ ಎಮ್. ಶೇಷಗಿರಿ ಪ್ರಭುಗಳು ಬರೆದಿದ್ದು ಅದನ್ನು ಎಲ್. ಕೆ. ಅನಂತಕೃಷ್ಣ ಅಯ್ಯರ್ ಇವರು 'ಕೊಚ್ಚಿನ್ ಟ್ರೈಬ್ಸ್ ಅಂಡ್

ಕಾಸ್ಟ್ಸ್' ಎಂಬ ಪುಸ್ತಕದಲ್ಲಿ ೧೯೧೨ರಲ್ಲಿ ಪ್ರಕಟಿಸಿರುತ್ತಾರೆ. ಇವುಗಳ ವಿವರಗಳನ್ನು ಪರಿಶಿಷ್ಟದಲ್ಲೀಯಲಾಗಿದೆ.,

ಶೆಣ್ವೈಗಳು ಮತ್ತು ಸಾಷಷ್ಟಿಕಾರರಲ್ಲಿ ಅಂತರ್ವಿವಾಹ, ಅಂತರ್ಭೋಜನ ನಡೆಯುತ್ತಿದ್ದು ವ್ಯಾವಹಾರಿಕವಾಗಿ ಅವರ ಸಮಾಜ ಒಂದೇ ಆಗಿತ್ತೆನ್ನಬಹುದು. ಅವರು ದಕ್ಷಿಣದಲ್ಲಿನ ಸಾರಸ್ವತ ಸಮಾಜದ ದೊಡ್ಡ ಘಟಕವೊಂದಾಗಿರುತ್ತಾರೆ.

೩. ಕುಶಸ್ಥಳಿಕಾರರರು, ಶೆಣ್ವಿ - ಪೈಕಿಯರು ಅಥವಾ ಚಿತ್ರಾಪುರ ಸಾರಸ್ವತರು

ಇವರೆಲ್ಲರೂ ಈಗ ಸ್ಮಾರ್ತರಾಗಿರುತ್ತಾರೆ. ಇವರಲ್ಲಿನ ಹೆಚ್ಚಿನವರು ಬಹುಸಂಖ್ಯಾಕ ಶೆಣ್ವಿಯರ ವಂಶಜರಾಗಿರುತ್ತಾರೆ. ಕೆಲವೊಬ್ಬರು ಸಮಾಜದ ಮುಖ್ಯ ಪ್ರವಾಹದಿಂದ ದೂರ ಸರಿದು, ಕೆಳದಿ ರಾಜ್ಯದ ಉತ್ತರ ಕನ್ನಡದಲ್ಲಿ ಹರಿಯುವ ಗಂಗಾವಳಿಯ ದಕ್ಷಿಣ ಭೂಭಾಗದಲ್ಲಿ ನೆಲಸಿದ್ದ ಸಾಷಷ್ಟಿಕಾರರ ಕುಟುಂಬೀಯರಾಗಿದ್ದಾರೆ. ಅವರು ಕುಶಸ್ಥಳಿಕಾರರೆಂದು ಪರಿಚಿತರಾಗಿರುತ್ತಾರೆ. ೧೮೮೩ರ ಕೆನರಾ ಗಝೆಟಿಯರ್‌ನಲ್ಲೂ ಅವರನ್ನು ಇದೇ ರೀತಿಯಲ್ಲಿ ವರ್ಣಿಸಲಾಗಿದೆ.

ಸುಮಾರು ೫೦ ವರ್ಷಗಳ ಹಿಂದಿನ ತನಕ ಶೆಣ್ವಿ ಪೈಕಿಯರು ತಮ್ಮ ಹೆಸರಿನೊಂದಿಗೆ 'ಶೆಣ್ಯೆ' ನಾಮರೂಪ ಜೋಡಿಸುತ್ತಿದ್ದರು. ಕೇರಳದಲ್ಲಿ ಶೆಣ್ವಿ-ಪೈಕಿಗಳ ಅಸ್ತಿತ್ವವಿಲ್ಲ. ಉತ್ತರ ಕನ್ನಡದ ಸರಕಾರಿ ಮುಖ್ಯ ಕಾರ್ಯಾಲಯಗಳು ಕಾರವಾರಕ್ಕೆ ಸ್ಥಳಾಂತರಗೊಳ್ಳುವ ತನಕ ಗಂಗಾವಳಿಯ ಉತ್ತರ ಭಾಗದಲ್ಲೂ ಅವರ ಅಸ್ತಿತ್ವವಿದ್ದಿಲ್ಲವಿತ್ತು. ಅನಂತರ ಸರಕಾರಿ ಸೇವೆಯಲ್ಲಿದ್ದ ಅನ್ಯ ಎಷ್ಟೊಂದೋ ಮಂದಿ ಗಂಗಾವಳಿಯ ಉತ್ತರ ಭಾಗದಲ್ಲಿನ ವಿಭಿನ್ನ ಸ್ಥಾನಗಳಲ್ಲಿ ನೆಲೆನಿಂತರು. ಈ ಸಮಾಜದ ಉದ್ಯಮಶೀಲರ ಕುಟುಂಬಗಳು ಕೆನರಾದಿಂದ ವಲಸೆಹೋಗಿ ಮುಖ್ಯತಃ ಬೊಂಬೇ, ಬೆಂಗಳೂರುಗಳಲ್ಲಿ ನೆಲಸಿಕೊಂಡವು.

೪. ಬಾರ್ದೇಶ್ಕಾರರು

ಸಾಷಷ್ಟಿಕಾರರಂತೆ ಬಾರ್ದೇಶ್ಕಾರರೂ ವೈಷ್ಣವರಿದ್ದರು. ಅವರಲ್ಲಿನ ಹೆಚ್ಚಿನವರು ವ್ಯಾಪಾರಿಗಳಾಗಿದ್ದರು. ಬಾರ್ದೇಶ್‌ನಲ್ಲಿ ವಾಸವಾಡುತ್ತಿದ್ದ ನಿಮಿತ್ತ ಅವರನ್ನು ಬಾರ್ದೇಶ್ಕಾರರೆಂದು ಸಂಬೋಧಿಸಲಾಗುತ್ತಿತ್ತು. (ದ್ವಾದಶ ಗ್ರಾಮ, ಹನ್ನೆರಡು ಗ್ರಾಮಗಳು, ಗೋವಾದಲ್ಲಿ ಬಾರ್ದೇಶ್) ಬೆಳಗಾಂ ಜಿಲ್ಲೆಯ ಖಾನಾಪುರ ಮತ್ತು ಅನ್ಯ ಸ್ಥಾನಗಳಲ್ಲಿ, ಸಾವಂತವಾಡಿ ಮತ್ತು ರತ್ನಾಗಿರಿ ಜಿಲ್ಲೆಗೆ ಹೊಂದಿಕೊಂಡಿದ್ದ ಭಾಗಗಳಲ್ಲಿ ಅವರು ಕಾಣಬರುತ್ತಾರೆ. ಖ್ಯಾತನಾಮ ಬಾಹುಕ್ಕೆನ ಸದಾಶಿವ ಕಾಮತ್ ಈ ಉಪವಿಭಾಗಕ್ಕೆ ಸೇರಿದವರಿದ್ದರು. ಗೋಕರ್ಣಮಠದ ೧೬ನೇಯ ಗುರು ಇಂದಿರಾಕಾಂತ ತೀರ್ಥರು ಬಾರ್ದೇಶ್ಕಾರರನ್ನು ತಮ್ಮ ಮಠದೊಂದಿಗೆ ಸೇರಿಸಿಕೊಂಡರು.

೫. ಪೆಡ್ಣೆಕರರು

ಪೆಡ್ಣೆಕರರು ವೈಷ್ಣವರಿದ್ದರು. ಬಾರ್ದೇಶ್ಕಾರರಂತೆ ' ಇವರು ಸಾಷಷ್ಟಿಕಾರರ

ಉಪವಿಭಾಗವೊಂದಕ್ಕೆ ಸಂಬಂಧಿಸಿದವರಿದ್ದರು. ಪೆಡ್ಣೆ ಮಹಾಲಿನ ನಿಮಿತ್ತ (ಪೆಡಣ ಅಥವಾ ಪಂಚಗ್ರಾಮ, ಐದು ಗ್ರಾಮಗಳು) ಅವರು ಪೆಡ್ಣೆಕರರೆಂದು ಪರಿಚಿತರಾದರು. ಅವರು ರತ್ನಾಗಿರಿ ಜಿಲ್ಲೆಯಲ್ಲೂ ಕಾಣಬರುತ್ತಾರೆ. ಮಹಾದ್ಜಿ ಸಿಂಧಿಯಾನ ಖ್ಯಾತ ನಾಮ ಸೈನಿಕ ಹಾಗೂ ಸರದಾರನಿದ್ದ ಲಖ್ಖಾದಾದಾ ಮಳ್ಗಾಂವ್‌ಕರ್ ಪೆಡ್ಣೆಕರನೊಬ್ಬನಿದ್ದ. ಲಕ್ಷ್ಮಣ ರಘುನಾಥ ಪೆಡ್ಣೆಕರ್ ಮತ್ತು ಬಾಬಾ ಪೆಡ್ಣೆಕರ್ ಇವರು ಮಹಾದ್ಜಿ ಸಿಂಧಿಯಾನ ಪ್ರಸಿದ್ಧ ಸರದಾರರಾಗಿದ್ದರು. 'ವಿಸಂದೆ ದಿ ಪೆರ್ಣೆಮ್' (ವೈಕೌಂಟ್ ಆಫ್ ಪೆಡ್ಣೆ), ಪರೇಸ್ಕರ್, ಮಾಂಡ್ರೇಕರ್ ಮತ್ತು ಅರಬಿಕರ್ ದೇಸಾಯಿಗಳು - ಇವರ ಕುಟುಂಬಗಳು ಈ ಉಪವಿಭಾಗಕ್ಕೆ ಸೇರಿದ್ದುವಾಗಿವೆ. ಅವರು ಸಂತಾರ್ಡೆ ಮಠ ಮತ್ತು ದೇವಸ್ಥಾನವನ್ನು ಸ್ಥಾಪಿಸಿರುತ್ತಾರೆ. ದೇವಸ್ಥಾನ ಈಗ ಅರ್ಚಕನೊಬ್ಬನನ್ನಷ್ಟೇ ಕೊಂಡಿದೆ; ಮಠ ಗುರುಗಳನ್ನು ಕೊಂಡಿಲ್ಲ.

೬. ಕುಡಾಲ್ದೇಶ್ಕಾರರು

ಕುಡಾಲ್ದೇಶ್ಕಾರರು ಸ್ಮಾರ್ತರಿದ್ದರು. ಮತ್ತು ಚಿತ್ರಾಪುರ ಸಾರಸ್ವತರಂತೆ ಇವರೂ ಶೆಣ್ವೆಯರ ಉಪಶಾಖೆಯೊಂದಕ್ಕೆ ಸೇರಿದವರಿದ್ದರು. ಅವರು ಮೂಳ್‌ಭೈಂಕಾ ಎಂದಾಗಿ ಪರಿಚಿತರಾಗಿರುವ ತಮ್ಮ ಮೂಲಸ್ಥಾನ ಆಡ್ಗಾಂವ್, ಪಾತೋಣ್, ನೆರೂರ್, ಗೋಳ್ವನ್ವಾಡಾ ಮತ್ತು ವಲವಲಿಗಳೊಂದಿಗಿನ ಹದಿನೆಂಟು ಗ್ರಾಮಗಳಲ್ಲಿ ಮತ್ತು ನಂತರದ ಸಾವಂತವಾಡಿಯ ಕುಡಾಲ್‌ನಲ್ಲಿನ ಜೋಡ್‌ಭುಣ್ಕಾ ಎಂದಾಗಿ ಕರೆಯಲ್ಪಡುತ್ತಿದ್ದ ನಾಲ್ಕು ಗ್ರಾಮಗಳಲ್ಲಿ ವಾಸಿಸುತ್ತಿದ್ದಾರೆ.

ಸಹ್ಯಾದ್ರಿ ಖಂಡದಲ್ಲಿ ಕುಡಾಲ್‌ನಲ್ಲಿನ ಯಾವೊಂದೂ ಗ್ರಾಮಗಳ ಉಲ್ಲೇಖ ಕಾಣಬರುತ್ತಿಲ್ಲ. ಪ್ರಾಯಶಃ ಅವರು ಉತ್ತರೆಯಿಂದ ಬಂದ ಉತ್ತರಕಾಲೀನ ವಲಸೆಗಾರರ ವಂಶಜರಿದ್ದಿರಬೇಕು. ಇದು ಸಮಾಜದ ಕೆಲವೊಬ್ಬ ಗಣ್ಯ ವ್ಯಕ್ತಿಗಳು, ಶೆಣ್ವೆಯರೊಂದಿಗಿನ ರಕ್ತ ಸಂಬಂಧವನ್ನಲ್ಲಗಳೆಯಲು ಮತ್ತು ತಮ್ಮನ್ನು 'ಆದ್ಯ ಗೌಡ'ರೆಂದು ಕರೆಯಿಸಿಕೊಳ್ಳುವುದಕ್ಕೆ ಕಾರಣವಾಯಿತು. ಈ ವಾದದ ಪ್ರತಿಪಾದಕರು ತಾವು ನುಡಿಯುವ ಕುಡಾಲಿ ಪ್ರಭೇದದ ಕೊಂಕಣಿ, ಬಂಗಾಲಿ ಭಾಷೆಗೆ ಸಮಾನವಿರುವುದಾಗಿ ನುಡಿಯತೊಡಗಿದರು!

ಪಶ್ಚಿಮ ಘಟ್ಟವನ್ನು ದಾಟಿ, ಈಗ ಕುಡಾಲ್ ಎಂದಾಗಿ ಕರೆಯಲ್ಪಡುವ ಭೂಭಾಗದಲ್ಲಿ ನೆಲಸಿದ್ದ ಈ ಸಮಾಜದ ಕೆಲವರು ಶೆಣ್ವೆಯರೊಂದಿಗೆ ಅಂತರ್ಭೋಜನ, ಅಂತರ್ವಿವಾಹ ಇತ್ಯಾದಿಗಳನ್ನು ಯಾವೊಂದೂ ಅಡೆತಡೆಗಳಿಲ್ಲದೆ ಮಾಡಿಕೊಂಡಿರಬೇಕು. ಕೆಲವೊಂದು ಕುಟುಂಬಗಳ ಶೆಣ್ವೈ, ವಾಘ್ ಮುಂತಾದ ಕುಲನಾಮಗಳಿಂದ ಈ ತಥ್ಯದ ಅರಿವಾಗುತ್ತದೆ. ಅವರಲ್ಲಿನ ಕೆಲವರು ಕೇವಲ ಸಾರಸ್ವತರಷ್ಟೇ ಆರಾಧಿಸುತ್ತಿದ್ದ ಸಾಂತೇರಿದೇವಿ (ಶಾಂತಾದುರ್ಗಾಳ ಒಂದು ರೂಪ) ಯನ್ನು ಪೂಜಿಸುತ್ತಿದ್ದರು. ಪುರುಷೋತ್ತಮ, ಆದಿನಾಥ, ನಾರಾಯಣ, ಕಾಳೇಶ್ವರ, ಸಿದ್ಧೇಶ್ವರ ಎಂಬೀ ಕುಲದೇವರನ್ನು ಮತ್ತು ಚಾಮುಂಡಿ, ತಾರಾದೇವಿ, ಭಗವತಿ, ಮೌಳಿ ಎಂಬೀ ಕುಲದೇವಿಯರನ್ನು ನಂಬುತ್ತಿದ್ದ

ಇವರ ನಡುವೆ ಬಾಳಿದ್ದ ಶೆಣ್ವಿ ಕುಟುಂಬಗಳೂ ಈ ದೈವಗಳೆಲ್ಲವನ್ನು ನಂಬತೊಡಗಿದವು. ಅವರು ಥಾಕುರ್, ಚೋಂದ್ರೆ, ಗೋಸಾವಿ, ರಾಜ್ವಾಡಕರ್, ಮಹಾಜನ್, ಪಾಟೀಲ್ ಕುಲನಾಮಗಳನ್ನು ಹೊಂದಿದ್ದರೆ ಅದು ಕೊಯ್ನಾ, (ಸತಾರಾ ಜಿಲ್ಲೆಯಲ್ಲಿ ಹರಿಯುವ ಕೃಷ್ಣಾನದಿಯ ಉಪನದಿ) ಮತ್ತು ತುಂಗಭದ್ರಾ ನದಿಗಳ ನಡುವಣ ಬಯಲು ಭಾಗದಲ್ಲಿ ಅವರ ಪೂರ್ವಜರು ನೆಲಸಿದ್ದುದನ್ನು ಸೂಚಿಸುತ್ತದೆ. ಬಹುಮಟ್ಟಿಗೆ ಹೊಸದಾಗಿ ವಲಸೆ ಬಂದವರು ಕೊಂಕಣದಲ್ಲಿನ ತಮ್ಮ ವಾಸಸ್ಥಾನಕ್ಕೆ ಕುಡಾಲ್ ಎಂಬ ಹೆಸರನ್ನಿತ್ತಿದ್ದಿರಬಹುದು. ಸ್ಥಾನೀಯ ಒಳಪಂಗಡಗಳೊಳಗಣ ವೈಷಮ್ಯದ ಫಲಸ್ವರೂಪ ಅವರು ಅನ್ಯ ಸಾರಸ್ವತರೊಂದಿಗೆ ಯಾವೊಂದೂ ಸಂಬಂಧವಿಡದೆ ದೂರ ಸರಿದಿದ್ದರು. ಶೆಣ್ವಿಯರ ಕೆಲವು ಕುಟುಂಬಗಳ ಈ ಉಪವಿಭಾಗದ ಪಾಲಾಗಿ ಉಳಿದುಕೊಂಡವಾದರೆಕೆಲವೊಂದು ಕುಟುಂಬಗಳು ಶೆಣ್ವಿ ಸಮಾಜದೊಂದಿಗೆ ವಿಲೀನಗೊಂಡವು. ಇದು ಕೆಳದಿ ರಾಜ್ಯದಲ್ಲಿನ ಶೆಣ್ವಿ-ಪೈಕಿ ಮತ್ತು ಸಾಷಷ್ಟಿಕಾರರನ ನಡುವೆ ಉದ್ಭವಿಸಿದ್ದ ಒಡಕನ್ನು ಅನುಕರಿಸುವಂತಿತ್ತು.

ಸಾಮಂತ ಕುಡಾಲ್ದೇಶ್ಕರ್ ಪ್ರಭು ದೇಸಾಯಿಯವರ ಕುಟುಂಬ ಸಾರಸ್ವತರಲ್ಲಿನ ಪ್ರತಿಷ್ಠಿತ ಮತ್ತು ಪ್ರಭಾವಶಾಲಿ ಕುಟುಂಬಗಳಲ್ಲೊಂದಾಗಿತ್ತು. ಈ ಮನೆತನ ಸುಮಾರು ೫೦೦ ವರ್ಷಗಳ ಕಾಲ ಸ್ವತಂತ್ರವಾಗಿ ಅಥವಾ ಬಿಜಾಪುರದ ಆದಿಲ್‌ಶಾಹ ಇವರ ಆಶ್ರಿತರಂತೆ ಕುಡಾಲ್ ಪ್ರಾಂತವನ್ನು ಆಳಿಕೊಂಡಿತ್ತು. ಈ ಆಳ್ವಿಕೆ, ಸಾವಂತವಾಡಿಯ ಸಾವಂತ, ಭೋಂಸ್ಲೆ ಸರ್ದೇಸಾಯಿಯ ಪೂರ್ವಜನಿದ್ದ ಮಾಂಗ್ ಸಾವಂತನ ಮೊಮ್ಮಗ ಮೊದಲನೆಯ ಲಖಮ್ ಸಾವಂತ, ೧೬೭೦ರಲ್ಲಿ ಅವರ ಪ್ರಾಂತವನ್ನು ಗೆದ್ದುಕೊಳ್ಳುವ ತನಕ ನಡೆದುಬಂದಿತ್ತು.

ಈ ಕುಟುಂಬದ ಸೂರ್ಯಭಾನು ಮತ್ತು ಚಂದ್ರಭಾನು ಹೆಸರಿನ ಸಹೋದರರು ಖ್ಯಾತನಾಮರಿದ್ದರು. ' ಪೋರ್ಚುಗೀಸರು ಬಾಧೆಯೀಯುತ್ತಿದ್ದ ದಿನಗಳಲ್ಲಿ ಗೋವಾದಿಂದ ಕುಡಾಲ್‌ಗೆ ' ವಲಸೆ ಹೋಗಿದ್ದ ಎಲ್ಲರಿಗೂ ಇವರು ರಕ್ಷಣೆಯಿತ್ತಿದ್ದರು. ೧೫೬೪ರಲ್ಲಿ ಕುಶಸ್ಥಳಿಯಲ್ಲಿನ ಮೂಲ ಮಠಕ್ಕೆ ಪೋರ್ಚುಗೀಸರು ಬೆಂಕಿಯಿತ್ತಾಗ ಕವಳೆ ಮಠದ ೫೭ನೇ ಗುರುಗಳಾದ ವಿದ್ಯಾನಂದ ಸರಸ್ವತಿಯವರು ರಕ್ಷಣೆಯ ಕಾರಣಕೊಂಡು ಕುಡಾಲಿಗೆ ತೆರಳಿ ಅಲ್ಲಿ ವಾಸಕ್ಕಾರಂಭಿಸಿದರು.

೧೫ನೆಯ ಶತಮಾನದ ಮಧ್ಯಂತರದಲ್ಲಿ ಮಾಂಗ್ ಸಾವಂತ, ಸಾವಂತವಾಡಿಯ 'ಸಾವಂತ ಸರ್ದೇಸಾಯಿ ಭೋಂಸ್ಲೆ' ರಾಜವಂಶವನ್ನು ಸ್ಥಾಪಿಸಿದ. ೧೬೪೦-೧೬೫೦ರಲ್ಲಿ ಆತನ ಉತ್ತರಾಧಿಕಾರಿಗಳಲ್ಲೊಬ್ಬನಿದ್ದ ಮೊದಲನೆಯ ಲಖಮ್ ಸಾವಂತ ಕುಡಾಲ್‌ನಲ್ಲಿನ ಪ್ರಭು ದೇಸಾಯಿಯನ್ನು ಸೆರೆ ಹಿಡಿದು ಕೊಂದಿಕ್ಕಿದ. ಆ ಮೊದಲ್ಗೊಂಡು ಸಾವಂತರು ಕುಡಾಲಿನ ದೊರೆಗಳೆಂದೆಣಿಸಿಕೊಂಡರು.

ಅವರು ಬೇಸಾಯದಿಂದ ತಮ್ಮ ಜೀವನ ನಡೆಸುತ್ತಿದ್ದರು. ಇತ್ತೀಚಿಗಿನ ದಿನಗಳಲ್ಲಿ ವ್ಯಾಪರಕ್ಕೂ ತೊಡಗಿದ್ದ ಅವರು ಸ್ಥಿತಿವಂತರಾಗಿರುತ್ತಾರೆ. ಶೆಣ್ವಿಯರಿಂದ ಪ್ರತ್ಯೇಕಿಸಲ್ಪಟ್ಟ ಅವರು ಶೃಂಗೇರಿಯ ಮಠವನ್ನು ನಂಬತೊಡಗಿದರು.

ವೆಂಗುರ್ಲಾ (ರತ್ನಾಗಿರಿ ಜಿಲ್ಲೆ) ದ ಸಮೀಪದಲ್ಲಿದ್ದ ರಾಚೋಲಿಯಲ್ಲಿ ಅವರದ್ದೇ ಆದ ಮಠವೊಂದಿದೆ.

೭. ರಾಜಾಪುರಿಗಳು ಮತ್ತು ಭಲವಲಿಕರರು

ರಾಜಾಪುರಿಗಳು [೫] ಮತ್ತು ಭಲವಲಿಕರರ [೬] ನಡುವೆ ಅಷ್ಟೊಂದು ಹೆಚ್ಚಿನ ವ್ಯತ್ಯಾಸವಿಲ್ಲ. ರಾಜಾಪುರದ ನಿಮಿತ್ತ ರಾಜಾಪುರಿಗಳೆಂಬ ಉಪನಾಮ ಪ್ರಚಾರಕ್ಕೆ ಬಂದರೆ ರತ್ನಾಗಿರಿ ಜಿಲ್ಲೆಯ ರಾಜಾಪುರಿ ಉಪವಿಭಾಗದೊಳಗಣ ಭಲವಲದ ನಿಮಿತ್ತ ಭಲವಲಿಕರರೆಂಬ ಉಪನಾಮ ಬಳಕೆಗೆ ಬಂದಿತು. ಕೊಲಾಬಾ ಜಿಲ್ಲೆ ಮತ್ತು ಪೂನಾದಲ್ಲಿನ ಹೆಚ್ಚಿನ ಸಾರಸ್ವತರು ಭಲವಲಿಕರರಿದ್ದು ಅವರು ಮರಾಠಿ ಭಾಷೆಯನ್ನು ನುಡಿಯುತ್ತಾರೆ.

ದಕ್ಷಿಣ ಕನ್ನಡದಲ್ಲಿ ರಾಜಾಪುರಿಗಳು ಮತ್ತು ಭಲವಲಿಕರರು ಕೊಂಕಣಿ ನುಡಿಯುತ್ತಾರೆ. ಸರ್ವ ಸಾಮಾನ್ಯವಾಗಿ ಬೇಸಾಯಗಾರರಾಗಿದ್ದ ಇವರು ಪೌರೋಹಿತ್ಯಕ್ಕೆ ಕರ್ಹಾಡ ಬ್ರಾಹ್ಮಣರನ್ನು ಬಳಸುತ್ತಾರೆ. ಅವರು ಪೆಡ್ನೆ ಮಹಾಲಿನಿಂದ ರಾಜಾಪುರ ಉಪವಿಭಾಗಕ್ಕೆ ಸ್ಥಳಾಂತರಗೊಂಡಿದ್ದರೆಂದು ಹೇಳುತ್ತಾರೆ. ಅಲ್ಲಿನ ಕೆಲವೊಂದೆಡೆಗಳಲ್ಲಿನ ಉಪಟಳದ ದಿನಗಳಲ್ಲಿ ಅವರು ಕೆನರಾ, ಕೊಡಗು ಮತ್ತು ಮೈಸೂರುಗಳತ್ತ ತೆರಳಿದ್ದರು. ಮೈಸೂರಿನ ತೀರ್ಥಹಳ್ಳಿ ತಾಲೂಕಿನಲ್ಲಿ ಕೆಲವು ರಾಜಾಪುರಿಗಳಿದ್ದಾರೆ. ಮಡಿಕೇರಿಯಲ್ಲಿ ಭಲವಲಿಕರರು ಕಾಣಬರುತ್ತಾರೆ. ಸ್ಮಾರ್ತರಿದ್ದ ಅವರ ನಡೆನುಡಿಗಳು ಕುಡಾಲ್ದೇಶ್ಕಾರರ ಗುಣಶೀಲಗಳನ್ನು ಸರಿಹೋಲುತ್ತವೆ. ಅವರಲ್ಲಿ ಕುಡಾಲ್ದೇಶ್ಕಾರರಲ್ಲೂ ಇರುವ ಭರದ್ವಾಜ, ಅತ್ರಿ, ಕಶ್ಯಪ, ವಶಿಷ್ಠ, ವತ್ಸ, ಕೌಂಡಿನ್ಯ, ಧನಂಜಯ, ಕೌಶಿಕ ಮತ್ತು ಜಮದಗ್ನಿಯೆಂಬೀ ಒಂಭತ್ತು ಗೋತ್ರಗಳಿವೆ. ಅವರಲ್ಲಿ ಗೌತಮ ಗೋತ್ರವೂ ಇದೆ. ಪೆಡ್ನೆಕರರಲ್ಲಿ ಈ ಗೋತ್ರವಿಲ್ಲ. ಆದರೆ ಅವರಲ್ಲಿ ಗಾರ್ಗ್ಯ ಮತ್ತು ಸಾಂಖ್ಯಾಯನ ಎಂಬೀ ಅನ್ಯ ಎರಡು ಗೋತ್ರಗಳಿವೆ.

೮. ಅನ್ಯ ಉಪವಿಭಾಗಗಳು

ಈ ಮೇಲೆ ಉಲ್ಲೇಖಿಸಲ್ಪಟ್ಟ ಉಪವಿಭಾಗಗಳ ಹೊರತು ಗೋವಾದಲ್ಲಿ ಲೊಟ್ಲಿಕರ್ ಮತ್ತು ನರವಣೆ, ಸಾವಂತವಾಡಿಯಲ್ಲಿ ದಿವಾಡ್‌ಕರ್ ಮತ್ತು ನಿವಾಸ್ಕರ್, ರತ್ನಾಗಿರಿ ಜಿಲ್ಲೆಯಲ್ಲಿ ಆವರ್ಸೆ ಮತ್ತು ಖಡಪೆ ಕಾಜುಳೆ ಎಂಬೀ ಉಪವಿಭಾಗಗಳೂ ಇವೆ.

ದಕ್ಷಿಣ ಕನ್ನಡದಲ್ಲಿನ ಉಡುಪಿ, ಕೂಳೂರು ಮತ್ತು ಬೇಕಲಗಳಲ್ಲಿ ಒಂಟಿಯಾಗುಳಿದ ಸಮಾಜಗಳಿವೆ [೬]. ಶೆಣ್ವಿಯರು, ಸಾಷಷ್ಟಿಕಾರರು, ಬಾರ್ದೇಶ್ಕಾರರು, ಪೆಡ್ನೆಕರರು, ಲೊಟ್ಲಿಕರರು ಮತ್ತು ನರವಣೆಯವರು ತಮ್ಮನ್ನು ಗೌಡ ಸಾರಸ್ವತರೆಂದು ಕರೆದುಕೊಳ್ಳುತ್ತಾರೆ. ಚಿತ್ರಾಪುರ ಸಾರಸ್ವತರು ಸಾಮಾನ್ಯವಾಗಿ ತಮ್ಮನ್ನು ಹಾಗೆ ಕರೆಸಿಕೊಳ್ಳದಿದ್ದರೂ ಅವರ ಮಠಾಧಿಪತಿಗಳು ಮಾತ್ರ ತಮ್ಮ ರಾಯಸದಲ್ಲಿ ಅವರನ್ನು ಸಾರಸ್ವತರೆಂದು ಸಂಬೋಧಿಸುತ್ತಾರೆ.

ಸಂದರ್ಭ ಸೂಚಿ

೧. ಜೀನ್ ಬ್ಯಾಪ್ಟಿಸ್ಟ್ ಟವರ್ನಿಯರ್ ಇವರ 'ಟ್ರಾವೆಲ್ಸ್ ಇನ್ ಇಂಡಿಯಾ' - ವಿ. ಬಾಲ್, ಫ್ರೆಂಚ್ ಭಾಷೆಯಿಂದ ಅನುವಾದಿಸಿದವರು, ಭಾಗ ೧, ೧೮೫೯, ಪುಟ ೧೮೯-೧೯೫

೨. ಕೊಂಕಣಾಖ್ಯಾನದ ಮೇರೆಗೆ ಕದಂಬರ ರಾಜ್ಯಾಡಳಿತೆಯ ದಿನಗಳಲ್ಲಿ ಪೆಡ್ಣೆಕರರಲ್ಲಿನ ಮದುವೆಗೆ ತುಂಬಾ ಜನರು ನೆರೆದುಬಂದಿದ್ದರು. ಸಪ್ತಪದಿಯ ವಿಧಿಯ ವೇಳೆಗೆ, ಹೋಮಕುಂಡಕ್ಕೆ ವಧೂವರರು ಪ್ರದಕ್ಷಿಣೆ ಹಾಕುತ್ತಿದ್ದಾಗ ಪುರೋಹಿತ ವಧುವಿಗೆ ಉಟ್ಟ ಸೀರೆಯನ್ನು ತುಸು ಎತ್ತಿಹಿಡಿಯುವರೆ (ಅಗ್ನಿಯ ಜ್ವಾಲೆ ಸೀರೆಗೆ ತಗಲಬಾರದೆನ್ನುವ ಉದ್ದೇಶದಿಂದ) ಸೂಚಿಸಿದ. ಆಕೆ ತನಗೆ ಅರಿವಿರುವುದಾಗಿ ನುಡಿದಳು. ವಧುವಿನ ತಂದೆಯ ಶತ್ರುಗಳು ಆಕೆ ವಿವಾಹದ ಈ ವಿಧಿಯ ಅನುಭವವನ್ನು ಆ ಮೊದಲು ಕೊಂಡಿದ್ದಿರಬೇಕೆಂಬ ಅಪಾದನೆ ಮಾಡಿದರು. ನೆರೆದ ಜನರು ಪೂರ್ವಾಪರ ವಿವೇಚನೆ ಮಾಡದೆ ವಧುವಿನ ತಂದೆ ಇದಕ್ಕೆ ಪ್ರಾಯಶ್ಚಿತ್ತ ಮಾಡಬೇಕೆಂದು ನುಡಿದರು. ಏನೊಂದೂ ತಪ್ಪಿಲ್ಲದ ನಿಮಿತ್ತ ಆತ ಅದಕ್ಕೆ ನಕಾರವಿತ್ತ. ನೆರೆದಿದ್ದವರಲ್ಲಿನ ಹೆಚ್ಚಿನ ಜನರು ಮಂಟಪ ಬಿಟ್ಟು ಹೋದರು. ವಿವಾಹ ಕಾರ್ಯವನ್ನು ಸಂಬಂಧಿಕರು ಪೂರ್ತಿಗೊಳಿಸಿದರು. ಆಗ ಅವರಲ್ಲಿನ ಎಲ್ಲೊಬ್ಬರನ್ನೂ ಜಾತಿಯಿಂದ ಹೊರಕ್ಕೆ ಹಾಕಲಾಯಿತು. ಸಂಬಂಧಿಕರು ಪೆಡ್ಣೆಯ ಮೂರು ಗ್ರಾಮಗಳಲ್ಲಿ, ಬಾರ್ದೇಶ್‌ನಲ್ಲಿನ ಕಾಂಬಿಳಿಯಲ್ಲಿ ಮತ್ತು ಕುಡಾಲ್ ಮಹಾಲ್‌ನಲ್ಲಿನ ಸಾಂತರ್ದೆಯಲ್ಲಿ ನೆಲಸಿ ತಮ್ಮದೇ ಆದ ಪ್ರತ್ಯೇಕ ಸಮಾಜ ಸ್ಥಾಪಿಸಿದರು.

೩. ವಲವಲಿಯಲ್ಲಿನ ನಾರಾಯಣ ದೇವಸ್ಥಾನದೊಂದಿಗೆ ಸೂರ್ಯಭಾನುವಿನ ಸಂಬಂಧವಿದೆ. ಆತ ಪೆಡ್ಣೆಯ ಹರ್ವಾಳ್ ಎಂಬಲ್ಲಿನ ಗುಹೆಯೊಂದರಲ್ಲಿ, ಪರಶುರಾಮ ತನ್ನ ಮಹಾ ಯಜ್ಞದ ವೇಳೆಗೆ ಪೂಜಿಸಿದ್ದುದೆನ್ನಲಾಗುವ, ನಾರಾಯಣನ ಕರಿಮರಳಿನ ವಿಗ್ರಹವನ್ನು ಸ್ಥಾಪಿಸಿದ.

೪. ಗೋವಾದಿಂದ ವಲಸೆ ಹೋದವರಲ್ಲಿ ಶೆಣ್ವಿಯರ ಎಷ್ಟೊಂದೋ ಕುಟುಂಬಗಳಿದ್ದವು. ಅವರಲ್ಲಿನ ಪೀತಾಂಬರ ಶೆಣ್ವಿಗುಲ್ಗುಲೆ ಮತ್ತು ಗೋವಿಂದ ಶೆಣ್ವಿ ಇವರು ಶಿವಾಜಿ ಸಾವಂತವಾಡಿಯನ್ನು ಗೆದ್ದುಕೊಳ್ಳುವಲ್ಲಿ ಪ್ರಮುಖ ಪಾತ್ರವಹಿಸಿದ್ದರು.

೫. ಕೊಂಕಣಾಖ್ಯಾನದ ಮೇರೆಗೆ, ವಿಜಯನಗರದ ರಾಜ್ಯಾಡಳಿತೆಯ ದಿನಗಳಲ್ಲಿ ರಾಜಾಪುರಕ್ಕೆ ತೆರಳಿದ್ದ ಐದು-ಏಳು ಗೋತ್ರಗಳ ರಾಜಾಪುರಿಗಳು ಶೆಣ್ವಿಗಳಾಗಿದ್ದರು; ಉದ್ಯೋಗವನ್ನರಸಿಹೋದ ಅವರು ಕುಲಕರ್ಣಿಗಳ ಹುದ್ದೆ ಗಳಿಸಿಕೊಂಡರು. ಗೋವಾದೊಂದಿಗಿನ ಸಂಬಂಧ ಕಳೆದುಕೊಂಡಿದ್ದ ಅವರು ತಮ್ಮ ಕುಲದೇವರನ್ನೂ ಮರೆತಿದ್ದರು. ಅವರು ರಾಜಾಪುರದಲ್ಲಿನ ಮಂಗಲೇಶ್ವರನನ್ನು ತಮ್ಮ ಕುಲದೇವರೆಂದು ನಂಬುತ್ತಾರೆ.

ತಮ್ಮ ಪರಿಸರದಲ್ಲಿನ ಸಾರಸ್ವತರ ನಡುವೆ ಅವರು ಬೇರೆಯೇ ಆದ ಸಮಾಜವೊಂದರಂತೆ ಬಾಳುತ್ತಿದ್ದಾರೆ.

೬). ಕೊಂಕಣಾಖ್ಯಾನದ ಮೇರೆಗೆ ತಮ್ಮ ಕುಲದೇವರ ಬಗೆಗೆ ಏನೊಂದನ್ನೂ ಅರಿಯದಿದ್ದ, ಹೊಲಸು ಬಾಳು ಬದುಕುತ್ತಿದ್ದ ಭಲವಲಿಕರರು ಸಮಾಜದ ಇನ್ನುಳಿದವರಿಂದ ಪ್ರತ್ಯೇಕಿಸಲ್ಪಟ್ಟರು.

೭). ಕೂಳೂರಿನಲ್ಲಿನ ಸಮಾಜ ವೈಷ್ಣವರ ನಾಲ್ಕು ವಂಶಜರನ್ನೊಳಗೂಡಿದೆ. ಶ್ರೀಮಂತನಿದ್ದ ಜೈನ ಬಲ್ಲಾಳನೊಬ್ಬ ಇವರಲ್ಲಿನ ಒಬ್ಬನ ಕನ್ಯೆಯನ್ನು ಪ್ರೀತಿಸಿ ತನ್ನ ಪತ್ನಿಯಾಗಿ ಬಾಳುವರೆ ಮನವೊಲಿಸಿಕೊಂಡ. ಆಕೆ ತೀರಿಕೊಂಡಾಗ ಆತ ಅಂತ್ಯಕ್ರಿಯೆಗಾಗಿ ಕೂಳೂರಿನ ಸಾರಸ್ವತರನ್ನು ಒತ್ತರಿಸಿದ. ಈ ಕುಟುಂಬಗಳ ಸದಸ್ಯರು ಜಾತಿಯಿಂದ ಹೊರಕ್ಕೆ ಹಾಕಲ್ಪಟ್ಟರು. ಮುಂದೊಂದು ದಿನ ಈ ನಾಲ್ಕರಲ್ಲಿ ಒಂದು ಕುಟುಂಬವನ್ನು ಮರಳಿ ಸಮಾಜದೊಂದಿಗೆ ಸೇರಿಸಿಕೊಳ್ಳಲಾಯಿತು. ಇನ್ನುಳಿದ ಮೂರು ಕುಟುಂಬಗಳ ವಂಶಜರು ಕೊಂಕಣಸ್ಥರೆಂದು ಪರಿಚಿತರಾಗಿದ್ದಾರೆ.

ಇವರ ಹೊರತು ಕಿರವಂತರು ಮತ್ತು ಮಾಧ್ಯೇಯರೂ ಇದ್ದಾರೆ.

ಕಿರವಂತರು ಮೂಲತಃ ಸಾರಸ್ವತರಿದ್ದರು. ಅವರ ಕುಲನಾಮ ಕ್ರಮವಂತ, ಫಾಯಿಸಾಸ್, ಭಟ್, ಜೋಶಿ ಮತ್ತು ಸಿಮ್ಜಿ ಇತ್ತು. ಅವರು ಗೋವಾದ ಅಂತ್ರುಜ್ ಮಹಾಲಿನಲ್ಲಿ ವಾಸಿಸುತ್ತಿದ್ದಾರೆ. ಕೆಲವೊಬ್ಬರು ಅಲ್ಲಿನ ಸ್ಮಾರ್ತ ಸಾರಸ್ವತ ದೇವಸ್ಥಾನಗಳಲ್ಲಿ ಇಂದಿಗೂ ಕೆಲಸ ಮಾಡುತ್ತಿದ್ದಾರೆ. ಅವರ ನಡೆ ನುಡಿಗಳು ಸಾರಸ್ವತರಂತಿವೆ. ಅವರ ಗಂಡಸರು ಮತ್ತು ಹೆಂಗಸರು ಸಾರಸ್ವತರಂತೆ ಉಡುಗೆ ಧರಿಸುತ್ತಾರೆ. ಅವರು ಒಳ್ಳೆಯ ಕೊಂಕಣಿ ಮಾತನಾಡುತ್ತಾರೆ. ಅವರಲ್ಲಿನ ಕೆಲವರು ಕೊಲಾಬಾ, ರತ್ನಾಗಿರಿ ಜಿಲ್ಲೆ ಮತ್ತು ಸಾವಂತವಾಡಿಯಲ್ಲಿ ವಾಸಮಾಡುತ್ತಿದ್ದಾರೆ. ಗೋವಾ, ರತ್ನಾಗಿರಿ ಮತ್ತು ಸಾವಂತವಾಡಿಗಳಲ್ಲಿ ಅವರು 'ಕರ್ಹಾಡ'ರೊಂದಿಗೆ ವಿಲೀನಗೊಂಡಿರುತ್ತಾರೆ. ಕೊಲಾಬಾ ಜಿಲ್ಲೆಯಲ್ಲಿ ನೆಲೆಸಿದವರು ವಿಶಿಷ್ಟ ಸಮಾಜವೊಂದಾಗಿ ರೂಪುಗೊಂಡಿದ್ದುದನ್ನು ಕಾಣಬಹುದು. ಅವರು ಸರ್ವಸಾಮಾನ್ಯವಾಗಿ ದೇಶಸ್ಥ ಬ್ರಾಹ್ಮಣರೊಂದಿಗೆ, ಕೆಲವೊಮ್ಮೆ ಚಿತ್ಪಾವನರೊಂದಿಗೂ ವೈವಾಹಿಕ ಸಂಬಂಧ ಬೆಳೆಸುತ್ತಾರೆ.

ಮಾಧ್ಯೆ ಇವರು ಮೂಲತಃ ಸಾರಸ್ವತರು. ಕೊಂಕಣಾಖ್ಯಾನದ ಮೇರೆಗೆ ಅವರು ಅಂತ್ರುಜ್ ಮಹಾಲಿನಲ್ಲಿನ ನಾಲ್ಕು ಹಳ್ಳಿಗಳು ಕವಳೆ, ಪ್ರಿಯೋಳ್, ಕೇರಿ ಮತ್ತು ಖಂಡೆಪಾರ್ ಇವುಗಳಿಗೆ ಸೇರಿದವರಿದ್ದರು. ಕವಳೆ ಸಮೀಪದ ಅಗಪುರದ ನಿವಾಸಿಗಳು ಗೋವಿಂದ ದೇವ ತಮ್ಮ ಮತ್ತು ವೈಷ್ಣವ ಸಾರಸ್ವತರ ಪೂರ್ವಜನಿದ್ದನೆಂದು ನುಡಿಯುತ್ತಾರೆ. ಅವರು ಕೊಂಕಣಿ ನುಡಿಯುತ್ತಿದ್ದು ಮ್ಹಾಳಸಾ, ಲಕ್ಷ್ಮಿ ಮತ್ತು ವಿಜಯದುರ್ಗಾ ಇವರನ್ನು ಪೂಜಿಸುತ್ತಾರೆ. ಅವರು ಈಗ ಕರ್ಹಾಡ ಬ್ರಾಹ್ಮಣ ಸಮಾಜದೊಂದಿಗೆ ವಿಲೀನಗೊಂಡಿರುತ್ತಾರೆ.

ಅಧ್ಯಾಯ ೧೫

ಸಾರಸ್ವತರ ಕುಲನಾಮಗಳು

ಕನ್ನಡ ಭಾಷೆಯ ವರ್ಚಸ್ಸಿನ ಪರಿಣಾಮರೂಪ ಗೋವಾದ ಸಾರಸ್ವತರಲ್ಲಿನ ಗಂಡಸರ ಹೆಸರುಗಳು ಅಯ್ಯ, ಅಪ್ಪ , ಅಪ್ಪಯ್ಯ, ಅಣ್ಣ ,ಅಣ್ಣಯ್ಯ ಮತ್ತು ಹೆಂಗಸರ ಹೆಸರುಗಳು ಅಕ್ಕ, ಅಪ್ಪ, ಇತ್ಯಾದಿಗಳೊಂದಿಗೆ ಕೊನೆಗಾಣುತ್ತಿದ್ದವು. ಕುಲನಾಮ ಹೆಗ್ಡೆ (ಹೆಗ್ಗಡೆ) ಯ ವ್ಯುತ್ಪತ್ತಿ ಕನ್ನಡದಿಂದಾಗಿದೆ.

'ಕೊಂಕಣಾಖ್ಯಾನ'ದ ಲೇಖಕರು 'ಪೈ' ಅಕ್ಷರ ಕನ್ನಡದ 'ಅಪ್ಪಯ್ಯ'ದಿಂದ ಉತ್ಪನ್ನವಾಯಿತೆಂದು ಭಾವಿಸುತ್ತಾರೆ. ಶ್ರೀ ಎಸ್. ಎಸ್. ತಾಲ್ಮಕಿಯವರು[1] ಇದಕ್ಕೆ ತನ್ನ ಸಮ್ಮತಿ ವ್ಯಕ್ತಪಡಿಸುತ್ತಾರೆ . ಶ್ರೀ ಎಮ್. ಗೋವಿಂದ ಪೈಗಳು ಇದು ಸಂಸ್ಕೃತದ 'ಪತಿ'ಯಿಂದ ಉತ್ಪನ್ನವಾಯಿತೆನ್ನುತ್ತಾರೆ. ಶ್ರೀ ವಾಮನ ರಘುನಾಥ ವರ್ದೆ ವಾಲವಲಿಕರರು ಈ ವಾದವನ್ನು ಅಂಗೀಕರಿಸಿರುತ್ತಾರೆ. ನಾಲ್ಕನೆಯ ಶತಮಾನದಲ್ಲಿ ಗೋವಾವನ್ನು ಕನ್ನಡಿಗ ಅರಸರು ಆಳಿಕೊಂಡಿದ್ದರು. ಕುಲನಾಮ 'ಪೈ' ಇದಕ್ಕೂ ಮುನ್ನ ಅಲ್ಲಿ ಬಳಕೆಯಲ್ಲಿತ್ತೆಂದು ಅವರು ನುಡಿಯುತ್ತಾರೆ. ಮೊದಲು ಸಾರಸ್ವತರು ತಂದೆಯನ್ನು 'ಪೈ' ಎಂದೂ, ಸ್ತ್ರೀಯನ್ನು 'ಮಾಯಿ' (ತಾಯಿ) ಎಂದಾಗಿಯೂ ಕರೆಯುತ್ತಿದ್ದರು. ಮುಂದೆ ಅನ್ಯ ಕುಲನಾಮಗಳು ತಲೆಯೆತ್ತಿಕೊಂಡಾಗ ಜೋಡು ಕುಲನಾಮ ರೂಢಿಗೆ ಬಂದಿತು. ಉದಾ : ಪೈ - ಪ್ರಭು, ಪೈ-ಕಾಮತ್.

ಕುಲನಾಮ ಪೈ - ಬುಡ್ಕುಲೆ, ಪೈ - ಅಂಗಳೆ, ಪೈ-ಪಾಣಂದಿಕರ್, ಪೈ-ಕಾಕಡೆ, ಪೈ-ಕಾಣೆ, ಪೈ-ರಾಯಘುರ್ಕರ್, ಪೈ-ಧುಮ್ಮಟ್, ಪೈ-ಭಾಲೆ, ಪೈ-ಥೋಟೆ, ಪೈ-ಲೊಟ್ಲಿಕರ್, ಪೈ-ಸಾಂಭಾರೆ, ಇವು ಗೋವಾದಲ್ಲಿನ ಸಾಮಾನ್ಯ ಕುಲನಾಮಗಳು.

ಶೆಣೈ ಮತ್ತು ಅದರ ಕನ್ನಡ ರೂಪು ಶಾನ್ಭಾಗ್, ಇವೆರಡು ಕೆನರಾ ಮತ್ತು ಕೇರಳಗಳಲ್ಲಷ್ಟೆ ಬಳಕೆಯಲ್ಲಿವೆಯಾದರೂ ಗೋವಾದಲ್ಲಿನ ಸಮಸ್ತ ಸಾರಸ್ವತರು ತಮ್ಮನ್ನು ಶೆಣೈ ಎಂದು ಕರೆದುಕೊಳ್ಳುತ್ತಾರೆ. ಮೊದಲು ಕುಲನಾಮವನ್ನು ಹೆಸರಿನ ಮುಂಭಾಗಕ್ಕೆ ಜೋಡಿಸಲಾಗುತ್ತಿತ್ತು. ಆದರೆ ಹದಿನಾಲ್ಕನೆಯ ಶತಮಾನದ ನಂತರ ಇದನ್ನು ಹೆಸರಿನ ಹಿಂಭಾಗಕ್ಕೆ ಜೋಡಿಸತೊಡಗಿದರು.[2]

ಕೆಲವು ಕುಲನಾಮಗಳು ವ್ಯವಸಾಯ, ಹುದ್ದೆಗಳಿಂದುದ್ಭೂತವಾದವು. ಉದಾ: ಕಾಮತ್, ಜಮೀನುದಾರ (ಬೇಸಾಯಗಾರ); ಕುಂಡವ, ಧಾನ್ಯ ಸಂಗ್ರಹಿಸುವಾತ; ವಾಂಗೆ, 'ಬಿಲ್ಲಿ'ನ ಮೊಬಲಗನ್ನು ವಸೂಲಿ ಮಾಡುವಾತ; ಪಡಿಯಾರ್,(ಪ್ರತಿಹಾರ) ಅರಮನೆಯ ಪಾರುಪತ್ಯಗಾರ; ನಾಯಕ್, ಸೇನಾಧಿಕಾರಿ; ಬಾಳಿಗ, ದೃಢಕಾಯಕೊಂಡಾತ, ಬಹುತೇಕ ಸೈನಿಕ; ಭಂಡಾರಿ, ಖಜಾನೆಯ ಕಾವಲುಗಾರ; ಕೇಣಿ ಅಥವಾ ಕಿಣಿ (ಕನ್ನಡದ ಖಾನ್ನಾಸಿ) ಖಜಾನ್ಚಿ; ಮಹಾಲೆ ಅಥವಾ ಮಲ್ಯ, ಮಹಾಲ್ (ತಾಲೂಕಿನ ಉಪವಿಭಾಗ) ನ ಅಧಿಕಾರಿ ಮತ್ತು ಪ್ರಭು, ಗ್ರಾಮದ ಮುಖ್ಯಾಧಿಕಾರಿ.

ದಳ್ವಿ, ಡಣಾಯತ್ (ದಂಡನಾಯಕ) ರಾಜಾಧ್ಯಕ್ಷ, ದೇಸಾಯಿ, ದೇಶ್‌ಪಾಂಡೆ, ಫಡ್ನಿಸ್, ಸಬ್ನಿಸ್, ಚಿಟ್ನಿಸ್, ಪಾಗ್ನಿಸ್ ಈ ಕುಲ ನಾಮಗಳೂ ಹುದ್ದೆಯಿಂದ ಉದ್ಭೂತವಾದಂತಹವು.

ಭಟ್, ಜೋಯಿಷಿ, (ಜೋತಿಷಿ), ಆಚಾರ್ಯ, ಪುರಾಣಿಕ ಮುಂತಾದವು ವೃತ್ತಿಯಿಂದುದ್ಭೂತವಾದಂತಹವು.

ಈ ಕೆಳಗಣ ಕುಲನಾಮಗಳು ಮಹಾರಾಷ್ಟ್ರದ ಚಾಲುಕ್ಯರ ಮತ್ತು ಗೋವಾದ ಕದಂಬರ ಕಾಲದಲ್ಲಿ ಕೊಂಡ ಹುದ್ದೆಗಳಿಂದ ಹುಟ್ಟಿದ್ದುವಾಗಿವೆ. ಕುಲಕರ್ಣಿ, ಲೆಕ್ಕಿಗ ಅಥವಾ ಗ್ರಾಮಸ್ಥರ ಲೇವಾದೇವಿಯ ಲೆಕ್ಕ ಇಡುವಾತ; ಇದು ಗೋವಾದಲ್ಲಿ ದೀರ್ಘಕಾಲ. ಅಸ್ತಿತ್ವಕೊಂಡ ಹುದ್ದೆಯೊಂದಾಗಿದ್ದು ಒಂದು ಕಾಲದಲ್ಲಿ ದೊಡ್ಡ ಗ್ರಾಮಗಳಲ್ಲೂ ಕಾಣಬರುತ್ತಿತ್ತು. ನಾಡಕರ್ಣಿ, ಹಲವೊಂದು ಗ್ರಾಮಗಳಿಂದೊಡಗೂಡಿದ್ದ ವಿಭಾಗವೊಂದರ ಲೇವಾದೇವಿಯ ಲೆಕ್ಕವಿಡುವಾತನಿದ್ದ. ಕನ್ನಡದಲ್ಲಿನ 'ಕರಣಿಕ'ದ ಮೊಟಕುರೂಪು 'ಕರ್ಣಿ'ಯಿಂದ ಉತ್ಪನ್ನವಾಗಿದೆ. ಈ ಶಬ್ದ ಬರಹಗಾರನೆಂಬ ಅರ್ಥ ಸೂಚಿಸುತ್ತದೆ. ಕುಲನಾಮ ಕುಲಕರ್ಣಿ, ಗೋವಾದಲ್ಲಿನ ಚಾಲುಕ್ಯರ ರಾಜ್ಯಾಡಳಿತೆಯ ಕಾಲದಲ್ಲಿ ಪ್ರಚಾರದಲ್ಲಿದ್ದು ಅದು ಸಾರಸ್ವತರಲ್ಲಷ್ಟೆ ಕಾಣಬರುತ್ತಿತ್ತು. ಕೆನರಾದಲ್ಲಿ ಬಳಸಲಾಗುತ್ತಿದ್ದ, ಸಮಾನ ಅರ್ಥದ ಶಬ್ದ ನಾಡಗೌಡ ಅಥವಾ ನಾಡೀಯವಿತ್ತು. ಗೋವಾದ ಕುಲಕರ್ಣಿಗಳು ತಮ್ಮ ಕಡತಗಳನ್ನು ಮರಾಠಿಯಲ್ಲಿ ಅಥವಾ ಕೊಂಕಣಿ ಭಾಷೆಯಲ್ಲಿ ಕನ್ನಡದ ಲಿಪಿ ಬಳಸಿ ಬರೆಯುತ್ತಿದ್ದರು. ಇದರ ಮಾದರಿಯನ್ನು ಪ್ರಿಯೋಳ್‌ನಲ್ಲಿನ ಮಂಗೇಶ ದೇವಸ್ಥಾನದ ಹಳೆಯ ಹೊತ್ತಗೆಗಳಲ್ಲಿ ಕಾಣಬಹುದು.

ಶೆಣ್ವಿಯರಲ್ಲಿ ಈ ಮುಂದಣ ಕುಲನಾಮಗಳು ಕಾಣಬರುತ್ತವೆ :ಆ ಚಮನಿ ಅಚ್ಣಾಮೆ, ಅಗ್ನಿ, ಅಂಬೆ, ಅಟವಳ್, ಬರಡ, ಭಾಲೆ, ಭೆಂಡೆ, ಭಿಸೆ, ಬಿಳು, ಬೊನಸೆ, ಬ್ರಹ್ಮೆ, ಬುಡ್ಬುಡೆ, ಚಿಟ್ನಿಸ್, ಛುಬೆ, ಡಾಂಗಿ, ದಾನಿ, ಧಾಮೆ, ಧುಣ್ಕಟ್, ದೋಲಕ್, ದೊಂಡೆ, ದುಭಾಷಿ, ಗಾಡೆ, ಗಾಯ್ತೊಂಡೆ, ಘಾಬರ್, ಘೋಡೆ, ಗಿಂಡೆ, ಗೋಡಂಬೆ, ಗುಲ್ಗುಲೆ, ಕಾಕುಡೆ, ಕಾಣೆ, ಕನವಿಂದೆ, ಕಬಾಡಿ, ಕಾಕಡಿ, ಕಂಟಕಿ, ಕಾಪಾಡಿ, ಕಾವಡ, ಕರ್ಣಿಕ, ಕೇಂಕರೆ, ಖಡ್ಯೆ, ಖೋಟೆ, ಕೀರ್, ಕೊಳ್ಬುಳೆ, ಕೊಟ್ನಿಸ್, ಲಾಡ್, ಮಹಾಜನ, ಮಹಾತ್ಮ, ಮಣಗೆ, ಮಜುಮ್ದಾರ್, ಮೋನೆ, ಮೋರೆ, ನಾಭರ್, ನಿರಂಜನ್, ಪಂಡಿತ್, ಪಥಕಿ, ಫಡ್ನಿಸ್, ಪಿಂಗಳೆ, ಪಿಂಗೆ, ರಾಮಾಯಣೆ, ರಣಶೂರ್, ರೇಗೆ, ಸಾಕರ್ಖಂಡಿ, ಸಾಂಭಾರಿ, ಸಾಂಝುಗಿರೆ, ಸಿನಾರಿ, ಶೆಂಡಿ, ಸುರಣ, ಸುರ್ಸುರೆ, ಟಾಕಿ, ತೆಲಂಗ್, ವರ್ದೆ, ವರ್ತಿ, ವೇಲಂಗ್, ವಾಘ್, ವಾಗ್ಳೆ, ಯಾರ್ಡಿ, ಝೂಂರ್ಝ್ಲು ಇತ್ಯಾದಿ. ಶೆಣ್ವಿಯರಲ್ಲಿನ ಎಷ್ಟೋಂದೊ ಮಂದಿ ತಮ್ಮ ಕುಲನಾಮಗಳನ್ನು ತ್ಯಜಿಸಿ ಅವುಗಳೆಡೆಯಲ್ಲಿ ತಾವು ವಾಸ ಮಾಡುವ ಗ್ರಾಮಗಳ ಹೆಸರನ್ನಿಟ್ಟುಕೊಂಡಿರುತ್ತಾರೆ.

ಈ ಮುಂದಣ ಕುಲನಾಮಗಳು ಭಲವಲಿಕರರಲ್ಲಿ ಕಾಣಬಂದಿವೆ: ಅರಸ್, ಬನವಲೆಕರ್, ಫರ್ಮೋಡೆ, ಹಳ್ದವಣೆಕರ್, ಕೈವಲ್ಕರ್, ಕಿನ್ರೆ, ರಾಯ್‌ಕರ್, ಸಾಕಳ್‌ಕರ್, ಶಿವ್ದೆ, ತೆಂಡುಲ್ಕರ್ ಇತ್ಯಾದಿ [2]

ಚಿತ್ರಾಪುರ ಸಾರಸ್ವತರಲ್ಲಿನ ಹೆಚ್ಚಿನವರು ತಮ್ಮ ಮೊದಲ ಕುಲನಾಮಗಳನ್ನು ಮರೆತಿದ್ದು ಶೆಣ್ವಿಯವರಂತೆ ತಾವು ವಾಸ ಮಾಡುತ್ತಿದ್ದ ಗ್ರಾಮಗಳ ಹೆಸರುಗಳನ್ನು ಇಟ್ಟುಕೊಂಡಿರುತ್ತಾರೆ. ಕೆಲವೊಂದು ಕುಟುಂಬಗಳ ಮೊದಲ ಕುಲನಾಮಗಳು ಈ ಮುಂದಿನಂತಿವೆ.”

೧)	ಕೌಂಡಿನ್ಯಗೋತ್ರದ ಚಿಕ್ಕರಮನೆ, ತೊಂಬಟ್, ಮುಂಡ್ಕೂರ್, ಕುಮ್ಟ, ಉಗ್ರಾಣ ಇತ್ಯಾದಿ	ವಾಗ್ಲೆ
೨)	ಕೌಂಡಿನ್ಯ ಗೋತ್ರದ ನಾಡಕರ್ಣಿ, ಚಂದಾವರ್‌ಕರ್ ಮತ್ತು ಗೋಕರ್ಣ	ರಾಜಾಧ್ಯಕ್ಷ
೩)	ಕೌಂಡಿನ್ಯ ಗೋತ್ರದ ಆರುಶಾಖೆಗಳೊಂದಿಗಿನ ಗುಲ್ವಾಡಿ	ದಳ್ವಿ
೪)	ಕೌಂಡಿನ್ಯ ಗೋತ್ರದ ಅಂದಾರ್, ಕಾಲ್ಬಾಗ್ ಮತ್ತು ಮುಲ್ಲರ್ಪಟ್ನ	ಪಾಲೆಕರ
೫)	ವತ್ಸಗೋತ್ರದ ಮಟಿಮನೆ, ಸಶಿಹಿತ್ತಲ್, ಕೊಂಬ್ರಬೈಲ್ ಮತ್ತು ಬಿಲವಳ್ಳಿ	ವರ್ದೆ
೬)	ಭರದ್ವಾಜಗೋತ್ರದ ಬೆನೆಗಲ್, ಬಿಟ್ರಪೇಟ್, ಗಂಗೊಳ್ಳಿ, ಕಲ್ಲಿಯಾಣ್ಪುರ್ ಮತ್ತು ನಾಯಂಪಳ್ಳಿ	ಪಾಣಂದಿಕರ್
೭)	ಕೌಶಿಕ ಗೋತ್ರದ ಎಂಟು ಶಾಖೆಗಳೊಂದಿಗಿನ ಮಂಕಿ, ಕೊಪ್ಪಿಕರ್, ಶಿರಾಲಿ ಸ್ಥಳೀಕರ್, ನಾಗರಕಟ್ಟೆ	ವೈದ್ಯ

ಚಿಕ್ಕರಸ್ಮನೆ, ಮನೆವಾರ್ತೆ, ಉಗ್ರಾಣ, ಲಾಭಾದಾಯ, ಬಿಳಿಮ್ಯಾಲ್, ನಾಗರಕಟ್ಟೆ, ಕಡಿಯೆ ಮತ್ತು ವೀಣೆ ಮುಂತಾದ ಕುಲನಾಮಗಳು ನಗರ ಅರಸುಗಳ ರಾಜ್ಯಾಡಳಿತೆಯ ದಿನಗಳಲ್ಲಿ ಅವರು ಕೊಂಡಿದ್ದ ವೃತ್ತಿ ಅಥವಾ ಹುದ್ದೆಗಳಿಂದುದ್ಭೂತವಾದಂತಹವಾಗಿವೆ. ಚಿತ್ರಾಪುರ ಸಾರಸ್ವತರಲ್ಲಿನ ಕೌಶಿಕ, ಭರದ್ವಾಜ, ಗೌತಮ ಮತ್ತು ವತ್ಸ ಮುಂತಾದ ಕುಲನಾಮಗಳು ಅವರ ಗೋತ್ರಗಳಿಂದ ಉದ್ಭವಿಸಿವೆ.

ಚಿತ್ರಾಪುರ ಸಾರಸ್ವತರಲ್ಲಿ ಅವರು ವಾಸಮಾಡುತ್ತಿದ್ದ ಗ್ರಾಮಗಳ ಹೆಸರನ್ನು ಕೊಂಡ ಅನೇಕ ಕುಲನಾಮಗಳಿವೆ. ಉದಾ : ವತ್ಸ ಗೋತ್ರದ ಬೈಂದೂರು ಕುಟುಂಬ ವಿಶಿಷ್ಟ ಕುಲನಾಮಗಳನ್ನು ಕೊಂಡ ಎಂಟು ಶಾಖೆಗಳಿಂದೊಳಗೂಡಿದೆ. ಕೌಂಡಿನ್ಯಗೋತ್ರದ ಗುಲ್ವಾಡಿ ಆರು ಶಾಖೆಗಳು, ಕೌಶಿಕ ಗೋತ್ರದ ಮಂಕಿ ಎಂಟು ಶಾಖೆಗಳು, ವತ್ಸ ಗೋತ್ರದ ಹಟ್ಟಿಯಂಗಡಿಕಾರರು ಹತ್ತು ಶಾಖೆಗಳು ಮತ್ತು ಅತ್ರಿ ಗೋತ್ರದ ಖಂಬದ ಕೋಣೆ, ವಿಭಿನ್ನ ಕುಲನಾಮಗಳ ಹನ್ನೊಂದು ಶಾಖೆಗಳು.

ದಕ್ಷಿಣ ಕನ್ನಡದ ಮಂಗಳೂರು ಕ್ಯಾಥೋಲಿಕರಲ್ಲಿ ಧರ್ಮಾಂತರಗೊಂಡ ಬ್ರಾಹ್ಮಣರ ಸಮಾವೇಶವಿದ್ದು ಅದರ ಪ್ರಮಾಣ ದೊಡ್ಡದಿದೆ. ಈ 'ಬಾಮಣ' ಕ್ರಿಸ್ತೀಯರು ತಮ್ಮ ಮೂಲದ ಕುರಿತು ಹೆಮ್ಮೆ ಪಡುತ್ತಾರೆ [೫]. ಫೆಲಿಕ್ಸ್ ಪೈ, ಥೋಮಸ್ ಕಾಮತ್, ಜ್ಯಾಕೀಸ್

ಭಟ್ ಇವು ಸರ್ವಸಾಮಾನ್ಯವಾಗಿ ಬಳಕೆಯಲ್ಲಿದ್ದ ಹೆಸರುಗಳು. ಕೊಹಿಲೋ, ಲೋಬೋ, ಡಿಸೋಝಾ ಇವರು ತಮ್ಮ ಮೂಲನಾಮ ಪ್ರಭು ಇದ್ದುದನ್ನು ಇಂದಿಗೂ ಮರೆತಿಲ್ಲ. ಆಲ್ಬುಕರ್ಕ್‌ರು ಬೋಳಾರಿನ ಪೈಗಳ ಕುಟುಂಬಕ್ಕೆ ಸೇರಿದವರು. ವಾಸ್‌ನಾಯಿಕ್ ಸುಜೀರ್ ನಾಯಕರ ಮನೆತನಕ್ಕೆ, ಅರ್ಹಾನಾ ಶೆಣೈಯವರ ಕುಟುಂಬಕ್ಕೆ, ತಿರುಚಿರ ಪಳ್ಳಿಯ ರೈಟ್ ರೆವರೆಂಡ್ ಫಾದರ್ ಜ್ಯಾಕಬ್‌ಮೆಂಡೊನ್ಸಾ ಕಾಮತರ ಕುಟುಂಬಕ್ಕೆ ಸಂಬಂಧಿಸಿದ್ದವರು.

ಸಂದರ್ಭಸೂಚಿ

೧. ಶ್ರೀ ಎಸ್. ಎಸ್. ತಾಲ್ಮಕಿಯವರು ತನ್ನ ಅಭಿಪ್ರಾಯದ ಸಮರ್ಥನೆಗೆ ಗೋವಾದಲ್ಲಿನ ಸಾರಸ್ವತರನ್ನು ಬಿಟ್ಟು ಅನ್ಯ ಬ್ರಾಹ್ಮಣರ ಹೆಸರುಗಳೊಂದಿಗಷ್ಟೆ ನಾಮಧೇಯ 'ಪೈ' ಮತ್ತು ಅಪ್ಪಯ್ಯ ಜೋಡಿಸಲಾಗುತ್ತಿತ್ತು ಎನ್ನುತ್ತಾರೆ. ಅವರು ಅಹಮ್ಮದ್ ನಗರ ಜಿಲ್ಲೆಯ ಸಂಗಮ್ನೇರ್‌ನಲ್ಲಿನ ಅರ್ಜುನೊಂದಿಕ ಗ್ರಾಮವನ್ನು ಯಾದವರ ಎರಡನೆಯ ಭಿಲ್ಲಣ ಇಪ್ಪತ್ತೊಂದು ಬ್ರಾಹ್ಮಣರಿಗೆ ದಾನವಾಗಿತ್ತುದರ ಕುರಿತಾದ ೧೦೦೦ದಲ್ಲಿನ ತಾಮ್ರ ಶಾಸನದ ಉಲ್ಲೇಖ ಮಾಡುತ್ತಾರೆ. ದಾನ ಪಡೆದವರಲ್ಲೊಬ್ಬಾತ ಕರ್ಹಾಡಿನ ಬ್ರಾಹ್ಮಣನಿರಬೇಕೆಂದೂ, ಪಯ್ಯ, ಪೈ ನಾಮಧೇಯದೊಂದಿಗೆ ಕೊನೆಗೊಳ್ಳುವ ಹೆಸರುಕೊಂಡ ಬ್ರಾಹ್ಮಣರು ಮಾಧ್ಯಂದಿನ ಶಾಖೆಗೆ ಸಂಬಂಧಿಸಿದ್ದವರೆಂದೂ ಅವರು ನುಡಿಯುತ್ತಾರೆ. ೧೦೦೦ದ ಹೊತ್ತಿಗೆ ಆ ಭಾಗದಲ್ಲಿ ಚಿರಕಾಲ ನೆಲಸಿದ್ದಿರಬಹುದಾದ ಸಾರಸ್ವತರ ಕುರುಹುಗಳು ಕಾಣಸಿಗದಿದ್ದ ನಿಮಿತ್ತ ಮತ್ತು ಇದ್ದವರಲ್ಲಿ ಯಾರೊಬ್ಬರೂ ಶುಕ್ಲಯಜುರ್ವೇದೀಯ ಮಾಧ್ಯಂದಿನ ಶಾಖೆಗೆ ಸಂಬಂಧಿಸಿರದಿದ್ದ ಕಾರಣ ಸಂಭಾವ್ಯತ ಅದು ನಾಸಿಕದ ಮಾಧ್ಯಂದಿನ ಬ್ರಾಹ್ಮಣರಿಗೆ ಸಂಬಂಧಿಸಿದ್ದಿರಬೇಕು. 'ಸಾರಸ್ವತ್ ಫ್ಯಾಮಿಲೀಸ್' ಭಾಗ ೨, ಪುಠ ಸಂಖ್ಯೆ ೨೬-೨೭) ದಾನ ಪಡೆದವರಲ್ಲಿನ ಇನ್ನೊಬ್ಬ ವ್ಯಕ್ತಿ, ಆಂಧ್ರದ ಪಮ್ಮಣ್ಣಯ್ಯ, ನಿಸ್ಸಂದೇಹ ಆಂಧ್ರದ (ತೆಲುಗು) ಬ್ರಾಹ್ಮಣನಿದ್ದಿರಬೇಕು.

ಕ್ರಿ. ಶ. ನಾಲ್ಕನೆಯ ಶತಮಾನದಲ್ಲಿನ ಲೋಣ್ಯಾದ ಕ್ರಮಾಂಕ ಎರಡನೆಯ ವಿಹಾರದೊಳಗಣ ಬುದ್ಧನ ಮೂರ್ತಿಯ ಮುಂಭಾಗದಲ್ಲಿ ಕೊರೆಯಲಾಗಿದ್ದ ಹಲವೊಬ್ಬ ಉಪಾಸಕರ ಹೆಸರುಗಳಲ್ಲಿ ಚೆಲ್ಲದೇವ ಮತ್ತು ಬಾಪು ಪೈಯವರ ಹೆಸರುಗಳೂ ಒಳಗೂಡಿವೆಯೆಂದು ಶ್ರೀ ವಾಮನ ರಘುನಾಥ ವರ್ದೆ ವಾಲಾವಲಕರರು ಸೂಚಿಸುತ್ತಾರೆ. ಕರ್ಹಾಡನ ಉಲ್ಲೇಖ, ಸತಾರಾದ ದಕ್ಷಿಣದಲ್ಲಿನ ಕೊಯ್ನಾ ಮತ್ತು ಕೃಷ್ಣಾ ನದಿಗಳ ಸಂಗಮದೆಡೆಯಲ್ಲಿನ ಪ್ರದೇಶಕ್ಕೆ ಸಂಬಂಧಿಸಿರಬೇಕಾಗಿಯೂ ಅವರು ಭಾವಿಸುತ್ತಾರೆ. ಕರ್ಹಾಡ್ ಕುಲನಾಮವಿರದೆ ಅದು ಸತಾರಾ ಜಿಲ್ಲೆಯಲ್ಲಿನ ತಾಲೂಕು ಮುಖ್ಯಾಲಯದ ಹೆಸರಾಗಿದೆ. ಅವರೆನ್ನುವಂತೆ ಗೋಮಾಂತಕದ ಸಾರಸ್ವತರು ಸಂಸ್ಕೃತದಲ್ಲಿ ಪಾಂಡಿತ್ಯಕೊಂಡವರಿದ್ದರು; ವೈದಿಕ ವೃತ್ತಿಗಾಗಿ ನಾಸಿಕಕ್ಕೆ ತೆರಳಿದ್ದ ಅವರಲ್ಲಿನ ಕೆಲವರು ಸ್ಥಳೀಯ ಬ್ರಾಹ್ಮಣ ಸಮಾಜದೊಂದಿಗೆ ವಿಲೀನಗೊಂಡರು.

೨. 'ಸೆಣವೈ' ಶಬ್ದ ಮೊದಲ ಬಾರಿಗೆಂಬಂತೆ ೧೦೧೦ರಲ್ಲಿ ದಕ್ಷಿಣ ಕೊಂಕಣವನ್ನಾಳಿದ ಶಿಲಾಹರ ರತ್ತ ರಾಜನ ತಾಮ್ರ ಶಾಸನದಲ್ಲಿ ಕಾಣಬರುತ್ತದೆ. ಕಾಳಿದಾಸನ ಮಾಲವಿಕಾಗ್ನಿ ಮಿತ್ರದಲ್ಲೂ ಸೆಣವೈ ಶಬ್ದದ ಉಲ್ಲೇಖವಿದೆ. ಮಾತ್ರ ಅಲ್ಲಿ ಅದು 'ಸೇನಾಧಿಪತಿ' ಯ ಅರ್ಥವನ್ನೀಯುತ್ತದೆ.

ಡಾ. ಆರ್. ಸಿ. ಭಂಡಾರ್ಕಾರ್ ಇವರು, ಸೇನಾಪತಿ ಉತ್ಕಲ ದೇಶ (ಒರಿಸ್ಸಾ) ದ ಕುಲೀನ

ಬ್ರಾಹ್ಮಣರ ಹದಿನೆರಡು ಉಪಶಾಖೆಗಳಲ್ಲೊಂದರ ಹೆಸರಾಗಿದ್ದು ಶೆಣ್ವೈ, 'ಸೇನಾಪತಿ' ಶಬ್ದದಿಂದ ಉತ್ಪನ್ನವಾಗಿದ್ದಿರಬೇಕೆಂದು ಭಾವಿಸಿದ್ದರು. ಆದರೆ ಇದು ಅವಿಶ್ವಸನೀಯ ವಿಚಾರವೊಂದಾಗಿದೆ. ಸಾರಸ್ವತರು ಮೊತ್ತ ಮೊದಲು ಗೋವಾದ ಸಾಷಷ್ಟಿ ಮತ್ತು ಬಾರ್ದೇಶ್‌ಗಳಲ್ಲಿನ ಶಾಣ್ಣವಿ (ಕೊಂಕಣಿ ಭಾಷೆಯಲ್ಲಿನ ತೊಂಭತ್ತಾರು) ಗ್ರಾಮಗಳಲ್ಲಿ ನೆಲಸಿದ್ದರು. ಶಾಣ್ಣವಿಯಿಂದ ಶೆಣ್ವೈ ಶಬ್ದ ಉತ್ಪನ್ನವಾಗಿರಬೇಕು.

೩. ಗುಂಜೀಕರರ ಮೊದಲ ಕುಲನಾಮ ಕೇಂಕರೆ. ಅವರು ಕದಂಬ ಅರಸರ ರಾಜ್ಯಾಡಳಿತೆಯ ದಿನಗಳಲ್ಲಿ ಖಾನಾಪುರ ತಾಲೂಕಿನಿಂದ (ಬೆಳಗಾಂ ಜಿಲ್ಲೆ), ಗೋವಾಕ್ಕೆ ಬಂದು ಗುಂಜಿಯ ಬಳಿಯಾ ೬೫ ಮತ್ತು ಸಾಷಯ ಬಳಿಯಾ ೬೦ ರಿಂದ ೬೫ ಗ್ರಾಮಗಳಲ್ಲಿ ಕುಲಕರ್ಣಿಯ ವೃತ್ತಿಕೊಂಡರು. ಕೆಲವೊಬ್ಬರ ಮೊದಲ ಕುಲನಾಮಗಳು ಈ ಮುಂದಿನಂತಿವೆ :
ಪಾಗ್ನೀಸರ ಕುಲನಾಮ ಭೆಂಡೆ; ಪಥವರ್ಧನರು, ಭಂಡಾರಿ; ಕೇರ್ಕರರು, ಸಾಂಝಗಿರೆ; ದುಭಾಶಿಯವರು, ಲಾಡ್; ಅಟಗಾಂವ್‌ಕರರು, ಕರ್ಣಿಕ; ಪಾಟ್ಕರರು, ಭಿಸೆ; ಪಾಟಸ್ಕರರು, ಭಂಡಾರಿ; ಘರ್ಮೋಡೆಯವರು, ರಾಂಗ್ಣೆಕರ್; ಪಿಳ್ಗಾಂವ್‌ಕರರು, ರಾಜಾಧ್ಯಕ್ಷ ಮತ್ತು ದಾಘೋಳ್ಕರರು, ಗಾಯ್ತೊಂಡೆ.

೪. ಶ್ರೀ ಎಸ್.ಎಸ್. ತಾಲ್ಮಕಿಯವರ 'ಸಾರಸ್ವತ್ ಫ್ಯಾಮಿಲೀಸ್' ಪುಟ ೪೦

೫. ೧೮೬೫ರಲ್ಲಿ ಪ್ರೊಟೆಸ್ಟಂಟ್ ಮಿಶನರಿ ರೋಬರ್ಟ್ ನೆಸ್ಬಿತ್‌ನೊಂದಿಗೆ ಲಟಿನ್‌ನಲ್ಲಿ ಮಾತನಾಡಿದ ಗೋವಾದ ಸೈಂಟ್ ಕಾಥ್ತಾನ್ ಕ್ರೈಸ್ತ ದೇವಾಲಯದ ಪಾದ್ರಿ, ಅವರೆಲ್ಲ ಇನ್ನೂ ಬ್ರಾಹ್ಮಣರೇ ಇರುವುದಾಗಿ ಹೇಳಿದ್ದ.
ಜೆ. ಎಮ್. ಮಿಚ್ಚೆಲ್, ಎಮ್.ಎ.ಎಲ್.ಎಲ್.ಡಿ., ಎಡಿನ್ ಬರೊ ಇವರ 'ವೆಸ್ಟರ್ನ್ ಇಂಡಿಯಾ' ೧೮೯೯, ಪುಟ ೨೧೬

ಅಧ್ಯಾಯ ೧೬

ಸಾರಸ್ವತರ ಧಾರ್ಮಿಕ ಮಠಗಳು

ಮೂಲತಃ ಸಾರಸ್ವತರು ಸ್ಮಾರ್ತರಿದ್ದು ಅವರು ಕುಶಸ್ಥಳಿಯಲ್ಲಿನ ಸ್ಮಾರ್ತ ಮಠದ ಅನುಯಾಯಿಗಳಾಗಿದ್ದರು

೧. ಕವಳೆ (ಕೈವಲ್ಯಪುರ) ಮಠ

ಮೊತ್ತ ಮೊದಲ ಕವಳೆ ಮಠ ೮ನೇ ಶತಮಾನದ ಉತ್ತರಾರ್ಧದಲ್ಲಿ ಕುಶಸ್ಥಳಿಯಲ್ಲಿ ಸ್ಥಾಪಿಸಲ್ಪಟ್ಟಿತು. ಈ ಮಠದ ಪೀಠವನ್ನೇರಿದ ಗುರುಗಳ ಪರಂಪರೆಯನ್ನು ನಿರ್ವಿವಾದವಾಗಿ ನುಡಿಯುವುದು ಅಸಾಧ್ಯವಾಗಿದೆ. ಕಾರಣ ೧೪ ಮತ್ತು ೧೫ನೇ ಶತಮಾನಗಳ ನಡುವೆ ಹಲವೊಂದು ಬಾರಿ ಪಿಂಡಾರಿಗಳು ಮತ್ತು ೧೫೬೪ರಲ್ಲಿ ಪೋರ್ಚುಗೀಸ್ ವಿಧ್ವಂಸಕರು ಈ ಮಠವನ್ನು ಪೂರ್ಣ ಸುಲಿದು ಅಲ್ಲಿನ ದಾಖಲೆ ಪತ್ರಗಳನ್ನು ನಾಶಗೊಳಿಸಿದ್ದರು.

'ಶ್ರೀ ಸಂಸ್ಥಾನ ಕೈವಲ್ಯಪುರ ಮಠದ ಸಂಕ್ಷಿಪ್ತ ಇತಿಹಾಸದ ' ಮೇರೆಗೆ ಈ ಮಠದ ೫೭ನೇಯ ಗುರು ವಿದ್ಯಾನಂದ ಸರಸ್ವತಿಗಳು ವಾಸ್ತವ್ಯಕ್ಕೆ ಸಾವಂತವಾಡಿ ಸಂಸ್ಥಾನದ ಗೋಲವಣ್‌ದಲ್ಲಿನ ತನ್ನ ಮಠಕ್ಕೆ ತೆರಳಿದ್ದರು. ೫೮ನೇಯ ಗುರು ಸಹಜಾನಂದ ಸರಸ್ವತಿ, ೫೯ನೇಯ ಗುರು ಮೊದಲನೆಯ ಪೂರ್ಣಾನಂದ ಸರಸ್ವತಿ ಇವರ ಸಮಾಧಿಗಳು ಗೋಲವಣ್‌ದಲ್ಲಿನ ಮಠದಲ್ಲಿವೆ. ಅರವತ್ತನೆಯ ಗುರು, ಮೊದಲನೆಯ ರಮಾನಂದ ಸರಸ್ವತಿ ಇಲ್ಲಿ ಕೆಲವು ಕಾಲ ವಾಸ್ತವ್ಯಕ್ಕಿದ್ದು ನಂತರ ಚಿನ್ನರ್‌ದಲ್ಲಿನ ಮಠಕ್ಕೆ ತೆರಳಿದರು. ಅವರ ಸಮಾಧಿ ಚಿನ್ನ ರ್‌ದಲ್ಲಿನ ಮಠದಲ್ಲಿದೆ.

೬೧ನೇಯ ಗುರು, ಮೊದಲನೆಯ ಸದಾನಂದ ಸರಸ್ವತಿಯವರು ವಾಸ್ತವ್ಯಕ್ಕಾಗಿ ಕಾಶಿಯಲ್ಲಿನ ತನ್ನ ಮಠಕ್ಕೆ ತೆರಳಿದ್ದರು. ಆ ಬಳಿಕ ಕಾಣದಾದ ಅವರ ಕುರಿತು ಯಾರೊಬ್ಬರೂ, ಏನೊಂದನ್ನೂ ಅರಿಯದಾದರು. ಹಲವೊಂದು ವರ್ಷಗಳ ಬಳಿಕ, ಅವರನ್ನು ಗೋಮಂತಾಕ್ಕೆ ಕರೆದು ತರಲಾಗಿ ಸಾರಸ್ವತರ ತಂಡವೊಂದು ಕಾಶಿಗೆ ತೆರಳಿತ್ತು. ಆದರೆ ಅವರಿಗೆ ಗುರುವಿನ ಸುಳಿವು ದೊರಕದಾಯಿತು. ಕಾಶಿಗೆ ತೆರಳಿದ್ದ ತಂಡದಲ್ಲಿನ, ಕುಶಸ್ಥಳಿಯ ನಿವಾಸಿ, ಕೌಂಡಿನ್ಯ ಗೋತ್ರದ ರಾಂಗ್ಣೆಕರ್ ಸ್ವಾಮು ಶೆಣೈಯವರ ಮಗ ವಿಠಲ ಶೆಣೈ ಅಲ್ಲೇ ನಿಂತು ಭವಾನಂದ ಸರಸ್ವತಿಗಳ ಶಿಷ್ಯರಾಗಿ ಅವರಿಂದ ಸನ್ಯಾಸ ದೀಕ್ಷೆ, ಗುರೂಪದೇಶ ಕೊಂಡರು. ಸಚ್ಚಿದಾನಂದ ಸರಸ್ವತಿ ಅಭಿದಾನ ಕೊಂಡ ಇವರು ೧೬೩೦ರಲ್ಲಿ ಗೋಮಾಂತಕಕ್ಕೆ ಮರಳಿದರು. ಅಲ್ಲಿನ ಅಧಿಕಾಂಶ ಸ್ಮಾರ್ತ ಸಾರಸ್ವತರು ಸಚ್ಚಿದಾನಂದ ಸರಸ್ವತಿಗಳನ್ನು ಗುರುಗಳೆಂದು ಸ್ವೀಕರಿಸಿದರು. ಮತ್ತು ಅವರಿಗಾಗಿ ಸೋಂದೆಯ ಅರಸನ ಪ್ರಾಂತದೊಳಗಣ ಕವಳೆಯಲ್ಲಿ ಶಾಂತಾದುರ್ಗಾದೇವಸ್ಥಾನದ ಸಮೀಪ ಮಠವೊಂದನ್ನು ಕಟ್ಟಿದರು.

ಸದ್ಯದ ಕವಳೆ ಮಠದ ಗುರುಗಳು ಅವರ ಪರಂಪರಾಗತ ಉತ್ತರಾಧಿಕಾರಿಗಳು. ಅವರು ತಮ್ಮನ್ನು ಗೌಡ ಪಾದಾಚಾರ್ಯರೆಂದು ಕರೆದುಕೊಳ್ಳುತ್ತಾರೆ; ಅವರ ಮಠಗಳು ಗೌಡ

ಪಾದಾಚಾರ್ಯ ಮಠಗಳೆಂದು ಪರಿಚಿತವಾಗಿವೆ. ಕವಳೆ ಸಂಸ್ಥಾನ ಸಾಂಖಲಿ, ಚಿನ್ನರ್, ಸೋನಾವಡೆ (ಸಾವಂತವಾಡಿಯ ಸಂಸ್ಥಾನದಲ್ಲಿ)[೨], ಖಾನಾಪುರ (ಬೆಳಗಾಂ ಜಿಲ್ಲೆಯಲ್ಲಿ)[೩] ಸದಾಶಿವ ಗಡ (ಕಾರ್ವಾರದ ಸಮೀಪ), ಹಳಗೆ (ಕಾರ್ವಾರದಲ್ಲಿ), ಗೋಕರ್ಣ (ಉತ್ತರ ಕನ್ನಡದಲ್ಲಿ), ನಾಸಿಕ (ಜನಸ್ಥಾನ)[೪], ವಾಲುಕೇಶ್ವರ (ಬೊಂಬೇಯಲ್ಲಿ)[೫], ಕಾಶಿ (ಬನಾರಸ್‌ನ ದುರ್ಗಾಘಾಟ್ ಎಂಬಲ್ಲಿ) ಮತ್ತು ಬ್ರಹ್ಮಾವರ್ತ (ಪ್ರಯಾಗ, ಅಲ್ಲಹಾಬಾದ್)[೬], ಎಂಬೀ ಸ್ಥಾನಗಳಲ್ಲಿ ಅವರ ಮಠಗಳಿವೆ.

ಗೊಲವಣ್‌ದಲ್ಲಿಯೂ ಅವರು ಮಠವೊಂದನ್ನು ಕೊಂಡಿದ್ದರು. ಆದರೆ ಅದು ೬೧ನೇಯ ಗುರು, ಮೊದಲನೆಯ ಸದಾನಂದ ಸರಸ್ವತಿಗಳು ಕಾಶಿಗೆ ಹೋಗಿದ್ದ ದಿನಗಳಲ್ಲಿ ಸಂಕೇಶ್ವರ ಮಠದ ಶಂಕರಾಚಾರ್ಯರ ವಶವಾಯಿತು.

ಕವಳೆ ಮಠದಲ್ಲಿ ೬೪ನೆಯ ಗುರು, ಮೊದಲನೆಯ ಶಿವಾನಂದ ಸರಸ್ವತಿ, ೬೫ನೆಯ ಗುರು, ೨ನೆಯ ರಮಾನಂದ ಸರಸ್ವತಿ, ೭೪ನೆಯ ಗುರು, ೨ನೆಯ ಆತ್ಮಾನಂದ ಸರಸ್ವತಿ; ಸೊನಾವಡೆಯಲ್ಲಿ ೪೩ನೆಯ ಗುರು, ಮೊದಲನೆಯ ಸಚ್ಚಿದಾನಂದ ಸರಸ್ವತಿ, ೬೭ನೆಯ ಗುರು, ೨ನೆಯ ಸದಾನಂದ ಸರಸ್ವತಿ, ೭೧ನೆಯ ಗುರು, ೩ನೆಯ ಸದಾನಂದ ಸರಸ್ವತಿ ; ಖಾನಾಪುರದಲ್ಲಿ ೬೮ನೆಯ ಗುರು, ೩ನೇಯ ರಮಾನಂದ ಸರಸ್ವತಿ, ೭೨ನೆಯ ಗುರು, ೪ನೆಯ ರಮಾನಂದ ಸರಸ್ವತಿ ಮತ್ತು ೭೫ನೆಯ ಗುರು, ೩ನೇಯ ಪೂರ್ಣಾನಂದ ಸರಸ್ವತಿ; ಸದಾಶಿವ ಗಡದಲ್ಲಿ ೭೩ನೆಯ ಗುರು, ೩ನೆಯ ಶಿವಾನಂದ ಸರಸ್ವತಿ ಮತ್ತು ವಾಲುಕೇಶ್ವರದಲ್ಲಿ ೬೩ನೆಯ ಗುರು, ೨ನೆಯ ಶಿವಾನಂದ ಸರಸ್ವತಿ ಅವರ ಶಿಷ್ಯ ೨ನೆಯ ಸಚ್ಚಿದಾನಂದ ಸರಸ್ವತಿ ಹಾಗೂ ೭೧ನೇಯ ಗುರು, ೩ನೆಯ ಸದಾನಂದ ಸರಸ್ವತಿ ಇವರ ಸಮಾಧಿಗಳಿವೆ.

ಈ ಮಠದ ಗುರುಗಳು ತಮ್ಮ ಶಿಷ್ಯರಿಗೆ ಕಳುಹಿಸುವ ರಾಯಸದಲ್ಲಿ ಅವರನ್ನು 'ಕೆಳೋಶಿ-ಕುಶಸ್ಥಳಾದ್ಯಶೇಷ ಶಿಷ್ಯವರ್ಯ' ಎಂದಾಗಿ ಸಂಭೋದಿಸುತ್ತಾರೆ. ಗೋಕರ್ಣದಲ್ಲಿ [೭] ಮಹಾಬಲೇಶ್ವರ ರಥವೇರಿದ ಬಳಿಕ ಮೊದಲ ಪೂಜೆ ಮಾಡುವ ಹಾಗೂ ಮಂಗಳಾರತಿ ಎತ್ತುವ ಹಕ್ಕು ಇವರಿಗಿದೆ. ಹೆಚ್ಚಿನವರು ಸಂಸ್ಕೃತದ ವಿ ದ್ವಾಂಸರಿದ್ದರು. ಅವರಲ್ಲಿನ ಕೆಲವರು ಪಾಠಶಾಲೆಗಳನ್ನು ಸ್ಥಾಪಿಸಿ, ಸಮಾಜದಲ್ಲಿನ ಎಷ್ಟೊಂದೋ ವಿದ್ಯಾರ್ಥಿಗಳಿಗೆ ಸಂಸ್ಕೃತದಲ್ಲಿ ಪಾಂಡಿತ್ಯ ಒದಗಿಸಿದರು.

೨. ವೈಷ್ಣವ ಸಾರಸ್ವತರ ಗುರುಗಳು

ವೈಷ್ಣವ ಸಾರಸ್ವತರು ಮೊದಲು ಉತ್ತರಾದಿ ಮಠದ[೮] ಅನುಯಾಯಿಗಳಾಗಿದ್ದರು. ೧೪೦೭ರಲ್ಲಿ ಈ ಮಠದ ರಾಮಚಂದ್ರ ತೀರ್ಥರ ಅವಸಾನವಾದಾಗ ಅವರ ಶಿಷ್ಯರಲ್ಲೊಬ್ಬನಿದ್ದ ವಿದ್ಯಾನಿಧಿ ತೀರ್ಥರು ಉತ್ತರಾದಿ ಮಠದ ಗುರುಪರಂಪರೆಯನ್ನು ಮುಂದುವರಿಸಿದರು. ರಾಮಚಂದ್ರ ತೀರ್ಥರ ಇನ್ನೊಬ್ಬ ಶಿಷ್ಯ ವಿಭುದೇಂದ್ರ ತೀರ್ಥರು ಕುಂಬಕೋಣಂ ಮಠ[೯] ಸ್ಥಾಪಿಸಿದರು. ಕೆನರಾದ ಉತ್ತರ ಭಾಗದಲ್ಲಿನ ಸಾರಸ್ವತರು ಉತ್ತರಾದಿ ಮಠಕ್ಕೆ ತಮ್ಮ ಅಧ್ಯಾತ್ಮಿಕ ನಿಷ್ಠೆ ಸಲ್ಲಿಸತೊಡಗಿದರು. ದಕ್ಷಿಣ ಕನ್ನಡ ಮತ್ತು ಕೇರಳದಲ್ಲಿನ ಸಾರಸ್ವತರು ಕುಂಬಕೋಣಂದಲ್ಲಿನ[೧೦] ಹೊಸ ಮಠದತ್ತ ಆಸ್ಥೆ ತೋರಿದರು. ಮೈಸೂರಿನ

ಮೊಗ್ಗ ಜಿಲ್ಲೆಯಲ್ಲಿನ ತೀರ್ಥಹಳ್ಳಿಯ ಆಚಾರ್ಯರು ಕುಂಬಕೋಣಂ ಮಠದ ಸಾರುಪತ್ಯದಾರರಾಗಿದ್ದರು. ಅವರು ತೀರ್ಥಹಳ್ಳಿಯಿಂದ ಕುಂಬಕೋಣಂಕ್ಕೆ ಪಾಲಕಿಯಲ್ಲಿ ಕುಳಿತು ಪ್ರವಾಸ ಮಾಡುತ್ತಿದ್ದರು.

೬. ಕಾಶಿಮಠ

ಕುಂಬಕೋಣಂ ಮಠದ ಸುರೇಂದ್ರ ತೀರ್ಥರು ಅಲ್ಲಿನ ಲಿಂಗಾಯತರ ಗುರುಗಳೊಬ್ಬರನ್ನು ವಾಗ್ವಾದದಲ್ಲಿ ಸೋಲಿಸಲು ವ್ಯಾಸರಾಯ ಮಠದ ಸಂತಸಮ ವಿಜಯೇಂದ್ರ ತೀರ್ಥರ ನೆರವನ್ನು ಬಯಸಿದರು. ಮುಂದೊಂದು ದಿನ ವಿಜಯೇಂದ್ರ ತೀರ್ಥರು ಸುರೇಂದ್ರ ತೀರ್ಥರ ಉತ್ತರಾಧಿಕಾರಿಗಳಾದರು.

೧೫೪೧ರಲ್ಲಿ ವಿಜಯೇಂದ್ರ ತೀರ್ಥರು ಕೊಚ್ಚಿನ್‌ನನ್ನು ಸಂದರ್ಶಿಸಿದಾಗ ಸ್ಥಾನೀಯ ಶಿಷ್ಯ ವರ್ಗ, ಸಾರಸ್ವತರಿದ್ದ ಹನುಮಂತ ಭಟ್ಟರಿಗೆ ಸನ್ಯಾಸಾಶ್ರಮದ ದೀಕ್ಷೆ ಈಯುವರೇ ಅವರನ್ನು ಒಲಿಸಿಕೊಂಡಿತು. ಹನುಮಂತ ಭಟ್ಟರಿಗೆ ಕುಂಭಕೋಣಂ ಮಠದಲ್ಲಿ ಯೋಗ್ಯ ರೀತಿಯ ಶಿಕ್ಷಣವೀಯಲಾಯಿತು. ಇವರು ಮುಂದೆ ಯಾದವೇಂದ್ರ ತೀರ್ಥರೆಂಬ ಅಭಿದಾನಕೊಂಡು ಕೊಚ್ಚಿನ್‌ನಲ್ಲಿ ಕಾಶಿಮಠದ ಮೊದಲ ಗುರುಗಳೆನಿಸಿಕೊಂಡರು. ಹನುಮಂತ ಭಟ್ಟರೊಬ್ಬರಿಗಷ್ಟೆ ಸನ್ಯಾಸಾಶ್ರಮವಿತ್ತಿದ್ದ ವಿಜಯೇಂದ್ರ ತೀರ್ಥರು ಶಿಷ್ಯನೊಬ್ಬನನ್ನು ಕೊಳ್ಳಲು ನಿರಾಕರಿಸಿದರು; ಕಾರಣ ಕುಂಬಕೋಣಂ ಮಠದ ಗುರು ಹಾಗೂ ತನ್ನ ಪೂರ್ವಾಧಿಕಾರಿಗಳಾಗಿದ್ದ ಸುರೇಂದ್ರತೀರ್ಥರು ಅದಾಗಲೇ ಸುಧೀಂದ್ರತೀರ್ಥರನ್ನು ಉತ್ತರಾಧಿಕಾರಿಯಾಗಿ ಕೊಂಡಿದ್ದರು.

ತಾಮ್ರಶಾಸನವೊಂದಿನ ಮೇರೆಗೆ ಯಾದವೇಂದ್ರತೀರ್ಥರು ದೀಕ್ಷೆ ಕೊಂಡ ನಂತರ ಸುರೇಂದ್ರ ತೀರ್ಥರು ಅವರಿಗೆ ರಾಮದೇವರು, ವ್ಯಾಸ, ಸಾಲಿಗ್ರಾಮ, ಕುಂಬಕೋಣಂ ಮಠದಲ್ಲಿ ಉಪಯೋಗಿಸಲಾಗುತ್ತಿದ್ದ ಪಾಲಕಿ, ಶ್ವೇತಛತ್ರ, ಶ್ವೇತ ಶಂಕ, ಉಭಯ ಚಾಮರ, ಉಭಯಾಸನ (ಆಸನ) ಉಭಯ ಹಗಲು ದೀವಟಿಗೆ, ಮಕರ ತೋರಣ, ನಗಾರಿ, ಪತಾಕೆ, ತಾಳ ಇತ್ಯಾದಿಗಳನ್ನಿತ್ತರು; ಅವರಿಗೆ ಮುದ್ರಾಧಾರಣೆಯ ಮತ್ತು ಸಂಚಾರದ ವೇಳೆ ಕುಂಬಕೋಣಂ ಮಠದ ಬಿರುದು (ಸಾಮಾನು ಸರಂಜಾಮು)ಗಳನ್ನು ಬಳಸುವ ಹಕ್ಕನ್ನೀಯಲಾಯಿತು. ಸುರೇಂದ್ರತೀರ್ಥರು ಸಾರಸ್ವತ ಸಮಾಜಕ್ಕೆ ಕಳುಹಿಸಿದ ರಾಯಸ ಪತ್ರದಲ್ಲಿ ಕಾಶಿಮಠದ ಗುರುಗಳ ಅನುಪಸ್ಥಿತಿಯಲ್ಲಿ ಕುಂಬಕೋಣಂ ಮಠದ ಗುರುಗಳು ಸಮಾಜದ ಮೇಲಕ್ಕೆ ಎಲ್ಲೊಂದು ಬಗೆಯ ಅಧಿಕಾರಗಳನ್ನು ಚಲಾಯಿಸಬಹುದೆಂದು ಹೇಳಿದ್ದರು. ಸ್ವಲ್ಪ ಕಾಲಾನಂತರ ಈ ರೂಢಿಯನ್ನು ತ್ಯಜಿಸಲಾಯಿತು.

೧೬ನೆಯ ಗುರು, ವಸುದೇಂದ್ರ ತೀರ್ಥರೊಬ್ಬರಷ್ಟೇ ಕೆನರಾದಲ್ಲಿ ಹುಟ್ಟಿದವರಿದರು. ೧೪ನೆಯ ಗುರು, ವಿಭುದೇಂದ್ರ ತೀರ್ಥರು ಮತ್ತು ಅವರ ಶಿಷ್ಯ ೧೫ನೆಯ ಗುರು, ಸುಮತೀಂದ್ರ ತೀರ್ಥರ ನಡುವೆ ಗಂಭೀರವಾದ ವಿವಾದವೊಂದು ತಲೆವೆತ್ತಿದಾಗ ೧೪ನೆಯ ಗುರುಗಳು ಕುಂದಾಪುರದ ಅಬ್ಬಯ್ಯ ಭಟ್ಟರಿಗೆ ದೀಕ್ಷೆಯಿತ್ತರು. ವಸುದೇಂದ್ರ ತೀರ್ಥರೆಂಬ ಅಭಿದಾನಕೊಂಡ ಇವರು ೧೬ನೆಯ ಗುರುಗಳು. ೧೪ನೆಯ ಗುರುಗಳು ಇಹಲೋಕ

ತ್ಯಜಿಸಿದಾಗ ೧೫ನೆಯ ಮತ್ತು ೧೬ನೆಯ ಗುರುಗಳ ನಡುವೆ ವಿಭಾಜನೆಯ ವಿವಾದವೆದ್ದಿತು. ಕೆಲಿಕಟ್‌ನ ನ್ಯಾಯಾಲಯ ವಸುದೇಂದ್ರ ತೀರ್ಥರ ಪರವಾಗಿ ನಿರ್ಣಯವಿತ್ತಿತ್ತು. ವಿವಾದದ ಪ್ರಕರಣದಿಂದ ರೋಸಿಕೊಂಡ ವಸುದೇಂದ್ರ ತೀರ್ಥರು ಉತ್ತರ ಭಾರತದತ್ತ ಸಂಚಾರಕ್ಕೆ ಹೋದರು. ಅವರ ವಾಪಸಾತಿಯ ಬಳಿಕ ಸುಮತೀಂದ್ರ ತೀರ್ಥರ ಶ್ರಿಷ್ಯ [೧೯] ಭುವನೇಂದ್ರ ತೀರ್ಥರು ವಿವಾದ ಪರಿಹರಿಸಿದರು. ಪರಿಣಾಮ ಸ್ವರೂಪ, ವಸುದೇಂದ್ರ ತೀರ್ಥರು ಮಠದ ೧೭ನೆಯ ಗುರುಗಳ ಅಧಿಕಾರ ವಹಿಸಿಕೊಂಡರು. ಕಾಶಿಮಠ ಸಂಸ್ಥಾನ ಕೇರಳದಲ್ಲಿನ ಕೊಚ್ಚಿ, ಅಲ್ಲೆಪ್ಪಿ, ಕ್ವಿಲೋನ್, ಜನಾರ್ಧನ ಎಂಬಲ್ಲಿ, ದಕ್ಷಿಣ ಕನ್ನಡದ ಮಂಜೇಶ್ವರ, ಬಂಟ್ವಾಳ, ಕಾರ್ಕಳ, ಪಣಂಬೂರು, ನಾಯಂಪಳ್ಳಿ, ಕೋಟಾ, ಬಸ್ರೂರು, ಹೆಮ್ಮಾಡಿ ಎಂಬಲ್ಲಿ, ಉತ್ತರ ಕನ್ನಡದ ಭಟ್ಕಳ, ಬೊಂಬೇಯಲ್ಲಿನ ವಾಲುಕೇಶ್ವರ, ಕಾಶಿ, ಪ್ರಯಾಗ (ಅಲ್ಲಹಾಬಾದ್), ರಾಮೇಶ್ವರ ಮತ್ತು ಕೊಡಗಿನ ಭಾಗಮಂಡಲ, ಈ ಸ್ಥಾನಗಳಲ್ಲಿ ಮಠಗಳನ್ನು ಕೊಂಡಿದೆ.

ಕಾಶಿ ಮಠದ ಗುರುಗಳ ಸಮಾಧಿಗಳು ಈ ಮುಂದಣ ಸ್ಥಾನಗಳಲ್ಲಿವೆ :

ಮೊದಲ ಗುರು, ಮೊದಲನೆಯ ಯಾದವೇಂದ್ರ ತೀರ್ಥರ ಸಮಾಧಿ ಭಟ್ಕಳದಲ್ಲಿ; ೨ನೆಯ ಗುರು, ಕೇಶವೇಂದ್ರ ಮತ್ತು ೧೭ನೆಯ ಗುರುಗಳ ಸಮಾಧಿಗಳು ಬಸ್ರೂರಿನಲ್ಲಿ; ೪ನೆಯ ಗುರು, ಎರಡನೆಯ ಯಾದವೇಂದ್ರರ ಸಮಾಧಿ ಹೆಮ್ಮಾಡಿಯಲ್ಲಿ ; ೬ನೆಯ ಗುರು, ದೇವೇಂದ್ರ ತೀರ್ಥರ ಸಮಾಧಿ ಬಂಟ್ವಾಳದಲ್ಲಿ, ೯ನೆಯ ಗುರು, ೩ನೆಯ ಯಾದವೇಂದ್ರರ ಸಮಾಧಿ ಹೊನ್ನಾವರದಲ್ಲಿ; ೧೧ನೆಯ ಗುರು, ರಾಜೇಂದ್ರರ ಸಮಾಧಿ ಟ್ರಾವಂಕೂರಿನ ತರವೂರಿನಲ್ಲಿ; ೭ನೆಯ ಗುರು, ಮಾಧವೇಂದ್ರ ತೀರ್ಥರ ಮತ್ತು ೧೮ನೆಯ ಗುರು, ವರದೇಂದ್ರ ತೀರ್ಥರ ಸಮಾಧಿಗಳು ಬೊಂಬೇಯ ವಾಲುಕೇಶ್ವರದಲ್ಲಿ; ೧೨ನೆಯ ಗುರು, ಸುರೇಂದ್ರತೀರ್ಥರ ಮತ್ತು ೧೫ನೇಯ ಗುರು, ಸುಮತೀಂದ್ರ ತೀರ್ಥರ ಸಮಾಧಿಗಳು ಅಲ್ಲೆಪ್ಪಿಯಲ್ಲಿ; ೧೪ನೆಯ ಗುರು, ವಿಭುದೇಂದ್ರ ತೀರ್ಥರ ಮತ್ತು ೧೬ನೆಯ ಗುರು, ವಸುದೇಂದ್ರ ತೀರ್ಥರ ಸಮಾಧಿಗಳು ಮಂಜೇಶ್ವರದಲ್ಲಿ; ೧೯ನೆಯ ಗುರು, ಸುಕೃತೀಂದ್ರ ತೀರ್ಥರ ಸಮಾಧಿ ಕೊಚ್ಚಿಯಲ್ಲಿ; ಇನ್ನುಳಿದ ಗುರುಗಳು ಕಾಶಿಯಲ್ಲಿ, ಗಂಗಾನದಿಯಲ್ಲಿ ಜಲಸಮಾಧಿಕೊಂಡಿದ್ದ ನಿಮಿತ್ತ ಅವರ ಸಮಾಧಿಗಳಿಲ್ಲ.

೪. ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠ

ಉತ್ತರಾದಿ ಮಠದ ಅನುಯಾಯಿಗಳಾಗಿದ್ದ ವೈಷ್ಣವ ಸಾರಸ್ವತರ ಧಾರ್ಮಿಕ, ಆಧ್ಯಾತ್ಮಿಕ, ರೀತಿ ರಿವಾಜುಗಳನ್ನು ನಿರ್ವಹಿಸಲು, ಅವುಗಳ ಅವಶ್ಯಕತೆಯನ್ನು ಪೂರೈಸಲು ರಘೋತ್ತಮ ತೀರ್ಥರು ೧೫೪೦(?) ರಲ್ಲಿ ಮೊದಲನೆಯ ಗುರುವೆಂದೆನಿಸಿಕೊಂಡ ನಾರಾಯಣ ತೀರ್ಥರಿಗೆ ಸನ್ಯಾಸದ ದೀಕ್ಷೆಯಿತ್ತರು. [೧೫]

೧೫೬೦ರಲ್ಲಿ ೩ನೆಯ ಗುರುಗಳಾದ ಜೀವೋತ್ತಮ ತೀರ್ಥರು ಗೋಕರ್ಣದಲ್ಲಿ ಮಠವೊಂದನ್ನು ಕಟ್ಟಿಸಿ ಅಲ್ಲಿ ಭೂವಿಜಯ ವಿಟ್ಠಲನ ವಿಗ್ರಹವನ್ನು ಸ್ಥಾಪಿಸಿದರು; ಮತ್ತೆ ಈ ಮಠವನ್ನು ಗೋಕರ್ಣ ಸಂಸ್ಥಾನದ ಮುಖ್ಯ ಕಾರ್ಯಾಲಯವಾಗಿ ಪರಿವರ್ತಿಸಿದರು. ೧೫೯೦ರಲ್ಲಿ ಕೊಚ್ಚಿನ್‌ಗೆ ತೆರಳಿದ್ದ ಅವರ ಪ್ರತಿನಿಧಿಯೊಬ್ಬ ತಯಾರಿಸಿದ 'ಒಡಂಬಡಿಕೆ'ಯೊಂದನ್ನು ತಾಮ್ರ ಫಲಕದಲ್ಲಿ ಬರೆದಿಡಲಾಯಿತು. ಇದರ ಮೇರೆಗೆ

ಸಂಪ್ರದಾಯಗಳನ್ನು ನಡೆಸಿಕೊಂಡು ಬರುತ್ತಿದ್ದ ಉತ್ತರಾದಿ ಮತ್ತು ಕುಂಬಕೋಣಂ ಮಠಾಧಿಪತಿಗಳು ಮಂಗಳೂರು ಮತ್ತು ಭಟ್ಕಳಗಳ ನಡುವಣ ಭೂಭಾಗದಲ್ಲಿ ವಾಸವಾಗುತ್ತಿದ್ದ ವೈಷ್ಣವ ಸಾರಸ್ವತರಲ್ಲಿನ ತಮ್ಮ ಶಿಷ್ಯರಿಂದ ಕಾಣಿಕೆಗಳನ್ನು ಸಂಗ್ರಹಿಸಬೇಕೆಂದು ನಿರ್ಧರಿಸಲಾಯಿತು. ಮತ್ತು ಸಂಗ್ರಹಿಸಲ್ಪಟ್ಟ ಕಾಣಿಕೆಗಳ ಒಂದು ಮೂರನೆಯ ಪಾಲನ್ನು ಅವರವರ ಶಿಷ್ಯ ವರ್ಗಕ್ಕಾಗಿ, ಇನ್ನೊಂದನ್ನು ಜೊತೆಯ ಮಠದ ಶಿಷ್ಯ ವರ್ಗಕ್ಕಾಗಿ ಮತ್ತುಳಿದ ಮೂರನೆಯ ಭಾಗವನ್ನು ಮಠಗಳೆರಡರ ಗುರುಗಳು ನಡೆಸಿಕೊಂಡು ಬರುತ್ತಿದ್ದ ಪದ್ಧತಿಯಂತೆ ಅನ್ಯ ಮಠಗಳಿಗೀಯಬೇಕೆನ್ನಲಾಯಿತು.

೭ನೆಯ ಗುರು ದಿಗ್ವಿಜಯ ರಾಮಚಂದ್ರ ತೀರ್ಥರು ಗೋವಾದ ಕನಕೋಣ ಮಹಾಲಿನಲ್ಲಿನ ಪರ್ತಗಾಳಿ (ಸಂಸ್ಕೃತದಲ್ಲಿ ಪರ್ವತಕಾನನ) ಯಲ್ಲಿ ಮಠವೊಂದನ್ನು ಕಟ್ಟಿದರು. ಅಲ್ಲಿ ಅವರು ಸೀತೆ, ರಾಮ, ಲಕ್ಷ್ಮಣರ ವಿಗ್ರಹಗಳನ್ನು ಸ್ಥಾಪಿಸಿದರು. ಇದು ಈಗ ಪರ್ತಗಾಳಿ ಸಂಸ್ಥಾನದ ಮುಖ್ಯ ಕಾರ್ಯಾಲಯವೂ ಆಗಿದೆ.

೯ನೆಯ ಗುರು, ಲಕ್ಷ್ಮೀನಾರಾಯಣ ತೀರ್ಥರು ನಗರ ಸಂದರ್ಶಿಸಿದಾಗ ಅವರನ್ನು ರಾಣಿಚೆನ್ನಮ್ಮಾಜಿ (೧೬೭೧-೧೬೯೭) ಶ್ವೇತಛತ್ರ, ಉಭಯಶ್ವೇತ ಚಾಮರ, ಉಭಯ ದೀವಟಿಗೆ, ಶಂಖ ಇತ್ಯಾದಿಗಳೊಂದಿಗೆ ಸ್ವಾಗತಿಸಿ ಗೌರವಿಸಿದಳು.

ಬಸ್ರೂರು, ದಕ್ಷಿಣ ಕನ್ನಡದ ಮಂಗಳೂರು, ಗೋಕರ್ಣ, ಭಟ್ಕಳ, ಮಂಕಿ, ಹಳ್ದಿಪುರ, ಕುಮ್ಟ, ಅಂಕೋಲ, ಕಾರ್ವಾರ, ಹುಲೇಕಲ, ಶಿರಸಿ, ಬಿಳಗಿ, ಉತ್ತರ ಕನ್ನಡದಲ್ಲಿನ ಕೆಲವೊಂದು ಕೇಂದ್ರಗಳಲ್ಲಿ, ಗೋವಾದಲ್ಲಿನ ಪರ್ತಗಾಳಿ, ಬಳ್ಳಿ, ರಿವಾಣ, ಬಿಛೋಲಿ, ಕಾಶಿಯಲ್ಲಿನ ಬಿಂದು ಮಾಧವ ಘಾಟ್, ಈ ಸ್ಥಾನಗಳಲ್ಲಿ ಸಂಸ್ಥಾನ ತನ್ನ ಮಠಗಳನ್ನು ಕೊಂಡಿದೆ.

ಭಟ್ಕಳದ ಮಠ ಮೊದಲನೆಯ ಗುರು, ನಾರಾಯಣ ತೀರ್ಥರ, ೨ನೆಯ ಗುರು, ಜೀವೋತ್ತಮ ತೀರ್ಥರ ಸಮಾಧಿಗಳನ್ನು ಕೊಂಡಿದೆ. ಗೋಕರ್ಣದಲ್ಲಿ ೩ನೆಯ ಗುರು, ಪುರುಷೋತ್ತಮ ತೀರ್ಥರ, ೧೩ನೆಯ ಗುರು, ಕಮಲಾಕಾಂತ ತೀರ್ಥರ; ಅಂಕೋಲದಲ್ಲಿ ೭ನೆಯ ಗುರು, ದಿಗ್ವಿಜಯ ರಾಮಚಂದ್ರ ತೀರ್ಥರ, ೧೪ನೆಯ ಗುರು, ಭೂವಿಜಯ ರಾಮತೀರ್ಥರ; ಹೊನ್ನಾವರದಲ್ಲಿ ೮ನೆಯ ಗುರು, ರಘುಚಂದ್ರ ತೀರ್ಥರ, ೧೦ನೆಯ ಗುರು ಲಕ್ಷ್ಮೀಕಾಂತ ತೀರ್ಥರ ಮತ್ತು ಪರ್ತಗಾಳಿಯಲ್ಲಿ ೧೬ನೆಯ ಗುರು ಶ್ರೀಕಂಠ ತೀರ್ಥರ, ೧೭ನೆಯ ಗುರು, ಆನಂದ ತೀರ್ಥರ, ೧೮ನೆಯ ಗುರು, ಪೂರ್ಣಪ್ರಜ್ಞತೀರ್ಥರ, ೧೯ನೆಯ ಗುರು, ಪದ್ಮನಾಭ ತೀರ್ಥರ, ೨೦ನೆಯ ಗುರು, ಇಂದಿರಾಕಾಂತ ತೀರ್ಥರ, ೨೧ನೆಯ ಗುರು, ಕಮಲಾನಾಥ ತೀರ್ಥರ ಸಮಾಧಿಗಳಿವೆ. ಉತ್ತರ ಕನ್ನಡದ ವೆಂಕಟಪುರದಲ್ಲಿನ ವೆಂಕಟರಮಣನ ದೇವಸ್ಥಾನದಲ್ಲಿ ೧೫ನೆಯ ಗುರು, ರಮಾನಾಥ ತೀರ್ಥರ ಸಮಾಧಿಯಿದೆ.

೫. ಚಿತ್ರಾಪುರ ಮಠ

೧೭೦೮ರಲ್ಲಿ ಸ್ಮಾರ್ತ ಚಿತ್ರಾಪುರ ಮಠ ಸ್ಥಾಪಿಸಲ್ಪಟ್ಟಿದ್ದುದರ ಹಿನ್ನಲೆಯಲ್ಲಿನ ಕಾರಣದ ಕುರಿತು ಈ ಹಿಂದೆಯೇ ಹೇಳಲಾಗಿದೆ. ಮೊತ್ತ ಮೊದಲ ಗುರು, ಮೊದಲನೆಯ ಪರಿಜ್ಞಾನಾಶ್ರಮರು ನಗರಕ್ಕೆ ಹೋದಾಗ ಅರಸು ಬಸಪ್ಪ ನಾಯಕ (೧೭೩೯-೧೭೫೪)

ಅವರನ್ನು ಗೌರವಾದರಗಳಿಂದ ಸ್ವಾಗತಿಸಿದನೆನ್ನಲಾಗಿದೆ. ೧೭೨೦ರಲ್ಲಿ ಅವರು ಕೃಷ್ಣಯ್ಯ ಶೆಣ್ಯೆಯವರ ಮಗ ಮರ್ತುಶೆಣ್ಯೆಯವರಿಗೆ ಸನ್ಯಾಸಾಶ್ರಮವಿತ್ತರು. ಮೊದಲ ಶಂಕರಾಶ್ರಮರೆಂಬ ಅಭಿದಾನಕೊಂಡ ಇವರು ಮಠದ ೨ನೆಯ ಗುರುಗಳು. ಈ ಕುಟುಂಬ ಈಗ ಶುಕ್ಲ ಭಟ್ಟರ ಕುಟುಂಬವೆಂದು ಪರಿಚಿತವಾಗಿದೆ. ೪ನೆಯ ಗುರು, ಎರಡನೆಯ ಶಂಕರಾಶ್ರಮರು ಮತ್ತು ೬ನೆಯ ಗುರು, ವಾಮನಾಶ್ರಮರು ಈ ಕುಟುಂಬಕ್ಕೆ ಸೇರಿದವರಿದ್ದರು. ೯ನೆಯ ಗುರು, ಆನಂದಾಶ್ರಮರ ತಾಯಿ ಕೂಡಾ ಈ ಕುಟುಂಬಕ್ಕೆ ಸೇರಿದವರಿದ್ದರು. ಈ ಕುಟುಂಬದ ಸದಸ್ಯರು ಸಂಸ್ಥಾನದ ಪಾರುಪತ್ಯಗಾರರಾಗಿದ್ದು, ಸಮಾಜದಲ್ಲಿನ ಉತ್ಸವಾದಿ ಕರ್ಮಾಚರಣೆಗಳಂದು ಮೊದಲ ತಾಂಬೂಲ, ದಕ್ಷಿಣೆಗಳ ಹಕ್ಕುಕೊಂಡವರಾಗಿದ್ದಾರೆ.

ಮೊದಲು ಈ ಮಠವನ್ನು ಗೋಕರ್ಣದಲ್ಲಿನ ಬಂಡಿಕೆರೆಯಲ್ಲಿ ಕಟ್ಟುವ ನಿರ್ಧಾರ ಮಾಡಲಾಗಿದ್ದರೂ, ೧೭೫೭ರಲ್ಲಿ ಮೊದಲನೆಯ ಶಂಕರಾಶ್ರಮರ ಕಾಲದಲ್ಲಿ ಅದನ್ನು ಕೊಪ್ಪದ ರಾಮಯ್ಯನವರಿತ್ತ ಶಿರಾಲಿಯಲ್ಲಿನ ನಿವೇಶದಲ್ಲಿ ಕಟ್ಟಲಾಯಿತು. ಈ ನಿವೇಶಕ್ಕೆ ಚಿತ್ರಾಪುರವೆಂಬ ಹೆಸರಿಡಲಾಯಿತು.

ರಾಮಯ್ಯನವರ ಕುಟುಂಬೀಯರಲ್ಲಿನ ಕೆಲವರು ನಗರ ರಾಜ್ಯದ ಸೇವಾ ವೃತ್ತಿ ಕೊಂಡವರಿದ್ದರು. ಇವರ ವಂಶಜರು ತಮ್ಮನ್ನು ನಾಗರಕಟ್ಟೆ ಎಂದು ಕರೆದುಕೊಳ್ಳುತ್ತಾರೆ. ಚಿತ್ರಾಪುರ ಮಠದ ಎಲ್ಲೊಂದು ಸಾರ್ವಜನಿಕ ಧಾರ್ಮಿಕ ಕರ್ಮಾಚರಣೆಗಳಂದು ನಾಗರಕಟ್ಟೆಯವರಿಗೆ ಮಾನದ ಸ್ಥಾನವೀಯಲಾಗುತ್ತದೆ.

ಚಿತ್ರಾಪುರ ಸಾರಸ್ವತರು ಸ್ಮಾರ್ತಸಂಪ್ರದಾಯದ ಚಿಹ್ನೆ ಧರಿಸಬೇಕೆಂಬ ಕೃಷ್ಣಾಶ್ರಮರ ನಿರ್ದೇಶದ ಕುರಿತು ಈ ಹಿಂದೆಯೇ ನುಡಿಯಲಾಗಿದೆ.

ಚಿತ್ರಾಪುರ ಮಠ ಸ್ಥಾಪನೆಯಾದಾಗ ಕವಳೆಮಠದ ಆರಾಧ್ಯ ದೈವ ಭವಾನಿಶಂಕರನನ್ನೇ ಈ ಮಠದ ಆರಾಧ್ಯ ದೈವವಾಗಿ ಸ್ವೀಕರಿಸಿದ್ದುದು ಗಮನೀಯ ವಿಚಾರವೊಂದಾಗಿದೆ.

ಭವಾನಿ ಶಂಕರನ ಸಾನ್ನಿಧ್ಯದಲ್ಲಿ ಹಾಡುವ ಸ್ತುತಿಪರ ಹಾಡುಗಳಲ್ಲಿ ದೈವದ ಮೂಲಸ್ಥಾನ ಕೈವಲ್ಯಪುರದ ಉಲ್ಲೇಖವಿತ್ತು. ಇತ್ತೀಚೆಗಷ್ಟೇ ಅದನ್ನು ತೊಡೆದಿಕ್ಕಲಾಗಿದೆ. ಎಲ್ಲೊಂದು ಹಳೆಯ ದಾಖಲೆ ಪತ್ರಗಳಲ್ಲಿ ಮತ್ತು ಮಠದ ರಾಯಸಗಳಲ್ಲಿ ಚಿತ್ರಾಪುರ ಸಾರಸ್ವತರನ್ನು ಗೌಡಸಾರಸ್ವತರೆಂದು ಉಲ್ಲೇಖಿಸಲಾಗಿದೆ.

ಗೋಕರ್ಣ, ಉತ್ತರ ಕನ್ನಡದ ಮಲ್ಲಾಪುರ ಮತ್ತು ಮಂಗಳೂರು, ಇಲ್ಲಿ ಚಿತ್ರಾಪುರ ಸಂಸ್ಥಾನದ ಮಠಗಳಿವೆ.

ಚಿತ್ರಾಪುರದ ಮಠದಲ್ಲಿ ೨ನೆಯ ಗುರು, ಮೊದಲನೆಯ ಶಂಕರಾಶ್ರಮರ; ೩ನೆಯ ಗುರು, ಎರಡನೆಯ ಪರಿಜ್ಞಾನಾಶ್ರಮರ; ೫ಯ ಗುರು, ಕೇಶವಾಶ್ರಮರ; ೭ನೆಯ ಗುರು, ಕೃಷ್ಣಾಶ್ರಮರ ಮತ್ತು ೮ನೆಯ ಗುರು, ಪಾಂಡುರಂಗಾಶ್ರಮರ ಸಮಾಧಿಗಳಿವೆ. ಗೋಕರ್ಣದಲ್ಲಿ ಮೊದಲನೆಯ ಗುರು, ಪರಿಜ್ಞಾನಾಶ್ರಮರ; ಮಲ್ಲಾಪುರದಲ್ಲಿ ೪ನೆಯ ಗುರು, ೨ನೆಯ ಶಂಕರಾಶ್ರಮರ; ಮಂಗಳೂರಿನಲ್ಲಿ ೬ನೆಯ ಗುರು, ವಾಮನಾಶ್ರಮರ ಸಮಾಧಿಗಳಿವೆ.

೬. ದಾಭೋಳಿ ಮಠ

ವೆಂಗುರ್ಲಾದ ಸಮೀಪದಲ್ಲಿದ್ದ ಸ್ಮಾರ್ತ ದಾಭೋಳಿ ಮಠ ಕುಡಾಲ್ದೇಶ್ಕಾರರಿಗೆ ಸಂಬಂಧಿಸಿದ್ದುದಾಗಿದೆ. ಸಾವಂತವಾಡಿ ಸಂಸ್ಥಾನ, ರತ್ನಾಗಿರಿ ಜಿಲ್ಲೆ, ಬೆಳಗಾಂ, ಹುಬ್ಬಿ, ಧಾರ್ವಾರ, ಕೊಲ್ಹಾಪುರ ಮತ್ತೆ ಇನ್ನಿತರ ಕೇಂದ್ರಗಳಲ್ಲಿ ಈ ಮಠದ ಅನುಯಾಯಿಗಳಿದ್ದಾರೆ.

ದಾಭೋಳಿ ಮಠದ ಮೊದಲನೆಯ ಗುರು, ಪೂರ್ಣಾನಂದ ಸರಸ್ವತಿಯುವರು ಸಂತರಿದ್ದರು.

೭. ಸಾಂತರ್ದೆ ಮಠ

ವೈಷ್ಣವ ಪೆಡ್ನೆಯುವರ ಈ ಮಠ ಸಾವಂತವಾಡಿಯ ಕುಡಾಲ್ ಮಹಾಲ್‌ನ ಸಾಂತರ್ದೆಯಲ್ಲಿದೆ. ಈ ಮಠದ ಗುರುಗಳ ಹೆಸರು 'ಆಶ್ರಮ'ದಿಂದ ಕೊನೆಗೊಳ್ಳುತ್ತವೆ.

ಸಂದರ್ಭಸೂಚಿ

೧. ಶ್ರೀ ಕೈವಲ್ಯಪುರ ಮಠದ ಸಂಕ್ಷಿಪ್ತ ಇತಿಹಾಸದ ಮೇರೆಗೆ ಗೌಡ ಪಾದಾಚಾರ್ಯರು ಕವಳೆ ಮಠದ ಮೊದಲ ಗುರುಗಳು. ಗೋವಿಂದ ಯತಿಗಳು ಎರಡನೆಯ ಗುರುಗಳು ಮತ್ತು ವಿವರಣಾಚಾರ್ಯರು (ಇವರನ್ನು ಗೋವಿಂದ ಯತಿಗಳ ಶಿಷ್ಯರೆನ್ನುತ್ತಾರೆ) ಮೂರನೆಯುವರು ಮಾತ್ರ ಇದು ದೋಷಪೂರ್ಣವಿದೆ. ಗೋವಿಂದ ಯತಿ ಮತ್ತು ವಿವರಣಾಚಾರ್ಯರು, ಇವರಿಬ್ಬರೂ ಗೌಡ ಪಾದಾಚಾರ್ಯರ ಶಿಷ್ಯರಾಗಿದ್ದರು. ಹಾಗೆಯೇ ಮೊದಲನೆಯ ಸತ್ಯಾನಂದ ಸರಸ್ವತಿಗಳಿಗೆ ಸನ್ಯಾಸಾಶ್ರಮವಿತ್ತ ಭವಾನಂದ ಸರಸ್ವತಿಗಳು ಈ ಮಠದ ೬೨ನೆಯ ಗುರುಗಳೆನ್ನಲಾಗಿದೆ.

೨. ೧೭೬೦ರಲ್ಲಿ ಸಾವಂತವಾಡಿಯ ಜೇಮ್ ಸಾವಂತ ಭೋಂಸ್ಲೆ ಸರ್ದೇಸಾಯಿ ಇವರು ಸೋನಾವಡೆ ಮಠಕ್ಕೆ ಭೂಮಿಯನ್ನು ದಾನವಾಗಿತ್ತರು.

೩. ೧೭೬೪ರಲ್ಲಿ ಮೊದಲನೆಯ ಮಾಧವರಾವ್ ಪೇಶ್ವೆ, ಕಟಗಲಿ ಮಂಡಲದಲ್ಲಿನ ಮಲ್ಲವಡಿ ಗ್ರಾಮವನ್ನು ಬಾಣಾಪುರದ ಮಠಕ್ಕಾಗಿ ಎರಡನೆಯ ಪೂರ್ಣಾನಂದ ಸರಸ್ವತಿಯುವರಿಗೆ ದಾನವಾಗಿತ್ತ.

೧೭೬೯ರಲ್ಲಿ ಹೇರೆ ಸಂಸ್ಥಾನದ ಲಖಮ್ ಸಾವಂತ ಭೋಂಸ್ಲೆ ಬಾಣಾಪುರದ ಮಠಕ್ಕಾಗಿ ಶಿವಾನಂದ ಸರಸ್ವತಿಯುವರಿಗೆ ಲಾಕುಡ್ ವಾಡಿ ತಾಲೂಕಿನಲ್ಲಿನ ಭಾಂಗಡ್ ಗ್ರಾಮವನ್ನು ದಾನವಾಗಿತ್ತ.

೪. ೧೭೩೫ರಲ್ಲಿ ಸಾಹು ಛತ್ರಪತಿ ಎರಡನೆಯ ಪೂರ್ಣಾನಂದ ಸರಸ್ವತಿಯುವರಿಗೆ ನಾಸಿಕದ ಮಠಕ್ಕಾಗಿ ಸಂಗಮ್ನೇರ್‌ನಲ್ಲಿನ ಸಾಯ್ ಖೇಡ ಗ್ರಾಮವನ್ನು ದಾನವಾಗಿತ್ತ.

೧೭೭೫ರಲ್ಲಿ ಸಯ್ಯಾಜಿರಾವ್ ಗಾಯಕ್‌ವಾಡ್ ಈ ಮಠಕ್ಕಾಗಿ ಎರಡನೆಯ ಶಿವಾನಂದ ಸರಸ್ವತಿಗಳಿಗೆ ರೂಪಾಯಿ ೧೫೨೫ರ ಅನುದಾನದ ವ್ಯವಸ್ಥೆ ಮಾಡಿದ್ದ. ಇದನ್ನೀಗ ಪುನಃ ಆರಂಭಿಸಲಾಗಿದೆ.

೫. ವಾಲುಕೇಶ್ವರದಲ್ಲಿನ ಮಠವನ್ನು ೬೩ನೇ ಗುರು ಸಚ್ಚಿದಾನಂದ ಸರಸ್ವತಿಗಳ ಶಿಷ್ಯ ಆತ್ಮಾನಂದ ಸರಸ್ವತಿಗಳಿಗಾಗಿ, ವೈಷ್ಣವರಿದ್ದ ರಾಮಶೆಣೈ (ವತ್ಸಗೋತ್ರದ

ಲೊಟ್ಲಿಕರ)ಯವರು ತಾನು ಖರೀದಿಸಿದ ನಿವೇಶನದಲ್ಲಿ ಕಟ್ಟಿಸಿದರು. ಈ ಮಠ ವಾಲುಕೇಶ್ವರ ದೇವಸ್ಥಾನದ ಸಮೀಪವಿದೆ.

೬. ಹೋಳ್ಕರರ ಸರಕಾರ ಬ್ರಹ್ಮಾವರ್ತ (ಪ್ರಯಾಗ) ದಲ್ಲಿನ ಮಠಕ್ಕಾಗಿ ಅಗರ್ ಮತ್ತು ಭತಾಸಾ ಗ್ರಾಮಗಳನ್ನು ದಾನವಾಗಿ ಕೊಟ್ಟಿತ್ತು. ಅನಂತರ ಸರಕಾರ ಈ ದಾನವನ್ನು ನಗದು ಹಣಕ್ಕೆ ಪರಿವರ್ತಿಸಿತು. ೪೦ ವರ್ಷಗಳ ಕಾಲ ತನ್ನ ಸ್ವಾಧೀನ ಇಟ್ಟುಕೊಂಡ ಗ್ರಾಮಗಳೆರಡನ್ನು ಮೂರನೆಯ ಪೂರ್ಣಾನಂದರ ಕಾಲಾವಧಿಯಲ್ಲಿ ರಾವ್‌ಬಹದ್ದೂರ್ ಬಲವಂತ ಪಾಂಡುರಂಗ ವಾಗ್ಳೆಯವರು ೧೯೦೪ರಲ್ಲಿ ಮಠಕ್ಕೆ ಮರಳಿ ಗಳಿಸಿಕೊಟ್ಟರು.

ಈ ಮಠದಲ್ಲಿನ ಪೂಜೆಯನ್ನು ಚಿತ್ಪಾವನ ಅರ್ಚಕರು ಮಾಡುತ್ತಾರೆ.

೧೭೮೪ರ ಎಪ್ರಿಲ್ ತಿಂಗಳ ೪ರಂದು ಅಲ್ಲಹಾಬಾದ್‌ನ ಸುಭೇದಾರ ರೂಪಾಯಿ ೭೦೦ರಷ್ಟು ಆದಾಯವೀಯುವ ಗ್ರಾಮಗಳೆರಡನ್ನು (ಭಾಸೋಡಿ ಮತ್ತು ಪತ್ರಾವಾ) ಪ್ರಯಾಗದಲ್ಲಿನ ಮಠಕ್ಕಾಗಿ ಎರಡನೆಯ ಶಿವಾನಂದ ಸರಸ್ವತಿಯವರಿಗಿತ್ತ.

೭. ಸುಮಾರು ೨೦೦ವರ್ಷಗಳ ಹಿಂದೆ, ಗೋಕರ್ಣದಲ್ಲಿನ ಪ್ರಸಿದ್ಧ ನಾಡಕರ್ಣಿಗಳ ಕುಟುಂಬದ ಶಾಖೆಯೊಂದಕ್ಕೆ ಸೇರಿದ್ದ ಅನಂತಯ್ಯನವರ ಪ್ರಯತ್ನದಿಂದ, ಭಾರೀ ಹಣ ವ್ಯಯಿಸಿ ಮಹಾಬಲೇಶ್ವರನ ದೇವಸ್ಥಾನದ ಜೀರ್ಣೋದ್ಧಾರ ಮಾಡಲಾಯಿತು. ಈ ಕುಟುಂಬದ ಸದಸ್ಯರು ಕೆಲವೊಂದು ತಲೆಮಾರುಗಳುದ್ದ ಪಾರುಪತ್ಯಗಾರರ ಹೊಣೆಗಾರಿಕೆ ಕೊಂಡಿದ್ದರು.

೮. ಈ ವಿವರಗಳು ಶ್ರೀ ಎಚ್. ಲಕ್ಷ್ಮೀನಾರಾಯಣ ಕಾಮತರು ಉತ್ತರಾದಿ ಮತ್ತು ಕುಂಬಕೋಣಂ ಮಠಗಳ ಪರಂಪರೆಯ ಇತಿಹಾಸದ ಕುರಿತು ಮಾಡಿದ್ದ ಸಂಶೋಧನೆ ಮತ್ತು ತತ್ಸಂಬಂಧಿ ದಾಖಲೆಗಳ ಆಧಾರಕೊಂಡಿವೆ.

ಕಾಶಿಮಠದ ಗುರುಗಳ ಪರಂಪರೆಯ ಕುರಿತಾಗಿ ೧೭ನೇಯ ಗುರು, ವಿಭುದೇಂದ್ರ ತೀರ್ಥರು ಸಂಸ್ಕೃತದ ಶ್ಲೋಕಗಳ ರೂಪದಲ್ಲಿ ರಚಿಸಿದ್ದ 'ಗುರುಪ್ರವರ ಮಂಜರಿ' ಯನ್ನು ಶ್ರೀ ಜಿ. ಆರ್. ಶರ್ಮರು ೧೯೩೨ರಲ್ಲಿ ಮಲೆಯಾಳಂ ಭಾಷೆಗೆ ಭಾಷಾಂತರ ಮಾಡಿರುತ್ತಾರೆ. ಅದರಲ್ಲಿ ಹೀಗೆ ಹೇಳಲಾಗಿದೆ: ಮಧ್ವಾಚಾರ್ಯರು ಗೋವಾ ಸಂದರ್ಶಿಸಿದ ಒಂದು ವರ್ಷದ ನಂತರ, ೧೨೬೮ರಲ್ಲಿ ಅವರ ಶಿಷ್ಯರಾದ ಪದ್ಮನಾಭ ತೀರ್ಥರು ಗೋವಾದಲ್ಲಿ ಚಾತುರ್ಮಾಸ ವ್ರತಾಚರಣೆಗಾಗಿ ತಂಗಿದ್ದರು. ಆ ದಿನಗಳಲ್ಲಿ ಅವರು ಸಾರಸ್ವತನೊಬ್ಬನಿಗೆ ಸನ್ಯಾಸದ ದೀಕ್ಷೆ ಇತ್ತರು.

ರಾಘವೇಂದ್ರ (ರಘುವರ್ಯ) ತೀರ್ಥರೆಂದು ಪರಿಚಿತರಾಗಿದ್ದ ಇವರಿಗೆ ವಾಗೀಶ ತೀರ್ಥರೆಂಬ ಹೆಸರಿನ ಶಿಷ್ಯರಿದ್ದರು. ರಾಮಚಂದ್ರತೀರ್ಥರು ವಾಗೀಶ ತೀರ್ಥರ ಶಿಷ್ಯರು. ರಾಮಚಂದ್ರ ತೀರ್ಥರಿಗೆ ನಾರಾಯಣ ತೀರ್ಥ ಮತ್ತು ವಾಸುದೇವ ತೀರ್ಥರೆಂಬ ಶಿಷ್ಯರಿಬ್ಬರಿದ್ದರು. ನಾರಾಯಣ ತೀರ್ಥರು ಕಾಶಿಮಠದ ಮತ್ತು ವಾಸುದೇವ ತೀರ್ಥರು ಗೋಕರ್ಣ ಮಠದ ಮೊದಲ ಗುರುಗಳಾದರು. ಆ ಬಳಿಕ ರಘುಚಂದ್ರ ತೀರ್ಥರು ಕಾಶಿಮಠದ ೨ನೆಯ, ಸಮ್ಯಮೇಂದ್ರ ತೀರ್ಥರು ೩ನೆಯ, ವಿದ್ಯಾನಿಧಿ ತೀರ್ಥರು ೪ನೆಯ, ಯಾದವೇಂದ್ರ ತೀರ್ಥರು ೫ನೆಯ ಗುರುಗಳಾದರು. ಈ ನಿರೂಪಣೆಯನ್ನು ಶ್ರೀ ಗಣಪತಿರಾವ್ ಐಗಳ್ ಇವರ 'ದ ಹಿಸ್ಟರಿ ಆಫ್ ಶ್ರೀ ಕಾಶಿ ಮಠ್' ದಲ್ಲಿಯೂ ಕಾಣಬಹುದು.

ಭಟ್ಕಳದ ನರಸಿಂಹ ಪುರಾಣಿಕ (ಗೋಕರ್ಣ ಮಠದ ೨೦ನೆಯ ಗುರು ಇಂದಿರಾ ಕಾಂತರ ತಂದೆ) ಮತ್ತು ಕುಮ್ಟಾದ ನರಸಿಂಹಾಚಾರ್ಯರು ಸೇರಿ ೧೯೦೪ರಲ್ಲಿ ಸಂಸ್ಕೃತದ ಶ್ಲೋಕಗಳ

ರೂಪದಲ್ಲಿ ರಚಿಸಿದ 'ಗುರುಪರಾಮೃತ' (ಅಧ್ಯಾಯ ೧-೨೬-೯೭) ದಲ್ಲಿ ಈ ಮುಂದಣ ವಿವರಗಳನ್ನು ಕಾಣಬಹುದು :

ಮಧ್ವಾಚಾರ್ಯರು ಬದರಿಕಾಶ್ರಮಕ್ಕೆ ತೆರಳಿದಾಗ ಅವರೊಂದಿಗೆ ಗೋವಾದ ಮಾಧವ ಹೆಸರಿನ ಸಾರಸ್ವತನೊಬ್ಬನೂ ಹೋಗಿದ್ದ. ಉಡುಪಿಯ ಪಲಿಮಾರು ಮಾಧವ ಗುರುರಾಮಚಂದ್ರತೀರ್ಥರು ತನ್ನ ಆರೋಗ್ಯ ಕೆಟ್ಟಾಗ, ಶಿಷ್ಯನೊಬ್ಬನನ್ನು ಕೊಂಡಿರದಿದ್ದ ತನಗೆ ಮೋಕ್ಷ ದೊರಕದೆಂಬ ಭೀತಿಯಿಂದ ಮಾಧವನಿಗೆ ಸನ್ಯಾಸಾಶ್ರಮವಿತ್ತು ನಾರಾಯಣ ತೀರ್ಥರೆಂಬ ಅಭಿದಾನವಿತ್ತರು. ನಾರಾಯಣ ತೀರ್ಥರು ಗೋಕರ್ಣ ಮಠದ ಮೊದಲ ಗುರುಗಳು. ಅವರ ಶಿಷ್ಯರಿಬ್ಬರಲ್ಲಿನ ವಾಸುದೇವ ತೀರ್ಥರು ಗೋಕರ್ಣ ಮಠದ ಎರಡನೆಯ ಗುರುಗಳು; ಇನ್ನೊಬ್ಬ ಶಿಷ್ಯ ಸಮ್ಯಮೀಂದ್ರ ತೀರ್ಥರು ಕಾಶೀಮಠದ ಮೊದಲ ಗುರುಗಳು.

ಗೋಕರ್ಣ ಮಠದ ಗುರುಗಳು ತಮ್ಮನ್ನು 'ಶ್ರೀ ಪಲಿಮಾರ ಮಠದ ಸಂಪ್ರದಾಯ ಪ್ರವರಕೆ' ಎಂದಾಗಿ ವರ್ಣಿಸಿರುವುದನ್ನು ೧೮೬೨ರಲ್ಲಿ ಪೂನಾದ ಪಂಡಿತರು ಈ ಮಠದ ೧೮ನೆಯ ಗುರು. ಪೂರ್ಣಪ್ರಜ್ಞ ತೀರ್ಥರಿಗೆ ಶಾಸ್ತ್ರಗಳ ಅಭ್ಯಾಸ ಮಾಡಿ ಕಾಶಿಯಿಂದ ಮರಳಿದಾಗ ಇತ್ತ ಮಾನಪತ್ರವನ್ನು ಕಂಡು ಅರಿಯಬಹುದು.

ಆದರೆ ಮೇಲಣ ವಿಚಾರ ದೋಷಪೂರ್ಣವಿದೆ. 'ಗುರುಪರಾಮೃತ' ದ ಮೇರೆಗೆ ಪಲಿಮಾರು ಮಠದ ಗುರು ಶ್ರೀರಾಮಚಂದ್ರತೀರ್ಥರು ೧೪೨೪ರಲ್ಲಿ ಫಂಡರಪುರದಲ್ಲಿ ಸಮಾಧಿ ಮಾಡಿಕೊಂಡಿದ್ದರು. ಶ್ರೀ ಹೆಚ್. ಲಕ್ಷ್ಮೀನಾರಾಯಣ ಕಾಮತರಿಗೆ ಗೋಕರ್ಣ ಮಠದಲ್ಲಿ ದೊರಕಿದ ದಾಖಲೆಯೊಂದರ ಮೇರೆಗೆ ಮೊತ್ತ ಮೊದಲ ಗುರುಗಳಾದ ನಾರಾಯಣ ತೀರ್ಥರಿಗೆ ಉತ್ತರಾದಿ ಮಠದ ರಘೋತ್ತಮತೀರ್ಥರು ಸನ್ಯಾಸದ ದೀಕ್ಷೆಯಿತ್ತಿದ್ದರು. ಪ್ರಕಾಶಿಸಲ್ಪಟ್ಟಿದ್ದ ಉತ್ತರಾದಿ ಮಠದ ದಾಖಲೆಗಳ ಮೇರೆಗೆ ಇದು ೧೫೫೭-೧೫೯೭ರ ನಡುವಣ ಅವಧಿಯಲ್ಲಿ ಘಟಿಸಿದ್ದಿರಬೇಕು.

'ಗುರು ಪ್ರವರ ಮಂಜರಿ'ಯ ಮೇರೆಗೆ ಕಾಶಿ ಮಠದ ಮೊತ್ತ ಮೊದಲ ಗುರು ಯಾದವೇಂದ್ರ ತೀರ್ಥರು ಕುಂಬಕೋಣಂ ಮಠದ ವಿಜಯೀಂದ್ರ ತೀರ್ಥರ ಶಿಷ್ಯರು. ನಾರಾಯಣ ತೀರ್ಥ, ರಘುಚಂದ್ರ ತೀರ್ಥ, ಸಮ್ಯಮೀಂದ್ರ ತೀರ್ಥ ಮತ್ತು ವಿಧ್ಯಾಸಿಧಿ ತೀರ್ಥರು ಕಾಶಿಮಠದ ಗುರುಗಳಾಗಿರದಿದ್ದು ಬಹುಶಃ, ಕೆಲವೊಬ್ಬ ವೈಷ್ಣವ ಸಾರಸ್ವತರು ನಂಬಿದ್ದ ಅನ್ಯ ಮಠಗಳ ಗುರುಗಳಾಗಿದ್ದಿರಬೇಕು.

ಕುಂಬಕೋಣಂ ಮಠದ ಖ್ಯಾತನಾಮ ರಾಘವೇಂದ್ರ ತೀರ್ಥರು (ಈ ಮಠ ಈಗ ಅವರು ಹೆಸರು ಕೊಂಡು 'ರಾಘವೇಂದ್ರ ಮಠ' ವೆಂದಾಗಿ ಪ್ರಸಿದ್ಧವಾಗಿದೆ) ವಿಜಯೀಂದ್ರ ತೀರ್ಥರ ಉತ್ತರಾಧಿಕಾರಿಯಿದ್ದ ಸುಧೀಂದ್ರ ತೀರ್ಥರ ಶಿಷ್ಯರು. ಅವರ ಸಮಾಧಿ ಕರ್ನೂಲು ಜಿಲ್ಲೆಯ, ಅದೋನಿ ತಾಲೂಕಿನಲ್ಲಿ ಹರಿಯುವ ತುಂಗಭದ್ರಾ ನದಿಯ ತೀರದಲ್ಲಿನ ಮಂತ್ರಾಲಯದಲ್ಲಿದೆ. ಯೋಗೀಂದ್ರ ತೀರ್ಥರು ಅವರ ಶಿಷ್ಯರು. ಈಮಠದ ಮುಖ್ಯ ಕಾರ್ಯಾಲಯ ಮೈಸೂರು ತಾಲೂಕಿನ ನಂಜನಗೂಡಿನಲ್ಲಿದೆ.

೦. ಉತ್ತರ ಕನ್ನಡದಲ್ಲಿನ ಭಟ್ಕಳದ ಉತ್ತರದಲ್ಲಿನ ವೈಷ್ಣವ ಸಾರಸ್ವತರು ಉತ್ತರಾದಿ ಮಠದ ಮತ್ತು ಮಂಗಳೂರಿನ ದಕ್ಷಿಣಕ್ಕಿದ್ದವರು ಕುಂಬಕೋಣಂ ಮಠದ ಅನುಯಾಯಿಗಳಿದ್ದರು. ಇವೆರಡವುಗಳ ನಡುವಣ, ಭಟ್ಕಳದಿಂದ ಮಂಗಳೂರಿನ ತನಕದ ಪ್ರಾಂತ ಈ ಎರಡೂ ಮಠಗಳ ಅನುಯಾಯಿಗಳನ್ನುಕೊಂಡಿದೆ.

ಮಂಗಳೂರಿನಲ್ಲಿನ ವಡೇರ್ ಮಠದ ಕೇರಿಯಲ್ಲಿನ ಜೋಡುಮಠವನ್ನು ವೈಷ್ಣವ ಸಾರಸ್ವತರು ಉತ್ತರಾದಿ ಮತ್ತು ಕುಂಬಕೋಣಂ ಮಠಗಳ ಗುರುಗಳು ಉಡುಪಿಯ ಶ್ರೀಕೃಷ್ಣನ ದರ್ಶನಕ್ಕಾಗಿ ಹೋಗುವಾಗ ಉಳಿದುಕೊಳ್ಳಲಾಗಿ ಕಟ್ಟಿದ್ದುದಾಗಿದೆ. 'ವಡೇರ್' ಈ ಮಠಗಳ ಗುರುಗಳ ವಿಶಿಷ್ಟ ಬಿರುದಾಗಿದೆ. ಈ ಬಿರುದನ್ನು ಈಗ ಕಾಶಿ ಮತ್ತು ಗೋಕರ್ಣ ಮಠಗಳ ಗುರುಗಳು ಬಳಸುತ್ತಾರೆ.

೧೧. ಅವರಲ್ಲಿನ ಅನಂತನಾರಾಯಣಾಚಾರ್ಯರು ಶ್ರೇಷ್ಠ ಪಂಡಿತರಿದ್ದು ಕರ್ನಾಟಕದಲ್ಲಿ ಅವರನ್ನು ಗೌರವದಿಂದ ಕಾಣುತ್ತಾರೆ. ಕೋದಂಡ ರಾಮಾಚಾರ್ಯ ಮತ್ತು ಮುಕುಂದಾಚಾರ್ಯ ಇವರು ಅವರ ಮಕ್ಕಳು; ವೆಂಕಟರಮಣಾಚಾರ್ಯರು ಅವರ ಮೊಮ್ಮಗ. ಇವೆರೆಲ್ಲರೂ ಪ್ರಸಿದ್ಧ ಪಂಡಿತರಿದ್ದರು.

೧೨. ಶ್ರೀ ಎಚ್. ಲಕ್ಷ್ಮೀನಾರಾಯಣ ಕಾಮತರು ಕಾಶಿ ಮಠದ ಪರಂಪರೆಯ ಕುರಿತಾದ ದಾಖಲೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ 'ಗುರುಪ್ರವರ ಮಂಜರಿ'ಯಲ್ಲಿತ್ತಿದ್ದ ಉತ್ತರಾಧಿಕಾರಿಗಳ ಕ್ರಮ (ನಾರಾಯಣ ತೀರ್ಥ, ರಘುಚಂದ್ರತೀರ್ಥ, ಸಮ್ಯಮೇಂದ್ರ ತೀರ್ಥ, ವಿದ್ಯಾನಿಧಿ ತೀರ್ಥ, ಯಾದವೇಂದ್ರ ತೀರ್ಥ, ಉಪೇಂದ್ರ ತೀರ್ಥ, ರಾಘವೇಂದ್ರ ತೀರ್ಥ, ಮಾಧವೇಂದ್ರ ತೀರ್ಥ ಮತ್ತು ರಾಜೇಂದ್ರ ತೀರ್ಥ) ದೋಷಯುಕ್ತವಿರುವುದಾಗಿ ನುಡಿದಿರುತ್ತಾರೆ. ಅವರ ಮೇರೆಗೆ ಉತ್ತರಾಧಿಕಾರಿಗಳ ಕ್ರಮ ಈ ಮುಂದಿನಂತಿದೆ :

ಗುರು ಯಾದವೇಂದ್ರ ತೀರ್ಥ (೧), ಕೇಶವೇಂದ್ರ ತೀರ್ಥ (೨), ಮೊದಲನೆಯ ಉಪೇಂದ್ರತೀರ್ಥ (೩), ಎರಡನೆಯ ಯಾದವೇಂದ್ರ ತೀರ್ಥ (೪), ರಾಘವೇಂದ್ರ ತೀರ್ಥ (೫), ದೇವೇಂದ್ರ ತೀರ್ಥ (೬), ಮಾಧವೇಂದ್ರ ತೀರ್ಥ (೭), ಜ್ಞಾನೇಂದ್ರ ತೀರ್ಥ (೮), ಮೂರನೆಯ ಯಾದವೇಂದ್ರ ತೀರ್ಥ (೯), ೨ನೆಯ ಉಪೇಂದ್ರ ತೀರ್ಥ (೧೦), ರಾಜೇಂದ್ರ ತೀರ್ಥ (೧೧), ಸುರೇಂದ್ರ ತೀರ್ಥ (೧೨), ವಿಷ್ಣುತೀರ್ಥ (೧೩), ವಿಭುದೇಂದ್ರ ತೀರ್ಥ (೧೪), ಸುಮತೇಂದ್ರ ತೀರ್ಥ (೧೫), ವಸುದೇಂದ್ರ ತೀರ್ಥ (೧೬), ಭುವನೇಂದ್ರ ತೀರ್ಥ (೧೭), ವರದೇಂದ್ರ ತೀರ್ಥ (೧೮), ಸುಕೃತೀಂದ್ರ ತೀರ್ಥ (೧೯) ಮತ್ತು ಸುಧೀಂದ್ರ ತೀರ್ಥ.

೧೩. ಉತ್ತರಾದಿ ಮತ್ತು ಕುಂಬಕೋಣಂ ಮಠಗಳ ಕನ್ನಡಿಗ ಬ್ರಾಹ್ಮಣರ ಶಿಷ್ಯವರ್ಗ ಮತ್ತು ವೈಷ್ಣವ ಸಾರಸ್ವತರಲ್ಲಿ ಅಂತರ್ಭೋಜನದ ಕಾರ್ಯಕ್ರಮ ನಡೆಯುತ್ತಿತ್ತು.

೧೫೯೯ರಲ್ಲಿ ಕೊಚ್ಚಿನ್‌ನಲ್ಲಿನ ತಿರುಮಲ ದೇವಸ್ಥಾನದಲ್ಲಿ ವೆಂಕಟಾಚಲಪತಿಯ ವಿಗ್ರಹ ಪ್ರತಿಷ್ಠಾಪಿಸಲ್ಪಟ್ಟಾಗ ಕುಂಬಕೋಣಂ ಮಠಾಧಿಪತಿಗಳು ವರ್ಷದಲ್ಲಿನ ಮೂರು ದಿನ ದೇವಸ್ಥಾನದಲ್ಲಿ ಪೂಜೆ ಮಾಡಬಹುದಾಗಿ ಒಪ್ಪಿಕೊಳ್ಳಲಾಗಿತ್ತು. ಕುಂಬಕೋಣಂ ಮಠದ ಯೋಗೀಂದ್ರ ತೀರ್ಥರು ಕೊಚ್ಚಿಗೆ ಬಂದಾಗ ಕಾಶೀಮಠದ ಐದನೆಯ ಗುರು ರಾಘವೇಂದ್ರ ತೀರ್ಥರು ಅವರನ್ನು ಹೂಮಾಲೆಯೊಂದಿಗೆ ಸ್ವಾಗತಿಸಿದ್ದರು. ಯೋಗೀಂದ್ರ ತೀರ್ಥರು ಪೂಜ್ಯರಿದ್ದ ತನ್ನ ಗುರುಗಳ ಹೆಸರನ್ನು ರಾಘವೇಂದ್ರ ತೀರ್ಥರು ಧರಿಸಿದ್ದುದನ್ನು ಕಂಡು ಕೋಪೋದ್ರಿಕ್ತರಾಗಿ ತನ್ನ ಸ್ವಾಗತಕ್ಕಾಗಿ ಅವರು ಕೈಗಳಲ್ಲಿ ಕೊಂಡಿದ್ದ ಹೂಮಾಲೆಯನ್ನು ದಂಡದಿಂದ ತೂರಿದರು. ಈ ಕಾರಣ ಅವರ ದೇವಸ್ಥಾನ ಪ್ರವೇಶಕ್ಕೆ ತಡೆಯೊಡ್ಡಲಾಯಿತು. ಇದು ವೈಷ್ಣವ ಸಾರಸ್ವತರ ಮೇಲಣ ಧರ್ಮಗುರುಗಳಿಬ್ಬರ ಅಧಿಕಾರಕ್ಕೆ ಸಂಬಂಧಿಸಿದ ದಾವೆಗೆ ಕಾರಣವಾಯಿತು. ಕಟ್ಟಕಡೆಗೆ ಕಾಶಿಮಠದ ಗುರುಗಳ ಪರವಾಗಿ ತೀರ್ಪು ದೊರಕಿತು. ಅನಂತರ ಮಠಗಳೆರಡರ ಅನುಯಾಯಿಗಳ ನಡುವೆ ಅಂತರ್ಭೋಜನ ನಡೆದಿದ್ದುದಿಲ್ಲ.

೧೪. ಪುಣ್ಯ ಪುರುಷ ಭುವನೇಂದ್ರ ತೀರ್ಥರು ವಿದ್ವಾಂಸರಿದ್ದಂತೆ ಖ್ಯಾತನಾಮ ಆಯುರ್ವೇದಿಯ ವೈದ್ಯರೂ ಆಗಿದ್ದರು. ಅವರು ಕೆನರಾ, ಕೇರಳಗಳಲ್ಲಿ ಸರ್ಪದಂಶದ ಉಪಚಾರಕ್ಕೆ ಪ್ರಸಿದ್ಧರಾಗಿದ್ದರು. ಕೊಚ್ಚಿಯ ಮಟ್ಟಾಂಚೇರಿಯಲ್ಲಿ ಅವರು ಭಾರತದಲ್ಲೇ ಅಪೂರ್ವವಿದ್ದ ಧನ್ವಂತರಿಯ ದೇವಸ್ಥಾನವನ್ನು ಕಟ್ಟಿಸಿದರು. ದಕ್ಷಿಣ ಕನ್ನಡ ಮತ್ತು ಕೇರಳದಲ್ಲಿ ಹಲವೊಂದು ಶಿಕ್ಷಣ ಸಂಸ್ಥೆಗಳಿಗೆ ಅವರ ಹೆಸರನ್ನಿಡಲಾಗಿದೆ.

೧೫. 'ಗುರುಪರಾಮೃತ'ದಲ್ಲಿ ಗೋಕರ್ಣ ಮಠದ ಮೊದಲ ಗುರು ನಾರಾಯಣ ತೀರ್ಥರು ಮೊದಲ್ಗೊಂಡು ಆಶ್ರಮಕೊಂಡಿದ್ದ ಸಮಸ್ತ ಉತ್ತರಾಧಿಕಾರಿಗಳ ವಿವರಗಳನ್ನು ಈ ಮುಂದಿನಂತೀಯಲಾಗಿದೆ :

೧) ವಾಸುದೇವ ತೀರ್ಥ ೨) ಜೀವೋತ್ತಮ ತೀರ್ಥ ೩) ಪುರುಷೋತ್ತಮ ತೀರ್ಥ ೪) ಅನುಜೀವೋತ್ತಮ ತೀರ್ಥ . ಈ ಕುರಿತು ಕೂಲಂಕಶ ಸಂಶೋಧನೆ ಮಾಡಿದ್ದ ಶ್ರೀ ಎಚ್. ಲಕ್ಷ್ಮೀನಾರಾಯಣ ಕಾಮತರು ಗೋಕರ್ಣಮಠದಲ್ಲಿ ೧೫೪೦ಕ್ಕೂ ಹಿಂದಣ ಯಾವೊಂದೂ ಆಧಾರ ಪತ್ರಗಳು ದೊರಕಿಲ್ಲವೆಂದು ಹೇಳುತ್ತಾರೆ. ೧೫೪೦-೧೫೬೦ರ ಕಾಲಾವಧಿಯಲ್ಲಿನ ಅನುಜೀವೋತ್ತಮರ ಕುರಿತಾದ ದಾಖಲೆ ಪತ್ರಗಳು ದೊರಕಿದ್ದರೂ ಅಲ್ಲಿ ವಾಸುದೇವ ತೀರ್ಥ ಮತ್ತು ಪುರುಷೋತ್ತಮ ತೀರ್ಥರ ಹೆಸರಿನ ಉಲ್ಲೇಖ ಕಾಣವಿತ್ತು. ಅಲ್ಲಿ ಈ ಹೆಸರಿನ ಗುರುಗಳೇ ಇದ್ದಿಲ್ಲವೆಂದು ಅವರು ಹೇಳುತ್ತಾರೆ. ನಾರಾಯಣ ತೀರ್ಥರಿಗೆ ೧೪೭೬ರಲ್ಲಿ ಉಡುಪಿಯ ಫಲಿಮಾರು ಮಠದ ರಾಮಚಂದ್ರ ತೀರ್ಥರು ಆಶ್ರಮವನ್ನಿತ್ತರೆಂದು ಹೇಳಲಾಗಿದ್ದರೂ ವಾಸ್ತವಿಕವಾಗಿ ಆಶ್ರಮವನ್ನು ೧೫೭೭-೧೫೯೭ರ ನಡುವಣ ಕಾಲದಲ್ಲೀಯಲಾಗಿತ್ತು. ದಾಖಲೆ ದೊರಕದಿದ್ದ ಗುರುಗಳಿಬ್ಬರ ಹೆಸರುಗಳನ್ನು ತರಪು ತುಂಬಲಾಗಿ ಬಳಸಿದ್ದಿರಬೇಕೆಂದು ಅವರು ನುಡಿಯುತ್ತಾರೆ.

ಅಧ್ಯಾಯ ೧೭

ವೈಷ್ಣವ ಸಾರಸ್ವತ ದೇವಸ್ಥಾನಗಳು

ದಕ್ಷಿಣದಲ್ಲಿನ ಹೆಚ್ಚಾದ ವೈಷ್ಣವ ಸಾರಸ್ವತರ ದೇವಸ್ಥಾನಗಳಲ್ಲಿ ಪೂಜಿಸಲ್ಪಡುವ ದೇವರು ವೆಂಕಟರಮಣನಿದ್ದು ಈ ದೇವಸ್ಥಾನಗಳಲ್ಲಿನ ವರ್ಷಾವಧಿಯ ಧಾರ್ಮಿಕ ಅನುಷ್ಠಾನಗಳ ಪೂರ್ವಾಂಗವಾಗಿ ಗರುಡಧ್ವಜಾರೋಹಣ ಮಾಡುವ ಕ್ರಮವಿದೆ. ಗರುಡ ಧ್ವಜ ಗೋವಾವನ್ನು ಎಷ್ಟೊಂದೋ ವರ್ಷಗಳ ಕಾಲ ಆಳಿಕೊಂಡಿದ್ದ ರಾಷ್ಟ್ರಕೂಟರ ಅರಸರ ಧ್ವಜವೂ ಆಗಿತ್ತು.

ದೇವಸ್ಥಾನಗಳಲ್ಲಿ ಆರಾಧಿಸಲ್ಪಡುವ ವಿಗ್ರಹಗಳನ್ನು ಪಂಚಧಾತು (ಐದು ಪ್ರಕಾರದ ಲೋಹ) ಗಳಿಂದ ಮಾಡಲಾಗುತ್ತದೆ. ೧೫೬೫ರಲ್ಲಿನ ರಕ್ಕಸತಂಗಡಿಯ ಕದನದ ಬಳಿಕ ಮುಸಲ್ಮಾನರು ವಿಜಯನಗರದೊಂದಿಗೆ ಅಲ್ಲಿನ ದೇವಸ್ಥಾನಗಳನ್ನೂ ಸುಲಿದರು. ಆಗ ಎಷ್ಟೊಂದೋ ಮಂದಿ ದೇವರ ವಿಗ್ರಹಗಳೊಂದಿಗೆ ಪಲಾಯನ ಮಾಡಿದರು. ಈ ವಿಗ್ರಹಗಳಲ್ಲಿನ ಹೆಚ್ಚಿನವನ್ನು ಮಾರಲಾಯಿತು. ಕೊಚ್ಚಿನ್‌ನಲ್ಲಿನ ವೆಂಕಟಾಚಲಪತಿಯ ವಿಗ್ರಹ ಅವುಗಳಲ್ಲೊಂದಾಗಿದೆ. ಕಾರ್ಕಳ ಮತ್ತು ಬಸ್ರೂರು ದೇವಸ್ಥಾನಗಳಲ್ಲಿನ ವಿಗ್ರಹಗಳ ಹಣೆಯ ಮೇಲಕ್ಕೆ ವೈಷ್ಣವ ಸಂಪ್ರದಾಯದ ನಾಮವಿದೆ.

ಕೆಲವೊಂದು ದೇವಸ್ಥಾನಗಳಲ್ಲಿ (ಮಂಜೇಶ್ವರ, ಕಾರ್ಕಳ, ಮುಲ್ಕಿ, ಗುರುಪುರ) 'ದರ್ಶನ' (ಗೋವಾದಲ್ಲಿನ ದೇವಸ್ಥಾನಗಳಲ್ಲಿ ಕಾಣಬರುವ ಕಾಲಭೈರವನ ಆವೇಶ, ಆನಂತರದ ದೇವವಾಣಿ) ವಿದ್ದು ಅದು ಅನ್ಯಧರ್ಮೀಯರನ್ನೂ ಆಕರ್ಷಿಸುತ್ತದೆ.

೧. ಮಂಜೇಶ್ವರ

ಇಳಾವತಿ (ಉಪ್ಪಳ ನದಿ) ಮತ್ತು ಮತ್ಸ್ಯ ತೀರ್ಥ (ಬಂಗ್ರ ಮಂಜೇಶ್ವರ ನದಿ)ಗಳ ಸಂಗಮ ಸ್ಥಾನದ ಬಳಿಯ ಮಂಜೇಶ್ವರದಲ್ಲಿನ ' ಪ್ರಾಚೀನ ಮತ್ತು ಪವಿತ್ರವಿದ್ದ ದೇವಸ್ಥಾನ ಪಶ್ಚಿಮ ಕರಾವಳಿಯಲ್ಲಿನ ವೈಷ್ಣವ ಸಾರಸ್ವತರ ಪ್ರಮುಖ ಪ್ರತಿಷ್ಠಾನವೊಂದಾಗಿದೆ. ಇಲ್ಲಿ ರಥೋತ್ಸವದ ಮೊದಲು ಮತ್ತು ರಥೋತ್ಸವದ ನಂತರ ಅಗ್ರಪೀಠದಲ್ಲಿನ ಭದ್ರ ನರಸಿಂಹನ ಹೆಸರು ಮತ್ತು ಮುದ್ರೆಯೊಂದಿಗೆ ಆಜ್ಞಾ ಪತ್ರವನ್ನು ಹೊರಡಿಸುವ ಪದ್ಧತಿಯಿದೆ.

ಮಂಜೇಶ್ವರ ವಾಸುಕಿ ಕ್ಷೇತ್ರ, ಮಂಜುಕ್ಷೇತ್ರ, ಮಂಜುಳಾಪುರವೆಂದಾಗಿಯೂ ಪರಿಚಿತವಾಗಿದೆ. ದೇವಸ್ಥಾನ ಅಲ್ಲಿನ ಮುಖ್ಯ ದೇವರ ನಿಮಿತ್ತ ಪ್ರಸಿದ್ಧಿಕೊಂಡಿದೆ. ಈ ದೇವಸ್ಥಾನ ದಕ್ಷಿಣ ಕನ್ನಡದ ಆಳುಪ ಮಹಾ ಮಂಡಲೇಶ್ವರ ಕುಂದವರ್ಮ ಕಟ್ಟಿಸಿದ್ದು ಸ್ಥಾನೀಯ ಬಲ್ಲಾಳರ ಸಂಸ್ಥಾನ ಮಾನ್ಯ ದೇವಸ್ಥಾನವಾಗಿತ್ತು; ಆಡಳಿತೆ ಸಾರಸ್ವತರ ಕೈಗಳಿಗೆ ಬರುವ ಹೊತ್ತಿಗೆ ಈ ದೇವಸ್ಥಾನ ಹಾಳು ಬಿದ್ದಿತ್ತು. ಅವರು ಅದರ ಜೀರ್ಣೋದ್ಧಾರ ಮಾಡಿದರು.

ಸ್ಥಳಪುರಾಣದ ಮೇರೆಗೆ ಭರದ್ವಾಜ ಗೋತ್ರದ ಹರಿಶರ್ಮನ ಮಗ ಮತ್ತು

ಸುಬ್ರಹ್ಮಣ್ಯ ದೇವರ ಭಕ್ತನಿದ್ದ ರಂಗಶರ್ಮ ಗೋವಾದಲ್ಲಿನ ತನ್ನ ಮನೆ ಬಿಟ್ಟು ಯಾತ್ರೆಗಾಗಿ ದಕ್ಷಿಣಕ್ಕೆ ಬಂದ. ದಾರಿ ಸಾಗುತ್ತಿದ್ದ ಈತ ಶಂಕಮಲೆ ಅರಣ್ಯ (ದೇವಸ್ಥಾನದ ಸದ್ಯದ ನಿವೇಶ) ದತ್ತ ಬಂದು ರಾತ್ರಿಯ ಹೊತ್ತನ್ನು ಅಲ್ಲಿ ಕಳೆದ. ಸ್ವಪ್ನದಲ್ಲಿ ಕಾಣಬಂದ ಸುಬ್ರಹ್ಮಣ್ಯ ಅಲ್ಲಿ ದೇವಸ್ಥಾನವೊಂದನ್ನು ಕಟ್ಟಲು ಮತ್ತು ಗೋವಾದಿಂದ ತನ್ನೊಂದಿಗೆ ತಂದಿದ್ದ ಶೇಷನ ವಿಗ್ರಹವನ್ನು ಸ್ಥಾಪಿಸಲು ರಂಗಶರ್ಮನಿಗೆ ಆಜ್ಞೆಯಿತ್ತ.

ಮರುದಿನ ಬೆಳಿಗ್ಗೆ ಆತ ಕನಸಿನಲ್ಲಿ ನೋಡಿದ್ದ ಸ್ಥಳದಲ್ಲಿ ಐದು ಲಿಂಗಗಳನ್ನು ಕಂಡ. ಅಲ್ಲಿಯೇ ದೇವಸ್ಥಾನವೊಂದನ್ನು ಕಟ್ಟಿ ತನ್ನ ಮಗ ಮತ್ತು ಅನ್ಯ ಕೆಲವೊಬ್ಬ ಸಾರಸ್ವತರನ್ನು ಬಿಟ್ಟು ಯಾತ್ರೆಯನ್ನು ಪೂರೈಸಲಾಗಿ ದಾರಿ ಸಾಗಿದ.

ದೇವಾಸ್ಥಾನದ ಈ ವಿವರಗಳನ್ನು ಸ್ಕಂಧಪುರಾಣದ ಸಹ್ಯಾದ್ರಿಖಂಡದಲ್ಲಿನ 'ಮಂಜುಳಕ್ಷೇತ್ರ ಮಾಹಾತ್ಮ್ಯ'ದಲ್ಲೂ ಕಾಣಬಹುದು.

ಇಲ್ಲಿನ ದೇವರನ್ನು ಪೂಜಿಸುವ ಅಧಿಕಾರವನ್ನು ಪರಶುರಾಮ ಗೋವಾದ ಪ್ರಮುಖ ಸ್ಥಾನಗಳಲ್ಲಿನ ಗೌಡ ಸಾರಸ್ವತರಿಗೆ ಇತ್ತಿದ್ದನೆನ್ನಲಾಗುತ್ತದೆ.

ರಂಗಶರ್ಮನ ಯಾತ್ರೆಯು ನಂತರದ ಎಷ್ಟೊಂದೋ ಕಾಲದ ಬಳಿಕ, ತೀರ್ಥಾಟನೆಗಾಗಿ ಹೊರಟಿದ್ದ ವಿರೂಪಾಕ್ಷ ಈಕ್ಷೇತ್ರಕ್ಕೆ ಬಂದು ಮಂಜರೀಶ, ಸುಬ್ರಹ್ಮಣ್ಯ, ಭದ್ರ ನರಸಿಂಹ, ಮಹಾನಂದೀಶ್ವರ ಮತ್ತು ವರುಣರನ್ನು ಪೂಜಿಸಿದ. ಆತನೂ ತನ್ನ ಮಗ ಮತ್ತು ಅನ್ಯ ಕೆಲವೊಬ್ಬ ಸಾರಸ್ವತರನ್ನು ಅಲ್ಲಿ ಬಿಟ್ಟು ಯಾತ್ರೆ ಪೂರೈಸಲಾಗಿ ದಾರಿಸಾಗಿದ. ಈ ಕ್ಷೇತ್ರಕ್ಕೆ ಬರುವ ಮುನ್ನ ವಿರೂಪಾಕ್ಷ ಉಡುಪಿಯ ಅನಂತೇಶ್ವರನನ್ನು ಆರಾಧಿಸಿದ್ದ. (ಅಲ್ಲಿ ಶ್ರೀಕೃಷ್ಣನ ದೇವಸ್ಥಾನದ ಉಲ್ಲೇಖ ಕಾಣಬರುತ್ತಿಲ್ಲ). ಪ್ರಾಯಶಃ ವಿರೂಪಾಕ್ಷ ೧೦ ಮತ್ತು ೧೨ನೆಯ ಶತಮಾನಗಳ ನಡುವಣ ಕಾಲದಲ್ಲಿ ಮಂಜೇಶ್ವರಕ್ಕೆ ಬಂದಿರಬೇಕು.

ಮಧ್ವವಿಜಯದ ಮೇರೆಗೆ ೧೨೬೭ರಲ್ಲಿ ಮಧ್ವಾಚಾರ್ಯರು ತನ್ನ ಚಾತುರ್ಮಾಸ ವ್ರತವನ್ನು ಕಣ್ವತೀರ್ಥದಲ್ಲಿ [೨] ಪೂರೈಸಿದ್ದರು. ಅನಂತರ ಕಾಂತೇಶ್ವರಕ್ಕೆ ಸಾಗಿ ಅಲ್ಲಿನ ದೇವಸ್ಥಾನದತ್ತ ಹೋಗಿದ್ದರು. ಆ ದಿನಗಳಲ್ಲಿ ಅದು ಸ್ಮಾರ್ತ ಸಾರಸ್ವತರ ಅಧೀನವಿತ್ತು.

ದೇವಸ್ಥಾನ ಕೆನರಾ, ಕೇರಳಗಳಲ್ಲಿ ಕಟ್ಟಲಾಗುವ ವಿಶಿಷ್ಟ ಪದ್ಧತಿಯ, ಸಾಮಾನ್ಯವಿದ್ದ ಕಟ್ಟಡವೊಂದರಲ್ಲಿದೆ. ಗುಮ್ಮಟಕೊಂಡಿರದ, ತಾಮ್ರದ ತಗಡಿನಿಂದ ಮುಚ್ಚಲಾಗಿದ್ದ, ತಗ್ಗಾದ ಮಾಡಿನ ಈ ದೇವಸ್ಥಾನ ರಥಬೀದಿಗಿಂತ ಕೆಳಕ್ಕಿದ್ದ ಮಾಹಾತ್ಮ್ಯನ ಭೂಭಾಗದಲ್ಲಿದೆ. ಕೇರಳ ಮಾಹಾತ್ಮ್ಯದ ಮೇರೆಗೆ ಈ ದೇವಸ್ಥಾನ ಪರಶುರಾಮ ಸ್ಥಾಪಿಸಿದ್ದ ೧೦೮ ಲಿಂಗಗಳಲ್ಲಿನ ಐದು ಲಿಂಗಗಳನ್ನು ಕೊಂಡಿದೆ. ದೇವಸ್ಥಾನದ ಗರ್ಭಗೃಹದೊಳಗಣ ಸಿಂಹಾಸನದ ಪಾವಟಿಗೆಗಳ ಮೇಲೆ ವಿಷ್ಣುವಿನ ವಿಭಿನ್ನ ನಾಮಗಳನ್ನು ಪ್ರತಿನಿಧಿಸುವ ವಿಗ್ರಹಗಳಿವೆ. ಶ್ರೀದೇವಿ ಬಲಭಾಗದಲ್ಲಿ, ಭೂದೇವಿ ಎಡಭಾಗದಲ್ಲಿದ್ದು, ಭದ್ರ ನರಸಿಂಹನ ವಿಗ್ರಹ ಮಧ್ಯಭಾಗದಲ್ಲಿದೆ. ಮೇಲಿನ ಭಾಗದಲ್ಲಿ ಉಗ್ರನರಸಿಂಹನ ಉತ್ಸವ ಮೂರ್ತಿ ಇದೆ. ಈ ಮೂರ್ತಿಯನ್ನು ಉತ್ಸವದ ದಿನಗಳಂದು ಮಾತ್ರ ಹೊರಕ್ಕೆ ತರಲಾಗುತ್ತದೆ. ಗರ್ಭಗೃಹದ ಹಿಂಭಾಗದಲ್ಲಿ ಚಿಕ್ಕ ಗುಹೆ (ಹುತ್ತದ ಒಳ ಮುರುವಿನ ತಳಕೊಂಡ) ಯೊಂದಿದ್ದು ಅಲ್ಲಿ ಮಹಾನಂದೀಶ್ವರನ ಲಿಂಗವಿದೆ. ಅದರ ಸಮೀಪದಲ್ಲಿ ಕುಬೇರ ಮತ್ತು ವರುಣರ ವಿಗ್ರಹಗಳಿವೆ.

ಯಜ್ಞಶಾಲೆ ಮತ್ತು ಅಗ್ರಶಾಲೆ ದೇವಸ್ಥಾನದ ಬಲಭಾಗದಲ್ಲಿವೆ. ಶೇಷತೀರ್ಥ ಪುಷ್ಕರಿಣಿ ಅದಕ್ಕೆ ಹೊಂದಿದ್ದ ವಸಂತ ಮಂಟಪ ಇವು ಎಡಭಾಗದಲ್ಲಿವೆ.

ದೇವಪೂಜೆ ವೈಷ್ಣವ ಪದ್ಧತಿಯದ್ದಿದೆ. ಬೊಂಬೇ ಮತ್ತು ಇನ್ನಿತರೆಡೆಗಳಲ್ಲಿ ಚಂಪಾಷಷ್ಠಿಯೆಂದು ಕರೆಯಲ್ಪಡುತ್ತಿದ್ದ ಸ್ಕಂದ ಷಷ್ಠಿಯ ಬ್ರಹ್ಮೋತ್ಸವ ಮತ್ತು ವೈಶಾಖಪೂರ್ಣಿಮೆ ಇಲ್ಲಿನ ಪ್ರಾಮುಖ್ಯವಾದ ಹಬ್ಬಗಳು. ಸ್ಕಂದ ಷಷ್ಠಿಯಂದು ನರಸಿಂಹ ಮತ್ತು ಶೇಷನ ವಿಗ್ರಹಗಳನ್ನು ರಥದಲ್ಲಿರಿಸಿ ಉತ್ಸವವನ್ನಾಚರಿಸಲಾಗುತ್ತದೆ. ಇಲ್ಲಿನ ಮರದ ರಥ ದಕ್ಷಿಣ ಭಾರತದಲ್ಲಿನ ಅತಿದೊಡ್ಡ ರಥಗಳಲ್ಲೊಂದಾಗಿದೆ.

ಕೆಳದಿಯ ಅರಸು ಸೋಮಶೇಖರ ನಾಯಕ (೧೬೬೩-೧೬೭೧), ರಾಣಿ ಚನ್ನಮ್ಮಾಜಿ (೧೬೭೧-೧೬೯೭), ಹಲವೊಬ್ಬ ಬಂಗಮೊಡೆಯರು (ಅಂದಿನ ದಿನಗಳಲ್ಲಿ ದೇವಸ್ಥಾನ ಅವರ ಪ್ರಾಂತದೊಳಕ್ಕಿತ್ತು), ವಿಟ್ಲದ ದೊಂಬ ಹೆಗ್ಗಡೆ ಮತ್ತು ಕುಂಬ್ಳೆಯ ಒಡೆಯ ಇವರೆಲ್ಲರೂ ಈ ದೇವಸ್ಥಾನಕ್ಕೆ ಭೂಮಿಯನ್ನು ದಾನದ ರೂಪದಲ್ಲಿತ್ತಿದ್ದರು.

೧೭೮೫ರಲ್ಲಿ ಮರಾಠರ ಕಾನ್ಹೋಜಿ ಆಂಗ್ರಿಯಾ ಮತ್ತು ಕಣ್ಣಾನೂರಿನ ಆಲಿರಾಜಾ ಈ ದೇವಸ್ಥಾನವನ್ನು ಸುಲಿದರು. ಆದರೆ ಅವರು ಕೆಲವೇ ಆಭರಣಗಳನ್ನು ದೋಚಿಕೊಂಡು ಹೋಗುವುದರಲ್ಲಿ ಸಫಲರಾದರು. ಕಾರಣ ಅವರು ಬರುವ ಮುನ್ನವೇ ಬೆಲೆಬಾಳುವ ಆಭರಣಗಳನ್ನು ಅಡಗಿಸಿಡಲಾಗಿತ್ತು.

ಟಿಪ್ಪುವಿನ ರಾಜ್ಯಾಡಳಿತೆಯ ದಿನಗಳಲ್ಲಿ ತೆಲ್ಲಿಚೇರಿಗೆ ಪಲಾಯನ ಮಾಡಿ ಬ್ರಿಟಿಷರ ಸಂರಕ್ಷಣೆ ಕೊಂಡು ದಿನಗಳೆಯುತ್ತಿದ್ದ ವಿಟ್ಲದ (ವಿಟ್ಟಲ) ನರಸಿಂಹರಸ ದೊಂಬಹೆಗ್ಗಡೆ, ಬ್ರಿಟಿಷರು ಮತ್ತು ಟಿಪ್ಪುವಿನ ನಡುವಣ ಯುದ್ಧದ ಘೋಷಣೆಯ ಲಾಭಕೊಂಡು ೧೭೯೯ರಲ್ಲಿ ವಿಟ್ಲಕ್ಕೆ ಮರಳಿದ. ಅಲ್ಲಿಂದ ಮಂಜೇಶ್ವರಕ್ಕೆ ತೆರಳಿ ದೇವಸ್ಥಾನವನ್ನು ಸುಲಿದು [3], ಆಭರಣ ಮತ್ತು ನಗದನ್ನು ದೋಚಿ ಕೊಂಡು ಹೋದ. ಆತ ಬೃಹದಾಕಾರದ ರಥ ಮತ್ತು ಸುಬ್ರಹ್ಮಣ್ಯನ ಮಯೂರಾಸನ ಕಳಚಿ, ಅದರ ಮತ್ತು ಅನ್ಯ ವಾಹನಗಳ ಬಿಡಿ ಭಾಗಗಳ ಸಮೇತ ವಿಟ್ಲಕ್ಕೆ ಮರಳಿದ [4]

೧೭೯೯ರಲ್ಲಿ ಬ್ರಿಟಿಷರು ಕೆನರಾವನ್ನು ವಶಪಡಿಸುತ್ತಲೇ ದೊಂಬ ಹೆಗ್ಗಡೆ ಬಂಡಾಯ ಹೂಡಿದ. ಕೇಪ್ಟನ್ (ನಂತರ ಸರ್ ಥೋಮಸ್) ಮುನ್ರೋ ಆತನನ್ನು ಬಂಧಿಸಿ ಆಜೀವ ಗಡಿಪಾರಿನ ಶಿಕ್ಷೆಯಿತ್ತ. ಸಾಯುವ ಕೆಲವೇ ದಿನಗಳ ಮುನ್ನ ಆತನನ್ನು ವಿಟ್ಲಕ್ಕೆ ತಂದರು.

ಕೆನರಾದ ಹದಿನೆಂಟು ನಗರಗಳಲ್ಲಿನ ಸಾರಸ್ವತ ಸಮಾಜಕ್ಕೆ ದೇವಸ್ಥಾನದ ಜೀರ್ಣೋದ್ಧಾರದ ವಿಜ್ಞಾಪನೆ ಕಳುಹಿದಾಗ ಅದಕ್ಕೆ ಸ್ಪಂದಿಸಿದ ಅವರು ಧಾರಾಳ ದೇಣಿಗೆಯಿತ್ತರು. ದೇವಸ್ಥಾನದ ಜೀರ್ಣೋದ್ಧಾರದ ಬಳಿಕ ೧೮೦೪ರಲ್ಲಿ ದೇವರ ಪ್ರತಿಷ್ಠೆ ಮಾಡಲಾಯಿತು. ಕಾಶಿಮಠದ ೧೩ನೆಯ ಗುರುಗಳಾದ ಭುವನೇಂದ್ರ ತೀರ್ಥರು ಪಶ್ಚಿಮ ಕರಾವಳಿಯಲ್ಲಿನ ಸಾರಸ್ವತ ಸಮಾಜಕ್ಕೆ ಕಳುಹಿಸಿದ ರಾಯಸದ ಫಲಸ್ವರೂಪ ಸಂಗ್ರಹಿಸಲ್ಪಟ್ಟ ದೇಣಿಗೆಯಿಂದ ದೇವಸ್ಥಾನದ ಮಾಡನ್ನು ತಾಮ್ರದ ತಗಡಿನಿಂದ ಮುಚ್ಚಲಾಯಿತು. ಅನಂತರ ದೊಡ್ಡ ಮತ್ತು ಅತಿ ಸುಂದರವಾದ ರಥವನ್ನು ತಯಾರಿಸಲಾಯಿತು; ೧೮೫೮ರಲ್ಲಿ ಚಿನ್ನದ ವರಕುಕೊಂಡ ಮೂರು ಕಲಶಗಳನ್ನು ಸ್ಥಾಪಿಸಲಾಯಿತು. ವಿಶಿಷ್ಟಾದ್ವೈತದ ಕೃತಿ ಪಂಚರಾತ್ರ

ತಂತ್ರದಲ್ಲೊಳಗೂಡಿಸಲ್ಪಟ್ಟ ಪದ್ಮ ಸಂಹಿತೆಯಲ್ಲಿ ನಿರ್ದೇಶಿಸಲ್ಪಟ್ಟಂತೆ, ಕಾಶಿ ಮಠದ ೧೫ನೆಯ ಗುರುಗಳಾದ ಸುಕೃತೇಂದ್ರತೀರ್ಥರು, ೧೯೧೯ರ ಡಿಸೆಂಬರ್ ತಿಂಗಳ ೨೮ರಂದು ಸಹಸ್ರ ಕುಂಭಾಭಿಷೇಕ ಮಾಡಿದರು.

೨. ಮಂಗಳೂರು

ಕ್ರಿಸ್ತೀಯ ಸಂಪ್ರದಾಯ ವಿರೋಧಿ ನಡವಳಿಕೆಯನ್ನು ದಬ್ಬಿಡಲಾಗಿ ಸ್ಥಾಪಿಸಲಾದ ನ್ಯಾಯ ಮಂಡಳಿಯೊಯುತ್ತಿದ್ದ ಚಿತ್ರಹಿಂಸೆಯಿಂದ ಪಾರಾಗಲಾಗಿ ಗೋವಾದ ಕುಡಥರಿಯಲ್ಲಿನ ಮಹಾಮಾಯಾ ದೇವಸ್ಥಾನದ ಅರ್ಚಕರು ಬೆಳ್ಳಿಯ ಕಲಶ, ವಿಠ್ಠಲನ ವಿಗ್ರಹ, ಚಂದ್ರಮೌಳೀಶ್ವರ ಲಿಂಗ ಮತ್ತು ಕೆಲವೊಂದು ಸಾಲಿಗ್ರಾಮಗಳೊಂದಿಗೆ ಮಂಗಳೂರಿಗೆ ಬಂದರು. ಮತ್ತೆ ಅವನ್ನು ಹೊಸದಾಗಿ ಕಟ್ಟಲಾದ ದೇವಸ್ಥಾನದಲ್ಲಿ ಸ್ಥಾಪಿಸಿದರು. ದೇವಸ್ಥಾನದ ಮಾಡನ್ನು ೧೭೦೧ರಲ್ಲಿ ನಗರದ ಅರಸು ಚೆನ್ನಬಸಪ್ಪನಾಯಕನಿತ್ತ ತಾಮ್ರದ ತಗಡಿನಿಂದ ಮುಚ್ಚಲಾಯಿತು. ೧೭೮೩ರಲ್ಲಿ ಕೊಡಗರು ಸುಮಾರು ೩೦ ಮಣಗಳಷ್ಟರ ಈ ತಗಡನ್ನು ದೋಚಿಕೊಂಡು ಹೋದರು. ಮತ್ತೆ ದೇವಸ್ಥಾನದ ರಥಕ್ಕೆ ಬೆಂಕಿಕೊಟ್ಟರು.

ಅದೊಮ್ಮೆ ದೇವಸ್ಥಾನದ ಅರ್ಚಕರು ಮತ್ತು ವಿಶ್ವಸ್ಥರ ನಡುವೆ ವಿವಾದವೊಂದೆದ್ದಿತು. ಇದು ೧೭೩೭ರಲ್ಲಿ ಮಂಗಳೂರಿನಲ್ಲಿನ ಅತಿದೊಡ್ಡದೆನ್ನಲಾಗುವ ವೆಂಕಟರಮಣ ದೇವಸ್ಥಾನದ ನಿರ್ಮಾಣಕ್ಕೆ ಕಾರಣವಾಯಿತು. ೧೯೨೦ರ ತನಕ ಈ ದೇವಸ್ಥಾನಕ್ಕೆ ಸರಕಾರದಿಂದ ವಾರ್ಷಿಕ ರೂ. ೬೦ರ ತಸ್ತೀಕು ದೊರಕುತ್ತಿತ್ತು. ಮಾಘ, ಶುದ್ಧ, ಸಪ್ತಮಿಯಂದು ಇಲ್ಲಿ ಜರಗುವ ರಥೋತ್ಸವ ಸಮಾಜದ ಎಲ್ಲೊಂದು ವರ್ಗದ ಭಾವಿಕರು ಭಾಗವಹಿಸುವ ಅತಿದೊಡ್ಡ ಉತ್ಸವವೊಂದಾಗಿದೆ.

ಮಂಗಳೂರಿನ ಕರಂಗಲ್ಪಾಡಿಯಲ್ಲಿನ ಚಂದ್ರಮೌಳೀಶ್ವರ ದೇವಸ್ಥಾನ ವೈಷ್ಣವ ಸಾರಸ್ವತರ ಅಧೀನವಿದೆ. ಇದು ಬಂಟ್ವಾಳದಲ್ಲಿನ ಸ್ಮಾರ್ತ ಸಾರಸ್ವತ, ಬಡ್ತೋಡಿ ಸುಬ್ರಾಯ ಶಾನುಭಾಗರ ಪೂರ್ವಜರಿಗೆ ಸಂಬಂಧಿಸಿದ್ದುದಾಗಿದೆ. ಇಲ್ಲಿನ ಲಿಂಗ ಗೋವಾದ ಮಹಾಮಾಯಾ ದೇವಸ್ಥಾನದ ಅರ್ಚಕರು ತಂದ ಚಂದ್ರಮೌಳೀಶ್ವರ ಲಿಂಗವಿರದಿದ್ದರೂ, ಇದನ್ನೂ ಗೋವಾದಿಂದಲೇ ತಂದಿರಬೇಕು.

ಮಂಗಳೂರಿನಲ್ಲಿ ಚಿತ್ರಾಪುರ ಸಾರಸ್ವತರಿಗೆ ಸಂಬಂಧಿಸಿದ್ದ ಉಮಾಮಹೇಶ್ವರ ಮತ್ತು ದತ್ತಾತ್ರೇಯ ದೇವಸ್ಥಾನಗಳಿವೆ. ಉಮಾಮಹೇಶ್ವರ ದೇವಸ್ಥಾನ ಪುರಾತನವಾದುದಿದ್ದು ಇದಕ್ಕೆ ಸರಕಾರದಿಂದ ವರ್ಷಾವಧಿ ತಸ್ತೀಕು ದೊರಕುತ್ತದೆ. ಚಿತ್ರಾಪುರ ಮಠದ ಆರನೆಯ ಗುರು ವಾಮನಾಶ್ರಮರು ತನ್ನ ಹೆಚ್ಚಿನ ದಿನಗಳನ್ನು ಈ ದೇವಸ್ಥಾನದಲ್ಲಿ ಕಳೆದರು. ದೇವಸ್ಥಾನಕ್ಕೆ ಹೊಂದಿಕೊಂಡು ಅವರ ವೃಂದಾವನವಿದೆ.

೩. ಬಂಟ್ವಾಳ

ಬಂಟ್ವಾಳದಲ್ಲಿ ಸಣ್ಣದಾದ ವೆಂಕಟರಮಣ ದೇವಸ್ಥಾನವಿದೆ.

ಟಿಪ್ಪುವಿನೊಂದಿಗಿನ ಯುದ್ಧದಲ್ಲಿ ಕೊಡಗಿನ ಅರಸು ವೀರರಾಜೇಂದ್ರ ವೊಡೆಯರ್ ಬ್ರಿಟಿಷರನ್ನು ಸೇರಿದ್ದ. ಈ ಮೈತ್ರಿಯ ಲಾಭಕೊಂಡ ಆತ ಟಿಪ್ಪುವಿನ ಸ್ವಾಧೀನವಿದ್ದ ದಕ್ಷಿಣ ಕನ್ನಡದ ವಿಭಿನ್ನ ಭಾಗಗಳನ್ನು ಸುಲಿಯಲಾಗಿ ತನ್ನ ಸೈನಿಕರನ್ನು ಕಳುಹಿದ. ಗೋಪಗೌಡನ ನೇತೃತ್ವದಲ್ಲಿನ ಸೈನಿಕರ ತುಕಡಿಯೊಂದು ನಂದಾವರಕ್ಕೆ ಹೋಗಿ ಬಂಗನಾಯಕರ ಅರಮನೆಯನ್ನು ದೋಚಿತು. ಅನಂತರ ಬಂಟ್ವಾಳಕ್ಕೆ ಬಂದು ನಗರವನ್ನು ಸುಲಿದು ದೇವಸ್ಥಾನದಲ್ಲಿನ ವೆಂಕಟರಮಣನ ಮೂರ್ತಿಯನ್ನು ಕೊಂಡುಹೋಯಿತು. ಸಾರಸ್ವತರಲ್ಲಿನ ಯಕ್ಷಗಾನ ಪಟು ಮಂಜಯ್ಯ ಭಾಗವತ ಮಡಿಕೇರಿಗೆ ಹೋಗಿ ಅರಸನ ಮುಂದೆ ದಶಾವತಾರ ಆಟ ಆಡಿ ಬಹುಮಾನದ ರೂಪಿನಲ್ಲಿ ವೆಂಕಟರಮಣನ ಮೂರ್ತಿಯನ್ನು ಪಡೆದು ಬಂಟ್ವಾಳಕ್ಕೆ ಮರಳಿದ್ದ.

೧೮೩೮ರಲ್ಲಿ ಚಿತ್ರಾಪುರ ಸಾರಸ್ವತರು ಇಲ್ಲಿ ಸೀತಾರಾಮ ದೇವಸ್ಥಾನವನ್ನು ಕಟ್ಟಿಸಿದರು.

೪. ಕಾರ್ಕಳ

ಭಟ್ಕಳದ ಪ್ರವಾಸದ ವೇಳೆ ಸಾರಸ್ವತರನ್ನು ಕಂಡ ಕಾರ್ಕಳದ ಇಮ್ಮಡಿ ಭೈರವರಾಯ ವೊಡೆಯರ್ ಅವರಿಂದ ಪ್ರಭಾವಿತನಾದ. ಆತ ಭರದ್ವಾಜ ಗೋತ್ರದ ಪ್ರಭುಗಳ ಒಂದು ಕುಟುಂಬ, ಕಾಶ್ಯಪ ಗೋತ್ರದ ಕಾಮತರ ಎರಡು ಕುಟುಂಬಗಳು ಮತ್ತು ಕೌಶಿಕ ಗೋತ್ರದ ಕುಡವರ ಒಂದು ಕುಟುಂಬ ಇವನ್ನು ಕಾರ್ಕಳಕ್ಕೆ ತಂದು ನೆಲೆಗೊಳಿಸಿ ತಾನಿತ್ತ ನಿವೇಶದಲ್ಲಿ ವೆಂಕಟರಮಣ ದೇವಸ್ಥಾನವನ್ನು ಕಟ್ಟಿಸುವರ ನೆರವನ್ನಿತ್ತ. ೧೫೩೭ರಲ್ಲಿ, ಹೇವಿಳಂಬಿ ಸಂವತ್ಸರದ ವೈಶಾಖ ಪೂರ್ಣಿಮೆಯಂದು ವಿಗ್ರಹದ ಪ್ರಾಣಪ್ರತಿಷ್ಠೆ ಮಾಡಲಾಯಿತು.

ಕೊಡಗಿನ ಕೊಡಗರ ಉಪಟಳದ ದಿನಗಳಲ್ಲಿ ಅವರು ಹಲವೊಂದು ನಗರಗಳನ್ನು, ಅಲ್ಲಿನ ವೈಷ್ಣವ ಸಾರಸ್ವತರ ದೇವಸ್ಥಾನಗಳನ್ನು ಲುಟಾಯಿಸಿದ್ದರು. ಸಾರಸ್ವತರಲ್ಲಿನ ಕೆಲವೊಬ್ಬರು ಕಾರ್ಕಳದ ದೇವಸ್ಥಾನದಲ್ಲಿನ ವೆಂಕಟರಮಣನ ವಿಗ್ರಹವನ್ನು ಮುಲ್ಕಿಗೆ ಕೊಂಡುಹೋಗಿ ಅಲ್ಲಿನ ಮಾನಂಪಾಡಿ ದೇವಸ್ಥಾನದ ಬಾವಿಗೆ ಎಸೆದರು. ಕೊಡಗರ ಬಾಧೆ ಕಡಿಮೆಯಾದಾಗ ಬಾವಿಗೆ ಎಸೆದ ವಿಗ್ರಹವನ್ನು ತೆಗೆಯಲು ಯತ್ನಿಸಿದರೆ ಅದು ದೊರಕದಾಯಿತು. ವಿಗ್ರಹವನ್ನು ಬಾವಿಗೆ ಎಸೆದಾತನಿಗೆ ಸ್ವಪ್ನದಲ್ಲಿ ಬಂದ ದೇವರು ತಾನು ಮುಲ್ಕಿಯಲ್ಲಿ ನಿಲ್ಲುವುದಾಗಿಯೂ, ಕಾರ್ಕಳದ ದೇವಸ್ಥಾನದಲ್ಲಿ ಪ್ರತಿಷ್ಠೆ ಮಾಡಲು ಯಾರೋ ಒಬ್ಬರು ತಿರುಪತಿಯಿಂದ ಶ್ರೀನಿವಾಸನ ವಿಗ್ರಹವನ್ನು ತರುವರೆಂದು ನುಡಿದರು. ಸ್ವಪ್ನ ಸತ್ಯವಾಯಿತು.

ಶ್ರೀನಿವಾಸನ ವಿಗ್ರಹವನ್ನು ಕಾರ್ಕಳದ ದೇವಸ್ಥಾನದಲ್ಲಿ ಸ್ಥಾಪಿಸಲಾಯಿತು. ಈ ದೇವಸ್ಥಾನ ತಿರುಪತಿಯ ದೇವಸ್ಥಾನಕ್ಕೆ ಅರ್ಪಿಸಲಾಗುವ ದೇಣಿಗೆ, ಕಾಣಿಕೆಗಳನ್ನು ಸ್ವೀಕರಿಸುವ ಅಧಿಕಾರವನ್ನು ಕೊಂಡಿದೆ. ಸಂಗ್ರಹಿಸಲಾದ ಕಾಣಿಕೆ ಇತ್ಯಾದಿಗಳನ್ನು ಆಗಾಗ ತಿರುಪತಿಗೆ ರವಾನಿಸಲಾಗುತ್ತದೆ.

ಉತ್ಸವದ ಕೊನೆಯಲ್ಲಿನ, ದೇವಸ್ಥಾನದ ಪ್ರದಕ್ಷಿಣೆಗಳ ವೇಳೆ ಹಾಡುವ ಹಾಡುಗಳು,

ಪಾವಂಜೆಯು ಶಿವಳ್ಳಿ ಬ್ರಾಹ್ಮಣರಲ್ಲಿನ ಹರಿದಾಸ, ಲಕ್ಷ್ಮೀನಾರಣಪ್ಪ ಇವರು ರಚಿಸಿದ್ದುವಾಗಿವೆ. ಹತ್ತೊಂಬತ್ತನೆಯ ಶತಮಾನದ ಕೊನೆಯ ದಿನಗಳಲ್ಲಿ ಉದರಂಭರಣೆಗಾಗಿ ಪಶ್ಚಿಮಘಟ್ಟ ದಾಟಿ ಹೋಗಿದ್ದ ಹರಿದಾಸ, ಸಿದ್ಧಾಪುರ ವೆಂಕಟರಮಣ ಪ್ರಭುಗಳ ಶಿಷ್ಯ, ಲಕ್ಷ್ಮೀನಾರಾಯಣಪ್ಪ ಕಾಯಿಲೆ ಬಿದ್ದರು. ಶ್ರೀನಿವಾಸನನ್ನು ಬೇಡಿಕೊಂಡ ಅವರು ಸ್ವಸ್ಥರಾದರು. ಮುಂದೊಂದು ದಿನ ಅವರು ಕಾರ್ಕಳದ ದೇವಸ್ಥಾನಕ್ಕೆ ಬಂದಾಗ ಲಕ್ಷದೀಪೋತ್ಸವಕ್ಕಾಗಿ ಹಾಡುಗಳನ್ನು ರಚಿಸುವರೆ ಆದೇಶಕೊಂಡರು.

ಕಾರ್ಕಳದಲ್ಲಿ ಚಿತ್ರಾಪುರ ಸಾರಸ್ವತರ ವೇಣುಗೋಪಾಲ ಕೃಷ್ಣ ದೇವಸ್ಥಾನವಿದೆ.

೫. ಮುಲ್ಕಿ

ಮುಲ್ಕಿಯ ಸಾವಂತರ ನಾಯಕನೊಬ್ಬ ಕಾಶ್ಯಪ ಗೋತ್ರದ ಕಾಮತರ ಒಂದು, ಅತ್ರಿಗೋತ್ರದ ವಡೇರ್ ಬೆಟ್ ಕಾಮತರ ಒಂದು ಮತ್ತು ವತ್ಸಗೋತ್ರದ ಅರ್ಚಕರ ಒಂದು, ಒಟ್ಟಿಗೆ ಐದು ವೈಷ್ಣವ ಸಾರಸ್ವತರ ಕುಟುಂಬಗಳನ್ನು ತಂದು ಅಲ್ಲಿ ನೆಲೆಗೊಳಿಸಿದ. ಪರಂಪರಾಗತವಾಗಿ ಬಂದಿದ್ದ ದೇವಸ್ಥಾನದ ಪಾರುಪತ್ಯಗಾರರ ಕೆಲಸ ಮಾಡುತ್ತಿದ್ದವರ ಪ್ರತಿ ಹೊರಿಸಲಾದ ಅಪಾದನೆಗಳ ಕುರಿತು ವಿಚಾರಣೆ ಮಾಡಿದ್ದ ಮಿ. ರೋಬಿನ್ಸನ್ ಇತ್ತಿದ್ದ ೧೮೪೭ರ ನವೆಂಬರ್ ೨೮ರ 'ಕನ್ನಡ ಪಂಚಾಯತ' ನಿರ್ಣಯದಿಂದ ಅವರು ತಮ್ಮ ಗುರುಗಳಿತ್ತಿದ್ದ ವಿಟ್ಠಲನ ಎರಡು ವಿಗ್ರಹಗಳನ್ನು ಮಾನಂಪಾಡಿಯಲ್ಲಿನ " ಮುಳಿಹುಲ್ಲಿನ ಮಾಡುಕೊಂಡ ಗುಡಿಯಲ್ಲಿ ಸ್ಥಾಪಿಸಿದ್ದ ವಿಚಾರ ತಿಳಿದು ಬರುತ್ತದೆ.

ಈ ಗುಡಿ ಮಾನಂಪಾಡಿ ತಿರುಮಲ ದೇವಸ್ಥಾನವೆಂದು ಪರಿಚಿತವಾಗಿತ್ತು. ಇದಕ್ಕೆ ಸಾವಂತರು ಭೂಮಿಯ ಇನಾಮನ್ನಿತ್ತಿದ್ದರು. ವಿಟ್ಠಲನ ಎರಡು ಮೂರ್ತಿಗಳು ಅರ್ಚಕರಿಬ್ಬರ ಕುಟುಂಬಗಳ ಸ್ವಾಧೀನವಿದ್ದು ದೇವರ ಆರಾಧನೆಯ ಅಧಿಕೃತ ಸರದಿ ಬಂದಾಗ ಅವರು ತಮ್ಮಲ್ಲಿನ ವಿಗ್ರಹವನ್ನು ನಿಯೋಜಿತ ಕಾಲಾವಧಿಯಲ್ಲಷ್ಟೆ ದೇವಸ್ಥಾನದಲ್ಲಿಟ್ಟು ಅದಕ್ಕೆ ಅಲ್ಲಿ ಪೂಜೆ ಸಲ್ಲಿಸುತ್ತಾರೆ.

ಕೇರಳ ನರಸಿಂಹನ ವಿಗ್ರಹ ಮೊದಲು ವರಾಹಪುರ (ಟ್ರಾವಂಕೂರಿನ ಬಾರಂ ಪಳ್ಳಿಯಲ್ಲಿನ) ದಲ್ಲಿತ್ತು. ವಿಜಯೇಂದ್ರ ತೀರ್ಥರು ಮುಲ್ಕಿಯಲ್ಲಿ ಅದರ ಪ್ರತಿಷ್ಠೆ ಮಾಡಿದರು. ಅದೇ ಹೊತ್ತಿಗೆ ಅವರು ಅಲ್ಲಿನ ಉತ್ಸವದಲ್ಲಿ ಬಳಸಲಾಗಿ ಬಿಂದು ಮಾಧವನ ವಿಗ್ರಹವನ್ನೂ ಇತ್ತರು.

ಬಾವಿಗೆ ಎಸೆದಿದ್ದ ಕಾರ್ಕಳದ ವೆಂಕಟರಮಣನ ಮೂರ್ತಿ ಸಿಕ್ಕ ಬಳಿಕ ಅದನ್ನು ಮುಲ್ಕಿಯ ದೇವಸ್ಥಾನದಲ್ಲಿ ಸ್ಥಾಪಿಸಲಾಯಿತು. ದೇವಸ್ಥಾನ ಆ ಮೊದಲ್ಗೊಂಡು ವೆಂಕಟರಮಣ ದೇವಸ್ಥಾನವೆಂದು ಪ್ರಸಿದ್ಧವಾಯಿತು. ವಿಗ್ರಹದ ಸ್ಥಾಪನೆಯ ಬಳಿಕ ಕಾರ್ಕಳದ ಕುಡವ ಕುಟುಂಬದ ಸದಸ್ಯರೊಬ್ಬರು ಮುಲ್ಕಿಯಲ್ಲಿ ವಾಸಮಾಡಲಾರಂಭಿಸಿದರು. ವರ್ಷಾವಧಿಯ ಉತ್ಸವದಂದು ವೆಂಕಟರಮಣ ಮತ್ತು ಭೂದೇವಿಯರ ವಿವಾಹವಿಧಿಯನ್ನು ಆಚರಿಸಲಾಗುತ್ತದೆ. ೧೮೩೩ರಲ್ಲಿ ಈ ದೇವಸ್ಥಾನದ ಗರ್ಭಗೃಹದ ನಿರ್ಮಾಣವಾಯಿತು. ಚಂದ್ರಶಾಲೆ ಮತ್ತು ಉಪ್ಪರಿಗೆ ಹದಿನೆಂಟನೆಯ ಶತಮಾನದ ಉತ್ತರಕಾಲದಲ್ಲಿ

ನಿರ್ಮಿಸಲ್ಪಟ್ಟವು. ೧೮೭೦ರಲ್ಲಿ ಒಳಗಣ ಪ್ರಾಂಗಣದ ಮಾಡಿಗೆ ತಾಮ್ರದ ತಗಡು ಹೊದಿಸಲಾಯಿತು. ದೇವಸ್ಥಾನದ ಪರಂಪರಾಗತ ಪಾರುಪತ್ಯಗಾರರ ದುರ್ನಿರ್ವಹಣೆಯ ನಿಮಿತ್ತ ಆಡಳಿತ ಅಸ್ತವ್ಯಸ್ತವಾದಾಗ ಭುವನೇಂದ್ರ ತೀರ್ಥರು ರಾಮಚಂದ್ರ ಕುಡವರ (ಮೂಲತಃ ಕಾರ್ಕಳದ ಕುಟುಂಬದ) ಮತ್ತು ಆಡಳಿತ ಮಂಡಲಿಯ ಕೆಲವೊಬ್ಬ ಸದಸ್ಯರ ಪರವಾಗಿ 'ಮೊಕ್ತೇಸರ್ನಾಮ' ತಯಾರಿಸಿ ಅದನ್ನು ಕಾರ್ಯರೂಪಕ್ಕೆ ತಂದರು.

೧೯೩೪ರಲ್ಲಿನ ಮದ್ರಾಸ್ ಹೈಕೋರ್ಟಿನ ನಿರ್ಣಯದ ನಂತರ ಉದಿಯಾವರ ಕುಟುಂಬದ ಪರಂಪರಾಗತ ಪಾರುಪತ್ಯಗಾರರು ಪ್ರತ್ಯೇಕವಿದ್ದ ತಮ್ಮ ಅಧಿಕಾರಗಳನ್ನು ಸಮರ್ಥಿಸುವಲ್ಲಿ ಸಫಲರಾದರು.

ದೇವಸ್ಥಾನ ಶನಿವಾರದ ಕಾಲಭೈರವನ 'ದರ್ಶನ' ಕ್ಕೆ ಪ್ರಸಿದ್ಧವಾಗಿದ್ದು ಅದು ಎಲ್ಲೊಂದು ಸಮಾಜಗಳ ಶ್ರದ್ಧಾಳುಗಳನ್ನು ಆಕರ್ಷಿಸುತ್ತದೆ.

೧೯೪೪ರ ಜೂನ್ ತಿಂಗಳಲ್ಲಿ ಕಾಶಿಮಠದ ೧೯ನೆಯ ಗುರು, ಸುಕೃತೇಂದ್ರ ತೀರ್ಥರು ೨೦ನೆಯ ಗುರು, ಎರಡನೆಯ ಸುಧೀಂದ್ರ ತೀರ್ಥರಿಗೆ ಇಲ್ಲಿಯೇ ಸನ್ಯಾಸಾಶ್ರಮದ ದೀಕ್ಷೆಯಿತ್ತಿದ್ದರು.

೬. ಗುರುಪುರ

ಗುರುಪುರದಲ್ಲಿ ವರದರಾಜ ವೆಂಕಟರಮಣನ ದೇವಸ್ಥಾನವಿದೆ. ಇಲ್ಲಿನ ವಿಗ್ರಹವನ್ನು ಕಾಶಿಮಠದ ಎಂಟನೆಯ ಗುರುಗಳಾದ ಮಾಧವೇಂದ್ರ ತೀರ್ಥರು ಪ್ರತಿಷ್ಠಾಪಿಸಿದ್ದರು. ಆದಿತ್ಯವಾರದಂದು ಇಲ್ಲಿ ಕಾಲಭೈರವನ 'ದರ್ಶನ'ದ ಕಾರ್ಯಕ್ರಮವಿರುತ್ತದೆ.

೭. ವೆಂಕಟರಮಣ (ವೆಂಕಟೇಶ) ದೇವಸ್ಥಾನ, ಗಂಗೊಳ್ಳಿ

ದೇವಸ್ಥಾನದಲ್ಲಿ ೧೬೬೩ರ ಶಿಲಾಶಾಸನವೊಂದಿದ್ದು ಅದು ಗಂಗೊಳ್ಳಿ ಗ್ರಾಮವನ್ನು ನಗರದ ಅರಸು ಭದ್ರಪ್ಪನಾಯಕ, (೧೬೬೧-೧೬೬೩) ನಾರಾಯಣ ಮಲ್ಯರಿಗೆ ಇನಾಮಿನ ರೂಪದಲ್ಲಿತ್ತಿದ್ದುದನ್ನು ಸೂಚಿಸುತ್ತದೆ. ನಾರಾಯಣ ಮಲ್ಯರು ಈ ದೇವಸ್ಥಾನವನ್ನು ಗಂಗೊಳ್ಳಿಯ ಪೂರ್ವ ದಿಕ್ಕಿನಲ್ಲಿ ಕಟ್ಟಿಸಿ ಅದಕ್ಕೆ ವರ್ಷಕ್ಕೆ ೧೨೦ ಮುಡಿಗಳಷ್ಟರ ಅಕ್ಕಿ ಒದಗಿಸಬಲ್ಲ ಭೂಮಿಯನ್ನು ತನಗೆ ದೊರಕಿದ್ದ ಇನಾಮಿನಿಂದ ಬಿಟ್ಟುಕೊಟ್ಟರು.

ಸೇನಾಪುರದಲ್ಲಿನ ೧೬೭೪ ಶಿಲಾಶಾಸನದ ಮೇರೆಗೆ ರಾಣಿ ಚನ್ನಮ್ಮಾಜಿ ಈ ಗ್ರಾಮದ ಕಂದಾಯದಿಂದ ಪ್ರತಿವರ್ಷ ನಗದು ರೂ. ೪೦೦ರ ದೇಣಿಗೆ ಈ ದೇವಸ್ಥಾನಕ್ಕೆ ದೊರಕುವಂತೆ ಮಾಡಿದಳು.

೧೭೮೯ರಲ್ಲಿ ಟಿಪ್ಪುಸುಲ್ತಾನ ವಾರ್ಷಿಕ ರೂ. ೪೦೦ರ ದೇಣಿಗೆಯನ್ನು ಮತ್ತೆ ಆರಂಭಿಸಿದ. ಆದರೆ ನಾರಾಯಣ ಮಲ್ಯರ ವಂಶಜರ ಸ್ವಾಧೀನವಿದ್ದ ಇನಾಮಿನ ಭೂಮಿಯ ಮೇಲಕ್ಕೆ ರೂ. ೬೨೦/- ಗಳಷ್ಟರ ಕಂದಾಯ ಹೊರಿಸಿದ. ಈ ಮೊತ್ತವನ್ನು ತುಂಬಲು ಅಸಮರ್ಥರಿದ್ದ ನಾರಾಯಣ ಮಲ್ಯರ ವಂಶಜರು ಊರು ಬಿಟ್ಟು ಹೋದರು; ಭೂಮಿಯನ್ನು

ಕೆನರಾದ ಕಲೆಕ್ಟರ್ ಕ್ಯಾಪ್ಟನ್ ಮುನ್ರೋ ಇವರು ೧೮೦೦ರಲ್ಲಿ ನಾರಣಪ್ಪ ನಾಯಕರಿಗಿತ್ತರು.

ದೇವಸ್ಥಾನದ ಭೂಮಿಯ ಮೇಲಕ್ಕೆ ಟಿಪ್ಪು ಹೊರಿಸಿದ ಕಂದಾಯವನ್ನು ಅರ್ಚಕರು ತೆತ್ತರು; ಭೂಮಿ ಅರ್ಚಕರ ಸ್ವಾಧೀನ ಉಳಿಯಿತು. ಆದರೆ ಅವರಲ್ಲೊಬ್ಬಾತ ೧೮೭೦ರಲ್ಲಿ ತನ್ನ ಪಾಲಿನ ಅರ್ಧ ಭಾಗವನ್ನು ಮಾರಿದ. ಈ ವಿಷಯವನ್ನು ನ್ಯಾಯಾಲಯಕ್ಕೆ ಕೊಂಡು ಹೋದಾಗ ಅದು ಅರ್ಚಕರ ಖಾಸಗಿ ಜಮೀನೆಂದು ನಿರ್ಣಯವಿತ್ತಿತು.

ಗೋಕರ್ಣ ಮಠದ ದ್ವಾರಕಾನಾಥ ತೀರ್ಥರ ಜನ್ಮ ಈ ದೇವಸ್ಥಾನದ ಅರ್ಚಕರೊಬ್ಬರ ಮನೆಯಲ್ಲಾಯಿತು.

೮. ಭಟ್ಕಳ

ಭಟ್ಕಳದಲ್ಲಿ ಹಲವಾರು ದೇವಸ್ಥಾನಗಳಿವೆ. ಅವುಗಳಲ್ಲಿನ ಹೆಚ್ಚಿನವು ಹದಿನಾರನೆಯ ಶತಮಾನದಲ್ಲಿ ನಿರ್ಮಾಣಗೊಂಡಿದ್ದವು.

ಅಲ್ಲಿ ತಿರುಮಲ ದೇವಸ್ಥಾನವಿದೆ. ಈ ದೇವಸ್ಥಾನವನ್ನು ಅರೇಬಿಯದ ಕುದುರೆಗಳ ವ್ಯಾಪಾರ ಮಾಡುತ್ತಿದ್ದ ಸಾಂತಪ್ಪನಾಯಕ, ೧೫೫೫ರಲ್ಲಿ ಭಟ್ಕಳದ ರಾಣಿ ಚೆನ್ನ ಭೈರ ದೇವಿಯಿಂದ ಖರೀದಿಸಿದ ಭೂಮಿಯಲ್ಲಿ ಕಟ್ಟಿದನೆಂಬುದನ್ನು ಅಲ್ಲಿನ ಶಿಲಾಶಾಸನ ಸೂಚಿಸುತ್ತದೆ.

ತಿರುಮಲ ದೇವಸ್ಥಾನದ ಮುಂಭಾಗದಲ್ಲಿ ಅಡಕೆ ನಾರಾಯಣ ದೇವಸ್ಥಾನವಿದೆ. ಅದನ್ನು ಸಣ್ಣಪುಟ್ಟ ಸ್ಥಾನೀಯ ಅಡಕೆಯ ವ್ಯಾಪಾರಿಗಳಿತ್ತ ದೇಣಿಗೆಯ ನೆರವಿನಿಂದ ಕಟ್ಟಲಾಗಿತ್ತು.

ರಘುನಾಥ ದೇವಸ್ಥಾನದಲ್ಲಿ ಶಿಲಾಶಾಸನವೊಂದಿದ್ದು ಅದು ಈ ದೇವಸ್ಥಾನವನ್ನು ೧೫೬೭ರಲ್ಲಿ ಬಾಳಕಿಣಿ ಮತ್ತು ನಾರಾಯಣ ಕಿಣಿ ಎಂಬೀ ಸಹೋದರರಿಬ್ಬರು ಕಟ್ಟಿಸಿದರೆಂಬುದನ್ನು ಸೂಚಿಸುತ್ತದೆ. ಸಣ್ಣದಿದ್ದರೂ ಸುಂದರವಿದ್ದ ಈ ದೇವಸ್ಥಾನ ನಾಜೂಕಿನ ಕೆತ್ತನೆಕೊಂಡಿದೆ. ಇದರ ಗರ್ಭಗೃಹ ರಥದ ಆಕಾರಕೊಂಡಿದ್ದು ಅಲ್ಲಿ ರಾಮ, ಲಕ್ಷ್ಮಣ, ಸೀತೆಯರ ವಿಗ್ರಹಗಳಿವೆ.

ಲಕ್ಷ್ಮೀನಾರಾಯಣ ದೇವಸ್ಥಾನವನ್ನು ೧೫೬೭ರಲ್ಲಿ ಲಕ್ಕರ್ಸ ಕಾಮತರು ಕಟ್ಟಿಸಿದರು.

ಸುಂದರವಾದ ಕೆತ್ತನೆ ಕೊಂಡ ವೆಂಕಟರಮಣನ ದೇವಸ್ಥಾನ ೧೬೯೬ರಲ್ಲಿ ಕಟ್ಟಲ್ಪಟ್ಟಿತು.

ನರಸಿಂಹನ ದೇವಸ್ಥಾನವನ್ನು ನರಸಯ್ಯ ಕಿಣಿಯವರು ಕಟ್ಟಿಸಿದರು. ಅವರು ನಗರದ ಅರಸನಿಂದ ಗೋಕರ್ಣದ ಸಮೀಪದಲ್ಲಿನ ಹಳ್ಳಿಯೊಂದನ್ನು ಕೊಂಡು ಅದನ್ನು ದೇವಸ್ಥಾನದ ಸಂರಕ್ಷಣೆಯ ವ್ಯವಸ್ಥೆಗಾಗಿ ಮತ್ತು ಗೋಕರ್ಣದಲ್ಲಿನ ಅನ್ನ ಸತ್ರ ನಡೆಸಲಾಗಿ ಉಂಬಳಿಯಾಗಿತ್ತರು.

'ಖೇತು ಪೈ ನಾರಾಯಣ ದೇವ'ರ ದೇವಸ್ಥಾನ ಹಾಳು ಬಿದ್ದಿದೆ. ಇದು ರಾಮಾಯಣ ಮತ್ತು ಮಹಾಭಾರತಗಳಲ್ಲಿನ ಆಕರ್ಷಕ ದೃಶ್ಯಗಳನ್ನು ಕೊಂಡಿದೆ.

ಪರಶುರಾಮ ದಾಮೋದರ ದೇವಸ್ಥಾನದಲ್ಲಿ ೧೪೫೩ರ ಶಿಲಾಶಾಸನವೊಂದಿದೆ. ಅದು ಈ ದೇವಸ್ಥಾನವನ್ನು ವಿಟ್ಠಲ ಪ್ರಭುಗಳ ಮಗ ದಮ್ಮ ಪ್ರಭು ಕಟ್ಟಿಸಿದರೆಂದು ಹೇಳುತ್ತದೆ. ಹಾಗೂ ವಿಜಯನಗರದ ಮಹಾಮಂಡಲೇಶ್ವರ ಭುಜಬಲರಾಯ, ಸಾರಸ್ವತರು ಗಿರಿಯಿಂದ ಕಲೆ ಹೊರೆಯಾಗಿ ತರುವ ಸಾಮಾನನ್ನು ಕರಮುಕ್ತವಾಗಿಸಲು ಒಪ್ಪಿದ್ದನೆಂದೂ, ದೇವಸ್ಥಾನ ಕಟ್ಟಿಸಿದವರು ಮತ್ತು ಅವರ ವಂಶಜರು ಆತನ ಅಧಿಕಾರ ಕ್ಷೇತ್ರದ ಮೂಲಕ ದಾರಿಸಾಗುವಾಗ ವಿಶೇಷ ಗೌರವಾದರ ತೋರಲಾಗುತ್ತಿತ್ತೆಂಬುದನ್ನು ಸೂಚಿಸುತ್ತದೆ.

ಜೋಶಿ ಶಂಕರ ನಾರಾಯಣ ದೇವಸ್ಥಾನದಲ್ಲಿನ ಶಿಲಾಶಾಸನ, ದೇವಸ್ಥಾನ ಸಾರಸ್ವತರಿಂದ ಕಟ್ಟಿಸಲ್ಪಟ್ಟಿದ್ದರೂ ಅದರ ಅರ್ಚಕರು ಹವೀಕ ಬ್ರಾಹ್ಮಣರಿದ್ದರೆಂಬುದನ್ನು ಸೂಚಿಸುತ್ತದೆ.

ಸಾರಸ್ವತರು ಅನೇಕ ದೇವಸ್ಥಾನಗಳನ್ನು ಕಟ್ಟಿಸಿದರು. ಆದರೆ ಅವೆಲ್ಲವುಗಳ ಅರ್ಚಕರು ಹವೀಕ ಬ್ರಾಹ್ಮಣರಿದ್ದರು. ಪ್ರಾಯಶಃ ಸಾರಸ್ವತ ಅರ್ಚಕರ ಅಭಾವ ಅದಕ್ಕೆ ಕಾರಣವಾಗಿರಬೇಕು.

ತಿರುಮಲದೇವ ದೇವಸ್ಥಾನದಲ್ಲಿನ ೧೬೦೩-೧೬೦೪ರ ಶಿಲಾಶಾಸನ, ದೇವಸ್ಥಾನದ ಕಟ್ಟಡವನ್ನು ಜೋಗಮಲ್ಯರ ಮಗ ಅಂತು ಮಲ್ಯ ಕಾಶಿಮಠದ ಗುರುಗಳಿಗೆ ಬಹುಮಾನವಾಗಿತ್ತನೆಂಬುದನ್ನು ಮತ್ತು ಯಾದವೇಂದ್ರ ತೀರ್ಥರು ವಿಜಯೇಂದ್ರ ತೀರ್ಥರ ಶಿಷ್ಯರೆಂಬುದನ್ನು ಸೂಚಿಸುತ್ತದೆ.

ಭಟ್ಕಳದಲ್ಲಿ ಕಾಶಿಮಠದ ಕೆಲವೊಬ್ಬ ಗುರುಗಳ ವೃಂದಾವನಗಳಿವೆ. ಅವುಗಳಿಗೆ ಹೊಂದಿಕೊಂಡು ಮುಲ್ಕಿಮಠ್ಲಿನ ವಡೇರ್ ಬಿಟ್ ಕಾಮತರ ಕುಲದೇವಿಯಿದ್ದ ಸಾಂತೇರಿ ಕಾಮಾಕ್ಷಿಯ ದೇವಸ್ಥಾನವೂ ಇದೆ.

ವಿರೂಪಾಕ್ಷ ನಾರಾಯಣ ದೇವಸ್ಥಾನ ಮತ್ತು ರಘುನಾಥ ದೇವಸ್ಥಾನ, ಇವುಗಳಿಗೆ ಸರಕಾರದಿಂದ ತಸ್ತೀಕು ದೊರಕುತ್ತದೆ. ಸಾರಸ್ವತರ ಕೆಲವೊಂದು ದೇವಸ್ಥಾನಗಳಲ್ಲಿ ಈಗ ಪೂಜೆ ನಡೆಯುತ್ತಿಲ್ಲ. ಇವುಗಳಲ್ಲಿನ ಕೇವಲ ಕೆಲವೇ ದೇವಸ್ಥಾನಗಳ ಸಂರಕ್ಷಣೆಯ ಹೊಣೆಗಾರಿಕೆಯನ್ನು ಭಾರತದ ಪುರಾತತ್ವ ವಿಭಾಗಕೊಂಡಿದೆ.

೯. ವೆಂಕಟಪುರಂ

ವೆಂಕಟೇಶ ದೇವಸ್ಥಾನದಲ್ಲಿನ ಶಿಲಾಶಾಸನ ಈ ದೇವಸ್ಥಾನವನ್ನು ೧೬೬೧ರಲ್ಲಿ ನಗರದ ವಿಟ್ಠಲ ಮಲ್ಯನ ಮಗ, ಗಣೇಶ ಮಲ್ಯ ಕಟ್ಟಿಸಿದನೆಂದು ಹೇಳುತ್ತದೆ. ಇದಕ್ಕೆ ನಗರದ ಅರಸು ಭೂಖಂಡವೊಂದನ್ನು ದತ್ತಿಯಾಗಿತ್ತ. ಮೊದಲು ದೇವಸ್ಥಾನದ ಮಾಡಿಗೆ ಶಿಲೆ ಹಾಸಲಾಗಿತ್ತು. ಈಗ ಅದಕ್ಕೆ ಹಂಚು ಹೊದಿಸಲಾಗಿದೆ. ಅಲ್ಲಿ ದಶಾವತಾರದ ಸುಂದರವಾದ ಶಿಲ್ಪ ಕೃತಿಗಳಿವೆ. ನಗರದ ಅರಸು ಪ್ರಯಾಣಿಕರ ಅನುಕೂಲತೆಗಾಗಿ ಕಟ್ಟಿದ್ದ ಅನ್ನಸತ್ರ ನಿರ್ವಹಿಸಲು, ನದಿ ದಾಟಲು ಕೊಡಬೇಕಾಗಿದ್ದ ಸುಂಕ ತುಂಬಲು ಭೂಖಂಡವೊಂದನ್ನು ಬಿಟ್ಟುಕೊಟ್ಟನೆಂದು ಇಲ್ಲಿನ ಶಾಸನ ನುಡಿಯುತ್ತದೆ.

೧೦. ಶಿರಾಲಿ

ಶಿರಾಲಿಯಲ್ಲಿ ಮಹಾಗಣಪತಿ ಮತ್ತು ಮಹಾಮಾಯಾ ದೇವಸ್ಥಾನಗಳಿವೆ. ಶಿರಾಲಿಯಲ್ಲಿನ ಚಿತ್ರಾಪುರ ಮಠದಲ್ಲಿ ಭವಾನಿಶಂಕರ ದೇವಸ್ಥಾನವಿದೆ; ಚಿತ್ರಾಪುರ ಸಾರಸ್ವತರ ಹಲವಾರು ಖಾಸಗಿ ದೇವಸ್ಥಾನಗಳೂ ಇವೆ. ಅವುಗಳಲ್ಲಿ ಮಹಾಗಣಪತಿ, ಮಹಾಮಾಯಾ ದೇವಸ್ಥಾನಗಳ ಸಮೀಪವಿದ್ದ ಕೇಶವ ನಾರಾಯಣ ದೇವಸ್ಥಾನವೂ ಒಂದಾಗಿದೆ.

ಕಡ್ಲೆಕಾರರ ಸುಂದರವಾದ ಶಿವಲಿಂಗೇಶ್ವರ ದೇವಸ್ಥಾನ ಗೋವಾದಲ್ಲಿದ್ದ ಕುಲದೇವತೆಗಳ ದೇವಸ್ಥಾನದ ಮಾದರಿಯನ್ನನುಸರಿಸಿಕೊಂಡಿದೆ. ದುರ್ದೈವಕ್ಕೆ ಅದು ಈಗ ಹಾಳುಬಿದ್ದಿದೆ.

೧೧. ಹೊನ್ನಾವರ

ಹೊನ್ನಾವರದಲ್ಲಿ ರಾಮಚಂದ್ರ ಮಲ್ಯರು ಕಟ್ಟಿಸಿದ ವೆಂಕಟೇಶ ದೇವಸ್ಥಾನವಿದೆ. ಇಲ್ಲಿನ ತಾಮ್ರ ಶಾಸನ ದೇವಸ್ಥಾನದ ಭೂಖಂಡವನ್ನು ೧೬೦೩ರಲ್ಲಿ ನಗರದ ಭದ್ರಪ್ಪ ನಾಯಕ ದಾನ ಮಾಡಿದ್ದುದನ್ನು ಸೂಚಿಸುತ್ತದೆ. ಇಲ್ಲಿ ಅಣ್ಣಪ್ಪ ವೆಂಕಟಪ್ಪ ಕಟ್ಟಿಸಿದ್ದ ರಾಮೇಶ್ವರ ರಾಮಚಂದ್ರ ಮತ್ತು ಗೋಪಾಲಕೃಷ್ಣ ದೇವಸ್ಥಾನಗಳಿವೆ; ಇವೆರಡೂ ಚಿತ್ರಾಪುರ ಸಾರಸ್ವತರಿಗೆ ಸಂಬಂಧಿಸಿವೆ.

೧೨. ಕುಮ್ಟ

ಕುಮ್ಟದಲ್ಲಿನ ವೆಂಕಟರಮಣದೇವಸ್ಥಾನವನ್ನು ೧೮೫೬ರಲ್ಲಿ ಕಟ್ಟಲಾಯಿತು. ಇದು ಗೋಪಾಲಕೃಷ್ಣನ ಪ್ರಾಚೀನ ವಿಗ್ರಹಕೊಂಡಿದೆ. ಇಲ್ಲಿ ಚಿತ್ರಾಪುರ ಸಾರಸ್ವತರಿಗೆ ಸಂಬಂಧಿಸಿದ ಶಂಕರನಾರಾಯಣ ದೇವಸ್ಥಾನವಿದೆ.

೧೩. ಅಂಕೋಲ

ಅಂಕೋಲದಲ್ಲಿ ಲಕ್ಷ್ಮೀನಾರಾಯಣ, ಅಜದುರ್ಗಾ (ಆರ್ಯ ದುರ್ಗಾ) ಮತ್ತು ಧೆಂಪೆ ಕುಟುಂಬಕ್ಕೆ ಸಂಬಂಧಿಸಿದ ನಾರಾಯಣ ದೇವಸ್ಥಾನಗಳಿವೆ.

೧೪. ಹಳ್ದಿಪುರ

ವರಾಹ ನಗರವೆಂದಾಗಿಯೂ ಪರಿಚಿತವಾಗಿರುವ ಹಳ್ದಿಪುರದಲ್ಲಿ ಮಾರುತಿ ಮತ್ತು ವೆಂಕಟೇಶ್ವರ ದೇವಸ್ಥಾನಗಳಿವೆ. ಮಾರುತಿಯ ದೇವಸ್ಥಾನವನ್ನು ರಾಮಚಂದ್ರ ಭಟ್ಟರು ಕಟ್ಟಿಸಿ ಅಲ್ಲಿ ಪ್ರಾಚೀನವೆನ್ನಲಾಗುವ ಮಾರುತಿಯ ವಿಗ್ರಹವನ್ನು ಸ್ಥಾಪಿಸಿದರು. ವೆಂಕಟೇಶನ ವಿಗ್ರಹವನ್ನು ಖ್ಯಾತನಾಮ ವೈದಿಕ ಮತ್ತು ಸಂಸ್ಕೃತ ವಿದ್ವಾಂಸರಿದ್ದ ಮಹಾಬಲ ಭಟ್ಟರು ೧೭೭೪ರಲ್ಲಿ ಸ್ಥಾಪಿಸಿದರು.

೧೫. ಮೈಸೂರು

ಶ್ರೀರಾಮ ಪೇಟೆಯಲ್ಲಿನ ರಾಮ ಮಂದಿರವನ್ನು ಗಾನವಿಶಾರದ, ಸಂಗೀತ ವಿದ್ವಾನ್, ಬಿಡಾರ ಕೃಷ್ಣಪ್ಪ ಕಟ್ಟಿಸಿದರು. ಶ್ರೀರಾಮ ಪೇಟೆಯಲ್ಲಿ ರಾಮಚಂದ್ರ ಮಂದಿರವೂ ಇದ್ದು ಅದನ್ನು ಎಸ್. ವಿಠ್ಠಲರಾವ್ ಕಟ್ಟಿಸಿದರು.

೧೬. ನಗರ

ನಗರದಲ್ಲಿ ವೈಷ್ಣವ ಸಾರಸ್ವತರ ಕೆಲವೊಂದು ಪ್ರಸಿದ್ಧ ಕುಟುಂಬಗಳಿವೆ. ಅಲ್ಲಿ ವೆಂಕಟರಮಣ ದೇವಸ್ಥಾನವಿದೆ.

೧೭. ಶೃಂಗೇರಿ

ಶೃಂಗೇರಿಯಲ್ಲಿ ಕೇಶವ ಭಟ್ ಮತ್ತೆ ಇನ್ನಿತರರು ಸೇರಿ ಕಟ್ಟಿಸಿದ ವೆಂಕಟಪತಿ ದೇವಸ್ಥಾನವಿದೆ. ಇಲ್ಲಿ ಗಣಪತಿ, ಆಂಜನೇಯರ ಖಾಸಗಿ ದೇವಸ್ಥಾನಗಳೂ ಇವೆ. ಗಣಪತಿಯ ದೇವಸ್ಥಾನಕ್ಕೆ ಶೃಂಗೇರಿ ಮಠದಿಂದ ವಾರ್ಷಿಕ ದೇಣಿಗೆ ದೊರಕುತ್ತದೆ.

೧೮. ಕಳಸ

ವೆಂಕಟೇಶ ಮತ್ತು ಹನುಮಂತ ದೇವಸ್ಥಾನಗಳನ್ನು ಕೊಂಡಿದೆ.

೧೯. ತೀರ್ಥಹಳ್ಳಿ

ತೀರ್ಥಹಳ್ಳಿಯಲ್ಲಿ ಕೋದಂಡ ರಾಮ ದೇವಸ್ಥಾನವಿದೆ.

೨೦. ತೆಲ್ಲಿಚೇರಿ

ತೆಲ್ಲಿಚೇರಿಯಲ್ಲಿ ಲಕ್ಷ್ಮೀನರಸಿಂಹ ದೇವಸ್ಥಾನವಿದ್ದು ಕಾರ್ತಿಕ ಪೂರ್ಣಿಮೆಯಂದು ಮುಖ್ಯ ಉತ್ಸವ ಜರಗುತ್ತದೆ. ಇಲ್ಲಿ ಹನುಮಾನ ಮತ್ತು ಲಕ್ಷ್ಮೀ ದೇವಸ್ಥಾನಗಳೂ ಇವೆ.

೨೧. ಕೊಚ್ಚಿನ್

ಕೊಚ್ಚಿನ್‌ನಲ್ಲಿ ತಿರುಮಲ ದೇವಸ್ವೋಮ್ ದೇವಸ್ಥಾನವಿದೆ. ಇದು ಸಾರಸ್ವತರ ಅತಿ ಶ್ರೀಮಂತ ದೇವಸ್ಥಾನವಾಗಿದೆ. ವೆಂಕಟಗಿರಿಯ ಅರಸರು ಪೂಜಿಸುತ್ತಿದ್ದ ವೆಂಕಟಾಚಲಪತಿಯ ವಿಗ್ರಹ ಕುಂಬಕೋಣಂ ಮಠದ ಗುರುಗಳಾದ ವಿಜಯೇಂದ್ರತೀರ್ಥರಿಗೆ ಹಾಳು ಬಿದ್ದ ಬಾವಿಯೊಂದರಲ್ಲಿ ದೊರಕಿತ್ತು. ೧೫೪೮ರಲ್ಲಿ ಅವರು ಈ ವಿಗ್ರಹವನ್ನು ಕೊಚ್ಚಿನ್‌ಗೆ ತಂದರು. ಸ್ಥಾನೀಯ ಸಾರಸ್ವತರು ಅದನ್ನು ತಮಗೀಯುವಂತೆ ಬೇಡಿಕೊಂಡರು. ನಿತ್ಯ ಪೂಜಿಸುತ್ತಿದ್ದ ಈ ವಿಗ್ರಹವನ್ನೀಯಲು ವಿಜಯೇಂದ್ರತೀರ್ಥರು ಒಪ್ಪಲಿಲ್ಲ. ಅವರು ಕೊಚ್ಚಿನ್‌ನಿಂದ ತೆರಳಿದಾಗ ಸ್ವಪ್ನದಲ್ಲಿ ಬಂದ ದೇವರು ತಾನು ಕೊಚ್ಚಿನ್‌ನಲ್ಲಿ ಇರಬಯಸುವುದಾಗಿ ಸೂಚಿಸಿದರು. ಕೊಚ್ಚಿನ್‌ಗೆ ಮರಳಿ ಬಂದ ಇವರು ವಿಗ್ರಹವನ್ನು ಕೊಡಲು ಒಪ್ಪಿದರು. ಸಾರಸ್ವತರು ವಿಗ್ರಹವನ್ನು ಹರಿವಾಣದಲ್ಲಿಟ್ಟು ಅದರ ಮೇಲಕ್ಕೆ ಚಿನ್ನದ ನಾಣ್ಯಗಳನ್ನು ಸುರಿದರು. ಶ್ರೀಮಂತ ವ್ಯಾಪಾರಿ ಮ್ಹಾಳ ಪೈ ' ನಾಣ್ಯ ತುಂಬಿದ್ದ ಗೋಣಿಗಳನ್ನು

ಬರಿದಾಗಿಸಲೆತ್ನಿಸಿದಾಗ ನಾಣ್ಯಗಳು ಶಿರೋಭಾಗದಿಂದ ಸರಿದು ಹರಿವಾಣ ಸೇರತೊಡಗಿದವು. ಅನ್ಯ ಸಾರಸ್ವತರು ತಮ್ಮ ಕಾಣಿಕೆಯನ್ನು ಅರ್ಪಿಸಿದ ನಂತರವೇ ವಿಗ್ರಹದ ಶಿರೋಭಾಗ ನಾಣ್ಯಗಳಿಂದ ಮುಚ್ಚಲ್ಪಟ್ಟಿತು. ಅದಕ್ಕೆ ಕಾರಣ ವಿಗ್ರಹ ವ್ಯಕ್ತಿಯೊಬ್ಬನ ಒಡೆತನ ಬಯಸದಿದ್ದುದೆನ್ನುತ್ತಾರೆ. ಈ ವಿಗ್ರಹವನ್ನು ವಿಜಯೇಂದ್ರತೀರ್ಥರು ಅದರ ಮೊದಲ ದೇವಸ್ಥಾನದಲ್ಲಿ ಸ್ಥಾಪಿಸಿದ್ದರೂ ಕಾಶಿಮಠದ ಸುಧೀಂದ್ರ ತೀರ್ಥರು (?) ಅದನ್ನು ಹೊಸದಾಗಿ ಕಟ್ಟಿದ ಸಣ್ಣ ದೇವಸ್ಥಾನದಲ್ಲಿ ೧೫೯೯ರಲ್ಲಿ ಪುನಃ ಪ್ರತಿಷ್ಠಾಪಿಸಿದರು. ದೇವಸ್ಥಾನದಲ್ಲಿನ ಪೂಜೆಯನ್ನು ಸ್ಮೃತಿ-ಸೂಕ್ತಾವಳಿಗಳನ್ನನುಸರಿಸಿ ಮಾಡಲು ಪಾರಂಪಾರಿಕ ಹಕ್ಕಿನೊಂದಿಗೆ, ೨೨ ಅರ್ಚಕರ ಕುಟುಂಬಗಳನ್ನೂ (ಆಚಾರ್ಯ ಉಪಾಧಿಕೊಂಡ ಮುಖ್ಯ ಅರ್ಚಕನ ಸಮೇತ) ನೇಮಿಸಬೇಕೆಂದು ಆಜ್ಞಾಪಿಸಿದರು. ದೇವಸ್ಥಾನದ ವ್ಯವಸ್ಥೆ ನೋಡಿಕೊಳ್ಳಲು ಇಬ್ಬರು 'ಮೇಲ್ - ಅಧಿಕಾರಿಗಳನ್ನು', ಎಂಟು 'ಅಧಿಕಾರಿ'ಗಳನ್ನು ಮತ್ತು ಎಂಟು ಗ್ರಹಸ್ತರನ್ನು ನೇಮಿಸಿದರು. 'ಮೇಲ್-ಅಧಿಕಾರಿ'ಗಳಲ್ಲಿ ಒಬ್ಬಾತ ಮ್ಹಾಳ ಪೈ ಮತ್ತೆ ಇನ್ನೊಬ್ಬಾತ ಬಾಬ ಪ್ರಭು ಇವರ ಕುಟುಂಬಕ್ಕೆ ಸೇರಿದವರಿರುತ್ತಾರೆ.

೧೭೧೯ರಲ್ಲಿ ಪಂಚಲೋಹಗಳ ಈ ವಿಗ್ರಹ ದೇವಾಸ್ಥಾನದಿಂದ ಕಾಣದಾಯಿತು. ಕಡಲತೀರದಲ್ಲಿ ಕಾಣ ಬಂದ ಈ ವಿಗ್ರಹವನ್ನು ಯಾರೋ ಒಬ್ಬಾತ ಅದನ್ನು ಡಚ್ ಗವರ್ನರನಿಗೆ ಬಹುಮಾನವಾಗಿತ್ತ. ಆತ ಅದನ್ನು ಆಟದ ಗೊಂಬೆಯೆಂದು ತನ್ನ ಮಕ್ಕಳಿಗಿತ್ತ. ಅಸಹ್ಯವಾದ ಹೊಟ್ಟೆ ನೋವಿಗೀಡಾದ ಗವರ್ನರನ ಹೆಂಡತಿ ಈ ವಿಗ್ರಹವನ್ನು ತನ್ನ ಹಿಂದೂ ವೈದ್ಯನಿಗಿತ್ತ ಬಳಿಕವೇ ಆಕೆಯ ನೋವು ವಾಸಿಯಾಯಿತೆನ್ನುತ್ತಾರೆ. ಈ ವಿಗ್ರಹ ವೈದ್ಯನಲ್ಲಿ ಸುಮಾರು ಏಳು ವರ್ಷಗಳ ಕಾಲ ಉಳಿಯಿತು. ಈ ಕಾಲದಲ್ಲಿ ವೈದ್ಯ ಕೂಡಾ ವಿಲಕ್ಷಣ ಅನುಭವ ಕೊಂಡ. ಆತ ಆ ವಿಗ್ರಹವನ್ನು ಸಾರಸ್ವತರಿಗಿತ್ತ. ಮ್ಹಾಳ ಪೈ, (ಇದೇ ಹೆಸರು ಕೊಂಡಾತನ ವಂಶಜ), ವಿಗ್ರಹವನ್ನು ತನ್ನ ಸ್ವಾಧೀನಕೊಂಡು ಅದಕ್ಕೆ ಕರಿಶಿಲೆಯ ದೇವಸ್ಥಾನ ಕಟ್ಟಿಸಿದ. ವಿಗ್ರಹದ ಎರಡನೆಯ ಬಾರಿಯ ಪ್ರತಿಷ್ಠೆ ಕಾಶಿ ಮಠದ ದೇವೇಂದ್ರ ತೀರ್ಥರ ಕೈಗಳಿಂದಾಯಿತು.

೧೭೯೧ರ ತನಕ ಇಲ್ಲಿನ ದೇವಸ್ಥಾನದಲ್ಲುಳಿದಿದ್ದ ವಿಗ್ರಹ ಅಲ್ಲೆಪ್ಪಿ ಸೇರಿತು. ೧೮೫೩ರಲ್ಲಿ ವಿಗ್ರಹವನ್ನು ಕೊಚ್ಚಿನ್‌ನ ದೇವಸ್ಥಾನಕ್ಕೆ ಮರಳಿಸಲಾಯಿತು.

ವಿಗ್ರಹದ ಮೂರನೆಯ ಬಾರಿಯ ಪ್ರತಿಷ್ಠೆ, ೧೮೮೧ರಲ್ಲಿ ಹೊಸದಾಗಿ ಕಟ್ಟಿಸಿದ ದೇವಸ್ಥಾನದಲ್ಲಿ, ಕಾಶಿಮಠದ ಹದಿಮೂರನೇ ಗುರುಗಳಾದ ಭುವನೇಂದ್ರ ತೀರ್ಥರ ಕೈಗಳಿಂದಾಯಿತು. ಈ ದೇವಸ್ಥಾನದ ಪ್ರಾಕಾರದೊಳಕ್ಕೆ ಮಹಾಲಕ್ಷ್ಮಿ, ಮಾರುತಿ, ಗರುಡ, ಗಣಪತಿ, ಕೇರಳೇಶ್ವರ, ಉದ್ಯಾನೇಶ್ವರ ಮತ್ತು ಭದ್ರಕಾಳಿಯರ ಸಣ್ಣ ಸಣ್ಣ ಗುಡಿಗಳಿವೆ. ಅಲ್ಲಿ ವಿಜಯನಗರದ ಅರಸರ ಮತ್ತು ವಿಜಯೇಂದ್ರತೀರ್ಥರ ಕಗ್ಗಲ್ಲಿನ ಪ್ರತಿಮೆಗಳಿವೆ. ಈ ದೇವಸ್ಥಾನ ಕೊಚ್ಚಿನ್ ಮತ್ತು ಟ್ರಾವೆಂಕೂರಿನ ಅರಸರು ಹಾಗೂ ಶ್ರೀಮಂತರಿದ್ದ ಸಾರಸ್ವತ ವ್ಯಾಪಾರಿಗಳು ಅರ್ಪಿಸಿದ ಅಪಾರ ಸಂಪತ್ತನ್ನು ಕೊಂಡಿದೆ. ಇದು ಹದಿನೈದು ಗ್ರಾಮಗಳನ್ನು ಕೊಂಡಿದೆ. ಅನಂತ ಚತುರ್ಥಿಯ ಮೊದಲ ದಿನದ ಉತ್ಸವವನ್ನು ಕೊಚ್ಚಿನ್ ಸರಕಾರದ ಖರ್ಚಿನಿಂದ ದೇವರ್ಸಕಿಣಿಯ ಕೊಲೆಯ ಪಾಪದ ಪರಿಹಾರವನ್ನುದ್ದೇಶಿಸಿ ಮಾಡಲಾಗುತ್ತದೆ.

ಈ ದೇವಸ್ಥಾನದಲ್ಲಿ ಪ್ರತಿದಿನ ೩೦೦ರಿಂದ ೫೦೦ ಯಾತ್ರಿಕರಿಗೆ ಧರ್ಮಾರ್ಥ ಊಟವೀಯಲಾಗುತ್ತದೆ.

೨೨. ಎರ್ನಾಕುಲಂ

ಎರ್ನಾಕುಲಂದಲ್ಲಿ ೧೭೨೭ರಲ್ಲಿ ಕಟ್ಟಲಾಗಿದ್ದ ವೆಂಕಟಾಚಲಪತಿ ಮತ್ತು ಗಣಪತಿ ದೇವಸ್ಥಾನಗಳಿವೆ. ೧೮೯೨ರ ತನಕ ಇವು ಕೊಚ್ಚಿಯ ತಿರುಮಲ ದೇವಸ್ವೋಮ್‌ನ ಅಧೀನವಿದ್ದವು. ಕೊಚ್ಚಿನ್‌ನ ದೇವಸ್ಥಾನ ಮತ್ತು ಎರ್ನಾಕುಲಂದಲ್ಲಿನ ಯೋಗಕಾರರ ನಡುವೆ ವಿವಾದವೊಂದಿತ್ತು; ಎರ್ನಾಕುಲಂ ದೇವಸ್ಥಾನ ಸ್ವತಂತ್ರವಾಗಿ ಆಡಳಿತೆ ನಿರ್ವಹಿಸತೊಡಗಿತ್ತು. ವಾದ ದಾವೆಯೊಂದಾಯಿತು. ೧೯೦೭ರಲ್ಲಿ ಕೊಚ್ಚಿನ್ ಉಚ್ಚ ನ್ಯಾಯಾಲಯು ಎರ್ನಾಕುಲಂ ಯೋಗಕಾರರ ಪರವಾಗಿ ತೀರ್ಪನ್ನಿತ್ತಿತು. ೧೮೯೩ರಲ್ಲಿ ದೇವಸ್ಥಾನದ ಜೀರ್ಣೋದ್ಧಾರವಾಗಿತು. ೧೮೯೭ರಲ್ಲಿ ಪ್ರತಿಷ್ಠಾಪನೆ ನೆರವೇರಿತು.

೨೩. ಚೆರಯಿ

ಇಲ್ಲಿನ ವರಾಹ ಸ್ವಾಮಿ ದೇವಸ್ಥಾನ ಕೊಚ್ಚಿನ್ ಬಂದರಿನ ಎದುರಿಗಿದ್ದ ವೈಪಿನ್‌ನಲ್ಲಿ ೧೫೭೦ರಲ್ಲಿ ಕಟ್ಟಲ್ಪಟ್ಟಿತು. ಕಡಲ ಕೊರೆತದ ನಿಮಿತ್ತ ಇದನ್ನು ಚೆರಯಿಗೆ ಸ್ಥಳಾಂತರಗೊಳಿಸಲಾಯಿತು. ಇದರ ಆಡಳಿತೆಯನ್ನು ತಿರುಮಲ ದೇವಸ್ವೋಮ್, ಕೊಚ್ಚಿನ್ ನೋಡಿಕೊಳ್ಳುತ್ತದೆ.

೨೪. ಕರ್ಣಕೋಡಂ

ಎರ್ನಾಕುಲಂದಿಂದ ಎರಡೂವರೆ ಮೈಲುಗಳ ದೂರದಲ್ಲಿ ಕರ್ಣಕೋಡಂ ಇದ್ದು ಅಲ್ಲಿನ ದೇವಸ್ಥಾನದಲ್ಲಿನ ಮೂರ್ತಿಯನ್ನು ಸಾರಸ್ವತರು ಕೊಚ್ಚಿನ್‌ಗೆ ಬಂದಾಗ ತಂದುದಾಗಿತ್ತು. ಅವರು ಕೊಚ್ಚಿನ್‌ನಲ್ಲಿನ ದೇವಸ್ಥಾನದಲ್ಲಿ ವೆಂಕಟಾಚಲಪತಿಯು ವಿಗ್ರಹವನ್ನು ಸ್ಥಾಪಿಸುವ ತನಕ ಈ ವಿಗ್ರಹವನ್ನೇ ಪೂಜಿಸುತ್ತಿದ್ದರು. ೧೭೯೧ರಲ್ಲಿ ದೇವರ್ಸಕಣಯು ಕೊಲೆಯಾದ ನಂತರ ಅರ್ಚಕರ ತಂಡವೊಂದು ಈ ವಿಗ್ರಹದೊಂದಿಗೆ ತ್ರಿಪುಣ್ಣಿಥುರಕ್ಕೆ ಹೋಯಿತು. ಅಲ್ಲಿ ಅದು ೧೮೯೪ರ ತನಕ ಉಳಿದುಕೊಂಡಿತು. ಈ ದೇವಸ್ಥಾನದ ಆಡಳಿತೆಯನ್ನು ತಿರುಮಲ ದೇವಸ್ವೋಮ್ ನೋಡಿಕೊಳ್ಳುತ್ತದೆ.

೨೫. ತ್ರಿಪುಣ್ಣಿಥುರ

ತ್ರಿಪುಣ್ಣಿಥುರದಲ್ಲೂ ವೆಂಕಟೇಶ ದೇವಸ್ಥಾನವಿದ್ದು ಅದರ ಆಡಳಿತೆಯನ್ನು ಕೊಚ್ಚಿಯ ತಿರುಮಲ ದೇವಸ್ವೋಮ್ ನೋಡಿಕೊಳ್ಳುತ್ತದೆ.

೨೬. ಚೆನ್ನಮಂಗಲಂ

ಚೆನ್ನಮಂಗಲಂದಲ್ಲಿ ವೇಣುಗೋಪಾಲ ದೇವಸ್ಥಾನವಿದೆ.

೨೭. ಕುರಿಖಪಲ್ಲಿ

ಕುರಿಖಪಲ್ಲಿ ಕೃಷ್ಣ ದೇವಸ್ಥಾನಕೊಂಡಿದೆ.

೨೮. ಮಲ

ಮಲದಲ್ಲಿ ವೆಂಕಟೇಶ ದೇವಸ್ಥಾನವಿದೆ.

೨೯. ಕ್ರಂಗನೂರ್

ಕ್ರಂಗನೂರ್‌ನಲ್ಲಿ ಸುಮಾರು ೩೦ ವರ್ಷಗಳ ಹಿಂದೆ ಕಟ್ಟಲಾದ ಗೋಪಾಲಕೃಷ್ಣ ದೇವಸ್ಥಾನವಿದೆ.

೩೦. ಟ್ರಾವಂಕೂರು

ಟ್ರಾವಂಕೂರಿನ ಎಂಟು 'ಗ್ರಾಮೊಮ್' (ಮೂಲದ ವಸಾಹತುಗಳು) ಗಳಲ್ಲಿನ ಪುರಕ್ಕಾಡ್, ಶೇರ್ತಲ್ಲೈ, ಪಾರೂರು, ಕೊಟ್ಟಾಯಂ, ಕನ್ಯಾ ಕುಲಂ ಮತ್ತು ಕ್ವಿಲೋನ್ ಎಂಬೀ ಆರು ಗ್ರಾಮಗಳ ದೇವಸ್ಥಾನಗಳು ಆಯಾಗ್ರಾಮಗಳ ಮಹಾಜನರಿಗೆ ಸಂಬಂಧಿಸಿವೆ.

ಅವುಗಳ ಆಡಳಿತೆಯನ್ನು ಮಹಾಜನರು ನೇಮಿಸಿದ್ದ ಅಧಿಕಾರಿಗಳು ನೋಡಿಕೊಳ್ಳುತ್ತಾರೆ. ಆಲ್ಲೆಪ್ಪಿ ಮತ್ತು ಥುರವೂರ್‌ಗಳಲ್ಲಿನ ದೊಡ್ಡ ದೇವಸ್ಥಾನಗಳು ಸಾರಸ್ವತರ ಸಮಸ್ತ ವಸಾಹತುಗಳಲ್ಲಿನ ಸಮಾಜಕ್ಕೆ ಸಂಬಂಧಿಸಿವೆ. ಈ ಎರಡೂ ದೇವಸ್ಥಾನಗಳನ್ನು ನೋಡಿಕೊಳ್ಳಲು ಅವರು ತಮ್ಮ ಪ್ರತಿನಿಧಿಗಳನ್ನು ಆರಿಸುತ್ತಾರೆ. ಈ ಪ್ರತಿನಿಧಿಗಳು ಕಾರ್ಯ ನಿರ್ವಾಹಕ ಮಂಡಲವನ್ನು ಪ್ರತಿನಿಧಿಸುತ್ತಾರೆ.

ಈ ದೇವಸ್ಥಾನಗಳು ತಿರುಮಲ ದೇವಸ್ವೋಮ್ ಎಂದಾಗಿ ಪರಿಚಿತವಾಗಿವೆ.

೩೧. ಅಲ್ಲೆಪ್ಪಿ

ಅಲ್ಲೆಪ್ಪಿ, ೧೭೯೨ರಲ್ಲಿ ಕೊಚ್ಚಿನ್‌ನಿಂದ ತಂದಿದ್ದ ವೆಂಕಟಾಚಲಪತಿಯ ವಿಗ್ರಹವನ್ನುದ್ದೇಶಿಸಿ ಟ್ರಾವಂಕೂರು ಸರಕಾರದ ನೆರವಿನಿಂದ *೧೮೮೨ರಲ್ಲಿ ಕಟ್ಟಿಸಿದ್ದ ತಿರುಮಲ ದೇವಸ್ಥಾನ* ಮತ್ತು *ಅನಂತ ನಾರಾಯಣ ಪುರಂದಲ್ಲಿ ಕಟ್ಟಲಾಗಿದ್ದ* ಲಕ್ಷ್ಮೀನರಸಿಂಹ ದೇವಸ್ಥಾನ ಕೊಂಡಿದೆ. ಟ್ರಾವಂಕೂರ್ ಸರಕಾರ ವೆಂಕಟಾಚಲಪತಿಯ ದೇವಸ್ಥಾನಕ್ಕೆ ತನ್ನ ಅಧಿಕಾರದೊಳಗಣ ೪೫ ನಿವೇಶನಗಳನ್ನು ಮತ್ತು 'ಕುಡಿಯಿರುಪ್ಪು' ತೋಟಗಳನ್ನು ಬಹುಮಾನವಾಗಿತ್ತಿತ್ತು. ಅವುಗಳನ್ನು ಕರಮುಕ್ತ ಮಾಡಲಾಗಿದ್ದರೂ ವೆಂಕಟಾಚಲಪತಿಯ ವಿಗ್ರಹವನ್ನು ಕೊಚ್ಚಿನ್‌ಗೆ ಮರಳಿಕೊಂಡು ಹೋದ ಬಳಿಕ ಕರವಸೂಲಿಯನ್ನು ಮತ್ತೆ ಆರಂಭಿಸಲಾಯಿತು.

೩೨. ಥುರವೂರ್

ತುರವೂರ್‌ನಲ್ಲಿ ನರಸಿಂಹ ಸ್ವಾಮಿ ದೇವಸ್ಥಾನವಿದೆ. ಟ್ರಾವಂಕೂರಿನಲ್ಲಿನ ಅನ್ಯ ದೇವಸ್ಥಾನಗಳು ಸ್ಥಾನೀಯ ಸಾರಸ್ವತರಿಗೆ ಸಂಬಂಧಿಸಿದ್ದರೆ, ಅಲ್ಲೆಪ್ಪಿಯ ನರಸಿಂಹ ದೇವಸ್ಥಾನ ಮತ್ತು ಥುರವೂರ್‌ನ ನರಸಿಂಹ ಸ್ವಾಮಿ ದೇವಸ್ಥಾನ ಇದಕ್ಕೆ ಅಪವಾದವಾಗಿವೆ. ಅವುಗಳ ಆಡಳಿತೆಯನ್ನು ಅಲ್ಲೆಪ್ಪಿಯ ಎರಡು, ಥುರವೂರ್‌ನ ಒಂದು, ಪುರಕ್ಕಾಡಿನ ಒಂದು, ಶೇರ್ತಲ್ಲೈಯ ಒಂದು, ಕೊಟ್ಟಾಯಂನ ಒಂದು, ಕನ್ಯಾಕುಲಂನ ಒಂದು ಮತ್ತು ಕ್ವಿಲೋನ್‌ನ

ಒಂದು, ಈ ಒಂಬತ್ತು ಪ್ರತಿನಿಧಿಗಳು ಆರಿಸಿದ ಇಬ್ಬರು ಅಧಿಕಾರಿಗಳು ನೋಡಿಕೊಳ್ಳುತ್ತಾರೆ.

ನರಸಿಂಹ ಸ್ವಾಮಿ ದೇವಸ್ಥಾನವನ್ನು ೧೭೦೪ರಲ್ಲಿ ರಾವಲ ನಾಯಕ ಕಟ್ಟಿಸಿದ್ದ. ವೆಂಕಟಾಚಲಪತಿಯ ವಿಗ್ರಹವನ್ನು ಆಲೆಪ್ಪಿಗೆ ತಂದ ನಂತರ, ೧೭೯೨ರ ಮೊದಲ್ಗೊಂಡು, ಅದು ಅಲ್ಲೆಪ್ಪಿಯಲ್ಲಿನ ಲಕ್ಷ್ಮೀನರಸಿಂಹ ದೇವಸ್ಥಾನದ ಅಧಿಕಾರ ಕ್ಷೇತ್ರದಲ್ಲುಳಿಯಿತು.

ಅಲ್ಲೆಪ್ಪಿಯ ಅನಂತನಾರಾಯಣ ಮತ್ತು ಥುರವೂರ್ ತಿರುಮಲ ದೇವಸ್ವೋಮ್ ಸೇರಿ ಥುರವೂರ್ ಪ್ರೌಢಶಾಲೆ, ಶಿಕ್ಷಕರ ತರಬೇತಿನ ಶಾಲೆ, ಸಂಸ್ಕೃತ ಶಾಲೆ, ಪ್ರಾಥಮಿಕ ಶಾಲೆ ಮತ್ತು ಟ್ರಾವಂಕೂರಿನ ಹುರಘಾರ್ ಆಫೀಸಿನ ಬಳಿಯಿದ್ದ ಸುಸಜ್ಜಿತವಾದ ವಿಶ್ರಾಂತಿ ಗೃಹ, ಶ್ರೀ ನರಸಿಂಹ ನಿವಾಸ ಇವುಗಳನ್ನು ನಡೆಸುತ್ತವೆ.

೧೯೨೪ರಲ್ಲಿ ಅಲ್ಲೆಪ್ಪಿಯಲ್ಲಿನ ನಡೆದ ಗೌಡ ಸಾರಸ್ವತರ ಎರಡನೆಯ ಪರಿಷತ್ತಿನಲ್ಲಿ ಶ್ರೀ ಎಮ್. ಶೇಷಗಿರಿ ಪ್ರಭುಗಳ ಅಪ್ರಕಾಶಿತ ಹಸ್ತ ಪ್ರತಿಗಳನ್ನು ಮತ್ತು ಅವರ ಖಾಸಗಿ ಪುಸ್ತಕ ಭಂಡಾರವನ್ನು ಸಮಾಜಬಾಂಧವರ ದೇಣಿಗಳ ನೆರವಿನಿಂದ ಕೊಂಡು ಥುರವೂರಿನಲ್ಲಿನ ತಿರುಮಲ ದೇವಸ್ವೋಮ್‌ನ ಪ್ರೌಢ ಶಾಲೆಯಲ್ಲಿ ಸ್ಥಾಪಿಸಬೇಕೆಂಬ ನಿರ್ಣಯ ಕೊಳ್ಳಲಾಯಿತು.

೩೩. ಪುರಕ್ಕಾಡ್

ಗೋವಾದಲ್ಲಿನ 'ಧರ್ಮಸಂಕಟ'ದ ದಿನಗಳಲ್ಲಿ ಸಹೋದರರಿದ್ದ ಬುರುಡ ಮತ್ತು ಬಾಳಾ ಎಂಬೀ ಸಾರಸ್ವತ ಪುರೋಹಿತರು ತಮ್ಮ ಕುಟುಂಬಗಳೊಂದಿಗೆ ಗೋವಾ ಬಿಟ್ಟು ವೇಣುಗೋಪಾಲ ಸ್ವಾಮಿ ಮತ್ತು ನಾಗಕನ್ಯಾ ಇವರ ವಿಗ್ರಹಗಳೊಂದಿಗೆ ಮಂಜೇಶ್ವರಕ್ಕೆ ಬಂದಿದ್ದರು. ಬಾಳಾನ ಮೊಮ್ಮಗ ಅನಂತ ಈ ವಿಗ್ರಹಗಳೊಂದಿಗೆ ರಾಮೇಶ್ವರಕ್ಕೆ ಪ್ರಯಾಣ ಮಾಡಿದ. ಪುರಕ್ಕಾಡ್‌ನ ಮಾರ್ಗವಾಗಿ ದಾರಿಸಾಗುವಾಗ ಸ್ಥಾನೀಯ ಸಾರಸ್ವತರು ಈ ವಿಗ್ರಹಗಳ ಪೂಜೆಗೆ ತೊಡಗಿದರು. ಅತ ರಾಮೇಶ್ವರದಿಂದ ಮರಳಿದಾಗ ಸ್ಥಾನೀಯ ಸಾರಸ್ವತರು ವೇಣುಗೋಪಾಲ ಸ್ವಾಮಿಗಾಗಿ ದೇವಸ್ಥಾನವೊಂದನ್ನು ಕಟ್ಟಿಸಿದರು. ೧೬೫೫-೧೬೬೦ರ ನಡುವೆ ಎರಡೂ ವಿಗ್ರಹಗಳನ್ನು ಅಲ್ಲಿ ಸ್ಥಾಪಿಸಲಾಯಿತು. ೧೭೦೬ರಲ್ಲಿ ದೊಡ್ಡ ಪ್ರಮಾಣದಲ್ಲಿ ಈ ದೇವಸ್ಥಾನದ ಜೀರ್ಣೋದ್ಧಾರ ಮಾಡಲಾಯಿತು. ಆಗ ಅಲ್ಲಿ ಮದನಗೋಪಾಲ ವಿಗ್ರಹವನ್ನು ಸ್ಥಾಪಿಸಲಾಯಿತು. ೧೭೫೪ರಲ್ಲಿ ಮಾರ್ತಾಂಡವರ್ಮ ಪುರಕ್ಕಾಡ್‌ನ್ನು ಟ್ರಾವಂಕೂರಿನೊಂದಿಗೆ ಸೇರಿಸಿದ. ಕಡಲ ಕೊರತದಿಂದ ಬಂದರು ನಾಶವಾದಾಗ ೧೭೯೩ರಲ್ಲಿ ಅಲ್ಲೆಪ್ಪಿ ಪ್ರಮುಖ ಬಂದರೊಂದರ ಸ್ಥಾನ ಕೊಂಡಿತು. ಅದರೊಂದಿಗೆ ಪುರಕ್ಕಾಡ್ ತನ್ನ ಮಹತ್ತನ್ನು ಕಳೆದುಕೊಂಡಿತು. ಆದರೆ ಭಾವುಕರು ದೇವಸ್ಥಾನವನ್ನು ಗೌರವಾದರಗಳಿಂದ ಕಾಣುತ್ತಿದ್ದು ಈಗಲೂ ತಮ್ಮ ಮಕ್ಕಳನ್ನು ದೇವರ ಸೇವೆಗೆಂದು ದೇವಸ್ಥಾನಕ್ಕೆ ಅರ್ಪಿಸುತ್ತಾರೆ.

೩೪. ಕಾಯಂಕುಲಂ

ಕಾಯಂಕುಲಂದಲ್ಲಿ ವಿಠೋಬ ದೇವಸ್ಥಾನವಿದೆ. ಇದು ಥುರವೂರ್ ದೇವಸ್ವೋಮ್ ಇತ್ತ ರೂಪಾಯಿ ೫೫೦೧ರ ದೇಣಿಗೆಯಿಂದ ಕಟ್ಟಿಸಲಾದ ವಿಠೋಬಾ ಪ್ರೌಢ ಶಾಲೆಯನ್ನು ನೋಡಿಕೊಳ್ಳುತ್ತದೆ.

೩೫. ಶೇರ್ತಲ್ಲೈ

ಮುತ್ತತ್ತು ತಿರುಮಲ ದೇವಸ್ವೋಮ್ ೧೭೬೩ರಲ್ಲಿ ಕಟ್ಟಲ್ಪಟ್ಟಿತು. ಇಲ್ಲಿನ ಆರಾಧ್ಯ ದೇವತೆ ವೆಂಕಟೇಶ. ಕೊಚ್ಚಿನ್‌ನ ದೇವಸ್ಥಾನದಲ್ಲಿದ್ದಂತೆ ಇಲ್ಲಿಯೂ ಈಶ್ವರನ ಪ್ರತ್ಯೇಕವಾದ ಗುಡಿಯಿದೆ. ಬಡವರ ಮಕ್ಕಳ ಶಿಕ್ಷಣಕ್ಕೆ ದೇವಸ್ಥಾನ ವಿದ್ಯಾರ್ಥಿವೇತನವೀಯುತ್ತದೆ.

೩೬. ಕೊಟ್ಟಾಯಂ

ಕೊಟ್ಟಾಯಂನಲ್ಲಿ ೧೮೪೧ರಲ್ಲಿ ಕಟ್ಟಲಾದ ವೆಂಕಟೇಶ ದೇವಸ್ಥಾನವಿದೆ.

೩೭. ಪಾರೂರ್

ಪಾರೂರ್‌ನಲ್ಲಿ ವೆಂಕಟೇಶ ದೇವಸ್ಥಾನವಿದೆ.

೩೮. ಕ್ವಿಲೋನ್

ಕ್ವಿಲೋನ್‌ನಲ್ಲಿ ಶ್ರೀಮಂತ ವೆಂಕಟೇಶ ದೇವಸ್ಥಾನವಿದೆ. ಇಲ್ಲಿ ಧನಾಢ್ಯ ಸಾರಸ್ವತ ವ್ಯಾಪಾರಿಗಳಿದ್ದರು. ಈಗ ಅವರ ವ್ಯಾಪಾರ ಕುಂದಿದೆ.

ಈ ಎಲ್ಲಾ ದೇವಸ್ಥಾನಗಳಲ್ಲಿನ ಪ್ರಾಮುಖ್ಯವಾದ ಉತ್ಸವ ಭಾದ್ರಪದ ತಿಂಗಳಲ್ಲಿ ಬರುವ 'ಅನಂತ ವ್ರತ' ವಿದೆ.

೩೯. ಕೋದಂಡರಾಮ ದೇವಸ್ಥಾನ, ರಾಮೇಶ್ವರ

೧೫ನೇ ಶತಮಾನದಲ್ಲಿ ರಾಮ್ನಾಡ್‌ನ ಅರಸು ಕಾಶಿಮಠದ ಗುರುಗಳಿಗಾಗಿ ನಿವೇಶವೊಂದನ್ನು ಬಹುಮಾನದ ರೂಪದಲ್ಲಿತ್ತು ಅಲ್ಲಿ ಮಠವೊಂದನ್ನು ಕಟ್ಟಿಸಿದ. ಮತ್ತೆ ರಾಮೇಶ್ವರ ದೇವಸ್ಥಾನದ ಒಳಪ್ರಾಕಾರದಲ್ಲಿ ಕೋದಂಡರಾಮನ ವಿಗ್ರಹವನ್ನು ಸ್ಥಾಪಿಸಲು ಅನುಮತಿ ಇತ್ತ.

ದೇವಸ್ಥಾನ ಕಾಶಿಮಠದ ಒಡೆತನ ಕೊಂಡಿದ್ದು ಅಲ್ಲಿನ ಅರ್ಚಕರು ವೈಷ್ಣವ ಸಾರಸ್ವತರಿದ್ದಾರೆ.

ರಾಮೇಶ್ವರದಲ್ಲಿನ ದೇವಸ್ಥಾನ ಮತ್ತು ಮಠವನ್ನು ಕಾಶಿಮಠದ ೧೫ನೇ ಗುರು ಸುಕೃತೀಂದ್ರ ತೀರ್ಥರು ಸಂಗ್ರಹಿಸಿದ ನಿಧಿಯಿಂದ ದುರಸ್ತು ಮಾಡಲಾಗಿದೆ.

ಸಂದರ್ಭ ಸೂಚಿ

೧) ಇದು ಬಹುಮಟ್ಟಿಗೆ ಶ್ರೀ ಎಮ್. ಗೋವಿಂದ ಪೈಗಳು ೧೯೨೦ರ ಎಪ್ರಿಲ್ ತಿಂಗಳ 'ಆಲ್ ಇಂಡಿಯಾ ಸಾರಸ್ವತ' ಸಂಚಿಕೆಯಲ್ಲಿ ಬರೆದ 'ಮಂಜೇಶ್ವರ, ಇಟ್ಸ್ ಟೆಂಪಲ್ ಆಂಡ್ ದ ರೀಸೆಂಟ್ ಸೆರಿಮನಿ' ಲೇಖನದಲ್ಲಿನ ರೋಚಕ ವಿವರಗಳನ್ನಾಧರಿಸಿಕೊಂಡಿದೆ.

೨) ಕಣ್ವ ತೀರ್ಥ ಮಂಜೇಶ್ವರದ ಸಮೀಪವಿದ್ದ ಉದಿಯಾವರದಲ್ಲಿದೆ. ಮಧ್ವಾಚಾರ್ಯರು ಇಲ್ಲಿ ಒಂದೇ ದಿನದಲ್ಲಿ ಎಂಟು ಶಿಷ್ಯರಿಗೆ ಸನ್ಯಾಸಾಶ್ರಮದ ದೀಕ್ಷೆ ಇತ್ತರು. ಈ ಶಿಷ್ಯರೇ ಮುಂದೆ ಉಡುಪಿಯ ಅಷ್ಟಮಠಾಧಿಪತಿಗಳಾದರು. ಅವರಲ್ಲಿನ ವಿಷ್ಣುತೀರ್ಥರು ಮಧ್ವಾಚಾರ್ಯರ ಸಹೋದರರಿದ್ದರು. ಅವರು ಸುಬ್ರಹ್ಮಣ್ಯ ಮಠ ಮತ್ತು ಸೋದೆ ಮಠದ

ಮೊದಲ ಗುರುಗಳೆನಿಸಿಕೊಂಡರು. ಕಣ್ವ ತೀರ್ಥದಲ್ಲಿನ ಅಶ್ವತ್ಥದ ಮರದಡಿಯಲ್ಲಿ ದೀಕ್ಷೆಗಾಗಿ ಬಳಸಿದ್ದ ವೇದಿಕೆಯನ್ನು ಈಗಲೂ ಕಾಣಬಹುದು. ಇಲ್ಲಿ ಉಡುಪಿಯ ಪೇಜಾವರ ಮಠಕ್ಕೆ ಸಂಬಂಧಿಸಿದ ಮಠವೊಂದಿದೆ.

೩) ಸಂದಾಯ ಮಾಡುವ ಕರವನ್ನು ಕಟ್ಟಕಡೆಗೆ ಟಿಪ್ಪುವಿಗೆ ಸಲ್ಲಿಸಬೇಕೇ ಅಥವಾ ಬ್ರಿಟಿಷರಿಗೆ ಎಂಬುದನ್ನರಿಯದಿದ್ದ ದೇವಸ್ಥಾನದ ಅಧಿಕಾರಿಗಳು ಮೊಂಬ ಹೆಗಡೆಗೆ ಸಲ್ಲಿಸುವ ಹಣವನ್ನು ಬಾಕಿ ಇಟ್ಟಿದ್ದರು.

೪) ಆತ ಒಡೆದ ದೊಡ್ಡ ರಥದ ತುಂಡುಗಳನ್ನು ಬಳಸಿ ಹೊಸ ರಥ ತಯಾರಿಸಿದ. ಇತ್ತೀಚೆಗಿನ ಕೆಲವೇ ವರ್ಷಗಳ ಹಿಂದಿನ ತನಕ ಮರದ ಮಯೂರಾಸನ ಹಾಗೂ ಅನ್ಯವಾಹನಗಳ ಮುರಿದಿದ್ದ ಭಾಗಗಳು ಈ ದೇವಸ್ಥಾನದ ಪ್ರಾಂಗಣದಲ್ಲಿ ಕಾಣಬರುತ್ತಿದ್ದವು. ಹಳೆಯ ರಥವನ್ನು ಅಲಂಕರಿಸುತ್ತಿದ್ದ ಗರುಡನ ಮತ್ತು ಹನುಮಂತನ ರೂಪಗಳನ್ನು ಪಿಟ್ಲದ ದೇವಸ್ಥಾನದ ಒಳಗಣ ಭಾಗದಲ್ಲಿರಿಸಲಾಗಿದ್ದು ಅವುಗಳ ಶಿರೋಭಾಗದಲ್ಲಿಟ್ಟಿದ್ದ ಎಣ್ಣೆಯ ದೀಪಗಳನ್ನು ನಿತ್ಯ ಬೆಳಗಲಾಗುತ್ತದೆ.

೫) ಶ್ರೀ ಎಮ್. ಗಣಪತಿರಾವ್ ಐಗಳ್ ಇವರು ತನ್ನ 'ದಕ್ಷಿಣ ಕನ್ನಡದ ಪ್ರಾಚೀನ ಇತಿಹಾಸ'ದಲ್ಲಿ, ಮುಲ್ಕಿಗೆ ಬಂದ ಸಾರಸ್ವತ ಕುಟುಂಬಗಳಿಗೆ ಸಾವಂತ, ನರಸಿಂಹನ ಮೂರ್ತಿಯನ್ನಿತ್ತು ಒಳಲಂಕೆಯಲ್ಲಿನ ತನ್ನ ಕೋಟೆ ಮತ್ತು ಅರಮನೆಯ ಸಮೀಪದ ಭೂಮಿಯಲ್ಲಿ ದೇವಸ್ಥಾನ ಕಟ್ಟಿಸಿಕೊಟ್ಟನೆಂದೂ ಮತ್ತೆ ಅವರು ತಮ್ಮದೇ ಆದ ದೇವಸ್ಥಾನ ಕಟ್ಟಲು ಭೂಮಿಯನ್ನಿತ್ತನೆಂದು ನುಡಿಯುತ್ತಾರೆ. ಕೃತಜ್ಞತೆಯ ರೂಪದಲ್ಲಿ ಪ್ರತೀವರ್ಷ ದೀಪೋತ್ಸವದಂದು, ನರಸಿಂಹ ವಿಗ್ರಹವನ್ನು ಅರಮನೆಯ ಅವಶೇಷಗಳ ಪೂರ್ವಭಾಗದಲ್ಲಿದ್ದ ಕಟ್ಟೆಯ ಮೇಲಿಟ್ಟು ಪೂಜಿಸುತ್ತಾರೆ. ಆದರೆ ಈ ಮೇಲಣ ವಿಚಾರ ನಂಬಲಾಗದ ಕಥೆಯೊಂದಾಗಿದೆ. ಕಾರಣ ಶ್ರೀ ಗಣಪತಿರಾವ್ ಐಗಳು ಬರೆದ 'ಶ್ರೀ ಕಾಶಿಮಠದ ಚರಿತ್ರೆ'(೧೯೩೬)ಯಲ್ಲಿ ನರಸಿಂಹನ ವಿಗ್ರಹವನ್ನು ಯಾದವೇಂದ್ರ ತೀರ್ಥರ ಪೂರ್ವಪೀಠಾಧಿಕಾರಿಗಳಾಗಿದ್ದ ವಿದ್ಯಾನಿಧಿ ತೀರ್ಥರು ವರಹಾಪುರದಲ್ಲಿನ ವರಹಾದೇವಸ್ಥಾನದಿಂದ ತಂದು ೧೫೩೪ರಲ್ಲಿ ಮುಲ್ಕಿಯ ದೇವಸ್ಥಾನದಲ್ಲಿ ಸ್ಥಾಪಿಸಿದರೆಂದಿದ್ದಾರೆ. ದೇವಸ್ಥಾನದಲ್ಲಿನ ನಿತ್ಯಪಠಣದ ಶ್ಲೋಕಗಳಲ್ಲಿ ಹೇಳಿದಂತೆ ಈ ವಿಗ್ರಹವನ್ನು ವಿಜಯೇಂದ್ರ ತೀರ್ಥರು ಸ್ಥಾಪಿಸಿದ್ದರು.

೬) ಮಹಾರಾಜಾ ಕಾಲೇಜ್ ಆಫ್ ಎರ್ನಾಕುಲಂನ ಪ್ರಾಧ್ಯಾಪಕರಾಗಿದ್ದ ದಿವಂಗತ ಕೆ. ನರಸಿಂಹ ಪೈಗಳು ಮತ್ತು ದಿವಾನ್ ಬಹದ್ದೂರ್ ಕೆ. ರಾಮಪೈಗಳು ಮ್ಹಾಳ ಪೈಯ ವಂಶಜರು. ಅವರ ಗೋತ್ರ ಕೌಶಿಕ. ಬಹುತೇಕ ಮ್ಹಾಳಸಾ ಅವರ ಕುಲದೇವಿ. ಅವರ ಹಾಗೂ ಗೋವಾದ ಮ್ಹಾಳ ಪೈ ಕುಟುಂಬದ ಸಂಬಂಧದ ಕುರಿತು ಮಾತ್ರ ಯಾರೊಬ್ಬರೂ ಏನೊಂದನ್ನೂ ಅರಿಯದಿದ್ದರು.

ಭಾಗ ೪

ಅಧ್ಯಾಯ ೧೮

ಕೊಂಕಣಿ

'ಪೋರ್ಚುಗೀಸ್ ಲಿಂಗ್ವ ಬ್ರಾಹ್ಮಣಿಕ', 'ಲಿಂಗ್ವಕೆನರಿಮ್', 'ಕೆನರೀನಾ' ಅಥವಾ 'ಲಿಂಗ್ವಬ್ರಾಹ್ಮಣ ಗೋವಾನಾ' ಎಂಬಿತ್ಯಾದಿ ಹೆಸರುಗಳಿಂದ ಕರೆಯಲ್ಪಡುವ ಕೊಂಕಣಿ ಭಾಷೆಯನ್ನು ಸುಮಾರು ಒಂದೂವರೆ ಮಿಲಿಯ ಜನರು ಮಾತನಾಡುತ್ತಿದ್ದರೆ ಅದು ಅವರ ಪ್ರಾಚೀನತೆ ಮತ್ತು ಜನಪ್ರಿಯತೆಯನ್ನು ಸೂಚಿಸುತ್ತದೆ. ಮುಖ್ಯವಾಗಿ ಈ ಭಾಷೆಯನ್ನು ನುಡಿಯುವವರು ಸಾರಸ್ವತ ಬ್ರಾಹ್ಮಣರು, ಗೋವಾ ಮತ್ತು ಕೆನರಾದ ರೋಮನ್ ಕೆಥಲಿಕರಿದ್ದರೂ, ರತ್ನಾಗಿರಿ ಜಿಲ್ಲೆಯ ರಾಜಾಪುರದಿಂದ ಉತ್ತರಕನ್ನಡದ ಕಾರ್ವಾರದ ತನಕ ಮತ್ತು ಸಾವಂತವಾಡಿ ಸಂಸ್ಥಾನ, ಇಲ್ಲಿನ ಎಲ್ಲೊಬ್ಬರೂ ಈ ಭಾಷೆಯನ್ನು ಬಳಸುತ್ತಿದ್ದಾರೆ. ವಾಣಿ (ವೈಶ್ಯ), ಸೋನಾರ (ಚಿನಿವಾರ), ಸುತಾರ್ (ಬಡಗಿ), ಕಾಸಾರ್ (ತಾಮ್ರ ಮತ್ತು ಕಂಚಿನ ಪಾತ್ರೆಗಳನ್ನು ತಯಾರಿಸುವವರು), ಗುಡಿಗಾರ (ಮರ ಕೆತ್ತಿ ರೂಪ ಕೊಡುವಾತ), ಕುಂಬಾರ (ಮಣ್ಣಿನ ಮಡಕೆ ಮಾಡುವಾತ), ಗುರವ ಮತ್ತು ದೇವಲಿರು (ದೇವಸ್ಥಾನದ ಪರಿಚಾರಕರು), ಬಂಡಿಗಳು (ಉಚ್ಚ ಜಾತಿಯವರ ಮನೆಯ ಆಳುಗಳು), ಕುಣ್ಬಿ (ಬೇಸಾಯಗಾರರು), ಸುದ್ರಿಗಳು (ಶೂದ್ರರು), ಭಂಡಾರಿಗಳು (ಮದ್ಯತಯಾರಿಸುವವರು), ಕಾರ್ವಿಗಳು (ಬೆಸ್ತರು), ಕಲಾವಂತಿಣಿಯರು (ನರ್ತಕಿಯರು), ನವಾಯತರು, 'ಕಾಫಿ'ಯರು, 'ದಾಲ್ದಿ'ಯರು ಚಿತ್ಪಾವನ ಮತ್ತು ಕರ್ಹಾಡ ಬ್ರಾಹ್ಮಣರು ಮತ್ತು ಮಹಾರರು (ಹರಿಜನರು). ಇವರೆಲ್ಲರೂ ಕೊಂಕಣಿ ಮಾತನಾಡುತ್ತಾರೆ. ಸಾವಂತವಾಡಿಯ ಮುಖ್ಯ ಭಾಷೆ ಕೊಂಕಣಿಯಾಗಿದೆ. ಆದರೆ ರಾಜಾಪುರ ಮತ್ತು ರತ್ನಾಗಿರಿ ಜಿಲ್ಲೆಯ ಮಾಲಾವರಗಳ ನಡುವಣ ಪ್ರದೇಶದಲ್ಲಿ ಈ ಭಾಷೆ ಕುಡಾಲಿಯೆಂದಾಗಿ ಪರಿಚಿತವಾಗಿದೆ. ಮಾಲ್ವಾಣ್ ತಾಲೂಕಿನಲ್ಲಿ ಇದನ್ನು ಮಾಳ್ವಂಡ್ ಎಂದು ಕರೆಯುತ್ತಾರೆ.

ಗೋವಾದಿಂದ ಕೆನರಾ ಮತ್ತು ಕೇರಳದ ನಡುವಣ ಕರಾವಳಿ ಪ್ರದೇಶದತ್ತ ವಲಸೆ ಹೋಗಿದ್ದ ಬಹುಸಂಖ್ಯಾಕರು ಕೊಂಕಣಿ ನುಡಿಯುತ್ತಾರೆ. ಉಚ್ಚ ವರ್ಗೀಯ ಹಿಂದುಗಳು ಈ ಭಾಷೆಯನ್ನು ಬಳಸುತ್ತಿದ್ದಂತೆ ಉತ್ತರ ಕನ್ನಡದ ಕಾರ್ವಾರಿನಿಂದ ಭಟ್ಕಳದ ತನಕದ ಪ್ರದೇಶದಲ್ಲಿನ ಕೆಳಜಾತಿಯ ಜನರೂ ಇದೇ ಭಾಷೆಯನ್ನು ಉಪಯೋಗಿಸುತ್ತಾರೆ. ಸುಪಾ, ಸಿದ್ದಾಪುರ, ಶಿರಸಿ, ಎಲ್ಲಾಪುರ ಮತ್ತು ಅಂಕೋಲದ ಒಳಭಾಗಗಳ ಜನರೂ ಕೊಂಕಣಿ ಭಾಷೆಯನ್ನು ಬಳಸುತ್ತಾರೆ.

ಇದನ್ನು ದಕ್ಷಿಣ ಕನ್ನಡದ ಕರಾವಳಿ ಮತ್ತು ಒಳಭಾಗಗಳಲ್ಲೂ ಉಪಯೋಗಿಸಲಾಗುತ್ತದೆ. ಮಂಗಳೂರಿನ ಹೆಚ್ಚಿನ ಜನರು ಕೊಂಕಣಿ ಮಾತನಾಡುತ್ತಾರೆ. ಕೇರಳದ ತೆಲ್ಲಿಚೇರಿಯಲ್ಲೂ ಕೊಂಕಣಿ ಮಾತನಾಡುವ ಸಮಾಜಗಳಿವೆ. ಬೆಳಗಾಂ ಜಿಲ್ಲೆಯಲ್ಲೂ ಈ ಭಾಷೆ ನುಡಿಯುವ ಎಷ್ಟೊಂದೋ ಜನರಿದ್ದಾರೆ. ಮಾತ್ರ ಅಲ್ಲಿ ಅದನ್ನು ಗೋಮಾಂತಕಿ ಅಥವಾ ಪರ್ದೇಶ್ಕ್ಯಾರಿ ಎಂದು ಕರೆಯುತ್ತಾರೆ. ಧಾರ್ವಾರ ಜಿಲ್ಲೆ,

ಮೈಸೂರು ಮತ್ತು ಕೊಡಗುಗಳಲ್ಲೂ ಕೊಂಕಣಿಯನ್ನು ನುಡಿಯುವ ಸಮಾಜಗಳಿವೆ. ಮರಾಠಾ ಪರಮಾಧಿಕಾರದ ದಿನಗಳಲ್ಲಿ ಗೋವಾ ಮತ್ತು ಸಾವಂತವಾಡಿಯಲ್ಲಿನ ಹಲವೊಂದು ಕುಟುಂಬಗಳು ಗ್ವಾಲಿಯರ್, ಹರ್ದ, ಇಂದೋರ್ ಮತ್ತು ಬರೋಡಾಗಳತ್ತ ವಲಸೆ ಹೋದವು. ಬೊಂಬೇಯಲ್ಲೂ ಕೊಂಕಣಿ ಮತ್ತು ಕುಡಾಲಿ ಭಾಷಿಕರ ದೊಡ್ಡ ಸಮಾಜಗಳಿವೆ.

ಡಾ. (ಸರ್) ಜೋರ್ಜ್ ಅಬ್ರಹಾಮ್ ಗ್ರಿಯರ್ಸನ್ ಇವರ ಮೇರೆಗೆ ಹಿಂದೂ - ಆರ್ಯರ ಭಾಷೆಗಳು 'ಒಳಗಣ' ಮತ್ತು 'ಹೊರಗಣ' ಎಂಬೀ ಶಾಖೆಗಳೆರಡರಲ್ಲಿ ವಿಭಾಗಿಸಲ್ಪಟ್ಟಿವೆ.

'ಒಳಗಣ' ಶಾಖೆ, ಪಂಜಾಬಿನ ಸರ್ ಹಿಂದ್‌ನಿಂದ ಅಲ್ಲಹಾಬಾದ್‌ನವರೆಗಿನ ಭಾಗದಲ್ಲಿ ನುಡಿಯಲಾಗುವ 'ಪಡುವಣ ಹಿಂದಿ', ಪೂರ್ವ ಪಂಜಾಬ್, ಜಮ್ಮು ರಾಜ್ಯದ ದಕ್ಷಿಣದಲ್ಲಿನ ಅರ್ಧಭಾಗ ಮತ್ತು ಬಿಕಾನೇರ್ ರಾಜ್ಯದ ಉತ್ತರದ ಮೂಲೆ, ಇಲ್ಲಿ ನುಡಿಯಲಾಗುತ್ತಿದ್ದ 'ಪಂಜಾಬಿ', ರಜಪುತಾನಾ ಮತ್ತು ಮಧ್ಯ ಪ್ರದೇಶಕ್ಕೆ ಹೊಂದಿಕೊಂಡಿದ್ದ ಭಾಗಗಳಲ್ಲಿನ ಗುಜರಾತಿಯನ್ನು ಹೋಲುವ 'ರಾಜಸ್ಥಾನಿ' ಮತ್ತು 'ಗುಜರಾತಿ', ಇವುಗಳನ್ನೊಳಗೊಂಡಿದೆ. ಈ ಭಾಷೆಗಳು ಮಾಗಧಿ ಪ್ರಾಕೃತ (ಪಾಲಿ) ಭಾಷೆಯಿಂದ ಉದ್ಭವಿಸಿವೆ. 'ಹೊರಗಣ' ಶಾಖೆ ಪಶ್ಚಿಮ ಪಂಜಾಬಿನಲ್ಲಿ ನುಡಿಯುವ ಲಾಂಡ್ಹಾ, ಸಿಂಧಿ, ಮರಾಠಿ, ಬ್ರಜಬಿಹಾರಿ (ಮೈಥಿಲಿಯ ಭಾಷಾ ಪ್ರಭೇದ), ಬಂಗಾಲಿ ಮತ್ತು ಅಸ್ಸಾಮಿ ಮುಂತಾದ ಭಾಷೆಗಳಿಂದೊಳಗೂಡಿದೆ. ಇವು ಸುರಸೇನಿ ಪ್ರಾಕೃತದಿಂದ ಹುಟ್ಟಿದವು. ಆತನೆನ್ನುವಂತೆ 'ಮೂಡಲಹಿಂದಿ', ಅರ್ಧ ಮಾಗಧಿ ಪ್ರಾಕೃತದಿಂದ ಉದ್ಭವಿಸಿದ್ದು ಅದು ಮಾಗಧಿ ಮತ್ತು ಸುರಸೇನಿಗಳ ನಡುವಣ ಸ್ಥಾನ ಕೊಂಡಿದೆ. ಮರಾಠಿ, ಬೆರಾರ್ (ವಿದರ್ಭ) ಮತ್ತು ಅದರ ನೆರೆಯೂರುಗಳಲ್ಲಿ ಪ್ರಚಾರದಲ್ಲಿದ್ದ ಮಹಾರಾಷ್ಟ್ರೀ ಪ್ರಾಕೃತದಿಂದ ಇಳಿದು ಬಂತು. ಇದು ನಾಲ್ಕು ಭಾಷಾ ಪ್ರಭೇದಗಳಿಂದೊಡಗೂಡಿದ್ದು ಅವು ಹೀಗಿವೆ : ಪೂನಾದ ಸುತ್ತಮುತ್ತ ಬಳಸಲಾಗುತ್ತಿದ್ದ ಮತ್ತು ಮರಾಠಾ ಜೇತಾರರೊಂದಿಗೆ ದೂರದೂರುಗಳತ್ತ ಸಾಗಿದ್ದ 'ದೇಶಿ' ಭಾಷೆ; ಬೆರಾರ್, ಮಧ್ಯಪ್ರದೇಶ ಮತ್ತು ನಿಝಾಮರ ರಾಜ್ಯ, ಇಲ್ಲಿ ನುಡಿಯಲಾಗುತ್ತಿದ್ದ 'ಬೆರಾರಿ', ಉತ್ತರ ಕೊಂಕಣದಲ್ಲಿನ ದಮಣದಿಂದ ರತ್ನಾಗಿರಿ ಜಿಲ್ಲೆಯ ಉತ್ತರ ಭಾಗ, ಕೊಲಾಬಾ, ಥಾಣಾ ಜಿಲ್ಲೆಗಳು ಜವಾಹರ, ಜಂಜೀರಾ ಸಂಸ್ಥಾನಗಳು - ಇಲ್ಲಿ ಪ್ರಚಾರದಲ್ಲಿದ್ದ 'ವರ್ಹಾಡಿ' ಮತ್ತು 'ಕೊಂಕಣಿ'. ಈ ಮೇಲಣ ನಾಲ್ಕು ಭಾಷಾ ಪ್ರಭೇದಗಳಲ್ಲಿ ಮೂರರ ನಡುವೆ ಬಹುತರ ಸಮಾನತೆ ಇರುವುದಾಗಿ ನುಡಿಯುವ ಡಾ. ಜಿ. ಎ. ಗ್ರಿಯರ್ಸನ್, ಕೊಂಕಣ ಮತ್ತು ಪೂನಾದಲ್ಲಿ ಪ್ರಚಾರದಲ್ಲಿರುವ ಭಾಷೆಗಳ ನಡುವೆ ವ್ಯತ್ಯಾಸವಿದೆಯೆಂದು ಹೇಳುತ್ತಾರೆ. 'ಕ್ರಮನಿಷ್ಠ ಭಾಷೆ ಮತ್ತು ಸ್ಥಾನೀಯ ಭಾಷೆ ಇವೆರಡವುಗಳ ನಡುವೆ ವಿಭಾಜಕ'' ರೇಖೆಯನ್ನೆಳೆಯುವುದು ಕಷ್ಟ ಸಾಧ್ಯ..... ಈ ಭಾಷೆ ಕೊಂಕಣಿಯಿರದೆ '' ಮರಾಠಿ ಇರುವುದಾಗಿ ನುಡಿಯಲಿರುವ ಕಾರಣ ಅದು ರಾಷ್ಟ್ರೀಯ ಮಟ್ಟದ ಸಾಹಿತ್ಯದ ನಿರ್ಮಾಣಕ್ಕೆ ಕೊಂಕಣ ಪ್ರದೇಶದಲ್ಲಿ ನುಡಿಯಲಾಗುತ್ತಿದ್ದ ಭಾಷೆ ಉಪಯೋಗಿಸದೆ ಔತ್ತರೀಯ ಭಾಷಾ ಪ್ರಭೇದಗಳಿಂದ ಪ್ರಭಾವಿತವಾಗಿದ್ದ, ಪೂನಾ ಮತ್ತು

ಸತಾರಾಗಳಲ್ಲಿ ರೂಢಿಯಲ್ಲಿದ್ದ, ಭಾಷೆಯನ್ನು ಬಳಸಿದ್ದುದಿತ್ತು''.

ಈ ಮೇಲಿನ ಅಭಿಪ್ರಾಯಕ್ಕೆ ವಿದ್ವಾಂಸರಿದ್ದ ಡಾ. ವಿಲ್ಸನ್ ಫಾದರ್ ಎಂಜಲಸ್, ಫ್ರಾನ್ಸಿಸ್ ಶವಿಯರ್ ಮಫ್ಪರಿ, ಎಸ್.ಜೆ. (ಮಂಗಳೂರಿನ) ಮತ್ತು ಡಾ. ಸುಮಿತ್ರ ಮಂಗೇಶ ಇವರು ಸಹಮತಿ ವ್ಯಕ್ತಪಡಿಸಿಲ್ಲ. ಡಾ. ವಿಲ್ಸನ್ ಇವರು ಕೊಂಕಣಿ ಕೇವಲ ಒಂದೇ ಬುಡಕಟ್ಟಿಗೆ ಸೇರಿದ ಭಾಷೆ ಎನ್ನುತ್ತಾರೆ. ಕೊಂಕಣ ಪ್ರಾಂತದಲ್ಲಿ ರೂಢಿಯಲ್ಲಿದ್ದ ಕೊಂಕಣಿ ತಿರ್ಹುತ್‌ನಿಂದ ಬಂದಿರಬೇಕೆಂದು ಡಾ. ದ ಕುನ್ಹಾ ನುಡಿಯುತ್ತಾರೆ. ಮತ್ತೆ ಅದು ಮೈಥಿಲಿ " ಯನ್ನು ಹೋಲುತ್ತಿರುವುದಾಗಿಯೂ ನುಡಿಯುತ್ತಾರೆ. ಶಬ್ದಗಳ ವ್ಯಾಪ್ತಿಯನ್ನು ಪರಿಶೀಲಿಸುವಾಗ ಪ್ರಾದೇಶಿಕ ಭಾಷೆ ಕೊಂಕಣಿ, ಮರಾಠಿ ಮತ್ತು ಗುಜರಾತಿಯ ನಿಕಟ ಸಂಬಂಧ ಕೊಂಡಿರುವುದನ್ನು ಕಾಣಬಹುದೆಂದು ಡಾ. ಎಸ್.ಎಮ್. ಕತ್ರೆಯವರು ಹೇಳುತ್ತಾರೆ. ಅದು ಅಂಶತಃ ಹಿಂದಿ, ಮಧ್ಯ ಬಿಹಾರಿ, ನೇಪಾಳಿ ಬಿಹಾರಿ ಮತ್ತು ಅನ್ಯ ಕೆಲವೊಂದು ಭಾಷೆಗಳೊಂದಿಗೆ ಸಂಬಂಧಕೊಂಡಿದೆ; ಕೊಂಕಣಿ ಭಾರತದ ನೈರುತಿ ಭಾಷಾ ಸಮುಚ್ಚಯಕ್ಕೆ ಸೇರಿದ್ದುದಾಗಿದೆ. ಏಕವಚನ, ಪುಲ್ಲಿಂಗ, ನಾಮಪದಗಳ ವಿಸ್ತಾರಿತ ರೂಪು, ಅವುಗಳ ರಚನೆಗಳಲ್ಲಿನ ಪ್ರಭೇದ ಇತ್ಯಾದಿಗಳನ್ನು ಹಿಂದಣ ಕಾಲದಲ್ಲಿನ ಭಾಷೆಯೊಂದಿಗೆ ಹೋಲಿಸುವಾಗ ಅದು ಮರಾಠಿಗಿಂತ ತೀರಾ ಭಿನ್ನವಾದ ಭಾಷೆ 'ಯೊಂದಿರುವುದು ಕಾಣಬರುತ್ತದೆ.

ಡಾ. ಆರ್. ಭಂಡಾರ್ಕರ್ ಕೂಡಾ ಅದು ಹಲವೊಂದು ಕಾರಣಗಳ ನಿಮಿತ್ತ ಮರಾಠಿಗಿಂತ ಭಿನ್ನವಿರುವುದೆಂದು ನುಡಿದಿರುತ್ತಾರೆ. ಡಾ. ಜಿ. ಎ. ಗ್ರಿಯರ್ಸನ್, ' ಡಾ. ವ್ಹಿ. ಪಿ. ಚವ್ಹಾಣ್ ' ಮತ್ತು ಶ್ರೀ ಎಸ್.ಎಸ್.ತಾಲ್ಮ ' ಇವರು ಕೊಂಕಣಿ ಮತ್ತು ಮರಾಠಿ ಭಾಷೆಗಳಲ್ಲಿನ ತಾರತಮ್ಯಗಳನ್ನು ಸವಿಸ್ತಾರವಾಗಿ ಮಂಡಿಸಿರುತ್ತಾರೆ. ಕೊಂಕಣಿಯಲ್ಲಿ ಸಂಸ್ಕೃತ ಶಬ್ದಗಳು ದೊಡ್ಡ ಪ್ರಮಾಣದಲ್ಲಿದ್ದು ಅದು ಮರಾಠಿಗೂ ಮಿಗಿಲಾಗಿ ಸಂಸ್ಕೃತದೊಂದಿಗೆ ನಿಕಟ ಸಂಬಂಧಕೊಂಡಿದೆ. ಡಾ. ವ್ಹಿ. ಪಿ. ಚವ್ಹಾಣ್ ಇವರು ಗುಜರಾತಿಯಲ್ಲಿನ ಎಷ್ಟೊಂದೋ ಶಬ್ದಗಳನ್ನು ಕೊಂಕಣಿಯಲ್ಲಿ ಕಂಡಿದ್ದರು; ಮಾತ್ರ ಅವರಿಗೆ ಮರಾಠಿಯ ಶಬ್ದಗಳು ಅಲ್ಲಿ ಅಷ್ಟೊಂದು ಕಾಣಬಂದಿಲ್ಲ.

ಡಾ. ಎಸ್. ಎಮ್. ಕತ್ರೆಯವರ ಮೇರಗೆ ಕೊಂಕಣಿ ಎಷ್ಟೊಂದೋ ಹಳೆ ಗುಜರಾತಿ ಶಬ್ದಗಳನ್ನು ಉಳಿಸಿಕೊಂಡಿದೆ; ಆದರೆ ಅವು ಹೊಸ ಗುಜರಾತಿಯಲ್ಲಿ ಕಾಣಬರುತ್ತಿಲ್ಲ. ಈ ವೈಚಿತ್ರ್ಯ ಪರಿಶೋಧನೆಯ ಆಕರ್ಷಕ ವಿಷಯವೊಂದಾಗಬಲ್ಲದು ". ಕೊಂಕಣಿ ಅ,ಇ,ಉ ಹ್ರಸ್ವ ಮತ್ತು ದೀರ್ಘಾಕ್ಷರಗಳನ್ನು ಕೊಂಡಿದ್ದಂತೆ ಬಿಹಾರಿ ಮತ್ತು ಮೂಡಲ ಹಿಂದೂ ಆರ್ಯರ ಭಾಷೆಗಳಲ್ಲಿ ಕಾಣಬರುವ, ಆದರೆ ದೇವನಾಗರಿ ವರ್ಣ ಮಾಲೆಯಲ್ಲಿ ತೋರಿ ಬಾರದ 'ಎ' ಮತ್ತು 'ಒ' ಹ್ರಸ್ವ, ದೀರ್ಘಾಕ್ಷರಗಳನ್ನೂ ಕೊಂಡಿದೆ. ಪ್ರಾಕೃತದಿಂದುಳಿದು ಬಂದಿದ್ದ 'ಏ'ಯ ಬಹುವಚನ 'ಈ'ಯೊಂದಿಗೆ ಮುಗಿಯುವ ಹಳೆಯ ಪದ್ಧತಿಯನ್ನೂ ಕೊಂಕಣಿ ಉಳಿಸಿಕೊಂಡು ಬಂದಿದೆ. ಕೊಂಕಣ ನಿವಾಸಿಗಳ ಸ್ವಭಾವಾಂತರ್ಗತ ನಾಸಿಕೋಚ್ಚಾರದ ಪ್ರಕಾರ ಮರಾಠಿ ಭಾಷಿಕರಲ್ಲಿ ಕಾಣಬರುತ್ತಿಲ್ಲ.

ಕೊಂಕಣಿ ಸಾಹಿತ್ಯದ ಅಭಾವದ ಕುರಿತು ಡಾ. ಜಿ.ಪಿ. ಗ್ರಿಯರ್ಸನ್ ಹೀಗೆನ್ನುತ್ತಾರೆ:

ಪೋರ್ಚುಗೀಸರು ಗೋವಾದ ಮೇಲೆ ಅಧಿಕಾರ ಸ್ಥಾಪಿಸುವ ಮೊದಲೇ ಕೊಂಕಣಿ, ಸ್ಥಾನೀಯ ಸಾಹಿತ್ಯ ಪ್ರಕಾರವೊಂದಕ್ಕೆ ಆಕಾರವಿತ್ತಿತ್ತು. ಪೋರ್ಚುಗೀಸರ ಆಕ್ರಮಣ ಕ್ರಿಸ್ತೀಯ ಧರ್ಮಸ್ಥಾಪನೆಯನ್ನೂ ಉದ್ದೇಶಿಸಿಕೊಂಡಿತ್ತು. ಈ ಕಾರಣ ದುರಭಿಮಾನಿಗಳಿದ್ದ ಇವರು ಸಮಗ್ರ ಕೊಂಕಣಿ ಸಾಹಿತ್ಯವನ್ನು ಕ್ರೈಸ್ತೇತರ ಅಧಾರ್ಮಿಕ ಸಾಹಿತ್ಯವೆಂದು ಸುಟ್ಟು ಹಾಕಿದರು. ಧರ್ಮ ಪ್ರಚಾರಕರ ಛಲದ ಪರಿಣಾಮವಾಗಿ ಹಿಂದೂ ದೇವಾಲಯಗಳು ಉಧ್ವಸ್ತಗೊಂಡವು. ಅಲ್ಲಿದ್ದ ಪುರಾತನ ಗ್ರಂಥಗಳು ನಾಶಗೊಂಡವು. ಅವರು ಸ್ಥಾನೀಯ ಭಾಷೆಯ ಉಚ್ಚಾಟನೆಗೂ ಯತ್ನಿಸಿದರು; ೧೬೮೪ರಲ್ಲಿ ಕೊಂಕಣಿಯ ಬಳಕೆಯನ್ನು ನಿಷೇಧಿಸುವ ರಾಜಾಜ್ಞೆಯನ್ನು ಹೊರಡಿಸಿದರು.

ಸ್ಥಾನಿಕರು ತಮ್ಮ ಭಾಷೆ ಬಳಸದೆ ಕೇವಲ ಪೋರ್ಚುಗೀಸ್ ಭಾಷೆಯನ್ನಷ್ಟೇ ಉಪಯೋಗಿಸಬೇಕೆಂದು [೧೧] ಮೋಸ್ಟ್ ಸೆರೀನ್‌ದೋಮ್ ಸಬಾಸ್ತಿಯಾವ್ ಮತ್ತು ಗೋವಾದ ಮೇಲಧಿಕಾರಿಗಳ ಸಮಿತಿ ಒಂದು ಸೇರಿ ಕಾಯಿದೆಯೊಂದನ್ನು ಜಾರಿ ಮಾಡಿತ್ತು. ಅವರು ಅದರತ್ತ ದುರ್ಲಕ್ಷ್ಯ ತೋರಿದಾಗ, ಕ್ರಿಸ್ತೀಯ ಸಂಪ್ರದಾಯ ವಿರೋಧಿ ಕಾರ್ಯಕರ್ತರನ್ನು ಶಿಕ್ಷಿಸಲಾಗಿ ಸ್ಥಾಪಿಸಿದ್ದ ನ್ಯಾಯಾಲಯದ ಮುಖ್ಯಾಧಿಕಾರಿ ೧೭೩೧ರಲ್ಲಿ ಪೋರ್ಚುಗಲ್ಲಿನ ಅರಸನಿಗೆ ಕಾಗದ ಬರೆದು ಜನರು ನಿರ್ಭೀತರಾಗಿ ಕಾಯಿದೆಯನ್ನುಲ್ಲಂಘಿಸುತ್ತಿರುವುದಾಗಿ ದೂರಿತ್ತ.

ಕೊಂಕಣಿ ತನ್ನದೇ ಆದ ವ್ಯಾಕರಣ ಮತ್ತು ಪದ ನಿರೂಪಣೆಯ ಪ್ರಕಾರಗಳಿಂದ ವಿಕಾಸಗೊಂಡಿತ್ತು. ಹಿಂದೂ ಅರಸರ ಪೋಷಣೆಕೊಂಡ ಈ ಭಾಷೆ ಕಾಲಾಂತರದಲ್ಲಿ ಚರಮಸೀಮೆ ಕಂಡಿತು. ಕೊಂಕಣಿ ಭಾಷೆಯಲ್ಲಿನ ಜಾನಪದ ಕಥೆಗಳು, ನಾಣ್ಣುಡಿ, ಜೋಗುಳ, ಶಿಶುಗೀತೆ ಮುಂತಾದವು ತುಲನಾತ್ಮಕ ದೃಷ್ಟಿಯಿಂದ ಮರಾಠೀ ಸಾಹಿತ್ಯ [೧೨]ವನ್ನು ಸರಿಹೋಲುತ್ತಿದ್ದವು. ಉತ್ತರ ಕೊಂಕಣ ಪ್ರಾಂತ (ಅಧ್ಯಾಯ ೫ನ್ನು ನೋಡಿರಿ) ದ ಶಿಲಾಹರ ಅರಸು ಎರಡನೆಯ ಅಪರಾಜಿತನ ೧೧೮೭ರ ಶಿಲಾಶಾಸನ ಅರ್ಧಭಾಗದಲ್ಲಿ ಕೊಂಕಣಿಯನ್ನು ಬಳಸಲಾಗಿತ್ತು. ಬಂದಿವಡೆಯಲ್ಲಿನ ನಾಗೇಶ ದೇವಸ್ಥಾನದ ಮುಂಭಾಗದಲ್ಲಿ ೧೪೭೪ರ ಕೊಂಕಣಿ ಭಾಷೆಯಲ್ಲಿನ ಶಿಲಾಶಾಸನವೊಂದಿದೆ. ಹದಿನಾರನೆಯ ಶತಮಾನದ ಹಿಂದಣ ಕಾಲಕ್ಕೆ ಸಂಬಂಧಿಸಿದ ಕೇವಲ ಕೆಲವೇ ಹಸ್ತ ಪ್ರತಿಗಳು ದೊರಕಿರುವುದನ್ನು ಈ ಸಂದರ್ಭದಲ್ಲಿ ನೆನವರಿಸಿಕೊಳ್ಳಬೇಕು. ಸಂಸ್ಕೃತದಲ್ಲಿನ ಹಸ್ತಪ್ರತಿಗಳಲ್ಲೂ ಕೆಲವು ಮಾತ್ರ ಹದಿನಾಲ್ಕನೆಯ ಶತಮಾನಕ್ಕೂ ಹಿಂದಣ ಕಾಲಕ್ಕೆ ಸಂಬಂಧಿಸಿದ್ದವು. ಮರಾಠೀ ಭಾಷೆ, ಹದಿನಾರನೆಯ ಶತಮಾನಕ್ಕೂ ಹಿಂದಣ ಕಾಲದ ಮುಕುಂದ ರಾಜ (೧೨೦೦), ಜ್ಞಾನೇಶ್ವರ (ಧ್ಯಾನದೇವ, ೧೨೯೮), ನಾಮದೇವ (ಸುಮಾರು ೧೨೦೦), ಮತ್ತು ಶ್ರೀಧರ (೧೫೦೦) ಎಂಬೀ ನಾಲ್ಕು ಕವಿಶ್ರೇಷ್ಠರ, ಗ್ರಂಥಕರ್ತರ ಕುರಿತಾಗಿಯಷ್ಟೆ ಹೆಮ್ಮೆಯಿಂದ ನುಡಿಯಬಹುದಾಗಿತ್ತು. ಇವರ ನಂತರ ಮರಾಠಿಯ ಸರ್ವಾಂಗೀಣ ಅಭಿವೃದ್ಧಿಯಾಯಿತು. ಹದಿನೇಳನೆಯ ಶತಮಾನದಲ್ಲಿ ಮರಾಠಿ ನ್ಯಾಯಾಲಯದ ಭಾಷೆಯಾದಾಗ ಅದು ಅನಾಯಾಸ ಮತ್ತೆ ಬೆಳೆಮಕೊಂಡಿತು. ಕವಿ, ತತ್ವ ಜ್ಞಾನಿಗಳಿಂದ ಸಂಸ್ಕರಿಸಲ್ಪಟ್ಟ ಈ ಭಾಷೆ ಉಚ್ಛ್ರಾಯವಸ್ಥೆ ಕಂಡಿತು.

ಕೊಂಕಣಿ ಬಾಷೆಯ ಬೆಳವಣಿಗೆಯ ಅಭ್ಯಾಸ ಮಾಡಿದ ಡಾ. ಜಿ.ಎ. ಗ್ರಿಯರ್ಸನ್

ಇವರು ಬೆಳೆದು ಬಂದಿದ್ದ ಈ ಭಾಷೆ ಕಾಲಾಂತರದಲ್ಲಿ ಶಾಬ್ದಿಕ, ವೈವಿಧ್ಯತೆಯ ವಿಕಾಸವನ್ನೂ ಮಾಡಿಕೊಂಡಿತೆನ್ನುತ್ತಾರೆ.

ಅನ್ಯ ಮರಾಠೀ ಪ್ರಾಂತಗಳಿಗೆ ವಲಸೆ ಹೋಗುವ ಮುನ್ನವೇ ಆರ್ಯರು ಕೊಂಕಣದಲ್ಲಿ ತಮ್ಮ ವಸಾಹತುಗಳನ್ನು ಸ್ಥಾಪಿಸಿದ್ದರು. ಕೊಂಕಣಿ ತನ್ನದೇ ಆದ ಸ್ವತಂತ್ರ ಮಾರ್ಗಕೊಂಡು ಪರಿಪೂರ್ಣ ಭಾಷೆಯೊಂದಾಗಿ ಆ ಮೊದಲೇ ಬೆಳೆದುಕೊಂಡಿತ್ತು. ಅಲ್ಲಿ ಹಳೆಯ ಮತ್ತು ಹೊಸ ಮರಾಠಿಯಲ್ಲಿ ಕಾಣಸಿಗದ ಶಬ್ದ, ವ್ಯಾಕರಣದ ನಿಯಮಗಳನ್ನು ಅನುಸರಿಸಿರುವ ಪದ ಪ್ರಯೋಗ, ಇತ್ಯಾದಿಗಳನ್ನು ದೊಡ್ಡ ಪ್ರಮಾಣದಲ್ಲಿ ಕಾಣಬಹುದು. ಕೊಂಕಣಿಯನ್ನು ಮರಾಠಿಯ ಹಿರಿಯಕ್ಕಳೆನ್ನಬಹುದು.

ಮೊದಲ ದಿನಗಳಲ್ಲಿ ಹಳೆಯ ಕೊಂಕಣಿ ಮತ್ತು ಹಳೆಯ ಮರಾಠಿ ಹೆಚ್ಚು ಮಟ್ಟಿಗೆ ಒಂದಕ್ಕೊಂದು ಸರಿಹೋಲುತ್ತಿದ್ದವು. ಜ್ಞಾನೇಶ್ವರಿಯಲ್ಲಿ, ಮರಾಠಿಯಲ್ಲಿ ಬಳಸಿರದಿದ್ದ ಆದರೆ ಕೊಂಕಣಿಯಲ್ಲಿ ಪ್ರಚಾರದಲ್ಲಿದ್ದ ಎಷ್ಟೊಂದೋ ನುಡಿಗಟ್ಟುಗಳನ್ನು ಕಾಣಬಹುದು. ಡಾ. ವ್ಹಿ. ಪಿ. ಚವ್ಹಾಣ ಇವರು ಈ ಬಗೆಯ ಶಬ್ದಗಳ ಯಾದಿಯನ್ನು ತಯಾರಿಸಿದ್ದು ಅವುಗಳಲ್ಲಿನ ಹೆಚ್ಚಿನವು ಸಂಸ್ಕೃತದಿಂದ ಹುಟ್ಟಿ ಬಂದವುಗಳೆಂದೂ, ಕೆಲವೊಂದು ಗುಜರಾತಿ ಶಬ್ದಗಳಿಗೆ ಸಮಾನವಾದಂತಹುಗಳೆಂದು ನುಡಿಯುತ್ತಾರೆ.

ಜ್ಞಾನೇಶ್ವರ ಮುಂತಾದ ಮರಾಠಿ ಗ್ರಂಥಕರ್ತರ ಕೃತಿಗಳನ್ನು ನೋಡುವಲ್ಲಿ ಅವರು ದೊಡ್ಡ ಪ್ರಮಾಣದಲ್ಲಿ ಕೊಂಕಣಿಯಲ್ಲಿ ಈಗಲೂ ಪ್ರಚಾರದಲ್ಲಿರುವ ಪದಗಳನ್ನು ಬಳಸಿದ್ದುದು ಕಾಣಬರುತ್ತದೆ. ಇವನ್ನು ಅರ್ಥವಿಸಿಕೊಳ್ಳಲು ಮರಾಠೀ ವಾಚಕರಿಗೂ ಕಷ್ಟ ಸಾಧ್ಯವೆಂದು ತೋರಿಬರುತ್ತದೆ. ಇವರಿಂದ ಜ್ಞಾನೇಶ್ವರನ ಕಾಲದಲ್ಲಿ, ಅಂದರೆ ಸುಮಾರು ೬೫೦ ವರ್ಷಗಳ ಹಿಂದೆ, ಕೊಂಕಣಿ ಶಬ್ದ ಭಾಂಡಾಗಾರ ಶ್ರೇಷ್ಠ ಸಾಹಿತ್ಯಗಳ ರಚನೆಗೆ ಯೋಗ್ಯವಾಗಿತ್ತೆಂಬುದನ್ನು ಸಿದ್ಧ ಪಡಿಸಬಹುದಾಗಿದೆ.

ನವ ಮರಾಠಿ ಕೊಂಕಣಿ ಭಾಷೆಯಲ್ಲಿನ ಹಳೆಯ ಶಬ್ದಗಳ ಸ್ಥಾನದಲ್ಲಿ ಹೊಸ ಶಬ್ದಗಳ ಆವಿಷ್ಕಾರ ಮಾಡಿತಾದರೂ ಕೊಂಕಣಿ ಮಾತ್ರ ಹಳೆಯ ಶಬ್ದಗಳನ್ನೇ ಉಳಿಸಿಕೊಂಡು ಬಂದಿದೆ.

ಥಾಣಾ, ಕೊಲಾಬಾ ಮತ್ತು ರತ್ನಾಗಿರಿ ಜಿಲ್ಲೆಯ ಉತ್ತರ ಭಾಗದ ಕೆಲವೊಂದೆಡೆಗಳಲ್ಲಿನ ಮತ್ತು ಜವಾಹರ, ಜಂಜೀರಾ ಸಂಸ್ಥಾನಗಳಲ್ಲಿನ ಸುಮಾರು ಎರಡೂವರೆ ಮಿಲಿಯ ಜನರು ಕೊಂಕಣ ದರ್ಜೆಯ ಭಾಷೆಯನ್ನು ನುಡಿಯುತ್ತಾರಾದರೂ ಅದು ಕೊಂಕಣಿ ಮತ್ತು ಮರಾಠಿ ಇವೆರಡರ ನಡುವಣ, ಮಧ್ಯವರ್ತಿ ಭಾಷೆಯೊಂದಾಗುಳಿದಿದೆ. ಥಾಣಾ ಜಿಲ್ಲೆಯಲ್ಲಿನ ಸಾಲ್ಸೆಟ್ ದ್ವೀಪದ ಜನರು ನುಡಿಯುವ ಭಾಷೆಯಲ್ಲಿ ಈಗಲೂ ಭಾರಿ ಪ್ರಮಾಣದಲ್ಲಿನ ಕೊಂಕಣಿ ಪದ, ಪದ ವಿನ್ಯಾಸಗಳನ್ನು ಕಾಣಬಹುದು. ಈ ಭಾಷೆಯ ವ್ಯಾಕರಣ ಸಿದ್ಧಗೊಳಿಸಿದ ಪೋರ್ಚುಗೀಸ್ ಧರ್ಮ ಪ್ರಚಾರಕರು ಇದನ್ನು ಚಿತ್ತರೀಯ ಕೊಂಕಣಿ ಭಾಷೆಯೆಂದು ಕರೆದರು. ಮೂಲತಃ ರತ್ನಾಗಿರಿ ಜಿಲ್ಲೆಗೆ ಸಂಬಂಧಿಸಿದ್ದ ಚಿತ್ಪಾವನ ಅಥವಾ ಕೊಂಕಣಸ್ಥ ಬ್ರಾಹ್ಮಣರ ಮಾತೃಭಾಷೆ ಚಿತ್ಪಾವನಿ, ಕೊಂಕಣಿ ಮತ್ತು ಮರಾಠಿ ಭಾಷೆಗಳನ್ನು ಜೋಡಿಸುವ ಕೊಂಡಿಯೊಂದಾಗಿದೆ.

ಪೋರ್ಚುಗೀಸರ ಧರ್ಮ ಸಂಬಂಧಿ ಕುಪ್ರಖ್ಯಾತ ನ್ಯಾಯಮಂಡಳಿಯ ಬಲಾತ್ಕಾರ, ಚಿತ್ರಹಿಂಸೆಗಳನ್ನು ಸಹಿಸಲಾರದೆ ಕೆನರಾ, ಕೇರಳ ಮತ್ತು ದಕ್ಷಿಣದ ಮರಾಠಾ ರಾಜ್ಯದತ್ತ

ಓಡಿಹೋಗಿದ್ದ ಇವರಿಗೆ ತಮ್ಮ ಆರ್ಥಿಕ ಪರಿಸ್ಥಿತಿಯ ಸುಧಾರಣೆಗಾಗಿ ಆಯಾ ಭಾಗಗಳಲ್ಲಿನ ನ್ಯಾಯಾಲಯಗಳ ಭಾಷೆ, ಉದಾ : ಕನ್ನಡ, ಮಲಯಾಳಂ ಭಾಷೆಗಳಲ್ಲಿ ಪ್ರಾವೀಣ್ಯಕೊಳ್ಳಬೇಕಾದ ಅವಶ್ಯಕತೆ ಕಂಡುಬಂತು. ಇದರಿಂದ ಕೊಂಕಣಿ ಮಾತನಾಡುವವರಲ್ಲಿನ ಎಷ್ಟೊಂದೋ ಮಂದಿ ದ್ವಿಭಾಷಿ, ತ್ರಿಭಾಷಿ ವಿಶಾರದರಾದರು. ಈ ಬಹುಭಾಷಾ ಜ್ಞಾನದ ಪರಿಣಾಮವಾಗಿ ಕೊಂಕಣಿಯಲ್ಲಿ ಅನ್ಯ ಭಾಷೆಗಳ ಶಬ್ದಗಳೂ ಸಹಜವಾಗಿ ಸೇರಿಕೊಂಡವು.

ಡಾ. ಎಸ್. ಎಮ್. ಕತ್ರೆಯವರೆನ್ನುವಂತೆ ಆರ್ಯರ ಭಾಷೆ ಅನ್ಯ ಭಾಷೆಗಳ ಅನಿರೀಕ್ಷಿತ ದಾಳಿಗೆ ಪ್ರತಿರೋಧ ತೋರುವ ಸಾಮರ್ಥ್ಯಕೊಂಡಿತ್ತು. ಅಚ್ಚರಿಯೆನ್ನುವಂತೆ ಕೊಂಕಣಿಯೊಂದಿಗೆ ಸೇರಿಕೊಂಡ ಶಬ್ದಗಳ ಪ್ರಮಾಣ ಅರ್ವಾಚೀನ ಹಿಂದೂ ಆರ್ಯಭಾಷೆಗಳೊಂದಿಗೆ [೧೬] ಸೇರಿಕೊಂಡ ಶಬ್ದಗಳ ಪ್ರಮಾಣಕ್ಕಿಂತಲೂ ಕಡಿಮೆಯಿತ್ತು.

ಕದಂಬ, ಚಾಲುಕ್ಯ ಮತ್ತು ವಿಜಯನಗರಗಳ ಕನ್ನಡ ಅರಸರ ಆರರಿಂದ ಹದಿನಾಲ್ಕನೆಯ ಶತಮಾನಗಳ ತನಕದ ದೀರ್ಘಕಾಲದ ಆಡಳಿತೆಯ ದಿನಗಳಲ್ಲಿ ಕೊಂಕಣಿ ಭಾಷೆ ದೊಡ್ಡ ಪ್ರಮಾಣದಲ್ಲಿ ಕನ್ನಡ ಶಬ್ದಗಳನ್ನು ಅರಗಿಸಿಕೊಂಡಿತ್ತು. ಅವುಗಳಲ್ಲಿನ ಅನೇಕ ಶಬ್ದಗಳು ಪೋರ್ಚುಗೀಸ್ ಮತ್ತು ಮರಾಠಿ ಭಾಷೆಗಳ ಪ್ರಭಾವಕ್ಕೊಳಗಾಗಿದ್ದ, ಗೋವಾದ ಗೋಮಾಂತಕಿಯೊಂದಿಗೆ ನುಸುಳಿಕೊಂಡವು.

ಕೊಂಕಣಿ, ಅರಬಿ, ಪರ್ಷಿಯನ್ ಮತ್ತು ದೊಡ್ಡ ಪ್ರಮಾಣದಲ್ಲಿ ಪೋರ್ಚುಗೀಸ್ ಭಾಷೆಗಳಲ್ಲಿನ ಶಬ್ದಗಳನ್ನು ಸ್ವೀಕರಿಸಿದೆ. ಅನ್ನಾರಝ್ (ಅನನಾಸು), ಪಪೈಯ (ಪಪ್ಪಾಯಿ), ಪೇರ (ಪೇರಳೆ ಹಣ್ಣು), ಜಾನೆಲ್ (ಕಿಟಕಿ), ಬುಟವೊ (ಅಂಗಿಯ ಗುಂಡಿ, ಬಟನ್), ಚಾಪ್ಯೊ (ಹ್ಯಾಟ್), ಫಿಟಾ (ರಿಬ್ಬನ್), ಪೋಪಸ್ (ಬೂಟ್), ಇನ್‌ಸ್ತ್ರಿರಾರ್ (ಇಸ್ತ್ರಿ ಪೆಟ್ಟಿಗೆ) ಇತ್ಯಾದಿ.

ಭಾಷೆ ಒಂದಿದ್ದರೂ ಅದನ್ನಾಡುವ ಪದ್ಧತಿ ವಿಭಿನ್ನ ಜಿಲ್ಲೆಗಳಲ್ಲಿ, ಮತ್ತೆ ಜಾತಿ ಕೋಮುಗಳಲ್ಲಿ ಬೇರೆಯೇ ಇರುತ್ತಿತ್ತು. ಗೋವಾದಲ್ಲಿನ ಅರ್ವಾಚೀನ ಕೊಂಕಣಿ ಎಷ್ಟೊಂದೋ ಶಬ್ದಗಳನ್ನು ತನ್ನೊಂದಿಗೆ ಸೇರಿಸಿಕೊಂಡಿತು. ಸಾಷಷ್ಟಿಯಲ್ಲಿನ ಜನರು ರಾಗವೆಳೆದು ಮಾತನಾಡುತ್ತಿದ್ದರೂ ಆ ಮಾತಿನಲ್ಲಿ ವೇಗವಿತ್ತು. ಬಾರ್ದೇಶ್‌ನ ಜನರು ಸ್ವರಾಕ್ಷರಗಳಿಗೆ ಪ್ರಾಧಾನ್ಯವೀಯುತ್ತಿರುವುದು ತೋರಿಬರುತ್ತದೆ. ತುಲನೆ ಮಾಡುವಲ್ಲಿ ಬಾರ್ದೇಶ್ಕಾರರು ಅನುನಾಸಿಕ ಶಬ್ದಗಳನ್ನು ಸಾಷಷ್ಟಿಕಾರರಿಗಿಂತಲೂ ಕಡಿಮೆ ಪ್ರಮಾಣದಲ್ಲಿ ಬಳಸುತ್ತಿದ್ದರು. ಸಾರಸ್ವತರಲ್ಲಿನೊಂದು ವರ್ಗ ನುಡಿಯುವ 'ಹಾಡೂಂಕ' ಎಂಬ ಶಬ್ದವನ್ನು ಇನ್ನೊಂದು ವರ್ಗ 'ಹಾಡ್ಚಿಯಾಕ್' ಎಂದಾಗಿ ವ್ಯಕ್ತಪಡಿಸುತ್ತಿತ್ತು. ಕ್ರಿಸ್ತೀಯರು ಬಳಸುತ್ತಿದ್ದ ಭಾಷೆ ಮರಾಠಿಯಿಂದ ಅಷ್ಟೊಂದು ಪ್ರಾಭಾವಿತವಾಗಿಲ್ಲವಿತ್ತು. ಆದರೆ ಅವರು, ಹಿಂದುಗಳು ಮರಾಠಿಯಿಂದ ಕೊಂಡ ಶಬ್ದಗಳನ್ನು ತಮ್ಮ ಭಾಷೆಯಲ್ಲಿ ಉಳಿಸಿಕೊಂಡಿದ್ದರು. ಅವರು ಪೋರ್ಚುಗೀಸ್ ಶಬ್ದಗಳನ್ನು ದೊಡ್ಡ ಪ್ರಮಾಣದಲ್ಲಿ ತಮ್ಮ ಭಾಷೆಯೊಂದಿಗೆ ಸೇರಿಸಿರುತ್ತಾರೆ. ಮಾನ್ಸಿನ್ಯರ್ ಸಬಾಸ್ತಿಯಾವ್ ರುಡಾಲ್ಫ್ ಡಲ್ಗಾಡು [೧೭] ಇವರು ತಮ್ಮವರ ಭಾಷೆಯಲ್ಲಿನ ಸುಮಾರು ಹತ್ತನೆಯ ಒಂದು ಪಾಲಿನಷ್ಟರ ಶಬ್ದಗಳು ಪೋರ್ಚುಗೀಸ್ ಮೂಲದವೆಂದು ಭಾವಿಸುತ್ತಾರೆ; ವಾಕ್ಯಗಳ ನಿರ್ಮಾಣದಲ್ಲಿ ಪೋರ್ಚುಗೀಸ್ ಪದ್ಧತಿಯನ್ನು ಬಳಸುತ್ತಿದ್ದ ನಿಮಿತ್ತ, ಅವು ಒರಟಾಗಿದ್ದು ಅರ್ಥ ಮಾಡಿಕೊಳ್ಳಲು ಕಷ್ಟವಾಗುತ್ತಿತ್ತು [೧೮]

ಮಹಾರಾಷ್ಟ್ರದಲ್ಲಿ ನೆಲೆನಿಂತವರ ಭಾಷೆ ಗೋಮಾಂತಕಿಯನ್ನು ಹೋಲುತ್ತಿತ್ತು. ತಮ್ಮ ಶಬ್ದ ಭಾಂಡಾಗಾರವನ್ನು ಸಂಪನ್ನವಾಗಿಸಲು ಅವರು ಮರಾಠಿ ಭಾಷೆಯ ನೆರವುಕೊಂಡಿರುತ್ತಾರೆ.

ಗೋವಾಕ್ಕೆ ಹೊಂದಿಕೊಂಡ ಉತ್ತರ ಕನ್ನಡದ ಉತ್ತರ ಭಾಗದಲ್ಲಿ ಕೊಂಕಣಿಯ ಶುದ್ಧ ಪ್ರಕಾರವನ್ನು ಕಾಣಬಹುದು.ಅದು ಗೋಮಾಂತಕಿಯಂತೆ ಕಾಣಬರುತ್ತಿದ್ದು ಕೇವಲ ಕೆಲವೇ ಪೋರ್ಚುಗೀಸ್ ಶಬ್ದಗಳನ್ನು ಕೊಂಡಿದೆ.

ಉತ್ತರಕನ್ನಡದಲ್ಲಿನ ಅಂಕೋಲದ ದಕ್ಷಿಣ ಭಾಗದಲ್ಲಿ ಇದು ಗೋಮಾಂತಕಿಯಲ್ಲಿನ ಸೌಮ್ಯ ಸ್ವರದ ಸ್ತರವನ್ನು ದ್ವಿಗುಣಿತ ಗೊಳಿಸುವ ಪ್ರವೃತ್ತಿ ಕೊಂಡಿದೆ. ಅಲ್ಲಿನ ಉಚ್ಚಾರಣೆ ಅಸ್ಪಷ್ಟವಿದ್ದಂತೆ ತೋರಿ ಬರುತ್ತದೆ. ಆಡುವ ನುಡಿ ಸಣ್ಣ ಸಣ್ಣ ವಾಕ್ಯಗಳಿಂದೊಡಗೂಡಿದ್ದು ಪದೋಚ್ಚಾರಣೆ ಕನ್ನಡದ ಧಾಟಿಯನ್ನು ಅನುಕರಿಸುತ್ತದೆ. ಗೋಮಾಂತಕಿಯೊಂದಿಗೆ ತುಲನೆ ಮಾಡುಲ್ಲಿ ಇಲ್ಲಿನ ಮಾತಿನ ಒತ್ತಡ ತರಾತುರಿಯದ್ದಾಗಿದೆ.

ಕೆನರಾದಲ್ಲಿ ಈ ಭಾಷೆ ಕನ್ನಡ ಶಬ್ದಗಳಿಂದ ತುಂಬಿಕೊಂಡಿದೆ. ಅದು ಅರಬಿ ಮತ್ತು ಪರ್ಷಿಯನ್ ಶಬ್ದಗಳನ್ನೂ ಕೊಂಡಿದೆ. ಬಿಜಾಪುರದ ಅರಸರ ರಾಜ್ಯಾಡಳಿತೆಯ ಕಾಲದಲ್ಲಿ ಪರ್ಷಿಯನ್ ನ್ಯಾಯಾಲಯದ ಭಾಷೆಯಾಗಿತ್ತು. ವಲಸೆ ಹೋದ ವೈಷ್ಣವ ಸಾರಸ್ವತರ ಮೊದಲ ತಂಡ ಕರಾವಳಿ ಭಾಗದಲ್ಲಿ ನೆಲಸಿದ್ದು ಗೋವಾದೊಂದಿಗೆ ವ್ಯಾಪಾರದ ಸಂಬಂಧವಿಟ್ಟುಕೊಂಡಿತ್ತು. ಅಲ್ಲಿ ಪ್ರಚಾರದಲ್ಲಿದ್ದ ಶಬ್ದಗಳನ್ನೂ ಅದು ತನ್ನೊಂದಿಗೆ ಸೇರಿಸಿಕೊಂಡಿತು. ಒಳಭಾಗದಲ್ಲಿ ನೆಲಸಿದ್ದ ಸ್ಮಾರ್ತ ಸಾರಸ್ವತರ ಭಾಷೆ ಭಾರೀ ಪ್ರಮಾಣದಲ್ಲಿ ಕನ್ನಡ ಶಬ್ದಗಳನ್ನು ಸೇರಿಸಿಕೊಂಡಿವೆ. ಗುರುಪದಕ್ಕೆ ಗೋವಾದ ನಿವಾಸಿಗಳನ್ನು ಆರಿಸುವ ದೀರ್ಘಕಾಲದ ಪರಂಪರೆಕೊಂಡ ರೋಮನ್ ಕ್ಯಾಥೊಲಿಕ್ ಕ್ರಿಸ್ತ ಪಾಂಥೀಯರ ಭಾಷೆಯಲ್ಲಿ ಕನ್ನಡ ಶಬ್ದಗಳು ಅತ್ಯಲ್ಪ ಪ್ರಮಾಣದಲ್ಲಿ ಕಾಣಬರುತ್ತವೆ. ಅವರು ತಮ್ಮ ಭಾಷೆಯಲ್ಲಿ ಕೇವಲ ಕೆಲವೇ ಪೋರ್ಚುಗೀಸ್ ಶಬ್ದಗಳನ್ನು ಬಳಸುತ್ತಿದ್ದರು; ಇಲ್ಲಿನ ಸ್ವರಾಕ್ಷರಗಳ ವಿಸ್ತಾರಿತ ಉಚ್ಚಾರ, ಅನುನಾಸಿಕೋಚ್ಚಾರ, ಒಂದೇ ರಾಗದಲ್ಲಿನ ಉಚ್ಚಾರ ಇವುಗಳ ಅನುಪಸ್ಥಿತಿ ಲಕ್ಷ್ಯ ಸೆಳೆಯುತ್ತಿತ್ತು.

ಕೆನರಾದ ಕ್ರಿಸ್ತೀಯರನ್ನು ಸೆರೆಹಿಡಿದು ಧರ್ಮಾಂತರಗೊಳಿಸಿದ ಟಿಪ್ಪುಸುಲ್ತಾನ್ ಅವರನ್ನು ಮೈಸೂರು ಮತ್ತು ಕೂರ್ಗ್‌ಗಳಲ್ಲಿ ನೆಲೆಗೊಳಿಸಿದ. ಸೆರಿಂಗಪಟಂದ ಪತನಾನಂತರ ಅಲ್ಲಿ ಬಂದು ನೆಲಸಿದ, ಇಸ್ಲಾಂ ಧರ್ಮಕ್ಕೆ ಧರ್ಮಾಂತರಗೊಂಡ ಕ್ರಿಸ್ತೀಯರ ವಂಶಜರು ಕೊಂಕಣಿ ಮಿಶ್ರಿತ ಹಿಂದುಸ್ತಾನಿ ಮಾತನಾಡುತ್ತಾರೆ.

ಕೊಚ್ಚಿನ್‌ನ ಭಾಷೆಯಲ್ಲಿ ಗೋವಾದಲ್ಲಿ ನುಡಿಯುವ ಶಬ್ದಗಳಿದ್ದು ಅವುಗಳ ಪ್ರಮಾಣ ದೊಡ್ಡದಿದೆ. ಅವರು ಕೆಲವೊಂದು ಮಲಯಾಳಂ ಶಬ್ದಗಳನ್ನೂ ಎರವಲಾಗಿ ಕೊಂಡಿದ್ದು ಮಲಯಾಳಂ ಉಚ್ಚಾರ ಬಳಸುತ್ತಾರೆ.

ಇಂದೋರಿನಲ್ಲಿ ಮಾತನಾಡುವ ಭಾಷೆ ಹಿಂದುಸ್ತಾನಿಯಿಂದ ಪ್ರಭಾವಿತವಾಗಿದೆ.

ಗೋವಾದಲ್ಲಿ ದೀರ್ಘಕಾಲದವರೆಗೆ ಇದನ್ನು ಕನ್ನಡ ಲಿಪಿ ಬಳಸಿ ಬರೆಯಲಾಗುತ್ತಿತ್ತು. ಕದಂಬ ಮತ್ತು ಚಾಲುಕ್ಯರ ರಾಜ್ಯಾಡಳಿತೆಯ ದಿನಗಳಲ್ಲಿ ಕುಲಕರ್ಣಿ

(ಗ್ರಾಮದ ಲೆಕ್ಕಿಗರು) ಗಳು ಸ್ಥಾನೀಯ ಕೊಂಕಣಿ ಮತ್ತು ಮರಾಠಿ ದಾಖಲೆಗಳನ್ನು ಕನ್ನಡ ಲಿಪಿ ಬಳಸಿ ಬರೆಯುತ್ತಿದ್ದರು. ಈ ರೀತಿಯ ಹಳೆಯ ದಾಖಲೆಗಳ ನಮೂನೆಯನ್ನು ಮಂಗೇಶ ದೇವಸ್ಥಾನದಲ್ಲಿ ಕಾಣಬಹುದು. ಕಾಲಕ್ರಮೇಣ ಗೋವಾದಲ್ಲಿ ಇದರ ಸ್ಥಾನದಲ್ಲಿ ದೇವನಾಗರಿ ಮತ್ತು ಹೇಮಾಡ ಪಂಥಿ ಲಿಪಿ ಬಳಸಲಾಯಿತು.

ಗೋವಾದ ಕ್ರಿಸ್ತೀಯರು ರೋಮನ್ ಲಿಪಿ ಬಳಸುತ್ತಿದ್ದರು; ಕೆನರಾದಲ್ಲಿ ಕನ್ನಡ ಲಿಪಿ ಉಪಯೋಗಿಸುತ್ತಿದ್ದರು.

ಕ್ರೈಸ್ತ ಧರ್ಮಗುರುಗಳು ಕೊಂಕಣಿಯ ಅಭ್ಯಾಸವನ್ನು ಪ್ರಯತ್ನಪೂರ್ವಕ ಮಾಡಿದರು. ಆದರೆ ಪೋರ್ಚುಗೀಸ್ ಅಧಿಕಾರಿಗಳು ಮಾತ್ರ ಗೋವಾದಲ್ಲಿ ಪೋರ್ಚುಗೀಸ್ ಬಿಟ್ಟು ಅನ್ಯ ಭಾಷೆಗಳನ್ನು ನಿಷೇಧಿಸಿದರು. ರಾಜ್ಯಾಡಳಿತೆ, ಧಾರ್ಮಿಕ ಕಾರ್ಯ ಮುಂತಾದವುಗಳಲ್ಲಿ ಪೋರ್ಚುಗೀಸ್ ಭಾಷೆಯನ್ನು ಬಿಟ್ಟರೆ ಅನ್ಯ ಭಾಷೆಗಳಿಗೆ ಅವಕಾಶವಿಲ್ಲವಿತ್ತು. ೧೬೮೪ರಲ್ಲಿ ಧರ್ಮಗುರುಗಳಿಗೆ ಕೊಂಕಣಿ ಭಾಷೆಯ ಪುಸ್ತಕಗಳನ್ನು ಸುಟ್ಟು ಹಾಕಲು ಪ್ರೋತ್ಸಾಹನೆಯಿತ್ತರು. ಆದರೆ ಧರ್ಮಗುರುಗಳು ಕ್ರಿಸ್ತ ಧರ್ಮದ ಪ್ರಚಾರಕ್ಕೆ ಕೊಂಕಣಿ ಅನುಕೂಲ, ಲಾಭದಾಯಿರುವುದನ್ನರಿತಿದ್ದರು. ರಾಯಧುರ್ (ರಾಚೋಲ್) ನಲ್ಲಿನ ಸೈಂಟ್ ಪೌಲ್ ಕಾಲೇಜಿನಲ್ಲಿ ಅವರು ಕೊಂಕಣಿ ಭಾಷೆಯ ಅಭ್ಯಾಸ ಮಾಡಿ ಅದರ ವ್ಯಾಕರಣಕ್ಕೆ ಆಕಾರವಿತ್ತರು. ಆ ಮೊದಲ್ಗೊಂಡು ಪೋರ್ಚುಗೀಸ್ ಧರ್ಮ ಪ್ರಚಾರಕರ ಮತ್ತು ಭಾರತದಲ್ಲಿ ಧರ್ಮಾಂತರಗೊಂಡವರ ಕೃತಿಗಳಿಂದ ನವಕ್ರಿಸ್ತೀಯ ಕೊಂಕಣಿ ಸಾಹಿತ್ಯ ಬೆಳೆಯುತೊಡಗಿತು. ವಾಕ್ಯಗಳ ರಚನೆಯಲ್ಲಿ ಪೋರ್ಚುಗೀಸ್ ಭಾಷೆಯ ವರ್ಚಸ್ಸು ಎಷ್ಟಿತ್ತೆಂದರೆ ಅದು ಶಬ್ದಾನುಶಬ್ದ ಪೋರ್ಚುಗೀಸ್ ಶಬ್ದಗಳ ಭಾಷಾಂತರವಿರುತ್ತಿತ್ತು. ಇದರಿಂದ ಅಲ್ಲಿನ ಸಾಹಿತ್ಯ ಅದಾವ ಬಗೆಯಿಂದ ಪೋರ್ಚುಗೀಸ್ ಧರ್ಮ ಪ್ರಚಾರಕರ ಪ್ರಭಾವಕ್ಕೊಳಗಾಯಿತೆಂಬುದನ್ನರಿಯಬಹುದು. ಅವರು ಕ್ರೈಸ್ತ ದೇವಾಲಯಗಳಲ್ಲಿನ ಪ್ರಾರ್ಥನಾ ಸಭೆಗಳಲ್ಲಿ ಬಳಸುವ ಸಾಹಿತ್ಯದ ನಿರ್ಮಾಣಕ್ಕಾಗಿ ಭಾಷಾಂತರದ ಈ ಪದ್ಧತಿ ಅತ್ಯನುಕೂಲವಿರುವುದನ್ನು ಕಂಡರು. ಮಾತೃಭಾಷೆಯ ಹೊರತು ಸರ್ವತ್ರ ಪೋರ್ಚುಗೀಸ್ ಭಾಷೆಯನ್ನಷ್ಟೇ ಬಳಸಬೇಕೆಂಬ ೧೭ನೇ ಶತಮಾನದಲ್ಲಿನ ಶಾಸಕೀಯ ಕಟ್ಟಪ್ಪಣೆ ಸ್ವಾಭಾವಿಕವಾಗಿ ಈ ವಿಲಕ್ಷಣವಿದ್ದ ಭಾಷೆಯ ಬೆಳವಣಿಗೆಗೆ ವೇಗವಿತ್ತಿತು. [೧೯] ಮಾತ್ರ ಈ ಬದಲಾವಣೆ, ೧೭ನೇ ಶತಮಾನದ ಕೊನೆಯು ಮತ್ತು ೧೮ನೇಯು ಶತಮಾನದ ಮೊದಲನೆಯ, ಈ ನಡುವಣ ಕಾಲಾವಧಿಯಲ್ಲಿ ಪ್ರಕಾಶಿಸಲ್ಪಟ್ಟ ಕೊಂಕಣಿ ವ್ಯಾಕರಣ ಪುಸ್ತಕ 'ಅರ್ಟ್ ದಿ ಲಿಂಗೋಸ್ ಕೆನರಿಮ್' ಮತ್ತು ಫಾದರ್ ಥಾಮಸ್ ಸ್ಟೀಫನ್ಸ್ [೨೦] ಇವರ ಪ್ರಸಿದ್ಧ ಕೃತಿ 'ಕ್ರಿಶ್ಚಿಯನ್ ಪುರಾಣ'ದಲ್ಲಿ ಕಾರಣಬಾರದಿತ್ತು. ಇವು ಭಾರತೀಯ ಭಾಷೆಯಲ್ಲಿ, ಭಾರತೀಯ ಭಾಷೆಯ ಕುರಿತಾಗಿ ಯುರೋಪಿಯನ್ನರು ಬರೆದ ಪುಸ್ತಕಗಳಲ್ಲಿ ಮೊತ್ತ ಮೊದಲಿನದ್ದಾಗಿವೆ.

ಯುರೋಪೀಯ ಧರ್ಮಪ್ರಚಾರಕರ ಪರಿಶ್ರಮದ ಫಲವಾಗಿ ಕೊಂಕಣಿ ಪ್ರಗತಿಪಥ ಕಂಡಿತು.

ಭಾವಗೀತೆ, ಸ್ತೋತ್ರಗಳು, ಕ್ರೈಸ್ತ ಸಂತರ ಆತ್ಮಕಥೆ, ಮತ್ತಿನ್ನಿತರ ಕ್ರೈಸ್ತ ಮತದ ಧರ್ಮ ಸಂಬಂಧಿ ಗ್ರಂಥಗಳು ರೋಮನ್ ಮತ್ತು ದೇವನಾಗರಿ ಲಿಪಿಗಳಲ್ಲಿ ಬರೆಯಲ್ಪಟ್ಟವು.

ಫಾದರ್ ಪ್ರಾನ್ಸಿಸ್ ಶವಿಯೆರ್ ಮಫ್ಫೆರಿ ಮತ್ತು ಮೊ. ಸಬಾಸ್ತಿಯಾವ್ ರುಡಾಲ್ಫ್ ಡಲ್ಗಾಡು ಮುಂತಾದವರು ಕೊಂಕಣಿ ವ್ಯಾಕರಣ ಮತ್ತು ಭಾಷೆಯ ಕುರಿತಾದ ಪುಸ್ತಕ, ಶಬ್ದಕೋಶ ಇತ್ಯಾದಿಗಳನ್ನು ತಯಾರಿಸಿರುತ್ತಾರೆ. ಗೋವಾದಲ್ಲಿ ಹಲವೊಂದು ದೈನಿಕ ವಾರ್ತಾಪತ್ರಗಳು, ನಿಯತಕಾಲಿಕಗಳು ರೋಮನ್ ಲಿಪಿ ಬಳಸಿ ಪ್ರಕಾಶಿಸಲ್ಪಡುತ್ತವೆ. ಮಂಗಳೂರಿನಲ್ಲೂ ಕನ್ನಡ ಲಿಪಿಕೊಂಡು ಕೆಲವೊಂದು ನಿಯತಕಾಲಿಕೆಗಳು ಪ್ರಕಾಶಿಸಲ್ಪಡುತ್ತಿವೆ.

ಮಕ್ಕಳ ಹಿತದ ದೃಷ್ಟಿಯಿಂದ ರೋಮನ್ ಲಿಪಿಯ ಬಳಕೆ ಯೋಗ್ಯವಾದುದಲ್ಲವೆಂದೂ, ರೋಮನ್ ಲಿಪಿಯ ಸ್ಥಾನದಲ್ಲಿ ದೇವನಾಗರಿ ಲಿಪಿಯನ್ನು ಬಳಸಬೇಕೆಂದೂ ಡೊನಾಪ್ರೊಪರ್ಸಿಯ ಕೊರ್ನೆಯ ಅಫೊಂಸ ಮತ್ತು ಖ್ಯಾತನಾಮ ವಿದ್ವಾಂಸರಿದ್ದ ಫಾದರ್ ಕೊನೆಗು (ಕೆನನ್) ಅಂತೊನಿ ಜುಜೆ ದಿ ಹೆರೊಡಿಯ ಇವರು ಆಂದೋಲನ ಮಾಡಿದ್ದರು. ೧೯೩೭ರಲ್ಲಿ 'ಇಂಡೋ ಪೋರ್ಚುಗೀಸ್ ಇನ್‌ಸ್ಟಿಟ್ಯೂಟ್'ನ ಆಶ್ರಯದಲ್ಲಿ ಸರಕಾರ ಸುಮಾರು ನೂರು ಮಕ್ಕಳ ಕೊಂಕಣಿ ಶಾಲೆಯನ್ನು ಆರಂಭಿಸಿತು. ಕೊಂಕಣಿ ವ್ಯಾಕರಣದಲ್ಲಿ ಪ್ರಾವೀಣ್ಯಕೊಂಡಿದ್ದ ಪ್ರಸಿದ್ಧ ಕೊನೆಗು ಜುಜೆ ದಿ ಸಾಂತಾ ರೀತಾ ಅಲ್ಲಿನ ಶಿಕ್ಷಕರಲ್ಲೊಬ್ಬರಿದ್ದರು.

ಕೊಂಕಣಿಯಲ್ಲಿ ಸುಮಾರು ೫೦೦ ಪುಸ್ತಕಗಳು ಪ್ರಕಾಶಿಸಲ್ಪಟ್ಟಿದ್ದರೆ ಅವುಗಳಲ್ಲಿನ ಹೆಚ್ಚಿನವು ಕ್ರಿಸ್ತೀಯರು ಬರೆದಂತಹವಾಗಿವೆ. ಹಿಂದೂ ಸಾಹಿತಿಗಳ ಕಳೆದ ಐವತ್ತು ವರ್ಷಗಳಲ್ಲಿನ ಕೃತಿಗಳೂ ಇವುಗಳನ್ನೊಳಗೊಂಡಿವೆ. ಸಂತ ನಾಯಕಸ್ವಾಮಿ ತನ್ನ 'ಜುಳವೆ', ಅನ್ಯ ಭಾವಗೀತೆಗಳನ್ನು ಕೊಂಕಣಿಯಲ್ಲಿ ಬರೆದರು. ಮತ್ತು ಈ ಭಾಷೆಯನ್ನು ಮರಾಠಿಗೀತೆ ಮುಂತಾದವುಗಳ ರಚನೆಗೂ ಯೋಗ್ಯವಾದ ಮಾಧ್ಯಮವಿರುವುದನ್ನು ತೋರಿಕೊಟ್ಟರು. ಹೆಮ್ಮಾಡ್ ಸಾಂತೇರಿ ವೆಂಕಟ್ರಾಮಯ್ಯ (ಸಂತಿಣಿ ಜೋಗಪ್ಪ) ಮತ್ತು ಲಕ್ಷ್ಮೀ ನಾರಾಯಣಪ್ಪ ನಾಡಕರ್ಣಿ ಇವರು ಹಲವೊಂದು ಭಕ್ತಿಗೀತೆಗಳನ್ನು ಕೊಂಕಣಿಯಲ್ಲಿ ಬರೆದರು. 'ಕುಂಕುಣ ಬೈಬಲ್' ಹೆಸರಿನ ದೇವನಾಗರಿಯಲ್ಲಿನ ಬೈಬಲನ್ನು ಪ್ರೊಟೆಸ್ಟಾಂಟ್ ಧರ್ಮ ಪ್ರಚಾರಕರು ೧೮೦೮ರಲ್ಲಿ ಸೆರಾಮ್‌ಪೋರ್‌ನಲ್ಲಿ ಪ್ರಕಾಶಿಸಿದರು.

ಕೊಂಕಣಿಯನ್ನು ಮೆಚ್ಚಿಕೊಂಡ ಕ್ರಿಸ್ತೀಯರು ಅದನ್ನು ತಮ್ಮ ಭಾಷೆಯೆಂದು ಭಾವಿಸತೊಡಗಿದ್ದರು; ದುರ್ದೈವವೆಂಬಂತೆ ಗೋವಾದಲ್ಲಿನ ಸಾರಸ್ವತರು ಮತ್ತು ಅನ್ಯ ಹಿಂದುಗಳು ಅದರತ್ತ ಅನಾಸಕ್ತಿ ತೋರತೊಡಗಿದ್ದರು. ಪೋರ್ಚುಗೀಸರ ಅತಿಕ್ರಮಣದ ಮೊದಲೇ ಗೋಮಾಂತಕದೊಳಕ್ಕೆ ಮರಾಠಿ ತನ್ನ ಪ್ರಭಾವ ಬೀರಲಾರಂಭಿಸಿತ್ತು. ಇದನ್ನು ಖಂಡೋಲಿಯಲ್ಲಿನ ೧೨೨೨ರ ಕನ್ನಡ ಲಿಪಿಯಲ್ಲಿನ ಮರಾಠೀ ಶಿಲಾಶಾಸನದಿಂದ, ಸತಾರ್ ಮಹಾಲಿನ ವಾಳೂಸ್‌ನಲ್ಲಿನ ೧೩೭೪ರ ದೇವನಾಗರಿ ಲಿಪಿಯ ಮತ್ತು ಬಂದಿವಡೆಯ ನಾಗೇಶನ ದೇವಸ್ಥಾನದಲ್ಲಿನ ದೇವನಾಗರಿ ಲಿಪಿಯ ಶಾಸನಗಳನ್ನು ಕಂಡರಿಯಬಹುದಾಗಿದೆ. ಕೊಂಕಣಿ ಮಾತನಾಡುವ ಜನರು ಜ್ಞಾನೇಶ್ವರ, ನಾಮದೇವ, ತುಕಾರಾಮ, ರಾಮದಾಸ ಮುಂತಾದ ಮಹಾರಾಷ್ಟ್ರದ ಸಂತರ ಕೃತಿಗಳಿಂದ ಸಾಹಿತ್ಯಿಕ ಮರಾಠಿಯ ಪರಿಚಯಕೊಂಡಿದ್ದರು. ಹಳೆ ಕೊಂಕಣಿಯಲ್ಲಿನ ಅಳಿದುಳಿದ ಸಾಹಿತ್ಯ ನಾಶವಾದಾಗ ಖ್ಯಾತನಾಮ ಸಾರಸ್ವತ ಗ್ರಂಥಕರ್ತರಿದ್ದ ತುಕಾರಾಮ ಬಾಬಾ ವರ್ದೆ, ಮಹೇಶ್ವರ ಭಟ್ಟ

ಸುಖ್ತಣ್‌ಕರ್, ಸೊಯ್ರೊಬಾನಾಥ ಅಂಬಿಯೆ, ನಾಯಕ ಸ್ವಾಮಿ, ಆಚಾರ್ಯ ಧರ್ಮಾನಂದ ಕೋಸಂಬಿ, ಭಟ್ಕಳ ಅಪ್ಪಯ್ಯ, ಕಾಯ್ಕಿಣಿ ಶಿವಯ್ಯ (ಶಿವಮುನೀಶ್ವರ) ಮತ್ತು ಕೆನರಾದ ನಾಡ್ಕರ್ ಶಾಂತಿಬಾಯಿ ಇವರೆಲ್ಲರೂ ತಮ್ಮ ಮಹತ್ವದ ಕೃತಿಗಳ ರಚನೆಗೆ ಮರಾಠಿ ಭಾಷೆಯನ್ನೇ ಬಳಸಿದರು. ಗೋವಾ ಮತ್ತು ಮಹಾರಾಷ್ಟ್ರಗಳಲ್ಲಿನ ಸಾರಸ್ವತರು ತಮ್ಮ ಇತಿಹಾಸಕ್ಕೆ ಸಂಬಂಧಿಸಿದ ಕೃತಿ, ನಿಯತಕಾಲಿಕ ಮತ್ತು ಅನ್ಯಗ್ರಂಥಗಳ ರಚನೆಗೆ ಮರಾಠಿಯನ್ನು ಬಳಸಿರುತ್ತಾರೆ. 'ಊರ್ಧ್ವಜ್ಞಾನ ವಿಸ್ತಾರ', ಕಾಶಿನಾಥ ರಘುನಾಥ ಮಿತ್ರ ಇವರ 'ಮಾಸಿಕ ಮನೋರಂಜನ' ಇವು ಅವುಗಳಲ್ಲಿನೆರಡು ಕೃತಿಗಳು. ಗೋವಾ, ಬೊಂಬೇ ಮತ್ತು ಮಹಾರಾಷ್ಟ್ರದ ಇನ್ನಿತರೆಡೆಗಳಲ್ಲಿನ ಸಾರಸ್ವತರು ಕೊಂಕಣಿ ಭಾಷೆಯ ಬದಲಿಗೆ ಮರಾಠಿಯನ್ನು ಉಪಯೋಗಿಸಬೇಕೆಂದು ಡಾ. ಆರ್. ಜಿ. ಭಂಡಾರ್ಕರ್, ಕಾಕಾ ಕಾಲೇಲ್ಕರ್, ಮಠಾಧಿಪತಿಗಳು ಸಾಹಸದ ಪ್ರಯತ್ನ ಮಾಡಿದ್ದರು. ಈ ಪರಿಸ್ಥಿತಿಯಲ್ಲಿ ಸಾರಸ್ವತರಲ್ಲಿನ ಅನೇಕರು ತಮ್ಮ ಮನೆಗಳಲ್ಲಿ ಮರಾಠಿ ಬಳಸಲಾರಂಭಿಸಿದರು. ರತ್ನಾಗಿರಿ ಜಿಲ್ಲೆಯಲ್ಲಿನ ಮಾಲ್ವಣ್ ಮತ್ತು ಸಾವಂತವಾಡಿಯ ನಿವಾಸಿಗಳಿಗೆ ಕೊಂಕಣಿ ಮಿಶ್ರಿತ ಮರಾಠಿ ಭಾಷೆಯನ್ನು ಬಳಸುವುದು ಸುಲಭವೆಂದು ತೋರಿಬಂತು. ಕವಳೆ ಮತ್ತು ಗೋಕರ್ಣಮಠಗಳ ಗುರುಗಳು ಶಿಷ್ಯರನ್ನುದ್ದೇಶಿಸಿದ್ದ ರಾಯಸಗಳಿಗೆ ಮರಾಠಿ ಭಾಷೆಯನ್ನು ಉಪಯೋಗಿಸಲಾರಂಭಿಸಿದರು. (ಕಾಶಿ ಮತ್ತು ಚಿತ್ರಾಪುರದ ಮಠಾಧಿಪತಿಗಳು ತಮ್ಮ ರಾಯಸಗಳಿಗೆ ಕನ್ನಡ, ಮಲಯಾಳಂ ಮತ್ತು ದೇವನಾಗರಿ ಲಿಪಿ ಬಳಸುತ್ತಾರೆ.)

ಈ ಸಂದರ್ಭದಲ್ಲಿ ಮೈಸೂರಿನಲ್ಲಿನ ಕನ್ನಡ ಮಾತನಾಡುವ ಸಾರಸ್ವತರ ಉಲ್ಲೇಖವೂ ಸಮಯೋಚಿತವಿದೆ.

ಕಳೆದ ಕೆಲವೊಂದು ದಶಕಗಳಲ್ಲಿ ಕೊಂಕಣಿಯ ಪುನರುಜ್ಜೀವನದ ಲಕ್ಷಣಗಳು ಕಾಣಬಂದಿವೆ. ಪುನರೋದಯದ ಗತಿ ಮಂದವಿದ್ದ ನಿಮಿತ್ತ ಅದು ಎಷ್ಟೊಂದು ಯಶಸ್ವಿಯಾದೀತೆಂಬ ಕುತೂಹಲವಿತ್ತು. ಗೋವಾದಲ್ಲಿ ಈ ಭಾಷೆಯನ್ನು ಸಾಹಿತ್ಯಿಕ ಮಾಧ್ಯಮದ ಸ್ಥರಕ್ಕೆ ಕೊಂಡೊಯ್ಯುವ ದೃಢ ಸಂಕಲ್ಪ, ಪ್ರಯತ್ನ ಮಾಡಲಾಗಿತ್ತು; ದಿವಂಗತ ಶ್ರೀ ವಾಮನ ರಘುನಾಥ ವರ್ದೆ - ವಾಲಾವಲಕರರು [೨೨] ತನ್ನ ಮಹತ್ತಿನ ಕೃತಿಗಳ ರಚನೆಗೆ ಕೊಂಕಣಿಯನ್ನು ಬಳಸಿದರು. ಕ್ರಿಸ್ತೀಯರು ಮತ್ತು ಹಿಂದುಗಳು ಬೊಂಬೇಯಲ್ಲಿ ಅನೇಕ ಕೊಂಕಣಿ ನಾಟಕಗಳನ್ನು ಪ್ರದರ್ಶಿಸಿರುತ್ತಾರೆ. ಅಖಿಲ ಭಾರತೀಯ ಆಕಾಶವಾಣಿ ಕೊಂಕಣಿಯನ್ನು ಪ್ರಸಾರಣದ ಭಾಷೆಯೊಂದೆಂದು ಪರಿಗಣಿಸಿದೆ.

ಜೆಸ್ಯೂಟ್ ಫಾದರ್ ಥೋಮಸ್ ಸ್ಟೀಫನ್ಸ್ ಇವರು ೧೬೧೪ಲ್ಲಿ ಬರೆದ ಅತ್ಯಪೂರ್ವ ಗ್ರಂಥ 'ಕ್ರಿಶ್ಚಿಯನ್ ಪುರಾಣ' ವನ್ನು ಗೋವಾದ ಆರ್ಚ್ ಬಿಷಪ್, ಫಾದರ್ ಕ್ರಿಸ್ತಾವ್ ಲಿಸ್ಬೊ ಇವರಿಗೆ ೧೬೧೬ರ ಎಪ್ರಿಲ್ ತಿಂಗಳ ೧೯ರಂದು ಸಮರ್ಪಿಸಿದರು. ಪರಿಷ್ಕರಿಸಲ್ಪಟ್ಟ ಎರಡನೆಯ ಆವೃತ್ತಿ ೧೬೫೪ರಲ್ಲಿ ಹೊಸ ಹೆಸರಿನೊಂದಿಗೆ ಪ್ರಕಾಶಿಸಲ್ಪಟ್ಟಿತು. 'ಕ್ರಿಶ್ಚಿಯನ್ ಪುರಾಣ' ಹಿಂದೂ ಪುರಾಣಗಳ ಪ್ರತ್ಯಾಕರ್ಷಣದ ರೂಪದಲ್ಲಿ ಕಾವ್ಯವೊಂದರಂತೆ ರಚಿಸಲ್ಪಟ್ಟಿತ್ತು. ಫಾದರ್ ಥೋಮಸ್ ಸ್ಟೀಫನ್ಸ್ ಇವರು ಇದನ್ನು ಗೋವಾದಲ್ಲಿ ೧೬ನೇಯ ಶತಮಾನ ಮತ್ತು ಹದಿನೇಳನೆಯ ಶತಮಾನದ ಮೊದಲ ದಿನಗಳಲ್ಲಿ ಪ್ರಚಾರದಲ್ಲಿದ್ದ ಮರಾಠಿ

ಭಾಷೆಯ ಪದ್ಧತಿಯನ್ನನುಸರಿಸಿ ಬರೆದಿರುವುದಾಗಿ ಸ್ವತಹಾ ನುಡಿದಿರುತ್ತಾರೆ. ಅವರು ಕೊಂಕಣಿಯ ಕೂಲಂಕಷ ಅಭ್ಯಾಸ ಮಾಡಿದರು. ತನ್ನ ಹೆಚ್ಚಿನ ಸಮಯವನ್ನು ಸರಸ್ವತಿಯಲ್ಲಿನ (ಗೋವಾದಲ್ಲಿನ ಸಾಲ್ಸೆಟ್) ಕ್ರಿಸ್ತೀಯ ಬ್ರಾಹ್ಮಣರೊಂದಿಗೆ ಕಳೆದರು. ಅವರು ತಮ್ಮ ಗ್ರಂಥವನ್ನು ಗೋವಾದಲ್ಲಿನ ಆದಿಕ್ರಿಸ್ತೀಯರು ಮತ್ತು ಥಾಣಾ ಜಿಲ್ಲೆಯ ಸಾಲ್ಸೆಟ್‌ದಲ್ಲಿನ ಅನ್ಯ ಕ್ರಿಸ್ತೀಯರನ್ನುದ್ದೇಶಿಸಿ ಬರೆದರು. ಈ ಗ್ರಂಥದಲ್ಲಿ ಅನುನಾಸಿಕ ಶಬ್ದ ಸಮುಚ್ಚಯಗಳನ್ನು ಕಾಣಬಹುದು. ಈ ಗ್ರಂಥವನ್ನು ಕೊಂಕಣಿ ನುಡಿಯುವ ಇಂದಿನ ಜನಸಾಮಾನ್ಯರು ಅರ್ಥಯಿಸಿಕೊಳ್ಳಬಹುದಾಗಿದೆ. ಡಾ. ಜೆರ್ಸನ್ ದ ಕುನ್ಹಾ ಹಾಗೂ ಇನ್ನೂ ಕೆಲವೊಬ್ಬರು ಇದನ್ನು ನಿಶ್ಚಿತವಾಗಿ ಕೊಂಕಣಿಯಲ್ಲೇ ಬರೆದಿರುವುದಾಗಿ ನುಡಿಯುತ್ತಾರೆ.

ಫಾದರ್ ಸ್ಟೀಫನ್ಸ್ ಇವರು ಮುಕುಂದರಾಜ ಮತ್ತು ಧ್ಯಾನದೇವ (ಜ್ಞಾನೇಶ್ವರ) ಇವರ ಕಾವ್ಯಗಳನ್ನು ಆಳವಾಗಿ ಅಭ್ಯಾಸ ಮಾಡಿದ್ದಿರಬೇಕು. 'ಕ್ರಿಶ್ಚಿಯನ್ ಪುರಾಣ' ಎರಡು ಭಾಗಗಳಲ್ಲಿದ್ದು, 'ಪ್ಹೈಲೆಂ (ಮೊದಲ) ಪುರಾಣ್' ೪೪ ಅಧ್ಯಾಯಗಳದ್ದಿದ್ದು, 'ದುಸರೆಂ' (ಎರಡನೆಯ) ಪುರಾಣ್' ೫೯ ಅಧ್ಯಾಯಗಳನ್ನು ಕೊಂಡಿದೆ. ಅದನ್ನು ಪೋರ್ಚುಗೀಸ್ ಅಕ್ಷರಮಾಲೆ ಪದ್ಧತಿಯನ್ನನುಸರಿಸಿ ರೋಮನ್ ಲಿಪಿಯಲ್ಲಿ ಬರೆಯಲಾಗಿದೆ. ಸ್ಫೂರ್ತಿಗೊಂಡು ಬರೆದ ಈ ಕೃತಿ ಕಾವ್ಯಾತ್ಮಕ ಸೌಂದರ್ಯಗೊಂಡಿದ್ದು ಅತ್ಯಪೂರ್ವವೆಂದೆನಿಸಿಕೊಂಡಿದೆ. ಧ್ಯಾನದೇವ, ಮುಕ್ತೇಶ್ವರ, ಏಕನಾಥ ಮತ್ತು ಅನ್ಯ ಮರಾಠಾ ಕವಿಶ್ರೇಷ್ಠರ ಭವ್ಯ, ದಿವ್ಯ ಕೃತಿಗಳನ್ನು ಹೋಲುವ ಗ್ರಂಥ ಈ ಕೆಳಗಣ ಪಂಕ್ತಿಗಳಿಂದಾರಂಭವಾಗುತ್ತದೆ :

ಓಂ ನಮೋ ವಿಶ್ವಭರಿತಾ
ದೇವಬಾಪ್ಪಾ ಸರ್ವ ಸಮರ್ಥಾ
ಪರಮೇಶ್ವರಾ ಸತ್ಯವಂತಾ
ಸ್ವರ್ಗ ಪೃಥ್ವಿಚಾ ರಚಣಾರಾ

ತೂ ರಿದ್ಧಿ ಸಿದ್ಧಿಚಾ ದಾತಾರು
ಕೃಪಾನಿಧಿ ಕರುಣಾಕರು
ತೂ ಸರ್ವ ಸುಖಾಚಾ ಸಾಗರು
ಆದಿ ಅಂತ ನಾ ಥೋಡೆ

ತೂ ಪರಮಾನಂದ ಸರ್ವ ಸ್ವರೂಪು
ವಿಶ್ವೇಪಕು ಜ್ಞಾನ ದೀಪು
ತೂ ಸರ್ವಗುಣಿ ನಿರ್ಲೇಪು
ನಿರ್ಮಳು ನಿರ್ವಿಕಾರು ಸ್ವಾಮಿಯಾ

೧೬೮೬-೧೭೦೩ರ ನಡುವಣ ಕಾಲದಲ್ಲಿ ಹೆನ್ರಿ ಕ್ಯ ವ್ಯಾನ್ ರ್ಹೀಡ್ ವ್ಯಾನ್ ಡಾರ್ಕೆನ್ ಸ್ಟೀನ್ ಇವರು ೧೨ ಸಂಪುಟಗಳಲ್ಲಿನ 'ಹೋರ್ಟಸ್ ಇಂಡಿಕಸ್ ಮಲಬಾರಿಕಸ್ ಎಡೋರ್ನಟಿಸ್' ಗ್ರಂಥವನ್ನು ಪ್ರಕಾಶಿಸಿದರು. ಇದನ್ನು ಡಚ್ ವಿದ್ವತ್ತು, ಪರಿಶ್ರಮ ಮತ್ತು ಸಂಶೋಧನೆಗಳ ಸ್ಮಾರಕವೊಂದೆಂದು ಭಾವಿಸಲಾಗುತ್ತದೆ. ಇದರ ಪ್ರಸ್ತಾವನೆಯಲ್ಲಿ ದೇವನಾಗರಿ ಲಿಪಿ ಬಳಸಿ ಬರೆದ ಕೊಂಕಣಿ ಭಾಷೆಯ ಯೋಗ್ಯತಾ ಪತ್ರವಿದೆ. ಕೊಂಕಣಿ ಭಾಷೆಯಲ್ಲಿನ ಸಚಿತ್ರ ಪರಿಶಿಷ್ಟವಿದೆ. ಅದರಲ್ಲಿ ಕೊಂಕಣ ಕರಾವಳಿ ಭಾಗದಲ್ಲಿನ ಮರಗಿಡಗಳ ಪೊದರು, ಬಳ್ಳಿಗಳ ಹೆಸರು ಮತ್ತು ಅನ್ಯ ವಿವರಗಳಿವೆ. ಇದ್ದಕ್ಕಿದ್ದಂತೆ ಕಾಣಬರುವ ವೃಕ್ಷ ವಲ್ಲಿಗಳ ಅತ್ಯುತ್ಕೃಷ್ಟ ಮಾದರಿಯ (ತಾಮ್ರದ ಪಡಿಯಚ್ಚುಗಳನ್ನು ಬಳಸಿ ತಯಾರಿಸಿದ) ಇದು ತಾಮ್ರದ ಹಾಳೆಗಳಲ್ಲಿ ಅತ್ಯುತ್ಕೃಷ್ಟ ಮತ್ತು ಅತ್ಯಾಕರ್ಷಕವಿದ್ದ ೯೪ಳಪಡಿಯಚ್ಚುಗಳನ್ನು ಕೊಂಡಿದೆ. ಹಾಗೂ ಛೋಗನ್ (ಇಝುವ) ಜಾತಿಯ ವೈದ್ಯನೊಬ್ಬನ ನೆರವುಕೊಂಡು ರಂಗಭಟ್, ವಿನಾಯಕ ಭಟ್ ಮತ್ತು ಕೊಚ್ಚಿನ್‌ನ ಅಪ್ಪು ಭಟ್ ಎಂಬೀ ಮೂರು ಸಾರಸ್ವತ ವೈದ್ಯರು ತಯಾರಿಸುತ್ತಿದ್ದ ಔಷಧಗಳ ವಿವರಗಳಿವೆ.

ಸಂದರ್ಭ ಸೂಚಿ

೧. ನವಾಯಿತರು (ಹೊಸದಾಗಿ ಬಂದವರು) ಹದಿನೇಳನೆಯ ಶತಮಾನದ ಕೊನೆಯ ದಿನಗಳಲ್ಲಿ ಇರಾಕಿನ ಗವರ್ನರನ ಉಪಟಳ ಸಹಿಸಲಾರದೆ ಊರು ಬಿಟ್ಟು ಉತ್ತರ ಕನ್ನಡದ ಭಟ್ಕಳ ಮತ್ತು ನೆರೆಕರೆಯ ಊರುಗಳಲ್ಲಿ ನೆಲಸಿದ್ದ ಅರಬರ ವಂಶಜರಾಗಿದ್ದಾರೆ. ಶಫಿ ಪಂಥದ ಸುನ್ನಿಗಳಾಗಿದ್ದ ಇವರು ಸ್ಥಾನೀಯ ಸ್ತ್ರೀಯರನ್ನು ವರಿಸಿ, ಗುಜರಾಥಿನ ಪಾರ್ಸಿಗಳಂತೆ ಪ್ರಾದೇಶಿಕ ಪೋಷಾಕು, ಭಾಷೆಗಳನ್ನು ಅಂಗೀಕರಿಸಿದರು. ಅನ್ಯ ಮುಸಲ್ಮಾನರಿಗಿಂತಲೂ ಶ್ರೇಷ್ಠರೆಂದು ಭಾವಿಸುತ್ತಿದ್ದ ಇವರು ಪರಕೀಯ ಬಣಗಳೊಂದಿಗೆ ವೈವಾಹಿಕ ಸಂಬಂಧ ಬೆಳೆಸಲು ಹಿಂಜರಿಯುತ್ತಿದ್ದರು. ಈ ರೀತಿಯಲ್ಲಿ ಅವರು ತಮ್ಮ ವಂಶದ ಶುದ್ಧತೆಯನ್ನು ಉಳಿಸಿಕೊಂಡರು. ವ್ಯಾಪಾರಿಗಳಾಗಿದ್ದ ಅವರು ತಮ್ಮ ಪತ್ರ ವ್ಯವಹಾರ, ಲೆಕ್ಕಾಚಾರಗಳ ದಾಖಲೆಗೆ ಕೊಂಕಣಿ ಭಾಷೆ ಮತ್ತು ಅರಬಿ ಲಿಪಿ ಬಳಸುತ್ತಿದ್ದರು. ಬಿಜಾಪುರದ ರಾಜ್ಯಾಡಳಿತೆಯ ದಿನಗಳಲ್ಲಿ ಅವರಲ್ಲಿನ ಹೆಚ್ಚಿನವರು ಸರಕಾರದ ಅಧಿಕಾರಿಗಳಾಗಿದ್ದರು. ಕೆಲವೊಬ್ಬರು ಆರ್ಕಾಟ್‌ನ ನವಾಬನೊಂದಿಗೆ ಪೂರ್ವದಿಶೆಯಲ್ಲಿನ ಕರಾವಳಿ ಭಾಗಕ್ಕೆ ವಲಸೆ ಹೋದರು. ಅವರ ವಂಶಜರು ಉರ್ದು ಭಾಷೆಯನ್ನು ತಮ್ಮದಾಗಿಸಿಕೊಂಡರು. ಪ್ರಸಿದ್ಧ ಚಂದಾ ಸಾಹೆಬ್ ಈ ನವಾಯಿತರಲ್ಲಿನೊಬ್ಬಾತ. ಹೈದರ್ ಆಲಿಯ ತಾಯಿ, ಕೊಂಕಣದಿಂದ ಆರ್ಕಾಟಿಗೆ ಹೋಗುತ್ತಿದ್ದಾಗ ದಾರಿಯಲ್ಲಿ ಕೊಲ್ಲಲ್ಪಟ್ಟ ನವಾಯತನೊಬ್ಬನ ಕಿರಿಯ ಮಗಳು. ಆಕೆ ತನ್ನ ಹೆಣ್ಣು ಮಕ್ಕಳೊಂದಿಗೆ ಕೋಲಾರಿಗೆ ಹೋಗಲು ದಾರಿ ಬೇಡಿದಳು. ಹೈದರನ ತಂದೆ ಫತ್ತೆ ಮಹಮ್ಮದ್ ಕೋಲಾರಿನಲ್ಲಿ ಮುಂದೊಂದು ದಿನ, ಒಂದರ ನಂತರ ಇನ್ನೊಂದರಂತೆ, ಈ ಹೆಣ್ಣು ಮಕ್ಕಳನ್ನು ವರಿಸಿದ. (ಮೈಸೂರು ಗಝೇಟಿಯರ್, ಭಾಗ ೨, ಸಂಪುಟ ೪, ಪುಟ ೨೪೮೯)

೨. ಕಾಫಿಗಳು ನವಾಯಿತರಂತಿದ್ದು ಶಫಿ ಪಂಥದ ಸುನ್ನಿಗಳಾಗಿದ್ದರು. ಅವರೂ ಕೊಂಕಣಿ ಮಾತನಾಡುತ್ತಾರೆ. ಅವರು ೯೨೪-೨೬ರಲ್ಲಿ ದಂಗೆಯೆದ್ದ ಕರ್ಮಾಲಿ ವಿಧ್ವಂಸಕರ ಕ್ರೂರ

ಕೃತ್ಯಗಳಿಂದ ಬದುಕುಳಿಯಲು 'ಕಫಾ' ದಿಂದ ರತ್ನಾಗಿರಿ ಜಿಲ್ಲೆಯ ರಾಜಾಪುರಕ್ಕೆ ಓಡಿಬಂದವರ ವಂಶಜರು.

೩. ಬೊಂಬೇ, ಜಂಜೀರಾ, ರತ್ನಾಗಿರಿ ಮತ್ತು ಉತ್ತರ ಕನ್ನಡಗಳಲ್ಲಿನ 'ದಾಲ್ದಿ'ಗಳು (ಬೆಸ್ತರು) ಅಂಶತಃ ವಲಸೆ ಬಂದು ಸ್ಥಾನೀಯ ಸ್ತ್ರೀಯರನ್ನು ವರಿಸಿದ ಮುಸಲ್ಮಾನರ ಹಾಗೂ ಮತಾಂತರಗೊಂಡ ಹಿಂದುಗಳ ವಂಶಜರಿದ್ದರು. ಅವರು ತಮ್ಮನ್ನು ಅರಬರ ವಂಶಜರೆಂದೂ, ಶಫಿ ಸುನ್ನಿಗಳೆಂದೂ ಕರೆದುಕೊಳ್ಳುತ್ತಾರೆ. ಜಂಜೀರಾ ಮತ್ತು ರತ್ನಾಗಿರಿಗಳಲ್ಲಿ ಅವರು ಮಾತನಾಡುವ ಭಾಷೆ ಕುಡಾಲೆಯನ್ನು ಹೋಲುತ್ತದೆ. ಉತ್ತರ ಕನ್ನಡದಲ್ಲಿ ಅವರು ನೆರೆಹೊರೆಯವರಂತೆ ಕೊಂಕಣಿ ನುಡಿಯುತ್ತಾರೆ.

೪. ಜಿ. ಎ. ಗ್ರಿಯರ್ಸನ್, ಸಿ.ಇ.ಇ., ಪಿ.ಹೆಚ್.ಡಿ., ಲಿಟ್., ಐ.ಸಿ.ಎಸ್. (ರಿಟಾಯರ್ಡ್) ಇವರ 'ಲಿಂಗ್ವಿಸ್ಟಿಕ್ ಸರ್ವೆ ಆಫ್ ಇಂಡಿಯಾ', ಸಂಪುಟ ೭, ಪುಟ ೧೬೪.

೫. ಜೆ. ಜೆರ್ಸನ್ ದ ಕುನ್ಹಾ ಇವರ 'ಕೊಂಕಣಿ ಲೇಂಗ್ವೇಜ್ ಎಂಡ್ ಲಿಟರೇಚರ್', - ಪುಟ ೩೫.

೬. ಎಸ್.ಎಮ್.ಕತ್ರೆ, ಎಮ್.ಎ., ಪಿ.ಹೆಚ್.ಡಿ., (ಲಂಡನ್) ಇವರ 'ದ ಫೋರ್ಮೇಶನ್ ಆಫ್ ಕೊಂಕಣಿ' ಪುಟಗಳು ೧೫೧-೧೫೨.

೭. ಜಿ. ಎ.ಗ್ರಿಯರ್ಸನ್ ಇವರ 'ಲಿಂಗ್ವಿಸ್ಟಿಕ್ ಸರ್ವೆ ಆಫ್ ಇಂಡಿಯಾ' ಪುಟಗಳು ೧೬೭-೧೭೧.

೮. ರಾವ್ ಸಾಹಿಬ್ ಡಾ. ವ್ಹಿ. ಪಿ. ಚವ್ಹಾಣ, ಎಲ್.ಎಮ್. ಎಂಡ್ ಎಸ್. ಇವರ 'ದ ಕೊಂಕಣ ಎಂಡ್ ದ ಕೊಂಕಣಿ ಲೇಂಗ್ವೇಜ್', ಪುಟಗಳು ೩೭-೪೨

೯. ರಾವ್ ಬಹದ್ದೂರ್ ಎಸ್.ಎಸ್.ತಾಲ್ಮಕಿ, ಬಿ.ಎ., ಎಲ್.ಎಲ್.ಬಿ. ಇವರ 'ಕೊಂಕಣಿ ಪ್ರೊವರ್ಬ್ಸ್ ಎಂಡ್ ಕೊಂಕಣಿ ಸಿಮಿಲೀಸ್ ಎಂಡ್ ಈಡಿಯಮ್ಸ್' ಪ್ರಸ್ತಾವನಾತ್ಮಕ ಟಿಪ್ಪಣಿ, ಪುಟಗಳು ೯-೧೩.

೧೦. ಎಸ್.ಎಮ್. ಕತ್ರೆ, ಎಮ್.ಎ., ಪಿ.ಹೆಚ್.ಡಿ (ಲಂಡನ್) ಇವರ 'ದ ಫೋರ್ಮೇಶನ್ ಆಫ್ ಕೊಂಕಣಿ', ಪುಟ ೧೫.

೧೧. ಜಿ. ಎ. ಗ್ರಿಯರ್ಸನ್, ಇವರ 'ಲಿಂಗ್ವಿಸ್ಟಿಕ್ ಸರ್ವೆ ಆಫ್ ಇಂಡಿಯಾ', ಸಂಪುಟ ೭, ಪುಟ ೧೬೬

೧೨. ರಾವ್ ಸಾಹಿಬ್ ಡಾ.ವ್ಹಿ.ಪಿ.ಚವ್ಹಾಣ, ಎಲ್.ಎಮ್.ಎಂಡ್.ಎಸ್, ಜೆ.ಪಿ. ಇವರ 'ವೈಷ್ಣವಿಸಮ್ ಆಫ್ ದ ಗೌಡ ಸಾರಸ್ವತ್ ಬ್ರಾಹ್ಮಣ್ಸ್'' ಫಿವ್ ಕೊಂಕಣಿ ಫೋಕ್ ಲೋರ್ ಟೇಲ್ಸ್' ಎಂಡ್ 'ದಿ ಅನ್‌ನೋನ್ ಕೊಂಕಣಿ ಪ್ರೊವರ್ಬ್ಸ್' ಹಾಗೂ ರಾವ್ ಬಹಾದೂರ್ ಎಸ್.ಎಸ್.ತಾಲ್ಮಕಿ ಬಿ.ಎ.ಎಲ್.ಎಲ್.ಬಿ ಇವರ 'ದ ಕೊಂಕಣಿ ಪ್ರೊವರ್ಬ್ಸ್' ಮತ್ತು 'ಕೊಂಕಣಿ ಪ್ರೊವರ್ಬ್ಸ್, ರಿಡಲ್ಸ್, ಲಲ್ಲಬೀಸ್ ಎಂಡ್ ನರ್ಸರಿ ಸೋಂಗ್ಸ್'' ನೋಟಿರಿ. ನಾಣ್ಣುಡಿಗಳಲ್ಲಿನ ಕೆಲವನ್ನು ಎಸ್. ಆರ್. ಡಲ್ಗಾಡು ಮತ್ತು ಮಂಗಳೂರಿನ ಒ.ಜೆ.ದಿ.ಸೌಝಾ ಪ್ರಕಾಶಿಸಿದರು.

೧೩. ಜಿ. ಎ. ಗ್ರಿಯರ್ಸನ್ ಇವರ 'ಲಿಂಗ್ವಿಸ್ಟಿಕ್ ಸರ್ವೆ ಆಫ್ ಇಂಡಿಯಾ', ಪುಟ ೧೪೫.

೧೪. ರಾವ್ ಸಾಹಿಬ್ ಡಾ. ವಿ.ಪಿ. ಚವ್ಹಾಣ್ ಎಲ್.ಎಮ್. ಎಂಡ್ ಎಸ್, ಜೆ.ಪಿ. ಇವರ 'ದ ಕೊಂಕಣ ಎಂಡ್ ದ ಕೊಂಕಣಿ ಲೇಂಗ್ವೇಜ್', ಪುಟಗಳು ೪೧-೪೨

೧೫. ಥಾಣಾ ಜಿಲ್ಲೆಯ ಸಾಲ್ಸೆಟ್‌ನಲ್ಲಿನ ಫಾದರ್ ಫ್ರಾನ್ಸಿಸ್ ವಾರ್ಝ್ ಗ್ಯುಮರಾಯೆಸ್ ಇವರ,

ಪೋರ್ಚುಗೀಸ್ ಭಾಷೆಯಲ್ಲಿನ ಪುಸ್ತಕ 'ರಲಕಾವ್ ದುಶ್ ಮಿಸ್ಸೀರಿಯುಶ್‌ದ ಇಂಕನ್‌ಕಾವ್' ದ ಮರಾಠಿ ಅನುವಾದದಲ್ಲಿ ಕಾಣಬರುತ್ತದೆ.

೧೬. ಎಸ್.ಎಮ್.ಕತ್ರೆ, ಎಮ್.ಎ., ಪಿ.ಹೆಚ್.ಡಿ (ಲಂಡನ್) ಇವರ 'ಫೊರ್ಮೇಶನ್ ಆಫ್ ಕೊಂಕಣಿ', ಪುಟ ೧೫೬.

೧೭. ಮಾನ್ಸಿನ್ಯರ್ ಸಬಾಸ್ತಿಯಾವ್ ರುಡಾಲ್ಫ್ ಡಲ್ಗಾಡು ಇವರು ಬಾರ್ದೇಶ್‌ನ ಅಸ್ಸಾಗಾಂವ್‌ಗೆ ಸಂಬಂಧಿಸಿದವರಿದ್ದು ಅವರ ಪೂರ್ವಜರು ಸಾರಸ್ವತರಿದ್ದರು. ಇವರು ವಿದ್ವಾಂಸರಿದ್ದು ಯುನಿವರ್ಸಿಟಿ ಆಫ್ ಪೋರ್ಚುಗಲ್‌ನಲ್ಲಿ ಸಂಸ್ಕೃತದ ಪ್ರಾಧ್ಯಾಪಕರಾಗಿದ್ದರು. ಇವರು ೧೮೯೩ರಲ್ಲಿ 'ಕೊಂಕಣಿ-ಪೋರ್ಚುಗೀಸ್ ಮತ್ತು ೧೯೦೫ರಲ್ಲಿ 'ಪೋರ್ಚುಗೀಸ್ - ಕೊಂಕಣಿ' ಶಬ್ದಕೋಶಗಳನ್ನು ಪ್ರಕಾಶಿಸಿದರು.

ಹಾಗೆನ್ನುವಲ್ಲಿ ಗೋವಾದ ಕಾನ್‌ಸ್ಟಾನ್ಸಿಯು ದಿ ಫಾರೊ, ರೈಮಂಡ್ ವೆನ್ಸಿ ರುದ್ರಿಗಸ್, ಮಾರ್ಕುಸ್ ಲೋಬೊ, ಆಲ್ಫ್ರೆಡ್‌ದ ಕಾಸ್ತಾ ಮತ್ತು ರೋಬರ್ಟ್ ಫ್ರೋಯಿಸ್ ಇವರು ಪೋರ್ಚುಗೀಸ್ ವಿಶ್ವವಿದ್ಯಾಲಯದಲ್ಲಿ ಮತ್ತು ಇಸ್ಸಿದೋರ್ ಎಮಿಲಿಯೋ ಬತಿಸ್ತಾ ಇವರು ಪ್ಯಾರಿಸ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದರು.

ಅವರಲ್ಲಿನ ಅಗೊಸ್ತಿನ್ ವ್ಹಿಸ್ಸೆಂತ ಲಾರೆನ್ಸ್ ಇವರು ಭಾರತದ ಖ್ಯಾತನಾಮ ಹಾಗೂ ಮೊತ್ತ ಮೊದಲ ರಸಾಯನ ಶಾಸ್ತ್ರಜ್ಞರಿದ್ದರೆಂಬುದನ್ನು ಇಲ್ಲಿ ಮರೆಯಲಾಗದು. ಅವರು ತಮ್ಮ ಕಾಲದ ಸುಪ್ರಸಿದ್ಧ ರಸಾಯನ ಶಾಸ್ತ್ರಜ್ಞ ಹಾಗೂ ಪ್ರಾಧ್ಯಾಪಕರಿದ್ದ ಡಾ. ರೋಬರ್ಟ್ ವಿಲ್ಯಮ್ ಬನ್ಸನ್‌ರಿಂದ ಹತ್ತೊಂಭತ್ತನೆಯ ಶತಮಾನದ ಆದಿಭಾಗದಲ್ಲಿ ಹೈಡೆಲ್‌ಬರ್ಗ್ ವಿಶ್ವವಿದ್ಯಾಲಯದಲ್ಲಿ ಶಿಕ್ಷಣಕೊಂಡಿದ್ದರು.

ಡಾ. ಪಿ.ಸಿ.ರೇ. ಅವರು ಇವರ ಕುರಿತಾಗಿ ಹೀಗೆ ನುಡಿದಿರುತ್ತಾರೆ :

'ಲಾರೆನ್ಸ್, ಭಾರತೀಯ ಮೂಲದ ಮೊತ್ತ ಮೊದಲ ರಸಾಯನ ಶಾಸ್ತ್ರಜ್ಞರಿದ್ದು ಸರ್ ಹೆನ್ರಿರೊಸ್ಕೊ (ಸುಪ್ರಸಿದ್ಧ ರಸಾಯನ ಶಾಸ್ತ್ರಜ್ಞರಿದ್ದು ಮೆಂಚೆಸ್ಟರ್ ವಿಶ್ವವಿದ್ಯಾಲಯದಲ್ಲಿ ರಸಾಯನ ಶಾಸ್ತ್ರದ ಪ್ರಾಧ್ಯಾಪಕರಾಗಿದ್ದವರು) ಇವರ ವಿದ್ಯಾರ್ಥಿಗಳಾಗಿದ್ದರು. ಅವರು ಕಳೆದ ಶತಮಾನದ ಐವತ್ತರ ಸುಮಾರಿಗೆ ಹೈಡೆಲ್ ಬರ್ಗ್‌ನಲ್ಲಿನ ಬನ್ಸನ್ ರಿಂದ ಶಿಕ್ಷಣಕೊಂಡರು. ಅವರು ಗೋವಾದ ನಿವಾಸಿಗಳಾಗಿದ್ದರು. ಹುಟ್ಟೂರಿನಲ್ಲಿ ತನ್ನ ಶಿಕ್ಷಣಕ್ಕೆ ಬೆಲೆಯಿಲ್ಲದಿದ್ದುದನ್ನು ಕಂಡ ಅವರು ಅದೃಷ್ಟವನ್ನರಸಿ ಪೋರ್ಚುಗಲ್ಲಿಗೆ ತೆರಳಿ, ಲಿಸ್ಬನ್‌ನಲ್ಲಿ ರಸಾಯನ ಶಾಸ್ತ್ರದ ಪ್ರಾಧ್ಯಾಪಕರಾದರು. ಪಿ.ಸಿ.ರೇ ಮತ್ತು ಬಿದುಭೂಷಣದತ್ತ, ದುಯೆತ್ರಿ ಇವಾನೊ ವಿಟಾ ಫೆಂಡಲೀಫ್ ಇವರ ಕುರಿತಾಗಿ 'ಮೋಡರ್ನ್ ರೆವ್ಯು'ನಲ್ಲಿ (ಸಂ. ೧, ಜನವರಿ - ಜೂನ್, ೧೯೦೧, ಪುಟ ೪೬೨) ಬರೆದ ಲೇಖನದ ಅಡಿ ಟಿಪ್ಪಣಿ.

೧೮. ಡಾ. ಎಸ್. ಎಮ್. ಕತ್ರೆಯವರು ಹೇಳಿದಂತೆ - 'ತನ್ನದೇ ಆದ ಸಾಹಿತ್ಯದ ಬೆಂಬಲವಿಲ್ಲದ ಭಾಷೆಯ ಭವಿಷ್ಯ ರಾಜಕೀಯ ಸತಾವಣೆಯಿಂದಾಗಿ ಯಾವ ದುರವಸ್ಥೆ ಕಾಣಬಲ್ಲುದೆಂಬುದನ್ನು ಇದು ತೋರುತ್ತದೆ', ಎಸ್.ಎಮ್. ಕತ್ರೆ, ಎಮ್.ಎ., ಪಿ.ಎಚ್.ಡಿ (ಲಂಡನ್) ಇವರ 'ದ ಫೊರ್ಮೇಶನ್ ಆಫ್ ಕೊಂಕಣಿ', ಪುಟ ೧೫೬.

ಡಾ. ವ್ಹಿ.ಪಿ.ಚವ್ಹಾಣ ಇವರು ತನ್ನ 'ದ ಕೊಂಕಣ ಎಂಡ್ ಕೊಂಕಣ್ ಲೇಂಗ್ವೇಜ್ ಎಂಡ್ ಲಿಟರೇಚರ್' ಪುಸ್ತಕದಲ್ಲಿ ಈ ಬಗೆಯ ವಾಕ್ಯಗಳ ನಮೂನೆಯನ್ನು 'ಗೋವನ್ ಮೈಲ್' ಮತ್ತು 'ಓ.ಆವಿಸೊ'ಗಳಿಂದ ಎತ್ತಿಕೊಟ್ಟಿರುತ್ತಾರೆ.

೧೯. ಡಾ. ಎಸ್. ಎಮ್. ಕತ್ರೆ, ಎಮ್.ಎ., ಪಿ.ಹೆಚ್.ಡಿ. (ಲಂಡನ್) ಇವರ 'ದ ಫೋರ್ಮೇಶನ್ ಆಫ್ ಕೊಂಕಣಿ' ಪುಟ ೧೪೭-೧೪೮

೨೦. ಪೋರ್ಚುಗೀಸರು ಕೊಂಕಣಿಯನ್ನು 'ಲಿಂಗ್ವಾ ಕನರಿಮ್' ಅಥವಾ 'ಕನರಿನಾ' ಎಂದಾಗಿ ಕರೆದರು. ಫಾದರ್ ಥೋಮಸ್ ಸ್ಟೀಫನ್ಸ್ ಇವರು ಇದನ್ನು 'ಬ್ರಾಹ್ಮಣಾಚಿ ಭಾಷಾ', 'ಶೆಣ್ಣೈಯಿಚಿ ಭಾಷಾ' ಎಂದಾಗಿ ಕರೆದರು. ಇವರ ಜನ್ಮ ೧೫೪೯ರಲ್ಲಿ ಬುಲ್‌ಸ್ಟನ್, ವಿಲ್ಟ್‌ಶಯರ್‌ನಲ್ಲಾಯಿತು. ಇವರು ಲಂಡನ್ನಿನಲ್ಲಿನ ಶ್ರೀಮಂತ ವ್ಯಾಪಾರಿಯೊಬ್ಬರ ಮಗ. ಇವರು ೧೫೭೯ರ ಅಕ್ಟೋಬರ್ ತಿಂಗಳ ೨೪ಕ್ಕೆ ಗೋವಾಕ್ಕೆ ಬಂದರು. ಐದು ವರ್ಷಗಳ ಕಾಲ ರಾಚೋಲ್‌ನಲ್ಲಿನ ಸೈಂಟ್ ಪೌಲ್ಸ್ ಕೋಲೇಜಿನ ಮುಖ್ಯಾಧಿಕಾರಿಗಳಾಗಿದ್ದ ಇವರು ಸುಮಾರು ೪೦ ವರ್ಷಗಳ ಕಾಲವನ್ನು ಸಾಷ್ಟಿಯಲ್ಲಿನ ಕ್ರಿಸ್ತೀಯ ಬ್ರಾಹ್ಮಣರ ನಡುವೆ ಕಳೆದರು. ಇವರ ಪತ್ರಗಳು ಭಾರತದೊಂದಿಗಿನ ಬ್ರಿಟಿಷರ ವ್ಯಾಪಾರಕ್ಕೆ ಉತ್ತೇಜನೆಯಿತ್ತವು. ಹಾಗೆಯೇ ಈಸ್ಟ್ ಇಂಡಿಯಾ ಕಂಪನಿ ರೂಪುಗೊಳ್ಳಲು ಕಾರಣವಾದವು. ಇವರು ಪಾದ್ರಿ ಥಾಮಸ್ ಇಸ್ತೆವ್ವಾವ್ ಎಂದಾಗಿ ಪರಿಚಿತರಾಗಿದ್ದರು. ೧೬೧೯ರಲ್ಲಿ ಇವರು ತೀರಿಕೊಂಡರು; ಬಹುಶಃ ರಾಚೋಲ್‌ನ ಸದ್ಯದ ಆರ್ಚ್-ಎಪಿಸ್ಕೋಪಲ್ ಸೆಮಿನಾರ್ ಎಂಬಲ್ಲಿ ಅವರ ಅಂತ್ಯ ಸಂಸ್ಕಾರವಾಗಿದ್ದಿರಬೇಕು.

೨೧. ಆತನ ಹೆಸರು ಶಂಕರ ಮಂಗೇಶ ನಾಯಿಕ್ ಕರಂಡೆ ದೇಸಾಯಿ. ಆತನ ಜನ್ಮ ಕುಮ್ಟ ತಾಲೂಕಿನ ಅಂತ್ರವಳ್ಳಿಯಲ್ಲಾಯಿತು. ಅದೊಮ್ಮೆ ಆತ ತನ್ನ ಕುಟುಂಬೀಯರ ಸಮೇತ ಕುಲದೇವತೆ ಮಂಗೇಶನ ದರ್ಶನಕ್ಕಾಗಿ ತೆರಳಿದ. ಅರಣ್ಯವೊಂದರಲ್ಲಿ ಆತನ ಕುಟುಂಬೀಯರ ದಾರಿತಪ್ಪಿತು; ಅವರನ್ನು ಅರಸಿ ವಿಫಲನಾದಾಗ ಹತಾಶನಾಗಿ ಮಂಗೇಶನಿಗೆ ಮೊರೆಯಿಟ್ಟ. ಆಗ ಬೈರಾಗಿಯೊಬ್ಬನ ರೂಪುಕೊಂಡು ಪ್ರತ್ಯಕ್ಷನಾದ ಮಂಗೇಶ ಆತನನ್ನುದ್ದೇಶಿಸಿ "ಅರಣ್ಯದಲ್ಲಿ ಕುಟುಂಬೀಯರನ್ನು ಕಳೆದುಕೊಂಡೆನೆಂಬ ಚಿಂತೆಯಿಂದ ಶೋಕತಪ್ತನಾದೆ. ಸಂಸಾರದ ಅರಣ್ಯದಲ್ಲಿ ಬದುಕಿನ ಅಂತಿಮ ಗುರಿಯನ್ನೇ ಜನ್ಮಜನ್ಮಾಂತರ ಕಳೆದುಕೊಳ್ಳಬೇಕಾಗಿ ಬಂದರೆ ನಿನಗೆ ಅದೆಷ್ಟು ಚಿಂತೆ, ನಿರಾಶೆಯಾಗಬೇಕು?" ಎಂದು ಪ್ರಶ್ನಿಸಿದ. ದಾರಿಕಳೆದುಕೊಂಡ ಕುಟುಂಬೀಯರು ಆತನನ್ನು ಮತ್ತೆ ಸೇರಿಕೊಂಡರು. ಮಂಗೇಶನ ದೇವಸ್ಥಾನವನ್ನು ಸೇರಿದ ಆತ ಲೌಕಿಕ ವ್ಯವಹಾರಗಳಿಗೆ ತಿಲಾಂಜಲಿಯಿತ್ತು ತನ್ನ ಬದುಕಿನ ಉಳಿದ ದಿನಗಳನ್ನು ಅಲ್ಲಿಯೇ ಕಳೆದ. ಆ ನಡುವೆ ಕಾಶಿ ಯಾತ್ರೆಯ ತಯಾರಿ ಮಾಡಿದ ಆತ ದೇವಸ್ಥಾನದಲ್ಲಿ ಮಲಗಿದ್ದಾಗ, ಗಂಗಾನದಿಯಲ್ಲಿ ಸ್ನಾನ ಮಾಡಿದ್ದು ಮತ್ತು ಗಂಗಾಜಲ ತುಂಬಿದ ಕೊಡವನ್ನು ಸ್ನಾನ ಘಟ್ಟ ದತ್ತಕೊಂಡುಹೋದ ಸ್ವಪ್ನ ಕಂಡ. ಎಚ್ಚರಗೊಂಡಾಗ ಆತ ಸ್ನಾನ ಮಾಡಿ ಬಂದವನಂತೆ ತನ್ನ ಮೈ ಒದ್ದೆಯಾಗಿದ್ದುದನ್ನು ಕಂಡ. ಮುಂಜಾನೆ ದೇವರ ದರ್ಶನಕೊಳ್ಳುತ್ತಿದ್ದಾಗ "ಗಂಗಾಸ್ನಾನ ಅದಾಗಲೇ ಮಾಡಿದ್ದ ನಿಮಿತ್ತ ಕಾಶಿ ಯಾತ್ರೆಯ ಅವಶ್ಯಕತೆಯಿಲ್ಲ" ವೆಂದು ಮಂಗೇಶ ನುಡಿದನೆನ್ನುತ್ತಾರೆ.

ಆತನ ಎಲ್ಲಾ ಖರ್ಚನ್ನು ದೇವಸ್ಥಾನ ನೋಡಿಕೊಳ್ಳುತ್ತಿತ್ತು. ಆತ ಎಂದು ತೀರಿಕೊಂಡನೆಂದು ಯಾರೊಬ್ಬರೂ ಅರಿಯರು. ಆತನ ಸಮಾಧಿ ದೇವಸ್ಥಾನದ ವನಭೋಜನದ ಅಗ್ರಶಾಲೆಯ ಹಿಂಭಾಗದಲ್ಲಿದೆ. ಅಲ್ಲಿ ಬೆಳಗುವ ನಂದಾ ದೀಪದ ಮತ್ತು ವೈಶಾಖ ಬಹುಳ ದ್ವಾದಶಿಯಂದಿನ ಪುಣ್ಯತಿಥಿಯ ಆಚರಣೆಯ ಖರ್ಚನ್ನು ದೇವಸ್ಥಾನ ನೋಡಿಕೊಳ್ಳುತ್ತದೆ. ದೇವಸ್ಥಾನದಲ್ಲಿ ಜರಗುವ ಮಂಗೇಶ-ಶಿವೋತ್ಸವದಂದು ಕಲಾವಂತಿಣಿಯರು ಆತ ಬರೆದ

ಜುಳವೆ (ಪದ) ಗಳನ್ನು ಹಾಡಿ ಕುಣಿಯುತ್ತಾರೆ. ಶಿವಗೀತೆಯ ಮೇಲಣ ಶುದ್ಧ ಮರಾಠಿಯಲ್ಲಿನ ಆತನ ಭಾಷ್ಯ ಅತಿ ಪ್ರಸಿದ್ಧವಿದೆ.

೨೨. ವಾಮನ ರಘುನಾಥ ವರ್ದೆ ವಾಲಾವಲಕರರ ಜನ್ಮ ಗೋವಾದ ಡಿಚೋಲಿಯಲ್ಲಿನ ಬಡಕುಟುಂಬವೊಂದರಲ್ಲಿ ೧೮೭೭ರ ಜೂನ್ ತಿಂಗಳ ೨೩ರಂದು ಆಯಿತು. ಹಣದ ಅಡಚಣೆಯಿಂದ ಆತನ ಪ್ರಾಥಮಿಕ ಶಿಕ್ಷಣ ಅತಿ ಕಷ್ಟದಿಂದಾಯಿತು. ಮುಂದಿನ ಶಿಕ್ಷಣವನ್ನು ಮುಗಿಸಲು ಅಸಮರ್ಥನಾದ. ೧೮೯೩ ಮತ್ತು ೧೮೩೭ರ ನಡುವಣ ಕಾಲದಲ್ಲಿ ಆತ ಕೊಂಕಣಿಯಲ್ಲಿನ ತನ್ನ ಬರಹಕ್ಕೆ 'ಶೆಣ್ಯೆ ಗೊಯಾ ಬಾಬಾ' ಎಂಬ ಕಾವ್ಯನಾಮ ಬಳಸಿದ. ೧೩೨೫ ಮೊದಲ್ಗೊಂಡು ಆತ ಅನೇಕ ಪುಸ್ತಕಗಳನ್ನು ಕೊಂಕಣಿಯಲ್ಲಿ ಬರೆದ. ಮೊದಲು ರೋಮನ್ ಲಿಪಿ ಉಪಯೋಗಿಸಿದ ಆತ ನಂತರ ದೇವನಾಗರಿ ಲಿಪಿ ಬಳಸ ತೊಡಗಿದ. ಕೆಲವೊಂದು ಪುಸ್ತಕಗಳನ್ನು ಮರಾಠಿಯಲ್ಲೂ ಬರೆದ. ಅವುಗಳಲ್ಲಿನ ಹೆಚ್ಚಿನವು ಸಾರಸ್ವತರ ಇತಿಹಾಸ, ಕೊಂಕಣಿ ಇತ್ಯಾದಿಗಳ ಕುರಿತಾಗಿದ್ದವು. ೧೯೪೩ರ ಎಪ್ರಿಲ್ ತಿಂಗಳ ೯ರಂದು ಆತ ತೀರಿಕೊಂಡ.

೨೩. ಫಾದರ್ ಸ್ಟೀಫನ್ಸ್ ಬಳಸಿದ್ದ ಪದ್ಧತಿ ಅದೆಂದೋ ಸಮಾಪ್ತವಾಗಿತ್ತು. ಯುರೋಪಿನ ಅರ್ವಾಚೀನ ವಿದ್ವಾಂಸರು ಈಗ ವಿಲ್ಯಮ್‌ಜೋನ್ಸ್‌ನ ಸುಧಾರಿತ ಪದ್ಧತಿಯನ್ನು ಬಳಸುತ್ತಿದ್ದಾರೆ.

೨೪. ಓವಿ ಮತ್ತು ಸಾಮಾನ್ಯ ಗದ್ಯದ ರಚನೆಯ ನಡುವೆ ಅತ್ಯಲ್ಪ ವ್ಯತ್ಯಾಸವಿದೆ. ಓವಿ ಮರಾಠಿಯಲ್ಲಿನ ಅತಿ ಹಳೆಯ ಪದ ಪ್ರಕಾರವೊಂದಾಗಿದೆ. ಈ ಪ್ರಕಾರವನ್ನು ಸರ್ವಸಾಮಾನ್ಯವಾಗಿ ಕಥೆಯ ನಿರೂಪಣೆಗೆ ಬಳಸಲಾಗುತ್ತಿತ್ತು. ಇಲ್ಲಿ ಕ್ಲಿಷ್ಟವಾದ ಸಾಹಿತ್ಯಿಕ ಬಂಧನಗಳಿರದಿದ್ದು ಕವಿ ತನ್ನ ಆಶಯವನ್ನು ಮುಕ್ತರೂಪದಲ್ಲಿ ವ್ಯಕ್ತಪಡಿಸಬಹುದಾಗಿತ್ತು. ಓವಿ ಚತುಷ್ಪದಿಯಿದೆ; ಮೊದಲ ಮೂರು ಸಾಲುಗಳು ಐದರಿಂದ ಹದಿನೈದು ಅಕ್ಷರಗಳನ್ನೊಳಗೊಡಿದ್ದು ನಾಲ್ಕನೆಯ ಸಾಲು ಮೂರರಿಂದ ಹದಿಮೂರು ಅಕ್ಷರಗಳಿಂದೊಡಗೂಡಿರುತ್ತದೆ. ಮೊದಲು ಮೂರು ಸಾಲುಗಳು ಪ್ರಾಸಾತ್ಮಕವಿದ್ದು ನಾಲ್ಕನೆಯ ಸಾಲಿನಲ್ಲಿ ಅವಶ್ಯಕತೆಯಿರದಿದ್ದಾಗಲೂ, ಪ್ರಾಸ ಕೆಲವೊಮ್ಮೆ ತೋರಿಬರುತ್ತದೆ.

೨೫. ಡಾ. ವ್ಹಿ.ಪಿ.ಚವ್ಹಾಣರು ಅದರ ಅನುವಾದವನ್ನು ಈ ರೀತಿಯಲ್ಲಿ ಮಾಡಿರುತ್ತಾರೆ :

I bow to thee, Occupier of Universe
Father, Omnipotent
Great God, Truthful
The Creator of Heaven and Earth

Thou art the Giver of all desires
The ocean of mercy and kindness
Thou art the ocean of happiness
Without beginning or end

Thou art the Highest Bliss itself
The light of knowledge
Thou art all virtue and blemishless
Thou art clean, even calm, Oh, Lord

ರಾವ್‌ಸಾಹಿಬ್ ಡಾ. ವ್ಹಿ.ಪಿ. ಚವ್ಹಾಣ,ಎಲ್.ಎಮ್.ಎಂಡ್.ಎಸ್, ಇವರ 'ದ ಕೊಂಕಣ ಎಂಡ್ ಕೊಂಕಣಿ ಲೇಂಗ್ವೇಜ್', ೧೯೨೪, ಪುಟ ೫೩.

ಅಧ್ಯಾಯ ೧೯

ಗೋವಾದ ಮೂರು ಸಾರಸ್ವತ ಕುಟುಂಬಗಳು

೧. ವಿಸ್ಕೊಂದೆ (ವೈಕೌಂಟ್) ಕೇಂಕರೆ

ಕೇಂಕರೆ ಕುಟುಂಬದ ಪೂರ್ವಜರು ಕುಶಸ್ಥಳಿಯರಿದ್ದರು. ಪೋರ್ಚುಗೀಸರ ಧಾರ್ಮಿಕ ಸತಾವಣೆಯ ದಿನಗಳಲ್ಲಿ ಕುಡಥರಿಗೆ ಓಡಿ ಹೋದ ಇವರು ಸೋಂಡೆ ಅರಸರ ಅಂತ್ರುಜ್ ಮಹಾಲಿನಲ್ಲಿ ನೆಲಸಿದರು.

ಉತ್ಪೀಡನೆಯ ಕಾವು ಕಡಿಮೆಯಾಗುತ್ತಲೇ ಈ ಕುಟುಂಬದ ಭಿಕು ಶೆಣೈ ಕೇಂಕರೆ ಕುಂಭಾರ್ ಜುವೆ ಕುದುರಿಗೆ ಹೋಗಿ ಅಲ್ಲಿ ತೆಂಗಿನ ಕಾಯಿಯ ವ್ಯಾಪಾರಕ್ಕೆ ತೊಡಗಿದ. ಆದರೂ ಜೀವನ ಸಾಗಿಸುವುದು ಕಷ್ಟವಾದಾಗ ಆತ ಗೋವಾದ ರಾಜಧಾನಿ ಪಂಜಿಮ್‌ನ ಬಳಿಯ ಪನವೇಲಿನ ನಾಮಾಂಕಿತ ಕಾಮತರಲ್ಲಿ ಮನೆ ಕೆಲಸಕ್ಕೆ ತೊಡಗಿದ; ನಿಷ್ಠಾವಂತನ ಸೇವೆಗೆ ಮೆಚ್ಚಿದ ಕಾಮತರು ಆತನಿಗೆ ಚಿಕ್ಕ ಭೂಭಾಗವೊಂದನ್ನು ಇನಾಮಿನ ರೂಪದಲ್ಲಿತ್ತರು. ಭಿಕು ಶೆಣೈ ಕೇಂಕರೆ ತನ್ನ ತೆಂಗಿನಕಾಯಿಯ ವ್ಯಾಪಾರವನ್ನು ಮತ್ತೆ ಆರಂಭಿಸಿ ಯಶಸ್ವಿಯಾದ.

ಈ ಕುಟುಂಬದಲ್ಲಿನ ಪ್ರಸಿದ್ಧ ವ್ಯಕ್ತಿ ಪುರುಷೋತ್ತಮ ಬಾಬಾಕೇಂಕರೆಯ ಜನ್ಮ ೧೮೧೮ರಲ್ಲಾಯಿತು. ಮರಾಠಿ, ಪೋರ್ಚುಗೀಸ್ ಮತ್ತು ಸಂಸ್ಕೃತಗಳಲ್ಲಿ ಪ್ರಾವೀಣ್ಯಕೊಂಡಿದ್ದ ಈತ ಕಾನೂನು ಮತ್ತು ರಾಜ್ಯ ಶಾಸ್ತ್ರಗಳ ಅಭ್ಯಾಸ ಮಾಡಿದ್ದ. ತನ್ನ ಕುಟುಂಬದ ಉತ್ಕರ್ಷಕ್ಕೆ ಕಾರಣವಾಗಿದ್ದ ವ್ಯಾಪಾರದಲ್ಲೂ ಸಕ್ರಿಯ ಭಾಗಕೊಂಡ ಈತ ೧೮೨೫ ಮೊದಲ್ಗೊಂಡು ಹಿಂದುಗಳ ರಾಜಕೀಯ ಹಕ್ಕಿಗಾಗಿದ್ದ ಆಂದೋಲನವನ್ನು ತೀವ್ರಗೊಳಿಸಿದ; ಪೋರ್ಚುಗಲ್ಲಿನ ಸರಕಾರ ಕೆಲವೊಂದು ವಿಶೇಷ ಅಧಿಕಾರಗಳನ್ನು ಹಿಂದುಗಳಿಗೆ ಬಿಟ್ಟುಕೊಟ್ಟಿತು. ಆದರೆ ಸ್ಥಾನೀಯ ಪೋರ್ಚುಗೀಸ್ ಮತ್ತು ಕ್ರಿಸ್ತೀಯ ಅಧಿಕಾರಗಳು ಅವುಗಳನ್ನು ಪೂರ್ತಿಯಾಗಿ ಕಾರ್ಯರೂಪಕ್ಕೆ ತರುವಲ್ಲಿ ತಡೆಯೊಡ್ಡಿದರು. ಉದ್ದೇಶದ ಪೂರ್ತಿಗಾಗಿ ಪುರುಷೋತ್ತಮಬಾಬಾ ಕೇಂಕರೆ ನಿಷ್ಠಾವಂತರನ್ನೊಂದುಗೂಡಿಸಿ ತನ್ನ ಖರ್ಚಿನಿಂದ, ಪೋರ್ಚುಗಲ್ಲಿನ ಅರಸನಿಗೆ ಜ್ಞಾಪಕ ಪತ್ರ ಕಳುಹಿಸಿದ. ಇದರ ಪರಿಣಾಮವಾಗಿ ಗೋವಾದ ಮುಖ್ಯ ನ್ಯಾಯಾಧೀಶನ ಅಧ್ಯಕ್ಷತೆಕೊಂಡ ಗಣ್ಯ ವ್ಯಕ್ತಿಗಳ ಮಂಡಳವೊಂದು ನೇಮಿಸಲ್ಪಟ್ಟಿತು. ಮಂಡಳದ ಸದಸ್ಯನಿದ್ದ ಪುರುಷೋತ್ತಮ ಬಾಬಾ ಕೇಂಕರೆಗೆ ತಪಾಸಣೆಯ ಹೊಣೆಗಾರಿಕೆಯೊಯಲಾಯಿತು. ಮಂಡಳ ತಯಾರಿಸಿದ ಬಹುಮತದ ವರದಿ ಹಿಂದುಗಳ ವಿರುದ್ಧವಿತ್ತು. ಬಾಬಾ ಮಂಡಳದ ಕಾರ್ಯ ಕಲಾಪದ ಟಿಪ್ಪಣಿಯಲ್ಲಿ ವರದಿಯ ಕುರಿತಾಗಿದ್ದ ತನ್ನ ಅಸಮ್ಮತಿ ವ್ಯಕ್ತಪಡಿಸಿದ. ಇದು ಲಿಸ್ಬನ್‌ನಲ್ಲಿದ್ದ ಪೋರ್ಚುಗೀಸ್ ಸರಕಾರದ ಕೈಸೇರಿದಾಗ, ೧೮೪೫ರಲ್ಲಿ ವಿಶೇಷ ಆದೇಶವೊಂದರ ಮೂಲಕ ಕೆಲವೊಂದು ಅಧಿಕಾರಗಳನ್ನು ಹಿಂದುಗಳಿಗೆ ಮರಳಿಸಿತು.

ಪೋರ್ಚುಗೀಸ್ ಸರಕಾರ ವರ್ಷವೊಂದರ ರೂ. ೪ ರ ತಲೆ ತೆರಿಗೆಯನ್ನು ಹಿಂದೂ ಕುಟುಂಬಗಳ ಮೇಲಕ್ಕೆ ಮತ್ತು ರೂ. ೨ ನ್ನು ಕುಟುಂಬದ ಪ್ರತಿ ವ್ಯಕ್ತಿಯ ಮೇಲಕ್ಕೆ ಹೇರುವ

ಯೋಜನೆ ಮಾಡಿತು. ಪುರುಷೋತ್ತಮ ಬಾಬಾ ಮತ್ತೆ ಆಂದೋಲನಕ್ಕೆ ತೊಡಗಿ ಪೋರ್ಚುಗಲ್ಲಿನ ಅರಸನಿಗೆ ಈ ಕುರಿತು ಬರೆದು ತಿಳಿಸಿದ. ಅರಸು ಈ ಆಜ್ಞೆಯನ್ನು ರದ್ದು ಮಾಡುವರೆ ಆದೇಶವಿತ್ತ. ಆದಾಯದ ಮೂಲವೊಂದನ್ನು ಕಳೆದುಕೊಂಡ ಗೋವಾ ಸರಕಾರ ತೆಂಗಿನಮರದಿಂದ ತೆಗೆದ ಹೆಂಡವನ್ನು ಮಾರುವ ನಿರ್ಧಾರ ಮಾಡಿತು. ೧೮೫೨ರಲ್ಲಿ ಸತಾರ್ ಮಹಾಲಿನ ದೀಪು ರಾಣೆ ಇದರ ವಿರುದ್ಧ ಬಂಡಾಯ ಹೂಡಿದ. ಕಂದಾಯ ಗಳಿಸಲು ಅಸಮರ್ಥವಾದ ಸರಕಾರ ಹಣಕಾಸಿನ ಪೂರೈಕೆಯಲ್ಲಿ ಸುಮಾರು ರೂ. ೫ ಲಕ್ಷಗಳಷ್ಟರ ಕೊರತೆ ಕಂಡಿತು. ಗವರ್ನರ್ ಜನರಲ್ ಈ ಕುರಿತಾಗಿ ಸಾರ್ವಜನಿಕವಾಗಿ ಮನವಿ ಮಾಡಿದಾಗ ಪುರುಷೋತ್ತಮ ಬಾಬಾ ಈ ಹಣವನ್ನು ಸಂಗ್ರಹಿಸಿ ಸರಕಾರಕ್ಕೆ ಒಪ್ಪಿಸಿದ. ದೀರ್ಘಕಾಲದಿಂದ ನಡೆದುಬಂದಿದ್ದ ಪ್ರತಿರೋಧವನ್ನು ಆ ಬಳಿಕ ಹತ್ತಿಕ್ಕಲಾಯಿತು.

ಅನಂತರ ಮಳೆಯ ಅಭಾವದಿಂದ ಬೆಳೆಯಾಗದೆ ಅಕ್ಕಿ ಮತ್ತು ಅನ್ಯ ಧಾನ್ಯಗಳು ಕೈಗೆಟಕದಂತಾದವು; ಜನರು ಉಪವಾಸ ಬೀಳುವಂತಾಯಿತು. ವ್ಯಾಪಾರಿಗಳು ಧಾನ್ಯ ಶೇಖರಿಸಿ ಅದರಿಂದ ಅಪಾರ ಧನ ಸಂಪಾದಿಸತೊಡಗಿದರು. ಪುರುಷೋತ್ತಮ ಬಾಬಾ ಧಾನ್ಯಗಳ ಸರಬರಾಯಿಯ ಮೇಲಕ್ಕೆ ಸರಕಾರಿ ನಿಯಂತ್ರಣ ಸಮರ್ಥಿಸಿದ. ಆದರೆ ಯೋಜನೆ ಯಶಸ್ವಿಯಾಗಲಿಲ್ಲ. ನಿಯಂತ್ರಣವನ್ನು ಕಾರ್ಯರೂಪಕ್ಕೆ ತರುತ್ತಲೇ ಕೆಳದರ್ಜೆಯ ಸರಕಾರಿ ಅಧಿಕಾರಿಗಳು ಸ್ವಪ್ರಯೋಜನಕ್ಕಾಗಿ ಪರಿಸ್ಥಿತಿಯ ದುರುಪಯೋಗ ಮಾಡಿದರು. ಪುರುಷೋತ್ತಮ ಬಾಬಾ ಆಗ ಮಲಬಾರಿನಿಂದ ಅಕ್ಕಿ, ಅನ್ಯ ಧಾನ್ಯ, ಖಾದ್ಯ ಪದಾರ್ಥಗಳನ್ನು ಆಯಾತವಾಡಿ ಯೋಗ್ಯ ಬೆಲೆಗೆ ಮಾರಿದ. ಅದನ್ನು ಖರೀದಿ ಮಾಡಲು ಅಸಮರ್ಥರಾದವರಿಗೆ ಸಾಲವಿತ್ತ. ಆತನ ಸಮಾಜ ಸೇವೆಗೆ ಮೆಚ್ಚಿಗೆ ತೋರಿದ ಸರಕಾರ 'ಬರಾವೊ' (ಬ್ಯಾರನ್) ಪದವಿಯನ್ನಿತ್ತು ಗೌರವಿಸಿತು. ಆತ ಮಾತ್ರ ತನ್ನನ್ನು 'ಬರಾವೊ ದಿ ಕಾಲಾಪುರ' ಎಂದಾಗಿ ಕರೆದುಕೊಂಡ.

ಪುರುಷೋತ್ತಮ ಬಾಬಾ ಬನಾರಸಿನ ಯಾತ್ರೆಗಾಗಿ ತೆರಳಿದ. ಕಲ್ಕತ್ತಾಕ್ಕೆ ಹೋದ ಆತ 'ಗವರ್ನರ್ ಜನರಲ್ ಆಫ್ ಇಂಡಿಯಾ' ಇವರ ಭೇಟಿಕೊಂಡ. ೧೮೭೨ರಲ್ಲಿ ಈತನಿಗೆ 'ವಿಸ್ಕೊಂದೆ' (ವೈಕೌಂಟ್) ಉಪಾಧಿಯನ್ನೀಯಲಾಯಿತು. ದುರ್ದೈವಕ್ಕೆ ಆತ ಗೋವಾಕ್ಕೆ ಮರಳುವ ಮುನ್ನವೇ ಕಾಲವಶನಾದ.

ಉದಾರ ಮನೋವೃತ್ತಿಯ ಪುರುಷೋತ್ತಮ ಬಾಬಾ ಧರ್ಮಿಷ್ಠನೂ, ಪರೋಪಕಾರಿಯೂ ಆಗಿದ್ದ. ಆತ ಪರೋಡೆಯ ಚಂದ್ರೇಶ್ವರ ದೇವಸ್ಥಾನದಲ್ಲಿನ ಶ್ರೀರಾಮ ನವಮಿಯ ಐದು ದಿನಗಳ ಉತ್ಸವದ ಶಾಶ್ವತ ಆಚರಣೆಗೆ ಬೇಕಿದ್ದ ಧನವನ್ನು ದಾನದ ರೂಪದಲ್ಲಿತ್ತಿದ್ದ. ಆತ ತೀರಿಕೊಂಡಾಗ ಗೋವಾದಲ್ಲಿನ ಸಮಸ್ತ ಹಿಂದೂ, ಕ್ರಿಸ್ತೀಯ ಮತ್ತು ಮುಸಲ್ಮಾನ ಜನತೆ ಶೋಕ ವ್ಯಕ್ತಪಡಿಸಿತು.

೨. ಬರಾವೋ (ಬ್ಯಾರನ್) ಧೆಂಪೆ

ಈ ಕುಟುಂಬದ ಪೂರ್ವಜರು [೬] ಸದ್ಯದ ಮಡ್ಗಾಂವ್ ತಾಲೂಕಿನಲ್ಲಿನ ನಾಗಾವೆ ಎಂಬಲ್ಲಿ ವಾಸಿಸುತ್ತಿದ್ದರು. ಪೋರ್ಚುಗೀಸರ ಧರ್ಮಸಂಬಂಧಿ ಸತಾವಣೆಯ ದಿನಗಳಲ್ಲಿ

ಅವರು ತಮ್ಮ ಕುಲದೇವಿಯೊಂದಿಗೆ ಉತ್ತರ ಕನ್ನಡದಲ್ಲಿನ ಅಂಕೋಲೆಗೆ ಪಲಾಯನ ಮಾಡಿದರು. ಅಲ್ಲಿ ಅವರು ಮಹಾಮಾಯಾ ದೇವಸ್ಥಾನ ಕಟ್ಟಿದರು; ದೇವಸ್ಥಾನದ ಆಡಳಿತೆ ಇಂದಿಗೂ ಈ ಕುಟುಂಬದ ಕೈಗಳಲ್ಲಿದೆ.

ಅವರು ಪಂಜಿಮ್‌ಗೆ ಯಾವಾಗ ಮರಳಿದರೆಂಬುದನ್ನು ಯಾರೊಬ್ಬರೂ ಅರಿಯರು. ಅವರು ತಮ್ಮ ಹಿರಿಯರ ವ್ಯಾಪಾರವನ್ನು ಪುನಃ ಆರಂಭಿಸಿದರು. ಈ ಕುಟುಂಬದ ಪ್ರಮುಖರಿದ್ದ ಪುರುಷೋತ್ತಮ ಶೆಣೈ ಧೆಂಪೆಯವರ ವ್ಯವಹಾರ ಭಾರತದಾದ್ಯಂತ ಹರಡಿತ್ತು. ಯೂರೋಪು, ಅಮೇರಿಕಾ, ಆಫ್ರಿಕಾಗಳೊಂದಿಗೂ ವ್ಯಾಪಾರ ಮಾಡುತ್ತಿದ್ದ ಇವರು ಅಪಾರ ಧನ ಗಳಿಸಿದರು. ದಯಾಳು, ದಾನಶೀಲರಿದ್ದ ಇವರು ಸಮಾಜೋದ್ಧಾರ ಮುಂತಾದ ಸಾರ್ವಜನಿಕ ಕಾರ್ಯಗಳಲ್ಲಿ ಆಸಕ್ತಿ ಕೊಂಡವರಿದ್ದರು. ಅವರ ಸಂಪತ್ತು ಸರಕಾರದ ನೆರವಿಗೆ ಸದಾ ಸನ್ನದ್ಧವಿರುತ್ತಿತ್ತು.

೧೮೫೫-೧೯೦೦ರ ಕಾಲಾವಧಿಯಲ್ಲಿ ಬಾಳಿದ್ದ ಕೃಷ್ಣ ಗೋವಿಂದ ಶೆಣೈ ಧೆಂಪೆಯವರಿಗೆ ಪೋರ್ಚುಗಲ್ಲಿನ ಅರಸು 'ಬರಾವೊ' ಉಪಾಧಿಯನ್ನಿತ್ತು ಸನ್ಮಾನಿಸಿದ್ದ. ಇವರು ಮೊತ್ತ ಮೊದಲ 'ಬರಾವೊ ದಿ ಧೆಂಪೆ'".

೧೯೦೦-೧೯೩೮ ರ ನಡುವಿನ ಕಾಲದಲ್ಲಿ ವಿಷ್ಣು ಗಿರಿಧರ ಶೆಣೈ ಧೆಂಪೆಯವರ ಮನೆತನದ ಶ್ರೀಮಂತಿಕೆ ಬೆಳೆದುಕೊಂಡಿತು. ಅವರು ಮನೆತನದ ದಾನಶೀಲತೆ ಮತ್ತು ಸಮಾಜೋದ್ಧಾರದಲ್ಲಿನ ಆಸಕ್ತಿ ಉಳಿಸಿಕೊಂಡು ಬಂದರು. ಹಿಂದೂ ಮತ್ತು ಕ್ರಿಸ್ತೀಯರ ದೇವಾಲಯಗಳಿಗೆ ಕೊಡುಗೆಯ ದಾನವೀಯುತ್ತಿದ್ದ ಇವರಿಗೆ 'ನೈಟ್' ಬಿರುದನ್ನೀಯಲಾಯಿತು.

ಶ್ರೀಮಂತವಿದ್ದ ಈ ಮನೆತನ ಅವಿಭಕ್ತವಿತ್ತು. ಮನೆತನಕ್ಕೆ ಸಂಬಂಧಿಸಿದ್ದ ಕುಲದೇವಿಯ ದೇವಸ್ಥಾನ ದೂರದ ಅಂಕೋಲಾದಲ್ಲಿದ್ದ ನಿಮಿತ್ತ ಈಗ ಅವರು ಬಂದಿವಡೆಯಲ್ಲಿನ ನಾಗೇಶ ಮತ್ತು ಮಹಾಲಕ್ಷ್ಮೀ ದೇವರನ್ನು ಪೂಜಿಸುತ್ತಾರೆ. ಮತ್ತು ಈ ದೇವಸ್ಥಾನಗಳಿಗೆ ಸಾಕಷ್ಟು ದೇಣಗೆ ಕೊಡುತ್ತಾರೆ. ಅವರು ದೊಡ್ಡ ವ್ಯಾಪಾರಿಗಳಿದ್ದಂತೆ ಜಮೀನುದಾರರೂ ಆಗಿದ್ದರು. ವೈಕುಂಠ ಶೆಣೈ ಧೆಂಪೆ ಇವರು ಸದ್ಯದ ಕುಟುಂಬ ಪ್ರಮುಖರಾಗಿದ್ದಾರೆ.

೨. ವಿಸ್ಕೊಂದೆ ದಿ ಪೆರ್ನೆಂ (ದ ವೈಕೌಂಟ್ ಆಫ್ ಪೆಡ್ನೆ)

ವಿಜಯನಗರದ ಆಳ್ವಿಕೆಯ ದಿನಗಳಲ್ಲಿ ನಾಗೇಶ ಪ್ರಭು ದೇಸಾಯಿಯವರ ಯಜಮಾನಿಕೆ ಕೊಂಡ ಪೆಡ್ನೇಕರ್ ದೇಸಾಯಿಯವರ ಮನೆತನ ಪ್ರಸಿದ್ಧವಿತ್ತು. ಅವರು ಪೆಡ್ನೆಯಲ್ಲಿ ಎಂದು ನೆಲೆಸಿದರೆಂಬುದನ್ನು ಯಾರೊಬ್ಬರೂ ಅರಿಯದಿದ್ದರು.

ಬಿಜಾಪುರದ ಆದಿಲ್‌ಶಾಹನ ಆಳ್ವಿಕೆಯ ದಿನಗಳಲ್ಲಿ ಇವರಿಗೆ 'ದೇಶ್‌ಪ್ರಭು'ಗಳ ಉಪಾಧಿಯೀಯಲಾಯಿತು.

ಪೋರ್ಚುಗೀಸರು ಗೋವಾವನ್ನು ವಶಪಡಿಸಿಕೊಳ್ಳುತ್ತಲೇ ಸಾವಂತವಾಡಿಯ ಸಾವಂತರು ಮಾಳ್ವಣ್, ಪೆಡ್ನೆ, ಸತಾರಿ ಮತ್ತು ಸಾಂಖಳಿ ಮಹಾಲುಗಳಿಂದ ಮರಾಠರ

ಪರವಾಗಿ 'ಚೌಥಾಯಿ' ಮತ್ತು 'ಸರ್ದೇಶ್ಮುಖಿ' ಗಳ ವಸೂಲಿಗೆ ತೊಡಗಿದರು. ೧೭೩೯-೧೭೮೬ರ ನಡುವಣ ಕಾಲದಲ್ಲಿನ ಆಂತರಿಕ ಅಶಾಂತಿಯ ವೇಳೆಗೆ ಇವರು ಪೋರ್ಚುಗೀಸರಿಗೆ ಸಂಪೂರ್ಣ ಬೆಂಬಲವಿತ್ತರಷ್ಟೆ ಅಲ್ಲ ಈ ಮೇಲಣ ಮಹಾಲುಗಳನ್ನೂ ಗೆದ್ದುಕೊಳ್ಳಲು ನೆರವಿತ್ತರು.

ಪೋರ್ಚುಗೀಸರ ಆಳ್ವಿಕೆಯ ದಿನಗಳಲ್ಲಿ ಕ್ರಮೇಣ ಅವರು ಪ್ರಸಿದ್ಧಿಕೊಂಡರು. ೧೮೨೭ರಲ್ಲಿ ಇವರಲ್ಲಿನ ಆತ್ಮಾರಾಮ ಪ್ರಭುವನ್ನು ಪೋರ್ಚುಗೀಸ್ ಸೇನೆಯ 'ಕೇಪ್ಟನ್' ನ ಪದವಿಗೇರಿಸಲಾಯಿತು. ಆತನ ಮೊಮ್ಮಗ, ವಾಸುದೇವ ಪ್ರಭು (೧೮೭೦-೧೯೩೨) ಧರ್ಮಪರಾಯಣ ಮತ್ತು ವಿದ್ವಾಂಸನಿದ್ದ. ಆತ ಮರಾಠಿಯಲ್ಲಿ 'ಆಚಾರ್ಯ ಪಿತಾಚಿ ಅವನತಿ' ಮತ್ತು 'ಶಹಾಜಿ ಜೀಜಾಬಾಯಿಚಾ ಲಗ್ನಾಚೇ ಪರಿಣಾಮ', ಎಂಬೀ ಪುಸ್ತಕಗಳನ್ನು ಬರೆದ.

ವಾಸುದೇವ ಪ್ರಭುವಿನ ಮಗ ಆತ್ಮಾರಾಮ ವಾಸುದೇವ ಪ್ರಭು ತನ್ನ ತಂದೆಯ ಮಾರ್ಗವನ್ನವಲಂಬಿಸಿದ. ಮೊದಲಿಗೆ ಈತನಿಗೆ 'ಬ್ಯಾರನ್' ಮಾನವನ್ನೀಯಲಾಯಿತು; ಅನಂತರ 'ವೈಕೌಂಟ್' ಪದವಿಯನ್ನಿತ್ತು ಗೌರವಿಸಲಾಯಿತು. ಆತ ಕೊಲ್ಹಾಪುರಕ್ಕೆ ಹೋದಾಗ ಸಾಹು ಛತ್ರಪತಿ 'ರಾವ್‌ರಾಜೆ' ಪದವಿಯನ್ನಿತ್ತ; ಮತ್ತೆ ವಿಶೇಷವಾಗಿ ಸಂಯೋಜಿಸಿದ ದರ್ಬಾರಿನಲ್ಲಿ ಪಲ್ಲಂಕಿ ಮತ್ತು ಛತ್ರಗಳನ್ನು ಬಹುಮಾನವಾಗಿತ್ತ. (ಅವುಗಳನ್ನು ಇಂದಿಗೂ ಬಳಸಲಾಗುತ್ತದೆ)

ಸಂದರ್ಭ ಸೂಚಿ

೧. ಕೇಂಕರೆಯವರ ಗೋತ್ರ ವತ್ಸ; ಕುಲದೇವರು ಮಂಗೇಶ. ಸಾರಸ್ವತರಿದ್ದ ಇವರು ಕವಳೆ ಮಠದ ಅನುಯಾಯಿಗಳು.

೨. ಪನ್ವೇಲಿನ ಕಾಮತರ ಗೋತ್ರ ವತ್ಸ; ಕುಲದೇವತೆ ನಾಗೇಶ. ಸಂರಕ್ಷಕ ದೇವಿ ಮಹಾಲಕ್ಷ್ಮಿ. ಇವರು ಸಾಷಷ್ಟಿಕಾರರು. ವೈಷ್ಣವರಿದ್ದ ಇವರು ಗೋಕರ್ಣ ಪರ್ತಗಾಳಿ ಮಠದ ಅನುಯಾಯಿಗಳು. ಈ ಕುಟುಂಬದ ಪುಂಡಲೀಕ ಕಾಮತ್, ೧೮೭೦-೧೯೦೦ರ ನಡುವೆ ಗೋವಾದಲ್ಲಿನ ಪೋರ್ಚುಗೀಸ್ ಸರಕಾರದ ಮಹಸೂಲು ವಿಭಾಗದ ಉಚ್ಚಾಧಿಕಾರಿಯಾಗಿದ್ದ. ಪನ್ವೇಲಿನಲ್ಲಿ ಕಾಮತ್ ವಾಘ್ ಇವರ ಪ್ರಸಿದ್ಧ ಮನೆತನವೊಂದಿದೆ. ಇವರು ಬಾರ್ದೇಶ್ಕಾರರಿದ್ದು ಭಗವತಿಯ ಆರಾಧಕರಾಗಿದ್ದಾರೆ. ಈ ಮನೆತನದ ಬಹುಗುಣ ಸದಾಶಿವ ಕಾಮತ್ ಗೋವಾದಲ್ಲಿ ವ್ಯಾಪಾರ ಮಾಡುತ್ತಿದ್ದ. ಈತ ೧೬೯೦ರಿಂದ ೧೭೨೮ರ ತನಕ ಪೋರ್ಚುಗೀಸ್ ಸರಕಾರದ 'ದುಭಾಷಿ' ಯಾಗಿದ್ದ. ಹಿರಿಯ ಮಗ ಅನಂತ ಬಹುಗುಣ ಕಾಮತ್ ಈತನ ಕಾಲಾನಂತರ ದುಭಾಷಿಯಾದ. (೧೭೨೮-೧೭೫೧) ಬಹುಗುಣ ಸದಾಶಿವ ಕಾಮತ್‌ನ ಎರಡನೆಯ ಮಗ ಸದಾಶಿವ ಬಹುಗುಣ ಕಾಮತ್ (೧೭೫೧-೧೭೮೫) ದುಭಾಷಿಯ ಪರಂಪರೆಯನ್ನು ಮುಂದುವರಿಸಿದ. ಈತ ಮರಾಠಾ ಮತ್ತು ಸೋಂಡೆ ಅರಸರೊಂದಿಗಿನ ಯುದ್ಧದ ಸಮಯ ಪೋರ್ಚುಗೀಸರಿಗೆ ಪೂರ್ಣ ಬೆಂಬಲವಿತ್ತ. ಮರಾಠಾ ರಾಜ್ಯಕರ್ತರು, ಮುಸಲ್ಮಾನ ಅರಸರು ಮತ್ತು ಬ್ರಿಟಿಷರೊಂದಿಗಿನ ಪೋರ್ಚುಗೀಸರ ಪತ್ರವ್ಯವಹಾರ ಈತನ ಹೆಸರಿನಲ್ಲಿ ನಡೆಯುತ್ತಿತ್ತು. ಪತ್ರವ್ಯವಹಾರದ ಕೌಶಲ್ಯಕ್ಕೆ ಮೆಚ್ಚಿದ್ದ ಹೈದರ್ ಆಲಿ ಈತನಿಗೆ ಸಾಂಕೇತಿಕ ಗೌರವದ

ರೂಪದಲ್ಲಿ 'ವಾಗ್ಚತುರ'ನೆಂಬ ಉಪಾಧಿಯನ್ನಿತ್ತ. ('ವಾಗ್ಚತುರ'ದ ಮೊಟಕುರೂಪ 'ವಾಗ್', 'ವಾಘ್' ಎಂಬುದನ್ನು ಕ್ರಮೇಣ ಅವರು ತಮ್ಮ ಕುಲನಾಮವಾಗಿ ಬಳಸಲಾರಂಭಿಸಿದರು.) ಪೋರ್ಚುಗೀಸ್ ಸರಕಾರ ಸದಾಶಿವ ಬಹುಗುಣ ಕಾಮತನನ್ನು ತಮ್ಮ ಸೇನೆಯ 'ಕೇಪ್ಟನ್'ನನ್ನಾಗಿ ನೇಮಿಸಿತು. ಸಾರಸ್ವತರಲ್ಲಿ ಈ ಹುದ್ದೆ ಕೊಂಡವರಲ್ಲಿ ಈತ ಮೊದಲ ವ್ಯಕ್ತಿ ಇದ್ದ. ಈತ ಫೊಂಡೆ, ಜಾಂಬವಲಿ, ಕಣ್ಕೋಣೆ, ಡಿಚೋಲಿ, ಸಾಂಖಳಿ ಮತ್ತು ಪೆಡ್ನೆ ಮಹಾಲುಗಳ ಆಡಳಿತಗಾರನಾಗಿದ್ದ. ೧೭೯೪ರಲ್ಲಿ ಈತನಿಗೆ 'ದುಬಾಷ್ ಸರ್ಕಾರ್' ಎಂಬ ಉಪಾಧಿಯನ್ನೀಯಲಾಯಿತು. ಈತ ಅತಿ ಪ್ರಸಿದ್ಧವಾದ 'ಗೋಮಾಂತಕಾಚಿ ಬಖರ್' ಎಂಬೀ ಗ್ರಂಥವನ್ನು ಬರೆದ. ಇದು ಪೋರ್ಚುಗೀಸರ ಮತ್ತು ಅವರ ಆಡಳಿತೆಯ ಕುರಿತಾದ, ಅಮೂಲ್ಯವೆನ್ನಲಾಗುವ ವಿವರಗಳನ್ನೀಯುತ್ತದೆ. ಇವನ ಬಳಿಕ ವಾಸುದೇವ ರಾಮಚಂದ್ರ ವಾಘ್ (೧೮೦೫-೧೮೨೪) ಮತ್ತು ಸಖಾರಾಮ್ ಕಾಮತ್ ವಾಘ್ (೧೮೨೪-೧೮೪೩) ಅಧಿಕಾರ ವಹಿಸಿದರು. ಸಖಾರಾಮ್ ಕಾಮತ್ ವಾಘ್‌ನಿಗೆ ಹಲವು ಭಾಷೆಗಳ ಜ್ಞಾನವಿತ್ತು. ೧೮೪೩ರಲ್ಲಿ ಈ ಹುದ್ದೆಯನ್ನು ಸಮಾಪ್ತಿಗೊಳಿಸಿದರು. ಈ ಕುಟುಂಬ ಅತ್ಯಮೂಲ್ಯವೆನ್ನಲಾಗುವ ಪತ್ರಗಳ, ಹಳೆಯ ನಾಣ್ಯಗಳ ದೊಡ್ಡ ಸಂಗ್ರಹಕೊಂಡಿದೆ.

೩. ಅವರ ಗೋತ್ರ ವತ್ಸ ಮತ್ತು ಕುಲದೇವಿ ಮಹಾಮಾಯಾ. ಸಾಷಷ್ಟಿಕಾರರಿದ್ದ ಇವರು ವೈಷ್ಣವರಿದ್ದು ಗೋಕರ್ಣ ಪರ್ತಗಾಳಿ ಮಠದ ಅನುಯಾಯಿಗಳಾಗಿದ್ದಾರೆ. ಗೋವಾದಲ್ಲಿನ ದೇವಸ್ಥಾನಗಳೊಂದಿಗೆ, ಗೋಕರ್ಣ ಮಠದ ಆಡಳಿತೆಯಲ್ಲೂ ಸುಧಾರಣೆ ಸೂಚಿಸಲು ಗೋವಾ ಸರಕಾರ ಪುರುಷೋತ್ತಮ ಬಾಬಾ ಕೇಂಕರೆ ಮತ್ತು ಗಿರಿಧರ ಶೆಣ್ಯೆ ಧೆಂಪೆ ಇವರನ್ನು ನಿಯುಕ್ತಿ ಮಾಡಿದಾಗ ಅವರು ಈ ಯೋಜನೆಗೆ ತಮ್ಮ ಮನಃಪೂರ್ವಕ ಬೆಂಬಲವಿತ್ತರು. ಮಾತ್ರ ಇದರ ಪರಿಣಾಮವಾಗಿ ಈ ಮೇಲಣ ಮನೆತನಗಳೆರಡರ ಮತ್ತು ಗೋಕರ್ಣ ಮಠದ ೧೮ನೇಯ ಗುರುಗಳಾದ ಪೂರ್ಣಪ್ರಜ್ಞ ತೀರ್ಥರು ಮತ್ತು ಅವರ ಉತ್ತರಾಧಿಕಾರಿಗಳ ನಡುವಣ ಸಂಬಂಧ ಬಿಗಡಾಯಿಸಿಕೊಂಡಿತು. ಗೋಕರ್ಣ ಮಠದ ಗುರುಗಳು ತೀವ್ರ ವಿರೋಧ ವ್ಯಕ್ತಪಡಿಸಿದಾಗ ಸರಕಾರ ಈ ಯೋಜನೆಯನ್ನು ರದ್ದು ಮಾಡಿತು.

೪. ಕೃಷ್ಣ ಗೋವಿಂದ ಶೆಣ್ಯೆ ಧೆಂಪೆಯ ಮಗಳು ಉಷಾಬಾಯಿ (ಸೀತಾಬಾಯಿ), ಅಂತ್ರುಜ್ ಮಹಾಲಿನ ಪ್ರಸಿದ್ಧ ಸ್ಮಾರ್ತ ಮನೆತನದ ಶಿವರಾಮ ಸಾಂತಿ ಶೆಣ್ಯೆ ಕುಂಡೈಕರನನ್ನು ವರಿಸಿದಳು. ಮೂಲತಃ ಈ ಮನೆತನ ಕೆಳೋಶಿಗೆ ಸೇರಿತ್ತು. ಅವರ ಗೋತ್ರ ಕೌಶಿಕ; ಕುಲದೇವಿ ಶಾಂತಾದುರ್ಗಾ. ಅವರು ಕವಳೆ ಮಠದ ಅನುಯಾಯಿಗಳು. ಈ ಕುಟುಂಬದ ಜಿವಾಜಿ ಶೆಣ್ಯೆಗೆ (೧೮೪೨-೧೯೦೦) 'ಸ್ಟೈಟ್' ಪದವಿಯನ್ನಿತ್ತು ಗೌರವಿಸಲಾಗಿತ್ತು.

ಪಂಜಿಮ್‌ನಲ್ಲಿಯೂ ಪ್ರಸಿದ್ಧ ಮ್ಹಾಮಾಯಿ ಕಾಮತರ ಕುಟುಂಬವೊಂದಿತ್ತು. ಅವರು ಮೂಲತಃ ಸಾಷಷ್ಟಿ ಗಿರದೋಳಿಗೆ ಸಂಬಂಧಿಸಿದವರಿದ್ದರು. ಅವರ ಗೋತ್ರ ವತ್ಸ; ಕುಲದೇವಿ ಮಹಾಮಾಯಾ. ಅವರು ಸಾಷಷ್ಟಿಯ ವೈಷ್ಣವರಿದ್ದು ಗೋಕರ್ಣದ ಪರ್ತಗಾಳಿ ಮಠದ ಅನುಯಾಯಿಗಳಾಗಿದ್ದರು. ಪೋರ್ಚುಗೀಸ್ ಗವರ್ನರ್ ಜನರಲ್‌ನ ಪಂಜಿಮ್‌ನಲ್ಲಿನ ಭವನದ ಸಮೀಪ ಮ್ಹಾಮಾಯಿ ಕಾಮತರ ಭವ್ಯ, ದಿವ್ಯ ಮನೆಯಿದೆ.

ಅಧ್ಯಾಯ ೨೦

ಕೆಲವೊಬ್ಬ ಪ್ರತಿಷ್ಠಿತ ಸಾರಸ್ವತರು

ಸಾರಸ್ವತರು ಇಂಗ್ಲಿಷ್ ಶಿಕ್ಷಣಕ್ಕೆ ಆದ್ಯತೆ ಇತ್ತರು. ಅವರಲ್ಲಿನ ಎಷ್ಟೊಂದೋ ಮಂದಿ ತಾವು ಕೊಂಡ ಉದ್ಯೋಗಗಳಲ್ಲಿ ಪ್ರತಿಷ್ಠೆ ಗಳಿಸಿದರು. ಈ ಮುಂದಣವರು ಸಾರಸ್ವತ ಸಮಾಜದ ಪ್ರತಿಷ್ಠಿತ ವ್ಯಕ್ತಿಗಳಲ್ಲಿನ ಕೆಲವೊಬ್ಬರು:

ಕಾಶಿನಾಥ ತ್ರ್ಯಂಬಕ ತೆಲಂಗ್, ಸರ್ ನಾರಾಯಣ ಗಣೇಶ ಚಂದಾವರ್‌ಕರ್, ಸರ್ ಸೀತಾರಾಮ ಸುಂದರ ರಾವ್ ಪಾಟ್ಕರ್, ಸರ್ ಗೋವಿಂದ ರಾವ್ ದೀನಾನಾಥ ಮಡ್ಗಾಂವ್‌ಕರ್, ಐ.ಸಿ.ಎಸ್., ಸರ್ ಸಜಾಬಾ ಶಂಕರ ರಾಂಗ್ಣೇಕರ್, ಗಣಪತ್ ರಾವ್ ಸಖಾರಾಮ್ ರಾಜಾಧ್ಯಕ್ಷ, ಐ.ಸಿ.ಎಸ್., ಶ್ಯಾಮರಾವ್ ರಘುನಾಥ ತೆಂಡುಲ್ಕರ್ ಮತ್ತು ರಾಜಾರಾಮ್ ಶ್ರೀಪಾದ ಬಾವ್ಡೆಕರ್, ಐ.ಸಿ.ಎಸ್., - ಬೊಂಬೇ ಉಚ್ಚನ್ಯಾಯಾಲಯದ ನ್ಯಾಯಾಧೀಶರು; ವೊಂಬತ್ಕೆರೆ ಪಾಂಡುರಂಗರಾವ್, ಐ.ಸಿ.ಎಸ್ ಮತ್ತು ಸರ್ ಕೆ. ಪಿ. ಲಕ್ಷ್ಮಣರಾವ್ - ಮದ್ರಾಸ್ ಉಚ್ಚ ನ್ಯಾಯಾಲಯದ ನ್ಯಾಯಾಧೀಶರು; ಹಟ್ಟಿಯಂಗಡಿ ಶಂಕರನಾರಾಯಣ ರಾವ್ - ಮೈಸೂರು ಉಚ್ಛ ನ್ಯಾಯಾಲದ ನ್ಯಾಯಾಧೀಶರು; ಎಮ್. ಜಿ. ನಾರಾಯಣ ರಾವ್ - ಟ್ರಾವಂಕೂರ್ ಉಚ್ಛ ನ್ಯಾಯಾಲಯದ ನ್ಯಾಯಾಧೀಶರು; ಸರ್ ವಸಂತರಾವ್ ನಾರಾಯಣ ದಾಭೋಳ್ಕರ್, ಸರ್ ವಿಟ್ಠಲನಾರಾಯಣ ಚಂದಾವರ್‌ಕರ್, ಸರ್ ಬೆನೆಗಲ್ ನರಸಿಂಗರಾವ್, ಸರ್ ಬೆನೆಗಲ್ ರಾಮರಾವ್, ಸದಾಶಿವ ಕಾನ್ಹೋಜಿ ಪಾಟೀಲ್ ಮತ್ತು ಯಶವಂತ ನಾರಾಯಣ ಸುಖ್ತಣ್‌ಕರ್, ಐ.ಸಿ.ಎಸ್.; ಇವರಲ್ಲಿನ ಹೆಚ್ಚಿನವರು ಪ್ರಶಾಸನಾಧಿಕಾರಿಗಳಾಗಿದ್ದರು. ಕೆಲವೊಬ್ಬರು ಭಾರತ ಸರಕಾರದ ಮಹತ್ವದ ಹುದ್ದೆ ಕೊಂಡವರಿದ್ದರು. ಬೊಂಬೇ ಮತ್ತು ಮದ್ರಾಸಿನಲ್ಲಿನ ಯಶಸ್ವಿ ಡಾಕ್ಟರರು ಸಾರಸ್ವತರಿದ್ದರು. ಇವರ ಹೊರತು ಅನ್ಯ ಕೆಲವೊಬ್ಬರು ಇನ್ನಿತರ ಕ್ಷೇತ್ರಗಳಲ್ಲಿ ಹೆಸರು ಗಳಿಸಿದವರಿದ್ದರು.

ಈ ಮುಂದಣ ವಿವರಗಳು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಕ್ರಿಯಾಶೀಲರಿದ್ದು ಹೆಸರು ಗಳಿಸಿದ್ದ ಸಾರಸ್ವತರಿಗೆ ಸಂಬಂಧಿಸಿವೆ :

ಮಹಾರಾಷ್ಟ್ರ

೧. ಭಟ್ಟೋಜಿ ದೀಕ್ಷಿತ[೧]

ಸಂಸ್ಕೃತ ಜಾಗೃತ ಭಾಷೆಯೊಂದಾಗಿದ್ದಾಗ ಪಾಣಿನಿಯ 'ಅಷ್ಟಾಧ್ಯಾಯಿ'ಯಲ್ಲಿನ ವ್ಯಾಕರಣ ಪದ್ಧತಿಯನ್ನರಿತು ಕೊಳ್ಳುವುದು ಸುಲಭವಿತ್ತು. ಆದರೆ 'ಪ್ರಾಕೃತ' ಅಸ್ತಿತ್ವಕ್ಕೆ ಬಂದಂತೆ ಅದು ಕಷ್ಟ ಸಾಧ್ಯವಾಗಿ ಕಾಣಬಂತು. ಇದರಿಂದ ೧೪ನೇ ಶತಮಾನಗಳ ಮಧ್ಯಂತರದ

ಕಾಲದಲ್ಲಿ ಸಂಸ್ಕೃತ ಭಾಷೆಯ ಅಭ್ಯಾಸವನ್ನು ಸುಲಭವಾಗಿಸಲು ಹಲವೊಂದು ಬಾರಿ ಪ್ರಯತ್ನ ಮಾಡಲಾಗಿತ್ತು. ಈ ದಿಶೆಯಲ್ಲಿ ಚಾಂದ್ರ, ಜೈನೇಂದ್ರ, ಶಾಕಟಾಯನ, ಹೇಮಚಂದ್ರ, ಕಾತಂತ್ರ, ಸಾರಸ್ವತ, ಭೋಪದೇವ ಮತ್ತೆ ಇನ್ನೂ ಕೆಲವೊಬ್ಬ ವೈಯಾಕರಣಿಗಳ ಪಂಥಗಳು ತಲೆಯೆತ್ತಿಕೊಂಡವು. ಹದಿಮೂರನೆಯ ಶತಮಾನದ ಮಧ್ಯಭಾಗದಲ್ಲಿ ಸಾರಸ್ವತ ಪಂಥದ ವೈಯಾಕರಣಿಗಳು ಪಾಣಿನಿಯ ವ್ಯಾಕರಣ ಶಾಸ್ತ್ರದಲ್ಲಿನ ಸುಮಾರು ನಾಲ್ಕು ಸಾವಿರ ಸೂತ್ರಗಳನ್ನು ೭೦೦ ಸೂತ್ರಗಳಿಗೆ ' ಕುಗ್ಗಿಸಿದರು. ಆದರೂ ಕಾತ್ಯಾಯನ, ಪತಂಜಲಿ, ಭರ್ತೃಹರಿ, ಕ್ಷೀರ ಸ್ವಾಮಿ, ಕೈಯಟ, ಹರದತ್ತ, ವಿಮಲಸಾರಸ್ವತ, ವಿಟ್ಠಲಾಚಾರ್ಯ, ಶೇಷಕೃಷ್ಣ ಮತ್ತು ಇತರರು ಪಾಣಿನಿಯ ಪದ್ಧತಿಯನ್ನುಳಿಸಿಕೊಳ್ಳಲು ಪ್ರಯತ್ನಿಸಿದರು. ಅರ್ಥ ಮಾಡಿಕೊಳ್ಳಲು ಸುಲಭವಿದ್ದ ನಿಮಿತ್ತ ಮಾಳವದ ಘಿಯಾಸುದ್ದೀನ್ ಖಿಲ್ಜಿ, ದಿಲ್ಲಿಯ ಸಲೀಮ್ ಶಾಹಸುರ್, ಮೊಗಲ್ ಸಾಮ್ರಾಟ ಜಹಾಂಗೀರ್, ಇವರೂ ಈ ಪದ್ಧತಿಗೆ ಉತ್ತೇಜನೆ ಇತ್ತರು. ವಿನಿದ್ದರೂ ಇದಕ್ಕೆ ಉಚ್ಚ ವರ್ಗದವರು ಮನಃಪೂರ್ವಕ ಮೆಚ್ಚುಗೆ ತೋರಿದ್ದರು. ಭಟ್ಟೋಜಿ ದೀಕ್ಷಿತರು ಈ ಪದ್ಧತಿಯನ್ನು ಬಂಗಾಲ ಮತ್ತು ಅದರ ಸುತ್ತಣ ಪ್ರದೇಶಗಳತ್ತ ಕೊಂಡೊಯ್ದರು. ಉತ್ತರ ಭಾರತದಲ್ಲಿ ಈ ಪದ್ಧತಿಯನ್ನು ಪುನಃ ಬಳಕೆಗೆ ತಂದರು.

ಶಾಹಜಹಾನ್‌ನ ಆಸ್ಥಾನದಲ್ಲಿದ್ದ ಪ್ರಸಿದ್ಧ ವಿದ್ವಾಂಸ, ಪಂಡಿತ ಜಗನ್ನಾಥ ರಾಯ್ ಇವರು ತನ್ನ 'ಮನೋರಮಾ ಕುಚಮರ್ದಿನಿ'ಯಲ್ಲಿ ಭಟ್ಟೋಜಿ ದೀಕ್ಷಿತರನ್ನು ಶೇಷಕೃಷ್ಣರ ಶಿಷ್ಯರೆಂದು ಉಲ್ಲೇಖಿಸಿರುತ್ತಾರೆ. ಇದರಿಂದ ಅವರು ೧೬ ಮತ್ತು ೧೭ನೇಯ ಶತಮಾನಗಳ ನಡುವಣ ಕಾಲಾವಧಿಯಲ್ಲಿ ಬಾಳಿದ್ದು, ೧೬೩೦ರ ಸುಮಾರಿಗೆ ಪ್ರಸಿದ್ಧಿಕೊಂಡಿದ್ದರೆಂಬುದು ತೋರಿಬರುತ್ತದೆ.

ಭಟ್ಟೋಜಿ ದೀಕ್ಷಿತರು (೧೫೬೮-೧೬೩೦) ರಾಜಮನೆತನಕ್ಕೆ ಸೇರಿದ್ದ ದೇವಸ್ಥಾನವೊಂದರ ಅರ್ಚಕರ ಕುಟುಂಬಕ್ಕೆ ಸಂಬಂಧಿಸಿದವರಿದ್ದರು; ಕ್ರಮೇಣ ಅವರಿಗೆ 'ದೀಕ್ಷಿತ'ರೆಂಬ ಉಪಾಧಿಯನ್ನೀಯಲಾಯಿತು. ತನ್ನ ಎಳೆವಯಸ್ಸಿನಲ್ಲಿ ಬನಾರಸಿಗೆ ತೆರಳಿದ್ದ ಇವರು ಶೇಷಕೃಷ್ಣರಿಂದ ಸಂಸ್ಕೃತ ಸಾಹಿತ್ಯದ ಶಿಕ್ಷಣಕೊಂಡು ತಜ್ಞರಾದರು. ಅವರು ಬನಾರಸಿನಲ್ಲಿನ ಪ್ರಸಿದ್ಧ ವಿದ್ವಾಂಸ ಅಪ್ಪಯ್ಯ ದೀಕ್ಷಿತರ ಪರಮ ಮಿತ್ರರಿದರು.

ಅವರ ಕೃತಿ 'ಸಿದ್ಧಾಂತ ಕೌಮುದಿ' ಅಪ್ಪಯ್ಯ ದೀಕ್ಷಿತರ ಪ್ರಶಂಸೆಕೊಂಡಿತ್ತು. ಸಂಸ್ಕೃತ ವ್ಯಾಕರಣದ ಕುರಿತಾಗಿ ವಿಪುಲವಾದ ಗ್ರಂಥಗಳು ಬರೆಯಲ್ಪಟ್ಟಿದ್ದಾದರೂ ಅವುಗಳಲ್ಲಿನ ಯಾವುದೊಂದೂ ಇದರಷ್ಟು ಸ್ಪಷ್ಟ ಮತ್ತು ಬೋಧಪ್ರದವಿರಲಿಲ್ಲ. ಸಂಸ್ಕೃತ ಮತ್ತು ಪಾಣಿನಿಯ ವ್ಯಾಕರಣದ ಅಭ್ಯಾಸಕ್ಕೆ ಇದು ಅತ್ಯುಪಯೋಗಿ ಎಂದು ಇಂದಿಗೂ ಭಾವಿಸಲಾಗುತ್ತದೆ. ಈ ಕೃತಿ ಅಸಂಖ್ಯ ಭಾಷ್ಯ, ಉಪಭಾಷ್ಯಗಳಿಗೆ ಕಾರಣವಾಯಿತು. ''ಇದು ಕ್ರಮೇಣ ಪಾಣಿನಿಯನ್ನೇ ಮೂಲೆಗೆ ತಳ್ಳಿತು; ಮತ್ತೆ ಅನ್ಯ ಪ್ರಾಚೀನ ವೈಯಾಕರಣಿಗಳನ್ನು, ಪ್ರಚಾರದಲ್ಲಿದ್ದ ಇನ್ನಿತರ ನವಪಾಂಥೀಯರನ್ನೂ ಒದ್ದೋಡಿಸಿತು'' ನುಡಿಯುತ್ತಾರೆ. ಭಟ್ಟೋಜಿ, ಪಾಣಿನಿ ಪಂಥದ ಕುರಿತು ಜನರಲ್ಲಿದ್ದ ಪೂರ್ವ ಕಲ್ಪಿತ ದುರಭಿಪ್ರಾಯ ದೂರಮಾಡುವಲ್ಲಿ ಸಫಲರಾದರೆಂದು ಹೇಳಲಾಗುತ್ತದೆ.

ತನ್ನ ಕೃತಿಗಳ ಮೇಲೆ ಅವರು ಸ್ವತಃ 'ಪ್ರೌಢ ಮನೋಹಾಮ' ಮತ್ತು 'ಬಾಲಮನೋಹಾಮ' ಎಂಬೀ ಟೀಕಾತ್ಮಕ ಗ್ರಂಥಗಳನ್ನು ಬರೆದರು. ಇವು ವ್ಯಾಕರಣದ ಅಭ್ಯಾಸಕ್ಕೆ ಅತ್ಯುಪಯುಕ್ತವಾದ ಕೈಪಿಡಿಗಳಂತಿವೆ. ಅವರು 'ವ್ಯಾಕರಣ ಭೂಷಣ' 'ಪಾಣಿನಿಯ ಧಾತು ಪಾಠ' 'ಲಿಂಗಾನುಶಾಸನ', 'ಆಶಾಂಚಿ ನಿರ್ಣಯ' ಮತ್ತು 'ಆನ್ಹಿಕ' ಎಂಬೀ ಸಣ್ಣ ಪುಸ್ತಕಗಳನ್ನು ಬರೆದರು. ಅವರು ಪಾಣಿನಿಯ ಅಷ್ಟಾಧ್ಯಾಯಿಯ ಮೇಲಕ್ಕೆ 'ಶಬ್ದ ಕೌಮುದಿ' ಎಂಬೀ ಬೃಹದ್ಭಾಷ್ಯ ಬರೆಯಲಾರಂಭಿಸಿದರು. ಆದರೆ ಅದು ಕೊನೆಗೊಳ್ಳುವ ಮುನ್ನವೇ ಅವರ ಅವಸಾನವಾಯಿತು.

೨. ಮಹೇಶ್ವರ ಭಟ್ಟ ಸುಖ್ತಣ್ಕರ್

ಮಹೇಶ್ವರ ಭಟ್ಟರ ಜನ್ಮ ೧೭೧೮ರಲ್ಲಿ ಮಾಶೆಲ್ (ಮಾರ್ಸೆಲ್) ನಲ್ಲಿನ ವೈದಿಕರ ಕುಟುಂಬವೊಂದರಲ್ಲಾಯಿತು; ಮಾಶೆಲ್, ಗೋವಾದಲ್ಲಿನ ಕುಂಭಾಗ್ ಜುವೆ ಕುದುರಿನಲ್ಲಿನ ಸಣ್ಣ ಹಳ್ಳಿಯೊಂದು [೨]. ತಂದೆ ರಾಮಚಂದ್ರ ಭಟ್ಟ ಸುಖ್ತಣ್‌ಕರರು ಅವರಿಗೆ ಸಂಸ್ಕೃತದ ಶಿಕ್ಷಣವಿತ್ತರು. ಪ್ರತಿಭಾವಂತರಿದ್ದ ಇವರು ತನ್ನ ಎಳವಯಸ್ಸಿನಲ್ಲೆ ನ್ಯಾಯ, ಮಿಮಾಂಸೆ, ವೇದಾಂತ, ಅಲಂಕಾರ, ಜ್ಯೋತಿಷ ಮತ್ತು ಇನ್ನಿತರ ಶಾಸ್ತ್ರಗಳಲ್ಲಿ ನಿಪುಣರಾದರು.

ಅಮರಕೋಶದ ಅಭ್ಯಾಸ ಮಾಡುವಾಗ ಅವರು ಅಲ್ಲಿನ ಶಬ್ದ ಸಂಗ್ರಹ ಅಪೂರ್ಣವಿದ್ದುದನ್ನು ಕಂಡರು. ಈ ಕಾರಣ ಅವರು ತ್ರಿಕಾಂಡ ಶೇಷ, ಧನಂಜಯ, ವಿಶ್ವಕೋಶ, ಮೇದಿನಿ, ಶಬ್ದಾರ್ಣವ, ಅಮರಮಾಲಾ, ರತ್ನಕೋಶ, ಹಲಾಯುಧ ಮುಂತಾದ ವಿಶಿಷ್ಟ ಕೃತಿಗಳ ಅಭ್ಯಾಸ ಮಾಡಿದರು. ತನ್ನ ಹನ್ನೆರಡನೆಯ ವಯಸ್ಸಿನಲ್ಲಿ ಅವರು ಪರಿಪೂರ್ಣವಿದ್ದ ಕೋಶವೊಂದನ್ನು ತಯಾರಿಸುವ ಯೋಜನೆ ಮಾಡಿದರು.

'ವಿಶ್ವ ಪ್ರಕಾಶ' (ಅನೇಕಾರ್ಥಕೋಶ) ಬರೆದು ಮಾನ್ಯತೆ ಪಡೆದ ಇವರು 'ದ್ವಿರೂಪ ಕೋಶ', 'ಏಕಾಕ್ಷರಿ ಕೋಶ' ಗಳನ್ನು ಬರೆದರು. ಮೂವತ್ತರ ವಯಸ್ಸಿನಲ್ಲಿ ಅಮರ ಕೋಶದ ಕುರಿತು 'ಅಮರವಿವೇಕ' ಟೀಕೆ ಬರೆದರು. ಅದನ್ನು ಸಂಸ್ಕೃತದ ವಿದ್ಯಾರ್ಥಿಗಳು ಈಗಲೂ ಉಪಯೋಗಿಸುತ್ತಿದ್ದಾರೆ. ಅವರು ವೇದಾಂತಕ್ಕೆ ಸಂಬಂಧಿಸಿದ 'ಸ್ವಾತ್ಮ-ದೀಪಿಕಾ' ಗ್ರಂಥವನ್ನು ಬರೆದರು. ಭಗವದ್ಗೀತೆ, 'ಅದ್ವೈತ ಮಕರಂದ', 'ವಾಕ್ಯ ಸುಧಾ', 'ಸಿದ್ಧಾಂತ ಚಂದ್ರಿಕ', 'ಮನೀಶಾ ಪಂಚಕ', ಶಂಕರಾಚಾರ್ಯರ 'ಷಟ್ಪದಿ' ಮುದ್ಗಲಾಚಾರ್ಯರ 'ಆರ್ಯಾಂವರ', 'ಮುಹೂರ್ತಮಾಲಾ'ದ ಮೇಲಣ (ಜ್ಯೋತಿಷಕ್ಕೆ ಸಂಬಂಧಿಸಿದ ಗ್ರಂಥ 'ಸೌಂದರ್ಯ ಬೋಧಿನಿ') ಇತ್ಯಾದಿಗಳ ಕುರಿತು ಅತ್ಯಪೂರ್ವವೆನ್ನಲಾಗುವ ಭಾಷ್ಯಗಳನ್ನು ಬರೆದರು; ತನ್ನ ಹದಿನೆಂಟನೆಯ ವಯಸ್ಸಿನಲ್ಲಿ ಭಾಗವತದ ಮೇಲಕ್ಕೆ ಭಾಷ್ಯ ಬರೆದಿದ್ದರು.

ಅವರು ಕುಶಲ ವೈಯಾಕರಣಿ ಮತ್ತು ಬಹುಮುಖ, ಪ್ರತಿಭಾವಂತ ಗ್ರಂಥ ಕರ್ತರಿದ್ದರು. ಅದೊಮ್ಮೆ ಕಾಶಿಯ ಪಂಡಿತರು ಶ್ಲೋಕಗಳೆರಡನ್ನು ಅರ್ಥವಿಸಿಕೊಳ್ಳಲು ಅಸಮರ್ಥರಾದಾಗ ಇವರನ್ನು ಅಮಂತ್ರಿಸಿದ್ದರು; ಇವರು ಅದಕ್ಕೆ ಹತ್ತು ಪುಟಗಳಷ್ಟರ ವಿವರಣೆಯನ್ನಿತ್ತರು. ತಮ್ಮ ಜ್ಞಾನ, ಪ್ರತಿಭೆಗಳ ಬಗೆಗೆ ಒಂದಿಷ್ಟೂ ಗರ್ವಕೊಂಡಿರದಿದ್ದ

ಇವರ ನಡವಳಿಕೆ, ಸ್ವಭಾವ ಸೌಮ್ಯ, ಸಾಮಾನ್ಯವಿತ್ತು. ಇವರು ೧೮೧೬ರಲ್ಲಿ, ತನ್ನ ೯೮ನೇಯ ವಯಸ್ಸಿನಲ್ಲಿ ತೀರಿಕೊಂಡರು.

೩. ತುಕಾರಾಮ ಬಾಬಾ ವರ್ದೆ

ತುಕಾರಾಮ ಬಾಬಾ ವರ್ದೆ ಇವರ ಜನ್ಮ ೧೫೭೧ರಲ್ಲಿ ಗೋವಾದ ಹಳ್ಳಿ ಮುಕ್ತೇಶ್ವರದಲ್ಲಿನ ಶ್ರೀಮಂತರ ಮನೆಯಲ್ಲಾಯಿತು. ಇವರು ತುಕಾರಾಮ, ರಾಮದಾಸ ಮತ್ತು ವಾಮನ ಪಂಡಿತರ ಸಮಕಾಲೀನರು. ಇವರ ಶಿಕ್ಷಣ ಮರಾಠಿ ಮತ್ತು ಸಂಸ್ಕೃತದಲ್ಲಾಯಿತು. ಸ್ವಲ್ಪ ಸಮಯ ಇವರು ವೇದಗಳ ಅಭ್ಯಾಸವನ್ನೂ ಮಾಡಿದ್ದರು.

ಧಾರ್ಮಿಕ ಮನೋವೃತ್ತಿ ಕೊಂಡು ಲೌಕಿಕ ವ್ಯವಹಾರಗಳತ್ತ ಅನಾಸಕ್ತಿ ತೋರುತ್ತಿರುವುದನ್ನು ಕಂಡ ತಂದೆ ಎಳವಯಸ್ಸಿನಲ್ಲೇ ಇವರ ವಿವಾಹ ಮಾಡಿದರು; ದುರ್ದೈವಕ್ಕೆ ಪತ್ನಿ ತೀರಿಕೊಂಡಾಗ ಪುನರ್ವಿವಾಹ ಮಾಡಿಕೊಳ್ಳಲು ನಕಾರವಿತ್ತರು. ತನ್ನ ಸಂಪತ್ತನ್ನು ಬಡವರಿಗೆ ಹಂಚಿ ಕಲಿಕಾಲವನ್ನು ಕವಳೆಯಲ್ಲಿ ಕಳೆದರು. ಅನಂತರ ಬನಾರಸಿಗೆ ತೆರಳಿದ ಇವರ ಕೊನೆಯ ದಿನಗಳ ಕುರಿತು ಯಾರೊಬ್ಬರೂ ಅರಿಯದಾದರು.

ಇವರು ಮರಾಠಿಯಲ್ಲಿ ಶ್ರೇಷ್ಠ ದರ್ಜೆಯ ಕವಿತೆಗಳನ್ನು ಬರೆದರು. ಭರ್ತೃಹರಿಯ ಶತಕಗಳ ಇವರ ಅನುವಾದ ಜನಪ್ರಿಯವಾದುದಾಗಿದೆ. ಇವರು ಬರೆದ ಭಕ್ತಿಗೀತೆಗಳನ್ನು ಗೋವಾದಲ್ಲಿ ಈಗಲೂ ಹಾಡುತ್ತಾರೆ.

ಇವರು ಆ ಮುಂದಣ ಕಾವ್ಯಾತ್ಮಕ ಕೃತಿಗಳನ್ನು ನಿರ್ಮಿಸಿದರೆನ್ನಲಾಗುತ್ತದೆ :

೧) ಅಜ್ಞಾಪದ್ಧತಿ, ೨) ವಿದ್ವತ್ ಪದ್ಧತಿ, ೩) ಶೌರ್ಯ ಪದ್ಧತಿ, ೪) ಅರ್ಥ ಪದ್ಧತಿ, ೫) ದುರ್ಜನ ಪದ್ಧತಿ, ೬) ಸಜ್ಜನ ಪದ್ಧತಿ, ೭) ಪರೋಪಕಾರ ಪದ್ಧತಿ, ೮) ಶೀಲ ಪದ್ಧತಿ, ೯) ದೈವ ಪದ್ಧತಿ, ೧೦) ಕರ್ಮ ಪದ್ಧತಿ, ೧೧) ಅನುಕ್ರಮೆ - ಸ್ತ್ರೀ ಪ್ರಸಂಗ, ೧೨) ಕಾಮಿನಿ ಪ್ರಶಂಸ, ೧೩) ಕಾಮಿನಿ ಗರ್ಹಣ, ೧೪) ಕಾಮಿನಿ ವಿಗರ್ಹಣ, ೧೫) ಷಡೃತು ವರ್ಣನ, ೧೬) ಆಶಾ ದೂಷಣ ಪದ್ಧತಿ, ೧೭) ಸಂಸಾರ ಪರಿಪದ್ಧತಿ, ೧೮) ಕಲಾ ಮಹಿಮ ಪದ್ಧತಿ, ೧೯) ಭೋಗ ಸ್ಥೈರ್ಯ ಪದ್ಧತಿ, ೨೦) ನಿತ್ಯಾನಿತ್ಯ ವಿಚಾರ ಪದ್ಧತಿ, ೨೧) ಶಿವಚರಣ ಪದ್ಧತಿ, ಮತ್ತು ೨೨) ಅವಧೂತಾಚಾರ್ಯ ಪದ್ಧತಿ.

೪. ಯೋಗಿರಾಜ ಸೋಹಿರೋಬನಾಥ ಅಂಬಿಯೆ

ಈ ತತ್ವಜ್ಞಾನಿ ಕವಿಯ ಜನ್ಮ ೧೭೧೪ರಲ್ಲಿ (ಆ ದಿನಗಳಲ್ಲಿ ಸಾವಂತವಾಡಿಯ ಭಾಗವಾಗಿದ್ದ) ಪೆಡ್ನೆ ಮಹಾಲಿನ ಬಂದಾದಲ್ಲಾಯಿತು. ಅವರ ತಂದೆ ಕುಲಕರ್ಣಿಗಳಾಗಿದ್ದರು. ಆರೋಗ್ಯ ಕೆಡಲಾರಂಭಿಸಿದ್ದ ನಿಮಿತ್ತ ಅವರು ತನ್ನ ವೃತ್ತಿಯನ್ನು ಬಿಟ್ಟರು; ಸೋಹಿರೋಬನಾಥ ತನ್ನ ಎಳವಯಸ್ಸಿನಲ್ಲೇ ತಂದೆಯ ಹುದ್ದೆ ಕೊಂಡು ಸುಮಾರು ೩೦ ವರ್ಷಗಳ ಕಾಲ ದುಡಿದರು. ಅದೊಮ್ಮೆ ಸಾವಂತವಾಡಿಯ ಸಾವಂತರು ಅಗತ್ಯದ ಕರೆಕಳುಹಿಸಿದ್ದ ನಿಮಿತ್ತ ಅವರಲ್ಲಿಗೆ ಹೋಗುತ್ತಿದ್ದಾಗ ದಾರಿಯಲ್ಲಿ ನಾಥ ಸಂಪ್ರದಾಯದ 'ಗಾಯ್ಬಿನಾಥರು ಕಾಣಿಸಿಕೊಂಡು ಅವರನ್ನು ಆಶೀರ್ವದಿಸಿದರು. ಆಗ ಅವರು ಆನಂದದಿಂದ

ಭಾವಪರವಶರಾದರು. ಇದು ಅವರ ಉದ್ಯೋಗದ ಮೇಲೆ ಗಂಭೀರವಾದ ಪರಿಣಾಮ ಮಾಡಿತು. ಸಾವಂತರನ್ನು ಕಂಡಬಳಿಕ ಇವರು ತನ್ನ ವೃತ್ತಿಯನ್ನು ತ್ಯಜಿಸಿದರು. ಮತ್ತು ತನ್ನ ಸಮಯವನ್ನು ಧಾರ್ಮಿಕ ಕಾರ್ಯಗಳಿಗೆ ಮೀಸಲಾಗಿಟ್ಟರು. ಅವರ ಮರಾಠಿ ಕೃತಿಗಳಲ್ಲಿ 'ಅಕ್ಷಯ ಬೋಧ', 'ಮಹಾದೇವಿ ಭಾವೇಶ್ವರಿ (೧೭೫೧)' 'ಪೂರ್ಣಾಕ್ಷರಿ' (೧೭೫೧) ಅಧ್ವಜಾನಂದ (೧೭೫೩), 'ಸಿದ್ಧಾಂತ ಸಂಹಿತ' (೧೭೫೬), ಪ್ರಸಿದ್ಧವಾದುವಾಗಿವೆ. ಇವುಗಳ ಹೊರತು ಅವರು ಅಭಂಗ, ಪದ್ಯ, ಆರತಿಗಳನ್ನೂ ಬರೆದಿದ್ದರು. ರಾಗಬದ್ಧವಿದ್ದ ಈ ಕೃತಿಗಳು ಹರಿದಾಸರ, ಪುರಾಣಿಕರ, ಗಾಯಕರ ಮೆಚ್ಚುಗೆಕೊಂಡಿದ್ದವು. ಅವುಗಳಲ್ಲಿನ ಕೆಲವು ಪ್ರಕಾಶಿಸಲ್ಪಟ್ಟವು.

೬೦ರ ವಯಸ್ಸಿನಲ್ಲಿ ಅವರು ತನ್ನಿಬ್ಬರು ಮಕ್ಕಳೊಂದಿಗೆ ಯಾತ್ರೆಗಾಗಿ ತೆರಳಿದರು; ಕಾಲ್ನಡಿಗೆಯಿಂದ ದಾರಿಸಾಗಬೇಕಾಗಿದ್ದ ಅವರು ಉಜ್ಜಯಿನಿ, ಪ್ರಯಾಗ, ಕಾಶಿ ಮತ್ತು ಉತ್ತರ ಭಾರತದಲ್ಲಿನ ಇನ್ನಿತರ ಕ್ಷೇತ್ರಗಳನ್ನು ಸಂದರ್ಶಿಸಿದರು. ೧೭೭೯ರಲ್ಲಿ ಅವರು ಗ್ವಾಲಿಯರ್‌ಗೆ ತೆರಳಿದರು; ಅಲ್ಲಿ ಜಿವ್ಬಾದಾದಾ ಕೇರ್ಕರ್, ಲಖ್ಬಾ ದಾದಾ ಲಾಡ್, ಭಯ್ಯಾ ಸಾಹಿಬ್ ಪಾಗ್ನಿಸ್, ಬಾಳೋಬಾತಾತ್ಯಾ ಪಿಂಗೆ ಮುಂತಾದವರು ಸರಕಾರದಲ್ಲಿನ ಮಹತ್ವದ ಹುದ್ದೆಯಲ್ಲಿದ್ದುದನ್ನು ಕಂಡರು. ಜಿವ್ಬಾ ದಾದಾ ಕೇರ್ಕರ್‌ರ ಅಪೇಕ್ಷೆಯ ಮೇರೆಗೆ ಮಹಾದ್ಜಿ ಸಿಂಧಿಯಾ ಅವರನ್ನು ದರ್ಬಾರಿಗೆ ಆದರದಿಂದ ಬರಮಾಡಿಕೊಂಡರು. ಅವರಿಂದ ಪ್ರಭಾವಿತರಾದ ಸಿಂಧಿಯಾ ಆಮೊದಲ್ಗೊಂಡು ತನ್ನೆಲ್ಲಾ ದಾಖಲೆ, ವ್ಯವಹಾರದ ಪತ್ರಗಳ ಅಗ್ರಭಾಗದಲ್ಲಿ 'ನಾಥ ಪ್ರಸನ್ನ' ಎಂಬೀ ಮಂಗಳಾಕ್ಷರಗಳನ್ನು ನಮೂದಿಸತೊಡಗಿದರು.

ಅವರು ಮತ್ತೊಮ್ಮೆ ಪಂಢರಾಪುರ, ದ್ವಾರಕಾ, ಓಂಕಾರೇಶ್ವರ, ಉಜ್ಜಯಿನಿ, ಅಯೋಧ್ಯೆ, ಮುಂತಾದ ಕ್ಷೇತ್ರಗಳ ಯಾತ್ರೆಗಾಗಿ ತೆರಳಿದರು. ಉಜ್ಜಯಿನಿಗೆ ಮರಳಿ ಮಹಾದ್ಜಿ ಸಿಂಧಿಯಾ ತನಗಾಗಿ ಕಟ್ಟಿಸಿದ ಮಠದಲ್ಲಿ ವಾಸಮಾಡತೊಡಗಿದರು. ಇಲ್ಲಿ ಹತ್ತು ವರ್ಷಗಳ ಕಾಲ ಉಳಿದಿದ್ದ ಇವರು ೧೭೯೪ರ ಒಂದು ರಾತ್ರಿ ಹೊರಬಿದ್ದು ಮತ್ತೆ ಕಾಣದಾದರು.

೫. ಶುಬಾನಂತ

ಇವರು ಶುಬಾನಂತ ಮತ್ತು ಶುಬಾನಂದ ಎಂಬೀ ಹೆಸರುಗಳಿಂದ ಪರಿಚಿತರಾಗಿದ್ದರು. ಇವರ ನಿಜವಾದ ಹೆಸರು ಸುಬಾ ಅನಂತ; ಅನಂತ ಅವರ ತಂದೆಯ ಹೆಸರಿತ್ತು[೫].

೧೮ನೇಯ ಶತಮಾನದಲ್ಲಿ ಅಂಕೋಲದಲ್ಲಿ ಇವರ ಜನ್ಮವಾಯಿತು. ಇವರು ಮಹಾಭಾರತವನ್ನು ಮರಾಠಿಗೆ ಭಾಷಾಂತರಿಸಿದರು. ಇದರಲ್ಲಿನ ಭೀಷ್ಮ ಪರ್ವ ಮತ್ತು ಉದ್ಯೋಗ ಪರ್ವಗಳಷ್ಟೆ ಈಗ ದೊರಕುತ್ತಿವೆ; ೧೭೬೪ರಲ್ಲಿ ಆದಿಪರ್ವವನ್ನು ಭಾಷಾಂತರಿಸಿದ್ದ ಇವರು ೧೭೬೬ರಲ್ಲಿ ಕಳಸದ ದೇವಸ್ಥಾನದಲ್ಲಿ ಭೀಷ್ಮಪರ್ವ ಅನುವಾದ ಪೂರ್ಣಗೊಳಿಸಿದರೆನ್ನಲಾಗುತ್ತದೆ. ತಾನು ಈ ಹಿಂದೆ ನಾಲ್ಕು ಪರ್ವಗಳ ಅನುವಾದ ಮಾಡಿದ್ದಿರುವುದಾಗಿ ಅವರು ಉದ್ಯೋಗ ಪರ್ವದಲ್ಲಿ ನುಡಿದಿರುತ್ತಾರೆ.

೬. ಆಚಾರ್ಯ ಧರ್ಮಾನಂದ ಕೋಸಂಬಿ

ಬೌದ್ಧ ಧರ್ಮದ ಪ್ರಸಿದ್ಧ ವಿದ್ವಾಂಸರಿದ್ದ ಇವರ ಪೂರ್ವಾಶ್ರಮದ ಹೆಸರು ಧೋಬಾ ಕೋಸಂಬಿ. ಗೋವಾದ ಮಡ್ಗಾಂವ್‌ನ ಸಮೀಪದಲ್ಲಿನ ಸಂಖಾವಳನಲ್ಲಿ ೧೮೭೬ರ ಅಕ್ಟೋಬರ್ ತಿಂಗಳ ೯ರಂದು ಇವರ ಜನ್ಮವಾಯಿತು. ಇವರ ಕುಟುಂಬ ಮೊದಲು ಸಾಷಷ್ಟಿಯಲ್ಲಿನ ಲೋಟ್ಲಿಯಲ್ಲಿ ವಾಸಮಾಡಿಕೊಂಡಿತ್ತು. ಆರ್ಥಿಕ ಬಿಕ್ಕಟ್ಟಿನ ನಿಮಿತ್ತ ಶಾಲೆಯ ಶಿಕ್ಷಣವನ್ನು ಮುಂದುವರಿಸಲಾರದ ಇವರು ಮನೆಯ ಬೇಸಾಯದಲ್ಲಿ ತನ್ನ ತಂದೆಗೆ ಸಹಾಯ ಮಾಡತೊಡಗಿದರು. ೧೮೯೧ರಲ್ಲಿ ಇವರ ವಿವಾಹವಾಯಿತು.

ವ್ಯಾಸಂಗ ನಿಷ್ಠರಿದ್ದ ಇವರಿಗೆ ಮಹಾರಾಷ್ಟ್ರದ ಪ್ರಸಿದ್ಧ ಸಂತ ತುಕಾರಾಮನ ಮತ್ತು ಗೌತಮ ಬುದ್ಧನ ಜೀವನ ಚರಿತ್ರೆಯನ್ನು ಓದುವ ಅವಕಾಶ ದೊರಕಿತು. ಬುದ್ಧನ ಚರಿತ್ರೆಯಿಂದ ಪ್ರಭಾವಿತರಾದ ಇವರು ತನ್ನ ಬದುಕನ್ನು ಬೌದ್ಧ ಧರ್ಮದ ಅಭ್ಯಾಸಕ್ಕೆ ಮುಡಿಪಾಗಿಡುವ ನಿರ್ಧಾರ ಮಾಡಿ ಪಾಲಿ ಗ್ರಂಥಗಳ ಅಧ್ಯಯನ ತೊಡಗಿದರು. ೧೮೯೯ರ ಡಿಸೆಂಬರ್ ತಿಂಗಳ ೨ರಂದು ಪೂನಾಕ್ಕೆ ತೆರಳಿ ಡಾಕ್ಟರ್ ಆರ್. ಜಿ. ಭಂಡಾರ್ಕರ್ ಇವರಿಂದ ತನ್ನ ಸಂದೇಹ, ಸಮಸ್ಯೆಗಳನ್ನು ಪರಿಹರಿಸಿಕೊಂಡರು. ಮುಂದೆ ಇಂದೋರ್, ಉಜ್ಜಯಿನಿ, ಗ್ವಾಲಿಯರ್‌ಗೆ ತೆರಳಿದರು. ಡಾಕ್ಟರ್ ದ್ವಾರಕಾನಾಥ್ ಶಂಕರ ವಾಘ್ ಇವರಿಂದ ಅವರಿಗೆ ಸ್ವಲ್ಪ ಧನಸಹಾಯ ದೊರಕಿತು. ಬನಾರಸಿಗೆ ತೆರಳಿದ ಅವರು ಅಲ್ಲಿ ಕೆಲಕಾಲ ಸಂಸ್ಕೃತದ ಅಭ್ಯಾಸ ಮಾಡಿದರು. ಅನಂತರ ಬುದ್ಧಗಯಾ, ನೇಪಾಳ ಮತ್ತು ಅನ್ಯ ಕೆಲವೊಂದು ಬೌದ್ಧ ವಿಹಾರಗಳನ್ನು ಸಂದರ್ಶಿಸಿದರು. ಪಾಲಿಯ ಅಭ್ಯಾಸ ಮಾಡಲಾಗದೆ ನಿರಾಶರಾದ ಇವರು ೧೯೦೨ರ ಮಾರ್ಚ್ ತಿಂಗಳ ೨ರಂದು ಕಲ್ಕತ್ತಾದ ಮಾರ್ಗವಾಗಿ ಸಿಲೋನಿಗೆ ತೆರಳಿದರು.

ಅಲ್ಲಿ ಸಿಂಹಳ ಲಿಪಿಯಲ್ಲಿ ಪಾಲಿಯನ್ನು ಕಲಿಸುತ್ತಿದ್ದ ಸುಮಂಗಲಾಚಾರ್ಯರ ನೇತೃತ್ವದಲ್ಲಿನ ವಿದ್ಯೋದಯ ವಿದ್ಯಾಲಯದಲ್ಲಿ ಪ್ರವೇಶಕೊಂಡರು; ಈ ಸಂಸ್ಥೆ ಪಾಲಿ ಮತ್ತು ಬೌದ್ಧ ಧರ್ಮದ ಅಭ್ಯಾಸ ಮಾಡಲಿಚ್ಛಿಸುವ ವಿದೇಶಿ ವಿದ್ಯಾರ್ಥಿಗಳನ್ನು ಆಕರ್ಷಿಸುತ್ತಿತ್ತು. ಅವರು ಬೌದ್ಧ ಧರ್ಮ ಸ್ವೀಕರಿಸಿ ಭಿಕ್ಕುಗಳಾಗಿ ಧರ್ಮಾನಂದನೆಂಬ ಹೆಸರನ್ನು ಪರಿಗ್ರಹಿಸಿದರು. ಅತ್ಯಲ್ಪ ಕಾಲದಲ್ಲಿ ಅವರು ಪಾಲಿಯಲ್ಲಿ ಪರಿಣತಿಕೊಂಡು ಸಿಂಹಳ ಲಿಪಿಯಲ್ಲಿನ ಪಾಲಿಯ ವಿಲಕ್ಷಣದೂ ಗ್ರಂಥಗಳ ಅಭ್ಯಾಸ ಮಾಡಿ ಬೌದ್ಧ ಧರ್ಮದ ಆಚಾರ್ಯರಾದರು. ೧೯೦೪ರಲ್ಲಿ ಸಿಲೋನನ್ನು ಬಿಟ್ಟು ಬರ್ಮಾಕ್ಕೆ ತೆರಳಿ ಅಲ್ಲಿ ತನ್ನ ಹೆಚ್ಚಿನ ಸಮಯವನ್ನು ಬೌದ್ಧ ದೇವಾಲಯಗಳಲ್ಲಿ ಕಳೆದು ೧೯೦೬ರ ಜೂನ್ ತಿಂಗಳ ೩೦ರಂದು ಕಲ್ಕತ್ತಾಕ್ಕೆ ಮರಳಿದರು.

೧೯೦೬ರ ಅಕ್ಟೋಬರ್ ತಿಂಗಳ ೨೫ರಂದು ಅವರು ಹೊಸದಾಗಿ ಆರಂಭಿಸಲ್ಪಟ್ಟ ಕಲ್ಕತ್ತಾ ನ್ಯಾಶನಲ್ ಕಾಲೇಜಿನಲ್ಲಿ ಪಾಲಿಯ ಪ್ರಾಧ್ಯಾಪಕರಾಗಿ ನೇಮಿಸಲ್ಪಟ್ಟರು. ಅಲ್ಲಿ ಅವರಿಗೆ ಪ್ರಾಧ್ಯಾಪಕರಿದ್ದ ಅರಬಿಂದೊ ಘೋಷರ ಸಂಪರ್ಕವಾಯಿತು. ೧೯೦೭ರ ಜುಲೈ ತಿಂಗಳಲ್ಲಿ ಅವರು ಕಲ್ಕತ್ತಾ ವಿಶ್ವವಿದ್ಯಾಲಯದಲ್ಲಿ ಪಾಲಿಯ ಪ್ರವಾಚಕರಾಗಿ ನೇಮಿಸಲ್ಪಟ್ಟರು.

ದಿವಂಗತ ಸರ್ ಸಯಾಜಿರಾವ್ ಗಾಯಕ್‌ವಾಡ್ ಇವರ ಶಿಷ್ಯವೇತನ ಕೊಂಡು ೧೯೦೮ರಲ್ಲಿ ಮಹಾರಾಷ್ಟ್ರಕ್ಕೆ ಮರಳಿ ಪೂನಾ ಮತ್ತು ಬೊಂಬೇಗಳಲ್ಲಿ ಕೆಲಸಕ್ಕೆ ತೊಡಗಿದರು. ಇಲ್ಲಿ 'ವಿಶುದ್ಧ ಮಾರ್ಗ', 'ಬುದ್ಧ ಧರ್ಮ ವ ಸಂಘ' ಗ್ರಂಥಗಳನ್ನು ಬರೆದರು. ಮತ್ತೆ 'ಬೋಧಿಚರ್ಯ'ವನ್ನು ಮರಾಠಿಗೆ ಅನುವಾದಿಸಿದರು.

ಅವರ ಅಗಾಧ ಪಾಂಡಿತ್ಯ ಹಾರ್ವರ್ಡ್ ಯುನಿವರ್ಸಿಟಿಯ ಸಂಸ್ಕೃತ ವಿಭಾಗದ ಜೇಮ್ಸ್ ಎಚ್. ವುಡ್ಸ್ ಇವರ ಲಕ್ಷ್ಯ ಸೆಳೆಯಿತು. ೧೯೧೦ರ ಎಪ್ರಿಲ್ ತಿಂಗಳ ೧೦ರಂದು ಅವರು ಹಾರ್ವರ್ಡ್ ಯುನಿವರ್ಸಿಟಿಯಲ್ಲಿನ ಪ್ರಾಧ್ಯಾಪಕ ಲೀನ್‌ಮನ್ ಇವರ ಕೈಕೆಳಗೆ ಕೆಲಸಮಾಡಲೆಂದು ಅಮೇರಿಕಕ್ಕೆ ತೆರಳಿದರು.

ಡಾ. ಆರ್. ಜಿ. ಭಂಡಾರ್ಕರ್‌ರ ಪ್ರಯತ್ನದಿಂದ ಬೊಂಬೇ ವಿಶ್ವವಿದ್ಯಾಲಯ ಪಾಲಿಯನ್ನು ಪ್ರತ್ಯೇಕ ಭಾಷೆಯೆಂದು ಪರಿಗಣಿಸಿದಾಗ ಅವರು ಅಮೇರಿಕಾದಿಂದ ಭಾರತಕ್ಕೆ ಮರಳಿದರು. ೧೯೧೨ರಿಂದ ೧೯೧೮ರ ನಡುವೆ ಅವರು ಪೂನಾದಲ್ಲಿನ ಫರ್ಗುಸನ್ ಕಾಲೇಜಿನಲ್ಲಿ ಪಾಲಿಯ ಅಧ್ಯಾಪಕರಾಗಿ ಪಾಠ ಹೇಳಿದರು. ಬೊಂಬೇ ವಿಶ್ವವಿದ್ಯಾಲಯ ಅವರನ್ನು ಪಾಲಿ ಭಾಷೆಯ ಪರೀಕ್ಷಕರನ್ನಾಗಿ ನೇಮಿಸಿತು. ಬೊಂಬೇಯಲ್ಲಿನ ಪಾಲಿ ಮತ್ತು ಅರ್ಧಮಾಗಧಿ ಶಿಕ್ಷಣದ ಹೊಣೆಗಾರಿಕೆ ಅವರ ಪಾಲಿಗೆ ಬಂದಿತು. ಪಾಲಿ ಮತ್ತು ಬೌದ್ಧ ಧರ್ಮದ ಅಭ್ಯಾಸಕ್ಕಾಗಿ ಅಸಂಖ್ಯ ವಿದ್ಯಾರ್ಥಿಗಳು ಅವರತ್ತ ಆಕರ್ಷಿತರಾದರು. ಭಾರತದಲ್ಲಿನ, ಆ ದಿನಗಳಲ್ಲಿನ ಪಾಲಿ ಪ್ರಾಧ್ಯಾಪಕರೆಲ್ಲಾ ಅವರ ವಿದ್ಯಾರ್ಥಿಗಳಾಗಿದ್ದರು.

೧೯೧೮ ಮತ್ತು ೧೯೨೨ರ ನಡುವಣ ಕಾಲದಲ್ಲಿ ಅವರು ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ತತ್ವಶಾಸ್ತ್ರದ ಅಧ್ಯಾಪಕರಾಗಿದ್ದರು. ಆಗ ಅವರು ಬೌದ್ಧ ಧರ್ಮ ಮತ್ತು ಪಾಲಿಯ ಕುರಿತು ಸಂಶೋಧನೆ ಮಾಡಿದರು. ೧೯೨೨ರಲ್ಲಿ ಅವರು ಮಹಾತ್ಮಾಗಾಂಧಿಯವರು ಸ್ಥಾಪಿಸಿದ ಗುಜರಾತ್ ವಿದ್ಯಾಪೀಠ ಸೇರಿ ಅಲ್ಲಿ ಪಾಲಿ ಶಿಕ್ಷಣವೀಯತೊಡಗಿದರು. ೧೯೨೩ ಮತ್ತು ೧೯೨೭ರ ನಡುವೆ ಅವರು ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ಮತ್ತೆ ಕೆಲಸಕ್ಕೆ ತೊಡಗಿದರು. ೧೯೨೮-೧೯೨೯ರ ಸಾಲಿಗೆ ಅವರು ಗುಜರಾತ್ ವಿಶ್ವವಿದ್ಯಾಲಯದ ಗೌರವ ಕಾರ್ಯದರ್ಶಿಗಳಾದರು; ೧೯೨೯ರಲ್ಲಿ ಲೆನಿನ್ ಗ್ರಾಡ್ ವಿಶ್ವವಿದ್ಯಾಲಯದಲ್ಲಿ ಪ್ರಾಚೀನ ಭಾರತದ ಇತಿಹಾಸ ಮತ್ತು ಸಂಸ್ಕೃತಿಗಳ ಉಪನ್ಯಾಸಕನ ಕೆಲಸ ಮಾಡಿದರು.

ಭಾರತಕ್ಕೆ ಮರಳುತ್ತಲೇ ಅವರು ಅಸಹಕಾರ ಚಳವಳಿಯಲ್ಲಿ ಭಾಗವಹಿಸಿದರು. ಮತ್ತೆ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿ ಕಾರಾಗೃಹಕ್ಕೆ ಹೋದರು. ೧೯೩೧ರಿಂದ ೧೯೩೬ ನಡುವೆ ಅವರು ಹಾರ್ವರ್ಡ್‌ನಲ್ಲಿದ್ದರು. ೧೯೩೬ರಲ್ಲಿ ಬನಾರಸ್ ಹಿಂದೂ ವಿಶ್ವವಿದ್ಯಾಲಯ ಸೇರಿ ಅಲ್ಲಿ 'ಹಿಂದೂ ಸಂಸ್ಕೃತಿ ಮತ್ತು ಅಹಿಂಸೆ' ಎಂಬ ಪುಸ್ತಕ ಬರೆದರು. ೧೯೩೭ರ ನಂತರ ಅವರು ತಮ್ಮ ಸಮಯವನ್ನು ಜಿ.ಡಿ. ಬಿರ್ಲಾ ಕಟ್ಟಿಸಿದ 'ಬಹುಜನ ವಿಹಾರ' ದಲ್ಲುಳಿದು ಅಲ್ಲಿನ ಕಾರ್ಯಕರ್ತರಿಗೆ ಬೌದ್ಧ ಧರ್ಮದ ಬೋಧನೆಯಿತ್ತರು. ೧೯೪೪ರಲ್ಲಿ ಅವರನ್ನು ಬೊಂಬೇ ವಿಶ್ವವಿದ್ಯಾಲಯದ ಕಲಾವಿಭಾಗದ ಅಧ್ಯಾಪಕ ವರ್ಗಕ್ಕೆ ನೇಮಿಸಲಾಯಿತು. ಅನೇಕ ಕಷ್ಟಗಳನ್ನು ಸಹಿಸಿ, ಎಡೆಬಿಡದೆ ದುಡಿಯುತ್ತಿದ್ದ ಇವರ ಆರೋಗ್ಯ ಹಾಳಾಗತೊಡಗಿತ್ತು.

ಸ್ವಯಿಚ್ಛೆಯಿಂದ ಆಜೀವ ಉಪೋಷಣೆಗೆ ತೊಡಗಿದ ಇವರು ವಾರ್ಧಾದ ಸೇವಾಶ್ರಮದಲ್ಲಿ ೧೯೪೭ರ ಜೂನ್ ತಿಂಗಳ ೪ರಂದು ತೀರಿಕೊಂಡರು; ಮರುದಿನ, ದಿಲ್ಲಿಯಲ್ಲಿದ್ದ ಗಾಂಧೀಜಿಯವರು ತಮ್ಮ ಪ್ರಾರ್ಥನಾ ಸಭೆಯಲ್ಲಿ ಇವರ ಗುಣಗಾನ ಮಾಡಿ ಶ್ರದ್ಧಾಂಜಲಿ ಅರ್ಪಿಸಿದರು.

೧೯೪೭ರ ಜುಲೈ ತಿಂಗಳ ೫ರಂದು ಶ್ರೀ ಬಿ. ಜಿ. ಖೇರ್ ಇವರ ಅಧ್ಯಕ್ಷತೆಯಲ್ಲಿ ಜರಗಿದ ಸಾರ್ವಜನಿಕ ಸಭೆಯೊಂದರಲ್ಲಿ ಪಾಲಿ ಮತ್ತು ಬೌದ್ಧ ಧರ್ಮದ ಅಭ್ಯಾಸಕ್ಕಾಗಿ ವಿದ್ಯಾರ್ಥಿಗಳನ್ನು ಶಿಷ್ಯ ವೃತ್ತಿಯೊಂದಿಗೆ ಸಿಲೋನಿಗೆ ಕಳುಹಿಸುವ, ಪಾಲಿ ಭಾಷೆಯಲ್ಲಿನ ಪುಸ್ತಕಗಳನ್ನು ಸಂಗ್ರಹಿಸಿ ಅವನ್ನು ದೇವನಾಗರಿ ಲಿಪಿಯಲ್ಲಿ ಮುದ್ರಿಸುವ, ಹಿಂದಿ, ಮರಾಠಿ, ಗುಜರಾತಿ ಭಾಷೆಗಳಿಗೆ ಅನುವಾದಿಸುವ ಮತ್ತು ಇವರ ಸಮಗ್ರ ಕೃತಿಗಳನ್ನೊಟ್ಟುಗೂಡಿಸಿ ಪ್ರಕಾಶಿಸುವ ನಿರ್ಣಯಕೊಳ್ಳಲಾಯಿತು; ನಿರ್ಣಯಗಳನ್ನು ಕಾರ್ಯರೂಪಕ್ಕೆ ತರಲು ಸಮಿತಿಯೊಂದನ್ನು ನೇಮಿಸಿ ಶ್ರೀ ಪಿ.ಎಮ್. ಲಾಡ್, ಐ.ಸಿ.ಎಸ್, ಇವರನ್ನು ಅದರ ಕಾರ್ಯದರ್ಶಿಯನ್ನಾಗಿ ನೇಮಿಸಲಾಯಿತು. ಕೋಸಂಬಿಯವರಿಗೆ ಒಂದು ಗಂಡು ಮತ್ತು ಒಂದು ಹೆಣ್ಣು ಹೀಗೆ ಇಪ್ಪರು ಮಕ್ಕಳಿದ್ದರು. ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿನ ಕೆಲಸದ ನಿಮಿತ್ತ ಅಮೇರಿಕಕ್ಕೆ ಹೋಗುವಾಗ ಅವರ ಮಗಳು, ಮಾಣಿಕ್ ಧರ್ಮಾನಂದ ಕೋಸಂಬಿ ಕೂಡಾ ಅವರೊಂದಿಗೆ ಹೋಗಿದ್ದರು. ಅವರು ಕೇಂಬ್ರಿಡ್ಜ್ (ಮೆಸಚೂಸೆಟ್ಸ್) ನಲ್ಲಿನ ರ್‍ಯಾಡ್‌ಕ್ಲಿಫ್ ಕಾಲೇಜು ಸೇರಿ, ಜರ್ಮನ್ ಮತ್ತು ಫ್ರೆಂಚ್ ದ್ವಿತೀಯ ಭಾಷೆಗಳೊಂದಿಗೆ ತತ್ವಜ್ಞಾನ ಮತ್ತು ಮನೋವಿಜ್ಞಾನ ವಿಷಯಗಳನ್ನು ಕೊಂಡು ಅವುಗಳಲ್ಲಿ ಪರಿಣಿತರಾಗಿ ೧೯೨೯ರಲ್ಲಿ ಭಾರತಕ್ಕೆ ಮರಳಿದರು.

ಕೋಸಂಬಿಯವರ ಮಗ ಪ್ರಾಧ್ಯಾಪಕ ದಾಮೋದರ ಧರ್ಮಾನಂದ ಕೋಸಂಬಿ, ಹಾರ್ವರ್ಡ್ ವಿಶ್ವವಿದ್ಯಾಲಯದಿಂದ ಉತ್ತೀರ್ಣರಾದ ಖ್ಯಾತ ನಾಮ ಗಣಿತ ಶಾಸ್ತ್ರಜ್ಞರೊಬ್ಬರು. ಅವರ 'ಪಾತ್ ಜಿಯೊಮೆಟ್ರಿ ಅಂಡ್ ಆಪರೇಟರ್ಸ್,' ಕುರಿತಾದ ಸಂಶೋಧನೆ ಅತಿ ಮಹತ್ವವಾದುದು. ಬೆಂಗಳೂರಿನಲ್ಲಿನ 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸಾಯನ್ಸ್'ನ ಸಂಸ್ಥಾಪಕ ಸದಸ್ಯರಲ್ಲೊಬ್ಬರಾದ ಇವರಿಗೆ 'ಯುನೈಟೆಡ್ ನೇಶನ್ಸ್ ಎಡ್ಯುಕೇಶನಲ್ ಅಂಡ್ ಕಲ್ಚರಲ್ ಆರ್ಗನೈಸೇಶನ್' ಇದರ ಶಿಷ್ಯ ವೃತ್ತಿ ದೊರಕಿತು. ಇವರು ಪ್ರಿನ್ಸ್‌ಟನ್ ವಿಶ್ವವಿದ್ಯಾಲಯದ ಸಂದರ್ಶಕ ಪ್ರಾಧ್ಯಾಪಕರಾಗಿದ್ದರು.

೭. ದತ್ತಾತ್ರೇಯ ಬಾಲಕೃಷ್ಣ ಕಾಲೇಲ್ಕರ್ (ಕಾಕಾ ಕಾಲೇಲ್ಕರ್)

ದತ್ತಾತ್ರೇಯ ಕಾಲೇಲ್ಕರ್ ಇವರು ಬೆಳಗಾಂ ಜಿಲ್ಲೆಯಲ್ಲಿ ಸರಕಾರಿ ನೌಕರರಿದ್ದ ಬಾಲಕೃಷ್ಣ ಕಾಲೇಲ್ಕರ್ ಇವರ ಮೂರು ಮಕ್ಕಳಲ್ಲಿನ ಕೊನೆಯವರು. ೧೮೮೫ರ ಡಿಸೆಂಬರ್ ತಿಂಗಳ ೧ನೆಯ ತಾರೀಕಿನಂದು ಅವರ ಜನ್ಮವಾಯಿತು. ಚಿಕ್ಕಂದಿನಿಂದ ಅವರು ಧಾರ್ಮಿಕ ಮನೋವೃತ್ತಿ ಕೊಂಡವರಿದ್ದರು. ೧೮೯೭ರಲ್ಲಿ ಅವರು ಪಂಢರಪುರಕ್ಕೆ ಹೋಗಿದ್ದರು. ಅಲ್ಲಿ ಯಾತ್ರಿಕನೊಬ್ಬನ ಉತ್ಕಟ ದೈವಭಕ್ತಿ ಅವರ ಮನಸ್ಸಿನ ಮೇಲೆ ಗಂಭೀರ ಪರಿಣಾಮ ಮಾಡಿತು. ೧೮೯೮ರಲ್ಲಿ ಅವರು ಉತ್ತರ ಕನ್ನಡದ ಕಾರವಾರದಲ್ಲಿನ ಹಿಂದೂ ಶಾಲೆಯನ್ನು ಸೇರಿದರು. ಅತಿ ಚುರುಕು, ಬುದ್ಧಿವಂತ ಮತ್ತು ಒಳ್ಳೆಯ ನಡತೆಕೊಂಡಿದ್ದ ಇವರು ಗಣಿತದಲ್ಲಿ

ಅಭಿರುಚಿಕೊಂಡವರಿದ್ದರು. ಅವರು ತನ್ನ ಶಿಕ್ಷಣವನ್ನು ಪೂನಾದ ಫರ್ಗುಸನ್ ಕಾಲೇಜಿನಲ್ಲಿ ಮುಂದುವರಿಸಿದರು. ಅಲ್ಲಿ ಅವರಿಗೆ ಜಸ್ಟಿಸ್ ಎಮ್. ಜಿ. ರಾನಡೆ, ಸ್ವಾಮಿ ರಾಮತೀರ್ಥ, ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಅರಬಿಂದೊಘೋಷ್ ಇವರ ಕೃತಿಗಳ ಅಭ್ಯಾಸದ ಅವಕಾಶ ದೊರಕಿತು.

ಅವರು ೧೯೦೫ರ ಹೊತ್ತಿಗೆ ಪ್ರಸಿದ್ಧಿಗೆ ಬಂದಿದ್ದ ಸ್ವರಾಜ್ಯ, ಸ್ವದೇಶಿ ಚಳವಳಿಗಳಿಂದ ಪ್ರಭಾವಿತರಾದರು. ಬಿ.ಎ., ಪದವಿಕೊಂಡ ಇವರು ಬೆಳ್ಗಾಂನಲ್ಲಿನ ಗಣೇಶ ವಿದ್ಯಾಲಯ ಸೇರಿದರು. ಬೆಳ್ಗಾಂನಲ್ಲಿನ ವಕೀಲ ಶ್ರೀ ಗುಣಾಜಿಯುವರನ್ನು ಸೇರಿ ಮರಾಠಿಗೆ ಭಾಷಾಂತರಿಸಲ್ಪಟ್ಟ ಸ್ವಾಮಿ ರಾಮತೀರ್ಥರ ಕೃತಿಗಳನ್ನು ಪ್ರಕಾಶಿಸಿದರು.

ಆ ಬಳಿಕ ಎಲ್. ಎಲ್.ಬಿ., ಅಭ್ಯಾಸಕ್ಕಾಗಿ ಅವರು ಬೆಳ್ಗಾಂನ್ನು ಬಿಟ್ಟರು. ಈ ಬಾರಿಯ ವ್ಯಾಸಂಗದ ನಂತರ ಅವರು ಕಾಲೇಜನ್ನು ಬಿಟ್ಟರು. ಸ್ವಲ್ಪ ಕಾಲ ಅವರು ಮರಾಠಿ ದೈನಿಕ 'ರಾಷ್ಟ್ರಮತ'ದೊಂದಿಗೆ ಸಂಬಂಧವಿಟ್ಟುಕೊಂಡಿದ್ದರು. ಆಗ ಅವರನ್ನು ಬರೋಡಾದಲ್ಲಿನ ರಂಗನಾಥ ವಿದ್ಯಾಲಯವನ್ನು ಸೇರಲಾಗಿ ಆಮಂತ್ರಿಸಲಾಯಿತು. ಬ್ರಿಟಿಷ್ ಸರಕಾರ ಈ ಸಂಸ್ಥೆಯ ಕಾರ್ಯಕಲಾಪಗಳನ್ನು ಸಂಶಯ ದೃಷ್ಟಿಯಿಂದ ಕಾಣಲಾರಂಭಿಸಿದ ಪರಿಣಾಮವಾಗಿ ವಿದ್ಯಾಲಯವನ್ನು ಮುಚ್ಚಬೇಕಾಯಿತು.

ಆ ದಿನಗಳಲ್ಲಿ ಅವರ ಮನಃಸ್ಥಿತಿ ಅಸ್ವಸ್ಥವಿತ್ತು; ಭಾರತ್ತದಾದ್ಯಂತ ಪಾದಯಾತ್ರೆ ಮಾಡಿ, ಹಲವೊಂದು ಪವಿತ್ರ ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿ, ಹಿಮಾಲಯದಲ್ಲಿ ಹಲವೊಂದು ವರ್ಷಗಳ ಕಾಲ ಧ್ಯಾನ, ಚಿಂತನೆಗಳಲ್ಲಿ ಕಳೆದರು. ಮುಂದೊಂದು ದಿನ ಅವರು ಸಿಲೋನ್, ಬರ್ಮಾಗಳತ್ತ ತೆರಳಿದರು.

ಮರಳಿದ ಬಂದ ಅವರು ೧೯೧೮ರಲ್ಲಿ ಗಾಂಧೀಜಿಯುವರ ಸಬರ್ಮತಿ ಆಶ್ರಮ ಸೇರಿದರು. ಗಾಂಧೀಜಿಯುವರ ಆದರ್ಶಗಳ ನಿಷ್ಠಾವಂತರಿದ್ದ ಇವರು ಆಶ್ರಮದ ಕಾರ್ಯಕಲಾಪಗಳಲ್ಲಿ ನವಚೈತನ್ಯ, ಉತ್ಸಾಹ ತುಂಬಿದರು.

ಅವರು ಮೊದಲಿನಿಂದಲೇ ಗುಜರಾತ್ ವಿದ್ಯಾಪೀಠದೊಂದಿಗೆ ಸಂಬಂಧವಿಟ್ಟುಕೊಂಡಿದ್ದರು. ೧೯೨೭-೧೯೩೦ರ ನಡುವೆ ಅವರು ಅದರ ಉಪ-ಪ್ರಾಂಶುಪಾಲರಾದರು. ೧೯೨೨, ೧೯೩೦, ೧೯೩೨ ಮತ್ತು ೧೯೪೨ರಲ್ಲಿ ಅವರು ರಾಷ್ಟ್ರೀಯ ಆಂದೋಲನದಲ್ಲಿ ಭಾಗವಹಿಸಿದರು. ಮಹಾತ್ಮಾಗಾಂಧಿಯುವರು ಸೆರೆಮನೆಯಲ್ಲಿದ್ದ ದಿನಗಳಲ್ಲಿ ಅವರ 'ನವಜೀವನ' ಸಂಪಾದಿಸಿದರು.

ಗುಜರಾತಿ ಭಾಷೆಯನ್ನರಿತಿದ್ದ ಇವರು ಆ ಭಾಷೆಯಲ್ಲಿ ಹಲವೊಂದು ಪುಸ್ತಕಗಳನ್ನು ಬರೆದರು. ೧೯೪೨ರ ಜುಲೈ ತಿಂಗಳಲ್ಲಿ ಬೊಂಬೇ ಸರಕಾರ ಇವರನ್ನು ಮರಾಠಿ (ಬಾಲಬೋಧ) ಮತ್ತು ಗುಜರಾತಿ ಲಿಪಿಗಳ ಸುಧಾರಣೆಗಾಗಿ ಸ್ಥಾಪಿಸಿದ್ದ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಿತು.

೧೯೪೨ರ ಡಿಸೆಂಬರ್ ಮೊದಲ್ಗೊಂಡು ಅವರು "ಅಖಿಲ ಗಾಂಧಿ ಸ್ಮಾರಕ ನಿಧಿ'ಯ ಪರವಾಗಿ ಗಾಂಧೀಜಿಯುವರಿಗೆ ಸಂಬಂಧಿಸಿದ್ದ ಲೇಖನಗಳ ಸಂಗ್ರಹಕ್ಕಾಗಿ ವ್ಯಾಪಕ ಪ್ರವಾಸಕ್ಕೆ ತೊಡಗಿದರು.

೧೯೪೮ರ ನವೆಂಬರ್ ತಿಂಗಳಲ್ಲಿ ಇವರನ್ನು 'ಮರಾಠಿ ಗ್ರಂಥಾಲಯ ಪರಿಷದ್'ನ

ಅಧ್ಯಕ್ಷರನ್ನಾಗಿ ಚುನಾಯಿಸಿದರು. ೧೯೪೭ರಲ್ಲಿ ಬೊಂಬೇ ಸರಕಾರ ಇವರನ್ನು ಗುಜರಾತ್ ವಿಶ್ವವಿದ್ಯಾಲಯದ ನಿರ್ಮಾಣದ ಕುರಿತಾಗಿ ರಚಿಸಿದ ಸಮಿತಿಯ ಸದಸ್ಯನನ್ನಾಗಿ ನೇಮಿಸಿತು.

ಬೆಳ್ಗಾಂನಲ್ಲಿನ ಕಾಂಗ್ರೆಸ್ ಅಧಿವೇಶನದ ವೇಳೆ ಅವರು ತನ್ನ ಸೊತ್ತು ಮತ್ತು ಪೂರ್ವಜರ ಮನೆಯನ್ನು ಹರಿಜನೋದ್ಧಾರಕ್ಕಾಗಿ ದಾನವಿತ್ತರು.

೮. ಸರ್ ರಾಮಕೃಷ್ಣ ಗೋಪಾಲ ಭಂಡಾರ್ಕರ್, ಎಮ್.ಎ., ಪಿ.ಹೆಚ್.ಡಿ.

ರಾಮಕೃಷ್ಣ ಗೋಪಾಲ ಭಂಡಾರ್ಕರ್ ಇವರ ಜನನ ರತ್ನಾಗಿರಿ ಜಿಲ್ಲೆಯ ಮಾಲ್ವಣ್‌ನಲ್ಲಾಯಿತು. ಶಿಕ್ಷಣಕ್ಕಾಗಿ ಇವರು ಬೊಂಬೇಯ ಎಲ್ಫಿನ್ ಸ್ಟನ್ ಇನ್ಸ್ಟಿಟ್ಯೂಟನ್ನು ಸೇರಿದರು. ಕಷ್ಟಪಟ್ಟು ಅಭ್ಯಾಸ ಮಾಡಿದ ಇವರು ಪ್ರೌಢಶಾಲೆಯಲ್ಲಿನ ಅಂತಿಮ ಪರೀಕ್ಷೆಯಲ್ಲಿ ಪ್ರಥಮ ಸ್ಥಾನಕೊಂಡು ಉತ್ತೀರ್ಣರಾದರು; ಮುಂದಿನ ಶಿಕ್ಷಣವನ್ನು ಅಲ್ಲಿನ ಉಚ್ಚ ಶಿಕ್ಷಣದ ವಿಭಾಗದಲ್ಲಿ ಮುಂದುವರಿಸಿದರು. ನಾಮವಂತ ಪ್ರಾಧ್ಯಾಪಕರ ನೆರವು ಕೊಂಡು ಇವರು ಇಂಗ್ಲಿಷ್ ಸಾಹಿತ್ಯ, ಇತಿಹಾಸ, ಭೌತ ವಿಜ್ಞಾನ, ಗಣಿತ ಇತ್ಯಾದಿಗಳ ಅಭ್ಯಾಸ ಮಾಡಿದರು; ದಾದಾಭಾಯ್ ನೌರೋಜಿ ಇವರ ಪ್ರತಿಭೆ ಗ್ರಹಿಸಿದ್ದರು.

ಇವರು ಹಿರಿಯ ಪ್ರಾಧ್ಯಾಪಕನ ರೂಪದಲ್ಲಿ ಪೂನಾದ ಡೆಕ್ಕನ್ ಕಾಲೇಜನ್ನು ಸೇರಿದರು. ಅಲ್ಲಿ ಅವರು ನಾಮವಂತ ವಿದ್ವಾಂಸರ ಸಂಪರ್ಕಕ್ಕೆ ಬಂದು ಅವರ ನೆರವಿನಿಂದ ಸಂಸ್ಕೃತದ ಜ್ಞಾನಕೊಂಡರು.

ಸಂಸ್ಕೃತವನ್ನು ಐಚ್ಛಿಕ ವಿಷಯವಾಗಿಕೊಂಡ ಇವರು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿ ಬಿ.ಎ., ಪದವಿ ಸಂಪಾದಿಸಿದರು.

ಅನಂತರ ಹೈದರಾಬಾದ್ (ಸಿಂದ್)ನಲ್ಲಿ ಶಾಲೆಯೊಂದರ ಮುಖ್ಯೋಪಾಧ್ಯಾಯರಾದರು. ರತ್ನಾಗಿರಿಯಲ್ಲಿನ ಇಂಗ್ಲಿಷ್ ಶಾಲೆಯೊಂದು ಸರಿಯಾಗಿ ನಡೆಯದಿರುತ್ತಿದ್ದ ನಿಮಿತ್ತ ಆ ಶಾಲೆಯ ಮುಖ್ಯೋಪಾಧ್ಯಾಯರಾಗಿ ಅವರ ವರ್ಗಾವಣೆಯಾಯಿತು; ಅವರು ಈ ಶಾಲೆಯ ಸುಧಾರಣೆ ಮಾಡಿದರು. ಮತ್ತು ಅದನ್ನು ರದ್ದಾಗುವುದರಿಂದ ಉಳಿಸಿದರು.

ಆ ದಿನಗಳಲ್ಲಿ ಅವರು ಸಂಸ್ಕೃತ ಸಾಹಿತ್ಯದ ಅಭ್ಯಾಸ ಮುಂದುವರಿಸಿದ್ದರು. ಜ್ಞಾನ ವ್ಯಾಪ್ತಿಗಾಗಿ ಅವರು ತನ್ನ ವಿವೇಚಕ ಬುದ್ಧಿ ಮತ್ತು ಪಾಶ್ಚಿಮಾತ್ಯ ಸಂಶೋಧನೆಯ ಪದ್ಧತಿ ಬಳಸಿದರು. ವಿದ್ಯಾರ್ಥಿಗಳೊಂದಿಗಿನ ಅವರ ಸಂಬಂಧ ಸೌಹಾರ್ದಪೂರ್ಣವಿತ್ತು. ಸಂಸ್ಕೃತದ ಅಭ್ಯಾಸದೆಡೆಯಲ್ಲಿನ ಕಷ್ಟಗಳ ಅರಿವನ್ನು ತನ್ನ ಎಳವೆಯಲ್ಲೇ ಕೊಂಡಿದ್ದ ಅವರು ಅದರ ಪಾಠಗಳನ್ನು 'ಪ್ರಥಮ' ಮತ್ತು 'ದ್ವಿತೀಯ' ಎಂಬ ಪುಸ್ತಕಗಳೆರಡರಲ್ಲಿ ವಿಭಾಗಿಸಿ ಪ್ರಕಾಶಿಸಿದರು. ಬೊಂಬೇ ವಿಶ್ವವಿದ್ಯಾಲಯ ಅವರನ್ನು ಸಂಸ್ಕೃತದ ಪರೀಕ್ಷಕರನ್ನಾಗಿ ನೇಮಿಸಿತು.

೧೮೬೭ ಮತ್ತು ೧೮೭೨ರ ನಡುವಣ ಕಾಲಾವಧಿಯಲ್ಲಿ ಎಲ್ಫಿನ್‌ಸ್ಟನ್ ಕಾಲೇಜಿನಲ್ಲಿ ತೆರವಾಗಿದ್ದ ಸಂಸ್ಕೃತ ಪ್ರಾಧ್ಯಾಪಕರ ಸ್ಥಾನದ ಹೊಣೆಗಾರಿಕೆಯನ್ನು ತಾತ್ಕಾಲಿಕವಾಗಿ

ವಹಿಸಿಕೊಂಡರು. ೧೮೭೨ರಲ್ಲಿ ಈ ಸ್ಥಾನವನ್ನು ವಯಸ್ಸಿನಲ್ಲಿ ಕಿರಿಯರಿದ್ದ ಡಾ. ಪೀಟರ್ಸನ್ ಇವರಿಗೆ ಕೊಡಲಾಯಿತು.

೧೮೭೯ರಲ್ಲಿ ಅವರು ಪೂನಾದ ಡೆಕ್ಕನ್ ಕಾಲೇಜಿನಲ್ಲಿ ಸಂಸ್ಕೃತ ಪ್ರಾಧ್ಯಾಪಕರ ತಾತ್ಕಾಲಿಕ ಹೊಣೆಗಾರಿಕೆಕೊಂಡರು. ಜಸ್ಟಿಸ್ ಕೆ.ಟಿ. ತೆಲಂಗ್ ಇವರ ಹಸ್ತಕ್ಷೇಪದ ಪರಿಣಾಮ ಸ್ವರೂಪ 'ಇಂಡಿಯನ್ ಎಡ್ಯುಕೇಶನ್ ಸರ್ವಿಸ್' ಅವರನ್ನು ಅಧ್ಯಾಪಕರೆಂದು ನೇಮಿಸಿತು. ೧೮೯೩ರಲ್ಲಿ ಅವರು ನಿವೃತ್ತರಾದರು.

೧೮೭೩ ಮತ್ತು ೧೮೮೨ರ ನಡುವಣ ಕಾಲದಲ್ಲಿ ಅವರು 'ಸಿಂಡಿಕೇಟ್ ಆಫ್ ಬೊಂಬೇ ಯುನಿವರ್ಸಿಟಿ'ಯ ಸದಸ್ಯರಾಗಿದ್ದರು. ೧೮೭೪ರಲ್ಲಿ 'ಇಂಟರ್ ನ್ಯಾಶನಲ್ ಕೋಂಗ್ರೆಸ್ ಆಫ್ ಓರಿಯಂಟಲಿಸ್ಟ್' ಇವರನ್ನು ಲಂಡನ್ನಿಗೆ ಆಮಂತ್ರಿಸಿತು. ಗೃಹಕೃತ್ಯದ ಅಡಚಣೆಯ ನಿಮಿತ್ತ ಅವರು ಈ ಸಭೆಗೆ ತೆರಳಲು ಅಸಮರ್ಥರಾದರು. ೧೮೭೫ರಲ್ಲಿ 'ರೋಯಲ್ ಏಷ್ಯಾಟಿಕ್ ಸೊಸೈಟಿ'ಯ ಗೌರವ ಸದಸ್ಯರಾದರು. ೧೮೭೬ರಲ್ಲಿ ಅವರನ್ನು 'ವಿಲ್ಸನ್ ಫಿಲೋಲೊಜಿ ಲೆಕ್ಚರರ್‌ಶಿಪ್'ನ ಮೊದಲ ಉಪನ್ಯಾಸಕಾರನೆಂದು ನೇಮಿಸಲಾಯಿತು. ಸಂಸ್ಕೃತ ಮತ್ತು ಪ್ರಾಕೃತಗಳಲ್ಲಿ ಬಳಸಲಾದ ಭಾಷಾಶಾಸ್ತ್ರದ ನಿಚ್ಚಳ ನಿರೂಪಣೆ ಅವರ ಉಪನ್ಯಾಸದ ವೈಶಿಷ್ಟ್ಯವಿತ್ತು. ೧೮೭೯ರಲ್ಲಿ ಅವರು ಬೊಂಬೇಯ ಸಂಸ್ಕೃತ ಹಸ್ತಪ್ರತಿಗಳ ಸಂಶೋಧನೆಯ ಯೋಜನೆಯಲ್ಲಿ ಭಾಗವಹಿಸಿದರು. ಅವರ ಆರು ಸಂಪುಟಗಳಲ್ಲಿನ ವರದಿ ಪ್ರಾಚೀನ ಭಾರತದ ಇತಿಹಾಸದ ಕುರಿತಾದ ವೃತ್ತಾಂತಗಳ ಕಣಜವೊಂದಾಗಿತ್ತು. ೧೮೮೬ರಲ್ಲಿ ಭಾರತ ಸರಕಾರ ಅವರನ್ನು 'ಕಾಂಗ್ರೆಸ್ ಆಫ್ ಓರಿಯಂಟಲಿಸ್ಟ್'ನಲ್ಲಿ ಭಾಗವಹಿಸಲು ಪ್ರತಿನಿಧಿಯೊಬ್ಬನ ರೂಪದಲ್ಲಿ ವಿಯೆನ್ನಾಕ್ಕೆ ಕಳುಹಿಸಿತು. ಅಲ್ಲಿ ಅವರು ಸಂಸ್ಕೃತದ ಹಸ್ತಪ್ರತಿಗಳು ಮತ್ತು ಸಾಹಿತ್ಯದ ಕುರಿತಾದ ತನ್ನ ವ್ಯಾಪಕ ಮತ್ತು ಪಾಂಡಿತ್ಯ ಪೂರ್ಣವಿದ್ದ ವರದಿಯನ್ನು ಓದಿ ತೋರಿಸಿದರು. ಡಾ. ಭುಹ್ಲರ್ ಮುಂತಾದ ಪ್ರತಿಭಾವಂತರು ಅದಕ್ಕೆ ತಮ್ಮ ಮೆಚ್ಚಿಗೆ ತೋರಿಸಿದರು.

ಅವರನ್ನು 'ದಿ ಜರ್ಮನ್ ಓರಿಯಂಟಲ್ ಸೊಸ್ಯಾಟಿ', 'ಏಷಿಯಾಟಿಕ್ ಸೊಸ್ಯಾಟಿ ಆಫ್ ಇಟಲಿ' ಮತ್ತು 'ಅಮೇರಿಕನ್ ಓರಿಯಂಟಲ್ ಸೊಸ್ಯಾಟಿ' ಇವುಗಳ ಗೌರವ ಸದಸ್ಯನನ್ನಾಗಿ ಚುನಾಯಿಸಲಾಯಿತು. ೧೮೮೫ರಲ್ಲಿ ಗೋಟ್ಟಿಂಜೆನ್ ವಿಶ್ವವಿದ್ಯಾಲಯ 'ಡಾಕ್ಟರ್ ಆಫ್ ಫಿಲೋಸೊಫಿ' ಬಿರುದನ್ನಿತ್ತು ಸನ್ಮಾನಿಸಿತು. ೧೮೮೮ರಲ್ಲಿ ಅವರು ಸೈಂಟ್ ಪೀಟರ್ಸ್ ಬರ್ಗ್‌ನಲ್ಲಿನ ಅಕ್ಯಾಡಮಿ ಆಫ್ ಸಾಯನ್ಸ್‌ನ ಸದಸ್ಯರಾಗಿ ಚುನಾಯಿಸಲ್ಪಟ್ಟರು. ೧೮೮೯ರಲ್ಲಿ ಅವರಿಗೆ 'ಸಿ.ಐ.ಇ' (ಕಂಪ್ಯಾನಿಯನ್ ಆಫ್ ದಿ ಇಂಡಿಯನ್ ಎಂಪಾಯರ್) ಬಿರುದನ್ನೀಯಲಾಯಿತು.

೧೮೯೩ರಲ್ಲಿ ಜಸ್ಟಿಸ್ ಕೆ.ಟಿ. ತೆಲಂಗ್ ತೀರಿಕೊಂಡರು. ಆಗ ಅವರು ಬೊಂಬೇ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ ನೇಮಿಸಲ್ಪಟ್ಟರು. ೧೯೦೪ರಲ್ಲಿ ಕಲ್ಕತ್ತಾ ವಿಶ್ವವಿದ್ಯಾಲಯ, ಎಲ್.ಎಲ್.ಡಿ. (ಡಾಕ್ಟರ್ ಆಫ್ ಲಾ) ಬಿರುದನ್ನಿತ್ತು ಅವರನ್ನು ಗೌರವಿಸಿತು. 'ಬಾಂಬೇ ಲೆಜಿಸ್ಲೇಟಿವ್ ಕೌನ್ಸಿಲ್ಸ್' ಇಲ್ಲಿ ಅವರು ಸುಮಾರು ಒಂಭತ್ತು ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಅವರು ಬೆಂಗಳೂರಿನ 'ಇಂಡಿಯನ್ ಇನ್ಸ್ಟಿಟ್ಯೂಟ್

ಆಫ್ ಸಾಯನ್ಸ್' ನ ಅಧಿಕೃತ ಸಂದರ್ಶಕರಿದ್ದರು. ಅವರು ಪೂನಾದ 'ವಿಮೆನ್ಸ್ ಯುನಿವರ್ಸಿಟಿ'ಯ ಕುಲಪತಿ ಮತ್ತು 'ಡೆಕ್ಕನ್ ಎಜ್ಯುಕೇಶನ್ ಸೊಸೈಟಿ, ಪೂನಾ'ದ ಅಧ್ಯಕ್ಷರಾಗಿದ್ದರು. ೧೯೧೧ರಲ್ಲಿ ಕೆ.ಸಿ.ಐ.ಇ. 'ನೈಟ್ ಕಮಾಂಡರ್ ಆಫ್ ಇಂಡಿಯನ್ ಎಂಪಾಯರ್' ಬಿರುದನ್ನಿತ್ತು ಸನ್ಮಾನಿಸಲಾಯಿತು.

ಅವರು ಪರಮ ಧರ್ಮನಿಷ್ಠರಿದ್ದರು. ಪೂನಾದಲ್ಲಿ ವಾಸಿಸುತ್ತಿದ್ದ ಅವರು ಮಿತ್ರರಲ್ಲಿನ ಭಜನೆ ಮುಂತಾದ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಸಹಭಾಗಿಗಳಾಗುತ್ತಿದ್ದರು.

ಸಮಾಜ ಸುಧಾರಕರಾಗಿದ್ದ ಅವರು ಸ್ತ್ರೀ ಶಿಕ್ಷಣ, ಹಿಂದುಳಿದ ವರ್ಗದ ಉದ್ಧಾರ ಮುಂತಾದ ಸಾಮಾಜಿಕ ಕಾರ್ಯಗಳಿಗಾಗಿಯೂ ಪ್ರಸಿದ್ಧರಾಗಿದ್ದರು.

೧೮೬೭ರಲ್ಲಿ 'ಪ್ರಾರ್ಥನಾ ಸಮಾಜ' ಸ್ಥಾಪಿಸಲ್ಪಟ್ಟಿತು; ಜಸ್ಟಿಸ್ ಎಮ್.ಜಿ. ರಾನಡೆ ಮತ್ತು ಅವರು ಸಂಸ್ಥಾಪಕ ಸದಸ್ಯರಾಗಿದ್ದರು.

ಸಂಸ್ಕೃತದ ಸಂಶೋಧನೆಗೆ ಮಹಾರಾಷ್ಟ್ರದಲ್ಲಿ ಸಾಕಷ್ಟು ಪ್ರತಿಭಾನ್ವಿತರಿದ್ದುದನ್ನು ಇವರು ಕಂಡಿದ್ದರು; ಅವರೆಲ್ಲರನ್ನು ವಿದ್ವಾಂಸರಿಂದ ತರಬೇತು ಮಾಡಿಸಿ ಸಂಸ್ಕೃತದ ಸಂಶೋಧನೆಗೆ ಅನುವೊದಗಿಸಲು ಉತ್ಸುಕತೆ ತೋರಿದರು. ಅವರ ಹಳೆ ವಿದ್ಯಾರ್ಥಿಗಳು, ಅಭಿಮಾನಿಗಳು ಮುಂತಾದವರು ಸೇರಿ ಪೂನಾದಲ್ಲಿ 'ಭಂಡಾರ್ಕರ್ ರಿಸರ್ಚ್ ಇನ್ಸ್ಟಿಟ್ಯೂಟ್'ನ್ನು ಸ್ಥಾಪಿಸಿದರು. ಸರ್ವಾನುಮತಿಯಿಂದ ಇವರನ್ನು ಅದರ ಅಧ್ಯಕ್ಷರನ್ನಾಗಿ ನೇಮಿಸಿದರು. ಅವರು ವೈಯಕ್ತಿಕವಿದ್ದ ಸುಮಾರು ೩೦೦೦ ಪುಸ್ತಕಗಳ ಸಂಗ್ರಹವನ್ನು ಸಂಶೋಧನೆಯುದ್ದೇಶಿಸಿ ಈ ಸಂಸ್ಥೆಗಿತ್ತರು.

ಸಂಸ್ಕೃತದ ಪ್ರಥಮ ಮತ್ತು ದ್ವಿತೀಯ ಪುಸ್ತಕಗಳ ಹೊರತಾಗಿ ಅವರು 'ಔಟ್‌ಲೈನ್ ಆಫ್ ವೈಷ್ಣವಿಸಮ್, ಶೈವಿಸಮ್ ಅಂಡ್ ಮೈನರ್ ರಿಲೀಜಿಯಸ್‌ಸೆಕ್ಟ್ಸ್' ಎಂಬ ಪುಸ್ತಕ ಬರೆದರು. ಹಾಗೆಯೇ 'ಅರ್ಲೀ ಹಿಸ್ಟರಿ ಆಫ್ ದಿ ಡೆಕ್ಕನ್' ಎಂಬ ಮೌಲಿಕ ಪುಸ್ತಕವನ್ನು ತಯಾರಿಸಿದರು. ಅವರ ಭವಭೂತಿಯ 'ಮಾಲತಿ ಮಾಧವ' ವಿವೇಚನಾತ್ಮಕ ವಿಮರ್ಶೆ, ಪಾಂಡಿತ್ಯಕ್ಕೆ ಪ್ರಸಿದ್ಧವಾಗಿದೆ. ಅವರು ಬರೆದ 'ಏಜ್ ಆಫ್ ಪತಂಜಲಿ', 'ಪತಂಜಲೀಸ್ ಮಹಾಭಾಷ್ಯ' 'ಏಜ್ ಆಫ್ ಮಹಾಭಾರತ', 'ವೇದ ಇನ್ ಇಂಡಿಯಾ' ಮತ್ತು 'ನಾಸಿಕ್ ಇನ್‌ಸ್ಕ್ರಿಪ್‌ಶನ್ಸ್' ಮುಂತಾದ ಲೇಖನಗಳು ವಿಭಿನ್ನ ನಿಯತ ಕಾಲಿಕಗಳಲ್ಲಿ ಪ್ರಕಾಶಿಸಲ್ಪಟ್ಟವು. ಇವರು 'ಇಂಡಿಯನ್ ಆ್ಯಂಟಿಕ್ವರಿ' ಗೂ ಲೇಖನಗಳನ್ನು ಬರೆದರು. ೧೯೧೧ರಲ್ಲಿ ೭೪ರ ವಯಸ್ಸಿನವರಿದ್ದ ಇವರು, ಬಹುಮಟ್ಟಿಗೆ ತನ್ನ ದೃಷ್ಟಿ ಕಳೆದು ಕೊಂಡಿದ್ದರು; ಆದರೂ ಎನ್‌ಸೈಕ್ಲೋಪೀಡಿಯ ಆಫ್ ದಿ ಇಂಡೋ-ಆರ್ಯನ್ ರಿಸರ್ಚ್‌ಗೆ ಬರೆಯುತ್ತಿದ್ದರು. ಈ ಪ್ರಭಾವಶಾಲಿ ಗ್ರಂಥದ ಕೆಲಸ ಮುಗಿಯುತ್ತಲೇ ಗ್ರಂಥಕಾರರು ಅವರಿಗೆ ಹಾರ್ದಿಕ ಕೃತಜ್ಞತೆ ಸಲ್ಲಿಸಿದರು.

೧೯೨೫ರ ಆಗಸ್ಟ್ ತಿಂಗಳ ೨೪ರಂದು (ಋಷಿ ಪಂಚಮಿಯ ದಿನ), ತನ್ನ ಮನೆಯಲ್ಲೇ ಅವರ ಅವಸಾನವಾಯಿತು. ಅವರಿಗೆ ಮೂರು ಗಂಡು ಮಕ್ಕಳಿದ್ದರು. ಅವರಲ್ಲಿನ ಡಾ. ಶ್ರೀಧರ ಪಂತ ಭಂಡಾರ್ಕರ್ ಇವರು ಬೊಂಬಾಯಿಯ ಎಲ್‌ಫಿನ್‌ಸ್ಟನ್ ಕಾಲೇಜಿನಲ್ಲಿ ಸಂಸ್ಕೃತದ ಪ್ರಾಧ್ಯಾಪಕರಾಗಿದ್ದರು. ಇನ್ನೊಬ್ಬರು, ಡಾ. ದೇವದತ್ತ ಆರ್.

ಭಂಡಾರ್ಕರ್, ಇವರು ಕಲ್ಕತ್ತಾ ವಿಶ್ವವಿದ್ಯಾಲಯದಲ್ಲಿ ಭಾರತೀಯ ಇತಿಹಾಸದ ಪ್ರಾಧ್ಯಾಪಕರಾಗಿದ್ದರು. ಮೂರನೆಯವರಿದ್ದ ಡಾ. ಪ್ರಭಾಕರ ಆರ್. ಭಂಡಾರ್ಕರ್, ಇಂದೋರಿನ ಆರ್ಟ್ಸ್ ಕಾಲೇಜಿನ ಪ್ರಾಧ್ಯಾಪಕರು, ಇಂದೋರ್ ಅರಮನೆಯ ವೈದ್ಯರು ಮತ್ತು ಸರಕಾರದ ಶಸ್ತ್ರ ಚಿಕಿತ್ಸಾ ತಜ್ಞರಿದ್ದರು.

ಸಂಶೋಧನೆ ಮತ್ತು ಸಂಸ್ಕೃತದಲ್ಲಿನ ಪಾಂಡಿತ್ಯ ಇವುಗಳಿಗೆ ಪ್ರಸಿದ್ಧರಾಗಿದ್ದ ಡಾ. ವಿಷ್ಣುಸೀತಾ ರಾಮ ಸುಖ್ತಣ್ಕರ್ (೧೮೫೭-೧೯೪೫) ಇವರು ಪೂನಾದಲ್ಲಿನ 'ಭಂಡಾರ್ಕರ್ ರಿಸರ್ಚ್ ಇನ್ಸ್ಟಿಟ್ಯೂಟ್' ನಲ್ಲಿ ಕೆಲಸಕ್ಕಿದ್ದರು. ಇವರ ಮಹಾಭಾರತದ ಗದಾಪರ್ವ, ವನಪರ್ವ, ಉದ್ಯೋಗ ಪರ್ವ ಮತ್ತು ಅರಣ್ಯ ಪರ್ವಗಳ ಭಾಷಾಂತರ ಅಪ್ರತಿಮವಿತ್ತು. ಪಂಡಿತೋಚಿತ ನಿರೂಪಣೆಯ, ಅತ್ಯಪೂರ್ವ ಮಾದರಿಯೊಂದಾಗಿದ್ದ ಅವರ ಕೊನೆಯ ಕೃತಿ, ವಿಮರ್ಶೆ ಮತ್ತು ಸಂಶೋಧನೆಗಳ ಕ್ಷೇತ್ರದಲ್ಲಿ ನವಯುಗದ ಉದಯ ಸೂಚಿಸುತ್ತಿರುವುದಾಗಿ ನುಡಿಯಲಾಗುತ್ತದೆ.

೯. ಹರಿಬಾ ಲಾಡ್

ಹರಿಬಾ ಲಾಡ್ ಇವರು ಸತಾರಾದ ಛತ್ರಪತಿಗಳ ಆಸ್ಥಾನದಲ್ಲಿನ ಪ್ರಸಿದ್ಧ ಗಾಯಕರಾಗಿದ್ದರು.

೧೦. ಮಂಗೇಶರಾವ್ ರಾಮಕೃಷ್ಣ ತೆಲಂಗ್

ಮಂಗೇಶರಾವ್ ಇವರ ಜನ್ಮ ಕಾರ್ವಾರ ತಾಲೂಕಿನ ಬಾಡ್ ಎಂಬಲ್ಲಿ ೧೮೫೯ರ ಅಗಸ್ಟ್ ತಿಂಗಳ ೨೫ರಂದಾಯಿತು. ಅವರ ತಂದೆ ರಾಮಕೃಷ್ಣ ರಾವ್ ತಹಸೀಲುದಾರರೊಬ್ಬರಾಗಿದ್ದರು. ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದ ಇವರು ಬೊಂಬೇಗೆ ಹೋಗಿ ಅಲ್ಲಿ ಹೈಕೋರ್ಟಿನ ಅಪೀಲಿನ ವಿಭಾಗದಲ್ಲಿ ಕೆಲಸಕೊಂಡರು. ಕ್ರಮೇಣ ಮುಖ್ಯ ಶಿರಸ್ತೆದಾರರ ಪದಕ್ಕೇರಿದರು. ಮೂವತ್ತು ವರ್ಷಗಳ ಸೇವೆಯ ನಂತರ ೧೯೧೪ರಲ್ಲಿ ನಿವೃತ್ತರಾದರು. ಸ್ವತಹಾ ಉತ್ತಮ ಸಂಗೀತಕಾರರಾಗಿದ್ದ ಕಿರಿಯ ಸೋದರ ಪುರುಷೋತ್ತಮ ರಾವ್, ಇವರ ಪ್ರೋತ್ಸಾಹನೆಯ ಫಲವಾಗಿ ೧೮೭೭ರಲ್ಲಿ ಸಿತಾರ್ ವಾದ್ಯ ನುಡಿಸತೊಡಗಿದರು. ಕೆಲವೇ ವರ್ಷಗಳಲ್ಲಿ ಈ ವಾದ್ಯವನ್ನು ನುಡಿಸುವಲ್ಲಿ ಪ್ರಾವೀಣ್ಯಕೊಂಡರು. ೧೮೮೨ರಲ್ಲಿ ಪುರುಷೋತ್ತಮರಾವ್ ಇವರನ್ನು ಬರೋಡಾದಲ್ಲಿನ ಪ್ರಸಿದ್ಧ ವಾದಕರ ಸಭೆಗೆ ಕೊಂಡು ಹೋದರು. ಅಲ್ಲಿ ಅವರಿಗೆ ಆಲಿ ಹುಸ್ಸೇನ್ ಖಾನ್, ಪನ್ನಾಲಾಲ್ ಮಹಾರಾಜ್ ಮತ್ತು ಅಂದಿನ ದಿನಗಳಲ್ಲಿನ ಅನ್ಯ ಪ್ರಸಿದ್ಧ ವಾದಕರನ್ನು ಕಾಣುವ ಹಾಗೂ ಅವರು ವಾದ್ಯಗಳನ್ನು ನುಡಿಸುವುದನ್ನು ಕೇಳುವ ಸಂಧಿ ದೊರಕಿತು. ಅವರು ತಜ್ಞರಲ್ಲೊಬ್ಬರ ಶಿಷ್ಯರಾಗಿ ವೀಣೆ ಮತ್ತು ಸಿತಾರ್‌ಗಳನ್ನು ನುಡಿಸುವ ಕೌಶಲ್ಯಗಳಿಸಿದರು.

ಸೇವಾ ನಿವೃತ್ತಿಯ ಬಳಿಕ ಏಳೆಂಟು ಬಾರಿ ಸಂಚಾರಕ್ಕೆ ತೆರಳಿದ ಇವರನ್ನು ಬರೋಡಾ, ಗ್ವಾಲಿಯರ್, ಇಂದೋರ್, ಬಿಕಾನೇರ್, ಭಾವ ನಗರ, ರಾಧನ್‌ಪುರ, ಧರ್, ಜೈಪುರ್, ಕಾಶ್ಮೀರ್, ರಾಮ್‌ಪುರ್ ಮತ್ತು ಮೈಸೂರು ಇಲ್ಲಿನ ಅರಸರು ಸನ್ಮಾನಿಸಿ ಗೌರವಿಸಿದರು.

೧೯೨೦ರ ಅಕ್ಟೋಬರ್ ತಿಂಗಳಲ್ಲಿ ಮೈಸೂರಿನ ಅರಸು ಕೃಷ್ಣರಾಜೇಂದ್ರ ಒಡೆಯರ್, ಮಂಗೇಶರಾವ್ ರಾಮಕೃಷ್ಣ ತೆಲಂಗ್ ಇವರ ಕೌಶಲ್ಯ ಮತ್ತು ಇವರು ರಚಿಸಿದ ಸಂಸ್ಕೃತದಲ್ಲಿನ ಪದಗಳಿಗೆ ಮೆಚ್ಚುಗೆ ತೋರಿ 'ಹಣದ ಚೀಲ'ವನ್ನು ಬಹುಮಾನದ ರೂಪದಲ್ಲಿತ್ತರು; ಮತ್ತೆ ಸಂಗೀತ, ಸಾಹಿತ್ಯ, ಚಿತ್ರಕಲೆ ಮುಂತಾದವುಗಳಲ್ಲಿ ಪಾಂಡಿತ್ಯಕೊಂಡವರು ಅಪರೂಪವಾಗಿ ಕಾಣಬರುತ್ತಾರೆಂದು ಉದ್ಗಾರವೆತ್ತಿದರು.

ತೆಲಂಗ್, ರಾನಡೆ ಮುಂತಾದ ನ್ಯಾಯಾಧೀಶರು, ಮಹಾತ್ಮಾಗಾಂಧಿ, ಪಂಡಿತ್ ಮಾಲವೀಯ, ರವೀಂದ್ರನಾಥ ಠಾಗೋರ್, ಸರ್ ಮಾಲ್ಕಮ್ ಹೈಲಿ, ಲೋರ್ಡ್ ಲ್ಯಾಮಿಂಗ್ಟನ್, ಮುಂತಾದ ನಾಮವಂತ ವ್ಯಕ್ತಿಗಳು ಇವರ ವಾದನ, ಗಾಯನಕ್ಕೆ ಮೆಚ್ಚಿಗೆ ತೋರಿದ್ದರು. ಬನಾರಸ್ ವಿಶ್ವವಿದ್ಯಾಲಯ, ಕಾಶಿ ವಿದ್ಯಾಲಯ, ವಿಶ್ವ ಭಾರತಿ ಅವರಿಗೆ ಕ್ರಮವಾಗಿ 'ವೀಣಾವಿಶಾರದ', 'ವಿದ್ಯಾಸಾಗರ', 'ಶಾಸ್ತ್ರವಾಚಸ್ಪತಿ' ಎಂಬೀ ಉಪಾಧಿಗಳನ್ನಿತ್ತಿತು; ೧೯೩೧ರಲ್ಲಿ ಅಖಿಲಭಾರತೀಯ ಸಾರಸ್ವತ ಬ್ರಾಹ್ಮಣ ಸಮಿತಿ ಸ್ವರ್ಣಪದಕವನ್ನಿತ್ತು ಗೌರವಿಸಿತು.

ಸಂಗೀತ ಸಾಧನೆಯ ಬಳಿಕ ಉಳಿದ ಬಿಡುವಿನ ಹೊತ್ತನ್ನು ಸಂಸ್ಕೃತ ಸಾಹಿತ್ಯ, ತತ್ವ ಶಾಸ್ತ್ರಗಳ ಅಭ್ಯಾಸದಲ್ಲಿ ಕಳೆದರು. ಇವೆಲ್ಲವುಗಳ ನಡುವೆ ಸಾರಂಗ ದೇವನ ಸಂಗೀತ ರತ್ನಾಕರ, ಮಾಲತಿ ಮಾಧವ, ವಿಕ್ರಮೋರ್ವಶೀಯ ಮುಂತಾದ ಸಂಸ್ಕೃತದ ಕೃತಿಗಳನ್ನು ಪರಿಷ್ಕರಿಸಲಾರಂಭಿಸಿದರು. ವಿವಿಧ ವಿಷಯಗಳನ್ನಾಧರಿಸಿ ಅವರು ಸಂಸ್ಕೃತದಲ್ಲಿ ಕವಿತೆಗಳನ್ನು ರಚಿಸಿದರು; 'ಭಗವದ್ಗೀತಾಸಾರ' ಎಂಬ ಐವತ್ತು ಪಂಕ್ತಿಗಳ ಗೀತೆಯನ್ನು ಮರಾಠಿ ಭಾಷೆಯಲ್ಲಿ ಬರೆದರು. ಮರಾಠಿ ಭಾಷೆಯಲ್ಲಿನ ಅವರ ಸಣ್ಣ, ದೊಡ್ಡ ಕವಿತೆಗಳು 'ವಿವಿಧ ಜ್ಞಾನ ವಿಸ್ತಾರ' ಎಂಬೀ ಪತ್ರಿಕೆಯಲ್ಲಿ ಪ್ರಕಾಶಿಸಲ್ಪಟ್ಟವು; ಸಂಗೀತದ ಕುರಿತಾಗಿ ಹಲವೊಂದು ಲಘು ಲೇಖನಗಳನ್ನೂ ಬರೆದರು.

ಚದುರಂಗದ ಕುಶಲ ಆಟಗಾರರಿದ್ದ ಇವರು ಈ ಆಟದ ಮೇಲಣ ಪುಸ್ತಕವೊಂದನ್ನು ಸಂಪಾದಿಸಿದರು. ವರ್ಣ ಚಿತ್ರಕಾರರಾಗಿದ್ದ ಇವರು ತನ್ನ ಮುಪ್ಪಿನ ದಿನಗಳನ್ನು ಮನುಷ್ಯನ ಆಕೃತಿ, ನಿಸರ್ಗದ ದೃಶ್ಯಗಳನ್ನು ಚಿತ್ರಿಸುವುದರಲ್ಲಿ ಕಳೆದರು.

ಕೈ ತುಂಬ ಕೆಲಸವಿದ್ದಾಗಲೂ ಅವರ ದೇಶಸೇವೆ ಅಭಾದಿತವಿತ್ತು. ಅವರು ಕಾಂಗ್ರೆಸ್ಸಿನ ನಿಷ್ಠಾವಂತ ಸೇವಕರಿದ್ದರು. ಅವರು ಕೆಲವೊಂದು ಕಾಲ ಕಾರ್ವಾರದಲ್ಲಿ 'ಕೆನರಾ ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿ'ಯ ಅಧ್ಯಕ್ಷರಾಗಿದ್ದರು. ನಿವೃತ್ತರಾಗಿದ್ದ ಇವರು ಕಾರ್ವಾರದಲ್ಲಿ ನೆಲಸಿದರು.

೧೯೪೯ರ ಆಗಸ್ಟ್ ತಿಂಗಳ ೧೧ರಂದು ಅವರು ಕಾಲವಶರಾದರು.

ಕರ್ನಾಟಕ

೧೧. ಸಮರ್ಥ ಭಟ್ಕಳ ಅಪ್ಪಯ್ಯ

ಪ್ರಸಿದ್ಧ ಸಂತರೊಬ್ಬರಿದ್ದ ಅಪ್ಪಯ್ಯ ೧೭ನೆಯ ಮತ್ತು ೧೮ನೆಯ ಶತಮಾನಗಳ ನಡುವಣ ಕಾಲಾವಧಿಯಲ್ಲಿ ಬಾಳಿದರು. ಇವರು ಸಂತ ಶ್ರೇಷ್ಠ ಏಕನಾಥ, ರಾಮದಾಸ ಇವರ

ಸಮಕಾಲೀನರಿದ್ದರು. ಇವರ ನಿಜವಾದ ಹೆಸರು ಲಕ್ಷ್ಮಣ. ಇವರ ತಂದೆ ನಾಡ್ಕರ್ ರಾಮಯ್ಯ, ಉತ್ತರ ಕನ್ನಡದಲ್ಲಿನ ಭಟ್ಕಳದ ಶಾನುಭಾಗ(ಲೆಕ್ಕ ಪತ್ರ ನೋಡುವಾತ)ರಿದ್ದರು.

ಎಳವಯಸ್ಸಿನಲ್ಲೇ ಅವರು ಶಿಕ್ಷಣ, ಗಾಯನ, ವಾದನಗಳಲ್ಲಿ ಅಭಿರುಚಿ ತೋರಿದ್ದರು. ಚೆನ್ನಾಗಿ ಹಾಡಬಲ್ಲ ಇವರು ವೀಣೆ, ಸಾರಂಗಿ, ತಬಲೆ ಮುಂತಾದ ವಾದ್ಯಗಳನ್ನು ಅನಾಯಾಸ ನುಡಿಸಬಲ್ಲವರಿದ್ದರು. ರಾಮಾಯಣ, ಮಹಾಭಾರತ ಮತ್ತು ಭಾಗವತಗಳ ಅಭ್ಯಾಸ ಮಾಡಿದ್ದ ಇವರು ರಾಮಾಯಣದ ಪ್ರವಚನದಲ್ಲಿ ಅಭಿರುಚಿಕೊಂಡವರಿದ್ದರು. ಇವರ ಮನಃಸ್ಥಿತಿ ಪರಮಾರ್ಥದತ್ತ ಒಲವು ತೋರುತ್ತಿರುವುದನ್ನು ಕಂಡ ತಂದೆ ಭಾಗೀರಥಿ ಬಾಯಿಯೊಂದಿಗೆ ವಿವಾಹ ನೆರವೇರಿಸಿದರು.

ಇವರು ಸಾಮಾನ್ಯವಾಗಿ ಭಟ್ಕಳದ ಮಧ್ಯಭಾಗದಲ್ಲಿದ್ದ ಚೆನ್ನಪಟ್ಟಣ ಹನುಮಂತ ದೇವಸ್ಥಾನವನ್ನು ಸಂದರ್ಶಿಸುತ್ತಿದ್ದರು. ಒಮ್ಮೆ ವಿನಾಯಕ ಚತುರ್ಥಿಯಂದು ಇವರು ದೇವಸ್ಥಾನದ ಅಗ್ರಸಾಲೆಯಲ್ಲಿ ಬಡಸಾಧುವೊಬ್ಬನನ್ನು ಕಂಡು ಕನಿಕರ ಪಟ್ಟರು; ತಾನು ಮೂರು ದಿವಸದಿಂದ ಉಪವಾಸವಿದ್ದುದನ್ನು ತಿಳಿಸಿದಾಗ ಅವರು ಸಾಧುವನ್ನು ತನ್ನ ಮನೆಗೆ ಕೊಂಡುಹೋದರು. ಮನೆಯಲ್ಲಿ ತಂದೆ, ತಾಯಿ ವಿನಾಯಕನ ಪೂಜೆಯಲ್ಲಿ ವ್ಯಸ್ತರಿದ್ದುದನ್ನು ಕಂಡ ಇವರು ಸಾಧುವಿಗೆ ಉಣಬಡಿಸುವರೆ ತನ್ನ ಹೆಂಡತಿಗೆ ಹೇಳಿದರು. ಆಕೆ ಮನೆಮಂದಿಗಾಗಿ ತಯಾರಿಸಿದ ಊಟವನ್ನು ಸಾಧುವಿಗೆ ಬಡಿಸಿದಳಷ್ಟೆ ಅಲ್ಲ, ದೇವರ ನೈವೇದ್ಯಕ್ಕಾಗಿ ಪ್ರತ್ಯೇಕವಾಗಿಟ್ಟ ಖಾದ್ಯ ಪದಾರ್ಥಗಳನ್ನು ಆತನಿಗೆ ಬಡಿಸಿದಳು. ಅಪ್ಪಯ್ಯನ ಹೆತ್ತವರು ಅಪ್ಪಯ್ಯ ಮತ್ತು ಆತನ ಹೆಂಡತಿಗೆ ಶಿಕ್ಷೆಯಿತ್ತರು. ಮರುಕ್ಷಣವೇ ಬರಿದಾಗಿದ್ದ ಪಾತ್ರೆಗಳೆಲ್ಲವೂ ತಾನಾಗಿ ತುಂಬಿಕೊಂಡವೆಂದು ನುಡಿಯಲಾಗುತ್ತದೆ.

ಅಪ್ಪಯ್ಯ ಸಾಧುವನ್ನರಸಲಾಗಿ ಮನೆಯಿಂದ ಹೊರಬಿದ್ದರು. ಮರುದಿನ ಮುಂಜಾನೆ ಅವರು ಸಾಧುವನ್ನು ಮುರುಡೇಶ್ವರದಲ್ಲಿನ ಕಡಲ ಕರೆಯಲ್ಲಿ ಕಂಡರು. ಸಾಧು ಅಪ್ಪಯ್ಯನವರನ್ನು ಬೈಲೂರಿನಲ್ಲಿನ ಮಠಕ್ಕೆ ಹೋಗುವಂತೆ ಸೂಚಿಸಿದರು. ಅವರು ಅಲ್ಲಿಗೆ ಹೋದಾಗ ಸಾಧು ಮಠಾಧಿಪತಿ ವಿಮಲಾನಂದರಿದ್ದುದನ್ನು ಕಂಡರು.

ಈ ಘಟನೆಯಿಂದ ಅವರಿಗೆ ಜ್ಞಾನೋದಯವಾಯಿತು. ಅದರೊಂದಿಗೆ ಅವರಿಗೆ ಕವನ ರಚನೆಯ ವರಪ್ರಸಾದ ದೊರಕಿತು. ಅವರು ತನ್ನ ಸಮಯವನ್ನು ಮನೆ ಮತ್ತು ಮಠಗಳಲ್ಲಿ ಕಳೆಯತೊಡಗಿದರು. ತಂದೆಯ ಅವಸಾನಾನಂತರ ಪಾರಂಪಾರಿಕವಿದ್ದ ಶಾನುಭಾಗರ ವೃತ್ತಿಯನ್ನು ತನ್ನ ತಮ್ಮ ಮಂಗೇಶನಿಗೆ ವಹಿಸಿಕೊಟ್ಟರು. ಇದಾದ ನಂತರ ಸ್ವಲ್ಪ ಕಾಲದಲ್ಲೇ ಅವರ ಪತ್ನಿ ತೀರಿಕೊಂಡರು. ಆ ಬಳಿಕ ಅವರು ಮಠದಲ್ಲೇ ಉಳಿದುಕೊಂಡರು. ವಿಮಲಾ ನಂದರ ಅವಸಾನಾನಂತರ ಅವರು ಕನ್ನಡನಾಡಿನ ವಿಭಿನ್ನ ಕ್ಷೇತ್ರಗಳ ಯಾತ್ರೆ ಮಾಡಿದರು.

ಕೆಲವೊಂದು ಅಲೌಕಿಕ ಘಟನೆಗಳು ಅವರಿಂದ ಘಟಿಸಿಕೊಂಡವೆಂದು ಹೇಳಲಾಗುತ್ತದೆ :

ದಕ್ಷಿಣ ಕನ್ನಡದ ಧರ್ಮಸ್ಥಳದಲ್ಲಿನ ಮಂಜುನಾಥ ದೇವಸ್ಥಾನದ ಧರ್ಮ ಕರ್ತ

ವರದಯ್ಯ ಹೆಗ್ಗಡೆ ಕೇವಲ ಶ್ರೀಮಂತರನ್ನಷ್ಟೆ ಆದರಾತಿಥ್ಯಗಳಿಂದ ಬರಮಾಡಿಸಿಕೊಂಡು ಬಡಯಾತ್ರಿಕರನ್ನು ದುರ್ಲಕ್ಷಿಸುತ್ತಿದ್ದರೆನ್ನಲಾಗುತ್ತಿತ್ತು. ಆದೊಮ್ಮೆ ಶೂದ್ರ ಯಾತ್ರಿಕನೊಬ್ಬ ತಾನು ತಂದಿದ್ದ ತೆಂಗಿನ ಕಾಯಿಯನ್ನು ದೇವರಿಗೆ ಸಮರ್ಪಿಸಲು ದೇವಸ್ಥಾನದತ್ತ ಬಂದಾಗ ಅಲ್ಲಿ ತನ್ನ ನೆರವಿಗೆ ಬರುವ ಯಾರೊಬ್ಬನನ್ನೂ ಕಾಣದಾದ. ಇದರ ಪರಿಣಾಮ ಸ್ವರೂಪವೆಂಬಂತೆ ವರದಯ್ಯ ಹೆಗ್ಗಡೆಯವರು ತನ್ನ ಕಣ್ಣ ದೃಷ್ಟಿ ಕಳೆದುಕೊಂಡರು. ದೇವಸ್ಥಾನ ಸಂದರ್ಶಿಸಿದ ಅಪ್ಪಯ್ಯ ತನ್ನ ಪೂಜೆ ಸಲ್ಲಿಸಿ ದೇವರ ಸಾನ್ನಿಧ್ಯದಲ್ಲಿ ಕಳಕಳಿಯ ಈ ಪ್ರಾರ್ಥನೆ ಮಾಡಿದರು :

“ ರಕ್ಷಿಸೋ ವರದಯ್ಯನ ಕಣ್ಣಿಗೆ
ಸುಕ್ಷೇಮದಿ ದೃಷ್ಟಿಯಪ್ಪಂತೆ
ದಕ್ಷಿಣ ಕಾಶಿಯಂದೆನಿಪ ಕುಡುಮ
ಪುರಾಧ್ಯಕ್ಷನಾದ ಶ್ರೀಮಂಜುನಾಥ ದೇವಾ”

ಮತ್ತೆ ವರದಯ್ಯನವರನ್ನು ದೇವಸ್ಥಾನದ ಪ್ರದಕ್ಷಿಣೆಗೆ ಕೊಂಡು ಹೋದರು; ಸ್ವಲ್ಪ ಸಮಯದಲ್ಲೇ ವರದಯ್ಯ ತಮ್ಮ ದೃಷ್ಟಿಯನ್ನು ಮರಳಿ ಗಳಿಸಿದರು.

ಇನ್ನೊಂದು ಸಂದರ್ಭದಲ್ಲಿ, ನವರಾತ್ರಿಯಂದು ಗೋಕರ್ಣದ ಮಹಾಕಾಳಿ ದೇವಸ್ಥಾನದಲ್ಲಿರಬಯಸಿದ್ದ ಅಪ್ಪಯ್ಯ ನದಿದಾಟಲು ಕಡವಿನಲ್ಲಿ ಅಂಬಿಗ ಮತ್ತು ದೋಣಿ ಕಾಣದಾಗ ಕೈಯಲ್ಲಿನ ವೀಣೆಯೊಂದಿಗೆ ದೇವರ ಸ್ತುತಿ ಮಾಡುತ್ತಾ ನದಿ ದಾಟಿದರು.

ಮೂರನೆಯ ಸಂದರ್ಭದಲ್ಲಿ ಶೃಂಗೇರಿಯ ದೇವಿಯ ದರ್ಶನಕ್ಕಾಗಿ ತೆರಳಿದ ಇವರತ್ತ ಉಪೇಕ್ಷೆ ತೋರಿದಾಗ ಅವರು ಶಾರದಾಂಬೆಯ ಪ್ರಾರ್ಥನೆ ಮಾಡಿದರು. ಶಾರದಾಂಬೆ ಜಗದ್ಗುರುಗಳಿಗೆ ಸ್ವಪ್ನದಲ್ಲಿ ಕಾಣ ಬಂದಳು; ಉತ್ಸವದಂದು ಅವರಿಗೆ ಮಾನ ಮರ್ಯಾದೆಗಳನ್ನಿತ್ತು ಗೌರವಿಸಲಾಯಿತು.

ಉಚ್ಚ ಸ್ಥಾನದಲ್ಲಿದ್ದ ಸಾರಸ್ವತ ಅಧಿಕಾರಿಗಳು ಒತ್ತರಿಸಿದಾಗ, ನಗರದ ಅರಸು, ಮೊದಲನೆಯ ದಾಸಪ್ಪ ನಾಯಕ (೧೬೯೭-೧೭೦೪), ಅಪ್ಪಯ್ಯನವರನ್ನು ಅರಮನೆಗೆ ಆಮಂತ್ರಿಸಿದರು. ಅಪ್ಪಯ್ಯ ತನ್ನ ವೀಣೆಯೊಂದಿಗೆ ನೆಟ್ಟಗೆ ಅರಮನೆ ಸೇರಿದರು. ಆಸ್ಥಾನದಲ್ಲಿ ನೆರೆದಿದ್ದ ಶಾಸ್ತ್ರಿಗಳು, ವಿದ್ವಾಂಸರು, ಪಂಡಿತರು, ಕವಿಗಳು, ಆಚಾರಕ್ಕೆ ವಿರುದ್ಧವಾಗಿ ಬರಿಗೈಯಿಂದ ಅರಸನನ್ನು ಕಾಣ ಬಂದ ಅಪ್ಪಯ್ಯನನ್ನು ಕಂಡು ತೆಗಳಿದರು. ಅಪ್ಪಯ್ಯ ಮೂಲೆಯಲ್ಲಿ ತೂರಿದ್ದ ತೆಂಗಿನ ಚಿಪ್ಪನ್ನು ಕೊಂಡು ಅದರ ಮೇಲಕ್ಕೆ ‘ಸಂಕ್ಷಿಪ್ತ ರಾಮಾಯಣ’ ಎಂಬ ಕವಿತೆ ಬರೆದು ಅರಸನಿಗೆ ಅರ್ಪಿಸಿದರು; ಮೆಚ್ಚಿಕೊಂಡ ಅರಸು ‘ಅಪ್ಪಯ್ಯ ವರಕವಿ’ ಎಂಬ ಬಿರುದನ್ನಿತ್ತು ಅವರನ್ನು ಗೌರವಿಸಿದರು.

ಭಟ್ಕಳಕ್ಕೆ ಮರಳಿದ ಅವರು ತನ್ನ ಕೊನೆಯ ದಿನಗಳು ಸಮೀಪಿಸುತ್ತಿರುವುದರ ಅರಿವುಕೊಂಡರು. ಸನ್ಯಾಸಿಗಳಾಗಿದ್ದ ಅವರು ಕಾರ್ತಿಕ ಬಹುಳ ಚತುರ್ಥಿಯಂದು

ತೀರಿಕೊಂಡರು. ಅವರ ಸಮಾಧಿಯ ಮೇಲಕ್ಕೆ ಉಮಾಮಹೇಶ್ವರನ ಲಿಂಗವನ್ನು ಸ್ಥಾಪಿಸಲಾಯಿತು. ಅದು ಈಗ ಅವರ ಕುಟುಂಬಕ್ಕೆ ಸೇರಿದ್ದ ದೇವಸ್ಥಾನವಾಗಿದ್ದು ಉಮಾಮಹೇಶ್ವರ ಅಥವಾ ನಾಡ್ಕರ್ ದೇವಸ್ಥಾನವೆಂದು ಪರಿಚಿತವಾಗಿದೆ. ಇದನ್ನು ೧೯೦೦-೧೯೦೧ರಲ್ಲಿ ಉತ್ತರಕನ್ನಡದ ಹಲಿಯಾಳದ ನಾಡ್ಕರ್ ವೆಂಕಟ್ರಾವ್ ಮತ್ತು ವಿಧವೆಯಿದ್ದ ಅವರ ತಂಗಿ ಶಾಂತಾಬಾಯಿ, ಇವರಿಬ್ಬರು ಸೇರಿ ಕಟ್ಟಿಸಿದರು. ಅವರು ದೇವಸ್ಥಾನದಲ್ಲಿ ದತ್ತಾತ್ರೇಯನ ವಿಗ್ರಹವನ್ನೂ ಸ್ಥಾಪಿಸಿದರು. ಪ್ರಸಿದ್ಧ ಗೀತಕಾರರಾಗಿದ್ದ ಇವರು ಕನ್ನಡದಲ್ಲಿ ೪೫ ಮತ್ತು ಮರಾಠಿ ಮತ್ತು ಸಂಸ್ಕೃತಗಳಲ್ಲಿ ಎರಡೆರಡು ಗೀತೆಗಳನ್ನು ಬರೆದಿದ್ದು ಅವುಗಳ ಮೂಲಪ್ರತಿಯನ್ನು ಬೈಲೂರಿನ ಮಠದಲ್ಲಿ ಸುರಕ್ಷಿತವಾಗಿಡಲಾಗಿದೆ.

೧೨. ಗಾನವಿಶಾರದ ಬಿಡಾರ ಕೃಷ್ಣಪ್ಪ

೧೮ನೆಯ ಶತಮಾನದಲ್ಲಿ ಅಸ್ತಿತ್ವಕ್ಕೆ ಬಂದಿದ್ದ ಯಕ್ಷಗಾನ[೧೦], ಭಾರತದ ಸ್ಥಾನೀಯ ರಂಗಮಂಚಕ್ಕೆ ದಕ್ಷಿಣ ಕನ್ನಡದ ಅಪೂರ್ವ ಕೊಡುಗೆಯೊಂದಿತ್ತು ಯಕ್ಷಗಾನ ಸರ್ವಸಾಮಾನ್ಯವಾಗಿ ಪುರಾಣಗಳಲ್ಲಿನ ಕಥೆಗಳನ್ನಾಧರಿಸಿಕೊಂಡಿರುತ್ತಿದ್ದು ಮಲಬಾರಿನ ಕಥಕ್ಕಳಿಯನ್ನು ಹೋಲುತ್ತದೆ. ಅಲ್ಲಿ ಸಂಸ್ಕೃತ ಮತ್ತು ಅನ್ಯ ಭಾಷೆಗಳಲ್ಲಿನ ಆಲಂಕಾರಿಕ ಉದ್ಧರಣೆಗಳ, ಸಾತ್ವಿಕ ಭಾವನೆಯ, ತಾತ್ವಿಕ, ಧಾರ್ಮಿಕ ವಿಚಾರಗಳ, ಲೋಕಜ್ಞಾನದ ರೂಪ, ಪ್ರತಿರೂಪಗಳ ಸಮಾವೇಶವಿರುತ್ತಿತ್ತು; ಭಾರೀ ಪ್ರಮಾಣದಲ್ಲಿ ನೃತ್ಯವಿರುತ್ತಿದ್ದರೂ ಅದು ಅಭಿನಯಕ್ಕೆ ಯಾವೊಂದು ಬಗೆಯ ತಡೆಯೊಡ್ಡದಿತ್ತು. ವೇಷ, ಭೂಷಣ, ಅಲಂಕಾರಗಳು ಪ್ರಾಚೀನ ಕಾಲದ ಶಿಲ್ಪಕೃತಿಗಳ ಪಡಿಯಚ್ಚಿನಂತಿರುತ್ತಿದ್ದವು. ಆಧುನಿಕ ರಂಗಮಂಚಗಳಲ್ಲಿ ಬಳಸಲಾಗುತ್ತಿದ್ದ ತಂತ್ರಗಳ ನೆರವಿಲ್ಲದೆ ವಿಭಿನ್ನ ರಸ, ಭಾವಗಳನ್ನು ಅದಾವಬಗೆಯಲ್ಲಿ ಪ್ರದರ್ಶಿಸಬಹುದೆಂಬುದನ್ನು ಯಕ್ಷಗಾನ ತೋರಗೊಡುತ್ತದೆ.

ಯಕ್ಷಗಾನದ ಮೇಳಗಳು ದಕ್ಷಿಣ ಕನ್ನಡದಲ್ಲಿ ನಿರ್ದಿಷ್ಟ ದೇವಸ್ಥಾನಗಳ ಸಂಬಂಧ ಕೊಂಡಿರುತ್ತವೆ. ದಕ್ಷಿಣ ಕನ್ನಡದ ಸಾರಸ್ವತರಲ್ಲಿನ ಕೆಲವರು ಈ ಕಲೆಯ ಪ್ರೋತ್ಸಾಹಕರಾಗಿರುತ್ತಾರೆ. ಪೆರ್ಡೂರಿನ ಅನಂತಪದ್ಮನಾಭ ದೇವಸ್ಥಾನದ ಮೇಳ ೧೯೩೨ರಲ್ಲಿ ಮದ್ರಾಸನ್ನು ಸಂದರ್ಶಿಸಿದಾಗ, ದೀರ್ಘಾನುಭವಕೊಂಡಿದ್ದ ಮತ್ತು ದಕ್ಷಿಣಕನ್ನಡದಲ್ಲಿ ಶ್ರೇಷ್ಠ ಕಲಾವಂತರೆಂದು ಪ್ರಸಿದ್ಧಿ ಪಡೆದಿದ್ದ ಗಣಪತಿ ಪ್ರಭುಗಳು ತನ್ನ ನೃತ್ಯ, ಆಕರ್ಷಕ ಅಭಿನಯ, ಕತ್ತು, ಎದೆ, ಕೈಗಳೊಂದಿಗಿನ ಭಂಗಿ, ಕಣ್ಣುಗಳು ಪ್ರದರ್ಶಿಸುವ ವೈವಿಧ್ಯಪೂರ್ಣ ಭಾವಗಳಿಂದ ನೆರೆದ ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿಸಿದ್ದರು. ಅದೊಮ್ಮೆ ಇಮ್ಮಡಿ ಕೃಷ್ಣರಾಜೇಂದ್ರ ವೊಡೆಯರ್ (ಕೃಷ್ಣರಾಜ ೩) ಕ್ಷೇತ್ರದ ದರ್ಶನದ ನಿಮಿತ್ತ ಧರ್ಮಸ್ಥಳಕ್ಕೆ ಬಂದಾಗ, ದೇವಸ್ಥಾನದ ಧರ್ಮಕರ್ತರು ಯಕ್ಷಗಾನದ ಕಾರ್ಯಕ್ರಮಗಳಿಂದ ಅವರ ಮನೋರಂಜನೆ ಮಾಡಿದರು; ಮೆಚ್ಚಿಕೊಂಡ ಮಹಾರಾಜರು ಮೈಸೂರಿಗೆ

ಮರಳುತ್ತಲೇ ಮೇಳದ ಮುಖ್ಯಸ್ಥನಿದ್ದ ಶೇಶಪ್ಪನಿಗೆ ತನ್ನ ಮೇಳದ ಸಮೇತ ಮೈಸೂರಿನಲ್ಲಿ ನೆಲಸುವಂತೆ ಹೇಳಿದರು.

ಸಾರಸ್ವತ, ಶಿವಳ್ಳಿ, ಹವೀಕ ಬ್ರಾಹ್ಮಣರು, ಸ್ಥಾನಿಕರು, ನಾಡವರು ಹಾಗೂ ಇನ್ನಿತರ ವರ್ಗಗಳಿಗೆ ಸೇರಿದ, ದಕ್ಷಿಣ ಕನ್ನಡದ ಮೇಳಗಳೆಲ್ಲವುಗಳಲ್ಲಿನ ಸುಮಾರು ೬೦ ಅತ್ಯುತ್ತಮ ಕಲಾಕಾರರ ಹೊಸ ಮೇಳವೊಂದನ್ನು ಶೇಶಪ್ಪ ತಯಾರಿಸಿದರು; ತಮ್ಮ ಸಂಸಾರದೊಂದಿಗೆ ಮೈಸೂರಿಗೆ ತೆರಳಿದ ಮೇಳದ ಎಲ್ಲೊಬ್ಬರೂ ಅಲ್ಲೇ ನೆಲೆಗೊಂಡರು. ವೇತನದ ವ್ಯವಸ್ಥೆ ಮಾಡಿ ಅವರೆಲ್ಲರಿಗೆ ಮೈಸೂರಿನ ಶ್ರೀರಾಮ್ ಪೇಟ್‌ನಲ್ಲಿ ಮನೆಕಟ್ಟಲು ನಿವೇಶನಗಳನ್ನೀಯಲಾಯಿತು. ಅವರು ಮತ್ತು ಅವರ ವಂಶಜರು ಆಗಾಗ ಅರಮನೆಯಲ್ಲಿ ಯಕ್ಷಗಾನದ ಪ್ರಸಂಗಗಳನ್ನು ಆಡಿತೋರಿಸುತ್ತಿದ್ದರು. ಕೃಷ್ಣರಾಜರ ಉತ್ತರಾಧಿಕಾರಿಗಳಾಗಿದ್ದ ಚಾಮರಾಜೇಂದ್ರ ವೊಡೆಯರ್ ಇವರು ನಾಟಕಗಳಲ್ಲಿ ಅಭಿರುಚಿಕೊಂಡವರಿದ್ದರು. ಇವರು ಪ್ರಸಿದ್ಧವಾದ ಶ್ರೀ ಚಾಮರಾಜೇಂದ್ರ ಕರ್ನಾಟಕ ನಾಟಕ ಮಂಡಳಿಯನ್ನು ಸ್ಥಾಪಿಸಿದಾಗ ಅದರ ಹೆಚ್ಚಿನ ನಟರನ್ನು ಯಕ್ಷಗಾನ ಕಲಾಕಾರರ ಪರಿವಾರದಿಂದ ಆರಿಸಿದರು.

ಇವರಲ್ಲಿನ ಹತ್ತು ಕುಟುಂಬಗಳು ಸಾರಸ್ವತರಿಗೆ ಸೇರಿದ್ದವು. ಶೇಶಪ್ಪನವರ [೧೦] ಎಲ್ಲೊಂದು ಅವಶ್ಯಕತೆಗಳನ್ನು ಅರಮನೆ ಪೂರೈಸುತ್ತಿತ್ತು; ಮದುವೆಯ ಮುಂತಾದ ಕಾರ್ಯಕ್ರಮಗಳಂದು ಅವರಿಗೆ ಮನೆವಾರ್ತೆಯು ಎಲ್ಲೊಂದು ವಸ್ತುಗಳನ್ನು ಅರಮನೆ ಒದಗಿಸುತ್ತಿತ್ತು. ಮದುವೆಯ ಮಂಟಪ ಕಟ್ಟಲು ಅರಮನೆಯ ಆಳುಗಳು ಬರುತ್ತಿದ್ದವು. ಮೆರವಣಿಗೆಗೆ ಅರಮನೆಯ ಕೆಲವೊಂದು ಸಾಮಾನು ಸರಂಜಾಮುಗಳನ್ನು ಅವರು ಬಳಸಬಹುದಿತ್ತು. ಅವರ ಮೊಮ್ಮಕ್ಕಳಲ್ಲಿ ಒಬ್ಬನಿದ್ದ ದಾಸಪ್ಪ ಮೈಸೂರಿನಲ್ಲಿ ತನ್ನದೇ ಆದ 'ಲಕ್ಷ್ಮೀ ನರಸಿಂಹ ಪ್ರೆಸ್' ಕೊಂಡಿದ್ದರು. ಖ್ಯಾತ ನಾಮ, ದಾನಶೂರ, 'ಲೋಕಸೇವಾ ನಿರತ' ಎಸ್. ವಿಟ್ಠಲರಾವ್, ಅವರ ಮೊಮ್ಮಕ್ಕಳಲ್ಲಿನ ಇನ್ನೊಬ್ಬ ಖ್ಯಾತ ವೆಂಕಟಪ್ಪಯ್ಯ ನ ಕುಟುಂಬ ಈ ಬಗೆಯ ಕುಟುಂಬಗಳಲ್ಲೊಂದಾಗಿತ್ತು. ವೆಂಕಟಪ್ಪಯ್ಯನವರ ಮಗ ಮಂಜುನಾಥಯ್ಯ ಮತ್ತು ಸೋದರಳಿಯ ಕೃಷ್ಣಪ್ಪ ಅತ್ಯುತ್ತಮ ನಟರಾಗಿದ್ದರು.

ಬಿಡಾರ ಕೃಷ್ಣಪ್ಪನವರ ತಂದೆ, ಸ್ತ್ರೀ ಪಾತ್ರಧಾರಿ ವಿಶ್ವನಾಥಯ್ಯ, ಶ್ರೇಷ್ಠ ನಟನೊಬ್ಬನೆಂದು ಹೆಸರು ಗಳಿಸಿದ್ದರು. ಅವರು ಸೀತಾದೇವಿಯ ಪಾತ್ರದ ಅಭಿನಯಕ್ಕೆ ಪ್ರಸಿದ್ಧರಾಗಿದ್ದರು. ಆದರೆ ಅವರು ಉದ್ಯೋಗಕೊಂಡಿದ್ದ ಅನ್ಯರಂತೆ ಭವಿಷ್ಯದ ವಿಚಾರ ಮಾಡದೆ ಮಕ್ಕಳನ್ನು ದಾರಿದ್ರ್ಯಾವಸ್ಥೆಗೆ ದೂಡಿ ತೀರಿಕೊಂಡರು.

ಕೃಷ್ಣಪ್ಪನವರ ಜನ್ಮ ಮೈಸೂರಿನಲ್ಲಿ, ೧೮೭೭ರಲ್ಲಾಯಿತು. ದಿನಗಳೆಯುವುದು ಕಷ್ಟವಾದಾಗ ತನ್ನ ಅಣ್ಣ ಸುಬ್ಬರಾವ್ ಇವರ ಸಮೇತ ದೇವರ ನಾಮ (ಮಾಧವದಾಸರ ಭಕ್ತಿಗೀತೆಗಳು)ಗಳನ್ನು ಹಾಡಿ ದಿನಗಳೆಯಬೇಕಾಯಿತು. ಅಲ್ಪ ಸ್ವಲ್ಪ ಸಂಗೀತದ ಅಭ್ಯಾಸ ಮಾಡಿದ್ದ ಸುಬ್ಬರಾವ್ ಮುಂದೊಂದು ದಿನ ಹರಿದಾಸರಾದರು. ಪ್ರತೀ ಶುಕ್ರವಾರ ಅವರು ತನ್ನ ಮನೆಯಲ್ಲಿ ಭಜನೆ ನಡೆಸುತ್ತಿದ್ದರು. ಇದರಲ್ಲಿ ಮೈಸೂರಿನ ನಾಮಾಂಕಿತ ಸಂಗೀತಕಾರರೂ ಭಾಗವಹಿಸುತ್ತಿದ್ದರು.

ಅದೃಷ್ಟವಶಾತ್ ಕೃಷ್ಣಪ್ಪನವರ ಪ್ರತಿಭೆ ಅವರ ಎಳೆ ವಯಸ್ಸಿನಲ್ಲೇ ಬೆಳಕಿಗೆ

ಬಂದಿತು. ಪೋಷಕರಿದ್ದ ಸಾಹುಕಾರ ತಿಮ್ಮಯ್ಯನವರು ಕರೂರ್ ರಾಮಸ್ವಾಮಿ ಅಯ್ಯಂಗಾರರಲ್ಲಿ ಕೃಷ್ಣಪ್ಪನವರ ಸಂಗೀತ ಶಿಕ್ಷಣದ ವ್ಯವಸ್ಥೆ ಮಾಡಿದರು. ಮುಂದೆ ಆಸ್ಥಾನ ಸಂಗೀತಕಾರ ಕರಗಿರಿರಾವ್ ಮತ್ತು ಪ್ರಸಿದ್ಧ ವೀಣಾವಾದಕ, ವೈಣಿಕ ಶಿಖಾಮಣಿ ಶೇಷಣ್ಣ ಇವರನ್ನು ತರಬೇತು ಮಾಡಿದರು.

ಇವರ ಪ್ರಗತಿ ಅತ್ಯದ್ಭುತವಿತ್ತು. ೧೯ನೆಯ ವಯಸ್ಸಿನಲ್ಲೇ ಇವರನ್ನು ಆಸ್ಥಾನ ಸಂಗೀತಕಾರರಲ್ಲೊಬ್ಬನನ್ನಾಗಿ ನೇಮಿಸಲಾಯಿತು.

ಇಪ್ಪತ್ತರ ವಯಸ್ಸಿನಲ್ಲಿ ಬೆಂಗಳೂರು, ಮದ್ರಾಸು, ತಂಜಾವೂರು, ತಿರುಚಿರಪಳ್ಳಿ, ಮದುರೈ, ಕೊಯಂಬತ್ತೂರು ಮತ್ತು ಇನ್ನಿತರ ಕೇಂದ್ರಗಳಲ್ಲಿ ಇವರ ಸಂಗೀತ ಕಛೇರಿಗಳು ನಡೆದವು. ಇದು ದಕ್ಷಿಣದ ಹಲವೊಬ್ಬ ಗಾಯಕರ, ವಾದ್ಯಸಂಗೀತಕಾರರ ಅಸೂಯೆಗೂ ಕಾರಣವಾಯಿತು. ಅದೊಮ್ಮೆ ರಾಮನಾಥಪುರಂದ ದೇವಕೊಟ್ಟೈಯಲ್ಲಿ ಸಂಗೀತ ಕಛೇರಿ ನಡೆಯುತ್ತಿದ್ದಾಗ ಪಿಟೀಲು ಮತ್ತು ಮೃದಂಗಗಳ ವಾದಕರು ಉದ್ದೇಶಪೂರ್ವಕ ಸ್ವರಗೂಡಿಸದಿರುವುದನ್ನು ಕಂಡರು; ಆಗ ಅತ್ಯಪೂರ್ವವಿದ್ದ ಪಲ್ಲವಿಯನ್ನು ಹಾಡಿ ಮಾರ್ಗದರ್ಶನವಿತ್ತಾಗಲೂ ಸಮರ್ಪಕವಾಗಿ ನಿರ್ವಹಿಸಲಾರದ ಇವರನ್ನು ತುಂಬಿದ ಸಭೆಯಲ್ಲಿ ನಾಚುವಂತೆ ಮಾಡಿದ್ದರೆನ್ನಲಾಗುತ್ತದೆ.

೧೯೦೪ರಲ್ಲಿ ಅವರು ಮದ್ರಾಸು ಹೈಕೋರ್ಟಿನ ಮುಖ್ಯನ್ಯಾಯಾಧೀಶರಾಗಿದ್ದ ಸರ್ ಎಸ್. ಸುಬ್ರಹ್ಮಣ್ಯ ಅಯ್ಯರ್ ಅವರ ಮನೆಯಲ್ಲಿ, ೧೯೦೫ರಲ್ಲಿ ಕುಂಬಕೋಣಂ (ರಾಘವೇಂದ್ರ) ಮಠದಲ್ಲಿ, ಸುಕೃತೀಂದ್ರ ತೀರ್ಥರ ಸಮಕ್ಷಮ ಸಂಗೀತ ಕಛೇರಿ ನಡೆಸಿದರು. ಅದೇ ವರ್ಷ ತಂಜಾವೂರು ಜಿಲ್ಲೆಯ ತಿರುವಿದೈ ಮರುದೂರಿನಲ್ಲಿನ 'ಪಾಂದಾರ ಸನ್ನಿಧಿ' (ಶೈವ ಮಠಾಧಿಪತಿ) ಇವರಿಗೆ 'ಗಾಯಕ ಶಿಖಾಮಣಿ' ಬಿರುದು, ಬಹುಮಾನಗಳನ್ನಿತ್ತರು. ೧೯೧೦ರಲ್ಲಿ ಅವರು ಶೃಂಗೇರಿಯ ಜಗದ್ಗುರುಗಳ ಸಮಕ್ಷಮ ಹಾಡಿದರು. ೧೯೧೨ರಲ್ಲಿ ಚಾಮರಾಜೇಂದ್ರ ಒಡೆಯರ್ ಇವರನ್ನು ಆಸ್ಥಾನಗಾಯಕನೆಂದಾಗಿ ನೇಮಿಸಿ 'ಗಾನವಿಶಾರದ' ನೆಂಬ ಬಿರುದನ್ನಿತ್ತರು. ಮತ್ತೆ ಅರಮನೆಯ ನಾಟಕಗಳಲ್ಲಿ ಕಡ್ಡಾಯವಾಗಿ ಭಾಗವಹಿಸಬೇಕಿರುವುದನ್ನು ನಿಲ್ಲಿಸಿದರು. ಸರ್ವಸಾಮಾನ್ಯವಾಗಿ ಅರಮನೆಯ ಮನೆಯ ಗಾಯಕರು ಅಲ್ಲಿನ ನಾಟಕಗಳಲ್ಲಿ ಭಾಗವಹಿಸುವ ಪದ್ಧತಿ ಇತ್ತು. ೧೯೧೫ರಲ್ಲಿ ಗಡವಾಲಿನ ಮಹಾರಾಜರು ಅವರಿಗೆ ಬೆಲೆ ಬಾಳುವ ಬಹುಮಾನಗಳನ್ನಿತ್ತು 'ಗಾಯಕ ಶಿರೋಮಣಿ' ಎಂಬ ಬಿರುದಿನಿಂದ ಗೌರವಿಸಿದರು. ೧೯೨೫ರಲ್ಲಿ ಅವರು ದಕ್ಷಿಣ ಕನ್ನಡವನ್ನು ಸಂದರ್ಶಿಸಿದರು.

ಸುಂದರವಾದ ಅಂಗಸೌಷ್ಟವ ಕೊಂಡಿದ್ದ ಇವರ ಇಂಪಾದ ಮೋಹಕ ಸ್ವರ, ಹಾಡಿ ನೆಡೆಯಲ್ಲಿನ ಅಲಂಕಾರ, ಕಲ್ಪನಾ ವಿಲಾಸ ಇತ್ಯಾದಿಗಳು ಸಂಗೀತ ಪ್ರೇಮಿಗಳ ಪಾಲಿಗೆ ರಸದೌತಣದಂತಿರುತ್ತಿತ್ತು.[೧೪] ಸಂಗೀತ ಕಛೇರಿಯ ಕಾರ್ಯಕ್ರಮಗಳಲ್ಲಿ ಪುರಂದರದಾಸರ ಹಾಡುಗಳನ್ನೊಳಗೂಡಿಸಿದವರಲ್ಲಿ ಇವರು ಮೊತ್ತ ಮೊದಲಿನವರಾಗಿದ್ದರು.

ತನ್ನ ಬದುಕಿನ ಹೆಚ್ಚಿನ ಸಮಯವನ್ನು ಶಿಷ್ಯರಿಗೆ ಸಂಗೀತ ಕಲಿಸುವುದರಲ್ಲೇ ಕಳೆದ ಇವರು ಅತ್ಯಂತ ಶ್ರಮಕೊಳ್ಳುವ ಶಿಕ್ಷಕರಲ್ಲೊಬ್ಬರಾಗಿದ್ದರು. ಅವರ ಕೆಲವೊಬ್ಬ ವಿದ್ಯಾರ್ಥಿಗಳೂ ಪ್ರಖ್ಯಾತರಾದರು. ಬಿ. ರಾಚಪ್ಪ ಅವರ ಶಿಷ್ಯರಲ್ಲಿನ ಮೊತ್ತ ಮೊದಲ ಖ್ಯಾತ

ನಾಮ ಗಾಯಕರು. ಇನ್ನುಳಿದವರಲ್ಲಿ ಬಿ. ನಾರಣಪ್ಪ, ದೊಡ್ಡ ರಾಮರಾವ್, ಬಿ. ಶ್ರೀನಿವಾಸ ಅಯ್ಯಂಗಾರ್, ರಾಮಯ್ಯಂಗಾರ್, ತಬಲೆಯ ವಿದ್ವಾನ್ ನಂಜಪ್ಪ, ನಾಗಸ್ವರ ವಿದ್ವಾನ್ ಶೀನಪ್ಪ, ವೇಣು ವಿದ್ವಾನ್ ಎ.ಕೆ. ಸುಬ್ಬರಾವ್, ಪಿಟೀಲು ವಿದ್ವಾನ್ ಟಿ. ಗುರುರಾಜಪ್ಪ ಮತ್ತು ವಿದ್ವಾನ್ ಸದಾಶಿವಯ್ಯ ಇವರ ಸಮಾವೇಶವಿತ್ತು. ಬೆಂಗಳೂರು ನಾಗರತ್ನಮ್ಮ ಪ್ರಸಿದ್ಧಿಗೊಂಡ ಶಿಷ್ಯರಲ್ಲೊಬ್ಬರಾಗಿದ್ದರು. ಅವರು ತಂಜಾವೂರು ಜಿಲ್ಲೆಯ ತಿರುವೈಯಾರ್‌ನಲ್ಲಿನ ತ್ಯಾಗರಾಜರ ಸ್ಮೃತಿ ಶಾಶ್ವತವಾಗುಳಿಯಲು ಅಜೀವ ದುಡಿದರು. ಪ್ರಖ್ಯಾತ ಸಂಗೀತ ರತ್ನಾಕರ ಚೌಡಯ್ಯ (ಇವರು ಕೃಷ್ಣಪ್ಪನವರಲ್ಲಿ ಇಪ್ಪತ್ತೊಂದು ವರ್ಷಗಳ ಕಾಲ ಪಿಟೀಲಿನ ಅಭ್ಯಾಸ ಮಾಡಿದರು.) ತನ್ನ ವ್ಯಾಸಂಗದ ಮೊದಲ ವರ್ಷದಲ್ಲೆ ಕೃಷ್ಣಪ್ಪನವರ ಸಂಗೀತ ಕಛೇರಿಯಲ್ಲಿ ಪಿಟೀಲಿನ ನೆರವೀಯುತ್ತೊಡಗಿದ್ದರು. ಅವರು ಏಳು ತಂತಿಗಳ ಪಿಟೀಲನ್ನು ನುಡಿಸುತ್ತಿದ್ದರು. ಗಾನವಿಶಾರದ ಬಿ. ದೇವೇಂದ್ರಪ್ಪ ಮತ್ತು ಎಲ್ಲಪ್ಪಳ್ಳಿ ಅನಂತಕೃಷ್ಣಶರ್ಮ ಇವರು ಇನ್ನುಳಿದವರಲ್ಲಿನ ಕೆಲವರು. ಶರ್ಮ ಅತ್ಯುತ್ತಮ ಗಾಯಕರಿದ್ದರಷ್ಟೇ ಅಲ್ಲ, ಸಂಸ್ಕೃತ, ಪ್ರಾಕೃತ, ತೆಲುಗು ಮುಂತಾದವುಗಳ ಪಂಡಿತರೂ ಆಗಿದ್ದರು. ಅವರು ಶ್ರೇಷ್ಠ ಸಂಗೀತ ತಜ್ಞರೊಬ್ಬರಾಗಿದ್ದರು.

ಪ್ರಸಿದ್ಧ ಗಾಯಕ ಮತ್ತು ಗೀತ ರಚಯಿತರಿದ್ದ ಅಡ್ಯಾರ್ (ಮದ್ರಾಸ್) ಕಲಾಕ್ಷೇತ್ರದ ಕೆ. ವಾಸುದೇವಾಚಾರ್ಯರು ಹೆಚ್ಚು ಕಡಿಮೆ ಅವರ ಜೊತೆಯಲ್ಲೇ ಇರುತ್ತಿದ್ದರು. ಕೃಷ್ಣಪ್ಪ ಮೈಸೂರಿನಲ್ಲಿನ ಆಂಜನೇಯನಲ್ಲಿ ಪೂರ್ಣ ಶ್ರದ್ಧೆಯಿಟ್ಟಿದ್ದರು. ಮತ್ತೆ ದೇವರಿಂದ ತನಗೆ ಸ್ಫೂರ್ತಿ ದೊರಕುತ್ತಿರುವುದಾಗಿ ಭಾವಿಸುತ್ತಿದ್ದರು. ಅವರು ಮೈಸೂರಿನಲ್ಲಿ 'ಪ್ರಸನ್ನ ಸೀತಾ ಮಂದಿರ'ವನ್ನು ಕಟ್ಟಿಸಿದರು. 'ಶ್ರೀಕೃಷ್ಣ ಪಾಠಶಾಲಾ' ಸಂಗೀತ ವಿದ್ಯಾಲಯದ ನಿರ್ಮಾಣಕ್ಕೆ ತಾವು ಸಂಪಾದಿಸಿದ್ದ ಹಣದಿಂದ ನ್ಯಾಸವೊಂದನ್ನು ರಚಿಸಿದರು.

೧೯೩೧ರ ಜುಲೈ ತಿಂಗಳ ೨೧ರಂದು ಅವರ ನಿಧನವಾಯಿತು.

೧೩. ಪಂಜೆ ಮಂಗೇಶರಾವ್

ಪಂಜೆ ಮಂಗೇಶರಾವ್ ಇವರ ಜನ್ಮ ದಕ್ಷಿಣ ಕನ್ನಡದಲ್ಲಿನ ಬಂಟ್ವಾಳದ ಬಡಕುಟುಂಬವೊಂದರಲ್ಲಿ ೧೮೭೪ರ ಫೆಬ್ರವರಿ ತಿಂಗಳ ೨೨ರಂದಾಯಿತು. ಪ್ರಾಥಮಿಕ ಶಿಕ್ಷಣವನ್ನು ಬಂಟ್ವಾಳದಲ್ಲಿ ಮುಗಿಸಿದ ಇವರು ಉಚ್ಚ ಶಿಕ್ಷಣಕ್ಕಾಗಿ ಮಂಗಳೂರಿಗೆ ಹೋದರು. ಮತ್ತೆ ಅಲ್ಲಿನ ಸ್ಯೆಂಟ್ ಎಲೋಸಿಯಸ್ ಕಾಲೇಜಿನಲ್ಲಿ ಕಲಾವಿಭಾಗದ ಮೊದಲ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ತನ್ನ ಬಿ.ಎ. ಪದವಿಗೆ ಗಣಿತಕೊಳ್ಳುವುದರ ಯೋಜನೆ ಮಾಡಿದ್ದರು; ಆದರೆ ಮಂಗಳೂರಿನಲ್ಲಿ ಅದಕ್ಕೆ ಅನುಕೂಲತೆಯಿರದಿದ್ದ ನಿಮಿತ್ತ ಅವರಿಗೆ ಮದ್ರಾಸಿನ ಕಾಲೇಜಿನ ವಿನಹಾ ಅನ್ಯ ಪರ್ಯಾಯವಿಲ್ಲವಿತ್ತು. ಬಡತನದ ನಿಮಿತ್ತ ಅದು ಅಸಾಧ್ಯವಾದಾಗ ಅವರು ಇತಿಹಾಸವನ್ನು ಐಚ್ಛಿಕ ವಿಷಯವಾಗಿಕೊಂಡು ಮಂಗಳೂರಿನ ಸ್ಯೆಂಟ್ ಎಲೋಸಿಯಸ್ ಕಾಲೇಜಿನಲ್ಲಿ ತನ್ನ ಶಿಕ್ಷಣ ಮುಂದುವರಿಸಿದರು.

ಬಿ.ಎ. ಪರೀಕ್ಷೆಯ ಕನ್ನಡ ಮತ್ತು ಇಂಗ್ಲಿಷ್ ವಿಷಯಗಳಲ್ಲಿ ಉತ್ತೀರ್ಣರಾದ ಇವರು ೧೮೯೭ರಲ್ಲಿ ಮಂಗಳೂರಿನ 'ಗವರ್ನಮೆಂಟ್ ಕಾಲೇಜ್'ನಲ್ಲಿ ಕನ್ನಡ ಪಂಡಿತರ

ಹುದ್ದೆಕೊಂಡರು. ಈ ಹುದ್ದೆಯ ಅನ್ಯ ಅಭ್ಯರ್ಥಿ ಕವಿ ಲಕ್ಷ್ಮೀನಾರಾಯಣಪ್ಪ ಇವರಿದ್ದರು. ಆದರೆ 'ಗವರ್ನಮೆಂಟ್ ಕಾಲೇಜ್'ನ ಯುರೋಪೀಯ ಪ್ರಾಂಶುಪಾಲರು ಮಂಗೇಶರನ್ನು ಆರಿಸಿದರು. ಕಾರಣ ಅವರು ಇಂಗ್ಲಿಷ್ ಬಲ್ಲವರಿದ್ದರು; ಅವರ ಆಯ್ಕೆ ಉಚಿತವಿತ್ತು.

ಅವರ ಶಿಕ್ಷಣದ ಕ್ರಮ ಅತ್ಯಾಧುನಿಕವಿತ್ತು. ಆ ದಿನಗಳಲ್ಲಿ ಯಕ್ಷಗಾನದ ಭಾಗವತರು ಹಾಡುವ ಹಾಡಿನ ಪದ್ಧತಿಯಿಂದ ಕವಿತೆಗಳನ್ನೋದುವ ರೀತಿಯಿತ್ತು. ಆದರೆ ಅವರ ಕ್ರಮ ಪಾರಂಪಾರಿಕವೆಂಬಂತಿದ್ದ ಪಂಡಿತರ ಶಿಕ್ಷಣದ ಪದ್ಧತಿಗಿಂತಲೂ ತೀರಾಭಿನ್ನವಿತ್ತು. ಅತ್ಯುತ್ತಮ ವಾಕ್ಪಟು, ಗಾಯಕರಿದ್ದ ಇವರು ಕನ್ನಡ ಮತ್ತು ಮರಾಠಿ ಗೀತೆಗಳನ್ನು ಉತ್ತಮ ರೀತಿಯಲ್ಲಿ ಹಾಡುವ ಕ್ಷಮತೆಕೊಂಡಿದ್ದರು. ಅವರು ಪಳಗಿದ ನಟರಾಗಿದ್ದರು. ಕಿರ್ಲೋಸ್ಕರ್ ಡ್ರಮ್ಯಾಟಿಕ್ ಮಂಡಳಿಯ ನಾಟಕಗಳಲ್ಲಿನ ಹಾಡುಗಳು ಅವರ ಮೆಚ್ಚಿನವಾಗಿದ್ದವು. ಅವರು ತನ್ನ ವಿದ್ಯಾರ್ಥಿಗಳಲ್ಲಿ ಕನ್ನಡದ ಬಗೆಗೆ ಪ್ರೀತಿ, ಆದರ ಬೆಳೆಯುವಂತೆ ಮಾಡಿದರು.

೧೯೦೪ರಲ್ಲಿ ಅವರು ಬಿ.ಎ. ಮತ್ತು ೧೯೦೫ರಲ್ಲಿ ಎಲ್.ಟಿ. ಪರೀಕ್ಷೆಯಿತ್ತು ಉತ್ತೀರ್ಣರಾದರು. ಆನಂತರ ಅವರನ್ನು 'ಗವರ್ನಮೆಂಟ್ ಕಾಲೇಜ್'ನಲ್ಲಿ ಸಹಾಯಕ ಉಪನ್ಯಾಸಕರನ್ನಾಗಿ ನೇಮಿಸಲಾಯಿತು. ಅದಾದ ಒಂದು ವರ್ಷದ ನಂತರ ಅವರು ಹೊಸದಾಗಿ ರಚಿಸಲ್ಪಟ್ಟ ಮಂಗಳೂರು ಕ್ಷೇತ್ರದ 'ಸಬ್ ಅಸಿಸ್ಟೆಂಟ್ ಇನ್ಸ್‌ಪೆಕ್ಟರ್ ಆಫ್ ಎಡ್ಯುಕೇಶನ್' ಎಂದಾಗಿ ನೇಮಿಸಲ್ಪಟ್ಟರು. ಈ ಹುದ್ದೆಯಲ್ಲಿ ಅವರು ೧೯೧೮ರ ತನಕ ಮಂಗಳೂರು ಮತ್ತು ಕಾಸರಗೋಡ್ ಕ್ಷೇತ್ರಗಳಲ್ಲಿ ಕೆಲಸ ಮಾಡಿದರು. ತನ್ನ ಸಂದರ್ಶನದ ವೇಳೆಗೆ ಅವರು ಅಧ್ಯಾಪಕರಿಗೆ ಕನ್ನಡ ಸಾಹಿತ್ಯದಲ್ಲಿನ ಪ್ರಾತಿನಿಧಿಕ ಪಾಠಗಳನ್ನು ಓದಿ ತೋರಿಸುತ್ತಿದ್ದರು. ಅವರು ತುಳು ಜಾನಪದ ಗೀತೆ, ಕಥೆಗಳನ್ನು, ಸ್ಥಾನೀಯ ಇತಿಹಾಸ, ಹೆಸರುಗಳು, ಅವುಗಳ ಮೂಲ ಇತ್ಯಾದಿಗಳ ಕುರಿತಾದ ವಿವರಗಳನ್ನು ಸಂಗ್ರಹಿಸಿದ್ದರು.

೧೯೧೮-೧೯೨೧ರ ನಡುವೆ ಅವರು ಮಂಗಳೂರಿನಲ್ಲಿನ 'ಹೈಯರ್ ಎಲಿಮೆಂಟರಿ ಟ್ರೈನಿಂಗ್ ಸ್ಕೂಲ್'ನಲ್ಲಿ ಮುಖ್ಯ ಉಪನ್ಯಾಸಕರಾಗಿದ್ದರು. 'ಅಸಿಸ್ಟೆಂಟ್ ಇನ್ಸ್‌ಪೆಕ್ಟರ್ ಆಫ್ ಸ್ಕೂಲ್ಸ್' ನ ಹುದ್ದೆಯಲ್ಲಿದ್ದ ಅವರನ್ನು ೧೯೨೧ರಲ್ಲಿ ಮಡಿಕೇರಿಗೆ ವರ್ಗಾಯಿಸಲಾಯಿತು. ಅದಾದ ಎರಡು ವರ್ಷಗಳ ನಂತರ ಅವರನ್ನು ಮಡಿಕೇರಿಯ 'ಸೆಂಟ್ರಲ್ ಹೈಸ್ಕೂಲ್'ನ ಪ್ರಾಧ್ಯಾಪಕರನ್ನಾಗಿ ನೇಮಿಸಲಾಯಿತು. ೧೯೨೮ರ ತನಕ ಈ ಹುದ್ದೆಯಲ್ಲಿದ್ದ ಇವರು ನಿವೃತ್ತಿ ಪೂರ್ವದ ರಜೆಕೊಂಡು ಮಂಗಳೂರಿನಲ್ಲಿ ನೆಲಸಿದರು.

೧೮೮೪ರಲ್ಲಿ, ಮದ್ರಾಸ್ ಸರಕಾರದ ಕನ್ನಡದ ಮುಖ್ಯಭಾಷಾಂತರಕಾರರಿದ್ದ ಶ್ರೀ ಬೆನೆಗಲ್ ರಾಮರಾವ್, ಎಮ್.ಎ., ಎಲ್.ಎಲ್.ಬಿ., ಇವರ ತಂಗಿಯೊಂದಿಗೆ ಮಂಗೇಶರಾವ್ ಇವರ ವಿವಾಹವಾಗಿತ್ತು. ೧೯೩೪ರಲ್ಲಿ ಮಂಗಳೂರನ್ನು ಬಿಟ್ಟು ಇವರು ಹೈದರಾಬಾದಿನಲ್ಲಿ ನೆಲಸಿದ್ದ ತನ್ನ ಎರಡನೆಯ ಮಗ ಗೋಪಾಲರಾವ್‌ನಲ್ಲಿಗೆ ತೆರಳಿದರು. ೧೯೩೭ರ ಅಕ್ಟೋಬರ್ ತಿಂಗಳ ೨೫ರಂದು ಅಲ್ಲಿಯೇ ಅವರ ನಿಧನವಾಯಿತು.

ಕನ್ನಡದ ಪ್ರಸಿದ್ಧ ಲೇಖಕರಿದ್ದ ಇವರು ಅತ್ಯುತ್ತಮವೆಂದೆನಿಸಿಕೊಂಡಿದ್ದ ಕವಿತೆ, ಐತಿಹಾಸಿಕ ಕಾದಂಬರಿ, ಕಿರುಗತೆ, ಬಾಲಸಾಹಿತ್ಯಗಳನ್ನು ರಚಿಸಿದರು. ದಕ್ಷಿಣ ಕನ್ನಡದ ಹಳ್ಳಿಗಳ ಕುರಿತು ತಾನು ಮಾಡಿದ ಸಂಶೋಧನೆಯ ವರದಿಗಳನ್ನು ತಯಾರಿಸಿದರು. ಅವರ

ಲೇಖನಗಳು ಸರಳ ಮತ್ತು ವಿನೋದಿಯಿದ್ದು ಅವುಗಳಲ್ಲಿ ಜನಸಾಮಾನ್ಯರ ಬಗೆಗಿದ್ದ ಕಾರುಣ್ಯದ ಒಸರನ್ನು ಕಾಣಬಹುದಿತ್ತು.

೧೯೦೦ರಲ್ಲಿ ಕನ್ನಡ ಪಂಡಿತನೆಂದು ನೇಮಿಸಲ್ಪಟ್ಟ ವರ್ಷವೊಂದರೊಳಕ್ಕೆ ಅವರು ಮಂಗಳೂರಿನ ಬೋಳಾರ್ ವಿಟ್ಠಲರಾವ್ ಇವರನ್ನು ಸೇರಿ ಕನ್ನಡ ವಾರಪತ್ರಿಕೆ 'ಸುವಾಸಿನಿ'ಯನ್ನು ಆರಂಭಿಸಿದರು. ತನ್ನ ಅನೇಕ ಲೇಖನಗಳನ್ನು ಅವರು ಈ ವಾರ ಪತ್ರಿಕೆಯಲ್ಲಿ ಪ್ರಕಾಶಿಸಿದರು. ತನ್ನ ಕವಿತೆಗಳಿಗೆ ಅವರು ಕಾವ್ಯನಾಮ 'ಕವಿಶಿಷ್ಯ' ಬಳಸಿದರು. ಬೆಂಗಳೂರಿನಲ್ಲಿನ ಬಾಸೆಲ್ ಮಿಶನ್‌ನ ಪ್ರಕಾಶನ 'ಸಾಹಿತ್ಯ ದೀಪಿಕಾ'ಕ್ಕೆ (೧೯೦೩-೧೯೧೧) ಇವರು ನಿಯಮಿತವಾಗಿ ಬರೆಯುತ್ತಿದ್ದರು. 'ಹರಟೆ ಮಲ್ಲ' ಎಂಬ ಗುಪ್ತ ನಾಮ ಬಳಸಿ ಈ ಪತ್ರಿಕೆಗೆ ಮನೋರಂಜಕ ಪತ್ರಗಳನ್ನು ಬರೆದರು. ಮಂಗಳೂರಿನಿಂದ ಪ್ರಕಾಶಿಸಲ್ಪಡುತ್ತಿದ್ದ 'ಸ್ವದೇಶಾಭಿಮಾನಿ' ಮತ್ತು 'ಕಂಠೀರವ' ವಾರ ಪತ್ರಿಕೆಗಳಲ್ಲೂ ಇವರು ತನ್ನ ಲೇಖನಗಳನ್ನು ಪ್ರಕಾಶಿಸಿದರು.

ಆರಂಭದ ದಿನಗಳಲ್ಲಿನ ಅವರ ಕವಿತೆಗಳು ಶಾಲೆಗಳ ಪಾಠ್ಯ ಪುಸ್ತಕಗಳಿಗೆಂದು ಸೂಚಿಸಲಾದ ಇಂಗ್ಲಿಷ್ ಕವಿತೆಗಳ ಭಾಷಾಂತರವಾಗಿದ್ದವು. ಅವುಗಳಲ್ಲಿ 'ತೆಂಕಣಗಾಳಿಯಾಟ', 'ತೊಂಬರ ಚೆನ್ನೆ', 'ಹಾವಿನ ಹಾಡು,' 'ಪರೀಕ್ಷೆಯಲ್ಲಿ ಪರಾಜಿತನಾದ ವಿದ್ಯಾರ್ಥಿಯ ಪ್ರಲಾಪ' ಪ್ರಾಮುಖ್ಯವಾದುದಾಗಿವೆ. ಅವರ ಹೆಚ್ಚಿನ ಕೃತಿಗಳನ್ನು ಮೂರು ಸಂಪುಟಗಳ 'ಕನ್ನಡ ಪದ್ಯ ಪುಸ್ತಕ' ದಲ್ಲಿ ಸೇರಿಸಲಾಗಿದೆ.

ಅವರು ತನ್ನ ಕಾದಂಬರಿಗಳಲ್ಲಿನ 'ಶ್ರೀಶಿ'ಯನ್ನು ಗ್ರಾಂಟ್ ಢಫ್ ಇವರ 'ಹಿಸ್ಟರಿ ಆಫ್ ಮರಾಠಾಸ್' ಪುಸ್ತಕದ ಆಧಾರಕೊಂಡು ಬರೆದರಾದರೆ, 'ಪ್ರಥುಲ'ವನ್ನು ಸಿವೆಲ್ ಇವರ 'ಫೊರ್ಗೋಟನ್ ಎಂಪಾಯರ್'ನಲ್ಲಿನ ಪ್ರಸಂಗವೊಂದರ ಆಧಾರಕೊಂಡು ಬರೆದಿದ್ದರು.

ಅವರ ಕಿರುಗತೆಗಳು ಅತಿ ವಿನೋದಿಯಿದ್ದವು. ಅವರನ್ನು ಅರ್ವಾಚೀನ ಕನ್ನಡ ಕಿರುಗತೆಗಳ ಪಿತಾಮಹನೆಂದು ಭಾವಿಸಲಾಗುತ್ತದೆ. ಮಕ್ಕಳಿಗಾಗಿ ಕವಿತೆ, ಕಥೆಗಳನ್ನು ಬರೆದವರಲ್ಲಿ ಇವರು ಮೊತ್ತ ಮೊದಲಿನವರು.

ಮೂಡಬಿದ್ರಿಯ ಹೊಸ ಬಸದಿಯಲ್ಲಿನ ಶಿಲಾಶಾಸನಗಳ ಕುರಿತಾದ ಅವರ ವಿದ್ವತ್ಪೂರ್ಣ ಲೇಖನ, ಕೆಲವೇ ಕಾಲ ಪ್ರಚಾರದಲ್ಲಿದ್ದ ಮಂಗಳೂರಿನ 'ಕರ್ನಾಟಕ ಸಾಹಿತ್ಯ ಸಮ್ಮೇಳನ' ಸಂಚಿಕೆಯಲ್ಲಿ, ೧೯೨೭ರಲ್ಲಿ ಪ್ರಕಾಶಿಸಲ್ಪಟ್ಟಿತು.

೧೪. ಎಮ್. ಎನ್. ಕಾಮತ್

ಮುಂಡ್ಕೂರು ನರಸಿಂಹ ಕಾಮತರು ಬಡಕುಟುಂಬವೊಂದರಲ್ಲಿ ೧೮೮೩ರ ಜುಲೈ ತಿಂಗಳ ೧೩ರಂದು ಹುಟ್ಟಿದರು. ಅವರ ಶಿಕ್ಷಣ ಮಂಗಳೂರಿನ ಕೆನರಾ ಹೈಸ್ಕೂಲಿನಲ್ಲಾಯಿತು. ೧೮೯೮ರಲ್ಲಿ ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಉತ್ತೀರ್ಣರಾದ ಇವರು ಮಂಗಳೂರಿನಲ್ಲಿನ ಸೈಂಟ್ ಎಲೋಶಿಯಸ್ ಕಾಲೇಜನ್ನು ಸೇರಿದರು. ಕಲಾವಿಭಾಗದ ಮೊದಲ ಪರೀಕ್ಷೆಯಲ್ಲಿ ಉತ್ತೀರ್ಣರಾದ ಬಳಿಕ ಆರ್ಥಿಕ ಪರಿಸ್ಥಿತಿ

ಚೆನ್ನಾಗಿರದ ನಿಮಿತ್ತ ಕಾಲೇಜಿನ ಶಿಕ್ಷಣವನ್ನು ಮುಂದುವರಿಸಲಾರದಾದರು.

ತಮ್ಮ ಶಾಲೆಯ ಕನ್ನಡ ಶಿಕ್ಷಕ ಕವಿ ನಂದಳಿಕೆ ನಾರಾಯಣಪ್ಪನವರು ೧೯೦೩ರಲ್ಲಿ ತೀರಿಕೊಂಡಾಗ ಉಡುಪಿಯ ಕ್ರಿಶ್ಚಿಯನ್ ಹೈಸ್ಕೂಲು, ಒಂದೆರಡು ಶಾಲೆಗಳಲ್ಲಿ ಅಧ್ಯಾಪಕರಿದ್ದು ಅನುಭವಕೊಂಡಿದ್ದ ಇವರನ್ನು ಕನ್ನಡ ಪಂಡಿತರನ್ನಾಗಿ ನೇಮಿಸಿತು.

ಸ್ವಲ್ಪ ಸಮಯದ ನಂತರ ಅವರು ಬೊಂಬೇಗೆ, ಅನಂತರ ಕಲ್ಕತ್ತಾಕ್ಕೆ ತೆರಳಿದರು. ಕಲ್ಕತ್ತಾದಲ್ಲಿ ಆಧುನಿಕ ಬಂಗಾಲಿ ಸಾಹಿತ್ಯದ ಅಭ್ಯಾಸ ಮಾಡಿದ ಅವರು ಅದರಿಂದ ಪ್ರಭಾವಿತರಾದರು. ೧೯೦೯-೧೯೧೦ರಲ್ಲಿ ಮುಲ್ಕಿಯ ಶಾಲೆಯೊಂದರಲ್ಲಿ ಅಧ್ಯಾಪಕನ ವೃತ್ತಿಯನ್ನು ಕೊಂಡರು. ಅಲ್ಲಿ ಅವರಿಗೆ ಪ್ರತಿಭಾವಂತ ಕವಿಗಳಾಗಿದ್ದ ಬಂಗ್ಲೇಕರ್ ನಾರಾಯಣ ಕಾಮತರನ್ನು ಕಾಣುವ ಅವಕಾಶ ದೊರಕಿತು. ಅವರ ಕವಿತೆ, ನಾಟಕಗಳನ್ನು ಓದಿದ ನರಸಿಂಹ ಕಾಮತರು ತಾನೂ ಅವರಂತೆ ಬರೆಯುವ ನಿರ್ಧಾರ ಮಾಡಿದರು.

ಆ ಬಳಿಕ ಅವರು ಬಂಟ್ವಾಳದಲ್ಲಿನ ತಿರುಮಲ ಟೆಂಪಲ್ ಸ್ಕೂಲಿನಲ್ಲಿ ಅಧ್ಯಾಪಕನ ವೃತ್ತಿಕೊಂಡರು. ೧೯೧೮ರಲ್ಲಿ ಬಂಟ್ವಾಳದ ದೇವಸ್ಥಾನದ ಜೀರ್ಣೋದ್ಧಾರವಾದಾಗ ಅವರು ಅತಿ ಸುಂದರವಾದ ಕವಿತೆಯೊಂದನ್ನು ಬರೆದಿದ್ದರು. ಅನಂತರ ಅವರು ಮಂಗಳೂರಿಗೆ ಹೋಗಿ ಅಲ್ಲಿನ ಕೆನರಾ ಹೈಸ್ಕೂಲಿನಲ್ಲಿ ತನ್ನ ಕೊನೆಯ ದಿನಗಳ ತನಕ ಕನ್ನಡ ಪಂಡಿತರಾಗಿ ದುಡಿದರು.

೧೯೧೨ರಲ್ಲಿ ಇವರು 'ಬೋಧಿನಿ' ಮಾಸಪತ್ರಿಕೆಯನ್ನಾರಂಭಿಸಿದರು. ಆ ದಿನಗಳಲ್ಲಿ ಅವರ ಅತ್ಯುತ್ತಮವಿದ್ದ ಬರಹಗಳಲ್ಲಿನ ಕೆಲವು ಮೈಸೂರಿನ 'ಮಧುರವಾಣಿ', 'ಸಂಪದಾಭ್ಯುದಯ', 'ಅರ್ಥಸಾಧಕ' ಮತ್ತು ಇನ್ನಿತರ ನಿಯತಕಾಲಿಕಗಳಲ್ಲಿ ಪ್ರಕಾಶಿಸಲ್ಪಟ್ಟವು. ಕೆಲವೊಂದು ವರ್ಷಗಳ ಕಾಲ ಅವರು 'ಆನಂದ' ಹೆಸರಿನ ಮಾಸಿಕ ಪತ್ರಿಕೆಯನ್ನು ನಡಸಿಕೊಂಡು ಬಂದರು; 'ಸ್ವದೇಶಾಭಿಮಾನಿ', 'ಕಂಠೀರವ', 'ನವಯುಗ' 'ಶ್ರೀಕೃಷ್ಣ ಸೂಕ್ತಿ' ಮತ್ತು ಮಂಗಳೂರಿನ 'ಪ್ರವಾಸಿ' ನಿಯತಕಾಲಿಕಗಳಿಗೆ ನಿಯಮಿತವಾಗಿ ಲೇಖನಗಳನ್ನು ಬರೆಯತೊಡಗಿದರು.

ಅವರು ದಾಸರ ಪದಗಳನ್ನು ಹೋಲುವ ಭಕ್ತಿಗೀತೆಗಳನ್ನೂ ರಚಿಸಿದರು. 'ಕರ್ಣಕಥೆ' 'ಗಧಾಯುದ್ಧ', 'ಸೀತಾರಾಮ' ಮುಂತಾದ ಗದ್ಯ ಕಾವ್ಯಗಳನ್ನೂ ರಚಿಸಿದರು. ಅವರ 'ಅಶ್ವತ್ಥಮೃಗ', 'ಕುಮಾರ ಭೀಮಸಿಂಹ' ಮತ್ತು 'ಚಂಚಲ' ಕಾದಂಬರಿಗಳು ಅತಿ ಪ್ರಸಿದ್ಧವಾದವು. ಅವರು 'ಮೌರ್ಯ ಸಿಂಹಾಸನ', 'ಪ್ರತಾಪ ಸಿಂಹ' ಮತ್ತು 'ಚಂದ್ರರಾವ್ ಮೋರೆ' ಎಂಬಿತ್ಯಾದಿ ಐತಿಹಾಸಿಕ ನಾಟಕಗಳನ್ನು ಬರೆದರು. 'ಸುಖ ಶಿಕ್ಷಣ', 'ಯೋಗಕ್ಷೇಮ', 'ವಜ್ರಮುಷ್ಠಿ' ಮುಂತಾದವು ಅವರು ಬರೆದ ಸಾಮಾಜಿಕ ನಾಟಕಗಳಲ್ಲಿನ ಕೆಲವೊಂದು. ಪಂಜೆ ಮಂಗೇಶರಾವ್ ಕನ್ನಡದ ಸಣ್ಣ ಕಥೆಗಳ ಪಿತಾಮಹರಿದ್ದರೆ, ಕಾಮತರು ಅನಂತರದ ಪ್ರಸಿದ್ಧ ಕಥಾಕಾರರು.

ಅವರ ಪದ್ಯಗಳಿಲ್ಲದ ಪಠ್ಯ ಪುಸ್ತಕಗಳು ದಕ್ಷಿಣ ಕನ್ನಡದಲ್ಲಿ ಕಾಣದೊರಕವು. ಅವರ ಹೆಚ್ಚಿನ ಕೃತಿಗಳನ್ನು ಕನ್ನಡದ ಪಠ್ಯಪುಸ್ತಕಗಳ ರೂಪದಲ್ಲಿ ಬಳಸಲಾಗಿದೆ.

ವ್ಯಾಪಕವಾಗಿ ಅಭ್ಯಾಸಮಾಡಿದ್ದ ಇವರು ಭೂಗೋಲವನ್ನು ಅತ್ಯುತ್ತಮ ರೀತಿಯಲ್ಲಿ ಕಲಿಸುತ್ತಿದ್ದರು. ಪದವೀಧರರೊಬ್ಬರಾಗಿರದಿದ್ದರೂ ಭೂಗೋಲವನ್ನು ಮೂರು ಉಚ್ಚ ತರಗತಿಗಳಿಗೆ ಕಲಿಸಲು ಮದ್ರಾಸಿನ ಶಿಕ್ಷಣ ಖಾತೆ ಇವರಿಗೆ ವಿಶೇಷ ಪರವಾನಗಿ ಇತ್ತಿತ್ತು. ಅವರು ಉತ್ತಮ ನಟರು ಮತ್ತು ಗಾಯಕರಾಗಿದ್ದರು.

ಅವರ ಶೈಲಿ ಸರಳ, ಸುಗ್ರಾಹ್ಯ, ಮನೋರಂಜಕವಿತ್ತು; ಬರಹಗಳು ಚತುರೋಕ್ತಿ, ಹಾಸ್ಯಗಳಿಂದೊಡಗೂಡಿದ್ದವು. ಪಂಜೆ ಮಂಗೇಶರಾವ್ ಇವರ ಬರಹದ ಶೈಲಿಯನ್ನು ಮುಂದುವರಿಸಿ ಅದರ ಮಟ್ಟವನ್ನು ಉಚ್ಚಸ್ತರಕ್ಕೆ ಕೊಂಡೊಯ್ದರು.

೧೯೧೫ರಲ್ಲಿ ಬೆಂಗಳೂರಿನಲ್ಲಿ ಜರಗಿದ ಮೊದಲ ಕರ್ನಾಟಕ ಸಮ್ಮೇಳನಕ್ಕೆ ಇವರು ದಕ್ಷಿಣ ಕನ್ನಡದ ಪ್ರತಿನಿಧಿಗಳಾಗಿ ತೆರಳಿದ್ದರು. ಇವರು ೧೯೩೯ರಲ್ಲಿ ಬೆಂಗಳೂರಿನಲ್ಲಿ ಜರಗಿದ್ದ ಕಿರುಗತೆಗಳ ಲೇಖಕರ ಸಮ್ಮೇಳನದ ಅಧ್ಯಕ್ಷರಾಗಿದ್ದರು. ೧೯೪೦ರ ಎಪ್ರಿಲ್ ತಿಂಗಳ ೨೪ರಂದು ಇವರು ತೀರಿಕೊಂಡರು.

೧೫. ರಾಷ್ಟ್ರಕವಿ ಎಮ್. ಗೋವಿಂದ ಪೈ

ಎಮ್. ಗೋವಿಂದ ಪೈಗಳ ಜನ್ಮ ೧೮೮೩ರ ಮಾರ್ಚ್ ತಿಂಗಳ ೨೩ರಂದು, ದಕ್ಷಿಣ ಕನ್ನಡದ ಮಂಜೇಶ್ವರದಲ್ಲಾಯಿತು. ಶ್ರೀಮಂತರಿದ್ದ ದೊಡ್ಡಪ್ಪ, ನರಸಯ್ಯ ಶಾನುಭೋಗ ಇವರನ್ನು ಸಾಕಿ, ಸಲಹಿದರು. ಮಂಜೇಶ್ವರದಲ್ಲಿನ ಪ್ರಾಥಮಿಕ ಶಾಲೆಯಲ್ಲಿ ತನ್ನ ಎಂಟು ಅಥವಾ ಒಂಭತ್ತನೆಯ ವಯಸ್ಸಿನ ತನಕ ಕಲಿತರು. ನಂತರದ ತನ್ನ ಅಭ್ಯಾಸವನ್ನು ಮಂಗಳೂರಿನ ಮಿಶನ್ ಹೈಸ್ಕೂಲು (೧೮೯೨-೧೮೯೫), ಕೆನರಾ ಹೈಸ್ಕೂಲು, ಮಂಗಳೂರು (೧೮೯೬-೧೮೯೮), ಗವರ್ನಮೆಂಟ್ ಕಾಲೇಜು ಮಂಗಳೂರು (೧೮೯೯-೧೯೦೦) ಮತ್ತು ಕ್ರಿಶ್ಚಿಯನ್ ಕಾಲೇಜ್, ಮದ್ರಾಸ್ (೧೯೦೫-೧೯೦೬) ಇಲ್ಲಿ ಪೂರೈಸಿದರು.

ಇವರು ಕನ್ನಡದಲ್ಲಿನ 'ಸರಳ ರಗಳೆ' ಪ್ರಕಾರ ಬಳಸಿ, ಪ್ರಾಸ ರಹಿತ ಪದ್ಯ ಕಾವ್ಯಗಳನ್ನು ರಚಿಸಿದ ಮೊದಲ ಕವಿಗಳು (೧೯೦೬-೧೯೧೦). ಇವರ ಕೃತಿಗಳಲ್ಲಿ 'ಗಿಳಿವಿಂಡು,' 'ಗೊಲ್ಗೊಥಾ', 'ವೈಶಾಖಿ' ಮತ್ತು 'ಹೆಬ್ಬೆರಳು' ಹಾಗೂ ಏಕಾಂಕಿಕ 'ಏಕಲವ್ಯ' ಪ್ರಸಿದ್ಧವಾದುವಾಗಿವೆ. ೧೯೨೮ರಲ್ಲಿ ಅವರು ಕನ್ನಡದ ಪ್ರಖ್ಯಾತ ಕವಿ ಲಕ್ಷ್ಮೀಶನ ಜನನ ಕಾಲ, ಸ್ಥಾನ, ಧರ್ಮ, ಮುಂತಾದವುಗಳ ಕುರಿತಾಗಿ ಸಂಶೋಧನಾತ್ಮಕ ಲೇಖನ ಬರೆದರು.

ಇಂಗ್ಲಿಷ್ ಮತ್ತು ಕನ್ನಡದಲ್ಲಿನ ನಿಯತಕಾಲಿಕಗಳಿಗೆ ಐತಿಹಾಸಿಕ ವಿಷಯಗಳ ಅನೇಕ ಲೇಖನಗಳನ್ನು ಬರೆದರು.

೧೯೨೫ರಲ್ಲಿ ಪಂಜೆ ಮಂಗೇಶರಾವ್ ಮತ್ತು ಇವರನ್ನು ಮದ್ರಾಸು ವಿಶ್ವವಿದ್ಯಾನಿಲಯದ ಕನ್ನಡ ಪಠ್ಯ ಪುಸ್ತಕಗಳ ಸಮಿತಿಗೆ ನೇಮಿಸಲಾಯಿತು. ಮದ್ರಾಸ್ ಸರಕಾರ ೧೯೪೯ರಲ್ಲಿ ಅವರನ್ನು ೧೯೫೬ರ ಮಾರ್ಚ್ ತಿಂಗಳ ತನಕದ ಐದು ವರ್ಷಗಳ ಕಾಲಾವಧಿಗಾಗಿ ಕನ್ನಡದ ರಾಷ್ಟ್ರಕವಿಯೆಂದು ಸಾರಿತು.

ಕೇರಳ

೧೬. ಎಮ್. ಶೇಷಗಿರಿ ಪ್ರಭು

ಎಮ್. ಶೇಷಗಿರಿ ಪ್ರಭುಗಳು ಕೆಲವೊಂದು ವರ್ಷಗಳ ಕಾಲ ತೆಲ್ಲಿಚೇರಿಯಲ್ಲಿ ವಾಸಮಾಡಿಕೊಂಡಿದ್ದ, ದಲಾಲ ವೃತ್ತಿಯ ಎಲ್. ಮಾಧವ ಪ್ರಭುಗಳ ಪುತ್ರರು. ಅವರ ಜನ್ಮ ೧೮೫೫ರ ಆಗಸ್ಟ್ ತಿಂಗಳ ೩ರರಂದಾಯಿತು. [೨೦] ಏಳರ ವಯಸ್ಸಿನ ಹೊತ್ತಿಗೆ ಅವರ ತಂದೆ ಮಾಧವ ಪ್ರಭುಗಳು ಕೋಝಿಕ್ಕೋಡ್‌ನಲ್ಲಿ ವಾಸ್ತವ್ಯಕ್ಕೆ ತೊಡಗಿದರು. ೧೮೬೫ರಲ್ಲಿ ಶೇಷಗಿರಿ ಪ್ರಭು, ಕೆಲಿಕಟ್ (ಕೋಝಿಕ್ಕೋಡ್) ಪ್ರೊವಿನ್ಷಲ್ ಸ್ಕೂಲ್ ಸೇರಿದರು. ೧೮೬೮ರಲ್ಲಿ ಅವರ ತಂದೆಯವರು ತೀರಿಕೊಂಡರು; ನಂತರ ತುಂಬಾ ಕಷ್ಟದಿಂದ ತನ್ನ ಅಭ್ಯಾಸವನ್ನು ಮುಂದುವರಿಸಿದರು. ೧೮೭೫ರಲ್ಲಿ ಮೆಟ್ರಿಕ್ಯುಲೇಶನ್ ಪರೀಕ್ಷೆಯನ್ನು ಪ್ರಥಮ ದರ್ಜೆಯಲ್ಲಿ ಪಾಸಾದರು. ೧೮೭೭ರಲ್ಲಿ ಅವರು ಎಫ್.ಎ.ಪರೀಕ್ಷೆಯಲ್ಲಿ ಉತ್ತೀರ್ಣರಾದರು. ೧೮೭೯ರ ಜನವರಿ ತಿಂಗಳ ೨೭ರಂದು ಅವರು ರೂಪಾಯಿ ೧೫ರ ಮಾಸಿಕ ವೇತನದ ಹಂಗಾಮಿ ಮಲಯಾಳಂ ಪಂಡಿತರ ಹುದ್ದೆಕೊಂಡು ಸರಕಾರಿ ಸೇವೆಗೆ ತೊಡಗಿದರು. ೧೮೮೯ರ ಮೇ ತಿಂಗಳಲ್ಲಿ ಅವರು ತೆಲ್ಲಿಚೇರಿಯಲ್ಲಿನ ಬ್ರೆನ್ನೆನ್ ಹೈಸ್ಕೂಲಿಗೆ ವರ್ಗಾಯಿಸಲ್ಪಟ್ಟರು. ಸಂಸ್ಕೃತವನ್ನು ಐಚ್ಛಿಕ ವಿಷಯವಾಗಿ ಕೊಂಡು ಇವರು ಖಾಸಗಿ ಪ್ರಯತ್ನದಿಂದ ಬಿ.ಎ.ಯ ಎರಡು ಭಾಗಗಳನ್ನು ಕ್ರಮವಾಗಿ ೧೮೮೮ ಮತ್ತು ೧೮೯೧ರಲ್ಲಿ ಪೂರ್ತಿಗೊಳಿಸಿದರು. ೧೮೯೨ ಮತ್ತು ೧೮೯೯ರ ನಡುವಣ ಕಾಲಾವಧಿಯಲ್ಲಿ ಇವರು 'ಸಬ್ ಅಸಿಸ್ಟೆಂಟ್ ಇನ್ಸ್‌ಪೆಕ್ಟರ್ ಆಫ ಸ್ಕೂಲ್ಸ್' ಆಗಿದ್ದಾಗ ಮಂಗಳೂರಿನಲ್ಲಿನ ಗವರ್ನ್‌ಮೆಂಟ್ ಆರ್ಟ್ ಕಾಲೇಜಿಗೆ ಹಂಗಾಮಿ 'ಸೆಕೆಂಡ್ ಅಸಿಸ್ಟೆಂಟ್' ಆಗಿ ವರ್ಗಾಯಿಸಲ್ಪಟ್ಟರು. ೧೯೦೩ರಲ್ಲಿ ಇವರು ಸಂಸ್ಕೃತದಲ್ಲಿ ಎಮ್. ಎ. ಪರೀಕ್ಷೆ ಉತ್ತೀರ್ಣರಾದರು.

೧೯೦೪ರ ಎಪ್ರಿಲ್ ತಿಂಗಳಲ್ಲಿ ಅವರನ್ನು ಕಾಲೇಜಿನ ಸ್ಥಾಯಿ ಸ್ವರೂಪದ 'ಸೆಕೆಂಡ್ ಅಸಿಸ್ಟೆಂಟ್' ರನ್ನಾಗಿ ನೇಮಿಸಲಾಯಿತು; ೧೯೦೯ರ ಅಕ್ಟೋಬರ್, ಡಿಸೆಂಬರ್ ತಿಂಗಳ ನಡುವೆ ಅವರನ್ನು ಕಾಲೇಜಿನ ತಾತ್ಕಾಲಿಕ ಪ್ರಾಂಶುಪಾಲರನ್ನಾಗಿ ನೇಮಿಸಲಾಯಿತು. ೧೯೧೦ರ ಆಗಸ್ಟ್ ತಿಂಗಳ ೨೨ರಂದು ಅವರನ್ನು ರಾಜಮಂಡ್ರಿ ಕಾಲೇಜಿಗೆ ವರ್ಗಾಯಿಸಲಾಯಿತು. ಅಲ್ಲಿ ಅವರು ಮೊದಲಿಗೆ 'ಗವರ್ನ್‌ಮೆಂಟ್ ಮೋಡೆಲ್ ಸೆಕೆಂಡರಿ ಸ್ಕೂಲ್'ನ 'ಫಸ್ಟ್ ಅಸಿಸ್ಟೆಂಟ್' ಮತ್ತು ಮುಂದೆ ಉಪ-ಪ್ರಾಂಶುಪಾಲರಾಗಿ ನೇಮಿಸಲ್ಪಟ್ಟರು. ಅಲ್ಲಿ ಅವರು ೧೯೧೪ರ ತನಕ ಉಳಿದುಕೊಂಡರು; ನಿವೃತ್ತರಾದ ಅವರು ರೂಪಾಯಿ ೧೨೫ರ ನಿವೃತ್ತಿ ವೇತನದೊಂದಿಗೆ ಕೋಝಿಕ್ಕೋಡ್‌ನಲ್ಲಿ ನೆಲಸಿದರು. ೧೯೧೬ ಮತ್ತು ೧೯೧೯ರ ನಡುವಣ ಕಾಲಾವಧಿಯಲ್ಲಿ ಅವರು ಕೊಚ್ಚಿಯ ತಿರುಮಲ ದೇವಸ್ವೋಮ್ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾಗಿದ್ದರು. ೧೯೨೪ರ ಮೇ ತಿಂಗಳ ೨೪ರಂದು ಅವರ ನಿಧನವಾಯಿತು.

ಅವರು ೧೯೦೨ರಲ್ಲಿ ತೆಲ್ಲಿಚೇರಿಯಲ್ಲಿ ಜರಗಿದ 'ಮಲಯಾಳಂ ಭಾಷಾ ಪೋಷಿಣಿ ಸಭಾ'ದ ಸಮ್ಮೇಳನದ ವೇಳೆಗೆ ಬೆಳಕಿಗೆ ಬಂದರು. ಅವರನ್ನು ಮಲಯಾಳ ವ್ಯಾಕರಣ ಪುಸ್ತಕ ತಯಾರಿಸಲು ರಚಿಸಿದ್ದ ಸಮಿತಿಗೆ ಕೊಳ್ಳಲಾಯಿತು. ಅವರು 'ಬಾಲವ್ಯಾಕರಣ' ಮತ್ತು

'ವ್ಯಾಕರಣಾಮೃತಂ' ಎಂಬೀ ಪ್ರಾಥಮಿಕ ಪುಸ್ತಕಗಳನ್ನು ತಯಾರಿಸಿದರು.

'ಭಾಷಾ ಪೋಷಿಣಿ' ನಿಯತಕಾಲಿಕದಲ್ಲಿ ಪ್ರಕಾಶಿಸಲ್ಪಟ್ಟ ಅವರ ವೇದ, ತಾತ್ವಿಕ ವಿಚಾರಗಳಿಗೆ ಸಂಬಂಧಿಸಿದ ವಿಮರ್ಶಾತ್ಮಕ ಸರಣಿ ಲೇಖನಗಳನ್ನು ಕೇರಳದ ಜನರು ಮೆಚ್ಚಿಕೊಂಡರು.

೧೯೧೧ರಲ್ಲಿ ಇವರನ್ನು ಮದ್ರಾಸ್ ವಿಶ್ವವಿದ್ಯಾನಿಲಯದ 'ದ್ರವಿಡಿಯನ್ ಬೋರ್ಡ್ ಆಫ್ ಸ್ಟಡೀಸ್'ನ ಸದಸ್ಯರನ್ನಾಗಿ ನೇಮಿಸಲಾಯಿತು. ಇದರೊಂದಿಗಿನ ಸಂಬಂಧ ಅವರ ಕೊನೆಯ ದಿನಗಳ ತನಕ ಉಳಿಯಿತು.

ಅವರು ಖ್ಯಾತನಾಮ ಸಂಸ್ಕೃತ ಪಂಡಿತ, ವೈಯಾಕರಣಿ ಮತ್ತು ಮಲಯಾಳಂ ಸಾಹಿತಿಗಳಾಗಿದ್ದರು. ತಮಿಳು, ಮಲಯಾಳಂ ಭಾಷೆಗಳನ್ನು ಬಲ್ಲ ಇವರು ಎಲ್ಲೊಂದು ವಿಷಯಗಳ ಜ್ಞಾನ ಕೊಂಡವರಿದ್ದರು. ಇತಿಹಾಸ ಮತ್ತು ತೌಲನಿಕ ವ್ಯಾಕರಣ ಅವರ ಮೆಚ್ಚಿನ ವಿಷಯಗಳಾಗಿದ್ದವು.

'ವತ್ಸ ರಾಜ ಚರಿತಂ' 'ವೇದವ್ಯಾಸವ್', 'ಸೀತಾ', 'ಸಾವಿತ್ರಿ' 'ಉಮಾ', 'ಹರ್ಷಚರಿತ್ರವುಮ್', 'ನಾಗಾನಂದವುಮ್', 'ಬಾಲಾಮೃತಮ್', 'ಶಿಶಂಬೋದಕಮ್' 'ವ್ಯಾಕರಣದರ್ಶನಮ್' ಮತ್ತು 'ಸುಗ್ರೀವವಿವಾಹ ಪ್ರಯೋಗಮ್' ಮುಂತಾದ ಗ್ರಂಥಗಳನ್ನು ರಚಿಸಿದರು. ಅವರು ಭಗವದ್ಗೀತೆ ಮತ್ತು ಉಪನಿಷತ್ತಿನಲ್ಲಿ ಅಭಿರುಚಿಕೊಂಡವರಿದ್ದರು. ತನ್ನ ಕೊನೆಯ ದಿನಗಳಲ್ಲಿ ಮಲಯಾಳಂ ಟೀಕೆಯೊಂದಿಗೆ 'ವೇದಿಕ ಸಂಧ್ಯಾ' ಗ್ರಂಥವನ್ನು ಬರೆಯತೊಡಗಿದ್ದರು. ಮಲಯಾಳ ಸಾಹಿತ್ಯದ ಕುರಿತಾದ ಇವರ ಪ್ರಸಂಶನೀಯ ಸೇವೆಗೆ ಮೆಚ್ಚಿದ ಕೊಚ್ಚಿನ್‌ನ ಆ ಸಮಯದ ಅರಸು ಇವರ ಷಷ್ಠ್ಯಾಬ್ದಿ ಪೂರ್ತಿಯ ಸಂದರ್ಭದಲ್ಲಿ 'ಸಾಹಿತ್ಯ ಕೌಶಲನ್' ಬಿರುದು, ಪದಕ ಮತ್ತು ಪ್ರಶಸ್ತಿ ಪತ್ರಗಳನ್ನಿತ್ತು ಗೌರವಿಸಿದ.

ಸಂದರ್ಭಸೂಚಿ

೧. ಇದು ವಾಮನ ಮಂಗೇಶ ದುಭಾಷ್ ಇವರ 'ಆಲ್ ಇಂಡಿಯಾ ಸಾರಸ್ವತ್'ನ ೧೯೨೧ರ ಜುಲೈ ತಿಂಗಳ ಸಂಚಿಕೆಯಲ್ಲಿ ಪ್ರಸಿದ್ಧವಾದ 'ಗ್ರಮೇರಿಯನ್ ಭಟ್ಟೋಜಿ ದೀಕ್ಷಿತ್' ಲೇಖನವನ್ನಾಧರಿಸಿಕೊಂಡಿದೆ.

೨. ಅನುಭೂತಿ ಸ್ವರೂಪಾಚಾರ್ಯರು ಪ್ರತಿಪಾದಿಸಿದ ಸಾಂಪ್ರದಾಯಿಕ ಸಾರಸ್ವತ ವ್ಯಾಕರಣ ಕ್ರಿ.ಶ. ೧೨೫೦ರ ಹೊತ್ತಿಗೆ ಅಸ್ತಿತ್ವಕ್ಕೆ ಬಂದಿತು. ಸಂಕ್ಷಿಪ್ತತೆ ಮತ್ತು ಸರಳತೆ ಇವು ಈ ಪದ್ಧತಿಯ ಮುಖ್ಯ ಲಕ್ಷಣಗಳು. ಪಾಣಿನಿಯ ೪೦೦೦, ಜೈನೇಂದ್ರನ ೩೦೦೦, ಕಾತಂತ್ರನ ೧೪೦೦, ಭೋಪದೇವನ ೧೨೦೦ ಸೂತ್ರಗಳ ಪ್ರತಿ, ಇದು ಕೇವಲ ೭೦೦ ಸೂತ್ರಗಳಲ್ಲಿ ಸಮಗ್ರ ಶಾಸ್ತ್ರವನ್ನು ಅಳವಡಿಸಿಕೊಂಡಿದೆ - 'ದಿ ಸ್ಟ್ರಗಲ್ ಫಾರ್ ಎಂಪಾಯರ್, (ದಿ ಹಿಸ್ಟರಿ ಎಂಡ್ ಕಲ್ಚರ್ ಆಫ್ ದಿ ಇಂಡಿಯನ್ ಪೀಪಲ್)' ಸಂಪುಟ ೫, ಪುಟ ೩೨೦.

೩. ಅವರ ಗೋತ್ರ ಕೌಶಿಕ, ಕುಲ ದೇವಿ ಶಾಂತಾದುರ್ಗಾ.

೪. ನಾಥ ಸಂಪ್ರದಾಯದ ಹುಟ್ಟು ಎಂಟನೆಯ ಶತಮಾನದಲ್ಲಿ ಆದಿನಾಥನಿಂದಾಯಿತು. ಹತ್ತನೆಯ ಶತಮಾನದ ಆದಿಭಾಗದಲ್ಲಿ ಮತ್ಸ್ಯೇಂದ್ರನಾಥರು ಅದರಲ್ಲಿ ಹೊಸ ಜೀವ ತುಂಬಿದರು. ಅವರ ಹಿರಿಯ ಶಿಷ್ಯ ಗೋರಕನಾಥರು ಅದನ್ನು ಭಾರತದಾದ್ಯಂತ ಪ್ರಚಾರ ಮಾಡಿದರು. ಇವರು ಶಿವನನ್ನು ಆದಿನಾಥನೆಂದಾಗಿ ಪೂಜಿಸುತ್ತಾರೆ. ಇದು ಯೋಗ

ಸಿದ್ಧಾಂತಗಳ ಉಪದೇಶವನ್ನೀಯುತ್ತದೆ. ಮತ್ತೆ ಮನನದಿಂದ ಮುಕ್ತಿಗಳಿಸಬಹುದೆನ್ನುತ್ತದೆ. ಗೋರಕನಾಥನಿಂದ ರಚಿಸಲ್ಪಟ್ಟಂತಹವೆನ್ನಲಾಗುವ ಕೆಲವೊಂದು ಮರಾಠಿ ಪದಗಳು ಇಂದಿಗೂ ಕಾಣಸಿಗುತ್ತವೆ. 'ಗೋರಕ್ಷ - ಅಮರನಾಥ ಸಂವಾದ', ಈ ಗ್ರಂಥದ ಅಳಿದುಳಿದ ಭಾಗಗಳಿಂದ ಪ್ರಾಚೀನ ಮರಾಠಿ ಗದ್ಯ ಪ್ರಕಾರದ ಅರಿವುಕೊಳ್ಳಬಹುದು. ಅವರ ಶಿಷ್ಯರಿದ್ದ ಗೋಕಿನಿನಾಥ ಅಥವಾ ಗಾಯ್ಬಿನಾಥ ಇವರು ಮಹಾರಾಷ್ಟ್ರದಲ್ಲಿ ಈ ಪಂಥ ಪ್ರತಿಪಾದಿಸಿದ ಪ್ರಮುಖ ವ್ಯಕ್ತಿಯೊಬ್ಬರಾಗಿದ್ದರು. ಮತ್ಸೇಂದ್ರನಾಥರು ಮಂಗಳೂರಿಗೆ ಬಂದಿದ್ದಾಗ ಪರಿಮಳ ಹೆಸರಿನ, ಕೇರಳದ ಸಣ್ಣ ಪಾಳೆಯಗಾರ್ತಿ ಅವರ ಶಿಷ್ಯಳಾದಳು. ಅವರು ಅವಳಿಗೆ ಮಂಗಳಾದೇವಿ ಎಂಬ ಹೊಸ ಹೆಸರನ್ನಿತ್ತರು. ಅವಳಿಂದಾಗಿ ಹೊಸ ಹೆಸರು 'ಮಂಗಳೂರು' ರೂಢಿಗೆ ಬಂದಿತೆನ್ನುತ್ತಾರೆ. ಮಂಗಳೂರಿನ ಕದ್ರಿಯಲ್ಲಿರುವ ಮಂಗಳಾದೇವಿಯ ದೇವಸ್ಥಾನ ಈ ಪಂಥದ ಅನುಯಾಯಿಗಳಿಗೆ ಸಂಬಂಧಿಸಿದ್ದುದಾಗಿದೆ. ಕದ್ರಿಯಲ್ಲಿನ ದೇವಸ್ಥಾನವನ್ನು ಮಂಗಳೂರನ್ನು ಆಳುತ್ತಿದ್ದ ಆಳುಪ ಅರಸು ಕುಂದವುರಸ (ಕುಂದವರ್ಮ) ಕಟ್ಟಿಸಿದ್ದುದಾಗಿದೆ. ಈಗ ಅದನ್ನು ಸ್ಥಾನಿಕರು, ಸುತ್ತಣ ಊರಿನವರು, ಮೈಸೂರಿನ ಭಾವಿಕರು ಸಂದರ್ಶಿಸುತ್ತಾರೆ.

೫. ಅವರ ಗೋತ್ರ ಕೌಂಡಿನ್ಯ; ಕುಲದೇವರು ಮಂಗೇಶ

೬. ಅವರ ಗೋತ್ರ ಕೌಂಡಿನ್ಯ; ಕುಲದೇವರು ರಾಮನಾಥ. ಅವರು ವೈಷ್ಣವರಿದ್ದು ಗೋಕರ್ಣ ಮಠದ ಅನುಯಾಯಿಗಳಾಗಿದ್ದಾರೆ.

೭. ಗೋವಾದಲ್ಲಿನ ವಾಗಳಿ ಮನೆತನಕ್ಕೆ ಸೇರಿದ್ದ ದಿವಂಗತ ಪುರುಷೋತ್ತಮ ಮಂಗೇಶ ಲಾಡ್, ಐ.ಸಿ.ಎಸ್., ಇವರು ಈ ಪದವಿಕೊಂಡವರಲ್ಲಿನ ಖ್ಯಾತನಾಮರು. ಅವರು ಸಂಸ್ಕೃತ, ಪಾಲಿ ಮತ್ತು ಮರಾಠಿ ಭಾಷೆಗಳಲ್ಲಿ ಪಾಂಡಿತ್ಯ ಕೊಂಡವರಿದ್ದರು. ಅವರು ಅನ್ಯ ವಿದೇಶೀ ಭಾಷೆಗಳನ್ನೂ ಬಲ್ಲವರಿದ್ದರು. ಅವರು ಮರಾಠಿ ಭಾಷೆಯಲ್ಲಿ 'ತುಕಾರಾಮ ಕಥಾ' ಪುಸ್ತಕ ಬರೆದರು. ಬೊಂಬೇ ಸರಕಾರ ಅದನ್ನು ಇಂಗ್ಲಿಷ್ ಭಾಷೆಯಲ್ಲಿನ ಟೀಕೆಯೊಂದಿಗೆ ಪ್ರಕಾಶಿಸಿತು. ಅವರು ತನ್ನ ಮರಾಠಿ ಪದಗಳ ಸಂಗ್ರಹ 'ಮಧುಪರ್ಕ', 'ನಿಬಂಧ ಸಂಗ್ರಹ' ಇವನ್ನು ಕಾವ್ಯನಾಮ 'ಕೃತ್ತಿಕಾ' ಕೊಂಡು ಬರೆದರು. ೧೯೫೭ರಲ್ಲಿನ ಬುದ್ಧ ಜಯಂತಿಯನ್ನು ಆಚರಿಸುವಲ್ಲಿ ಅವರು ಸಕ್ರಿಯ ಭಾಗವಹಿಸಿದ್ದರು. ಅವರು ಸಂಗೀತ ನಾಟಕ ಅಕ್ಯಾಡೆಮಿಯ ಸದಸ್ಯರಿದ್ದರು.

೮. ಅವರ ಗೋತ್ರ ಕೌಶಿಕ ಮತ್ತು ಕುಲದೇವಿ ಶಾಂತಾದುರ್ಗಾ. ವೈಧವ್ಯ ಕೊಂಡ ಅವರ ಹಿರಿಯ ಮಗಳು ಶಾಂತಾಬಾಯಿ ೧೮೯೧ರಲ್ಲಿ ಎರಡನೆಯ ವಿವಾಹ ಮಾಡಿಕೊಂಡಾಗ ಕವಳೆ ಮಠದ ೭೪ನೆಯ ಗುರು, ಎರಡನೆಯ ಆತ್ಮಾನಂದ ಸರಸ್ವತಿಗಳು ಅವರ ಈ ವಿವಾಹಕ್ಕೆ ಶಾಸ್ತ್ರದ ಆಧಾರ ತೋರುವಂತೆ ಹೇಳಿದರು. ಆಗ ಅವರು ಪುನರ್ವಿವಾಹ ಸಮರ್ಥಿಸುವ ಕಾರಣ, ಸಂದರ್ಭ ಇತ್ಯಾದಿಗಳ ಸಮೇತ ಸಮರ್ಪಕವಾದ ಉತ್ತರವಿತ್ತರು. (ಮಠಸ್ತಗಣೇಶ ರಾಮಚಂದ್ರಶರ್ಮ ಇವರ 'ಸಾರಸ್ವತ ಭೂಷಣ', ೧೯೫೦, ಪುಟ ೫೯೪-೫೯೭)

೯. ಅವರ ಗೋತ್ರ ಕೌಂಡಿನ್ಯ ಮತ್ತು ಕುಲದೇವರು ಮಂಗೇಶ. ಬೈಲೂರು, ಭಟ್ಕಳದಿಂದ ಹದಿನೆರಡು ಮೈಲುಗಳ ದೂರದಲ್ಲಿದೆ. ಬೈಲೂರು ಮಠ ಪ್ರಸಿದ್ಧವಾದ ಮಾರ್ಕಾಂಡೇಯ ದೇವಸ್ಥಾನದ ಸಮೀಪವಿದೆ. ಮಠವನ್ನು, ಕೊಪ್ಪಿ ನಾರಾಯಣಪ್ಪ ಇವರು ತನ್ನ ಒಬ್ಬನಿದ್ದ ಮಗನನ್ನು ಹಾವಿನ ಕಡಿತದಿಂದ ಬದುಕಿಸಿದ ಕರ್ಹಾಡ ಬ್ರಾಹ್ಮಣರೂ, ಬೈಲೂರಿನ ಮಠದ ಮೊದಲ ಗುರುಗಳೂ ಆಗಿದ್ದ ಚಿದಾನಂದರಿಗೆ ಕೃತಜ್ಞತೆ ಸಲ್ಲಿಸಲಾಗಿ ಕಟ್ಟಿಸಿದರು.

ಗುರು ಚಿದಾನಂದರಿಗೆ ಇಬ್ಬರು ಶಿಷ್ಯರಿದ್ದರು; ಅವರ ಉತ್ತರಾಧಿಕಾರಿ ವಿಮಲಾನಂದ ಮತ್ತು ಕಾಯ್ಕಿಣಿ ಶಿವಪ್ಪ. ಗುರು ಚಿದಾನಂದರು ಮಠದ ಸಮೀಪದಲ್ಲಿ ಶಿವಗಂಗಾ ಹೆಸರಿನ ಸರೋವರ ನಿರ್ಮಿಸಿದರು. ಚಿದಾನಂದ, ವಿಮಲಾನಂದ, ಸಚ್ಚಿದಾನಂದ ಮತ್ತು ಬ್ರಹ್ಮಾನಂದ. (ಇವರು ಈ ಗುರುಪರಂಪರೆಯಲ್ಲಿನ ಕೊನೆಯವರು) ಇವರೆಲ್ಲರ ಸಮಾಧಿಗಳು ಈ ಮಠದಲ್ಲಿವೆ.

೧೦. ನಾನು ಇಲ್ಲಿನ ಹುಟ್ಟಿನ ವಿವರಗಳನ್ನು ತ್ರಿವೇಣಿಯ ಭಾಗ ೭-೨, ಸೆಪ್ಟೆಂಬರ್ - ಅಕ್ಟೋಬರ್, ೧೯೩೨, ಇದರಲ್ಲಿ ಪ್ರಸಿದ್ಧವಾದ ಶ್ರೀ ವಿ. ರಾಘವನ್ ಇವರ 'ಯಕ್ಷಗಾನ' ಲೇಖನದಿಂದ ಉದ್ಧರಿಸಿರುತ್ತೇನೆ.

೧೧. ಶೇಷಪ್ಪನವರು ಬಂಟ್ವಾಳದ ನಿವಾಸಿಗಳು. ಅವರ ಕುಲನಾಮ ಪೈ; ಗೋತ್ರ ಕೌಶಿಕ, ಸಾಂತೇರಿ ಕಾಮಾಕ್ಷಿ ಇವರ ಕುಲದೇವಿ. ಅವರ ಕುಟುಂಬೀಯರ ಮನೆ ಮತ್ತು ವ್ಯಾಪಾರದ ಸ್ಥಾನ, ಇವನ್ನು ಬಂಟ್ವಾಳದ ಹೊಸಪೇಟೆಯಲ್ಲಿ ಈಗಲೂ ಕಾಣಬಹುದು. ಜನರು ಅವರನ್ನು 'ಯಜಮಾನ' ಎಂದಾಗಿ, ಮನೆಯವರನ್ನು 'ಯಜಮಾನರ ಮನೆಯವರು' ಎಂದಾಗಿಯೂ ಕರೆಯುತ್ತಾರೆ.

೧೨. ಮುಂಡ್ಕೂರು ವೆಂಕಟಪ್ಪಯ್ಯನವರ ಕುಲನಾಮ ಪ್ರಭು. ಗೋತ್ರ ವತ್ಸ ಮತ್ತು ಕುಲದೇವರು ರವಳನಾಥ.

೧೩. ವಿಶ್ವನಾಥಯ್ಯ ಇವರು ಕಾರ್ಕಳದ ಸಮೀಪದಲ್ಲಿನ ನಂದಳಿಕೆಯವರು; ಅವರ ಕುಲನಾಮ ಕಿಣಿ; ಗೋತ್ರ ಕೌಶಿಕ ಮತ್ತು ಕುಲದೇವಿ ಮ್ಹಾಳಸಾ.

೧೪. 'ಡೆಕ್ಕನ್ ಹೆರಾಲ್ಡ್', ಬೆಂಗಳೂರಿನ ೧೯೫೭ ಫೆಬ್ರವರಿ ತಿಂಗಳ ೩ರ ದೈನಿಕದಲ್ಲಿ ಪ್ರಕಾಶಿತವಾದ ಎಸ್.ರಾಮಚಂದ್ರ ಇವರ 'ಪರ್ಲ್ಸ್ ಇನ್ ದಿ ಕಲ್ಚರ್ ಆಫ್ ಮೈಸೂರ್' ಲೇಖನ.

೧೫. ಸಂಗೀತ ಕಲಾನಿಧಿ ಕೆ. ವಾಸುದೇವಾಚಾರ್ಯ ಇವರು ೧೯೫೭ರಲ್ಲಿ ಪ್ರಕಾಶಿಸಿದ 'ನಾ ಕಂಡ ಕಲಾವಿದರು' ಈ ಪುಸ್ತಕದಲ್ಲಿ ತನ್ನ ಸಂಗೀತ ಪ್ರವಾಸದ ವಿಸ್ತೃತ ವಿವರಗಳನ್ನಿತ್ತಿರುತ್ತಾರೆ.

೧೬. ಅವರ ಗೋತ್ರ ವತ್ಸ ಮತ್ತು ಕುಲದೇವರು ಮಂಗೇಶ.

೧೭. ಕನ್ನಡ ಕವಿತೆಗಳ ಮೂರು ಪುಸ್ತಕಗಳಲ್ಲಿನ ಮೊದಲ ಎರಡು ೧೯೧೯ರಲ್ಲಿ ಬಾಸೆಲ್ ಮಿಶನ್ ಪ್ರೆಸ್, ಮಂಗಳೂರು, ಇಲ್ಲಿ ಮುದ್ರಿಸಲ್ಪಟ್ಟವು. ಅವು ಶ್ರೀ ಟಿ. ಲಕ್ಷ್ಮಣ ಶೆಣೈ (ವತ್ಸ ಗೋತ್ರ, ಕುಲದೇವರು ನರಸಿಂಹ) ಇವರ ಸುಂದರವಾದ ಕವಿತೆಗಳನ್ನೊಳಗೊಂಡಿವೆ. ಈ ಕವಿತೆಗಳು ಮಂಗಳೂರಿನ 'ಸ್ವದೇಶಾಭಿಮಾನಿ'ಯಲ್ಲಿ ಪ್ರಕಾಶಿಸಲ್ಪಟ್ಟವಾದರೂ ದುರ್ದೈವಕ್ಕೆ ಅವು ಲೇಖಕನ ಹೆಸರನ್ನು ಕೊಂಡಿರದಿದ್ದವು. ಶ್ರೀ ಟಿ. ಲಕ್ಷ್ಮಣ ಶೆಣೈ ಉತ್ತಮ ಭವಿಷ್ಯ ಕೊಂಡ ನವೋದಿತ ಕವಿಗಳಾಗಿದ್ದರು; ಅವರ ೧೯೧೭ರಲ್ಲಿ ವಿಷಮ ಜ್ವರದ ನಿಮಿತ್ತ ತೀರಿಕೊಂಡರು. ಆಗ ಅವರು ಮಂಗಳೂರಿನ ಸೈಂಟ್ ಅಲೋಸಿಯಸ್ ಕಾಲೇಜಿನಲ್ಲಿ ಬಿ.ಎ.,ಯ ಪದವಿಗಾಗಿ ಅಭ್ಯಾಸ ಮಾಡುತ್ತಿದ್ದರು.

ಇವರು, ರಾಮಚಂದ್ರ ಭಿಕಾಜಿ ಗುಂಜೀಕರ್ ಇವರ 'ಸರಸ್ವತಿ ಮಂಡಲ' ಗ್ರಂಥವನ್ನಾಧರಿಸಿ ಕನ್ನಡದಲ್ಲಿ 'ಗೌಡ ಸಾರಸ್ವತ ಬ್ರಾಹ್ಮಣಾಖ್ಯಾನ' ಬರೆದ ತಲ್ಲಿಚೇರಿಯ ವಾಸುದೇವ ಶಾನುಭಾಗರ ಮೊದಲ ಮಗ.

೧೮. ಅವರ ಗೋತ್ರ ವತ್ಸ; ಕುಲದೇವರು ಮಹಾಗಣಪತಿ.

೧೯. ಅವರ ಗೋತ್ರ ಕೌಶಿಕ; ಕುಲದೇವಿ ಮ್ಹಾಳಸಾ.

೨೦. ದಿವಂಗತ ಎಮ್. ಶೇಷಗಿರಿ ಪ್ರಭುಗಳ ಗೋತ್ರ ಕಾಶ್ಯಪ. ಅವರ ಕುಟುಂಬೀಯರು. ಶಾಂತಾದುರ್ಗಾ ದೇವಿಯನ್ನು ಕುಲದೇವಿಯೆನ್ನುತ್ತಾರೆ. ವಿಷ್ಣು ರಂಗಾಜಿ ಶೆಲ್ಡೆಕರ್ ಮತ್ತು ಮುಕುಂದ ಸದಾಶಿವ ಶೆಲ್ಡೆಕರ್ ಇವರು ಬರೆದ 'ಶ್ರೀ ಶಾಂತಾದುರ್ಗಾ ಸಂಸ್ಥಾನಾಚಾ ಸಂಕ್ಷಿಪ್ತ ಇತಿಹಾಸ'ದ ಮೇರೆಗೆ ಶಾಂತಾದುರ್ಗಾದೇವಿಯ ಮಹಾಜನರಲ್ಲಿ ಕಾಶ್ಯಪಗೋತ್ರದ ಕುಟುಂಬಗಳ ಸಮಾವೇಶವಿದ್ದಿಲ್ಲ. ಬಹುತೇಕ ಅವರ ಕುಲದೇವಿ ಸಾಂತೇರಿ ಕಾಮಾಕ್ಷಿಯಿದ್ದಿರಬೇಕು.

ಅಧ್ಯಾಯ ೨೧

ಔತ್ತರೇಯ ಸಾರಸ್ವತರು

ಜೋರ್ಜ್ ಕ್ಯಾಂಬೆಲ್ ತನ್ನ 'ಎತ್ನೋಲೋಜಿ ಆಫ್ ಇಂಡಿಯಾ' ಪುಸ್ತಕದಲ್ಲಿ ಹೀಗೆ ನುಡಿದಿರುತ್ತಾರೆ.[೧]:

''ಸಾರಸ್ವತರು ವೈದಿಕ ಧರ್ಮದಲ್ಲಿ ಆಸ್ಥೆಯಿರಿಸಿದ್ದ ಪ್ರಾಚೀನ ಕಾಲದ ಸರಳ ಸ್ವಭಾವದ ಹಿಂದುಗಳಾಗಿದ್ದರು. ವೈದಿಕ ಧರ್ಮ ಈಗ ಬೆಳೆದುಕೊಂಡಿರುತ್ತದೆ. ಗಂಗೆಯ ಬಯಲು ಭಾಗ ಮತ್ತು ಭಾರತದ ಇನ್ನಿತರ ಪ್ರದೇಶಗಳಲ್ಲಿ ಈ ಧರ್ಮ ಈಗ ವಿಭಿನ್ನ ಸ್ತರ, ಸ್ಥಿತಿಗಳಲ್ಲಿರುವುದನ್ನು ಕಾಣಬಹುದು. ಸರಸ್ವತಿ ನದಿಯ ತೀರದಲ್ಲಿನ ಸಾರಸ್ವತರ ವಾಸ್ತವ್ಯ ಭಾರತದ ಸಾಂಸ್ಕೃತಿಕ ಇತಿಹಾಸದ ಅತಿ ಮಹತ್ತಿನ ಹಂತವೊಂದಾಗಿತ್ತು. ಇಲ್ಲಿ ಬ್ರಾಹ್ಮಣರಿಗೆ ಅನ್ಯ ಜನಾಂಗದವರ ಸಂಪರ್ಕವಾಯಿತು. ತತ್ಪರಿಣಾಮ ಜಾತಿ ಮಾನ್ಯತೆ ಕೊಂಡಿತು. ಪ್ರಾಚೀನ ಹಿಂದೂ ಧರ್ಮ ಸಾಹಿತ್ಯಿಕ ಮತ್ತು ಐತಿಹಾಸಿಕವಾಯಿತು.

ಪರಾಕಾಷ್ಠೆಯು ಜಾತಿ, ಧರ್ಮ, ಧಾರ್ಮಿಕ ವ್ಯವಸ್ಥೆ, ಗಂಗಾತೀರದಲ್ಲಿನ ಉಚ್ಚ ವರ್ಗದ ಬ್ರಾಹ್ಮಣ್ಯ, ಹಿಂದುತ್ವ ಮುಂತಾದವು ನಿರ್ದಿಷ್ಟ ರೂಪಾಕೃತಿಕೊಳ್ಳುವುದರಲ್ಲಿದ್ದವು. ಆದರೆ ಸರಸ್ವತಿ ನದಿಯ ತೀರದ ನಿವಾಸಿಗಳ ವಂಶಜರು ಮಾತ್ರ ತಮ್ಮ ಪೂರ್ವಜರ ರೀತಿ, ರಿವಾಜು, ನಂಬಿಕೆಗಳನ್ನು ಯಥಾಪೂರ್ವ ಜೀವಂತವಾಗಿಟ್ಟಿದ್ದರು''

ಮುಂದೆ ಅವರು ನುಡಿಯುತ್ತಾರೆ :

''ಈ ದೇಶದಲ್ಲಿನ ಸಾರಸ್ವತರು, ಎಲ್ಲೇ ಕಾಣ ಬರಲಿ, ಅವರು ಶಾಂತಿ ಪ್ರಿಯ, ಉದ್ಯೋಗ ಶೀಲ, ಬುದ್ಧಿವಂತರಿದ್ದುದನ್ನು ಕಾಣಬಹುದು''

ರೆವರಂಡ್ ಎಮ್.ಎ.ಶೆರ್ರಿಂಗ್ ಇವರು ತನ್ನ ಪುಸ್ತಕ 'ಹಿಂದು ಟ್ರೈಬ್ಸ್ ಎಂಡ್ ಕಾಸ್ಟ್ಸ'ದಲ್ಲಿ ಸಾರಸ್ವತರ [೨] ಉಲ್ಲೇಖ ಮಾಡುವಾಗ ಹೀಗೆ ನುಡಿದಿರುತ್ತಾರೆ : ''ನಿರ್ವಿವಾದವಾಗಿ ಇದು ಬ್ರಾಹ್ಮಣರ ಪ್ರಾಚೀನ ಬಣವೊಂದಾಗಿದೆ; ಇದು ಇಂದಿಗೂ ಹಿಂದೂಧರ್ಮದ ಮೂಲಸ್ಥಾನದಲ್ಲಿ ನೆಲಸಿಕೊಂಡಿದೆ... ಹಿಂದೂ ಪುರಾಣೇತಿಹಾಸಗಳಲ್ಲಿ ನಿರಂತರ ಉಲ್ಲೇಖಿಸಲ್ಪಡುತ್ತಿದ್ದ ಪವಿತ್ರ, ಪ್ರಸಿದ್ಧ ಸರಸ್ವತಿಯು ನೀರನ್ನುಂಡ ಭೂಮಿಯಲ್ಲಿನ ಸಾರಸ್ವತರು ಪುರಾತನ ಕಾಲದ ಬ್ರಾಹ್ಮಣ ಸಮಾಜಕ್ಕೆ ಸಂಬಂಧಿಸಿದವರೆಂಬುದನ್ನು ನಂಬಲು ಅನೇಕ ಆಧಾರಗಳಿವೆ. ಸಾರಸ್ವತ ಬ್ರಾಹ್ಮಣರು ಭಾರತದ ಅನೇಕ ಭಾಗಗಳಲ್ಲಿ ಕಾಣಬರುತ್ತಾರಾದರೂ ಪಂಜಾಬ್ ಅವರ ತವರೂರಾಗಿದೆ. ಪ್ರಾಚೀನ ಬುಡಕಟ್ಟಿನ ಇವರು ಭಾರತಕ್ಕೆ ವಲಸೆ ಬಂದವರಲ್ಲಿ ಮೊತ್ತ ಮೊದಲಿನವರೆನ್ನಬಹುದು''[೩]

ಡಾಕ್ಟರ್ ಜೆ. ವಿಲ್ಸನ್[೪] ಇವರು ಹೇಳುತ್ತಾರೆ; ''ಅದೊಂದು ಅರ್ಥದಲ್ಲಿ ವಿಶಾಲ ಮನಸ್ಕರಿದ್ದ ಸಾರಸ್ವತರು ಭಾರತದಲ್ಲಿನ ಅನ್ಯ ಬ್ರಾಹ್ಮಣೇತರ ವ್ಯವಸ್ಥೆಗಳತ್ತ ಉದಾರಶೀಲರಿದ್ದುದು ತೋರಿಬರುತ್ತದೆ.''

ಸಾರಸ್ವತರು ಪಂಜಾಬಿನಲ್ಲಿದ್ದ ಮೂಲದ ಸ್ಥಾನ ಬಿಟ್ಟು ಭಾರತದ ವಾಯುವ್ಯ

ಸರಹದ್ದಿನಲ್ಲಿನ ಪ್ರಾಂತ, ಉತ್ತರ ಪ್ರದೇಶ, ಬಿಹಾರ, ರಜಪುತಾನಾ, ಸಿಂಧ್, ಗುಜರಾತ, ಕೊಂಕಣ ಮುಂತಾದೆಡೆಗಳಿಗೆ ವಲಸೆ ಹೋದರು. ಕಾಬುಲ್, ಕಂದಹಾರ, ಯರ್ಕ್ ಮತ್ತು ಮಧ್ಯ ಆಸ್ಯಾದಲ್ಲೂ ಸಾರಸ್ವತರ ವಾಸಸ್ಥಾನಗಳಿವೆ.

ಪಂಡಿತ ಗೋವಿಂದ ನಾರಾಯಣ ಮಿಶ್ರ ಇವರು ತನ್ನ 'ಸಾರಸ್ವತ ಸರ್ವಸ್ವ'ದಲ್ಲಿ ಹೀಗೆನ್ನುತ್ತಾರೆ : ಅವರ ಸಂಖ್ಯೆ ಎಷ್ಟೇ ಇರಲಿ, ನಿವಾಸ ಸ್ಥಾನ ಯಾವುದೇ ಇರಲಿ ಅವರ ಮೂಲವನ್ನು ಈಗ ವಿಕೃತರೂಪುಕೊಂಡು ಅಥೋಹೈಕುಲವೆಂದು ಕರೆಯಲ್ಪಡುವ ಅತ್ಥಯ ಕುಲ (ಅಷ್ಟವಂಶಿ) ಅಥವಾ ಅತ್ಥಯಧರ ಪಂಚ ಜಾತಿ ಇವುಗಳಲ್ಲಿ ಅರಸಬಹುದಾಗಿದೆ. ಪಂಜಾಬಿನಲ್ಲಿ ಕಾಣಬರುವ ಇವರು ಶುಕ್ಲ ಯಜುರ್ವೇದಿಗಳಿದ್ದು ಕುಮಾಡಿಯೆ ಸೂತ್ರಗಳನ್ನನುಸರಿಸುವ ಮಾಧ್ಯಂದಿನ ಶಾಖೆಗೆ ಸೇರಿದವರಿದ್ದಾರೆ. ಅವರ ವರ್ಗ ದೊಡ್ಡದಿದೆ. ಅವರನ್ನು ಕುಲ ದೇವರಿದ್ದ ಕುಮಾರ ಅಥವಾ ಕಾರ್ತಿಕೇಯನ ಹೆಸರಿನಿಂದ ಗುರುತಿಸಲಾಗುತ್ತದೆ. ಅವರು ಭಾರ್ಗವ, ಅಪ್ನವಮ್, ಚ್ಯವನ, ಅರುಣ ಮತ್ತು ಜಾಮದಗ್ನ ಎಂಬೀ ಐದು ಪ್ರವರ (ಗೋತ್ರಪತಿ) ಗಳನ್ನೊಳಗೊಂಡ ಜಾಮದಗ್ನ್ಯಾ ವತ್ಸ ಗೋತ್ರೀಯರಾಗಿದ್ದಾರೆ. ಅವರ ಉಪವೇದ ಧನುರ್ವೇದ; ಅದೊಂದು ಕಾಲದಲ್ಲಿ ಅವರು ಅರಸುಮನೆತನದ ಪುರೋಹಿತರಾಗಿದ್ದರು. (ಪಂಡಿತ ಗೋವಿಂದ ನಾರಾಯಣ ಮಿಶ್ರ ಈ ವಿಭಾಗಕ್ಕೆ ಸಂಬಂಧಿಸಿದವರಾಗಿದ್ದಾರೆ). ಅಕ್ಬರನ ಮೆಚ್ಚಿನ ರಾಜಾ ಬೀರ್‌ಬಲ್ ಇದೇ ವರ್ಗಕ್ಕೆ ಸೇರಿದವರಿದ್ದರು.

೧೯೨೦ರಲ್ಲಿ ವಾಣಿಜ್ಯ ನಿಯೋಗದ ಸದಸ್ಯರಾಗಿ ಭಾರತ ಸಂದರ್ಶಿಸಿದ ಅಫಘಾನಿಸ್ಥಾನದ ಅರಸು ಅಮಾನುಲ್ಲಾ ಇವರ ವಿತ್ತ ಮಂತ್ರಿ, ಬ್ರಿಗೇಡಿಯರ್ ಜನರಲ್ ಪಂಡಿತ ನಾರಾಯಣದಾಸರು ಇವರ ವಂಶಜರಿದ್ದರು. ಸಿಖ್ಖ್ ಸರಕಾರದ ಸೇವೆಯಲ್ಲಿದ್ದ ರಾಜಾ ಸಾಹಿಬ್ ದಯಾಲರು 'ಕುಮಾಡಿಯೆ' ಇದ್ದರು.

ಜೇತ್ಲಿ : ಅವರ ಕುಲವೃಕ್ಷ ಜಯಂತಿ (ಶಮಿವೃಕ್ಷ)ಯಿದ್ದ ನಿಮಿತ್ತ ಅವರನ್ನು ಹೀಗೆ ಕರೆಯಲಾಗುತ್ತದೆ. ಆಂಗೀರಸ, ಗೌತಮ ಮತ್ತು ಔಶಾಸನ ಪ್ರವರತ್ರಯಗಳಲ್ಲಿ ಅವರು ಗೌತಮ ವತ್ಸ್ಯ ಗೋತ್ರಕ್ಕೆ ಸಂಬಂಧಿಸಿದವರಿದ್ದರು. ಚಂಡೀಧರ ಅವರ ಕುಲದೇವತೆ.

ಝಿಂಗಾನ್: ಇದು ಝಿಂಗ ಅಥವಾ ಝಾಂಝ್ (ಗಂಟೆ)ಯಿಂದ ಉತ್ಪನ್ನವಾಯಿತೆನ್ನುತ್ತಾರೆ. ಆಂಗೀರಸ, ಬೃಹಸ್ಪತ್ಯ ಮತ್ತು ಭರದ್ವಾಜ ಪ್ರವರ ತ್ರಯಗಳಲ್ಲಿ ಇವರು ಭರದ್ವಾಜ ಗೋತ್ರಕ್ಕೆ ಸಂಬಂಧಿಸಿದವರಿದ್ದಾರೆ. ಇವರ ಉಪವೇದ 'ಧನುರ್ವೇದ', ಕುಲದೇವಿ ಚಂಡಿಕಾ ಭವಾನಿ. ರಾಜಾ ತೋಡರಮಲ್ 'ಟಂಡನ್' ಆಗಿದ್ದು ಈ ವರ್ಗಕ್ಕೆ ಸೇರಿದವರಿದ್ದರು.

ಟಿಕ್ಕೆ (ತ್ರಿತ್ಸುವಿನ ಅಪಭ್ರಂಶ) : ಇವರು ವಸಿಷ್ಠ, ಶಕ್ತಿ ಮತ್ತು ಪರಾಶರ ಪ್ರವರ ತ್ರಯಗಳಲ್ಲಿನ ಪರಾಶರ ಗೋತ್ರಕ್ಕೆ ಸಂಬಂಧಿಸಿದವರಿದ್ದರು. 'ದಕ್ಷಿಣ' ಅವರ ಶಾಖೆಯಿತ್ತು.

ಮೊಹಾಳೆ (ಮುಶಾಳದ ಅಪಭ್ರಂಶ) : ಅವರು ಕಾಶ್ಯಪ, ಅವತ್ಸತ ಮತ್ತು ನೈಧ್ರುವ ಎಂಬೀ ಪ್ರವರತ್ರಯಗಳ ಸೋಮಸ್ತಂಭ ಗೋತ್ರಕ್ಕೆ ಸಂಬಂಧಿಸಿದವರಿದ್ದರು. ಅವರ ಕುಲದೇವಿ ಚಂಡಿಕಾ.

ಪಾಕಿಸ್ತಾನ ಅಸ್ತಿತ್ವಕ್ಕೆ ಬರುವ ಮುನ್ನ ಲಾಹೋರ್, ಗುರುದಾಸ್‌ಪುರ, ಪಟಿಯಾಲಾ, ಜಲಂಧರ್, ಮುಲ್ತಾನ್, ಉಚ್ಚ್, ಝಂಗ್ ಮತ್ತು ಶಹಾಪುರ ಈ ಸ್ಥಾನಗಳಲ್ಲಿ ಪಂಚಜಾತಿ ಸಾರಸ್ವತ ಸಮಾಜಗಳಿದ್ದುವು. ಪಂಚಜಾತಿ ಸಮಾಜಗಳಲ್ಲಿನ ಅತಿ ಪುರಾತನವೆನ್ನಲಾಗುವ ದೈಧರರ ಸಮಾಜ ಲಾಹೋರಿನ ಸಮೀಪ ವಾಸಿಸುತ್ತಿದ್ದು ಅವರು ದೈಧರ ಲಾಹೋರಿಯಾ ಎಂದಾಗಿ ಪರಿಚಿತರಾಗಿರುತ್ತಾರೆ.

ಪಂಡಿತ್ ತುಲಸಿ ರಾಮ್ಜಿ ಇವರು ತನ್ನ 'ಜಾತಿ ವಿಭಾಗ'ದಲ್ಲಿ ಅಷ್ಟವಂಶಿ ಸಾರಸ್ವತರು ಮಥುರಾ, ಅಲಿಘರ್, ಆಗ್ರಾ, ರಜಪುತಾನಾ ಮತ್ತು ಸಿಂಧ್‌ಗಳ ನಡುವಣ ಪ್ರದೇಶದಲ್ಲಿ ವಾಸ ಮಾಡಿಕೊಂಡಿದ್ದರೆಂದು ನುಡಿಯುತ್ತಾರೆ.

ಸಾರಸ್ವತರಿದ್ದ ಪ್ರಸಿದ್ಧ ಹಿಂದಿ ಕವಿ, ಪಂಡಿತ್ ಶ್ರೀಧರ ಪಾಟಕ್ ಇವರ ಮೇರೆಗೆ ಉತ್ತರ ಭಾರತದಲ್ಲಿನ ಸಾರಸ್ವತರನ್ನು ಈ ಮುಂದಣ ಮುಖ್ಯ ಬಣಗಳಲ್ಲಿ ವಿಭಾಗಿಸಬಹುದು":

೧. ಉತ್ತರ ದೇಶದ ಸಾರಸ್ವತರು

ಲಾಹೋರಿಯಾರೊಂದಿಗಿನ ಪಂಜಾಬಿಗಳು, ದಿಲ್ವಾಲಿಯರು, ಪಂಚಮೀಯರು ಮತ್ತು ಪೂರಬಿಗಳು ಈ ವರ್ಗಕ್ಕೆ ಸೇರಿದವರು. ಈ ವರ್ಗ ಛ ಜಾತಿ (ಆರು ಬಣಗಳು), ಅಷ್ಟವಂಶ (ಎಂಟು ಬಣಗಳು), ಬಾರಾ ಜಾತಿ (ಹದಿನೆರಡು ಬಣಗಳು) ಮತ್ತು ಬ್ರಹ್ಮಮ್ ಜಾದೆ (ಐವತ್ತೆರಡು ಬಣಗಳು; ಇವುಗಳಲ್ಲಿನ ಕೇವಲ ಹನ್ನೊಂದರ ಪತ್ತೆ ಹಚ್ಚಲಾಗಿದೆ.) ಇವನ್ನೊಳಗೊಂಡ ಪಥಾಡೆ ಮತ್ತು ಪವಾಡೆ ಎಂಬೀ ಉಪವಿಭಾಗಗಳಲ್ಲಿ ವಿಭಜಿಸಲ್ಪಟ್ಟಿದೆ.

ರಜಪುತಾನಾ ಮತ್ತು ಸಿಂಧ್‌ಗಳಲ್ಲಿನ ಸಾರಸ್ವತರ ಹೊರತು, ಉತ್ತರ ಪ್ರದೇಶದ ವಾಯುವ್ಯ ದಿಕ್ಕಿನಲ್ಲಿದ್ದ ತಾಗಾ, ಪಾಕಿಸ್ತಾನ ಅಸ್ತಿತ್ವಕ್ಕೆ ಬರುವ ಮುನ್ನವೇ ಅಲ್ಲಿ ವಾಸಮಾಡಿಕೊಂಡಿದ್ದ ಪಶ್ಚಿಮ ಪಂಜಾಬಿನ ಮೊಹಿಯಾಲ, ಬಾರಾ ವಿಭಾಗದಲ್ಲಿನ, ಮುಸಲ್ಮಾನರ ಆಳ್ವಿಕೆಯ ದಿನಗಳಲ್ಲಿ ಸೈನಿಕರಾಗಿದ್ದು 'ಖಾನ್' ಎಂದಾಗಿ ಸಂಬೋಧಿಸಲ್ಪಡುತ್ತಿದ್ದ ಪ್ರಭಾಕರ, ಉತ್ತರ ಪ್ರದೇಶದ ಪೂರ್ವ ಭಾಗದಲ್ಲಿ ಮತ್ತು ಬಿಹಾರದಲ್ಲಿದ್ದ ಮೊಹಿಯಾಲ, ಬಣಗಳೂ ಈ ಮೇಲಿನ ವರ್ಗಗಳನ್ನು ಸೇರಿಕೊಂಡಿವೆ.

ನಗರಗಳಲ್ಲಿ ವಾಸಿಸುತ್ತಿದ್ದ ಅವರಲ್ಲಿನ ಕೆಲವರು ಪುರೋಹಿತರಾಗಿದ್ದಾರೆ. ಬಾರಾಹಿ ವಿಭಾಗದ ಚಿತ್ರೈಟ್ ಇವರು ಸಿಖ ಅರಸರ ಪುರೋಹಿತರಾಗಿದ್ದರು. ಯೋಧರನ್ನುಳಿದರೆ ಅವರಲ್ಲಿನ ಹೆಚ್ಚಿನವರು ಬೇಸಾಯಗಾರರಾಗಿದ್ದರು. ಬೆಟ್ಟದೂರಿನ ಸಾರಸ್ವತರು ತಾವು ಅನುಸರಿಸಬೇಕಿದ್ದ ವೇದ, ಅವುಗಳ ಶಾಖೆ ಇತ್ಯಾದಿಗಳನ್ನು ಮರೆತಿದ್ದರು.

ಪಂಜಾಬ್ ಮತ್ತು ಸಿಂಧ್‌ಗಳಲ್ಲಿನ ಹೆಚ್ಚಿನ ಬ್ರಾಹ್ಮಣರು ಸಾರಸ್ವತರಾಗಿರುತ್ತಾರೆ. ಪಂಜಾಬ್, ಕಾಶ್ಮೀರ, ಸಿಂಧ್ ಮತ್ತು ಬೆಟ್ಟದೂರುಗಳಲ್ಲಿನ ಸಾರಸ್ವತರು ಸ್ಮೃತಿಗಳು ನಿರ್ಬಂಧಿಸಿದ್ದ ಮೀನು, ಮಾಂಸಗಳನ್ನು ಸ್ವೇಚ್ಛೆಯಿಂದ ತಿನ್ನುತ್ತಾರೆ.

೨. ಪಂಜಾಬಿನ ಸಾರಸ್ವತರು

ಪಂಜಾಬಿನ ಸಾರಸ್ವತರು ಮಾಧ್ಯಂದಿನ ಶಾಖೆಗೆ ಸೇರಿದವರಿದ್ದು ಶುಕ್ಲ ಯಜುರ್ವೇದವನ್ನನುಸರಿಸುತ್ತಿದ್ದರು. ಅವರು ನಾಲ್ಕು ಮುಖ್ಯ ವಿಭಾಗಗಳಲ್ಲಿ ವಿಭಜಿಸಲ್ಪಟ್ಟಿರುತ್ತಾರೆ:

೧) ಪೌರೋಹಿತ್ಯವನ್ನು ಜೀವನಾಧಾರವಾಗಿಕೊಂಡು ಬಾಳುತ್ತಿದ್ದ ಬ್ರಹ್ಮ ಋಷಿಗಳು.

೨) ಈ ಕೆಳಗಿನಂತೆ ಮತ್ತೆ ವಿಭಜಿಸಲ್ಪಟ್ಟ ರಾಜ ಋಷಿಗಳು :

ಅ) ಎಂಟು ವಿಭಾಗಗಳನ್ನೊಳಗೊಂಡ ಅಷ್ಟವಂಶೀಯರು.

ಆ) ಹದಿನೇಳು ವಿಭಾಗಗಳ ಗರ್ವಾಲಿಯರು.

ಇ) ಐದು ಜಾತಿಗಳ ಪಂಚಜಾತಿಯವರು

ಈ) ೪೩೭ ಜಾತಿಗಳಿಗೂ ಕಡಿಮೆಯಿರದಿದ್ದ ರಾಜಬನ್ನಿಗಳು (ಸರ್ವ ಸಾಮಾನ್ಯವಾಗಿ ಅವರು ಸೈನಿಕರು ಅಥವಾ ಬೇಸಾಯಗಾರರಾಗಿದ್ದರು)

೩) ಇವೆಲ್ಲವುಗಳಲ್ಲಿ, ದೊಡ್ಡ ಪ್ರಮಾಣದಲ್ಲಿ ಯೋದ್ಧರ ವೃತ್ತಿಕೊಂಡ, ಏಳು ವರ್ಗಗಳಲ್ಲಿ ವಿಂಗಡಿಸಲ್ಪಟ್ಟ ಮುಹಿಯಾಲೊ.

೪) ೧೬೪ ವಿಭಾಗಗಳಲ್ಲಿ ವಿಭಜಿಸಲ್ಪಟ್ಟ ಭೂಮಿಹಾರರು; ಇವರು ಸರ್ವಸಾಮಾನ್ಯವಾಗಿ ಜಮೀನುದಾರರು ಅಥವಾ ರೈತರಾಗಿದ್ದರು.

ಇವರು ಯಾವೊಂದು ಅಡೆ-ತಡೆಗಳಿಲ್ಲದೆ ಅಂತರ್ಭೋಜನಗಳಲ್ಲಿ ಭಾಗವಹಿಸುತ್ತಿದ್ದು ಒಬ್ಬರಿನ್ನೊಬ್ಬರಲ್ಲಿನ ಶುಭಕಾರ್ಯ, ಅಂತ್ಯಕ್ರಿಯೆಗಳಲ್ಲಿ ಭಾಗವಹಿಸುತ್ತಿದ್ದರು. ಆದರೆ ಅಂತರ್ವಿವಾಹ ಮಾತ್ರ ಜರಗದಿತ್ತು. ಅವರಲ್ಲಿನ ಕೆಲವರು ಅನ್ಯ ವಿಭಾಗಗಳ ವಧುಗಳನ್ನು ತರುತ್ತಿದ್ದರಷ್ಟೆ ವಿನಾ ತಮ್ಮ ಕನ್ಯೆಯರನ್ನು ಅವರಲ್ಲಿಗೀಯುತ್ತಿದ್ದಿಲ್ಲ.

ಅಲ್ಲಿ 'ಗೋಸಾಯಿ'ಗಳಂತಿನ ಸಂಪ್ರದಾಯಸ್ಥರ ವರ್ಗವಿತ್ತು. ಸ್ವಾಮಿ ರಾಮತೀರ್ಥರು ಆ ಬಗೆಯ ಸಂಪ್ರದಾಯಸ್ಥರ ವರ್ಗಕ್ಕೆ ಸೇರಿದವರಿದ್ದರು.

೩. ಮುಹಿಯಾಲರು

ಮುಹಿಯಾಲ, ಮಹಿವಾಲ (ಭೂಮಿಕೊಂಡಿದ್ದಾತ, ಜಮೀನುದಾರ) ಶಬ್ದದಿಂದ ಉತ್ಪನ್ನವಾಗಿದೆ. ಮುಹಿಯಾಲರು ಮಹಿಪ್ಪ, ರಾಜಾ, ಸಪ್ತ ಬನ್ನಿಗಳೆಂದೂ ಪರಿಚಿರಾಗಿರುತ್ತಾರೆ. ಇವರು ಮುಖ್ಯತಃ ಝೀಲಮ್, ಸಿಯಾಲ್‌ಕೋಟ್, ಗುರುದಾಸಪುರ ಮತ್ತು ಜಲಂಧರ ಜಿಲ್ಲೆಗಳಲ್ಲಿ ಕಾಣಬರುತ್ತಾರೆ. ಸುಮಾರು ೧೦,೦೦೦ ಜನರು ಜಮ್ಮು ಪ್ರಾಂತದಲ್ಲಿ ವಾಸಿಸುತ್ತಿದ್ದಾರೆಂದು ನಂಬಲಾಗುತ್ತದೆ.

ಅವರು ಏಳು ಬಣಗಳಲ್ಲಿ ವಿಭಾಜಿಸಲ್ಪಟ್ಟಿರುತ್ತಾರೆ; (೧) ದತ್, ಋಷಿ ಭರದ್ವಾಜನ ಪುತ್ರ, ಮಹಾಭಾರತದಲ್ಲಿನ ದ್ರೋಣನ ಪೀಳಿಗೆಯವರು, (೨) ವೈದ್, ಭರದ್ವಾಜನ ಪುತ್ರ ಆಯುರ್ವೇದದ ಆವಿಷ್ಕಾರಕ ಧನ್ವಂತರಿಯ ಪೀಳಿಗೆಯವರು, (೩)

ಛಿಬ್ಬರ್, ಭಾರ್ಗವ ಪರಶುರಾಮನ ಪೀಳಿಗೆಯವರು, (೪) ಪರಾಶರನಿಂದ ಬಾಲಿ, (೫) ಕಾಶ್ಯಪನಿಂದ ಮೋಹನ್, (೬) ವಸಿಷ್ಠನಿಂದ ಲಾವ್ ಮತ್ತು (೭) ಕೌಶಲ ಅಥವಾ ಕೌಶಲ್ಯನಿಂದ ಛಿಮಾವಲ್. ಈ ಬಣಗಳಿಗೆ ಸೇರಿದವರು ಯಾವುದೊಂದೂ ಅಡೆತಡೆಗಳಿಲ್ಲದೆ ಅಂತರ್ಭೋಜನ, ಅಂತರ್ವಿವಾಹ ಮಾಡಿಕೊಳ್ಳುತ್ತಾರೆ. ತುಲನೆ ಮಾಡುವಲ್ಲಿ ಇವರು ಅನ್ಯ ಸಾರಸ್ವತರಿಗಿಂತ ತೀರಾ ಬೇರೆಯೇ ಆಗಿದ್ದರು. ಪ್ರಾಚೀನ ಕಾಲದಿಂದ ಅವರು ಬೇಸಾಯಗಾರರ ಅಥವಾ ಯೋಧರ ವೃತ್ತಿ ಕೊಂಡವರಿದ್ದರು. ಬೇರೆಯವರಿಂದ ದಾನ, ಬಹುಮಾನಗಳನ್ನು ಕೊಳ್ಳುವುದು, ಸೋಮಾರಿಯ ಬಾಳು ಬದುಕುವುದು, ತಕ್ಕಡಿಯನ್ನು ಕೈಗೆತ್ತಿಕೊಳ್ಳುವುದು (ವ್ಯಾಪಾರಿಯ ವೃತ್ತಿ ಮಾಡುವುದು) ಇತ್ಯಾದಿಗಳತ್ತ ಅವರು ಜಿಗುಪ್ಸೆ ತೋರುತ್ತಿದ್ದರು. ಮುಂಡನ ವಿಧಿಯನ್ನು ಗಂಡು ಮಕ್ಕಳ ಐದನೆಯ ವಯಸ್ಸಿನಲ್ಲಿ ಮಾಡಲಾಗುತ್ತಿತ್ತು. ಅವರ ಉಪನಯನ ಸಂಸ್ಕಾರ ತೀರಾ ಬೇರೆಯೇ ಇತ್ತು.

ಮೂಲವೊಂದರ ಮೇರೆಗೆ ಅಲೆಕ್ಸಾಂಡರನೊಂದಿಗೆ ಕಾದಾಡಿದ ಅರಸು ಪೋರಸ್‌ನ ಸೇನೆಯಲ್ಲಿನ ಬಹುತಾಂಶ ಸೈನಿಕರು ಮುಹಿಯಾಲರಿದ್ದರು.

೬೮೭ರಲ್ಲಿ ಅರಸು ಬಿಲಾಬ್, ಕಾಬೂಲಿನತ್ತ ದಂಡೆತ್ತಿ ಹೋದಾಗ ಖೈಬರ್ ಕಣಿವೆಯ ಸುತ್ತಣ ಪ್ರದೇಶವನ್ನು ಬ್ರಾಹ್ಮಣರಿದ್ದ ಅರಸರು ಆಳುತ್ತಿದ್ದರೆಂದು ಫರಿಶ್ತಾ ನುಡಿದಿರುತ್ತಾನೆ. ೮೬೦ರಿಂದ ೯೫೦ರ ನಡುವಣ ಕಾಲದಲ್ಲಿ ಕಾಬೂಲನ್ನು ಬ್ರಾಹ್ಮಣರ ರಾಜವಂಶವೊಂದು ಆಳುತ್ತಿತ್ತೆಂದು ಕನ್ನಿಂಗ್‌ಹ್ಯಾಮ್ ನುಡಿದಿರುತ್ತಾನೆ. ಮುಹಿಯಾಲರ ದತ್ತ್ ವಂಶದ ಪುರುಷ ದತ್ತನ ನಾಣ್ಯಗಳು ಪಂಜಾಬಿನ ಹೋಶಿಯಾರ್‌ಪುರ ಜಿಲ್ಲೆಯಲ್ಲಿ ಕಾಣಬಂದಿವೆ. ಹೋಶಿಯಾರ್‌ಪುರದ 'ಡಿಸ್ಟ್ರಿಕ್ಟ್ ಗಝೆಟೀಯರ್'ನ ಮೇರೆಗೆ ಕಾಬೂಲಿನ ಬ್ರಾಹ್ಮಣನಿದ್ದ ಅರಸನ ನಾಣ್ಯಗಳು ಪಂಜಾಬಿನಲ್ಲಿ ಅಲ್ಲಲ್ಲಿ ದೊಡ್ಡ ಪ್ರಮಾಣದಲ್ಲಿ ದೊರಕಿವೆ.

ಮಹಮ್ಮದ್ ಘಜ್ನಿಯೊಂದಿಗೆ ಹೋರಾಡಿದ ರಾಜಾ ಜೈಪಾಲ್, ಮುಹಿಯಾಲ ಸಾರಸ್ವತನಿದ್ದ.

ಮುಹಿಯಾಲರು ವಿದೇಶಿಯರ ಶತಮಾನದುದ್ದದ ದಬ್ಬಾಳಿಕೆ, ಆಳ್ವಿಕೆ, ಇತಿಹಾಸದ ಪರಿಳಿತ ಇವೆಲ್ಲವುಗಳ ನಡುವೆಯೂ ಯುದ್ಧೋತ್ಸಾಹಿಗಳ ಸಂಪ್ರದಾಯವನ್ನು ಉಳಿಸಿಕೊಂಡು ಬಂದಿರುತ್ತಾರೆ. ಮುಸಲ್ಮಾನ ಅರಸರ ಕೈಕೆಳಗೂ ಅವರು ಗಂಡುಗಲಿಗಳಾಗಿ ಹೋರಾಡಿದ್ದರು. ಈ ಅರಸರು ದತ್ತ್, ಮೋಹನ್ ಮತ್ತು ಬಾಲಿಗಳಿಗೆ ಸುಲ್ತಾನ್ ಮತ್ತು ಖಾನ್ ಉಪಾಧಿಗಳನ್ನಿತ್ತರು.

ಸಿಖ್ಖ ಗುರುಗಳು ಮುಸಲ್ಮಾನರ ಹಲ್ಲೆಯಿಂದ ತಮ್ಮನ್ನು ರಕ್ಷಿಸಿಕೊಳ್ಳಬೇಕಾಗಿ ಬಂದಾಗ ಇವರು ಕದುಗಲಿಗಳಂತೆ ಹೋರಾಡಿ ಪ್ರಶಂಸನೀಯ ನೆರವಿತ್ತರು. ಗುರುನಾನಕರ ಶಿಷ್ಯರಲ್ಲೊಬ್ಬನಿದ್ದ ಬಾಬಾ ಪರಾಗಾ, ಗುರುವಿನ ಚರಣಗಳೆಡೆಯಲ್ಲಿ ತನ್ನ ತಲೆ ಕತ್ತರಿಸಿದ್ದ ಧೀರೋದಾತ್ತ ದಿವಾನ್ ಮತಿದಾಸ್, ಗುರು ಗೋವಿಂದರಿಗಾಗಿ ಕಾದಾಡಿ ಹುತಾತ್ಮರಾದ ಸಾಹಿಬ್ ಚಂದ್ ಇವರೆಲ್ಲರೂ ಛಿಬ್ಬರ್ ಬಣಕ್ಕೆ ಸೇರಿದವರಿದ್ದರು. ರಣಜಿತ್ ಸಿಂಗ್ ಇವರಲ್ಲಿನ ಎಷ್ಟೊಂದೋ ಜನರನ್ನು ಅಂಗರಕ್ಷಕರನ್ನಾಗಿ ನೇಮಿಸಿದ್ದ.

ಹಿಂದು, ಮುಸಲ್ಮಾನ ಮತ್ತು ಸಿಖ್ಖ ಅರಸರು ತಮಗಿತ್ತಿದ್ದ ಮೆಹ್ತಾ, ಬಕ್ಷಿ,

ಚೌಧರೀಜಿ, ದಿವಾನ್, ಖಾನ್‌ಸಿಂಗ್, ಸುಲ್ತಾನ್, ರಾಯ್‌ಜಾದಾ, ಮಲಿಕ್, ರಾಯ್ ಇತ್ಯಾದಿ ಉಪಾಧಿಗಳನ್ನು ಮುಹಿಯಾಲರು ಇಂದಿಗೂ ಉಳಿಸಿಕೊಂಡಿರುತ್ತಾರೆ.

೧೮೫೭ರ ಬಂಡಾಯ ಮತ್ತು ಪಂಜಾಬಿನ ಯುದ್ಧದ ಸಮಯ ಅವರು ಬ್ರಿಟಿಷರಿಗೆ ತುಂಬಾ ಸಹಾಯ ಮಾಡಿದ್ದರು.

ಸಂಸ್ಕೃತ ಪಂಡಿತರು ಮತ್ತು ಸನ್ಯಾಸಿಗಳೂ ಆಗಿದ್ದ ಸ್ವಾಮಿ ವಿರಾಜಾನಂದ ಸರಸ್ವತಿ ಇವರು ಬಿಯಾಸ್ ನದಿಯ ತೀರದಲ್ಲಿನ ಗಂಗಾಪುರದಲ್ಲಿ ವಾಸಮಾಡುತ್ತಿದ್ದ ನಾರಾಯಣ ದತ್ತರ ಪುತ್ರ; ನಾರಾಯಣ ದತ್ತರು ಸಾರಸ್ವತರಿದ್ದರು.

೪. ಭೂಮಿಹಾರ ಸಾರಸ್ವತರು

ಇವರು ಪಂಜಾಬಿನ ಹೊರತು ಉತ್ತರ ಪ್ರದೇಶ ಮತ್ತು ಬಿಹಾರಿನಲ್ಲೂ ಕಾಣಬರುತ್ತಾರೆ. ಇವರನ್ನು ಗೌತಮರು (ಬನಾರಸಿನಲ್ಲಿದ್ದ ಹೆಚ್ಚಿನವರು ಗೌತಮ ಗೋತ್ರೀಯರು) ಮತ್ತು ಥಾಕೂರರೆಂದಾಗಿ ಕರೆಯುತ್ತಾರೆ.

ಇವರು ಮೊದಲಿನಿಂದಲೇ ಸಾಮವೇದವನ್ನನುಸರಿಸಿಕೊಂಡು ಬಂದಿದ್ದರು. ಪೌರೋಹಿತ್ಯ ಮಾಡುವವರನ್ನು ಮತ್ತು ದಾನಸ್ವೀಕರಿಸುವವರನ್ನು ಅವರು ತಿರಸ್ಕಾರ ದೃಷ್ಟಿಯಿಂದ ಕಾಣುತ್ತಿದ್ದರು. ಸಾಮವೇದವನ್ನನುಸರಿಸುವ ಬ್ರಾಹ್ಮಣ ವರ್ಗದ ಅಭಾವದ ನಿಮಿತ್ತ ಅವರಲ್ಲಿನ ಕೆಲವರು ಮಾಧ್ಯಂದಿನ ಶಾಖೆಯ ಶುಕ್ಲ ಯಜುರ್ವೇದವನ್ನನುಸರಿಸತೊಡಗಿದರು. ಕ್ಷತ್ರಿಯರಂತೆ ಅವರೂ ಬ್ರಾಹ್ಮಣರ ಷಟ್ಕರ್ಮಗಳಲ್ಲಿನ ಕೇವಲ ಮೂರನ್ನಷ್ಟೆ ಆಚರಿಸುತ್ತಿದ್ದರು. ಅವರಲ್ಲಿ ಗಾರ್ಗ್ಯ, ಶಾಂಡಿಲ್ಯ ಕಶ್ಯಪ, ಭರದ್ವಾಜ, ಪರಾಶರ ಮತ್ತು ವತ್ಸಗೋತ್ರಗಳಿದ್ದವು. ಮಿಶ್ರ, ದೀಕ್ಷಿತ, ತಿವಾನ್, ಪಾಟಕ್, ಪಾಂಡೆ ಮತ್ತು ಉಪಾಧ್ಯಾಯ ಇವರ ಕುಲನಾಮಗಳಾಗಿದ್ದವು. ಆದರೆ ಈಗ ಅವರು ರಜಪೂತರಂತೆ ತಮ್ಮ ಹೆಸರಿನೊಂದಿಗೆ ಸಿಂಗ್ ನಾಮ ರೂಪವನ್ನು ಜೋಡಿಸುತ್ತಾರೆ.

ಬನಾರಸಿನ ಮಹಾರಾಜರು ಮತ್ತು ಅನ್ಯ ಅರಸುಗಳು, ಬಿಹಾರಿನಲ್ಲಿ ಭಾರಿ ಪ್ರಮಾಣದಲ್ಲಿ ಭೂಮಿ ಕೊಂಡಿದ್ದ ಜಮೀನುದಾರರು ಈ ಸಮಾಜಕ್ಕೆ ಸೇರಿದವರಿದ್ದರು. ಬಿಹಾರಿನಲ್ಲಿ ಇವರು ತಮ್ಮದೇ ಆದ ಶಾಲೆ, ಕಾಲೇಜುಗಳನ್ನು ಕೊಂಡಿರುತ್ತಾರೆ.

೫. ಉತ್ತರ ಪ್ರದೇಶದ ಸಾರಸ್ವತರು

ಉತ್ತರ ಪ್ರದೇಶದ ಪೂರ್ವ ಭಾಗದಲ್ಲಿನ ಭೂಮಿಹಾರರ ಹೊರತಾಗಿ, ಈ ಪ್ರದೇಶದ ಪಶ್ಚಿಮ ಭಾಗದಲ್ಲಿನ ಜಿಲ್ಲೆಗಳಲ್ಲೂ ಸಾರಸ್ವತರ ಅನೇಕ, ವಿಶಾಲ ವಸತಿ ಸ್ಥಾನಗಳಿವೆ. ಪಂಜಾಬಿನ ಸಾರಸ್ವತರೊಂದಿಗೆ ಅವರ ಸಂಬಂಧವಿದೆ.

ಆಗ್ರಾ, ಮಥುರಾ, ಅಲಿಘರ್, ಬದ್ವಾನ್ ಮತ್ತು ಫರುಕ್ಕಾಬಾದ್ ಜಿಲ್ಲೆಗಳಲ್ಲೂ ಸಾರಸ್ವತರನ್ನು ಕಾಣಬಹುದು. ಇವರಲ್ಲಿನ ಕೆಲವರು ಪಂಜಾಬಿನ ಸಾರಸ್ವತರೊಂದಿಗೆ ಸಂಬಂಧವಿರಿಸಿಕೊಂಡಿರುತ್ತಾರೆ. ಅವರು ಮುಸಲ್ಮಾನರು ಪಂಜಾಬಿನತ್ತ ದಂಡೆತ್ತಿ ಬಂದ ದಿನಗಳಲ್ಲಿ ವಲಸೆ ಹೋದ ಬ್ರಾಹ್ಮಣರ ವಂಶಜರಿದ್ದರು. ಅವರಲ್ಲಿನ ಸುಮಾರು ೨೫,೦೦೦

ದಿಂದ ೩೦,೦೦೦ ಮಂದಿ ಮಥುರೆಯ (ಮಥ್ರಾ) ಒಳಭಾಗ, ಆಗ್ರಾ, ಅಲಿಘರ್ ಜಿಲ್ಲೆಗಳಲ್ಲಿ ವಾಸಿಸುತ್ತಿದ್ದಾರೆ. ಈ ಪ್ರದೇಶ ಬ್ರಜದೇಶವೆಂದು ಪರಿಚಿತವಾಗಿದೆ. ಇದು ಪಡುವಣ ಹಿಂದಿ ಭಾಷೆಯ ಪ್ರಕಾರವಿದ್ದ ಬ್ರಜಭಾಷೆಯಲ್ಲಿನ ಕವಿತೆಗಳಿಗೆ ಪ್ರಸಿದ್ಧವಾಗಿದೆ. ಮಥುರೆಯಲ್ಲಿ ಪಂಚಜಾತಿ, ಛಟ್ಜಾತಿ, ಅಷ್ಟವಂಶ ಮತ್ತು ಬಾವಣಿ ಜಾತಿಯವರ ವಾಸ್ತವ್ಯವಿದೆ. ಅವರನ್ನು ಎರಡು ಪಂಗಡಗಳಾಗಿ ವಿಭಾಜಿಸಬಹುದಾಗಿದೆ.

(೧) ನಗರ ವಾಸಿಗಳು. (ಇವರಲ್ಲಿನ ಹೆಚ್ಚಿನವರು ಪುರೋಹಿತರಿದ್ದರು. ಈ ವರ್ಗದ, ಮುಖ್ಯತಃ ಮಥುರಾ ಮತ್ತು ವೃಂದಾವನದ ನಿವಾಸಿಗಳು ತೀರ್ಥಗುರುಗಳೆನಿಸಿಕೊಂಡಿದ್ದು, ಪ್ರತಿವರ್ಷ ಶ್ರಾವಣ, ಫಾಲ್ಗುಣ ಮಾಸಗಳಲ್ಲಿ ಬಾಲಕೃಷ್ಣನ ಲೀಲಾ ಭೂಮಿಯತ್ತ ಬರುತ್ತಿದ್ದ ಯಾತ್ರಿಕರು ಕೊಡುವ ದಾನದಿಂದ ಜೀವನ ಸಾಗಿಸುತ್ತಾರೆ. ಇವರ ಹೊರತು ದೊಡ್ಡ ಸಂಖ್ಯೆಯಲ್ಲಿ ವ್ಯಾಪಾರಿಗಳು, ವಕೀಲರು, ಡಾಕ್ಟರರೂ ಇಲ್ಲಿದ್ದಾರೆ.)

(೨) ಗ್ರಾಮೀಣ ಭಾಗಗಳಲ್ಲಿ ವಾಸಿಸುವವರು. (ಇವರಲ್ಲಿನ ಹೆಚ್ಚಿನವರು ರೈತರಿದ್ದರು. ಮಥುರಾ ಮತ್ತು ಅಲಿಘರ್‌ಗಳ ನೆರೆಯೂರಿನಲ್ಲಿ ಬೊಹ್ರೆ ಎಂದಾಗಿ ಕರೆಯಲ್ಪಡುವ ಕೆಲವೊಬ್ಬ ಶ್ರೀಮಂತ ಜಮೀನುದಾರರೂ ಇದ್ದಾರೆ.) ಇವರಲ್ಲಿನ ಕೆಲವೊಬ್ಬ ಸಾರಸ್ವತರು ವೈಷ್ಣವರಿದ್ದರೆ ಮತ್ತೆ ಕೆಲವರು ಆರ್ಯ ಸಮಾಜದಲ್ಲಿ ಶ್ರದ್ಧೆಯಿಟ್ಟವರಾಗಿದ್ದಾರೆ. ಇವರಲ್ಲಿನ ಹೆಚ್ಚಿನವರು ಬಡವರಿದ್ದು ಖತ್ರಿ ಮತ್ತು ವೈಶ್ಯರ ಮನೆಗಳಲ್ಲಿ ಅಡಿಗೆಯ ಕೆಲಸ ಮಾಡಿ ಜೀವನ ಸಾಗಿಸುತ್ತಾರೆ.

ಖ್ಯಾತ ನಾಮ ಹಾಡು ಕವಿ, ಕುರುಡ ಸೂರದಾಸ, ಸಾರಸ್ವತನಿದ್ದ.

೬. ರಜಪುತಾನದ ಸಾರಸ್ವತರು

ರಜಪುತಾನದ ಗುಡ್ಡಗಾಡುಗಳಲ್ಲಿ , ಮರುಭೂಮಿಯಲ್ಲಿ, ವಿಭಿನ್ನ ಬಣಗಳಲ್ಲಿನ ನಿರಂಕುಶಾಧಿಕಾರಿಗಳ ದಬ್ಬಾಳಿಕೆಗೊಳಗಾಗಿದ್ದ ಸ್ಥಾನಿಕರ ನಡುವೆ ಬಾಳು ಬದುಕಬೇಕಿದ್ದ ಇಲ್ಲಿನ ಸಾರಸ್ವತರು ನಿಜಕ್ಕೂ ಸಾಹಸಿಗಳಿದ್ದರೆನ್ನಬೇಕು". ಅವರು ಎಂದು ರಜಪುತಾನಾ ಸೇರಿದರೆಂಬುದನ್ನು ಯಾರೊಬ್ಬರೂ ಅರಿಯರು. ಭರತ್‌ಪುರ ಮತ್ತು ಧೋಲ್ಪುರ ಇವುಗಳ ಹೊರತು ಇನ್ನಿತರ ಸ್ಥಾನಗಳಲ್ಲಿ ಸಾರಸ್ವತರು ಕಾಣ ಬರುತ್ತಾರೆ.

ಅವರು ಬಾಳುವ ರೀತಿ, ರಿವಾಜು, ವೃತ್ತಿ ಉತ್ತರ ಪ್ರದೇಶದಲ್ಲಿನ ಸಾರಸ್ವತರಂತಿದ್ದವು. ಧಾರ್ಮಿಕ ವಿಧಿ, ವಿಧಾನಗಳು, ಅವುಗಳ ಆಚರಣೆ ಪಂಜಾಬ್ ಮತ್ತು ಉತ್ತರಪ್ರದೇಶಗಳಲ್ಲಿನ ಪದ್ಧತಿಯನ್ನು ಹೋಲುತ್ತಿದ್ದವು. ಹಾಗಿದ್ದರೂ ಅವು ಸ್ಥಾನೀಯ ಸಂಪ್ರದಾಯಗಳಿಂದ ಪ್ರಭಾವಿತವಾಗಿದ್ದುದನ್ನು ಕಾಣಬಹುದು. ಅವರು ಅನ್ಯ ಆರು ಬಣಗಳೊಂದಿಗೆ ಅಂತರ್ಭೋಜನಕ್ಕೆ ತೊಡಗಿ ಕ್ರಮೇಣ ಅವರೊಂದಿಗೆ ಬೆರೆತುಕೊಂಡರು.

ವೈಷ್ಣವರಿದ್ದ ಅವರಲ್ಲಿ ಮಾಂಸಾಹಾರ ವರ್ಜ್ಯವಿತ್ತು. ಅವರಲ್ಲಿ ಅನೇಕ ಗೋತ್ರಗಳಿದ್ದು ಅವುಗಳಲ್ಲಿ ಈ ಮುಂದಿನವು ಮುಖ್ಯವಾದುದಾಗಿವೆ: ವಶಿಷ್ಠ, ಕೌಶಿಕ, ಗೌತಮ, ಅತ್ರಿ, ಉಪಮನ್ಯು, ಭರದ್ವಾಜ, ಅಂಗೀರಸ, ಶಾಂಡಿಲ್ಯ, ಗಾರ್ಗ್ಯ, ಕೌತ್ಸ, ಪರಾಶರ, ಮುದ್ಗಲ, ಚ್ಯವನ. ಅವರು ಅನೇಕ ಕುಲದೇವಿಯರನ್ನು ಆರಾಧಿಸುತ್ತಾರೆ.

ಅವರ ಜೀವನಾಧಾರಗಳಲ್ಲಿ ಪ್ರಾಮುಖ್ಯವಾದುದು ಮಹೇಶ್ವರಿ (ಮಹಾಜನರು)ಯರಲ್ಲಿನ ಪೌರೋಹಿತ್ಯವಿದ್ದರೂ, ಪ್ರಾಚೀನಕಾಲದಲ್ಲಿ ಅರಸರು, ಥಾಕೂರರು ಧರ್ಮಾರ್ಥ ಇತ್ತಿದ್ದ ಭೂಮಿಯಲ್ಲಿನ ಕೃಷಿಯ ಉದ್ಯೋಗವೂ ಸೇರಿಕೊಂಡಿತ್ತು. ಮಾರ್ವಾಡದಲ್ಲಿ ತಮ್ಮ ಯಜಮಾನರಿದ್ದ ಮಹೇಶ್ವರಿಗಳು ವಾಸ್ತವ್ಯಕ್ಕಾಗಿ ಮಧ್ಯಪ್ರದೇಶ ಮತ್ತು ಬಿಹಾರಗಳತ್ತ ತೆರಳಿದಾಗ ಅವರೊಂದಿಗೆ ಇವರೂ ಸಾಗಿದರು.

ಇವರಲ್ಲಿ ಕೆಲವರು ಡಾಕ್ಟರರು, ಜ್ಯೋತಿಶ್ಯಾಸ್ತ್ರಜ್ಞರಿದ್ದರು. ಕೆಲವರು ವ್ಯಾಪಾರವನ್ನು ತಾವಾಗಿ ಕಲಿತವರಿದ್ದರು. ಇನ್ನು ಕೆಲವರು ಬೇರೆಯವರಲ್ಲಿ ಕೆಲಸ ಮಾಡಿಕೊಂಡು ಶಿಕ್ಷಣ ಮುಂದುವರಿಸಿದರು; ಇಂಗ್ಲಿಷ್ ಶಿಕ್ಷಣಕೊಂಡು ಕಾರಕೂನರ ಕೆಲಸಕ್ಕೆ ತೊಡಗಿದರು. ಹೆಚ್ಚಿನವರು ಬೇಸಾಯ ಮಾಡಿ ಬಾಳು ಬದುಕತೊಡಗಿದರು. ಅವರು ಭಿಕ್ಷಾಟನೆಯನ್ನು ತಿರಸ್ಕಾರ ದೃಷ್ಟಿಯಿಂದ ಕಾಣುತ್ತಿದ್ದರು.

ಅಜಮೇರಿನಲ್ಲಿ ಸಾರಸ್ವತೇಶ್ವರ ದೇವಸ್ಥಾನವಿದೆ; ಅಲ್ಲಿ ಸಾರಸ್ವತ ಕಾರ್ಯಾಲಯ ಎಂಬ ಗ್ರಂಥಾಲಯವೂ ಇದೆ.

೭. ಸಿಂಧು ಪ್ರದೇಶದಲ್ಲಿನ ಸಾರಸ್ವತರು

ಸಾರಸ್ವತರ ಮೂಲವಾಸ ಸ್ಥಾನ ಪಂಜಾಬವಿತ್ತು. ಇಲ್ಲಿ ಸಾರಸ್ವತರು ನಾಲ್ಕು ವರ್ಗಗಳಲ್ಲಿ ವಿಭಜಿಸಲ್ಪಟ್ಟಿರುತ್ತಾರೆ:

೧) ದೇಶಿ, ೨) ಪರ್ದೇಶಿ ಅಥವಾ ನರ್ಸಾಪುರಿ, ೩) ತಟ್ಟೈ ಮತ್ತು ೪) ಸೆತ್ಪಾಲ್ ಬ್ರಾಹ್ಮಣರು ' ಅವರ ಜೀವನ ಪದ್ಧತಿ, ವರ್ತನೆ, ಹವ್ಯಾಸ ಇವು ಸಮಾನವಿದ್ದವು. ಅವರು ಯಜುರ್ವೇದಿಗಳಾಗಿದ್ದರು. ಕೆಲವೊಬ್ಬರು ವೈಷ್ಣವರಿದ್ದರೆ ಇನ್ನು ಕೆಲವರು ಶಾಕ್ತರಿದ್ದರು. ಸಿಂಧಿ ಸಮಾಜದಲ್ಲಿನ ಕೆಲವೊಬ್ಬ ಖ್ಯಾತನಾಮ ವ್ಯಕ್ತಿಗಳು ಸಾರಸ್ವತರಿದ್ದರು.

ದೇಶಿ ಬ್ರಾಹ್ಮಣರು : ದೇಶಸ್ಥ ಶಬ್ದದ ಅಶುದ್ಧ ಪಾಠ ದೇಶಿ. ದೇಶಿ ಬ್ರಾಹ್ಮಣರು ಮೊದಲ ದಿನಗಳಲ್ಲಿ ಕರಾಚಿ ಮತ್ತು ಅದರ ನೆರೆಹೊರೆಯ ಊರುಗಳಲ್ಲಿ ನೆಲೆಸಿದ್ದರು; ಸುಮಾರು ೨೦೦ ಜನರ ಸಮಾಜವನ್ನು ಕರಾಚಿಯಲ್ಲಿ ಈಗಲೂ ಕಾಣಬಹುದು. ಅವರು ಶುಕ್ಲ ಅಥವಾ ಕೃಷ್ಣ ಯಜುರ್ವೇದಿಗಳಾಗಿದ್ದರು. ಅವರಲ್ಲಿನ ಕೆಲವೊಬ್ಬರು ಶೈವರಿದ್ದರು; ಇನ್ನುಳಿದವರು ಶಾಕ್ತರಿದ್ದರು. ಮುಸಲ್ಮಾನರ ನಡುವೆ ದೀರ್ಘಕಾಲ ವಾಸ್ತವ್ಯ ಮಾಡಿಕೊಂಡಿದ್ದ ನಿಮಿತ್ತ ಇವರು ಅವರ ಸಂತರ ಸಮಾಧಿಗಳನ್ನು, ಪವಿತ್ರ ಕ್ಷೇತ್ರಗಳನ್ನು ಸಂದರ್ಶಿಸಿ ಪೂಜೆ ಮಾಡುತ್ತಿದ್ದರು. ಈ ಪರಿಪಾಠ ಈಗ ಕಡಿಮೆಯಾಗಿದೆ. ಕಾಶ್ಯಪ, ಗೌತಮ, ವಾಮದೇವ, ಔತಸ್ಥ, ಮುದ್ಗಲ ಮತ್ತು ಅತ್ರಿ ಇವು ಅವರ ಗೋತ್ರಗಳು.

ಅವರಲ್ಲಿ ಸಂಸ್ಕೃತ ಪಂಡಿತರಿದ್ದರು. ಕೆಲವೊಬ್ಬರು ಜ್ಯೋತಿಶ್ಯಾಸ್ತ್ರದಲ್ಲಿ ಪಾಂಡಿತ್ಯಕೊಂಡವರಿದ್ದರು.

ಪರ್ದೇಶಿ ಅಥವಾ ನರ್ಸಾಪುರಿ ಬ್ರಾಹ್ಮಣರು : ಪರ್ದೇಶಿ ಅಥವಾ ನರ್ಸಾಪುರಿ ಬ್ರಾಹ್ಮಣರು ಹೈದರಾಬಾದ್ ಜಿಲ್ಲೆಯ ಸಮೀಪವಿದ್ದ ನರ್ಸಾಪುರ ಮತ್ತು ಅದರ ಅಕ್ಕಪಕ್ಕದ ಊರುಗಳಲ್ಲಿ

ನೆಲಸಿರುತ್ತಾರೆ. ಸುಮಾರು ನಾಲ್ಕು ಸಾವಿರ ಜನರ ಈ ಸಮಾಜ ಕರಾಚಿ, ಹೈದರಾಬಾದ್, ಥಟ್‌ಪಾರ್ಕರ್ ಮತ್ತೆ ನವಾಬಾಹ ಜಿಲ್ಲೆಗಳಲ್ಲಿ ಹರಡಿಕೊಂಡಿದೆ. ಇವರು ಮಾಧ್ಯಂದಿನ, ಹಿರಣ್ಯಕೇಶಿ, ಅಪಸ್ತಂಭ, ತೈತ್ತರೀಯ, ವಾಜಸಾನೇಯ, ಕಣ್ವ ಅಥವಾ ಸತ್ಯಶತ್ ಶಾಖೆಗಳಿಗೆ ಸಂಭಂದಿಸಿದ ಕೃಷ್ಣ ಅಥವಾ ಶುಕ್ಲ ಯಜುರ್ವೇದಿಗಳಾಗಿರುತ್ತಾರೆ. ಅವರು ಶೈವರು ಅಥವಾ ಶಾಕ್ತರಾಗಿರುತ್ತಾರೆ. ಕಾಶ್ಯಪ, ಶಾಂಡಿಲ್ಯ, ನೈಧ್ರುವ, ವಸಿಷ್ಠ, ಕೌಂಡಿನ್ಯ, ಪರಾಶರ, ಗೌತಮ, ಕೌಶಿಕ, ಧನಂಜಯ, ಅತ್ರಿ, ಅಗಸ್ತ್ಯ, ಲೌಗಾಕ್ಷ, ವಾಮದೇವ, ರಘುಗಣ, ಔತಸ್ಥ, ಹರಿತ, ಕಣ್ವ, ರಥಿತರ, ವಿಷ್ಣುವರ್ಧನ, ಮುದ್ಗಲ ಮತ್ತು ಬಭ್ರುವ್ಯ ಮುಂತಾದವು ಅವರ ಗೋತ್ರಗಳಾಗಿವೆ.

ಅವರಲ್ಲಿ ವಿದ್ವಾಂಸರು, ಪುರಾಣಿಕರು ಮತ್ತು ಜ್ಯೋತಿಶ್ಯಾಸ್ತ್ರಜ್ಞರಿದ್ದರು.

ತಟ್ಟೆ ಬ್ರಾಹ್ಮಣರು : ಕರಾಚಿಯ ಪೂರ್ವಕ್ಕೆ, ಸುಮಾರು ೬೦ ಮೈಲುಗಳ ದೂರದಲ್ಲಿನ, ಬ್ರಾಹ್ಮಣರಿದ್ದ ಕಛ್ ಅರಸರ ರಾಜಧಾನಿ ತಟ್ಟದಲ್ಲಿ ವಾಸಮಾಡುತ್ತಿದ್ದ ಈ ಬ್ರಾಹ್ಮಣರು ತಟ್ಟೆ ಬ್ರಾಹ್ಮಣರೆಂದು ಕರೆಯಲ್ಪಡುತ್ತಿದ್ದಾರೆ. ಸುಮಾರು ೩೫೦ ಜನರ ಈ ಸಮಾಜದ ಅರೆವಾಸಿ ಜನರು ತಟ್ಟದಲ್ಲಿ ವಾಸಮಾಡುತ್ತಿದ್ದರೆ ಇನ್ನು ಉಳಿದವರು ಕರಾಚಿಯಲ್ಲಿ ವಾಸಮಾಡುತ್ತಿದ್ದಾರೆ. ಅವರು ತೈತ್ತರೀಯ, ಕಣ್ವ, ಹಿರಣ್ಯಕೇಶಿ, ಮಾಧ್ಯಂದಿನ, ಅಪಸ್ತಂಭ ಅಥವಾ ವಾಜಸಾನೇಯ ಶಾಖೆಗಳಿಗೆ ಸಂಬಂಧಿಸಿದವರಿದ್ದು ಶುಕ್ಲ ಅಥವಾ ಕೃಷ್ಣ ಯಜುರ್ವೇದಿಗಳಾಗಿದ್ದರು. ಅವರಲ್ಲಿನ ಕೆಲವರು ಶೈವರಿದ್ದರೆ ಇಸ್ನುಳಿದವರು ಶಾಕ್ತರಿದ್ದರು. ಅವರು ಎಲ್ಲೊಂದು ಶುಭ ಕಾರ್ಯಗಳನ್ನು ಗಣಪತಿಯ ಆರಾಧನೆಯಿಂದ ಆರಂಭಿಸುತ್ತಾರೆ.

ವಶಿಷ್ಠ, ಪರಾಶರ, ಗೌತಮ, ವಾಮದೇವ, ಭರದ್ವಾಜ, ಕಣ್ವ, ಮುದ್ಗಲ, ವಿಶ್ವಾಮಿತ್ರ, ಅತ್ರಿ, ಇವು ಅವರ ಗೋತ್ರಗಳು. ಅವರಲ್ಲಿನ ಹೆಚ್ಚಿನವರು ಪೌರೋಹಿತ್ಯವನ್ನು ತಮ್ಮ ಜೀವನಾಧಾರವಾಗಿ ಕೊಂಡಿರುತ್ತಾರೆ. ಅವರು ಬಡವರಿದ್ದರು. ಆದರೆ ಅದೊಂದು ಕಾಲದಲ್ಲಿ ಅವರು ಸಂಸ್ಕೃತ ಮತ್ತು ಜ್ಯೋತಿಶ್ಯಾಸ್ತ್ರಗಳಲ್ಲಿ ಪಾಂಡಿತ್ಯ ಕೊಂಡವರಿದ್ದರು. ಕೆಲವರು ತಮ್ಮ ಈ ಉಪವೃತ್ತಿಯನ್ನು ಕರಾಚಿ ಮತ್ತು ತಟ್ಟಾಗಳಲ್ಲಿ ನಡೆಸಿಕೊಂಡಿದ್ದರು.

ಸೆತ್ಪಾಲ್ ಬ್ರಾಹ್ಮಣರು : ಜೀಸಾಯವನ್ನು ಜೀವನಾಧಾರವಾಗಿ ಕೊಂಡಿದ್ದ ಇವರು ಸೆತ್ಪಾಲರೆಂದಾಗಿ ಕರೆಯಲ್ಪಟ್ಟರು. ಕಾಯಿದೆ, ಕಟ್ಟುಕಟ್ಟಳೆಗಳನ್ನು ನಿಷ್ಠಾಪೂರ್ವಕ ಆಚರಿಸುತ್ತಿದ್ದವರನ್ನು ಸೆತುಪಾಲ್ ಎಂದಾಗಿ ಕರೆಯುತ್ತಿದ್ದರು. ಸೆತುಪಾಲ್ ಶಬ್ದದಿಂದ ಸೆತ್ಪಾಲ್ ಉತ್ಪನ್ನವಾಯಿತೆಂದು ನಂಬಲಾಗುತ್ತದೆ. ಸೆತ್ಪಾಲ್ ಬ್ರಾಹ್ಮಣರು ಸಿಂಧು ಜಿಲ್ಲೆಯ ಅಗ್ರಭಾಗದಲ್ಲಿನ ಲರ್ಕಾನಾ, ಸುಕ್ಕೂರ್, ಶಿಕಾರ್‌ಪುರಗಳಲ್ಲಿ ವಾಸಮಾಡಿಕೊಂಡಿದ್ದರು; ಅವರ ಸಂಖ್ಯೆ ಸುಮಾರು ೪೦೦೦ಗಳಷ್ಟರದಿತ್ತು. ಅವರ ಕುಲನಾಮಗಳು ಮತ್ತು ಇನ್ನಿತರ ವಿವರಗಳು ಸಿಂಧು ಪ್ರದೇಶದ ಕೆಳಭಾಗದಲ್ಲಿನ ಮಾರ್ವಾಡ, ಕಾಥಿಯಾವಾರ್ ಮತ್ತು ಕಛ್‌ಗಳಲ್ಲಿ ನೆಲಸಿದ್ದ ಅನ್ಯ ಮೂರು ಪಂಗಡಗಳೊಂದಿಗೆ ಸರಿಹೋಲುದಿದ್ದವು. ಶುಕ್ಲ ಯಜುರ್ವೇದಿಗಳಿದ್ದ ಇವರು ಮಾಧ್ಯಂದಿನ ಶಾಖೆಯೊಂದಿಗೆ ಸಂಬಂಧಕೊಂಡಿದ್ದರು.

ಅವರಲ್ಲಿನ ಹೆಚ್ಚಿನವರು ಶೈವರಿದ್ದರು. ಕೆಲವೊಬ್ಬರು ವಲ್ಲಭಾಚಾರ್ಯರ ಪಂಥದ

ವೈಷ್ಣವರಿದ್ದರು. ಅವರ ಗೋತ್ರ ವತ್ಸ, ಭರದ್ವಾಜ, ಪರಾಶರ ಮತ್ತು ಗೌತಮ. ಅವರು ಸಾಮಾನ್ಯವಾಗಿ ಪುರೋಹಿತರ ವೃತ್ತಿಕೊಂಡು ಜೀವನ ಸಾಗಿಸುತ್ತಿದ್ದರು. ಲೊಹಾನಾ ಮತ್ತು ವೈಶ್ಯರ ಕುಲಪುರೋಹಿತರಾಗಿದ್ದ ಇವರಲ್ಲಿ ಪಂಡಿತರ, ಶಾಸ್ತ್ರಿಗಳ ಸಮಾವೇಶವಿತ್ತು.

ಅವರು 'ಬಾರಿ' ಮತ್ತು 'ಬಾಬಂಜಾಹಿ' ಎಂಬೀ ಎರಡು ವರ್ಗಗಳಲ್ಲಿ ವಿಭಾಜಿಸಲ್ಪಟ್ಟಿದ್ದರು. 'ಬಾರಿ', ಬಾರ್‍ಹಾ (ಹದಿನೆರಡು) ಶಬ್ದದ ಅಪಭ್ರಂಶ. ಬಾರಿಗಳ ಸಂಖ್ಯೆ ಅತ್ಯಲ್ಪವಿದ್ದು ಅವರು ಹದಿನೆರಡು ಕುಟುಂಬಗಳ ವಂಶಜರಾಗಿದ್ದಾರೆ. ಅವರಲ್ಲಿನ ಕೆಲವರು ತಮ್ಮ ಮೂಲವನ್ನು ಪಂಚಜಾತಿ ಸಾರಸ್ವತರ 'ಟಿಕ್ಕೆ' ಮತ್ತು 'ಜೈಥ್' ಬಣಗಳತ್ತ ಕೊಂಡೊಯ್ಯುತ್ತಾರೆ. ಬಾರಿಗಳು ಕ್ಷತ್ರಿಯರು ಮತ್ತು ವೈಶ್ಯರ ಪುರೋಹಿತರು. ಸಾಮಾನ್ಯವಾಗಿ ಅವರು ವಲ್ಲಭಾಚಾರ್ಯರು ಪಂಥಕ್ಕೆ ಸೇರಿದವರಾಗಿದ್ದಾರೆ. ಸುಶಿಕ್ಷಿತರಿದ್ದ ಇವರು 'ಬಾಬಂಜಾಹಿ'ಗಳಿಗಿಂತಲೂ ಉಚ್ಚ ದರ್ಜೆಯವರೆಂದು ಭಾವಿಸುತ್ತಿದ್ದು ತಮ್ಮ ಮಕ್ಕಳ ವೈವಾಹಿಕ ಸಂಬಂಧವನ್ನು ಅವರೊಂದಿಗೆ ಬೆಳೆಸುತ್ತಿದ್ದಿಲ್ಲ.

ಬಾಬಂಜಾಹಿ 'ಜಾತಿ-ಬ್ರಾಹ್ಮಣ' ಶಬ್ದದ ದೂಷಿತ ರೂಪವಿದ್ದು ಅದನ್ನು ಬ್ರಾಹ್ಮಣರಿದ್ದೂ ಬ್ರಾಹ್ಮಣಿಕೆ ಆಚರಿಸದ ವರ್ಗವನ್ನು ವಿಂಗಡಿಸಲಾಗಿ ಬಳಸಲಾಗಿದೆಯೆಂದು ನುಡಿಯುತ್ತಾರೆ. ಅವರು ಶಾಕ್ತರಿದ್ದು ಸಿಂಹ ವಾಹಿನಿಯನ್ನು ಪೂಜಿಸುತ್ತಾರೆ.

೮. ಗುಜರಾತ ಮತ್ತು ಕಾಥಿಯಾವಾರ್‌ಗಳಲ್ಲಿನ ಸಾರಸ್ವತರು

ಗುಜರಾತ ಮತ್ತು ಕಾಥಿಯಾವಾರ್‌ಗಳಲ್ಲಿ ಒಟ್ಟು ೮,೦೦೦ ಮಂದಿ ಸಾರಸ್ವತರಿದ್ದಾರೆ. ಸುಮಾರು ೩೦೦ ಕುಟುಂಬಗಳು ಗುಜರಾತಿನಲ್ಲಿ ವಾಸಿಸುತ್ತಿದ್ದು ೧೨೦೦ ಕುಟುಂಬಗಳು ಕಾಥಿಯಾವಾರ್‌ನಲ್ಲಿ ವಾಸಮಾಡುತ್ತಿವೆ [೧೦]. ಅವರೆಲ್ಲರೂ ಸ್ಮಾರ್ತರಿದ್ದು ಹೆಚ್ಚಿನವರು ಶುಕ್ಲ ಯಜುರ್ವೇದಿಗಳಾಗಿದ್ದಾರೆ; ಅವರು ಶಾಖಾಹಾರಿಗಳಾಗಿದ್ದಾರೆ. ಬ್ರೋಚ್‌ನಲ್ಲಿನ ಸಾರಸ್ವತರನ್ನು ಬಿಟ್ಟರೆ ಇನ್ನುಳಿದವರಲ್ಲಿ ವಿಧವಾ ಪುನರ್ವಿವಾಹಕ್ಕೆ ಅವಕಾಶವಿತ್ತು. ಅವರಲ್ಲಿ ಸೊರಥಿ ಮತ್ತು ಸಿಂಧ್ವಾ ಎಂಬೆರಡು ಶಾಖೆಗಳಿದ್ದುವು.

ಪ್ರಾಚೀನ ಕಾಲದಲ್ಲಿ ಸೌರಾಷ್ಟ್ರ ಸೊರಥ ಎಂದಾಗಿ ಕರೆಯಲ್ಪಡುತ್ತಿತ್ತು. ಅಲ್ಲಿನ ನಿವಾಸಿಗಳು ಸೊರಥಿಯರೆಂದು ಪರಿಚಿತರಾಗಿದ್ದರು. ಅಲ್ಪ ಸಂಖ್ಯಾತರಿದ್ದ ಇವರನ್ನು ಸಾಮಾನ್ಯವಾಗಿ ಜುನಾಗಡ್, ಜಾಮ್‌ನಗರ ಮತ್ತು ಬೊಂಬೇಗಳಲ್ಲಿ ಕಾಣಬಹುದು. ಇವರಲ್ಲಿನ ಕೆಲವರು ರಜಪುತಾನದಲ್ಲೂ ನೆಲಸಿರುತ್ತಾರೆ. ಖತ್ರಿ, ಬ್ರಹ್ಮಕ್ಷತ್ರಿಯ ಮತ್ತು ಪುರಾಜ್ಯ ಚಿನಿವಾರರ ಪುರೋಹಿತರಾಗಿದ್ದ ಇವರು ಅವರೊಂದಿಗೆ, ಹಾಗೆನ್ನುವಲ್ಲಿ ಅನ್ಯ ಸಾರಸ್ವತರೊಂದಿಗೂ ಭೋಜನ ಮಾಡದಿದ್ದರು.

ಸಿಂಧ್ವರು (ಸಿಂಧುವಾಲಾ) ಖತ್ರಿ, ಬ್ರಹ್ಮ-ಕ್ಷತ್ರಿಯ ಮತ್ತು ಲೊಹಾನಾರ ಪುರೋಹಿತರಾಗಿದ್ದರು. ಅವರು ಕಚ್‌ನಲ್ಲಿಯೂ ಕಾಣಬರುತ್ತಾರೆ. ಅವರ ಆಧ್ಯಾತ್ಮಿಕ ಗುರುಗಳು ದ್ವಾರಕಾ ಪೀಠದ ಶಂಕರಾಚಾರ್ಯರು. ಅವರು ನಾಲ್ಕು ಭಾಗಗಳಲ್ಲಿ ವಿಭಾಜಿಸಲ್ಪಟ್ಟಿರುತ್ತಾರೆ:

೧) ಕಚ್ಛಿ, ೨) ಹಲಾಯಿ, ೩) ಘೊಗರಿ ಮತ್ತು ೪) ಬ್ರೋಚ್‌ನಲ್ಲಿನ ಸಾರಸ್ವತರು.

ಕಚ್ಛ್ ಸಾರಸ್ವತರು ಮುಖ್ಯವಾಗಿ ಬೊಂಬೇ, ಮಾಂಡ್ವಿ (ಕಚ್ಛ್) ಮತ್ತು ಕರಾಚಿಗಳಲ್ಲಿ ಕಾಣಬರುತ್ತಾರೆ. ಸುಶಿಕ್ಷಿತ, ಶ್ರೀಮಂತರಿದ್ದ ಇವರ ಸಂಖ್ಯೆ ಅನ್ಯ ಪಂಗಡಗಳಿಗಿಂತಲೂ ಅಧಿಕವಿದೆ. ಉದ್ಯಮಶೀಲರಿದ್ದ ಇವರು ಪೋರ್‌ಬಂದರ್, ಜಾಮ್‌ನಗರ್, ಬೊಂಬೇ ಮುಂತಾದೆಡೆಗಳಲ್ಲಿ ಕಡಲ ಮಾರ್ಗವಾಗಿ ಸರಕನ್ನು ಸಾಗಿಸುವ ಉದ್ಯೋಗಕೊಂಡಿದ್ದರು. ಇವರು ಅನೇಕ ಗಣ್ಯಮಾನ್ಯ ವ್ಯಕ್ತಿಗಳನ್ನು ಸಮಾಜಕ್ಕಿತ್ತಿರುತ್ತಾರೆ.

ಹಲಾಯಿ ಸಾರಸ್ವತರು ಕಾಥಿಯಾವಾರ್ ಈಶಾನ್ಯ ದಿಕ್ಕಿನ ಹಲಾರ್ ಭಾಗಕ್ಕೆ ಸೇರಿದವರು. ಅವರು ಮುಖ್ಯತಃ ಪೋರ್‌ಬಂದರ್, ಜಾಮ್‌ನಗರ್ ಮತ್ತು ಬೊಂಬೇಗಳಲ್ಲಿ ಕಾಣಬರುತ್ತಾರೆ. ಕರಾಚಿಯಲ್ಲಿನ ಹಲಾಯಿ ಸಾರಸ್ವತರು ಮುಖ್ಯತಃ ಬಟ್ಟೆಯ ವ್ಯಾಪಾರಿಗಳು.

ಗೋಘರಿ ಸಾರಸ್ವತರು ಕಾಥಿಯಾವಾರ್‌ನಲ್ಲಿನ ಭಾವನಗರದ ಸಮೀಪವಿದ್ದ ಗೋಘಾ ಜಿಲ್ಲೆಗೆ ಸಂಬಂಧಿಸಿದವರಿದ್ದರು. ಅಲ್ಪ ಸಂಖ್ಯಾತರಿದ್ದ ಇವರು ಭಾವನಗರ, ಜುನಾಗಡ ಮತ್ತು ಬೊಂಬೇಯಲ್ಲಿ ಕಾಣಬರುತ್ತಾರೆ; ಕೆಲವೊಬ್ಬರನ್ನು ಕರಾಚಿಯಲ್ಲೂ ಕಾಣಬಹುದು.

ಕಚ್ಛ, ಹಲಾಯಿ ಮತ್ತು ಗೋಘರಿ ಸಾರಸ್ವತರು ಮಾಧ್ಯಂದಿನ, ಹಿರಣ್ಯಕೇಶಿ, ಅಪಸ್ತಂಭ, ತೈತ್ತರೀಯ, ವಾಜಸನೇಯ, ಬಂಧಾಯನ, ಕಣ್ವ ಮತ್ತು ಸತ್ಯಶತ್ ಶಾಖೆಗಳಿಗೆ ಸಂಬಂಧಿಸಿದ ಯಜುರ್ವೇದಿಗಳಾಗಿದ್ದಾರೆ. ಅವರಲ್ಲಿ ಕಾಶ್ಯಪ, ಶಾಂಡಿಲ್ಯ, ನೈಧ್ರುವ, ವಸಿಷ್ಠ, ಗಾರ್ಗ್ಯ, ಹರಿತ, ಕಣ್ವ, ರಥಿಹರ, ಮುದ್ಗಲ, ವಿಷ್ಣುವರ್ಧನ, ನಿತ್ಯುಂದನ, ವತ್ಸ, ಜಾಮದಗ್ನಿ, ವಿಶ್ವಾಮಿತ್ರ, ಧನಂಜಯ, ಅತ್ರಿ ಮತ್ತು ಅಗಸ್ತ್ಯ ಎಂಬೀಗೋತ್ರಗಳಿವೆ. ಅವರು ಸಿತಲಾ, ಕಮಲ, ಪದ್ಮ, ಲಕ್ಷ್ಮಿ ., ಭವಾನಿ, ಕಾಮಾಕ್ಷಿ, ರಮಾ, ಜಗನ್ಮಾತಾ, ಅಂಬಿಕಾ, ವಿಶ್ವೇಶ್ವರಿ, ನಾರಾಯಣಿ ಮುಂತಾದ ರೂಪುಗಳಲ್ಲಿನ ದೇವಿಯನ್ನು ಕಪಿಲೇಶ್ವರ, ಸೋಮೇಶ್ವರ, ವಿಶ್ವೇಶ್ವರ, ಅನಂತೇಶ್ವರ, ರಾಮೇಶ್ವರ, ಬುದ್ಧೇಶ್ವರರ ರೂಪುಗಳಲ್ಲಿನ ರುದ್ರನನ್ನು, ಗಣನಾಥ, ವಿಘ್ನರಾಜ, ಗಜಕರ್ಣ, ವಿನಾಯಕ, ಗಜಾನನ ರೂಪುಗಳಲ್ಲಿ ಗಣಪತಿಯನ್ನು ಹಾಗೂ ವಾಸುಕಿ, ಕಂಕಪಾಲ, ಚಂದ್ರಚೂಡ, ಭೈರವ, ತಕ್ಷಕನ ರೂಪಿನಲ್ಲಿ ಕ್ಷೇತ್ರಪಾಲನನ್ನು ಪೂಜಿಸುತ್ತಾರೆ.

೬. ಬ್ರೋಚ್ ಸಾರಸ್ವತರು

ಬ್ರೋಚ್ ಸಾರಸ್ವತರ ಸಂಖ್ಯೆ ಸುಮಾರು ೨೫೦; ಅವರ ಸಮಾಜ ಅನ್ಯ ಉಪವಿಭಾಗಗಳಿಗಿಂತ ಬೇರೆಯೇ ಆಗಿದೆ. ಅವರ ಸಂಪ್ರದಾಯ, ರೂಢಿ, ರಿವಾಜುಗಳು ಪಂಜಾಬಿನ ಸಾರಸ್ವತಸಮಾಜದ ಕಟ್ಟುಕಟ್ಟಳೆಗಳನ್ನು ಹೋಲುತ್ತವೆ. ಅವರು ಪಂಜಾಬನ್ನು ತಮ್ಮ ಮೂಲಸ್ಥಾನವೆಂದು ನಂಬುತ್ತಾರೆ; ತಮ್ಮ ಪೂರ್ವಜರು ೧೫೭೨ರಲ್ಲಿ ಗುಜರಾತನ್ನು ಗೆಲ್ಲಲಾಗಿ ಮೊಗಲರ ಅಕ್ಬರ ಕಳುಹಿಸಿದ್ದ ಸೇನೆಯೊಂದಿಗೆ ಸೈನಿಕರು, ಸೇನಾಧಿಕಾರಿಗಳಾಗಿ ಬಂದ ಬ್ರಹ್ಮ-ಕ್ಷತ್ರಿಯರ ಪುರೋಹಿತರಾಗಿದ್ದರೆನ್ನುತ್ತಾರೆ. ಬರೋಡಾ ಮತ್ತು ಗೋಧ್ರಾಗಳ ನಡುವಣ ಚಂಪಾನೇರ್ ಅವರ ಮೊದಲ ವಾಸಸ್ಥಾನವಾಗಿತ್ತು. ಚಂಪಾನೇರ್‌ನ ಕೆಲವೊಬ್ಬ ನಿವಾಸಿಗಳು ಚಂಪಾನೇರಿಯಾ ಎಂದಾಗಿ ಪರಿಚಿತರಾಗಿದ್ದಾರೆ. ಚಂಪಾನೇರ್‌ನ ಅವನತಿಯ

ಬಳಿಕ ಅವರು ಗುಜರಾಥಿನ ಬ್ರೋಚ್ (ಭೃಗುಪುರ)ಗೆ ವಲಸೆ ಹೋದರು.

ಅವರು ಈಗ ಬ್ರೋಚ್ ಸೂರತ್, ಅಮೋಡ್, ಜುನಾಗಡ, ಅಹಮ್ಮದಾಬಾದ್ ಮತ್ತು ಬೊಂಬೇಯಲ್ಲಿ ವಾಸಮಾಡುತ್ತಿದ್ದು ಬ್ರಹ್ಮ-ಕ್ಷತ್ರಿಯರ ಪೌರೋಹಿತ್ಯದ ವೃತ್ತಿ ಕೊಂಡಿರುತ್ತಾರೆ. ಈ ವರ್ಗದೊಂದಿಗೆ ಅಂತರ್ಭೋಜನ ಮಾಡುವ ಇವರು ಅಂತರ್ವಿವಾಹ ಮಾತ್ರ ಮಾಡುತ್ತಿಲ್ಲ. ಅವರು ಈಗ ಖಾಸಗಿ ಮತ್ತು ಸರಕಾರಿ ನೌಕರಿಕೊಂಡು, ಯಾರೊಬ್ಬರ ಹಂಗಿಲ್ಲದೆ ಬಾಳತೊಡಗಿರುತ್ತಾರೆ.

ಅವರು ವತ್ಸ, ಭರದ್ವಾಜ ಗೋತ್ರೀಯರಿದ್ದು ಮಾಧ್ಯಂದಿನ ಶಾಖೆಯ ಯಜುರ್ವೇದಿಗಳಾಗಿದ್ದಾರೆ. ಅವರ ಕುಲದೇವಿಯರು ಚಂಡಿಕ, ಮಯೂರವಾಹಿನಿ, ಜ್ವಾಲಾಮುಖಿ ಇತ್ಯಾದಿ. ಹಬ್ಬ ಮುಂತಾದ ಶುಭ ದಿನಗಳಂದು ಅವರು ದೇವಿಯನ್ನು ಪೂಜಿಸುತ್ತಾರೆ; ದೇವಿಗೆ ಉಪ್ಪು ಹಾಕದ ಭಕ್ಷ್ಯಗಳೊಂದಿಗೆ ಲಡ್ಡನ್ನು ಅರ್ಪಿಸುತ್ತಾರೆ. ಮೊಹೋಲಾ, ಜೇತ್ಲಿ, ಆಬಾ, ದೀಕ್ಷಿತ್ ಇತ್ಯಾದಿ ಅವರ ಕುಲನಾಮಗಳಾಗಿದ್ದವು. ಅವರು ವಿಧವಾ ಪುನರ್ವಿವಾಹವನ್ನು ಪ್ರತಿಬಂಧಿಸಿರುತ್ತಾರೆ.

ಗುಜರಾತ ಮತ್ತು ಕಾಥಿಯಾವಾರ್‌ಗಳಲ್ಲಿನ ಅನ್ಯ ಸಾರಸ್ವತರಂತೆ ಇವರು ವಿಧವಾ ಪುನರ್ವಿವಾಹಕ್ಕೆ ಅನುಮತಿಯೀಯದಿದ್ದರು.

ಹಿಂದೊಮ್ಮೆ ಅವರಲ್ಲಿನ ದೊಡ್ಡ ಪ್ರಮಾಣದ ಅಂತರ್ವಿವಾಹದ ಫಲವಾಗಿ ಪ್ರಾಯಕ್ಕೆ ಬಂದ ಹೆಣ್ಣು ಮಕ್ಕಳ ವಿವಾಹಕ್ಕೆ ರಕ್ತ ಸಂಬಂಧವಿರದವರು ದೊರಕದಾದರು. ಈ ಅಭಾವ ಸಮಾಜ ಬಾಂಧವರನ್ನು ಸಮಸ್ಯೆಯೊಂದರಂತೆ ಕಾಡತೊಡಗಿತು. ಆಗ ಅವರು ಬನಾರಸ್ ಮತ್ತು ಉತ್ತರಪ್ರದೇಶದಲ್ಲಿನ ಹಿಂದಿ ನುಡಿಯುವ ಜೈಥಿಯರು ತಮ್ಮ ಸಮಾಜದೊಂದಿಗೆ ಸಂಬಂಧಕೊಂಡಿರುವುದನ್ನು ಕಂಡು ಹಿಡಿದರು. ಅವರ ಗೋತ್ರಗಳು ಒಂದೇ ಇದ್ದಾಗಲೂ ಈಗ ಬಣಗಳೆರಡರ ನಡುವೆ ಅಂತರ್ವಿವಾಹ ನಡೆಯುತ್ತದೆ.

೧೦. ಕಾಶ್ಮೀರಿನ ಸಾರಸ್ವತರು

ಕಾಶ್ಮೀರಿನ ಎಲ್ಲಾ ಪಂಡಿತರು ಒಂದೇ ಸಮಾಜಕ್ಕೆ ಸೇರಿದವರು.[೧೧] ಕಾಶ್ಮೀರಿಯರೆಂದು ಕರೆದುಕೊಳ್ಳುವ ಇವರು ಸಾರಸ್ವತರ ಶಾಖೆಯೊಂದಕ್ಕೆ ಸಂಬಂಧಿಸಿದ್ದವರೆಂದು ಭಾವಿಸುತ್ತಾರೆ. ವಾಸ್ತವಿಕವಾಗಿ ತಮ್ಮದೇ ಆದ ಸಾಮಾಜಿಕ ಘಟಕವೊಂದಾಗಿದ್ದ ಇವರ ಮತ್ತು ಅನ್ಯ ಸಾರಸ್ವತ ಸಮಾಜಗಳ ನಡುವೆ ಏನೊಂದೂ ಸಾಮ್ಯವಿರದಿತ್ತು. ಇವರಲ್ಲಿನ ಅರೆವಾಸಿ ಜನರು ಶ್ರೀನಗರದಲ್ಲಿ ವಾಸಿಸುತ್ತಿದ್ದಾರೆ.

ಸುಮಾರು ೨೦೦೦ ಕುಟುಂಬಗಳ ಕಾಶ್ಮೀರಿ ಬ್ರಾಹ್ಮಣರು, ಭಾರತಕ್ಕೆ ದಂಡೆತ್ತಿ ಬಂದ ಸಿಕಂದರ್ ಶಾಹನ ದಬ್ಬಾಳಿಕೆಯಿಂದ ತಮ್ಮನ್ನು ಉಳಿಸಿಕೊಳ್ಳಲಾಗಿ ಊರು ಬಿಟ್ಟ ಪಂಜಾಬಿನ ಸಾರಸ್ವತರ ಹದಿನೊಂದು ಕುಟುಂಬಗಳ ವಂಶಜರಾಗಿರುತ್ತಾರೆ. ಪರಂಪರಾಗತ ನಂಬಿಕೆಯ ಮೇರೆಗೆ ಇವುಗಳಲ್ಲಿನ ಏಳು ಕುಟುಂಬಗಳು ಕಾಶ್ಮೀರಿನ ಕಣಿವೆಯಲ್ಲುಳಿದುಕೊಂಡವು. ಇವರನ್ನು 'ಭಾನಾಮಾಸಿ'ಗಳೆಂದು ಕರೆಯುತ್ತಾರೆ. ಇವರ ಎರಡು ಕುಟುಂಬಗಳು ಪಂಜಾಬಿನಲ್ಲಿ ನೆಲಸಿಕೊಂಡವು. ಇನ್ನುಳಿದ ಎರಡು ದಕ್ಷಿಣಕ್ಕೆ ತೆರಳಿ ಸ್ಥಾನೀಯ ಸಾರಸ್ವತ

ಕನ್ಯೆಯರನ್ನು ವರಿಸಿ ಅಲ್ಲೇ ಉಳಿದುಕೊಂಡವು. ಆ ನಾಲ್ಕು ಕುಟುಂಬಗಳ ವಂಶಜರನ್ನು 'ಮಾಲಾಮಾಸಿ'ಗಳೆಂದು ಕರೆಯುತ್ತಾರೆ [೨೨]. ಮುಂದೊಂದು ದಿನ 'ಭಾನಾಮಾಸಿ' ಯವರೊಂದಿಗೆ ಅಂತರ್ವಿವಾಹದ ಮೂಲಕ ಸಂಬಂಧ ಬೆಳೆಸಿಕೊಂಡ 'ಮಾಲಾಮಾಸಿ' ಕುಟುಂಬಗಳು ಪಂಜಾಬಿಗೆ ಮರಳಿದವು.

ಅನ್ಯ ಸಾರಸ್ವತರಂತಲ್ಲದೆ, ಕಟಶಾಖೆಯ ಕೃಷ್ಣ ಯಜುರ್ವೇದಿಗಳಿದ್ದ ಇವರು ಲಿಂಗಾಕ್ಷಿ ಸೂತ್ರವನ್ನು ಅನುಸರಿಸುತ್ತಾರೆ. ಅವರಲ್ಲಿನ ಹೆಚ್ಚಿನವರು ಶೈವರಿದ್ದು ಕೇವಲ ಕೆಲವೇ ಮಂದಿ ಶಾಕ್ತರಿದ್ದಾರೆ. ಅಲ್ಲಿ ಕೆಲವೊಬ್ಬ ವೈಷ್ಣವರೂ ಕಾಣಬರುತ್ತಿದ್ದು ಇವರು ಪಂಜಾಬಿನಲ್ಲಿ ಈ ಧರ್ಮ ಸ್ವೀಕರಿಸಿದ್ದವರ ವಂಶಜರೆನ್ನುತ್ತಾರೆ. ಇವರು ಉತ್ತರ ಮತ್ತು ಮಧ್ಯ ಭಾರತದಲ್ಲಿನ ಶೈವ ಬ್ರಾಹ್ಮಣರಂತೆ ಯಾವೊಂದರ ಬಂಧನವಿಲ್ಲದೆ ಮಾಂಸ ತಿನ್ನುತ್ತಿದ್ದರೂ ಸಂಧ್ಯಾವಂದನೆ ಮತ್ತು ಇನ್ನಿತರ ನಿತ್ಯ ಕ್ರಿಯಾಕರ್ಮಗಳನ್ನು ಯಥಾಕ್ರಮ ಆಚರಿಸುತ್ತಿದ್ದರು. ಮತ್ತು ರೂಢಿಯಲ್ಲಿದ್ದ ವಿವಿಧ ಪ್ರಕಾರದ ಬಲಿ, ಆಹುತಿಗಳನ್ನೀಯುತ್ತಿದ್ದರು.

ಮೊದಲು ಅವರಲ್ಲಿ ದತ್ತಾತ್ರೇಯ, ಭರದ್ವಾಜ, ಪಲದೇವ, ಅಪಮನ್ಯ, ಮುದ್ಗಲ ಮತ್ತು ಧೌಮ್ಯಾಯನ ಎಂಬೀ ಆರು ಗೋತ್ರಗಳಷ್ಟೆ ಇದ್ದವು. ಅಂತರ್ವಿವಾಹ, ಅನ್ಯ ಬ್ರಾಹ್ಮಣರೊಂದಿಗಿನ ಮಿಲನ ಇತ್ಯಾದಿಗಳ ಫಲವಾಗಿ ಈಗ ಅವು ೧೯೯ಕ್ಕೇರಿವೆ. ಅವರಲ್ಲಿ ಭಟ್, ಪಂಡಿತ್, ರಾಜ್‌ದಾನ್ ಎಂಬೀ ಮೂರು ಮುಖ್ಯ ವಿಭಾಗಗಳಿದ್ದು ಅವುಗಳಿಂದ ಕೌಲ್, ಸೋಪೋರಿ, ಪಂಡಿತ್ ಮತ್ತು ರಾಯಿನಾ ಎಂಬೀ ವಿಶಿಷ್ಟ ನಾಮಧೇಯಗಳು ಹುಟ್ಟಿಕೊಂಡವು.

ಅಲ್ಪ ಸಂಖ್ಯಾಕರಿದ್ದ ಇವರು ಬುದ್ಧಿ ಜೀವಿಗಳಿದ್ದರು. ಅತಿ ಚಾಣಾಕ್ಷರೂ, ಶ್ರೀಮಂತರೂ ಇದ್ದ ಇವರು ಇನ್ನುಳಿದವರ ಮೇಲಿಕ್ಕೆ ಸಹಜವಾಗಿ ಪ್ರಭಾವ ಬೀರಬಲ್ಲವರಿದ್ದರು. ಈ ಸಮಾಜ ರಣಜಿತ್ ಸಿಂಗ್‌ರ ದಿವಾನ್ ಮತ್ತು ವಿತ್ತ ಮಂತ್ರಿಯಿದ್ದ ರಾಜಾ ದೀನಾನಾಥ್ ಅವನ ಭಾವ ರಾಜಾ ಶಂಕರನಾಥ್, ಪಂಡಿತ್ ಮೋತಿಲಾಲ್ ನೆಹರು, ಸರ್ ತೇಜ್ ಬಹಾದೂರ್ ಸಪ್ರು, ಸರ್ ಗಂಗಾಧರ ಕೌಲ್, ಪಂಡಿತ್ ಬಿಶನ್ ನಾರಾಯಣ ಧರ್, ರಾಜಾ ನರೇಂದ್ರನಾಥ ಕೌಲ್, ಸರ್ ಟಿ. ಬಿ. ಹರಿಕಿಶನ್ ಕೌಲ್, ಪಂಡಿತ್ ಹೃದಯನಾಥ ಕುಂಜ್ರು ಮತ್ತು ಪಂಡಿತ್ ಜವಾಹರ್‌ಲಾಲ್ ನೆಹರು ಮುಂತಾದ ಖ್ಯಾತನಾಮ ವ್ಯಕ್ತಿಗಳನ್ನು ದೇಶಕ್ಕಿತ್ತಿದೆ.

ಸಂದರ್ಭ ಸೂಚಿ

೧. ಜೋರ್ಜ್ ಕ್ಯಾಂಬೆಲ್ ಇವರ 'ದಿ ಎತ್ನೋಲೊಜಿ ಆಫ್ ಇಂಡಿಯಾ' ಪುಟ ೬೧-೬೩. ಬ್ರಾಹ್ಮಣರ ವಿಶಿಷ್ಟ ಸಾಮಾಜಿಕ ವ್ಯವಸ್ಥೆ, ಕಟ್ಟುಪಾಡುಗಳು ಸರಸ್ವತಿ ಮತ್ತು ದೃಷದ್ವತಿಗಳ ನಡುವಣ ಸಣ್ಣ ಪ್ರದೇಶದಲ್ಲಿ ರೂಪುಗೊಂಡವೆಂದು ವಿನ್ಸೆಂಟ್ ಎ. ಸ್ಮಿತ್ ಇವರು ನುಡಿಯುತ್ತಾರೆ. (ಆಕ್ಸ್‌ಫರ್ಡ್ ಹಿಸ್ಟರಿ ಆಫ್ ಇಂಡಿಯಾ, ೧೯೨೦, ಪುಟ೧೩)

೨. ರೆವೆರೆಂಡ್ ಎಮ್. ಎ. ಶೆರ್ರಿಂಗ್, ಎಮ್.ಎ., ಎಲ್.ಎಲ್.ಬಿ. (ಲಂಡನ್) ಇವರ 'ಹಿಂದು ಟ್ರೈಬ್ಸ್ ಎಂಡ್ ಕಾಸ್ಟ್ಸ್' ಭಾಗ ೧, ೧೮೭೨, ಪುಟ ೬೩.

೩. ರೆವೆರೆಂಡ್ ಎಮ್. ಎ. ಶೆರ್ರಿಂಗ್, ಎಮ್.ಎ., ಎಲ್.ಎಲ್.ಬಿ. (ಲಂಡನ್) ಇವರ ''ಹಿಂದು ಟ್ರೈಬ್ಸ್ ಎಂಡ್ ಕಾಸ್ಟ್ಸ್'' ಭಾಗ ೨, ೧೮೭೪, ಇಂಟ್ರೊಡಕ್ಷನ್, ಪುಟ ೧೫೯.

೪. ಜೋನ್ ವಿಲ್ಸನ್, ಡಿ.ಡಿ.ಎಫ್.ಆರ್.ಎಸ್., ಇವರ 'ಇಂಡಿಯನ್ ಕಾಸ್ಟ್' ೧೮೭೭, ಭಾಗ ೨, ಪುಟ ೧೬೨.

ದಾಕ್ಷಿಣಾತ್ಯ ಸಾರಸ್ವತರ ಸಂದರ್ಭದಲ್ಲಿ ಇದು ಈಗ ನಿಜವಿರಬಹುದು. ಶೆಣೈ ಬ್ರಾಹ್ಮಣರ ಕುರಿತಾಗಿ ರೆವೆರೆಂಡ್ ಎಮ್. ಎ. ಶೆರ್ರಿಂಗ್ ಹೀಗೆನ್ನುತ್ತಾರೆ: ಬುದ್ಧಿವಂತರಿದ್ದ ಇವರು ಇಂಗ್ಲಿಷ್ ಸಾಹಿತ್ಯ ಮತ್ತು ಪಾಶ್ಚಿಮಾತ್ಯ ವಿಜ್ಞಾನದಲ್ಲಿ ರುಚಿಕೊಂಡಿದ್ದರು. ಅವರು ಅನ್ಯ ಬ್ರಾಹ್ಮಣರಲ್ಲಿನ ಪೂರ್ವ ಕಲ್ಪಿತ ದುರ್ಭಾವನೆಗಳಿಂದ ಮುಕ್ತರಾಗಿದ್ದರು. ಔತ್ತರೇಯ ಸಾರಸ್ವತರ ವರ್ತನೆ ಹೇಗಿದ್ದರೂ, ದಕ್ಷಿಣದಲ್ಲಿನ ಸಾರಸ್ವತರು ಮಾತ್ರ ತಮ್ಮ ಹಳೆಯ ರೀತಿ, ರಿವಾಜು, ರೂಢಿಗಳತ್ತ ಇಂದಿಗೂ ಆದರ ತೋರುತ್ತಿದ್ದಾರೆಂಬುದನ್ನು ಗೋವಾದಲ್ಲಿದ್ದ ತಮ್ಮ ಕುಲದೇವರತ್ತ ಅವರು ತೋರುವ ಭಕ್ತಿ, ಶ್ರದ್ಧೆಗಳಿಂದರಿಯಬಹುದು. ಇದು ಗೋವಾದಲ್ಲಿನ ಅವರ ಮೂಲಸ್ಥಾನದೊಂದಿಗಿನ ಸಂಬಂಧವನ್ನುಳಿಸಿಕೊಂಡು ಬರಲು ನೆರವನ್ನೀಯುತ್ತದೆ.

೫. ಇದು ಪಂಡಿತ್ ಶ್ರೀಧರ ಪಾಟಕ್ ಇವರ 'ದ ಸಾರಸ್ವತ್ಸ್ ಆಫ್ ಅಪ್ಪರ್ ಇಂಡಿಯಾ' ಲೇಖನದ ಆಧಾರಕೊಂಡಿದೆ. 'ದಿ ಆಲ್ ಇಂಡಿಯಾ ಸಾರಸ್ವತ್' ಏಪ್ರಿಲ್ ೧೯೧೯.

೬. ಇದು ಬಿಹಾರಿಲಾಲ್ ಇವರ 'ದ ಸಾರಸ್ವತ್ಸ್ ಆಫ್ ದ ಪಂಜಾಬ್' ಮತ್ತು 'ದ ಮಹಿಯಾಲ್ಸ್ ಓರ್ ದ ಮಿಲಿಟೆಂಟ್ ಸಾರಸ್ವತ್ಸ್' ಲೇಖನವನ್ನಾಧರಿಸಿಕೊಂಡಿದೆ. 'ದಿ ಆಲ್ ಇಂಡಿಯಾ ಸಾರಸ್ವತ್' ಜುಲೈ ೧೯೧೯.

೭. ಇದು ಪಂಡಿತ್‌ರಾಮ ನಾರಾಯಣ ಪಾಟಕ್ ಇವರ 'ದ ಸಾರಸ್ವತ್ಸ್ ಆಫ್ ಯು.ಪಿ.' ಲೇಖನವನ್ನಾಧರಿಸಿಕೊಂಡಿದೆ. 'ದಿ ಆಲ್ ಇಂಡಿಯಾ ಸಾರಸ್ವತ್', ಅಕ್ಟೋಬರ್ ೧೯೨೪.

೮. ಇದು ಪಂಡಿತ್ ಅಜೊಯ್ ಸಿಂಗ್, ಎಮ್.ಎಸ್ಸ್.ಸಿ. ಇವರ 'ಸಾರಸ್ವತ್ಸ್ ಆಫ್ ರಜಪುತಾನಾ' ಮತ್ತು ಪಂಡಿತ್ ಪ್ರಹ್ಲಾದ ಓಝಾ, ಅಜಮೇರ ಇವರ 'ರಜಪುತಾನಾ ಸಾರಸ್ವತ್ಸ್' ಎಂಬ 'ದಿ ಆಲ್ ಇಂಡಿಯಾ ಸಾರಸ್ವತ್ಸ್' ಇದರ ಏಪ್ರಿಲ್ ೧೯೨೦ ಮತ್ತು ಜನವರಿ ೧೯೨೩ರ ಸಂಚಿಕೆಗಳಲ್ಲಿ ಪ್ರಕಾಶಿಸಲ್ಪಟ್ಟ ಲೇಖನಗಳನ್ನಾಧರಿಸಿಕೊಂಡಿದೆ.

೯. ಇದು ರವಾಚಂದ್ ರತನ್‌ಚಂದ್ ಇವರ 'ದ ಸಿಂಧ್ ಸಾರಸ್ವತ ಬ್ರಾಹ್ಮಣ್ಸ್' ಲೇಖನವನ್ನಾಧರಸಿಕೊಂಡಿದೆ. 'ದಿ ಆಲ್ ಇಂಡಿಯಾ ಸಾರಸ್ವತ್ಸ್', ಏಪ್ರಿಲ್ ೧೯೨೨, ನವೆಂಬರ್ ೧೯೨೨, ಜನವರಿ ೧೯೨೩ ಮತ್ತು ಅಕ್ಟೋಬರ್ ೧೯೨೪.

೧೦. ಇದು ಎ.ಜೆ. ಜೇಠ್ಲಿ ಇವರ 'ದ ಸಾರಸ್ವತ್ ಆಫ್ ಗುಜರಾತ್ ಎಂಡ್ ಕಾಥಿಯಾವಾರ್' ಲೇಖನವನ್ನಾಧರಿಸಿಕೊಂಡಿದೆ. 'ದಿ ಆಲ್ ಇಂಡಿಯಾ ಸಾರಸ್ವತ್ಸ್', ಏಪ್ರಿಲ್ ೧೯೧೯ ಮತ್ತು ಬದ್ರಿಲಾಲ್ ರತನ್‌ರಾಮ್ ಪುರೋಹಿತ ಇವರ 'ದ ಬ್ರೋಚ್ ಸಾರಸ್ವತ್ಸ್' ಲೇಖನವನ್ನಾಧರಿಸಿಕೊಂಡಿದೆ. 'ದಿ ಆಲ್ ಇಂಡಿಯಾ ಸಾರಸ್ವತ್ಸ್', ಏಪ್ರಿಲ್ ೧೯೨೦.

೧೧. ಇದು ಪಂಡಿತ್ ಆನಂದ ಕೌಲ್ ಇವರ 'ದ ಕಾಶ್ಮೀರ್ ಪಂಡಿತ್' ಲೇಖನವನ್ನಾಧರಿಸಿಕೊಂಡಿದೆ. 'ದಿ ಆಲ್ ಇಂಡಿಯಾ ಸಾರಸ್ವತ್', ಜುಲೈ ೧೯೩೩ ಮತ್ತು ಡಾ. ಜಿ. ಬುಲ್ಲ ಹ್ರ್ ಇವರ 'ಕಾಶ್ಮೀರಿಯನ್ ಬ್ರಾಹ್ಮಣ್ಸ್' ಲೇಖನವನ್ನಾಧರಿಸಿಕೊಂಡಿದೆ. 'ದ ಜರ್ನಲ್ ಆಫ್ ಬೊಂಬೇ ಬ್ರಾಂಚ್ ಆಫ್ ರೋಯಲ್ ಏಶ್ಯಾಟಿಕ್ ಸೊಸ್ಯಾಟಿ'

ಸಂಪುಟ ೧೨, ೧೮೭೬.

೧೨. ಚಿತ್ರಾಪುರ ಸಾರಸ್ವತರ ಸಾಯಂಕಾಲದ ಪ್ರಾರ್ಥನೆಯಲ್ಲಿ, 'ನಮಸ್ತೆ ಶಾರದಾ ದೇವಿ ಕಾಶ್ಮೀರಪುರ ವಾಸಿನಿ' ಎಂಬುದರ ಉಲ್ಲೇಖ ಕಾಣಬರುತ್ತಿದ್ದರೆ ಅದು ಆಶ್ಚರ್ಯದ ವಿಚಾರವೊಂದು. 'ಸರಸ್ವತಿ ಮಹಾಮಾಯಾ ಕಾಶ್ಮೀರಪುರ ವಾಸಿನಿ' ಎಂಬುದರ ಉಲ್ಲೇಖ ಶೆಣ್ವಿಯವರ ಪ್ರಾರ್ಥನೆಯಲ್ಲೂ ಕಾಣಬರುತ್ತದೆ. ಎಸ್.ಎಸ್.ತಾಲ್ಮಕಿ, ಬಿ.ಎ., ಎಲ್.ಎಲ್.ಬಿ., ಇವರ 'ಸಾರಸ್ವತ್ ಫ್ಯಾಮಿಲೀಸ್', ಭಾಗ ೧, ಪುಟ ೫೪-೫೪.

ಮಂಜುಳ ಕ್ಷೇತ್ರ ಮಹಾತ್ಮ್ಯದಲ್ಲಿ ಸಾರಸ್ವತರು ಕುಶಸ್ಥಳಿಯ ನಿವಾಸಿಗಳಿದ್ದು, ಕಾಶ್ಮೀರದಿಂದ ವಲಸೆ ಬಂದವರೆಂಬುದನ್ನು ಸೂಚಿಸಲಾಗಿದೆ. ಅದು ಆಶ್ಚರ್ಯಜನಕ ವಿಚಾರವೊಂದಾಗಿದೆ.

ಪರಿಶಿಷ್ಟ ೧

ಶೆಣ್ವೆಯರು

(ಕೆನರಾ ಗೆಝೆಟಿಯರ್ (೧೮೮೩) ನಲ್ಲಿನ 'ಸಾರಸ್ವತ್ಸ್ ಇನ್ ಕೆನರಾ'ದಿಂದ ಉದ್ಧರಿಸಲ್ಪಟ್ಟಿದೆ)

೧೮೭೨ರ ಜನಗಣತಿಯ ಮೇರೆಗೆ ೮೭೯೯ ಮಂದಿ ಶೆಣ್ವೆಯರು ಅಥವಾ ಸಾರಸ್ವತರು (ಅವರಲ್ಲಿ ೪೪೮೯ ಗಂಡಸರು ಮತ್ತು ೪೩೧೦ ಹೆಂಗಸರು) ಕಾರ್ವಾರ ಮತ್ತು ಅಂಕೋಲದ ನಗರಗಳಲ್ಲಿ, ಅವುಗಳ ಸುತ್ತಣ ಹಳ್ಳಿಗಳಲ್ಲಿ, ಕರಾವಳಿ ಭಾಗ, ಹಳಿಯಾಳ, ಸುಪಾ, ಸಿರ್ಸಿಗಳ ಒಳಭಾಗಗಳಲ್ಲಿ ಕಾಣಬಂದಿರುತ್ತಾರೆ. ಹದಿನಾರನೆಯ ಶತಮಾನದ ಮೊದಲ ದಿನಗಳಲ್ಲಿ ಪೋರ್ಚುಗೀಸರು ಗೋವಾದ ಮೇಲೆ ಸ್ವಾಮ್ಯ ಸಾರಿದಾಗ ಇವರು ಕೆನರಾದತ್ತ ಪಲಾಯನ ಮಾಡಿದರೆನ್ನಲಾಗುತ್ತದೆ.

ರೂಢಿಯಲ್ಲಿದ್ದ ನಂಬಿಕೆಯ ಮೇರೆಗೆ ವಿಷ್ಣುವಿನ ಆರನೆಯ ಅವತಾರವಿದ್ದ ಪರಶುರಾಮ ತನ್ನ ಪೂರ್ವಜರಿಗೆ ಸಂಬಂಧಿಸಿದ್ದ ಧಾರ್ಮಿಕ ಕ್ರಿಯೆಗಳನ್ನು ಪೂರೈಸಲಾಗಿ ಶರ್ಮ (ಗೋವಾದಲ್ಲಿನ ಸಾರಸ್ವತ ಸಮಾಜದ ಮೂಲಪುರುಷ) ಕುಟುಂಬೀಯರನ್ನು ಅವರ ಕುಲದೇವತೆ, ದೇವಿಯರ ಸಮೇತ ತ್ರಿಹೋತ್ರ (ಈಗಿನ ಬಂಗಾಲದಲ್ಲಿನ ತಿರ್ಹುತ್) ದಿಂದ ತಂದು ಗೋವಾದಲ್ಲಿ ನೆಲೆಗೊಳಿಸಿದ. ಗೋವಾದಲ್ಲಿನ ಮಂಗೇಶ ಮತ್ತು ಶಾಂತಾದುರ್ಗಾ ಇವರ ಮೂರ್ತಿಗಳ ಮುಂಭಾಗದಲ್ಲಿನ ಶರ್ಮಶ್ರೇಷ್ಠಿಗಳ ವಿಗ್ರಹಗಳು ಈ ಪ್ರಸಂಗದ ನೆನವರಿಕೆಯೊಯುತ್ತವೆ. ಈ ವಿಗ್ರಹಗಳನ್ನು ಸಂದರ್ಶಕರು ಶ್ರದ್ಧೆ, ಭಕ್ತಿಯಿಂದ ಪೂಜಿಸುತ್ತಾರೆ. ದೇವಸ್ಥಾನದ ಅರ್ಚಕರು ತೆಂಗಿನಕಾಯಿ, ಬಾಳೆಹಣ್ಣು, ಹೂವು, ಅನ್ನ ಇತ್ಯಾದಿಗಳ ನೈವೇದ್ಯ ಅರ್ಪಿಸಿ ಪ್ರಮುಖ ದೈವಕ್ಕೆ ಮೀಸಲಾದ ಗೌರವ, ಭಕ್ತಿಯನ್ನು ಇವಕ್ಕೂ ತೋರುತ್ತಾರೆ. ಶೆಣ್ವೆಯರು ತಾವು ಆರಾಧಿಸುವ ಮಂಗೇಶ ಮತ್ತು ಶಾಂತಾದುರ್ಗಾ ಮೂರ್ತಿಗಳನ್ನು ಬಂಗಾಲದಿಂದ ತರಲಾಯಿತೆಂಬ ನಂಬಿಕೆಯಿದೆ. ಆದರೆ ಮಂಗೇಶ ಮಾಹಾತ್ಮ್ಯ, ಅವು ಸ್ಥಾನೀಯ ದೇವತೆಗಳಾಗಿದ್ದು ಅವನ್ನು ಕೋಮಿನ ಸ್ಥಾಪಕತ್ರಯರು ಪೂಜೆಗೆ ಬಳಸಿದ್ದಂತಹವೆಂದು ನುಡಿಯುತ್ತದೆ.

ಗೋವಾದಲ್ಲಿ ನೆಲಸಿದ್ದ ಶೆಣ್ವೆಯರು ತಮ್ಮ ಕುಲನಾಮ ಬಂಗಾಲಿ ಮೂಲದ 'ಶಹಾಣ್ಣಾವ್' (ತೊಂಭತ್ತಾರು) ಕುಟುಂಬಗಳನ್ನುದ್ದೇಶಿಸಿಕೊಂಡಿರುವುದಾಗಿ ನುಡಿಯುತ್ತಾರೆ. ಈ ವಾದದ ಸಮರ್ಥನೆಗಾಗಿ ಶೆಣ್ವೆಯರು ಪ್ರಚಾರದಲ್ಲಿರುವ ಬಂಗಾಲಿ ಮೂಲದ ಗೌರವ ಸೂಚಕ 'ಬಾಬ್' ಶಬ್ದದ ನಿದರ್ಶನವಿತ್ತು ಅದು 'ಬಾಬು' ಶಬ್ದವನ್ನು ಹೋಲುತ್ತದೆ ಎನ್ನುತ್ತಾರೆ. ಆದರೆ 'ಬಾಬ್' ಶಬ್ದವನ್ನು ಪಶ್ಚಿಮ ಕರಾವಳಿಯ ಇನ್ನಿತರ ಜಾತಿಯವರೂ ಬಳಸುತ್ತಿದ್ದ ನಿಮಿತ್ತ ಅದು ಈ ಮೇಲಿಣ ವಾದ ನಿರಾಧಾರವಿದ್ದುದರ ಅರಿವನ್ನೀಯುತ್ತದೆ. ಹಾಗೆಯೇ ಗಂಜಿಯುಣ್ಣುವುದು, ಮೈಗೆ ಎಣ್ಣೆ ಹಚ್ಚುವುದು

ಮುಂತಾದವು ಕೇವಲ ಬಂಗಾಲಿ ಪದ್ಧತಿಗಳಾಗಿರದಿದ್ದು ಅವು ಸಾಮಾನ್ಯವಾಗಿ ಪಶ್ಚಿಮ ಕರಾವಳಿಯ ಜನ ಸಾಮಾನ್ಯರ ಅಭ್ಯಾಸವಿತ್ತು.

ಸಹ್ಯಾದ್ರಿ ಖಂಡದ ಮೇರೆಗೆ ಮೊದಲು ಅವರು ಸಾರಸ್ವತರೆಂದಾಗಿ ಕರೆಯಲ್ಪಡುತ್ತಿದ್ದರು. ಮತ್ತು ಅವರು ಬ್ರಾಹ್ಮಣರಿಗೆ ಸಂಬಂಧಿಸಿದ್ದ ಆರೂ ಅಧಿಕಾರಗಳನ್ನು ಕೊಂಡಿದ್ದರು. ಅವರನ್ನು ಕುಶಸ್ಥಳಿಗಳೆಂದೂ ಕರೆದಿದ್ದಿರಬೇಕು ; ಸರ್ವ ಸಾಮಾನ್ಯವಾಗಿ ಸಾರಸ್ವತರೆಂದು ಕರೆಯಲ್ಪಡುತ್ತಿದ್ದ ಶೆಣ್ವೆ ಸಮಾಜದ ಚಿಕ್ಕ ಶಾಖೆಯೊಂದು ಈಗಲೂ ಇದೇ ಹೆಸರಿನಿಂದ ಪರಿಚಿತವಾಗಿದೆ.

ಸಹ್ಯಾದ್ರಿ ಖಂಡದ ಇನ್ನೊಂದೆಡೆಯಲ್ಲಿ ಮೊತ್ತ ಮೊದಲ ವಲಸಿಗರಿದ್ದ ದೇವಶರ್ಮರ ಪಿತೃಭೂಮಿ ಕನೋಜ ಎಂದಾಗಿ ಉಲ್ಲೇಖಿಸಲಾಗಿದೆ. ಅವರು ವತ್ಸ, ಕೌಶಿಕ ಮತ್ತು ಕೌಂಡಿನ್ಯ ಎಂಬೀ ಮೂರು ಗೋತ್ರಗಳಿಗೆ ಸಂಬಂಧಿಸಿದವರಾಗಿದ್ದಾರೆ. ಗಂಡಸರು ತಮ್ಮ ಹೆಸರಿಗೆ ರಾವ್ ಅಥವಾ ಶೆಣ್ವೆ ಶಬ್ದವನ್ನು ಜೋಡಿಸುತ್ತಾರೆ. ಮರಾಠಾರಿಂದ ಕೊಂಡಿರಬಹುದಿದ್ದ ಶಬ್ದ ರಾವ್, ಕನ್ನಡದಲ್ಲಿನ 'ರಾಯರು' ಶಬ್ದದ ವಿಕೃತ ರೂಪವಿದ್ದಂತೆ ಕಾಣಬರುತ್ತದೆ. ಅವರ ಪ್ರಮುಖ ಕುಲನಾಮಗಳು ನಾಡಕರ್ಣಿ (ಇದು ಕನ್ನಡದ 'ನಾಡು', ಗ್ರಾಮ, ಶಬ್ದದಿಂದುದ್ಭೂತವಾದುದಾಗಿರಬೇಕು. ಅಥವಾ ಗ್ರಾಮದ ಲೆಕ್ಕಿಗನನ್ನು ಸೂಚಿಸುತ್ತಿರಬೇಕು), ದುಬಾಶ್, ದೇಶ್‌ಪಾಂಡೆ, ಮಜುಮ್‌ದಾರ್, ಕುಲಕರ್ಣಿ, ದೇಶ್‌ಮುಖ್ ಮತ್ತು ದೇಸಾಯಿ; ಅನ್ಯ ಕುಲನಾಮಗಳು ವಾಘ್ (ಹುಲಿ), ವಾಗ್ಲೆ (ಮೀನು), ವೈದ್ಯ (ರೋಗ ನಿದಾನ ಬಲ್ಲವ), ಪಂಡಿತ್ (ವಿದ್ವಾಂಸ), ದಳ್ವಿ (ದಳಪತಿ), ತೆಲಂಗ (ತೆಲಂಗಾಣಕ್ಕೆ ಸಂಬಂಧಿಸಿದ್ದವರು), ಕೇಂಕ್ರೆ, ಲಾಡ್, ಸಾಂಝ್ಗಿರೆ, ಖೋಟೆ, ರಾಜಾಧ್ಯಕ್ಷ, ಧೂಮೆ, ಗುಗುಲ್, ಗಾಯ್ತೊಂಡೆ, ರೇಗೆ, ಸಾಖರ್‌ದಂಡೆ, ಕನವಿಂದೆ, ವರ್ದೆ, ಮೋನೆ, ಸೌನಿ, ಗಭೀರ್, ಟಾಕಿ ಮತ್ತು ಶೆಂಡಿ ಮುಂತಾದವುಗಳಾಗಿವೆ.

ಸಾಮಾನ್ಯವಾಗಿ ಬಳಸಲ್ಪಡುತ್ತಿದ್ದ ಗಂಡಸರ ಹೆಸರುಗಳು ಈ ಮುಂದಿನಂತಿವೆ: ಮಾದಪ್ಪ, ಪುಟ್ಟಪ್ಪ, ಮಾಂಗ್ಬಾ, ಅಣ್ಣಪ್ಪ, ರುದ್ರಪ್ಪ, ಮಾನ್‌ಶೆಣ್ವೆ, ಶಿವಪ್ಪ, ದುರ್ಗಪ್ಪ, ರಾಮಪ್ಪ, ಮಂಗೇಶ - ಶೆಣ್ವೆ, ಪುಂಡಲೀಕ - ಶೆಣ್ವೆ, ವೈಕುಂಠ-ಶೆಣ್ವೆ, ಫೋಂಡ-ಶೆಣ್ವೆ, ಮಾರ್ತೋಬಾ, ಭಾಸ್ಕರಪ್ಪ, ಘನಶಾಮ್, ಭೀಮ್‌ರಾವ್, ಯಶವಂತರಾವ್, ವಾಮನರಾವ್, ದತ್ತಾರಾವ್ ಮತ್ತು ಬಾಬುರಾವ್. ಹೆಣ್ಣುಮಕ್ಕಳ ಮದುವೆಯ ಮೊದಲಿನ ಹೆಸರುಗಳು ಹೀಗಿವೆ : ವೇಣಿ, ತುಳ್ಸಿ, ಗಂಗಾ, ಯಮ್ನಾ, ಸರ್ಯು, ಯಶಾ, ಶಾಂತಾ, ಗೋದು, ಗಜಾ, ಕಾಶಿ. ವಿವಾಹನಂತರದ ಸ್ತ್ರೀಯರ ಹೆಸರುಗಳು : ರುಕ್ಮಿಣಿ, ಸತ್ಯಭಾಮಾ, ದ್ರೌಪದಿ, ಸುಭದ್ರಾ, ಪಾರ್ವತಿ, ಜಾನಕಿ, ಸೀತಾ, ರಾಧಾ, ಲಕ್ಷ್ಮಿ, ಗೋಪಿಕಾ, ಅನ್ನಪೂರ್ಣ ಮತ್ತು ಉಮಾ. ಕೆನರಾದ ಶೆಣ್ವೆಯರು ಗೋವಾ ಮತ್ತು ಬೊಂಬೇಯ ಶೆಣ್ವೆಯರೊಂದಿಗೆ ವೈವಾಹಿಕ ಸಂಬಂಧ ಬೆಳಸುತ್ತಾರೆ. ಅವರು ಸಾಷಷ್ಟಿಕಾರರೊಂದಿಗೂ ಅಂತರ್ಭೋಜನ ಮತ್ತು ವಿವಾಹ ಸಂಬಂಧ ಬೆಳಸತ್ತಾರೆ. ಅವರು ಗೃಹಸ್ಥರು ಮತ್ತು ಪುರೋಹಿತರು (ಭಟ್ಟ್) ಎಂಬೀ ಎರಡು ವರ್ಗಗಳಲ್ಲಿ ವಿಭಾಗಿಸಲ್ಪಟ್ಟಿರುತ್ತಾರೆ. ತಮ್ಮ ನಿರ್ದಿಷ್ಟ ವೃತ್ತಿಯ ಹೊರತು ಅವರು ಜೋಯಿಸರ, ಪುರೋಹಿತರ, ಪುರಾಣಗಳ ಪಾರಾಯಣ ಮಾಡುವವರ, ವ್ಯಾಪಾರಿಯ,

ಸರಕಾರಿ ನೌಕರನ ವೃತ್ತಿಕೊಂಡೂ ಬಾಳು ಬದುಕಬಹುದಿತ್ತು. ಅಥವಾ ಇವೆಲ್ಲವುಗಳನ್ನು ಬಿಟ್ಟು ಸಾಮಾನ್ಯ ಗೃಹಸ್ಥನಂತೆಯೂ ಬಾಳಬಹುದಿತ್ತು. ಹಾಗೆಯೇ ಗೃಹಸ್ಥನೊಬ್ಬ ವೈದಿಕ ವೃತ್ತಿಯ ಅಭ್ಯಾಸಮಾಡಿ ಪುರೋಹಿತನೊಬ್ಬನೂ ಆಗಬಹುದಿತ್ತು.

ಕೆನರಾದ ಸಾರಸ್ವತರಲ್ಲಿ ಸಧ್ಯ ಆರು ವರ್ಗಗಳಿದ್ದರೆ ಮೊತ್ತ ಮೊದಲು ಅವು ವೈಷ್ಣವ ಮತ್ತು ಸ್ಮಾರ್ತ ಎಂಬೀ ವರ್ಗಗಳಿಗಷ್ಟೆ ಸೀಮಿತವಾಗಿದ್ದವು. ಸ್ಮಾರ್ತರಲ್ಲಿ ಕುಶಸ್ಥಳಿಯರ, ಶೆಣ್ವಿಯರ, ಕುಡಾಲ್ ದೇಶ್ಕಾರರ ಮತ್ತು ವೈಷ್ಣವರಲ್ಲಿ ಸಾಷಷ್ಟಿಕಾರರ, ಬಾರ್ದೇಶ್ಕಾರರ ಮತ್ತು ಪೆಡ್ನೆಕರರ ಸಮಾವೇಶವಿತ್ತು. ಈ ಸಮಾಜಗಳಲ್ಲಿ ಅಂತರ್ಭೋಜನಕ್ಕೆ ನಿರ್ಬಂಧವಿದ್ದಿರವಿದ್ದರೂ ಪರಸ್ಪರ ವೈವಾಹಿಕ ಸಂಬಂಧಕ್ಕೆ ಮಾತ್ರ ಬಂಧನವಿತ್ತು. ಕಾಲಾಂತರದಲ್ಲಿ ಅವರು ಆರು ವಿಶಿಷ್ಟ ವರ್ಗಗಳಲ್ಲಿ ವಿಂಗಡಿಸಲ್ಪಟ್ಟರು. ಅದು ಅವರಲ್ಲಿನ ಅಂತರ್ಭೋಜನ ಮತ್ತು ಅಂತರ್ವಿವಾಹಗಳಿಗೆ ತಡೆಹಾಕಿತು. ಸ್ಮಾರ್ತರಿದ್ದ ಶೆಣ್ವಿಯರು ದೀರ್ಘಕಾಲದ ತನಕ ಸಾರಸ್ವತರ ಅನ್ಯವರ್ಗದವರೊಂದಿಗೆ ವಿವಾಹ ಸಂಬಂಧ ಬೆಳಸದುಳಿದರು. ಇತ್ತೀಚೆಗಷ್ಟೆ ಅವರು ಸಾಸಷ್ಟಿಕಾರರೊಂದಿಗೆ ವಿವಾಹ ಸಂಬಂಧ ಬೆಳಸತೊಡಗಿರುತ್ತಾರೆ. ಇವರಲ್ಲಿನ ಹೆಚ್ಚಿನ ಗಂಡಸರ ಎತ್ತರ ಮಧ್ಯಮಸ್ತರದ್ದಿದ್ದು, ರೂಪ ಆಕರ್ಷಕವಿರುತ್ತಿತ್ತು. ಗೋದಿಯ ಬಣ್ಣ ಕೊಂಡ ಇವರಲ್ಲಿನ ಕೆಲವರು ಕೊಂಕಣಸ್ಥರ ಸೌಂದರ್ಯ ಕೊಂಡಿದ್ದರು. ಜುಟ್ಟನ್ನು ಬಿಟ್ಟು ತಲೆಯನ್ನು ಬೋಳು ಮಾಡಿಸಿ, ಜುಟ್ಟು ಸಾಕಷ್ಟು ಬೆಳೆದಾಗ ಅದಕ್ಕೆ ಅಡ್ಡಗಂಟನ್ನು ಹಾಕುತ್ತಿದ್ದರು. ಇವರ ಗಡ್ಡ ಸಣ್ಣಾಗಿರುತ್ತಿದ್ದು ಮೀಸೆ ಸರ್ವಸಾಮಾನ್ಯವಾಗಿ ದೊಡ್ಡದಾಗಿರುತ್ತಿತ್ತು. ಹೆಂಗಸರು ಗಂಡಸರಿಗಿಂತಲೂ ಗಿಡ್ಡಗಿರುತ್ತಿದ್ದರು. ಹವೀಕರಷ್ಟು ಕುಳ್ಳಗಿರದಿದ್ದ ಇವರ ಶರೀರದಲ್ಲಿ ಗುಜರಾತಿಗಳ ಬೊಜ್ಜು ಕಾಣಬಾರದಿತ್ತು. ಇವರ ಭುಜಗಳು ದುಂಡಗಿದ್ದು ನಡು ತೆಳ್ಳಗಿರುತ್ತಿತ್ತು. ಕರಿಬಣ್ಣದ ಥಳಥಳಿಸುವ ಕೂದಲನ್ನು ಓರಣವಾಗಿ ಕಟ್ಟಿಕೊಳ್ಳುತ್ತಿದ್ದ ಇವರು, ಕಪ್ಪಗಿದ್ದ ಹೊಳೆಯುವ ಕಣ್ಣುಗಳನ್ನು ಕೊಂಡಿದ್ದರು.

ಶೆಣ್ವಿಯರ ಭಾಷೆ ಕೊಂಕಣಿಯಿದ್ದರೂ ಅದು ಮರಾಠಿಯ ವಿಶಿಷ್ಟ ಭಾಷಾಪ್ರಭೇದವಿರುವುದಾಗಿ ಭಾವಿಸಲಾಗುತ್ತದೆ. ಶೆಣ್ವಿಯರ ಉಚ್ಚಾರ ಕೊಂಕಣಿ ನುಡಿಯುವ ಅನ್ಯ ಬ್ರಾಹ್ಮಣರ ಉಚ್ಚಾರಕ್ಕಿಂತ ತೀರಾ ಭಿನ್ನವಿದೆ. ಅವರು ವೇಗವಾಗಿ, ರಾಗ ಎಳೆದು ನುಡಿಯುತ್ತಾರೆ. ಅವರ ಭಾಷೆಯಲ್ಲಿ ಅನ್ಯ ಭಾಷೀಯ ಅಥವಾ ದ್ರಾವಿಡ ಭಾಷೆಗಳ ಕೇವಲ ಕೆಲವೇ ಶಬ್ದಗಳ ಸಮಾವೇಶವಿದೆ. ಶೆಣ್ವಿಯರು ತಮ್ಮ ವ್ಯವಹಾರದ ದಾಖಲೆಗೆ, ಜಾತಕಗಳ ತಯಾರಿಕೆಗೆ, ಮನೆವಾರ್ತೆಯ ಲೆಕ್ಕಪತ್ರ, ಮಹತ್ವದ ಜ್ಞಾಪಕ ಪತ್ರ ಇತ್ಯಾದಿಗಳ ಬರವಣಿಗೆಗೆ ಮರಾಠಿ ಭಾಷೆ ಬಳಸುತ್ತಾರೆ. ಅವರು ಕನ್ನಡಬಲ್ಲವರಿದ್ದರು. ಶೆಣ್ವಿಯವರು ಕೆನರಾದ ಅನ್ಯರಂತಲ್ಲದೆ ತಮ್ಮ ಮನೆಗಳಿಗೆ ಮಂದಿರದ ಮಹತ್ವವೀಯುತ್ತಾರೆ. ತಮ್ಮ ನಿವಾಸ ಸ್ಥಾನವನ್ನು ಆರಿಸುವಲ್ಲಿ ಅವರು ಎಚ್ಚರಿಕೆಕೊಳ್ಳುತ್ತಿದ್ದರು. ಅವರ ಮನೆಗಳು ಮೂರು ಪ್ರಕಾರದವಾಗಿರುತ್ತಿದ್ದವು. ಮೊದಲನೆಯ ಪ್ರಕಾರದ ಮನೆಗಳು ಎರಡು ಅಂತಸ್ತುಗಳನ್ನು ಕೊಂಡಿರುತ್ತಿದ್ದವು. ಮುರಕಲ್ಲಿನ ಗೋಡೆ, ಹಂಚಿನ ಮಾಡು ಅವುಗಳ ವೈಶಿಷ್ಟ್ಯವಿರುತ್ತಿತ್ತು. ಎರಡನೆಯ ಪ್ರಕಾರದ ಮನೆಗಳು ಒಂದು ಮಾಳಿಗೆಯದ್ದಿದ್ದು ಅವುಗಳ ಗೋಡೆಗೆ ಮುರಕಲ್ಲನ್ನು, ಮಾಡಿಗೆ ಹುಲ್ಲನ್ನು ಬಳಸುತ್ತಿದ್ದರು.

ಮೂರನೆಯ ಪ್ರಕಾರದ ಮನೆಯ ಗೋಡೆಗಳು ಬರಿಯ ಮಣ್ಣಿನವಿದ್ದು ಅವುಗಳ ಮಾಡಿಗೆ ಹುಲ್ಲನ್ನು ಹಾಸಲಾಗುತ್ತಿತ್ತು. ಮೊದಲನೆಯ ಮತ್ತು ಎರಡನೆಯ ಪ್ರಕಾರದ ಮನೆಗಳ ಗೋಡೆಗಳಿಗೆ ಸಿಮೆಂಟಿನ ಗಾರೆ ಬಳಿಯಲಾಗುತ್ತಿತ್ತು. ಅವುಗಳ ನೆಲಕ್ಕೆ ಕನಿಷ್ಠ ವಾರಕ್ಕೊಮ್ಮ ಸೆಗಣಿ ಸಾರುತ್ತಿದ್ದರು. ಮೂರನೆಯ ಪ್ರಕಾರದ ಮನೆಗಳ ಗೋಡೆಗಳಿಗೆ ಸೆಗಣಿ ಸಾರುತ್ತಿದ್ದರು. ಮನೆಗಳ ಹೊರಭಾಗ ಓರಣವಾಗಿರುತ್ತಿತ್ತು. ಮನೆ ಮುರಕಲ್ಲಿನ ಗೋಡೆ ಅಥವಾ ಕಾಡ ಹರಳೆ, ಇನ್ನಿತರ ಜಾತಿಯ ಪೊದೆಗಳ ಬೇಲಿಯಿಂದಾವರಿಸಲ್ಪಟ್ಟ ಸಣ್ಣ ತೋಟದ ನಡುವೆ ಇರುತ್ತಿತ್ತು. ಬೇಲಿಯ ಗಿಡಗಳ ಅನಾವಶ್ಯಕವಿದ್ದ ಕೊಂಬೆ, ರೆಂಬೆಗಳನ್ನು ವರ್ಷಕ್ಕೊಮ್ಮೆ ಕತ್ತರಿಸಲಾಗುತ್ತಿತ್ತು. ಮಳೆಗಾಲದ ಕೊನೆಯ ದಿನಗಳಲ್ಲಿ ಬಿದುರಿನ ಬೇಲಿಯನ್ನು ದುರಸ್ತಿ ಮಾಡಲಾಗುತ್ತಿತ್ತು. ಬೇಲಿ ದಾಟಿ ಒಳಕ್ಕೆ ಬರಲು ಸಣ್ಣ ಕದ ಅಥವಾ ತಿರುಗು ಬಾಗಿಲನ್ನು ಇರಿಸಲಾಗುತ್ತಿತ್ತು. ಕಳೆಗಳನ್ನು ಕೀಳಿ ಸರ್ವ ಸಾಮಾನ್ಯವಾಗಿ ತೋಟವನ್ನು ಸ್ವಚ್ಛವಾಗಿಡಲಾಗುತ್ತಿತ್ತು. ದಟ್ಟವಾಗಿ ಬೆಳೆದಿದ್ದ ಮಾವು, ಹಲಸು, ತೆಂಗಿನ ಮರಗಳಿಂದ ಅಲ್ಲಿ ಸಾಕಷ್ಟು ನೆರಳಿರುತ್ತಿತ್ತು. ನಾಲ್ಕಾರು ಅಡಿ ಅಗಲದ ಮೇಲ್ಹಾವಣಿಕೊಂಡ ಅಂಬಲದ ನಾಲ್ಕಾರು ಮೆಟ್ಟಲುಗಳು ಮನೆ ಸೇರಲಿರುವ ಒಂದೇ ಒಂದಿದ್ದ ಬಾಗಿಲಿನತ್ತ ಸಾಗುತ್ತವೆ. ಅಂಗಳವನ್ನು ಪ್ರತಿ ದಿನ ಗುಡಿಸಿ, ಮರ, ಮನೆಗಳ ಆಕೃತಿಯ ರಂಗೋಲಿಯಿಂದ ಅಲಂಕರಿಸಲಾಗುತ್ತಿತ್ತು.

ಅಂಗಳದ ಮೂಲೆಯಲ್ಲಿ ಮುರಕಲ್ಲಿನ ಕಟ್ಟೆ ಕೊಂಡ ಬಾವಿಯಿರುತ್ತಿತ್ತು. ಮನೆಯ ಮಗ್ಗುಲಲ್ಲಿ ಅಥವಾ ಹಿಂಭಾಗದಲ್ಲಿ ತರಕಾರಿ, ಹೂಗಿಡಗಳ ಮಡಿಗಳಿರುತ್ತಿದ್ದವು. ಬತ್ತದ ಕದಿರು ಮತ್ತು ಮಾವಿನನೆಲೆಗಳಿಂದೊಡಗೂಡಿದ ತೋರಣವನ್ನು ದಾರವಂದದ ಮೇಲಣ ಭಾಗದಲ್ಲಿ ತೂಗಹಾಕಲಾಗುತ್ತಿತ್ತು. ಹೊಸ್ತಿಲು ಮತ್ತು ದಾರವಂದದ ಕೆಳಗಣ ಭಾಗಕ್ಕೆ ಕೆಂಪು ಮತ್ತು ಕೇಸರಿ ಬಣ್ಣದ ಪಟ್ಟೆ, ಬೊಟ್ಟುಗಳನ್ನು ಬಳಿಯಲಾಗುತ್ತಿತ್ತು. ಹೊಸ್ತಿಲಲ್ಲಿ ಸಂಪತ್ತಿನ ಅಧಿಷ್ಠಾತ್ರಿ ಲಕ್ಷ್ಮಿಯ ವಾಸಸ್ಥಾನವಿರುವುದಾಗಿ ಭಾವಿಸುವ ಹಿಂದುಗಳು ಮನೆಯನ್ನು ಪ್ರವೇಶಿಸುವಾಗ ಅಥವಾ ಮನೆಯಿಂದ ಹೊರಬೀಳುವಾಗ ಅದನ್ನು ತುಳಿಯದಂತೆ ನೋಡಿಕೊಳ್ಳುತ್ತಾರೆ. ಸಮ ಭುಜಗಳ ಬಾಗಿಲಿನ ಚೌಕಟ್ಟು ಸರ್ವ ಸಾಮಾನ್ಯವಾಗಿ ಐದು ಅಡಿಗಳಿಗಿಂತಲೂ ಅಧಿಕವಿರದಿತ್ತು. ಬಾಗಿಲಿಗೆ ಕೆತ್ತಿ ಕೊರೆದ, ದಪ್ಪಗಿನ ಹಲಿಗೆ ಬಳಸಲಾಗುತ್ತಿತ್ತು. ಪ್ರತಿಯೊಂದು ಕೋಣೆಗೆ ಕಿಟಕಿಯಿರುತ್ತಿತ್ತು. ಕೋಣೆಗಳ ಬಾಗಿಲುಗಳು ಮುಖ್ಯದ್ವಾರಕ್ಕಿಂತಲೂ ಸಣ್ಣದಾಗಿರುತ್ತಿದ್ದವು. ಮುಖ್ಯದ್ವಾರ ದೊಡ್ಡ ಕೋಣೆಯತ್ತ ತೆರವಾಗುತ್ತಿದ್ದು ಈ ಕೋಣೆಯ ಇಬ್ಬದಿಗಳಲ್ಲಿ ಬೇರೆ ಕೋಣೆಗಳಿರುತ್ತಿದ್ದವು. ಮನೆಯ ಈ ಭಾಗ ''ವಾಸ್ರೋ'' ಅಥವಾ ಅಥಿತಿಗಳ ಸ್ವಾಗತದ ಕೋಣೆ ಎಂದಾಗಿ ಕರೆಯಲ್ಪಡುತ್ತಿತ್ತು. ವಿಶೇಷ ಕಾರಣಗಳನ್ನು ಬಿಟ್ಟರೆ (ಉದಾಹರಣೆಗಾಗಿ ರೋಗಿಯನ್ನು ಕಾಣಬರುವ ವೈದ್ಯ) ಮನೆಯ ಯಜಮಾನನಿಗಿಂತಲೂ ಕೆಳಗಣ ಜಾತಿ ಅಥವಾ ಸ್ತರದ ಯಾರೊಬ್ಬರೂ ಇಲ್ಲಿಂದ ಮುಂದೆ ಸಾಗಲು ಅನುಮತಿಯಿರದಿತ್ತು. ಮುಂದೆ ಎರಡರಿಂದ ನಾಲ್ಕು ಕೋಣೆಗಳಿರುತ್ತಿದ್ದವು. ಅವುಗಳಲ್ಲೊಂದನ್ನು ದೇವರ ಕೋಣೆಯಾಗಿ ಬಳಸಲಾಗುತ್ತಿದ್ದು

ಇನ್ನುಳಿದ ಒಂದು ಅಥವಾ ಹೆಚ್ಚಿನ ಕೋಣೆಗಳನ್ನು, ಮನೆಯಲ್ಲಿನ ಜನರ ಸಂಖ್ಯೆಗನುಗುಣವಾಗಿ ಮಲಗುವ ಕೋಣೆ, ಊಟದ ಕೋಣೆ, ಅಡಿಗೆಯ ಕೋಣೆಯ ರೂಪದಲ್ಲಿ ಬಳಸಲಾಗುತ್ತಿತ್ತು. ಮನೆಯ ಹಿಂಭಾಗದಲ್ಲಿನ ಪಡಸಾಲೆಯನ್ನು ನಾಲ್ಕು ಭಾಗಗಳಾಗಿ ವಿಭಾಗಿಸಿ ಅವುಗಳಲ್ಲೊಂದನ್ನು ಬಚ್ಚಲು ಮನೆಯಾಗಿ, ಮಗುದೊಂದನ್ನು ಹಟ್ಟಿಯಾಗಿ ಬಳಸಲಾಗುತ್ತಿತ್ತು. ಕೆಲವೊಂದೆಡೆ ಬೇರೆಯೇ ಆದ ಜಾಗದಲ್ಲಿ ಹಟ್ಟಿಯಿರುತ್ತಿತ್ತು. ಪ್ರತಿಯೊಂದು ಮನೆಯಲ್ಲಿ ಕನಿಷ್ಠ ಒಂದು ಬೆತ್ತದ ಅಥವಾ ಮರದ ದೊಡ್ಡ ಪೆಟ್ಟಿಗೆಯಿರುತ್ತಿದ್ದು ಅದನ್ನು ಬಟ್ಟೆ ಅಥವಾ ಆಭರಣ ಮುಂತಾದ ಬೆಲೆ ಬಾಳುವ ವಸ್ತುಗಳನ್ನಿಡಲಾಗಿ ಉಪಯೋಗಿಸಲಾಗುತ್ತಿತ್ತು. ಕೆಲವೊಂದು ಮನೆಗಳಲ್ಲಿ ಮೇಜು, ಒಂದೆರಡು ಕುರ್ಚಿಗಳು, ಬೆಂಚು ಇರುತ್ತಿದ್ದವು. ಶ್ರೀಮಂತರ ಮನೆಗಳಲ್ಲಿ ಕಾಣಬರುವ ತೂಗುಮಂಚಗಳನ್ನು ಬಿಟ್ಟರೆ, ಚೌಕಟ್ಟಿನೊಂದಿಗಿನ ಅಥವಾ ಬರಿಯ ಮಂಚವನ್ನು ಯಾರೊಬ್ಬರೂ ಬಳಸುತ್ತಿದ್ದಿಲ್ಲ. ಎಲ್ಲರೂ ಹಾಸಿಗೆಯನ್ನು ನೆಲದ ಮೇಲಿಕ್ಕೆ ಹಾಸಿ ಮಲಗುತ್ತಿದ್ದರು. ದೇವರ ಪೂಜೆಯ ವೇಳೆಗೆ ಅಥವಾ ಊಟ ಮಾಡುವಾಗ ಅವರು ಸುಮಾರು ಎರಡು ಅಡಿ ಉದ್ದದ ಮತ್ತು ಅರ್ಧ ಅಡಿ ಅಗಲದ ನೆಲದಿಂದ ಒಂದೂವರೆ ಇಂಚು ಎತ್ತರದ 'ಮಾಣಾಯಿ' ಎನ್ನುವ ಮಣೆಗಳನ್ನು ಉಪಯೋಗಿಸುತ್ತಿದ್ದರು. ಬಟ್ಟಲಿನ ಬದಲಿಗೆ ಬಾಳೆಯ ಎಲೆಗಳನ್ನು ಉಪಯೋಗಿಸುತ್ತಿದ್ದರು. ಹೆಚ್ಚಿನ ಮನೆಗಳಲ್ಲಿ ಒಂದು ಅಥವಾ ಒಂದಕ್ಕೂ ಮಿಕ್ಕ ಹಿತ್ತಾಳೆಯ ತೂಗು ದೀಪಗಳಿರುತ್ತಿದ್ದವು. ಹಾಗೆಯೇ ಸುಮಾರು ಇಪ್ಪತ್ತು ಗೆಲನು ನೀರನ್ನು ತುಂಬಿಸಬಹುದಾದ ಹಂಡೆ, ನೀರನ್ನು ಸೇದಲು ಉಪಯೋಗಿಸುವ ಒಂದೆರಡು ತಾಮ್ರದ ಬಕೇಟುಗಳು, ಎರಡು ಎರಡೂವರೆ 'ಪಿಂಟ್' ನೀರನ್ನು ತುಂಬಬಹುದಾದ ತಾಮ್ರದ 'ಲೋಟಾ'ಗಳು ಮತ್ತು ಅಡಿಗೆಗಾಗಿ ಬಳಸುವ ವಿವಿಧ ಪ್ರಕಾರದ ಕಂಚು ಮತ್ತು ತಾಮ್ರದ ಪಾತ್ರೆಗಳಿರುತ್ತಿದ್ದವು. ತಾಮ್ರದ ತಪ್ಪಲೆ, ಕೊಡ ಹಾಗೂ ಅನ್ಯಗೃಹೋಪಯೋಗಿ ಪಾತ್ರೆಗಳು ಕಾರ್ವಾರ, ಸದಾಶಿವಗಡ, ಅಂಕೋಲಾ ಮತ್ತು ಕುಮ್ಟಾಗಳಲ್ಲಿ ತಯಾರಿಸಲ್ಪಡುತ್ತಿದ್ದವು.

ತಮ್ಮ ಅನುಕೂಲತೆಗನುಸರಿಸಿ ಶೆಣ್ವಿಯರು ಒಬ್ಬನನ್ನು ಅಥವಾ ಹೆಚ್ಚಿನ ಸಂಖ್ಯೆಯಲ್ಲಿನ ಮನೆಯಾಳುಗಳನ್ನು ಕೆಲಸಕ್ಕಿಟ್ಟುಕೊಳ್ಳುತ್ತಾರೆ. ಮಧ್ಯಮ ವರ್ಗೀಯರ ಮನೆಗಳಲ್ಲಿನ ಮನೆಯಾಳು ಸರ್ವಸಾಮಾನ್ಯವಾಗಿ ಬಟ್ಲರ್ ಅಥವಾ ಬಂಟ ಜಾತಿಯ ಹೆಂಗಸೊಬ್ಬಳಾಗಿರುತ್ತಿದ್ದು ಆಕೆಗೆ ಬಟ್ಟೆ ಬರೆಗಳನ್ನೀಯುತ್ತಿದ್ದರು. ಬಡವರು ಬಂಟ ಹೆಂಗಸರನ್ನು ಅಡಿಗೆಯ ಪಾತ್ರೆಗಳನ್ನು ತೊಳೆಯಲಿಕ್ಕಷ್ಟೇ ಉಪಯೋಗಿಸುತ್ತಿದ್ದರು. ಶ್ರೀಮಂತರು ಒಬ್ಬಳು ಅಥವಾ ಅನೇಕ ಬಂಟ ಹೆಂಗಸರ ಹೊರತು ಅಡಿಗೆಗಾಗಿ ತಮ್ಮ ಜಾತಿಯ ಒಬ್ಬಾತನನ್ನು ಮತ್ತು ದೇವರ ಪೂಜೆಗಾಗಿ ಭಟ್ಟರು ಅಥವಾ ಪುರೋಹಿತರೊಬ್ಬರನ್ನು ಇಟ್ಟುಕೊಳ್ಳುತ್ತಿದ್ದರು. ಅಡಿಗೆ ಮಾಡುವಾತನಿಗೆ ಮತ್ತು ದೇವರ ಪೂಜೆ ಮಾಡುವಾತನಿಗೆ ಸಮಾನ ಸಂಬಳವೀಯಲಾಗುತ್ತಿತ್ತು.

ಶೆಣ್ವಿಯರು ಶಾಖಾಹಾರಿಗಳಾಗಿದ್ದು ಅವರ ಆಹಾರ ಅನ್ನ ಮತ್ತು ಕಾಯಿ ಪಲ್ಯಗಳನ್ನೊಳಗೊಂಡಿರುತ್ತಿತ್ತು. ಅವರಲ್ಲಿನ ಕೆಲವರು ಸೋಮವಾರ, ಶನಿವಾರ ಮತ್ತು ಮುಖ್ಯ ಹಬ್ಬದ

ದಿನಗಳ ಹೊರತು ಇನ್ನುಳಿದ ದಿನಗಳಲ್ಲಿ ಮೀನು ತಿನ್ನುತ್ತಿದ್ದರು.

ಶೆಣ್ವೆಯರು ಮನೆಯಲ್ಲಿ ಹನ್ನೆರಡರಿಂದ ಹದಿನಾರು ಅಡಿಗಳುದ್ದದ, ಎರಡರಿಂದ ಮೂರಡಿ ಅಗಲದ, ಬೆಳ್ಳಗಿನ, ಕೆಂಪು ಅಥವಾ ಹಳದಿ ಬಣ್ಣದ ಅಂಚಿನ, ಹತ್ತಿ ಅಥವಾ ರೇಶ್ಮೆಯ ಧೋತರದ ಉಡುತ್ತಾರೆ; ಪರಿಶ್ರಮಪೂರ್ವಕ ಹಾಕಿದ್ದ ನಿರಿಗೆಯನ್ನು ಮುಂಭಾಗದಲ್ಲಿ ಧೋತರದ ಅಂಚಿನೊಳಕ್ಕೆ ತುರುಕುತ್ತಾರೆ; ಅಗಲ ಕಿರಿದಾಗಿ ನಿರಿಗೆ ಹಾಕಿದ್ದ ಧೋತರದ ಇನ್ನೊಂದು ತುದಿಯನ್ನು ಕಾಲುಗಳೆರಡರ ನಡುವಿನಿಂದಾಗಿ ಹಿಂದಕ್ಕೆ ಕೊಂಡು ಹೋಗಿ ಅಲ್ಲಿ ಧೋತರದ ಅಂಚಿನೊಳಕ್ಕೆ ತುರುಕುತ್ತಾರೆ. ಮನೆಯ ಹೊರಗಣ ತೊಡುಗೆ ಧೋತರದ ವಿನಹಾ, ಕತ್ತು ಸುತ್ತಿ ಎದೆಯತ್ತ ಇಳಿದು ಬರುವಂತೆ ತೊಟ್ಟ ಉತ್ತರೀಯ ಮತ್ತು ಅಚ್ಚುಕಟ್ಟಾಗಿ ಕಟ್ಟಿದ್ದ ಮುಂಡಾಸನ್ನೊಳಗೂಡಿರುತ್ತಿತ್ತು. ಹುಡುಗರ ಪೋಷಾಕು ಗಂಡಸರ ಪೋಷಾಕಿನಂತಿರುತ್ತಿತ್ತು. ಶೆಣ್ವೆ ಸ್ತ್ರೀಯರು 'ಕಾಪ್ಪಡ' ಎಂದಾಗಿ ಕರೆಯಲ್ಪಡುವ, ಇಪ್ಪತ್ತನಾಲ್ಕರಿಂದ ಇಪ್ಪತ್ತೇಳು ಅಡಿಗಳುದ್ದದ, ಮೂರುವರೆಯಿಂದ ನಾಲ್ಕು ಅಡಿಗಳಷ್ಟರ ಅಗಲದ ಸೀರೆಯೊಂದಿಗೆ ಅರೆ ತೋಳಿನ, ಬೆನ್ನು ಮುಚ್ಚುವ ರವಕೆ ತೊಟ್ಟುಕೊಳ್ಳುತ್ತಾರೆ. ಸೀರೆಯನ್ನು ನಡುವಿಗೆ ಸುತ್ತಿ ಅದರ ಅರ್ಧಭಾಗವನ್ನು ಸೊಂಟದಿಂದ ಮೊಣಕಾಲಿನ ವರೆಗೆ ಇಳಿಯ ಬಿಟ್ಟು, ನಿರಿಗೆ ಹಾಕಿದ್ದ ತುದಿಯನ್ನು ಕಾಲೆರಡರ ನಡುವಿನಿಂದ ಹಿಂಭಾಗಕ್ಕೆ ಕೊಂಡು ಸೀರೆಯ ಅಂಚಿನೊಳ್ಳಕ್ಕೆ ತುರುಕುತ್ತಾರೆ. ಸೀರೆಯ ಇನ್ನೊಂದು ಭಾಗವನ್ನು ಎದೆ, ಎಡಭುಜದ ಮೇಲಿನಿಂದಾಗಿ ಬೆನ್ನಿನತ್ತ ಇಳಿಯ ಬಿಟ್ಟು ಸೀರೆಯಂಚಿನೊಳಕ್ಕೆ ತುರುಕುತ್ತಾರೆ. ವಿಧವೆಯರು ಬಿಳಿಯ ಅಥವಾ ಕೆಂಪು ಬಣ್ಣದ ಸೀರೆಯುಟ್ಟು ಸೆರಗನ್ನು ತಲೆಯತ್ತ ತಂದು ಅದನ್ನು ಮುಸುಕಿನಂತೆ ಬಳಸುತ್ತಾರೆ. ರವಕೆ ತೊಡದಿದ್ದ ಇವರು ಚಿನ್ನದ ತೆಳ್ಳಗಿನ ಹೊದಿಕೆಕೊಂಡ ತಾಮ್ರದ ಬಳೆ ಮತ್ತು ತಾಮ್ರದ ಉಂಗುರಗಳನ್ನಷ್ಟೆ ಧರಿಸಬಹುದಿತ್ತು.

ಸರಕಾರಿ ಸೇವೆಯಲ್ಲಿದ್ದ ಶೆಣ್ವೆ ಗಂಡಸರು ಹೆಗಲ ಮೇಲಿನ ಶಾಲಿನ ಬದಲಿಗೆ ಉದ್ದಗಿನ ಕಪ್ಪು ಅಥವಾ ಬೆಳ್ಳಗಿನ ಕೋಟು, ಮೆಟ್ಟು ಅಥವಾ ದೇಶೀ ಬೂಟನ್ನು ಧರಿಸುತ್ತಾರೆ. ಸಣ್ಣ ವ್ಯಾಪಾರಿಗಳು, ಗುತ್ತಿಗೆದಾರರು ದೇಶೀ ಶೈಲಿಯ ಕೋಟನ್ನು ತೊಡುತ್ತಾರೆ. ಇಂಗ್ಲಿಷ್ ಬಲ್ಲ ಹೆಚ್ಚಿನ ತರುಣರು ಶರ್ಟ್, ವೈಸ್ಟ್ ಕೋಟನ್ನು, ಯುರೋಪೀಯ ಪದ್ಧತಿಯಲ್ಲಿ ಧರಿಸಿ, ಪೂನಾ ಅಥವಾ ಧಾರ್ವಾರಗಳತ್ತ ಬ್ರಾಹ್ಮಣರು ಬಳಸುತ್ತಿದ್ದ ಬೂಟನ್ನು ತೊಡುತ್ತಾರೆ. ಮನೆಯಲ್ಲಿನ ಊಟದ ಹೊತ್ತಿಗೆ ಗಂಡಸರು ಕಡುಗೆಂಪು ಬಣ್ಣದ, ಬೆಳ್ಳಿಯ ಅಥವಾ ಚಿನ್ನದ ಎಳೆಗಳ ಅಂಚು ಕೊಂಡ ರೇಶ್ಮೆಯ ಬಟ್ಟೆ ಉಡುತ್ತಾರೆ. ಧಾರ್ಮಿಕ ಅನುಷ್ಠಾನ, ಶುಭ ದಿನಗಳಂದು ಗಂಡಸರು ಮತ್ತು ಹೆಂಗಸರು 'ಮುಕ್ತಾ' ಎನ್ನಲಾಗುವ ಮಡಿ ಬಟ್ಟೆ ಉಡುತ್ತಾರೆ. ಗಂಡಸರು ೧೨ರಿಂದ ೧೬ ಅಡಿಗಳುದ್ದದ, ೩ರಿಂದ ೪ ಅಡಿ ಅಗಲದ, ಹೆಂಗಸರು ೧೫ರಿಂದ ೩೦ ಅಡಿಗಳುದ್ದದ, ೪ ರಿಂದ ೬ ಅಡಿಗಳಷ್ಟರ ಅಗಲದ ರೇಶ್ಮೆ, ಉಣ್ಣೆ ಅಥವಾ ಕಿತ್ತಾ ನಾರಿನ ಬಟ್ಟೆ ಉಡುತ್ತಾರೆ. ಐದು ವರ್ಷ ಸರಿಯುತ್ತಲೇ ಹೆಣ್ಣು ಮಕ್ಕಳು 'ಕಿರ್ಗಿ' ಎನ್ನಲಾಗುವ ಉಡುಗೆಯನ್ನು ನಡುವಿನಿಂದ ಕೆಳಕ್ಕಿಳಿದು ಬರುವ ಒಳಲಂಗದಂತೆ ಬಳಸುತ್ತಾರೆ. ಗಂಡಸರು ಮತ್ತು ಹೆಂಗಸರು, ನಿತ್ಯ ಬಳಸುವ ತೊಡುಗೆಗಳು ಬೆಳಗಾಂವ ಶಹಾಪುರ ಮತ್ತು

ಧಾರ್ವಾರದಲ್ಲಿನ ಹುಬ್ಬಳ್ಳಿಯಲ್ಲಿ ತಯಾರಿಸಲ್ಪಟ್ಟಂತಹವಾಗಿರುತ್ತವೆ. ಹಬ್ಬ, ಶುಭ ದಿನಗಳಂದು ತೊಡುವ ರೇಶ್ಮೆಯ ತೊಡುಗೆಗಳು ಪೂನಾ, ಅಹಮ್ಮದಾಬಾದ್‌ಗಳಲ್ಲಿ ತಯಾರಿಸಲ್ಪಟ್ಟಂತಹವಾಗಿರುತ್ತಿದ್ದವು. ತರುಣರು ಉಡುವ ದೊಡ್ಡ 'ಪನ್ನ'ದ ಬಟ್ಟೆ ಯುರೋಪಿನಿಂದ ಬಂದಂತಹವಾಗಿರುತ್ತಿದ್ದವು.

ಗಂಡಸರು ಚಿನ್ನದ ಉಂಗುರ ಮತ್ತು ಬೆಳ್ಳಿಯ ನಡುಕಟ್ಟನ್ನು ಧರಿಸುತ್ತಾರೆ; ಹುಡುಗರು ಬೆಳ್ಳಿ ಅಥವಾ ಚಿನ್ನದ ಕಡಗ, ಮಣಿಸರ, ಬೆಳ್ಳಿಯ ಕಾಲ್ಕಡಗ, ಸರಪಳಿಗಳನ್ನು ಹುಡುಗಿಯರು ಬೆಳ್ಳಿಯ ಅಥವಾ ಚಿನ್ನದ ಹಾಬು, ಬೆಳ್ಳಿಯ ಕಾಲಂದಿಗೆ ಧರಿಸುತ್ತಾರೆ. ಸುಮಂಗಲಿಯರು ಚಿನ್ನದ ಮೂಗುತಿ, ಮಂಗಳಸೂತ್ರ, ಕಪ್ಪು ಬಣ್ಣದ ಗಾಜಿನ ಸಣ್ಣ ಮಣಿಗಳ ನಡುವೆ ಆಕಾರದಲ್ಲಿ ದೊಡ್ಡದಿದ್ದ ಚಿನ್ನದ ಮಣಿಗಳನ್ನು ಸುರಿದು ಮಾಡಿದ ಹಲವು ಎಳೆಗಳೊಂದಿಗಿನ ಕಂಠಾಭರಣ, ಗಾಜಿನ ಬಳೆ ಇತ್ಯಾದಿಗಳನ್ನು ತೊಡುತ್ತಾರೆ. ಇವುಗಳ ಹೊರತು ಶ್ರೀಮಂತರು 'ತಿರ್ಪಿಡುಲ್' ಎಂಬ ಕೇಶಾಭರಣ ಧರಿಸುತ್ತಾರೆ. 'ಚಂದ್ರಕೋರ್' 'ಕೇಗತ್' ಮತ್ತು ಕಿವಿಗಳಲ್ಲಿ 'ಭಂಗ್ರಾಕೇಶ್' ಫ್ಯೂಲ್, ಕೊರಳಲ್ಲಿ 'ಥುಸ್ಸಿ' (ಶೆಣ್ವಿ ಸ್ತ್ರೀಯರು ಧರಿಸುವ ವಿಲಕ್ಷಣ ಮತ್ತು ಆಕರ್ಷಕ ಆಭರಣಗಳಲ್ಲೊಂದು) 'ಪುಥ್ಯಾಂಚೊ ಸರ', 'ಕುರ್ಜಾತಾಂಚೊ ಸರ', ಕೈಗಳಲ್ಲಿ 'ಸರಿ', ಚಿನ್ನದ ಬಳೆಗಳು, ಪಾವೂಲ್ ಪಾಟ್ಲಿ, 'ನೀಲ್ ಪಾಟ್ಲಿ' 'ಚೂಡೆ' ಮತ್ತು ಮುತ್ತು ಅಥವಾ ಬೆಲೆ ಬಾಳುವ ರತ್ನಗಳನ್ನೊಳಗೊಂಡ ಉಂಗುರ ಮುಂತಾದವುಗಳನ್ನು ಧರಿಸುತ್ತಾರೆ.

ಒಂದು ಊರಿನಿಂದ ಇನ್ನೊಂದು ಊರಿಗೆ ಪ್ರಯಾಣ ಮಾಡುವಾಗ ತಮ್ಮನ್ನು ಆದರಾತಿಥ್ಯಗಳಿಂದ ಬರಮಾಡಿಕೊಳ್ಳುವ ಪರಿಚಿತರ ಮನೆಗೆ ಹೋಗುವುದು ಶೆಣ್ವಿಯರಲ್ಲಿನ ಸಾಮಾನ್ಯ ಪದ್ಧತಿಯೊಂದು. ಅಪರಿಚಿತನೊಬ್ಬ ಮನೆಗೆ ಬಂದಾಗ ಆತ ತಮ್ಮಲ್ಲಿ ತಂಗುವ ಕುರಿತು ವಿಚಾರಿಸಲಾಗುತ್ತದೆ. ರಾತ್ರಿ ಕಳೆಯುವ ಇಚ್ಛೆ ವ್ಯಕ್ತ ಪಡಿಸಿದಲ್ಲಿ ಆತನಿಗೆ ಕಾಲು ತೊಳೆಯಲು ನೀರನ್ನಿತ್ತು, ಕುಳ್ಳಿರಲು ಚಾವಡಿಯಲ್ಲಿ ಚಾಪೆ ಹಾಕುತ್ತಾರೆ. ಮತ್ತು ಕುಡಿಯಲು ಬೆಲ್ಲದ ಪಾಕದೊಂದಿಗೆ ನೀರನ್ನೀಯುತ್ತಾರೆ. ಅನಂತರ ವೀಳ್ಯದೆಲೆ, ಅಡಿಕೆ ಇತ್ಯಾದಿಗಳನ್ನೀಯುತ್ತಾರೆ. ಜಾತಿಯ ರಿವಾಜು ಅತಿಥೇಯನ ಮನೆ ಮಂದಿಯೊಂದಿಗೆ ಉಣ್ಣಲು ತಡೆಯೊಡ್ಡದಿದ್ದಲ್ಲಿ ಅತನಿಗೆ ಮಿಯುವಂತೆ ಹೇಳಿ, ಉಡಲು ರೇಶ್ಮೆಯ ಬಟ್ಟೆಯೀಯುತ್ತಾರೆ. ಅದನ್ನಾತ ಊಟದ ಸಮಯ ಉಡುತ್ತಾನೆ. ಅತಿಥೇಯನ ಮನೆಯವರೊಂದಿಗೆ ಉಣಲಾಗದಲ್ಲಿ, ಆತನಿಗೆ ಅಡುಗೆಯ ಸಾಹಿತ್ಯ, ಪಾತ್ರೆ ಇತ್ಯಾದಿಗಳನ್ನೀಯುತ್ತಾರೆ.

ಶೆಣ್ವಿಯರಲ್ಲಿ ಹೆಚ್ಚಿನವರು ಜಮೀನುದಾರರಿದ್ದು, ತಮ್ಮ ಭೂಮಿಯನ್ನು ಸಾಗುವಳಿಗಾಗಿ ರೈತರಿಗೀಯುತ್ತಿದ್ದರು. ಕೆಲವೊಬ್ಬರು ಮರ ಮತ್ತು ದಾನ್ಯದ ವ್ಯಾಪಾರ ಮಾಡುತ್ತಿದ್ದರೆ ಇನ್ನು ಕೆಲವರು ಲೋಕೋಪಯೋಗಿ ಕಾಮಗಾರಿ ವಿಭಾಗಕ್ಕೆ ಮರ, ಕಲ್ಲು, ಜಲ್ಲಿ, ಇಮಾರತುಗಳ ನಿರ್ಮಾಣಕ್ಕೆ ಬೇಕಿದ್ದ ಸಾಮಾನುಗಳ ಸರಬರಾಯಿ ಮಾಡುತ್ತಿದ್ದರು; ರಸ್ತೆಗಳನ್ನು ತಯಾರಿಸುವ, ಸರಕಾರಿ ಕಾಡಿನಿಂದ ಮರದ ತೊಲೆಗಳನ್ನು ಸಾಗಿಸುವ, ಸುಂಕ,

ಅಬಕಾರಿಕರ ಸಂಗ್ರಹಿಸುವ ಗುತ್ತಿಗೆ ಕೊಳ್ಳುತ್ತಿದ್ದರು. ಇವುಗಳ ಹೊರತಾಗಿ ಸಾಲವೀಯುವ, ವಕೀಲಿ, ಸರಕಾರಿ ಕಾರಕೂನರ, ಗ್ರಾಮದ ಕರಣಿಕರ, ಜಿಲ್ಲೆಯ ನ್ಯಾಯಿಕ, ರಾಜಸ್ವ ಕರಗಳ ವಿಭಾಗದ ಅಧಿಕಾರಿಗಳ ಉದ್ಯೋಗ ಮಾಡುತ್ತಿದ್ದರು. ಕೆನರಾದತ್ತ ಬರುವ ಇವರನ್ನು ಶೆಣ್ವಿ ಹೆಸರಿನ ಆಧಾರದ ಮೇಲಕ್ಕೆ, ಕೊಂಕಣ ಮತ್ತು ಮಹಾರಾಷ್ಟ್ರಗಳಲ್ಲಿ ರೂಢಿಯಲ್ಲಿದ್ದಂತೆ, ಅವರನ್ನು ಗ್ರಾಮದ ಕರಣಿಕರ, ಸೇನೆಯ, ಆಡಳಿತೆಯಲ್ಲಿನ ಹುದ್ದೆಗಳಿಗೆ ನೇಮಿಸಲಾಗುತ್ತಿತ್ತು. ಅವರ ಬುದ್ಧಿ ಮತ್ತತೆ, ಸಾಧನೆ ಮುಂತಾದವುಗಳನ್ನು ಅವರು ಕೊಂಡಿದ್ದ ಉದ್ಯೋಗ ವೃತ್ತಿಗಳಿಂದ ಅರಿಯಬಹುದಾಗಿತ್ತು.

ಸ್ಮಾರ್ತ ಸಂಪ್ರದಾಯಸ್ಥರಿದ್ದ ಶೆಣ್ವಿಯರು ಶಂಕರಾಚಾರ್ಯರ ಅನುಯಾಯಿಗಳು. ಯಾವೊಂದೂ ಧಾರ್ಮಿಕ ಕಾರ್ಯವನ್ನು ಆರಂಭಿಸುವ ಮುನ್ನ ಅವರು ಹೋಮ ಮಾಡುತ್ತಾರೆ. ಈ ಹೋಮಕ್ಕೆ ಆಹುತಿಯ ರೂಪದಲ್ಲಿ ಸಮಿಧೆ, ಅನ್ನ ಅಥವಾ ಅರಳನ್ನು ಅರ್ಪಿಸುತ್ತಾರೆ. ಅವರು ಮುಖ್ಯತಃ ವಿಷ್ಣು, ಗಣಪತಿ, ಪಾರ್ವತಿ ಮುಂತಾದ ದೇವರನ್ನು ಆರಾಧಿಸುತ್ತಾರೆ. ಅವರ ಕುಲದೇವರು ಮಂಗೇಶ ಮತ್ತು ಕುಲದೇವಿ ಶಾಂತಾದುರ್ಗಾ. ಅವರಲ್ಲಿ ಧರ್ಮ ನಿರ್ದಿಷ್ಟ ಗಾಯತ್ರಿ ಮಂತ್ರ ಪಠನಕ್ಕೆ ಅತೀ ಮಹತ್ತಿನ ಸ್ಥಾನವಿದೆ. ಈ ಮಂತ್ರವನ್ನು ಸಂಧ್ಯಾವಂದನೆಯ ಹೊತ್ತಿಗೆ ಪಠಿಸುತ್ತಾರೆ. ಸ್ನಾನ ಮಾಡಿ, ಮಡಿ ಬಟ್ಟೆ ಉಟ್ಟ ಬಳಿಕ, ಗಾಯತ್ರಿ ಮಂತ್ರೋಚ್ಚಾರ ಮಾಡಲಾಗುತ್ತದೆ. ಸುಮಾರು ಅರ್ಧ ತಾಸು ಕೊಳ್ಳುವ ಈ ವಿಧಿಯನ್ನು ಎರಡನೆಯ ಬಾರಿ ರಾತ್ರಿಯ ಊಟದ ತಾಸೊಂದರ ಮುನ್ನ ಪೂರೈಸಲಾಗುತ್ತದೆ.

ಅವರಲ್ಲಿನ ಕೆಲವರು ಶಕ್ತಿ ಅಥವಾ ಪಾರ್ವತಿಯ ಉಪಾಸಕರಿದ್ದರು. ಶಿವನನ್ನು ಸಾಂಕೇತಿಕವಾಗಿ ಲಿಂಗದ ರೂಪದಲ್ಲಿ ಪೂಜಿಸುವಂತೆ ಶ್ರೀಚಕ್ರವನ್ನು ದೇವಿಯ ಪ್ರಾತಿನಿಧಿಕ ರೂಪದಲ್ಲಿ ಪೂಜಿಸುತ್ತಾರೆ. ಅವರು ಬೇಯಿಸಿದ ಮಾಂಸ ಮತ್ತು ಮಧ್ಯವನ್ನು ದೇವಿಗೆ ಅರ್ಪಿಸಿದ ನಂತರ ಊಟ ಮಾಡುತ್ತಾರೆ. ಶಾಕ್ತರಿರದಿದ್ದ ಶೆಣ್ವಿಯರು ಈ ಪ್ರಕಾರದ ಪೂಜೆಯನ್ನು 'ವಾಮಾಚಾರ' ಎನ್ನುತ್ತಾರೆ. ಈ ಪೂಜೆಯನ್ನು ಎಷ್ಟೊಂದು ಗುಪ್ತವಾಗಿ ಮಾಡುತ್ತಾರೆಂದರೆ ಅದರ ಸುಳಿವು ಅವರ ನೆರೆಕರೆಯವರಿಗೂ ದೊರಕುತ್ತಿಲ್ಲವಿತ್ತು. ಅದೇ ಹೊತ್ತಿಗೆ ಈ ಪೂಜಾ ವಿಧಿ, ಧರ್ಮ ವಿರೋಧಿ ಕಾರ್ಯವಿರದೆ ದೈವಾರ್ಪಿತ ಸೇವೆಯೆಂದು ಭಾವಿಸುತ್ತಿದ್ದ ನಿಮಿತ್ತ ಅವರನ್ನು ಶಿಕ್ಷಿಸದಿದ್ದರು. ಅವರು ಪಾರ್ವತಿಯನ್ನು ಅಥವಾ ಆಕೆಯನ್ನು ಪ್ರತಿನಿಧಿಸುವ ಗಣಗಳನ್ನು ಗ್ರಾಮದೇವಿ, ದೇವತೆಗಳ ರೂಪದಲ್ಲಿ ಪೂಜಿಸುತ್ತಿದ್ದರು. ಈ ದೈವಗಳ ಕ್ರೋಧಕ್ಕೆ ಬೆದರುತ್ತಿದ್ದ ಅವರು ಅವುಗಳ ಅನುಗ್ರಹದ ಪ್ರಾಪ್ತಿಗಾಗಿ ಬಲಿ ಅರ್ಪಿಸುತ್ತಿದ್ದರು. ಅವರು ತಾಂತ್ರಿಕರನ್ನು, ಭವಿಷ್ಯ ನುಡಿಯುವವರನ್ನು ನಂಬುತ್ತಿದ್ದು, ಮಂತ್ರವಾದಿ, ಭೂತೋಚ್ಚಾಟನೆ ಮಾಡುವವರ ನೆರವು ಕೊಳ್ಳುತ್ತಿದ್ದರು. ಅವರು ನಂಬುವ ದೇವರು ಗೋವಾದಲ್ಲಿನ ಮಂಗೇಶ, ಸಪ್ತಕೋಟೇಶ್ವರ ಮತ್ತು ಶಾಂತಾದುರ್ಗಾ, ಗೋಕರ್ಣದಲ್ಲಿನ ಮಹಾಬಲೇಶ್ವರ, ರಾಮೇಶ್ವರದಲ್ಲಿನ ರಾಮಲಿಂಗ, ಕಾಶಿಯಲ್ಲಿನ ವಿಶ್ವೇಶ್ವರ ಮತ್ತು ಗಯಾ ಅಥವಾ ಅಲ್ಲಹಾಬಾದ್‌ಗಳಲ್ಲಿನ

ವಿಷ್ಣುಪಾದಗಳಾಗಿವೆ.

ಅವರ ಮುಖ್ಯ ರಜಾ ದಿನಗಳು : ಸಂಕ್ರಾಂತಿ - ಮಕರ ರಾಶಿಯತ್ತ ಸೂರ್ಯನ ಸಂಚಾರ (ಜನವರಿ ೧೨) ; ಶಿವರಾತ್ರಿ, ಮಾಘ ಮಾಸ, ಬಹುಳ, ತ್ರಯೋದಶಿ, ಫೆಬ್ರವರಿ-ಮಾರ್ಚ್ ತಿಂಗಳು ; ಶಿಮ್ಗಾ, ಕಾಮದಹನ (ಹೋಳಿಹಬ್ಬ), ಫಾಲ್ಗುಣ ಶುದ್ಧ ಪೌರ್ಣಮಿ, ಫೆಬ್ರವರಿ-ಮಾರ್ಚ್; ಸಂವತ್ಸರದ ಪಾಡ್ಯ, ಹೊಸವರ್ಷದ ದಿನ, ಚೈತ್ರ ಶುದ್ಧ ಪ್ರತಿಪದ ಮಾರ್ಚ್-ಎಪ್ರಿಲ್ ; ರಾಮ ನವಮಿ, ರಾಮಜನ್ಮದಿನ, ಚೈತ್ರ ಶುದ್ಧ, ಮಾರ್ಚ್-ಎಪ್ರಿಲ್; ಆಷಾಢ ಏಕಾದಶಿ, ಆಷಾಢ, ಶುದ್ಧ, ಏಕಾದಶಿಯ ಉಪವಾಸ, ಜೂನ್-ಜುಲೈ; ನಾಗಪಂಚಮಿ ನಾಗನ ದಿನ, ಶ್ರಾವಣ ಶುದ್ಧ ಪಂಚಮಿ, ಜುಲೈ-ಅಗಸ್ಟ್; ಶ್ರಾವಣ ಪೌರ್ಣಮೆ, ನಾರಿಕೇಳ (ತೆಂಗಿನಕಾಯಿ) ಪೌರ್ಣಮಿ, ಶ್ರಾವಣ ಶುದ್ಧ, ಜುಲೈ-ಅಗಸ್ಟ್; ಗೋಕುಲಾಷ್ಟಮಿ, ಕೃಷ್ಣನ ಜನ್ಮದಿನ, ಶ್ರಾವಣ ಬಹುಳ, ಅಷ್ಟಮಿ ; ಅಗಸ್ಟ್-ಸಪ್ಟೆಂಬರ್; ಗಣೇಶ ಚತುರ್ಥಿ, ಗಣಪತಿಯ ಜನ್ಮದಿನ, ಬಾದ್ರಪದ ಶುದ್ಧ, ಚತುರ್ಥಿ, ಅಗಸ್ಟ್-ಸಪ್ಟೆಂಬರ್; ದಸರಾ, ದುರ್ಗಾ ಅಥವಾ ಶಿವನ ಪತ್ನಿ ಪಾರ್ವತಿಯ ಹಬ್ಬ, ಅಶ್ವಿನ ಶುದ್ಧ ದಶಮಿ, ಸಪ್ಟೆಂಬರ-ಅಕ್ಟೋಬರ್ ; ದೀಪಾವಳಿ, ದೀಪಗಳ ಹಬ್ಬ, ಅಶ್ವಿನ ಬಹುಳ, ಅಕ್ಟೋಬರ್-ನವಂಬರ್ ; ತುಲಸಿ ಪೂಜೆ, ತುಲಸಿಯ ವಿವಾಹ, ಕಾರ್ತಿಕ ಶುದ್ಧ, ಅಕ್ಟೋಬರ್-ನವಂಬರ್; ಸೂರ್ಯ, ಚಂದ್ರ ಗ್ರಹಣ ಹಾಗೂ ಅನ್ಯ ಜಾತ್ರೆ, ಉತ್ಸವಗಳು.

ಶೆಣ್ವಿಯರ ಕುಟುಂಬಗಳ ಪುರೋಹಿತರು ಅವರ ಜಾತಿಯವರಿದ್ದು ಅವರನ್ನು ಭಟ್ಟರೆಂದು ಕರೆಯುತ್ತಾರೆ. ವಿದ್ಯಾವಂತರಿದ್ದ ಅವರನ್ನು ಗೌರವಾದರಗಳಿಂದ ಕಾಣುತ್ತಾರೆ. ಪುರೋಹಿತರು ಗುರುಗಳ ಆಜ್ಞಾಪಾಲಕರು. ಬ್ರಹ್ಮಚಾರಿಯಿದ್ದ ಗುರು ಸನ್ಯಾಸ ಸ್ವೀಕರಿಸಿ ಕಾರ್ವಾರದ ಚಿತ್ರಾಕುಲಾ, ಬೆಳ್ಗಾಂವ ಖಾನಾಪುರ, ಗೋವಾದ ಕೌಳ ಅಥವಾ ನಾಸಿಕದಲ್ಲಿ ವಾಸ್ತವ್ಯಕ್ಕಿರುತ್ತಾರೆ. ಶೆಣ್ವಿಯರು ಕೆನರಾದತ್ತ ಬರುವ ಮುನ್ನ ಅವರು ದಕ್ಷಿಣ ಭಾರತದಲ್ಲಿನ ಸಮಗ್ರ ಸಾರಸ್ವತ ಸಮಾಜದ ಏಕಮಾತ್ರ ಅಧ್ಯಾತ್ಮಿಕ ಮಾರ್ಗದರ್ಶಕರಿದ್ದರು. ಅವರು ಶೆಣ್ವಿ ಸಮಾಜದವರಿದ್ದು ಸಂಸ್ಕೃತದಲ್ಲಿ ಪಾಂಡಿತ್ಯಕೊಂಡಿದಿರಬೇಕಾಗಿತ್ತು; ಅವರ ಶಿಕ್ಷಣಕ್ಕೆ, ತರಬೇತಿಗೆ ಸಮಾಜ ಧನ, ಶ್ರಮಗಳ ಪರಿವೆ ಮಾಡದಿತ್ತು. ಅವರು ಜಾತಿಯ ರೀತಿ, ನೀತಿ, ನಿಯಮಗಳನ್ನು ಉಲ್ಲಂಘಿಸುವವರ ಮೇಲೆ ದಂಡ ಹೇರಿ ಅಥವಾ ಬಹಿಷ್ಕಾರ ಹಾಕಿ ಅವುಗಳ ಪರಿಪಾಲನೆಯನ್ನು ದಕ್ಷತೆಯಿಂದ ನೋಡಿಕೊಳ್ಳುತ್ತಿದ್ದರು. ಅವರು ಬಹಿಷ್ಕಾರ ಹಾಕಿದವರನ್ನು ಮರಳಿ ಕೋಮಿನೊಂದಿಗೆ ಸೇರಿಸಿಕೊಳ್ಳುವ ಅಧಿಕಾರವನ್ನೂ ಕೊಂಡಿದ್ದರು.

ತಮ್ಮ ಗುರುಗಳ ದರ್ಶನ ಕೊಳ್ಳುವಾಗ ಶೆಣ್ವಿಯರು ಕೈಗಳನ್ನು ಜೋಡಿಸಿ, ಸಾಷ್ಟಾಂಗ ನಮಸ್ಕಾರ ಹಾಕುತ್ತಾರೆ; ಮತ್ತೆ ಅವರ ಆಶೀರ್ವಾದಕೊಳ್ಳುತ್ತಾರೆ. ಗುರುಗಳಿಗೆ ಸಮಾಜದಲ್ಲಿ ಪರಮೋಚ್ಚ ಸ್ಥಾನವಿದೆ. ತನ್ನ ಸಂಸ್ಥಾನದೊಳಗಣ ಸಂಚಾರದ ವೇಳೆ ಅವರು ಸಮಗರ, ಸಂಭ್ರಮಗಳೊಂದಿಗೆ ದಾರಿ ಸಾಗುತ್ತಿದ್ದರು. ಅವರು ಕಾವಿ ಬಣ್ಣದ ರೇಶ್ಮೆಯ ಪಂಚೆ, ಉತ್ತರೀಯ ಮತ್ತು ಕೆಂಪು ಬಣ್ಣದ ಉಣ್ಣೆಯ ಅಥವಾ ರೇಶ್ಮೆಯ ಪೇಟ ಧರಿಸುತ್ತಿದ್ದರು. ಸನ್ಯಾಸಿಗಳಾಗಿದ್ದ ನಿಮಿತ್ತ ಅವರು ತಲೆಯನ್ನು ಬೋಳಿಸಿಕೊಳ್ಳುತ್ತಿದ್ದರು. ಸರ್ವ

ಸಾಮಾನ್ಯವಾಗಿ ಅವರನ್ನು ಪಲ್ಲಂಕಿಯಲ್ಲಿ ಕುಳ್ಳಿರಿಸಿ ಎತ್ತಿಕೊಂಡು ಹೋಗುತ್ತಿದ್ದರು. ಪಲ್ಲಂಕಿ ಎರಡು ಸ್ತರಗಳಲ್ಲಿನ ಮಡಚಿದ ಆರಾಮ ಕುರ್ಚಿಯಂತಿದ್ದು ಮೇಲುಬ್ಬುಕೊಂಡು ಬಾಗಿದ್ದ ಗಣೆ ಕೊಂಡಿರುತ್ತದೆ. ಪಲ್ಲಂಕಿ ಸುಂದರವಾದ ಅಲಂಕಾರಿಕ ಕೆತ್ತನೆ ಕೊಂಡಿರುತ್ತದೆ. ಗುರುಗಳೊಂದಿಗೆ ಖಡ್ಗ ಮತ್ತು ಕೋವಿಗಳನ್ನು ಕೊಂಡ ರಕ್ಷಕರಿರುತ್ತಿದ್ದರು. ಗುರುಗಳು ರಾಜ ಸನ್ಯಾಸಿಯಂತಿದ್ದು ಅವರ ಮಠವನ್ನು ಪೀಠ ಅಥವಾ ಸಂಸ್ಥಾನವೆಂದಾಗಿ ಸಂಭೋಧಿಸಲಾಗುತ್ತಿತ್ತು. ಅವರು ತಮ್ಮ ಹೆಸರಿನೊಂದಿಗೆ 'ಸಾರಸ್ವತ' ಎಂಬ ಪ್ರಶಸ್ತಿಸೂಚಕ ವಿಶಿಷ್ಟ ನಾಮವನ್ನು ಜೋಡಿಸುತ್ತಾರೆ. ದಂಡಧಾರಿಗಳು ಮತ್ತು ಪಲ್ಲಂಕಿ ಹೊರುವವರ ನಡುವೆ ನಾಲ್ಕು ಜನರು ಕೆಂಪು ಬಣ್ಣದ ಬಟ್ಟೆ ಸುತ್ತಿದ್ದ, ಒಂದು ಅಡಿ ಚದರಾಕಾರದ ಮರದ ಪೆಟ್ಟಿಗೆಗಳನ್ನು ಹೊತ್ತು ದಾರಿ ಸಾಗುತ್ತಾರೆ. ಈ ಪೆಟ್ಟಿಗೆಗಳು ಗುರುಗಳು ಪೂಜಿಸುವ ದೇವರ ಮೂರ್ತಿಗಳು ಮತ್ತು ಪೂಜೆಗೆ ಬೇಕಿದ್ದ ಪಾತ್ರೆ, ಪರಾತಗಳನ್ನು ಕೊಂಡಿರುತ್ತವೆ. ಅವರು ಆಗಿಂದಾಗ್ಗೆ ತಮ್ಮ ಶಿಷ್ಯ ವರ್ಗದ ಊರನ್ನು ಸಂದರ್ಶಿಸುತ್ತಾರೆ.

ಹಳ್ಳಿ ಅಥವಾ ನಗರದ ಸರಹದ್ದನ್ನು ಸೂಚಿಸುವ ಕಡಲ ಕೈ, ನದಿ, ತೊರೆ ಅಥವಾ ಬೆಟ್ಟದತ್ತ ಬರುತ್ತಲೇ ಶಿಷ್ಯ ವರ್ಗ ವಾದ್ಯದವರ ಸಮೇತ ಗುರುಗಳ ಭೇಟಿಕೊಳ್ಳುತ್ತದೆ. ಅವರಲ್ಲೊಬ್ಬಾತ, ಸರ್ವ ಸಾಮಾನ್ಯವಾಗಿ ಶ್ರೀಮಂತನಿದ್ದಾತ, ಗುರುಗಳು ತನ್ನಲ್ಲಿ ಇಳಿದುಕೊಂಡು ಧನ್ಯನನ್ನಾಗಿಸುವರೆ ಪ್ರಾರ್ಥಿಸುತ್ತಾನೆ. ಮನೆ ಸೇರುತ್ತಲೇ ಅತಿಥೇಯ ಗುರುಗಳ ಪಾದಗಳನ್ನು ತೊಳೆದು ಆ ನೀರನ್ನು ನೆರೆದವರ ಮೇಲಕ್ಕೆ ಸಿಂಪಡಿಸುತ್ತಾನೆ. ಭೋಜನಾನಂತರ ಗುರುಗಳು ಅತಿಥೇಯನ ಪತ್ನಿಗೆ ತನ್ನಲ್ಲಿನ ಸೇರು ಅಕ್ಕಿ ಮತ್ತು ತೆಂಗಿನಕಾಯಿಯೊಂದನ್ನೀಯುತ್ತಾರೆ. ಶ್ರೀಮಂತನಿದ್ದ ಶಿಷ್ಯನ ಮನೆಯಲ್ಲಿನ ಗುರುಗಳ ವಾಸ್ತವ್ಯದ ವೇಳೆಗೆ ಶಿಷ್ಯ ವರ್ಗದ ಅನ್ಯ ಜನರು ವಂತಿಗೆ ಒಂದೂಗೂಡಿಸಿ ಅವರಿಗೆ ಖಾದ್ಯ ಪದಾರ್ಥ, ನಗದು ಹಣವನ್ನು ಕಾಣಿಕೆಯಾಗಿ ಅರ್ಪಿಸುತ್ತಾರೆ. ಗುರುಗಳು ಮುಂದಿನ ತಂಗು ತಾಣಕ್ಕೆ ಹೊರಡುವ ಮುನ್ನ ಸಂಭ್ರಮದ ಸಮಾರಾಧನೆ ಆಯೋಜಿಸಲಾಗುತ್ತದೆ. ಗುರುಗಳು ಮುಂದಿನ ಪ್ರವಾಸಕ್ಕೆ ಹೋಗುವ ಮುನ್ನ ಅವರಿಗೆ ಗುರುದಕ್ಷಿಣೆ ಈಯುತ್ತಾರೆ. ಅವರ ಸಂಚಾರ ಮಳೆಗಾಲ ಆರಂಭವಾಗುವ ಮುನ್ನ ಮುಗಿಯುತ್ತದೆ. ಆಗ ಗುರುಗಳು ತನ್ನ ಸಂಸ್ಥಾನಕ್ಕೆ ಅಥವಾ ಅನ್ಯ ಸ್ಥಾನಗಳಲ್ಲಿನ ಮಠಕ್ಕೆ ತೆರಳುತ್ತಾರೆ. ಅಲ್ಲಿ ಜ್ಯೇಷ್ಠ ಮಾಸದ (ಜೂನ್-ಜುಲೈ) ಶುಕ್ಲ ಪಕ್ಷದಲ್ಲಿನ ದಶಮಿಯಂದು ಶಿಷ್ಯ ವರ್ಗಕ್ಕೆ ಮೃಷ್ಟಾನ್ನ ಭೋಜನವಿತ್ತು ಮುಂದಿನ ನಾಲ್ಕು ತಿಂಗಳ ಕಾಲ ಚಾತುರ್ಮಾಸದ ವೃತಾಚರಣೆಯಲ್ಲಿ ದಿನಗಳೆಯುತ್ತಾರೆ. ಅಶ್ವಿಜ ಮಾಸದ (ಅಕ್ಟೋಬರ್ - ನವೆಂಬರ್) ಶುಕ್ಲ ಪಕ್ಷದ ದಶಮಿಯಂದು ವ್ರತಾಚರಣೆ ಮುಗಿಸುವ ಗುರುಗಳು ತನ್ನ ಮಠದಿಂದ ಹೊರಕ್ಕೆ ಬಿದ್ದು ವೈಭವಾಡಂಬರಗಳೊಂದಿಗೆ ತಾನುಳಿದುಕೊಂಡ ಮಠವಿದ್ದ ಹಳ್ಳಿ ಅಥವಾ ನಗರದ ಸರಹದ್ದನ್ನು ದಾಟಿ, ಅಲ್ಲಿ ತುಸು ಸಮಯ ಉಳಿದು ಮತ್ತೆ ತನ್ನ ಮಠಕ್ಕೆ ಮರಳುತ್ತಾರೆ. ಚಾತುರ್ಮಾಸದ ವ್ರತಾಚರಣೆಗೆ ತೊಡಗುವಂದು, ವ್ರತಾಚರಣೆ ಮುಗಿದಂದು, ತನ್ನ ಗುರುಗಳ ಪುಣ್ಯ ತಿಥಿಯಂದು ಪೀಠಾರೂಢರಾಗಿ ಪಾದೋಕವನ್ನು ನೆರೆದ ಶಿಷ್ಯರಿಗೆ ತೀರ್ಥದ ರೂಪದಲ್ಲೀಯುತ್ತಾರೆ.

ಗುರುಗಳ ದೇವರು : ಬಾಣಲಿಂಗ (ನರ್ಮದಾ ನದಿಯಲ್ಲಿ ದೊರಕುವ ದೀರ್ಘ ಚತುರಸ್ರವಾಗಿರುವ ಕಲ್ಲು), ಗಣಪತಿ, ನರ್ಮದಾ, ನದಿಯಲ್ಲಿ ದೊರಕುವ ಕೆಂಪು ಬಣ್ಣದ ರೇಖಾಕೃತಿಯ ಕಲ್ಲು, 'ಸಾಲಿಗ್ರಾಮ' (ದೀರ್ಘ ವೃತ್ತಾಕಾರದ, ಕಪ್ಪು ಬಣ್ಣದ, ಒಂದು ಬದಿ ಚಪ್ಪಟೆಯಿದ್ದು, ನಿಸರ್ಗದತ್ತ ರಂಧ್ರಕೊಂಡ ಮತ್ತು ನೇಪಾಳದ ಗಂಡಕಿ ನದಿಯಲ್ಲಿ ದೊರಕುವ ಕಲ್ಲು) , 'ಸೂರ್ಯಕಾಂತ' ಎನ್ನಲಾಗುವ ಪಾರದರ್ಶಕ, ದುಂಡಗಿನ ಸ್ಪಟಿಕದ ಕಲ್ಲು, ಗೋಮತಿ ನದಿಯಲ್ಲಿ ದೊರಕುವ 'ಚಕ್ರ' ಎನ್ನುವ ಕಲ್ಲು; ನುಣ್ಣಗಿನ, ದುಂಡಾದ ಅನ್ಯ ಸಾಲಿಗ್ರಾಮಗಳು, ಅನ್ನಪೂರ್ಣ, ಗೋಪಾಲಕೃಷ್ಣ, ರಾಮ, ಸೀತೆ ಇವರ ವಿಗ್ರಹಗಳು.
ಪೂಜೆಯ ವೇಳೆ ನಿತ್ಯ ಬಳಸಲಾಗುವ ವಸ್ತುಗಳು : ಹಿತ್ತಾಳೆಯ ಗಂಟೆ, ಸಣ್ಣ ಶಂಖ, ಬೆಳ್ಳಿಯ ಹರಿವಾಣ, ತಂಬಿಗೆ, ಚಮಚೆ, ಚಿಕ್ಕ ದೀಪ.

ನೌಕರ ವರ್ಗ : ಮಠದ ವ್ಯವಸ್ಥೆ ನೋಡಿಕೊಳ್ಳುವ, ಪಾರುಪತ್ಯಗಾರ ಎಂದಾಗಿ ಕರೆಯಲ್ಪಡುವ ಅಧಿಕಾರಿಯೊಬ್ಬ, ಸ್ತುತಿಪಾಠಕರಿಬ್ಬರು, ವೈದಿಕ ವೃತ್ತಿಯನ್ನು ಕಲಿಯುವ ಭಟ್ಟರ ಮಕ್ಕಳಿಬ್ಬರು, ಭಟ್ಟರಿಬ್ಬರು, ಶಾಸ್ತ್ರಿ ಎಂದಾಗಿ ಕರೆಯಲ್ಪಡುವ ಸುಶಿಕ್ಷಿತ ಬ್ರಾಹ್ಮಣನೊಬ್ಬ, ವಾದ್ಯದವರು, ಬೋಯಿಗಳು, ಕುದುರೆಯ ಉಸ್ತುವಾರಿ ನೋಡಿಕೊಳ್ಳುವ ಕಾಸ್ತಾರ, ದನ, ಎಮ್ಮೆಗಳ ಪಾಲನೆಗಿದ್ದ ಪಶುಪಾಲ.

ಮಠಗಳು ಭೂಸ್ವತ್ತುಕೊಂಡಿದ್ದು ಅವುಗಳ ಉತ್ಪನ್ನದಿಂದ ಎಲ್ಲೊಂದು ಬಗೆಯ ಖರ್ಚನ್ನು ಕಳೆದು ಉಳಿದುದನ್ನು ಪಾರುಪತ್ಯಗಾರರು ಗುರುಗಳಿಗೆ ರವಾನಿಸುತ್ತಿದ್ದರು. ಶೆಣ್ವಿಯರ ಧಾರ್ಮಿಕ ಸಂಸ್ಥೆ ಅವರ ಗುರುಗಳ ಮಠವಾಗಿದ್ದು ಕೆನರಾದಲ್ಲಿ ಅದು ಕಾರವಾರದಲ್ಲಿನ ಸದಾಶಿವಗಡ ಅಥವಾ ಚಿತ್ತಾಕುಲಾದಲ್ಲಿದೆ. ಪ್ರಾಯ ಕಳೆದಂತೆ ಅಥವಾ ಸ್ವಾಸ್ಥ್ಯ ತೀರಾ ಕೆಡುವ ಸಂಭವ ಇದ್ದಾಗ ಗುರುಗಳು ಶೆಣ್ವಿ ಸಮಾಜದ ಬಾಲಕನೊಬ್ಬನನ್ನು ಶಿಷ್ಯನನ್ನಾಗಿ ಆರಿಸುತ್ತಾರೆ. ಗುರುಗಳ ಸ್ವಾಸ್ಥ್ಯ ಸುಧಾರಿಸಿದಲ್ಲಿ ಶಿಷ್ಯ ಅವರ ಆಜ್ಞಾಧಾರಕನಾಗುಳಿಯುತ್ತಾನೆ. ಗುರುಗಳು ಉತ್ತರಾಧಿಕಾರಿಯೊಬ್ಬನನ್ನಾರಿಸದೆ ಕಾಲಾಧೀನರಾದಲ್ಲಿ, ಸಮಾಜ ಬಾಂಧವರು ಒಬ್ಬಾತನನ್ನಾರಿಸಿ ವಿದ್ವನ್ಮಾನ್ಯ ಬ್ರಾಹ್ಮಣರು ವಿಧಿವತ್ತಾಗಿ ಆತನನ್ನು ಬರಿದಾಗಿದ್ದ ಪೀಠದಲ್ಲಿ ಪ್ರತಿಷ್ಠಾಪಿಸುತ್ತಾರೆ. ಮತ್ತು ಆತನಿಗೆ ರಾಜಸನ್ಯಾಸಿಯ ಅಧಿಕಾರವನ್ನೀಯುತ್ತಾರೆ.

ಪ್ರಾಣಹೋದ ಲಕ್ಷಣಗಳು ತೋರಿ ಬರುತ್ತಲೇ ಗುರುಗಳ ಶರೀರವನ್ನು ಮಠದಿಂದ ಹೊರಕ್ಕೆ ತಂದು ಬೆನ್ನಾಸರೆಯಿದ್ದ ಮತ್ತು ದರ್ಭೆ ಹಾಸಿದ್ದ ಆಸನದಲ್ಲಿ ಕುಳ್ಳಿರಿಸುತ್ತಾರೆ. ಹರಿಕಾರರನ್ನು ಸುತ್ತಣ ಊರುಗಳಿಗೆ ಕಳುಹಿಸಲಾಗುತ್ತಿದೆ. ಸಮಾಜ ಬಾಂಧವರು ಮಠದಲ್ಲಿ ಒಂದುಗೂಡುತ್ತಾರೆ. ಸಾಕಷ್ಟು ಜನರು ನೆರೆದಾಗ ಗುರುಗಳ ಶರೀರವನ್ನು ಶುದ್ಧಗೊಳಿಸಿ ಕಾವಿಬಣ್ಣದ ರೇಶ್ಮೆ ಬಟ್ಟೆ ತೊಡಿಸಿ, ಬೆಳ್ಳಿಯ ದಂಡವನ್ನು ಕೈಗಿತ್ತು, ಮೇಲಾವರಣಕೊಂಡ ಪೀಠದಲ್ಲಿ ಕುಳ್ಳಿರಿಸುತ್ತಾರೆ. ಮಠದ ಅಂಗಳದಲ್ಲಿ ಸಮಾಧಿಗಾಗಿ ಕುಣಿ ತೋಡಲಾಗುತ್ತದೆ. ಘನಗಾಂಭೀರ್ಯ, ಭವ್ಯತೆಗಳೊಂದಿಗೆ ಮೇಲಾವರಣಕೊಂಡ ಆಸನದಲ್ಲಿ ಕುಳ್ಳಿರಿಸಲಾಗಿದ್ದ ಗುರುಗಳ ಶರೀರವನ್ನು ಸಮಾಧಿಸ್ಥಾನಕ್ಕೆ ಕೊಂಡುಹೋಗಿ ಅಲ್ಲಿ

ಪೂಜಿಸುತ್ತಾರೆ. ಮತ್ತೆ ಕುಳಿತುಕೊಂಡ ಭಂಗಿಯಲ್ಲಿ ಶರೀರವನ್ನು ಸಮಾಧಿಯ ಕುಣಿಗಿಳಿಸುತ್ತಾರೆ. ಹೊಸದಾಗಿ ಅಧಿಕಾರಕೊಂಡಿದ್ದ ಗುರುಗಳು ತೆಂಗಿನಕಾಯಿಯನ್ನು ಮೃತ ಗುರುಗಳ ಶಿರಾಗ್ರ ಭಾಗಕ್ಕೆ ಬಡಿದು ಅಲ್ಲಿ ರಂಧ್ರವನ್ನು ತಯಾರಿಸುತ್ತಾರೆ. ಮತ್ತು ಆ ರಂಧ್ರದೊಳಕ್ಕೆ ಸಾಲಿಗ್ರಾಮವನ್ನಿಡುತ್ತಾರೆ. ಆನಂತರ ಸಮಾಧಿಯ ಕುಣಿಯ ಅರ್ಧಭಾಗವನ್ನು ಉಪ್ಪು, ಕರ್ಪೂರ ಮತ್ತು ಸಿಮೆಂಟಿನಿಂದ ತುಂಬುತ್ತಾರೆ. ಕುಣಿಯನ್ನು ಮಣ್ಣಿನಿಂದ ಸಂಪೂರ್ಣ ತುಂಬಿದ ಬಳಿಕ ಸಮಾಧಿಯ ಮೇಲಕ್ಕೆ ಬಾಣ ಅಥವಾ 'ಬಾಣ ಲಿಂಗ'ವನ್ನಿಟ್ಟು ದೀಪ ಬೆಳಗುತ್ತಾರೆ. ಗುರುಗಳ ಪ್ರಾಣೋತ್ಕ್ರಮಣದ ನಂತರ ಹನ್ನೊಂದು ದಿನಗಳ ತನಕ ಮಠದಲ್ಲಿ ಉತ್ಸವದ ವಾತಾವರಣವಿರುತ್ತದೆ. ಈ ದಿನಗಳಲ್ಲಿ ಗುರುಗಳ ಆತ್ಮ ದೈವೀಮೂಲತತ್ವವನ್ನು ಸೇರುವುದಾಗಿ ಭಾವಿಸಲಾಗುತ್ತದೆ. ಮಠದಲ್ಲಿನ ಅನ್ಯ ಗುರುಗಳ ಸಮಾಧಿಯ ಮೇಲಕ್ಕೂ, ನಂದಾದೀಪ ಬೆಳಗಿಸಿ, ಪೂರ್ವಾಹ್ನದ ಊಟಕ್ಕೂ ಮುನ್ನ ನೈವೇದ್ಯ ಅರ್ಪಿಸಿ ಆರತಿ ತೋರುತ್ತಾರೆ.

ಶೆಣ್ವಿಯರಲ್ಲಿನ ಮಹತ್ವದ ರೀತಿ, ರಿವಾಜುಗಳು, ಕಟ್ಟು ಕಟ್ಟಳೆಗಳು ಅವರಲ್ಲಿನ ಹುಟ್ಟು, ಬಾಲ್ಯಾವಸ್ಥೆ, ಉಪನಯನ, ಹೆಣ್ಣಿನ ಮೊದಲ ಮುಟ್ಟು, ವಿವಾಹ ಮತ್ತು ಸಾವಿಗೆ ಸಂಬಂಧಿಸಿವೆ. ಹೆರಿಗೆಯ ಸಮಯ ಸಮೀಪಿಸುತ್ತಲೇ ಗರ್ಭವತಿಯನ್ನು ತಾತ್ಕಾಲಿಕವಾಗಿ ಪ್ರತ್ಯೇಕಿಸಲ್ಪಟ್ಟ ಬಿದಿರಿನ ಚಾಪೆಕೊಂಡ ಕೋಣೆಗೆ ಕೊಂಡುಹೋಗುತ್ತಾರೆ. ಹಾಗೆಯೇ ಸೂಲಗಿತ್ತಿಯನ್ನು ಕರೆದು ತರುತ್ತಾರೆ. ಕ್ರಿಸ್ತಮತೀಯ, ಮುಸಲ್ಮಾನ ಅಥವಾ ಅನ್ಯ ಕೆಳಜಾತಿಯ ಹಿಂದು ಸೂಲಗಿತ್ತಿ ಬಾಣಂತಿಯೊಂದಿಗೆ ಆರು ದಿನ ಇರುತ್ತಾಳೆ. ಅವಳಿಗೆ ಆರು ದಿನಗಳ ಉಣಿಸಿನೊಂದಿಗೆ ಸ್ವಲ್ಪ ನಗದು ಹಣ ಮತ್ತು ಪ್ರಸವದ ವೇಳೆ ಬಾಣಂತಿ ಉಟ್ಟ ಸೀರೆಯನ್ನು ಕೊಡುತ್ತಾರೆ. ಮಗು ಹುಟ್ಟಿದ ನಂತರ ಜನ್ಮದ ಹೊತ್ತನ್ನು ಬರೆದಿಟ್ಟು ಪುರೋಹಿತರಿಗೆ ತಿಳಿಸುತ್ತಾರೆ. ಪುರೋಹಿತರು ಮನೆಗೆ ಬಂದು ಜನನ ಕಾಲದ ಸಮಯ, ದಿನ, ತಿಂಗಳು, ವರ್ಷ, ಸಂವತ್ಸರ, ಸೂರ್ಯನ ಸ್ಥಾನ ಇತ್ಯಾದಿಗಳನ್ನು ಬರೆದು ಕೆಲವು ದಿನಗಳ ನಂತರ ಕುಂಕುಮ ಹಚ್ಚಿದ ಜನ್ಮ ಕುಂಡಲಿಯನ್ನು ತರುತ್ತಾರೆ.

ಮಗು ಹುಟ್ಟಿದ್ದ ಗಳಿಗೆ ಅಶುಭವಿದ್ದಲ್ಲಿ (ಇದನ್ನು ಪುರೋಹಿತರು ಮನೆಗೆ ಬಂದಂತೆ ಖಚಿತ ಪಡಿಸಿಕೊಳ್ಳುತ್ತಾರೆ) ಮಗುವಿನ ಪ್ರತಿಬಿಂಬವನ್ನು ತುಪ್ಪದಲ್ಲಿ ಕಾಣುವ ತನಕ ಅದರ ಮುಖವನ್ನು ತಂದೆಗೆ ತೋರಗೊಡದಿದ್ದರು. ಮಗುವಿನ ತಂದೆ ಈ ತುಪ್ಪವನ್ನು ದಕ್ಷಿಣೆಯೊಂದಿಗೆ ಬ್ರಾಹ್ಮಣನೊಬ್ಬನಿಗೀಯುತ್ತಾನೆ. ಮಗುವಿನ ಅಶುಭ ಕಾಲದಲ್ಲಿನ ಜನನದ ಪರಿಣಾಮವಾಗಿ ಅನರ್ಥ ಸಂಭವಿಸುವಲ್ಲಿ, ಅದನ್ನು ತಡೆ ಹಿಡಿಯಲಾಗಿ ಈ ವಿಧಿಯನ್ನಾಚರಿಸಲಾಗುತ್ತದೆ. ಪುರೋಹಿತರಿಗೆ ಮನೆಯಾತನ ಶಕ್ತಿಗನುಗುಣವಾಗಿ ಸಕ್ಕರೆ ಮತ್ತು ನಗದು ಕಾಣಿಕೆಕೊಡಲಾಗುತ್ತದೆ. ಹುಟ್ಟಿದ ಮಗುವಿಗೆ ಗ್ರಹದೋಶವಿದ್ದಲ್ಲಿ ಮಗುವನ್ನು ದನದ ಹೊಟ್ಟೆಯಡಿಯಿಂದಾಗಿ ಕುಟುಂಬಕ್ಕೆ ಸಂಬಂಧಿಸಿರದಿದ್ದ ಬೇರೊಬ್ಬನ ಕೈಗಳಿಗೀಯುತ್ತಾರೆ. ಮತ್ತೆ ಸ್ವಲ್ಪ ಸಮಯಾನಂತರ ಮಗುವನ್ನು ಮನೆಯೊಳಕ್ಕೆ ತರುತ್ತಾರೆ. ಆನಂತರ ಬ್ರಾಹ್ಮಣರಿಗೆ ಧನ, ಧಾನ್ಯಇತ್ಯಾದಿಗಳನ್ನು ದಾನದ ರೂಪದಲ್ಲೀಯಲಾಗುತ್ತದೆ.

ಅಶುಭ ಶಕುನಗಳ ಕಠಿಣ ಪರಿಸ್ಥಿತಿಯಲ್ಲಿ ಮಗುವನ್ನು ದತ್ತಕ್ಕೆ ಕೊಳ್ಳಲೊಪ್ಪುವ ಸ್ವಜಾತಿಯ ಗೃಹಸ್ಥನಿಗೀಯುತ್ತಾರೆ.

ಮಗು ಹುಟ್ಟಿದಾಗ ನೆರೆಕರೆಯವರು ಮತ್ತು ಸಂಬಂಧಿಕರು ಆಮಂತ್ರಣದ ವಿನಹಾ ನೆರೆದು ಬರುತ್ತಾರೆ; ಅವರೆಲ್ಲರಿಗೆ ಸಕ್ಕರೆ ಮತ್ತು ಅಡಿಕೆ ಹಂಚುತ್ತಾರೆ. ಮಗು ಹುಟ್ಟುತ್ತಲೇ ಸೂಲಗಿತ್ತಿ ಹೊಕ್ಕುಳ ಬಳ್ಳಿಯನ್ನು ಚೂರಿಯಿಂದ ಕತ್ತರಿಸುತ್ತಾಳೆ. ಮಾತ್ರ ಹೊಕ್ಕುಳಿನಿಂದ ಸುಮಾರು ಮೂರು ಇಂಚುಗಳಷ್ಟರ ಭಾಗವನ್ನು ಉಳಿಯಬಿಡಲಾಗುತ್ತದೆ. ಉಳಿಯ ಬಿಟ್ಟ ಹೊಕ್ಕುಳ ಬಳ್ಳಿಯ ತುದಿಯನ್ನು ಹತ್ತಿಯ ದಾರದಿಂದ ಗಟ್ಟಿಯಾಗಿ ಕಟ್ಟುತ್ತಾಳೆ. ಮತ್ತೆ ಮಗುವನ್ನು ಬಟ್ಟೆಯಿಂದ ಸುತ್ತಿ ಗೆರಸೆಯಲ್ಲಿಡುತ್ತಾಳೆ. ಭೂತ, ಪ್ರೇತಗಳನ್ನು ದೂರಕ್ಕಿಡಲಾಗಿ ಮಗುವಿನ ತಲೆ ದಿಂಬಿನ ಕೆಳಕ್ಕೆ ಕಬ್ಬಿಣದ ಮೊಳೆಯೊಂದನ್ನು ಇಡುತ್ತಾರೆ. ಮನೆಯಲ್ಲಿ ಮಗು ಹುಟ್ಟಿದಾಗ ಮನೆ ಮಂದಿ ಹನ್ನೊಂದು ದಿನಗಳ ಸೂತಕದ ಪಾಲನೆ ಮಾಡುತ್ತಾರೆ. ಆನಂತರ ಪುರೋಹಿತರು ಅವರೆಲ್ಲರಿಗೆ ಪಂಚಗವ್ಯವನ್ನೀಯುತ್ತಾರೆ.

ಹುಟ್ಟಿದ ಮಗುವಿನ ಬಾಯಿಗೆ ಚೀಪಲೆಂದು ಅರಿವೆಯ ಬತ್ತಿ ಹಾಕುತ್ತಾರೆ. ಬತ್ತಿಯ ಒಂದು ಕೊನೆಯನ್ನು ಬೆಲ್ಲ ಹಾಕಿದ ಗಂಜಿಯ ನೀರಿನ ತಟ್ಟೆಯೊಳಕ್ಕೆ ಅದ್ದಿಡುತ್ತಾರೆ. ಮೊದಲ ಮೂರು ದಿನಗಳ ಕಾಲ ಮಗವಿನ ತಾಯಿಗೂ ಉಪ್ಪು ಹಾಕದ, ಆದರೆ ಬೆಲ್ಲ ಸೇರಿಸಿದ ಗಂಜಿಯನ್ನು ಉಣಬಡಿಸುತ್ತಾರೆ. ಈ ಮೂರು ದಿನಗಳಲ್ಲಿ ಮಗು ಮತ್ತು ಬಾಣಂತಿಯರನ್ನು ಬಿಸಿ ನೀರಿನಿಂದ ಮಿಯುಸುತ್ತಾರೆ. ನಾಲ್ಕನೆಯ ದಿನ ಮಗುವಿಗೆ ಮತ್ತು ಮಗುವಿನ ತಾಯಿಗೆ ತೆಂಗಿನ ಎಣ್ಣೆ ಹಚ್ಚಿ, ಬಿಸಿ ನೀರಿನ ಸ್ನಾನ ಹಾಕುತ್ತಾರೆ. ಬಾಣಂತಿಗೆ ಅನ್ನ, ಪಲ್ಯ ಮತ್ತು ಅಕ್ಕಿಯ ಪಾಯಸ ಉಣಬಡಿಸುತ್ತಾರೆ. ಆದಿನ ಮೊದಲ್ಗೊಂಡು ತಾಯಿ ಮಗುವಿಗೆ ಮೊಲೆ ಹಾಲು ಕುಡಿಸಲಾರಂಭಿಸುತ್ತಾಳೆ. ಸುಮಾರು ಎರಡು ತಿಂಗಳ ಕಾಲ ಮಗು ಮತ್ತು ಮಗುವಿನ ತಾಯಿಗೆ ಎಣ್ಣೆ ಹಚ್ಚಿ ಸ್ನಾನ ಹಾಕುತ್ತಾರೆ. ಮತ್ತು ಆಕೆಗೆ ಕರಿಮೆಣಸು, ಶುಂಠಿ, ಲವಂಗ ಹಾಗೂ ಇನ್ನಿತರ ಮಸಾಲೆ ದ್ರವ್ಯಗಳನ್ನು ಸೇರಿಸಿ ಮಾಡಿದ ಕಷಾಯ ಕೊಡುತ್ತಾರೆ. ಆರನೆಯ ದಿನದ ರಾತ್ರಿ ನೆರೆಕರೆಯ ಸಂಬಂಧಿಕರಿಗೆಲ್ಲ ಅಕ್ಕಿ, ಹೆಸರು ಬೇಳೆ, ತೆಂಗಿನಕಾಯಿ, ಬೆಲ್ಲ, ತುಪ್ಪಗಳನ್ನೊಂದುಗೂಡಿಸಿ ತಯಾರಿಸಿದ ಖಾದ್ಯ ಪದಾರ್ಥವನ್ನು ಉಣಬಡಿಸುತ್ತಾರೆ.

ನೀರು ತುಂಬಿದ್ದ ತಾಮ್ರದ ಸಣ್ಣ ತಂಬಿಗೆಯಲ್ಲಿ ಮಾವಿನೆಲೆಗಳನ್ನಿರಿಸಿ, ಅವುಗಳ ನಡುವೆ ಕುಂಕುಮ ಬಳಿದ ತೆಂಗಿನಕಾಯಿಯನ್ನಿಟ್ಟು 'ಸಟ್ಟಿ' ಎನ್ನಲಾಗುವ ಧಾರ್ಮಿಕ ವಿಧಿಯನ್ನು ಆಚರಿಸಲಾಗುತ್ತದೆ. ತಂಬಿಗೆಯ ಪಕ್ಕದಲ್ಲಿ ಬಾಳೆ ಹಣ್ಣುಗಳು, ಅಡಿಕೆ, 'ಪಾಥಾಳೆ' ಹೆಸರಿನ ಕೆಂಬಣ್ಣದ ಕಾಡು ಹೂವನ್ನು ಇಡಲಾಗುತ್ತದೆ. ಇವು ಬ್ರಹ್ಮನನ್ನು ಪ್ರತಿನಿಧೀಕರಿಸುವುದಾಗಿ ಭಾವಿಸುವ ಇವರು ರಾತ್ರಿಯ ಹೊತ್ತಿನಲ್ಲಿ ಬ್ರಹ್ಮ ಮುದುಕಿಯೊಬ್ಬಳ ರೂಪದಲ್ಲಿ ಬಂದು ಮಗುವಿನ ಅದೃಷ್ಟವನ್ನು ಅದರ ಹಣೆಯಲ್ಲಿ ಬರೆದು ಹೋಗುತ್ತಾನೆಂದು ಭಾವಿಸುತ್ತಾರೆ. ಇದಕ್ಕೆ 'ಸಟ್ಟಿ' ಎನ್ನುತ್ತಾರೆ. ಅಲ್ಲಿ ಖಾಲಿ ಕಾಗದದ ಹಾಳೆ, ಶಾಯಿಯ ಕುಡಿಕೆ, ಲೆಕ್ಕಣಿ ಮತ್ತು ಸಣ್ಣ ಚೂರಿಯನ್ನು ಇಡಲಾಗುತ್ತದೆ. ಮನೆಯಲ್ಲಿನ ಹಿರಿಯರು ಜಾಗರಣೆ ಮಾಡಿ ಏನೊಂದೂ ಅನಾಹುತವಾಗದಂತೆ ನೋಡಿಕೊಳ್ಳುತ್ತಾರೆ. ಗಂಡಸರು ಇಡೀ ರಾತ್ರಿ

ಧಾರ್ಮಿಕ ಗ್ರಂಥಗಳನ್ನು ಓದುತ್ತಾರೆ. ಹೆಂಗಸರು ತಾಮ್ರದ ನೀರಿನ ಮಡಕೆಗಳನ್ನು ಕೊಂಡು ಅವುಗಳ ಬಾಯಿಯತ್ತ ಫೂತ್ಕಾರ ಮಾಡಿ ವಿಚಿತ್ರ ಧ್ವನಿಯನ್ನು ಹೊರಡಿಸುತ್ತಾರೆ. ಕಾಲುಗಳನ್ನು ಅರ್ಧಕ್ಕೆ ಮಡಿಸಿ ಮತ್ತೆ ಒಮ್ಮಿಂದೊಮ್ಮೆ ನೆಟ್ಟನೆ ಎದ್ದು ನಿಂತು, ವೇಗಕೊಂಡು, ವರ್ತುಲಾಕಾರದಲ್ಲಿ ಕುಣಿಯುವ 'ಫುಗಡಿ' ನೃತ್ಯ ಮಾಡುತ್ತಾರೆ.

ಹನ್ನೊಂದನೆಯ ದಿನ ಸೆಗಣಿ ಸಾರಿಸಿ ಮನೆಯನ್ನು ಶುದ್ಧೀಕರಿಸಿದ ಬಳಿಕ ಪುರೋಹಿತರ ಕೈಗಳಿಂದ ಪಂಚಗವ್ಯಕೊಳ್ಳುತ್ತಾರೆ. ಹೋಮ ಮಾಡಿ ಸ್ವಜಾತೀಯ, ಎರಡರಿಂದ, ಹದಿನೆರಡು ಜನರಿಗೆ (ಗಂಡಸರು ಮತ್ತು ಹೆಂಗಸರು ಕೂಡಿ) ರಸದೂಟ ಬಡಿಸುತ್ತಾರೆ. ಇದಕ್ಕೆ ಬ್ರಾಹ್ಮಣ ಸಂತರ್ಪಣ ಅಥವಾ ಬ್ರಾಹ್ಮಣರನ್ನು ತೃಪ್ತಿಗೊಳಿಸುವುದು ಎನ್ನುತ್ತಾರೆ.

ಎಣ್ಣೆ ಹಚ್ಚಿದ, ಆಯತಾಕಾರದ ಸಣ್ಣ ಶಿಲೆಯ ತುಂಡನ್ನು ತೊಟ್ಟಿಲಲ್ಲಿ ಇಡುತ್ತಾರೆ. ಮಗುವಿನ ತಾಯಿ ಮಗುವನ್ನು ಕೈಗಳಲ್ಲೆತ್ತಿಕೊಂಡು ತೊಟ್ಟಿಲಿನ ಒಂದು ಬದಿಯಲ್ಲಿ ನಿಲ್ಲುತ್ತಾಳೆ. ಮತ್ತೆ ತೊಟ್ಟಿಲಿನ ಇನ್ನೊಂದು ಬದಿಯಲ್ಲಿ ನಿಂತ ಹೆಂಗಸಿಗೆ ''ಗೋವಿಂದನನ್ನು ಕೊಳ್ಳು ಮತ್ತು ಗೋಪಾಲನನ್ನು ಕೊಡು'' ಎನ್ನುತ್ತಾಳೆ. ಆಗ ಹೆಂಗಸು ಶಿಲೆಯ ತುಂಡನ್ನು ಕೊಳ್ಳುತ್ತಾಳೆ. ತಾಯಿ ಮಗುವನ್ನು ತೊಟ್ಟಿಲಿನಲ್ಲಿಡುತ್ತಾಳೆ. ಮತ್ತು ಮಗುವಿನ ತಂದೆ, ತಂದೆ ಇಲ್ಲದಿದ್ದಲ್ಲಿ ರಕ್ತ ಸಂಬಂಧಕೊಂಡ ಇನ್ನಾರೊಬ್ಬ ತೊಟ್ಟಿಲಿನ ಸಮೀಪ ಬಂದು ಮಗುವಿಗೆ ಇಡುವ ಹೆಸರನ್ನು ಮೊದಲು ಅದರ ಕಿವಿಗಳಲ್ಲುಸಿರಿಸಿ, ಮತ್ತೆ ನೆರೆದವರಿಗೆ ಕೇಳ ಬರುವಂತೆ ಸಾರುತ್ತಾನೆ. ಹಿರಿಯರು ನಿಶ್ಚಯಿಸಿದ ಹೆಸರು ಸರ್ವ ಸಾಮಾನ್ಯವಾಗಿ ಕುಟುಂಬದಲ್ಲಿನ, ಗತಿಸಿಕೊಂಡ ಅಜ್ಜ, ಮುತ್ತಜ್ಜರಿಗೆ ಸಂಬಂಧಿಸಿಕೊಂಡಿರುತ್ತಿತ್ತು. ನಾಮಕರಣದ ಬಳಿಕ, ಮಗು ಹುಟ್ಟಿದ ನಂತರದ ಮೂವತ್ತು ದಿನಗಳ ನಡುವಣ ಯಾವುದಾದರೊಂದು ದಿನ, ಮಗುವಿನ ತಾಯಿ ಬಾವಿಯತ್ತ ಬಂದು ಅದರ ಅದರ ಅಡ್ಡ ತೊಲೆಗೆ ಕುಂಕುಮ ಹಚ್ಚಿ, ಆರತಿ ಎತ್ತಿ, ಎಲೆ, ಅಡಿಕೆಗಳನ್ನು ನೀರಿಗೆ ಸಮರ್ಪಿಸುತ್ತಾಳೆ. ಇದಕ್ಕೆ ಜಲದೇವತೆಯ ಪೂಜೆ ಎನ್ನುತ್ತಾರೆ.

ಹುಡುಗನಿಗೆ ಮೂರು ವರ್ಷಗಳಾಗುತ್ತಲೇ ಪುರೋಹಿತರು ನಿಶ್ಚಯಿಸಿದ ಶುಭ ದಿನದಂದು ಆತನ ತಲೆ ಬೋಳಿಸುತ್ತಾರೆ. ಮಾತ್ರ ಸುಮಾರು ಮೂರು ಇಂಚು ಉದ್ದ, ಎರಡು ಇಂಚು ಅಗಲದ ಜುಟ್ಟನ್ನಷ್ಟೆ ಉಳಿಸಲಾಗುತ್ತದೆ. ತಲೆ ಬೋಳಿಸುವ ಮುನ್ನ ಗಣಪತಿ, ವರುಣ ಮತ್ತು ಮಾತೃಕೆಯರನ್ನು ಪೂಜಿಸುತ್ತಾರೆ. ಈ ಸಂದರ್ಭದಲ್ಲಿ ಹೋಮವೊಂದನ್ನು ಮಾಡಲಾಗುತ್ತದೆ. ಈ ವಿಧಿಗಳನ್ನು ಪೂರೈಸದಿದ್ದಲ್ಲಿ ಉಪನಯನದಂದು ಪುರೋಹಿತರಿಗೆ ಹಣವೀಯಬೇಕಾಗುತ್ತದೆ. ಕ್ಷೌರಿಕನಿಗೆ ಅಕ್ಕಿ, ಬೆಲ್ಲ, ತೆಂಗಿನಕಾಯಿ, ನಗದುಹಣ, ಹೊಸಬಟ್ಟೆ, ತಲೆ ವಸ್ತ್ರವನ್ನೀಯುತ್ತಾರೆ. ಹುಡುಗನನ್ನು ಸೋದರ ಮಾವನ, ಆತನ ಅನುಪಸ್ಥಿತಿಯಲ್ಲಿ ತಂದೆಯ ತೊಡೆಯ ಮೇಲಕ್ಕೆ ಕುಳ್ಳಿರಿಸಿ ಆತನ ತಲೆಯನ್ನು ಬೋಳಿಸಲಾಗುತ್ತದೆ. ಸ್ನಾನಾನಂತರ ನೆರೆಕರೆಯ ಮಕ್ಕಳಿಗೆ ಮತ್ತು ಸಂಬಂಧಿಕರಿಗೆ ಮೃಷ್ಟಾನ್ನ ಉಣಬಡಿಸುತ್ತಾರೆ. ಹುಡುಗಿಯರ ತಲೆ ಬೋಳಿಸಲಾಗುತ್ತಿಲ್ಲ.

ವಯಸ್ಸಿನ ಎಂಟು ಮತ್ತು ಹದಿನೆರಡು ವರ್ಷಗಳ ನಡುವಣ ಕಾಲದಲ್ಲಿ ಹುಡುಗನಿಗೆ

ಜನಿವಾರ ತೊಡಿಸಲಾಗುತ್ತದೆ. 'ಯಜ್ಞೋಪವೀತಧಾರಣೆ'ಯ ಸಮಾರಂಭದ ಸುಮಾರು ಎರಡು ವಾರಗಳ ಮೊದಲು ಹುಡುಗನ ಹೆತ್ತವರು ಸಮಾರಂಭದ ಸುದ್ದಿಯನ್ನು ತಮ್ಮ ಸಂಬಂಧಿಕರಿಗೆ, ಮಿತ್ರರಿಗೆ ತಿಳಿಸುತ್ತಾರೆ. ಇವರು ಹುಡುಗನನ್ನು ವಿಶೇಷ ಊಟಕ್ಕಾಗಿ ತಮ್ಮಲ್ಲಿಗೆ ಆಮಂತ್ರಿಸಿ ಆತನಿಗೆ ಬಟ್ಟೆ, ಹಣ ಇತ್ಯಾದಿಗಳ ಉಡುಗೊರೆ ಕೊಡುತ್ತಾರೆ.

ಯಜ್ಞೋಪವೀತ ಧಾರಣಾ ಸಮಾರಂಭದ ಪೂರ್ವಭಾವಿ ವಿಧಿಯೊಂದನ್ನು 'ಕೇಳ್ವಣ್' ಎಂದಾಗಿ ಕರೆಯಲಾಗುತ್ತದೆ. ಕುಟುಂಬದಲ್ಲಿನ ಹಿರಿಯಾತನೊಬ್ಬ, ಮನೆಯಲ್ಲಿನ ಕೆಲವೊಬ್ಬ ಹೆಂಗಸರು, ಪುರೋಹಿತರು, ವಾದ್ಯದವರು ಮುಂತಾದವರೊಂದಿಗೆ ಸಂಬಂಧಿಕರನ್ನು ಮತ್ತು ಮಿತ್ರರನ್ನು ಆಮಂತ್ರಿಸಲಾಗಿ ಹೋಗುತ್ತಾನೆ.

ಯಜ್ಞೋಪವೀತ ಧಾರಣೆಯ ಸಮಾರಂಭವನ್ನು ಸರ್ವ ಸಾಮಾನ್ಯವಾಗಿ ಮಾಘ, ಫಾಲ್ಗುಣ, ಚೈತ್ರ, ವೈಶಾಖ ಅಥವಾ ಜ್ಯೇಷ್ಠ ಮಾಸದಲ್ಲಿ ಜರಗಿಸುತ್ತಾರೆ. ಕಾರ್ಯಾರಂಭದ ಎರಡೊಂದು ತಾಸುಗಳ ಮುನ್ನ ಮಂಟಪದ ಬದಿಯಲ್ಲಿ ಕುಳಿತಿದ್ದ ವಾದ್ಯದವರು ವಾದ್ಯ ನುಡಿಸುತ್ತಾರೆ. ಇನ್ನೊಂದು ಬದಿಯಲ್ಲಿ ನರ್ತಕಿಯರು ನರ್ತನಕ್ಕಾರಂಭಿಸುತ್ತಾರೆ. ಇದು ಸಮಾರಂಭ ಮುಗಿಯುವ ತನಕ ನಡೆಯುತ್ತಿರುತ್ತದೆ. ಅವರೆಲ್ಲರಿಗೆ ಯೋಗ್ಯವಾದ ಬಹುಮಾನವನ್ನೀಯಲಾಗುತ್ತದೆ. ಅತಿಥಿಗಳು ಧಾರ್ಮಿಕ ಕ್ರಿಯಾಚರಣೆಗಳು ಆರಂಭವಾಗುವ ಅರ್ಧತಾಸಿನ ಮುನ್ನ ಬರಲಾರಂಭಿಸುತ್ತಾರೆ. ಯಜ್ಞೋಪವೀತ ಧರಿಸಲಿದ್ದ ಹುಡುಗನಿಗೆ ಪರಿಮಳದ ಎಣ್ಣೆ ಹಚ್ಚಿ, ಬಿಸಿ ನೀರಿನ ಸ್ನಾನ ಹಾಕಿ, ಅಡಿಗೆಯ ಮನೆಗೆ ಕೊಂಡು ಹೋಗುತ್ತಾರೆ. ಅಲ್ಲಿ ಆತ ತಾಯಿಯ ತೊಡೆಗಳ ಮೇಲಕ್ಕೆ ಕುಳಿತು ಆಕೆಯೊಂದಿಗೆ ಅನ್ನ, ಪಲ್ಯ, ಸಿಹಿತಿಂಡಿ ಇತ್ಯಾದಿಗಳನ್ನು ತಿನ್ನುತ್ತಾನೆ; ಅನ್ಯರು ರುಚಿ ನೋಡಿದ ಖಾದ್ಯ ಪದಾರ್ಥಗಳನ್ನು ಆತ ಕೊನೆಯ ಬಾರಿಗೆಂಬಂತೆ ತಿನ್ನುತ್ತಾನೆ. ಅನಂತರ ಸೋದರ ಮಾವ ಆತನನ್ನು ಪ್ರತ್ಯೇಕವಾದ ಜಾಗಕ್ಕೆಕೊಂಡು ಹೋಗಿ ಆತ ಉಟ್ಟ ಬಟ್ಟೆಯನ್ನು ತೆಗೆದುಹಾಕುತ್ತಾನೆ. ತಂದೆ ಕ್ಷೌರದ **ಕತ್ತಿ**ಕೊಂಡು ಹುಡುಗನ ತಲೆಯ ಭಾಗವೊಂದರಿಂದ ಸ್ವಲ್ಪ ಕೂದಲನ್ನು ತೆಗೆದು ಅದನ್ನು ದರ್ಭೆ, ಶಮೀಪತ್ರ, ಅಕ್ಕಿ, ಗೋಧಿ, ಧಾನ್ಯ ಮುಂತಾದವುಗಳೊಂದಿಗೆ ತಾಯಿಯ ಕೈಗಳಿಗೀಯುತ್ತಾನೆ. ತಾಯಿ ಅದನ್ನು ಮಂಟಪದ ಮೂಲೆಯಲ್ಲಿನ ಎತ್ತಿನ ಸೆಗಣಿಯ ಮುದ್ದೆಯ ಮೇಲಿಕ್ಕಿರಿಸುತ್ತಾಳೆ. ಈ ಕಾರ್ಯಕ್ಕಾಗಿ ಸೆಗಣಿಯ ಮುದ್ದೆಯೊಂದನ್ನು ಅಲ್ಲಿ ಇಟ್ಟಿರಲಾಗುತ್ತದೆ. ಕ್ಷೌರಿಕ ಅನಂತರ ಹುಡುಗನ ತಲೆಯ ಜುಟ್ಟನ್ನು ಬಿಟ್ಟು ಇನ್ನುಳಿದ ಭಾಗವನ್ನು ಬೋಳಿಸುತ್ತಾನೆ. ಹುಡುಗನಿಗೆ ಮತ್ತೊಮ್ಮೆ ಸ್ನಾನ ಹಾಕಿ ಆತನನ್ನು ಮಂಟಪಕ್ಕೆ ತಂದು ವೇದಿಕೆಯ ಸಮೀಪ ಪೂರ್ವ ದಿಕ್ಕಿಗೆ ಮುಖ ಮಾಡಿಸಿ ಕುಳ್ಳಿರಿಸುತ್ತಾರೆ. ಆತನ ತಂದೆ ಬಲಭಾಗದಲ್ಲಿ ಮತ್ತು ಪುರೋಹಿತರು ಎದುರಿಗೆ ಕುಳಿತುಕೊಳ್ಳುತ್ತಾರೆ. ಅನಂತರ ಪುರೋಹಿತರು ಗ್ರಹಶಾಂತಿಗಾಗಿ ಹೋಮ ಮಾಡುತ್ತಾರೆ. ಹುಡುಗನನ್ನು ಮತ್ತು ಆತನ ತಂದೆಯನ್ನು ವೇದಿಯ ಮೇಲೆ ಕುಳ್ಳಿರಿಸಿ ಸಮಿಧೆ, ತುಪ್ಪ ಬಳಸಿ ಉಪನಯನದ ಹೋಮಾಗ್ನಿ ಪ್ರಜ್ವಲಿಸುತ್ತಾರೆ.

ಹುಡುಗ ತಂದೆಯ ಮುಂದೆ ಅಡ್ಡ ಬಿದ್ದು, ಆತನ ಪಾದಗಳನ್ನು ಮುಟ್ಟಿ ತನಗೆ

ಬ್ರಾಹ್ಮಣನ ಕರ್ತವ್ಯಗಳ ಜ್ಞಾನವೀಯುವಂತೆ ಪ್ರಾರ್ಥನೆ ಮಾಡುತ್ತಾನೆ. ತಂದೆ ಹುಡುಗನನ್ನು ತನ್ನ ತೊಡೆಯ ಮೇಲಕ್ಕೆ ಕುಳ್ಳಿರಿಸಿ, ತನ್ನ ಮತ್ತು ಹುಡುಗನ ತಲೆಯ ಮೇಲಕ್ಕೆ ಬಿಳಿ ಬಟ್ಟೆಯ ಮುಸುಕನ್ನೆಳೆದು ಆತನ ಕಿವಿಗಳಲ್ಲಿ ಸೂರ್ಯದೇವನ ಕುರಿತಾದ ಅತಿಮಹತ್ತಿನ ಗಾಯತ್ರಿ ಮಂತ್ರವನ್ನು ನುಡಿಯುತ್ತಾನೆ. ಅನಂತರ ಪುರೋಹಿತರು ದರ್ಭೆ ಹುಲ್ಲಿನಿಂದ ಮಾಡಿದ ದಾರವನ್ನು ವಟುವಿನ ನಡುವಿಗೆ ಕಟ್ಟುತ್ತಾರೆ; ಜನಿವಾರವನ್ನು ಎಡಭುಜದ ಮೇಲಿನಿಂದಾಗಿ ತೊಡಿಸುತ್ತಾರೆ. ಇನ್ನೊಂದು ದಾರವನ್ನು ಪಲಾಶದ ದಂಡಕ್ಕೆ ಸುತ್ತಿ ವಟುವಿನ ತಂದೆಗೊಪ್ಪಿಸುತ್ತಾರೆ. ಆತ ಅದನ್ನು ವಟುವಿನ, ಕೈಗಳಿಗಿತ್ತು, ಬ್ರಾಹ್ಮಣನಾದ ಆತ ಆ ಮೊದಲ್ಗೊಂಡು ಭಿಕ್ಷೆ ಬೇಡಿ ತನ್ನ ಉದರಂಭರಣ ಮಾಡಬೇಕಾಗಿರುವುದಾಗಿ ನುಡಿಯುತ್ತಾನೆ. ಪುರೋಹಿತರು ವಟುವನ್ನು ಆಶೀರ್ವದಿಸುತ್ತಾರೆ. ವಟು ಒಂದು ಕೈಯಲ್ಲಿ ಪಲಾಶದ ದಂಡವನ್ನೂ, ಇನ್ನೊಂದು ಕೈಯಲ್ಲಿ ಹರಿವಾಣಕೊಂಡು ''ಭವತಿ ಭಿಕ್ಷಾಂ ದೇಹಿ'' ಎಂದು ಭಿಕ್ಷೆ ಬೇಡುತ್ತಾನೆ. ಮೊದಲು ವಟುವಿನ ತಾಯಿ ಅಕ್ಕಿ ಮತ್ತು ಬಿಡಿಕಾಸುಗಳನ್ನು ಹರಿವಾಣದಲ್ಲಿ ಹಾಕುತ್ತಾಳೆ. ಅನಂತರ ಆಮಂತ್ರಿಸಲ್ಪಟ್ಟ ಅತಿಥಿಗಳು ವಟುವಿನ ಹರಿವಾಣಕ್ಕೆ ಹಣವನ್ನು ಹಾಕುತ್ತಾರೆ. ತಾಯಿ ಹಾಕಿದ ಭಿಕ್ಷೆಯನ್ನು ಪುರೋಹಿತರಿಗೀಯಲಾಗುತ್ತದೆ. (ಉಳಿದುದನ್ನು ವಟು ಮೊದಲ ಸಂಪಾದನೆಯೆಂದು ತನ್ನೊಂದಿಗಿಟ್ಟುಕೊಂಡು ಅದರಿಂದ ಆಭರಣಗಳನ್ನು ತಯಾರಿಸಿ ಧರಿಸುತ್ತಾನೆ). ಆತನ ಅಕ್ಕ, ತಂಗಿಯಂದಿರು ಹಾಗೂ ಅತಿಥಿಗಳಲ್ಲಿನ ಸ್ತ್ರೀಯರು ಆತನಿಗೆ ಆರತಿಯೆತ್ತುತ್ತಾರೆ. ಸಮಾರಂಭಕ್ಕೆ ಬಂದ ಬ್ರಾಹ್ಮಣರಿಗೆ ಯಥೋಚಿತ ದಕ್ಷಿಣೆಯೀಯಲಾಗುತ್ತದೆ. ಅತಿಥಿಗಳಿಗೆ ಮಿಠಾಯಿ ಅಥವಾ ಸಕ್ಕರೆ ಪೊಟ್ಟಣ, ಬಾಳೆಯ ಹಣ್ಣು, ಅಡಿಕೆ, ವೀಳ್ಯದೆಲೆ, ಸುಣ್ಣ ಇತ್ಯಾದಿಗಳನ್ನೀಯುವುದರೊಂದಿಗೆ ಸಮಾರಂಭದ ಸಾಂಗತ್ಯವಾಗುತ್ತದೆ. ಕೆಲವೊಮ್ಮೆ ಅತಿಥಿಗಳಿಗೆ ಮೃಷ್ಟಾನ್ನ ಭೋಜನ ಬಡಿಸಲಾಗುತ್ತದೆ.

ಧಾರ್ಮಿಕ ವಿಧಿ ವಿಧಾನಗಳ ಆಚರಣೆಗಾಗಿ ಉಪವಾಸ ಮಾಡಿದ್ದ ಪುರೋಹಿತರಿಗೆ ರಾತ್ರಿಯ ಭೋಜನವೀಯಲಾಗುತ್ತದೆ.

ಸಾಯಂಕಾಲ ವಟುವಿಗೆ ಸ್ನಾನ ಮಾಡಿಸುತ್ತಾರೆ. ಹೊಸದಾಗಿ ಬ್ರಾಹ್ಮಣ್ಯ ಕೊಂಡ ವಟು 'ಮುಖಾಂತ್ಯ' ಹೋಮ ಮಾಡುತ್ತಾನೆ. ಅನಂತರ ವಟುವಿನ ತಂದೆ, ವಟು ಮತ್ತು ಬ್ರಾಹ್ಮಣರು ಒಟ್ಟಿಗೆ ಕುಳಿತು ಊಟ ಮಾಡುತ್ತಾರೆ. ಕೊನೆಗೆ ಬ್ರಾಹ್ಮಣರಿಗೆ ಬಹುಮಾನವೀಯಲಾಗುತ್ತದೆ. ಮುಂದಿನ ಮೂರು ದಿನಗಳ ಕಾಲ ವಟು ಧರ್ಮನಿಷ್ಠ ಭಿಕ್ಷುಕನಂತೆ ವರ್ತಿಸುತ್ತಾನೆ. ನಾಲ್ಕನೆಯ ದಿನದಂದು ಬೆಳಗಿನ ಹವನದ ನಂತರ ವಟುವಿಗೆ ಹೊಸ ಮುಂಡು, ಅಂಗಿ ತೊಡಿಸುತ್ತಾರೆ. ಮತ್ತೆ ಆತ 'ಪಲಾಶದಂಡ' ದೊಂದಿಗೆ ಕಾಶಿ ಯಾತ್ರೆಗೆ ಹೊರಡುತ್ತಾನೆ. ತುಸು ದೂರ ದಾರಿ ಸಾಗುತ್ತಲೇ ಸೋದರ ಮಾವ ತನ್ನ ಮಗಳನ್ನು ಮದುವೆ ಮಾಡಿ ಕೊಡುವ ಆಮಿಷ ತೋರಿ ಆತನನ್ನು ಯಾತ್ರೆಯ ನಿರ್ಧಾರದಿಂದ ಪರಾವೃತ್ತನನ್ನಾಗಿಸುತ್ತಾನೆ. ಆತ ಮರಳುತ್ತಲೇ ಪುರೋಹಿತರಿಗೆ ಜೋಡು ಬಟ್ಟೆಯನ್ನೀಯುತ್ತಾರೆ. 'ದಂಡ'ಕ್ಕಾಗಿ ಬಳಸಿದ ಪಲಾಶದ ಟೊಂಗೆಯನ್ನು ಅಡಿಚದರಳತೆಯ ಮಡಿಯಲ್ಲಿ ನೆಡುತ್ತಾರೆ. ಅದರ ಪಕ್ಕದಲ್ಲಿ ಹೊಸಬಟ್ಟೆ, ಜೋಡಿ ವೀಳ್ಯದೆಲೆ ಅಡಿಕೆ

ಮುಂತಾದವುಗಳನ್ನು ಇಡಲಾಗುತ್ತದೆ. ಪೂಜೆಯ ನಂತರ ಇವನ್ನು ಪುರೋಹಿತರಿಗೀಯುತ್ತಾರೆ. ಇದರೊಂದಿಗೆ ಯಜ್ಞೋಪವೀತ ಧಾರಣೆಯ ಕಾರ್ಯಕ್ರಮ ಮುಗಿಯುತ್ತದೆ. ಆ ಬಳಿಕ ಸ್ವಜಾತಿಯ ಬಾಂಧವರಿಗೆ ಮೃಷ್ಟಾನ್ನ ಬಡಿಸುತ್ತಾರೆ. ಉಣ್ಣಲು ಆರಂಭಿಸುವ ಮುನ್ನ ಗಂಡಸರು ತಮ್ಮ ಎಲೆಯ ಬಲಭಾಗದಲ್ಲಿ, ಒಂದರ ಹಿಂದೆ ಇನ್ನೊಂದರಂತೆ, ಚಿಟಿಕೆ ಅನ್ನವನ್ನು ಐದು ಬಾರಿ ಇಡುತ್ತಾರೆ. ಅನ್ನದ ಐದು ಚಿಟಿಕೆಗಳನ್ನು ಯಮದೂತರ ಪ್ರೀತ್ಯರ್ಥ ಇಡಲಾಗುತ್ತಿದ್ದು ಹೀಗೆ ಮಾಡದಲ್ಲಿ ತಾವು ಉಣ್ಣುವ ಅನ್ನವನ್ನು ಅವರು ದೂಷಿತಗೊಳಿಸುವರೆಂಬ ನಂಬಿಕೆಯಿದೆ. ಇದು ಈ ಸಮಾರಂಭದ ಕೊನೆಯ ವಿಧಿಯಾಗಿದೆ.

ಗಂಡು ಮಕ್ಕಳ ವಿವಾಹವನ್ನು ವಯಸ್ಸಿನ ಏಳರಿಂದ ಹದಿನೇಳರ ನಡುವೆ ಮತ್ತು ಹೆಣ್ಣು ಮಕ್ಕಳ ವಿವಾಹವನ್ನು ಆರರಿಂದ ಹನ್ನೊಂದರೊಳಕ್ಕೆ ಜರಗಿಸಲಾಗುತ್ತದೆ. ಹೆಣ್ಣಿನ ಹೆತ್ತವರು ಗಂಡಿನ ಹೆತ್ತವರೊಂದಿಗೆ ಏಕಾಂತದಲ್ಲಿ ಮದುವೆಯ ಪ್ರಸ್ತಾವವನ್ನೆತ್ತಿ ಗಂಡಿನ ಜಾತಕದ ಪ್ರತಿಯನ್ನು ವರ ಸಾಮ್ಯ ನೋಡಲಾಗಿಕೊಳ್ಳುತ್ತಾರೆ. ಕುಟುಂಬದ ಪುರೋಹಿತರು ಅಥವಾ ಜೋಯಿಸರು ಜಾತಕದ ಹೊಂದಿಕೆ ನೋಡುತ್ತಾರೆ. ಜಾತಕಗಳು ಹೊಂದಿಕೊಂಡು ಬಂದಲ್ಲಿ, ಹುಡುಗನ ಹೆತ್ತವರೊಂದಿಗೆ ವಿವಾಹದ ಪ್ರಸ್ತಾಪವೆತ್ತುತ್ತಾರೆ. ವಧೂವರರ ಹೆತ್ತವರು ವರದಕ್ಷಿಣೆ, ವರನಿಗೀಯ ಬೇಕಿರುವ ಉಡುಗೊರೆಗಳು, ವಧುವಿನ ಸ್ತ್ರೀಧನ ಇತ್ಯಾದಿಗಳನ್ನು ನಿಶ್ಚಯಿಸುತ್ತಾರೆ. ಒಂದು ಸಾಯಂಕಾಲ ಹುಡುಗನ ಹೆತ್ತವರು ತಮ್ಮ ಹತ್ತಿರದ ಮಿತ್ರರು, ಸಂಬಂಧಿಕರು ಮತ್ತು ಪುರೋಹಿತರು ಮುಂತಾದವರೊಂದುಗೂಡಿ ಹುಡುಗಿಯ ಮನೆಗೆ ಹೋಗಿ ಅಲ್ಲಿ ಆಕೆಯನ್ನು ಹೂವಿನಿಂದ ಸಿಂಗರಿಸುತ್ತಾರೆ. ಈ ಕಾರ್ಯಕ್ರಮಕ್ಕೆ ನಿಶ್ಚಿತಾರ್ಥ, 'ಸೋಯ್ರೀಕ್' ಎನ್ನುತ್ತಾರೆ. ಆನಂತರ ಅತಿಥಿಗಳಿಗೆ ಉಪಾಹಾರವೀಯಲಾಗುತ್ತದೆ.

ನಿಶ್ಚಿತಾರ್ಥ ಮತ್ತು ಮದುವೆಯ ದಿನಗ ನಡುವೆ ನಿಶ್ಚಿತ ಕಾಲಾವಧಿಯಿರುತ್ತಿದ್ದಿಲ್ಲ. ವಿವಾಹಕ್ಕೆ ದಿನವನ್ನು ನಿಶ್ಚಯಿಸಿದ ನಂತರ ವಧೂವರರ ಮನೆಗಳಲ್ಲಿ ವಿಶಾಲವಾದ ಸಭಾಮಂಟಪವನ್ನು ಸಿದ್ಧಗೊಳಿಸುತ್ತಾರೆ. ವಧುವಿನಲ್ಲಿನ ಸಭಾಮಂಟಪದ ನಡುವೆ ಪೂರ್ವಾಭಿಮುಖವಾಗಿ ವೇದಿಕೆ ಅಥವಾ ಸುಂದರವಾದ ಇನ್ನೊಂದು ಮಂಟಪವನ್ನು ನಿರ್ಮಿಸಲಾಗುತ್ತದೆ. ತೆಂಗಿನಕಾಯಿ ಮತ್ತು ಮಾವಿನೆಲೆಗಳ ಗೊಂಚಲನ್ನು ಕಟ್ಟಿದ ಕಂಭವೊಂದನ್ನು ಸಭಾಮಂಟಪದ ನೈಋತ್ಯ ಭಾಗದಲ್ಲಿ ಊರಿ, ಪುರೋಹಿತರು ಸೂಚಿಸಿದ ಶುಭ ಮುಹೂರ್ತದಲ್ಲಿ ಮಂಟಪದ ನಿರ್ಮಾಣ ಕಾರ್ಯಕ್ಕೆ ತೊಡಗುತ್ತಾರೆ. ಮದುವೆಯ ಮೊದಲ ದಿನದ ತನಕ ನೆಂಟರಿಷ್ಟರು ಭಾವೀ ವಧೂವರರನ್ನು ತಮ್ಮಲ್ಲಿಗೆ ಆಮಂತ್ರಿಸಿ ರಸದೂಟ ಬಡಿಸುತ್ತಾರೆ. ಮದುವೆಯ ಮುಂಚಿನ ದಿನ ಕುಲದೇವರನ್ನು ಪ್ರಸನ್ನಗೊಳಿಸಲಾಗಿ ಮುಂಜಾನೆ 'ದೇವಕಾರ್ಯ' ಮಾಡುತ್ತಾರೆ. ಮತ್ತು ಗಣಪತಿಯ ಪ್ರೀತ್ಯರ್ಥ ಧಾನ್ಯ ಅಥವಾ ಉದ್ದಿನ ವ್ರತಾಚರಣೆ ಪೂರೈಸುತ್ತಾರೆ. ಈ ವ್ರತಾಚರಣೆಯನ್ನು ವಧೂವರರಿಬ್ಬರ ಮನೆಯಲ್ಲಿ ಸ್ವತಂತ್ರವಾಗಿ ಪೂರೈಸಲಾಗುತ್ತದೆ.

ಮದುವೆಯ ಮೊದಲಿನ ದಿನದ ಸಾಯಂಕಾಲ ವರ ತನ್ನ ಮಿತ್ರರು (ಗಂಡು, ಹೆಣ್ಣು) ಸಂಬಂಧಿಕರು, ಪುರೋಹಿತರು ಮುಂತಾದವರೊಂದಿಗೆ ಹಳ್ಳಿಯ ಸರಹದ್ದನ್ನು ದಾಟಿ, ತುಸು ದೂರ ಸಾಗಿ, ಅಲ್ಲಿಂದ ಮೆರವಣಿಗೆಯೊಂದಿಗೆ ಮರಳುತ್ತಾನೆ. ಸರಹದ್ದಿನಲ್ಲಿ ಇದೇ ರೀತಿಯಲ್ಲಿ ಬಂದ ವಧುವಿನ ಪಕ್ಷದವರ ಭೇಟಿಯಾಗುತ್ತದೆ. ವಧುವಿನ ತಂದೆ ಹಾಸಿಟ್ಟಿದ್ದ ಚಾಪೆಗಳಲ್ಲಿ ಎರಡೂ ಪಕ್ಷಗಳ ಜನರು ಕುಳಿತುಕೊಳ್ಳುತ್ತಾರೆ. ವಧುವಿನ ತಂದೆ ವರನ ಕಾಲುಗಳನ್ನು ತೊಳೆದು ಗಂಧ, ಸುಗಂಧಿತ ತೈಲ ಹಚ್ಚಿ, ಮಂಗಲಾಕ್ಷತೆಯೊಂದಿಗಿನ ತಿಲಕ ಹಚ್ಚುತ್ತಾನೆ. ಮತ್ತೆ ಅವರೆಲ್ಲರೂ ವರನ ಮನೆಗೆ ಹೋಗುತ್ತಾರೆ. ವಧುವಿನ ತಂದೆ ಅಲ್ಲಿ ನೆರೆದಿದ್ದ ಎಲ್ಲರಿಗೂ ಮಿಠಾಯಿ, ಅಡಕೆ ಹಂಚುತ್ತಾನೆ. ಈ ಕಾರ್ಯಕ್ರಮಕ್ಕೆ 'ಸೀಮಾಂತ ಪೂಜೆ'ಯೆನ್ನುತ್ತಾರೆ.

ಮದುವೆಯ ದಿನದ ಮುಂಜಾನೆ ವಧು ಮತ್ತು ವರನ ಮನೆಗಳಲ್ಲಿ ವಾದ್ಯದವರು ವಾದ್ಯ ನುಡಿಸುತ್ತಾರೆ. ವಧು ಮತ್ತು ವರನಿಗೆ ಅರೆದ ಅರಿಸಿನ ಹಚ್ಚಿ ಬಿಸಿನೀರಿನ ಸ್ನಾನ ಹಾಕುತ್ತಾರೆ. ಪುರೋಹಿತರು ಅಕ್ಕಿಯ ನಾಲ್ಕು ಚಿಕ್ಕ ಕುಪ್ಪೆಗಳನ್ನು ಮಾಡಿ, ಮೊದಲ ಕುಪ್ಪೆಯ ಮೇಲೆ ಗಣಪತಿಯನ್ನು ಪ್ರತಿನಿಧಿಸುವ ತೆಂಗಿನ ಕಾಯಿಯನ್ನೂ, ಎರಡನೆಯ ಕುಪ್ಪೆಯ ಮೇಲೆ ಗಣಪತಿಯ ಪತ್ನಿಯರಾದ ಸಿದ್ಧಿ, ರಿದ್ಧಿಯರನ್ನು ಪ್ರತಿನಿಧಿಸಲಾಗಿ ಎರಡು ವೀಳ್ಯದೆಲೆ, ಅಡಕೆಗಳನ್ನಿಡುತ್ತಾರೆ. ಉಳಿದೆರಡು ಕುಪ್ಪೆಗಳಲ್ಲಿನ ಒಂದರ ಮೇಲಕ್ಕೆ ಜಲದೇವತೆ ಅಥವಾ ವರುಣನನ್ನು ಪ್ರತಿನಿಧಿಸುವ ನೀರು ತುಂಬಿದ್ದ ತಾಮ್ರದ ಬಿಂದಿಗೆಯನ್ನಿಡುತ್ತಾರೆ.

ಬಿಂದಿಗೆಯ ಬಾಯಿಯತ್ತ ಇಟ್ಟ ಮಾವಿನ ಎಲೆಗಳ ನಡುವೆ ತೆಂಗಿನಕಾಯಿ ಇಡುತ್ತಾರೆ. ಬಿಂದಿಗೆಯೊಳಕ್ಕೆ ಅಡಕೆ, ಬೆಳ್ಳಿಯ ನಾಣ್ಯಗಳನ್ನು ಹಾಕುತ್ತಾರೆ. ಎರಡು ಅಡಕೆ, ವೀಳ್ಯದೆಲೆಗಳು, ಕೆಲವೊಂದು ತೆಂಗಿನಕಾಯಿಗಳು, ಎರಡು ಬೆಳ್ಳಿಯ ನಾಣ್ಯಗಳು ಇತ್ಯಾದಿಗಳನ್ನು ಈ ಕುಪ್ಪೆಯ ಸಮೀಪ ಇಡುತ್ತಾರೆ. ಅಕ್ಕಿಯ ನಾಲ್ಕನೆಯ ಕುಪ್ಪೆಯನ್ನು ಚಪ್ಪಟೆ ಬುಡದ ಬುಟ್ಟಿಯೊಂದರಲ್ಲಿ ಇಡಲಾಗುತ್ತದೆ. ಈ ಕುಪ್ಪೆಯ ಮೇಲಕ್ಕೆ ಮಾತೃಕೆಯರನ್ನು ಪ್ರತಿನಿಧಿಸುವ ೨೮ ಅಡಕೆಗಳು, ಒಂದು ತೆಂಗಿನಕಾಯಿ, ಎರಡು ವೀಳ್ಯದೆಲೆಗಳು, ಗಾಜಿನ ಎರಡು ಬಳೆಗಳು, ಮರದ ಬಾಚಣಿಗೆ, ಕುಂಕುಮ, ಅರಿಸಿನ ಹುಡಿ, ಕಾಡಿಗೆ ಇತ್ಯಾದಿಗಳನ್ನು ಕೊಂಡ ಮೂರು ಸಣ್ಣ ತಟ್ಟೆಗಳು ಮತ್ತು ಸೀರೆ ಅಥವಾ ರವಕೆಯ ಬಟ್ಟೆಯನ್ನಿಡಲಾಗುತ್ತದೆ. ಇವೆಲ್ಲವುಗಳನ್ನು ದೇವಿಯರ ಅಥವಾ ಮಾತೃಕೆಯರ ಅನುಗ್ರಹ ಪ್ರಾಪ್ತಿಗಾಗಿ ಪೂಜಿಸಲಾಗುತ್ತದೆ. ಮತ್ತು ಮಂಟಪ ದೇವತೆಯ ಅನುಗ್ರಹ ಪ್ರಾಪ್ತಿಗಾಗಿ ಮಾತೃಕೆಯ ಕುಪ್ಪೆಯ ಬಳಿ ಇಟ್ಟಿದ್ದ ಚಪ್ಪಟೆ ಬುಡದ ಬುಟ್ಟಿಯೊಳಕ್ಕೆ ಹತ್ತಿಯ ನೂಲಿನಿಂದ ಕಟ್ಟಿದ್ದ, ಮಾವಿನೆಲೆಗಳನ್ನು ಕೊಂಡ, ಅತ್ತಿ ಮರದ ಟೊಂಗೆಯನ್ನಿಡಲಾಗುತ್ತದೆ. ವಕ್ರದೃಷ್ಟಿಯ ದೋಷದ ನಿವಾರಣೆಗಾಗಿ ಅಕ್ಕಿ ತುಂಬಿದ್ದ ಮಣ್ಣಿನ ಹೊಸ ಮಡಕೆ ಮತ್ತು ಅರಿಸಿನ ತುಂಡನ್ನು ಬುಟ್ಟಿಯಲ್ಲಿಟ್ಟು ಪೂಜಿಸಲಾಗುತ್ತದೆ. ಇದಕ್ಕೆ ಅನಿಷ್ಟವನ್ನು ದೂರಮಾಡುವ ಸಾಂಕೇತಿಕ ಕ್ರಿಯೆ ಅಥವಾ 'ಅವಿಘ್ನ ಸಂಜ್ಞಕ' ಎನ್ನಲಾಗುತ್ತದೆ. ಅಕ್ಕಿಯ ಕುಪ್ಪೆಗಳಿಗೆ ಆರತಿ ಎತ್ತಿ, ಬುಟ್ಟಿಯೊಳಗಣ ವಸ್ತುಗಳನ್ನು ಮನೆಯೊಳಕ್ಕೆ ಕೊಂಡೊಯ್ಯಲಾಗುತ್ತದೆ. ಅನ್ಯ ಕುಪ್ಪೆಗಳನ್ನು ಅವುಗಳ ಮೇಲಿಟ್ಟ ಸಾಹಿತ್ಯಗಳೊಂದಿಗೆ ಬುಟ್ಟಿಯೊಂದರಲ್ಲಿಟ್ಟು ದೇವರ ಕೋಣೆಗೆ

ಕೊಂಡುಹೋಗುತ್ತಾರೆ; ಮತ್ತೆ ಅದರಲ್ಲಿನ ಸ್ವಲ್ಪ ಅಕ್ಕಿಯನ್ನು ನೆಲದ ಮೇಲೆ ಸಿಂಪಡಿಸಿ ಬಿಟ್ಟಿಯನ್ನು ಅರ್ಪಿಸಲಾಗುತ್ತದೆ. ಅನಂತರ ಪಕ್ವಾನ್ನವನ್ನರ್ಪಿಸಿ, ಒಂಭತ್ತು ಬ್ರಾಹ್ಮಣರಿಗೆ ಭೋಜನವನ್ನಿತ್ತು, ಪೂರ್ವಜರನ್ನು ಒಲಿಸಿಕೊಳ್ಳಲಾಗುತ್ತದೆ. ಇದಕ್ಕೆ 'ನಾಂದಿ ಶ್ರಾದ್ಧ' ಎನ್ನುತ್ತಾರೆ.

ಪುರೋಹಿತರು ನಿರ್ಧರಿಸಿದ ಶುಭ ಮುಹೂರ್ತದಲ್ಲಿ ಮುಂಡು ಉಟ್ಟು, ಭುಜದ ಮೇಲೆ ಶಾಲು ಹಾಕಿ, ಕಡು ಕೆಂಪು ಬಣ್ಣದ ರೇಶ್ಮೆಯ ಬಟ್ಟೆಯ ಮುಂಡಾಸು ಕಟ್ಟಿಕೊಂಡು, ಬಾಸಿಂಗ ಧರಿಸಿದ್ದ ವರ ತನ್ನ ಮಿತ್ರರು, ಸಂಬಂಧಿಕರು, ಪುರೋಹಿತರು, ನರ್ತಕಿಯರು, ವಾದ್ಯದವರು ಮುಂತಾದವರೊಂದಿಗಿನ ಮೆರವಣಿಗೆಯೊಂದಿಗೆ ವಧುವಿನ ಮನೆಗೆ ಹೋಗುತ್ತಾನೆ. ವರನ ತಾಯಿ ಬೆಳಗುತ್ತಿರುವ ಪಂಚ ದೀಪಗಳ ಹರಿವಾಣಕೊಂಡು ಅವರೊಂದಿಗೆ ಹೋಗುತ್ತಾಳೆ. ಇವರನ್ನು ವಧುವಿನ ಹೆತ್ತವರು ತಮ್ಮ ಮನೆಯ ಮುಂದೆ ಎದುರುಗೊಳ್ಳುತ್ತಾರೆ. ವಧುವಿನ ತಂದೆ ವರನ ಕಾಲುಗಳನ್ನು ತೊಳೆಯುತ್ತಾನೆ. ತಾಯಿ ಆತನಿಗೆ ಆರತಿ ತೋರುತ್ತಾಳೆ. ಅನಂತರ ವಧುವಿನ ತಂದೆ ವರನ ಬಲಕೈಯನ್ನು ಹಿಡಿದು ಮಂಟಪ ಅಥವಾ ವೇದಿಕೆಯತ್ತ ಕೊಂಡುಹೋಗಿ, ಆಸನದಲ್ಲಿ ಕುಳ್ಳಿರಿಸಿ, ವಧುವಿನ ತಾಯಿ ನೀರೆರೆಯುತ್ತಿದ್ದಂತೆ, ವಧುವಿನ ತಂದೆ ಮಗುದೊಮ್ಮೆ ಆತನ ಕಾಲುಗಳನ್ನು ತೊಳೆಯುತ್ತಾನೆ. ಅನಂತರ ವರನ ಕತ್ತಿಗೆ ಗಂಧ ಹಚ್ಚುತ್ತಾನೆ; ಪನ್ನೀರು ಸಿಂಪಡಿಸಿ, ಬೆಲೆ ಬಾಳುವ ಬಟ್ಟೆಯಿಂದ ತಯಾರಿಸಲಾದ ಪೋಷಾಕನ್ನೀಯುತ್ತಾನೆ. ವಧುವಿನ ಹೆತ್ತವರು ಆ ಬಳಿಕ ತಮ್ಮ ಹಿರಿಯ ಅಳಿಯನಿಗೂ ಗಂಧ, ಅತ್ತರು ಹಚ್ಚಿ ಹೊಸ ಬಟ್ಟೆಯ ಉಡುಗೊರೆಯೊಯುತ್ತಾರೆ.

ವಧೂವರರ ನಡುವೆ ಬಿಳಿ ಬಟ್ಟೆಯ ಅಂತಃಪಟವನ್ನು ಹಿಡಿಯುತ್ತಾರೆ. ವರ ಅಂತಃಪಟದ ಎದುರು ನಿಂತಿದ್ದಂತೆ ವಧುವಿನ ಸೋದರಮಾವ ವಧುವನ್ನು ಸಭಾ ಮಂಟಪದ ನಡುವಿನಿಂದಾಗಿ ಎತ್ತಿಕೊಂಡು ಅಥವಾ ಅವಳಿಗೆ ದಾರಿಮಾಡಿಕೊಟ್ಟು, ಮಂಟಪಕ್ಕೆ ತಂದು ಅಂತಃಪಟದ ಇನ್ನೊಂದು ಬದಿಯಲ್ಲಿ ವರನ ಎದುರಿಗೆ ನಿಲ್ಲಿಸುತ್ತಾನೆ. ನೆರೆದ ಬ್ರಾಹ್ಮಣರು ಮಂಗಳಾಷ್ಟಕ ಉಚ್ಚರಿಸುತ್ತಿರುವಾಗ ಅವರಲ್ಲಿನೊಬ್ಬಾತ ಮಂಟಪ ಅಥವಾ ವೇದಿಕೆಯ ಸಮೀಪ ರಂಗೋಲಿಯ ಚೌಕಾಕಾರದ ನಡುವಣ ಘಟಿಕಾಪಾತ್ರದತ್ತ ಲಕ್ಷ್ಯವಿಡುತ್ತಾನೆ. ಮುಹೂರ್ತದ ಗಳಿಗೆ ಸಮೀಪಿಸುತ್ತಿದ್ದಂತೆ, ಪುರೋಹಿತರ ಸನ್ನೆಯನ್ನನುಸರಿಸಿ ವಾದ್ಯದವರು ಗುಲ್ಲುಗದ್ದಲದ ವಾದ್ಯ ನುಡಿಸುತ್ತಾರೆ. ಪುರೋಹಿತರು ಪ್ರಸಂಗೋಚಿತ ಪಾಠದ ಪಠನಾನಂತರ "ಸಾವಧಾನ" (ಎಚ್ಚರಿಕೆ) ಎನ್ನುತ್ತಲೇ ನೆರೆದ ಬ್ರಾಹ್ಮಣರು ಮತ್ತು ಅತಿಥಿಗಳು ವಧೂವರರ ಮೇಲಕ್ಕೆ ಅಕ್ಷತೆ ಹಾಕುತ್ತಾರೆ. ಸುನಿಶ್ಚಿತ ಅವರ್ತನೆಗಳ ಕೊನೆಗೆ ಅಂತಃಪಟವನ್ನು ಸರಿಸಲಾಗುತ್ತದೆ. ಪುರೋಹಿತರು ವಧೂವರರ ಕೈಗಳಿಗಿತ್ತ ಹೂಮಾಲೆಗಳನ್ನು ಒಬ್ಬರಿನ್ನೊಬ್ಬರಿಗೆ ಹಾಕುತ್ತಾರೆ. ಆ ಬಳಿಕ ವಧುವಿನ ಹೆತ್ತವರು ಮಂಟಪಕ್ಕೆ ಏರಳುತ್ತಾರೆ. ವಧುವಿನ ತಂದೆ ವಧೂವರರ ಬಲಕೈಗಳನ್ನೊಂದು-ಗೂಡಿಸುತ್ತಾನೆ. ವಧುವಿನ ತಾಯಿ ಈ ಕೈಗಳ ಮೇಲೆ ನೀರಿನ ಧಾರೆ ಬಿಡುತ್ತಾಳೆ. ಸುರಿಯುವ ನೀರನ್ನು ಹರಿವಾಣದಲ್ಲಿ ಹಿಡಿದು ವಿಧಿ ಮುಗಿಯುತ್ತಲೇ ಅದನ್ನು ತೆಂಗಿನ ಮರದ ಬುಡಕ್ಕೆರೆಯುತ್ತಾಳೆ. ಪುರೋಹಿತರು ವಧೂವರರ ಮುತ್ತಜ್ಜ, ಅಜ್ಜ, ತಂದೆ, ತಾಯಂದಿರ

ಕುಲಗೋತ್ರಗಳನ್ನು ಉಚ್ಚರಿಸುತ್ತಾರೆ. ಮತ್ತು ವಧುವಿನ ತಂದೆ ವರನನ್ನುದ್ದೇಶಿಸಿ ''ಈಕೆಯನ್ನು ನಿನಗೀಯುತ್ತೇನೆ. ಈ ದಿನ ಮೊದಲ್ಗೊಂಡು ಈಕೆಯ ಆರೈಕೆ ಮಾಡು. ಈಕೆ ಸೌಖ್ಯದಿಂದಿರುವಂತೆ ನೋಡಿಕೊಳ್ಳು'' ಎಂದು ನುಡಿಯುತ್ತಾನೆ. ಇದಕ್ಕೆ 'ಕನ್ಯಾದಾನ' ಅಥವಾ ವಧುವನ್ನೀಯುವುದು ಎನ್ನುತ್ತಾರೆ.

ಈ ಮೇಲಣ ಕಾರ್ಯಕ್ರಮ ಮುಗಿಯುತ್ತಲೇ ವಧುವಿನ ಹೆತ್ತವರು ವರನಿಗೆ ರೇಶ್ಮೆಯ ಧೋತರ, ಶಾಲು, ಮುಂಡಾಸಿನ ಬಟ್ಟೆ ಕೊಡುತ್ತಾರೆ. ಶ್ರೀಮಂತರಿದ್ದ ವಧುವಿನ ಹೆತ್ತವರು ಚಿನ್ನದ ಕಡಗ, ಬೆಳ್ಳಿಯ ನಡುಪಟ್ಟಿಯನ್ನೂ ಕೊಡುತ್ತಾರೆ. ಅದರೊಂದಿಗೆ ಬೆಳ್ಳಿಯ ಲೋಟ, ತಟ್ಟೆಗಳನ್ನೂ ಕೊಡುತ್ತಾರೆ. ಇದಾದ ನಂತರ ಪುರೋಹಿತರು ವೇದೋಕ್ತ ಮಂತ್ರಗಳ ಪಠನ ಮಾಡುತ್ತಾ ವಧೂವರರ ಕುತ್ತಿಗೆಗೆ ಮತ್ತು ನಡುವಿಗೆ, ಅಂಕೆ ಎಂಟರ ಆಕಾರಕೊಳ್ಳುವಂತೆ ಹತ್ತಿಯ ದಾರವನ್ನು ಸುತ್ತುತ್ತಾರೆ. ದಾರವನ್ನು ಸಾಕಷ್ಟು ಸುತ್ತಿದ ನಂತರ ಅದು ಎಂಟರ ಆಕಾರಕ್ಕೊಳ್ಳಲಾಗಿ ಒಂದನ್ನೊಂದು ಅಡ್ಡಹಾಯುವಲ್ಲಿ ಕತ್ತರಿಸಿ, ಮೇಲಣಂತರದ ದಾರವನ್ನು ವಧೂವರರ ಕುತ್ತಿಗೆಯ ಬದಿಯಿಂದಾಗಿ ಮೇಲಕ್ಕೆತ್ತಿ, ಕೆಳಗಣಂತರದ ದಾರವನ್ನು ಕಾಲುಗಳೆಡೆಯಿಂದಾಗಿ ಸರಿಯುವಂತೆ ಮಾಡಲಾಗುತ್ತದೆ. ಈ ದಾರಗಳನ್ನು ತಿರುಚಿ ಬೇರೆಯೇ ಆದ ದಾರ ತಯಾರಿಸಿ, ಅವುಗಳ ಒಂದು ತುದಿಗೆ ಅರಿಸಿನದ ತುಂಡನ್ನು ಕಟ್ಟಿ, ಮೇಲಣಂತರದ ದಾರವನ್ನು ವಧುವಿನ ಬಲಮಣಿಕಟ್ಟಿಗೂ, ಕೆಳಗಣಂತರದ ದಾರವನ್ನು ವರನ ಬಲಮಣಿಕಟ್ಟಿಗೂ ಕಟ್ಟುತ್ತಾರೆ. ಈ ದಾರವನ್ನು 'ಕಂಕಣ ದಾರ' ಎಂದು ಕರೆಯುತ್ತಾರೆ. ಇವನ್ನು ವಿವಾಹ ಸಮಾರಂಭ ಜರಗುತ್ತಿದ್ದಾಗ ವಧೂವರರು ಕಾರಣವಶ ಅಶುದ್ಧರಾಗುವುದನ್ನು ತಡೆಹಿಡಿಯಲಾಗಿ ತೊಟ್ಟುಕೊಳ್ಳುತ್ತಾರೆ. ಕಾರ್ಯ ನಿರ್ವಾಹಕ ಪುರೋಹಿತರು ಆನಂತರ 'ಲಾಹ್ಯ ಹೋಮ' (ಅರಳಿನ ಹೋಮ)ದ ಸಿದ್ಧತೆ ಮಾಡುತ್ತಾರೆ. ಅರಳು, ಪಲಾಶಪತ್ರ, ಶ್ರೀಗಂಧದ ಚಕ್ಕೆ, ತುಪ್ಪ ಮುಂತಾದವುಗಳನ್ನು ಬಳಸಿದ ಹೋಮಾಗ್ನಿಗೆ ವಧೂವರರು ತಾವು ಪರಸ್ಪರ ನಿಷ್ಠಾವಂತರಾಗುವ ಆಶ್ವಾಸನೆ ಇತ್ತು ಮೂರು ಬಾರಿ ಸುತ್ತು ಬರುತ್ತಾರೆ. ವರ ವಧುವಿನ ಕೈಹಿಡಿಯುತ್ತಾನೆ. ಮತ್ತೆ ಅವರಿಬ್ಬರು ಹೋಮಾಗ್ನಿಯ ಮುಂದೆ ಏಳು ಹೆಜ್ಜೆಗಳನ್ನಿರಿಸುತ್ತಾರೆ. ಆಗ ಪುರೋಹಿತರು ಮಂತ್ರೋಚ್ಚಾರಣೆ ಮಾಡುತ್ತಾ ಅಗ್ನಿ ದೇವತೆಯನ್ನು ಆಹ್ವಾನಿಸಿ, ವಧೂವರರ ನಿಷ್ಠಾ ಪ್ರತಿಜ್ಞೆಗೆ ಸಾಕ್ಷಿಗಾರನಾಗುವಂತೆ ಕೇಳಿಕೊಳ್ಳುತ್ತಾರೆ. ಈಗ ತಾನೇ ವಿವಾಹವಾದ ದಂಪತಿಗಳನ್ನು ಮಂಟಪ ಅಥವಾ ವೇದಿಕೆಯಲ್ಲಿನ ಆಸನದಲ್ಲಿ ಕುಳ್ಳಿರಿಸಿ ಸಂಬಂಧಿಕರಲ್ಲಿನ ಸ್ತ್ರೀಯರು, ಮಿತ್ರಮಂಡಳಿಯಲ್ಲಿನ ಮುತ್ತೈದೆಯರು ಅಕ್ಷತೆ ಹಾಕಿ, ಆರತಿ ಎತ್ತುತ್ತಾರೆ; ಅಕ್ಷತೆ ಹಾಕುವುದಕ್ಕೆ 'ಶೇಸ' ಮತ್ತು ದೀಪ ತೋರುವುದಕ್ಕೆ 'ಆರತಿ' ಎನ್ನುತ್ತಾರೆ. ಇದರೊಂದಿಗೆ ಮೂರು ತಾಸುಗಳಷ್ಟರ ಮೊದಲ ದಿನದ ಕಾರ್ಯಕ್ರಮ ಮುಗಿಯುತ್ತದೆ. ನೆರೆದವರಿಗೆ ಗಂಧದೆಣ್ಣೆ, ಗಂಧ, ಪನ್ನೀರು, ಬಾಳೆಹಣ್ಣು, ಸಕ್ಕರೆ, ಅಡಕೆ, ವೀಳ್ಯದೆಲೆ, ಸುಣ್ಣ ಇತ್ಯಾದಿಗಳನ್ನು ಹಂಚುತ್ತಾರೆ. ವರ ತನ್ನ ತಲೆಗೆ ಕಟ್ಟಿದ ಬಾಸಿಂಗವನ್ನು ತೆಗೆದು ಮಂಟಪ ದೇವತೆಯ ಬಳಿಯಲ್ಲಿನ 'ತಳವ' ಎನ್ನಲಾಗುವ ರಂಗೋಲಿಯ ಚೌಕದ ನಡುವೆ ಇಡುತ್ತಾನೆ. ಇದಾದ ಬಳಿಕ ನೆಂಟರಿಷ್ಟರು ಹಾಗೂ ವರನ ಹೆತ್ತವರು ವರನೊಂದಿಗೆ ಆತನ ಸಮಪ್ರಾಯದ ಸ್ನೇಹಿತರು ಮತ್ತು ಒಬ್ಬ ಕೈಯಾಳನ್ನು ಬಿಟ್ಟು

ತಮ್ಮ ಮನೆಗೆ ಮರಳುತ್ತಾರೆ. ಕೈಯಾಳನ್ನು 'ಧೆಬ್ಲೋ' ಎಂದು ಕರೆಯುತ್ತಾರೆ. ಅಂದಿನ ಮತ್ತು ಮುಂದಿನ ಎರಡು ರಾತ್ರಿಗಳನ್ನು ನವದಂಪತಿಗಳು ಬಾಸಿಂಗದ ಚೌಕದ ಸಮೀಪ, ರಂಗೋಲಿಯ ಬೇರೆಯೇ ಆದ ಚೌಕದೊಳಕ್ಕ ಮಲಗುತ್ತಾರೆ.

ಎರಡನೆಯ ದಿನದ ಮುಂಜಾನೆ, ವಧೂವರರ ಮನೆಗಳಲ್ಲಿನ ಮದುವೆಯ ಸಭಾಮಂಟಪದಲ್ಲಿ ವಾದ್ಯದವರು ತಾಸೊಂದರ ಕಾಲ ವಾದ್ಯ ನುಡಿಸುತ್ತಾರೆ. ಬಾಂಧವರನ್ನು ತಮ್ಮಲ್ಲಿಗೆ ಊಟಕ್ಕೆ ಬರುವಂತೆ ಹೇಳಲು ವಧುವಿನ ಹೆತ್ತವರು ಮಕ್ಕಳನ್ನು ಕಳುಹಿಸುತ್ತಾರೆ; ಕೆಲವೊಬ್ಬ ಗಂಡಸರು ಮತ್ತು ಹೆಂಗಸರು, ವಾದ್ಯದವರು ಮತ್ತು ನರ್ತಕಿಯರ ಸಮೇತ ವರನ ಮನೆಗೆ ಹೋಗಿ ಅವರಿಗೆ ಭೋಜನದ ಆಮಂತ್ರಣವೀಯುತ್ತಾರೆ. ವರನ ಮನೆಯವರು ಮತ್ತು ಅನ್ಯ ನೆಂಟರಿಷ್ಟರು, ಮಿತ್ರರು ಬಂದ ನಂತರ ವಧೂವರರನ್ನು ಮಂಟಪದಲ್ಲಿ ಕುಳ್ಳಿರಿಸುತ್ತಾರೆ; ವರ ಬಾಸಿಂಗ ಧರಿಸಿದ ನಂತರ ವಧೂವರರ ಮೇಲಕ್ಕೆ ಅಕ್ಷತೆ ಹಾಕಿ ಆರತಿ ತೋರುತ್ತಾರೆ. ಬಾಸಿಂಗವನ್ನು ತೆಗೆದ ನಂತರ ವಧೂವರರನ್ನು ಮಣೆಯ ಮೇಲಕ್ಕೆ ಕುಳ್ಳಿರಿಸಿ, ನೆಂಟರಿಷ್ಟರಲ್ಲಿನ ಹೆಂಗಸರು ಅರಿಸಿನದ ಹುಡಿ ಮತ್ತು ತೆಂಗಿನೆಣ್ಣೆಯ ಮಿಶ್ರಣವನ್ನು ಹಣೆ, ಗದ್ದ, ಭುಜ, ಕೈ, ಕಾಲುಗಳಿಗೆ ಹಚ್ಚುತ್ತಾರೆ. ಅರಿಸಿನ ಬಣ್ಣದ ನೀರು ತುಂಬಿದ್ದ ಬೋಗುಣಿಯನ್ನು ವಧೂವರರ ನಡುವೆ ಇಡಲಾಗುತ್ತದೆ. ವಧು ಮತ್ತು ವರ ಕ್ರಮವಾಗಿ ತಮ್ಮ ಬಲ ಮತ್ತು ಎಡಕೈಗಳನ್ನು ಬೋಗುಣಿಯಲ್ಲಿನ ನೀರಿನೊಳಕ್ಕೆ ಹಾಕುತ್ತಾರೆ. ಪುರೋಹಿತರು ಅಡಕೆ ಮತ್ತು ವರನ ಉಂಗುರವನ್ನು ತನ್ನ ಬಲಕೈಯಲ್ಲಿಟ್ಟುಕೊಂಡು ಬೋಗುಣಿಯಲ್ಲಿನ ನೀರಿಗೆ ಹಾಕುತ್ತಾರೆ. ವಧೂವರರು ಚಿನ್ನದ ಉಂಗುರವನ್ನು ಪಡೆದುಕೊಳ್ಳಲಾಗಿ ಹೆಣಗಾಡುತ್ತಾರೆ. ವರ ಉಂಗುರವನ್ನು ಹೆಕ್ಕುವಲ್ಲಿ ಯಶಸ್ವಿಯಾದರೆ ವಧು ಅಡಕೆಯನ್ನು ಪುರೋಹಿತರಿಗೀಯಬೇಕಾಗುತ್ತದೆ; ವರ ತಾನು ಹೆಕ್ಕಿದ ಉಂಗುರವನ್ನೂ ಪುರೋಹಿತರಿಗೆ ಮರಳಿಸಬೇಕಾಗುತ್ತದೆ. ಉಂಗುರದ ಈ ಆಟ ನಾಲ್ಕು ಅಥವಾ ಐದು ಬಾರಿ ನಡೆಯುತ್ತದೆ. ಕೊನೆಯ ಬಾರಿಗೆ ಉಂಗುರವನ್ನು ಹೆಕ್ಕಿದ ವ್ಯಕ್ತಿಯನ್ನು ಪ್ರಶಂಸಿಸುತ್ತಾರೆ; ವಧು ಯಶಸ್ವಿಯಾದಲ್ಲಿ ಅದನ್ನು ಆಕೆ ತನ್ನಲ್ಲಿಟ್ಟುಕೊಳ್ಳುತ್ತಾಳೆ. ಆಟ ಮುಗಿದ ಬಳಿಕ ವಧೂವರರು ಬೋಗುಣಿಯಲ್ಲಿದ್ದ ಬಣ್ಣದ ನೀರನ್ನು ಒಬ್ಬರಿನ್ನೊಬ್ಬರ ಮೇಲಕ್ಕೆ ಚೆಲ್ಲುತ್ತಾರೆ. ಆನಂತರ ನಿಮಂತ್ರಿತರಿಗೆ ಊಟ ಬಡಿಸಲಾಗುತ್ತದೆ. ಇದಕ್ಕೆ 'ಕನ್ಯಾದಾನದ ಸಮಾರಾಧನೆ' ಎನ್ನುತ್ತಾರೆ. ಸುಮಾರು ನಾಲ್ಕರ ಹೊತ್ತಿಗೆ ವಧು ಮತ್ತು ವರ ಎದುರು ಬದುರು ಸಾಲಿನ ನೇತೃತ್ವ ಕೊಳ್ಳುತ್ತಾರೆ; ವಧುವಿನ ಮತ್ತು ವರನ ಪಕ್ಷದಲ್ಲಿ ಅಡಕೆಯ ರಾಶಿ ಇದ್ದು ಅದರಿಂದ ಅವರು ಸರಿಮಿಗಿಲಿನ ಆಟ ಆಡುತ್ತಾರೆ. ಅವರಿಬ್ಬರನ್ನು ತಮ್ಮ ತಮ್ಮ ಪಕ್ಷದವರು ಹುರಿದುಂಬಿಸುತ್ತಿದ್ದಂತೆ ವಾದ್ಯದವರು ವಾದ್ಯ ನುಡಿಸುತ್ತಾರೆ ಮತ್ತು ನರ್ತಕಿಯರು ಹಾಡು ಹಾಡಿ ಕುಣಿಯುತ್ತಿರುತ್ತಾರೆ. ಅಡಕೆಯ ಆಟವನ್ನು ಸೋಲು ಗೆಲುವುಗಳಲ್ಲಿ ಮುಗಿಯುವ ತನಕ ಅಥವಾ ಸಾಯಂಕಾಲವಾಗುತ್ತಲೇ ಮುಗಿಸುತ್ತಾರೆ. ಆನಂತರ ಮನೆಯ ಹೆಂಗಸರು ಗಂಧದೆಣ್ಣೆ ಮತ್ತು ಕುಂಕುಮಕೊಂಡ ಹಾಗೂ ಅಡಕೆ, ವೀಳ್ಯದೆಲೆ, ಬೆಲ್ಲ, ತೆಂಗಿನಕಾಯಿಯ ತುಂಡುಗಳನ್ನು ಕೊಂಡ ಹರಿವಾಣಗಳೆರಡರೊಂದಿಗೆ ಬರುತ್ತಾರೆ. ವಧು ವರನ ಕಾಲುಗಳನ್ನು ತೊಳೆದು ಗಂಧದೆಣ್ಣೆ ಸವರುತ್ತಾಳೆ ಮತ್ತು ಮಡಚಿದ ವೀಳ್ಯದೆಲೆಯನ್ನು ಬಲಕೈಯಲ್ಲಿ

ಕೊಂಡು ಅದರ ಒಂದು ತುದಿಯನ್ನು ವರನ ಬಾಯಿಗೆ ಹಾಕುತ್ತಾಳೆ. ಆತ ಅದನ್ನು ಹಲ್ಲುಗಳಿಂದ ಗಟ್ಟಿಯಾಗಿ ಹಿಡಿದುಕೊಳ್ಳುತ್ತಾನೆ. ವೀಳ್ಯದೆಲೆಯ ಇನ್ನೊಂದು ತುದಿಯನ್ನು ವಧು ಕಚ್ಚಿ ಹಿಡಿದು ಆತನ ಬಾಯಿಯಿಂದ ಎಳೆದು ತೆಗೆಯಲು ಪ್ರಯತ್ನಿಸುತ್ತಾಳೆ. ಹೀಗೆ ಐದು ಬಾರಿ ಆಡಿದ ನಂತರ, ಈ ಬಗೆಯ ಆಟವನ್ನು ತೆಂಗಿನ ಕಾಯಿ ಮತ್ತು ಬೆಲ್ಲದ ತುಂಡುಗಳೊಂದಿಗೂ ಆಡಲಾಗುತ್ತದೆ. ಇದರಿಂದ ನೆರೆದವರ ಮನೋರಂಜನೆಯಾಗುತ್ತದೆ. ಆನಂತರ ವರ ಸುರುಳಿಸುತ್ತಿದ್ದ ವೀಳ್ಯದೆಲೆ, ತೆಂಗಿನಕಾಯಿ, ಬೆಲ್ಲದ ತುಂಡುಗಳನ್ನು ವಧುವಿನ ಬಾಯಿಗೆ ಹಾಕುತ್ತಾನೆ. ಇದಾದ ಬಳಿಕ ವರ ಹರಿವಾಣದಲ್ಲಿನ ಅಡಕೆ ತೆಗೆದು ತಾನು ಉಟ್ಟಿದ್ದ ಬಟ್ಟೆಯೊಳಕ್ಕೆ ಅಡಗಿಸಿಡುತ್ತಾನೆ. ವಧು ಅದನ್ನು ಹುಡುಕಿ ತೆಗೆದು ತಾನುಟ್ಟಿದ್ದ ಬಟ್ಟೆಯಲ್ಲಿ ಅಡಗಿಸಿಡುತ್ತಾಳೆ; ವರ ಅದನ್ನು ಅರಸಿ ತೆಗೆಯಲು ಪ್ರಯತ್ನಿಸುತ್ತಾನೆ. ಇದಕ್ಕೆ 'ಸುಪಾರಿಖೇಳ್' ಎನ್ನುತ್ತಾರೆ. ವರ ಬಾಸಿಂಗ ಧರಿಸಿ ವಧುವಿನೊಂದಿಗೆ ಮಂಟಪದಲ್ಲಿ ಅಥವಾ ವೇದಿಕೆಯಲ್ಲಿ ಕುಳಿತಾಗ ಹೆಂಗಸರು ಅಕ್ಷತೆ ಹಾಕಿ ಆರತಿ ಎತ್ತುತ್ತಾರೆ. ರಾತ್ರಿ ಊರ ಹೊತ್ತಿಗೆ ನರ್ತಕಿಯರು ಗಿಟಾರ್ ಮತ್ತು ಅನ್ಯ ವಾದ್ಯಗಳೊಂದಿಗೆ ಹಾಡು ಹಾಡಿ ನೆಂಟರಿಷ್ಟರ ಮನೋರಂಜನೆ ಮಾಡುತ್ತಾರೆ. ಈ ಕಾರ್ಯಕ್ರಮ ಮುಗಿಯುತ್ತಲೇ ನೆಂಟರಿಷ್ಟರು ತಮ್ಮ ತಮ್ಮ ಮನೆಗೆ ಮರಳುತ್ತಾರೆ.

ಮೂರನೆಯ ದಿನದಂದು, ಕನ್ಯಾದಾನ ಸಮಾರಾಧನೆಯ ಹೊರತು, ಎರಡನೆಯ ದಿನದ ಮನೋರಂಜನೆಯ ಕಾರ್ಯಕ್ರಮಗಳ ಮತ್ತು ಇನ್ನಿತರ ವಿಧಿಗಳ ಪುನರಾವರ್ತನೆಯಾಗುತ್ತದೆ. ಮತ್ತು ನೆಂಟರಿಷ್ಟರಿಗೆ ಊಟ ಹಾಕಲಾಗುತ್ತದೆ. ಊಟದ ಸಮಯ ಅಥವಾ ಊಟದ ನಂತರ ವರ, ತನ್ನ ಮತ್ತು ತನ್ನವರೊಂದಿಗಿನ ವಧುವಿನ ಕಡೆಯವರ ವರ್ತನೆಯಿಂದ ಮುನಿದಂತೆ ನಟಿಸುತ್ತಾ ಮಿತ್ರರು ಮತ್ತು ಕೈಯಾಳಿನೊಂದಿಗೆ ಹಠಾತ್ತಾಗಿ ಮದುವೆಯ ಮಂಟಪ ಬಿಟ್ಟು ನೆರೆಕರೆಯಲ್ಲಿನ ಮಿತ್ರನೊಬ್ಬನ ಮನೆಗೆ ಅಥವಾ ದೇವಸ್ಥಾನಕ್ಕೆ ಹೋಗುತ್ತಾನೆ. ಆತನನ್ನು ಹಿಂಬಾಲಿಸಿ ಹೋಗುವ ಭಾವಂದಿರು ಕೋಪದ ಕಾರಣ ಕೇಳಿ ಆತ ಮರಳಿ ಬರುವಂತೆ ವಿನಂತಿ ಮಾಡುತ್ತಾರೆ. ಒತ್ತರಿಸಿದ ನಂತರ, ವರ, ವಧುವಿನ ಅಣ್ಣ, ಅಕ್ಕಂದಿರು ಅವರವರ ಪತ್ನಿ, ಪತಿಯರೊಂದಿಗೆ ಶಾಲು, ಸೀರೆಯ ಸೆರಗಿನ ತುದಿಗಳಿಗೆ ಗಂಟು ಹಾಕಿ ಬಂದಲ್ಲಿ ಮಾತ್ರ ಮರಳುವ ಶರ್ತ ಹಾಕುತ್ತಾನೆ. ಭಾವಂದಿರು ಮತ್ತು ಅಕ್ಕಂದಿರು ತಮ್ಮ ತಮ್ಮ ಪತ್ನಿ, ಪತಿಯರ ಸಮೇತ ಮರಳಿ ವರನನ್ನು ಕಾಣುತ್ತಾರೆ. ವಾದ್ಯದವರು ವಾದ್ಯ ನುಡಿಸುತ್ತಿದ್ದಂತೆ, ನರ್ತಕಿಯರು ನರ್ತಿಸುತ್ತಿದ್ದಂತೆ ಅಣ್ಣಂದಿರು ಮತ್ತೆ ಅವರ ಹೆಂಡಂದಿರು ವರನನ್ನು ಮರಳುವರೆ ಮತ್ತೆ ಒತ್ತರಿಸುತ್ತಾರೆ. ಹಿರಿಯ ಭಾವ ಮತ್ತು ಆತನ ಪತ್ನಿ ವರನ ಎಡಬದಿಗೆ ಬಂದು, ದೊಡ್ಡ ಅತ್ತಿಗೆ ಮತ್ತು ಆಕೆಯ ಪತಿ ಬಲಬದಿಗೆ ಬಂದು ವರನ ಕೈಗಳನ್ನು ಕೊಂಡು ಆತನನ್ನು ಹಿಂದಕ್ಕೆ ಕರೆದು ತರುತ್ತಾರೆ. ಆ ಬಳಿಕ ವಧೂವರರಿಗೆ ಅಕ್ಷತೆ ಹಾಕಿ ಆರತಿ ಎತ್ತುತ್ತಾರೆ. ಆದಾದ ನಂತರ ಮತ್ತೆ ಅದೃಷ್ಟದ ಆಟಕ್ಕೆ ತೊಡಗುತ್ತಾರೆ.

ನಾಲ್ಕನೆಯ ದಿನದ ಮುಂಜಾನೆ ವಾದ್ಯದವರು ವಾದ್ಯ ನುಡಿಸುತ್ತಿದ್ದಂತೆ

ವಧೂವರರಿಗೆ ಅರಿಸಿನ ನೀರಿನ ಸ್ನಾನ ಮಾಡಿಸುತ್ತಾರೆ. ಬೆಳಗಿನ ಸುಮಾರು ೯ ಮತ್ತು ೧೦ರ ನಡುವೆ ವರನ ತಾಯಿ ಕೆಲವೊಬ್ಬ ಹೆಂಗಸರು, ಹುಡುಗರು, ನರ್ತಕಿಯರು, ಮನೆಯಾಳುಗಳೊಂದಿಗೆ ವೀಳ್ಯದೆಲೆ, ಅಡಕೆ, ತೆಂಗಿನಕಾಯಿ ರವಕೆಯ ಅರಿವೆ ಮತ್ತು ಗೆರಸೆಯೊಂದಿಗೆ ವಧುವಿನ ಮನೆಗೆ ಬರುತ್ತಾಳೆ. ಅಲ್ಲಿ ಮಂಟಪದ ಅಥವಾ ವೇದಿಕೆಯಲ್ಲಿನ ಮಣೆಗಳ ಮೇಲಕ್ಕೆ ವಧೂವರರನ್ನೂ ಕುಳ್ಳಿರಿಸುತ್ತಾರೆ. ಅವರೊಂದಿಗೆ ವರನ ತಾಯಿ ಮತ್ತು ವಧುವಿನ ಹೆತ್ತವರನ್ನು ಕುಳ್ಳಿರಿಸುತ್ತಾರೆ. ಪುರೋಹಿತರು ಕ್ರಮವಾಗಿ ಗಣಪತಿ, ವರುಣನನ್ನು ಪ್ರತಿನಿಧಿಸುವ ಅಕ್ಕಿಯ ಚಿಕ್ಕ ಕುಪ್ಪೆ ಮತ್ತು ಅಡಕೆಗಳನ್ನು ಪೂಜಿಸುತ್ತಾರೆ. ಪೂಜೆಯ ನಂತರ ಇವನ್ನು ಕೆಲವೊಂದು ಬೆಳ್ಳಿಯ ನಾಣ್ಯಗಳೊಂದಿಗೆ ಪುರೋಹಿತರಿಗೀಯಲಾಗುತ್ತದೆ. ಆ ಬಳಿಕ ವಧುವಿನ ಹೆತ್ತವರು ವಧೂವರರ ಕಾಲುಗಳ ಸಮೀಪ ಅರೆದ ಅರಿಸಿನ, ದೀಪಗಳನ್ನಿಟ್ಟ ಚೌಕಾಕಾರದ ಚಪ್ಪಟೆ ಬುಡದ ಬುಟ್ಟಿಯನ್ನು ಪೂಜಿಸಿ, ಈ ಮುಂದಿನಂತೆ ನುಡಿದು ವರನ ತಾಯಿಗೀಯುತ್ತಾರೆ: "ನಮ್ಮ ಮಗಳ ದಾನದ ಫಲರೂಪವಾಗಿ ನಿಮ್ಮ ಭಾವೀ ಪೀಳಿಗೆಯ ಏಳಿಗೆಯಾಗಲಿ". ಪುರೋಹಿತರು ಸ್ವಲ್ಪ ಉಪ್ಪು ಮತ್ತು ಗೋಧಿ ಕೊಂಡು ಅವನ್ನು ನೆಲದ ಮೇಲಕ್ಕೆ ಹಾಕಿ ತನ್ನ ತೋರು ಬೆರಳಿನಿಂದ ಆನೆಯ ಎರಡು ಆಕೃತಿಗಳನ್ನು ಗೀಚುತ್ತಾರೆ. ಅವು ವಧು ಮತ್ತು ವರರನ್ನು ಪ್ರತಿನಿಧಿಸುತ್ತವೆ. ಅನಂತರ ವರ ವಧುವಿನ ಆನೆಯ ಆಕೃತಿಯ ಮೇಲಕ್ಕೆ ಸೀರೆಯೊಂದನ್ನು ಇಡುತ್ತಾರೆ. ವಧು ವರನ ಆನೆಯ ಆಕೃತಿಯ ಮೇಲಕ್ಕೆ ಶಾಲನ್ನು ಇಡುತ್ತಾನೆ. ಅನಂತರ ಇವರಿಬ್ಬರು ತಮಗೆ ಸಂಬಂಧಿಸಿದ ಆನೆಯ ಆಕಾರದ ಮೇಲಕ್ಕೆ ನಿಲ್ಲುತ್ತಾರೆ. ವಧುವಿನ ಸಹೋದರ ರವಕೆಯ ಅರಿವೆ, ತೆಂಗಿನಕಾಯಿ, ಅಡಕೆ, ಎರಡು ವೀಳ್ಯದೆಲೆಗಳು ಮತ್ತು ಬೆಳ್ಳಿಯ ನಾಣ್ಯಗಳನ್ನು ಅಲ್ಲಿ ಸಾಲಾಗಿಟ್ಟ, ಆಕಾರದಲ್ಲಿ ಸಣ್ಣದಾಗಿದ್ದ, 'ಸುಪ್ಲಿ' ಎನ್ನಲಾಗುವ ಹದಿನಾರು ಗೆರಸೆಗಳಲ್ಲಿ ಹಾಕುತ್ತಾನೆ. ಇವನ್ನು ವಧು ಅತ್ತೆಯ ನಿರ್ದೇಶನದಂತೆ ಮುತ್ತೈದೆಯರಿಗೆ ಹಂಚುತ್ತಾಳೆ. ವಿವಾಹಿತರಿದ್ದ ಸ್ತ್ರೀಯರು ಅಥವಾ 'ಸವಾಶಿಣ'ಯರು ವಧೂವರರಿದ್ದಲ್ಲಿಗೆ ಬಂದು ಅವರಿಬ್ಬರ ಹಣೆಗೆ ಕುಂಕುಮ ಹಚ್ಚಿ ತಮ್ಮ ಬಹುಮಾನವನ್ನು ಕೊಳ್ಳುತ್ತಾರೆ. ಇದಕ್ಕೆ 'ಚಿರಣಿದಾನ' ಅಥವಾ ಲಕ್ಷ್ಮಿಯ ಪ್ರಸಾದವೆನ್ನುತ್ತಾರೆ. ವಾದ್ಯದವರು ವಾದ್ಯ ನುಡಿಸುತ್ತಾರೆ. ಹಾಗೆಯೇ ನರ್ತಕಿಯರು ನರ್ತನ ಮಾಡುತ್ತಿರುತ್ತಾರೆ. ವಧುವಿನ ನೆಂಟರಿಷ್ಟರು ಬಟ್ಟೆ, ಹಣ ಇತ್ಯಾದಿಗಳನ್ನು ಬಹುಮಾನವಾಗಿ ವಧೂ ವರರಿಬ್ಬರಿಗೂ ಕೊಡುತ್ತಾರೆ. ವರನ ನೆಂಟರಿಷ್ಟರೂ ಇದೇ ರೀತಿಯಲ್ಲಿ ಬಹುಮಾನಗಳನ್ನೀಯುತ್ತಾರೆ. ವರನ ಕಡೆಯವರು ತಮ್ಮ ಮನೆಗೆ ಮರಳುತ್ತಾರೆ. ವಧೂವರರ ಮನೆಗಳಲ್ಲಿ ನೆಂಟರಿಷ್ಟರ ರಾತ್ರಿಯ ಭೋಜನವಾಗುತ್ತದೆ.

ವರನ ಹೆತ್ತವರು ಮಿಠಾಯಿ, ಹಣ್ಣು, ವೀಳ್ಯದೆಲೆ, ಅಡಕೆ, ಬಾಳೆಯ ಎಲೆ, ಸಕ್ಕರೆ, ಬೆಣ್ಣೆ ಇತ್ಯಾದಿಗಳನ್ನು ವಧುವಿನ ಮನೆಗೆ ಕಳುಹಿಸುತ್ತಾರೆ. ಮತ್ತು ಸ್ವಜಾತಿಯ ಬಾಂಧವರನ್ನು ವಧುವಿನ ಮನೆಯಲ್ಲಿನ ಭೋಜನಕ್ಕೆ ಆಮಂತ್ರಿಸುತ್ತಾರೆ.

ಎರಡನೆಯ ಮತ್ತು ಮೂರನೆಯ ದಿನಗಳಂತೆ ಸಾಯಂಕಾಲದ ೬ರ ತನಕ ಅಡಕೆಗಳಿಂದ 'ಅದೃಷ್ಟದ ಆಟ' ಆಡುತ್ತಾರೆ. ವರನ ಕಡೆಯವರು ತಮ್ಮ ಮನೆಗೆ ಮರಳಿ

ಉಂಡು, ಮೆರವಣಿಗೆಯಲ್ಲಿ ವಧುವಿನ ಮನೆಗೆ ಮರಳುತ್ತಾರೆ; ಅಲ್ಲಿ ಅವರು ನೆರೆದವರ ಮನೋರಂಜನೆ ಮಾಡುತ್ತಾರೆ. ವಧುವಿನ ಕಡೆಯುವವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ನಿರಾಕರಿಸುವ ಚೇಷ್ಟೆ ಮಾಡುತ್ತಾರೆ. ವರನ ಹೆತ್ತವರು ಒತ್ತಾಯ ಮಾಡಿದ ಬಳಿಕವೇ ಭಾಗವಹಿಸಲು ಒಪ್ಪಿಕೊಳ್ಳುತ್ತಾರೆ. ಇದಾದ ನಂತರ ವರ ಬಾಸಿಂಗ ಕಟ್ಟಿಕೊಂಡು ಪತ್ನಿಯೊಂದಿಗೆ ಮಂಟಪದಲ್ಲಿ ಅಥವಾ ವೇದಿಕೆಯ ಮೇಲೆ ಕುಳಿತುಕೊಳ್ಳುತ್ತಾನೆ. ಪತ್ನಿ ಮೊತ್ತ ಮೊದಲು ಮಾವ ಮತ್ತು ಅತ್ತೆ ಜೀವಂತವಿದ್ದ ಮುತ್ತೈದೆ ಸ್ತ್ರೀಯರಿಗೆ ತೆಂಗಿನಕಾಯಿಗಳನ್ನು ಹಂಚುತ್ತಾಳೆ; ನಂತರ ಇನ್ನುಳಿದ ಮುತ್ತೈದೆ ಸ್ತ್ರೀಯರಿಗೀಯುತ್ತಾಳೆ. ನೆರೆದ ಸ್ತ್ರೀಯರು ಆ ತನಕ ಸೀರೆಯ ಸೆರಗನ್ನು ನಡುವಿಗೆ ಸುತ್ತುತ್ತಿದ್ದ ವಧುವಿನತ್ತ ಬಂದು ಆಕೆಯ ಸೆರಗನ್ನು ಅವಳ ತಲೆಯ ಮೇಲಕ್ಕೆ ತಂದು, ಎಡಭುಜದ ಮೇಲಿನಿಂದಾಗಿ ಹಿಂದಕ್ಕೆ ಕೊಂಡು ಹೋಗಿ ಬಲಭಾಗದಲ್ಲಿ ಸೀರೆಯ ಅಂಚಿನೊಳಕ್ಕೆ ತುರುಕುತ್ತಾರೆ; ಸೀರೆಯ ಇನ್ನೊಂದು ತುದಿಗೆ ನಿರಿಗೆ ಹಾಕಿ ಆಕೆಯ ಕಾಲುಗಳೆರಡರ ನಡುವಿನಿಂದಾಗಿ ಹಿಂಭಾಗಕ್ಕೆ ಕೊಂಡು ಹೋಗಿ ಅದನ್ನು ಸೀರೆಯ ಅಂಚಿನೊಳಕ್ಕೆ ತುರುಕುತ್ತಾರೆ.

ತೆಂಗಿನಕಾಯಿಗಳನ್ನು ಹಂಚುತ್ತಿದ್ದ ಸಮಯದಲ್ಲಿ ವರ ಯಾವುದಾದರೊಂದು ನೆಪಕೊಂಡು ಮದುವೆಯ ಮಂಟಪ ಬಿಟ್ಟು ಹೊರಕ್ಕೆ ಹೋಗಿ ಕಾಣದಾಗುತ್ತಾನೆ. ಆತನ ಅನುಪಸ್ಥಿತಿಯಲ್ಲಿ ವಧುವಿನ ಕಡೆಯುವವರು ವಧುವನ್ನು ಮನೆಯ ಗುಪ್ತ ಭಾಗದಲ್ಲಿ ಅಡಗಿಸಿಡುತ್ತಾರೆ. ವರ ಮರಳಿದಾಗ ಆತನ ಮಾವ ವಧು ಕಾಣೆಯಾಗಿದ್ದು ಆಕೆಯನ್ನು ಹುಡುಕಿ ತರಬೇಕಿರುವುದರ ಕುರಿತು ನುಡಿಯುತ್ತಾನೆ. ವರ ಮತ್ತು ಆತನ ಆಪ್ತ ಮಿತ್ರರು 'ಶೆಕುಣ್ದಿವಾ' (ಶುಭ ಲಕ್ಷಣದ ಐದು ಬತ್ತಿಗಳ ದೀಪ) ಕೊಂಡು ಆಕೆಯನ್ನು ಅರಸಲಾರಂಭಿಸುತ್ತಾರೆ. ವಧುವನ್ನು ಅರಸುವಾಗ ಕೈಗೆ ಸಿಕ್ಕಿದ್ದ ದುಗ್ಗಾಣಿ ಬೆಲೆಯ ವಸ್ತುಗಳನ್ನು ಸುಲಿಗೆಯ ರೂಪದಲ್ಲಿ ಕೈಗೆತ್ತಿಕೊಳ್ಳುತ್ತಾರೆ. ವಧು 'ದೊರಕಿದ ನಂತರ' ವಧೂವರರು ಮಂಟಪಕ್ಕೆ ಅಥವಾ ವೇದಿಕೆಯತ್ತ ತೆರಳಿ ನೆಂಟರಿಷ್ಟರನ್ನು ಸೇರುತ್ತಾರೆ. ಅವರು ಮಂಟಪ ಸೇರುವ ಮುನ್ನ ವರನ ಸಹೋದರಿ ಅವರಿಬ್ಬರನ್ನು ತಡೆಹಿಡಿಯುತ್ತಾಳೆ. ಮತ್ತೆ ಅವರು ತಮ್ಮ ಮಗಳನ್ನು ತನ್ನ ಮಗನಿಗೆ ವಿವಾಹದಲ್ಲೀಯುವ ಆಶ್ವಾಸನೆ ಇತ್ತ ಬಳಿಕವೇ ದಾರಿಬಿಟ್ಟು ಕೊಡುತ್ತಾಳೆ. ಅನಂತರ ಅವರಿಬ್ಬರನ್ನು ಸಭಾಮಂಟಪದ ಹೊರಭಾಗದಲ್ಲಿನ ಬಳ್ಳಿ ಮಂಟಪದಲ್ಲಿ ನೆರೆದಿದ್ದ ಹತ್ತು ದಂಪತಿಗಳ ನಡುವೆ ಬಾಳೆಯ ಎಲೆಗಳ ಮೇಲಕ್ಕೆ ಕುಳ್ಳಿರಿಸುತ್ತಾರೆ. ಮತ್ತೆ ವಧುವಿನ ಸೀರೆಯ ಸೆರಗಿನ ತುದಿಯನ್ನು ವರನ ಶಾಲಿನ ತುದಿಗೆ ಬಿಗಿಯುತ್ತಾರೆ. ಮನೆಯಲ್ಲಿನ ಕೆಲವೊಬ್ಬ ಸ್ತ್ರೀಯರು ಇವರ ಮೇಲಕ್ಕೆ ಅಕ್ಷತೆ ಹಾಕುತ್ತಾರೆ. ಇದಕ್ಕೆ 'ಗಂಧರ್ವವೇಲಿ ಶೇಸ್' ಎನ್ನುತ್ತಾರೆ. ವರನ ತಂದೆ ತನ್ನ ಕುಟುಂಬದ ಎಂಟು ಮಂದಿಯನ್ನಾರಿಸಿ ಅವರನ್ನು ವರನೊಂದಿಗೆ ಸಾಲಾಗಿ ನಿಲ್ಲಿಸುತ್ತಾನೆ. ವಧು ಆಗ ಪ್ರತಿಯೊಬ್ಬನ ಮುಂದೆ ಬಾಳೆಯ ಎಲೆಗಳನ್ನಿಟ್ಟು ಅದರಲ್ಲಿ ಮಿಠಾಯಿ, ಹಣ್ಣು ಇತ್ಯಾದಿಗಳನ್ನು ಹಾಕುತ್ತಾಳೆ. ಅನಂತರ ಅವಳು ಪ್ರತಿಯೊಬ್ಬನಿಗೂ ಎರಡೆರಡು ವೀಳ್ಯದೆಲೆ ಮತ್ತು ಒಂದು ಅಡಕೆಯನ್ನಿತ್ತು ಆರತಿ ಎತ್ತುತ್ತಾಳೆ. ಅಗಲ ಕಿರಿದಾದ ಕತ್ತಿನ, ಬಿಸಿ ತುಪ್ಪದ ಕುಪ್ಪಿ ಕೊಂಡು

ಅದರಲ್ಲಿನ ತುಪ್ಪವನ್ನು ಮೊದಲ ಎಲೆಯಿಂದ ತೊಡಗಿ ಸಾಲಿನ ಕೊನೆಯ ಎಲೆಯ ತನಕ, ಧಾರೆ ಮುರಿಯದೆ ಎರೆಯುತ್ತಾ ಹೋಗುತ್ತಾಳೆ. ಅನಂತರ ಈ ಎಂಟು ಮಂದಿ ಉಣ್ಣಲಾರಂಭಿಸುತ್ತಾರೆ. ಇದಕ್ಕೆ 'ಅಷ್ಟಗರ್ಗ' ಅಥವಾ ಕುಟುಂಬೀಯರ ಸತ್ಕಾರ ಎನ್ನುತ್ತಾರೆ. ವಧೂವರರು ವರನ ಕಡೆಯವರ ಸಮೀಪ ಕುಳಿತುಕೊಳ್ಳುತ್ತಾರೆ. ವಧುವಿನ ಹೆತ್ತವರು ಹೆಂಗಸರು ಕುಳಿತಲ್ಲಿದ್ದ ವರನ ತಾಯಿಯ ಸಮೀಪ ಹೋಗಿ ಅವಳನ್ನು ಗಂಡಸರು ಕುಳಿತಿದ್ದಲ್ಲಿಗೆಕೊಂಡು ಬರುತ್ತಾರೆ. ಆಗ ವಧುವಿನ ಹೆತ್ತವರ ಪರವಾಗಿ ಪುರೋಹಿತರು ಹೀಗೆ ನುಡಿಯುತ್ತಾರೆ: "ಈ ತನಕ ಮಗಳ ಪಾಲನೆಯ ಹೊಣೆಗಾರಿಕೆಯನ್ನು ನಾವು ಕೊಂಡಿದ್ದೆವು. ನಾವು ಅವಳನ್ನು ಈಗ ನಿಮ್ಮ ಸ್ವಾಧೀನ ಮಾಡುತ್ತಿದ್ದೇವೆ. ತಾಯಿಯ ವಾತ್ಸಲ್ಯ ತೋರಿ ಅವಳನ್ನು ನೋಡಿಕೊಳ್ಳಬೇಕೆಂದು ಪ್ರಾರ್ಥಿಸುತ್ತೇವೆ." ಆ ಬಳಿಕ ವಧುವಿನ ತಂದೆ ಆಕೆಯನ್ನು ವರನ ತಂದೆಯ ತೊಡೆಗಳ ಮೇಲಕ್ಕೆ ಕೂರಿಸುತ್ತಾನೆ. ನಂತರ ವಧುವಿನ ತಾಯಿ ಆಕೆಯನ್ನು ವರನ ತಾಯಿಯ ತೊಡೆಗಳ ಮೇಲಕ್ಕೆ ಕೂರಿಸುತ್ತಾಳೆ. ಇದಕ್ಕೆ 'ಒಪ್ಪಿ' ಅಥವಾ 'ಒಪ್ಪಿಸುವಿಕೆ' ಎನ್ನುತ್ತಾರೆ. ವರನ ತಾಯಿ ವಧುವಿನ ಮಡಿಲಲ್ಲಿ ಐದು ತೆಂಗಿನಕಾಯಿಗಳು, ಅಕ್ಕಿ, ರವಕೆಯ ಅರಿವೆ ಇಡುತ್ತಾಳೆ. ಆಗ ವಧೂವರರು ಉಟ್ಟ ಬಟ್ಟೆಯ ತುದಿಗಳನ್ನೊಂದಿಗೆ ತಂದು ಗಂಟು ಹಾಕಲಾಗುತ್ತದೆ. ವಧೂವರರಿಬ್ಬರೂ ಒಟ್ಟಿಗೆ ಮನೆ ಪ್ರವೇಶಿಸಿ ದೇವರಿಗೆ, ನಂತರ ವಧುವಿನ ಹೆತ್ತವರ ಕಾಲು ಮುಟ್ಟಿ ಆಶೀರ್ವಾದಕೊಳ್ಳುತ್ತಾರೆ. ಅನಂತರ ಅವರು ಮೆರವಣಿಗೆಯಲ್ಲಿ ವರನ ಮನೆಗೆ ಹೋಗಿ ಅಲ್ಲಿ ಮುಂಬಾಗಿಲಿನ ಸಮೀಪ ನಿಲ್ಲುತ್ತಾರೆ. ವರನ ತಾಯಿ ಮನೆ ಹೊಕ್ಕು ನೀರು ತುಂಬಿದ ಲೋಟ, ಬೆಳಗಿಸಲಾದ, ಅಕ್ಕಿಯ ಹಿಟ್ಟಿನಿಂದ ತಯಾರಿಸಿದ ನಾಲ್ಕು ಹಣತೆಗಳು ಮತ್ತು ಐದು ಬತ್ತಿಗಳ ಬೆಳಗಿಸಲಾದ ತೂಗುದೀಪ, ಇವನ್ನು ಕೊಂಡ ಹರಿವಾಣದೊಂದಿಗೆ ಹೊರಕ್ಕೆ ಬರುತ್ತಾಳೆ. ಲೋಟದಲ್ಲಿನ ನೀರಿನಿಂದ ವಧೂ ವರರನ್ನು ನಿವಾಳಿಸಿ ಆ ನೀರನ್ನು ಅಂಗಳಕ್ಕೆ ಚೆಲ್ಲಿ, ಬೆಳಗಿಸಿದ್ದ ದೀಪಗಳಿಂದ ಆರತಿಯೆತ್ತುತ್ತಾಳೆ. ಮತ್ತೆ ತೂಗು ದೀಪವನ್ನು ವಧುವಿನ ಬಲಕ್ಕೆ ಗೀಯುತ್ತಾಳೆ; ಹಿಂಬಾಲಿಸಿ ಬರುತ್ತಿದ್ದ ವರನ ಸಮೇತ ಆಕೆ ಮನೆಯನ್ನು ಪ್ರವೇಶಿಸುತ್ತಾಳೆ. ಗೃಹ ಪ್ರವೇಶದ ಸಮಯ ವಧು ಹೊಸ್ತಿಲನ್ನು ಮೆಟ್ಟದೆ, ಬಲಕಾಲನ್ನು ಒಳಕ್ಕೆ ಹಾಕಿ ಪ್ರವೇಶಿಸುವ ಜಾಗ್ರತೆಕೊಳ್ಳಲಾಗುತ್ತದೆ.

'ಸ್ವಾಗತ ಕೋಣೆ' ಸೇರಿದಂತೆ ವಧು ಕೈಯಲ್ಲಿನ ತೂಗುದೀಪವನ್ನು ಅಲ್ಲಿ ಸಿದ್ಧಗೊಳಿಸಲಾಗಿದ್ದ ಕೊಂಡಿಯಲ್ಲಿ ತೂಗಹಾಕುತ್ತಾಳೆ. ಕೋಣೆಯಲ್ಲಿ ರಂಗೋಲಿಯ ಚೌಕಾಕೃತಿಗಳೆರಡನ್ನು ತಯಾರಿಸಿ ಅವುಗಳಲ್ಲಿ ಆಕಾರದಲ್ಲಿ ಸಣ್ಣದಾಗಿದ್ದ ಚೌಕದಲ್ಲಿ ಎರಡು ಬಾಳೆಯ ಎಲೆಗಳನ್ನಿಟ್ಟು ಅವುಗಳ ಮೇಲಕ್ಕೆ ಸ್ವಲ್ಪ ಅಕ್ಕಿ ಹಾಕಿ ಐದು ತಾಮ್ರದ ತಂಬಿಗೆಗಳನ್ನು, ಆಕಾರದಲ್ಲಿ ಸಣ್ಣದಿದ್ದುದನ್ನು ತೀರಾ ಕೆಳಕ್ಕೆ ಮತ್ತು ದೊಡ್ಡದಿದ್ದುದನ್ನು ಅತಿ ಮೇಲಕ್ಕೆ ಬರುವಂತೆ ಇಟ್ಟಿರುತ್ತಾರೆ. ಅವುಗಳಲ್ಲಿನ ಒಂದರೊಳಕ್ಕೆ ಚಿನ್ನದ ಉಂಗುರವನ್ನು ಅಡಗಿಸಿಡುತ್ತಾರೆ. ವಧೂವರರನ್ನು ದೊಡ್ಡ ಚೌಕದಲ್ಲಿನ ಮಣೆಗಳ ಮೇಲಕ್ಕೆ ಕುಳ್ಳಿರಿಸುತ್ತಾರೆ. ವರ ಹರಿವಾಣವೊಂದನ್ನು ಕೊಂಡು ಅದರಲ್ಲಿ ಅಕ್ಕಿ ಹರಡಿ ಹೆಸರೊಂದನ್ನು ಬರೆಯುತ್ತಾನೆ. ಇದು ವಧುವಿನ ವಿವಾಹಾನಂತರದ ಹೊಸ ಹೆಸರಾಗಿದ್ದು ಅದನ್ನು ಎಲ್ಲರೂ ಕೇಳುವಂತೆ ಉಚ್ಚರಿಸಲಾಗುತ್ತದೆ. ಅನಂತರ ಅಕ್ಕಿ, ಬೆಳ್ಳಿಯ ನಾಣ್ಯ, ತಂಬಿಗೆ ಇತ್ಯಾದಿಗಳನ್ನು

ಪುರೋಹಿತರಿಗೀಯಲಾಗುತ್ತದೆ. ಬಂಗಾರದ ಉಂಗುರವನ್ನು ವಧು ತನ್ನೊಂದಿಗಿಟ್ಟುಕೊಳ್ಳುತ್ತಾಳೆ. ಮತ್ತೆ ಅದನ್ನು ಕೊಂಡಿದ್ದ ತಂಬಿಗೆಯನ್ನು ಮನೆಯೊಳಕ್ಕೆ ಕೊಂಡುಹೋಗುತ್ತಾಳೆ. ಇದಾದ ನಂತರ ವಧುವನ್ನು ಅಕ್ಕಿ ತುಂಬಿದ್ದ ಬುಟ್ಟಿಯೊಳಕ್ಕೆ ಕುಳ್ಳಿರಿಸುತ್ತಾರೆ. ನೆಂಟರಿಷ್ಟರು ಮತ್ತು ಆಕೆಯ ಗೆಳತಿಯರು ಚಿನ್ನಾಭರಣ, ನಾಣ್ಯಗಳ ಬಹುಮಾನವೀಯುತ್ತಾರೆ. ವಧೂವರರು ತಮ್ಮ ಬಟ್ಟೆಗೆ ಹಾಕಿದ್ದ ಗಂಟನ್ನು ಬಿಡಿಸುತ್ತಾರೆ. ವರ ತನ್ನ ಬಾಸಿಂಗವನ್ನು ಮನೆಯಲ್ಲಿನ ಮುಖ್ಯ ಕಂಬಕ್ಕೆ ಕಟ್ಟುತ್ತಾನೆ. ಕಾಲಾಂತರದಲ್ಲಿ ಅದು ಜೀರ್ಣ ವಿದೀರ್ಣವಾಗುತ್ತದೆ. ನೆಂಟರಿಷ್ಟರಿಗೆ, ಮಿತ್ರ ಮಂಡಳಿಗೆ ಸಣ್ಣ ಭೋಜನ ಕೂಟದ ವ್ಯವಸ್ಥೆ ಮಾಡಲಾಗುತ್ತದೆ.

ಐದನೆಯ ದಿನದ ಮುಂಜಾನೆ ಕುಲಪುರೋಹಿತರು ವಧು ಮತ್ತು ವರನ ಮನೆಗಳಲ್ಲಿಟ್ಟಿದ್ದ ಬುಟ್ಟಿಗಳಲ್ಲಿನ ಮಾತೃಕೆಯರ ಮತ್ತು ಮಂಟಪ ದೇವತೆಯ ಪೂಜೆ ಮಾಡುತ್ತಾರೆ. ಅಕ್ಷತೆ ಹಾಕಿ ಬುಟ್ಟಿಯನ್ನು ಅಲ್ಲಿಂದ ತೆಗೆಯಲಾಗುತ್ತದೆ. ವಧುವಿನ ಮನೆಯಲ್ಲಿನ ಕೆಲವೊಬ್ಬ ಗಂಡಸರು ಮತ್ತು ಹೆಂಗಸರು ವರನ ಮನೆಗೆ ಹೋಗಿ ಮನೆಮಂದಿಗೆಲ್ಲ ಊಟದ ಆಮಂತ್ರಣವೀಯುತ್ತಾರೆ. ನೆಂಟರಿಷ್ಟರನ್ನು ಆಮಂತ್ರಿಸಲು ಹುಡುಗರನ್ನು ಕಳುಹಿಸುತ್ತಾರೆ.

ಅತಿಥಿಗಳ ಪಂಕ್ತಿಯ ತುತ್ತ ತುದಿಯಲ್ಲಿ ವರ ಮತ್ತು ಆತನ ಎಡಭಾಗದಲ್ಲಿ ವಧು ಕುಳ್ಳಿರುತ್ತಾರೆ. ಎರಡನೆಯ ಪಂಕ್ತಿಯ ತುದಿಯಲ್ಲಿ ವರನ ತಂದೆ ಕುಳ್ಳಿರುತ್ತಾನೆ. ವಧು ವರನ ಅಂಗೈಗೆ ಮತ್ತು ನೆಲಕ್ಕೆ ತುಸು ತುಪ್ಪ ಎರೆಯುತ್ತಾಳೆ. ವರ ತುಪ್ಪ ಎರೆದ ಅನ್ನದ ಮೇಲಕ್ಕೆ ಚಿನ್ನದ ನಾಣ್ಯವನ್ನಿಟ್ಟು, ಸ್ವಾದಕೊಂಡ ಅನ್ನವನ್ನು ವಧುವಿಗೀಯುತ್ತಾನೆ. ವಧು ಚಿನ್ನದ ನಾಣ್ಯವನ್ನು ಕೊಂಡು ಹೆಂಗಸರು ಊಟ ಮಾಡುವಲ್ಲಿಗೆ ತೆರಳುತ್ತಾಳೆ. ಊಟ ಮುಗಿದ ನಂತರ, ವರ ನೆಂಟರಿಷ್ಟರೊಂದಿಗೆ ಏಳುತ್ತಲೇ, ವಧು ತನ್ನ ಪತಿಯ ಎಲೆಯಿಂದ ಆತ ಉಂಡು ಬಿಟ್ಟಿದ್ದ ಅನ್ನದ ತುತ್ತೊಂದನ್ನು ಕೊಳ್ಳುತ್ತಾಳೆ. ಕತ್ತಲಾಗುತ್ತಲೇ ಮದುವೆಯ ಮಂಟಪವನ್ನು ಬೆಳಗುತ್ತಾರೆ. ಹಿಂಬಾಲಿಸಿ ಬರುವ ತಾಯಿಯೊಂದಿಗೆ ವಧು ನೀರಾಂಜನಗಳನ್ನು ಕೊಂಡ ಹರಿವಾಣದೊಂದಿಗೆ ವರನಿದ್ದಲ್ಲಿಗೆ ಬಂದು ಆತನಿಗೆ, ಆತನ ತಂದೆಗೆ, ಸಂಬಂಧಿಕರಿಗೆ ಆರತಿ ತೋರುತ್ತಾಳೆ. ಅವರು ಅವಳಿಗೆ ಚಿನ್ನ, ಬೆಳ್ಳಿಯ ನಾಣ್ಯಗಳ ಬಹುಮಾನವೀಯುತ್ತಾರೆ. ವಧುವಿನ ಹೆತ್ತವರು ವರನಿಗೆ, ಆತನ ರಕ್ತ ಸಂಬಂಧಿಕರಿಗೆ ಹೊಸ ಬಟ್ಟೆಗಳ ಉಡುಗೊರೆಯೀಯುತ್ತಾರೆ. ಆನಂತರ ನೆಂಟರಿಷ್ಟರು, ವರನ ಹೆತ್ತವರು ತಮ್ಮ ತಮ್ಮ ಮನೆಗಳಿಗೆ ಮರಳುತ್ತಾರೆ.

ಆರನೆಯ ದಿನದ ಬೆಳಿಗ್ಗೆ ವರನ ಮಾತಾಪಿತರು ವಧುವಿನ ಮನೆಗೆ ಬಂದು ವಧೂವರರನ್ನು, ಆಕೆಯ ಹೆತ್ತವರನ್ನು, ಸಂಬಂಧಿಕರನ್ನು ಊಟಕ್ಕೆ ಆಮಂತ್ರಿಸುತ್ತಾರೆ; ಬಾಂಧವರಿಗೂ ಆಮಂತ್ರಣವೀಯಲಾಗುತ್ತದೆ. ಊಟದ ನಂತರ ವರನ ಮಾತಾಪಿತರು ವಧುವಿಗೆ, ಅವಳ ಹೆತ್ತವರಿಗೆ ಮತ್ತು ಹತ್ತಿರದ ಸಂಬಂಧಿಕರಿಗೆ ಬಟ್ಟೆಯ ಉಡುಗೊರೆಯೀಯುತ್ತಾರೆ. ಆನಂತರ ನೆಂಟರಿಷ್ಟರು ತಮ್ಮ ಮನೆಗಳಿಗೆ ಮರಳುತ್ತಾರೆ.

ಹತ್ತನೆಯ ದಿನದ ಬೆಳಿಗ್ಗೆ ವರ ಮದುವೆಯ ಮಂಟಪದ ವಾಯುವ್ಯ ದಿಕ್ಕಿನಲ್ಲಿನ ಕಂಬವನ್ನು ಪೂಜಿಸುತ್ತಾನೆ. ನೆಂಟರಿಷ್ಟರ ಭೋಜನಾ ನಂತರ ಮಂಟಪ, ಸಭಾ ಮಂಟಪಗಳನ್ನು ಕಳಚಲಾಗುತ್ತದೆ.

ವಧು ಪ್ರಾಯಕ್ಕೆ ಬರುವ ತನಕ ಆಕೆ ಹೆಚ್ಚಿನ ಸಮಯವನ್ನು ತನ್ನ ತಂದೆಯ ಮನೆಯಲ್ಲಿ ಕಳೆಯುತ್ತಾಳೆ. ಮದುವೆಯ ನಂತರದ ಒಂದು ವರ್ಷದ ಕಾಲದ ನಡುವೆ ಬರುವ ಎಲ್ಲೊಂದು ಹಬ್ಬದ ದಿನಗಳಂದು ವರ ತನ್ನ ಮಾವನ ಮನೆಗೆ ಹೋಗುತ್ತಾನೆ. ಅಲ್ಲಿ ಆತನಿಗೆ ಹೊಸ ಬಟ್ಟೆ ಬರೆಗಳ ಉಡುಗೊರೆಯೊಯಲಾಗುತ್ತದೆ.

ಹೆಣ್ಣು ಪ್ರಾಯಕ್ಕೆ ಬರುತ್ತಲೇ ಆಕೆಯನ್ನು ಚಿನ್ನಾಭರಣಗಳಿಂದ ಸಿಂಗರಿಸಿ, ಬೆಲೆ ಬಾಳುವ ಸೀರೆಯುಡಿಸಿ, ಎರಡು ಬದಿಗಳಲ್ಲಿ ಬೆಳಗುವ ದೀಪಿಗೆಯಿಟ್ಟು ಜಗಲಿಯ ಮೇಲೆ ಕುಳ್ಳಿರಿಸುತ್ತಾರೆ. ವಾದ್ಯದವರು ವಾದ್ಯ ನುಡಿಸುತ್ತಿರುತ್ತಾರೆ. ಈ ಸುದ್ದಿಯನ್ನು ಆಕೆಯ ಪತಿಗೆ ತ್ವರಿತ ತಿಳಿಸಲಾಗುತ್ತದೆ. ಹೆಣ್ಣಿನ ಗೆಳತಿಯರು, ನೆಂಟರಿಷ್ಟರು, ಮಿಠಾಯಿ ತಂದು ಆಕೆಗೆ ತಿನ್ನಿಸುತ್ತಾರೆ. ಮೊದಲ ದಿನದಿಂದ ನಾಲ್ಕನೆಯ ದಿನಗಳ ತನಕ ಆಕೆಯನ್ನು ಅದೇ ರೀತಿಯಲ್ಲಿ ನೋಡಿಕೊಳ್ಳುತ್ತಾರಾದರೂ ಆಕೆ ಅಶುದ್ಧಳಿರುವಳಾಗಿ ಭಾವಿಸಲಾಗುತ್ತದೆ. ಆಕೆಯನ್ನು ಸ್ಪರ್ಶಿಸಿದವರು ಮಿಂದು ತಮ್ಮನ್ನು ಶುದ್ಧೀಕರಿಸಿಕೊಳ್ಳಬೇಕಾಗುತ್ತದೆ. ಐದನೆಯ ದಿನ ಸ್ವಜಾತಿಯ ಸ್ತ್ರೀಯರನ್ನು ಊಟಕ್ಕಾಗಿ ಆಮಂತ್ರಿಸುತ್ತಾರೆ. ಸ್ನಾನ ಹಾಕಿಸಿದ ನಂತರ ಮನೆಯ ಮುಂಭಾಗದ ಜಗಲಿಯಲ್ಲಿ ಆಕೆಯನ್ನು ಮತ್ತು ಆಕೆಯ ಪತಿಯನ್ನು ಕಾಲ್ಮಣೆಗಳ ಮೇಲೆ ಕುಳ್ಳಿರಿಸುತ್ತಾರೆ. 'ಗರ್ಭಾದಾನ'ದ ವಿಧಿಗಳು ಮುಗಿದ ಬಳಿಕ ಗಂಡ ಆಕೆಯ ಮನೆಯಲ್ಲುಳಿದುಕೊಳ್ಳುತ್ತಾನೆ. ಅಥವಾ ಆಕೆಯನ್ನು ತನ್ನ ಮನೆಗೆ ಕೊಂಡುಹೋಗಿ ಅಲ್ಲಿ ಹವನ ಪೂರೈಸುತ್ತಾನೆ. ಆಕೆಯ ಅತ್ತೆ, ಮಾವಂದಿರು ಅಥವಾ ಆಕೆಯ ನಿಕಟ ಸಂಬಂಧಿಕರು ಅವಳಿಗೆ ಬೆಲೆ ಬಾಳುವ ಸೀರೆ, ರವಕೆಯ ಅರಿವೆಯನ್ನು ಉಡುಗೊರೆಯಾಗಿ ಕೊಡುತ್ತಾರೆ. ಆಕೆ ಈ ಸೀರೆಯನ್ನು ಉಡುತ್ತಾಳೆ. ರೂಢಿಯ ಕಾರ್ಯಕ್ರಮ, ಭೋಜನ ಸಮಾರಂಭ ಮುಗಿದ ನಂತರ ನವ ದಂಪತಿಗಳನ್ನು ಕುಳ್ಳಿರಿಸಿ ಮಿತ್ರರು, ನೆಂಟರಿಷ್ಟರು ಅವರಿಗೆ ಉಡುಗೊರೆಯೊಯುತ್ತಾರೆ; ಅಕ್ಷತೆ ಹಾಕಿ ಆರತಿಯೆತ್ತುತ್ತಾರೆ.

ಸ್ತ್ರೀ ಮೊದಲ ಬಾರಿಗೆ ಗರ್ಭವತಿಯಾದಾಗ ಏಳನೆಯ ತಿಂಗಳಲ್ಲಿ, ಒಂದು ದಿನ ಆಕೆಯ ಗಂಡನ ಮನೆಯ ಹೆಂಗಸರು ಸ್ವಜಾತಿಯ ಸ್ತ್ರೀಯರನ್ನು ಊಟಕ್ಕಾಗಿ ಆಮಂತ್ರಿಸುತ್ತಾರೆ. ಊಟದ ಬಳಿಕ ಗಂಡನ ಹೆತ್ತವರು ಅಥವಾ ಅವರ ಅತಿ ನಿಕಟ ಸಂಬಂಧಿಕರಲ್ಲೊಬ್ಬರು ಆಕೆಗೆ ಸೀರೆಯನ್ನು ಉಡುಗೊರೆಯಾಗಿ ಕೊಡುತ್ತಾರೆ. ಮತ್ತೆ ಆಕೆ ಅದನ್ನು ಉಡುತ್ತಾಳೆ. ನೆರೆದ ಸ್ತ್ರೀಯರು ಆಕೆಯ ಮಡಿಲಿಗೆ ಅಕ್ಕಿ, ತೆಂಗಿನ ಕಾಯಿ, ಅಡಕೆ, ವೀಳ್ಯದೆಲೆಗಳನ್ನು ಹಾಕುತ್ತಾರೆ. ಸ್ತ್ರೀ ಮೊದಲ ಹೆರಿಗೆಗೆ ಸರ್ವಸಾಮಾನ್ಯವಾಗಿ ತಂದೆಯ ಮನೆಗೆ ಹೋಗುತ್ತಾಳೆ.

* * * * * * *

ರೋಗಿ ಮರಳಿ ಸ್ವಾಸ್ಥ್ಯ ಪಡೆಯುವ ಲಕ್ಷಣ ಕಾಣದಾಗ ಕುಲ ಪುರೋಹಿತರಿಗೆ

ಮತ್ತು ಅನ್ಯ ಬ್ರಾಹ್ಮಣರಿಗೆ ಆತನ ಪಾಪ ವಿಮೋಚನಾರ್ಥ ದಾನವೀಯುತ್ತಾರೆ. ಶ್ರೀಮಂತರು ದನ, ಪೀಠೋಪಕರಣ, ಬಟ್ಟೆ ಬರೆ, ಪಾತ್ರೆಗಳು, ಧನ, ಧಾನ್ಯ, ಕೆಲವೊಮ್ಮೆ ಭೂಮಿ ಇತ್ಯಾದಿಗಳನ್ನು ದಾನದ ರೂಪದಲ್ಲೀಯುತ್ತಾರೆ. ಬಡವರು ತಾಮ್ರದ ನಾಣ್ಯ ಅಥವಾ ತಮ್ಮ ಸಾಮರ್ಥ್ಯಕ್ಕನುರೂಪವಾದ ವಸ್ತುಗಳನ್ನೀಯುತ್ತಾರೆ. ಪ್ರಾಣೋತ್ಕ್ರಮಣದ ಮುನ್ನ ಆತನ ಬಾಯಿಗೆ ಗಂಗಾಜಲದ ಕೆಲವೊಂದು ಬಿಂದುಗಳನ್ನು ಮತ್ತು ಚಿನ್ನದ ಸಣ್ಣ ತುಂಡೊಂದನ್ನು ಹಾಕುತ್ತಾರೆ. ತುಟಿ, ಕಿವಿ, ಮೂಗಿನ ಸೊಳ್ಳೆ, ಕಣ್ಣುಗಳಿಗೆ ತುಸು ತುಪ್ಪ ಸವರುತ್ತಾರೆ.

ಕೊನೆಯ ಕ್ಷಣದ ಲಕ್ಷಣ ಕಾಣಬರುತ್ತಲೇ ವ್ಯಕ್ತಿಯನ್ನು ಮನೆಯೊಳಕ್ಕಿನಿಂದ ಹೊರಕ್ಕೆ ತರುತ್ತಾರೆ. ಮತ್ತು ಸೆಗಣಿಯ ನೀರಿನಿಂದ ತೊಳೆದ ಜಗಲಿಯ ಮೇಲೆ ದರ್ಭೆ ಹರಡಿ, ಉಣ್ಣೆಯ ಬಟ್ಟೆಯನ್ನು ಹಾಸಿ ಅದರ ಮೇಲಕ್ಕೆ ಮಲಗಿಸುತ್ತಾರೆ. ಮತ್ತೆ ಬಲ ಕಿವಿಯಲ್ಲಿ ರಾಮ ಮತ್ತು ನಾರಾಯಣ ನಾಮವನ್ನು ಉಸುರುತ್ತಾರೆ. ಸಾಧ್ಯವಾದಲ್ಲಿ ವ್ಯಕ್ತಿ ಅವುಗಳ ಪುನರುಚ್ಚಾರ ಮಾಡುತ್ತಾನೆ.

ಪ್ರಾಣೋತ್ಕ್ರಮಣದ ನಂತರ ಪ್ರೇತಕರ್ಮ ಮಾಡುವ ಮುಖ್ಯ ವ್ಯಕ್ತಿ ತಣ್ಣೀರಿನ ಸ್ನಾನ ಮಾಡಿ, ಜುಟ್ಟಿನ ಹೊರತು ತಲೆ ಮತ್ತು ಗಡ್ಡ ಬೋಳಿಸಿಕೊಳ್ಳುತ್ತಾನೆ. ಆನಂತರ ತಣ್ಣೀರಿನಲ್ಲಿ ಮತ್ತೊಮ್ಮೆ ಸ್ನಾನ ಮಾಡಿ ಹೆಣದ ಕಾಲುಗಳ ಸಮೀಪ ಮಣ್ಣಿನ ಹೊಸ ಮಡಕೆಯಿಟ್ಟು ಪುರೋಹಿತರ ನೆರವಿನಿಂದ ಗೃಹಾಗ್ನಿ ತಯಾರಿಸುತ್ತಾನೆ. ತೀರಿಕೊಂಡಾತನಿಗೆ ಪತ್ನಿಯಿದ್ದಲ್ಲಿ ಆಕೆ ಜಗಲಿಯ ಮೂಲೆಯಲ್ಲಿ ಕುಳ್ಳಿರುತ್ತಾಳೆ. ಮೊತ್ತ ಮೊದಲು ಅವಳ ಕುತ್ತಿಗೆಯಿಂದ ಮಂಗಳ ಸೂತ್ರವನ್ನು ತೆಗೆಯುತ್ತಾರೆ. ಆನಂತರ ಅವಳ ಸಂಬಂಧಿಕರಲ್ಲಿನ ಹಿರಿಯಾಕೆ ಆಕೆಯ ರವಕೆ, ಗಾಜಿನ ಬಳೆಗಳು ಹಾಗೂ ಆಭರಣಗಳಿದ್ದಲ್ಲಿ ಅವುಗಳನ್ನೂ ಒಂದೊಂದಾಗಿ ತೆಗೆಯುತ್ತಾಳೆ. ಕೊನೆಗೆ ಅವಳ ತಲೆಯನ್ನು ಬೋಳಿಸಲಾಗುತ್ತದೆ. ಮಂಗಳಸೂತ್ರ, ಗಾಜಿನ ಬಳೆಗಳು, ಬೋಳಿಸಿ ತೆಗೆದ ಕೂದಲು ಮುಂತಾದವುಗಳನ್ನು ಆಕೆಯ ರವಕೆಯಲ್ಲಿ ಕಟ್ಟಿ ಮೃತ ವ್ಯಕ್ತಿಯ ತಲೆಯ ಪಕ್ಕದಲ್ಲಿ ಇಡುತ್ತಾರೆ. ಆಕೆಗೆ ತಣ್ಣೀರಿನ ಸ್ನಾನ ಹಾಕಿ ಕೆಂಪು ಬಣ್ಣದ ಸೀರೆ ತೊಡಿಸುತ್ತಾರೆ; ಸೆರಗನ್ನು ಮುಸುಕಿನಂತೆ ತಲೆಯ ಮೇಲಕ್ಕೆಳೆಯುತ್ತಾರೆ. ತೀರಿಕೊಂಡಾತನಿಗಿಂತಲೂ ಹಿರಿಯರಿದ್ದಲ್ಲಿ ಅವರನ್ನು ಬಿಟ್ಟು ಮತ್ತೆ ಯಾರೊಬ್ಬನ ತಂದೆ ಜೀವಂತವಿದ್ದಲ್ಲಿ ಆತನ ಹೊರತು, ಕುಟುಂಬದ ಇನ್ನುಳಿದ ಗಂಡಸರು, ರಕ್ತ ಸಂಬಂಧಿಕರು ತಲೆ, ಗಡ್ಡ, ಮೀಸೆ ಬೋಳಿಸಿಕೊಳ್ಳುತ್ತಾರೆ.

ಬಿದಿರಿನ ಚಟ್ಟವನ್ನು ತಯಾರಿಸಿ ಶವವನ್ನು ಮುಚ್ಚಲಾಗಿ ಬಿಳಿ ಬಟ್ಟೆಯ ಹೊದಿಕೆ ತರುತ್ತಾರೆ. ಶವವನ್ನು ಕುಳ್ಳಿರಿಸಿ ಬಿಸಿ ನೀರಿನ ಸ್ನಾನ ಹಾಕುತ್ತಾರೆ; ಆನಂತರ ನಿಲ್ಲಿಸಿ ಮತ್ತೆ ನೀರೆರೆದು ಹೊಸ ಬಟ್ಟೆ ತೊಡಿಸುತ್ತಾರೆ. ತೀರಿಕೊಂಡ ವ್ಯಕ್ತಿ ಮುತ್ತೈದೆಯಿದ್ದಲ್ಲಿ ಆಕೆಯ ಶವವನ್ನು ಕುಳ್ಳಿರಿಸಿ ಹೂವಿನಿಂದ ಸಿಂಗರಿಸುತ್ತಾರೆ. ಗಂಧದ ಎಣ್ಣೆ, ಕುಂಕುಮ, ಗಂಧ ಇತ್ಯಾದಿಗಳನ್ನು ಹಚ್ಚಿ, ಮಡಿಲಿಗೆ ತೆಂಗಿನಕಾಯಿ, ಅಕ್ಕಿ, ಅಡಕೆ, ವೀಳ್ಯದೆಲೆಗಳನ್ನು ಹಾಕುತ್ತಾರೆ. ವಿಧವೆಗೆ ಈ ಗೌರವವನ್ನು ತೋರಲಾಗುತ್ತಿಲ್ಲ. ಶವದ ಮೇಲಣ ಆಭರಣಗಳನ್ನು ತೆಗೆದ ನಂತರ ಪ್ರೇತ ಕರ್ಮ ಮಾಡುವಾತ ನೆರೆದವರ ನೆರವಿನಿಂದ ಶವವನ್ನು ಚಟ್ಟದ ಮೇಲೆ ಮಲಗಿಸಿ, ಹೊದಿಕೆಯಿಂದ ಮುಚ್ಚಿ, ಹುರಿ ಹಗ್ಗದಿಂದ ಗಟ್ಟಿಯಾಗಿ ಕಟ್ಟುತ್ತಾನೆ.

ಶವದ ಹೊದಿಕೆಯ ಕಾಲಿನೆಡೆಯ ಭಾಗದ ತುದಿಗೆ ತಾಮ್ರದ ನಾಣ್ಯವನ್ನು ಕಟ್ಟುತ್ತಾರೆ. ಬಿದಿರಿನ ತುಂಡುಗಳನ್ನು ತ್ರಿಕೋಣಾಕಾರದಲ್ಲಿರಿಸಿ ಅವುಗಳನ್ನು ಹುರಿಹಗ್ಗದಿಂದ ಕಟ್ಟಿ ಅದರ ಮೇಲಕ್ಕೆ ಮಣ್ಣಿನ ಹೊಸ, ಚಿಕ್ಕ ಮಡಕೆಯನ್ನಿಡುತ್ತಾರೆ. ಮಡಕೆಯೊಳಕ್ಕೆ ಉರಿಯುವ ಬೆರಣಿಯ ತುಂಡುಗಳನ್ನು ಮತ್ತು ಕೆಂಡವನ್ನು ಇಡುತ್ತಾರೆ. ಪ್ರೇತಕರ್ಮ ಮಾಡುವಾತ ಹುರಿಹಗ್ಗದಿಂದ ತೂಗುವ ಮಡಕೆಯನ್ನು ತನ್ನ ಬಲಕೈಯಲ್ಲಿ ಕೊಂಡು, ಸ್ವಜಾತಿಯ ನಾಲ್ಕು ಮಂದಿ ತಮ್ಮ ಭುಜಗಳ ಮೇಲಕ್ಕೇರಿಸಿ ಹೊತ್ತುಕೊಂಡು ಹೋಗುವ ಚಟ್ಟದ ಮುಂಭಾಗದಲ್ಲಿ ನಡೆದು ಹೋಗುತ್ತಾನೆ. ಅಂತ್ಯಯಾತ್ರೆಯಲ್ಲಿ ಭಾಗವಹಿಸುವ ಬಾಂಧವರು ಅಥವಾ ಅನ್ಯ ಜನರು ಪಂಚ ಪಾತ್ರೆ, ಹರಿವಾಣ, ಮಣೆ, ಸಣ್ಣ ತಪ್ಪಲೆ ಅಥವಾ ಅನ್ನ ಬೇಯಿಸುವ ಪಾತ್ರೆ ಮತ್ತು ಸ್ವಲ್ಪ ಅಕ್ಕಿಕೊಂಡು ಇವರೊಂದಿಗೆ ಹೋಗುತ್ತಾರೆ. ಅಂತ್ಯಯಾತ್ರೆಗೆ ನೆರೆದ ಜನರು ಮನೆ ಬಿಡುತ್ತಲೇ ಮನೆಯಲ್ಲಿ ಉಳಿದ ಇನ್ನಿತರ ಜನರು ವಿಧವೆಯನ್ನು, ಬಾಣಂತಿಯರು ಅಥವಾ ಸಾಮಾನ್ಯವಾಗಿ ಯಾರೊಬ್ಬರೂ ಬಳಸದಿದ್ದ ಕೋಣೆಗೆ ಕೊಂಡುಹೋಗುತ್ತಾರೆ. ಆ ಮೊದಲ್ಗೊಂಡು ಈ ಕೋಣೆಯನ್ನು ಅವಳೊಬ್ಬಳೇ ಉಪಯೋಗಿಸುತ್ತಾಳೆ.

ಸ್ಮಶಾನ ಸಮೀಪಿಸುತ್ತಲೇ ಚಟ್ಟವನ್ನು ಕೆಳಕ್ಕಿರಿಸಿ ಅದನ್ನು ಹೊರುವವರು ತಮ್ಮ ಸ್ಥಾನವನ್ನು ಅದಲು ಬದಲು ಮಾಡುತ್ತಾರೆ. ಹಾಗೆಯೇ ಶವದ ಹೊದಿಕೆಯ ತುದಿಗೆ ಕಟ್ಟಿದ್ದ ತಾಮ್ರದ ನಾಣ್ಯವನ್ನು ನೆಲದ ಮೇಲಿಕ್ಕುತ್ತಾರೆ. ಸ್ಮಶಾನ ಸೇರಿದ ಬಳಿಕ ಚಟ್ಟವನ್ನು ನೆಲದ ಮೇಲಿಕ್ಕುತ್ತಾರೆ. ಮತ್ತೆ ಚಿತೆಗಾಗಿ ಜಾಗವನ್ನಾರಿಸಿ ಅಲ್ಲಿ ಸೆಗಣಿಯ ನೀರನ್ನು ಸಿಂಪಡಿಸಿ ಕಬ್ಬಿಣದ ಮೊಳೆಯಿಂದ ಮೂರು ಗೆರೆಗಳನ್ನೆಳೆಯುತ್ತಾರೆ. ಈ ಭೂಮಿಯನ್ನು ಪೂಜಿಸಿ ಅಲ್ಲಿ ಸಣ್ಣ ಹೊಂಡವನ್ನು ಅಗೆದು ಅದರೊಳಕ್ಕೆ ದರ್ಭೆ ಮತ್ತು ನೀರನ್ನು ತುಂಬುತ್ತಾರೆ. ಹೊಂಡವನ್ನು ಮುಚ್ಚಿದ ಬಳಿಕ ಪ್ರೇತಕರ್ಮ ಮಾಡುವಾತ ಮಡಕೆಯಲ್ಲಿನ ಉರಿಯುವ ಬೆರಣಿಯ ತುಂಡುಗಳನ್ನು ಮತ್ತೆ ಕೆಂಡವನ್ನು ಅಲ್ಲಿ ಎರೆದು 'ಮಂತ್ರಾಗ್ನಿ' ಪ್ರಜ್ವಲಿಸುತ್ತಾನೆ. ಈ ನಡುವೆ ಮರದ ಕೊರಡುಗಳಿಂದ ಚಿತೆ ತಯಾರಿಸಲಾಗುತ್ತದೆ. ಚಟ್ಟಕ್ಕೆ ಬಿಗಿದ ಹಗ್ಗವನ್ನು ಬಿಚ್ಚಿ ಶವದ ಹೊದಿಕೆಯನ್ನು ತೆಗೆಯುತ್ತಾರೆ. ಚಿತೆಯ ಮೇಲಿಕ್ಕುವ ಶವದ ತಲೆ ಉತ್ತರಕ್ಕಿರುತ್ತದೆ. ಶವಕ್ಕೆ ತೊಡಿಸಿದ್ದ ಬಟ್ಟೆಯ ಗಂಟನ್ನು ಸಡಿಲಿಸುತ್ತಾರೆ. ಆ ಬಳಿಕ ಗೋಧಿಯ ಹಸಿ ಹಿಟ್ಟಿನಿಂದ ಮಾಡಿದ ದುಂಡಗಿನ ಐದು ಉಂಡೆಗಳನ್ನು ಶವದ ಮೇಲಿಕ್ಕುತ್ತಾರೆ. ವ್ಯಕ್ತಿಯ ಸಾವು ಅಶುಭ ಕಾಲದಲ್ಲಾಗಿದ್ದರೆ ಗೋಧಿಯ ಹಸಿ ಹಿಟ್ಟಿನಿಂದ ಮನುಷ್ಯನ ಆಕೃತಿಯೊಂದನ್ನು ತಯಾರಿಸಿ ಶವದ ಬಳಿ ಇಡುತ್ತಾರೆ. ಗಂಡಸಿನ ಶವವಿದ್ದಲ್ಲಿ ಪ್ರೇತಕರ್ಮ ಮಾಡುವಾತ ಅದರ ತಲೆಯತ್ತ ಮತ್ತು ಸ್ತ್ರೀಯದ್ದಾಗಿದ್ದಲ್ಲಿ ಅದರ ಪಾದಗಳಿದ್ದೆಡೆ ಚಿತೆಗೆ ಅಗ್ನಿಯೀಯುತ್ತಾನೆ. ಅನಂತರ ಆತ ನೀರು ತುಂಬಿದ ತಂಬಿಗೆಕೊಂಡು ಧಾರೆ ನಿಲ್ಲದಂತೆ ನೀರನ್ನು ಸುರಿಯಗೊಡುತ್ತಾ ಚಿತೆಗೆ ಒಂದು ಬಾರಿ ಸುತ್ತು ಹಾಕುತ್ತಾನೆ, ಸುತ್ತು ಮುಗಿಯುತ್ತಲೇ ಶವದ ಮೈಯ ಮೇಲೆ ಒಂದು ಅಥವಾ ಎರಡು ಸ್ತರಗಳಲ್ಲಿ ಕಟ್ಟಿಗೆಯ ಕೊರಡುಗಳನ್ನಿಡಲಾಗುತ್ತದೆ. ಹಾಗೆಯೇ ಬಿದಿರನ್ನೆಳೆದು ಚಟ್ಟವನ್ನು ಕಳಚಿ ಹಾಕಲಾಗುತ್ತದೆ. ಶವ ಪೂರ್ಣ ಸುಟ್ಟು ಹೋಗುವ ತನಕ ಅಂತ್ಯಯಾತ್ರೆಯಲ್ಲಿ ಸಹಭಾಗಿಗಳಾಗಿದ್ದ ಜನರು ಅಲ್ಲಿಯೇ ಇರುತ್ತಾರೆ.

ಶವ ಸುಟ್ಟು ಹೋದ ಬಳಿಕ ಪ್ರೇತ ಕರ್ಮ ಮಾಡುವಾತ ಗೃಹಾಗ್ನಿ ತಂದಿದ್ದ ಮಣ್ಣಿನ ಹೊಸ ಮಡಕೆಯಲ್ಲಿ ನೀರನ್ನು ತುಂಬಿಸಿ ತನ್ನ ಎಡಭುಜದ ಮೇಲಕ್ಕಿಟ್ಟು, ಅದರ ತಳ ಭಾಗಕ್ಕೆ ಕಲ್ಲಿನಿಂದ ಸಣ್ಣ ತೂತು ಮಾಡಿ, ನೀರು ಸುರಿಯುತ್ತಿದ್ದಂತೆ, ಚಿತೆಗೆ ಸುತ್ತು ಬರುತ್ತಾನೆ. ತೀರಿಕೊಂಡಾತ ಗಂಡಸಿದ್ದಲ್ಲಿ ಶವದ ಶಿರೋಭಾಗದ ಎಡಬದಿಯಿಂದಾಗಿ, ವ್ಯಕ್ತಿ ಸ್ತ್ರೀಯಾಗಿದ್ದಲ್ಲಿ ಶವದ ಕಾಲುಗಳ ಎಡಭಾಗದಿಂದಾಗಿ ಪ್ರದಕ್ಷಿಣೆಗೆ ಆರಂಭಿಸುತ್ತಾನೆ. ಸುತ್ತು ಮುಗಿಯುತ್ತಲೇ ಕಲ್ಲಿನಿಂದ ಮಡಕೆಯ ತೂತನ್ನು ತುಸು ದೊಡ್ಡದನ್ನಾಗಿ ಮಾಡಲಾಗುತ್ತದೆ. ಈ ರೀತಿಯಲ್ಲಿ ಚಿತೆಗೆ ಮೂರು ಸುತ್ತು ಬಂದ ಬಳಿಕ ಮಡಕೆಯನ್ನು ನೆಲಕ್ಕಪ್ಪಳಿಸಿ ಒಡೆದು ಹಾಕಲಾಗುತ್ತದೆ. 'ಪ್ರೇತ ಶಿಲೆ' ಎನ್ನಲಾಗುವ ಈ ಕಲ್ಲಿನ ತುಂಡನ್ನು ದರ್ಭೆಯಿಂದ ಸುತ್ತಿ ಪ್ರೇತಕರ್ಮ ಮಾಡುವಾತ ತನ್ನ ಮನೆಗೆ ಕೊಂಡು ಹೋಗುತ್ತಾನೆ. ಮಡಕೆಯನ್ನೊಡೆಯುವಾಗ ಆತ ಬಾಯಿಗೆ ಕೈ ಬಡಿದು ಬೊಬ್ಬಿಡಲಾರಂಭಿಸುತ್ತಾನೆ.

ಮಣೆಯ ಮೇಲೆ ಕುಳಿತು ಆತ 'ಪ್ರೇತಶಿಲೆ' ಗೆ ಅದಾಗ ತಾನೇ ಬೇಯಿಸಿದ ಅನ್ನದಿಂದ ಮಾಡಿದ ಪಿಂಡಗಳನ್ನರ್ಪಿಸುತ್ತಾನೆ. ಪಿಂಡದೊಂದಿಗೆ ಗೋದಿಯ ಹಸಿ ಹಿಟ್ಟಿನಿಂದ ಮಾಡಿದ ಉಂಡೆಯೊಂದನ್ನು ಅರ್ಪಿಸಲಾಗುತ್ತದೆ. ಮತ್ತೆ ತಂಬಿಗೆಯಲ್ಲಿನ ನೀರನ್ನು ಪಂಚಪಾತ್ರೆಗೆ ಎರೆಯಲಾಗುತ್ತದೆ. ಅನಂತರ ಅಂತ್ಯಯಾತ್ರೆಯಲ್ಲಿ ಸಹಭಾಗಿಗಳಾಗಿದ್ದವರು 'ಪ್ರೇತಶಿಲೆ' ಪಂಚಪಾತ್ರೆ, ಮಣೆ ಇತ್ಯಾದಿಗಳೊಂದಿಗೆ ಮರಳುತ್ತಾರೆ. ಮತ್ತು ತಂದ ವಸ್ತುಗಳನ್ನು ಸುರಕ್ಷಿತವಾದ ಸ್ಥಾನದಲ್ಲಿಡುತ್ತಾರೆ. ಚಟ್ಟ ಹೊತ್ತ ನಾಲ್ಕು ಮಂದಿಗಳನ್ನು ಬಿಟ್ಟು ಇನ್ನುಳಿದವರು ತಮ್ಮ ಮನೆಗಳಿಗೆ ಮರಳುತ್ತಾರೆ. ಈ ನಾಲ್ಕು ಮಂದಿ ಪ್ರೇತಕರ್ಮ ಮಾಡುವಾತನೊಂದಿಗೆ ನಕ್ಷತ್ರಗಳ ದರ್ಶನಕೊಂಡು, ಎದುರಿಗೆ ಇಟ್ಟಿದ್ದ ಅಗ್ನಿಯನ್ನು ಸ್ಪರ್ಶಿಸಿ ತಮ್ಮ ಮನೆಗೆ ಮರಳುತ್ತಾರೆ. ಶವಸಂಸ್ಕಾರದಲ್ಲಿ ಭಾಗವಹಿಸಿದವರು ಹಾಲು, ತುಪ್ಪಗಳಿಲ್ಲದ ಬರೆಯ ಗಂಜಿಯೂಟ ಮಾಡಿ ಚಾಪೆಯ ಮೇಲೆ ಮಲಗುತ್ತಾರೆ. ಪ್ರೇತಕರ್ಮಗಳನ್ನು ಮಾಡುವಾತ ಹತ್ತು ದಿನಗಳ ತನಕ ಉಪ್ಪು ಹಾಕದ ಊಟವನ್ನು ದಿನಕ್ಕೊಂದೇ ಬಾರಿ ಉಣ್ಣುತ್ತಾನೆ. ಆ ದಿನಗಳಲ್ಲಿ ಆತ ತನ್ನ ಸಾಮಾಜಿಕ ವ್ಯವಹಾರಗಳಿಂದ ದೂರಕ್ಕಿರುತ್ತಾನೆ.

ಮನೆಯಲ್ಲಿನ ದೇವರ ಪೂಜೆಯನ್ನು ಸೂತಕವಿಲ್ಲದ ಇನ್ನಾರೊಬ್ಬ ವ್ಯಕ್ತಿ ಮಾಡುತ್ತಾನೆ.

ಪ್ರೇತ ಕರ್ಮಗಳನ್ನು ಮಾಡುವಾತ ಉಣ್ಣುವ ಮೊದಲು ಪಿಂಡವೊಂದನ್ನು ತೀರಿಕೊಂಡಾತ ಪ್ರಾಣಬಿಟ್ಟ ಸ್ಥಾನದಲ್ಲಿಟ್ಟಿದ್ದ ದೀಪಕ್ಕೆ ಅರ್ಪಿಸುತ್ತಾನೆ. ಅಲ್ಲಿ ಬುಟ್ಟಿಯಲ್ಲಿಟ್ಟಿದ್ದ ಹಳೆಯ ಪಿಂಡವನ್ನು ತೆಗೆದು ಅದರ ಸ್ಥಾನದಲ್ಲಿ ಹೊಸ ಪಿಂಡವನ್ನಿಟ್ಟ ನಂತರವೇ ತಾನು ಉಣ್ಣುತ್ತಾನೆ. ಎರಡನೆಯ ದಿನ ಆತ ಪುರೋಹಿತರೊಂದಿಗೆ ಸ್ಮಶಾನ ಭೂಮಿಗೆ ಅಥವಾ ಹಳ್ಳ, ತೊರೆಗಳಿದ್ದೆಡೆಗೆ ಕೆಲವೊಂದು ಪಾತ್ರೆ, ಅಕ್ಕಿ, ಅಗ್ನಿ, 'ಪ್ರೇತ ಶಿಲೆ' ಇತ್ಯಾದಿಗಳೊಂದಿಗೆ ಹೋಗುತ್ತಾನೆ. ಅಲ್ಲಿ ಅನ್ನ ಬೇಯಿಸಿ, ಪ್ರೇತ ಶಿಲೆಗೆ ನೀರಿನ ಸಮೇತ ಪಿಂಡವನ್ನು ಸಮರ್ಪಿಸುತ್ತಾನೆ.

ಮೂರನೆಯ ದಿನದಂದು ಪಿಂಡ ಮತ್ತು ನೀರನ್ನು ಸಮರ್ಪಿಸಿದ ನಂತರ, ಪುರೋಹಿತರೊಂದಿಗೆ ಸ್ಮಶಾನ ಭೂಮಿಗೆ ಹೋಗುತ್ತಾನೆ. ಶವಸಂಸ್ಕಾರ ಮಾಡಿದಲ್ಲಿ

ಪಂಚಗವ್ಯ ಸಿಂಪಡಿಸಿ ಚಿತೆಯ ಬೂದಿಯನ್ನು ಒಂದುಗೂಡಿಸಿ, ತ್ರಿಕೋಣಾಕಾರ ಕುಪ್ಪೆ ಮಾಡಿ ಅದರ ಮೇಲಕ್ಕೆ ದರ್ಭೆಯನ್ನು ಹರಡುತ್ತಾನೆ. ಕುಪ್ಪೆಯ ಸಮೀಪ ಐದು ಶೀಯಾಳಗಳನ್ನಿಡುತ್ತಾನೆ. ಮತ್ತೆ ಗೋದಿಯ ಹಸಿ ಹಿಟ್ಟಿನ ಐದು ಉಂಡೆಗಳನ್ನು ತಯಾರಿಸಿ ಅವುಗಳಲ್ಲಿನ ಮೂರನ್ನು, ಪ್ರತ್ಯೇಕವಾಗಿ ದರ್ಭೆ ಹುಲ್ಲಿನ ಎಳೆಗಳ ಮೇಲಕ್ಕೆ ಒಂದರ ಹಿಂದಕ್ಕೆ ಇನ್ನೊಂದರಂತೆ ಸಾಲಾಗಿ ಇಡುತ್ತಾನೆ. ಇನ್ನುಳಿದ ಎರಡನ್ನು ಕೆಳಭಾಗದಲ್ಲಿ ಸಮಕೋಣದ ಆಕಾರಕೊಳ್ಳುವಂತೆ ಇಡುತ್ತಾನೆ. ಶೀಯಾಳಗಳ ಸಮೀಪ ಆಕಾರದಲ್ಲಿ ಚಿಕ್ಕದಾಗಿದ್ದ ಆರು ಮಣ್ಣಿನ ಮಡಕೆಗಳನ್ನಿಡುತ್ತಾನೆ. ಅಲ್ಲಿಯೇ ಹಳದಿ ಬಣ್ಣದ ಹಲವೊಂದು ಚಿಕ್ಕ ಚಿಕ್ಕ ಪತಾಕೆಗಳನ್ನೂರುತ್ತಾನೆ. ಚಿತೆಯ ಬೂದಿಯ ಕುಪ್ಪೆಯ ಬಳಿ ಇಟ್ಟಿದ್ದ 'ಪ್ರೇತಶಿಲೆ' ಗೆ ಪಿಂಡವನ್ನರ್ಪಿಸಿ ನೀರು ಬಿಡುತ್ತಾನೆ. ಆ ಬಳಿಕ ಅಸ್ಥಿಯನ್ನು ಸಣ್ಣ ಮಡಕೆಯೊಂದರಲ್ಲಿ ಮತ್ತು ಬೂದಿಯನ್ನು ದೊಡ್ಡ ಮಡಕೆಯಲ್ಲಿ ತುಂಬುತ್ತಾನೆ. ಮತ್ತು ಇವುಗಳೊಂದಿಗೆ ಆತ ಸ್ಮಶಾನ ಭೂಮಿಯಿಂದ ಮರಳುತ್ತಾನೆ. ಅಸ್ಥಿ ಸಂಗ್ರಹಿಸುವ ಈ ವಿಧಿಯನ್ನು ಮರಣಾ ನಂತರ ಮೂರನೆಯ, ಐದನೆಯ, ಏಳನೆಯ ಅಥವಾ ಒಂಭತ್ತನೆಯ ದಿನದಂದು ಜರಗಿಸಲಾಗುತ್ತದೆ. ಬೂದಿಯನ್ನು ತೊರೆ ಅಥವಾ ನದಿಗೆ ಹಾಕುತ್ತಾರೆ. ಅಸ್ಥಿಯನ್ನು ಅವಕಾಶ ದೊರಕಿದಾಗ ಕಾಶಿಯಲ್ಲಿನ ಗಂಗೆಗೆ ಅಥವಾ ಗೋಕರ್ಣದಲ್ಲಿ ಸಮುದ್ರಕ್ಕೆ ಅರ್ಪಿಸಲಾಗಿ ಸುರಕ್ಷಿತವಾಗಿ ಇಡಲಾಗುತ್ತದೆ. 'ಪ್ರೇತಶಿಲೆ'ಗೆ ನಾಲ್ಕರಿಂದ ಒಂಭತ್ತು ದಿನಗಳ ತನಕ ಪಿಂಡ ಮತ್ತು ನೀರನ್ನು ಅರ್ಪಿಸಲಾಗುತ್ತದೆ; ಐದನೆಯ, ಏಳನೆಯ ಮತ್ತು ಒಂಭತ್ತನೆಯ ದಿನಗಳಂದು ನಿತ್ಯದ ಪಿಂಡದೊಂದಿಗೆ ಗೋದಿಯ ಹಸಿ ಹಿಟ್ಟಿನ ಉಂಡೆಯನ್ನು ಅರ್ಪಿಸಲಾಗುತ್ತದೆ.

ಹತ್ತನೆಯ ದಿನದಂದು ಪಿಂಡದೊಂದಿಗೆ ಐದು ಶೀಯಾಳಗಳು, ಗೋದಿಯ ಹಸಿ ಹಿಟ್ಟಿನ ಐದು ಉಂಡೆ ಮತ್ತು ದರ್ಭೆ ಹುಲ್ಲಿನ ಐದು ಕಟ್ಟುಗಳನ್ನು ಅರ್ಪಿಸಲಾಗುತ್ತದೆ. 'ಪ್ರೇತಶಿಲೆ' ಗೆ ಎಳ್ಳಿನ ಎಣ್ಣೆ ಹಚ್ಚಿ ಪಿಂಡವನ್ನರ್ಪಿಸಿ, ಧೂಪ, ದೀಪಗಳ ಆರತಿಯನ್ನೆತ್ತಲಾಗುತ್ತದೆ. ಪ್ರೇತಕರ್ಮಗಳನ್ನು ಮಾಡಿದಾಗ ಪ್ರೇತ ಶಿಲೆಯೊಂದಿಗೆ ಕೆರೆ ಅಥವಾ ನದಿಯತ್ತ ಹೋಗುತ್ತಾನೆ. ಅಲ್ಲಿ ಪೂರ್ವದಿಕ್ಕಿಗೆ ಮುಖ ಮಾಡಿ ಈ ಶಿಲೆಯನ್ನು ಹಿಂಭಾಗದಲ್ಲಿದ್ದ ನೀರಿಗೆ ಬೀಳುವಂತೆ ತಲೆಯ ಮೇಲಿಂದಾಗಿ ತೂರುತ್ತಾನೆ. ಅನಂತರ ಮನೆಗೆ ಹೋಗಿ ದೀವಿಗೆಯಲ್ಲಿ ಬೆಳಗುತ್ತಿದ್ದ ಬತ್ತಿಯನ್ನು ಹಿಂದಕ್ಕೆಳೆದು ಜ್ಯೋತಿಯನ್ನು ನಂದಿಸುತ್ತಾನೆ. ದೀಪ ಆರಿದಂತೆ ಮನೆಯಲ್ಲಿನ ಜನರು ಬೊಬ್ಬಿಡಲಾರಂಭಿಸುತ್ತಾರೆ.

ಹನ್ನೊಂದನೆಯ ದಿನ ಪುರೋಹಿತರು ಮನೆಯವರೆಲ್ಲರಿಗೂ ಪಂಚಗವ್ಯವಿತ್ತು ಶ್ರಾದ್ಧದ ಕಾರ್ಯಕ್ಕೆ ತೊಡಗುತ್ತಾರೆ. ನೆರೆದವರಿಗೆ ಭೋಜನ ಹಾಕಲಾಗುತ್ತದೆ. ಪುರೋಹಿತರು ಮತ್ತು ನೆರೆದ ಇನ್ನಿತರ ಬ್ರಾಹ್ಮಣರಿಗೆ ಧನ, ಬಟ್ಟೆ, ಕೊಡೆ, ಪಾದರಕ್ಷೆ, ತಂಬಿಗೆ, ಹಣ ಇತ್ಯಾದಿಗಳ ದಾನವೀಯಲಾಗುತ್ತದೆ. ಹನ್ನೆರಡನೆಯ ದಿನ ಪ್ರೇತಕರ್ಮಗಳನ್ನು ಮಾಡುವಾತ ಮೃತನ ಆತ್ಮಕ್ಕೆ ಪಿಂಡ, ನೀರು ಅರ್ಪಿಸಿ ಅದನ್ನು ನದಿ ಅಥವಾ ತೊರೆಗೆ ಹಾಕುತ್ತಾನೆ. ಅನಂತರ ಜಾತಿ ಬಾಂಧವರಿಗೆ ಊಟ ಹಾಕಲಾಗುತ್ತದೆ. ಇದಕ್ಕೆ 'ವೈಕುಂಠ ಸಮಾರಾಧನೆ' ಎನ್ನುತ್ತಾರೆ. ವ್ಯಕ್ತಿಯ ಪ್ರಾಣೋತ್ಕ್ರಮಣದ ಸಮಯ ಅಶುಭವಿದ್ದಲ್ಲಿ

ಮನೆಯನ್ನು ಹದಿನೈದು ದಿನಗಳಿಂದ ಆರು ತಿಂಗಳ ಕಾಲದ ತನಕ ಬರಿದಾಗಿಡುತ್ತಾರೆ.

ವ್ಯಕ್ತಿ ತೀರಿಕೊಂಡ ನಂತರದ ಹನ್ನೆರಡು ತಿಂಗಳುಗಳ ಕಾಲ, ಸರ್ವ ಸಾಮಾನ್ಯವಾಗಿ ಪ್ರತಿ ತಿಂಗಳ ಕೊನೆಯ ದಿನದಂದು 'ಮಾಸಿಕ' ಆಚರಿಸಲಾಗುತ್ತದೆ. ಅಂದು ಪಿಂಡಗಳನ್ನು ತಯಾರಿಸಿ ನೀರಿನೊಂದಿಗೆ ಮೃತಾತ್ಮಕ್ಕೆ ಅರ್ಪಿಸಲಾಗುತ್ತದೆ. ಎರಡು ಮತ್ತು ಹನ್ನೆರಡರೊಳಗಣ ಸಂಖ್ಯೆಯ ಬ್ರಾಹ್ಮಣರಿಗೆ ಊಟ ಹಾಕಲಾಗುತ್ತದೆ. ವರ್ಷದ ಕೊನೆಗೆ 'ವರ್ಷಿಕ'ವನ್ನಾಚರಿಸಲಾಗುತ್ತದೆ. ಮತ್ತೆ ಅದನ್ನು ಆತನ ಮಕ್ಕಳು ಅಥವಾ ಹತ್ತಿರದ ಸಂಬಂಧಿಕರು ತಮ್ಮ ಜೀವಮಾನದುದ್ದ ಆಚರಿಸುತ್ತಾರೆ. ಆ ದಿನಗಳಲ್ಲಿ ಎರಡು ಮತ್ತು ಹನ್ನೆರಡರೊಳಗಣ ಸಂಖ್ಯೆಯ ಬ್ರಾಹ್ಮಣರಿಗೆ ಊಟ ಹಾಕಲಾಗುತ್ತದೆ. ವ್ಯಕ್ತಿ ತೀರಿಕೊಂಡ ನಂತರದ ಹನ್ನೆರಡನೆಯ ತಿಂಗಳಿನ, ಹನ್ನೆರಡನೆಯ, ಹದಿಮೂರನೆಯ ಮತ್ತು ಅದೇ ತಿಂಗಳ ಕೊನೆಯ ದಿನದಂದು, ವ್ಯಕ್ತಿ ಗಂಡಸಾಗಿದ್ದಲ್ಲಿ ತೀರಿಕೊಂಡಾತನ ಪ್ರಾಯದ ಗಂಡಸಿಗೆ, ಹೆಂಗಸಾಗಿದ್ದಲ್ಲಿ ಆಕೆಯ ಪ್ರಾಯದ ಹೆಂಗಸಿಗೆ ಉಣಬಡಿಸಿ, ಹೊಸ ಬಟ್ಟೆಯ ಉಡುಗೊರೆ ಈಯಲಾಗುತ್ತದೆ. ರಕ್ತ ಸಂಬಂಧಕೊಂಡವರು ತೀರಿಕೊಂಡಿದ್ದಲ್ಲಿ ಅವರ ಉತ್ತರಾಧಿಕಾರಿಗಳು ಪ್ರತಿವರ್ಷ, ಭಾದ್ರಪದ ಮಾಸದ (ಅಗಸ್ಟ್-ಸಪ್ಟೆಂಬರ್) ಕೃಷ್ಣ ಪಕ್ಷದಲ್ಲಿ 'ಪಿತೃ'ರಿಗೆ ಸಲ್ಲಿಸುವ ತಮ್ಮ ಪೂಜಾ ವಿಧಿಗಳೊಂದಿಗೆ ಅವರ ಆತ್ಮಗಳನ್ನೂ ಸೇರಿಸಿಕೊಳ್ಳುತ್ತಾರೆ. ಪಕ್ಷದುದ್ದದ ಈ ಕಾಲಕ್ಕೆ 'ಮಹಾಪಿತೃಪಕ್ಷ' ಎನ್ನುತ್ತಾರೆ.

ಶೆಣ್ವಿಯರ ಗುರುಗಳು ಅವರ ಸಮಾಜದ ಹಿರಿಯರಾಗಿದ್ದಾರೆ. ಸಮಾಜದ ಕ್ಲಿಷ್ಟ ಸಮಸ್ಯೆಗಳನ್ನು ಸಾಮಾನ್ಯವಾಗಿ ಶೆಣ್ವಿ ಹಿರಿಯರು ತಮ್ಮ ಸಭೆಯಲ್ಲಿ ಚರ್ಚೆ ಮಾಡಿ ಅದರ ವರದಿಯನ್ನು ಗುರುಗಳಿಗೆ ಬರೆದು ತಿಳಿಸುತ್ತಾರೆ. ಆ ಕುರಿತಾದ ಗುರುಗಳ ನಿರ್ಣಯ ಅಂತಿಮವಿದ್ದು ಅದನ್ನು ಸಮಾಜ ಬಾಂಧವರು ಆಚರಣೆಗೆ ತರುವಂತೆ ನೋಡಿಕೊಳ್ಳಲಾಗುತ್ತದೆ. ಸಮಸ್ಯೆ ಗಂಭೀರವಿದ್ದಲ್ಲಿ ಗುರುಗಳು ಸ್ವತಃ ವಿಚಾರಣೆ ಮಾಡುತ್ತಾರೆ.

ಪರಿಶಿಷ್ಟ ೨

ಕೊಂಕಣಿ ಬ್ರಾಹ್ಮಣರು

(ಸಾರಸ್ವೀಕರರು)

(ಕೊಚ್ಚಿನ್ ಸರಕಾರ ೧೯೧೨ರಲ್ಲಿ ಪ್ರಕಾಶಿಸಿದ ಅನಂತಕೃಷ್ಣ ಐಯ್ಯರ್, ಬಿ.ಎ., ಎಲ್.ಟಿ., ಎಮ್.ಆರ್.ಎಸ್., ಇವರ ಅತ್ಯಮೂಲ್ಯ ಗ್ರಂಥ 'ಕೊಚ್ಚಿನ್ ಟ್ರೈಬ್ಸ್ ಎಂಡ್ ಕಾಸ್ಟ್ಸ್' ಎಂಬ ಪುಸ್ತಕದಿಂದ ಉದ್ಧರಿಸಲ್ಪಟ್ಟುದು)

ಕೊಂಕಣ ಬ್ರಾಹ್ಮಣರು ಪಂಚದ್ರಾವಿಡರೊಂದಿಗೆ ಸಂಬಂಧಕೊಂಡಿದ್ದಿರದ ಪಂಚ (ಐದು) ಗೌಡರ ಬಣಕ್ಕೆ ಸೇರಿದವರಿದ್ದರು. ತನ್ನದೇ ಆದ ಮಹತ್ವಕೊಂಡಿದ್ದ ಈ ಸಮಾಜವನ್ನು ಸಾಮಾನ್ಯವಾಗಿ ರಾಜ್ಯದ ದಕ್ಷಿಣ ಭಾಗದಲ್ಲಿ ಕಾಣಬಹುದು. ಕಳೆದ ಜನಗಣನೆಯಲ್ಲಿ ರಾಜ್ಯದಲ್ಲಿ ೮೫೨೨ ವ್ಯಕ್ತಿಗಳು ಕಾಣ ಬಂದಿದ್ದರು. ಅವರಲ್ಲಿ ೪೫೮೦ ಮಂದಿ ಗಂಡಸರು ಮತ್ತು ೩೯೪೨ ಹೆಂಗಸರಿದ್ದರು.

ಪಾರಂಪಾರಿಕವಾಗಿ ನಂಬಿ ಬಂದಿದ್ದ ಜಾತಿಯ ಮೂಲ ಮತ್ತು ಅದರ ಇತಿಹಾಸ

ಪಂಜಾಬ್ ಕೊಂಕಣ ಬ್ರಾಹ್ಮಣರ ಮೂಲ ಸ್ಥಾನವಾಗಿದ್ದು ಅಲ್ಲಿ ಹರಿಯುತ್ತಿದ್ದ ಐದು ನದಿಗಳ ತೀರದಲ್ಲಿ 'ಪಂಚ ಜನ' ಅಥವಾ ಅವರ ಐದು ಬಣಗಳು ನೆಲಸಿಕೊಂಡಿದ್ದವು. ಇವು ಕಾಲಾಂತರದಲ್ಲಿ ತಮ್ಮ ಸಂಸ್ಕೃತಿಯನ್ನು ಭಾರತದಾದ್ಯಂತ ಹರಡಿದವು. ಐದು ಬಣಗಳಲ್ಲಿನ ಒಂದು ಬಣ ಸರಸ್ವತಿ ನದಿ (ಥಾನೇಶ್ವರದ ಸಮೀಪದಲ್ಲಿನ ಅರ್ವಾಚೀನ ಸರಸ್ವತಿಯಿರಬೇಕು)ಯ ತೀರದಲ್ಲಿ ನೆಲಸಿತ್ತು. ಪ್ರಾಚೀನ ಕಾಲದ ನದಿಗಳಲ್ಲಿ ಅತಿಪವಿತ್ರವೆನ್ನಲಾಗುತ್ತಿದ್ದ ಈ ನದಿಯ ಉಲ್ಲೇಖವನ್ನು ಋಗ್ವೇದದ ಹಲವೊಂದು ಶ್ಲೋಕಗಳಲ್ಲಿ ಕಾಣಬಹುದು. ಸರಸ್ವತಿ ನದಿಯ ತೀರದಲ್ಲಿ ವಾಸಮಾಡುತ್ತಿದ್ದ ಬಣದ ಮೂಲ ಪುರುಷ ದಧೀಚಿಯ ಪುತ್ರ ಸಾರಸ್ವತನೆಂದು ಹೇಳಲಾಗುತ್ತದೆ. ಋಗ್ವೇದದಲ್ಲಿ (೭-೯೬) ಈತ ಸಾರಸ್ವತ ಅಥವಾ ಸಾರಸ್ವನ್ ಎಂದಾಗಿ ಪರಿಚಿತನಾಗಿರುತ್ತಾನೆ. ಭೀಕರ ಬರಗಾಲದ ನಿಮಿತ್ತ ಸರಸ್ವತಿ ನದಿಯ ಕಿನಾರೆಯಲ್ಲಿನ ನಿವಾಸಿಗಳು ಊರು ಬಿಟ್ಟು ಹೋದರು. ಅದರೊಂದಿಗೆ ಅವರು ವೇದಾದಿಗಳನ್ನು ಮರೆತರು. ಬರಗಾಲ ಸರಿದ ಬಳಿಕ ತಮ್ಮೂರಿಗೆ ಮರಳಿದ ಇವರು ವೇದಗಳ ಪುನರಭ್ಯಾಸಕ್ಕೆ ಸಾರಸ್ವತನ ಛಾತ್ರರಾಗಬೇಕಾಯಿತು. ಕೊಂಕಣಿಗರು ಗೌಡ ಸಾರಸ್ವತರೆಂಬ ಬುಡಕಟ್ಟಿನ ಹೆಸರನ್ನು ಈ ಖ್ಯಾತ ನಾಮ ಋಷಿ ಸಾರಸ್ವತನಿಂದ ಕೊಂಡಿರುತ್ತಾರೆ.

ಪವಿತ್ರವಿದ್ದ ಸರಸ್ವತಿ ನದಿಯ ತೀರದಲ್ಲಿನ ಆರ್ಯರ (ಸಾರಸ್ವತರ) ಸಂಖ್ಯೆ ಬೆಳೆದಂತೆ ಅವರು ಪೂರ್ವ ದಿಶೆಯಲ್ಲಿನ ಬಂಗಾಳದತ್ತ ವಲಸೆ ಸಾಗಿ ಅಲ್ಲಿನ ತ್ರಿಹೋತ್ರಪುರ (ಮಿಥಿಲೆಯಲ್ಲಿನ ಈಗಿನ ತಿರ್ಹತ್)ದಲ್ಲಿ ನೆಲಸಿಕೊಂಡರು. ಮಧ್ಯ ಬಂಗಾಳದ ಪ್ರಾಚೀನ ಹೆಸರು ಗೌಡ ಎಂದಾಗಿತ್ತು. ಈ ಪ್ರದೇಶಕ್ಕೆ ಬಂದು ನೆಲಸಿದವರು (ಐದು ಬಣಗಳಲ್ಲಿನ ಒಂದು ಬಣ) ಗೌಡ ಸಾರಸ್ವತರೆಂದಾಗಿ ಪರಿಚಿತರಾದರು.

'ಪ್ರಥಮ ವರ್ಣದ' ವ್ಯುತ್ಪತ್ತಿ ವಿರಾಟ ಪುರುಷನ ಮುಖದಿಂದಾಯಿತೆಂದು ವೇದ, ಪುರುಷ ಸೂಕ್ತ, ಪುರಾಣ, ಇತಿಹಾಸಗಳಲ್ಲಿ ಹೇಳಲಾಗಿದ್ದರೆ, ಭಾರತದಲ್ಲಿನ ಅನ್ಯ ಬ್ರಾಹ್ಮಣರಂತೆ ಗೌಡ ಸಾರಸ್ವತ ಬ್ರಾಹ್ಮಣರೂ ರೂಢಿಯಲ್ಲಿರುವ ಈ ನಂಬಿಕೆಯಲ್ಲಿ ವಿಶ್ವಾಸವಿಡುತ್ತಾರೆ.

ಸ್ಕಂಧ ಪುರಾಣದ ಸಹ್ಯಾದ್ರಿಖಂಡ ಪಶ್ಚಿಮ ಕರಾವಳಿಯಲ್ಲಿ ನೆಲಸಿದ್ದ ಬ್ರಾಹ್ಮಣರ ಇತಿಹಾಸಕೊಂಡಿದೆ. ಸಹ್ಯಾದ್ರಿ ಖಂಡದ ಉತ್ತರ ರಹಸ್ಯದ ಮೊದಲ ಅಧ್ಯಾಯದಲ್ಲಿ (ಶ್ಲೋಕ ೪೭-೫೪) ಈ ಸಮಾಜದ ಸಂಕ್ಷಿಪ್ತ ವಿವರಗಳಿವೆ.

ಶ್ರಾದ್ಧ, ಯಾಗ, ಅತಿಥಿ ಸತ್ಕಾರ ಇತ್ಯಾದಿಗಳನ್ನು ಪೂರೈಸುವಲ್ಲಿ ಬ್ರಾಹ್ಮಣರ ಅವಶ್ಯಕತೆ ಕಂಡ ವಿಷ್ಣುವಿನ ಆರನೆಯ ಅವತಾರವಿದ್ದ ಪರಶುರಾಮ, ತ್ರಿಹೋತ್ರಪುರದಿಂದ ಹತ್ತು ಗೋತ್ರಗಳ ಬ್ರಾಹ್ಮಣರನ್ನು ತಂದು ಗೋಮಾಂಚಲ, ಪಂಚಕ್ರೋಸ ಮತ್ತು ಕುಶಸ್ಥಳಿ ಎಂಬೀ, ಭೂಭಾಗದಲ್ಲಿ ನೆಲೆ ನಿಲ್ಲಿಸಿದ. ಗೋಮಾಂಚಲದ ಅರುವತ್ತಾರು ಗ್ರಾಮಗಳಲ್ಲಿ ವಾಸ್ತವ್ಯಕ್ಕೆ ತೊಡಗಿದ ಈ ಬಣದ ಜನರು ತಮ್ಮ ವಾಸಸ್ಥಾನವನ್ನು ಸಾಷಷ್ಟಿ ಅಥವಾ ಷಟ್‌ಷಷ್ಠಿ ಎಂದಾಗಿ ಕರೆಯಲಾರಂಭಿಸಿದರು. ಈ ಬಣದ ಮೊದಲ ಪಂಗಡವನ್ನು ಹಿಂಬಾಲಿಸಿ ತ್ರಿಹೋತ್ರ ಪುರದಿಂದ ಬಂದವರು ತೀಸ್‌ವಾಡಿ (ಮೂವತ್ತು ಗ್ರಾಮಗಳು) ಜಿಲ್ಲೆಯಲ್ಲಿ ನೆಲಸಿದರು. ಹೀಗೆ ಈ ಎರಡು ಪಂಗಡಗಳು ನೆಲೆಯೂರಿದ್ದ ಗ್ರಾಮಗಳ ಸಂಖ್ಯೆ ತೊಂಭತ್ತಾರಾಯಿತು. ಮತ್ತೆ ಇವರೆಲ್ಲರೂ ಶೆಣ್ವಿ ಬ್ರಾಹ್ಮಣರೆಂದು ಪರಿಚಿತರಾದರು. (ಶೆಣ್ವಿ ಸಂಸ್ಕೃತದ 'ಶಣ್ಣವತಿ', (ತೊಂಭತ್ತಾರು) ಶಬ್ದದಿಂದ ಉತ್ಪನ್ನವಾದ ಶಾಣ್ಣವಿಯ ವಿಕೃತ ರೂಪವಾಗಿದೆ). ಸಹ್ಯಾದ್ರಿ ಖಂಡದಲ್ಲಿನ ಉತ್ತರ ರಹಸ್ಯದ ಐದನೆಯ ಅಧ್ಯಾಯದಲ್ಲಿ ಪರಶುರಾಮ ನೆಲೆಗೊಳಿಸಿದ್ದ ಹತ್ತು ಗೋತ್ರಗಳ ಅರುವತ್ತಾರು ಕುಟುಂಬಗಳಿಗಿತ್ತ ಭೂಮಿಯ ವಿವರಗಳಿವೆ. ಮೊತ್ತ ಮೊದಲಿಗೆ ಶೆಣ್ವಿ ಮತ್ತು ಸಾಷಷ್ಟಿಕಾರರೆಂಬೀ ನಾಮ ವಿಶೇಷಣಗಳನ್ನು ಪರ್ಯಾಯ ಶಬ್ದಗಳೆಂದು ಪರಿಗಣಿಸಿ ಅವನ್ನು ತಾರತಮ್ಯವಿಲ್ಲದೆ ಬಳಸಿರಬೇಕು. ಆದರೆ ಈಗ ಶೆಣ್ವಿ ಉಪನಾಮ ಸಮಾಜದಲ್ಲಿನ ಶೈವರಿಗಷ್ಟೆ ಸೀಮಿತವಾಗಿದೆ. ಮತ್ತು ನಾಮ ವಿಶೇಷಣ 'ಸಾಷಷ್ಟಿಕಾರ' ಕೇವಲ ವೈಷ್ಣವರನ್ನುದ್ದೇಶಿಸಿಕೊಂಡಿದೆ.

ದಕ್ಷಿಣ ಕೊಂಕಣದಲ್ಲಿನ ಗೋವಾ, ಸಾರಸ್ವತ ಬ್ರಾಹ್ಮಣರ ಪ್ರಾಮುಖ್ಯವಾದ ನೆಲೆನಾಡಾಗಿದ್ದ ನಿಮಿತ್ತ ಅಲ್ಲಿ ನೆಲಸಿದ್ದ ಗೌಡ ಸಾರಸ್ವತ ಬ್ರಾಹ್ಮಣರು ಗೌಡ ಸಾರಸ್ವತ ಕೊಂಕಣಿ ಬ್ರಾಹ್ಮಣರೆಂದು ಪರಿಚಿತರಾದರು.

ಕೊಂಕಣ ಗೋವಾದಲ್ಲಿ ಅವರು ನೆಲಸಿರಬಹುದಾಗಿದ್ದ ಕಾಲ

ಪರಶುರಾಮನ ನೇತೃತ್ವದಲ್ಲಿ ತ್ರಿಹೋತ್ರಪುರದಿಂದ ಬಂದ ಆರ್ಯರ (ಸಾರಸ್ವತ ಬ್ರಾಹ್ಮಣರ) ಪಶ್ಚಿಮ ಕರಾವಳಿಯಲ್ಲಿನ ವಸಾಹತೀಕರಣದ ಕಾಲ, ಪುರಾಣಗಳಲ್ಲಿ ಕಾಣಬರುವ ವಿವರಗಳನ್ನು ನಂಬುವಲ್ಲಿ ಕ್ರಿಸ್ತನಿಗೂ ಮೊದಲ ಎಷ್ಟೊಂದೂ ಶತಮಾನಗಳತ್ತ ಸಾಗುತ್ತದೆ. ಪುರಾಣಗಳ ಕಾಲಗಣನೆಯನ್ನು ತಾತ್ವಿಕ ಇತಿಹಾಸ ನಂಬದಿದ್ದ ನಿಮಿತ್ತ ಗೋವಾದಲ್ಲಿನ ಅವರ ವಾಸ್ತವ್ಯದ ಕಾಲವನ್ನು ನಿಸ್ಸಂದೇಹ ನಿಶ್ಚಯಿಸುವ ಅವಶ್ಯಕತೆಯಿದೆ.

ಮಹಾಭಾರತ, ಅದರ ಪೂರಕ ಗ್ರಂಥ ಹರಿವಂಶ, ಭಾಗವತ ಮತ್ತು ಇನ್ನಿತರ ಪುರಾಣಗಳು ಸೌರಾಷ್ಟ್ರ, ಕೊಂಕಣದೇಶ ಮತ್ತು ಗೋಮಾಂತಲದ ಉಲ್ಲೇಖ ಮಾಡುತ್ತಿರುವುದನ್ನು ನೋಡುವಾಗ ಈ ಗ್ರಂಥಗಳ ರಚನಾ ಕಾಲದ ಮೊದಲೇ ಇವು ಆರ್ಯರ ನೆಲಸು ನಾಡುಗಳಾಗಿದ್ದವೆಂಬುದರ ಅರಿವಾಗುತ್ತದೆ. ಕೊಂಕಣಿ ಬ್ರಾಹ್ಮಣರ ಭಾಷೆ ಪ್ರಾಕೃತ ಮತ್ತು ಮೈಥಿಲೀ ಭಾಷೆಗಳೊಂದಿಗೆ ಕೊಂಡಿದ್ದ ನಿಕಟ ಸಂಬಂಧವನ್ನು ಕಾಣುವಾಗ, ಸಂಸ್ಕೃತ ಅನೇಕ ಸ್ಥಾನೀಯ ಭಾಷೆಗಳಲ್ಲಿ ಹರಿ ಹಂಚಲ್ಪಟ್ಟ ಬಳಿಕವಷ್ಟೆ (ಈ ಸ್ಥಾನೀಯ ಭಾಷೆಗಳಲ್ಲಿನ ಕೇವಲ ಒಂದೆರಡು ಮಾತ್ರ ಸಾಹಿತ್ಯದ ರೂಪಿನಲ್ಲಿ ಬದುಕುಳಿದಿವೆ.) ಅವರು ವಲಸೆ ಹೋಗಲಾರಂಭಿಸಿದ್ದಿರಬೇಕೆಂಬುದನ್ನು ಹೆಚ್ಚು ಕಡಿಮೆ ಸಿದ್ಧಗೊಳಿಸಬಹುದಾಗಿದೆ. ಬಹುತೇಕ ಬೌದ್ಧಧರ್ಮದ ಉದಯದ ನಂತರ ತ್ರಿಹೋತ್ರಪುರದ ಬ್ರಾಹ್ಮಣರು ಉತ್ತರೆಯಲ್ಲಿನ ತಮ್ಮ ಮನೆಮಾರು ಬಿಟ್ಟು ವಲಸೆ ಹೋಗಿರಬೇಕು. ಮಿಥಿಲ ಜಿಲ್ಲೆಯ ದಕ್ಷಿಣ ಭಾಗದಲ್ಲಿದ್ದ ತಿರ್ಹತ್ ಬೌದ್ಧ ಧರ್ಮದ ಮುಖ್ಯ ಕೇಂದ್ರವಾಗಿದ್ದ ನಿಮಿತ್ತ ಬ್ರಾಹ್ಮಣರು ತಮ್ಮ ಧಾರ್ಮಿಕ ಕ್ರಿಯಾಕರ್ಮಗಳ ಕುರಿತಾದ ಪ್ರತಿರೋಧವನ್ನು ಸಹಿಸಿಕೊಳ್ಳಬೇಕಾಗಿತ್ತು. ಇದರಿಂದ ಅವರ ರೂಢಿಯ ಚಟುವಟಿಕೆಗಳು ತಡೆಹಿಡಿಯಲ್ಪಟ್ಟವು. ಕ್ರಮೇಣ ಬಲಿ ಪ್ರಧಾನ ವಿಧಿಗಳ ಆಚರಣೆಗೆ ಬೇಕಾಗಿದ್ದ ವೈದಿಕ ಪಾಂಡಿತ್ಯ ಉಪೇಕ್ಷಿಸಲ್ಪಟ್ಟಿತು. ಬ್ರಾಹ್ಮಣರಿಗೆ ಜೀವನೋಪಾಯದ ಅನ್ಯ ಮಾರ್ಗಗಳು ಕಾಣದಾದವು. ಅವರು ತ್ರಿಹೋತ್ರಪುರ ಬಿಟ್ಟು ಗೋವಾದಲ್ಲಿ ನೆಲಸಿಕೊಳ್ಳಲು ಈ ಪರಿಸ್ಥಿತಿಯೂ ಒಂದು ಕಾರಣವಾಗಿರಬೇಕು.

ವಲಸೆ ಹೋದ ಕೊಂಕಣಿಗರು ಕೊಚ್ಚಿನ್‌ನಲ್ಲಿ ನೆಲೆಗೊಂಡುದು

ವಿಜಯನಗರ ಗೋವಾವನ್ನು ಗೆದ್ದುಕೊಂಡಾಗ ಸಾರಸ್ವತ ಬ್ರಾಹ್ಮಣರು ಅಲ್ಲಿನ ಅರಸರಿಗೆ ಶರಣುಹೋದರು. ಪೋರ್ಚುಗೀಸರು ಗೋವಾವನ್ನು ಗೆದ್ದುಕೊಂಡ ನಂತರ, ಸುಮಾರು ಇಪ್ಪತ್ತೈದು ವರ್ಷಗಳ ತನಕದ ಅಲ್ಲಿನ ಗವರ್ನರ್‌ನ ಆಳ್ವಿಕೆಯ ದಿನಗಳಲ್ಲೂ ಅವರು ಯಾವೊಂದು ಬಾಧೆಗೊಳಗಾಗದೆ ದಿನಗಳೆದಿದ್ದರು. ಆ ದಿನಗಳಲ್ಲಿ ಅವರು ಯುರೋಪಿನ ಸರಕಿನ ಲಾಭದಾಯಕ ವ್ಯಾಪಾರ ಮಾಡತೊಡಗಿದ್ದರು. ಆದರೆ ಗೋವಾದಲ್ಲಿನ ಪೋರ್ಚುಗೀಸರು ಕ್ರಿಸ್ತೀಯ ಸಂಪ್ರದಾಯ ವಿರೋಧಿ ಕಾರ್ಯಕರ್ತರನ್ನು ಶಿಕ್ಷಿಸಲಾಗಿ ನ್ಯಾಯ ಮಂಡಲಿಯೊಂದನ್ನು ಸ್ಥಾಪಿಸಿ ಸತಾವಣೆಗೆ ತೊಡಗಿದಾಗ ಈ ಸಮಾಜ ಸ್ವೇಚ್ಛೆಯಿಂದ ನೆಲೆವೀಡು ಬಿಟ್ಟು ಪರರಾಜ್ಯಕ್ಕೆ ವಲಸೆಹೋಯಿತು. ಕೆಲವೊಬ್ಬರು ಮತಾಂತರಗೊಂಡರು. ಇನ್ನುಳಿದವರು ಉತ್ತರೆ, ದಕ್ಷಿಣಗಳತ್ತ ಪಲಾಯನ ಮಾಡಿದರು. ದಕ್ಷಿಣಕ್ಕೆ ಸಾಗಿದವರು ಕೆನರಾ ಮತ್ತು ಕಲಿಕಟ್‌ಗಳಲ್ಲಿ ನೆಲಸಿದರು. ಝಾಮೋರಿನ್‌ನ ನಿರುತ್ಸಾಹಿ ಸ್ವಾಗತ ಕಂಡ ಇವರು ಮತ್ತೆ ದಕ್ಷಿಣದತ್ತ ಸರಿದು ಕೊಚ್ಚಿನ್ ಮತ್ತು ಟ್ರಾವಂಕೂರಿನ ಅರಸರ ರಕ್ಷಣೆ ಕಂಡರು; ಅಲ್ಲಿ ಅವರು ಈಗಲೂ ಒಳ್ಳೆಯ ಸ್ಥಿತಿಯಲ್ಲಿದ್ದಾರೆ. ಕ್ರಿಸ್ತೀಯ ಧರ್ಮಕ್ಕೆ ಮತಾಂತರಗೊಂಡವರೂ, ನೆಲೆ ವೀಡು ಬಿಟ್ಟು ಹೋದ ಸಾರಸ್ವತರ ಮೊದಲ ತಂಡವನ್ನು ಹಿಂಬಾಲಿಸಿ, ವ್ಯಾಪಾರದ ಮುಖ್ಯ ಕೇಂದ್ರಗಳಲ್ಲಿ ನೆಲಸಿ ಚಂಬುಕುಟಿಗರ ಕೆಲಸಕ್ಕೆ ತೊಡಗಿದರು. ಕೊಂಕಣದಿಂದ ವಲಸೆ ಬಂದ ಅವರನ್ನು

ಕೊಂಕಣಿಗರೆನ್ನಲಾಗುತ್ತದೆ. ಅವರು ಮರಾಠಿಯ ಉಪಭಾಷೆಯಿದ್ದ ಕೊಂಕಣಿ ನುಡಿಯುತ್ತಾರೆ.

ನಿಷೇಧಿತ ವಿವಾಹಗಳು

ಸಮಾಜದೊಳಗಣ ವಿವಾಹಕ್ಕೆ ನಿಷೇಧವಿಲ್ಲವಿತ್ತು. ಸಮಾಜ ಅಂತರ್ಭೋಜನಕ್ಕೆ ಸಹಮತಿ ತೋರಿದ್ದರೆ ಅಲ್ಲಿ ಅಂತರ್ವಿವಾಹಕ್ಕೂ ವಿರೋಧವಿರದಿತ್ತು. ಸಾರಸ್ವತ ಬ್ರಾಹ್ಮಣರಲ್ಲಿನ ವೈಷ್ಣವರು ಮತ್ತು ಶೈವರು ಯಾವೊಂದೂ ಅಡೆತಡೆಗಳಿಲ್ಲದೆ ವೈವಾಹಿಕ ಸಂಬಂಧ ಬೆಳಸುತ್ತಾರೆ. ಸಪಿಂಡ, ಸಮಾನ ಗೋತ್ರಗಳ ನಡುವಣ ವಿವಾಹಕ್ಕೆ ಮಾತ್ರ ನಿಷೇಧವಿತ್ತು. ಅಕ್ಕ, ತಂಗಿಯರ ಮಕ್ಕಳ ಗೋತ್ರ ಬೇರೆಯಾಗಿದ್ದರೂ ಅವರೊಳಗಣ ವಿವಾಹ ನಿಷಿದ್ಧವಿತ್ತು. ಸೋದರತ್ತೆಯ ಮಗಳೊಂದಿಗಿನ ವಿವಾಹಕ್ಕೆ ಸ್ಮೃತಿಗಳ ಸಮ್ಮತಿಯಿರದಿದ್ದರೂ ಮತ್ತು ಗೌಡ ಸಾರಸ್ವತ ಬ್ರಾಹ್ಮಣರ ಅನ್ಯ ಶಾಖೆಗಳಲ್ಲಿ ವಾಡಿಕೆಯಲ್ಲಿರದಿದ್ದಾಗಲೂ ಅವನ್ನೀಗ ನೆರವೇರಿಸಲಾಗುತ್ತದೆ. (ಇದು ದ್ರಾವಿಡ ಬ್ರಾಹ್ಮಣರ ಪದ್ಧತಿಯನ್ನನುಕರಿಸುತ್ತದೆ) ಆದರೆ ಈ ಬಗೆಯ ವಿವಾಹಗಳು ನಿಶಿದ್ಧವೆಂದು ಭಾವಿಸದಿದ್ದರು. ತಂಗಿಯ ಮಗಳೊಂದಿಗಿನ ವಿವಾಹ ದೇಶಸ್ಥ ಮತ್ತು ಕರ್ನಾಟಕ ಬ್ರಾಹ್ಮಣರಲ್ಲಿ ಜರಗುತ್ತಿದ್ದರೂ ಅದು ಗೌಡ ಸಾರಸ್ವತ ಬ್ರಾಹ್ಮಣರಲ್ಲಿ ರೂಢಿಗೆ ಬಂದಿಲ್ಲ.

ವಿವಾಹ

ಸಂಸ್ಕಾರಗಳೆಲ್ಲವುಗಳಲ್ಲಿ ವಿವಾಹ ಪ್ರಾಮುಖ್ಯವಾದುದೆಂದು ಭಾವಿಸಲಾಗುತ್ತದೆ. ಅದು ಒಮ್ಮಿಂದೊಮ್ಮೆಗೆ ಭೂತ ಮತ್ತು ಭವಿಷ್ಯ ಕಾಲಗಳೊಂದಿಗೆ ಅಪೂರ್ವ ಸಂಬಂಧವನ್ನು ಬೆಳಸುತ್ತದೆ. ಗೃಹಸ್ಥ ಎಲ್ಲೊಂದು ಸಂಸ್ಕಾರಗಳನ್ನು 'ಗೃಹ್ಯಾಗ್ನಿ'ಯೊಂದಿಗೆ ಮಾಡಬೇಕಾಗಿದ್ದು ವಿವಾಹದ ನಂತರವೂ ಆತ ಅದನ್ನು ನಿರಂತರ ರಕ್ಷಿಸಬೇಕಾಗಿದೆ. ಹಾಗೆಯೇ ಗೃಹಸ್ಥನೊಬ್ಬ ಆಶ್ರಮಗಳೆಲ್ಲವುಗಳಿಗೆ ಬೆಂಬಲವೀಯಬೇಕಾಗಿದೆ. ಸಂಕ್ಷಿಪ್ತವಾಗಿ ನುಡಿಯುವಲ್ಲಿ ವಿವಾಹದ ಮುಖ್ಯ ಉದ್ದೇಶ ವಂಶದ ಸಂರಕ್ಷಣೆ ಮತ್ತು ಸಮಾಜದ ಎಲ್ಲೊಬ್ಬರ ಹಿತ ಬಯಸುವ ಸಂತತಿಯ ಸಂವರ್ಧನೆಯಾಗಿದೆ.

ಜಾತಕದ ಉಲ್ಲೇಖ ವೇದಗಳು, ಗೃಹ್ಯ ಸೂತ್ರ, ರಾಮಾಯಣ, ಮಹಾಭಾರತ ಮತ್ತು ಪುರಾಣಗಳಲ್ಲಿ ಕಾಣಬರುತ್ತಿಲ್ಲವಾದರೂ ಮದುವೆಯ ಸಂಬಂಧದ ಪ್ರಶ್ನೆ ತಲೆಯೆತ್ತಿದಾಗ ಅವುಗಳ ಪರಾಮರ್ಶೆ ಮುಖ್ಯ ಸ್ಥಾನಕೊಳ್ಳುತ್ತದೆ. ಜಾತಕಗಳು ಹೊಂದಿಕೊಂಡು ಬಂದಲ್ಲಿ ಹುಡುಗಿಯ ತಂದೆ ಹುಡುಗನ ತಂದೆಯೊಂದಿಗೆ ವಿವಾಹದ ಪ್ರಸ್ತಾಪವೆತ್ತುತ್ತಾನೆ. ಆದಾನ ಪ್ರದಾನಗಳ ಸಮಾಲೋಚನೆ ನಡೆದ ಬಳಿಕ ಅವರಿಬ್ಬರೂ ಸೇರಿ ನಿಸ್ಸಂದಿಗ್ಧ ನಿರ್ಣಯ ಕೊಳ್ಳುತ್ತಾರೆ. ನಿರ್ಧಾರಿತ ವಿವಾಹದ ಸುದ್ದಿಯನ್ನು ತಿಳಿಸಲಾಗಿ ವಧುವಿನ ಮತ್ತು ವರನ ನೆಂಟರಿಷ್ಟರನ್ನು, ಮಿತ್ರರನ್ನು ಆಮಂತ್ರಿಸುತ್ತಾರೆ. ವಧುವಿನ ತಂದೆಯ ಪರವಾಗಿ ಪುರೋಹಿತರು ವಿವಾಹದ ಕುರಿತಾಗಿ ಇಕ್ಕಡೆಯವರು ಕೊಂಡ ನಿರ್ಣಯ ತಿಳಿಸುತ್ತಾರೆ. ವರನ ತಂದೆಯ ಪರವಾಗಿ ಅವರ ಪುರೋಹಿತರು ಅವನ್ನು ಒಪ್ಪಿಕೊಳ್ಳುತ್ತಾರೆ. ಮದುವೆಯ ದಿನ,

ಮುಹೂರ್ತ ಮುಂತಾದವುಗಳು ನಿರ್ಧರಿಸಲ್ಪಟ್ಟಿದ್ದಲ್ಲಿ ಪುರೋಹಿತರಲ್ಲೊಬ್ಬರು ಪಂಚಾಂಗವನ್ನೋದಿ ವಿವಾಹದ ಮುಹೂರ್ತವನ್ನು ತಿಳಿಸುತ್ತಾರೆ. ಮಿಠಾಯಿ, ಹೂವುಗಳನ್ನು ಹಂಚಿ, ಪನ್ನೀರನ್ನು ಸಿಂಪಡಿಸಿ, ವೀಳ್ಯವಿತ್ತ ಬಳಿಕ ನೆರೆದವರು ಮರಳುತ್ತಾರೆ. ಇದಕ್ಕೆ 'ನಿಶ್ಚಯ ತಾಂಬೂಲ'ವೆನ್ನುತ್ತಾರೆ. ಇದು 'ಕನ್ಯಾವರಣ'ವನ್ನು ಹೋಲುತ್ತದೆ. ಇದರ ನಂತರ, ಮದುವೆಯ ಕೆಲವೊಂದು ದಿನಗಳ ಮೊದಲು ಅಥವಾ ಮದುವೆಯ ಮೊದಲ ದಿನ, 'ವಾಗ್ದಾನ' ಅಥವಾ 'ನಿಶ್ಚಿತಾರ್ಥ'ದ ಕಾರ್ಯಕ್ರಮವನ್ನು ಪೂರೈಸಲಾಗುತ್ತದೆ.

ಅಶ್ವಲಾಯನನ ಆದೇಶಗಳ ಮೇರೆಗೆ ಬ್ರಹ್ಮಚಾರಿಯೊಬ್ಬ 'ಸಮಾವರ್ತನ' ವಿಧಿ ಪೂರೈಸಿದ್ದಲ್ಲಿ ಆತ ಮನೆಯಲ್ಲುಳಿದುಕೊಳ್ಳಬೇಕಾಗುತ್ತದೆ. ಮತ್ತು ಅಲ್ಲಿ ಆತನಿಗೆ 'ಮಧುಪರ್ಕ'ವನ್ನಿತ್ತು ಸನ್ಮಾನಿಸಲಾಗುತ್ತದೆ. ವಿವಾಹ ಮಧ್ಯಾಹ್ನಕ್ಕೂ ಮೊದಲೇ ಜರಗುವಲ್ಲಿ ಅದರ ಮುಂಚಿನ ದಿನ ಮತ್ತು ಮಧ್ಯಾಹ್ನದ ನಂತರ ನೆರವೇರುವಲ್ಲಿ ಅದೇ ದಿನ ಬೆಳಿಗ್ಗೆ 'ಸಮಾವರ್ತನ' ವಿಧಿಯನ್ನು ಪೂರೈಸಲಾಗುತ್ತದೆ. ಆನಂತರ ವಧುವಿನ ತಂದೆ ವರನನ್ನು ಮತ್ತು ಅವನ ಮಿತ್ರರನ್ನು ತನ್ನಲ್ಲಿಗೆ ಆಮಂತ್ರಿಸುತ್ತಾನೆ. ವರ ಬಡವನಾಗಿದ್ದಲ್ಲಿ 'ಸಮಾವರ್ತನ'ದ ಖರ್ಚನ್ನು ವಧುವಿನ ತಂದೆ ಹೊರುತ್ತಾನೆ. ಈ ಸಂದರ್ಭದಲ್ಲಿ ವಧುವಿನ ತಂದೆ ಆತನನ್ನು ತನ್ನಲ್ಲಿಗೆ 'ಸಮಾವರ್ತನ'ದ ಮೊದಲ ದಿನವೇ ಆಮಂತ್ರಿಸುತ್ತಾನೆ.

ವಿವಾಹ ಮುಹೂರ್ತದ ಸಮಯಕ್ಕನುಸರಿಸಿಕೊಂಡು ವಧುವಿನ ಮನೆಯಲ್ಲಿ 'ಘಟಿಕಾಸ್ಥಾಪನ' ಮಾಡಲಾಗುತ್ತದೆ. ಮುಹೂರ್ತ ಹಗಲಿಗಿದ್ದಲ್ಲಿ ಸೂರ್ಯೋದಯದ ಹೊತ್ತಿಗೆ, ರಾತ್ರಿಯ ಹೊತ್ತಿಗಿದ್ದಲ್ಲಿ ಸೂರ್ಯಾಸ್ತದ ಸಮಯ ಈ ವಿಧಿಯನ್ನು ಮಾಡುತ್ತಾರೆ.

ಬೋಗುಣಿಯಲ್ಲಿನ ಪವಿತ್ರೀಕರಿಸಿದ ನೀರಿನಲ್ಲಿ ತಟ್ಟೆಯೊಂದನ್ನು ತೇಲಾಡಬಿಟ್ಟು ಮುಹೂರ್ತದ ಕ್ಷಣಗಳನ್ನೆಣಿಸುವ, ವಿಲಕ್ಷಣವಿದ್ದ, ಪುರಾತನ ಕಾಲದ ಈ ಕ್ರಿಯೆಯನ್ನು ವಧುವಿನ ಮನೆಯಲ್ಲಿ ಮಾಡಲಾಗುತ್ತದೆ.

ಬೋಗುಣಿಯಲ್ಲಿನ ನೀರಿನಲ್ಲಿ, ತಳಭಾಗದಲ್ಲಿ ರಂಧ್ರವಿದ್ದ ಲೋಟವನ್ನು ತೇಲಬಿಟ್ಟಾಗ ರಂಧ್ರದ ಮೂಲಕ ನೀರು ಮೆಲ್ಲಗೆ ಲೋಟವನ್ನು ತುಂಬಲಾರಂಭಿಸುತ್ತದೆ. ಈ ಮೊದಲೇ ಗುರುತಿಸಲ್ಪಟ್ಟ ರೇಖೆಯತ್ತ ನೀರು ಬರುತ್ತಲೇ ಲೋಟ ಮುಳುಗುತ್ತದೆ. ಈ ಕ್ರಿಯೆಕೊಳ್ಳುವ ಅವಧಿಯನ್ನು ಘಟಿ (ಇಪ್ಪತ್ತನಾಲ್ಕು ಮಿನಿಟುಗಳ ಅವಧಿ) ಯೆನ್ನುತ್ತಾರೆ. ವಿವಾಹ ಮುಹೂರ್ತದ ಸಮಯದ ವರೆಗೆ ಈ ಕ್ರಿಯೆಯು ಪುನರಾವರ್ತನೆ ಮಾಡಲಾಗುತ್ತದೆ.

ವಧುವಿನ ಹೆತ್ತವರು ವಧುವಿನೊಂದಿಗೆ ಮಂಟಪಕ್ಕೆ ಬಂದು ಮಂಟಪ ಪ್ರತಿಷ್ಠೆ, ಗಣಪತಿ ಪೂಜೆ, 'ಪುಣ್ಯಾಹ ವಾಚನ', 'ಮಾತೃಕ ಪೂಜೆ', 'ನಾಂದಿ ಶ್ರಾದ್ಧ'ಗಳನ್ನು ಮಾಡುತ್ತಾರೆ. ಆನಂತರ ವಧುವಿನ ಹೆತ್ತವರು ವರನ ಪಕ್ಷದವರನ್ನು ಆಮಂತ್ರಿಸಲು ತೆರಳುತ್ತಾರೆ. ವಧು ಮನೆಯೊಳಗಣ ಕೋಣೆಯೊಂದರಲ್ಲಿ ಗೌರಿ, ಹರ ಮತ್ತು ಸಚಿಯ ಪೂಜೆಗೆ ತೊಡಗುತ್ತಾಳೆ.

ವರನ ಆಗಮನವಾಗುತ್ತಲೇ ಆತನಿಗೆ ಆರತಿ ತೋರಿ, ಸನ್ಮಾನಗಳಲ್ಲಿ ಅತ್ಯುಚ್ಚವೆನ್ನಲಾಗುವ 'ಮಧುಪರ್ಕ' ವನ್ನಿತ್ತು ಗೌರವಿಸಲಾಗುತ್ತದೆ.

ಮಂಟಪದಲ್ಲಿ ವರ ಅಂತಃಪಟದತ್ತ ಮುಖಮಾಡಿ ನಿಲ್ಲುತ್ತಾನೆ; ವಧುವಿನ ಸೋದರಮಾವ ಆಕೆಯನ್ನು ಎತ್ತಿ ತಂದು ಅಂತಃಪಟದ ಇನ್ನೊಂದು ಬದಿಯಲ್ಲಿ, ವರನಿಗೆದುರಾಗಿ ನಿಲ್ಲಿಸುತ್ತಾನೆ. ಪುರೋಹಿತರು ಆದಿತ್ಯ ಸ್ತೋತ್ರ (ಋಗ್ವೇದ) ಮತ್ತು ತೈತ್ತರೀಯ ಬ್ರಾಹ್ಮಣದ ಭಾಗ ವೊಂದರ ಪಠನಮಾಡುತ್ತಾರೆ. ಈ ಶುಭ ಅವಸರದಲ್ಲಿ ಸ್ತ್ರೀಯರು ಮಂಗಳ ಗೀತೆಗಳನ್ನು ಹಾಡುವುದಿದೆ. ಎರಡೂ ಪಕ್ಷಗಳ ಪುರೋಹಿತರು ವಿವಾಹದಿಂದ ಒಂದುಗೂಡುವ ಪಕ್ಷಗಳ ಗೋತ್ರ, ಗೋತ್ರಪತಿಗಳ, ವಧೂವರರ ತಂದೆ, ಅಜ್ಜ, ಮುತ್ತಜ್ಜರ ಉಲ್ಲೇಖ ಮಾಡಿ ಅಂತಃಪಟವನ್ನು ಸರಿಸಿ, ವಧೂವರರು ಪರಸ್ಪರ ಕಾಣುವ ಅವಕಾಶ ಮಾಡಿಕೊಡುತ್ತಾರೆ. ವರ ವಧುವಿನ ಹಣೆಯ ಮಧ್ಯಭಾಗವನ್ನು ದರ್ಭೆಯಿಂದ ಸ್ಪರ್ಶಿಸುತ್ತಾನೆ. ವಧೂ ವರರು ಒಬ್ಬರಿನ್ನೊಬ್ಬರ ಮೇಲಕ್ಕೆ ಅಕ್ಷತೆ ಹಾಕುತ್ತಾರೆ. ವಧುವಿನ ತಂದೆ ಹಿರಿಯರ ಕಾಲು ಮುಟ್ಟಿ ಕನ್ಯಾದಾನಕ್ಕೆ ಅವರ ಅನುಮತಿ ಕೊಂಡು ಧಾರೆಯ ನೀರನ್ನು ಪವಿತ್ರೀಕರಿಸುತ್ತಾನೆ. ಮತ್ತೆ ಧಾರೆಯ ನೀರನ್ನೆರೆದು ಮಗಳನ್ನು ದಾನವಾಗಿತ್ತು ವರನಿಗೆ ಸಂಸಾರವಂದಿಗನ ಕರ್ತವ್ಯಗಳ ಅರಿವನ್ನೀಯುತ್ತಾನೆ. ಮತ್ತೆ ಮಗಳನ್ನು ಸ್ವೀಕರಿಸಿದ್ದುದಕ್ಕಾಗಿ ಸ್ವಲ್ಪ ಹಣವನ್ನು ಅರಿಸಿನ ತುಂಡುಗಳೊಂದಿಗೆ ಬಟ್ಟೆಯಲ್ಲಿ ಕಟ್ಟಿ ದಕ್ಷಿಣೆಯ ರೂಪದಲ್ಲೀಯುತ್ತಾನೆ. ಇದಕ್ಕೆ 'ವರದಕ್ಷಿಣೆ' ಎನ್ನುತ್ತಾರೆ. ವರ ವಧುವಿನ ಉದರವನ್ನು ಸ್ಪರ್ಶಿಸುತ್ತಾನೆ. ಧಾರೆ ಎರೆದ ನಂತರ ಉಳಿದ ನೀರನ್ನು ವಧೂ ವರರ ಮುಖಕ್ಕೆ ಸಿಂಪಡಿಸಲಾಗುತ್ತದೆ. ಇದಾದ ನಂತರ ವಧೂ ವರರ ಮಣಿಗಂಟಿಗೆ 'ಮಂಗಳಸೂತ್ರ'ವನ್ನು ಕಟ್ಟಿ ಅಕ್ಷತೆ ಹಾಕುತ್ತಾರೆ. ವರ ತನ್ನ ತಲೆಯಿಂದ ಹೂವೊಂದನ್ನು ತೆಗೆದು ಹಾಲು, ತುಪ್ಪಗಳಲ್ಲದ್ದಿ ವಧುವಿನ ಹಣೆಗೆ ಸ್ಪರ್ಶಿಸುತ್ತಾನೆ. ವಧು ಕೂಡಾ ತನ್ನ ತಲೆಯಲ್ಲಿನ ಹೂವೊಂದನ್ನು ತೆಗೆದು ವರನ ಹಣೆಗೆ ತಾಗಿಸುತ್ತಾಳೆ. ಅವರು ಒಬ್ಬರಿನ್ನೊಬ್ಬರಿಗೆ ಹೂವಿನ ಮಾಲೆ ಹಾಕುತ್ತಾರೆ. ವರ ವಧುವಿನ ಕೊರಳಿಗೆ ಮಂಗಳಸೂತ್ರ ಹಾಕಿ ಚಿನ್ನಾಭರಣ, ಸೀರೆ ಮುಂತಾದವುಗಳನ್ನೀಯುತ್ತಾನೆ.

ವಧುವಿಗೆ 'ಉತ್ತರೀಯ' ಧರಿಸಲಿತ್ತು ಅದರ ಒಂದು ತುದಿಗೆ ಅಡಕೆ, ಚಿನ್ನದ ತುಣುಕನ್ನು ಕಟ್ಟುತ್ತಾರೆ. 'ಉತ್ತರೀಯ'ದ ಇನ್ನೊಂದು ತುದಿಯನ್ನು ಆಕೆಯ ಗಂಡನ ಪೋಷಾಕಿನ ತುದಿಗೆ ಕಟ್ಟುತ್ತಾರೆ. ಇದು ಎಲ್ಲೊಂದು ಧಾರ್ಮಿಕ ಕಟ್ಟುಪಾಡುಗಳಲ್ಲಿ ಪತಿ, ಪತ್ನಿಯರ ಸಮಾವೇಶವನ್ನು ಸೂಚಿಸುತ್ತದೆ. ಮುತ್ತೈದೆಯರು ನವ ದಂಪತಿಗಳಿಗೆ ಅಕ್ಷತೆ ಹಾಕಿ ಅವರನ್ನು ಆಶೀರ್ವದಿಸುತ್ತಾರೆ. ವಧೂವರರು ಲಕ್ಷ್ಮಿ, ಪಾರ್ವತಿ, ಸಚಿಯ ಪೂಜೆ ಮಾಡಿ ಮಂಟಪವನ್ನು ಪ್ರವೇಶಿಸಿ ಹೋಮ ಮಾಡುತ್ತಾರೆ. ಮತ್ತು ಪವಿತ್ರ ಅಗ್ನಿಯ ಸಮಕ್ಷಮ ವಧುವಿನ ಕೈಯನ್ನು ತನ್ನ ಕೈಯಲ್ಲಿ ಕೊಂಡು (ಪಾಣಿಗ್ರಹಣ) ಅಗ್ನಿಗೆ ಪ್ರದಕ್ಷಿಣೆ (ಪರಿಣಾಯನ) ಹಾಕುತ್ತಾನೆ. ಆಕೆ ಸಂಸಾರದಲ್ಲಿ ಅಚಲಳಿದ್ದು, ದೃಢತೆಯಿಂದ ಸಂಸಾರ ಸಾಗಿಸಲೆಂದು ಆಕೆಯನ್ನು ಸಾಂಕೇತಿಕವಾಗಿ ಬೀಸುಕಲ್ಲಿನ ಮೇಲೆ ನಿಲ್ಲಿಸುತ್ತಾನೆ. ಆ ಬಳಿಕ ಅಕ್ಕಿಯ ಏಳು ಸಣ್ಣ ಕುಪ್ಪೆಗಳ ಮೇಲಕ್ಕೆ ಹೆಜ್ಜೆ ('ಸಪ್ತಪದಿ') ಇಡುವಂತೆ ಹೇಳುತ್ತಾನೆ. ಇದರಿಂದ ವಿವಾಹ

ಪೂರ್ಣಗೊಳ್ಳುತ್ತದೆ. ನೆಲದ ಮೇಲಕ್ಕಿಟ್ಟ ಕನ್ನಡಿಯಲ್ಲಿ ವಧೂ ವರರು ತಮ್ಮ ಪ್ರತಿಬಿಂಬವನ್ನು ನೋಡುವ ವೇಳೆ ಪುರೋಹಿತರು ಅವರ ತಲೆಯ ಮೇಲಕ್ಕೆ ನೀರನ್ನು ಸಿಂಪಡಿಸಿ ಹೋಮದ ಸಮಾಪ್ತಿ ಮಾಡುತ್ತಾರೆ. ಅನಂತರ ಮುತ್ತೈದೆಯರು ಆರತಿ ಎತ್ತುತ್ತಾರೆ. ಇದಾದ ಬಳಿಕ ನವ ದಂಪತಿಗಳು ಉಂಡು ತಮ್ಮ ಕೋಣೆ ಸೇರುತ್ತಾರೆ. ವಿವಾಹದ ವೇಳೆ ಪ್ರಜ್ವಲಿಸಿದ ಅಗ್ನಿಯನ್ನು ಮೂರು ದಿನಗಳ ಕಾಲ ಸಂರಕ್ಷಿಸಲಾಗುತ್ತದೆ. ಮತ್ತು 'ಔಪಾಸನ'ವನ್ನು ಪಾಲಿಸಲಾಗುತ್ತದೆ.

ನಾಲ್ಕನೆಯ ದಿನ ಹೊತ್ತು ಮುಳುಗುತ್ತಲೇ ವಧೂವರರು ಸ್ನಾನ ಮಾಡಿ, ಶುಭ್ರ ಉಡುಗೆ ತೊಡುತ್ತಾರೆ. ವಧುವಿನ ಹೆತ್ತವರು ಅವರನ್ನು ಸತ್ಕರಿಸುತ್ತಾರೆ. ಅನಂತರ 'ನಾಗಬಲಿ'ಯ ವಿಧಿಗಳನ್ನು ಪೂರೈಸಲಾಗುತ್ತದೆ. ವರ ವಧುವನ್ನು ತನ್ನ ಮನೆಗೆ ಕೊಂಡುಹೋಗುತ್ತಾನೆ. ವರನ ಸಹೋದರಿ ವಧೂ ವರರಿಗೆ ಮನೆ ಪ್ರವೇಶಿಸಲು ತಡೆಯೊಡ್ಡಿ ತಮಗಾಗಬಹುದಾದ ಮಗಳ ವಿವಾಹವನ್ನು ಅವರು ತನ್ನ ಮಗನೊಂದಿಗೆ ನೆರವೇರಿಸುವ ಆಶ್ವಾಸನೆ ಇತ್ತ ಬಳಿಕವಷ್ಟೇ ದಾರಿ ಬಿಟ್ಟುಕೊಡುತ್ತಾಳೆ. ದಂಪತಿಗಳು ಹೊಸ್ತಿಲಿನ ಪೂಜೆ ಮಾಡಿ ಮನೆಯನ್ನು ಪ್ರವೇಶಿಸುತ್ತಾರೆ. ನವ ವಧುವಿಗೆ ಮನೆಯೊಡತಿಯ (ರಾಣಿಯ) ಮಾನಮೀಯಲಾಗುತ್ತದೆ. ಆ ಮೊದಲ್ಗೊಂಡು ಆಕೆಯನ್ನು ಹೊಸ ಹೆಸರೊಂದರಿಂದ ಕರೆಯುತ್ತಾರೆ. ಇದಾದ ನಂತರ ಅವರು ವಧುವಿನ ಮನೆಗೆ ಮರಳುತ್ತಾರೆ. ಮರುದಿನ 'ಮಂಗಳಸ್ನಾನ', 'ಬ್ರಾಹ್ಮಣ ಭೋಜನ'ಗಳೊಂದಿಗೆ ವಿವಾಹ ಸಮಾರಂಭವನ್ನು ಮುಕ್ತಾಯಗೊಳಿಸುತ್ತಾರೆ. ಮನೋರಂಜನೆಯ ಬಳಿಕ ಬ್ರಾಹ್ಮಣರು ವಧೂವರರನ್ನು ಆಶೀರ್ವದಿಸುತ್ತಾರೆ.

ಗೌಡ ಸಾರಸ್ವತ ಬ್ರಾಹ್ಮಣರಲ್ಲಿನ ವಿವಾಹಗಳ ಈ ಮೇಲಿಣ ವಿಧಿ, ಕಟ್ಟುಕಟ್ಟಳೆಗಳನ್ನು ವಿಸ್ತಾರವಾಗಿ ನಮೂದಿಸುವುದರ ಅವಶ್ಯಕತೆ ಇದೆ ; ಕಾರಣ ಕೆನರಾದಲ್ಲಿ ಇವರು ಕೇವಲ ತಮ್ಮವರಲ್ಲಿನ ಪದ್ಧತಿ ಶಾಸ್ತ್ರೀಯ ಮತ್ತು ಪಾರಂಪಾರಿಕವಾಗಿದ್ದು ಬೇರೆಯವರ ರೀತಿ ರಿವಾಜು ಅರ್ಥಹೀನ, ಹುರುಳಿಲ್ಲದಂತಹವೆಂದು ತೆಗಳುವ ಬೋಧಾಯನ ಸಂಪ್ರದಾಯದ ಯಜುರ್ವೇದಿಗಳಿಂದ ಮತ್ತು ಕೇರಳದಲ್ಲಿ ಅಪಸ್ತಂಭ ಶಾಖೆಯ ಯಜುರ್ವೇದಿಗಳಿಂದ ಸುತ್ತುವರಿಯಲ್ಪಟ್ಟಿರುತ್ತಾರೆ. ವಿವಾಹದ ವಿಧಿಗಳಲ್ಲಿ 'ಸಪ್ತಪದಿ', ಈ ಸಮಾಜದ ಅತಿ ಮಹತ್ವದ, ಅವಿಚ್ಛೇದ್ಯ ವಿಧಿಯೊಂದಾಗಿದೆ. ಕೇವಲ ನಾಲ್ಕನೆಯ ದಿನದ ವಿಧಿ ವಿಧಾನಗಳ ಸಮಾಪ್ತಿಯೊಂದಿಗೆ ವಿವಾಹ ಬಂಧನಕಾರಿಯಾಗುತ್ತದೆ ಎಂಬುದು ಸರಿಯಲ್ಲ.

ಅಶ್ವಲಾಯನಾಚಾರ್ಯರು ಹಳ್ಳಿ ಮತ್ತು ನಗರಗಳಲ್ಲಿನ ವಿವಾಹಗಳ ಪದ್ಧತಿಗಳಲ್ಲಿ ಕಾಣಬರುವ ವೈವಿಧ್ಯತೆಗಳ ಅರಿವುಳ್ಳವರಾಗಿದ್ದರು. ವಿವೇಚಕರು ವೈವಿಧ್ಯತೆಗಳ ಕುರಿತು ಆಕ್ಷೇಪ ಮಾಡದಿದ್ದರೂ ಅವನ್ನು ವಿಧಿವಿಹಿತ ವಿವಾಹದ ಅಂಗಗಳನ್ನಾಗಿಸಬಾರದಾಗಿ ನುಡಿದಿರುತ್ತಾರೆ.

ದೇಶಭ್ರಮಣ ಮಾಡಿದ್ದ ಗೌಡ ಸಾರಸ್ವತ ಬ್ರಾಹ್ಮಣರು, ಮುಖ್ಯತಃ ವೈಷ್ಣವರು ತಮ್ಮ ನೆರೆಕರೆಯವರಲ್ಲಿನ, ದ್ರಾವಿಡ ಬ್ರಾಹ್ಮಣರಲ್ಲಿನ ವಿವಾಹಗಳ ರೀತಿ, ರಿವಾಜುಗಳನ್ನು

ಸಹಜವಾಗಿ ತಮ್ಮದಾಗಿಸಿಕೊಂಡರು. ಇವು ವಿಧಿಗಳನ್ನು ವಿನಾಕಾರಣ ಉದ್ದಕ್ಕೆಕೊಂಡು ಹೋದಂತೆ, ಖರ್ಚಿನ ದೃಷ್ಟಿಯಿಂದಲೂ ವಿನಾಶಕಾರಿಯಾಯಿತು. ಶ್ರೀಮಂತರಲ್ಲಿನ ವಿವಾಹಗಳು ಎಂಟು ದಿನಗಳದ್ದಾದುವಾದರೆ, ಇನ್ನುಳಿದವರಲ್ಲಿ ಐದು ದಿನಗಳುದ್ದಕ್ಕೆ ಬೆಳೆದುಕೊಂಡವು. ಇತ್ತೀಚೆಗಷ್ಟೆ ಸಮಾಜದ ಬಾಂಧವರು ವಿವಾಹವನ್ನು ಅಶ್ವಲಾಯನನ ಆದೇಶಕ್ಕನುಗುಣವಾಗಿ ನೆರವೇರಿಸುವರೆ ಪ್ರಯತ್ನ ಮಾಡುತ್ತಿರುವುದು ತೋರಿ ಬರುತ್ತದೆ. ಅಲ್ಲಿ ಪ್ರಾಚೀನ ಪದ್ಧತಿಯ ಪುನರೋದಯದ ಲಕ್ಷಣಗಳು ಕಾಣಬರುತ್ತವೆ.

ಅಶ್ವಲಾಯನನ ಆದೇಶವನ್ನು ದುರ್ಲಕ್ಷಿಸಿ, ಅನುಕೂಲತೆಯ ಕಾರಣಕ್ಕಾಗಿ, ವರನ ಮನೆಯಲ್ಲಿ ಜರಗಿಸಲಾಗುವ ಗೃಹ ಪ್ರವೇಶ ಹೋಮದ ವಿಧಿಯನ್ನು ಲಾಜಹೋಮದೊಂದಿಗೊಂದುಗೂಡಿಸಿ ಅದನ್ನು ವಧುವಿನ ಮನೆಯಲ್ಲೇ ಪೂರೈಸಲಾಗುತ್ತದೆ. ಹಾಗೆಯೇ ಕನಿಷ್ಠ ಮೂರು ರಾತ್ರಿಗಳ ಬ್ರಹ್ಮಚರ್ಯ, ಔಪಾಸನ ಇವನ್ನು ವಧುವಿನ ಮನೆಯಲ್ಲೇ ಆಚರಿಸಲಾಗುತ್ತದೆ. ಇವೂ ವಿನಾಕಾರಣ ಖರ್ಚನ್ನು ಹೆಚ್ಚಿಸುತ್ತವೆ.

ವಧೂವರರು ಲಗ್ನಕಾರ್ಯಾನಂತರ ಗೃಹಪ್ರವೇಶನ ಹೋಮ ಮುಗಿಸಿ ಅಂದೇ ಅಗ್ನಿಯೊಂದಿಗೆ ಮರಳುವ ಅಥವಾ ಔಪಾಸನ, ತ್ರಿರಾತ್ರ ಬ್ರಹ್ಮಚರ್ಯ, ಮಂಗಳಸ್ನಾನ, ಬ್ರಾಹ್ಮಣ ಭೋಜನ, ಆಶೀರ್ವಾದ ಮುಂತಾದ ವಿಧಿಗಳನ್ನು ಪೂರೈಸಿ ವರನ ಮನೆಗೆ ತೆರಳುವ ಪ್ರಕಾರವೂ ಇದೆ. ಆದರೆ ಈಗ ಅಶ್ವಲಾಯನನ ಅನುಜ್ಞೆಗನುಗುಣವಾಗಿ ಆಚರಿಸಲಾಗುವ ವಿವಾಹಗಳು ಬೊಂಬೇ ಪ್ರಸಿಡೆನ್ಸಿ, ಗೋವಾ, ಗ್ವಾಲಿಯರ್, ಇಂದೋರ್‌ಗಳಲ್ಲಿ ಕಾಣಬರುತ್ತವೆ; ಕೆನರಾದಲ್ಲಿನ ಹೈವಿಕ ಮತ್ತು ಶಿವಳ್ಳಿ ಬ್ರಾಹ್ಮಣರಲ್ಲೂ ಇದರ ಆಚರಣೆ ತೋರಿಬರುತ್ತದೆ. ಈ ನಿಮಿತ್ತ, ೧೯೦೮ರ ಡಿಸೆಂಬರ್ ತಿಂಗಳಲ್ಲಿ ಜರಗಿದ ಅಖಿಲಭಾರತೀಯ ಸ್ತರದಲ್ಲಿನ ಸಮಾಜ ಬಾಂಧವರ ಮಹಾಸಭೆ, ಈ ಪದ್ಧತಿಯನ್ನು ಕೆನರಾ, ಮಲಬಾರ್, ಕೊಚ್ಚಿನ್ ಮತ್ತು ಟ್ರಾವಂಕೂರ್‌ಗಳಲ್ಲೂ ಆಚರಣೆಗೆ ತರಬೇಕೆಂದು ಶಿಫಾರಸು ಮಾಡಿತು.

ಹುಡುಗಿ ಪ್ರಾಯಕ್ಕೆ ಬರುವ ಮುನ್ನವೇ ಆಕೆಯ ವಿವಾಹ ಮಾಡಬೇಕಾಗಿದ್ದ ನಿಮಿತ್ತ ಸಮಾಜದೊಳಗಣ ವರನೊಬ್ಬನನ್ನು ಆರಿಸುವುದು ಅತಿ ಕಷ್ಟದ ಕೆಲಸವೊಂದು. ವಿವಾಹ ಮಿತಿ ಮೀರಿದ ಖರ್ಚಿನ ಧಾರ್ಮಿಕ ವಿಧಿಯೊಂದಾಗಿದ್ದ ನಿಮಿತ್ತ ಜನರು ಅದನ್ನು ದಿವಾಳಿಕೋರತನದೊಂದಿಗೆ ಸರಿ ಹೋಲಿಸುತ್ತಾರೆ. ವರನಿಗೆ ಭಾರೀ ಪ್ರಮಾಣದ ವರದಕ್ಷಿಣೆಯೀಯಬೇಕಿದ್ದು ಅದರಲ್ಲಿನ ದೊಡ್ಡ ಭಾಗವನ್ನು ವಧುವಿನ ಆಭರಣ, ಬಟ್ಟೆ, ಗೃಹೋಪಯೋಗಿ ಪಾತ್ರೆ ಪರಡಿಗಳ ಖರೀದಿಗಾಗಿ ವ್ಯಯಿಸಲಾಗುತ್ತಿತ್ತು. ವಧುವಿಗೀಯುವ ಚಿನ್ನಾಭರಣ, ಬಟ್ಟೆ, ನಗದು ಹಣ, ನೆಂಟರಿಷ್ಟರಿಗೀಯಬೇಕಿರುವ ಉಡುಗೊರೆ, ಸಮಾಜದ ಬಾಂಧವರಿಗೀಯಲಾಗುವ ನಾಲ್ಕು ದಿನಗಳ ಭೂರಿಭೋಜನ, ಅವರ ಮನೋರಂಜನೆ, (ಕೊಚ್ಚಿನ್, ಟ್ರಾವಂಕೂರ್‌ನಲ್ಲಿ) ಸಂಗೀತ, ಬಾಣಬಿರುಸುಗಳಿಗಾಗಿ ವ್ಯಯಿಸಬೇಕಾಗಿದ್ದ ಧನ ಇವು ಸಂಸಾರವೊಂದರ ದುರ್ದೆಸೆಗೆ ಕಾರಣವಾಗುತ್ತಿದ್ದ ನಿಮಿತ್ತ, ಹೆಣ್ಣು ಮಗು ಹುಟ್ಟಿದಲ್ಲಿ ಹೆತ್ತವರು ಅದು ತಮ್ಮ ದುರ್ದೈವವೆಂದು ಭಾವಿಸುತ್ತಿದ್ದರು. ವರದಕ್ಷಿಣೆಯ ಕೆಡಕನ್ನು ತಡೆಹಿಡಿಯಲಾಗಿ ಸುಶಿಕ್ಷಿತ ಮತ್ತು ಧನಾಢ್ಯರಿದ್ದ ವಧುವಿನ ಹೆತ್ತವರು ಈಗ ಆ ಹಣವನ್ನು

ಬೇಂಕಿನಲ್ಲಿ ಠೇವಣಾತಿಯ ರೂಪದಲ್ಲಿಡುತ್ತಾರೆ. ಅಥವಾ ಆಕೆಯ ಹೆಸರಿನಲ್ಲಿ ಭೂಮಿ ಖರೀದಿ ಮಾಡುತ್ತಾರೆ. ಈ ರೀತಿಯಲ್ಲಿ ಅನಾವಶ್ಯಕವಾದ ಖರ್ಚನ್ನು ತಡೆಹಿಡಿಯುತ್ತಾರೆ.

ಕೊಂಕಣ ಬ್ರಾಹ್ಮಣರು ಅನುಸರಿಸುವ ಜನನ ಪೂರ್ವದ ಹಾಗೂ ಅನಂತರದ ರೀತಿ ರಿವಾಜುಗಳು, ಬಹು ವಿವಾಹ, ವಿವಾಹ ವಿಚ್ಛೇದನೆ, ವ್ಯಭಿಚಾರ ಇತ್ಯಾದಿಗಳಿಗೆ ಸಂಬಂಧಿಸಿದ ನಿಯಮಗಳು ಸರ್ವ ಸಾಮಾನ್ಯವಾಗಿ ಅನ್ಯ ವರ್ಗದ ಬ್ರಾಹ್ಮಣರ ನಿಯಮಗಳನ್ನು ಹೋಲುತ್ತಿದ್ದ ನಿಮಿತ್ತ ಅವುಗಳನ್ನು ಇಲ್ಲಿ ಪ್ರತ್ಯೇಕವಾಗಿ ವಿಷದೀಕರಿಸುವ ಅಗತ್ಯವಿಲ್ಲ.

ಜಾತಿ ವ್ಯವಸ್ಥೆ

ಕೋಮಿನ ಧರ್ಮಕ್ಕೆ ಸಂಬಂಧಿಸಿದ್ದ ಸಮಸ್ಯೆ, ರೂಢಿ, ರಿವಾಜುಗಳ ಕುರಿತಾದ ಪ್ರಶ್ನೆ ಬಗೆಹರಿಸುವುದು ಕಷ್ಟವೆಂದು ಕಂಡು ಬಂದಾಗ ಅವುಗಳ ಇತ್ಯರ್ಥಕ್ಕೆ ಮನು, ಯಾಜ್ಞವಲ್ಕ್ಯ, ಅಂಗೀರಸ ಮುಂತಾದವರು ಪರಿಷತ್ತುಗಳ ನಿಯೋಜನೆ, ನಿಯಮ ಮುಂತಾದವುಗಳ ರೂಪರೇಷೆಗಳನ್ನು ನಿಶ್ಚಯಿಸಿರುತ್ತಾರೆ. ಪರಿಷತ್ತು ಮೂರು ಅಥವಾ ನಾಲ್ಕು, ಹೆಚ್ಚೆಂದರೆ ಹತ್ತು ಸದಸ್ಯರನ್ನೊಳಗೊಂಡಿರಬಹುದಿತ್ತು. ಹಳ್ಳಿಗಳಲ್ಲಿ ಸಮಾಜ ಬಾಂಧವರ ಸಂಖ್ಯೆ ಸಾಕಷ್ಟು ಇರದಿದ್ದಾಗ ದೇವಸ್ಥಾನಕ್ಕೆ ಸಂಬಂಧಿಸಿದ್ದ 'ಧಾ ಜನ' (ಹತ್ತು ಮಂದಿ)ರ ಸಮಿತಿಯನ್ನು ಬಳಸಬೇಕಿತ್ತು. ಪ್ರಜಾಪ್ರಭುತ್ವದ ಪ್ರವೃತ್ತಿ ಬೆಳೆದುಕೊಂಡಂತೆ ಜಾತಿ ಅಥವಾ ದೇವಸ್ಥಾನಕ್ಕೆ ಸಂಬಂಧಿಸಿದ ಪ್ರಶ್ನೆ ಅಥವಾ ಸಮಸ್ಯೆಗಳ ಪರಿಹಾರಕ್ಕೆ ಸದಸ್ಯರೆಲ್ಲರ ಸಭೆ ಸೇರಿಸಿ ಈ ನಿಯಮಗಳನ್ನು ಕಾರ್ಯರೂಪಕ್ಕೆ ತಂದರು. ಅಲ್ಲಿ ಸರ್ವಸಾಮಾನ್ಯವಾಗಿ ಜಾತಿಗೆ ಸಂಬಂಧಿಸಿದ ಅನುಶಾಸನದ ಉಲ್ಲಂಘನೆ, ದೇವಸ್ಥಾನಕ್ಕೆ ಸಂಬಂಧಿಸಿದ ಕಾರ್ಯಗಳಲ್ಲಿನ ಅಡೆತಡೆ, ಸಮಾಜ ಬಾಂಧವರ ಕುರಿತಾದ ಕ್ಲಿಷ್ಟ ಸಮಸ್ಯೆ ಇತ್ಯಾದಿಗಳ ಚರ್ಚೆ ಮಾಡಲಾಗುತ್ತಿತ್ತು. ಸಭೆ ಸಮಸ್ಯೆಗಳನ್ನು ಬಗೆಹರಿಸಲಸಮರ್ಥವಾದಾಗ ಅವನ್ನು ಸಮಾಜದ ಧರ್ಮಗುರುಗಳಿಗೆ ಬಿಟ್ಟು ಬಿಡಲಾಗುತ್ತಿತ್ತು.

ಧರ್ಮ

ಅನ್ಯ ಬ್ರಾಹ್ಮಣರಂತೆ ಕೊಂಕಣಿಗರೂ ವೇದಗಳನ್ನು ಧರ್ಮಸಿದ್ಧಾಂತಗಳ ಪರಮೋಚ್ಚ ಪ್ರಮಾಣ ಗ್ರಂಥಗಳೆಂದು ಭಾವಿಸುತ್ತಾರೆ. ಅವರ ಧಾರ್ಮಿಕ ಅನುಷ್ಠಾನಗಳು ವೇದಗಳನ್ನನುಸರಿಸಿಕೊಂಡಿದ್ದ ನಿಮಿತ್ತ ಮತ್ತು ಅವುಗಳ ಸಾಂಗತ್ಯ ಮಂತ್ರೋಚ್ಚಾರದಿಂದಾಗುವ ಕಾರಣ ಅವರ ಧರ್ಮವನ್ನು 'ವೈದಿಕ'ವೆನ್ನಲಾಗುತ್ತದೆ. ಪುರಾಣಗಳು ಹೊಗಳಿದ ದೇವರುಗಳ ಪೂಜೆ, ಅವು ಸೂಚಿಸಿದ ಪೂಜಾಕ್ರಮ, ಕರ್ಮಾಚರಣೆ ಇತ್ಯಾದಿಗಳತ್ತ ಮೆಚ್ಚಿಗೆ ತೋರಿದ ಇವರ ಧರ್ಮವೂ 'ಪುರಾಣಿಕ'ವಿತ್ತು. ಅವರು ಋಗ್ವೇದದ ಶಾಕಲ ಶಾಖೆಗೆ ಸಂಬಂಧಿಸಿದವರಿದ್ದು ತಮ್ಮ ಶ್ರೌತ ಮತ್ತು ಗೃಹ್ಯ ಕರ್ಮಗಳ ಆಚರಣೆಗೆ ಅಶ್ವಲಾಯನ ಸೂತ್ರಗಳನ್ನನುಸರಿಸುತ್ತಿದ್ದರು. ಅನ್ಯ 'ಗೃಹ್ಯ ಸೂತ್ರ'ಗಳು ಅಶ್ವಲಾಯನನ ಸೂತ್ರಗಳಿಗನುರೂಪವಾಗಿದ್ದಲ್ಲಿ ಅವನ್ನೂ ಸ್ವೀಕರಿಸಲು ಅವರು ಆಕ್ಷೇಪ ಕೊಂಡಿರದಿದ್ದರು. ತಮ್ಮ ಆಚಾರ್ಯರ 'ಶ್ರೌತ' ಮತ್ತು 'ಗೃಹ್ಯಸೂತ್ರ'ಗಳ ಹೊರತು ಅವರು ಕುಮಾರಿಲ ಭಟ್ಟನ

'ಗೃಹ್ಯಕಾರಿಕ', 'ಶೌನಕ್ಯ ಪ್ರಯೋಗ' ಮತ್ತು ನಾರಾಯಣ ಭಟ್ಟನ 'ಪ್ರಯೋಗ ರತ್ನ' ಮತ್ತು ಕೆಲವೊಂದು ಸಂದರ್ಭಗಳಲ್ಲಿ 'ಪ್ರಯೋಗ ಪಾರಿಜಾತ' ಇವುಗಳ ಪರಿಶಿಷ್ಟವಿದ್ದ 'ಗೃಹ್ಯ ಪರಿಶಿಷ್ಟ' ಮುಂತಾದವುಗಳನ್ನೂ ಪ್ರಮಾಣ ಗ್ರಂಥಗಳಾಗಿ ಸ್ವೀಕರಿಸಿರುತ್ತಾರೆ. ಬ್ರಹ್ಮ ಯಜ್ಞದ ವೇಳೆಗೆ ಪುನರುಚ್ಚರಿಸಲಾಗುವ ಯಾಜ್ಞವಲ್ಕ್ಯ ಸ್ಮೃತಿಯ ಪ್ರಥಮ ಶ್ಲೋಕವನ್ನು ಈ ಸಮಾಜದ ವಿಧಿಬದ್ಧ, ಸಾಂಕೇತಿಕ ಸೂತ್ರವೆಂದು ಪರಿಗಣಿಸಲಾಗಿದೆ. ಈ ಸೂತ್ರದ ಕುರಿತು ವಿಜ್ಞಾನೇಶ್ವರ, ಅಪರಾರ್ಕ ಮತ್ತು ಶೂಲಪಾಣಿ ಇವರು ವಿಸ್ತೃತ ವ್ಯಾಖ್ಯೆ ಬರೆದಿರುತ್ತಾರೆ. ಅಪರಾರ್ಕನ ವ್ಯಾಖ್ಯೆಯನ್ನು ಧಾರ್ಮಿಕ ಮತ್ತು ಸಾಮಾಜಿಕ ಸಮಸ್ಯೆಗಳ ಪರಿಹಾರಕ್ಕೆ ಬಳಸಲಾಗುತ್ತಿದ್ದರೆ, ವಿಧಿ, ವಿಧಾನಗಳಲ್ಲಿನ ಪ್ರಶ್ನೆಗಳನ್ನು ಬಗೆಹರಿಸಲು ಕೇವಲ ವಿಜ್ಞಾನೇಶ್ವರನ ವ್ಯಾಖ್ಯೆಯ ನೆರವುಕೊಳ್ಳಲಾಗುತ್ತಿತ್ತು. ಜನಕನ ಆಸ್ಥಾನದೊಂದಿಗಿನ ಯಾಜ್ಞವಲ್ಕ್ಯನ ಸಂಬಂಧ ಮತ್ತು ತ್ರಿಹೋತ್ರ ಪುರದಲ್ಲಿನ ವಾಸ್ತವ್ಯ ಇವುಗಳ ಪರಿಣಾಮರೂಪ ಆತನ ಸ್ಮೃತಿ ಧರ್ಮಶಾಸ್ತ್ರದ ಸ್ಥಾನ ಕೊಂಡಿದ್ದಿರಬೇಕು. (ವಾಸ್ತವಿಕವಾಗಿ ಯಾಜ್ಞವಲ್ಕ್ಯ ಸ್ಮೃತಿ ಸ್ವಾಧ್ಯಾಯವನ್ನುದ್ದೇಶಿಸಿಕೊಂಡಿದೆ.) ಇದರೊಂದಿಗೆ ಅನ್ಯ ಸ್ಮೃತಿಗಳು ಕೂಡಾ ಪ್ರಮಾಣ ಗ್ರಂಥಗಳಂತೆ ಜನಪ್ರಿಯವಾದವು. ಈ ಸಮಾಜದ ವೈಷ್ಣವ ಶಾಖೆ ಮಧ್ವಾಚಾರ್ಯರ ಮತ್ತು ಅವರ ಉತ್ತರಾಧಿಕಾರಿಗಳ ಸೂತ್ರ ಸಂಕಲನಗಳನ್ನೂ ಸ್ವೀಕರಿಸುತ್ತದೆ.

ಹದಿನಾರು ಸಂಸ್ಕಾರಗಳು ಮತ್ತು ಶವ ಸಂಸ್ಕಾರದ ವಿಧಿಗಳು ವೈದಿಕವಿವೆ. ಧಾರ್ಮಿಕ ರೀತಿ ರಿವಾಜುಗಳ ಆಚರಣೆಗೆ ಈ ಕೋಮು ಚೈತ್ರಮಾಸದಿಂದ(ಮಾರ್ಚ್-ಎಪ್ರಿಲ್) ತೊಡಗುವ ಚಾಂದ್ರ ಸಂವತ್ಸರವನ್ನು ಅನುಸರಿಸುತ್ತದೆ.

ಚೈತ್ರ

೧) ಶುಕ್ಲಪಕ್ಷದ ಮೊದಲನೆಯ ದಿನ, ಯುಗಾದಿ, ಹೊಸವರ್ಷದಮೊದಲನೆಯ ದಿನ.
೨) ರಾಮನವಮಿ - ಶ್ರೀರಾಮನ ಜನ್ಮದಿನ.
೩) ಹುಣ್ಣಿಮೆ - ಹನುಮಾನ್ ಜಯಂತಿ.

ವೈಶಾಖ

೪) ಅಕ್ಷಯ ತೃತೀಯ - ಪರಶುರಾಮ ಜಯಂತಿ.
೫) ಶುಕ್ಲ ಪಕ್ಷದಲ್ಲಿನ ಚತುರ್ದಶಿ - ನರಸಿಂಹ ಜಯಂತಿ.
೬) ಹುಣ್ಣಿಮೆ - ಕೂರ್ಮ ಜಯಂತಿ.

ಜ್ಯೇಷ್ಠ

೭) ಶುಕ್ಲಪಕ್ಷದಲ್ಲಿನ ಚತುರ್ದಶಿ - ವಟ ಸಾವಿತ್ರಿ ವ್ರತ.

ಆಷಾಢ

೮) ಶುಕ್ಲದಶಮಿ - ಚಾತುರ್ಮಾಸ ಆರಂಭವಾಗುತ್ತದೆ.
೯) ಶುಕ್ಲ ಏಕಾದಶಿ (ಅಮವಾಸ್ಯೆಯ ನಂತರದ ಹನ್ನೊಂದನೆಯ ದಿನ).
೧೦) ಶುಕ್ಲ ದ್ವಾದಶಿ (ಅಮವಾಸ್ಯೆಯ ನಂತರದ ಹನ್ನೆರಡನೆಯ ದಿನ).

(ಈ ಮೂರು ದಿನಗಳನ್ನು ಮತ್ತು ಕಾರ್ತೀಕ ಮಾಸದ ಶುಕ್ಲ ಪಕ್ಷದಲ್ಲಿನ ತತ್ಸಮಾನ ದಿನಗಳನ್ನು ಅತಿ ಪವಿತ್ರವೆಂದು ಭಾವಿಸಲಾಗುತ್ತದೆ.)

ಶ್ರಾವಣ

೧೧) ನಾಗಪಂಚಮಿ - ಅಂದು ನಾಗನನ್ನು ಪೂಜಿಸಲಾಗುತ್ತದೆ.

೧೨) ಶುಕ್ಲಪಕ್ಷ, ಶ್ರವಣ ನಕ್ಷತ್ರದಂದು ಉಪಾಕರ್ಮವನ್ನು ಆಚರಿಸಲಾಗುತ್ತದೆ. ಸರ್ವ ಸಾಮಾನ್ಯವಾಗಿ ಇದು ಹುಣ್ಣಿಮೆಯಂದು ಒದಗಿಬರುತ್ತದೆ. ಕಾರಣವಶ ಅಂದು ಚಂದ್ರ ಗ್ರಹಣ ಘಟಿಸಿದಲ್ಲಿ ಉಪಾಕರ್ಮವನ್ನು ಶುಕ್ಲಪಕ್ಷ, ಹಸ್ತಾ ನಕ್ಷತ್ರ, ಪಂಚಮಿಯಂದು ಆಚರಿಸಲಾಗುತ್ತದೆ.

೧೩) ಕೃಷ್ಣಾಷ್ಟಮಿ - ಶ್ರೀ ಕೃಷ್ಣನ ಜನ್ಮದಿನ.

ಭಾದ್ರಪದ

೧೪) ಗೌರಿ ತೃತೀಯ - ಗೌರಿಪೂಜೆ ಮತ್ತು ವಾಯನದಾನ.

೧೫) ವಿನಾಯಕ ಚತುರ್ಥಿ - ಗಣಪತಿ ಪೂಜೆ.

೧೬) ಅನಂತ ವ್ರತ.

೧೭) ಈ ಮಾಸದ ಕೃಷ್ಣಪಕ್ಷ ಮಹಾಲಯ ಪಕ್ಷವಾಗಿದ್ದು ನಿಶ್ಚಿತ ದಿನಗಳಂದು ಪಿತೃ ಪ್ರೀತ್ಯರ್ಥ ಶ್ರಾದ್ಧಕಾರ್ಯ ಮಾಡಲಾಗುತ್ತದೆ.

೧೮) ಅಮವಾಸ್ಯೆ (ಮಹಾಲಯ ಅಮವಾಸ್ಯೆ).

ಆಶ್ವಿನ (ಆಶ್ವಯುಜ)

೧೯) ನವರಾತ್ರಿ - ಈ ತಿಂಗಳ ಮೊದಲ ಒಂಭತ್ತು ದಿನಗಳಲ್ಲಿ ಆಸ್ತಿಕರು ಉಪವಾಸ ಮಾಡಿ ದುರ್ಗೆಯನ್ನು ಪೂಜಿಸುತ್ತಾರೆ; ದೇವಿ ಮಾಹಾತ್ಮ್ಯದ ಪಾರಾಯಣ ಮಾಡುತ್ತಾರೆ.

೨೦) ಲಲಿತ ಪಂಚಮಿ.

೨೧) ಮಹಾ ನವಮಿ.

೨೨) ವಿಜಯ ದಶಮಿ.

(ನವರಾತ್ರಿಯ ಒಂದು ದಿವಸವನ್ನು ಕುಲದೇವತೆಗಾಗಿ ಮೀಸಲಾಗಿಟ್ಟು ಅಂದು ವಿಶೇಷ ಪೂಜೆ ಮಾಡಿ ಬ್ರಾಹ್ಮಣರನ್ನು, ಸುವಾಸಿನಿಯರನ್ನು ಆದರಾತಿಥ್ಯಗಳಿಂದ ಸತ್ಕರಿಸಲಾಗುತ್ತದೆ. ಈ ದಿನಗಳಲ್ಲಿ ಚಿಕ್ಕ ಮಕ್ಕಳ ಕಿವಿಗಳನ್ನು ಮೊದಲ ಬಾರಿಗೆ ಚುಚ್ಚಲಾಗುತ್ತದೆ. ವಿಜಯ ದಶಮಿಯಂದು ಗಂಡು ಮಕ್ಕಳಿಗೆ ಲಿಪಿ ಮಾಲೆ ಕಲಿಸಲು ಆರಂಭಿಸುತ್ತಾರೆ.

೨೩) ಆಶ್ವಯುಜ ಮಾಸದ ಹುಣ್ಣಿಮೆ ಅಗ್ರಾಯಣ, (ಸುಗ್ಗಿ ಹಬ್ಬ)ವಾಗಿದ್ದು ಅಂದು ಹೊಸ ಅಕ್ಕಿಯ ಅನ್ನ ಉಣ್ಣುತ್ತಾರೆ.)

೨೪) ಕೃಷ್ಣ ಪಕ್ಷದ ಚತುರ್ದಶಿ, ನರಕ ಚತುರ್ದಶಿ ಅಥವಾ ದೀಪಾವಳಿ.

ಕಾರ್ತಿಕ

೨೫) ಶುಕ್ಲ ದಶಮಿ (ಅಮವಾಸ್ಯೆಯ ನಂತರದ ಹತ್ತನೆಯ ದಿನ).

೨೬) ಶುಕ್ಲ ಏಕಾದಶಿ (ಅಮವಾಸ್ಯೆಯ ನಂತರದ ಹನ್ನೊಂದನೆಯ ದಿನ).

೨೭) ಶುಕ್ಲ ದ್ವಾದಶಿ - ತುಲಸಿಪೂಜೆ.

(ಈ ಮೇಲಣ ಮೂರೂ ದಿನಗಳು ವೈಷ್ಣವರಿಗೆ ಅತಿ ಮಹತ್ತಿನವಾಗಿವೆ).

೨೮) ಹುಣ್ಣಿಮೆ - ವ್ಯಾಸಪೂಜೆ ಮತ್ತು ದೀಪೋತ್ಸವ.

ಮಾರ್ಗಶೀರ್ಷ

೨೯) ಸುಬ್ರಹ್ಮಣ್ಯ ಷಷ್ಠಿ.

ಮಾಘ

ಕೆನರಾ ಮತ್ತು ಮಲಬಾರಿನಲ್ಲಿನ ಸಮಾಜದ ಹೆಚ್ಚಿನ ದೇವಸ್ಥಾನಗಳಲ್ಲಿ ಶುಕ್ಲ ಪಕ್ಷದ ತದಿಗೆ ಮೊದಲ್ಗೊಂಡು ಐದು ದಿನಗಳ ಕಾಲ ಉತ್ಸವವನ್ನಾಚರಿಸಲಾಗುತ್ತದೆ.

೩೦) ರಥ ಸಪ್ತಮಿ.

೩೧) ಮಹಾಶಿವರಾತ್ರಿ.

ಈ ಐದು ದಿನಗಳಲ್ಲಿಧಾರ್ಮಿಕ ವಿಧಿ, ಉತ್ಸವ, ಇತ್ಯಾದಿಗಳನ್ನು ಪುರಾಣಗಳು ವಿಧಿಸಿದ್ದಂತೆ ಮತ್ತು 'ವ್ರತರಾಜ' ಎಂಬೀ ಗ್ರಂಥದಲ್ಲಿ ಸೂಚಿಸಿದ ಕ್ರಮಕ್ಕನುಸರಿಸಿ ಆಚರಿಸಲಾಗುತ್ತದೆ. ಉಣ್ಣುವ ಆಹಾರ, ಮಾಡಬೇಕಾಗಿರುವ ಪೂಜೆಗಳು, ಹಾಗೆನ್ನುವಲ್ಲಿ ಚಾಂದ್ರಮಾಸಗಳಲ್ಲಿನ ಜೀವನ ಪದ್ಧತಿಯ ವಿಸ್ತೃತ ವಿವರಗಳನ್ನು ಮಾಸಗಳ ಮಾಹಾತ್ಮ್ಯದಲ್ಲಿ ಕಾಣಬಹುದು.

ಈ ಮಾಸಗಳೆಲ್ಲವುಗಳಲ್ಲಿ ಕಾರ್ತಿಕ ಮತ್ತು ಮಾಘ ಮಾಸಗಳು ಹಬ್ಬ, ಹರಿದಿನಗಳ ನಿಮಿತ್ತ ಜನಪ್ರಿಯವಾಗಿವೆ.

ಸಮಾಜದ ಧರ್ಮ ಗುರುಗಳು

ಗೋವಾಕ್ಕೆ ವಲಸೆ ಬಂದ ಗೌಡಸಾರಸ್ವತ ಬ್ರಾಹ್ಮಣರು ಪೂಜಿಸಲಾರಂಭಿಸಿದ್ದ ಕುಲದೇವರ ಅಥವಾ ಸಂರಕ್ಷಕ ದೇವರ ಸ್ವರೂಪವನ್ನು ಕಾಣುವಾಗ ಅವರು ಮೂಲತಃ ವಿಷ್ಣು ಮತ್ತು ಶಿವ ಇವರಿಬ್ಬರ ನಡುವೆ ಭೇದ ಭಾವ ತೋರದ ಭಾಗವತರಿದ್ದುದು ಕಾಣಬರುತ್ತದೆ. ಸಮಾಜ ಈಗ ಶೈವ ಮತ್ತು ವೈಷ್ಣವ ಸಂಪ್ರದಾಯಸ್ಥರಿಂದೊಳಗೂಡಿದೆ. ಶೈವರು ತಮ್ಮ ಆಧ್ಯಾತ್ಮಿಕ ಗುರುಗಳ ಅಧಿಕಾರ ಕ್ಷೇತ್ರದೊಳಕ್ಕಿರುತ್ತಾರೆ. ಅವರು ಗುರುಗಳ ವಾಸ್ತವ್ಯದ ಮುಖ್ಯ ಸ್ಥಾನವನ್ನು ಕೈವಲ್ಯ ಮಠವೆಂದು ಕಯುತ್ತಾರೆ. ಅಖಂಡಿತ ಪರಂಪರೆಯನ್ನವಲೋಕಿಸಿದಾಗ ಶ್ರೀ ಶಂಕರಾಚಾರ್ಯರಿಗೆ ಸನ್ಯಾಸದ ದೀಕ್ಷೆಯಿತ್ತ ಗೌಡಪಾದವಿವರಣಾಚಾರ್ಯರು ಈ ಮಠದ ಸಂಸ್ಥಾಪಕರಿದ್ದುದು ತೋರಿ ಬರುತ್ತದೆ. ಶೈವರು ಬೊಂಬೇ ಪ್ರೆಸಿಡೆನ್ಸಿ, ಸಾವಂತವಾಡಿ, ಬರೋಡ, ಇಂದೋರ್ ಮತ್ತು ಗ್ವಾಲಿಯರ್‌ನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾಣಬರುತ್ತಾರೆ. ಈ ಸಮಾಜದ ಧರ್ಮ, ಪರಮಾರ್ಥಗಳಿಗೆ ಸಂಬಂಧಿಸಿದ ಎಲ್ಲೊಂದು ಸಮಸ್ಯೆಗಳನ್ನು ಗುರುಗಳು ಬಗೆಹರಿಸುತ್ತಿದ್ದು ಇವರ ನಿರ್ಣಯ ಅಂತಿಮವಿರುತ್ತದೆ. ಇವರು ಶ್ರೀಶಂಕರಾಚಾರ್ಯರು ಪ್ರತಿಪಾದಿಸಿದ ಅದ್ವೈತ ಸಿದ್ಧಾಂತವನ್ನನುಸರಿಸುತ್ತಿದ್ದರೂ ವಿಷ್ಣು ಮತ್ತು ಶಿವ ಇವರ ಶ್ರೇಷ್ಠತೆಯ ಕುರಿತು

ಭೇದ ಭಾವ ತೋರದ ಭಾಗವತರಾಗಿದ್ದಾರೆ. ಶರೀರದ ನಿಶ್ಚಿತ ಭಾಗಗಳಿಗೆ ಹಚ್ಚಲಾಗಿ ಅವರು ಪವಿತ್ರವಾದ ಭಸ್ಮವನ್ನು ಬಳಸುತ್ತಾರೆ. ಮತ್ತು ಹಣೆಯ ಮೇಲಕ್ಕೆ ತಿಲಕವನ್ನಿಡುತ್ತಾರೆ. ಹೆಂಗಸರು ತಿಲಕಕ್ಕಾಗಿ ಕುಂಕುಮ ಉಪಯೋಗಿಸುತ್ತಿದ್ದು,ತಿಲಕ ನಾಮದಂತಿರುತ್ತಿತ್ತು .

ಮಲಬಾರ್, ಕೊಚ್ಚಿನ್ ಮತ್ತು ಟ್ರಾವಂಕೂರ್‌ಗಳಲ್ಲಿನ ಗೌಡಸಾರಸ್ವತ ಬ್ರಾಹ್ಮಣರು ಸಾಮಾನ್ಯತಃ ವೈಷ್ಣವರಿದ್ದಾರೆ. ಅವರು ಶ್ರೀಮಧ್ವಾಚಾರ್ಯರು ಪ್ರತಿಪಾದಿಸಿದ ದ್ರಾವಿಡ ಪದ್ಧತಿಯ ವೇದಾಂತವನ್ನನುಸರಿಸುತ್ತಾರೆ. ಮತ್ತೆ ವಿಷ್ಣು ಸರ್ವೋತ್ತಮನೆಂಬ ಭಾವನೆಯಿಂದ ಆತನನ್ನು ಪೂಜಿಸುತ್ತಾರೆ. ಅನ್ಯದೇವಾಧಿದೇವತೆಗಳು ಆತನ ಅಧೀನವಿದ್ದು ವಿಶ್ವದ ರಕ್ಷಣೆಗಾಗಿ ಆತನ ಆಜ್ಞೆಯನ್ನು ಪಾಲಿಸುತ್ತಿರುವರೆಂದು ಭಾವಿಸುತ್ತಾರೆ. ಕ್ರಿ.ಶ. ೧೩ನೆಯ ಶತಮಾನದಲ್ಲಿ ಶ್ರೀಮಧ್ವಾಚಾರ್ಯರು ದ್ವೈತ ಸಿದ್ಧಾಂತಗಳನ್ನು ಪ್ರತಿಪಾದಿಸುವ ವೈಷ್ಣವ ಪಂಥ ಸ್ಥಾಪಿಸಿದ್ದು ಅದರ ಪ್ರಚಾರಕ್ಕಾಗಿ ಅವರು ಉತ್ತರ ಭಾರತದತ್ತ ತೆರಳಿದರು. ಗೋವಾದತ್ತ ಬಂದ ಅವರು ಆತನಕ ಶಿವ ಭಕ್ತರಿದ್ದು ಕೈವಲ್ಯ ಮಠದ ಮೇಲಕ್ಕೆ ಆಸ್ಥೆಯಿಟ್ಟುಕೊಂಡಿದ್ದ ಎಷ್ಟೋಂದೊ ಮಂದಿ ಶೆಣ್ವಿಯರನ್ನು ಧರ್ಮಾಂತರಗೊಳಿಸಿದರು. ಧರ್ಮ ಪರಿವರ್ತನೆ ಹೊಂದಿದವರಲ್ಲಿ ಹೆಚ್ಚಿನವರು ಗೋವಾದಲ್ಲಿ ಈಗ ಸಾಲ್ಸೆಟ್ ಎಂದು ಪರಿಚಿತವಾಗಿದ್ದ ಪ್ರಾಂತದ ನಿವಾಸಿಗಳಾಗಿದ್ದ ಸಾಷಷ್ಟಿಕಾರರಿದ್ದರು. ಈ ನಿಮಿತ್ತ ಶೆಣ್ವಿ ನಾಮ ವಿಶೇಷಣ ಶೈವರಿಗಷ್ಟೆ ಸೀಮಿತವಾಯಿತು. ವೈಷ್ಣವರು ಸಾಷಷ್ಟಿಕಾರರು ಅಥವಾ ಕೊಂಕಣ ಬ್ರಾಹ್ಮಣರೆಂದಾಗಿ ಕರೆಯಲ್ಪಡತೊಡಗಿದರು. ಶ್ರೀಮಧ್ವಾಚಾರ್ಯರ ಅನುಯಾಯಿಗಳಾಗುಳಿದ ಇವರು ಧರ್ಮ ಪರಿವರ್ತನೆಯ ಪ್ರಸಂಗವೇ ಘಟಿಸಿರದಿದ್ದಂತೆ ತಮ್ಮ ಶೈವ ಸೋದರರೊಂದಿಗೆ ಅಂತರ್ಭೋಜನ, ಅಂತರ್ವಿವಾಹ ಮಾಡಿಕೊಳ್ಳುತ್ತಾರೆ.

ವೈಷ್ಣವರು ಧರ್ಮ ಸೂಚಕ ಊರ್ಧ್ವಪುಂಡ್ರ, ಶಂಕ, ಚಕ್ರ, ಗದಾ, ಪದ್ಮ ಮತ್ತು ಚೌಕಾಕಾರದ 'ನಾರಾಯಣ' ಎಂಬೀ ಮುದ್ರೆಗಳ ಧಾರಣೆಗೆ ಗೋಪಿಚಂದನವನ್ನು ಬಳಸುತ್ತಾರೆ. ಒಂಬತ್ತು ಚೌಕಗಳನ್ನೊಳಗೊಂಡ 'ನಾರಾಯಣ' ಮುದ್ರೆ, ಅಷ್ಟಾಕ್ಷರ ಮಂತ್ರದಿಂದ ಆರಿಸಿದ ನಾರಾಯಣ ಅಕ್ಷರಗಳಿಂದೊಡಗೂಡಿದೆ. ತಮ್ಮ ಸಂಚಾರದ ವೇಳೆ ತಂಗಿಕೊಳ್ಳುತ್ತಿದ್ದ ಗುರುಗಳು ಬೆಳ್ಳಿಯ ಶಂಖ, ಚಕ್ರ, ಮುದ್ರೆಗಳಿಂದ 'ತಪ್ತ ಮುದ್ರಾಧಾರಣೆ'ಯ ವಿಧಿ ಜರಗಿಸುತ್ತಿದ್ದರು. ಅವರ ಶಿಷ್ಯವರ್ಗ ಈ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿತ್ತು. ಗೃಹಸ್ಥರು, ನಾಮಧಾರಣೆಗೆ ಶ್ರೀಗಂಧ ಬಳಸಿದ್ದಲ್ಲಿ ಆಕ್ಷೇಪವಿರದಿತ್ತು. ಹೆಂಗಸರು ತಮ್ಮ ಹಣೆಯ ಮೇಲಕ್ಕೆ ಅರಿಸಿನ ಸೇರಿಸಿ ಮಾಡಿದ ಕುಂಕುಮದ ತಿಲಕವಿಡುತ್ತಿದ್ದರು; ತೋಳುಗಳ ಮೇಲಣ ನಾಮಕ್ಕೆ ಗೋಪಿಚಂದನ ಬಳಸುತ್ತಿದ್ದರು. ವಿಧವೆಯರು ಕುಂಕುಮದ ತಿಲಕ ಧರಿಸದಿದ್ದು ಕೇವಲ ಗೋಪಿಚಂದನ ಉಪಯೋಗಿಸುತ್ತಿದ್ದರು. ಪುರಾಣಗಳಲ್ಲಿ ಉಲ್ಲೇಖಿಸಲ್ಪಟ್ಟ ಧರ್ಮ ಬೆಳೆದು ಬಂದಂತೆ, ಆರಾಧಿಸುವ ದೇವರ ಸಂಖ್ಯೆಯಲ್ಲೂ ಬೆಳವಣಿಗೆಯಾಯಿತು. ಅವುಗಳಲ್ಲಿನ ಕೆಲವು ಕುಲದೇವರ ಸ್ಥಾನಕೊಂಡವು. ಈಗ, ಸಹ್ಯಾದ್ರಿ ಖಂಡದಲ್ಲಿ ನಮೂದಿಸಿದ್ದವುಗಳಿಗಿಂತಲೂ ಅಧಿಕ ಸಂಖ್ಯೆಯ ಕುಲದೇವರನ್ನು ಕಾಣಬಹುದು. ಇವುಗಳಲ್ಲಿನ ಎರಡು, ಜನಪ್ರಿಯತೆಕೊಂಡು ಗ್ರಾಮ ದೇವತೆಗಳೆಂದಾಗಿ ಪೂಜಿಸಲ್ಪಡುತ್ತಿವೆ ; ಬೊಂಬೇ ಪ್ರೆಸಿಡೆನ್ಸಿಯಲ್ಲಿನ ಪಂಢರಪುರದ ವಿಠೋಬಾ ಒಂದಾಗಿದ್ದು, ಇನ್ನೊಂದು ಗೋವಾದ ಮೇಲೆ

ಪ್ರಭಾವ ಬೀರಿದ್ದ ವಿಜಯನಗರದ ಆರಾಧ್ಯ ದೈವ ನರಸಿಂಹ. ವೈಷ್ಣವರು ಮಲಬಾರಿನ ಕರಾವಳಿ ಭಾಗದತ್ತ ವಲಸೆ ಹೋದಾಗ ಈ ದೈವಗಳನ್ನೂ ತಮ್ಮೊಂದಿಗೆ ಕೊಂಡುಹೋದರು. ಕೆನರಾದಲ್ಲಿ ನೆಲೆ ನಿಂತ ಬಳಿಕ, ಹಿಂದುಗಳು ತಿರುಪತಿಯ ಜನಪ್ರಿಯ ವೆಂಕಟರಮಣನನ್ನು ಆರಾಧಿಸುತ್ತಿದ್ದುದನ್ನು ಕಂಡು ಆತನ ಪೂಜೆಗೂ ತೊಡಗಿದರು. ಈ ಬ್ರಾಹ್ಮಣರು ಒಂದು ಅಥವಾ ಹೆಚ್ಚಿನ ದೇವರುಗಳನ್ನು ತಮ್ಮ ಮನೆಗಳಲ್ಲಿ ಅಥವಾ ಸಾರ್ವಜನಿಕ ದೇವಸ್ಥಾನಗಳಲ್ಲಿಟ್ಟು ಪೂಜಿಸಲಾರಂಭಿಸಿದರೂ ಕೆನರಾ ಮತ್ತು ಮಲಬಾರಿನಲ್ಲಿ ನೆಲೆಸಿದ್ದ ಯಾರೊಬ್ಬರೂ ತಿರ್ಹತ್ ನಿಂದ ತಂದಿದ್ದ ದೇವರುಗಳ ಪೂಜೆಯ ಖಂಡನೆ ಮಾಡಿದ್ದುದಿಲ್ಲ. ಅನ್ಯ ಸಮಾಜದ ಬ್ರಾಹ್ಮಣರನ್ನು ಯಾವೊಂದು ಕಾರಣಕ್ಕೂ ತಮ್ಮ ದೇವಸ್ಥಾನಗಳಲ್ಲಿನ ಪೂಜೆಗೆ ಬಳಸುತ್ತಿದ್ದಿಲ್ಲ. ಅಷ್ಟೇ ಅಲ್ಲದೆ ಅವರನ್ನು ದೇವಸ್ಥಾನ ಪ್ರವೇಶಿಸಲೂ ಬಿಡುತ್ತಿದ್ದಿಲ್ಲ.

ಶವಸಂಸ್ಕಾರದ ವಿಧಿ, ನಿಯಮಗಳು

ಶವ ದಹನ, ಶವ ಸಂಸ್ಕಾರದ ಅಪರಿವರ್ತನೀಯ ವಿಧಿಗಳಲ್ಲೊಂದಾಗಿದೆ. ಆದರೆ ಎಳಗೂಸು, ಸಿಡುಬು ಕೊಂಡಾತ, ಕುಷ್ಠರೋಗಿ ತೀರಿಕೊಂಡಿದ್ದಲ್ಲಿ ಅವರ ಶವವನ್ನು ಹೂಳಲಾಗುತ್ತದೆ. ಇಲ್ಲಿನ ಎಲ್ಲೊಂದು ಸಂಸ್ಕಾರಗಳನ್ನು 'ಶೌನಕ್ಯ ಪ್ರಯೋಗ'ದಲ್ಲಿ ಹೇಳಲಾದ ವಿಧಿಗಳಿಗನುಗುಣವಾಗಿ ಆಚರಿಸಲಾಗುತ್ತದೆ. ವ್ಯಕ್ತಿ ತೀರಿಕೊಂಡ ನಂತರ ಹನ್ನೊಂದನೆಯ ದಿನದಂದು ಶ್ರೀಮಂತರು ಗೂಳಿಯೊಂದನ್ನು ಸ್ವಚ್ಛಂದ ಅಲೆದಾಡಲು ಬಿಡುತ್ತಾರೆ ('ವೃಷೋತ್ಸರ್ಗ'). ಗರುಡ ಪುರಾಣದ ಪ್ರೇತ ಕಲ್ಪದಲ್ಲಿ ಉಲ್ಲೇಖಿಸಲ್ಪಟ್ಟ ಶ್ರೀಕೃಷ್ಣನ ಆದೇಶಕ್ಕನುಗುಣವಾಗಿ ವರ್ಷದ ಕೊನೆಯಲ್ಲಿ ಮಾಡಲಾಗುವ 'ಸಪಿಂಡೀಕರಣ'ವನ್ನು ಹನ್ನೆರಡನೆಯ ದಿನದಂದೇ ಮಾಡಲಾಗುತ್ತದೆ. ನಿಶ್ಚಿತ ಕಾಲಾವಧಿಗೂ ಮುನ್ನವೇ ಈ ವಿಧಿಯನ್ನು ಪೂರೈಸಲು, ಅಂದು ಹದಿನಾರು ಮಾಸಿಕ ಶ್ರಾದ್ಧಗಳ ವಿಧಿಯನ್ನು ಪೂರೈಸುವ ಅವಶ್ಯಕತೆಯಿದೆ.

'ಸಪಿಂಡೀಕರಣ' ವಿಧಿಯ ಬಳಿಕ ವರ್ಷದುದ್ದಕ್ಕೆ ಬರುವ ಮಾಸಿಕ ಶ್ರಾದ್ಧಗಳನ್ನು ಪೂರೈಸಿದ ನಂತರ 'ಅಬ್ದಿಕ', ಮೊದಲ ವರ್ಷಾಂತ್ಯದ ಶ್ರಾದ್ಧ ಬರುತ್ತದೆ.

'ಪೂರ್ವಪಂಕ್ತಿ'ಯಲ್ಲಿ ಮೂರು ಮಂದಿ ಬ್ರಾಹ್ಮಣರನ್ನು ಆದರೋಪಚಾರಗಳಿಂದ ಸತ್ಕರಿಸುವ 'ವರ್ವಣ ಶ್ರಾದ್ಧ' ವನ್ನು ಶ್ರೀಮಂತರಷ್ಟೆ ಮಾಡುತ್ತಾರೆ. ಶ್ರಾದ್ಧದ 'ಪೂರ್ವಪಂಕ್ತಿ'ಯನ್ನು ಯೋಗ್ಯ ರೀತಿಯಲ್ಲಿ ನಿಭಾಯಿಸಿಕೊಂಡು ಹೋಗುವ ಅರ್ಹತೆ ಕೊಂಡವರು ದೊರಕದಿರುವುದನ್ನು ಕಂಡ ಶ್ರೀ ಮಧ್ವಾಚಾರ್ಯರು ಮಾಧ್ವ ಬ್ರಾಹ್ಮಣರಲ್ಲಿ ವಾಡಿಕೆಯಲ್ಲಿದ್ದ ಶ್ರಾದ್ಧದ ಪ್ರಕಾರವನ್ನು ಅನುಸರಿಸುವರೆ ಅನುಮತಿಯಿತ್ತರು. ಈ ಪದ್ಧತಿಯ ಮೇರೆ ಗೆ 'ಪೂರ್ವಪಂಕ್ತಿ'ಯ ಸ್ಥಾನದಲ್ಲಿ ಅದಕ್ಕಾಗಿ ಸಿದ್ದಗೊಳಿಸಲಾದ ಪದಾರ್ಥಗಳನ್ನು ಬಾಳೆಯ ಎಲೆಗಳೆರಡರಲ್ಲಿ ಬಡಿಸಲಾಗುತ್ತಿತ್ತು; ಒಂದು 'ವೈಶ್ವ ದೇವ'ರನ್ನುದ್ದೇಶಿಸಿ, ಮತ್ತೊಂದು 'ಪಿತೃ'ರಿಗಾಗಿದ್ದು, ಬಡಿಸಿದ್ದ ಖಾದ್ಯಾನ್ನ ಸ್ವೀಕರಿಸುವರೆ ಅವರನ್ನು ಆಮಂತ್ರಿಸಲಾಗುತ್ತಿತ್ತು. ಮತ್ತೆ ಅವರ ಉಪಸ್ಥಿತಿಯನ್ನು ನಂಬಲಾಗುತ್ತಿತ್ತು. ಅವರು ಉಣಬಡಿಸಿದ್ದುದನ್ನು ಸೇವಿಸುತ್ತಿರುವಾಗ 'ಯಜಮಾನ'(ನಿರ್ವಾಹಕ) ಪುರೋಹಿತರು ನಿರ್ದೇಶಿಸಿದಂತೆ ಅನ್ನದ ಮೂರು ಪಿಂಡಗಳನ್ನು ತಯಾರಿಸಿ ಯಾವ ಮೃತ ವ್ಯಕ್ತಿಯನ್ನುದ್ದೇಶಿಸಿ ಶ್ರಾದ್ಧ ಮಾಡಲಾಗುತ್ತದೆಯೋ ಆತನ ಆತ್ಮಕ್ಕೆ ಅರ್ಪಿಸುತ್ತಾನೆ.

ಶ್ರಾದ್ಧ ಕ್ರಿಯೆ ಮುಗಿಯುತ್ತಲೇ 'ಯಜಮಾನ' ಬ್ರಹ್ಮಯಜ್ಞ, ತರ್ಪಣ ಇತ್ಯಾದಿಗಳನ್ನು ಪೂರೈಸಿ ಪುರೋಹಿತರು, ಬಂಧು ಬಾಂಧವರು, ಮಿತ್ರರೊಂದಿಗೆ ಉಣ್ಣುತ್ತಾನೆ. ವ್ಯಕ್ತಿಯೊಬ್ಬ ಪರದೇಶದಲ್ಲಿ ತೀರಿಕೊಂಡಿದ್ದಲ್ಲಿ, ನೀರು ಅಥವಾ ಅಗ್ನಿಯ ಪಾಲಾಗಿದ್ದು ಅಸ್ತಿ ದೊರಕದಿದ್ದಾಗ, ಆತನ ಪ್ರೇತ ಕರ್ಮಗಳನ್ನು 'ಪಲಶವಿಧಿ' ಗನುಗುಣವಾಗಿ ಮಾಡಲಾಗುತ್ತದೆ.

ಉದ್ಯೋಗ

ಕೊಚ್ಚಿನ್‌ನ ಕೊಂಕಣಿಗರು ಮುಖ್ಯವಾಗಿ ವ್ಯಾಪಾರಿಗಳಾಗಿದ್ದರು. ಅನ್ಯ ಪ್ರಾಂತಗಳಲ್ಲಿನ ಕೊಂಕಣಿಗರು ನ್ಯಾಯ, ವೈದ್ಯಕೀಯ ಶಿಕ್ಷಣ ಮುಂತಾದ ಉದ್ಯೋಗಗಳ ಬೆನ್ನು ಹತ್ತಿರುವುದನ್ನು ಕಂಡ ಇವರೂ ಇದನ್ನು ತಮ್ಮ ಗುರಿಯಾಗಿಟ್ಟುಕೊಂಡರು.

ಸಾಮಾಜಿಕ ಸ್ಥಾನ ಮಾನ

ಗೌಡರು ಮತ್ತು ದ್ರಾವಿಡರಲ್ಲಿ ಅಂತರ್ಭೋಜನ, ಅಂತರ್ವಿವಾಹ ಜರಗದಿದ್ದ ವಿಚಾರ ಎಲ್ಲರಿಗೂ ಗೊತ್ತಿದ್ದುದಾಗಿದೆ. ಹಾಗನ್ನುವಲ್ಲಿ ಗೌಡರು ತಮ್ಮೊಳಗಣ ಸಾಮಾಜಿಕ ಸಾಮರಸ್ಯದ ಆನಂದವನ್ನು ಅನುಭೋಗಿಸದಿದ್ದರು. ದಕ್ಷಿಣಕ್ಕೆ ವಲಸೆ ಬಂದ ಗೌಡ ಸಾರಸ್ವತರು ನೆರೆಹೊರೆಯ (ದ್ರಾವಿಡ ಬ್ರಾಹ್ಮಣರ)ವರ ತಮ್ಮ ನಡೆ, ನುಡಿ, ರೀತಿ, ರಿವಾಜುಗಳ ವಿಷಯದಲ್ಲೂ ಬೇರೆಯೇ ಇದ್ದುದನ್ನು ಕಂಡರು. ಅವರ ಭಾಷೆಯೂ ಬೇರೆಯಾಗಿತ್ತು. ಇವೆಲ್ಲವುಗಳ ಫಲ ಸ್ವರೂಪ ಈ ಎರಡು ಕೋಮುಗಳು ಬೇರೆಯೇ ಆಗಿ ಉಳಿದವು.[೧]

ಆಹಾರ

ಧಾನ್ಯ, ತರಕಾರಿ, ದನ ಅಥವಾ ಎಮ್ಮೆಯ ಹಾಲು, ಹಾಲಿನ ಅನ್ಯ ಉತ್ಪಾದನೆಗಳು ಈ ಸಮಾಜದ ಆಹಾರದ ಪ್ರಾಥಮಿಕ ಘಟಕಗಳಾಗಿದ್ದವು. ಕೆನರಾ ಮತ್ತು ಅದರ ದಕ್ಷಿಣದ ಪ್ರಾಂತದಲ್ಲಿ ಹುರಿಯಲು ಮತ್ತು ಒಗ್ಗರಣೆಯೊಯಲು ತೆಂಗಿನೆಣ್ಣೆಯನ್ನು ಉಪಯೋಗಿಸಲಾಗುತ್ತದೆ. ಉತ್ತರ ಕನ್ನಡದಲ್ಲಿ ತೆಂಗಿನೆಣ್ಣೆಯ ಬದಲಿಗೆ ತುಪ್ಪ ಉಪಯೋಗಿಸುತ್ತಾರೆ. ಗೋಧಿ, ಅಕ್ಕಿ, ಕಡಲೆ, ಹೆಸರು, ಉದ್ದುಗಳ ಹಿಟ್ಟು ಮಾಡಿ ಅವನ್ನು ಮಿಠಾಯಿ ತಯಾರಿಸಲು ಬಳಸಲಾಗುತ್ತಿತ್ತು.[೨]

ಸಂದರ್ಭ ಸೂಚಿ

೧) ದ್ರಾವಿಡ ಬ್ರಾಹ್ಮಣರ ಸಮಾಜದೊಂದಿಗೆ ಹೊಂದಿಕೊಂಡು, ಮೈಗೂಡಿಸಿ ಕೊಳ್ಳುವುದಕ್ಕೆ ಅವರ ಮೂಲ ಪ್ರವೃತ್ತಿ, ಸ್ವಭಾವ, ತಡೆಯೊಡ್ಡಿತು. ಇದರ ಫಲಸ್ವರೂಪ ಅನೇಕ ಕಷ್ಟಗಳನ್ನನುಭವಿಸಿ, ಪ್ರತಿಕೂಲ ಪರಿಸ್ಥಿತಿಯನ್ನೆದುರಿಸಬೇಕಾದರೂ ಹಿಂಜರಿಯದೆ, ಪ್ರತ್ಯೇಕವಾಗುಳಿದು, ತಮ್ಮ ಸಾಮಾಜಿಕ ಸ್ವಾಯತ್ತತೆಯನ್ನುಳಿಸಿಕೊಂಡರು.

೨) ಕೊಚ್ಚಿನ್ ಮತ್ತು ಟ್ರಾವಂಕೂರ್ ಗಳಲ್ಲಿನ ಗೌಡಸಾರಸ್ವತ ಬ್ರಾಹ್ಮಣರು ವಿಭಿನ್ನ ಪ್ರಕಾರದ ಸ್ವಾದಿಷ್ಟ ಪದಾರ್ಥಗಳನ್ನು ತಯಾರಿಸುವಲ್ಲಿ ನೈಪುಣ್ಯ ಕೊಂಡವರಿದ್ದರೆ, ಉತ್ತರದಲ್ಲಿನ ಅವರ ಬಾಂಧವರು ಮಿಠಾಯಿ ಹಾಗೂ ಅನ್ಯ ರುಚಿಕರ ತಿನಿಸುಗಳನ್ನು ತಯಾರಿಸುವಲ್ಲಿ ಸಿದ್ಧಹಸ್ತರಿದ್ದರು.

ಪರಿಶಿಷ್ಟ ೩

ರಾಮ ಕಾಮತಿ

"ಹದಿನೇಳನೆಯ ಮತ್ತು ಹದಿನೆಂಟನೆಯ ಶತಮಾನಗಳ ನಡುವಣ ೫೦ ವರ್ಷಗಳ ಕಾಲಾವಧಿಯಲ್ಲಿ ಬೊಂಬೇಯಲ್ಲಿ ನೆಲೆಸಿದ್ದ ಭಾರತೀಯರೆಲ್ಲರಿಗೂ ರಾಮ ಕಾಮತಿಯವರ ಹೆಸರು ಅತಿ ಪರಿಚಿತವಾದುದಾಗಿತ್ತು. ಅವರ ನೆನಪು, ಅವರ ವಿರುದ್ಧ ನಡೆಸಲಾದ ದೇಶ ದ್ರೋಹದ ದಾವೆ ಮತ್ತು ೧೭೨೦ ರಲ್ಲಿನ ಬೊಂಬೇಯ ಗವರ್ನರ್ ಬೂನ್ ಮತ್ತು ಅವರ ಸಲಹಾಮಂಡಳಿಯ ಅನುಚಿತ ವರ್ತನೆಯ ನಿಮಿತ್ತ ಹೊಚ್ಚ ಹೊಸದಾಗುಳಿದಿದೆ. ಅದು ಅವರು ಈ ಹಿಂದೆ ಭೂಷಿಸಿದ್ದ ಅತ್ಯುಚ್ಚ ಪದವಿ ಮತ್ತುಆನಂತರದ ಅವರ ದುರ್ದೆಶೆ ಇವೆರಡರ ನಡುವಣ ವಿಪರ್ಯಾಸವನ್ನೆತ್ತಿ ತೋರುತ್ತಿತ್ತು".[1]

೧. ಖಜಾನೆಯ ಸರಾಫರಾಗಿ ನಿಯುಕ್ತರಾದುದು

ರಾಮ ಕಾಮತಿ[2] ಯವರ ಜೀವನದ ಆರಂಭದ ದಿನಗಳು ಅತಿ ಸಾಮಾನ್ಯವಿದ್ದವು. ಅವರ ಹೆಸರು ಮೊತ್ತ ಮೊದಲಿಗೆ, ಬೊಂಬೇಯ ೧೬೮೦ರ ಜುಲೈ ತಿಂಗಳ ದಾಖಲೆಗಳಲ್ಲಿ ಕಾಣಬರುತ್ತದೆ. ಅದು ಅದೇ ವರ್ಷದ ಜೂನ್ ತಿಂಗಳಲ್ಲಿ ೨೩೫೦ ನಕಲಿ ಪಗೋಡಾಗಳು ಬೆಳಕಿಗೆ ಬಂದ ಸಂದರ್ಭದಲ್ಲಿತ್ತು. ಛಾವುಲ್‌ನ ಬಳಿಯ, ಮರಾಠಾ ಸತ್ತೆಗೊಳಗಾಗಿದ್ದ ಪ್ರಾಂತದಿಂದ ಪಡೆದ ಪಗೋಡಾಗಳನ್ನು ಬೊಂಬೇಯಲ್ಲಿ ಚಲಾವಣೆಗೆ ಹಾಕಲಾಗಿತ್ತು. ಹೊಸ ನಿಬಂಧನೆಗಳನ್ನು ಹೇರಿಸಿದ ನಂತರ ಸರಕಾರ ನಾಲ್ಕು ಮಂದಿ ಕುಶಲ ಸರಾಫರನ್ನು ಆರಿಸಿ, ಹುದ್ದೆಯ ದುರುಪಯೋಗದ ಪ್ರತಿ 'ಖಾತರಿ ಠೇವಣಾತಿ' ಕೊಂಡು ಅವರಿಗೆ ಶಹರದಲ್ಲಿ ನಾಣ್ಯಗಳನ್ನು ಪರೀಕ್ಷಿಸುವ ಮತ್ತು ಲೇವಾದೇವಿ ನೋಡಿಕೊಳ್ಳುವ ಪರವಾನಗಿಯಿತ್ತಿತು. ರಾಮಕಾಮತಿ ಅವರಲ್ಲೊಬ್ಬರು; ಈಸ್ಟ್ ಇಂಡಿಯಾ ಕಂಪೆನಿ ಆನಂತರ ಅವರನ್ನು ತಮ್ಮಲ್ಲಿನ ಕೆಲಸಕ್ಕೆ ಇಟ್ಟುಕೊಂಡಿತು.

೨. ಓವರ್ ಸೀಯರ್-ಜನರಲ್ ಮತ್ತು ಮಸ್ಟರ್ - ಮಾಸ್ಟರ್ - ಜನರಲ್‌ರ ಪದಗಳಿಗೆ ನೇಮಕಾತಿ

೧೬೮೯ರ ಫೆಬ್ರವರಿ ತಿಂಗಳಲ್ಲಿ ೨೦,೦೦೦ ಸೈನಿಕರೊಂದಿಗೆ ಬೊಂಬೇಯ ಮೇಲಕ್ಕೇರಿ ಬಂದು ಸಂಪೂರ್ಣ ದ್ವೀಪವನ್ನಾಕ್ರಮಿಸಿದ ಜಂಜೀರದ ಸಿದ್ದಿ ಯಾಕುತ್ ಖಾನ್, ಮೊಗಲರ ಅರಸನ ಆದೇಶದ ಮೇರೆಗೆ (೧೬೮೯ರ ಡಿಸೆಂಬರ್ ತಿಂಗಳಲ್ಲಿ ಇಂಗ್ಲಿಷರು ಆತನ ಆಸ್ಥಾನಕ್ಕೆ ರಾಯಭಾರಿಯನ್ನು ಕಳುಹಿದ್ದರು) ೧೬೯೦ರ ಜೂನ್ ತಿಂಗಳಲ್ಲಿ ಹಿಂತೆರಳಿದ. ಆ ದಿನಗಳಲ್ಲಿ ಅತ್ಯಮೂಲ್ಯ ಸೇವೆ ಸಲ್ಲಿಸಿದ ಕಾಮತಿಯುವರಿಗೆ ಗವರ್ನರ್ ಸರ್‌ಜೋನ್ ಚೈಲ್ಡ್ ಇವರು ಭಾರತೀಯ ಸಿಪಾಯಿಗಳ ಹೊಣೆಗಾರಿಕೆಯಿತ್ತರು.

೧೬೯೪ರ ಜೂನ್ ತಿಂಗಳ ೨೩ರಂದು ರಾಮ ಕಾಮತಿಯುವರನ್ನು, ಗವರ್ನರರು ದ್ವೀಪದಲ್ಲಿನ ಸರಕಾರಿ ನೌಕರರ ಮೇಲಣ ನಿಯಂತ್ರಣದ ಹೊಣೆಗಾರಿಕೆಯೊಂದಿಗೆ

ಕಂಪೆನಿಯ ಹುಟ್ಟುವಳಿಯ ಓವರ್‌ಸೀಯರ್ - ಜನರಲ್ ಆಗಿ ನೇಮಿಸಿತು.

ಸ್ವಲ್ಪ ಸಮಯದ ನಂತರ ಅವರು ಬೊಂಬೇ ದ್ವೀಪದ ಹಿಂದು ಮತ್ತು ಅನ್ಯ ಸೀಮಾರಕ್ಷಕರ ಮಸ್ಟರ್ - ಮಾಸ್ಟರ್-ಜನರಲ್ ಆಗಿ ನೇಮಿಸಲ್ಪಟ್ಟರು. ಕೇವಲ ಅನುಚಿತ ನಡವಳಿಕೆ ಮತ್ತು ವಂಚನೆಗಳ ಮೇಲಕ್ಕೆ ನಿಯಂತ್ರಣವನ್ನು ಇಡಬೇಕಾಗಿದ್ದ ಈ ಹುದ್ದೆ ಅನ್ಯ ಯಾವೊಂದೂ ಜವಾಬ್ದಾರಿಯ ಉದ್ಯೋಗಕೊಂಡಿರದಿತ್ತು.

೩. ತಂಬಾಕಿನ ವ್ಯಾಪಾರ

೧೬೮೦ರ ಮೊದಲ್ಗೊಂಡು ರಾಮಕಾಮತಿಯವರು ತಂಬಾಕಿನ ವ್ಯಾಪಾರಕ್ಕೆ ತೊಡಗಿದರು. 'ಬಾಂಬೇ ಟೊಬ್ಯಾಕೋ ಫಾರ್ಮ್'ನ್ನು ಪ್ರತಿ ವರ್ಷ ಹರಾಜು ಹಾಕಲಾಗುತ್ತಿದ್ದರೂ ಹಲವೊಂದು ವರ್ಷಗಳ ತನಕ ಕೇವಲ ಅವರೊಬ್ಬರೇ ಯಶಸ್ವಿಯಾಗುತ್ತಿದ್ದರು. ೧೭೦೬ರಲ್ಲಿ ಸೂರತ್ ಕೌನ್ಸಿಲಿನ ಅಧ್ಯಕ್ಷರಾಗಿದ್ದ ಸರ್ ನಿಕ್ಲೊಲಸ್ ವೈಟ್ ಅವರು ರಾಮಕಾಮತಿಯವರ ವರ್ಚಸ್ಸು, ಅನ್ಯ ಪ್ರತಿಸ್ಪರ್ಧಿಗಳನ್ನು ನುಣುಚಿಕೊಳ್ಳುವಂತೆ ಮಾಡುತ್ತಿರುವುದಾಗಿ ಭಾವಿಸಿದರು. ಮತ್ತು ಈಸ್ಟ್ ಇಂಡಿಯಾ ಕಂಪನಿ ಇದರ ಆಡಳಿತೆಯನ್ನು ತನ್ನ ಕೈಗಳಲ್ಲಿಕೊಂಡಿತು. ಇದರ ವ್ಯವಸ್ಥಾಪನೆಗೆ ದುಲ್ಬಾಭಂಡಾರಿ ಮತ್ತು ಅವರ ತಮ್ಮ, ವಿಸ್ಸು ಅವರನ್ನು ನೇಮಿಸಿತು. ಆರು ತಿಂಗಳ ನಂತರ ಅವರನ್ನು ತೆಗೆದು ಹಾಕಿದರು. ೧೭೦೭ರಲ್ಲಿ ಮತ್ತೊಮ್ಮೆ ಹರಾಜು ಹಾಕಿದಾಗ ಯಾರೊಬ್ಬರೂ ಮುಂದೆ ಬಾರದ ನಿಮಿತ್ತ ರಾಮಕಾಮತಿ ಅದನ್ನು ದುರ್ಗ ಮತ್ತು ಬಾಲಕೃಷ್ಣ ಎಂಬೀ ತನ್ನಿಬ್ಬರು ಮಕ್ಕಳಿಗಾಗಿ ಪಡೆದುಕೊಂಡರು. ಇದರ ಆಡಳಿತೆಯನ್ನು ರಾಮಕಾಮತಿ ಮತ್ತು ಅವರ ಮಕ್ಕಳಿಬ್ಬರು ೧೭೧೪ರ ತನಕ ಮತ್ತೆ ೧೭೧೯-೧೭೨೦ರ ಅವಧಿಯಲ್ಲಿ ತನ್ನ ಕುರಿತಾದ ನ್ಯಾಯಾಲಯೀನ ವಿಚಾರಣೆ ಆರಂಭವಾಗುವ ತನಕ ನೋಡಿಕೊಂಡರು.

೪. ಬೇಸಾಯ

ಕಾಮತಿಯವರಿಗೆ ಬೇಸಾಯದ ಕುರಿತು ಸಾಕಷ್ಟು ಅನುಭವವಿತ್ತು. ೧೬೯೪ರ ಡಿಸೆಂಬರ್ ತಿಂಗಳಲ್ಲಿ ಅವರಿಗೆ, ಯಾಕುತ್‌ಖಾನ್ ಬೊಂಬೇಯ ಮೇಲಕ್ಕೆ ದಂಡೆತ್ತಿ ಬಂದಾಗ ನೆರವಿತ್ತ 'ಮಾವೊರ್ಮೆನ್' (ಮುಸಲ್ಮಾನರು) ರಿಗೆ ಸಂಬಂಧಿಸಿದ ಗದ್ದೆ ಮತ್ತು ತೋಟಗಳನ್ನು ಕಂಪೆನಿಗೆ ಲಾಭವಾಗುವ ದೃಷ್ಟಿಯಿಂದ ಬಳಸುವರೆ ಅನುಮತಿಯಿತ್ತಿತು. ಬೊಂಬೇ ಕೌನ್ಸಿಲ್ ಅವರಿಂದ ಬೇಸಾಯದ ಕುರಿತಾಗಿ ಆಗಾಗ ಸಲಹೆ ಕೇಳುತ್ತಿತ್ತು.

೫. ಜಸ್ಟಿಸ್ ಆಫ್ ದಿ ಕೋರ್ಟ್ ಆಫ್ ಜ್ಯುಡಿಕೇಚರ್

೧೭೧೮ರ ಫೆಬ್ರವರಿ ತಿಂಗಳಲ್ಲಿನ ಘೋಷಣೆಯ ಮೇರೆಗೆ ನ್ಯಾಯ ನಿರ್ವಾಹಕ ನ್ಯಾಯಾಲಯವೊಂದರ ಸ್ಥಾಪನೆಯಾಯಿತು; ಈ ಘೋಷಣೆಯ ಮೊದಲೇ ಅದಕ್ಕೂ ಮೊದಲು ಅವರು ನ್ಯಾಯ ವಿಧಾಯಕನ ಒಂದಿಷ್ಟು ಕೆಲಸವನ್ನು ಮಾಡಿದ್ದರು.ಹೊಸ ನ್ಯಾಯಾಲಯಕ್ಕೆ ನೇಮಿಸಲ್ಪಟ್ಟ ಹತ್ತು ನ್ಯಾಯಾಧೀಶರಲ್ಲಿ ನಾಲ್ಕು ಮಂದಿ ಭಾರತೀಯರಿದ್ದು ಈ ನಾಲ್ವರ ಯಾದಿಯಲ್ಲಿ ಇವರ ಹೆಸರು ಪ್ರಥಮ ಸ್ಥಾನಕೊಂಡಿತ್ತು. ೧೭೧೮ರ ಮಾರ್ಚ್

ತಿಂಗಳ ೨೫ರಂದು ಉದ್ಘಾಟಿಸಲ್ಪಟ್ಟ ಈ ನ್ಯಾಯಾಲಯದಲ್ಲಿ ಇವರು ವಿಧ್ಯುಕ್ತವಾಗಿ ತನ್ನ ಆಸನ ಸ್ವೀಕರಿಸಿದರು.

೬. ಖಜಾನೆಯ 'ಟಂಕಾಧಿಕಾರಿ'

'ಮಿಂಟ್ ಮಾಸ್ಟರ್' (ಟಂಕಾಧಿಕಾರಿ)ನ ರೂಪದಲ್ಲಿ ಅವರು ಕಂಪನಿಯ ಖಜಾನೆಯ ನಾಣ್ಯ ಚಲಾವಣೆಯ ವಿಭಾಗದ ಹೊಣೆಗಾರಿಕೆ ಕೊಂಡಿದ್ದರು. ೧೭೦೬ರಲ್ಲಿ 'ಪಿಲ್ಲರ್ ಡಾಲರ್ಸ್'[೩] ಗಳನ್ನು ಕರಗಿಸಿ ಅವನ್ನು ಮೊಗಲರ ರೂಪಾಯಿಗಳಿಗೆ ಪರಿವರ್ತಿಸಿದರು. ೧೭೧೩ರಲ್ಲಿ ತಾಮ್ರದ 'ಡುಕ್ಯಾನೆ'[೪] ಮತ್ತು 'ಬಜ್ಜರುಕ್' ನಾಣ್ಯಗಳನ್ನು ಚಲಾವಣೆಗೆ ತಂದರು. ೧೭೧೯ರಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಮಹತ್ವದ ಕಾರ್ಯಗಳನ್ನು ನಿಭಾಯಿಸಿದರು. ಅವರು ಕಂಪನಿಯ ಪರವಾಗಿ ದಂಡ, ಇನ್ನಿತರ ಪಾವತಿಗಳನ್ನು ಸ್ವೀಕರಿಸುತ್ತಿದ್ದರು; ಸಂದಾಯದ ವಿಷಯಗಳಲ್ಲಿ ಮಧ್ಯಸ್ಥಿಕೆ ವಹಿಸುತ್ತಿದ್ದರು. ಹಾನಿಗೊಳಗಾಗಿದ್ದ ಸರಕಿನ ವಿಲೆವಾರಿ ಮಾಡುವಲ್ಲಿಯೂ ಸಹಾಯ ಮಾಡುತ್ತಿದ್ದರು.

೧೭೦೩ರಲ್ಲಿ ಪೋರ್ಚುಗೀಸ್ ವ್ಯಾಪಾರಿಗಳು ಸರಕು ಸಾಗಿಸುವ ಹಡಗುಗಳಿಗೆ ಬಾಧೆಯಿತ್ತಾಗ ರಾಮಕಾಮತಿಯವರೇ ಅದನ್ನು ಬೊಂಬೇ ಕೌನ್ಸಿಲಿನ ಲಕ್ಷ್ಯಕ್ಕೆ ತಂದುದಿತ್ತು.

೭. ವ್ಯಾಪಾರದ ಚಟುವಟಿಕೆಗಳು

ಈ ಚಟುವಟಿಕೆಗಳು, ವಿಸ್ತಾರವಾಗಿ ಹರಡಿದ್ದ ಅವರ ಇನ್ನಿತರ ವ್ಯವಹಾರಗಳ ಹೊರತಾಗಿದ್ದವು. ಅವರು ಬೊಂಬೇಯ ಪ್ರಮುಖ ವ್ಯಾಪಾರಿಗಳೊಬ್ಬರಾಗಿದ್ದರು. ಬ್ರಿಟಿಷ್ ಕಪ್ತಾನರೊಂದಿಗಿನ ಹಲವೊಂದು ವ್ಯಾಪಾರಿ ಹಡಗುಗಳನ್ನು ಕೊಂಡ ಇವರು ಕೋಝಿಕ್ಕೋಡ್ (ಕಲ್ಲಿಕೋಟ್) ಮತ್ತು ಪರ್ಶಿಯಾಗಳೊಂದಿಗೆ ವ್ಯಾಪಾರ ಮಾಡುತ್ತಿದ್ದರು. ಕಂಪನಿಯ ಹಡಗುಗಳಿಂದ ಸೀಸ, ಕಬ್ಬಿಣ, ತವರ ಮತ್ತು ಸಕ್ಕರೆಗಳ ಖರೀದಿ ಮಾಡಿ, ನಿರ್ಯಾತಕ್ಕಾಗಿ ಅಫೀಮಿನ ಸರಬರಾಯಿ ಮಾಡುತ್ತಿದ್ದರು.

ಈ ಪರಿಸ್ಥಿತಿಯಲ್ಲಿ ಲಂಡನ್ನಿನಲ್ಲಿನ ಕಂಪನಿಯ ನಿರ್ದೇಶಕ ಮಂಡಳಿ, ಆಗ ತಾನೇ ಗವರ್ನರರ ಅಧಿಕಾರ ವಹಿಸಿದ್ದ ಬೂನ್ ಅವರಿಗೆ ಬರೆದ ಆದೇಶ ಪತ್ರದಲ್ಲಿ ಕಾಮತಿಯವರನ್ನು ಕೆಲಸಕ್ಕಿಟ್ಟುಕೊಂಡಿದ್ದುದರ ಕುರಿತಾಗಿ ಆಕ್ಷೇಪಾರ್ಹ ಟಿಪ್ಪಣಿ ಮಾಡಿದ್ದುದು ಆಶ್ಚರ್ಯಜನಕವಾಗಿದೆ! ಕಾಮತಿಯವರು ಪ್ರಭಾವ ಶಾಲಿಗಳಾಗಿದ್ದು ಲಿಲಾವಿನಲ್ಲಿ ಅವರನ್ನು ಗೆಲ್ಲುವ ಸಾಹಸವನ್ನು ಯಾರೊಬ್ಬರೂ ಮಾಡದಿದ್ದರು. ಬೊಂಬೇಯಲ್ಲಿನ ಬೆಳೆಯುತ್ತಿರುವ ವ್ಯಾಪಾರದ ಮೇಲಿಕ್ಕೆ ತನ್ನ ಹಿಡಿತವನ್ನು ಬಿಗಿಗೊಳಿಸಿರುವರೆಂಬ ಅಪಾದನೆಯಿದ್ದಾಗಲೂ ಅವರು ಬೂನ್‌ನ ವಿಶ್ವಾಸ, ಅನುಗ್ರಹಕ್ಕೆ ಪಾತ್ರರಾದರು.

೮. ಗವರ್ನರ್ ಬೂನ್ ಇವರಿಂದ ಯೋಗ್ಯತೆಯ ಮಾನ್ಯತೆ

ಕುಶಲರಿದ್ದ ಗವರ್ನರ್ ಚಾರ್ಲ್ಸ್ ಬೂನ್ ಇವರು ಬೊಂಬೇಗೆ ಸಲ್ಲಿಸಿದ ಸೇವೆ

ಅತಿ ಮಹತ್ತಿನದ್ದಿತ್ತು. ಅಧಿಕಾರ ಸೂತ್ರಗಳನ್ನು ಕೈಗಳಿಗೆ ಕೊಳ್ಳುತ್ತಲೇ ಇವರು ಬೊಂಬೇಯ ಕೋಟೆಯನ್ನು ಭದ್ರಗೊಳಿಸಿದರು. ಮಾತ್ರ ಬೂನ್ ಇವರ ಗವರ್ನರ್ ಪದಕ್ಕೆ ತಗಲಿದ ಕಳಂಕವಿದ್ದರೆ ಅದು ರಾಮ ಕಾಮತಿಯವರ ಕುರಿತಾದ ಅವರ ನಡವಳಿಕೆಯಿತ್ತು.

೧೭೧೭ರ ಅಗಸ್ಟ್ ತಿಂಗಳಲ್ಲಿ ರಾಮಕಾಮತಿ ಇವರು ಸುಂಕದ ವ್ಯವಹಾರವನ್ನು ಹಿಂದಿನ ವರ್ಷ ಒಪ್ಪಿದ ಬೆಲೆಗಿಂತಲೂ ರೂ. ೫೦೦೦/- ಹೆಚ್ಚಿನ ಬೆಲೆಗೆ ತನಗೀಯುವರೆ ಗವರ್ನರ್ ಬೂನ್ ಮತ್ತು ಅವರ ಸಲಹಾಸಮಿತಿಯ ಮನವೊಪ್ಪಿಸಿಕೊಂಡರು; ಅಧಿಕಾರ ವಹಿಸಿಕೊಂಡಂದು ಅವರು ಗವರ್ನರ್ ಬೂನ್ ಹಾಗೂ ಅವರ ಸಲಹಾ ಸಮಿತಿಯ ಸದಸ್ಯರಿಗೆ 'ಕಸ್ಟಮ್ ಹೌಸ್'ನಲ್ಲಿ ರಾತ್ರಿ ಭೋಜನವಿತ್ತರು. ಇದರಿಂದ ರಾಮಕಾಮತಿಯವರ ಉಚ್ಚ ದರ್ಜೆ ಮತ್ತು ಶ್ರೀಮಂತಿಕೆ ತೋರಿ ಬರುತ್ತಿತ್ತು. ಹಲವೊಂದು ಬಗೆಯ ವ್ಯವಹಾರಗಳನ್ನು ಕೊಂಡು ಅವುಗಳನ್ನು ಯಶಸ್ವಿಯಾಗಿ ನಿಭಾಯಿಸಲು ಮೈಮುರಿದು ಕೆಲಸ ಮಾಡುವ ಅವರ ಪ್ರವೃತ್ತಿ ಅದಕ್ಕೆ ಕಾರಣವಾಗಿರಬೇಕು. ದೀರ್ಘಕಾಲದ ಅನುಭವ ಮತ್ತು ನೈಪುಣ್ಯಕೊಂಡಿದ್ದ ಅವರ ನೆರವು ಬೊಂಬೇಯ " ಆಡಳಿತಾಂಗಕ್ಕೆ ಅತ್ಯವಶ್ಯಕವಿತ್ತು.

೯. ವಿಶ್ವಾಸಘಾತ ಮತ್ತು ರಾಜದ್ರೋಹದ ಆರೋಪ

೧೭೧೨ರಲ್ಲಿ ಮರಾಠಾ ನೌಕಾಬಲದ ಮುಖ್ಯಾಧಿಕಾರಿ ಮತ್ತು ಕಡಲ ತಡಿಯಲ್ಲಿನ ಘೆರಿಯ್ಯಾ ರೇವಿನ (ಸಾವಣ ದುರ್ಗ ಮತ್ತು ವಿಜಯ ದುರ್ಗ) ಅಧಿಕಾರಿಯಾಗಿದ್ದ ಕಾನೋಜಿ ಆಂಗ್ರೆ, ಬ್ರಿಟಿಷರ ಹಡಗನ್ನು ಸೆರೆಹಿಡಿದು ಅದನ್ನು ರೂ. ૩೦,೦೦೦/-ಗಳ ವಿಮೋಚನಾ ಶುಲ್ಕ ಕೊಂಡು ಬಿಟ್ಟು ಕೊಟ್ಟ. ೧೭೧೫ರಲ್ಲಿ ಈಸ್ಟ್ ಇಂಡಿಯಾ ಕಂಪನಿ ತಮ್ಮ ಪರವಾಗಿ ಆಂಗ್ರೆಯೊಂದಿಗೆ ಸಂಧಾನ ನಡೆಸಲು, ಈ ಹಿಂದೆ ಆತನೊಂದಿಗೆ ಪತ್ರ ವ್ಯವಹಾರ ನಡೆಸಿದ್ದ ರಾಮಕಾಮತಿಯವರನ್ನು ನೇಮಿಸಿತು.

೧೭೧೮ರ ನವೆಂಬರ್ ತಿಂಗಳಲ್ಲಿ ಆಂಗ್ರೆ ಬ್ರಿಟಿಷರ ಧ್ವಜ ಹಾರಿಸುತ್ತಿದ್ದ ಅವರ ದಲಾಲನೊಬ್ಬನ ಹಡಗನ್ನು ಸೆರೆಹಿಡಿದ. ಸ್ವಲ್ಪ ಸಮಯದ ನಂತರ ಆತ ಬ್ರಿಟಿಷರ ಇನ್ನೆರಡು ಹಡಗುಗಳನ್ನು ಸೆರೆ ಹಿಡಿದ.

೧೭೧೮ರ ಎಪ್ರಿಲ್ ತಿಂಗಳ ೫ರಂದು ಯಾರೊಬ್ಬರೂ ಆಂಗ್ರೆಯೊಂದಿಗೆ ವ್ಯವಹಾರ ಮಾಡಬಾರದೆಂದು ಘೋಷಿಸಲಾಯಿತು.

೧೭೧೮ರ ನವೆಂಬರ್ ತಿಂಗಳಲ್ಲಿ ಶತ್ರುವಿನೊಂದಿಗೆ ಹೋರಾಡಲಾಗಿ ಕಂಪನಿ ತಮ್ಮ ಸೈನಿಕರ ಹೊಣೆಗಾರಿಕೆಯನ್ನು ರಾಮಕಾಮತಿಯವರಿಗೆ ವಹಿಸಿಕೊಟ್ಟಿತು.

ಆಂಗ್ರೆ ಖಂದೇರಿಯಲ್ಲಿನ ತನ್ನ ದುರ್ಗ ಸೇರಿದ. ದುರ್ಗವನ್ನು ವಶಪಡಿಸಿಕೊಳ್ಳಲು ಗವರ್ನರರಿಗೆ ಸಲಹೆಯಿತ್ತ ರಾಮಕಾಮತಿ ಅದಕ್ಕೆ ಬೇಕಾಗಿದ್ದ ಎಲ್ಲೊಂದು ಏರ್ಪಾಡು ಮಾಡಿದರು. ರಕ್ಷಕರ ಪಡೆ ದುರ್ಬಲವಿದ್ದ ನಿಮಿತ್ತ ದುರ್ಗದ ರಕ್ಷಣೆಗಾಗಿ ಆಂಗ್ರೆಗೆ ಸ್ತ್ರೀಯರನ್ನು ಬಳಸಬೇಕಾಯಿತು. ದುರ್ಗವನ್ನು ವಶಪಡಿಸಿಕೊಳ್ಳಲು ಕೆಲವೊಂದು

ಹಡಗುಗಳೊಂದಿಗೆ ಗವರ್ನರ್ ಬೂನ್ ಸ್ವತಹಾ ತೆರಳಿದ. ದುರ್ಗ ರಕ್ಷಕರು ಬೂನ್‌ನ ಪ್ರಯತ್ನವನ್ನು ನಿಷ್ಫಲಗೊಳಿಸಿದರು. ಬೂನ್ ನಷ್ಟ ಸಹಿಸಿ ಹಿಮ್ಮೆಟ್ಟಿದ.

ದುರ್ಗದ ಮೇಲಿನ ಪ್ರಸ್ತಾಪಿತ ಆಕ್ರಮಣದ ಕುರಿತು ರಾಮಕಾಮತಿ ಆಂಗ್ರೆಗೆ ಬರೆದು ತಿಳಿಸಿದ್ದನೆಂಬುದರ ಪುರಾವೆಯ ರೂಪದ ಪತ್ರವೊಂದನ್ನು ಆತನ ಶತ್ರುಗಳು ಪ್ರಕಾಶಿಸಿದರು. ೧೭೨೦ರ ಫೆಬ್ರವರಿ ತಿಂಗಳ ೨೬ರಂದು ಗವರ್ನರನ ಸಲಹಾ ಸಮಿತಿ ವಾಲ್ಟರ್ ಬ್ರೌನ್, ಜೋನ್ ಕೋರ್ಟ್ನೆ, ಒವೆನ್ ಫಿಲ್ಲಿಪ್ಸ್ ಮತ್ತು ಜೋನ್ ಹೋರಲ್ ಇವರಿಗೆ ಕಾಮತಿಯವರ ವಿರುದ್ಧ ದೋಷಾರೋಪಣೆಯ ವಿಧಿಬದ್ಧ ಪತ್ರವನ್ನು ಗವರ್ನರರ ವಿಚಾರಣೆಗಾಗಿ ಆದಷ್ಟು ಬೇಗ ತಯಾರಿಸಬೇಕೆಂಬ ಆದೇಶವಿತ್ತಿತು. ಕಾಮತಿಯವರ ಸಂಪತ್ತನ್ನು ಜಪ್ತಿ ಮಾಡಲಾಯಿತು. ೧೭೨೦ರ ಮಾರ್ಚ್ ತಿಂಗಳ ೭ರಂದು ಅವರ ಮೇಲೆ ಏಳು ಆರೋಪಗಳನ್ನು ಹೊರಿಸಲಾಯಿತು.

ಈ ಅಸಾಮಾನ್ಯ ಘಟನೆ (ರಾಮಕಾಮತಿಯವರ ವಿಚಾರಣೆ) ಬೊಂಬೇಯಲ್ಲಿನ ಜನ ಸಾಮಾನ್ಯರೆಲ್ಲರ ಕುತೂಹಲ ಕೆರಳಿಸಿತು.

ಗವರ್ನರ್ ಬೂನ್ ಬ್ರಿಟಿಷರ ಹಡಗುಗಳನ್ನು ಬಿಟ್ಟುಕೊಡಲು ಆಂಗ್ರೆಗೆ ತಿಳಿಸುವಾಗ, ರಾಮಕಾಮತಿ ಆಂಗ್ರೆಗೆ ಬರೆದುದೆನ್ನಲಾಗುವ ೧೭೧೭ರ ಡಿಸೆಂಬರ್ ತಿಂಗಳ ೨೪ರ ಕಾಗದ ಮೊದಲ ಅಪರಾಧಕ್ಕೆ ಸಂಬಂಧಿಸಿದ್ದುದಿತ್ತು.

ಖಂದೇರಿ ದುರ್ಗದ ಆಕ್ರಮಣ ನಿಶ್ಚಯಿಸಲಾಗಿದ್ದು ಅದರ ರಕ್ಷಣೆಗಾಗಿ ಯುದ್ಧದ ತಯಾರಿ ಮಾಡಬೇಕಿರುವುದರ ಮುನ್ಸೂಚನೆಯನ್ನು ಆಂಗ್ರೆಗೆ ತಿಳಿಸಿದ್ದನೆಂಬುದು ಎರಡನೆಯ ಆರೋಪವಾಗಿತ್ತು. ಮೂರನೆಯ ಮತ್ತು ನಾಲ್ಕನೆಯ ಆರೋಪಗಳು ಗಂಭೀರವಾಗಿದ್ದವು. ಅವು ಕಾಮತಿಯವರ ಹೇಳಿಕೆಯ ಮೇರೆಗೆ ಆಂಗ್ರೆಗೆ ಬರೆದುವೆನ್ನಲಾಗುವ ಅವರ ಮುದ್ರೆಕೊಂಡಿದ್ದ ಎರಡು ಪತ್ರಗಳಿಗೆ ಸಂಬಂಧಿಸಿದ್ದುವು. ಇವೆರಡವುಗಳಲ್ಲಿನೊಂದು 'ಕೆನ್ನರಿ ದ್ವೀಪ'ದ ಮೇಲಕ್ಕೆ ಯೋಜಿಸಲಾದ ಆಕ್ರಮಣದ ಕುರಿತಾಗಿತ್ತು. ಇನ್ನೊಂದರಲ್ಲಿ ಪೋರ್ಚುಗೀಸ್ ಸೇನಾಧಿಕಾರಿಯೊಬ್ಬ ಗವರ್ನರ್ ಬೂನ್‌ನಿಗೆ ಕಳುಹಿಸಿದ್ದ ಅತಿ ಮಹತ್ವದ ಮಾಹಿತಿಕೊಂಡ ಕಾಗದವನ್ನು ತಡೆಹಿಡಿದು ಅದನ್ನು ದುಲ್ಬಾ ಭಂಡಾರಿಯ ಮೂಲಕ ಆಂಗ್ರೆಗೆ ತಲುಪಿಸಿದನೆನ್ನಲಾಗುವ ಅಪರಾಧಕ್ಕೆ ಸಂಬಂಧಿಸಿದ್ದುದಿತ್ತು; ಹಾಗೆಯೇ ಅಂಗರಕ್ಷಕರ ವಿನಾ, ಖಾಸಗಿ ಕೋಣೆಯಲ್ಲಿ ಮನೆಯಾಳಿನೊಂದಿಗಿರುವ ಗವರ್ನರ್‌ನನ್ನು ಹಿಡಿಯುವ ಉದ್ದೇಶದಿಂದ ರಾತ್ರಿಯ ಹೊತ್ತಿನಲ್ಲಿ ಬೊಂಬೆ ದ್ವೀಪದ ಮೇಲಕ್ಕೆ ಆಕ್ರಮಣ ಮಾಡಬೇಕೆಂಬ ಸೂಚನೆಯ ಕುರಿತಾಗಿತ್ತು.

ಯುದ್ಧದ ಸಮಯ ಶತ್ರುವಿದ್ದ ಆಂಗ್ರೆಯಿಂದ ಅಕ್ಕಿ, ಅರಿಸಿನ ಖರೀದಿಸಿ ಕಾನೂನಿಗೆ ವಿರುದ್ಧವಾಗಿ ಆತನಿಗೆ ಉಕ್ಕು, ಪೊಟ್ಯಾಷ್ ಮಾರಿದರೆಂಬುದು ಐದನೆಯ ಆರೋಪವಿತ್ತು. ಆರನೆಯ ಆರೋಪ ಶತ್ರುವಿನೊಂದಿಗೆ ಹೋರಾಡಲಾಗಿ ತಮ್ಮಲ್ಲಿ ಸೈನಿಕರ ಹೊಣೆಗಾರಿಕೆಯನ್ನು ಕಾಮತಿಯವರಿಗೆ ವಹಿಸಿ ಕೊಡಲಾಗಿದ್ದರೂ ಅವರು ಈ ಸೈನಿಕರಿಗೆ ಬ್ರಿಟಿಷರ ಪರವಾಗಿ ಕಾದಾಡಬಾರದೆಂಬ ಆಜ್ಞೆಯಿತ್ತುದರ ಕುರಿತಾಗಿತ್ತು. ನ್ಯಾಯ

ಸಮ್ಮತವಲ್ಲದ ತನ್ನ ವ್ಯವಹಾರಗಳು ಬೆಳಕಿಗೆ ಬರಬಹುದೆಂಬ ಭೀತಿಯಿಂದ ಅವನ್ನು ಮರೆಮಾಚಲು ಕಾಮತಿಯವರು ತನ್ನ ಚರ ಸ್ವತ್ತುಗಳೆಲ್ಲವುಗಳನ್ನು ಹಡಗುಗಳ ಮೂಲಕ ಥಾಣಾ ಮತ್ತು ಇನ್ನಿತರ ಸ್ಥಾನಗಳಿಗೆ ರವಾನಿಸಿದ್ದರೆಂಬ ಆರೋಪ ಏಳನೆಯದ್ದಾಗಿತ್ತು ರಾಮ ಕಾಮತಿಯವರ ಕಾರ್ಯದರ್ಶಿಯಿದ್ದ ಗೋವಿಂದಜೀಗೆ ಚಿತ್ರಹಿಂಸೆಯಿತ್ತು ಆತನಿಂದ ಕಾಮತಿಯವರ ಅಪ್ಪಣೆಯ ಮೇರೆಗೆ ತಾನು ಪತ್ರ ಬರೆದಿರುವುದಾಗಿ ಒಪ್ಪಿಗೆಯ ಹೇಳಿಕೆ ಬರೆಸಿ ಕೊಂಡರು. ಮೊಕದ್ದಮೆಯ ವಿಚಾರಣೆಗೆ ೧೭೨೦ರ ಮಾರ್ಚ್‌ತಿಂಗಳ ೨೪ನೆಯ ದಿನವನ್ನು ನಿಶ್ಚಯಿಸಲಾಯಿತು. ಅದರೊಂದಿಗೆ, ಕಾಮತಿಯವರ ದುರ್ವ್ಯವಹಾರಗಳ ಕುರಿತಾದ ಮಾಹಿತಿಯಿತ್ತು, ದೇಶ ದ್ರೋಹದ ಚಟುವಟಿಕೆಗಳನ್ನು ಬೆಳಕಿಗೆ ತರುವವರನ್ನು ಕ್ಷಮಿಸಲಾಗುವುದೆಂಬ ಘೋಷಣೆಯನ್ನೂ ಮಾಡಲಾಯಿತು.

ಗವರ್ನರ್ ಚಾರ್ಲ್ಸ್ ಬೂನ್, ಲಾರೆನ್ಸ್ ಪಾರ್ಕರ್ (ಇವರು ಡೆಪ್ಯುಟಿ ಗವರ್ನರ್, ಏಕೌಂಟೆಂಟ್ ಎಂಡ್ ಚೀಫ್ ಜಸ್ಟಿಸ್ ಕೂಡಾ ಆಗಿದ್ದರು), ವಾಲ್ಟರ್ ಬ್ರೌನ್, ಜೋನ್ ಕೋರ್ಟ್ನೆ, ಬ್ಲೆಕೆಟ್ ಮಿಡ್ಪೋರ್ಡ್ ಮತ್ತು ಒವೆನ್ ಫಿಲ್ಲಿಪ್ಸ್ ಇವರ ಸಮಿತಿ ರಾಮಕಾಮತಿಯವರ ವಿಚಾರಣೆ ಮಾಡಿತು. ಸ್ವಹಿತದಲ್ಲೇ ಆಸಕ್ತಿಕೊಂಡಿದ್ದ ರಾಮಕಾಮತಿಯವರು ಇವೆಲ್ಲವುಗಳಿಗೆ ಬೆದರದಿದ್ದರೂ, ತಾನು ನಿಷ್ಠಾವಂತ ಮತ್ತು ನಿರ್ದೋಷಿಯಿರುವುದನ್ನು ಸರಕಾರಕ್ಕೆ ಮನಗಾಣಿಸುವುದು ಅಸಾಧ್ಯವೆಂದು ಭಾವಿಸಿದ್ದಿರಬೇಕು. ೧೭೨೦ರ ಮಾರ್ಚ್ ತಿಂಗಳ ೨೪ರಂದು ಅವರನ್ನು ಹಾಜರು ಮಾಡಿಸಿ ಗೋವಿಂದಜೀಯ ಒಪ್ಪಿಗೆಯ ಹೇಳಿಕೆಯನ್ನು ಓದಿ ಹೇಳಲಾಯಿತು. ಗೋವಿಂದಜೀಯ ಸಾಕ್ಷ್ಯವನ್ನು ತನ್ನ ಪ್ರತಿ ಬಲತ್ಕಾರ ಪೂರ್ವಕಕೊಳ್ಳಲಾಗಿದೆಯೆಂದು ಕಾಮತಿಯವರು ಆಕ್ಷೇಪವೆತ್ತಿದರು. ಇದರಿಂದ ಜನರು ಭಾವೋದ್ರಿಕ್ತರಾದರು. ಪುರಾವೆಗಳನ್ನೊಂದುಗೂಡಿಸಲು ಗವರ್ನರ್ ಬೂನ್ ಬಳಸಿದ ಹಿಂಸಾತ್ಮಕ ಪದ್ಧತಿ ನ್ಯಾಯಬಾಹ್ಯವಿದ್ದು ಅದು ದೇಶದ ನ್ಯಾಯ ಸಂಹಿತೆಗೆ ವಿರುದ್ಧವಾದುದೆಂದು ಲಾರೆನ್ಸ್ ಪಾರ್ಕರ್ ನಿಷೇಧ ವ್ಯಕ್ತಪಡಿಸಿದರು. 'ಈ ನ್ಯಾಯಾಲಯದಲ್ಲಿ ಶುದ್ಧ ಮನಸ್ಸಿನಿಂದ ಕುಳ್ಳಿರುವುದು ಅಸಾಧ್ಯ'ವೆಂದು ನೈತಿಕ ಸಂಕಟ ವ್ಯಕ್ತ ಪಡಿಸಿದ ಪಾರ್ಕರ್, ದಿಗ್ಭ್ರಮಿತ ಸಹೋದ್ಯೋಗಿಗಳ ನಡುವಿನಿಂದ ನ್ಯಾಯಾಲಯ ಬಿಟ್ಟುಹೋದರು.

ರಾಮಕಾಮತಿಯವರನ್ನು ಬೊಂಬೇ ಕೋಟೆಯಲ್ಲಿನ ಕಾರಾಗೃಹಕ್ಕೆ ಕಳುಹಿಸಲಾಯಿತು.

ರಾಮಕಾಮತಿ ತನ್ನ ಮೇಲಣ ಆರೋಪಗಳನ್ನು ನಿರಾಕರಿಸಿದರು. ಸಾಕ್ಷಿದಾರರಿಗೆ ಲಂಚ, ಆಶ್ವಾಸನೆಗಳನ್ನಿತ್ತು, ಶಿಕ್ಷೆಯ ಬೆದರಿಕೆ ತೋರಿ ತನ್ನ ವಿರುದ್ಧ ಸಾಕ್ಷಿ ನುಡಿಯುವಂತೆ ಒತ್ತರಿಸಲಾಗಿದೆಯೆಂದು ಅವರು ಆಪಾದನೆ ಮಾಡಿದರು. ಇಷ್ಟೊಂದು ಕಾಲ ಕಂಪನಿಯ ಒಳಿತಿಗಾಗಿ ದುಡಿದಿರುವುದನ್ನು ನ್ಯಾಯಾಧೀಶರ ನೆನವರಿಕೆಗೆ ತಂದು ತನ್ನೊಂದಿಗೆ ಯೋಗ್ಯ ರೀತಿಯಿಂದ ವರ್ತಿಸಬೇಕಾಗಿಯೂ ಕೇಳಿಕೊಂಡರು.

೧೦. ಅಪರಾಧಗಳ ನಿರ್ಣಯ

ಪ್ರಸ್ತುತ ಪರಿಸ್ಥಿತಿಯಲ್ಲಿ ನಿಷ್ಪಕ್ಷ ವಿಚಾರಣೆಯನ್ನು ಅಪೇಕ್ಷಿಸುವುದು ವ್ಯರ್ಥವಿತ್ತು. ರಾಮಕಾಮತಿಯವರ ಹೇಳಿಕೆ ಅವರ ಮೇಲೆ ಹೇರಲಾಗಿದ್ದ ಆರೋಪಗಳಿಂದ ಮುಕ್ತರನ್ನಾಗಿಸಲು ಅಸಮರ್ಥವಾಯಿತು. ಸಮಿತಿಯ ಸದಸ್ಯರು ಅವರ ಮೇಲೆ ಹೇರಲಾಗಿದ್ದ ಅಪರಾಧಗಳನ್ನು ನಂಬಲಾರಂಭಿಸಿದರು. ಆದರೆ ಲಂಚವಿತ್ತು, ಬೆದರಿಕೆ ತೋರಿ ಕಾಮತಿಯವರ ವಿರುದ್ಧ ಸಾಕ್ಷಿ ನುಡಿಯುವಂತೆ ಒತ್ತರಿಸಿದರೆಂಬ ಆರೋಪ ವಿಚಾರಣೆ ಮಾಡುತ್ತಿದ್ದ ಸಮಿತಿಯ ಗೌರವಕ್ಕೆ ಕುಂದು ತಂದಿತು. ೧೭೨೦ರ ಏಪ್ರಿಲ್ ತಿಂಗಳ ೧೧ರಂದು ಅವರನ್ನು ದೇಶದ್ರೋಹದ ಅಪರಾಧದಿಂದ ಮುಕ್ತರನ್ನಾಗಿಸಿತು. ಆದರೆ ಆಕ್ಷೇಪಾರ್ಹ ದುರ್ವರ್ತನೆಯ ಕಾರಣಕ್ಕಾಗಿ ಆಜೀವ ಕಾರಾಗೃಹದ ಶಿಕ್ಷೆಯಿತ್ತಿತು. ಸುಮಾರು ರೂಪಾಯಿ ೪೫,೦೦೦ಗಳಷ್ಟರ ಬೆಲೆಯ ಅವರ ಸೊತ್ತನ್ನೂ ವಶಪಡಿಸಿಕೊಂಡಿತು.

ರಾಮಕಾತಿಯವರ ಕಥಿತ ದೇಶದ್ರೋಹಿ ಚಟುವಟಿಕೆಗಳಲ್ಲಿ ಭಾಗವಹಿಸಿದ್ದರೆಂಬ ಕಾರಣಕ್ಕಾಗಿ ವಿಲೊಬ್ಬ ಪೋರ್ಚುಗೀಸ್ ಧರ್ಮಗುರುಗಳು ಮತ್ತು ವರಿಷ್ಠರಿದ್ದ ಬಿಷಪ್ ೨೪ ತಾಸುಗಳೊಳಕ್ಕೆ ಬೊಂಬೇ ಬಿಟ್ಟು ಹೋಗಬೇಕೆಂದು ೧೭೨೦ರ ಏಪ್ರಿಲ್ ತಿಂಗಳಲ್ಲಿ ಚಾರ್ಲ್ಸ್ ಬೂನ್ ಆಜ್ಞಾಪಿಸಿದರು.

ದುಲ್ಬಾ ಭಂಡಾರಿಯ ಪ್ರತಿ ಅಭಿಯೋಗದ ಪ್ರಕ್ರಿಯೆ ಆರಂಭಿಸಿ ಆತನ ಮೇಲಕ್ಕೆ ಈ ಮೂರು ಅಪರಾಧಗಳನ್ನು ಹೇರಿದರು: ೧) ಆಂಗ್ರೆಯೊಂದಿಗೆ ವ್ಯವಹಾರ ನಡೆಸಲು ಬೊಂಬೇಯ ವ್ಯಾಪಾರಿಗಳಿಗೆ ಸಹಾಯ ಮಾಡಿದ್ದುದು, ೨) ರಾಮಕಾಮತಿಯವರ ದೇಶದ್ರೋಹಿ ಚಟುವಟಿಕೆಗಳ ಕುರಿತು ಸರಕಾರಕ್ಕೆ ತಿಳಿಸದಿದ್ದುದು ಮತ್ತು ೩) ಕೋಟೆಯ ಭದ್ರತೆ ಮತ್ತು ಅಲ್ಲಿ ವಾಸವಾಡುತ್ತಿದ್ದ ಬ್ರಿಟಿಷ್ ನಿವಾಸಿಗಳ ಬದುಕನ್ನು ಅಪಾಯಕ್ಕೊಳಗಾಗಿಸಿದ್ದುದು. (ಎರಡನೆಯ ಮತ್ತು ಮೂರನೆಯ ಅಪರಾಧ ರಾಮಕಾಮತಿಯವರೊಂದಿಗೆ ಸಂಬಂಧವಿಟ್ಟುಕೊಂಡವರ ಪ್ರತಿಯಾಗಿತ್ತು). ೧೭೨೦ರ ಮೇ ತಿಂಗಳ ೧೩ರಂದು ಹೇರಿದ್ದ ಆರೋಪಗಳನ್ನು ಇಂಗ್ಲಿಷ್ ಮತ್ತು ಪೋರ್ಚುಗೀಸ್ ಭಾಷೆಗಳಲ್ಲಿ ಓದಿ ತೋರಲಾಯಿತು. ಮತ್ತು ಪೋರ್ಚುಗೀಸ್ ಭಾಷೆಯಲ್ಲಿನ ಪ್ರತಿಯೊಂದನ್ನು ಆತನಿಗೀಯಲಾಯಿತು.

ಪೋರ್ಚುಗೀಸರು ಬಾಧೆಯೊಯುತ್ತಿದ್ದ ದಿನಗಳಲ್ಲಿನ ಸೇವೆಯ ನೆನವರಿಕೆಯಿತ್ತು ಆತ ತನ್ನ ಮೇಲಕ್ಕೆ ಹೇರಲಾದ ಆಪಾದನೆಗಳನ್ನು ನಿರಾಕರಿಸಿದ.

ಹೇರಿದ್ದ ಆರೋಪಗಳ ಪ್ರತಿ ತನ್ನ ವಾದವನ್ನು ಮರು ದಿನವೇ ಮಂಡಿಸಲು ಆತನಿಗೆ ನಿರ್ದೇಶವೀಯಲಾಯಿತು. ಮರುದಿನ ನ್ಯಾಯಾಲಯದಲ್ಲಿ ಹಾಜರಾದಾಗ ಹಿಂದಿನ ದಿನದ ಆತನ ವರ್ತನೆ ಅನುಚಿತವಿತ್ತೆಂದು ನುಡಿದ ನ್ಯಾಯಮಂಡಳಿಯ ಅಧ್ಯಕ್ಷ ಆತನನ್ನು ಬಂಧನದಲ್ಲಿಟ್ಟ; ಆತನ ಮೇಲೆ ಹೇರಲಾದ ಆರೋಪಗಳ ಸಮರ್ಥನೆಗೆ ಗೋವಿಂದಜೀಯ ಸಮೇತ ಅನ್ಯ ಐದು ಸಾಕ್ಷಿದಾರರ ವಿಚಾರಣೆ ಮಾಡಲಾಯಿತು. ದುಲ್ಬಾನನ್ನು ದೋಷಿಯೆಂದು ಸಾರಿ ರೂ. ೬೦೦೦/-ಗಳ ದಂಡ ಹೇರಲಾಯಿತು. ತಂಬಾಕಿನ ಕಲಬೆರಕೆ

ಮತ್ತು ಅದನ್ನು ಹೆಚ್ಚಿನ ಬೆಲೆಗೆ ಮಾರಿದನೆಂಬ ಆರೋಪದ ಸಂದರ್ಭದಲ್ಲಿ ಹಿಂದಿನ ಗವರ್ನರ್ ದುಲ್ಬಾ ಮತ್ತು ಆತನ ತಮ್ಮ ವಿಸ್ಸು ಭಂಡಾರಿಯ ಮೇಲಕ್ಕೆ ಹೇರಿದ್ದ ರೂ. ೧೪೧೩ ಗಳ ದಂಡವನ್ನು ಸಲ್ಲಿಸುವರೆ ಹೇಳಲಾಯಿತು. ಗವರ್ನರ್ ಬೂನ್ ಇವರಿಗೆ ದುಲ್ಬಾನ ಮೇಲಕ್ಕೆ ಹೇರಲಾದ ದಂಡ ಮಿತಿಮೀರಿದ್ದುದೆಂದು ತೋರಿಬಂದರೂ ಅವರು ಈ ವಿಷಯದಲ್ಲಿ ಹಸ್ತಕ್ಷೇಪ ಮಾಡಲಿಲ್ಲ. ದುಲ್ಬಾ ಭಂಡಾರಿ ಮತ್ತು ಅವರ ತಮ್ಮ ದಂಡವನ್ನು ಸಲ್ಲಿಸಲು ಅಸಮರ್ಥರಿದ್ದರು. ಅವರಿಬ್ಬರನ್ನೂ ಮಾಹಿಮ್ ಕೋಟೆಯಲ್ಲಿ ೧೭೨೪ರ ತನಕ ಬಂದಿಯಾಗಿಟ್ಟರು. ಆನಂತರ ಅವರ ಬಿಡುಗಡೆಯಾಯಿತು. [೭]

೧೧. ಬೊಂಬೇಯಲ್ಲಿ ಗೊಂದಲ

ನ್ಯಾಯ ಮಂಡಳಿಯ ತೀರ್ಪು ನ್ಯಾಯ ಸಮ್ಮತವಿರದೆ, ಅಸಮರ್ಥನೀಯವೂ ಇದ್ದುದನ್ನು ಕಂಡ ಬೊಂಬೇಯ ನಾಗರಿಕರಲ್ಲಿ ಗೊಂದಲವುಂಟಾಯಿತು. ಅವರು ತಮಗೆ ಭದ್ರತೆ ಮತ್ತು ಸುರಕ್ಷಿತತೆಗಳಿಲ್ಲವೆಂದು ಭಾವಿಸಿದರು. ೧೭೨೦ರ ಮೇ ತಿಂಗಳ ೪ರಂದು ಗವರ್ನರರ ಸಲಹಾ ಮಂಡಳಿ, ನಾಗರಿಕರ ಸಾಂತ್ವನಕ್ಕಾಗಿ 'ರಾಮಜೀ ಮತ್ತು ದುಲ್ಬಾ ಭಂಡಾರಿಯವರ ದೇಶದ್ರೋಹಿ ಕಾರ್ಯಗಳೊಂದಿಗೆ ಸಂಬಂಧಕೊಂಡಿರಬಹುದಿದ್ದ ಎಲ್ಲೊಬ್ಬರೂ ತಮ್ಮ ಉದ್ಯೋಗಕ್ಕೆ ತೊಡಗಿ ನಿಷ್ಠಾವಂತ ನಾಗರಿಕರಾಗಿ ಬಾಳಬೇಕು' ಎನ್ನುವ ಆಶಯ ವ್ಯಕ್ತಪಡಿಸುವ ಘೋಷಣೆ ಮಾಡಬೇಕೆಂದು ಹೇಳಿತು.

೧೨. ಸೊತ್ತಿನ ಜಪ್ತಿ

ರಾಮಕಾಮತಿಯವರಿಗೆ ಶಿಕ್ಷೆಯಾದ ಕೆಲವೇ ದಿನಗಳ ಬಳಿಕ, ೧೭೨೦ರ ಎಪ್ರಿಲ್ ತಿಂಗಳ ೧೧ರಂದು ಜಪ್ತಿಯಾಗಿದ್ದ ಅವರ ಸೊತ್ತಿನ ಮೇಲಕ್ಕೆ ಹಕ್ಕು ಕೊಂಡವರಿದ್ದರೆ, ಅವರು ಪರಿಹಾರ ಕೇಳುವಂತೆ ಹೇಳಲಾಯಿತು. ಸರಕಾರದ ಪರವಾಗಿ ಬೂನ್ ಸ್ವತಹಾ ಎಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಸುಮಾರು ರೂ. ೧೨,೭೯೨/-ಗಳಷ್ಟರ ಪರಿಹಾರ ಕೇಳಿದರು. ಅವರ ಚರ ಮತ್ತು ಸ್ಥಿರ ಸೊತ್ತುಗಳ ಯಾದಿ ತಯಾರಿಸಿದ ಬಳಿಕ, ಜೂನ್ ತಿಂಗಳ ೨೭ರಂದು ಅವನ್ನು ಹರಾಜು ಹಾಕುವಂತೆ ಆಜ್ಞೆಯೊಯಲಾಯಿತು.

ರಾಮಕಾಮತಿ ಮತ್ತು ದುಲ್ಬಾ ಇವರ ಶಿಕ್ಷೆಗೆ ಕಾರಣವಾದ ಅವಹೇಳನೀಯ ಸಾಕ್ಷ್ಯವಿತ್ತ ಹಸನ್ ಆಲಿ ೧೭೨೦ರ ಸೆಪ್ಟಂಬರ್ ತಿಂಗಳ ೬ರಂದು ಮಾಡಿದ ಅರ್ಜಿಗನುಸರಿಸಿ ಆತನ ಹೆಸರಿನಲ್ಲಿ ಸುಮಾರು ರೂ. ೨,೪೬೧/-ರಷ್ಟರ ಮೊಬಲಗನ್ನು ಜಮಾ ಮಾಡಲಾಯಿತು.

೧೩. ಗವರ್ನರ್ ಬೂನ್ ಇವರ ನಿರ್ಗಮನ

೧೭೨೨ರ ಜನವರಿ ತಿಂಗಳಲ್ಲಿ ಗವರ್ನರ್ ಚಾರ್ಲ್ಸ್ ಬೂನ್ ಇಂಗ್ಲೆಂಡಿಗೆ ಹೋಗುವ ಹಡಗನ್ನೇರಿದರು. ಖಂದೇರಿಯ ಮೇಲಣ ಇವರ ಹಲ್ಲೆ ಘಾತಕವಾಗಿತ್ತು. ತನ್ನ ಅನಿರೀಕ್ಷಿತ, ಲಜ್ಜಾಸ್ಪದ ಪರಾಜಯಕ್ಕೆ ಹೊಣೆಗಾರನನ್ನಾಗಿ ಮಾಡುವ ಬಲಿಪಶುವೊಂದನ್ನರಸುತ್ತಿದ್ದ

ಇವರಿಗೆ ರಾಮಕಾಮತಿ ಮತ್ತು ಅವರ ಶತ್ರುಗಳ ಮೇಲೆ ಹೇರಿದ್ದ ಅಪಾದನೆಗಳು ಉಪಯೋಗಕ್ಕೆ ಬಂದವು. ತತ್ಪರಿಣಾಮ ರಾಮಕಾಮತಿ ಮತ್ತು ದುಲ್ಬಾ ಭಂಡಾರಿ ಇವರು ದೋಷಾರೋಪಣೆಯ ಭೂತಕ್ಕೆ ಅನಾಯಾಸ ಬಲಿಬಿದ್ದರು. ಅವರು ತನ್ನ ನಿಲುವಿಗೆ ಯಾರೊಬ್ಬನ ಪ್ರತಿರೋಧ ಸಹಿಸದಿದ್ದರು. ಬೂನ್ ಇಂಗ್ಲೆಂಡಿಗೆ ಮರಳಿದ ನಂತರ ರಾಮಕಾಮತಿ ಮತ್ತು ದುಲ್ಬಾ ಭಂಡಾರಿಯವರ ಕುರಿತಾದ ಸರಕಾರದ ಧೋರಣೆಯಲ್ಲಿ ಭಾರೀ ಬದಲಾವಣೆಗಳು ಕಾಣಬಂದವು[೬]. ಸರಕಾರದ ಲೆಕ್ಕಿಗನೊಬ್ಬನ ಮೇರೆಗೆ ಗವರ್ನರ್ ಬೂನ್ ಇವರ ಆಡಳಿತೆಯ ಹಲವೊಂದು ವಿಷಯಗಳ ಕುರಿತು ಕಂಪನಿ ಕಡು ಟೀಕೆ ಮಾಡಿತ್ತು. ಕಂಪನಿ ಅವರನ್ನು ತಳ್ಳಿಹಾಕುವುದರಲ್ಲಿತ್ತು. ಅವರು ಈ ಅಪಮಾನದಿಂದ ಬದುಕುಳಿದರು[೭].

೧೪. ಜನಾಭಿಪ್ರಾಯ

ರಾಮಕಾಮತಿಯವರಿಗಿತ್ತ ಶಿಕ್ಷೆ ನ್ಯಾಯಾತೀತವಿತ್ತೆಂದು ಜನರು ಕಟು ಟೀಕೆ ಮಾಡಿದರು. ೧೮೫೬ರಲ್ಲಿ ಫಿಲಿಪ್ ಎಂಡರ್ಸನ್ ಹೀಗೆ ಬರೆದರು :

"ಸರಕಾರ ತುಚ್ಛ ಕಾರಸ್ಥಾನವೊಂದರ ಕೈಗೊಂಬೆಯಾಗಿತ್ತು. ಮತ್ತು ಅದು ದಬ್ಬಾಳಿಕೆಯ ಕ್ರೂರ ಕೃತ್ಯಗಳಿಗೆ ತೊಡಗಿತು. ದೇಶದ್ರೋಹದ ಅಪರಾಧವನ್ನು ಪ್ರಮಾಣೀಕರಿಸಲು ಮಂಡಿಸಿದ ಪುರಾವೆಗಳು (ಆಂಗ್ರೆಯೊಂದಿಗಿನ ಗುಪ್ತ ಪತ್ರ ವ್ಯವಹಾರ) ಅಬದ್ಧ ಮತ್ತು ಅಸತ್ಯವಿದ್ದವು. ಭಾರತದ ನ್ಯಾಯಾಲಯಗಳಲ್ಲಿ ಸುಳ್ಳು ಸಾಕ್ಷಿಯನ್ನು ಇಷ್ಟೊಂದು ಕೌಶಲ್ಯಪೂರ್ಣ ಮತ್ತು ಸುಲಭವಾಗಿ ಈ ಹಿಂದೆ ಯಾರೊಬ್ಬರೂ ಮಂಡಿಸಿದ್ದುದಿಲ್ಲ"[೮].

೧೮೮೬ರಲ್ಲಿ ಜೇಮ್ಸ್ ಡಗ್ಲಸ್ ಈ ಮುಂದಿನಂತೆ ಬರೆದರು :

"ಅವರು ಬೆರಗುಗೊಳಿಸುವ ಪ್ರಭಾವಕೊಂಡಿದ್ದರು. ಇದು ಅವರ ಮತ್ತು ನಮ್ಮ ಪಾಲಿನ ದೌರ್ಭಾಗ್ಯಶಾಲಿ ಮೊಕದ್ದಮೆಯೊಂದು. ರಾಮಕಾಮತಿಯವರ ಮರಣಾನಂತರ ಅವರ ವಿರುದ್ಧ ಪುರಾವೆಯ ರೂಪದಲ್ಲಿ ತೋರಿಸಲಾದ, ಅವರು ಬರೆದಂತಹವೆಂಬ ಪತ್ರಗಳು ನಕಲಿಯಿದ್ದುವೆಂದು ಕಂಡು ಬಂದವು. ಮತ್ತು ಅವರ ಖ್ಯಾತಿಗೆ ಕಪ್ಪು ಬಳಿಯಲು ಯಾರೋ ಒಬ್ಬರು ಮುದ್ರೆಗಳ ದುರುಪಯೋಗ ಮಾಡಿದ್ದರೆಂಬುದು ಬೆಳಕಿಗೆ ಬಂತು"[೯].

೧೫. ರಾಮಕಾಮತಿಯವರ ಮರಣ

ರಾಮಕಾಮತಿಯವರ ಆರೋಗ್ಯ ಕೆಡಲಾರಂಭಿಸಿತು. ಅವರು ಸೆರೆಮನೆಯಲ್ಲೇ ಕೊನೆಯುಸಿರೆಳೆದರು.

ರಾಮಕಾಮತಿ ಮತ್ತು ಗೋವಿಂದಜೀ ಇವರು ಸೆರೆಮನೆಯಿಂದ ಗವರ್ನರ್ ಚಾರ್ಲ್ಸ್ ಬೂನ್ ಇವರಿಗೆ ಜ್ಞಾಪಕ ಪತ್ರಗಳನ್ನು ಬರೆದಿದ್ದರು. ಆದರೆ ಬೂನ್ ಈ ಪತ್ರಗಳನ್ನು ತಳ್ಳಿ ಹಾಕಿದ್ದರು. ಇವು ನ್ಯಾಯ ಸಮಿತಿಯ ಸದಸ್ಯರಾಗಿದ್ದ ಲಾರೆನ್ಸ್ ಪಾರ್ಕರ್ ಮತ್ತು ಜೋನ್ ಬ್ರಾಡಿಲ್ ಇವರ ಕೈಗಳಿಗೆ ಬಿದ್ದವು; ೧೭೪೩ರಲ್ಲಿ ಅವರು ಇವನ್ನು ಇಂಗ್ಲೆಂಡಿನಲ್ಲಿದ್ದ

ನಿರ್ದೇಶಕರ ಮಂಡಳಿಗೆ ಕಳುಹಿಸಿದರು. ಈ ಮಂಡಳಿ ರಾಮಕಾಮತಿಯವರ ಕುರಿತಾದ ಬ್ರೂನ್ ಇವರ ತೀರ್ಪನ್ನು ಈ ಮುಂದಣ ಟೀಕೆಗಳೊಂದಿಗೆ ರದ್ದುಗೊಳಿಸಿತು. ಮಾತ್ರ ಇದು ಇಪ್ಪತ್ತಮೂರು ವರ್ಷಗಳ ಬಳಿಕ ಸಂಭವಿಸಿತು:

''ಮಿಸ್ಟರ್ ಲಾರೆನ್ಸ್ ಪಾರ್ಕರ್ ಮತ್ತು ಮಿಸ್ಟರ್ ವಿಲ್ಯಮ್ ಹೆನ್ರಿ ಕ್ರೇಪರ್ ೧೨ ಇವರು ಕಳುಹಿದ ದುರ್ದೈವಿ, ದಿವಂಗತ ರಾಮಕಾಮತಿ ಮತ್ತು ಅವರ ಕಾರ್ಯದರ್ಶಿ ಗೋವಿಂದಜೀ ಇವರ ಇತಿವೃತ್ತದ ಪ್ರತಿಗಳು ನಮಗೆ ದೊರಕಿದವು.

''ವ್ಯಕ್ತಿಗಳಿಬ್ಬರು ಒದಗಿಸಿದ ಪುರಾವೆಗಳ ಮತ್ತು ಸ್ವಖುಷಿಯಿಂದ ನಮ್ಮ ಎದುರು ಹಾಜರಾಗಿದ್ದ ಮಿಸ್ಟರ್ ಜೋನ್ ಬ್ರೇಡಿಲ್, ಗವರ್ನರ್ ಫಿಲ್ಲಿಪ್ಸ್ ಮತ್ತು ಕೋರ್ಟ್ನೆ ಇವರ ಅಭಿಪ್ರಾಯ, ಆಶಯಗಳ ಆಧಾರಕೊಂಡು ನಾವು ಸರ್ವ ಸಮ್ಮತಿಯಿಂದ ಈ ನಿರ್ಣಯವನ್ನು ಇದರೊಂದಿಗೆ ಕಳುಹಿಸುತ್ತೇವೆ:

''ರಾಮಕಾಮತಿಯವರು ಕಂಪೆನಿಗೆ ಸಲ್ಲಿಸಬೇಕಾಗಿದ್ದ ಹಣದ ಪ್ರತಿ ಜಪ್ತಿ ಮಾಡಿದ್ದ ಸೊತ್ತಿನ ಬೆಲೆ ಕಟ್ಟುವಾಗ ಅವರಿಗೆ ನಷ್ಟವಾಗಬಹುದೆಂದು ತಿಳಿಸಿದ್ದ ನಿಮಿತ್ತ, ಮೌಲ್ಯ ನಿರ್ಣಯದ ನಂತರ ಉಳಿಯಬಹುದಾಗಿದ್ದ ಹಣವನ್ನು ಅವರ ಉತ್ತರಾಧಿಕಾರಿಗಳಿಗೀಯಬೇಕೆಂದು ಆಜ್ಞಾಪಿಸುತ್ತೇವೆ.

''ಬನಾವಟಿ ಮುದ್ರೆ ತಯಾರಿಸಿದ, ನಕಲಿ ಪತ್ರಗಳನ್ನು ಸಿದ್ಧಗೊಳಿಸಿದ್ದ ವ್ಯಕ್ತಿಗಳನ್ನು ಕಂಡುಹಿಡಿದಲ್ಲಿ ಮೊಕದ್ದಮೆ ಹೂಡಿ ಅವರನ್ನು ಕಠೋರ ಶಿಕ್ಷೆಗೊಳಗಾಗಿಸಬೇಕು. ಅಂತಹ ವ್ಯಕ್ತಿಗಳು ನಮ್ಮ ರಕ್ಷಣೆಕೊಂಡು ಬಾಳು ಬದುಕಲು ಅಯೋಗ್ಯರು''.

ಈ ಮೇಲಣ ನಿರ್ಣಯದಿಂದ ರಾಮಕಾಮತಿಯವರ ಬದುಕುಳಿದಿದ್ದ ಮಗ ದುರ್ಗನ ಹಣದ ಅಡಚಣೆಗೆ ತಾತ್ಕಾಲಿಕ ನೆರವು ದೊರಕಿರಬೇಕು. ೧೭೪೩ರ ಡಿಸೆಂಬರ್ ತಿಂಗಳ ೩೦ರಂದು ಅವರಿಗೆ ರೂ.೪,೦೦೦/- ಗಳ ಪರಿಹಾರ ದೊರಕಿತು. ದುರ್ಗ ಕಾಮತಿ ದಾರಿದ್ರ್ಯಾವಸ್ಥೆಯಲ್ಲಿ ತೀರಿಕೊಂಡರು.

೧೬. ರಾಮಕಾಮತಿಯವರು ಕಟ್ಟಿಸಿದ ದೇವಸ್ಥಾನಗಳು

ರಾಮಕಾಮತಿ ಶ್ರದ್ಧಾಭಕ್ತಿಗಳ ವ್ಯಕ್ತಿಯೊಬ್ಬರಾಗಿದ್ದರು. ಅವರು ಬೊಂಬೇಯ ಕೋಟೆಯಲ್ಲಿ ವೆಂಕಟೇಶ ದೇವಸ್ಥಾನ ಕಟ್ಟಿಸಿದರು. ಬೊಂಬೇಯ 'ಮಲಬಾರ್ ಹಿಲ್' ನಲ್ಲಿನ ಮಲುಕೇಶ್ವರ ದೇವಸ್ಥಾನದ ಜೀರ್ಣೋದ್ಧಾರ ಮಾಡಿದ ಕಾರಣಕ್ಕಾಗಿ ಅವರನ್ನು ಇಂದಿಗೂ ಸ್ಮರಿಸಲಾಗುತ್ತದೆ.

ಸ್ಥಳ ಮಾಹಾತ್ಮ್ಯೆಯ ಮೇರೆಗೆ ಸೀತೆಯನ್ನರಸಿ ಶ್ರೀರಾಮ ಲಕ್ಷ್ಮಣನೊಂದಿಗೆ ಈ ತಾಣದತ್ತ ಬಂದ. ಮಹಾದೇವನನ್ನು ಪೂಜಿಸಿದಲ್ಲಿ ಸೀತೆ ಶೀಘ್ರ ದೊರಕುವಳೆಂದು ಋಷಿ ಗೌತಮ ನುಡಿದಾಗ ಆತ ಲಿಂಗವೊಂದನ್ನರಸಿ ತರಲಾಗಿ ಲಕ್ಷ್ಮಣನನ್ನು ಕಳುಹಿಸಿದ. ಲಿಂಗವನ್ನರಸುವಲ್ಲಿ ಹೊತ್ತು ಕಳೆದಾಗ ಶ್ರೀರಾಮ ಮರಳಿನಿಂದ ('ವಾಲುಕ'ದಿಂದ) ಲಿಂಗವೊಂದನ್ನು ತಯಾರಿಸಿ ಪೂಜಿಸಲಾರಂಭಿಸಿದ. ಈ ಲಿಂಗ 'ವಾಲುಕೇಶ್ವರ' ವೆಂದಾಗಿ

ಪರಿಚಿತವಾಯಿತು. ಲಿಂಗವೊಂದನ್ನರಸಿ ತಂದ ಲಕ್ಷ್ಮಣ ಮುನಿದು ಕೊಂಡ. ಲಕ್ಷ್ಮಣ ತಂದ ಲಿಂಗಕ್ಕೆ ಲಕ್ಷ್ಮಣೇಶ್ವರನೆಂಬ ಹೆಸರನ್ನಿತ್ತು ಶ್ರೀರಾಮ ಅದನ್ನೂ ಅಲ್ಲಿಯೇ ಸ್ಥಾಪಿಸಿದ.

ಈ ದೇವಾಲಯವನ್ನು ಉತ್ತರೆಯ ಶಿಲಾರಹರರ ಮಂತ್ರಿ ಲಕ್ಷ್ಮಣ ಎಂಬಾತ ೧೨ನೇಯ ಶತಮಾನದಲ್ಲಿ ಕಟ್ಟಿಸಿದ್ದಿರಬೇಕು. ೧೧೨೭ರ ಶಿಲಾಶಾಸನವೊಂದರಲ್ಲಿ ಉಲ್ಲೇಖಿಸಲ್ಪಟ್ಟ ಲಕ್ಷ್ಮಯ್ಯ ಪ್ರಭು ಈತನೇ ಇದ್ದಿರಬೇಕು. ಮೂಲದ ದೇವಸ್ಥಾನವನ್ನು ಮುಸಲ್ಮಾನರು ಅಥವಾ ಪೋರ್ಚುಗೀಸರು ಗುಂಡು ಮದ್ದು ಬಳಸಿ ಕೆಡವಿರಬೇಕು. ರಾಮಕಾಮತಿಯವರು ದೇವಸ್ಥಾನವನ್ನು ಅದೇ ಸ್ಥಾನದಲ್ಲಿ ಮರಳಿ ಕಟ್ಟಿಸಿದರು.

೧೭೫೭ರಲ್ಲಿ ಗ್ರೋಸ್ ಎಂಬವರು ಇದನ್ನು ಬೊಂಬೇ ದ್ವೀಪದಲ್ಲಿನ 'ಪಗೋಡ'ವೆಂದು ಉಲ್ಲೇಖಿಸಿರುತ್ತಾರೆ. ೧೮೧೧ರಲ್ಲಿ ಈ ಸ್ಥಳವನ್ನು ಸಂದರ್ಶಿಸಿದ್ದ ಎಡ್ವರ್ಡ್ ಮೂರ್ ಶಿಥಿಲವಾಗಿದ್ದ ದೇವಸ್ಥಾನದ ಅವಶೇಷಗಳನ್ನು ಕಂಡು ಅಲ್ಲಿನ ಪರಿಸರವನ್ನು ಸ್ವಚ್ಛಗೊಳಿಸಿದರು. ಅಲ್ಲಿ ಅವರಿಗೆ ಕೆಲವೇ ಅಡಿಗಳಷ್ಟರ ಮಣ್ಣಿನ ಅಡಿಯಲ್ಲಿ, ಮಧ್ಯದಲ್ಲಿ ಬ್ರಹ್ಮನ, ಎಡಭಾಗದಲ್ಲಿ ಶಿವನ ಮತ್ತು ಬಲಭಾಗದಲ್ಲಿ ವಿಷ್ಣುವಿನ ಮುಖಗಳನ್ನು ಕೊಂಡಿದ್ದ ವಿಗ್ರಹ ದೊರಕಿತು. ಘಾರಾಪುರಿ ಅಥವಾ ಶ್ರೀಪುರಿ (ಎಲಿಫೆಂಟಾ)ಯಲ್ಲಿನ ತ್ರಿಮೂರ್ತಿಯನ್ನು ಹೋಲುವ, ಸುಮಾರು ಒಂದು ಟನ್ ಭಾರದ ಈ ವಿಗ್ರಹವನ್ನು ಅವರು ಇಂಗ್ಲೆಂಡಿಗೆ ಕೊಂಡುಹೋದರು. (ಈ ಮೂರ್ತಿ ಈಗ ಲಂಡನ್ನಿನಲ್ಲಿನ ಇಂಡಿಯಾ ವಸ್ತುಸಂಗ್ರಹಾಲಯದಲ್ಲಿದೆ. ಮೂಲದ ದೇವಸ್ಥಾನ ಹನ್ನೊಂದನೆಯ ಅಥವಾ ಹನ್ನೆರಡನೆಯ ಶತಮಾನದಲ್ಲಿ ಕಟ್ಟಲ್ಪಟ್ಟಿರಬೇಕಾಗಿ ನಂಬಲಾಗುತ್ತದೆ. ವಾಲುಕೇಶ್ವರ ಗ್ರಾಮದ ದಾರಿಯ ಪಕ್ಕದಲ್ಲಿ ಕಾಣಬರುವ ಶೇಷನಾರಾಯಣನ ಶಿಲೆಯ ಸುಂದರ ವಿಗ್ರಹ ಬಹುತೇಕ ವಾಲುಕೇಶ್ವರ ದೇವಸ್ಥಾನಕ್ಕೆ ಸಂಬಂಧಿಸಿದ್ದುದಾಗಿರಬೇಕು.

ಈ ದೇವಸ್ಥಾನ ಮಲಬಾರ್ ಹಿಲ್‌ನ ದಕ್ಷಿಣದ ತುದಿಯಲ್ಲಿದ್ದು, 'ಮಲಬಾರ್ ಪೋಯಿಂಟ್', 'ವಾಳುಕೇಶ್ವರಾಚಿ ದಾಂಡಿ' ಎಂದೂ ಪರಿಚಿತವಾಗಿದೆ. ಮಲಬಾರ್ ಹಿಲ್, ೧೮೬೮ರ ತನಕ 'ವಾವುಲ್ ಕ್ವೆಸ್ಟ್' ಎಂದಾಗಿಯೂ ಸಂಬೋಧಿಸಲ್ಪಟ್ಟಿದ್ದು ಅದು ಸಾರಸ್ವತರ ಒಡೆತನಕೊಂಡಿತ್ತು. ದೂರದೃಷ್ಟಿಕೊಂಡಿರದಿದ್ದ ಆ ದಿನಗಳಲ್ಲಿನ ದುರ್ದೈವಿ ಸಾರಸ್ವತರು ಅನ್ಯ ಹಿಂದೂಗಳಿಗೆ ಅಲ್ಲಿ ವಾಸಮಾಡಲು ಮತ್ತು ದೇವಸ್ಥಾನ, ಧರ್ಮಶಾಲೆಗಳನ್ನು ಕಟ್ಟಲು ಗೇಣಿ ಚೀಟಿ, ಗುತ್ತಿಗೆ, ಭೋಗ್ಯ ಪತ್ರಗಳ ವಿನಹಾ ಅನುಮತಿಯಿತ್ತರು.

ಮಲಬಾರ್ ಹಿಲ್‌ನಲ್ಲಿ ಈಗ ಅನೇಕ ದೇವಸ್ಥಾನಗಳು ಕಾಣಬರುತ್ತಿದ್ದು ಅವುಗಳ ಒಡೆತನಕೊಂಡವರು ಅವುಗಳ ಭೂಭಾಗದ ಮೇಲಕ್ಕೂ ಹಕ್ಕಿನ ಪ್ರತಿಪಾದನೆ ಮಾಡಿರುತ್ತಾರೆ.

ಆ ದಿನಗಳಲ್ಲಿ ಗವರ್ನರ್ ಸರ್ ಇರ್ವಿನ್ ನೇಪಿಯರ್ (೧೮೧೨-೧೮೧೯) ಮಲಬಾರ್ ಹಿಲ್‌ನ ಮೇಲೆ ಸಣ್ಣ ಬಂಗಲೆಯೊಂದನ್ನು ಕಟ್ಟಿಸಿದ್ದರು. ಅವರ ಉತ್ತರಾಧಿಕಾರಿಯಾಗಿ ಬಂದಿದ್ದ ಎಲ್ಫಿನ್‌ಸ್ಟನ್ (೧೮೧೯-೧೮೨೭) ಗವರ್ನರರ ಮಳೆಗಾಲದ ನಿವಾಸಕ್ಕಾಗಿ ಹಳೆಯ ದೇವಸ್ಥಾನದ ಸಮೀಪ ಭವನವೊಂದನ್ನು ಕಟ್ಟಿಸಿದರು.

ಕೆಲವೊಂದು ವರ್ಷಗಳ ಹಿಂದೆ ಹಳೆಯ ದೇವಸ್ಥಾನದ ತಳಪಾಯ ಅಗೆಯಲಾಗಿತ್ತು.

೧೮೬೩ರಲ್ಲಿ ಅಲ್ಲಿ ಬುರುಜೊಂದನ್ನು ಕಟ್ಟಲಾಯಿತು. ೧೮೮೫ ಮೊದಲ್ಗೊಂಡು ಗವರ್ನರರು ಮಲಬಾರ್ ಹಿಲ್‌ನಲ್ಲಿ ಎಲ್ಫಿನ್‌ಸ್ಟನ್ ಕಟ್ಟಿಸಿದ್ದ ಭವನವನ್ನು ಉಪಯೋಗಿಸತೊಡಗಿದರು.

ಮಲಬಾರ್ ಹಿಲ್‌ನ ಮೇಲಣ ತಮ್ಮ ಹಕ್ಕನ್ನು ಸಾರಿ ಶೆಣ್ವಿಯರು ದಾವೆ ಹೂಡಿದ್ದರು; ಆದರೆ ಧೃಡೀಕರಿಸುವ ಪುರಾವೆಗಳಿಲ್ಲದ ನಿಮಿತ್ತ ಹೈಕೋರ್ಟ್ ದಾವೆಯನ್ನು ತಳ್ಳಿಹಾಕಿ ಅದರ ಮೇಲಕ್ಕೆ ಸರಕಾರದ ಸ್ವಾಮ್ಯ ಸಾರಿತು. ದೇವಸ್ಥಾನ ಈ ರೀತಿಯಲ್ಲಿ ಮಲಬಾರ್ ಹಿಲ್‌ನಲ್ಲಿನ ಬೆಲೆಬಾಳುವ ಜಮೀನನ್ನು ಕಳೆದುಕೊಂಡಿತು.

ದೇವಸ್ಥಾನದ ಪಕ್ಕದಲ್ಲಿ ವೈಷ್ಣವರಿದ್ದ, ವತ್ಸಗೋತ್ರೀಯ ಲೊಟ್ಲಿಕರ್ ರಾಮಶೆಣ್ವೈ ಇವರು ೧೮ನೆಯ ಶತಮಾನದಲ್ಲಿ ತನ್ನ ಜಾಗದಲ್ಲಿ ತಾನೇ ಕಟ್ಟಿಸಿದ 'ಸ್ಮಾರ್ತ ಕವಳೆ ಮಠ'ವಿದೆ [೧೮].

ಸದಾಶಿವ ರಾಮಚಂದ್ರ ಸುಖ್ತಣ್‌ಕರ್

ಸದಾಶಿವ ರಾಮಚಂದ್ರ ಸುಖ್ತಣ್‌ಕರ್, ರಾಮಚಂದ್ರ ಬಾಬಾ ಸುಖ್ತಣ್‌ಕರ್‌ನ ಮಗ. ತನ್ನ ತಂದೆಯಷ್ಟು ತೀಕ್ಷ್ಣಬುದ್ಧಿ ಕೊಂಡಿರದಿದ್ದ ಈತ ಮರಾಠಾ ರಾಜ್ಯದೊಳಗಣ ಆದಿನಗಳಲ್ಲಿನ ಸಂಕಟಗಳಿಗೆ ರಾಜಕೀಯ ಪರಿಹಾರ ಸೂಚಿಸಲು ಅಸಮರ್ಥನಿದ್ದ. ಸುಖ್ತಣ್‌ಕರ್, ರಘುನಾಥ ರಾವ್ ಇವರ ಸೇವೆಯಲ್ಲಿದ್ದ ಮಾತ್ರ ಆತನ ಸ್ವಾಮಿ ನಿಷ್ಠೆ ಅರ್ಥಹೀನವಿತ್ತು. ಮರಾಠಾ ಸತ್ತೆಯನ್ನು ಕಬಳಿಸಲು ರಘುನಾಥರಾವ್ ಯೋಜಿಸಿದ ಕಾರಸ್ಥಾನಕ್ಕೆ ಈತ ತನ್ನ ಬೆಂಬಲವಿತ್ತ.

೧೭೬೪ರ ನಂತರ ರಘುನಾಥರಾವ್ ಮರಾಠಾ ರಾಜ್ಯದ ವಿಭಜನೆಗೆ ಜಿದ್ದಿನ ಪ್ರಯತ್ನ ಮಾಡಿದ. ೧೭೬೭ರಲ್ಲಿ ಗೋಹಾಡ್‌ನ ರಾಣಾನ ವಿರುದ್ಧ ದಂಡೆತ್ತಿ ಹೋಗಿ, ಸೋಲುಕೊಂಡು ನಾಸಿಕಕ್ಕೆ ಮರಳಿದ; ಫಿತೂರಿ ನಡೆಸಿ ಮರಾಠಾ ಸರದಾರರು ಮತ್ತು ಕಿಲ್ಲೆದಾರರನ್ನು ಸತ್ವಶೂನ್ಯರನ್ನಾಗಿಸಿದ. ಮತ್ತು ಪೇಶ್ವೆ ಮೊದಲನೆಯ ಮಾಧವರಾವ್‌ನನ್ನು ಒತ್ತರಿಸಲು ಸೇನೆಯನ್ನು ಸಜ್ಜುಗೊಳಿಸಿದ. ಅಹಮ್ಮದ್‌ನಗರ ಮತ್ತು ಸತಾರಾಗಳಲ್ಲಿನ ದುರ್ಗಗಳು ರಘುನಾಥರಾವ್‌ನ ಅಧೀನವಿದ್ದವು. ಸಹನಶೀಲನಿದ್ದ ಪೇಶ್ವೆ ೧೭೬೭ರ ಅಕ್ಟೋಬರ್ ತಿಂಗಳಲ್ಲಿ ಈ ದುರ್ಗಗಳ ಬದಲಿಗೆ ರೂ. ೧೦ಲಕ್ಷಗಳ ವಾರ್ಷಿಕ ಆದಾಯದ ಜಾಗೀರನ್ನು ಕೊಳ್ಳುವರೆ ಆತನನ್ನು ಒಲಿಸಿಕೊಂಡ. ಆದರೂ ರಘುನಾಥರಾವ್ ನಿಝಾಮ್ ಆಲಿ, ಹೈದರ್ ಆಲಿ ಮತ್ತು ಮರಾಠಾ ಸರದಾರರನ್ನೊಂದುಗೂಡಿಸಿ ಕಾರಸ್ಥಾನಕ್ಕೆ ತೊಡಗಿದ. ೧೭೬೭ರ ಡಿಸೆಂಬರ್ ತಿಂಗಳಲ್ಲಿ ನಾಸಿಕದಲ್ಲಿದ್ದ ಬ್ರಿಟಿಷ್ ರೆಸಿಡೆಂಟರ ಸಹಾಯಕನೊಬ್ಬ ರಘುನಾಥರಾವ್‌ನನ್ನು ಕಂಡು ಪೇಶ್ವೆಯ ವಿರುದ್ಧ ಆಯುಧಕೊಳ್ಳುವರೆ ಪ್ರೇರೇಪಿಸಿದ. ಈ ಸಂಕಲ್ಪನೆಗೆ ಗಾಯಕ್‌ವಾಡ್ ಮತ್ತು ಹೋಳ್ಕರ್ ಇವರೂ ಬೆಂಬಲವಿತ್ತರು. ಪೇಶ್ವೆಯಿಂದ ಬರಬಹುದಾದ ಅರ್ಧರಾಜ್ಯಕ್ಕೆ ವಾರಸುದಾರನೊಬ್ಬನನ್ನುದ್ದೇಶಿಸಿ ಪುತ್ರ ಸಂತತಿಯಿಲ್ಲದ ರಘುನಾಥರಾವ್ ಅಮೃತರಾವ್ ಎಂಬಾತನನ್ನು ತನ್ನ ಮಗನಾಗಿ ದತ್ತಕ್ಕೆ ಕೊಂಡ. ಕಾರಸ್ಥಾನದ ಸುಳಿವುಕೊಂಡ ಮಾಧವರಾವ್ ತನ್ನ ಸೇನೆಯೊಂದಿಗೆ ಹೊರಟ. ರಘುನಾಥರಾವ್‌ನನ್ನು ಸೋಲಿಸಿ ಶರಣು ಬರುವಂತೆ ಮಾಡಿದ. ಸದಾಶಿವ ರಾಮಚಂದ್ರ

ಸುಖ್ತಣ್‌ಕರ್ ತಲೆಮರೆಸಿ ತನ್ನ ಪ್ರಾಣವುಳಿಸಿಕೊಂಡ. ವಿಪನ್ನಾವಸ್ಥೆಯ ಈ ಘಟನೆಯಿಂದ ಆತ ಯಾವೊಂದೂ ಪಾಠ ಕಲಿಯದಾದ. ಅಂಧಶ್ರದ್ಧೆ ಕೊಂಡಿದ್ದ ಸುಖ್ತಣ್‌ಕರ್ ರಘುನಾಥರಾವ್‌ನ ನಿಷ್ಠಾವಂತ ಸೇವಕನಾಗುಳಿದ. ಆತನ ಈ ನಿಷ್ಠೆ, ರಘುನಾಥರಾವ್ ಯೋಜಿಸಿದ್ದ ೧೭೭೩ರ ಆಗಸ್ಟ್ ತಿಂಗಳಲ್ಲಿನ ಪೇಶ್ವೆ ನಾರಾಯಣ ರಾವ್‌ನ ಕೊಲೆಯೊಂದಿಗೆ ಕೊನೆಗಂಡಿತು.

ವಾರನ್ ಹೇಸ್ಟಿಂಗ್ಸ್ ಮತ್ತು ಆತನ ಸಮಿತಿ, ರಘುನಾಥರಾವ್ ಮತ್ತು ಬೊಂಬೇ ಸರಕಾರದ ನಡುವಣ ೧೭೭೫ರ ಸೂರತ್‌ನ ಒಪ್ಪಂದವನ್ನು ರದ್ದುಗೊಳಿಸಿತು. ಹಾಗೆಯೇ ಮೊದಲ ಮರಾಠರ ಯುದ್ಧವನ್ನು ತಾತ್ಕಾಲಿಕವಾಗಿ ತಡೆಹಿಡಿಯಿತು. ೧೭೭೮ರ ಜೂನ್ ತಿಂಗಳಲ್ಲಿ ರಘುನಾಥರಾವ್‌ನ ಬೆಂಬಲಿಗರಲ್ಲೊಬ್ಬನಾಗಿದ್ದ ಸದಾಶಿವ ರಾಮಚಂದ್ರ ಸುಖ್ತಣ್‌ಕರ್‌ನಿಗೆ ಪೇಶ್ವೆ ಮಾಧವರಾವ್ (ಎರಡನೆಯ ಮಾಧವ ರಾವ್)ನತ್ತ ರಾಜನಿಷ್ಠೆ ವ್ಯಕ್ತಪಡಿಸುವ ಪ್ರತಿಜ್ಞೆಗೈಕೊಳ್ಳಲು ಹೇಳಲಾಯಿತು. ೧೭೭೭ರಲ್ಲಿ ನಿರ್ದಯಿಯಿದ್ದ ನಾನಾ ಫಡ್ನವೀಸ್, ರಘುನಾಥರಾವ್‌ನ ಬೆಂಬಲಿಗರನ್ನು ಅರಸಿತೆಗೆದು ಶಿಕ್ಷಿಸತೊಡಗಿದ.

ಸದಾಶಿವ ರಾಮಚಂದ್ರ ಸುಖ್ತಣ್‌ಕರ್ ಮತ್ತು ರಘುನಾಥರಾವ್ ಇವರಿಬ್ಬರೂ ಮಹಾದ್ಜಿ ಸಿಂಧಿಯಾನಿಗೆ ಶರಣು ಬಂದರು. ಕೆಲವೊಂದು ತಿಂಗಳುಗಳ ಬಳಿಕ ಸಿಂಧಿಯಾನ ವಶದಲ್ಲಿದ್ದ ರಘುನಾಥರಾವ್ ಪಲಾಯನ ಮಾಡಿದ. ತನ್ನ ಪತ್ನಿ ಮತ್ತು ಕುಟುಂಬದ ಅನ್ಯ ವ್ಯಕ್ತಿಗಳ ಸಮೇತ ಸೆರೆಮನೆಯಲ್ಲಿದ್ದ ಸದಾಶಿವ ರಾಮಚಂದ್ರ ಸುಖ್ತಣ್‌ಕರ್ ಅಲ್ಲಿಯೇ ಕಾಲಾಧೀನನಾದ.

ಸಂದರ್ಭ ಸೂಚಿ

೧. ಜರ್ನಲ್ ಆಫ್ ದಿ ಬೊಂಬೇ ಬ್ರಾಂಚ್ ಆಫ್ ದ ರೋಯಲ್ ಏಷ್ಯಾಟಿಕ್ ಸೊಸೈಟಿ (ನ್ಯೂ ಸೀರೀಸ್) ಯಲ್ಲಿ ಪ್ರಕಾಶಿಸಲ್ಪಟ್ಟ ಸರ್ ಚಾರ್ಲ್ಸ್ ಫಾಸೆಟ್ಟ್ ಇವರ 'ರಾಮಕಾಮತಿ ಎಂಡ್ ದಿ ಈಸ್ಟ್ ಇಂಡಿಯಾ ಕಂಪನಿ' ಲೇಖನ. ಭಾಗ ೯, ೧೯೯೩ ಪುಟ ೧.

೨. ರಾಮಕಾಮತಿಯವರ ಜನನ ೧೬೫೦ರಲ್ಲಾಯಿತು. ಅವರು ಗಾರ್ಗ್ಯ ಗೋತ್ರದ ವೈಷ್ಣವರಿದ್ದರು. ಅವರ ಕುಲದೇವತೆ ಮ್ಹಾಳಸಾ. ಅವರ ಪೂರ್ವಜರು ಅಂತ್ರುಜ್ ಪ್ರಾಂತದಲ್ಲಿನ ಕುಂಡೈಮಿಗೆ ಸಂಬಂಧಿಸಿದವರಿದ್ದರು. ಅವರು ಹದಿನೇಳನೆಯ ಶತಮಾನದಲ್ಲಿ ಪೋರ್ಚುಗೀಸರು ಬಸ್ಸೀನನ್ನು ಆಳುತ್ತಿದ್ದಾಗ ಅತ್ತ ವಲಸೆ ಹೋಗಿದ್ದ ಸಾರಸ್ವತರ ಕುಟುಂಬವೊಂದಕ್ಕೆ ಸಂಬಂಧಿಸಿದವರಿದ್ದರು.

೩. ಸ್ಪ್ಯಾನಿಷ್ ಡೋಲರ್ಸ್‌ಗಳನ್ನು ಈ ಹೆಸರಿನಿಂದ ಕರೆಯಲಾಗುತ್ತಿತ್ತು. ಕಾರಣ ಈ ನಾಣ್ಯಗಳು ಹರ್ಕ್ಯುಲಿಸ್‌ನ ಸ್ತಂಬದ ಪಡಿಯಚ್ಚನ್ನು ಕೊಂಡಿದ್ದವು.

೪. ದಕ್ಷಿಣದಲ್ಲಿ ಮುದ್ರಿಸಲಾಗಿದ್ದ ನಿಮಿತ್ತ ಬಹುತೇಕ ಅವುಗಳನ್ನು ಆ ಹೆಸರಿನಿಂದ ಕರೆದಿರಬೇಕು. ಅವುಗಳನ್ನು ಕೆಲವೊಮ್ಮೆ 'ದುಗ್ಗಾಣಿ' ಎಂದು ಕರೆಯಲಾಗುತ್ತಿತ್ತು.

೫. ಜರ್ನಲ್ ಆಫ್ ದ ಬೊಂಬೇ ಬ್ರಾಂಚ್ ಆಫ್ ದ ರೋಯಲ್ ಏಷ್ಯಾಟಿಕ್ ಸೊಸೈಟಿ (ನ್ಯೂ ಸೀರೀಸ್) ಭಾಗ ೯, ೧೯೩೩, ಪು.೧೭.

೬. ಬಿ. ಎಮ್. ಮಲಬಾರಿ ಇವರ 'ಬೊಂಬೇ ಇನ್ ದ ಮೇಕಿಂಗ್' (೧೬೬೧-೧೭೨೬), ೧೯೧೦, ಪು. ೨೯೭-೨೯೮.

೭. ದುಲ್ಬಾ ಭಂಡಾರಿಯವರ ವಿರುದ್ಧ ನಡೆಸಲಾದ ದಾವೆ ರಾಮಕಾಮತಿಯವರ ಖಟ್ಲೆಯೊಂದಿಗೆ ನಿಕಟ ಸಂಬಂಧಕೊಂಡಿದ್ದರೂ ಅದು ಜನಸಾಮಾನ್ಯರ ಗಮನ ಸೆಳೆಯದುಳಿಯಿತು. ಮಾತ್ರ ನ್ಯಾಯಾಲಯದಲ್ಲಿನ ಇವರ ವರ್ತನೆ ವಿಚಿತ್ರವಿದ್ದು, ಮರ್ಯಾದೆಯ ಎಲ್ಲೆ ಮೀರಿತ್ತು. ದಾವೆ ಕೊನೆಗೊಳ್ಳುವ ಹೊತ್ತಿಗೆ ನಗರ ವಾಸಿಗಳಲ್ಲಿ ಮಿತಿ ಮೀರಿದ ಕುತೂಹಲವಿತ್ತು.

೮. ದುಲ್ಬಾ ಭಂಡಾರಿಯವರ ಸ್ಮೃತಿಯ ಕುರಿತು ವಿಲ್ಲಿಯಮ್ ಫಿಪ್ಸ್ ಇವರ ಅಭಿಪ್ರಾಯ.

೯. ಕ್ಲೆಮೆಂಟ್ ಡೌನಿಂಗ್ ಇವರ 'ಹಿಸ್ಟರಿ ಆಫ್ ದಿ ಇಂಡಿಯನ್ ವಾರ್ಸ್'.

೧೦. 'ದ ಬೊಂಬೇ ಕ್ವಾರ್ಟರ್ಲಿ ರೆವ್ಯು', ಭಾಗ ೨, ೧೮೫೬, ಪು. ೫೨.

೧೧. ಜೇಮ್ಸ್ ಡಗ್ಲಸ್ ಇವರ 'ರೌಂಡ್ ಎಬೌಟ್ ಬೊಂಬೇ' ಭಾಗ ೧, ಪು. ೧೨೦-೧೨೨. 'ಬೊಂಬೇ ಎಂಡ್ ವೆಸ್ಟರ್ನ್ ಇಂಡಿಯಾ' ಭಾಗ ೧, ಪು. ೯೪-೯೫.

೧೨. ವಿಲ್ಲಿಯಮ್ ಹೆನ್ರಿ ಡ್ರೇಪರ್ ಇವರು, ಈಸ್ಟ್ ಇಂಡಿಯಾ ಕಂಪನಿಯೊಂದಿಗಿನ ಕರಾರಿನ ಮೂಲಕ ನಿಯುಕ್ತಿಗೊಂಡ ಬೊಂಬೇಯ ಮೊದಲ 'ಮೇಯರ್'.

೧೩. ಪೋರ್ಚುಗೀಸರು ಬೊಂಬೇಯಲ್ಲಿ ನೆಲೆಸಿದ್ದ ದಿನಗಳಲ್ಲಿ ಇದನ್ನು ಮಾಡಿದ್ದರೆನ್ನಲಾಗುತ್ತದೆ. —'ದ ಟೌನ್ ಎಂಡ್ ಐಲೇಂಡ್ ಆಫ್ ಬೊಂಬೇ' ಭಾಗ ೩, ೧೮೯೪, ಪು.೬೬೮.

೧೪. ಗ್ರೋಸ್ ಇವರ 'ವೊಯೇಜ್ ಟು ಈಸ್ಟ್ ಇಂಡೀಸ್', ಪು. ೮೫-೮೬.

೧೫. ಎಡ್ವರ್ಡ್ ಮೂರ್, ಐ.ಆರ್.ಎಸ್., ಲಂಡನ್, ಇವರ 'ದ ಹಿಂದು ಪ್ಯಾಂತಿಯೆನ್', ೧೮೧೦, ಪು. ೩೯೫-೩೯೬.

೧೬. 'ದ ಹಿಂದು ಪ್ಯಾಂತಿಯೆನ್' ನ ಲೇಖಕರ 'ಓರಿಯಂಟಲ್ ಫ್ರಾಗ್ಮೆಂಟ್ಸ್' ಲಂಡನ್, ೧೮೩೪, ಪು. ೪೪೪ ಮತ್ತು 'ದ ಹಿಂದು ಪ್ಯಾಂತಿಯೆನ್', ಪು. ೩೯೬

೧೭. ''ಸಮುದ್ರದ ತಡಿಯಿಂದ ಹಿಡಿದು ಸದ್ಯದ ಸರಕಾರಿ ಭವನದ ಪರಿಸರ ಮತ್ತು ಅದರತ್ತ ಸಾಗುವ ದಾರಿ ಇವುಗಳನ್ನೊಳಗೊಂಡ ವಾಲುಕೇಶ್ವರ ಗ್ರಾಮದ ಸ್ವಾಮ್ಯ ದೇವಸ್ಥಾನಕೊಂಡಿತ್ತು; ಇಲ್ಲಿ ನೆಲಸಿದ್ದ (೧೭೧೫) ಜನರ ಸಂಖ್ಯೆ ಕೇವಲ ೪೦ ಇದ್ದ ನಿಮಿತ್ತ ಮಲಬಾರ್ ಹಿಲ್ ಸಮಾಜಕಂಟಕರ, ಕಳ್ಳರ ಆಶ್ರಯಸ್ಥಾನವೊಂದಾಯಿತು. ಈ ಗ್ರಾಮದ ಒಡೆತನ ಕೊಂಡ ಸಾರಸ್ವತ ಸಮಾಜ ಅನ್ಯ ಕೋಮಿನ ಹಿಂದುಗಳಿಗೆ ದೇವಸ್ಥಾನ, ಧರ್ಮಶಾಲೆಗಳನ್ನು ಕಟ್ಟಲು, ಗೇಣಿಯ ವಿನಾ, ಜಮೀನನ್ನು ಉಪಯೋಗಿಸಲು ಅನುಮತಿಯಿತ್ತಿತು'' (ಗಝೆಟೀಯರ್ ಆಫ್ ಬೊಂಬೇ ಎಂಡ್ ಐಲೇಂಡ್) ಭಾಗ ೩, ಪು. ೩೬೧.

೧೮. ಬೊಂಬೇಯಲ್ಲಿ ಸಾರಸ್ವತರು ಇನ್ನಿತರ ದೇವಸ್ಥಾನಗಳನ್ನು ಕೊಂಡಿರುತ್ತಾರೆ. ಅವುಗಳಲ್ಲಿ ಪ್ರಾಮುಖ್ಯವಾದುದು ಕೌಶಿಕಗೋತ್ರದ, ಶಾಂತಾದುರ್ಗಾ ದೇವಸ್ಥಾನದ ಕುಳಾವಿಯಿದ್ದ ಮಂಗೇಶ ಶೆಣ್ವೆ ಧೋಂಡೆ ಅವರು ಕಟ್ಟಿಸಿದ ಭೂಲೇಶ್ವರ ಅಥವಾ ಭೋಲಾನಾಥ (ಸರಳ, ಪ್ರಾಮಾಣಿಕ ಸ್ವಭಾವದ) ದೇವಸ್ಥಾನ. ಪ್ರಾಯಶಃ ಇವರು ಬಸ್ಸೀನಿನಲ್ಲಿ ಭೂಮಿಯನ್ನು ಖರೀದಿಸಿದ್ದ ಹಳೆಯ ಗುತ್ತಿಗೆದಾರರು ಹಾಗೂ ಬೊಂಬೇಯಲ್ಲಿ ನೆಲೆ ನಿಂತಿದ್ದರೆನ್ನಲಾಗುವ ಮಂಗೋಗಿ ಸಿನಾಯಿ ಇದ್ದಿರಬೇಕು. ಇದನ್ನು ೧೮೩೬ರಲ್ಲಿ ಸದಾಶಿವ ಮಂಗೇಶ ಧೋಂಡೆ

ಅವರು ದುರಸ್ತುಗೊಳಿಸಿದರು. ಸ್ವಲ್ಪ ಕಾಲಾನಂತರ ಬಾಬಾಜಿ ಕಾಮತ್ ಮಗುದೊಮ್ಮೆ ಇದನ್ನು ಪೂರ್ವಸ್ಥಿತಿಗೆ ತಂದರು. ಇದು ಬೊಂಬೇಯಲ್ಲಿನ ಅತಿ ಮುಖ್ಯ ದೇವಸ್ಥಾನವೊಂದು. ಇದರ ಸಮೀಪ ಇನ್ನೂ ನಾಲ್ಕು ಸಣ್ಣ ಗುಡಿಗಳಿವೆ. ಥಾಕುರ್ ದ್ವಾರದಲ್ಲಿನ ಮುರಲೀಧರ ದೇವಸ್ಥಾನ ದುಲ್ಬಾ ಭಂಡಾರಿಯ ಸಹೋದರ ಕಿಸು ಭಂಡಾರಿಯ ಮಗ, ಆತ್ಮಾರಾಮ ಕೇಶವ ಭಂಡಾರಿ ೧೮೭೫ರಲ್ಲಿ ಕಟ್ಟಿಸಿದ್ದುದಾಗಿದೆ. ಕಂಟ್ರ್ಯಾಕ್ಟರ್ ಆಗಿದ್ದ ಈತ ಬರೋಡಾ ರಾಜ್ಯದಲ್ಲಿ ದೊಡ್ಡ ಮೊತ್ತದ ಕಲಸಗಳನ್ನು ನಿರ್ವಹಿಸುತ್ತಿದ್ದ. ಮುಂದೊಂದು ದಿನ ಈತನನ್ನು ಸರ್ ಸಾಲಾರ್ ಜಂಗ್ ಇವರು ಹೈದರಾಬಾದ್ ರಾಜ್ಯದ ನ್ಯಾಯಾಧೀಶನನ್ನಾಗಿ ನೇಮಿಸಿದರು. ಸಾರಸ್ವತರು ಮುರಲೀಧರ, ಶೀತಲಾ ಮತ್ತು ಮಾಹಿಮ್‌ನಲ್ಲಿನ ಮಾರುತಿಯ ದೇವಸ್ಥಾನಗಳ ಸ್ವಾಮ್ಯ ಕೊಂಡಿರುತ್ತಾರೆ.

ಪರಿಶಿಷ್ಟ ೪

ದಕ್ಷಿಣ ಭಾರತದಲ್ಲಿ ಕಾಶ್ಮೀರಿ ಸಾರಸ್ವತರು

ಶಂಕರ ವಿಜಯದ ಮೇರೆಗೆ ಶಂಕರಾಚಾರ್ಯರು ಬದ್ರಿನಾಥದಿಂದ ಮರಳುವಾಗ ಮಾಹಿಷ್ಮತಿಯಲ್ಲಿ, ಜೈಮಿನಿಯ ಸೂತ್ರಗಳ ಭಾಷ್ಯಕಾರ, ಕರ್ಮ ಮೀಮಾಂಸದ ನಾಮವಂತ ಸಮರ್ಥಕರಿದ್ದ ಕುಮಾರಿಲ ಭಟ್ಟರ ಕಾಶ್ಮೀರಿ ಸಾರಸ್ವತ ಶಿಷ್ಯ ಮಂಡನ ಮಿಶ್ರರ, ಭೇಟಿಕೊಂಡು ಅವರ ಸಿದ್ಧಾಂತಗಳಿಗೆ ಆಹ್ವಾನವಿತ್ತರು. ತಾತ್ವಿಕ ವಿಚಾರಗಳ ವಾದ ಪ್ರತಿವಾದದಲ್ಲಿ ಸೋಲುಕೊಂಡಾತ ವಿಜೇತನ ಸಿದ್ಧಾಂತಗಳನ್ನು ಸ್ವೀಕರಿಸಬೇಕೆನ್ನುವ ನಿರ್ಧಾರಕೊಳ್ಳಲಾಯಿತು. ಮಧ್ಯಸ್ಥಿಕೆಗಾಗಿ ಮಂಡನ ಮಿಶ್ರರ ಪಂಡಿತ ಪತ್ನಿ ಶಾರದಾಳನ್ನು ನೇಮಿಸಲು ಶಂಕರಾಚಾರ್ಯರು ಸೂಚಿಸಿದರು. ಹಲವೊಂದು ದಿನಗಳ ವಾದ ಪ್ರತಿ ವಾದಗಳ ಬಳಿಕ ಆಕೆ ಶಂಕರಾಚಾರ್ಯರ ಪರವಾಗಿ ತನ್ನ ನಿರ್ಣಯವಿತ್ತಳು. ಮಂಡನ ಮಿಶ್ರರು ಸನ್ಯಾಸಕೊಂಡು ಶಂಕರಾಚಾರ್ಯರೊಂದಿಗೆ ದಕ್ಷಿಣ ಭಾರತದತ್ತ ತೆರಳಿದರು. ಸುರೇಶ್ವರಾಚಾರ್ಯರೆಂಬ ಅಭಿದಾನ ಕೊಂಡ ಇವರು ಶಂಕರಾಚಾರ್ಯರ ನಂತರ ಶೃಂಗೇರಿ ಪೀಠದ, ಗುರುಗಳೆನಿಸಿಕೊಂಡರು. ಶಂಕರಾಚಾರ್ಯರು ಆಜ್ಞೆಯ ಮೇರೆಗೆ ಸುರೇಶ್ವರಾಚಾರ್ಯರ ನಂತರದ ನಾಲ್ಕು ಉತ್ತರಾಧಿಕಾರಿಗಳು ಸಾರಸ್ವತ ಸಮಾಜದಿಂದ ಆರಿಸಲ್ಪಟ್ಟರು. ಶೃಂಗೇರಿ ಮಠ ಸಾರಸ್ವತರ ಕೆಲವೊಂದು ವಿಧಿಗಳನ್ನು ಇಂದಿಗೂ ಉಳಿಸಿಕೊಂಡಿದೆಯೆನ್ನಲಾಗುತ್ತದೆ.

ಕಾಶ್ಮೀರದಿಂದ ಮರಳಿದ ಶಂಕರಾಚಾರ್ಯರು ಶಾರದೆಯ (ಕಾಶ್ಮೀರಿನ ಸಂರಕ್ಷಕ ದೇವಿ) ಮತ್ತು ಶ್ರೀ ಚಕ್ರದ ಆರಾಧನೆಗೆ ತೊಡಗಿದ್ದರೆನ್ನಲಾಗುತ್ತದೆ. ಇಲ್ಲಿನ ಶೈವರಲ್ಲಿ ಕಾಳಾಮುಖ, ಪಾಶುಪತ, ಶೈವ ಮತ್ತು ಮಹಾವ್ರತಹರ ಎಂಬೀ ನಾಲ್ಕು ಶಾಖೆಗಳಿದ್ದು ಕಾಶ್ಮೀರದಿಂದ ದಕ್ಷಿಣಕ್ಕೆ ಹೋದ ಸಾರಸ್ವತರು ಕಾಳಾಮುಖ ಶಾಖೆಗೆ ಸೇರಿದವರಿದ್ದರು. ಅವರು ಗಡ್ಡ ಬೆಳೆಸುತ್ತಿದ್ದ ನಿಮಿತ್ತ ಈ ಹೆಸರಿನಿಂದ ಪರಿಚಿತರಾದರೆನ್ನಲಾಗುತ್ತದೆ. ಅವರು ಕಟು ಶಾಖೆಯ ಲಿಂಗಾಕ್ಷಿ ಸೂತ್ರಕ್ಕೆ ಸಂಬಂಧಿಸಿದವರಿದ್ದರು. ಅವರನ್ನು 'ಸಹವಾಸಿ' ಮತ್ತು 'ಕಾಳಾಮುಖ' ಎಂಬೀ ಕುಲನಾಮಗಳಿಂದಲೂ ಗುರುತಿಸಲಾಗುತ್ತದೆ.

'ಸಹವಾಸಿ'ಗಳು ಶೆಣ್ವಿಗಳಂತೆ ಸರ್ವ ಸಾಮಾನ್ಯವಾಗಿ ಆಡಳಿತಗೆ ಸಂಬಂಧಿಸಿದ ವೃತ್ತಿಕೊಂಡವರಿದ್ದರು. ೧೦೬೭ರ ಶಿಲಾಶಾಸನವೊಂದರಲ್ಲಿ ನಾಡ ಪೆರ್ಗಡೆ (ಗ್ರಾಮದ ಮುಖ್ಯಸ್ಥ) ಯ ಹುದ್ದೆ ಕೊಂಡಿದ್ದ 'ಸಹವಾಸಿ' ಹಮ ಚಟ್ಟಿಯ ಉಲ್ಲೇಖವಿದೆ. 'ಸಹವಾಸಿ'ಗಳು ಕರ್ನಾಟಕದ ಕೆಲವೊಂದೆಡೆಯಲ್ಲಿ ಇಂದಿಗೂ ಕಾಣಬರುತ್ತಾರೆ. ಈಗ ಅವರು ಕನ್ನಡ ಮಾತನಾಡುವ ದೇಶಸ್ಥರನ್ನು ಸೇರಿರುತ್ತಾರೆ. ಮೂಲತಃ ಶೈವರಿದ್ದ ಇವರು ಈಗ ವೈಷ್ಣವರಾಗಿರುತ್ತಾರೆ.

ಕಾಳಾಮುಖದ ಹೆಚ್ಚಿನ ಜನರು ಬ್ರಹ್ಮಚರ್ಯ ಪಾಲಿಸುತ್ತಿದ್ದ ನಿಮಿತ್ತ ಈಗ ಅವರಲ್ಲಿನ ಯಾರೊಬ್ಬರೂ ಕಾಣಸಿಗುತ್ತಿಲ್ಲ. ಕಾಲಾಂತರದಲ್ಲಿ ಅವರು 'ಶಕ್ತಿ' ಉಪನಾಮ

ಬಳಸತೊಡಗಿದರು. ಅವರಲ್ಲಿನ ಕೆಲವರು ವಿಜಯನಗರದೊಂದಿಗೆ ಅನ್ಯ ರಾಜ್ಯಗಳಲ್ಲಿನ ಅರಸರ ಧಾರ್ಮಿಕ ಮತ್ತು ಪಾರಮಾರ್ಥಿಕ ಮಾರ್ಗದರ್ಶಕರಾಗಿದ್ದರು. ತ್ರಿಲೋಚನ ಮುನೀಂದ್ರರ ಮುಖ್ಯ ಶಿಷ್ಯರಾಗಿದ್ದ ವರೇಶ್ವರ ಮುನೀಂದ್ರರು ಕಾಳಾಮುಖಿಯಿದ್ದು ಚಾಲುಕ್ಯರ ತ್ರಿಲೋಕ್ಯ ಮಲ್ಲನ ಗುರುಗಳಾಗಿದ್ದರು. ೧೦೯೭ರ ಶಿಲಾಶಾಸನವೊಂದರಲ್ಲಿ ಮುನೀಂದ್ರರು ಬೆಳಗಾಮು (ಬೆಳ್ಳಿಗಾಮು)ದಲ್ಲಿ ಸ್ಥಾಪಿಸಿದ್ದ ಸರ್ವೇಶ್ವರ ದೇವರಿಗೆ ದತ್ತಿಯಿತ್ತುದರ ಉಲ್ಲೇಖವಿದೆ. 'ಕ್ರಿಯಾಶಕ್ತಿ ಶಿವದೇಸಿಕ' ಇವರು ವಿಜಯನಗರದ ಬುಕ್ಕರಾಯನ ರಾಜಗುರುಗಳಾಗಿದ್ದರು. ಥಿಲವಳ್ಳಿ (ಧಾರ್ವಾರ ಜಿಲ್ಲೆಯ ಹಾನಗಲ್ಲು ತಾಲೂಕಿನಲ್ಲಿನ) ಯಲ್ಲಿ ಅವರ ಮಠವೊಂದಿತ್ತು. ೧೨೩೭ರ ಶಿಲಾಶಾಸನವೊಂದರ ಮೇರೆಗೆ ಅವರ ಅಧೀನ ಎಪ್ಪತ್ತೇಳು ದೇವಸ್ಥಾನಗಳಿದ್ದುವು. ಈ ದೇವಸ್ಥಾನಗಳು ಕೆಲವೊಂದು ವಿದ್ಯಾಲಯಗಳನ್ನು ನೋಡಿಕೊಳ್ಳುತ್ತಿದ್ದವು. ಕೇದಾರೇಶ್ವರ ದೇವಸ್ಥಾನದ ೧೧೧೩ರ ಶಾಸನವೊಂದು ಸ್ಥಾನೀಯ ಆಡಳಿತೆಯನ್ನು ಕಾಶ್ಮೀರಿ ಸಾರಸ್ವತ ಗೋಮೇಶ್ವರ ಪಂಡಿತರು ನೋಡಿಕೊಳ್ಳುತ್ತಿದ್ದರೆಂದು ನುಡಿಯುತ್ತದೆ.

ಹನ್ನೊಂದನೆಯ ಶತಮಾನ ಮೊದಲ್ಗೊಂಡು ಅನೇಕ ಕಾಶ್ಮೀರಿ ಸಾರಸ್ವತ ಪರಿವಾರಗಳು ದಕ್ಷಿಣ ಭಾರತದತ್ತ ಬಂದವು. ಅವರಲ್ಲಿನ ಕೆಲವರು ಚಾಲುಕ್ಯರ ರಾಜ್ಯದಲ್ಲಿ ಕವಿಗಳು, ಪಂಡಿತರು, ಆಡಳಿತದಾರರಾಗಿ ಉಳಿದರು. ಚಾಲುಕ್ಯರ ಎರಡನೆಯ ವಿಕ್ರಮಾದಿತ್ಯನ ಆಸ್ಥಾನದಲ್ಲಿದ್ದ ಕವಿ ಬಿಲ್ಹಣ ಅವರಲ್ಲಿನ ಪ್ರಸಿದ್ಧ ವ್ಯಕ್ತಿಯೊಬ್ಬ. ಕಾಶ್ಮೀರಿ ಸಾರಸ್ವತರಲ್ಲಿನ ಇನ್ನೊಬ್ಬ ಖ್ಯಾತನಾಮ ವ್ಯಕ್ತಿ ಸೋಢಲ. ಸೋಢಲನ ಮಗ ಸಾರಂಗಧರ, ಸಿಂಘಣನ ಆಳ್ವಿಕೆಯ ದಿನಗಳಲ್ಲಿ ಸಂಗೀತದ ಕುರಿತಾಗಿ 'ಸಂಗೀತರತ್ನಾಕರ' ಎಂಬ ವಿಶೇಷ ಗ್ರಂಥವನ್ನು ಬರೆದ. ಈ ಗ್ರಂಥ ಅಂಗಡಿಗಳಲ್ಲಿ ಈಗಲೂ ದೊರಕುತ್ತದೆ.

ಮಾಧವ ಮಂತ್ರಿ

ಮಾಧವ ಮಂತ್ರಿಯವರ ಹೆಸರು ಮೊತ್ತ ಮೊದಲಿಗೆಂಬಂತೆ ೧೩೪೭ರ ತಾಮ್ರ ಶಾಸನವೊಂದರಲ್ಲಿ ಕಾಣಬರುತ್ತಿದ್ದು, ಅಲ್ಲಿ ಅವರನ್ನು ಬನವಾಸಿಯ ೧೨,೦೦೦ಗ್ರಾಮಗಳನ್ನು ನೋಡಿಕೊಳ್ಳುತ್ತಿದ್ದ ಬುಕ್ಕನ ಸಹೋದರ ಮಾರಪ್ಪನ ಮಹಾಪ್ರಧಾನನೆಂದಾಗಿ ಉಲ್ಲೇಖಿಸಲಾಗಿದೆ. ೧೩೪೬-೧೩೮೪ರ ಕಾಲಾವಧಿಯ ನಡುವೆ ಇವರು ಮೊದಲನೆಯ ಹರಿಹರ, ಮಾರಪ್ಪ, ಮೊದಲನೆಯ ಬುಕ್ಕ (೧೩೫೦-೧೩೭೯) ಮತ್ತು ಎರಡನೆಯ ಹರಿಹರ (೧೩೭೯-೧೪೦೪) ಇವರ ಪ್ರಧಾನ ಮಂತ್ರಿ ಮತ್ತು ಸೇನಾಪತಿಯಾಗಿ ಸೇವೆ ಸಲ್ಲಿಸಿದ್ದರು. ಸಂಸ್ಕೃತ ಪಂಡಿತರಿದ್ದ ಇವರು 'ಸೂತ ಸಂಹಿತ ತಾತ್ಪರ್ಯ ದೀಪಿಕ' ಹೆಸರಿನ ಭಾಷ್ಯ ಬರೆದರು.

೧೩೬೮ರ ಶಿಲಾಶಾಸನವೊಂದರ ಮೇರೆಗೆ ಮಾಧವ ಮಂತ್ರಿ ಇವರು ಅಂಗೀರಸ ಗೋತ್ರದ ಚಾವುಂಡನ ಮಕ್ಕಳಲ್ಲೊಬ್ಬರಿದ್ದರು. ಗೋವಾವನ್ನು ಗೆದ್ದ ಬಳಿಕ ರಾಜಗುರು ಕ್ರಿಯಾಶಕ್ತಿ ಶಿವದೇಸಿಕ ಇವರ ಸಲಹೆಯ ಮೇರೆಗೆ ಒಂದು ವರ್ಷ ಕಾಲ ತ್ರ್ಯಂಬಕನಾಥ ಲಿಂಗದ ಪೂಜೆ ಮಾಡಿದರು. ೧೩೬೮ರಲ್ಲಿ, ವರ್ಷವುದ್ದ ನಡೆದ ವ್ರತ ಮುಕ್ತಾಯವಾದಂದು ಅವರು ೪೫ ಮಂದಿ ಕಾಶ್ಮೀರಿ ಬ್ರಾಹ್ಮಣರಿಗೆ, ಪಲಶಪಳ್ಳಿ ಮತ್ತು ತೇವಟ್ಟ ಹೆಸರಿನ

ಕೇರಿಗಳನ್ನೊಳಗೊಂಡ ಮುಚ್ಚುಂಡಿಗ್ರಾಮಕ್ಕೆ ವಿದ್ಯೇಶ್ವರಪುರವೆಂಬ ಹೊಸ ಹೆಸರನ್ನಿಟ್ಟು ದಾನವಾಗಿತ್ತರು. ಈ ಗ್ರಾಮವನ್ನು ಮಾಧವ ಮಂತ್ರಿ ಕೇರಿಗಳೆರಡರ ಸಮೇತ ಅರಸು ಬುಕ್ಕರಾಯನಿಂದ ಕ್ರಯಕ್ಕೆ ಕೊಂಡಿದ್ದರು. ಮಾರಾಟದ ದಸ್ತಾವೇಜಿನಲ್ಲಿ ಮಾಧವ ಶಬ್ದವನ್ನು ಮದರಸ ಎಂದಾಗಿ ನಮೂದಿಸಲಾಗಿದೆ..

ಸಂದರ್ಭ ಸೂಚಿ

೧. ಮಾಧವ ಮಂತ್ರಿ (ಅಥವಾ ಅಮಾತ್ಯ), ಬುಕ್ಕ ಮತ್ತು ಹರಿಹರರ ಮುಖ್ಯ ಮಂತ್ರಿಗಳಾಗಿದ್ದ ವಿದ್ಯಾರಣ್ಯ ಮಾಧವ, ಇವರು ಬೇರೆಯೇ ಆದ ವ್ಯಕ್ತಿಗಳಿಬ್ಬರು. ವಿದ್ಯಾರಣ್ಯ ಮಾಧವ ಮತ್ತು ಅವರ ಸಹೋದರ ಸಾಯಣ ಇವರು ಆಂಧ್ರಪ್ರದೇಶದ, ಭರದ್ವಾಜ ಗೋತ್ರಿಯಾರಿದ್ದ ಮಾಯಣನ ಮಕ್ಕಳು. ಆ ದಿನಗಳಲ್ಲಿನ ಖ್ಯಾತನಾಮ ವಿದ್ವಾಂಸರಿದ್ದ ಇವರು ಋಗ್ವೇದ, ಅತ್ರೇಯ ಬ್ರಾಹ್ಮಣ ಮತ್ತು ತೈತ್ತರೀಯ ಸಂಹಿತೆಗಳ ಮೇಲಕ್ಕೆ ಭಾಷ್ಯ ಬರೆದರು. ಮಾಧವರು ಸ್ವತಹಾ 'ಪರಾಶರ ಮಾಧವೀಯ' (ಪರಾಶರ ಸ್ಮೃತಿ) ಮತ್ತು ಹಿಂದೂ ಪಂಚಾಂಗದಲ್ಲಿನ ಗಣಿತದ ಕುರಿತಾದ 'ಕಾಲ ಮಾಧವ' ಎಂಬ ಗ್ರಂಥಗಳನ್ನು ಬರೆದರು.

ಅನುಬಂಧ ೧

ಗೋವಾದಲ್ಲಿ ಪೋರ್ಚುಗೀಸರ ಧಾರ್ಮಿಕ ಸತಾವಣೆ

ಅಫೊಂಸಾ ದಿ ಅಲ್ಬುಕರ್ಕ್

೧೫೦೫ರಲ್ಲಿ ವೈರೊಂ ದೋಮ್ ಫ್ರಾನ್ಸಿಸ್ಕ್ ದಿ ಅಲ್ಮೇದ ಕಾರವಾರದ ಅಂಜೆ ದೇವ ದ್ವೀಪದಲ್ಲಿನ ಹಿಂದೂ ದೇವಾಲಯಗಳೆಲ್ಲವುಗಳನ್ನು ಮುರಿದಿಕ್ಕಿದ.[೧]

೧೫೧೫ರ ಜನವರಿ ತಿಂಗಳ ೬ನೆಯ ತಾರೀಕಿನ ತನ್ನ ಪತ್ರದಲ್ಲಿ ಫ್ಲೋರೆಂಟೈನ್ ಯಾತ್ರಿಕ ಆಂದ್ರೆ ಕುರ್ಸಾಲೆ ಕೊಚ್ಚಿನ್‌ನಿಂದ ಹೀಗೆ ಬರೆದಿರುತ್ತಾನೆ :

"ಗೋವಾ ಶಹರದಲ್ಲಿ ಮತ್ತು ಭಾರತದ ಇನ್ನಿತರ ನಗರಗಳಲ್ಲಿ ಯಹೂದ್ಯೇತರರ ಅಸಂಖ್ಯ, ಪುರಾತನ ಕಟ್ಟಡಗಳಿವೆ. ಗೋವಾದ ಸಮೀಪವಿದ್ದ ದಿವಾರಿ (ದಿವಾಡಿ) ಹೆಸರಿನ ಚಿಕ್ಕ ದ್ವೀಪದಲ್ಲಿದ್ದ ಪುರಾತನ ದೇವಸ್ಥಾನವೊಂದನ್ನು ನಗರ ರಚನೆಯ ಕಾರಣವನ್ನಿತ್ತು ಮುರಿದಿಕ್ಕಿರುತ್ತಾರೆ[೨]"

ಅಫೊಂಸಾ ದಿ ಅಲ್ಬುಕರ್ಕ್ ಇಸ್ಲಾಂ ಧರ್ಮವನ್ನಳಿಸಿ ಅವರ ಮಸೀದಿಗಳನ್ನು ನೆಲಸಮ ಮಾಡಿದನೆಂದೂ, ಅವುಗಳ ಉತ್ಪನ್ನವನ್ನು ಚರ್ಚ್‌ಗಳಿಗಾಗಿ ವಿನಿಯೋಗಿಸಿದನೆಂದೂ, ಮುಸ್ಲಿಂ ಸ್ತ್ರೀಯರು ಪೋರ್ಚುಗೀಸರೊಂದಿಗೆ ಮದುವೆ ಮಾಡಿಕೊಳ್ಳಲು ಬಲಪ್ರಯೋಗಿಸಿದನೆಂದೂ, ಸಪ್ತಕೋಟೀಶ್ವರ ದೇವಸ್ಥಾನವನ್ನು ನಾಶಗೊಳಿಸಿ ಅದರ ಸ್ಥಳದಲ್ಲಿ ಕ್ರೈಸ್ತ ದೇವಾಲಯವನ್ನು ಕಟ್ಟಿಸಿದನೆಂದೂ, ಬಲಪೂರ್ವಕ ಪ್ರಜೆಗಳ ಧರ್ಮಪರಿವರ್ತನೆ ಮಾಡಿಸಿ, ಅವರ ಭಾಷೆ, ಸಂಸ್ಕೃತಿಗಳನ್ನು ನಾಶಗೊಳಿಸಿ ತಮ್ಮವರೊಂದಿಗೆ ಸೇರಿಸಿಕೊಳ್ಳುವ ಧೋರಣೆಕೊಂಡಿದ್ದನೆಂದು ಅನ್ಯ ಕೆಲವೊಬ್ಬ ಇತಿಹಾಸಕಾರರು ನುಡಿದಿರುತ್ತಾರೆ. ಪೋರ್ಚುಗೀಸರ ರಾಜ್ಯಾಡಳಿತೆಯಲ್ಲಿನ ಕಾಲಾನುಕ್ರಮ ಘಟನೆಗಳ ವರದಿ ಬರೆಯುತ್ತಿದ್ದ ಫೆರ್ನಾಂಡೊ ಲೋಪಿಸ್ ದಿ ಕಾಸ್ತಾನ್ಯೇದ ೧೫೨೮ರಲ್ಲಿ ಭಾರತಕ್ಕೆ ಬಂದಿದ್ದ. ಆತ ಶಾಪ್ತ '(ಸಪ್ತನಾಥ)' ಎಂಬುದರ ಉಲ್ಲೇಖ ಮಾಡಿದ್ದುದನ್ನು ನೋಡುವಾಗ ಆಂದ್ರೆ ಕುರ್ಸಾಲೆ ಸೂಚಿಸಿದ್ದ ದೇವಸ್ಥಾನ ಸಪ್ತ ಕೋಟೀಶ್ವರವಿದ್ದಿರಲಾರದೆಂದು ತೋರಿ ಬರುತ್ತದೆ. ಗೋವಾವನ್ನು ಗೆದ್ದುಕೊಳ್ಳುವಾಗ ಬ್ರಾಹ್ಮಣರಿಗೆ ಯಾವೊಂದು ಬಗೆಯ ಬಾಧೆಯಾಗದಂತೆ ನೋಡಿಕೊಂಡು ಹಿಂದುಗಳ ಸಹಾನುಭೂತಿಯೊಂದಿಗೆ ಅವರ ಅರಸರ ಮೈತ್ರಿಯನ್ನು ಬೆಳೆಸಲು ಯತ್ನಿಸುತ್ತಿದ್ದ ಅಲ್ಬುಕರ್ಕ (ಆತ ಮುಸಲ್ಮಾನರತ್ತ ದಯೆ ದಾಕ್ಷಿಣ್ಯ ತೋರದೆ ಹಗೆತನ ಸಾಧಿಸುತ್ತಿದ್ದ.), ಪವಿತ್ರವಿದ್ದ ಸಪ್ತ ಕೋಟೀಶ್ವರ ದೇವಸ್ಥಾನವನ್ನು ಮುರಿದಿಕ್ಕಿದನೆಂಬುದು ನಂಬಲಾಗದ ಮಾತೊಂದು. ಕದಂಬರ ಹದಿನೆರಡನೆಯ ಮತ್ತು ಹದಿಮೂರನೆಯ ಶತಮಾನಗಳ ಶಿಲಾಶಾಸನಗಳಲ್ಲಿ ಉಲ್ಲೇಖಿಸಲ್ಪಟ್ಟ ದೇವಸ್ಥಾನ, ೧೩೫೮-೧೩೬೬ ರ ನಡುವಣ ಕಾಲಾವಧಿಯಲ್ಲಿ ಮುಸಲ್ಮಾನರು ಅಂಶತಃ ಮುರಿದಿಕ್ಕಿದ ಅನ್ಯ ಪುರಾತನ ದೇವಸ್ಥಾನವೊಂದಕ್ಕೆ ಸಂಬಂಧಿಸಿದ್ದಿರಬೇಕೆಂದು ಶ್ರೀ.ಪಿ. ಪಿಸ್ರುಲೆಂಕರ್ ಇವರು ನುಡಿದಿರುತ್ತಾರೆ.

ಅರಸು ಮೂರನೆಯ ಜುವಾವ್‌ನ ಕಾಲದಲ್ಲಿ ಆರಂಭವಾದ ಸತಾವಣೆ

ಗೋವಾದ ಮೊದಲ ಬಿಷಪ್ ೧೫೩೪ರಲ್ಲಿ ನೇಮಿಸಲ್ಪಟ್ಟರು. ಆ ದಿನಗಳಲ್ಲಿ ಸೇನೆಯನ್ನು ಬಿಟ್ಟರೆ ಇನ್ನಿತರ ಕಡೆಗಳಲ್ಲಿ ಕೆಲವೇ ಕ್ರಿಸ್ತೀಯರು ಕಾಣಬರುತ್ತಿದ್ದರು.

೧೫೪೧ರಲ್ಲಿ ಪೋರ್ಚುಗಲ್ಲಿನ ಅರಸು ಮೂರನೆಯ ಜುವಾವ್ ಈ ಮುಂದಿನ ಆಜ್ಞಾಪನೆ ಹೊರಡಿಸಿದ :

''ಕ್ರೈಸ್ತಮತೀಯರಲ್ಲದವರು ಈ ತನಕ ಸೈತಾನನ ಅಧೀನವಿದ್ದರು. ದೇವರು ಅವರ ವಿಮೋಚನೆಯನ್ನು ಯೋಜಿಸಿರುತ್ತಾರೆ. ಹಿಂದುಗಳ ದೇವಸ್ಥಾನಗಳನ್ನು ಮತ್ತು ಮುಸಲ್ಮಾನರ ಮಸೀದಿಗಳನ್ನು ಉಧ್ವಸ್ತಗೋಳಿಸಬೇಕಾಗಿ ಅವರು ಆಜ್ಞಾಪಿಸಿರುತ್ತಾರೆ.''
೩

ಈ ಅಪ್ಪಣೆಯನ್ನು ಕಾರ್ಯರೂಪಕ್ಕೆ ತಂದು ತೀಸ್‌ವಾಡಿಯಲ್ಲಿನ ಎಲ್ಲೊಂದು ದೇವಸ್ಥಾನಗಳನ್ನು ನಾಶಗೊಳಿಸಿ ಅವುಗಳ ಸೊತ್ತನ್ನು ಗ್ರಾಮಸ್ತರ ಸಮಿತಿಗಳಿಗೀಯಲಾಯಿತು.

೧೫೪೨ರಲ್ಲಿ ವೈಸರಾಯ್ ದೋಮ್ ಮಾರ್ಟಿನ್ ಅಫೊಂಸ ದಿ ಸೌಝಾ ಗೋವಾಕ್ಕೆ ಬಂದಾಗ ತನ್ನ ಹಡಗಿನಲ್ಲಿ ಫ್ರಾನ್ಸಿಸ್ ಶವಿಯೆರ್‌ನನ್ನು ಕರೆದು ತಂದಿದ್ದ. ಆನಂತರ ಧಾರ್ಮಿಕ ಸತಾವಣೆ ತೀವ್ರವಾಗತೊಡಗಿತು.

ಸಾಷಷ್ಟಿ ಮತ್ತು ಬಾರ್ದೇಶ್ ಪ್ರಾಂತಗಳನ್ನು ಆಳಲಾಗಿ ಅಲ್ಲಿ ನೆಲೆಸಿದ್ದ ಪೋರ್ಚಗೀಸರು ೧೫೪೩ರಲ್ಲಿ ಧಾರ್ಮಿಕ ದುಷ್ಕೃತ್ಯಗಳನ್ನು ಅಲ್ಲಿಯೂ ಹರಡಿಸಿದರು.

೧೫೪೩ರಲ್ಲಿ ಅರಸು ಇನ್ನೊಂದು ಆಜ್ಞೆ ಹೊರಡಿಸಿ ಜನರು ದೇವಸ್ಥಾನಗಳಲ್ಲಿ ಅಥವಾ ತಮ್ಮ ಮನೆಗಳಲ್ಲಿ ಮೂರ್ತಿ ಪೂಜೆ ಮಾಡುವುದನ್ನು ಪ್ರತಿಬಂಧಿಸಿದ; ಹಿಂದುಗಳ ಧಾರ್ಮಿಕ ಕ್ರಿಯಾಕರ್ಮಗಳ ಆಚರಣೆಯನ್ನು ಪ್ರತಿಬಂಧಿಸಿ ಅವರ ಪುರೋಹಿತರನ್ನು ಸೆರೆಮನೆಗೆ ತಳ್ಳಿದ.

ರಾಯಥುರ್(ರಾಚೋಲ್)ನಲ್ಲಿ ೧೫೪೬ರ ಜೂನ್ ತಿಂಗಳ ೨೬ರಂದು ಸ್ಥಾಪಿಸಲ್ಪಟ್ಟ 'ದ ಸೈಂಟ್ ಪೌಲ್ಸ್ ಕೋಲೇಜ್'ನ ನಿರ್ಮಾಣ, ಮುರಿದಿಕ್ಕಿದ ದೇವಸ್ಥಾನಗಳ ಆದಾಯದಿಂದಾಯಿತು. ಧರ್ಮಾಂತರಿಸಲ್ಪಟ್ಟವರ ಧಾರ್ಮಿಕ ಶಿಕ್ಷಣವನ್ನುದ್ದೇಶಿಸಿ ಕೊಂಡಿದ್ದ ಈ ಸಂಸ್ಥೆ 'ಸಾಂತಾ ಫೆ ದಿ ನಸ್ಸೊ ಸೆನ್ಹರ್ ಜೆಜು ಕ್ರಿಸ್ತ' ಎಂದಾಗಿ ಪರಿಚಿತವಾಗಿತ್ತು. ೧೫೮೯ರಲ್ಲಿ ಈ ಕಾಲೇಜಿನ ಪುನರ್ನಿರ್ಮಾಣವಾಯಿತು. ಸದ್ಯ ಕಾಣ ಬರುವ ವಾಸ್ತು ೧೬೪೯ರಲ್ಲಿ ನಿರ್ಮಿಸಲ್ಪಟ್ಟುದಾಗಿದೆ.

೧೫೪೬ರಲ್ಲಿ ಈ ಅರಸು ಗೋವಾದಿಂದ ಹಿಂದೂ ಧರ್ಮದ ಉಚ್ಚಾಟನೆ ಮಾಡಬೇಕೆಂಬ, ಹಿಂದುಗಳು ದೇವರ ವಿಗ್ರಹಗಳನ್ನು ತಯಾರಿಸಿ ಉತ್ಸವಾದಿಗಳನ್ನು ಆಚರಿಸಬಾರದೆಂಬ, ದೇವಸ್ಥಾನ, ಮಸೀದಿಗಳನ್ನು ಕೆಡವಿ ಅವುಗಳ ಭೂಮಿಯನ್ನು ಸರಕಾರ ತನ್ನ ಅಧೀನ ಕೊಳ್ಳಬೇಕೆಂಬ ಆಜ್ಞೆಯಿತ್ತ.

೧೫೪೮ರಲ್ಲಿ ಬಿಷಪ್ ಜುವಾವ್ ಅಲ್ಬುಕೆರ್ಕ್, ಹಿಂದುಗಳ

ಧರ್ಮಗ್ರಂಥಗಳನ್ನೊಂದುಗೂಡಿಸಿ ಸುಟ್ಟು ಹಾಕಿದ. ಇದರ ಪರಿಣಾಮ ಸ್ವರೂಪ ಕೊಂಕಣಿ ಬರೆಯಲನುಕೂಲವಾದ ಭಾಷೆಯೊಂದಾಗಿ ಬೆಳೆದು ಬರುವ ಅವಕಾಶವನ್ನು ಕಳೆದುಕೊಂಡಿತು.

ಪೋರ್ಚುಗೀಸ್ ಪಾದ್ರಿಗಳು ಬ್ರಾಹ್ಮಣರನ್ನು ಮತಾಂತರಿಸುವುದರಲ್ಲಿ ತಮ್ಮ ಲಕ್ಷ್ಯ ಕೇಂದ್ರೀಕರಿಸಿದರು. ೧೫೪೮ರಲ್ಲಿ ಕ್ರಿಸ್ತೀಯ ಧರ್ಮಗುರು ಗಾಸ್ಪರ್ ಬರ್ಝಾಯುಶ್ ಸಾರಸ್ವತನಿದ್ದ, ಲೋಕು ಹೆಸರಿನ, ಶ್ರೀಮಂತನನ್ನು ಆತನ ಸಂಸಾರದ ಸಮೇತ ಧರ್ಮಾಂತರಗೊಳಿಸಿದ. ಧರ್ಮಾಂತರಗೊಂಡವರನ್ನು ಮೆರವಣಿಗೆಯಲ್ಲಿ ಕೊಂಡುಹೋಗಲಾಯಿತು. ದಾರಿ ಸಾಗುತ್ತಿದ್ದಾಗ ಅವರನ್ನು ಪೋರ್ಚುಗೀಸ್ ಸೈನಿಕರು ವಂದಿಸಿ, ಗೌರವಿಸಿದರು.

ಸಾರಸ್ವತರ ಕೆಲವು ಗಮನಾರ್ಹ ಧರ್ಮಪರಿವರ್ತನೆಗಳು

ಸಾಷ್ಟಿಯ ನಿವಾಸಿಗಳಲ್ಲಿ ಧರ್ಮಾಂತರಗೊಂಡ ಮೊತ್ತ ಮೊದಲಿನ ವ್ಯಕ್ತಿ ಕಮರ ಗಿರಾಲ್ (ಕಾರ್ಪೊರೇಶನ್)ನಲ್ಲಿ ಕಾರಕೂನನಾಗಿದ್ದ ಮಂಗೇಶ ಶೆಣೈ ಎಂಬಾತನಿದ್ದ. ಈತ ಕುಟ್ಟಿಲ್ (ಕುಠಸ್ಥಳಿ)ನ ಗಾಂವ್ಕರ (ನಾಮವಂತ ನಾಗರಿಕ)ನಾಗಿದ್ದ. ೧೫೫೩ರ ಮೇ ತಿಂಗಳ ೧ನೇ ತಾರೀಕಿನಂದು ಧರ್ಮಾಂತರಗೊಂಡಿದ್ದ ಈತನಿಗೆ ದೀಕ್ಷೆಯಿತ್ತಿದ್ದ ಕ್ರಿಸ್ತೀಯ ಧರ್ಮಗುರು ಫಾದರ್ ಫ್ರಾನ್ಸಿಸ್ ಮಸ್ಕರೇನಸ್‌ನ ಹೆಸರನ್ನಿಡಲಾಯಿತು. ಈ ಸಂದರ್ಭದಲ್ಲಿ ಆತನ ಗ್ರಾಮದಲ್ಲಿ ಆನಂದೋತ್ಸವವನ್ನಾಚರಿಸಲಾಯಿತು.

೧೫೬೭ರಲ್ಲಿ ಬಿಷಪ್ (ಜುವಾವ್ ದಿ ಅಲ್ಬುಕರ್ಕ್) ನ ಆದೇಶಕ್ಕನುಗುಣವಾಗಿ ಸರಕಾರಿ ಹುದ್ದೆಗಳಲ್ಲಿದ್ದ ಹಿಂದುಗಳನ್ನು ತೆಗೆದು ಹಾಕಲಾಯಿತು. ಅದೇ ವರ್ಷ ವಾಸ್‌ನಾಯಕರ ಪೂರ್ವಜರು (ಮಂಗಳೂರಿನ ಸುಜೀರ್ ನಾಯಕರ ಪೂರ್ವಜ ಕುಟುಂಬಕ್ಕೆ ಸಂಬಂಧಿಸಿದ್ದವರು) ಈ ಮುಂದೆ ನಮೂದಿಸಿದ ಪರಿಸ್ಥಿತಿಯಲ್ಲಿ ಧರ್ಮಾಂತರಗೊಂಡರು:

ಚೋಡ್ನಾ ದ್ವೀಪದ ನಾಯಕರಲ್ಲಿನ ಮದುವೆಯೊಂದು ಕ್ರೈಸ್ತ ಧರ್ಮ ಸ್ವೀಕರಿಸಿದ್ದ ಸಂಬಂಧಿಕರಲ್ಲೊಬ್ಬ ರಾತ್ರಿಯ ಭೋಜನದಲ್ಲಿ ಭಾಗವಹಿಸಿದ. ಇದರಿಂದ ವಿವಾಹದ ಕೆಲವೊಂದು ವಿಧಿಗಳು ಅಪವಿತ್ರವಾದುವೆಂದೂ ಅವುಗಳನ್ನು ಮರಳಿ ಜರಗಿಸಬೇಕೆಂದೂ ನಿರ್ಧರಿಸಲಾಯಿತು. ಈ ನಿರ್ಣಯದಿಂದ ಸಿಟ್ಟಿಗೆದ್ದ ಪೋರ್ಚುಗೀಸ್ ಸರಕಾರ, ವಿಧಿಗಳ ಪುನರಾಚರಣೆಯ ಮೇಲಕ್ಕೆ ತಡೆಹಾಕಿತು. ಆದರೂ ಅವನ್ನು ಗುಟ್ಟಿನಲ್ಲಿ ಆಚರಿಸಲಾಯಿತು. ಈ ವಿಷಯವನ್ನು ಕ್ರಿಸ್ತೀಯನೊಬ್ಬ ಸರಕಾರಕ್ಕೆ ತಿಳಿಸಿದಾಗ ವಿಚಾರಣೆಗಾಗಿ ಸರಕಾರ, ಹಳೆಯ ಗೋವಾದಿಂದ ಜುವಾವ್ ಫರ್ನಾಂಡಿಸ್ ಮತ್ತು ಸೈಂಟ್ ಪೌಲ್ಸ್ ಕಾಲೇಜಿನ ಮುಖ್ಯಾಧಿಕಾರಿ ಹಾಗೂ ಪಾದ್ರಿಗಳಾಗಿದ್ದ ಫ್ರಾನ್ಸಿಸ್ಕೊ ರುಡ್ರಿಗಸ್ ಇವರನ್ನು ಘಟನಾ ಸ್ಥಳಕ್ಕೆ ಕಳುಹಿಸಿತು. ಅವರೊಂದಿಗಿನ ಅಧಿಕಾರಿಗಳು ವಿವಾಹ ಸಮಾರಂಭದಲ್ಲಿ ಭಾಗವಹಿಸಿದ್ದ ಸುಮಾರು ೪೫೦ ಜನರನ್ನು ಬಂಧಿಸಿ ಗೋವಾದ ಸೆರೆಮನೆಯಲ್ಲಿಟ್ಟರು. ಬಂಧಿಸಲ್ಪಟ್ಟವರಲ್ಲಿನ ವೃದ್ಧನೊಬ್ಬನ ಸಲಹೆಯ ಮೇರೆಗೆ ಅವರೆಲ್ಲರೂ ಸ್ವೇಚ್ಛೆಯಿಂದ ಕ್ರೈಸ್ತ ಧರ್ಮದ

ದೀಕ್ಷಾಸ್ನಾನಕೊಳ್ಳಲೊಪ್ಪಿಕೊಂಡರೆನ್ನಲಾಗುತ್ತದೆ. ೧೫೫೭ ರ ಅಗಸ್ಟ್ ತಿಂಗಳ ೨೯ ರಂದಾದ ದೀಕ್ಷಾಸ್ನಾನದ ಕಾರ್ಯಕ್ರಮದಲ್ಲಿ ವೈಸ್‌ರಾಯ್ ದೋಮ್ ಫ್ರಾನ್ಸಿಸ್ಕ್ ಬರ್‍ರೆಟ್ಟೊ ಹಾಜರಿದ್ದ.

ಧಾರ್ಮಿಕ ಸತಾವಣೆ

ವೈಸ್‌ರಾಯ್ ದೋಮ್ ಕೊನ್‌ಸ್ಟೆಂಟಿನೊ ದಿ ಬ್ರಗಾಂರ್ಝಾ (೧೫೫೮-೧೫೬೧)ನ ಅಧಿಕಾರದ ಕಾಲಾವಧಿಯಲ್ಲಿ ಧಾರ್ಮಿಕ ಸತಾವಣೆ ಹದ್ದು ಮೀರಿತ್ತು. ಹಿಂದುಗಳು ಸರಕಾರಿ ಉದ್ಯೋಗಕೊಂಡಿರಬಾರದೆಂದೂ, ಅವರಿಂದ ಯಾರೊಬ್ಬರೂ ದಸ್ತಾವೇಜುಗಳನ್ನು ಬರೆಸಿಕೊಳ್ಳಬಾರದೆಂದೂ ೧೫೫೯ರಲ್ಲಿ ಸರಕಾರ ಸಾರಿತು. ಹಿಂದುಗಳು ಅಥವಾ ಇನ್ನಿತರರು ಈ ಆಜ್ಞೆಯನ್ನು ಪಾಲಿಸದಿದ್ದಲ್ಲಿ ಅವರಿಗೆ ಗುಲಾಮಿಕೆಯ ಶಿಕ್ಷೆಯನ್ನೀಯಬೇಕೆಂಬ ಆಜ್ಞೆಯನ್ನು ಹೊರಡಿಸಲಾಯಿತು. ಅದರೊಂದಿಗೆ ಉತ್ಸವಗಳ ಆಚರಣೆಯನ್ನು ನಿಷೇಧಿಸಲಾಯಿತು. ಈ ಆಜ್ಞೆಯನ್ನು ಉಲ್ಲಂಘಿಸಿದವರ ಸೊತ್ತನ್ನು ಜಪ್ತಿ ಮಾಡಿ ಅದರ ಅರ್ಧ ಭಾಗವನ್ನು ತಪ್ಪಿತಸ್ಥರನ್ನು ತೋರಿಕೊಟ್ಟವರಿಗೂ, ಇನ್ನುಳಿದ ಅರ್ಧ ಭಾಗವನ್ನು ಕ್ರಿಸ್ತೀಯರ ಸ್ಥಾನೀಯ ದೇವಾಲಯಗಳಿಗೀಯ ಬೇಕೆಂಬ ಮತ್ತು ಅಪರಾಧಿಗಳಿಗೆ ಆಜೀವ ಕಾರಾವಾಸದ ಶಿಕ್ಷೆಯೊಯಬೇಕೆಂಬ ಅಪ್ಪಣೆಯೊಯಲಾಯಿತು.

ಗೋವಾ ನಗರ ಮತ್ತು ಸುತ್ತಣ ದ್ವೀಪಗಳಲ್ಲಿನ ಹಿಂದೂ ದೇವಾಲಯಗಳನ್ನು ಕೆಡವಿ ಅವುಗಳಲ್ಲಿನ ವಿಗ್ರಹಗಳನ್ನು ನಾಶಗೊಳಿಸಬೇಕೆಂಬ ಆಜ್ಞೆಯನ್ನು ೧೫೫೯ರ ಮಾರ್ಚ್ ತಿಂಗಳ ೨೫ರಲ್ಲಿ ಹೊರಡಿಸಲಾಯಿತು. ತೀಸ್‌ವಾಡಿಯಲ್ಲಿನ ಬ್ರಾಹ್ಮಣರನ್ನು ಒದ್ದೋಡಿಸಲಾಯಿತು. ಹಿಂದುಗಳು ಈ ಹಿಂದೆ ಎಂದೂ ಕಾಣದಿದ್ದ ಸತಾವಣೆಗೊಳಗಾದರು. ಅವರಲ್ಲಿನ ಎಷ್ಟೋ ಮಂದಿ ನೆರೆಯ ಸೋಂಡೆ ಅರಸನ ರಾಜ್ಯಕ್ಕೆ, ಮತ್ತೆ ಕೆಲವರು ಅನ್ಯ ರಾಜ್ಯಗಳಿಗೆ ಪಲಾಯನ ಮಾಡಿದರು.

೧೫೫೮ರ ಸೆಪ್ಟೆಂಬರ್ ಮತ್ತು ೧೫೬೧ ಸೆಪ್ಟಂಬರ್, ಈ ಕಾಲಾವಧಿಯ ನಡುವೆ 'ಪೌಲಸ್ಟ್ ಫಾದರ್ಸ್' (ಸೈಂಟ್ ಪೌಲ್‌ನ ಚರ್ಚ್‌ಗೆ ಸಂಬಂಧಿಸಿದ್ದ ಕ್ರೈಸ್ತ ಮತೀಯರು) ಸುಮಾರು ೨೦,೭೩೭ ವ್ಯಕ್ತಿಗಳ ಧರ್ಮಪರಿವರ್ತನೆ ಮಾಡಿದರು; ಇದು 'ಫ್ರಾನ್ಸಿಸ್ಕನ್' ಮತ್ತು 'ಡೊಮಿನಿಕನ್' ಇವರು ಮತಾಂತರಗೊಳಿಸಿದವರ ಸಂಖ್ಯೆಯ ಹೊರತಾಗಿತ್ತು. ೧೫೫೯ರ ಅಗಸ್ಟ್ ೨೯ರಂದು ಬ್ರಾಹ್ಮಣರಿಂದ ತುಂಬಿದ್ದ ದಿವಾಡಿ ದ್ವೀಪದಲ್ಲಿನ ೫೧೬ ಮಂದಿಗಳ ಧರ್ಮ ಪರಿವರ್ತನೆ ಮಾಡಲಾಯಿತು. ಈ ಪ್ರಸಂಗದಿಂದ ಸಂಕಟಕ್ಕೊಳಗಾದ ಸಮಾಜ ಸಾರಸ್ವತರದ್ದಿತ್ತು. ಅದೇ ವರ್ಷ ಗೋವಾದ ಚೊಣ್ಣ (ಚೋಡಣ) ಮತ್ತು ದಿವಾಡಿ (ದಿವಾರ್) ದ್ವೀಪಗಳು ಸೇರಿದ್ದ ತೀಸ್ ವಾಡಿಯಲ್ಲಿ ೧೩,೯೨ ಜನರ ಧರ್ಮಪರಿವರ್ತನೆಯಾಯಿತು.

'ಇನ್‌ಕ್ವಿಸಿಷನ್' (ವಿಧರ್ಮೀಯರ ಧರ್ಮ ನಿರ್ಮೂಲನೆಗಾಗಿ ನಿಯೋಜಿಸಿದ ಚರ್ಚಿನ ನ್ಯಾಯಸ್ಥಾನ)

ಕ್ರಿಸ್ತೀಯ ಸಂಪ್ರದಾಯಕ್ಕೆ ಪ್ರತಿಕೂಲವಿದ್ದ ವಿಧರ್ಮೀಯರ ಆಚಾರ, ವಿಚಾರಗಳನ್ನು ಹತ್ತಿಕ್ಕಲಾಗಿ ಚರ್ಚ್ ಸಂಘಟಿಸಿದ್ದ ನ್ಯಾಯ ಮಂಡಳಿಯ ('ಹೋಲಿ

ಇನ್‌ಕ್ವಿಸಿಷನ್') ಅತಿ ಭಯಾನಕ ಕಾರ್ಯಕಲಾಪಗಳ ಮುಂದೆ ಈ ಹಿಂದೆ ಉಲ್ಲೇಖಿಸಲ್ಪಟ್ಟ ಅತ್ಯಾಚಾರಗಳು ತುಚ್ಛವಾಗಿ ತೋರುತ್ತವೆ. ಚರ್ಚ್‌ನಲ್ಲಿನ ಆರಾಧನೆಯ ದಿನಗಳಂದು ಕ್ರಿಸ್ತ ಧರ್ಮವನ್ನು ತೆಗಳಿ ಬರೆದ ಅಶ್ಲೀಲ ಪತ್ರಗಳು ಅಲ್ಲಿನ ದಾನದ ಪೆಟ್ಟಿಗೆಗಳಲ್ಲಿ ಕಾಣಬರತೊಡಗಿದವು. ಧರ್ಮಾಂತರಗೊಂಡ ಹೊಸಬರು ನವಧರ್ಮದಲ್ಲಿ ಆಸ್ಥೆ ತೋರದೆ ಗುಟ್ಟಿನಲ್ಲಿ ಹಳೆಯ ಧರ್ಮವನ್ನು ಆಚರಿಸುತ್ತಿದ್ದರು. ಅವರ ಪ್ರತಿ ಪರಿಣಾಮಕಾರಿ ಕಾರ್ಯಾಚರಣೆಯನ್ನುದ್ದೇಶಿಸಿ ೧೫೬೦ರಲ್ಲಿ ಗೋವಾದಲ್ಲಿ 'ಇನ್‌ಕ್ವಿಸಿಷನ್' ನ್ಯಾಯಸ್ಥಾನ ಸ್ಥಾಪಿಸಲ್ಪಟ್ಟಿತು. ಫ್ರಾನ್ಸಿಸ್ ಕ್ಸವಿಯೆರ್ ಇದಕ್ಕೆ ಕಾರಣೀಭೂತನಾಗಿದ್ದ. ೧೫೪೫ರ ಮೇ ತಿಂಗಳ ೧೬ರಂದು ಪೋರ್ಚುಗೀಸರ ಅರಸು ಮೂರನೆಯ ಜುವಾವ್‌ನಿಗೆ ಬರೆದ ಪತ್ರದಲ್ಲಿ 'ಹೋಲಿ ಇನ್‌ಕ್ವಿಸಿಷನ್' ನ್ಯಾಯಸ್ಥಾನದ ಸ್ಥಾಪನೆಗಾಗಿ ಆತ ಒತ್ತಾಯ ಮಾಡಿದ್ದ. 'ದೇವರನ್ನು ದುರ್ಲಕ್ಷಿಸಿ, ಇಸ್ಲಾಂ ಮತ್ತು ಯೆಹೂದ್ಯರ ಧರ್ಮ ಪಾಲನೆ ಮಾಡಿ ಪ್ರಪಂಚವನ್ನು ಲಜ್ಜಾಸ್ಪದ ಸ್ಥಿತಿಗೆ ದಬ್ಬಿದ ಭಾರತದ ನಿವಾಸಿಗಳ ಸುಧಾರಣೆಗೆ' ಈ ನ್ಯಾಯಸ್ಥಾನ ಅತ್ಯವಶ್ಯಕವಿರುವುದೆಂದು ಬರೆದು ತಿಳಿಸಿದ್ದ. 'ಇನ್‌ಕ್ವಿಸಿಷನ್' ನ್ಯಾಯಸ್ಥಾನವನ್ನು ಯುಸುಫ್ ಆದಿಲ್ ಶಾಹನ ಅರಮನೆಯಲ್ಲಿ ಸ್ಥಾಪಿಸಲಾಯಿತು. ಮೂರು ಉಚ್ಚಾಧಿಕಾರಿಗಳ ಮಂಡಳಿ ಸಾಷ್ಟಿ, ಬಾರ್ದೇಶ್ ಮತ್ತು ಇನ್ನಿತರ ಪ್ರಮುಖ ಕೇಂದ್ರಗಳಲ್ಲಿ ಸಹಾಯಕರನ್ನು ಕೊಂಡಿತ್ತು. ನ್ಯಾಯವಾದಿಗಳ ಕೊಠಡಿಗಳು 'ಮೆಝಾ ದು ಸಾಂತೊ ಅಫಿಸಿಯೊ' ಎಂದಾಗಿ ಕರೆಯಲ್ಪಡುತ್ತಿದ್ದವು.

ಕೆಥೊಲಿಕ್ ಧರ್ಮವಿರೋಧಿ ಕಾರ್ಯಾಚರಣೆಯ ಅಪರಾಧದ ಕಾರಣಕೊಂಡು ಪ್ರತಿಬಂಧಿಸಲ್ಪಟ್ಟ ಅಪರಾಧಿಗಳಿಗೆ ಬೇರೆಯೇ ಆದ ತೊಡುಗೆಗಳನ್ನು ತೊಡಿಸಿ, ಅವರನ್ನು ನಗರದ ಬೀದಿಗಳುದ್ದ ಮೆರವಣಿಗೆಯಲ್ಲಿ ಕೊಂಡುಹೋಗುತ್ತಿದ್ದರು.

'ಕೆಥೆಡ್ರಲ್ ಆಫ್ ಸೈಂಟ್ ಫ್ರಾನ್ಸಿಸ್' ನಲ್ಲಿ ನಡೆದ ವಿಚಾರಣೆಯ ಫಲವಾಗಿ ದೋಷಿಗಳೆಂದು ಸಾರಲಾದವರಿಗೆ ಮರಣದಂಡನೆ ಅಥವಾ ಜೀವಂತ ಸುಡುವ ಶಿಕ್ಷೆಯಾಗುತ್ತಿತ್ತು.

ಶಿಕ್ಷೆಯನ್ನು ಘೋಷಿಸಿದ ಮರುದಿನವೇ ಅಪರಾಧಿಗಳ ಹೆಸರು, ಅಪರಾಧಗಳ ವಿವರ, ರಾಷ್ಟ್ರೀಯತೆ ಮುಂತಾದವುಗಳ ತಪಶೀಲುಗಳೊಂದಿಗೆ ಅವರ ಚಿತ್ರಗಳನ್ನು 'ಚರ್ಚ್ ಆಫ್ ಸೈಂಟ್ ಡೊಮಿನಿಕ್' ಇಲ್ಲಿ ಪ್ರದರ್ಶಿಸುತ್ತಿದ್ದರು. ಈ ಕಾರ್ಯಕ್ರಮವನ್ನು 'ಎಂಟೊ-ದ-ಫೆ' ಎಂದು ಕರೆಯುತ್ತಿದ್ದರು.

೧೬೦೦ರಿಂದ ೧೭೭೩ರ ನಡುವಣ ಕಾಲಾವಧಿಯಲ್ಲಿ ೭೧ಬಾರಿ 'ಎಂಟೊ-ದ-ಫೆ' ಕಾರ್ಯಕ್ರಮಗಳು ನಡೆದವು. ೪೦೪೬ ಜನರು ವಿಭಿನ್ನ ಅಪರಾಧಗಳ ಕಾರಣಗಳಿಗಾಗಿ ಬಂಧಿಸಲ್ಪಟ್ಟರು. ೧೦೫ ಗಂಡಸರನ್ನು ಮತ್ತು ೧೬ ಹೆಂಗಸರನ್ನು ಅಗ್ನಿಗೆ ಬಲಿಯಿತ್ತರು. ೫೭ ವ್ಯಕ್ತಿಗಳನ್ನು ಜೀವಂತ ಸುಡಲಾಯಿತು. ೬೪ ವ್ಯಕ್ತಿಗಳ ಪ್ರತಿಕೃತಿಗಳಿಗೆ ಬೆಂಕಿ ಇತ್ತರು. 'ಇನ್‌ಕ್ವಿಸಿಷನ್' ಅಧಿಕಾರಿಗಳ ನಿರ್ಣಯವನ್ನು ಕಾರ್ಯರೂಪಕ್ಕೆ ತರಲು ನಾಗರಿಕರು, ಸೇನಾಧಿಕಾರಿಗಳು ನೆರವೀಯಬೇಕಿತ್ತು. ಇನ್‌ಕ್ವಿಸಿಷನ್ ಮಂಡಳಿಯ ಸದಸ್ಯರು ವೈಸರಾಯ್ ಮತ್ತು ಗೋವಾದ ಆರ್ಚ್ ಬಿಷಪರನ್ನು ದುರ್ಲಕ್ಷಿಸಿದರು; ತಮಗೆ ಅನುಕೂಲವೆನಿಸುವ

ಆಜ್ಞೆಗಳನ್ನು ಲಿಸ್ಬನ್‌ನಲ್ಲಿದ್ದ ಕೌನ್ಸಿಲ್‌ಗೆ ಸ್ವತಃ ಬರೆದು ತರಿಸಿಕೊಳ್ಳುತ್ತಿದ್ದರು. ಮಂಡಳಿಯ ಸದಸ್ಯರ ಕಣ್ಣಿಗೆ ಬಿದ್ದ ವ್ಯಕ್ತಿಗಳ ಸಾವು ನಿಶ್ಚಿತವೆಂದು ಭಾವಿಸಲಾಗುತ್ತಿತ್ತು. ವ್ಯಕ್ತಿಯೊಬ್ಬನ ಅಪರಾಧ ಸಾಬೀತಾಗದಿದ್ದಾಗಲೂ ಆತನನ್ನು 'ಕನ್ವಿಕ್ಟೊ ನೆಗಟಿವೊ' (ಒಪ್ಪದಿದ್ದ ಅಪರಾಧಿ) ಎಂದು ಘೋಷಿಸಲಾಗುತ್ತಿತ್ತು.

ಅಧಿಕಾರಕೊಂಡಿದ್ದ ಜೆಸ್ಯೂಟ್ಸ್

ಧರ್ಮಪ್ರಚಾರಕರಲ್ಲಿ ಜೆಸ್ಯೂಟ್ಸ್ ಮತಾಂಧರೆಂದೆನಿಸಿಕೊಂಡವರಿದ್ದರು. ಅವರ ಮುಖ್ಯ ಕಾರ್ಯ ಧರ್ಮ ಪರಿವರ್ತನೆ, ದೇವಸ್ಥಾನಗಳನ್ನು ನಾಶಗೊಳಿಸುವುದಿತ್ತು. ಅಲ್ಲಿನ ಆದಾಯವನ್ನು ಅವರು ಸ್ವಪ್ರಯೋಜನಕ್ಕಾಗಿ ಬಳಸುತ್ತಿದ್ದರು. ಸರಕಾರವನ್ನು ತಮ್ಮ ನಿಯಂತ್ರಣದಲ್ಲಿಟ್ಟುಕೊಂಡಿದ್ದ ಇವರು ಸಾಷಷ್ಟಿಯಲ್ಲಿ ಅಪಾರ ಧನ ಮತ್ತು ಭೂಮಿಯನ್ನು ಸಂಪಾದಿಸಿದರು. 'ವೈಸರಾಯ್ ಬರುತ್ತಾರೆ ಮತ್ತು ಹೋಗುತ್ತಾರೆ ಆದರೆ ಪಾದ್ರಿಗಳ ಅಸ್ತಿತ್ವ ಮಾತ್ರ ಶಾಶ್ವತ' ಎಂದು ಜನರು ನುಡಿಯತೊಡಗಿದರು. ವೈಸ್‌ರಾಯ್‌ರಲ್ಲಿನೊಬ್ಬ ತನ್ನ ''ಹೊತ್ತಿನ ದೊಡ್ಡ ಪಾಲು ಪಾದ್ರಿಗಳ ಮನವಿಗಳಿಗೆ ಪರಿಹಾರ ಸೂಚಿಸುವುದರಲ್ಲಿ ಕಳೆದುಹೋಗುತ್ತಿದ್ದು ಸರಕಾರಕ್ಕೆ ಸಂಬಂಧಿಸಿದ್ದ ಇನ್ನಿತರ ಸಮಸ್ಯೆಗಳತ್ತ ಲಕ್ಷ್ಯ ವೀಯಲು ಸಮಯ ದೊರಕುತ್ತಿಲ್ಲ'' ಎಂದು ಪೋರ್ಚುಗಲ್ಲಿಗೆ ಬರೆದು ತಿಳಿಸಿದ್ದ.[೪]

೧೬೨೩-೧೬೨೪ರ ನಡುವೆ ಗೋವಾ ಸಂದರ್ಶಿಸಿದ್ದ ಪ್ರಸಿದ್ಧ ಯಾತ್ರಿಕ ಪಿಯತ್ರೊ ಡೆಲ್ಲಾ ವಾಲ್ ಹೀಗೆ ನುಡಿದಿರುತ್ತಾನೆ :

''ಜೆಸ್ಯೂಟ್ಸರು ಸಾಲ್ಸೆಟ್ಟ್‌ನಲ್ಲಿ ಸುಂದರವಾದ ಕಟ್ಟಡ, ಉದ್ಯಾನಗಳನ್ನು ಕೊಂಡಿರುತ್ತಾರೆ. ಅವರ ಭೂಮಿ ಫಲವತ್ತವಾದುದಾಗಿತ್ತು. ಅವರು ಸಾಲ್ಸೆಟ್ಟ್‌ನಲ್ಲಿನ ಭೂಮಿಯ ಮೂರರಲ್ಲಿನ ಒಂದು ಭಾಗದಷ್ಟರ ಒಡೆಯರಿದ್ದರು. ಜನರ ಮೇಲಣ ಪಾದ್ರಿಗಳ ಹಿಡಿತ ಸರಕಾರದ ಪ್ರಭುತ್ವಕ್ಕಿಂತಲೂ ಮಿಗಿಲಾಗಿತ್ತು.''

ಧರ್ಮಪರಿವರ್ತನೆ ಬಯಸಿ ಜನರು ತಾವಾಗಿ ತಮ್ಮಲ್ಲಿಗೆ ಬರುತ್ತಿರುವುದಾಗಿ ಪೋರ್ಚುಗಲ್ಲಿಗೆ ಬರೆದು ತಿಳಿಸುವಲ್ಲಿ ಈ ಪಾದ್ರಿಗಳ ಕೈಗಳು ದಣಿಯುತ್ತಿದ್ದಿಲ್ಲ.

ಧಾರ್ಮಿಕ ಸತಾವಣೆ (ಮುಂದುವರಿದುದು)

೧೫೬೦ರಲ್ಲಿ ಬ್ರಾಹ್ಮಣರನ್ನು ಪೋರ್ಚುಗೀಸ್ ರಾಜ್ಯದಿಂದ ಹೊರದೂಡಲಾಯಿತು. ತಮ್ಮ ಚರ, ಸ್ಥಿರ ಸೊತ್ತನ್ನು ಕ್ರಿಸ್ತೀಯರಿಗೆ ಮಾರಲು ಅವರಿಗೆ ತಿಂಗಳೊಂದರ ಅವಧಿಯನ್ನೀಯಲಾಯಿತು. ಗೋವಾ ಬಿಟ್ಟು ಹೋಗದವರು ಅಜೀವ ಗುಲಾಮಿಕೆಯ ಶಿಕ್ಷೆಗೆ ಪಾತ್ರರಾಗಬಲ್ಲರೆಂದು ಸಾರಲಾಯಿತು. ಅದಾದ ಸ್ವಲ್ಪ ಸಮಯದ ನಂತರ 'ಸುವಾರುವಕಾರ'ರು ತಮ್ಮ ಕುಟುಂಬದೊಂದಿಗೆ ಹತ್ತು ದಿನಗಳೊಳಕ್ಕೆ ಗೋವಾ ಬಿಟ್ಟು ಹೋಗಬೇಕೆಂಬ ಆಜ್ಞೆ ಹೊರಡಿಸಿದರು. ಆಜ್ಞೆಯನ್ನು ಉಲ್ಲಂಘಿಸಿದವರ ಸೊತ್ತಿನ ಅರ್ಧ ಭಾಗವನ್ನು ಅವರ ಕುರಿತಾಗಿ ಮಾಹಿತಿ ಇತ್ತವರಿಗೆ ಮತ್ತೆ ಇನ್ನುಳಿದ ಅರ್ಧ ಭಾಗವನ್ನು ಗೋವಾದಲ್ಲಿನ ಚರ್ಚ್‌ಗೆ ಸಲ್ಲಿಸಬೇಕೆಂದು ಸಾರಲಾಯಿತು. ೧೫೬೭ರಲ್ಲಿ ಗೋವಾದಲ್ಲಿನ

ವೈದ್ಯರು, ಲೋಹಾರರು, ವ್ಯಾಪಾರಿಗಳು ಮತ್ತು ಇನ್ನುಳಿದ ಹಿಂದುಗಳು ಗೋವಾ ಬಿಟ್ಟು ಹೋಗಬೇಕೆನ್ನಲಾಯಿತು.

೧೫೬೧ರಲ್ಲಿ ಸಾಷಷ್ಟಿ ಮತ್ತು ಬಾರ್ದೇಶ್‌ಗಳಲ್ಲಿನ ಎಲ್ಲಾ ದೇವಸ್ಥಾನಗಳನ್ನು ಉಧ್ವಸ್ತಗೊಳಿಸಿ, ತೀಸ್‌ವಾಡಿಯಲ್ಲಿ ಮಾಡಿದಂತೆ ಅವುಗಳ ಭೂಮಿ, ಸೊತ್ತನ್ನು ಜಪ್ತಿ ಮಾಡಬೇಕೆಂದು ಆಜ್ಞಾಪಿಸಲಾಯಿತು.

೧೫೬೬ರಲ್ಲಿ ಹಿಂದುಗಳನ್ನಟ್ಟುವ ಅಧಿಕಾರವನ್ನು ಆರ್ಚ್ ಬಿಷಪ್ಪರಿಗೆ ಕೊಡಲಾಯಿತು; ಹಿಂದುಗಳು ತಮಗಿತ್ತಿದ್ದ ಕುಲಕರ್ಣಿಯ ಹುದ್ದೆಯನ್ನು ಬಿಟ್ಟುಕೊಡಬೇಕೆಂದು ಹೇಳಲಾಯಿತು. ಮತ್ತು ಇನಾಮಿನ ಭೂಮಿಯನ್ನು ಕ್ರಿಸ್ತೀಯರಿಗೀಯಬೇಕೆನ್ನಲಾಯಿತು.

೧೫೬೭ರಲ್ಲಿ ರಾಯಘುರ್ (ರಾಚೋಲ್) ದುರ್ಗದ ಮುಖ್ಯಾಧಿಕಾರಿ ಕ್ಯಾಪ್ಟನ್ ಡಮಾಗೊ ರುದ್ರಿಗಸ್ ಲೊಟ್ಲಿಮ ಗ್ರಾಮಸ್ಥರನ್ನು ದುರ್ಗಕ್ಕೆ ಬರುವಂತೆ ಹೇಳಿದ. ಅವರು ಮುಖ ತೋರಿಸದಿದ್ದಾಗ ಲೊಟ್ಲಿಗೆ ಹೋಗಿ ಅಲ್ಲಿನ ರಾಮನಾಥನ ಮುಖ್ಯ ದೇವಾಲಯವನ್ನು ಮುರಿದಿಕ್ಕಿದ. ಗ್ರಾಮಸ್ಥರು ಈ ಪ್ರಕರಣವನ್ನು ಕೋರ್ಟಿಗೆ ಕೊಂಡುಹೋದರು. ಪೋರ್ಚುಗೀಸ್ ನ್ಯಾಯಾಧೀಶರು ದುರ್ಗದ ಅಧಿಕಾರಿ ರುದ್ರಿಗಸ್‌ನನ್ನು ದೋಷಿಯೆಂದು ಸಾರಿ, ದೇವಸ್ಥಾನವನ್ನು ಮೊದಲಿನಂತೆ ಕಟ್ಟಿಕೊಡಬೇಕೆಂದು ನಿರ್ಣಯವಿತ್ತರು. ಇದರಿಂದ ಉರಿದೆದ್ದ ಆರ್ಚ್ ಬಿಷಪ್ ವೈಸರಾಯ್‌ನನ್ನು ಕಂಡ. ವೈಸರಾಯ್ ಸಾಲ್ಸೆಟ್ಟ್‌ನಲ್ಲಿನ ದೇವಸ್ಥಾನಗಳನ್ನು ಕೆಡವಿ ಹಾಕಲು ಕ್ಯಾಪ್ಟನ್ ಡಯಾಗೊ ಫರ್ನಾಂಡಿಸ್‌ನಿಗೆ ಆಜ್ಞೆಯಿತ್ತ. ತತ್ಪರಿಣಾಮ ಸುಮಾರು ೨೮೦ ದೇವಸ್ಥಾನಗಳು ನೆಲಸಮವಾದವು. ಅಲ್ಲಿ ದೊರಕಿದ ಮರಮುಟ್ಟುಗಳನ್ನು ಹಡಗುಗಳ ನಿರ್ಮಾಣಕ್ಕೆ ಬಳಸಲಾಯಿತು.

೧೫೬೭ರ ನಂತರ ಎಷ್ಟೊಂದೋ ದೇವಸ್ಥಾನಗಳನ್ನು ಸುಲಿದು, ಸುಟ್ಟು ಹಾಕಿದರು. ಸಾಷಷ್ಟಿ ಮತ್ತು ಬಾರ್ದೇಶ್‌ಗಳಲ್ಲಿನ ಪರಿಸ್ಥಿತಿ ತೀಸ್‌ವಾಡಿಗಿಂತಲೂ ನಿಕೃಷ್ಟವಿತ್ತು.

೧೫೬೭ರಲ್ಲಿ ಹಿಂದುಗಳು ತಮ್ಮ ಧರ್ಮ ಗ್ರಂಥಗಳನ್ನು ಓದಬಾರದೆಂದು ಆಜ್ಞಾಪಿಸಲಾಯಿತು. ಚರ್ಚ್‌ನಲ್ಲಿನ ಪ್ರಾರ್ಥನಾ ಸಭೆಯಲ್ಲಿ ೧೦೦೦ಕ್ಕೂ ಕಡಿಮೆ ಜನರು ಕೂಡಿಬಂದಲ್ಲಿ ಹೊಸದಾಗಿ ಧರ್ಮಾಂತರಗೊಂಡ ಶ್ರೀಮಂತರ ಮೇಲಕ್ಕೆ ದಂಡ ಹೇರುವ ಅಧಿಕಾರವನ್ನು ಪಾದ್ರಿಗಳಿಗೀಯಲಾಯಿತು.

೧೫೬೭ರ ಸುಮಾರಿಗೆ ನೆರೆದ ಕ್ರಿಶ್ಚಿಯನ್ ಕೌನ್ಸಿಲ್, ಕುಲಕರ್ಣಿಗಳ ಹುದ್ದೆಯನ್ನು ಕ್ರಿಸ್ತೀಯರಿಗಷ್ಟೇ ಕೊಡಬೇಕೆಂಬ ನಿರ್ಣಯಕೊಂಡಿತು; ಸೈತಾನನ ನೆಲೆಮನೆಯಾಗಿದ್ದ ಹಿಂದೂ ದೇವಸ್ಥಾನಗಳನ್ನು, ವೃಕ್ಷ ಮತ್ತು ವಿಗ್ರಹಗಳನ್ನು ನಷ್ಟಗೊಳಿಸಲಾಗಿ ಅವುಗಳ ಮಾಹಿತಿಯನ್ನು ಸಂಗ್ರಹಿಸಬೇಕೆಂಬ ನಿರ್ಣಯಕೊಳ್ಳಲಾಯಿತು. ಹಿಂದುಗಳ ವಿವಾಹ ಸಮಾರಂಭ, ಪ್ರೇತಕರ್ಮ, ವ್ರತ, ಹೋಮ ಇತ್ಯಾದಿಗಳ ಆಚರಣೆಯನ್ನು ನಿಷೇಧಿಸಬೇಕೆಂದು ಮತ್ತು ಈ ಆಜ್ಞೆಯನ್ನು ಉಲ್ಲಂಘಿಸಿದವರಿಗೆ ಅತ್ಯುಗ್ರ ಶಿಕ್ಷೆಯೀಯಬೇಕೆಂದು ನಿರ್ಣಯಿಸಲಾಯಿತು.

೧೫೭೧ರಲ್ಲಿ ಪೋರ್ಚುಗಲ್ ಸರಕಾರ ಹಿಂದುಗಳ ಸೊತ್ತನ್ನು ಲೂಟಿ ಮಾಡಿದ, ಬಲತ್ಕಾರ ಮಾಡಿ ಹಣ ಸುಲಿದ, ಅವರ ಕುರಿತು ಮನಬಂದಂತೆ ವರ್ತಿಸಿದ ಕೃತ್ಯಗಳೆಲ್ಲವುಗಳ ವಿಚಾರಣೆ ಮಾಡಬೇಕೆಂಬ ಮತ್ತೆ ಕಬಳಿಸಿದ ಭೂಮಿಯನ್ನು ಸಂಬಂಧಿಸಿದವರಿಗೆ ಮರಳಿಸಬೇಕೆಂಬ ಆಜ್ಞೆ ಇತ್ತಿತು. ಆದರೂ ಹಿಂದುಗಳಲ್ಲಿನ ಯಾರೊಬ್ಬರೂ ಗೋವಾಕ್ಕೆ ಮರಳಲಿಲ್ಲ.

ಗವರ್ನರ್ ಅಂತೋನ್ ಮೊನಿರ್ಝ್ ಬರ್ರೆಟೊ (೧೫೭೩-೧೫೭೬) ಬ್ರಾಹ್ಮಣರು ಮತ್ತು ಅನ್ಯ ಹಿಂದುಗಳ ವಿರುದ್ಧ ಕಠಿಣ ಕಾರ್ಯಾಚರಣೆಗೆ ತೊಡಗಿದ.

೧೫೭೩ರಲ್ಲಿ ಖೋಲ್ ಗ್ರಾಮದಲ್ಲಿನ ಭೂಮಿಯನ್ನು ಸರಕಾರಕ್ಕೆ ಸಲ್ಲಿಸಬೇಕಿರುವ ಹಣವನ್ನು ಸಂದಾಯ ಮಾಡದಿದ್ದ ಕಾರಣಕ್ಕಾಗಿ ಜಪ್ತಿ ಮಾಡಿದರು. ೧೫೭೪ರಲ್ಲಿ ಬ್ರಾಹ್ಮಣರು, ವೈದ್ಯರು, ಪಂಡಿತರು, ಕುದುರೆ, ಡೋಲಿ ಅಥವಾ ಪಲ್ಲಂಕಿಗಳನ್ನು ಬಳಸಿ ಪ್ರಯಾಣ ಮಾಡುವುದಕ್ಕೆ ತಡೆಯೊಡ್ಡಿದರು. ಮೊದಲ ಬಾರಿಯ ಅಪರಾಧಕ್ಕೆ ಹತ್ತು ಅಶ್ರಫಿಗಳ ದಂಡ ಹೊರಿಸುತ್ತಿದ್ದರು. ಎರಡನೆಯ ಬಾರಿಯ ಅಪರಾಧಕ್ಕೆ ೨೦ ಅಶ್ರಫಿಗಳ ದಂಡದೊಂದಿಗೆ ಅವರ ವಾಹನಗಳನ್ನು ಜಪ್ತಿ ಮಾಡುತ್ತಿದ್ದರು. ಮೂರನೆಯ ಬಾರಿಯ ಅಪರಾಧಕ್ಕೆ ಗುಲಾಮಗಿರಿಯ ಶಿಕ್ಷೆಯೊಯತೊಡಗಿದರು. ಸರಕಾರಿ ಸೇವೆಯಲ್ಲಿದ್ದ ವೈದ್ಯರು ಇವೆಲ್ಲವುಗಳಿಂದ ಮುಕ್ತರಿದ್ದರು. ೧೫೭೫ರಲ್ಲಿ ಈ ನಿಯಮಗಳನ್ನು ಹಿಂದುಗಳಿಗಷ್ಟೇ ಅನ್ವಯಿಸಲಾಯಿತು. ನಿಯಮಗಳನ್ನು ಉಲ್ಲಂಘಿಸಿದವರ ವಾಹನ ಜಪ್ತಿ ಮಾಡುವುದರೊಂದಿಗೆ ೫೦ ಅಶ್ರಫಿಗಳ ದಂಡವನ್ನು ಹೇರಲಾಗುತ್ತಿತ್ತು. ಈ ದಂಡದ ಅರ್ಧಭಾಗವನ್ನು ಮಾಹಿತಿಯೊಯುವವನಿಗೆ ಕೊಡಬೇಕಾಗಿತ್ತು.

ಕುಂಕೋಲಿಮ್‌ನ ಹುತಾತ್ಮರು

ಸಾಷಷ್ಟಿಯ ಅನೇಕ ಕುಟುಂಬಗಳು ವಾಸಕ್ಕಾಗಿ ಕುಣ್ಕಲ್ಲಿ (ಕುಂಕೊಲಿಮ್) ಅಸ್ಸೊಲಿನ್, ವೆಲ್ಲಿ, ವರ್ದೆ ಮತ್ತು ಅಂಬೇಲಿಯ ಒಳಭಾಗಕ್ಕೆ ಹೋದವು.

೧೫೬೭ರಲ್ಲಿ ಜೆಸ್ಯೂಟ್ಸರು ಈ ಗ್ರಾಮಗಳತ್ತ ಲಕ್ಷ್ಯ ಕೇಂದ್ರೀಕರಿಸಿದರು. ಕುಣ್ಕಲ್ಲಿಯಲ್ಲಿ ೧೫೭೮ ಮೊದಲ್ಗೊಂಡು ಸುಮಾರು ಏಳು ವರ್ಷಗಳ ಕಾಲ ನಡೆದು ಬಂದಿದ್ದ ವಿವಾದಗಳಿದ್ದವು; ಕ್ರಿಶ್ಚಿಯನ್ ಕೌನ್ಸಿಲಿನ ಸಲಹೆಯ ಮೇರೆಗೆ ಸರಕಾರ ಹೇರಿದ್ದ ತೆರಿಗೆಯನ್ನು ಸಂದಾಯಿಸಲು ಇಲ್ಲಿನ ಗ್ರಾಮಸ್ಥರು ಒಪ್ಪದಿದ್ದರು. ಜೆಸ್ಯೂಟ್ಸ್ ಪಂಥದ ಹೇಳಿಕೆಯ ಮೇರೆಗೆ ಸರಕಾರ ಕುಣ್ಕಲ್ಲಿಯಲ್ಲಿ ಫಾಲ್ಗುಣ ಮಾಸದಲ್ಲಿ ಜರಗುವ ಶಾಂತಾದುರ್ಗಾ ದೇವಿಯ ಉತ್ಸವಕ್ಕೆ ತಡೆಹಾಕಿತು.

ಅದಿಲ್‌ಶಾಹನೊಂದಿಗಿನ ಯುದ್ಧದ ಸಮಾಪ್ತಿಯ ಬಳಿಕ ಪೋರ್ಚುಗೀಸ್ ಸರಕಾರ ಇಲ್ಲಿನ ಗ್ರಾಮಸ್ಥರ ಮೇಲಕ್ಕೆ ತಮ್ಮ ಅಧಿಕಾರ ನಡೆಸಲು ಸ್ವತಂತ್ರವಿತ್ತು. ಅವರು ಕುಣ್ಕಲ್ಲಿ ಮತ್ತು ಅಸ್ಸೊಲಿನ್ ಗ್ರಾಮಗಳಲ್ಲಿನ ಅಪಾರ ಸಂಪತ್ತನ್ನು ನಾಶಪಡಿಸಿದರು.

ನಂತರ ಬಿಷಪರನ್ನು ಪ್ರತಿನಿಧಿಸುವ 'ವಿಕರ್', ಸೈನಿಕರ ಸಣ್ಣ ತುಕಡಿಯೊಂದಿಗೆ ಬಂದು ಬೆಳೆದು ನಿಂತ ಪೈರನ್ನು ನಾಶಗೊಳಿಸಿದ. ದನವೊಂದನ್ನು ಕತ್ತರಿಸಿ ಅದರ ರಕ್ತ ಮತ್ತು

ಮಾಂಸದ ತುಣುಕುಗಳನ್ನು ದೇವಸ್ಥಾನಗಳತ್ತ ತೂರಿ ಅವನ್ನು ಅಶುದ್ಧಗೊಳಿಸಿದ.

ಅನಂತರದ ಕೆಲವೊಂದು ವರ್ಷಗಳನ್ನು ಗ್ರಾಮಸ್ಥರು ಶಾಂತಿಯಿಂದ ಕಳೆದರು.

೧೫೮೩ರಲ್ಲಿ 'ವಿಕರ'ರಿದ್ದ ಫಾದರ್ ಅಂತೊನ್ ಫ್ರಾನ್ಸಿಸ್ಕ್ ಮತ್ತು ಫಾದರ್ ಪೆರೊ ಬರ್ನೊ ಕುಂಕ್ಳಿಗೆ ಬಂದು ಸಾಮೂಹಿಕ ಧರ್ಮ ಪರಿವರ್ತನೆಯ ಕಾರ್ಯಕ್ಕಾರಂಭಿಸಿದರು. ಪಾದ್ರಿಗಳು ಯುಕ್ತಾಯುಕ್ತ ವಿವೇಚನಾಶಕ್ತಿ, ವಿವೇಕ ಕಳೆದಿದ್ದುದನ್ನು ಕಂಡ ಗ್ರಾಮಸ್ಥರು ಆಯುಧಗಳನ್ನು ಕೈಗೆತ್ತಿಕೊಂಡು ಈ ಪಂಗಡದ ಸದಸ್ಯರನ್ನು ಕೊಂದಿಕ್ಕಿದರು. ಅವರಲ್ಲಿನೊಬ್ಬ ಮಾತ್ರ ನಡೆದುದನ್ನು ತಿಳಿಸಲಾಗುವಂತೆ ಬದುಕುಳಿದ.

ವೈಸ್‌ರಾಯ್ ರಾಯಧುರ್ ದುರ್ಗದ ಮುಖ್ಯಾಧಿಕಾರಿಯನ್ನು ಸಣ್ಣ ಸೇನೆಯೊಂದಿಗೆ ಈ ಗ್ರಾಮದತ್ತ ಕಳುಹಿದ. ಅವರು ಅಲ್ಲಿನ ಎಲ್ಲೊಬ್ಬರನ್ನು ಕೊಂದು ಮನೆಗಳಿಗೆ ಬೆಂಕಿಕೊಟ್ಟರು. ಆ ಗ್ರಾಮದಲ್ಲಿನ ಮತ್ತು ನೆರೆಯೂರಿನಲ್ಲಿನ ದೇವಸ್ಥಾನಗಳನ್ನು ಉಧ್ವಸ್ತಗೊಳಿಸಿ ಹಲವೊಂದು ಕ್ರೈಸ್ತ ದೇವಾಲಯಗಳನ್ನು ಕಟ್ಟಿಸಿದರು. ಬದುಕುಳಿದ ಗ್ರಾಮಸ್ಥರು ಆದಿಲ್‌ಶಾಹನ ಅಧಿಕಾರ ಕ್ಷೇತ್ರದೊಳಕ್ಕಿದ್ದ ಪ್ರದೇಶಕ್ಕೆ ಓಡಿಹೋದರು.

ವೈಸ್‌ರಾಯ್ ದೋಮ್ ಫ್ರಾನ್ಸಿಸ್ಕ್ ಮಸ್ಕರೇನ್ಹಸ್ ಪಾದ್ರಿಗಳ ಕೊಲೆಯ ಸೇಡು ತೀರಿಸಬೇಕೆಂದಿದ್ದ. ರಾಚೋಲ್‌ನ ಕೇಪ್ಟನ್ ಗೊಮಿಸ್ ಯಾನೆಸ್ತ್ ಕೂಡಾ ಪಾದ್ರಿಗಳ ಕೊಲೆ ಮಾಡಿದ್ದ ಕುಂಕ್ಳಿಯ ಗ್ರಾಮಸ್ಥರ ಮೇಲೆ ಪ್ರತಿಕಾರಕ್ಕೆ ಉತ್ಸುಕನಿದ್ದ. ಆತ ಗ್ರಾಮಸ್ಥರೊಂದಿಗಿನ ಒಡಂಬಡಿಕೆಯೊಂದರ ಯುಕ್ತಿ ಹೂಡಿದ. ಗ್ರಾಮಸ್ಥರ ಪರವಾಗಿ ಅವರ ನೇತಾರರು ತನ್ನ ಭೇಟಿಕೊಂಡಲ್ಲಿ ಅವರೊಂದಿಗೆ ಒಪ್ಪಂದ ಮಾಡುವ ಭರವಸೆಯಿತ್ತ. ಗ್ರಾಮಸ್ಥರಲ್ಲಿನ ಶ್ರೀಮಂತರೂ, ಗೌರವಾರ್ಹರೂ ಆಗಿದ್ದ ಹದಿನಾರು ಮಂದಿ ಅವರನ್ನು ಕಾಣಲಾಗಿ ದುರ್ಗಕ್ಕೆ ತೆರಳಿದರು. ಅವರಲ್ಲಿನ ಅಗಾನಾಯಿಕ್ ಮತ್ತು ರಾಮುಗಡ್ಡೊ ಎಂಬೀ ಪ್ರಭಾವಶಾಲಿ ವ್ಯಕ್ತಿಗಳಿಬ್ಬರು ಪಾದ್ರಿಗಳ ಕೊಲೆಯಲ್ಲಿ ಭಾಗವಹಿಸಿದವರಿದ್ದರು. ತನ್ನ ಯೋಜನೆಯು ಸಫಲವಾದ ಗೊಮಿಸ್ ಅವರನ್ನು ದುರ್ಗದೊಳಗಣ ಸುರಕ್ಷಿತ ಸ್ಥಾನದಲ್ಲಿರಿಸಿದ; ಮತ್ತು ಚರ್ಚೆಯ ನೆಪಗುಕೊಂಡು ತಾನು ಮಲಗುವ ಕೋಣೆಗೆ ಬರಮಾಡಿದ. ಅವರಲ್ಲಿನ ಅಗಾ ನಾಯಿಕ್‌ನನ್ನು ಒಂದು ಪಕ್ಕಕ್ಕೆ ಕೊಂಡು ಹೋಗಿ ಕಠಾರಿ ಇರಿದು ಕೊಂದಿಕ್ಕಿದ. ಆತನ ಈ ಕೃತ್ಯವನ್ನು ಕಂಡ ಸೈನಿಕರು ಇನ್ನುಳಿದವರನ್ನು ಅದೇ ರೀತಿಯಲ್ಲಿ ಕೊಂದಿಕ್ಕಿದರು.

ಈ ಸುದ್ದಿ ಗ್ರಾಮಸ್ಥರ ಕಿವಿಗೆ ಬೀಳುತ್ತಲೇ ಅವರೆಲ್ಲರೂ ಊರು ಬಿಟ್ಟು ಓಡಿಹೋದರು. ನ್ಯಾಯಾಲಯ, ಗ್ರಾಮಸ್ಥರ ಆಸ್ತಿ ಪಾಸ್ತಿಗಳನ್ನು ಅರಸು ಶಾಸನರೀತ್ಯಾ ಜಪ್ತಿಗೊಳಿಸಿದ ನೆಂಬ ಆಶಯದ ನಿರ್ಣಯವಿತ್ತಿತು. ವೈಸ್‌ರಾಯ್ ದೋಮ್ ದುಆರ್ತೆ ದಿ ಮಿನೇಜಸ್ (೧೫೮೪-೧೫೮೮) ಇವನ್ನು ಬಹುಮಾನರೂಪದಲ್ಲಿ ಹಂಚಿದ ".

ಕೊಲ್ಲಲ್ಪಟ್ಟ ಪಾದ್ರಿಗಳನ್ನು ಧರ್ಮರಕ್ಷಣೆಗಾಗಿ ಮಡಿದ ಹುತಾತ್ಮರೆಂದು ಪರಿಗಣಿಸಿ ಪೋಪ್ ಅವರಿಗೆ ಸಂತರ ಉಪಾಧಿಯನ್ನಿತ್ತರು.

ಧಾರ್ಮಿಕ ಸತಾವಣೆ (ಮುಂದುವರಿದುದು)

೧೫೮೭ರಲ್ಲಿನ ಮೂರನೆಯ ಕ್ರಿಶ್ಚಿಯನ್ ಕೌನ್ಸಿಲ್, ಹಿಂದುಗಳಿಗೆ ಜನಿವಾರ ಧರಿಸಲು ಬಿಡಬಾರದೆಂಬ, ಅವರಲ್ಲಿನ ವಿವಾಹ ಸಮಾರಂಭಗಳನ್ನು ನಿರ್ಬಂಧಿಸಬೇಕೆಂಬ ಹಾಗೂ ಅವರನ್ನು ಊರಿನಿಂದ ಓಡಿಸುವ ಶಿಕ್ಷೆಯನ್ನು ನಿರ್ದಾಕ್ಷಿಣ್ಯ ಕಾರ್ಯಗತ ಮಾಡಬೇಕೆಂಬ ನಿರ್ಣಯಕೊಂಡಿತು. ೧೫೯೪ರಲ್ಲಿ ಸರಕಾರ ಇವಕ್ಕೆ ಆಜ್ಞೆಯ ರೂಪವಿತ್ತಿತ್ತು. ಈ ಕೌನ್ಸಿಲಿನ ಆರನೆಯ ನಿರ್ಣಯದಿಂದ ಹೊಸದಾಗಿ ಧರ್ಮಪರಿವರ್ತನೆಗೊಂಡವರನ್ನು 'ಪ್ರಾಯಶ್ಚಿತ್ತ'ದ ನಂತರ ಹಿಂದುಧರ್ಮಕ್ಕೆ ಮರಳಿ ಸೇರಿಸಿಕೊಳ್ಳಲಾಗುತ್ತಿದೆಯೆಂಬುದರ ಅರಿವಾಗುತ್ತದೆ.

೧೫೮೭ರ ನಂತರ ಹಿಂದುಗಳಿಗೆ ವಿವಾಹ ನೆರವೇರಿಸಲು ಪೋರ್ಚುಗೀಸರ ರಾಜ್ಯದಿಂದ ಹೊರಕ್ಕೆ ಹೋಗಬೇಕಾಯಿತು. ರಾಜ್ಯದಿಂದ ಹೊರಕ್ಕೆ ಹೋಗುವ ಹಿಂದುಗಳ ಮೇಲಕ್ಕೆ ಹೇರಲಾಗುವ ತಲೆಗಂದಾಯವನ್ನು ಸಂಗ್ರಹಿಸುವ ಜವಾಬ್ದಾರಿಯನ್ನು ಜೆಸ್ಯೂಟ್ಸ್ ಇವರಿಗೀಯಲಾಯಿತು. ಹಿಂದುಗಳ ೧೬೦೨ ಮನವಿ ಮನ್ನಿಸಿ ಅರಸು ಈ ಪದ್ಧತಿಯನ್ನು ತಡೆಹಿಡಿದ.

೧೫೯೨ರಲ್ಲಿನ ನಾಲ್ಕನೆಯ ಕ್ರಿಶ್ಚಿಯನ್ ಕೌನ್ಸಿಲ್ ಕ್ರಿಸ್ತೀ ಕ್ಷೌರಿಕರು ಹಿಂದುಗಳ ಕ್ಷೌರ ಮಾಡಬಾರದೆಂಬ ಮತ್ತು ಕ್ರಿಸ್ತೀಯರಲ್ಲದವರನ್ನು ಜೀತದಾಳುಗಳಾಗಿ ಬಳಸಬಾರದೆಂಬ ನಿರ್ಣಯಕೊಂಡಿತು.

೧೫೯೮ರಲ್ಲಿ ಹಿಂದು ಅಧ್ಯಾಪಕರು ಕ್ರಿಶ್ಚಿಯನ್ನ್‌ರಿಗೆ ಪಾಠ ಕಲಿಸುವುದು ಅಪರಾಧವೆಂದು ಸಾರಲಾಯಿತು.

ಚರ್ಚ್ ನಿರ್ಣಯಿಸಿದ ದಿನಗಳ ಹೊರತು ಅನ್ಯ ಯಾವೊಂದೂ ದಿನಗಳಲ್ಲಿ ವಿವಾಹ ಜರಗಿಸಬಾರದೆಂದು ೧೬೧೦ರಲ್ಲಿ ಆಗಿನ ವೈಸ್‌ರಾಯ್ ಆಜ್ಞಾಪಿಸಿದ. ಅನಧಿಕೃತ ವಿವಾಹಗಳು ಶಿಕ್ಷಾರ್ಹವೆಂದೂ, ೧೦೦ ಅಶ್ರಫಿಗಳ ದಂಡವನ್ನು ತೆರಲು ತಪ್ಪಿದಲ್ಲಿ ಮೂರು ವರ್ಷಗಳ ಕಾರಾವಾಸ ಅನುಭವಿಸಬೇಕಿರುವ, ಸಂಗ್ರಹಿಸಲಾದ ದಂಡದ ಮೂರರ ಒಂದು ಭಾಗವನ್ನು ಸುದ್ದಿ ಕೊಡುವವರಿಗೆ ಕೊಡಬೇಕೆಂಬ ಕಾಯಿದೆಯನ್ನು ೧೬೨೧ರಲ್ಲಿ ಜಾರಿ ಮಾಡಿದರು.

ಹಿಂದುಗಳು ತಮ್ಮ ವಿವಾಹ ವಿಧಿಗಳನ್ನು ಬಾಗಿಲು ಮುಚ್ಚಿ ಮನೆಯೊಳಕ್ಕೆ ನಡೆಸಬೇಕೆಂದು ವೈಸ್‌ರಾಯ್ ದೋಮ್ ಪೆದ್ರು ದ ಅಲ್ಮೇದಾ (೧೬೭೭-೧೬೭೮) ಸಾರಿದ. ದೇವಸ್ಥಾನದ ಪೂಜಾರಿಗಳು ಅಥವಾ ವೈದಿಕರು ಸಮಾರಂಭದಲ್ಲಿ ಭಾಗವಹಿಸುವುದನ್ನು ನಿರ್ಬಂಧಿಸಲಾಯಿತು. ಈ ಮನೆಗಳನ್ನು ಪುರೋಹಿತರು ಸಂದರ್ಶಿಸದಂತೆ ನೋಡಿಕೊಳ್ಳಲು 'ಇನ್‌ಕ್ವಿಸಿಷನ್'ನ ಸಿಪಾಯಿಗಳು ಮನೆಬಾಗಿಲು ಕಾಯುತ್ತಿದ್ದರು. ಹಿಂದುಗಳ ಮನವಿಯ ಪರಿಣಾಮವಾಗಿ ವೈಸ್‌ರಾಯ್-ಇನ್-ಚಾರ್ಜ್ ೧೬೭೮ರಲ್ಲಿ ಈ ಹಿಂದಣ ಆಜ್ಞೆಯನ್ನು ರದ್ದುಗೊಳಿಸಿ, ಹಿಂದುಗಳು ವಿವಾಹ ಸಮಾರಂಭವನ್ನು ತಮ್ಮ ಊರಿನ ಎಲ್ಲೆಯೊಳಕ್ಕೆ, ಆದರೆ ನೆರೆಕರೆಯಲ್ಲಿ, ಕ್ರಿಶ್ಚಿಯನ್ ಕುಟುಂಬಗಳಿಲ್ಲದಲ್ಲಿ ಜರಗಿಸಬಹುದೆಂಬ ಆಜ್ಞೆ

ಹೊರಡಿಸಿದರು.

೧೬೮೩ರ ಜನವರಿ ತಿಂಗಳಲ್ಲಿ ಹೊರಡಿಸಿದ ಆಜ್ಞೆಯೊಂದು ಹಿಂದುಗಳು ಸಾಷಷ್ಟಿಯಲ್ಲಿ ವಾಸಮಾಡಲಾಗದೆಂದೂ ಮತ್ತು ಕ್ರಿಶ್ಚಿಯನ್ನರ ಹಿತಕ್ಕೆ ಬಾಧೆ ತರಬಲ್ಲ ಯಾವುದೊಂದನ್ನು ಕೊಂಡಿರಬಾರದೆಂದು ಹೇಳಿತು.

೧೬೬೦ರಲ್ಲಿ ಅರಸು ಫಿಲಿಫ್, ಹಿಂದುಗಳು ತಮ್ಮ ಹಕ್ಕನ್ನು ಚಲಾಯಿಸಲು ಯತ್ನಿಸಿದಲ್ಲಿ ಅವರನ್ನು ರಾಜ್ಯದಿಂದ ಹೊರಹಾಕಬೇಕೆಂದು ವೈಸ್‌ರಾಯ್ ಇವರಿಗೆ ಬರೆದು ತಿಳಿಸಿದ.

೧೬೮೪ರಲ್ಲಿ ಕ್ರಿಶ್ಚಿಯನ್ ಕೌನ್ಸಿಲ್ ಮತ್ತು ಪಾದ್ರಿಗಳು ಹಿಂದುಗಳ ಧಾರ್ಮಿಕ ಗ್ರಂಥಗಳನ್ನು ಸುಟ್ಟು ಹಾಕಿದರು. ಅದೇ ಸಮಯದಲ್ಲಿ ಧರ್ಮಪ್ರಚಾರದ ದೃಷ್ಟಿಯಿಂದ ಕೊಂಕಣಿಯ ಮಹತ್ವವನ್ನರಿತ ಪಾದ್ರಿಗಳು ಈ ಭಾಷೆಯನ್ನು ಸೈಂಟ್ ಪೌಲ್ ಕಾಲೇಜಿನಲ್ಲಿ ಕಲಿಯಲಾರಂಭಿಸಿದ್ದರು! ಇದು ಕೊಂಕಣಿ ಭಾಷೆಯ ವ್ಯಾಕರಣದ ಪುಸ್ತಕದ ರಚನೆಗೆ ಕಾರಣವಾಯಿತು. ಈ ಕಾಲೇಜಿನ ಉಪನ್ಯಾಸಕಾರನಾಗಿದ್ದ ಫಾದರ್ ಥೋಮಸ್ ಸ್ಟೀಫನ್ಸ್ 'ಕ್ರಿಶ್ಚಿಯನ್ ಪುರಾಣ'ದ ಲೇಖಕರಿದ್ದರು.

೧೬೮೪ರಲ್ಲಿನ ರಾಜಾಜ್ಞೆಯೊಂದು ಕೊಂಕಣಿ ಭಾಷೆಯ ಬಳಕೆಯನ್ನು ಪ್ರತಿಬಂಧಿಸಿತು; ಕೆಥೋಲಿಕ್ ಧರ್ಮದ ರಕ್ಷಣೆಗೆ ಮತ್ತು ರಾಜ್ಯದ ಕಾರ್ಯಕಲಾಪಗಳನ್ನು ನಿಭಾಯಿಸಲು ಪೋರ್ಚುಗೀಸ್ ಭಾಷೆಯನ್ನೇ ಬಳಸಬೇಕೆಂದು ಸಾರಲಾಯಿತು; ಇದನ್ನು ಕಾರ್ಯರೂಪಕ್ಕೆ ತರಲು ಮೂರು ವರ್ಷಗಳ ಕಾಲಾವಧಿಯನ್ನು ನಿರ್ಧರಿಸಲಾಯಿತು. ಈ ಆಜ್ಞೆಯನ್ನು ಉಲ್ಲಂಘಿಸುವಾತ ಕಾರಾವಾಸದ ಶಿಕ್ಷೆಗೆ ಬಾಧ್ಯನೆಂದು ಹೇಳಿತು.

ಬಾರ್ದೇಶ್‌ನ ಕ್ರಿಸ್ತೀಕರಣದ ಕಸುವು ಹದಿನಾರನೆಯ ಶತಮಾನಕ್ಕಿಂತಲೂ ಮಿಕ್ಕಿ ಹದಿನೇಳನೆಯ ಶತಮಾನದಲ್ಲಿ ಕಾಣಬಂದಿತು.

೧೭೧೫ರಲ್ಲಿ, ಕ್ರಿಶ್ಚಿಯನ್ ಬೋಯಿಗಳು ಹಿಂದುಗಳ ಪಲ್ಲಂಕಿಯನ್ನು ಹೊರುವುದನ್ನು ನಿರ್ಬಂಧಿಸಲಾಯಿತು. ಗೋವಾದ ಆರ್ಚ್ ಬಿಷಪ್‌ನ ಸೂಚನೆಯ ಮೇರೆಗೆ ಹಿಂದುಗಳನ್ನು ಗುತ್ತಿಗೆದಾರರಾಗಿ ನೇಮಿಸಬಾರದೆಂದು ಆಜ್ಞಾಪಿಸಲಾಯಿತು. ವೈಸ್‌ರಾಯ್ ಇದಕ್ಕೆ ಪ್ರತಿರೋಧ ತೋರಿದರೂ ಅದನ್ನು ಕಡೆಗಾಣಿಸಲಾಯಿತು.

೧೭೧೫ರಲ್ಲಿ ಜರಗಿದ ಪಾದ್ರಿಗಳ 'ಕಲಿಡೊ' (ಸಭೆ) ದಲ್ಲಿ ಹಿಂದುಗಳ ದೇವಸ್ಥಾನಗಳನ್ನು ಕೆಡವಿ ಅವುಗಳ ಸೊತ್ತನ್ನು ಜಪ್ತಿ ಮಾಡಬೇಕೆಂಬ ನಿರ್ಣಯ ಕೊಳ್ಳಲಾಯಿತು.

ಉನ್ನತಾಧಿಕಾರಿಗಳಲ್ಲೊಬ್ಬನಿದ್ದ ಆರ್ಚ್ ಬಿಷಪ್ ದೋಮ್ ಇಗ್ನೇಷಿಯೊ ದಿ ಸಾಂತಾ ಥೆರಸಾ ಹಿಂದು ಧರ್ಮದ ನಾಶಕ್ಕಾಗಿ ತನ್ನಿಂದ ಸಾಧ್ಯವಾದಷ್ಟು ಪ್ರಯತ್ನ ಮಾಡಿದ. ಕ್ರಿಶ್ಚಿಯನ್ ಕ್ಷೌರಿಕರು ಹಿಂದುಗಳ ತಲೆ, ಗಡ್ಡ ಬೋಳಿಸಬಾರದೆಂಬ ಆಜ್ಞೆ ಮತ್ತೆ ಹೊರಡಿಸಿದ. ೧೭೨೨ರ ಮೇ ತಿಂಗಳ ೨೨ರಂದು ಈತ ೨೦೦ ಸೈನಿಕರನ್ನು ಸೋಂಡೆ ರಾಜ್ಯದೊಳಕ್ಕೆ ಕಳುಹಿಸಿ ಅಲ್ಲಿನ ಮೂರು ದೇವಸ್ಥಾನಗಳನ್ನು ಉಧ್ವಸ್ತಗೊಳಿಸಿದ.

ಹೊಸದಾಗಿ ಗೆದ್ದುಕೊಂಡ ಪ್ರದೇಶಗಳಲ್ಲಿನ ಪರಿಸ್ಥಿತಿ

೧೭೬೩ರ ಜೂನ್ ತಿಂಗಳ ೫ರಂದು ಪೋರ್ಚುಗೀಸರು ಸೋಂಡೆಯ ಅರಸನಿಗಿತ್ತಿದ್ದ ಆಶ್ವಾಸನೆಯ ಮೇರೆಗೆ ಹಿಂದುಗಳು ತಮ್ಮ ಧರ್ಮವನ್ನಾಚರಿಸಲು ಸ್ವತಂತ್ರರಿದ್ದರು; ಅವರು ಹೊಸ ಕಟ್ಟಡಗಳನ್ನು ಕಟ್ಟಬಹುದಿತ್ತು. ಮತ್ತು ಹಳೆಯವುಗಳ ದುರಸ್ತಿ ಮಾಡಬಹುದಿತ್ತು. ಹೊಸದಾಗಿ ಗೆದ್ದ ಪೆಡ್ಣೆ, ಬಿಚೋಲಿ, ಸತಾರಿ, ಅಂತ್ರುಜ್, ಬಾರ್ಬಾಸೆಂ, ಪಂಚಮಹಾಲ್ ಮತ್ತು ಕಣಕಿನೆ ಇವು ತೀಸ್‌ವಾಡಿ, ಸಾಷಷ್ಟಿ ಮತ್ತು ಬಾರ್ದೇಶ್‌ಗಳಲ್ಲಿದ್ದ ಉತ್ಕಟ ಉತ್ಪೀಡನೆಯಿಂದ ಮುಕ್ತವಾಗಿದ್ದವು. ಈ ಭಾಗದ ನಿವಾಸಿಗಳು ಅಧಿಕಾರಿಗಳಿಂದ, ಕಟ್ಟಡಗಳೊಂದಿಗೆ ದೇವಸ್ಥಾನಗಳೂ ಒಳಗೂಡಿವೆಯೆಂಬುದರ ಸ್ಪಷ್ಟೀಕರಣೆ ಮತ್ತು ಆಶ್ವಾಸನೆಕೊಂಡರು.

'ಇನ್‌ಕ್ವಿಸಿಷನ್'ನ ನಿರ್ಮೂಲನೆ

ಪೋರ್ಚುಗೀಸರ ಖ್ಯಾತ ನಾಮ ರಾಜ್ಯ ತಂತ್ರಜ್ಞ ಮಾರ್ಕ್ವಿಸ್ ದಿ ಪಂಬಲ್, ಅಧಿಕಾರಿಗಳನ್ನು ನೇಮಿಸುವಲ್ಲಿ ಯುರೋಪೀಯ ಮತ್ತು ಭಾರತೀಯ ಕ್ರಿಶ್ಚಿಯನ್ ಇವರ ನಡುವೆ ಮಾಡಲಾಗುತ್ತಿದ್ದ ಬೇಧ ಭಾವಗಳನ್ನು ತೊಡೆದು ಹಾಕಿದ. ಮಾತ್ರ ಇದು ಹಿಂದುಗಳಿಗೆ ಅನ್ವಯಿಸದುಳಿಯಿತು. ೧೭೭೪ರ ಸೆಪ್ಟಂಬರ್ ತಿಂಗಳ ೨೦ರಂದು ಹೊರಡಿಸಿದ್ದ ಆಜ್ಞೆಯ ಪರಿಣಾಮ ಸ್ವರೂಪ ಸೈನಿಕಾಸೈನಿಕ ಅಧಿಕಾರಿಗಳು ಒಂದು ಸೇರಿ ಜೆಸ್ಯೂಟ್ಸ್‌ರನ್ನು ಒಟ್ಟುಗೂಡಿಸಿ ಗೋವಾದಿಂದ ಗಡಿಪಾರು ಮಾಡಿದರು.[೬] ೧೭೭೪ರಲ್ಲಿ 'ಇನ್‌ಕ್ವಿಸಿಷನ್' ಪದ್ಧತಿಯನ್ನು ಅಂತ್ಯಗೊಳಿಸಲಾಯಿತು.

೧೭೭೯ರಲ್ಲಿ 'ಇನ್‌ಕ್ವಿಸಿಷನ್'ನ ಕಾರ್ಯಕ್ರಮಗಳನ್ನು ಮತ್ತೆ ತೊಡಗಿಸಲಾಯಿತಾದರೂ ಬ್ರಿಟಿಷ್ ಸರಕಾರದ ಸಲಹೆಯ ಮೇರೆಗೆ ೧೮೧೨ರಲ್ಲಿ ಅದನ್ನು ಸ್ಥಾಯಿರೂಪದಲ್ಲಿ ಕೊನೆಗಾಣಿಸಲಾಯಿತು. ಆರ್ಚ್ ಬಿಷಪ್‌ನ ಆಕ್ಷೇಪ ದುರ್ಲಕ್ಷಿಸಿದ ವೈಸ್‌ರಾಯ್ ೧೮೧೨ರಲ್ಲಿ ಹಿಂದುಗಳಿಗೆ ಪಣಜಿ (ಪಂಜಿಮ್)ಯಲ್ಲಿ ಮಹಾಲಕ್ಷ್ಮಿಯ ದೇವಸ್ಥಾನವನ್ನು ಕಟ್ಟಲು ಪರವಾನಗಿ ಇತ್ತ.

೧೮೩೦ರಲ್ಲಿ ಪಾದ್ರಿಗಳು ಪೋರ್ಚುಗಲ್ಲಿನ ಅರಸನಿಗೆ ಬರೆದು ಹೊಸದಾಗಿ ಗೆದ್ದುಕೊಂಡ ಪ್ರದೇಶಗಳಲ್ಲಿ ದೇವಸ್ಥಾನಗಳ ನಿರ್ಮಾಣಕ್ಕೆ ಅನುಮತಿಯೀಯಬಾರದೆಂಬ ಆದೇಶ ಕೊಂಡರು.

ದೇವಸ್ಥಾನಗಳನ್ನು ಉಧ್ವಸ್ತಗೊಳಿಸಿದುದು :

ಪೋರ್ಚುಗೀಸರು ನಾಶಗೊಳಿಸಿದ ದೇವಸ್ಥಾನಗಳ ಈ ಮುಂದಣ ಯಾದಿಯನ್ನು (ಯಾದಿ ಅಪೂರ್ಣವಿದೆ) ಅವರ ದಾಖಲೆಗಳ ಆಧಾರಕೊಂಡು[೬] ತಯಾರಿಸಲಾಗಿದೆ.

ತೀಸ್‌ವಾಡಿ

ಗ್ರಾಮಗಳು	ದೇವಸ್ಥಾನಗಳು
ಅಗಾಶಿ (ಆಗಸೆಂ)	ಬರ್ನಾನಾಥ ಮತ್ತು ಕ್ಷೇತ್ರಪಾಲ
ಅಜೋಶಿ (ಅರೆಘೋರಿಖಿಮ್)	ಮಹಾಲಕ್ಷ್ಮಿ, ಸಪ್ತನಾಥ, ರವಳನಾಥ, ನಾರಾಯಣ[೮], ಸತಿ, ಭೂಮಿದೇವತ ಮತ್ತು ವನದೇವತ
ಬೈಂಗುಣಿ (ಬಂಗಿನಿಮ್)	ಸಾಂತೇರಿ
ಬತ್ತಿ (ಬೇತಿಮ್)	ಬಂಕಾದೇವಿ, ರವಳನಾಥ, ಸಾಂತೇರಿ, ಭೈರವ, ನಾರಾಯಣ[೯], ರಾಮನಾಥ ಮತ್ತು ಬೇತಾಳ.
ಕಾಲಾಪುರ (ಕಾಲಾಪುರ್)	ಸಾಂತೇರಿ, ಕಾಲ್ಬಾದೇವಿ, ಮಾಯಾ, ಬೇತಾಳ, ರಾಮನಾಥ, ರವಳನಾಥ, ಬ್ರಾಹ್ಮಣ ಪುರುಷ ಮತ್ತು ಪಂಚದೇವತ
ಕರಂಬಳ್ಳಿ (ಕರಂಬಲಿಮ್)[೧೦]	ಬೇತಾಳ, ಸಿದ್ಧನಾಥ, ಗ್ರಾಮ ಪುರುಷ, ಕ್ಷೇತ್ರಪಾಲ, ರವಳನಾಥ, ಸಾಂತೇರಿ, ಗಣೇಶ, ವನದೇವತ, ಭೂತವಿರಾಧರ, ಪೊಂಡೆ-ಗಾವ್ಕಾಲೊ-ಪುರುಷ, ಕುಣ್ಬಿ ಪುರುಷ, ಬ್ರಾಹ್ಮಣ ಪುರುಷ ಮತ್ತು ನಿರ್ವಾಸಿ ಪುರುಷ.
ಚಿಂಬೇಲ್	ಭಾಗವತ
ದೇವಗಿ (ದಂಕಿಮ್)	ರವಳನಾಥ, ನರಸಿಂಹ, ಸತ್ಪುರುಷ, ಬಾರಾಜನ ಮತ್ತು ಮೊಖಾವಿ[೧೧]
ಚೊಣ್ಣ (ಚೊಂಡಣ) (ಶೊರಾವ್)	ಗಣೇಶ, ರವಳನಾಥ[೧೨], ಬಂಕಾದೇವಿ, ಮಲ್ಲನಾಥ, ಭಾಗವತ, ದೇವಕಿ[೧೩] ಸತ್ಪುರುಷ, ಬಾರಾಜನ, ನಾರಾಯಣ ಕಾಂತೇಶ್ವರ, ಚಂದ್ರೇಶ್ವರ ಮತ್ತು

	ದಾದಾ ಸಾಂಖೋಳ್
ಕಾರೆ (ಕಾರ್ರೆಮ್)	ರವಳನಾಥ ಮತ್ತು ವನದೇವತ
ಖೊರ್ಲಿ (ಕೊರ್ಲಿಮ್)	ಸಿದ್ಧನಾಥ, ರವಳನಾಥ ಮತ್ತು ಸಾಂತೇರಿ
ಕುಗಿರೆ (ಕುಯ್ರಾ)	ರವಳನಾಥ, ರಾಮನಾಥ ಮತ್ತು ತೋರ್ಣಾವೀರ್
ಕುರ್ಸೆ (ಕುರ್ಸ್)	ಸಾಂತೇರಿ ಮತ್ತು ರವಳನಾಥ
ದ್ವಾಡಿ (ದ್ವಾರ್‌ಮದಾರ್)	ಗ್ರಾಮ ಪುರುಷ, ನಾರಾಯಣ, ಭೈರವ, ರವಳನಾಥ, ದ್ವಾತಾ, ಸಪ್ತನಾಥ [೧೪], ಸತಿ, ಭಾಗವತ, ಬಂಕಾದೇವಿ, ವಾಚಾನಾಥ ಮತ್ತು ವೀರ
ಗೊಲಾಟಿ (ಕೊಲ್ತಿಮ್)	ಖಾಪ್ರಿ ದೇವ [೧೫] ಗ್ರಾಮ ಪುರುಷ, ರವಳನಾಥ, ಮತ್ತು ಸಾಂತೇರಿ.
ನವೇಲಿ (ನವೇಲಿಮ್)	ರವಳನಾಥ ಮತ್ತು ಗಣೇಶ [೧೬]
ದಿವಾಡಿ (ದಿವಾರ್)	ಭೈರವ, ಮಸ್ಕ್ - ನಾಶಿನೆ, ಮೊಖಾವಿ ಮತ್ತು ನಿರ್ಗುಣ
ದುರ್ಗಾವಾಡಿ (ದುರ್ಗಾವರಿಮ್)	ಕ್ಷೇತ್ರಪಾಲ ಮತ್ತು ರವಳನಾಥ
ಎಲ್ಲೆ (ಎಲಾ)	ದುರ್ಗಾವತಿ ಮತ್ತು ಗಣೇಶ [೧೭]
ಗೊವ್ಳಿ (ಗನ್ಸಿಮ್)	ನಾರಾಯಣ, ದುರ್ಗಾವತಿ [೧೮] ಮತ್ತು ಭವನಾಥ
ಮೌಳೆ (ಗೊವಾಲಿಮ್ - ಮೌಲ)	ಕ್ಷೇತ್ರಪಾಲ, ರವಳನಾಥ ಮತ್ತು ಸಾಂತೇರಿ
ವ್ಹಡ್ಲೆ ಗೋವಾ (ಗೋವಾ ವೆಲ್ಯಾ)	ಕಾಲಭೈರವ, ಚರದೇಶ್ವರಿ, ರವಳನಾಥ, ಗೋವಾನಾಥ (ಗೋವೇಶ್ವರ) ಮತ್ತು

	ಗದಗೇಶ್ವರ (ಗಲಗುಹೇಶ್ವರ)
ಜುವೆ (ಜವಾ)	ದೇವತ, ರವಳನಾಥ, ಸಾಂತೇರಿ ಕ್ಷೇತ್ರಪಾಲ[೧೯] ಗ್ರಾಮ ಪುರುಷ ಮತ್ತು ಮಲ್ಲನಾಥ
ಮಂಡೂರ್	ರವಳನಾಥ, ದುರ್ಗಾದೇವಿ, ನಾರಾಯಣ ಮತ್ತು ಗ್ರಾಮ ಪುರುಷ
ಮೆರ್ಕುಂಡಿ (ಮರ್ಕುರಿಮ್)	ಕ್ಷೇತ್ರಪಾಲ ಮತ್ತು ಭೂತನಾಥ
ವ್ಹಡ್ಲೆ ಮೊರಂಬಿ (ಮರುಂಬಿಮ್-ಗ್ರಾಂದೆ)	ಮಹಾದೇವ, ಸಾಂತೇರಿ, ಮಹಾಲಕ್ಷ್ಮಿ, ರವಳನಾಥ, ಬೇತಾಳ, ಸತಿ ಮತ್ತು ಮೈತ್ರಗಡ್ಡೊ
ಧಾಕ್ಟಿ ಮೊರಂಬಿ (ಮರುಂಬಿಮ್-ಪಿಕೆನೊ)	ರವಳನಾಥ, ಕ್ಷೇತ್ರಪಾಲ ಮತ್ತು ವನದೇವತ
ಮುರ್ಡೆ (ಮುರ್ಡಾ)	ಕ್ಷೇತ್ರಪಾಲ ಮತ್ತು ಬ್ರಹ್ಮೆ
ವ್ಹಡ್ಲೆ ನೆವರ (ನುರಾವ್-ಗ್ರಾಂದೆ)	ಸಾಂತೇರಿ,ಈಶ್ವರ,ರವಳನಾಥ, ಚೌಕದೇವ ಮಾಯಾಕಾವುರ್, ಭವನಾಥ, ಮಹಾದೇವ ಮತ್ತು ಗ್ರಾಮ ಪುರುಷ.
ಧಾಕ್ಟಿ ನೆವರ (ನುರಾವ್-ಪಿಕೆನೊ)	ರವಳನಾಥ, ಸಾಂತೇರಿ ಮತ್ತು ಗ್ರಾಮ ಪುರುಷ
ಗ್ರೇರೆ (ಒರಾರಾ)	ರವಳನಾಥ
ಪನವೇಲ್ (ಪನೆಲಿಮ್)	ಭವಾನಿ, ಸಾಂತೇರಿ ಮತ್ತು ಬಾರಾಜನ
ಸರ್ದೊಣ (ಸಿರಿದಾವ್)	ಗ್ರಾಮಪುರುಷ ಮತ್ತು ರಾಮನಾಥ
ತಳವಲಿ (ತಲುಲಿಮ್)	ಗ್ರಾಮ ಪುರುಷ, ರವಳನಾಥ, ಸಾಂತೇರಿ[೨೦] ಮತ್ತು ಈಶ್ವರ
ತಲೆಗಾಂವ್ (ತಲಗೋವಾ)	ಬೇತಾಳ, ರಾಮನಾಥ, ರವಳನಾಥ ಮತ್ತು ಸಾಂತೇರಿ
ವೇಣಾಕ್ಷ (ವಾನೆಸ್)	ಬಂಕಾದೇವಿ

ಸಾಷಷ್ಟಿ

ಅಡ್ಸುಲಿ	ಕ್ಷೇತ್ರಪಾಲ
(ಅಡ್ಸುಲಿಮ್)	
ಅಂಬೇಲಿ	ಮಹಾದೇವ, ದುರ್ಗಾದೇವಿ, ಕಾಲಭೈರವ ಮತ್ತು
(ಅಂಬೇಲಿಮ್)	ಗ್ರಾಮ ಪುರುಷ
ಅಖೆ	ಸಿದ್ಧನಾಥ, ಗ್ರಾಮಪುರುಷ,
(ಅಖೆಮ್)[೨೦]	ಮರ್ಕೋದೇವ ಮತ್ತು ಕಾಲವೀರ
ಆರೋಸಿ	ಭೋಗೇಶ್ವರ[೨೧], ಗ್ರಾಮ ಪುರುಷ,
(ಆರೋಸಿಮ್)	ಬೇತಾಳ, ಮಹಾದೇವ ಮತ್ತು ಸಾತ್ ಜಣೆ
	(ಸಪ್ತ ಮಾತೃಕ)
ಅಸೋಲಿನ್	ಬೇತಾಳ, ಸಾಂತೇರಿ, ಪುರುಷ ಮತ್ತು
(ಅಸ್ಸೊಲಿನ)	ದೆಖೆಚೊ
ಬನವಲಿ	ಬನೇಶ್ವರ, ಸಂಕೇಶ್ವರ, ನಾರಾಯಣ,
(ಬೆನೌಲ್ಲಿಮ್ [೨೨])	ಭವಕಾಂತರೋಜಾ ದೇವಿ ಮತ್ತು ಸಾಂತೇರಿ.
ಬೇತಾಳಭಟ್ಟಿ	ಆಗ್ಯೊ-ಬೇತಾಳ, ಗೋರಖ್,
(ಬೇತಾಲ್ ಬಾತಿಮ್)	ಮಹಾದೇವ, ಗಣೇಶ, ಸಾಂತೇರಿ,
	ಗಾವ್‌ಪುರುಷ, ಖೆಳೈ-ವೀರ್,
	ಬಾರಾಜನ, ದಾದ್, ಗೋಣು ಗ್ಯೊಂಚೊ
ಕಲಾಟ	ಸಾಂತೇರಿ ಮತ್ತು ಮಹಾದೇವಿ
(ಕಲತ)	
ಕಾಣೆ	ಕ್ಷೇತ್ರಪಾಲ
(ಕಾನಾ)	
ಕಾಮುರ್ಲಿ	ಕಾಮಾಖ್ಯ, ಭೈರವ, ಕಮಲೀಶ್ವರ
(ಕರ್ಮೊರ್ಲಿಮ್)	ಮತ್ತು ಮಾರ್ಸಿಂಕೊ.
ಕನ್ಸಾಲಿ	ನಾಗನಾಥ, ಸಾಂತೇರಿ ಮತ್ತು ಪುರುಷ
(ಕನ್‌ಸೌಲಿಮ್)	
ಕರ್ಮೋಣೆ	ಮಹಾದೇವ, ಆಗ್ಯೊ-ಬೇತಾಳ
(ಕರ್ಮೊನ)	ಮತ್ತು ಪುರುಷ ಉದಿಯೊ
ಕವಳೋಶಿ	ಕಪಿಲೇಶ್ವರ, ಕ್ಷೇತ್ರಪಾಲ

(ಕವೆಲೊಸ್ಸಿಮ್)	ನಂಬಾಯಿ ಮತ್ತು ನಂದೋಳಿ
ಕಾವೋರಿ	ನಾಗನಾಥ ಮತ್ತು ವಿಶ್ವನಾಥ
(ಕವೊರಿಮ್)	
ಚಾಂದೋರ್	ಬಸವರಾಜ
ಚಿಚಲಿ	ನಾರಾಯಣ, ಈಶ್ವರ, ಸಾಂತೇರಿ,
(ಚಿಕಲಿಮ್)[೨೪]	ಬಾರಾಜನ, ಗಾವ್-ಪುರುಷ,
	ಚೋವೀಸ್‌ವೀರ್ ಮತ್ತು ಪ್ರೊಡಕೋದೇವ್
ಚಿಕೊಳ್ಣೆ	ಸಾಂತೇರಿ
(ಚಿಕೊಲ್ನ)	
ಚಿಂಚೋಣ	ಬೇತಾಳ, ಸಾಂತೇರಿ, ಬಂಕಾದೇವಿ
(ಚಿಂಚಿನಿಮ್)	ಆಗ್ಯೊ ಬೇತಾಳ
ಕುವೇಳಿ	ವಿಜ್ಞಾನೇಶ್ವರ, ಮಹಾದೇವ
(ಕೊಕ್ಲಿಮ್)	ಸಾಂತೇರಿ, ಗಾವ್ ಪುರುಷ, ವೈಜಾರಿ
	(ಇಷ್ಟಗಣೇಶ)
ಕೊಳ್ವೆ	ಮಹಾಲಕ್ಷ್ಮಿ, ಭಾಲೇಶ್ವರ,
(ಕೊಲ್ವ)[೨೫]	ನಾರಾಯಣ, ಬೇತಾಳ, ಭೈರವ, ರವಳನಾಥ
	ಮತ್ತು ಮುಕ್ತೇಶ್ವರ
ಕುಟ್ಠಳಿ	ಮಾಂಗನಾಥ (ಮಂಗೇಶ)[೨೬]
(ಕುಶಸ್ಥಳಿ)	ಸಾಂತೇರಿ, ಖೇಮ್ನುಬುವೀರ್(?), ಕಪಿಲೇಶ್ವರ,
	ನಾರಾಯಣ, ಭಗವತಿ, ಗೋಪಿನಾಥ ಮತ್ತು
	ಚಂದ್ರನಾಥ
ಕುಡಥರಿ	ಸಾಂತೇರಿ, ನಾರಾಯಣ, ಚಂದೇಶ್ವರಿ, ಕ್ಷೇತ್ರಪಾಲ,
(ಕುರ್ತೊರಿಮ್)[೨೭]	ಸಾಂತಿಲ್ಯೊ, ರವಳನಾಥ, ಚಂದ್ರನಾಥ,
	ದುರ್ಗಾದೇವಿ, ಭಗವತಿ, ಸುಲಭೇಶ್ವರ,
	ಮಹೇಶ್ವರ, ಗಣೇಶ ಮತ್ತು ನಶೆನಾಥ
ಕುಣ್ಕಲ್ಲಿ	ಸಾಂತೇರಿ ಮತ್ತು ಮಹಾದೇವ
(ಕುಂಕೊಲಿಮ್)	
ದಾಭೋಳಿ	ಸಾಂತೇರಿ, ಈಶ್ವರ, ಗಾವ್‌ಪುರುಷ,
(ದಾಬೋಲಿಮ್)	ಕ್ಷೇತ್ರಪಾಲ, ಭಗವತಿ ಮತ್ತು ಬಾರಾಜನ
ದ್ರಾಮಾಪುರ	ಮಹಾದೇವ, ನಾರಾಯಣ, ಬೇತಾಳ, ಭೈರವ,

	ಕ್ಷೇತ್ರಪಾಲ, ದುರ್ಗಾದೇವಿ, ಸಾಂತೇರಿ, ಗಾವ್‌ಪುರುಷ ಮತ್ತು ಸುಂತಾಪರವ್ಲೊ.
ದೆವ್ಲೊರ್ಲಿ (ದಾವ್ಲೊರ್ಲಿ)	ಭಗವತಿ, ಬಾರಾಜನ ಮತ್ತು ಕುಂತಿ
ದೇವಾಸುರ್ (ದೆವು ಸ್ವಾ)	ಚಿಂಚಣೆನಾಥ್, ಭೈರವ, ದೋಕಾನಾಥ ಮತ್ತು ಪುರುಷ
ದಿಕಾರ್ಪಲೆ	ಸಾಂತೇರಿ ಮತ್ತು ಬಾರಾಜನ
ದುಂಕೊಲಿಮ್	ಬೇತಾಳ ಮತ್ತು ಮಹಾದೇವ
ಗಾಂದೋಳಿ (ಗಾಂದವ್ಲಿಂ)	ದುರ್ಗಾದೇವಿ
ಗೊನ್ಸಾವೆ (ಗೊನ್‌ಸ್ವಾ)	ಗೌತಮೇಶ್ವರ
ಗಿರ್ದೋಳಿ (ಗಿರ್ದೊಲಿಮ್)	ರವಳನಾಥ, ವರ್ಬದೇವ, ಕ್ಷೇತ್ರಪಾಲ ಮತ್ತು ನಾರಾಯಣ
ಇಸ್ಸಾರಿಷಿ (ಇಸ್ರೊರ್ಸಿಮ್)	ಸಾಂತೇರಿ ಮತ್ತು ಬಾರಾಜನ
ಲೊಟ್ಲಿ (ಲುಲೆಮ್)	ರಾಮನಾಥ [೨೮] ಬೇತಾಳ ಗ್ರಾಮಪುರುಷ, ಭಗವತಿ, ಸಾಂತೇರಿ, ನಾರಾಯಣ, ಕಾರ್ಯ-ಸಾಂತೇರಿ, ಸಿದ್ಧನಾಥ, ದೈವ ಮತ್ತು ವಾಮನ [೨೯]
ಮಖಾಜನ (ಮಕಾಸಾನಾ)	ರವಳನಾಥ, ದುರ್ಗಾದೇವಿ, ನಾರಾಯಣ, ಕೇಶ್ವರ (ಇಷ್ಟಶಿವ) ಮತ್ತು ಕ್ಷೇತ್ರಪಾಲ
ಮಜೋರ್ಡಾ	ಮಹಾಮಾಯಾ
ಮಡ್ಗಾಂವ್ (ಮುರ್ಗಾಂವ್) [೩೦]	ದಾಮೋದರ, ಚಂದ್ರನಾಥ, ನಾರಾಯಣ, ಪತುರ್ದೇವ, ಚಾಮುಂಡೇಶ್ವರಿ, ಸಾಂತೇರಿ, ಮಖಾಜನ, ಮಹಿಷಾಸುರ ಮರ್ದಿನಿ, ಮಲ್ಲವೀರ್, ಭಗವತಿ, ಈಶ್ವರ ಮತ್ತು ಗ್ರಾಮ ಪುರುಷ
ಮುರ್ಗಾಂವ್	ವೈದ್ಯನಾಥ, ಬಾರಾಜನ

(ಮರ್ಮಗೋವಾ)	
ನಾಗಾವೆ	ಸಾಂತೇರಿ, ಭಗವತಿ, ಈಶ್ವರ,
(ನಗೊವಾ)[೧೦]	ಗ್ರಾಮಪುರುಷ, ನಾರಾಯಣ, ರವಳನಾಥ ಮತ್ತು ಬಾರಾಜನ
ವೊರ್ಲಿ	ಗಂಟರ್ಣೇಶ್ವರ, ಪುರುಷ, ಕುಕುಂಬ, ವೆಮ್ಮದೇವ,
(ಒರ್ಲಿಮ್)	ಮಹಿಷಾಸುರ ಮರ್ದಿನಿ ಮತ್ತು ನಾರಾಯಣ
ಪಳ್ಳಿ	ದುರ್ಗಾದೇವಿ, ಈಶ್ವರ, ಗಾವ್-ಪುರುಷ, ಆದಿ
(ಪಾಲೆ)	ಪುರುಷ, ಧಾರೇಶ್ವರ, ನಾರಾಯಣ, ವಾಟಾಚಾರೊ ಮತ್ತು ಗೋರ್ಚಾರೊ
ಕೆಳೋಶಿ	ಸಾಂತೇರಿ, ನಾರಾಯಣ, ಈಶ್ವರ,
(ಕೆಲೊಸ್ಸಿಮ್)[೧೨]	ಗಾವ್-ಪುರುಷ, ಗಣೇಶ ಮತ್ತು ಭಾಗವತ
ರಾಯ	ರಾಯೇಶ್ವರ, ಕಾಮಾಕ್ಷಿ,
(ರೈಯ)[೧೧]	ಭಾಗವತ, ನಾರಾಯಣ ಮತ್ತು ವಟಾಂಬಿಕ
ರಸ್ಸೆ	ತ್ರಿವಿಕ್ರಮ, ನಾರಾಯಣ ಮತ್ತು
(ರಸ್ಯೆಂ)	ಈಶ್ವರ
ಸಂಖಾವಳ	ಸಾಂತೇರಿ, ಈಶ್ವರ, ಗಾವ್-ಪುರುಷ,
(ಸಾನ್ವಿವಲಿ)[೧೪]	ದರೋವಾಝೂಸಿನಿ (ವಿಜಯದುರ್ಗಾ ?) ನಾರಾಯಣ, ಭಗವತಿ, ಆತೋಶಿಣೆ, ನರಸಿಂಹ ಮತ್ತು ಪರಮ-ಮೇದ.
ಸರೋಜೊರ	ನಾಗನಾಥ, ಬೇತಾಳ, ಸಾಂತೇರಿ
(ಸರ್ಜೊರೀರ)	ದುರ್ಗಾದೇವಿ ಮತ್ತು ಕಾಲಪುರುಷ
ಸೆರೌಲಿಮ್	ಸಾಂತೇರಿ, ಮಹಾದೇವ ಮತ್ತು ಪೇವನ್‌ದೇವಿ.
ಸಾರಂಬತ್ತಿ	ಸಾಂತೇರಿ ಮತ್ತು ಸಿದ್ಧನಾಥ
(ಸೆರ್ನಂಬತಿ)	
ತಳೊಲಿ	ಸಿದ್ಧನಾಥ, ಕುರ್ನೊ, ಬೇತಾಳ, ಸಾಂತೇರಿ ಮತ್ತು
(ತಲೌಲ್ಲಿಮ್)	ಜೋಗ್ಯೆ ಬಾಲ್‌ಗಂದಾರ್
ವರ್ಡೆ	ಸಾಂತೇರಿ, ನಾರಾಯಣ, ಈಶ್ವರ ಮತ್ತು ಬಂಡಿಚೊ
(ವಡ್ಡೆಂ)	
ವನೆಲಿಮ್	ಬಾರಾಜನ, ಚೋವೀಸ್ ಏರ್ ಮತ್ತು ಘೋಡೇಶ್ವರ

ವರ್ಕೆ (ವರ್ಕಾ)	ಮಹಾದೇವ, ಪುರುಷ, ಭೈರವ, ಸಾಂತೇರಿ ಮತ್ತು ವೀರ್
ವೆಲ್ಕೊ (ವಲ್ಕಾವ್)	ಮಹಾದೇವ, ವಲ್ಲಭದೇವಿ ಮತ್ತು ಗಾವ್ ಪುರುಷ
ವೇಲಿಮ್	ಸಾಂತೇರಿ, ಬೇತಾಳ ಮತ್ತು ಭೈರವಿ
ವೆರ್ಣೆ [೬೫]	ಸಾಂತೇರಿ, ಮ್ಹಾಳಸಾ, ನಾರಾಯಣ ಮತ್ತು ಭಗವತಿ
ಉತ್ರೊರ್ಡಾ	ಗ್ರಾಮ ಪುರುಷ, ವೆರ್ಣಾದೇವಿ, ಮತ್ತು ಲಂಬೇಶ್ವರ
ಉತ್ರೊರ್ಡಾ (?)	ಗ್ರಾಮ ಪುರುಷ, ಬೇತಾಳ, ವಾಗ್ರೊ, ಮಹಾದೇವ, ಕುಳಾವಿ (ಕುಲವೀರ)
ವೆರೋಡೆ	ದುರ್ಗಾದೇವಿ ಮತ್ತು ಮಹಾದೇವಿ
	ಬಾರ್ದೇಶ್
ಅಲದೋಣೆ (ಅಲ್ದೋನ) [೬೬]	ಭಗವತಿ, ರವಳನಾಥ, ನಾರಾಯಣ, ಸಾಂತೇರಿ, ಸಿದ್ಧನಾಥ, ಭೂತನಾಥ, ದದ್ವಾ, ಸತಿ ಮತ್ತು ಪಾವುಲ್‌ನಾಥ್
ಅನಾರ್ಝಿಂ (ಅಂಜುನ)	ಬೇತಾಳ, ಸಾಂತೇರಿ ಮತ್ತು ಭಗವತಿ
ಅರ್ಪೊರೆ (ಅರ್ಪೂರ)	ಸಾಂತೇರಿ, ಬೇತಾಳ, ವನದೇವತ ಮತ್ತು ಚೌರಂಗೊ
ಅಸ್ಸಾಗಾಂವ್ [೬೭] (ಅಸ್ಸಗಾವ್)	ಭೂಮಿ ದೇವತ, ಭಗವತಿ, ಚಾಂತಿಯಾವರೀಲ್, ರವಳನಾಥ, ದೇವಿ-ಸತಿ, ಸಾಂತೇರಿ, ಕ್ಷೇತ್ರಪಾಲ, ಮಲ್ಲಿಕಾರ್ಜುನ, ಲಿಂಗ ಮತ್ತು ಪೂರ್ವೇಚೊ-ರವಳನಾಥ
ಅಸನೋರೆ (ಅಸ್ಸನೋರ)	ಸಾಂತೇರಿ, ರವಳನಾಥ, ಕ್ಷೇತ್ರಪಾಲ, ವನದೇವತ ಮತ್ತು ಪೂರ್ವಾಚಾರಿ
ಬಸ್ತೋರೆ (ಬಸ್ತೋರ)	ಸಾತ್-ಮಾ (ಸಪ್ತಮಾತೃಕ), ನಾರಾಯಣ, ಮಲ್ಹಾರ್‌ದೇವ, ಒಸ್ಸೊಲ್ ಗಾರೊಂಬಾ (?) ಮತ್ತು ಸಾಂತೇರಿ
ಕಲಂಗುಲೆ	ಸಾಂತೇರಿ, ಶೀತಲನಾಥ, ಸಪ್ತನಾಥ, ಬ್ರಹ್ಮನಾಥ, ಮತ್ತು ಬೇತಾಳ
ಕಾರ್ಮೋರ್ಲಿಂ	ಬೇತಾಳ, ಅಜದೇವಿ ಮತ್ತು ಮೌಳಿ

ಖಂಡೋಳಿ (ಖಂದೊಲಿಮ್)	ನಾರಾಯಣ, ಸಾಂತೇರಿ, ಭೈರವ, ಗದಗೇಶ್ವರ ಮತ್ತು ರವಳನಾಥ
ಕಾಂತಾ (ಕಂಕಾ)	ನಾರಾಯಣ ಮತ್ತು ಕ್ಷೇತ್ರಪಾಲ
ಕೊಳವಲಿ (ಕೊಲ್ವಲೆ)	ರವಳನಾಥ, ಭೈರವ, ರಾಮನಾಥ, ದದ್ದ ಮತ್ತು ಗೌತಮ [೧೮]
ಚುಂಚೆಲಿಮ್	ಬಾರಾಜನ
ಕಾರ್ಲಿಮ್	ಸಾಂತೇರಿ ಮತ್ತು ಅಜನಾಥ
ಗಿರಿಂ	ಭಗವತಿ, ನಾರಾಯಣ, ವನದೇವತ, ಸತಿ ಮತ್ತು ಸಾಂತೇರಿ
ಮ್ಹಾಪ್ಸಾ (ಮಾಪುಸ)	ಸಾಂತೇರಿ ಮತ್ತು ಗಣೇಶ
ಮರ್ಶೆ (ಮರ್ನ್ಯ)	ಬೇತಾಳ [೧೯], ಸಾಂತೇರಿ ಮತ್ತು ರವಳನಾಥ
ಮೊಯ್ರಾ [೨೦]	ರವಳನಾಥ, ಸಾಂತೇರಿ, ಮಹಾದೇವ, ಗ್ರಾಮಪುರುಷ, ವಂತಿಪುರುಷ, ಸತ್ಪುರುಷ ಮತ್ತು ದದ್ದ
ನಾಚಿನೊಲ	ರಾಮನಾಥ, ಮಹಾಲಕ್ಷ್ಮಿ, ಗ್ರಾಮಪುರುಷ, ರವಳನಾಥ, ಬೇತಾಳ ಮತ್ತು ಗೋಪಿನಾಥ
ನಾಡೋರ (ನಡೊರಾ)	ಕ್ಷೇತ್ರಪಾಲ, ಭೂತನಾಥ, ದದ್ದ ಮತ್ತು ಘೊಟಿಯೊ
ನೆರ್ವೆ	ಸಾಂತೇರಿ [೨೧], ಕ್ಷೇತ್ರಪಾಲ, ರವಳನಾಥ ಮತ್ತು ಬೇತಾಳ
ನಾಗೊಯೆ (ನಗೊವಾ)	ಬೇತಾಳ, ರವಳನಾಥ ಮತ್ತು ನಾರಾಯಣ.
ಒಳೊವಲಿ (ಒಲೌಲ್ಲಿಮ್)	ನಾರಾಯಣ, ಸೋಮನಾಥ, ಗಣೇಶ ಮತ್ತು ರವಳನಾಥ
ಒರ್ಡೆ (ಔರ್ದ)	ಭವನಾ
ಒಸ್ಸೆಲೆ (ಒಶೆಲ್)	ಸಾಂತೇರಿ [೨೨]
ಪಾಲಿಯೆಮ್	ಸಾಂತೇರಿ, ರಾಮನಾಥ ಮತ್ತು ಪುರುಷ

ಪರ್ರೆ	ಗ್ರಾಮ ಪುರುಷ ಮತ್ತು ದೇವ
(ಪರ್ರಾ) [೪೩]	
ಪಿಲೇರ್ನ್ [೪೪]	ಸಾಂತೇರಿ, ರವಳನಾಥ, ರಾಮನಾಥ, ಭೈರವ, ಬಂಕಾದೇವಿ, ಬೇತಾಳ ಮತ್ತು ಹೇಮನಾಥ
ಪಿರ್ಮೆ	ಸಾಂತೇರಿ, ರವಳನಾಥ, ಲಿಂಗ ಮತ್ತು ನಲಿಕಾದೇವಿ
ಪೊಂಪುರ್ಪೆ	ಮಲ್ಲಿಕಾರ್ಜುನ, ರವಳನಾಥ,
(ಪೊಂಪುರ್ಪ) [೪೫]	ಗ್ರಾಮ ಪುರುಷ, ಸಾಂತೇರಿ, ವನದೇವತ, ಸೌರನಾಥ ಮತ್ತು ಗಣೇಶ
ಪುನೋಳೆ	ಗಣೇಶ, ಕಪಿಲೇಶ್ವರ, ರವಳನಾಥ, ವನದೇವತ
(ಪುನೊಲ)	ಮತ್ತು ಬೇತಾಳ
ರಿವೊರೆ	ಕಾಲ್ವಾದೇವಿ
(ರಿವೊರೊ)	
ಕಾಳಿಗಾಂವ್	ಬೇತಾಳ
ಸಾಂಗೊಲ್ಡೆಮ್	ಸಾಂತೇರಿ, ನಾರಾಯಣ, ಗಣೇಶ, ಮತ್ತು
(ಸಾಂಗೊಲ್ಡ) [೪೬]	ರವಳನಾಥ
ಸಿಂಕೆರಿಮ್ [೪೭]	ಮಹಾದೇವ, ಸತಿ ಮತ್ತು ಗುಡುಗೇಶ್ವರ
ಸಿವೋಲಿ	ಸಾಂತೇರಿ, ಸತಿ, ಗಣೇಶ ಮತ್ತು ರವಳನಾಥ
(ಸಿವೊಲಿಮ್) [೪೮]	
ಸೊಯ್ಕೆ	ಕಾಲ್ಬಾದೇವಿ ಮತ್ತು ಬೇತಾಳ
(ಸೈಕೆಮ್)	
ಸಿರುಳೆ	ಬೇತಾಳ [೫೦], ನರುಣ,
(ಸಿರುಲ) [೪೯]	ಧಾಕ್ಟಾವನ ದೇವತ, ರವಳನಾಥ, ವ್ಹಡ್ಲಿವನ ದೇವತ, ಸಿದ್ಧನಾಥ, ಮಹಾಲಕ್ಷ್ಮಿ, ಗ್ರಾಮಪುರುಷ, ಸೋಮನಾಥ, ವೀರ, ಕಾಲಪುರುಷ, ಕ್ಷೇತ್ರಪಾಲ, ಸಾಂತೇರಿ, ನಾಗನಾಥ, ಮಲ್ಲನಾಥ, ಭಗವತಿ, ಮಹಾಕಾಳಿ ಮತ್ತು ಗೋಪೇಶ್ವರ
ತಿವಿಮ್	ರವಳನಾಥ, ಸೋಮನಾಥ, ಬೇತಾಳ ಮತ್ತು ಪೂರ್ವಾಚಾರೆ
ಉಕ್ಕೆಸೆ	ರವಳನಾಥ
(ಉಕಾಸೆಮ್)	
ವೆರ್ತೆ	ಸಾಂತೇರಿ, ನಾರಾಯಣ, ರವಳನಾಥ, ವರದೇಶ್ವರ,
(ವೆರ್ಲ)	ನಾಗನಾಥ ಮತ್ತು ಭಗವತಿ

ಇದು ದೊಡ್ಡ ವಾಡಿಯೊಂದಾಗಿದ್ದರೂ ಅಪೂರ್ಣವಾದುದಾಗಿದೆ. ಇವೆಲ್ಲವೂ ಬಹುತೇಕ ಸಾರಸ್ವತರಿಗೆ ಸಂಬಂಧಿಸಿದ್ದುವಾಗಿವೆ. ಗೋವಾದ ಹೆಚ್ಚಿನ ಮುಖ್ಯ ಗ್ರಾಮಗಳಲ್ಲಿ ದೊಡ್ಡ ದೇವಸ್ಥಾನವೊಂದಿರುತ್ತಿದ್ದು ಅದು ಅನೇಕ ಪೂರಕ ದೇವಸ್ಥಾನಗಳನ್ನು ಕೊಂಡಿರುತ್ತಿತ್ತು. ತೀಸ್‌ವಾಡಿ, ಸಾಷಷ್ಟಿ ಮತ್ತು ಬಾರ್ದೇಶ್‌ಗಳಲ್ಲಿನ ಎಲ್ಲೊಂದು ದೇವಸ್ಥಾನಗಳನ್ನು ನಾಶಗೊಳಿಸಲಾಗಿತ್ತು.

ಹಳೆಯ ರಾಜಧಾನಿ ವೆಲ್ಹಾ ಗೋವಾದ 'ರುವಾ ದಿ ರೈಬಾ'ದಲ್ಲಿನ ಭವ್ಯ ಹಾಗೂ ಪ್ರಖ್ಯಾತವಿದ್ದ ಪ್ರಧಾನ ಇಗರ್ಜಿ, ಉಧ್ವಸ್ತಗೊಳಿಸಲಾದ ಹಿಂದೂ ದೇವಾಲಯವೊಂದರ ಅವಶೇಷದ ಮೇಲಕ್ಕೆ ೧೬೦೮ರಲ್ಲಿ ಸ್ಥಾಪಿಸಲ್ಪಟ್ಟಿತು. ಸೈಂಟ್ ಫ್ರಾನ್ಸಿಸ್ ಶವಿಯೆರ್ ಇವರ ಮೃತದೇಹ ಕೊಂಡ, ವೆಲ್ಹಾ ಗೋವಾದಲ್ಲಿನ ಚರ್ಚ್ ಆಫ್ ಬೋಮ್ ಜೀಸಸ್, ೧೬೦೮ರಲ್ಲಿ ಹಿಂದೂ ದೇವಾಲಯವೊಂದರ ಅವಶೇಷಗಳ ಮೇಲಕ್ಕೆ ನಿರ್ಮಿಸಲ್ಪಟ್ಟಿತು. ಸುಂದರವಾದ ಗುಮ್ಮಟಕೊಂಡ ರೋಮ್‌ನಲ್ಲಿನ ಸೈಂಟ್ ಪೀಟರ್ಸ್ ಚರ್ಚನ್ನು ಹೋಲುವ ಚರ್ಚ್ ಆಫ್ ಸೈಂಟ್ ಕಾಯತ್ತಾನ್, ೧೬೪೦ ಇಟಲಿಯ ಕ್ರೈಸ್ತ ಭಿಕ್ಷುಗಳು ಶಂಭುವಿನ ದೇವಸ್ಥಾನದ ಅವಶೇಷಗಳ ಮೇಲಕ್ಕೆ ಕಟ್ಟಿದ್ದುವಾಗಿದೆ. ಈ ದೇವಾಲಯದ ಗುಮ್ಮಟದ ಕೆಳಗಣ ತಳ ಭಾಗದಲ್ಲಿ ಸಣ್ಣ ರಂಧ್ರಕೊಂಡ ಚಪ್ಪಡಿಯಿಂದ ಮುಚ್ಚಲ್ಪಟ್ಟ ಬಾವಿ ಅಥವಾ ಪುಷ್ಕರಣಿಯೊಂದಿದ್ದು, ಪವಿತ್ರವಿದ್ದ ಈ ಪುಷ್ಕರಣಿ (ಅಥವಾ ಬಾವಿ)ಯ ನೀರಿನಿಂದ ಹಿಂದುಗಳು ಸ್ನಾನ ಮಾಡುತ್ತಿದ್ದರೆನ್ನಲಾಗುತ್ತದೆ. ಹಿಂದುಗಳಲ್ಲಿನ ಕೆಲವರು ಈಗಲೂ ಈ ಪುಷ್ಕರಿಣಿ (ಬಾವಿ)ಯ ಹನಿನೀರನ್ನು ಪಡೆದುಕೊಳ್ಳಲು ದೊಡ್ಡ ಮೊತ್ತದ ಆಮಿಶ ತೋರುತ್ತಾರೆ ". ಈ ನೀರು ಕುಷ್ಠರೋಗವನ್ನು ನಿವಾರಿಸಬಲ್ಲ ಅದ್ಭುತ ಶಕ್ತಿ ಕೊಂಡಿರುವುದೆಂದು ನುಡಿಯುತ್ತಾರೆ. ಇದು ಶಿಲುಬೆಯಿಲ್ಲದ ಗುಮ್ಮಟಕೊಂಡ ಕ್ರೈಸ್ತರ ದೇವಾಲಯವೊಂದಾಗಿದೆ. ಗುಮ್ಮಟದ ಮೇಲೆ ಶಿಲುಬೆಯನ್ನಿರಿಸಲು ಹಲವೊಂದು ಬಾರಿ ಯತ್ನಿಸಲಾಯಿತಾದರೂ ಗುಮ್ಮಟದೊಳಗಣ ಆರ್ದ್ರತೆಯ ವಾತಾವರಣದ ನಿಮಿತ್ತ ಶಿಲುಬೆ ಜಾರಿ ಬೀಳುತ್ತಿತ್ತು!

ಗಣರಾಜ್ಯದಲ್ಲಿನ ಪರಿಸ್ಥಿತಿ

೧೯೧೦ರಲ್ಲಿ ಪೋರ್ತುಗಲ್ ಗಣರಾಜ್ಯವೊಂದಾದ ಬಳಿಕ ಧಾರ್ಮಿಕ ಸತಾವಣೆ ಸಮಾಪ್ತವಾದರೂ ಪ್ರಜೆಗಳು ಪೋರ್ತುಗೀಸ್ ಭಾಷೆ, ಸಂಸ್ಕೃತಿ ಇತ್ಯಾದಿಗಳನ್ನು ಅರಗಿಸಿಕೊಳ್ಳಬೇಕೆನ್ನುವ ಅನುನಯದ ನೀತಿ ಮುಂದುವರಿಯಿತು. ಪ್ರಜೆಗಳು ತಮ್ಮ ವೈಯಕ್ತಿಕ ಧರ್ಮಗಳನ್ನಾಚರಿಸಲು ಸ್ವತಂತ್ರರಿರುವುದಾಗಿ ಸರಕಾರ ಸಾರಿತು. ಕೆಲವೊಂದು ದೇವಸ್ಥಾನಗಳ ಪುನರ್ನಿರ್ಮಾಣವಾಯಿತು. ೧೯೨೮ರಲ್ಲಿ ಸುಮಾರು ೧೩,೦೦೦ಗಾಪ್ಟೆ ಕ್ರಿಸ್ತೀಯರು ಹಿಂದೂ ಧರ್ಮಕ್ಕೆ ಮರಳಿದರು. ಇದು ಸರಕಾರ ಪ್ರಜೆಗಳ ಧರ್ಮಾಚರಣೆಯನ್ನು ನಿಯಂತ್ರಿಸದಿರುವುದನ್ನು ತೋರುವುದಾಗಿ ಕ್ಯಾಪ್ಟನ್ ಜನರಲ್ ದೋಮ್ ಮಸಾನೋ ದಿ ಅಮೋರಿ ನುಡಿದಿದ್ದರು.

ಕಳೆದ ನಾಲ್ಕು ಶತಮಾನಗಳ ಕಾಲದಲ್ಲಿ ಗೋವಾ ಹಿಂದೆಂದೂ ಕಾಣಬಾರದಿದ್ದ

ಬಗೆಯಲ್ಲಿ ಕ್ರಿಸ್ತೀಕರಣಕ್ಕೊಳಗಾಗಿತ್ತು. ಸಾಷಷ್ಟಿ ದುರ್ದೆಶೆಗೊಳಗಾಗಿದ್ದ ದುರ್ದೈವಿ ಪ್ರಾಂತವೊಂದಾಗಿತ್ತು. ೧೭೦೭ರ ಜನವರಿ ತಿಂಗಳ ೧೦ರಂದು ಗೋವಾದ ವೈಸ್‌ರಾಯ್ -ಇನ್-ಚಾರ್ಜ್ ಪೋರ್ಚುಗಲ್ಲಿನಲ್ಲಿದ್ದ ಅರಸನಿಗೆ ಕಳುಹಿದ್ದ ವರದಿಯಲ್ಲಿ ರಾಜ್ಯದಲ್ಲಿ ೧,೦೦,೦೦೦ ಕ್ರಿಸ್ತೀಯರು ಮತ್ತು ೩,೦೦೦ ಹಿಂದುಗಳಿರುವುದಾಗಿ ನುಡಿದಿದ್ದ. ಬಹುತಾಂಶ ಹಿಂದುಗಳು ಗುತ್ತಿಗೆಗಳನ್ನು ಕೊಂಡ ಹೊರ ಪ್ರಾಂತದವರೆಂದು ಹೇಳಿದ್ದ. ಹಾಗೂ ಒಳನಾಡಿನಲ್ಲಿ ಕ್ರಿಸ್ತೀಯರ ಅನುಪಸ್ಥಿತಿಯನ್ನು ಸೂಚಿಸಿದ್ದ.

೧೭೨೨ರ ವರದಿಯಲ್ಲಿ ಬಾರ್ದೇಶ್ ಮತ್ತು ಗೋವಾ ದ್ವೀಪದಲ್ಲಿನ ಕ್ರಿಸ್ತೀಯರು ಭಾರೀ ಪ್ರಗತಿ ಮಾಡಿದ್ದರೆಂದೂ, ಮಾಪ್ಸಾ (ಮಪುಸಾ)ದಲ್ಲಿ ಕೆಲವೇ ಹಿಂದುಗಳಿದ್ದು ಅವರು ವ್ಯಾಪಾರಿಗಳಾಗಿದ್ದರೆಂದು ಹೇಳಲಾಗಿತ್ತು. ೧೯೦೦ರಲ್ಲಿ ಗೋವಾದಲ್ಲಿ ೨,೬೦,೧೪೪ ಹಿಂದುಗಳು ಮತ್ತು ೪,೬೨,೬೪೮ ಕ್ರಿಸ್ತೀಯರಿದ್ದರೆಂದು ವರದಿ ಮಾಡಲಾಗಿದೆ. ೧೯೫೦ರಲ್ಲಿ ಒಟ್ಟು ಜನಸಂಖ್ಯೆ ೫,೪೭,೪೪೮ರಷ್ಟಿದ್ದು ಅದರಲ್ಲಿ ೩,೦೭,೧೨೭ ಹಿಂದುಗಳು, ೨,೩೦,೯೮೪ ಕ್ರಿಸ್ತೀಯರು ಮತ್ತು ೯,೩೩೭ ಅನ್ಯ ಜಾತಿಯವರಿದ್ದರು. ಕ್ರಿಸ್ತೀಯರಲ್ಲಿನ ಹೆಚ್ಚು ಮಂದಿ ಮುರ್ಗಾಂ (ಮರ್ಮಗೋವಾ) ಹೊರತಾದ ಸಾಸಷ್ಟಿ (ಸಾಲ್ಸೆಟ್)ನಲ್ಲಿದ್ದರು. ಕ್ರಿಸ್ತೀಕರಣದಿಂದಾದ ಬದಲಾವಣೆ ಎಷ್ಟೊಂದು ಪ್ರಭಾವಶಾಲಿಯಾಗಿತ್ತೆಂದರೆ ಧರ್ಮಾಂತರಗೊಂಡ ಹೆಚ್ಚಾದ ಕ್ರೈಸ್ತ ಮತೀಯರು ತಮ್ಮ ಕಳೆದ ತಲೆಮಾರಿನ ಪೂರ್ವಜರ ಕುಲನಾಮ ಅರಿಯದಿದ್ದರು.

ಸಂದರ್ಭ ಸೂಚಿ

೧. ಗಾಸ್ಪರ್ ಕುರ್ರೈಯ ಇವರ 'ಲೆಂಡಾಸ್ ಇಂಡಿಯಾ'

೨. 'ಕರ್ಬಾ ದಿ ಅಂದ್ರಿಯಾ ಕುರ್ಸಾಲಿ', ಹೋಬ್ಸನ್ ಜೋಬ್ಸನ್, ೧೯೦೩, ಪಿ೬೫೫.

೩. 'ಬೊಶ್ಕೆಜೊ ಹಿಸ್ಟೋರಿಕ್ ದಶ್ ಕುಮಿನಿಡಾಸ್ ದಿ ಫಿಲಿಪ್', ನೇರಿ ಶವಿಯೆರ್, ಭಾಗ ೧.

೪. ಡಾ. ಅಂತೋನ್ ನೊರೊನ್ಹಾ ಇವರ 'ವುಸ್ ಇಂಡಸ್ ದಿ ಗೋವಾ ಎ ರಿಪಬ್ಲಿಕನ್ ಪೋರ್ಚುಗೀಸ್' ಪು. ೨೮೨.

೫. 'ಡಯಾಗೊ ದು ಕೌತೊ' ವನ್ನಾಧರಿಸಿ - ಸಂಪುಟ ೧೦, ಅಧ್ಯಾಯ ೪, ಪು.೫೦೯. ವೈಸ್‌ರಾಯ್ ಕುಣ್ಕಲ್ಲಿ ಮತ್ತು ವೇಡಿಗಳಲ್ಲಿನ ಭೂಮಿಯನ್ನು ಜುವಾವ್ ದಿ ಸಿಲ್ವರಿಗೆ ಇತ್ತರು. ಅಸ್ಸೊಲಿನ, ವೆಲ್ಲಿ ಮತ್ತು ಅಂಬೋಲಿ ಹಳ್ಳಿಗಳನ್ನು ಪೆದ್ರು ದ ಕಾಸ್ತ್ರೊ ಇವರಿಗಿತ್ತರು. ೧೫೭೫ರಲ್ಲಿ ಅವನ್ನು ಜೆಸ್ಯೂಟ್ಸ್ ಇವರಿಗೆ ಹಸ್ತಾಂತರಿಸಿದರು. ಈ ಹಸ್ತಾಂತರಕ್ಕೆ ಸರಕಾರ ಮೊದಲು ಒಪ್ಪಲಿಲ್ಲ. ಜೆಸ್ಯೂಟ್ಸ್ ಒತ್ತರಿಸಿದ ಬಳಿಕ ಅವನ್ನು ಸೈಂಟ್ ಪೌಲ್ ಕಾಲೇಜಿಗಿತ್ತರು.

೬. ಪಾದ್ರಿ ಎಮ್. ಜಿ. ಸಾಲ್ಡಾನ್ಹಾ ಇವರ 'ಹಿಸ್ಟೋರಿಯಾ ದ ಗೋವಾ', ಭಾಗ ೧, ಪುಟ ೨೧೭.

೭. 'ಬೊಲೆತಿನ್ ದು ಇನ್‌ಸ್ಟಿಟುಟೊ ವಾಸ್ಕೋಡಗಾಮ' ನಂ. ೬೮-೧೯೫೨, ಪು. ೩೭-೫೪.

೮. ನಾರಾಯಣ ವಿಗ್ರಹವನ್ನು ಅಜೋಶಿಯಿಂದ ಕವ್ಳ್ಯೆಗೆ ಕೊಂಡುಹೋದರು.

೯. ಬಟ್ಟಿಯ ನಾರಾಯಣನ ದೇವಸ್ಥಾನ ಅತಿ ಪ್ರಸಿದ್ಧವಿತ್ತು; ಕದಂಬರ ತಾಮ್ರ ಶಾಸನದಲ್ಲಿ ಇದರ ಉಲ್ಲೇಖವಿದೆ. 'ದ ಚರ್ಚ್ ಆಫ್ ಅವರ್ ಲೇಡಿ'ಯನ್ನು ಈ ದೇವಸ್ಥಾನದ ಸ್ಥಳದಲ್ಲಿ ಕಟ್ಟಿದರು.

೧೦. ತಾಮ್ರ ಶಾಸನವೊಂದರಲ್ಲಿ, ಕರಂಬಳ್ಳಿಯಲ್ಲಿನ ಸಾಂತೇರಿಯನ್ನು ಶಾಂತಕಾರಿ ದೇವಿಯೆಂದಾಗಿ ಸಂಬೋಧಿಸಲಾಗಿದೆ. ೧೫೬೦ರ ನವೆಂಬರ್ ತಿಂಗಳ ೧೩ರ ತನ್ನ ಪತ್ರದಲ್ಲಿ ಫಾದರ್ ಲುಯಿಸ್ ಫ್ರೊಯಿಸ್ ಇವರು ಕರಂಬಳ್ಳಿಯಲ್ಲಿನ 'ಚರ್ಚ್ ಆಫ್ ಸೈಂಟ್ ಜೋನ್ ದ ಬ್ಯಾಪ್ಟಿಸ್ಟ್ ಆಫ್ ಕರಂಬಳ್ಳಿ'ಯನ್ನು ಗೋವಾ ದ್ವೀಪದಲ್ಲಿನ ದೊಡ್ಡ ದೇವಸ್ಥಾನವೊಂದರ ಸ್ಥಳದಲ್ಲಿ ಕಟ್ಟಲಾಯಿತೆಂದು ಬರೆದಿರುತ್ತಾರೆ.

೧೧. 'ಕಾನ್ವೆಂಟ್ ಆಫ್ ದ ಮದರ್ ಆಫ್ ಗೋಡ್' ಇದನ್ನು ಮೊಖಾವಿ ದೇವಸ್ಥಾನದ ಸ್ಥಳದಲ್ಲಿ ಕಟ್ಟಿದರು.

೧೨. ರವಳನಾಥನ ದೇವಸ್ಥಾನ ಚೋಣ್ಣದ್ವೀಪದಲ್ಲಿನ 'ಗೂವಾನಾ' ಎಂಬಲ್ಲಿತ್ತು.

೧೩. ಭಗವತಿಯ ದೇವಸ್ಥಾನ ಚೋಣ್ಣದ್ವೀಪದಲ್ಲಿತ್ತು. ಅಲ್ಲಿನ ವಿಗ್ರಹವನ್ನು ಮಾಶೆಲ್ (ಮಾರ್ಸೆಲ್) ಗೆ ಕೊಂಡುಹೋದರು.

೧೪. 'ದ ಚ್ಯಾಪಲ್ ಆಫ್ ಅವರ್ ಲೇಡಿ ಆಫ್ ಕಂದಲಾರಿಯಾ'ವನ್ನು ೧೫೬೩ರಲ್ಲಿ ಸಪ್ತನಾಥ (ಸಪ್ತಕೋಟೀಶ್ವರ) ದೇವಸ್ಥಾನದ ಸ್ಥಳದಲ್ಲಿ ಕಟ್ಟಿದರು.

೧೫. ಪಾಪ್ರಿದೇವ್ ಅಥವಾ ಕಾಪ್ರೊ ರವಳನಾಥ ದೇವರನ್ನು ಕೊಲಾಟಿಯಿಂದ ನಾರಾವೆಯ ಗಾವ್ತೊಂಡೆಗೆ ಕೊಂಡುಹೋದರು.

೧೬. ಗಣೇಶನನ್ನು ನವೇಲಿಯಿಂದ ಕಂಡಿಯಾಪಾರ್ ಮತ್ತು ಅಲ್ಲಿಂದ ಶೊಂಡೆಗ ಕೊಂಡುಹೋದರು. ಶೊಂಡೆಯ ದೇವಸ್ಥಾನದಲ್ಲಿ ಅಲದೋಣೆ(ಬಾರ್ದೇಶ್ ನಲ್ಲಿನ ಅಲ್ದೋನ) ಯಿಂದ ತಂದ ಭಗವತಿಯ ವಿಗ್ರಹವೂ ಇದೆ.

೧೭. ಎಳ್ಳಿಯ ಗಣೇಶನನ್ನು ಅಂತ್ರುಜ್ ನ ಖಂಡೋಳಿ(ಕಂಡೋಲಿಮ್) ಗೆಕೊಂಡು ಹೋದರು.

೧೮. ದುರ್ಗಾವತಿಯ ವಿಗ್ರಹವನ್ನು ಮಾರಸವಾ್‌ಗೆ ಕೊಂಡು ಹೋಗಲಾಯಿತು. ಈವಿಗ್ರಹವನ್ನೀಗ ನವದುರ್ಗೆಯ ರೂಪದಲ್ಲಿ ಪೂಜಿಸಲಾಗುತ್ತದೆ.

೧೯. ಜುವೆಯ ರವಳನಾಥ,ಸಾಂತೇರಿ ಮತ್ತು ಕ್ಷೇತ್ರಪಾಲರ ವಿಗ್ರಹಗಳನ್ನು ಖಂಡೋಳಿ(ಕಂಡೋಲಿಮ್)ಗೆ ಕೊಂಡು ಹೋದರು.

೨೦. ತಳವಲಿಯ ಸಾಂತೇರಿಯನ್ನು ಮಾಶೆಲ್(ಮಾರ್ಸೆಲ್) ನಲ್ಲಿ ತಳವಲಿ ಕರ್ಮಿ ಶಾಂತಾದುರ್ಗಾ ಎಂದಾಗಿ ಪೂಜಿಸಲಾಗುತ್ತದೆ.

೨೧. ಅಪೆಯಲ್ಲಿ ಸುಮಾರು ೪೦-೪೫ ಅಡಿಗಳೆತ್ತರದ ಪಿರಮಿಡ್‌ನ ಆಕಾರದ ಸ್ತಂಭವೊಂದಿದ್ದು ಅದು ಆಸ್ಥಳದಲ್ಲಿ ದೇವಸ್ಥಾನವೊಂದಿದ್ದುದನ್ನು ಸೂಚಿಸುತ್ತದೆ.-

೨೨. ಆರೋಸಿಯಲ್ಲಿನ ಭೋಗೇಶ್ವರನ ವಿಗ್ರಹವನ್ನು ಅಂತ್ರುಜ್ ನಲ್ಲಿನ ತಳವಲಿಗೆ ಕೊಂಡು ಹೋದರು.

೨೩. ಬನವಲಿ (ಪರಶುರಾಮನ ಆಖ್ಯಾಯಿಕೆಗೆ ಸಂಬಧಿಸಿದ್ದ) ಯ ವಿಗ್ರಹಗಳನ್ನು ಉತ್ತರ ಕನ್ನಡದಲ್ಲಿನ ದುರ್ಶೆಗೆಕೊಂಡು ಹೋದರು.

೨೪. ಚಿಚಲಿಯಲ್ಲಿನ ಜೋಗಿಯೊಬ್ಬರು ಕ್ರೈಸ್ತ ಧರ್ಮ ಸ್ವೀಕರಿಸಿದರು;ಅವರಿಗೆ ಗಾಸ್ಪರ್ ಎಂಬ ಹೆಸರನ್ನೀಯಲಾಯಿತು.ಅವರು ಸರ್ದೋಣದಲ್ಲಿನ ತನ್ನ ಭೂಮಿಯನ್ನು 'ಚರ್ಚ್ ಆಫ್ ಸೈಂಟ್ ಮೇರಿ ಮಗ್ದಲಿನ್'ನ ನಿರ್ಮಾಣಕ್ಕಾಗಿ ಬಿಟ್ಟು ಕೊಟ್ಟರು.

೨೫. ರವಳನಾಥನ ವಿಗ್ರಹವನ್ನು ಅಂತ್ರುಜ್ ನಲ್ಲಿನ ತಳವಲಿಗೆ ಕೊಂಡು ಹೋದರು.

೨೬. ಕುಟ್ಟಲಿಯಲ್ಲಿನ ಮಂಗೇಶ ದೇವಸ್ಥಾನದ ಸ್ಥಳದಲ್ಲಿ ಕ್ರೀಸ್ತಿಯರ ದೇವಾಲಯವೊಂದನ್ನು ನಿರ್ಮಿಸಿದರು.

೨೭. ಕುಡಥರಿಯಲ್ಲಿನ ಸಾಂತೇರಿ ಮತ್ತುಚಂದೇಶ್ವರಿಯರವಿಗ್ರಹಗಳನ್ನು ಚಂದ್ರವಾಡಿಗೆ ಕೊಂಡು ಹೋದರು.

೨೮. ಲೊಟ್ಲಿಯಲ್ಲಿನ ರಾಮನಾಥನ ವಿಗ್ರಹವನ್ನು ಅಂತ್ರುಜ್‌ನಲ್ಲಿನ ಬಂದಿವಡೆಗೆ ಕೊಂಡು ಹೋದರು.

೨೯. ಲೊಟ್ಲಿಯ ವಾಮನನ ವಿಗ್ರಹವನ್ನು ಕವಳೆಗೆ ಕೊಂಡು ಹೋದರು.

೩೦. ದಾಮೋದರನ ವಿಗ್ರಹವನ್ನು ಮಡ್ಡಕ್ಕೆ ಕೊಂಡು ಹೋದರು; ಚಾಮುಂಡೇಶ್ವರಿಯ ವಿಗ್ರಹವನ್ನು ಕೊಮಾಕ್ಕೆ ಮತ್ತು ಇನ್ನುಳಿದವನ್ನು ಜಾಂಬೋಲಿಗೆ ಕೊಂಡು ಹೋದರು.

೩೧. ನಾಗಾವೆಯಲ್ಲಿನ ಭಗವತಿಯ ವಿಗ್ರಹವನ್ನು ಮಾರ್ಸೆಲ್ ಗೆ ಕೊಂಡು ಹೋದರು; ಸಾಂತೇರಿ,ಗ್ರಾಮ ಪುರುಷ,ಬಾರಾಜನ ಮತ್ತಿನ್ನಿತರ ವಿಗ್ರಹಗಳನ್ನು ಉತ್ತರ ಕನ್ನಡದ ಅಂಕೋಲಾಕ್ಕೆ ಕೊಂಡು ಹೋದರು.ನಾಗಾವೆಯಲ್ಲಿನ ಲಕ್ಷ್ಮಿನಾರಾಯಣನ ವಿಗ್ರಹವನ್ನೂ ಅಂಕೋಲಕ್ಕೆ ಕೊಂಡು ಹೋದರು.ಮಾತ್ರ ಇವನ್ನು ಯಾದಿಯಲ್ಲಿ ಸೂಚಿಸಿಲ್ಲ.

೩೨. ಕೆಳೋಶಿಯಲ್ಲಿನ ವಿಗ್ರಹಗಳನ್ನು ಕವಳೆಗೆ ಕೊಂಡು ಹೋದರು. ಸಾಂತೇರಿಯ(ಶಾಂತಾದುರ್ಗ) ದೇವಸ್ಥಾನವನ್ನು೧೫೬೭ರಲ್ಲಿ ನಾಶಗೊಳಿಸಿದರು.

೩೩. ಸಹ್ಯಾದ್ರಿ ಖಂಡದ ಕಾಮಾಕ್ಷ ಮಾಹಾತ್ಮ್ಯದಲ್ಲಿ'ರಾಯ'ಕ್ಕೆ ಸಂಬದಿಸಿದ ಉಲ್ಲೇಖವಿದೆ.

೩೪. ನರಸಿಂಹನ ವಿಗ್ರಹ ದೊಂದಿಗೆ ಅನ್ಯ ಕೆಲವು ವಿಗ್ರಹಗಳನ್ನು ವೇಲಿಂಗ್ ಗೆ ಕೊಂಡು ಹೋದರು ಇನ್ನುಳಿದವನ್ನು ಪೆಡ್ಣೆಯಲ್ಲಿನ ಕೇರಿ (ಕ್ವೆರಿಮ್)ಗೆ ಕೊಂಡು ಹೋದರು.

೩೫. ಸಹ್ಯಾದ್ರಿ ಖಂಡದಲ್ಲಿ ವೆರ್ಣೆಯನ್ನು ವರೇಣ್ಯ ಎಂದಾಗಿ ಸಂಬೋಧಿಸಲಾಗಿದೆ. ಮ್ಹಾಳಸಾ ವಿಗ್ರಹವನ್ನು ಮ್ಹಾರ್ದೋಳ್‌ಗೆ ಕೊಂಡುಹೋದರು. ವೆರ್ಣೆಯಲ್ಲಿನ ಮೊದಲ ಚರ್ಚ್ ಸಾಂತೇರಿ ದೇವಸ್ಥಾನದ ಸ್ಥಳದಲ್ಲಿ ಕಟ್ಟಲ್ಪಟ್ಟಿತು.

೩೬. ಭಗವತಿಯ ವಿಗ್ರಹವನ್ನು ಖಂಡೋಳಿಗೆ ಕೊಂಡು ಹೋದರು; ಇನ್ನುಳಿದವರನ್ನು ಮಾಶೆಲಿಗೆ.

೩೭. ಅಸ್ಸಾಗಾಂವ್‌ನಲ್ಲಿನ ವಿಗ್ರಹಗಳನ್ನು ಪೆಡ್ಣೆಯ ಮಂದ್ರುನ್‌ಗೆ ಕೊಂಡು ಹೋದರು.

೩೮. ಕೊಳವಲಿಯಲ್ಲಿ ಗೌತಮ ದೇವಾಲಯವೊಂದಿತ್ತೆಂದು ಫಾದರ್ ದ ಕಾಸ್ತಾ ಹೇಳಿರುತ್ತಾರೆ. ಫಾದರ್ ಹೇರಾಸ್ ಅವರು ಕೊಳವಲಿಯಲ್ಲಿ ಬುದ್ಧನ ವಿಗ್ರಹವೊಂದನ್ನು ಹುಡುಕಿ ತೆಗೆದಿರುತ್ತಾರೆ.

೩೯. ಬೇತಾಳನ ವಿಗ್ರಹವನ್ನು ಮರ್ಣೆಯಿಂದ ಬಿಚೋಲಿಯಲ್ಲಿನ ಪಾಲೆಗೆ ಕೊಂಡುಹೋದರು.

೪೦. ಮೊಯ್ರಾದಲ್ಲಿನ ವಿಗ್ರಹಗಳನ್ನು ಬಿಚೋಲಿಯ ಮುಳ್ಗಾಂವ್‌ಗೆ ಕೊಂಡು ಹೋದರು.

೪೧. ಸಾಂತೇರಿಯ ವಿಗ್ರಹವನ್ನು ಪೆಡ್ಣೆಯ ಮಂದ್ರುನ್‌ಗೆ ಕೊಂಡುಹೋದರು.

೪೨. ಒಸ್ಸೆಲೆಯಲ್ಲಿನ ಸಾಂತೇರಿಯ ವಿಗ್ರಹವನ್ನು ಪೆಡ್ಣೆಯ ಚೋಪ್ಡೆಂಗೆಕೊಂಡು ಹೋದರು.

೪೩. ಪರ್ರೆ-ಯಲ್ಲಿನ ವಿಗ್ರಹಗಳನ್ನು ಬಿಚೋಲಿಯ ಅಡ್ವೊಲ್ಪಲೆಗೆ ಕೊಂಡು ಹೋದರು.

೪೪. ಪಿಲೇರ್ನ್‌ದಲ್ಲಿನ ಸಾಂತೇರಿಯ ವಿಗ್ರಹವನ್ನು ನಾರಾವೆಗೆ ಕೊಂಡು ಹೋದರು.

೪೫. ರವಳನಾಥನ ವಿಗ್ರಹವನ್ನು ಮುಳ್ಗಾಂವಿಗೆ ಕೊಂಡುಹೋದರು. 'ಚರ್ಚ್ ಆಫ್ ಅವರ್ ಲೇಡಿ' ಈ ದೇವಸ್ಥಾನದ ಸ್ಥಳದಲ್ಲಿ ಕಟ್ಟಲ್ಪಟ್ಟಿತು.

೪೬. ವಿಗ್ರಹಗಳನ್ನು ಬಿಚೋಲಿಯ ಬೋರ್ಡೆಮ್‌ಗ ಕೊಂಡು ಹೋದರು.

೪೭. ಗುಡಾಗೇಶ್ವರನ ದೇವಸ್ಥಾನ ಗುಡ್ಡವೊಂದರ ಮೇಲಕ್ಕಿತ್ತು. 'ಚರ್ಚ್ ಆಫ್ ಸೈಂಟ್ ಲಾರೆನ್ಸ್' ಈ ದೇವಸ್ಥಾನದ ಸ್ಥಳದಲ್ಲಿ ಕಟ್ಟಲ್ಪಟ್ಟಿತು.

೪೮. ಶಿವೋಲಿಯ ಸಾಂತೇರಿಯ ವಿಗ್ರಹವನ್ನು ಮುರ್ಗಾಂವ್‌ಗೆ ಕೊಂಡು ಹೋದರು; ದೇವಸ್ಥಾನದ ಸ್ಥಳದಲ್ಲಿ ಕ್ರೈಸ್ತ ಮತೀಯ ದೇವಾಲಯ ನಿರ್ಮಿಸಲ್ಪಟ್ಟಿತು.

೪೯. ಶಿರಾಳಿಯಲ್ಲಿನ ವಿಗ್ರಹಗಳನ್ನು ಬಿಚೋಲಿಯಲ್ಲಿನ ಮುಳ್ಗಾಂವಿಗೆ ಕೊಂಡುಹೋದರು.

೫೦. ಶಿರಾಳಿಯಲ್ಲಿನ ಬೇತಾಳನ ದೇವಸ್ಥಾನದ ಭೂಮಿಯನ್ನು ಧರ್ಮಾಂತರಗೊಂಡಿದ್ದ ಲೊಪೋ ವಾಝ್ ದಿ ಸಿಕ್ವೇರಾನಿಗೀಯಲಾಯಿತು.

೫೧. ಜಾಜೆ ಪಿಕಲಾವ್‌ದ ಫೊನ್ಸೆಕಾ ಇವರ 'ದ ಹಿಸ್ಟೋರಿಕಲ್ ಎಂಡ್ ಆರ್ಕಿಯೋಲೋಜಿಕಲ್ ಸ್ಕೆಚ್ ಆಫ್ ಸಿಟಿ ಆಫ್ ಗೋವಾ,' ೧೮೭೬, ಪು. ೨೪೦

ಅನುಬಂಧ ೨

ಕೆಲವೊಂದು ಪ್ರಮುಖ ಕುಟುಂಬಗಳ ಹಿಂದೂ ಪೂರ್ವಜರು

ಧರ್ಮಪರಿವರ್ತನೆಗೊಂಡ[೧] ಸಾರಸ್ವತ ಗಾವ್ಕರರ (ಪ್ರಮುಖ ಗ್ರಾಮಸ್ಥರ) ಹಿಂದೂ ಪೂರ್ವಜರು ಮತ್ತು ಅವರು ಮತಾಂತರಗೊಂಡಿದ್ದ ಕಾಲ ಇತ್ಯಾದಿಗಳ ವಿವರಗಳು ಈ ಕೆಳಗಿನಂತಿವೆ :

ಗ್ರಾಮದ ಹೆಸರು	ಧರ್ಮ ಪರಿವರ್ತನೆ ಗೊಂಡ ವರ್ಷ	ಮೊದಲಿನ ಹೆಸರು	ಧರ್ಮ ಪರಿವರ್ತನೆಯ ನಂತರ ಇತ್ತ ಹೆಸರು
ಅಸೊಲಿನ್ (ಅಸ್ಸೊಲಿನ)	೧೬೩೦	ಬೆಟಾ ಕುಡವ	ಅಂತೋನ್ ದಿ ಅಬ್ರಿಯೊ
		ದಾಮುನಾಯಿಕ್	ರಾಕಿ ವ್ಹಿಯೆರಾ
		ರಾಮು ಕುಡವ	ಎಸ್ಟಿವಾವ್ ವೆಲ್ಲು
		ಸುಕ್ಕೊನಾಯಿಕ್	ಗೋಮಿಸ್ ವ್ಹಾರ್ಝ್
		ರಾಮಕುಡವ	ಲುಯಿರ್ಝ್‌ಕಾಸ್ತಾಂ
		ಸಾಂತಪ್ಪ ಕುಡವ	ಅಲುರ್ ದಿ ಅಲ್ಮೇದಾ
ಬನವಲಿ (ಬೆನೌಲ್ಲಿಮ್)	೧೫೯೬	ಗಣ್ಣಿತಾ ಪೈಯವರ ಮಗ	ಅಲುರ್ ದಿ ಅಲ್ಮೇದಾ
		ರಾಮು ಪ್ರಭು (ದಡ್ಡೊ ವಿಟ್ಟಲ ಪ್ರಭುವಿನ ಮಗ)	ಫ್ರಾನ್ಸಿಸ್ಕ್ ಫರ್ನಾಂಡಿಸ್
		ಮಹಾಬಲ ಪೈ (ನರ ಪೈಯ ಮಗ)	ಮಾನುಎಲ್ ಫರ್ನಾಂಡಿಸ್
		ನರ ಪ್ರಭುವಿನ ಮಗ	ಅಂತೋನ್ ಗೋಮಿಸ್
		ವಿಟ್ಟಲ ಪ್ರಭುವಿನ ಮಗ	ರುದ್ರಿಗೊ ದ ಮಿಸ್ಕಿತಾ
		ಮಲ್ಲು ಡಾಂಗಿಯ ಮಗ	ಅಂತೋನ್ ಪರೇರಾ
		ಭೈರು ಶೆಣ್ಯೆಯ ಮಗ ಮತ್ತು ದೇವಮನ	ಮಾನುಎಲ್ ಪರೇರಾ

		ಮೊಮ್ಮಗ	
		ಬಾಳಪ್ಪ ಶೆಣ್ವೆ	ಮಾನುವೆಲ್ ಫರ್ನಾಂಡಿಸ್
		ಮಾಲು ಶೆಣ್ವೆ (ನಾಯ್ಕೊಬಾರು) ಶೆಣ್ವೆಯ ಮಗ	ದುಮಿಂಗೊ ಫರ್ನಾಂಡಿಸ್
ಬೇತಾಳ ಭಟ್ಟಿ (ಬೇತಾಲ್ ಬಾತಿಮ್)	೧೬೨೨	ಚಂದಾನಾಯಿಕ್ (ಮಲ್ಲಪ್ಪನಾಯಿಕನ ಮಗ)	ದುಮಿಂಗೊ ಫರ್ನಾಂಡಿಸ್
		ಗಣೇಶ ನಾಯಿಕ್	ದೋಮ್ ಜುವಾವ್
		ತಿಲಪ ನಾಯಿಕ್	ಗೊನ್ಸಾಲೊಕರ್ವಾಲ್ಯೋ
	೧೬೩೦	ತಿಲ್ಲ ನಾಯಿಕ್	ಗಾಸ್ಪರ್ ಕರ್ವಾಲ್ಯೋ
		ಗಣೇಶ ನಾಯಿಕ್	ದೋಮ್ ಜುವಾವ್
ಕಾರ್ಮೊರ್ಲೆ (ಕರ್ಮೊರ್ಲಿಮ್)	೧೫೮೮	ಗೋವಿಂದ ಪೈಯ ಮಗ	ಅಂತೋನ್ ಮೋನಿರಿಝ್
	೧೬೩೦	ಪುರುಷ ನಾಯಿಕ್	ಮಾದಿಯಾಂ
		ವಾಮನ ನಾಯಿಕ್	ಮಾನುವೆಲ್ ಡಾಯಸ್
		ಪೊರೊ ನಾಯಿಕ್	ಅಂತೋನ್ ದಿ ಕ್ವಾದ್ರುಸ್
		ಭೈರ ನಾಯಿಕ್	ಜುವಾವ್ ದ ಕಾಸ್ತಾ
ಕರ್ಮೊಣೆ (ಕರ್ಮೊನ)	೧೬೨೨	ಮಾದ ನಾಯಿಕ್	ಡಯಾಗೊ ಡಾಯಸ್
		ಭೈರು ನಾಯಿಕ್	ಪೆರೊ ಡಾಯಸ್
	೧೬೩೦	ಫೊಂಡೊ ನಾಯಿಕ್	ದೋಮ್ ಜಾರ್ಜ್
		ಕಾಳ್ಗೊ ನಾಯಿಕ್	ಆಂದ್ರೆ ಫುರ್ತಾದೊ
		ಮಧು ನಾಯಿಕ್	ಡಯಾಗೊ ಡಾಯಸ್
		ಪುರ್ಸೊನಾಯಿಕ್	ಅಂತೋನ್ ಡಾಯಸ್
ಕುಟ್ಟಲಿ (ಕುಶಸ್ಥಳಿ, ಕೊರ್ತಲಾಮ್)	೧೬೨೨	ಮಲ್ಹಾಥ್ ದಳ್ವಿ	ಫ್ರಾನ್ಸಿಸ್ಕ್ ವ್ಹಿಯೆರಾ
ಕುಡಥರಿ (ಕುರ್ತೊರಿಮ್)	೧೬೦೭	ಮಹಾಬಲ ಕಾಮತಿ	ಅಲೆಕ್ಸ್ ಮಿನೇಜಿಸ್
		ವಿಟ್ಠಲ ನಾಯಿಕ್‌ನ ಮಗ	ಫ್ರಾನ್ಸಿಸ್ಕ್ ಲುಯಿರಿಝ್
		ವಿಟ್ಠಲನಾಯಿಕ್‌ನ ಮಗ	ದುಮಿಂಗಸ್ ಗೊಮಿಸ್

		ಕೃಷ್ಣಕಾಮತ್‌ನ ಮಗ	ಮಾನುಎಲ್ ದ ವ್ಹಿಯೆಗಾ
		ಮಾರಣ್ಣ ಪೈ,	ಅಂತೊನ್ ದಿ ಬ್ರಿಟ್ಟೊ
		ರಾಮ ಪೈಯ ಮಗ	
		ವಿಟ್ಠಲ ನಾಯಿಕ್‌ನಮಗ	ಫ್ರಾನ್ಸಿಸ್ಕ್ ಲುಯಿರ್ಝ್
		ಈಶ್ವರ ಕಾಮತನ ಮಗ	ಮಾನುಎಲ್ ದ ವ್ಹಿಯೆಗಾ
		ರುಕ್ಮಿಣಿ	ಮಾರಿಯಾ
		ಜಯಾ ಕಾಮತ್	ಅಲೆಕ್ಸ್ ಗೊಮಿಡರ್ಸ್
		ಲಕ್ಕರಸ ಕಾಮತ್	ಬ್ರಿಝಿಯೊಫರ್ನಾಂಡಿಸ್
		ಅರ್ವತಿ ವಿಟ್ಠಲ	
		ಕಾಮತ್‌ರ ಮಗ	
		ಚಾಂದೆ ಕಾಮತ್	ಅಗೊಸ್ತಿನ್ ದಿನಿರ್ಝ್
		ಕೃಷ್ಣಕಾಮತ್	ಬ್ರಿಝಿಯೊ ಫರ್ನಾಂಡಿಸ್
		ರಾಮ ಕಾಮತ್	ಅಂತೊನ್ ದ ಕಾಸ್ತಾ
		ನಾರಣ ಪೈ	ಅಂಟೊನ್ ದಿ ಬ್ರಿಟ್ಟೊ
	೧೬೩೦	ಚಾಂದೆ ಕಾಮತ್	ಅಂಟೊನ್ ದ ಕಾಸ್ತಾ
		ಕೃಷ್ಣ ಕಾಮತ್	ಬ್ರಿಝಿಯೊ ಫರ್ನಾಂಡಿಸ್
		ಚಾಂದೆ ಕಾಮತ್	ಬ್ರಿಝಿಯೊ ಫರ್ನಾಂಡಿಸ್
		ಲಕ್ಕರಸ ಕಾಮ ತ್	ಬ್ರಿಝಿಯೊ ಫರ್ನಾಂಡಿಸ್
		ನರ ಕಾಮತ್	ಲಾರೆನ್ಸ ದ ಕಾಸ್ತಾ
		ಸಾಂತೆ ಕಾಮತ್	ಲಾರೆನ್ಸ ದ ಕಾಸ್ತಾ
ಕುಣ್ಕಲ್ಲಿ	೧೬೩೦	ರಾಮ ನಾಯಿಕ್	ದೋಮ್ ಡಯಾಗೊ
(ಕುಂಕೊಲಿಮ್)			
ಮಕಾಸಾನಾ		ಪೌಲು ಭಂಡಾರಿ	ಮಾನುಎಲ್ ವ್ಹಾರ್ಝ್
ಗಾಂದೋಳಿ	೧೬೩೨	ಚಂದ್ರಪ್ಪ ನಾಯಿಕ್	ಅಂತೋನ್ ಡಾಯಸ್
(ಗಾಂದವ್ಲಿ)			
ಮಕಾಸಾನಾ	೧೬೩೦	ಬಾಬುಲೊ ಕಾಮತ್	ಅಂತೋನ್ ಮರಾರಾಡು
ಮಡ್ಗಾಂವ್	೧೬೩೦	ಹೆಗ್ಡೆ	ಮಿಗೆಲ್ ಗೋಮಿಸ್
(ಮುರ್ಗಾಂ)			
ಒರ್ಲಿಮ್	೧೬೩೦	ಲಿಂಗ ನಾಯಿಕ್	ಅಂತೋನ್ ಡಾಯಸ್
ರಾಯಾ	೧೫೭೫	ಮರ್ತಪೈಯ ಮಗ	ಅಂತೊನ್ ದ ಕಾಸ್ತಾ
	೧೫೮೭	ಗೋವಿಂದ ಪೈಯ ಮಗ	ಅಂತೊನ್ ಮೋನಿರ್ಝ್
	೧೫೯೪	ವಿಟ್ಠಲ ಪೈಯ ಮಗ	ಥಾಮಸ್ ಇಸ್ತೆವ್ಹಾವ್

		ದೇವರ್ಸ ಕಾಮತನ ಮಗ	ಅಮದೋರ್ ವ್ಹಿಯೆಗಾ
		ಸಾಂತಾ ಪೈಯ ಮಗ	ಅಂತೂನ್ ದಿ ಕ್ವಾದ್ರುಸ್
		ರಾಮ ಪೈಯ ಮಗ	ಮಾನುಎಲ್‌ಗೊನ್ಸಾಲ್ವಿಸ್
		ಈಶ್ವರ ಪೈ	ಅಂತೂನ್ ಕುತಿನ್ಯೊ
		ಹರಿಕಾಮತನ ಮಗ	ಜುವಾವ್ ದಿ ಸೌರ್ಝಾ
		ಗೋವಿಂದ ಪೈಯ ಮಗ	ಅಂತೋನ್ ಮೊನಿರ್ಝ್
	೧೬೦೪	ಘಟ್ಟೀರ ಪೈ, ರಾಮ ಪೈಯ ಮಗ, ವಿಟ್ಠಲ ಪೈಯ ಮೊಮ್ಮಗ, ನರಸ ಪೈಯ ಮರಿಮಗ,	ಮ್ಹಿಯಾಸ್ ದಿ ಆಲ್ಬುಕೆರ್ಕ್
		ನರೇಪ ಕಾಮತನ ಮಗ	ಆಮದೊರ್ ವಿಯೆಗಾ
		ಶಾಮಣ ಪೈ	ಅಂತೋನ್ ದಿ ಕ್ವಾದ್ರುಸ್
		ಸೋಲಿಯಮ್ ಶಾಮಣ ಪೈಯ ಮಗ	ಫ್ರಾನ್ಸಿಸ್ಕ್ ದಿ ಲೀಮಾ
		ರಾಮು ಕಾಮತ್	ಮಾನುಎಲ್ ಫಾಲೆರೊ
	೧೬೦೪	ವಿಟ್ಟು ಪೈಯ ಮಗ	ಥಾಮಸ್ ಇಸ್ತೆವ್ವಾವ್
	೧೬೦೯	ನರೆ ಕಾಮತನ ಮಗ	ಗೊಸ್ಸಾಲೊ ಪರೇರಾ
		ಸಂತು ಪೈಯ ಮಗ	ಜುವಾವ್ ದಿ ಕ್ವಾದ್ರುಸ್
		ಶರ್ ಮಾಮ್ ಪೈಯ ಮಗ	ಫ್ರಾನ್ಸಿಸ್ಕ್ ದಿ ಲೆಮುಸ್
		ವಿಟ್ಟು ಪೈಯ ಮಗ	ಅಂತೋನ್ ಕುತಿನ್ಯೊ
		ಗೋವಿಂದ ಪೈಯ ಮಗ	ಅಂತೂನ್ ಮೊನಿರ್ಝ್
		ರಾಮುಕಾಮತ್	ಅಂತೋನ್ ಫಾಲೆರೊ
ಸೆರೋಲಿ (ಸೆರೌಲಿಮ್)	೧೫೯೬	ಲೋಕನಾಥ ನಾಯಿಕ್‌ನ ಮಗ	ಮಾನುಎಲ್ ದಿ ಸೌರ್ಝಾ
		ಮಾದ ನಾಯಿಕನ ಮಗ	ಪೆರೊ ಮಾರ್ಟಿನ್ಸ್
	೧೬೩೦	ಭಾನು ನಾಯಿಕ್	ಜುವಾವ್ ಫರ್ನಾಂಡಿಸ್
ಉತೊರ್ಡಾ	೧೬೨೨	ಬೆಟಾ ನಾಯಿಕ್	ಜುವಾವ್ ಕುಲಾಸೊ
	೧೬೩೦	ಧಾಕ್ಟೊ ನಾಯಿಕ್	ಗಾಸ್ಪರ್ ದ ಸಿಕ್ವೇರಾ
		ಅಗಣ ನಾಯಿಕ	ಲುಯಿರ್ಝ್‌ಫ್ರಾನ್ಸಿಸ್ಕ
ವೇಲಿಮ್	೧೫೯೬	ರಾಮುನಾಯಿಕ್	ಜುವಾವ್ ಅಂತಾವೊ
		ಫೊಂಡೊನಾಯಿಕ್	ಅಫೋಂಸ ಪಶೆಕೊ

		ಮ್ಹಾಳ ನಾಯಿಕನ ಮಗ	ಮಾರ್ಟಿನ್ ದಿ ಸಿಲ್ವ
		ಕೌಳೊ ನಾಯಿಕ್	ಡಯಾಗೊ ಲೋಬೋ
		ಬಿಟು ನಾಯಿಕ್‌ನ ಮಗ	ಫ್ರಾನ್ಸಿಸ್ಕ್ ದ ಕ್ರುರ್ಝ್
		ಪುರ್ಸು ನಾಯಿಕನ ಮಗ	ಪೆರಾ ದ ಕ್ರುರ್ಝ್
		ಲೋಕು ಶೆಣ್ಯೆಯ ಮಗ	ಪೆರಾ ದ ಕ್ರುರ್ಝ್
		ರಿಲ್ಹೊ ನಾಯಿಕ್	ಅಂತೋನ್ ರೆಬೆಲೊ
ವರ್ಕೆ (ವರ್ಕಾ)	೧೬೩೦	ಮಾಂಗಾ ನಾಯಿಕ್	ಫ್ರಾನ್ಸಿಸ್ಕ್ ಲುಯಿರ್ಝ್
ವೆರೋಡೆ (ವೆರಾಡಾ)	೧೬೩೦	ಬಿಟ್ಟಣ್ಣ ನಾಯಿಕ್	ಪ್ರಾನ್ಸಿಸ್ಕ್ ಲುಯಿರ್ಝ್
		ರಾಮು ನಾಯಿಕನ ಮಗ	ಜುಜೆ ದಿ ನೊರಾಯಿಸ್

ಬಾರ್ದೇಶ್

ಅಲದೋಣೆ (ಅಲ್ದೋನ)	೧೫೯೫	ಸಿರಿಕಾಮತಿಯ ಮಗ	ಸಬಾಸ್ತಿಯಾವ್‌ದ ಕಾಸ್ತಾ
		ಕಿಸ್ತ್ ಪ್ರಭುವಿನ ಮಗ	ಡ್ಯುರೆಟ್ ಮೊನಿರ್ಝ್
		ನರನಾಯಿಕನ ಮಗ	ಮಾನುಎಲ್ ಸಿಕ್ವೇರಾ
		ರೌಲು ಕಾಮತನ ಮಗ	ಮಾನುಎಲ್ ಪಿಂಟೊ
		ಅಂತ ನಾಯಿಕನ ಮಗ	ಅಂತೋನ್ ಫೆರಾವ್
		ಮಾದನಾಯಿಕನ ಮಗ	ತ್ರಿಸ್ತಾವ್ ದಿ ಸೌರ್ಝಾ
		ವಿಟ್ಟು ಪ್ರಭು	ಇರ್ಮಾದ್ ದಿ ಡಯಾಗೊ ಸೊರೇಸ್
	೧೬೪೬	ಗೋವಿಂದ ಪ್ರಭುವಿನ ಮಗ	ಲುಯಿರ್ಝ್ ಮಾರ್ಗುಲ್ಹೊ
ಅನಾಝಿಂ (ಅಂಜುನಾ)	೧೬೫೮	ತಾಡೊಸ್ ಇರ್ಮಾವೊಸ್	ಜುವಾವ್ ದಿ ಸೌರ್ಝಾ
ಪಾಲಿಯೆಮ್	೧೬೪೭	ಸಪಾತಾ ಕಾಮತನ ಮಗ	ಅಂತೋನ್ ದಿ ಅತಾಯಿದ
ಪುನೋಳೆ (ಪುನೋಲ)	೧೬೦೧	ಲೋಗು ಪ್ರಭುವಿನ ಮಗ	ಮಾನುಎಲ್ ಕುರ್‍ಯೆಯ
		ಸಪಾತಾಕಾಮತನ	ಡ್ಯುರೆಟ್ ಲೋಬೊ
ಸಿರುಳೆ (ಸಿರುಲ)	೧೬೪೭	ಉತ್ತರಾಧಿಕಾರಿಗಳು	ಅಲೆಕ್ಸ್ ದಿ ಸೌರ್ಝಾ ಮತ್ತು ಅಂತೋನ್ ದಿ ಅತಾಯಿದ

ಸಂದರ್ಭ ಸೂಚಿ

೧. 'ಬೊಲೆತಿನ್ ದು ಇನ್‌ಸ್ಟಿಟ್ಯೂಟೊ ವಾಸ್ಕೊ ಡ ಗಾಮಾ' ನಂ. ೬೮, ೧೯೫೨ ರಿಂದ ಸಂಗ್ರಹಿಸಲ್ಪಟ್ಟಿತು

ಅನುಬಂಧ ೩

ಗ್ವಾಲಿಯರ್ ಸಂಸ್ಥಾನದಲ್ಲಿ ಸಾರಸ್ವತರು

ಪೂನಾದ ಪೇಶ್ವೆಗಳ ರಾಜ್ಯದಲ್ಲಿ ಚಿತ್ಪಾವನ ಬ್ರಾಹ್ಮಣರು ಪ್ರಾಧಾನ್ಯಕೊಂಡಿದ್ದಂತೆ ನಾಗಪುರದ ಭೋಂಸ್ಲೆಗಳ ಸಂಸ್ಥಾನದಲ್ಲಿ ದೇಶಸ್ಥ ಬ್ರಾಹ್ಮಣರು, ಗಾಯಕ್‌ವಾಡರ ಬರೋಡಾದಲ್ಲಿ ಕಾಯಸ್ಥ ಪ್ರಭುಗಳು ಮತ್ತು ಸಿಂಧಿಯಾರ ಗ್ವಾಲಿಯರ್‌ನಲ್ಲಿ ಸಾರಸ್ವತರ ಉಪ ವಿಭಾಗವಾಗಿದ್ದ ಶೆಣ್ವೆಯರು ವಿಶೇಷ ಸ್ಥಾನಕೊಂಡಿದ್ದರು.

ರಾಮಚಂದ್ರ ಬಾಬಾ ಸುಖ್ತಣ್‌ಕರ್ ಸಿಂಧಿಯಾ ಸಂಸ್ಥಾನಕ್ಕೆ ರೂಪವಿತ್ತ ಶಿಲ್ಪಿಗಳಾಗಿದ್ದರು. ಸಂಸ್ಥಾನದ ಆಡಳಿತಾಂಗವನ್ನು ಸಂಯೋಜಿಸಿದ ಇವರು ಕಾರ್ಯನಿರ್ವಹಣೆಗೆ ಬಹುತಾಂಶ ಸಾವಂತವಾಡಿಯ ಸಾರಸ್ವತರನ್ನು ಆರಿಸಿದ್ದರು. ರಾಜ್ಯದ ಹದಿನೆಂಟು ಪ್ರಮುಖ ಶಾಖೆಗಳನ್ನು ಸಾರಸ್ವತರ ಕೈಗಳಿಗೀಯಲಾಗಿತ್ತು. ಬಾಳೋಬಾ ಅನಂತ ಪಿಂಗೆ ಅವರಲ್ಲೊಬ್ಬರು. ರಾಮಚಂದ್ರ ನಾರಾಯಣ ಪಂತಾಲ್ಕರ್ ಮತ್ತು ರಾಮ್‌ಜಿ ಅನಂತ ದಾಭೋಳ್ಕರ್, ಉಜ್ಜೈನ್ ಸಿಂಧಿಯಾರ ರಾಜಧಾನಿಯಾಗಿದ್ದ ದಿನಗಳಲ್ಲಿ ಅತ್ತ ತೆರಳಿದವರಿದ್ದರು.

ತಾಯಪ್ಪ ಸಿಂಧಿಯಾನೊಂದಿಗಿನ ಮತ ಬೇಧದ ನಿಮಿತ್ತ ರಾಮಚಂದ್ರ ಬಾಬಾ ಸುಖ್ತಣ್‌ಕರ್ ಪೂನಾಕ್ಕೆ ಮರಳಿದರಾದರೂ ಸಾರಸ್ವತರು ಸಿಂಧಿಯಾನ ಆಡಳಿತಾಂಗದಲ್ಲಿನ ಉದ್ಯೋಗವನ್ನು ಮುಂದುವರಿಸಿಕೊಂಡು ಹೋದರು.

ರಾಮಚಂದ್ರ ಬಾಬಾ ಇವರು ಖ್ಯಾತನಾಮ ಸೈನಿಕ ರಾಘೋರಾಮ ರಾಜಾಧ್ಯಕ್ಷ ರಾಂಗ್ಣೆಕರ್ (ರಾಘೋರಾಮ್ ಪಾಗೆ) ಇವರಲ್ಲಿ ಸೇವಾ ವೃತ್ತಿಕೊಂಡಿದ್ದರು. ಅವರು ಸಾವಂತವಾಡಿಯ ಅರವಿಂದೆ ಗ್ರಾಮದ ವಂಶಜಾತ ಪಾಟೀಲ (ಪಟೇಲ)ರ ಮನೆತನಕ್ಕೆ ಸೇರಿದವರಿದ್ದರು. ಅವರ ತಂದೆ ರಾಂಗ್ಣೆ ದುರ್ಗದ 'ದುರ್ಗರಕ್ಷಕ' (ಕಿಲ್ಲೆದಾರ)ರಾಗಿದ್ದರು. ಈ ನಿಮಿತ್ತ ಅವರ ವಂಶಜರು 'ರಾಂಗ್ಣೆಕರ್' ಉಪನಾಮವಿಟ್ಟುಕೊಂಡರು. ರಾಘೋರಾಮ ಬಗಣೆಯ 'ಮಂತ್ರಿ'ಯವರಲ್ಲಿ ಕೆಲಸಕ್ಕಿದ್ದಾಗ ಪೇಶ್ವೆ ಮೊದಲನೆಯ ಬಾಜಿರಾವ್ ಅವರಿಂದ ಆಕರ್ಷಿಸಲ್ಪಟ್ಟರು. ಪೇಶ್ವೆ ಅವರ ಸೇವೆಯನ್ನು ಎರವಲು ಕೊಂಡು ಅಶ್ವದಳದ (ಪಾಗಾ) ಹೊಣೆಗಾರಿಕೆಯನ್ನಿತ್ತರು. 'ನಗರ'ದ ಯುದ್ಧದಲ್ಲಿ ಅವರು ಪ್ರಸಿದ್ಧಿಕೊಂಡರು. ಅವರು ತಾಯಪ್ಪ ಸಿಂಧಿಯಾರ ಮಗ ಮತ್ತು ಉತ್ತರಾಧಿಕಾರಿಯಾಗಿದ್ದ ಕಣ್ಹೋಜಿ ಸಿಂಧಿಯಾ ಅಫಘಾನ್ ಸೈನಿಕರಿಂದ ಸೆರೆಹಿಡಿಯಲ್ಪಟ್ಟು ತಲೆ ಕತ್ತರಿಸಿಕೊಂಡ ಪಾನಿಪತದ ಯುದ್ಧದಲ್ಲೂ ಭಾಗವಹಿಸಿದ್ದರು.

೧೭೬೧ರಲ್ಲಿನ ಪಾನಿಪತದ ದುರಂತದಿಂದ ನಾನಾಸಾಹೇಬ್ ಬಾಳಾಜಿ ಬಾಜಿರಾವ್ ಇವರಿಗೆ ಅತಿ ದೊಡ್ಡ ಆಘಾತವಾಗಿತ್ತು. ಅವರು ಸಂಸ್ಥಾನದ ಆಡಳಿತೆಯ ಹೊಣೆಗಾರಿಕೆಯನ್ನು ತನ್ನ ಸಹೋದರ ರಘುನಾಥರಾವ್ (ರಾಘೊಬಾ ದಾದಾ) ಇವರಿಗಿತ್ತು ಪೂನಾದಲ್ಲಿ, ತನ್ನ ಇನ್ನುಳಿದ ದಿನಗಳನ್ನು ಕಳೆಯಲಾಗಿ, ತಾನು ಕಟ್ಟಿಸಿದ್ದ ಪರ್ವತಿಯ

ದೇವಸ್ಥಾನಕ್ಕೆ ತೆರಳಿದರು. ಜಾನೋಜಿ ಸಿಂಧಿಯಾನ ಮರಣಾನಂತರ ಗದ್ದುಗೆಯೇರಲು ನ್ಯಾಯ ಸಮ್ಮತ ಉತ್ತರಾಧಿಕಾರಿಗಳಾಗಬಲ್ಲ ಗಂಡು ಮಕ್ಕಳಿಲ್ಲದಾಗ ಮಹಾದ್ಜಿ ಸಿಂಧಿಯಾನ ಹಕ್ಕನ್ನು ದುರ್ಲಕ್ಷಿಸಿ ತನ್ನ ರಕ್ಷಣೆಯಲ್ಲಿದ್ದ ನಾರೋಶಂಕರ ಎಂಬಾತನನ್ನು ಉತ್ತರಾಧಿಕಾರಿಯಾಗಿ ನೇಮಿಸಿದರು. ಇದರಿಂದ ಆಡಳಿತಾಂಗದಲ್ಲಿ ಬದಲಾವಣೆಗಳಾಗುವುದನ್ನು ನಿರೀಕ್ಷಿಸಿದ ರಾಘೋರಾಮ ಪಾಗೆ ಪೇಶ್ವೆಯವರ ಸೇವೆಯಲ್ಲಿದ್ದ ಜಿವ್ಬಾದಾದಾನ ಸಹಕಾರ ಕೋರಿದರು.

ಸಂಸ್ಥಾನದಲ್ಲಿನ ಪಿಕಲಾಟವನ್ನು ಹತ್ತಿಕ್ಕಲು ಅನನುಭವಿಯಿದ್ದ ಮಹಾದ್ಜಿಯ ಸಾಮರ್ಥ್ಯದ ಬಗೆಗೆ ಶಂಕೆಕೊಂಡಿದ್ದ ನಾನಾಸಾಹೇಬರಿಗೆ ರಾಘೋರಾಮ ಪಾಗೆ ಮತ್ತು ಜಿವ್ಬಾದಾದಾ ಇವರು ಆಡಳಿತಾಂಗದ ಸುರಕ್ಷೆಯ ಹೊಣೆಗಾರಿಕೆಯನ್ನು ತಾವು ಕೊಳ್ಳುವುದಾಗಿ ಆಶ್ವಾಸನೆಯಿತ್ತರು. ಆನಂತರವೇ ಮಹಾದ್ಜಿಯನ್ನು ಜಾನೋಜಿಯ ಉತ್ತರಾಧಿಕಾರಿಯಾಗಿ ನೇಮಿಸಲಾಯಿತು.

ಸಂಸ್ಥಾನದಲ್ಲಿ ಜಾತ್ ಜನರ ವಿರುದ್ಧ ನಡೆಸಲಾಗಿದ್ದ ಕಾರ್ಯಾಚರಣೆಯಲ್ಲಿ ಭಾಗವಹಿಸಿ ಅಲ್ಲಿ ಶಾಂತಿ ಸ್ಥಾಪಿಸಲು ರಾಘೋರಾಮ ಜಿವ್ಬಾ ದಾದಾನಿಗೆ ಅಮೂಲ್ಯ ಸಹಾಯವಿತ್ತರು. ೧೭೬೩ರಲ್ಲಿ ಸಾವಂತವಾಡಿಯ ಖೇಮ್ ಸಾವಂತನೊಂದಿಗೆ ತಾಯಪ್ಪನ ಮಗಳು ಲಕ್ಷ್ಮೀಬಾಯಿಯ ವಿವಾಹವಾಯಿತು. ವಿವಾಹ ಕಾರ್ಯದ ನಿರ್ವಹಣೆಯ ಹೊಣೆಗಾರಿಕೆ ರಾಘೋರಾಮ ಕೊಂಡಿದ್ದರು.

೧೭೬೦ರ ಯುದ್ಧದಲ್ಲಿ ಕೊಲ್ಲಲ್ಪಟ್ಟ ದತ್ತಾಜಿಯ ವಿಧವೆಯರು ಮತ್ತು ಜಾನೋಜಿ ಇವರಿಗೆ ರಾಘೋರಾಮ ಪಾಗೆಯಲ್ಲಿ ಅಪಾರ ವಿಶ್ವಾಸವಿತ್ತು; ಮಹಾದ್ಜಿಯೊಂದಿಗಿನ ಅವರ ವಿವಾದದಲ್ಲಿ ರಾಘೋರಾಮ ಹಸ್ತಕ್ಷೇಪ ಮಾಡಲೆತ್ನಿಸಿ ಅವರ ಮನಸ್ಸು ನೋಯಿಸಿದರು. ಅದೊಂದು ದಿನ, ಉಜ್ಜೈಯಿನಲ್ಲಿದ್ದಾಗ ಜಗಳವೊಂದರಲ್ಲಿ ರಾಘೋರಾಮ ಕೊಲ್ಲಲ್ಪಟ್ಟರು.

ಜಿವ್ಬಾ ದಾದಾ, ರಾಜ್ಯದ ಸೇನೆಗೆ ಮತ್ತು ಆಡಳಿತಾಂಗಕ್ಕೆ ಗೋವಾದಲ್ಲಿನ ಸಾರಸ್ವತರನ್ನು ನೇಮಿಸಿದರು. ಅವರ ಕಾಲದಲ್ಲಿ ಅವರಲ್ಲಿನ ಲಖ್ಬಾ ದಾದ್ ಲಾಡ್, ಭೀಮರಾವ್ ಮೋದಿ, ಯೇಸಾಜಿ ವಾಸುದೇವ ರೇಗೆ, ಅಂತೋಜಿ ರಘುನಾಥ, ಯಶವಂತರಾವ್, ಶಿವಾಜಿ ವಾಗ್ಲೆ, ರಾಮ ಕೇರ್ಕರ್ ಹೆಸರು ಗಳಿಸಿದರು. ಆ ಕಾಲದ ೨೫೯ ಸರದಾದರರ ಯಾದಿಯಲ್ಲಿ ಅರ್ಧಕ್ಕರ್ಧ ಸಾರಸ್ವತರ ಹೆಸರುಗಳಿದ್ದವು.

ಮಹಾದ್ಜಿ ಸಿಂಧಿಯಾರ ಮಂತ್ರಿಗಳ ಈ ಕೆಳಗಣ ಯಾದಿಯಿಂದ ಅವರ ಕಾಲದಲ್ಲಿ ಸಾರಸ್ವತರು ಕೊಂಡಿದ್ದ ಮಹತ್ತಿನ ಅರಿವಾಗುತ್ತದೆ:

೧) ಬಕ್ಷಿ (ಸೇನಾಪತಿ) - ಜಿವ್ಬಾ ದಾದಾ ಕೇರ್ಕರ್.

ರಾಜ್ಯಕ್ಕೆ ಸಂಬಂಧಿಸಿದ್ದ ಮಹತ್ತಿನ ಕಾರ್ಯಗಳ ನಿಮಿತ್ತ ಮಹಾದ್ಜಿ ಸಿಂಧಿಯಾ ಸಂಸ್ಥಾನದಿಂದ ದೂರಕ್ಕೆ ಸಾಗಿದ್ದ ದಿನಗಳಲ್ಲಿ ಇವರು ರಾಜ್ಯದ ಸಮಗ್ರ ಆಡಳಿತಾಂಗದ ಸೂತ್ರಗಳನ್ನು ತನ್ನ ಕೈಗಳಲ್ಲಿ ಕೊಳ್ಳುತ್ತಿದ್ದರು.

೨) ನಾಯಿಬ್ ಬಕ್ಷಿ - ರಾಘೋರಾಮ ಪಾಗೆ.

೩) ಕಾರಭಾರಿ (ದಿವಾನ) - ಬಾಳೋಬಾ ತಾತ್ಯಾ ಇವರು ಗೃಹ ಮತ್ತು ವಿದೇಶ ವ್ಯವಹಾರ ನೋಡಿಕೊಳ್ಳುತ್ತಿದ್ದರು.

೪) ಫಡ್ನಿಸ್ (ದಫ್ತರ್ ದಾರ್) - ಸದಾಶಿವ ಮಲ್ಹಾರ್ ಇವರು ಪರರಾಜ್ಯಗಳೊಂದಿಗಿನ ಪತ್ರ ವ್ಯವಹಾರ ನೋಡಿಕೊಳ್ಳುತ್ತಿದ್ದರು. ದೇಶಸ್ಥ ಬ್ರಾಹ್ಮಣರಲ್ಲೊಬ್ಬಾತ ಇವರ ಸಹಾಯಕನಾಗಿದ್ದ.

೫) ತೋಫ್ ಖಾನಾ (ಫಿರಂಗಿ ದಳ) - ಲಖ್ಬಾ ದಾದಾ ಲಾಡ್ ಇವರು ಪ್ರಮುಖ ದುರ್ಗಗಳ ಮತ್ತು ಯುದ್ಧ ಸಾಧನಗಳ ಹೊಣೆಗಾರಿಕೆ ಕೊಂಡಿದ್ದರು.

೬) ಮೋದಿಖಾನಾ (ದಂಡಿನ ಸರಬರಾಯಿಯ ಖಾತೆ) - ಭೀಮರಾವ್ ಮೋದಿ.

೭) ಪರ ರಾಜ್ಯಗಳೊಂದಿಗಿನ 'ಬಕ್ಷಿ'ಯ ವ್ಯವಹಾರ ನಿಭಾಯಿಸುವ ಕಾರಭಾರಿ- ಬಾಳಾಜಿ ರಾಮ ಕೇರ್ಕರ್. ಇವರು ಜಿವ್ಬಾ ದಾದಾನ ಅಧೀನವಿದ್ದು ಸೈನ್ಯದ ವೇತನ, ಲೆಕ್ಕಾಚಾರ, ನೇಮಕಾತಿ ಇತ್ಯಾದಿಗಳನ್ನು ನೋಡಿಕೊಳ್ಳುತ್ತಿದ್ದರು. ಅವರ ನಂತರ ಜಿವ್ಬಾ ದಾದಾನ ಮಗ ನಾರಾಯಣ ರಾವ್ ಬಕ್ಷಿ ಈ ಹುದ್ದೆಯ ಹೊಣೆಗಾರಿಕೆ ವಹಿಸಿಕೊಂಡರು.

೮) ಸಿಂಧಿಯಾನ ವೈಯಕ್ತಿಕ ವ್ಯವಹಾರಗಳ ಕಾರಭಾರಿ-ಬಳವಂತ ರಾವ್ ಮಹಾದೇವ ಶಿರಾಡ್ಕರ್

೯) ಪಾಗೆ (ಅಶ್ವದಳ)ಯ ಕಾರಭಾರಿ-ಧೊಂಡೋಬಾ ದಾದಾ ಪಾಗ್ನಿಸ್.

೧೦) ಪಾಲಿಖಾನಾ (ಆನೆಗಳು)- ಸಾಬಾಜಿರಾವ್ ಮೋದಿ.

ಬಾಳೋಬಾ ತಾತ್ಯಾ, ಲಖ್ಬಾ ದಾದಾ ಲಾಡ್ , ನಾರಾಯಣ ರಾವ್ ಬಕ್ಷಿ ಇವರ ಜೀವನ, ಉದ್ಯೋಗಗಳಕುರಿತಾದ ವಿವರಗಳನ್ನು ಮತ್ತು ಜಗೋಬಾ ಬಾಪುವಿನ ಮೊದಲ ದಿನಗಳ ಬದುಕಿನ ವೃತ್ತಾಂತವನ್ನು ಈ ಮೊದಲೇ ನಮೂದಿಸಲಾಗಿದೆ.

ಸದಾಶಿವ ಮಲ್ಹಾರ್(ಭಾನ್ ದಿವಾನ್)

ಸದಾಶಿವ ಮಲ್ಹಾರ್ ಕುಶಲ ಅಧಿಕಾರಿ,ಚತುರ ರಾಜಕಾರಣಿಗಳಾಗಿದ್ದು ಮಹಾದ್ಜಿ ಸಿಂಧಿಯಾ ಅವರ ಕುರಿತು ಅಭಿಮಾನ ಕೊಂಡವರಿದ್ದರು. ಸಂಸ್ಥಾನದ ಆಡಳಿತೆಯನ್ನು ಸುಸೂತ್ರವಾಗಿ ಸಾಗಿಸಲು ಜಿವ್ಬಾ ದಾದಾ ಇವರಿಗೆ ಬಹಳ ಸಹಾಯ ಮಾಡಿದ್ದರು. ಮಹಾದ್ಜಿಯವರ ರಾಯಭಾರಿಯ ರೂಪದಲ್ಲಿ ಅವರು ಕಲ್ಕತ್ತಾದಲ್ಲಿದ್ದ ಗವರ್ನರ್ ಜನರಲ್ ಹೇಸ್ಟಿಂಗ್ಸ್‌ನ ಭೇಟಿಕೊಂಡು ಅತ್ಯಮೂಲ್ಯ ಸೇವೆಸಲ್ಲಿಸಿದ್ದರು. ೧೭೯೫ರಲ್ಲಿನ ಖರ್ಡಾದ ಯುದ್ಧದ ಸಮಯ ದೌಲತ್ ರಾವ್ ಸಿಂಧಿಯಾರ ಸೇನೆಯ ಹೊಣೆಗಾರಿಕೆ ಕೊಂಡಿದ್ದರು. ಅತ್ಯಮೂಲ್ಯ ಸೇವೆ ಪ್ರಶಂಸಿಸಿ ಗುಜರಾತದಲ್ಲಿ ಅವರಿಗೆ ಸುಮಾರು ನಾಲ್ಕು ಲಕ್ಷ ರೂಪಾಯಿಗಳಷ್ಟರ ಆದಾಯದ ಜಾಗೀರನ್ನೀಯಲಾಯಿತು. ಆದರೆ ಅವರು ಅದರ ಸಣ್ಣ ಭಾಗವೊಂದನ್ನಷ್ಟೆ ಇರಿಸಿಕೊಂಡು ಅದನ್ನು ನರ್ಮದಾ ನದಿಯ ತೀರದಲ್ಲಿನ ಶುಕ್ಲ ತೀರ್ಥ ದೇವಸ್ಥಾನಕ್ಕಿತ್ತರು; ಉಳಿದುದನ್ನು ಸಿಂಧಿಯಾರಿಗೆ ಮರಳಿಸಿದರು.

ಬಾಳಾಜಿ ಅನಂತ ಪಿಂಗೆ (ಬಾಳೋಬಾ ತಾತ್ಯಾ ಪಾಗ್ನಿಸ್)

ಪಳಗಿದ ರಾಜನೀತಿಜ್ಞರಿದ್ದ ಇವರು ರಾಮಚಂದ್ರ ಬಾಬಾ ಸುಖ್ತಣ್‌ಕರ್ ಮತ್ತು ಜಿವ್ಬಾ ದಾದಾ ಇವರಿಗೆ ಪ್ರಶಂಸನೀಯ ಸೇವೆ ಸಲ್ಲಿಸಿದ್ದರು.ಬಾಳಾಜಿಯ ಲೆಕ್ಕಣಿ ಮತ್ತು ಜಿವ್ಬಾ ದಾದಾನ ಖಡ್ಗ ಇವುಗಳ ನೆರವಿನಿಂದ ಮಹಾದ್ಜಿ ಸಿಂಧಿಯಾ, ನಾನಾಫಡ್ನವೀಸರ ಕಾರಸ್ಥಾನವನ್ನು ವಿಫಲಗೊಳಿಸುವಲ್ಲಿ ಯಶ ಕೊಂಡರೆನ್ನಲಾಗುತ್ತದೆ.

ಜಗನ್ನಾಥ ರಾಮ ಕೇರ್ಕರ್ (ಜಗೋಬಾ ಬಾಪು)

ಜಿವ್ಬಾ ದಾದಾನ ಸೋದರ ಬಂಧು ಹಾಗೂ ಸೈನಿಕನೊಬ್ಬನಿದ್ದ ಇವರು ಅವರ ದಂಡಯಾತ್ರೆಯಲ್ಲಿ ಭಾಗವಹಿಸಿ ತನ್ನ ಅಮೂಲ್ಯ ಸೇವೆ ಸಲ್ಲಿಸಿದ್ದರು. ರಜಪುತಾನಾದ ಮೇಲಣ ದಂಡಯಾತ್ರೆಯಲ್ಲಿ ಇವರು ಜಿರಣ್ ದುರ್ಗವನ್ನು ಸ್ವಾಧೀನ ಪಡಿಸಿಕೊಂಡರು. ಇವರು ಬ್ರಿಟಿಷರೊಂದಿಗಿನ ಯುದ್ಧದಲ್ಲಿ ಮತ್ತು ಆಗ್ರಾ, ಮೀರತ್‌ಗಳಲ್ಲಿನ ಪ್ರಸಿದ್ಧ ಕದನಗಳಲ್ಲೂ ಭಾಗವಹಿಸಿದ್ದರು. ೧೭೮೮ರ ಡಿಸೆಂಬರ್ ತಿಂಗಳಲ್ಲಿ ಅವರು ಧೊಂಡೋಬಾ ದಾದಾ ಪಾಗ್ನಿಸ್ ಇವರ ನೆರವುಕೊಂಡು ಗುಲಾಮ್ ಖಾದರ್‌ನನ್ನು ಸೆರೆ ಹಿಡಿದರು. ಜಿವ್ಬಾ ದಾದಾನ ನಂತರ ಇವರು ಸಿಂಧಿಯಾ ಸೇನೆಯ ಪ್ರಧಾನ ದಂಡಾಧಿಕಾರಿಯ ಅಧಿಕಾರ ವಹಿಸಿ ರಾಜ್ಯದಲ್ಲಿ ಶಾಂತಿ ಸ್ಥಾಪಿಸಿದರು. ಧೀರ, ದಯಾಳುವಿದ್ದ ಇವರು ಆಪತ್ತಿನ ಕಾಲದಲ್ಲೂ ಶಾಂತರಿರುತ್ತಿದ್ದರು.

ಯಶವಂತ ಶಿವಾಜಿ ಕೇರ್ಕರ್ (ಯಶ್ವಂತ್ ರಾವ್ ಭಾನ್)

ಜಿವ್ಬಾ ದಾದಾನ ಎರಡನೆಯ ಮಗನಿದ್ದ ಇವರು ಸಮರ್ಥ ಸೈನಿಕನೊಬ್ಬರಾಗಿದ್ದರು. ತಂದೆಯ ದಂಡಯಾತ್ರೆಯಲ್ಲಿ ಭಾಗವಹಿಸಿ ತನ್ನ ಹೊಣೆಗಾರಿಕೆಯನ್ನು ಯಶಸ್ವಿ ರೀತಿಯಿಂದ ನಿಭಾಯಿಸಿದ್ದರು. ಇವರು ಕುಂಬೇರ್, ರಾಜ್‌ನಗರ್ ಮತ್ತು ದಯಾಲ್‌ಗಡಗಳನ್ನು ಸ್ವಾಧೀನ ಪಡಿಸಿದರು. ತನ್ನನ್ನು ದತ್ತಕ್ಕೆ ಕೊಂಡಿದ್ದ ಶುಭ ನಾನಾನ ಉತ್ತರಾಧಿಕಾರಿಯ ರೂಪದಲ್ಲಿ, ೧೮೦೨ರಲ್ಲಿ ಅಜ್ಮೀರಿನ ಸರ್ ಸುಭೇದಾರನ ಅಧಿಕಾರಕೊಂಡರು. ಆನಂತರ ಇವರು ಮೇವಾರಿನ ಸುಭೇದಾರರಾದರು. ಇವರು ಆಕರ್ಷಕ ವ್ಯಕ್ತಿತ್ವ ಮತ್ತು ಬಿಡುಗೈಯ ದಾನಕ್ಕೆ ಹೆಸರು ಕೊಂಡವರಿದ್ದರು. ಕುದುರೆಗಳ ಕುರಿತು ಅಪಾರ ಜ್ಞಾನ, ಅನುಭವ ಕೊಂಡಿದ್ದ ಇವರು ನಿಪುಣ ಸವಾರರೂ ಆಗಿದ್ದರು. ಅವರ ಪತ್ನಿ ಗಂಗಾಬಾಯಿ ಧೈರ್ಯಶಾಲಿ, ದಾನಶೀಲರಿದ್ದು ಆಗಾಗ ಕುದುರೆ ಸವಾರಿ ಮಾಡುತ್ತಿದ್ದರು.

ಜಗೋಬಾ ಬಾಪು ಮತ್ತು ಯಶ್ವಂತ್ ರಾವ್ ಭಾನ್ ಇವರು ರಾಜ್ಯದ ಕಾರ್ಯೋದ್ಯೋಗಗಳಲ್ಲಿ ಅತಿ ಮಹತ್ತಿನ ಪಾತ್ರ ವಹಿಸಿದ್ದರು.

೧೮೦೦ರ ಮೇ ತಿಂಗಳಲ್ಲಿನ ಘಟನೆಯೊಂದರ ಬಳಿಕ ಸಂಸ್ಥಾನ ಜಗೋಬಾ ಬಾಪು, ಲಖ್ಬಾ ದಾದಾ, ಬಾಳಾರಾವ್ ಭಾನ್, ಬಕ್ಷಿ ಮಾಮ್‌ರಾವ್ ಮತ್ತು ಇನ್ನಿತರರ ಸೇವೆಯನ್ನು ಕಳೆದುಕೊಂಡಿತು. ವಿಸಾಜಿ ರಾಮಕೃಷ್ಣ ಝುಣಾಖಿರ್, ಲಖ್ಬಾ ದಾದಾ ಮಳ್ಗಾಂವ್‌ಕರ್, ಬಾಳಾಜಿ ಸಾಬಾಜಿ ಟಾಖಿ, ಮಾಧವ ರಾವ್ ನೀಲಕಂಠ ಅರಸ್, ವಿಟ್ಠಲ ಸಾಬಾಜಿರೇಗೆ,

ಲಡ್ಕೋಬಾ ಮೋದಿ, ಲಖ್ಬಾ ನಾಡಕರ್ಣಿ, ವಿಟ್ಠಲ ನಾರಾಯಣ ಮತ್ತು ಇತರ ಎಷ್ಟೋ ಮಂದಿ ಸಾರಸ್ವತರು ತಮ್ಮ ಸಂಸಾರದೊಂದಿಗೆ ಗ್ವಾಲಿಯರ್ ಬಿಟ್ಟು ಹೋದರು. ರಜಪೂತ, ಮರಾಠಾ ಮತ್ತು ಯುರೋಪೀಯ ಅಧಿಕಾರಿಗಳು ಕೂಡಾ ಅವರನ್ನು ಹಿಂಬಾಲಿಸಿದರು. ವೈದ್ಯ, ಪೊಟ್ನಿಸ್, ನಾಬರ್ ಮತ್ತು ಇನ್ನು ಕೆಲವು ಕುಟುಂಬಗಳು ಬರೋಡಾಕ್ಕೆ ಹೋದವು. ಕೊಟ್ನಿಸ್, ಲಾಡ್, ವಾಗ್ಳೆ ಮತ್ತು ಇನ್ನು ಕೆಲವರು ಇಂದೋರಿಗೆ ಹೋದರು. ಕೆಲವೊಬ್ಬರನ್ನು ನಾಗಪುರ, ರತ್ಲಾಮ್, ಜೋಧಪುರ, ಕೋಟಾ ಮತ್ತು ರಜಪುತಾನಾಗಳಲ್ಲಿನ ಅರಸರು ಸ್ವಾಗತಿಸಿದರು.

ಹೊಸದಾಗಿ ಬಂದ ಅಧಿಕಾರಿಗಳು ಅನನುಭವಿಗಳಾಗಿದ್ದರು. ಸಂಸ್ಥಾನದೊಳಗಣ ಪರಿಸ್ಥಿತಿ, ರಾಜ್ಯದ ವಿಭಿನ್ನ ಭಾಗಗಳಿಂದ ಬರಲಿರುವ ಕಂದಾಯ, ಪರರಾಜ್ಯಗಳೊಂದಿನ ವ್ಯವಹಾರ ಮುಂತಾದವುಗಳ ಕುರಿತು ಅವರು ಏನೊಂದನ್ನೂ ಅರಿಯದಿದ್ದರು. ಜಿವ್ಬಾ ದಾದಾ ಸಂಘಟಿಸಿದ್ದ ರಾಜ್ಯಾಡಳಿತೆಯ ಸಮರ್ಥ ಯಂತ್ರಣ ಕುಸಿದುಕೊಂಡಿತು. ಇದರ ಪರಿಣಾಮ ಸಂಸ್ಥಾನಕ್ಕೆ ಅಪತ್ಕಾರಿಯಾಯಿತು.

ಪುರುಷೋತ್ತಮ ಜಗನ್ನಾಥ ಕೇರ್ಕರ್ (ಲಾಲಾಸಾಹೇಬ್)

ತನ್ನ ಮಗ ರಾಮರಾವ್ (ಅಪ್ಪಾಸಾಹೇಬ್) ನ ಮರಣಾನಂತರ ಜಗೋಬಾ ಬಾಪು, ಯಶವಂತ ರಾವ್ ಭಾನ್‌ನ ಮೊಮ್ಮಗನಿದ್ದ ಪುರುಷೋತ್ತಮ ಜಗನ್ನಾಥ ಕೇರ್ಕರ್‌ನನ್ನು ದತ್ತಕ್ಕೆ ಕೊಂಡರು. ಅವರು ಸಿಂಧಿಯಾ ಸೇನೆಯ ಪ್ರಧಾನ ದಂಡಾಕಾರಿಯಾಗಿದ್ದ ಅಜ್ಜನ ಸ್ಥಾನ ಗ್ರಹಿಸಿದರು. ಸಿಂಧಿಯಾ ಅರಸು ಇವರಿಗೆ 'ದೌಲತ್ ರಾವ್ ಬಹಾದರ್ ದಿಲಾವರ್ ಜಂಗ್' ಎಂಬ ಬಿರುದನ್ನಿತ್ತರು. ಆಗಿನ ಅರಸನ ಸೋದರ ಮಾವನ ಮುನಿಸಿಗೆ ಬಲಿ ಬಿದ್ದ ಅವರು ೧೮೬೧ರ ಜನವರಿ ತಿಂಗಳಲ್ಲಿ ತನ್ನ ಹಿರಿಯರ ಹುಟ್ಟೂರಿಗೆ ಮರಳಿದರು. ೧೮೮೧ರಲ್ಲಿ ಅಲ್ಲಿಯೇ ಅವರ ನಿಧನವಾಯಿತು.

ಯಶ್ವಂತ್ ರಾವ್ ಲಾಡ್

ವಾರನ್ ಹೇಸ್ಟಿಂಗ್ಸ್ ಪಿಂಡಾರಿಗಳ ವಿರುದ್ಧ ನಡೆಸಿದ್ದ ಕಾರ್ಯಾಚರಣೆ ಮುಗಿಯುತ್ತಲೇ ಪೇಶ್ವೆ ಎರಡನೆಯ ಬಾಜಿರಾವ್ ಪೂನಾದಲ್ಲಿನ ಬ್ರಿಟಿಷ್ ರೆಸಿಡೆನ್ಸಿಯನ್ನು ಸುಟ್ಟು ಹಾಕಿದರು. ಮತ್ತು ೧೮೧೭ರ ನವೆಂಬರ್ ತಿಂಗಳಲ್ಲಿ ಬ್ರಿಟಿಷರ ಮೇಲೆ ಹಲ್ಲೆ ಮಾಡಿದರು. ಅದಾದ ಸ್ವಲ್ಪ ಸಮಯದ ನಂತರ ಅಪ್ಪಾ ಸಾಹೇಬ್ ಭೋಂಸ್ಲೆ ಪೇಶ್ವೆಗಳನ್ನನುಕರಿಸಿ ನಾಗಪುರದಲ್ಲಿನ ಬ್ರಿಟಿಷ್ ರೆಸಿಡೆನ್ಸಿಯ ಮೇಲಕ್ಕೆರಗಿದರು. ೧೮೧೭ರ ಡಿಸೆಂಬರ್ ತಿಂಗಳಲ್ಲಿ ನಾಗಪುರ ಮತ್ತು ಸೀತಾಬಲ್ಡಿಯ ಯುದ್ಧದಲ್ಲಿ ಭೋಂಸ್ಲೆಯರನ್ನು ಸೋಲಿಸಿದರು.

೧೮೧೮ರ ಫೆಬ್ರವರಿ ತಿಂಗಳ ೨೦ರಂದು ಶೋಲಾಪುರ ಜಿಲ್ಲೆಯ ಅಷ್ಟಿಯಲ್ಲಿ ಪೇಶ್ವೆಯವರ ಸೇನೆಯನ್ನು ಸೋಲಿಸಲಾಯಿತು. ಪೇಶ್ವೆ ಪಲಾಯನ ಮಾಡಿದರು.

ಯಶ್ವಂತ್ ರಾವ್ ಲಾಡ್, ಸಿಂಧಿಯಾರ ದುರ್ಗ ಅಶಿರ್ಗಡ್‌ದ ಕಿಲ್ಲೆದಾರರಾಗಿದ್ದರು. ೧೮೧೮ರ ಮೇ ತಿಂಗಳ ೫ರಂದು ತಪ್ತಿನದಿಯನ್ನು ದಾಟಿ ಬಂದ

ಬಾಜಿರಾವ್ ಇವರಿಗೆ ದುರ್ಗ ಪ್ರವೇಶಿಸಲು ಆಹ್ವಾನವೀಯಲಿಲ್ಲ; ಕಾರಣ ದುರ್ಗ ಪ್ರವೇಶಿಸಲೀಯಬಾರದೆಂಬ ಗುಪ್ತ ಸೂಚನೆ ಕೊಡಲಾಗಿತ್ತು. ಆದರೆ ಪಲಾಯನ ಮಾಡಿದ್ದ ಅಪ್ಪಾ ಸಾಹೇಬರನ್ನು ಬೆನ್ನಟ್ಟಿದ ಬ್ರಿಟಿಷ್ ಸೇನೆ ಅತ್ತ ಬಂದಾಗ (೧೮೧೮ರ ಮೇ ತಿಂಗಳ ೧೮) ಅವರಿಗೆ ಆಶ್ರಯವೀಯಲಾಯಿತು. ದುರ್ಗದ ರಕ್ಷಣೆಗಾಗಿ ಇವರು ಕೆಚ್ಚೆದೆಯಿಂದ ಕಾದಾಡಿದರಾದರೂ ಬ್ರಿಟಿಷ್ ಸೇನೆ ಅದನ್ನು ೧೮೧೯ರ ಎಪ್ರಿಲ್ ತಿಂಗಳ ೯ರಂದು ತನ್ನ ಸ್ವಾಧೀನ ಪಡಿಸಿಕೊಂಡಿತು. ಅಪ್ಪಾ ಸಾಹೇಬರು ದುರ್ಗದಿಂದ ಓಡಿಹೋದರು; ಯಶ್ವಂತ್‌ರಾವ್ ಇವರನ್ನು ಸೆರೆಹಿಡಿದರು. ಬ್ರಿಟಿಷ್ ಸೇನೆ ಅವರ ಶೌರ್ಯಕ್ಕೆ ಮೆಚ್ಚಿಗೆ ತೋರಿತು; ಮತ್ತೆ ಸೇಡಿನ ಬದಲು ಸ್ವಾತಂತ್ರ್ಯವಿತ್ತಿತು. ದಾರಿದ್ರ್ಯದ ದಿನಗಳೆಯುತ್ತಿದ್ದ ಅವರು ೧೮೨೦ರಲ್ಲಿ ತೀರಿಕೊಂಡರು.




ಶ್ರೀ ಕುತ್ಪಾಡಿ ರಾಧಾಕೃಷ್ಣ ಹೆಗ್ಡೆ

ಆಂಗ್ಲ ಭಾಷೆಯಲ್ಲಿ ಪ್ರಕಾಶಗೊಂಡ ಈ ಪುಸ್ತಕವನ್ನು ಕನ್ನಡದಲ್ಲಿ ಭಾಷಾಂತರ ಮಾಡಿದವರು ಉಡುಪಿಯ ಸಮೀಪ ಕಡಲ ಬಳಿಯ ಕುತ್ಪಾಡಿ ಹಳ್ಳಿಯಲ್ಲಿ 1936ರಲ್ಲಿ ಜನಿಸಿದ ಶ್ರೀ ರಾಧಾಕೃಷ್ಣ ಹೆಗ್ಡೆಯವರು.

ಆರ್ಥಿಕ ಪರಿಸ್ಥಿತಿಯಿಂದ ಮೆಟ್ರಿಕ್ಯುಲೇಷನ್ ಸ್ತರದಲ್ಲೇ ತಮ್ಮ ಶಿಕ್ಷಣವನ್ನು ಮುಗಿಸಿದರೂ, ಎಳವೆಯಿಂದಲೇ ಸಾಹಿತ್ಯದಲ್ಲಿ ಅಭಿರುಚಿ ಇದ್ದಕಾರಣ ಅವರು ಅನೇಕ ಸಣ್ಣ ಕಥೆಗಳನ್ನು ಇತರ ಗಂಥಗಳ ಭಾಷಾಂತರಗಳನ್ನೂ ಅನೇಕ ಕನ್ನಡ ವಾರಪತ್ರಿಕೆಗಳಲ್ಲಿ ಬರೆದು ಓದುಗರ ಮೆಚ್ಚಿಗೆಗೆ ಪಾತ್ರರಾದರು. ಭಾವಚಿತ್ರಗಳಲ್ಲಿ ಹವ್ಯಾಸವಿಟ್ಟುಕೊಂಡಿದ್ದ ಶ್ರೀ ಹೆಗ್ಡೆಯವರು ದೇಶದಾದ್ಯಂತ ನೂರಕ್ಕೂ ಮಿಕ್ಕ ತೀರ್ಥ ಕ್ಷೇತ್ರ ಹಾಗೂ ಐತಿಹಾಸಿಕ ಸ್ಥಳಗಳನ್ನು ಸಂದರ್ಶಿಸಿ ಬರೆದ ಲೇಖನಗಳು ವಾರ ಪತ್ರಿಕೆಗಳಲ್ಲಿ ಧಾರಾವಾಹಿಯಾಗಿ ಪ್ರಕಾಶಗೊಂಡಿವೆ. ಇವಲ್ಲಿ ಹಲವನ್ನು ಆರಿಸಿ ಪುಸ್ತಕ ರೂಪದಲ್ಲಿ ಪ್ರಕಾಶಿಸುವ ಪ್ರಯತ್ನದಲ್ಲಿದ್ದಾರೆ.

ತಮ್ಮ ತಾರುಣ್ಯದಿಂದ ಮುಂಬಯಿ ನಗರದಲ್ಲಿ ನೆಲೆಸಿದ ಶ್ರೀ ಹೆಗ್ಡೆಯವರು ಈಗ ಈ ಪ್ರಾಯದಲ್ಲೂ ಭಗವದ್ಗೀತೆಯಲ್ಲಿ ಅಡುಗಿದ ಗೂಡಾರ್ಥವನ್ನು ಜನ ಸಾಮಾನ್ಯರಿಗೆ ಮನವರಿಕೆ ಮಾಡಲು ಸಂತ ಜ್ಞಾನೇಶ್ವರರು ಮರಾಠಿಯಲ್ಲಿ ಬರೆದ ಪ್ರಸಿದ್ಧ "ಜ್ಞಾನೇಶ್ವರಿ"ಯನ್ನೂ, ಅನೇಕ ಆಚಾರ್ಯರೂ ಹಾಗೂ ವಿದ್ವಾಂಸರು ಬರೆದ ವಿಮರ್ಶಾತ್ಮಕ ಹೊತ್ತಿಗೆಗಳನ್ನೂ ಅಧ್ಯಯನ ಮಾಡಲು ತೊಡಗಿದ್ದಾರೆ.

ಯಾವುದೇ ಪುಸ್ತಕವನ್ನು ಇನ್ನೊಂದು ಭಾಷೆಯಲ್ಲಿ ಭಾಷಾಂತರ ಮಾಡುವುದು ಸುಲಭವಲ್ಲ. ಮೂಲ ಭಾಷೆಯ ನಾಜೂಕಾದ ಶೈಲಿಯಲ್ಲಿ ಬರೆದ ಅಭಿಪ್ರಾಯಗಳನ್ನು ಬೇರೊಂದು ಭಾಷೆಯಲ್ಲಿ ಅದೇ ಸಮಂಜಸ ಶೈಲಿಯಲ್ಲಿ ಕುಂದಿಲ್ಲದೇ ಬರೆಯುವುದು ಬಹಳ ಕಠಿಣ. ಆದರೂ ಶ್ರೀ ಹೆಗ್ಡೆಯವರು ಇದನ್ನು ಬಹಳ ಯಶಸ್ವಿಯಾಗಿ ಮಾಡಿದ್ದಾರೆ. ಯಾವ ಪ್ರಲೋಭವೂ ಇಲ್ಲದೇ ಕೇವಲ ಭಾಷಾಸೇವೆಯ ಸರಳಭಾವದಿಂದ ಬಹಳ ಪ್ರೀತಿಯಿಂದ ಮಾಡಿದ ಶ್ರೀ ಕುತ್ಪಾಡಿ ರಾಧಾಕೃಷ್ಣ ಹೆಗ್ಡೆಯವರಿಗೆ ನಾವು ಚಿರ ಋಣಿ.



ವೆಂಕಟ್ರಾಯ ನಾರಾಯಣ ಕುಡ್ವ, ಎಮ್. ಎ. (ಮದ್ರಾಸ್) ಬಿ.ಎ. (ಕ್ಯಾಂಟಬ್) ಸಿ.ಐ.ಇ., ಐ.ಸಿ.ಸ್. ೧೮೯೮-೧೯೬೧

ತನ್ನ ಪ್ರತಿಭಾಪೂರ್ಣ ಶಿಕ್ಷಣದ ನಂತರ ವೆಂಕಟ್ರಾಯ ನಾರಾಯಣ ಕುಡ್ವರು ಯುನೈಟೆಡ್ ಕಿಂಗ್‌ಡಮ್‌ನಲ್ಲಿನ ಶಿಕ್ಷಣಕ್ಕಾಗಿ 'ಟಾಟಾ ಲೋನ್ ಸ್ಕಾಲರ್‌ಶಿಪ್' ಹಾಸಿಲುಗೊಳಿಸಿ ೧೯೨೨ರಲ್ಲಿ ಇಂಡಿಯನ್ ಸಿವಿಲ್ ಸರ್ವಿಸಿನ ಹುದ್ದೆಗೆ ಅರ್ಹತೆ ಗಳಿಸಿದರು. ಹಲವೊಂದೆಡೆ ಅಸಿಸ್ಟೆಂಟ್ ಕಲೆಕ್ಟರ್, ಸಬ್ ಕಲೆಕ್ಟರ್ ಮತ್ತು ದಕ್ಷಿಣ ಆರ್ಕಾಟ್ ಜಿಲ್ಲೆಯ ಕಲೆಕ್ಟರ್ ಆದ ಶ್ರೀ ಕುಡ್ವ, 'ಸೆಕ್ರೆಟರಿ ಟು ಗವರ್ನ್‌ಮೆಂಟ್, ಲೋಕಲ್ ಎಡ್ಮಿನಿಸ್ಟ್ರೇಷನ್' ಮತ್ತು 'ಸೆಕ್ರೆಟರಿ, ಪಬ್ಲಿಕ್ ವರ್ಕ್ಸ ಡಿಪಾರ್ಟ್‌ಮೆಂಟ್'ಗಳ ಹುದ್ದೆ ಕೊಂಡರು. 'ಬೋರ್ಡ್ ಆಫ್ ರೆವೆನ್ಯೂ'ಗೆ ನೇಮಿಸಲ್ಪಟ್ಟ ಇವರು ೧೯೫೦ರಲ್ಲಿ ಇದರ ಮೊದಲ ಸದಸ್ಯರಾದರು. ತನ್ನ ನಿವೃತ್ತಿಗೂ ತುಸು ಮುನ್ನ, ೧೯೫೭ರಲ್ಲಿ ಅವರು ಈ ಪುಸ್ತಕದ ಬರವಣಿಗೆಗೆ ತೊಡಗಿದರು. ತಾನು ಆರಿಸಿದ್ದ ವಿಷಯದಲ್ಲಿ ಅತಿ ಆಸಕ್ತಿಕೊಂಡಿದ್ದ ಇವರು ದೇಶದೆಲ್ಲೆಡೆಗಳಿಂದ ಮಾಹಿತಿ ಸಂಗ್ರಹಿಸಲು ಶ್ರಮಪಟ್ಟು ದುಡಿದರು. ದುರ್ದೈವಕ್ಕೆ ತಾನು ಬರೆದ ಪುಸ್ತಕ ಮುದ್ರಿಸಲ್ಪಟ್ಟುದನ್ನು ಕಾಣಲು ಇವರು ಬದುಕಲುಳಿಯಲಿಲ್ಲ.

ಅವರ ಪಕ್ಕದಲ್ಲಿ ಅವರ ಪತ್ನಿ ಶ್ರೀಮತಿ ರಾಜೀವಿ ಬ್ಯಾ ಕುಡ್ವರಿದ್ದಾರೆ.

"....... ಸಾರಸ್ವತರು, ಮುಖ್ಯತಃ ದಕ್ಷಿಣದಲ್ಲಿನ ಅವರ ಸಮಾಜಬಾಂಧವರು ತಮ್ಮ ವಿದ್ವತ್ತು ಮತ್ತು ಉದ್ಯಮಶೀಲತೆಗೆ ಹೆಸರುಗೊಂಡಿರುತ್ತಾರೆ. ಈ ಪುಸ್ತಕ ಭಾರತದ ಸಾಮಾಜಿಕ ಜೀವನವನ್ನು ಸುಸಂಕೃತ ಮತ್ತು ಸಮೃದ್ಧಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಸಮಾಜವೊಂದರ ಸಂಕ್ಷಿಪ್ತ ಇತಿಹಾಸ ಕೊಂಡಿದೆ...." ದಿ ಇಂಡಿಯನ್ ಎಕ್ಸ್‌ಪ್ರೆಸ್